UNIVERSAL LIBRARY
OU_200764
UNIVERSAL LIBRARY

ಶ್ರೀ

ಶ್ರೀಮನ್ಮಹಿಶೂರ ಪುರವರಾಧೀಶ ಶ್ರೀಕೃಷ್ಣರಾಜ
ಒಡೆಯರವರಿಂದ ಕರ್ಣಾಟಕಭಾಷೆಯಲ್ಲಿ ರಚಿಸಲ್ಪಟ್ಟ

ಕಾಶೀಖಂಡವೆಂಬ

ಕಾಶೀಕ್ಷೇತ್ರ ಮಹಾತ್ಮ್ಯೆಯು.

ಆರ್ಯಮತಗ್ರಂಥ ಪ್ರವರ್ಧನೀಸಭಾ ಮ್ಯಾನೇಜರ್
ಗುಂಡ್ಲುಪಂಡಿತರು ಲಕ್ಷ್ಮಣಾಚಾರ್ಯರಿಂದಾ
ಪ್ರಕಟಿಸಲ್ಪಟ್ಟಿತು.

1908.

SREE MUTH KANYAKA PARAMESWRI PRESS.

MYSORE.

ರಿಜಿಸ್ಟರಾಗಿದೆ.

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ.
ಪ್ರಕಾಶಕರೂ, ಪುಸ್ತಕ ವ್ಯಾಪಾರಿಗಳು.

*

ಅಷ್ಟಾದಶಪುರಾಣಗಳಲ್ಲಿ ಒಂದಾದ ಸ್ಕಾಂಧಪುರಾಣದಲ್ಲಿ ಹೇಳಲ್ಪಟ್ಟಿರುವ ಕಾಶೀಖಂಡವೆಂಬ ಕ್ಷೇತ್ರಮಹಾತ್ಮ್ಯೆಯನ್ನು ಮಹಿಶೂರ ಶ್ರೀಮನ್ಮಹಾರಾಜಾಧಿರಾಜ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರಿಂದ ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಲ್ಲಿ ವಿರಚಿಸಲ್ಪಟ್ಟು ಮಹನೀಯರಾದ ಕೆಲವುಜನಗಳಲ್ಲಿ ಮಾತ್ರ ಲಿಖಿತಮೂಲಕ ಇದ್ದ ಗ್ರಂಥವನ್ನು ನೋಡಿ ಅನೇಕರ ಅಭಿಲಾಷೆಯಿಂದಾ ಈ ಸುಗ್ರಂಥವು ಸಮಸ್ತರಿಗೂ ಸುಲಭವಾಗಿ ಲಭ್ಯವಾಗಲು ಹುಜೂರು ಅಪ್ಪಣೆಯಿಂದ ಪ್ರಿಂಟುಮಾಡಿಸಲ್ಪಟ್ಟಿತು.

ಈ ಗ್ರಂಥದಲ್ಲಿ ಭೋಗಿಶಯನಕ್ಷೇತ್ರವೆಂಬ ಕಾಶೀಮಹಿಮೆ, ವಿಶ್ವೇಶ್ವರನ ಆಗಮನ, ಗಂಗಾವತರಣಮಹಿಮೆ, ಅಗಸ್ತ್ಯಋಷಿಯ ಚರಿತ್ರೆ, ಮತ್ತು ಹದಿನಾಲ್ಕು ಲೋಕಗಳವರ್ಣನೆ, ಧರ್ಮಾಧರ್ಮ ವಿಚಾರಗಳು, ಕಾಶೀಕ್ಷೇತ್ರವಾಸದಿಂದ ಉಂಟಾಗುವ ಫಲವಿಶೇಷಗಳು, ಸಪ್ತಪುರಿಗಳ ಪ್ರಶಂಸೆ, ಆಶ್ರಮಧರ್ಮಗಳು, ದೇವಾದಿದೇವತೆಗಳು ಕಾಶೀಕ್ಷೇತ್ರದಲ್ಲಿ ಮಾಡಲ್ಪಟ್ಟ ಕಾರ್ಯವಿಶೇಷಗಳು ಮುಂತಾದ ಅನೇಕ ವಿಷಯಗಳನ್ನು ಒಳಗೊಂಡಿರುತ್ತದೆ. ಇಂಥಾ ಅಮೋಘವಾದ ಈ ಗ್ರಂಥವನ್ನು ಪ್ರಾಚೀನವಾದ ಪುಸ್ತಕದಲ್ಲಿ ಇದ್ದಂತೆಯೆ ಸುಲಭಶೈಲಿಯಿಂದ ಪ್ರಿಂಟುಮಾಡಲ್ಪಟ್ಟಿರುತ್ತೆ— ಆಸ್ತಿಕಮಹಾಜನಗಳು ಈ ಗ್ರಂಥದಲ್ಲಿ ಇರತಕ್ಕ ನ್ಯೂನಾತಿರಿಕ್ತಗಳನ್ನು ನೋಡದೆ ವಿಷಯಾನುವಾದದಿಂದ ಮನಸ್ಸಂತೋಷಪಡಬೇಕೆಂದು ಪ್ರಾರ್ಥಿಸುವ,

ಗುಂಡ್ಲುಪಂಡಿತರು ಲಕ್ಷ್ಮಣಾಚಾರ್ಯ,
ಮ್ಯಾನೇಜರ್
ಆರ್ಯಮತಗ್ರಂಥ ಪ್ರವರ್ತನೀಸಭಾ.

☞ ಈಗ್ರಂಥದ ಅನುಕ್ರಮಣಿಕೆ ನೂರನೇ ಅಧ್ಯಾಯದಲ್ಲಿ ಪ್ರಕಟಿಸಿ ಇರುತ್ತೆ.

ಕಾಶೀ ಖಂಡ.

ಪ್ರಥಮಾಧ್ಯಾಯ.

ವಿಂಧ್ಯನಾರದ ಸಂವಾದ.

ಶ್ರೀಮತ್ಸಮಸ್ತಭೂಮಂಡಲಮಂಡನಾಯಮಾನ ನಿಖಿಲದೇಶಾವತಂಸ ಕರ್ಣಾಟಕಜನಪದ ಸಂಪದಧಿಷ್ಠಾನಭೂತಶ್ರೀಮನ್ಮಹಿಶೂರಮಹಾಸಂಸ್ಥಾನ ಮಧ್ಯದೇದೀಪ್ಯಮಾನಾವಿಕಲಕಲಾನಿಧಿಕುಲಕ್ರಮಾಗತ ರಾಜಕ್ಷಿತಿಪಾಲಪ್ರಮುಖನಿಖಿಲರಾಜಾಧಿರಾಜಮಹಾರಾಜ ಚಕ್ರವರ್ತಿಮಂಡಲಾನುಭೂತ ದಿವ್ಯರತ್ನಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ಪರಮೇಶ್ವರಪ್ರೌಢ ಪ್ರತಾಪಾಪ್ರತಿಮವೀರ ನರಪತಿಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲಪಯಃಪಾರಾವಾರ ಕಳಾನಿಧಿ ಶಂಖಚಕ್ರಾಂಕುಶಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕಬಿರುದಾಂಕಿತರಾದ ಶ್ರೀ ಚಾಮರಾಜಮಹೀಪಾಲ ಧರ್ಮಪತ್ನೀಕೆಂಪನಂಜಮಾಂಬಾಗರ್ಭಸುಧಾಂಬುಧಿರಾಕಾಸುಧಾಕರಾಯಮಾನ ಶ್ರೀಚಾಮುಂಡಾಂಬಿಕಾವರಪ್ರಸಾದೋದ್ಭವರಾದ ಆತ್ರೇಯಸಗೋತ್ರಾಶ್ವಲಾಯನಸೂತ್ರ ಋಕ್ಶಾಖಾನುವರ್ತಿಗಳಾದ ಮಹಿಶೂರಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರು ಸ್ಕಂದಪುರಾಣೋಕ್ತ ಕಾಶೀಖಂಡವನ್ನು ಲೋಕೋಪಕಾರಾರ್ಥವಾಗಿ ಕರ್ಣಾಟಭಾಷೆಯಿಂದ ವಿರಚಿಸಿದ ಕೃಷ್ಣರಾಜವಾಣೀವಿಲಾಸವೆಂಬ ಗ್ರಂಥವು ಪ್ರಾರಂಭಿಸಲ್ಪಡುವುದದೆಂತೆನೆ,—

ಭೂಮಿಷ್ಠಾಪಿನಯಾತ್ರಭೂಸ್ತ್ರಿದಿವತೋಪ್ಯುಚ್ಚೈರಧಸ್ಥಾಪಿಯಾ । ಯಾಬದ್ಧಾಭುವಿಮುಕ್ತಿದಾಸ್ಯುರಮೃತಾಯಸ್ಯಾಂಮೃತಾಜಂತವಃ ॥ ಯಾನಿತ್ಯಂತ್ರಿಜಗತ್ಪವಿತ್ರತಟನೀತೀರೇಸುರೈಃಸೇವ್ಯತೇಸಾಕಾಶೀತ್ರಿಪುರಾರಿರಾಜನಗರೀಪಾಯಾದಪಾಯಾಜ್ಜಗತ್ ॥

ಟೀ॥ ಯಾವಕಾಶೀಪಟ್ಟಣವು ಭೂಮಿಯಲ್ಲಿದ್ದಾಗ್ಯೂ ಆಪಟ್ಟಣದಲ್ಲಿ ಭೂಮಿಯಿಲ್ಲವೋ. ಅಂದರೆ ಕಾಶೀಪಟ್ಟಣವು ಭೂಸ್ಪರ್ಶವಿಲ್ಲದೆ ಪರಶಿವನ ತ್ರಿಶೂಲಾಗ್ರದಲ್ಲಿದೆಯೆಂಬರ್ಥವು. ಯಾವಕಾಶೀಪಟ್ಟಣವು ಅಧೋಭಾಗದಲ್ಲಿದ್ದಾಗ್ಯೂ ಸ್ವರ್ಗಕ್ಕಿಂತಲೂ ಮೇಲಾದುದೋ ಅಂದರೆ ಸ್ವರ್ಗದಲ್ಲಿ ವಾಸಮಾಡುವವರಿಗೆ ಪುನರುತ್ಪತ್ತಿಯುಂಟು. ಕಾಶೀಪಟ್ಟಣದಲ್ಲಿ ವಾಸಮಾಡುವವರು ಪುನರುತ್ಪತ್ತಿಯಿಲ್ಲದೆ ಮೋಕ್ಷವನ್ನು ಹೊಂದುತ್ತಾರಾದ್ದರಿಂದ ಸ್ವರ್ಗಕ್ಕಿಂತಲೂ ಮೇಲಾದುದೆಂಬರ್ಥವು. ಯಾವಕಾಶೀಪಟ್ಟಣವು ತಾನು ಬದ್ಧವಾಗಿದ್ದರೂ ಅನ್ಯರನ್ನು ಬಂಧಮುಕ್ತರನ್ನಾಗಿ ಮಾಡುವದೋ ಅಂದರೆ ತಾನು ಕೋಟೆಕೊತ್ತಲುಗಳಿಂದ ಕಟ್ಟಲ್ಪಟ್ಟದ್ದಾಗ್ಯೂ ತನ್ನಲ್ಲಿ ವಾಸಮಾಡುವವರಿಗೆ ಸಂಸಾರಬಂಧವಿಮೋಚನ ಮಾಡಿಸುವುದೆಂಬರ್ಥವು. ಯಾವಪಟ್ಟಣದಲ್ಲಿ ಮೃತಿಯಂ ಹೊಂದಿದವರು ಅಮೃತರಹರೋ ಅಂದರೆ ಕಾಶೀಪಟ್ಟಣದಲ್ಲಿ ಮೃತಿಯಂ ಹೊಂದಿದವರು ಅಮೃತತ್ವವನ್ನು ಅಂದರೆ ಮೋಕ್ಷವನ್ನು ಅಥವಾ ದೇವತ್ವವನ್ನು ಹೊಂದುವರೆಂಬ ಅಭಿಪ್ರಾಯವು. ಮೂರುಲೋಕಗಳನ್ನೂ ಪವಿತ್ರೀಕರಿಸುವ ಗಂಗಾತೀರದಲ್ಲಿರುವದಾದಕಾರಣ ಸುರಾಸುರನರೋರಗಾದಿಗಳಿಂದ ಸೇವಿಸಲ್ಪಡುತ್ತಿಹದೋ ಬ್ರಹ್ಮಾದಿಗಳಿಗೆ ಸಾಧ್ಯವಲ್ಲದ ತ್ರಿಪುರವಿಜಯವಂ ಮಾಡಿದ ದೇವತಾಸಾರ್ವಭೌಮನಾದ ಪರಮೇಶ್ವರನ ಪ್ರಧಾನಪಟ್ಟಣವಾದ ಆ ಕಾಶೀಪಟ್ಟಣವು ನಿಖಿಲಾಪಾಯಂಗಳಂ ಪರಿಹರಿಸಿ ಸಕಲ ಲೋಕಂಗಳಂ ಸಲಹಲಿ ಎಂಬಾಶೀರ್ವಾದವು. ಯಾವ ಪರಮೇಶ್ವರನ ಪ್ರಾತಃಕಾಲ ಮಧ್ಯಾಹ್ನಕಾಲ ಸಾಯಂಕಾಲಗಳೆಂಬ ನೆವದಿಂದ ಮೂರುಲೋಕಗಳಧಿಪತಿಗಳಾದ ಬ್ರಹ್ಮಾದಿಗಳೂ ಬಾರಿಬಾರಿಗೂ ಹುಟ್ಟಿ ಮರಳುತ್ತಿರುವರೋ ಅಂಥಾ ಪರಮೇಶ್ವರನಿಗೆ ನಮಸ್ಕಾರವೆಂದು ಮಂಗಳಶ್ಲೋಕಾರ್ಥವು.

ಪೂರ್ವದಲ್ಲಿ ಬ್ರಹ್ಮಕ್ಷೇತ್ರವೆಂದು ಪ್ರಸಿದ್ಧವಾದ ಪ್ರಯಾಗೆಯಲ್ಲಿ ಶೌನಕಾದಿಮಹರ್ಷಿಗಳು ಕೃತನಿತ್ಯಕರ್ಮಾನುಷ್ಠಾನರಾಗಿ ಪರಸ್ಪರವಾಗಿ ಪುಣ್ಯಕಥೆಗಳನ್ನು ಜಿಜ್ಞಾಸಮಾಡುತ್ತಿರಲು ಅಲ್ಲಿಗೆ ಸೂತಪುರಾಣೀಕರು ಬಿಜಯಂಗೈಯಲು ಆತನನ್ನು ಮಧುಪರ್ಕಾದಿಗಳಿಂದ ಪೂಜಿಸಿ ವ್ಯಾಸಪೀಠದಲ್ಲಿ ಕುಳ್ಳಿರಿಸಿ ತಾವು ವಿನಯಯುತರಾಗಿ ಪುಣ್ಯಕಥೆಗಳಂ ಪ್ರಶ್ನೆಯಂ

ಮಾಡಲು ಸೂತಪುರಾಣೀಕರು ಕೇಳಿರೈರುಷಿಗಳಿರಾ ನಮ್ಮ ಗುರುಗಳಾದ ವ್ಯಾಸಮಹರ್ಷಿಗಳಿಂದ ಉಪದೇಶಮಾಡಲ್ಪಟ್ಟ ಪುಣ್ಯತಮಗಳಾದ ಪುರಾಣಕಥೆಗಳಂ ಪೇಳುವೆನು. ನೀವು ಸಾವಧಾನಮನಸ್ಕರಾಗಿ ಕೇಳಬೇಕೆಂದು ತಮಗೆ ಗುರುಪಾರಂಪರ್ಯವಾಗಿ ಬಂದಪುರಾಣವನ್ನು ಹೇಳಲುಪಕ್ರಮಿಸಿದರು. ಹೇಗೆಂದರೆ ಒಂದಾನೊಂದುದಿನ ವ್ಯಾಸಮಹರ್ಷಿಗಳು ಸಕಲ ದೇವತೆಗಳಿಗೂ ವಾಸಸ್ಥಾನವಾದ ಮೇರುಶಿಖರವಂಹೊಂದಿ ಅಲ್ಲಿ ಸುಖಾಸೀನಗಿದ್ದ ಸನತ್ಕುಮಾರಯೋಗೀಂದ್ರರಂ ಕಂಡು ಸಾಷ್ಟಾಂಗವೆರಗಿ ರಹಸ್ಯಾರ್ಥವನ್ನುಪದೇಶಿಸಬೇಕೆಂದು ಕೇಳಿಕೊಳ್ಳಲು ಆ ಸನತ್ಕುಮಾರರು ವ್ಯಾಸಮುನಿಗಳಿಗಿಂತೆಂದರು. ಎಲೈ ವ್ಯಾಸಮುನೀಶ್ವರನೆ ನೀನು ಸಾಕ್ಷಾದ್ವಿಷ್ಣುವಿನ ಅವತಾರವಾದ ಕಾರಣ ನೀನರಿಯದ ರಹಸ್ಯವೇನಿದ್ದೀತು. ಆದರೂ ಹೇಳುವೆನು ಕೇಳು.

ಪೂರ್ವಯುಗದಲ್ಲಿ ಕೈಲಾಸಶಿಖರದೊಳ್ ನವರತ್ನಖಚಿತವಾದ ದಿವ್ಯಸಿಂಹಾಸನದಲ್ಲಿ ಸುಖಾಸೀನನಾದ ಸಕಲ ಸುರಾಸುರೋರಗ ಯಕ್ಷ ರಾಕ್ಷಸ ವಿದ್ಯಾಧರ ಕಿನ್ನರ ಕಿಂಪುರುಷ ಸಿದ್ಧ ಸಾಧ್ಯರಿಂದಲೂ ನಂದಿ ಭೃಂಗಿ ಮಹಾಕಾಲ ಮಹಾಬಾಹು ಪ್ರಮಥಗಣಗಳಿಂದಲೂ ದೇವರ್ಷಿ ಬ್ರಹ್ಮರ್ಷಿಸಮೂಹಗಳಿಂದಲೂ ಸೇವಿಸಲ್ಪಡುತ್ತಲಿರುವ ಪರಮೇಶ್ವರನ ಪ್ರಿಯಳಾದ ಪಾರ್ವತೀದೇವಿಯು ತನ್ನ ಪ್ರಾಣಕಾಂತನಾದ ಚಂದ್ರಶೇಖರನ ಪಾದಾರವಿಂದಗಳಿಗೆ ಭಕ್ತಿಯಿಂದೆರಗಿ ಕರಕಮಲಗಳಂ ಮುಕುಳೀಕರಿಸಿ ಜಗದ್ಧಿತಾರ್ಥವಾಗಿ ಎಲೈ ದೇವನೆ ? ವಸ್ತುವಿನ ಸ್ವರೂಪವೇನು ? ಜಗದುತ್ಪತ್ತಿ ಸ್ಥಿತಿ ಸಂಹಾರಗಳಿಗೆ ಕರ್ತನುಯಾರು, ಬಂಧಮೋಕ್ಷಗಳು ಯಾರಿಂದಾಗುವುವು, ಮುಕ್ತಿಸ್ವರೂಪವು ಯಾವುದು, ಮುಕ್ತಿಸಾಧನವು ಯಾವುದು, ಎಂದು ಬೆಸಗೊಳ್ಳಲು, ತನ್ನರ್ಧಾಂಗಿಯಾದ ಗಿರಿಜಾದೇವಿಯ ಮನೋಹರಪ್ರಶ್ನೆಗಳಿಗೆ ಮಹೇಶ್ವರನುತ್ತರಗಳನ್ನಿತ್ತನು. ಆಸಮಯದಲ್ಲಿ ಈಶ್ವರನ ಬಲದೊಡೆಯಲ್ಲಿ ಕುಳಿತಿದ್ದು ಭಕ್ತಿಯುತನಾಗಿ ಪರಾಕಿಲ್ಲದೆ ಕೇಳಿದ ಕುಮಾರಸ್ವಾಮಿಯು ಪ್ರಿಯಶಿಷ್ಯನಾದೆನಗೆ ಆನ್ಯತ್ತಾಂತವೆಲ್ಲವಂ ನಿರೂಪಿಸಿದನೆಂದು ಸನತ್ಕುಮಾರರು ನಮ್ಮ ಗುರುಗಳಾದ ವ್ಯಾಸಮಹರ್ಷೀಶ್ವರರಿಗೆ ಬೋಧಿಸಲಾಗಿ ಆವ್ಯಾಸಮು

ನೀಶ್ವರನು ಬದರಿಕಾಶ್ರಮದಲ್ಲನೇಕ ಮಹರ್ಷಿಮಂಡಲ ಪರಿವೃತನಾಗಿ ಪದ್ಮಾಸನದಲ್ಲಿ ಕುಳಿತುಕೊಂಡು ಸಕಲಪುರಾಣೇತಿಹಾಸಧರ್ಮಗಳನ್ನು ಶಿಷ್ಯರಿಗುಪದೇಶಿಸುವ ಸಮಯದಲ್ಲಿ ಪ್ರಿಯಶಿಷ್ಯನಾದ ನಾನು ಗುರುಗಳಾದ ವ್ಯಾಸಮಹರ್ಷೀಶ್ವರರಿಗೆ ಸಾಷ್ಟಾಂಗಪ್ರಣಾಮನಂಮಾಡಿ ಲೋಕಹಿತಾರ್ಥವಾಗಿ ಧರ್ಮೋಪದೇಶನಂಮಾಡಿ ರಕ್ಷಿಸಬೇಕೆಂದು ಬಿನ್ನೈಸಲು, ಬ್ರಹ್ಮಪುರಾಣ, ಭಾಗವತ, ಭವಿಷ್ಯೋತ್ತರ, ಶೈವ, ನಾರದೀಯ, ಮಾರ್ಕಂಡೇಯ, ಆಗ್ನೇಯ, ಬ್ರಹ್ಮಕೈವರ್ತ, ಲೈಂಗ, ವಾರಾಹ, ಸ್ಕಾಂದ, ವಾಮನ, ಕೌರ್ಮ, ಮಾತ್ಸ್ಯ, ಪಾದ್ಮ, ವಿಷ್ಣುಪುರಾಣ, ಗಾರುಡ, ಬ್ರಹ್ಮಾಂಡಗಳೆಂಬ ಅಷ್ಟಾದಶಪುರಾಣಗಳನ್ನುಪದೇಶಿಸಿದರು. ಎಂದು ಸೂತಪುರಾಣಿಕರು ವೇದವ್ಯಾಸರಿಂದ ತಾವು ತಿಳಿದುಕೊಂಡ ಸ್ಕಾಂದಪುರಾಣಸ್ಥವಾದ ಕಾಶೀಮಾಹಾತ್ಮ್ಯವನ್ನು ಶೌನಕಾದಿ ಋಷಿಗಳಿಗೆ ನಿರೂಪಿಸಿದರು. ಕೇಳುವವರಿಗೆ ಸಕಲ ಪಾಪಗಳನ್ನು ಪರಿಹರಿಸುವ ಹದಿನೆಂಟುಪುರಾಣಗಳನ್ನು ಪ್ರಕಾಶಿಸಿದ ಸತ್ಯವತೀಸುತರಾದ ವ್ಯಾಸಮಹಾಮುನಿಗಳು ಕಾಶೀಮಾಹಾತ್ಮ್ಯಮಂ ವಿವರಿಸಿದ ಪರಿಹೇಗೆಂದರೆ, ಕೇಳೈ ಸೂತನೆ, ಒಂದಾನೊಂದು ಸಮಯದಲ್ಲಿ ವಿಜ್ಞಾನನಿಧಿಗಳಾದ ನಾರದಮಹರ್ಷಿಗಳು ವಿಂಧ್ಯಪರ್ವತದಲ್ಲಿ ಹುಟ್ಟಿದ ನರ್ಮದಾನದಿಯಲ್ಲಿ ಸ್ನಾನವಂ ಮಾಡಿ ಸಮಸ್ತ ಪ್ರಾಣಿಗಳಿಗೂ ಸಕಲಪುರುಷಾರ್ಥಪ್ರದನಾದ ಷಡ್ಗುಣೈಶ್ವರ್ಯಸಂಪನ್ನನಾದ ಓಂಕಾರೇಶ್ವರನನ್ನು ಸಮರ್ಚಿಸಿ ವಂದಿಸಿ ಮುಂದಿದ್ದ ವಿಂಧ್ಯಾದ್ರಿಯಂ ಕಂಡರು.

ಆಪರ್ವತವು, ಹೇಗೆಕಾಣಿಸಿತೆಂದರೆ, ಸಂಸಾರತಾಪವಂ ಪರಿಹರಿಸುವದಿವ್ಯೋದಕದಿಂ ತನ್ನ ಚರಸ್ಥಿರರೂಪಗಳಾದ ತನ್ನಲ್ಲಿರುವ ವಸ್ತುಗಳಿಂದ ಈ ಭೂಮಿಯಂ ವಸುಮತೀಯೆನಿಸಿದನು. ಮತ್ತು ಶೀಮಾವು, ಅಶೋಕ, ತಾಳ, ಹೊಂಗೆ, ಹೊರಚೀ, ಅಡಿಕೆ, ಮಘು, ಬಿಲ್ಲಪತ್ರ, ತಾರಾಚ, ಅಗಿಲು, ಬೆಳಲ, ಹಿರಳ, ನಿಂಬೆ, ಪೂಪಳ, ಕರ್ಪೂರ, ಬಾಳೆ, ಸುರಹೊನ್ನೆ, ದಾಳಿಂಬ, ಅತ್ತಿ ಮುತ್ತುಕ, ಕಡನೆ, ಹೊನ್ನೆ, ಮರಡಿ, ಮಂಗಾರ, ಆಲ, ಕೊಡಶಿಗೆ, ಚಳ್ಳೆ, ತೇಗ, ದಿಂಡಗ, ಸಂಪಿಗೆ, ಯಲವ, ಅರಳಿ, ಹೊಂಗೇದಗೆ, ಪುತ್ರಜೀವಿ, ತೂಬರೆ, ಇಂಗಳ, ಹಿಪ್ಪೆ,

ಮತ್ತಿ, ತೆಂಗು, ಖರ್ಜೂರ, ಕಾಡನುಗ್ಗೆ, ಕಣಿಗಲು, ಕಾಂಚಾಳ, ಪಾದರಿ, ಹುಣಸೆ, ರಾಯಚೆರತಿ, ಬಾಗೆ, ಜಾಲ, ಹೆಗ್ಗಳ್ಳಿ, ತಾರೆ, ಬಸರಿ, ದೇವದಾರು, ನೇರ್ಲೆ, ಅಂಬಟ, ಗೇರು, ಶ್ರೀಗಂಧ, ಚಂದನ, ಅಣಬೆಟ್ಟದಾವರೆ, ನೆಲ್ಲಿ, ದ್ರಾಕ್ಷಿ, ಯಾಲಕ್ಕಿ, ಲವಂಗ, ನಾಗವಲ್ಲಿ, ಹಿಪ್ಪಲಿ, ಮೊಲ್ಲೆ, ಮಲ್ಲಿಗೆ, ಇರುವಂತಿಗೆ, ಶೇವಂತಿಗೆ, ಜಾಜಿ, ಮಂಜಾಡಿಗಳಿಂದಲೂ, ಸಿಂಹ, ಶರಭ, ಶಾರ್ದೂಲ, ರಘುಲ್ಲಿಯುಮೃಗ, ಕಸ್ತೂರೀಮೃಗಗಳಿಂದಲೂ, ನವಿಲು, ಅರಗಿಳಿ, ಕೋಗಿಲೆ, ಗೊರವಂಕ, ರಾಜಹಂಸೆ, ಮೊದಲಾದ ಪಕ್ಷಿಗಳಿಂದಲೂ, ಕೆರೆ, ತೊರೆ, ಭಾವಿ, ಕಾಲುವೆ, ಮಡುವುಗಳಿಂದಲೂ ಒಪ್ಪುತ್ತಿದ್ದ ಕುಲಪರ್ವತವಾದ ಆ ವಿಂಧ್ಯನು, ನೂರುಸೂರ್ಯರ ಕಾಂತಿಗಳಿಂದ ಆಕಾಶವಂ ಬೆಳಗುತ್ತ ದೂರದಿಂ ಪ್ರತ್ಯಕ್ಷರಾಗಿದ್ದ ನಾರದರಂ ಕಂಡನು. ಬ್ರಹ್ಮಪುತ್ರರಾದ ನಾರದರು ತಮ್ಮ ಶರೀರಕಾಂತಿಯಿಂದ ಗುಹೆಗಳಲ್ಲಿರುವ ಕತ್ತಲೆಗಳನ್ನು, ದೂರವಾಗಿ ಪರಿಹರಿಸುತ್ತ ಮನೋಹರವಾದ ವಿಂಧ್ಯಾದ್ರಿನಗರಿಯಂ ಶೀಘ್ರವಾಗಿ ಪ್ರವೇಶಿಸಿದರು.

ವಿಂಧ್ಯನು ಆ ನಾರದರಂ ಕಂಡು ಮನದಲ್ಲಿದ್ದ ತಮೋಗುಣವಂ ಬಿಟ್ಟು ಆ ನಾರದರ ಬ್ರಹ್ಮತೇಜಸ್ಸಿನಿಂದ ಭಂಗಪ್ರಷ್ಟವನಾಗಿ ತನ್ನ ಕಾಠಿನ್ಯವಂ ಬಿಟ್ಟು ಮೃದುವಾದವನಂತೆ ನಮ್ರನಾಗಲು ಆ ನಾರದರು ವಿಂಧ್ಯಾದ್ರಿಯ ಚರಸ್ಥಿರರೂಪಗಳೆಲ್ಲದ ಮೃದುತ್ವವಂ ನೋಡಿ ಸಂತೋಷಿಸಿ ಗೃಹಸ್ಥನಾದವನು ತನ್ನ ಗುರುವಾಗಲೀ ಗುರುವಿಗೆ ಸಮಾನನಾದವನಾಗಲೀ ಮನೆಗೆ ಬಂದರೆ ಆತನಂ ನೋಡಿ ಭಯಭಕ್ತಿಯುಕ್ತವನಾಗುವನೋ ಅವನೇ ಲೋಕವ್ಯವಹಾರಜ್ಞನು. ಅವನೇ ಗುರುವೆನಿಸಿಕೊಂಬುವನು. ವಿದ್ಯಾವಿಶೇಷವುಳ್ಳ ಗುರುವಾದರೂ ವಿನಯವುಳ್ಳವನಲ್ಲದಿರೆ ಗುರುವೆನಿಸಿಕೊಳ್ಳನು. ಆದಕಾರಣ ಈ ವಿಂಧ್ಯಾದ್ರಿಯು ಉನ್ನತಗಳಾದ ಶಿರಸ್ಸುಗಳುಳ್ಳವನಾದರೂ ತಲೆವಾಗಿದನೆಂದು ಸಂತೋಷಿಸಿದನು. ಅನಂತರದಲ್ಲಾ ವಿಂಧ್ಯನು ಭೂಮಿಯೊಡಗೂಡಿದ ಕಿರೀಟವುಳ್ಳವನಾಗಿ ಮಹಾಮುನಿಗೆ ನಮಸ್ಕರಿಸಿದನು. ನಾರದರು ವಿಂಧ್ಯನಂ ಕರಗಳಿಂದೆತ್ತಿ ಆಶೀರ್ವಾದಗಳಿಂದ ಸಂತೋಷಪಡಿಸಿ ಆತನಿಂದ ಸಮರ್ಪಿಸಲ್ಪ

ರುಚಿಸವು. ಐಹಿಕಸುಖಗಳೆಲ್ಲವು ವಿಸ್ಮೃತಗಳಾಗುವುವು. ಇನ್ನು ರಹಸ್ಯವಾಗಿ ಹೇಗೆ ಸುಖಿಸತುವರೊ ಹೇಳಲಳವಲ್ಲಾ. ಅಕಟಕಟ ದಾವಾಗ್ನಿಯು ಪೀಡಿಸುವಂತೆ ಚಿಂತಾಸಂತಾಪವೆನ್ನಂ ಪ್ರಜ್ವಲಿಸುತ್ತಲಿದೆ. ಚಿಂತೆಯೆಂಬ ಜ್ವರವು ಬಹಳ ಭಯಂಕರವಾದದ್ದು. ಲಂಘನದಿಂದ ಜ್ವರವು ಶಾಂತವಾಗುವುದು. ಘನತರವಾದ ಚಿಂತಾಜ್ವರವದರಿಂದ ಶಾಂತವಾಗಲರಿಯದೆಂದು ಹಿರಿಯರಿಂದ ಹೇಳಲ್ಪಟ್ಟದೆ. ಚಿಂತೆಯೆಂಬ ಜ್ವರವು ಮನುಷ್ಯರ ಹಸಿವನ್ನೂ ಬಾಯಾರಿಕೆಯನ್ನೂ ಬಲವನ್ನೂ ರೂಪವನ್ನೂ ಉತ್ಸಾಹವನ್ನೂ ಬುದ್ಧಿಯನ್ನೂ ಕಾಂತಿಯನ್ನೂ ಕೊನೆಗೆ ಜೀವವನ್ನೂ ಸಹ ಅಪಹರಿಸುವುದು ಸಂಶಯವೇ ಇಲ್ಲ. ಆರುದಿನಗಳು ವಿಾರಿದ ಬಳಿಕ ಜ್ವರವು ಜೀರ್ಣಜ್ವರವೆನಿಸಿಕೊಳ್ಳುವುದು. ಈತೀವ್ರವಾದ ಚಿಂತಾಜ್ವರವು ದುರಾತ್ಮನ ಪಾಪರಾಶಿಯಂತೆ ದಿನದಿನ ಪ್ರವರ್ಧಮಾನವಾಗುವುದು. ಶಿವಶಿವ ಈ ಚಿಂತಾಜ್ವರವಂ ಬಿಡಿಸುವದಕ್ಕೆ ಆ ಧನ್ವಂತರಿಯೂ ಧೈರ್ಯವಮಾಡನು. ಚರಕಾಚಾರ್ಯನತ್ತ ಸಂಚರಿಸನು. ಅಶ್ವಿನೀದೇವತೆಗಳಸ್ವಗತಿಯಂ ತೋರ್ಪಡಿಸುವರು. ಏನುಮಾಡಲೀ ಎಲ್ಲಿ ಹೋಗಲೀ ಮೇರುವನ್ನು ಹೇಗೆ ಜಯಿಸಲಿ ನೆಗೆದು ಆ ಮೇರುವಿನ ಮೇಲೆ ಕುಳಿತುಕೊಳ್ಳೋಣವೆಂದರೆ ಪೂರ್ವದಲ್ಲಿ ನಮ್ಮ ಗೋತ್ರಜನಾದೊಬ್ಬನೊಬ್ಬನು ದೇವೇಂದ್ರನೊಡನೆ ವಿರೋಧಿಸಲಾಗಿ ಅದರಿಂದ ನಮ್ಮ ಗಿರಿಜಾತಿಗೇ ಪಕ್ಷಹೀನವಾಯಿತು. ಪಕ್ಷವಿಲ್ಲದವನುದ್ಯೋಗವಂ ಬಹಿಸಬೇಕು. ಮುಖ್ಯವಾಗಿ ಭೂಭಾರವಂ ವಹಿಸುವವರೆಲ್ಲರೂ ವಿಶೇಷವಾಗಿ ಆ ಮೇರುವಂ ಕೊಂಡಾಡುತ್ತಲಿರಬಹುದು. ಮತ್ತು ಆ ಸ್ತುತಿಯು ನನ್ನಿಂದ ಪುರಸ್ಸರವಾಗಿರಬಹುದು. ಅದರಿಂದಾಮೇರುವಿಗೆ ನನ್ನಲ್ಲಿ ವೈರಮುಂಟಾಗಿರುವುದು. ವೈರವಿಲ್ಲವೆಂದೊಡೆ ಬ್ರಂಹಚಾರಿಗಳಾದ ವೇದಜ್ಞರಾದ ಸತ್ಯಲೋಕನಿವಾಸಿಗಳಾದ ನಾರದಮಹರ್ಷಿಗಳ ವಚನವಸತ್ಯವಾಗುವುದೋ ಮುಖ್ಯವಾಗಿ ಈ ವಿಚಾರದಿಂದ ಪ್ರಯೋಜನವೇನು. ಪರಾಕ್ರಮಹೀನರಿಗೆ ಮನಸ್ಸು ವಿಚಾರಪಡುವುದು ಯುಕ್ತವಲ್ಲದೆ ಅದು ನಮ್ಮಂಥಾವರಿಗುಚಿತವಲ್ಲಾ ನಾನು ವಿಶ್ವೇಶ್ವರನಂ ಶರಣುಹೊಕ್ಕೆನು. ಆ ಸ್ವಾಮಿಯೆ ಎನಗೆ ಬುದ್ಧಿಯನ್ನಿತ್ತು ರಕ್ಷಿಸಲಿ. ಆತನನಾಥರಿಗೆ ನಾಥ

ನಾದಕಾರಣ ವಿಶ್ವನಾಥನೆನಿನಿಕೊಂಡನು. ಹೀಗೆಂದು, ಕ್ಷಣಮಾತ್ರ ಮನದೊಳ್ವಿಚಾರಿಸಿ, ಈಶ್ವರನಿತ್ತ ಬುದ್ಧಿಯಿಂದಿಂತೆಂದನು. ಬಲ್ಲವರು ಪೆರ್ಚುವ ವ್ಯಾಧಿಯುಮಂ ಶತ್ರುವನುಂ ಪೆರ್ಚಲೀಸರು. ಈ ಸೂರ್ಯಂ ಮೇರುವಂ ಪರ್ವತಾಧಿಕವೆಂದು ತಿಳಿದು, ಗ್ರಹ ನಕ್ಷತ್ರಸಹಿತವಾಗಿ ಮೇರುವಿಗೆ ನಿತ್ಯವು, ಪ್ರದಕ್ಷಿಣವಾಗಿ ಸುತ್ತುವನು. ಇದು ನಿಶ್ಚಯ ವೆಂದು, ವಿಂಧ್ಯಾದ್ರಿಯು ನಿಮಿಷದೊಳು ತಡೆಯಿಲ್ಲದ ಗಗನದೆಡೆಯುಂ ಮುಟ್ಟುವವೊಲಿರ್ದಶಿಖರಂಗಳಿಂ ಬಳೆದನು. ಹೀಗೆ ಬಳೆಯುಬಹುದೇ ? ವಿವೇಕಿಯಾದವನು ಒಬ್ಬರಕೂಡೆಯೂ ವಿರೋಧವಂ ಮಾಡನು. ಮಾಡಿದಡೆ, ಪರರು ನಗದಂತೆ ಮಾಳ್ಪನು. ಅದ್ರಿಶ್ರೇಷ್ಠನಾದ ವಿಂಧ್ಯನು ಸೂರ್ಯಮಾರ್ಗವುಂ ತಡೆದು, ಕೃತಕೃತ್ಯನಾದಂತೆ ಸ್ವಸ್ಥಮಾಗಿರ್ದನು. ಪ್ರಾಣಿಗಳಿಗೆ ಅಗತಕ್ಕದ್ದಿಲ್ಲವು ಈಶ್ವರಾಧೀನವು. ಯಮುನಿಗೆ ತಂದೆ ಯಾದ ಸೂರ್ಯನು ಯಾರಪ್ರದಕ್ಷಿಣವಂ ಮಾಡುವನೋ ಅವನೇ ಸತ್ಕುಲಜನು. ಅಷ್ಟೈಶ್ವರ್ಯವಂತನು. ಅಧಿಕನು. ಅವನೇ ಲೋಕಹಿತನು. ಲೋಕನೀತಿಯುಂ ಹೀಗೆಯಿಪ್ಪುದು. ಶಕ್ತಿವಂತನಾದರೂ ತನ್ನ ಸಾಮರ್ಥ್ಯವುಂ ತೋರದಿರ್ದೊಡೆ, ಕಾಷ್ಠದೊಳಿರ್ಪಗ್ನಿಯಂತೆ, ಸರ್ವರಿಗೂ ಅಲಕ್ಷ್ಯವಾಗಿಹನು. ಅದುಕಾರಣ ಸ್ವಶಕ್ತಿಯುಂ ತೋರಬೇಕೆಂದು, ಚಿಂತೆಯೆಂಬ ಭಾರವನ್ನಿಳುಹಿ, ಸ್ಥಿರವಾದುದ್ಯೋಗವುಳ್ಳವನಾಗಿ ಪ್ರಾತಃಕಾಲದೊಳು ಸಂಧ್ಯಾಕರ್ಮವನೆಸಗುವ ಬ್ರಾಹ್ಮಣನಂತೆ, ಸೂರ್ಯೋದಯವ ನಿರೀಕ್ಷಿಸಿಕೊಂಡಿರ್ದನೆಂದು, ವೇದವ್ಯಾಸರು ಸೂತಪೌರಾಣಿಕನಿಗೆ ನಿರೂಪಿಸಿದರೆಂಬಲ್ಲಿಗೆ ಅಧ್ಯಾಯಾರ್ಥವು.

ಇಂತು ಶ್ರೀಮತ್ಸಮಸ್ತ ಭೂಮಂಡಲಮಂಡನಾಯಮಾನನಿಖಿಲ ದೇಶಾವತಂಸ ಕರ್ನಾಟಜನಪದಸಂಪದಧಿಷ್ಠಾನ ಭೂತಶ್ರೀಮನ್ಮಹೀಶೂರ ಮಹಾ ಸಂಸ್ಥಾನಮಧ್ಯ ದೇದೀಪ್ಯಮಾನಾವಿಕಲಕಲಾನಿಧಿಕುಲಕ್ರಮಾಗತ ರಾಜಕ್ಷಿತಿಪಾಲ ಪ್ರಮುಖನಿಖಿಲ ರಾಜಾಧಿರಾಜಮಹಾರಾಜಚಕ್ರವರ್ತಿಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜರಾಜ ಪರಮೇಶ್ವರಪ್ರೌಢಪ್ರತಾಪಾಪ್ರತಿಮ ವೀರನರಪ

ತಿ ಬಿರುದಂತೆಂಬರಗಂಡ ಲೋಕೈಕವೀರ ಯದುಕುಲಪಯಃ ಪಾರಾವಾರ ಕಲಾನಿಧಿ ಶಂಖಚಕ್ರಾಂಕುಶಕುಠಾರಮಕರ ಮತ್ಸ್ಯಶರಭಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತ ಶ್ರೀ ಚಾಮರಾಜ ಮಹೀಪಾಲ ಧರ್ಮಪತ್ನೀ ಕೆಂಪನಂ ಜಮಾಂಬಾಗರ್ಭಸುಧಾಂಬುಧಿರಾಕಾಸುಧಾಕರಾಯಮಾನ ಶ್ರೀ ಚಾಮುಂ ಡಾಂಬಿಕಾವರಪ್ರಸಾದೋದ್ಭವರಾದ ಆತ್ರೇಯಸಗೋತ್ರಾಶ್ವಲಾಯನ ಸೂತ್ರ ಋಕ್ಶಾಖಾನುವರ್ತಿಗಳಾದ ಮಹೀಶೂರಪುರವರಾಧೀಶ ಶ್ರೀ ಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಭಾಷೆ ಯಿಂದ ವಿರಚಿಸಿದ ಕೃಷ್ಣರಾಜ ವಾಣೀವಿಲಾಸವೆಂಬ ಸ್ಕಾಂದಪುರಾ ಣೋಕ್ತಕಾಶೀಮಹಿಮಾರ್ಥ ದರ್ಪಣದಲ್ಲಿ ವಿಂಧ್ಯನಾರದ ಸಂವಾದ ವೆಂಬ ಪ್ರಥಮಾಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ.

ಎರಡನೇ ಅಧ್ಯಾಯದೊಳು ವಿಂಧ್ಯನು ಸೂರ್ಯ ಮಾರ್ಗವಂ ತಡೆಯುವದು. ದೇವತೆಗಳು ಬ್ರಹ್ಮನಿಗೆಬಿನ್ನೈಸಲು,

ಅಗಸ್ತ್ಯರಬಳಿಗೆ ಕಳುಹಿಸಿದ್ದು.

—:o:—

ಇಂತಿರಲಾ ಸಮಯದೊಳು ಚರಾಚರಕ್ಕೆ ಜೀವನವಾದ ಜಗತ್ತಿ ನುತ್ಪತ್ತಿಗೆ ಕಾರಣವಾದ, ಅಂಧಕಾರಕ್ಕೆ ಶತ್ರುವಾದ ಸೂರ್ಯನುದಯ ಗಿರಿಯೊಳು ಪ್ರಕಾಶವಾದ ಕಿರಣಂಗಳಿಂದುದಯವಾದನು. ಮತ್ತಂ ಸತ್ಪುರುಷರ ನಿತ್ಯಕರ್ಮದಿಂ ಧರ್ಮಂಗಳನಭಿವೃದ್ಧಿಗೊಳಿಸುತಂ, ಅಂಧಕಾರಮಂ ಪರಿಹರಿಸುತಂ, ಭೂತ ಬಲಿಗಳೆಂಬ ಕ್ರಿಯೆಗಳಿಗೆ ಪ್ರ ವರ್ತನಾಗುತಂ, ಪೂರ್ವಾಹ್ಣಾದಿ ಕಾಲಂಗಳಂ ವಿವರಿಸುತಂ, ದರ್ಜ ನರ ಹೃದಯಮುಖಂಗಳೊಳಂಧಕಾರವಂ ಬಿಡುತಂ, ರಾತ್ರಿಯೆಂಬ ಯಮನಿಂದ ನೊಂದ ಜಗವಂ ತಿರುಗಿ ಬದುಕಿಸುತಂ, ಉದಯಿಸಿದನು. ಅಲ್ಲದೊಡೆ ಸಾಯಂಕಾಲದೊಳಸ್ತಮಿಸಿದ ಸೂರ್ಯನು ಉದಯದೊಳು

ಹೇಗೆ ಉದಯಿಸುವನು. ಅದರಿಂ ಲೋಕೋಪಕಾರಿಯಾದ ಸೂರ್ಯನು ಮೂಡಣದಿಕ್ಕು, ಅಗ್ನಿದಿಕ್ಕುಗಳೆಂಬ ಸ್ತ್ರೀಯರಂ ಸಂತೈಸಿ, ಮನೋಹರವಾದ, ಸಕಲವಸ್ತುಗಳಿಂದಲಂಕೃತವಾದ ತೆಂಕಣದಿಕ್ಕನೀಕ್ಷಿಸುತ ನಡೆದನು. ತದನಂತರದೊಳು ಸೂರ್ಯನ ರಥದ ಕುದುರೆಗಳನುಮಾನಿಸಿ ದಾರಿಯಿಲ್ಲದೆ ನಿಂತವು. ಆ ಸಮಯದೊಳರುಣನು ತರಣಿಗೆ ಬಿನ್ನವಿಸಿದನದೆಂತೆನೆ—ಎಲೈ ಸ್ವಾಮಿಯೇ ವಿಂಧ್ಯನು ತನ್ನ ಮಿತವಂಮೀರಿ, ಗಗನಮಾರ್ಗವಂ ತಡೆದಿರುವನು. ಅದೆಂತೆನಲು ಮೇರುವಿಗೆ ನೀವು ಮಾಡುವ ಪ್ರದಕ್ಷಿಣವಂ ತಾನು ಬಯಸಿ, ಮೇರುವಿನೊಡನೆ ಪ್ರತಿಭಟಸಿರುವನೆಂಬರುಣನ ಬಿನ್ನಹವನಾಲಿಸಿ, ಸೂರ್ಯನು ಗಗನಮಾರ್ಗವು ಕಟ್ಟುವಡೆದುದು. ಇದೇನಾಶ್ಚರ್ಯವೆಂದು ಮನದೊಳು ಚಿಂತಿಸುತ್ತಿರ್ದನೆಂದು ವೇದವ್ಯಾಸಮುನಿಯಿಂತೆಂದನು—ಕೇಳೈ ಸೂತನೇ ಸೂರ್ಯನು ತಾನು ಸಮರ್ಥನಾದರೂ, ಮುಂದೆ ನಡೆಯಲಾರದೇ ವಿಂಧ್ಯನ ಸಮೀಪದೊಳೇ ಯಿರ್ದನು. ಇರದೆ ಮಾಡುವದೇನು ? ವೇಗವುಳ್ಳವನಾದರೂ ಅಡ್ಡಗಟ್ಟಿದ ಮಾರ್ಗವನತಿಕ್ರಮಿಸಲು, ಸಮರ್ಥನಲ್ಲವಲ್ಲಾ? ಅದುಕಾರಣ ಅತ್ಲೀಯಿದ್ದನು ಆಸೂರ್ಯನು ರಾಹು ತನ್ನ ಹಿಡಿದಿದ್ದಾಗಲೂ ಕ್ಷಣಮಾತ್ರ ನಿಲ್ಲುವನಲ್ಲ, ಹಾಗಾದರೂ ನಿಂತನು. ಆತಮಾಡುವದೇನು ? ಎಲೆ ಹಳಚುವದರೊಳಗರ್ಧ ಪ್ರಮಾಣದಿಂದೆರಡುಸಾವಿರದ ಇನ್ನೂರ ಎರಡು ಯೋಜನವಂ ನಡೆಯುವನಾದಾಗ್ಯೂ ಅಲ್ಲಿಯೇ ಬಹುಕಾಲ ನಿಂತನು.

ಹೀಗೆ ಕೆಲವುಕಾಲ ಕಳೆಯುತಿರಲು, ಮೂಡ, ಬಡಗ, ಕಡೆಯವರು ಸೂರ್ಯನ ಪ್ರಚಂಡ ಕಿರಣಗಳಿಂದ ಪೀಡಿತರಾಗಿದ್ದರು. ನಡುವ, ತೆಂಕಣ, ದೇಶದವರು ನಿದ್ರೆಗಣ್ಣಿನಲ್ಲಿದ್ದವರಾಗಿ ಮಲಗಿದ್ದಲ್ಲಿಯೇ ನಕ್ಷತ್ರಗ್ರಹಮಂಡಲಗಳಂ ನೋಡುತ್ತಾ, ಹಗಲೆನ್ನುವದಕ್ಕೆ ಸೂರ್ಯನಿಲ್ಲ. ರಾತ್ರಿಯೆನ್ನುವದಕ್ಕೆ ಚಂದ್ರನಿಲ್ಲ. ಗಗನದೊಳು ಗ್ರಹ ನಕ್ಷತ್ರಂಗಳು ಕಾಣಲ್ಪಡುತ್ತಿರುವವು. ಇನ್ನೆಂಥಾಕಾಲಬರುವದೋ? ಬ್ರಹ್ಮಾಂಡವು ಆಕಾಶದೊಳು ಲಯವನ್ನೈದುವದೋ? ಅಕಾಲದೊಳು ಹೇಗೆ ಲಯವಹುದು? ಆಗಲರಿಯದು. ಅದುಂಟಾದರೆ ಸಮುದ್ರ ಮೇರೆದಪ್ಪುವುದು.

ಮೋರೆದಪ್ಪಲಿಲ್ಲವಾಗಿ, ಪ್ರಳಯಕಾಲವಲ್ಲವೆಂದು ಚಿಂತಿಸುತ್ತಿದ್ದರು. ನಿತ್ಯಕರ್ಮಾದಿಕರ್ಮಂಗಳ ಲೋಪದಿಂ ಮೂರುಲೋಕವೂ ನಡುಗುತಿತ್ತು. ಕರ್ಮಲೋಪವಾಗಲು ಕಾರಣವು ಯಾವುದೆನೆ—ಸೂರ್ಯನುದಯಿಸಲು, ಸಕಲ ಕ್ರಿಯೆಗಳೂ ಪ್ರವರ್ತಿಸುವವು. ಆ ಕ್ರಿಯೆಗಳಿಂ ದೇವತೆಗಳಿಗೆ ತೃಪ್ತಿಯಹುದು. ಅದರಿಂ ಸೂರ್ಯನು ಕಾರಣನು. ಅಂಥಾ ಸೂರ್ಯನಿಲ್ಲದಿರೆ. ತ್ರಿಲೋಕವೂ ನಡುಗುವದು. ಇಷ್ಟೇ ಅಲ್ಲ. ಚಿತ್ರಗುಪ್ತರು ಸೂರ್ಯನಿಂದಲೇ ಕಾಲಪರಿಮಾಣವಂ ಕಾಣ್ಬರು. ಉತ್ಪತ್ತಿ ಸ್ಥಿತಿ ಸಂಹಾರಗಳಿಗೂ ರವಿಯೇ ಕಾರಣನು. ಅದರಿಂ ಸೂರ್ಯಗತಿನಿಲ್ಲಲು, ಲೋಕತ್ರಯಸಂಚಾರವು ನಿಲ್ಲುವದು. ಎಲ್ಲಿರ್ಪವಸ್ತುವಲ್ಲಿಯೇ ಚಿತ್ರದೊಳು ಬರೆದಂತೆ ಇರ್ಪುದು. ಒಂದೆಡೆ ಕತ್ತಲೆಯಿಂದಲೂ, ಮತ್ತೊಂದೆಡೆ ಸೂರ್ಯಪ್ರಕಾಶದಿಂದಲೂ, ಅನೇಕಪ್ರಾಣಿಗಳಳಿದರು. ಲೋಕವು ದಿಕ್ಕುದಿಕ್ಕಿಗೆ ಪೋಪುದಾಯಿತು. ಈ ಮರ್ಯಾದೆಯೊಳು ಸುರಾಸುರನರೋರಗರು ವ್ಯಾಕುಲಂಬಡುತ್ತಿರಲು, ಇಂದ್ರಾದಿಗಳು ಕಟಕಟಾ! ಆಕಾಶದೊಳದೇನು ಪ್ರಳಯಬಂತು, ಪ್ರಜೆಗಳು ದಿಕ್ಕುದಿಕ್ಕಾದರು. ಇದಕ್ಕೆ ನಾವು ಮಾಡುವದೇನೆಂದು ಚಿಂತಿಸಿ, ಚತುರ್ಮುಖ ಬ್ರಹ್ಮನಿಗೆ ಶರಣಾಗತರಾಗಿ, ಆ ಬ್ರಹ್ಮನಂ ಸ್ತುತಿಸಿದರದೆಂತೆನೆ—ವೇದಗರ್ಭನಾದ ಪರಬ್ರಹ್ಮನಾದ, ಸಾಮಾನ್ಯರಿಗಗೋಚರನಾದ, ಅದ್ವಿತೀಯನಾದ, ಮೋಕ್ಷಸ್ವರೂಪನಾದ ಚತುರ್ಮುಖನೇ ನಿನಗೆ ನಮಸ್ಕಾರವು. ಆವಾತನ ಸ್ವರೂಪವನ್ನು ದೇವತೆಗಳು ಮೊದಲಾಗಿ, ಅರಿಯರೊ. ಮನವು ಧ್ಯಾನಿಸಿ, ಕುಂಠಿತವಾಗುವುದೋ. ವಾಕ್ಯಗಳು ನಿಸ್ಸರಸಿ ಕಾಣದೇ ತಿರುಗುವವೋ. ಅಂಥಾ ಜ್ಞಾನಸ್ವರೂಪನಾದ ನಿನಗೆ ನಮಸ್ಕಾರವು. ಜ್ಯೋತಿಸ್ವರೂಪನಾದ ನಿನ್ನಂ ಯೋಗಿಗಳು ಸಮಾಧಿಯಿಂ ನಿಶ್ಚಲವಾದ ಹೃದಯಾಕಾಶದೊಳು ಕಾಣ್ಬರೊ ಅಂಥಾ ನಿನಗೆ ನಮಸ್ಕಾರವು. ತತ್ವಾತೀತನಾದ, ಕಾಲಸ್ವರೂಪಿಯಾದ, ಸ್ವೇಚ್ಛೆಯಿಂದಲೇ ದೇಹಧಾರಿಯಾದ, ತ್ರಿಗುಣಸ್ವರೂಪನಾದ, ಪ್ರಕೃತಿಸ್ವರೂಪನಾದ, ನಿನಗೆ ನಮಸ್ಕಾರವು. ಸತ್ವಗುಣದಿಂ ವಿಷ್ಣುರೂಪಿಯಾಗಿ ರಕ್ಷಿಸುವಂಥ, ರಜೋ

ಗುಣದಿಂ ಬ್ರಹ್ಮನಾಗಿ, ಸೃಷ್ಟಿಸುವಂಥ, ತಮೋಗುಣದಿಂ ರುದ್ರನಾಗಿ ಸಂಹರಿಸುವಂಥ. ತ್ರಿಮೂರ್ತಿಸ್ವರೂಪಿಯಾದ ನಿನಗೆ ನಮಸ್ಕಾರವು ಮನೋಬುಧ್ಯಹಂಕಾರಚಿತ್ತ, ಪಂಚತನ್ಮಾತ್ರ, ಪಂಚಮಹಾಭೂತ, ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಶಬ್ದ, ಸ್ಪರ್ಶ, ರೂಪ ರಸ, ಗಂಧ, ಬ್ರಹ್ಮಾಂಡಸ್ವರೂಪನಾಗಿ, ತದಂತರ್ವರ್ತಿಯಾಗಿ, ಕೆಳಗೂ, ಮೇಗೂ, ವಿಶ್ವರೂಪನಾದ ನಿನಗೆ ನಮಸ್ಕಾರವು. ನಿತ್ಯಾನಿತ್ಯನಾಗಿ, ಕಾರ್ಯಕಾರಣನಾಗಿ, ಭಕ್ತರಕ್ಷಣಾರ್ಥವಾಗಿ, ಸ್ವೇಚ್ಛೆಯಿಂದವತಾರಗಳಂ ಧರಿಸಿದನಿನಗೆ ನಮಸ್ಕಾರವು. ನಿನ್ನ ಶ್ವಾಸಂಗಳೇ ವೇದಂಗಳು. ನಿನ್ನ ಬೆವರಿನಿಂ ಜಗವಾದುದು. ಸಕಲ ಪ್ರಾಣಿಗಳೂ ನಿನ್ನ ಪಾದಂಗಳು. ನಿನ್ನ ಶಿರಸ್ಸಿನಿಂ ಸ್ವರ್ಗವಾದುದು. ನಿನ್ನ ನಾಭಿಯಿಂದಂತರಿಕ್ಷವಾದುದು. ನಿನ್ನ ರೋಮಂಗಳಂ ವನಸ್ಪತಿಗಳಾದವು. ನಿನ್ನ ಮನದಿಂ ಚಂದ್ರನು ಪುಟ್ಟಿದನು. ನಿನ್ನ ನೇತ್ರದಿಂ ಸೂರ್ಯನು ಪುಟ್ಟಿದನು. ಸಮಸ್ತವೂ ನೀನೇ. ಸಕಲವೂ ನಿನ್ನಲ್ಲಿಯೇ ಇರ್ಪುದು. ಸ್ತುತಿಸುವ ಸ್ತುತಿಯೂ, ಸ್ತೋತ್ರವಂ ಮಾಡಿಸಿಕೊಳ್ಳುವನೂ ನೀನೇ. ಎಲೈ ಸಮಸ್ತನಾದ ಬ್ರಹ್ಮನೇ ವ್ಯಸ್ತಸಮಸ್ತರೂಪನಾದ ನಿನಗೆ ನಮಸ್ಕಾರವು. ಈ ರೀತಿಯೊಳು ಸ್ತುತಿಸಿ, ಸಾಷ್ಟಾಂಗನೆರಗಿದ ಇಂದ್ರಾದಿಗಳಂ ನೋಡಿ ಬ್ರಹ್ಮನಿಂತೆಂದನು- ಎಲೈ ದೇವತೆಗಳಿರಾ ನೀವು ಮಾಡಿದ ಯಥಾರ್ಥವಾದ ಸ್ತುತಿಯಿಂದ ನಾನು ಪ್ರಸನ್ನನಾದೆನು. ನಿಮಗೆ ಬೇಕಾದವರಗಳಂ ಬೇಡಿ. ನೀವು ಮಾಡಿದ ಸ್ತುತಿಯಿಂದೆನ್ನನಾಗಲಿ, ವಿಷ್ಣುವನಾಗಲಿ, ಸದಾಶಿವನನಾಗಲಿ, ಯಾವನು ಸ್ತುತಿಸುವನೋ ಆತಂಗೆ ಈ ನಾವು ತ್ರಿಮೂರ್ತಿಗಳೂ, ಪ್ರಸನ್ನರಾಗಿ, ಪುತ್ರ, ಪೌತ್ರ, ಧನ, ಕನಕ, ವಸ್ತುವಾಹನಾಯುರಾರೋಗ್ಯೈಶ್ವರ್ಯ ನಿರ್ಭಯತ್ವಗಳನ್ನೂ, ರಣದೊಳು ವಿಜಯವನ್ನೂ, ಇಹಪರ ಸೌಖ್ಯಗಳನ್ನೂ, ಮೋಕ್ಷವನ್ನೂ ಕೊಡುವೆವು. ಆತನು ಮನದೊಳೇನೇನ ಬಯಸುವನೋ ಅದೆಲ್ಲವು ಸಿದ್ಧಿಪುದು. ಅದರಿಂದೀ ಸ್ತೋತ್ರವಭೀಷ್ಟದವೆನಿಸಿಕೊಳ್ಳುವದೆಂದು ಪೇಳಿ, ಮತ್ತಂ ಕೆಲವು ಧರ್ಮಂಗಳಂ ಪೇಳಲುಪಕ್ರಮಿಸಿದನದೆಂತೆನೆ-ಎಲೈ ದೇವರ್ಕಳಿರಾ ನೀ

ವು ಎನ್ನ ಲೋಕದೊಳೇಕೆ ಚಿಂತಿಸುವಿರಿ ? ಎನ್ನ ಲೋಕದೊಳರ್ಪ ವರಂ ತೋರ್ಪೆನು. ಇವರು ಮೂರ್ತಿಮಂತರಾದ ವೇದಪುರುಷರು. ಇವು ಸಕಲ ಮಹಾವಿದ್ಯೆಗಳು. ಇವರು ದಕ್ಷಿಣೆಸಹಿತನಾದ ಸಕಲ ಯಜ್ಞಪುರುಷರು. ಈತನು ಸತ್ಯಪುರುಷನು. ಈತನು ತಪಃಪುರುಷನು. ಈತನು ಧರ್ಮಪುರುಷನು. ಈತನು ಶಮಪುರುಷನು. ಈತನು ಬ್ರಹ್ಮಚಾರಿ ಪುರುಷನು, ಈತನು. ದಯಾಪುರುಷನು, ಈಕೆ ಭಾಗೀರಥೀದೇವಿ, ಇವರು ಶ್ರುತಿಸ್ಮೃತಿ ಪುರಾಣೇತಿಹಾಸಗಳನೋದಿ, ಕೇಳಿ ಕೃತಾರ್ಥರಾದ ಪುರುಷರು, ಇಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ, ಭಯ, ಹಿಂಸೆ, ಕೌಟಿಲ್ಯ, ಗುರುನಿಂದೆ, ಕಿರುಬುತನ, ಅಶುಚಿತ್ವವೆಂಬ ದುರ್ಗುಣಗಳಿಲ್ಲ. ಇವರು ನಿತ್ಯವೂ ವೇದಪಾರಾಯಣವ ಮಾಡಿದವರು. ಇವರು ತಪೋನಿಷ್ಠರು. ಇವರು ತಪೋಧನರು. ಇವರು ಸೋಮಪಾನ, ಮಾಸೋಪವಾಸ, ಷಾಣ್ಮಾಸ, ಚಾತುರ್ಮಾಸ್ಯಾದಿ ಷಡ್ವ್ರತನಿಷ್ಠರು. ಇವರು ಪತಿಭಕ್ತಿಪರಾಯಣರಾದ ಸ್ತ್ರೀಯರು. ಇವರು ಬ್ರಹ್ಮಚಾರಿಗಳು, ಇವರು ಪರಸ್ತ್ರೀಪರಾಙ್ಮುಖರು. ಈ ರೂಪದಿಂದೀವ್ರೋಲಗದೊಳರ್ಪರು. ನೋಡಿರೈ ಇಂದ್ರಾದಿಗಳಿರಾ ಇವರು ಮಾತಾಪಿತೃಸೇವಕರು. ಇವರು ತುರುವಿಂಡಿಗಾಗಿ ಜಗದೊಳು ದೇಹತ್ಯಾಗವ ಮಾಡಿದವರು. ವ್ರತ, ದಾನ, ಜಪ, ಯಜ್ಞ, ಅಧ್ಯಯನ, ಬ್ರಾಹ್ಮಣಸಂತರ್ಪಣ, ಪುಣ್ಯತೀರ್ಥ, ತಪಸ್ಸು, ಸದಾಚಾರ, ಮೊದಲಾದ ಕರ್ಮಂಗಳಲ್ಲಿ ಫಲವನಪೇಕ್ಷಿಸದೆ ಈಶ್ವರಾರ್ಪಣವಾಗಿ ಸತ್ಕರ್ಮಂಗಳಂ ಮಾಡಿದ ಬುದ್ಧಿವಂತರಿವರು. ಇವರು ಗಾಯತ್ರೀಜಪನಿಷ್ಠರು. ಇವರು ಅಗ್ನಿಹೋತ್ರಾದಿಯಜ್ಞನಿರತರು, ಇವರು ಉಭಯತೋಮುಖೀ ಗೋದಾನಗಳ ಮಾಡಿದವರು, ಇವರು ಸ್ವರ್ಗಾದಿಗಳು ಬಯಸದೇ ಸೋಮಪಾನವಂ ಮಾಡಿದವರು. ಇವರು ಬ್ರಾಹ್ಮಣ ಪಾದತೀರ್ಥವ ಪಾನ ಮಾಡಿದವರು. ಇವರು ಸರಸ್ವತೀನದಿಯಲ್ಲಿ ದೇಹತ್ಯಾಗವಂ ಮಾಡಿದವರು. ಇವರು ದಾನವನ್ನು ತೆಗದುಕೊಳ್ಳುವದಕ್ಕೆ ಸಮರ್ಥರಾದರೂ ದಾನವಂ ಪರಿಗ್ರಹಿಸದವರು. ಇವರು ಪುಣ್ಯಕ್ಷೇತ್ರಗಳಲ್ಲಿ ದಾನವಂ

ವರಿಗ್ರಹಿಸದವರು. ಅಂಥವರೆಲ್ಲರೂ ಸೂರ್ಯಕಾಂತಿಯುಳ್ಳವರಾಗಿ ಈ ರೂಪದಿಂದಿರುವರು. ಇವರು ಪ್ರಯಾಗೆಯಲ್ಲಿ ಮಕರಯುಕ್ತವಾದ ಮಾಘಮಾಸದಲ್ಲಿ ಸ್ನಾನವಂ ಮಾಡಿದವರು. ಇವರು ಕಾಶಿಯಲ್ಲಿ ಪಂಚನದ ತೀರ್ಥದಲ್ಲಿ ಕಾರ್ತೀಕಮಾಸದೊಳು ಪ್ರತಿದಿನವ್ಯೂ ಸ್ನಾನಮಾಡಿದ ಪುಣ್ಯದೇಹಿಗಳು. ಮಣಿಕರ್ಣಿಕಾತೀರದಲ್ಲಿ ನ್ಯಾಯಾರ್ಜಿತವಾದ ಧನದಿಂ ಬ್ರಾಹ್ಮಣರ ಸಂತೋಷಪಡಿಸಿದವರು ಸಕಲೈಶ್ವರ್ಯಯುತರಾಗಿ, ಕಲ್ಪಪರ್ಯಂತವ್ಯೂ ನನ್ನ ಪಟ್ಟಣದಲ್ಲಿಹರು. ಅನ್ಯತ್ರ ರಮೇಲೆ ಆ ಪುಣ್ಯದಲ್ಲೇ ಕಾಶಿಯಲ್ಲಿಯೇ ಪುಣ್ಯಮೋಕ್ಷವನ್ನೈದುವರು. ಕಾಶಿಯಲ್ಲಿ ಸ್ವಲ್ಪ ಪುಣ್ಯಮಾಡಿದವರೂ ಮುಕ್ತರಾಗುವರು. ಕಾಶಿಯಲ್ಲಿ ವಾಸಮಾಡಿದ ಪುಣ್ಯಾತ್ಮರು ಮೃತ್ಯುವನು ತಮ್ಮ ಮಿತ್ರನನ್ತೋಲ್ ಎದುರುನೋಡುವರು. ನ್ಯಾಯಾರ್ಜಿತ ಧನವು ದಾನಮಾಡಿದವರು ಇಲ್ಲಿ ಸುಖದೊಳಿಹರು. ಇವರು ಮುಕ್ತಿಕರವಾದ ಗಯೆಯಲ್ಲಿ ದ್ವಿಜಮುಖದಿಂ ಪಿತೃಪೂಜೆಯಂ ಮಾಡಿದವರ ಪಿತೃಗಳು. ಈ ಲೋಕವು ಬ್ರಾಹ್ಮಣಪೂಜೆಯಿಂದಲ್ಲದೆ ಮಿಕ್ಕಾದ ಪೂಜೆಯುಪುಣ್ಯದಿಂಲಭಿಸದು. ಇವು ಒರಳು, ಒನಕೆ, ಮೊದಲಾದ ಗೃಹೋಪಕರಣಂಗಳೂ, ಪಟ್ಟೆಮಂಚ, ಸುಪ್ಪತ್ತಿಗೆ, ಮೊದಲಾದ ಭೋಗ ಸಾಧನಂಗಳೂ, ಉಳ್ಳ ಗೃಹದಾನವಂ ಮಾಡಿದವರ ಉಪ್ಪರಿಗೆಗಳು. ಇವರು ಬ್ರಾಹ್ಮಣರಿಗೆ ವೇದಶಾಲೆಯಂ ಕಟ್ಟಿಸಿದವರು. ಇವರು ವೇದವ ಸೋಧಿಸಿದವರು. ಇವರು ನಾನಾವಿದ್ಯಾದಾನವಂಮಾಡಿದವರು. ಇವರು ಪುರಾಣಂಗಳಂ ಪೇಳಿದವರು. ಇವರು ಪುರಾಣಂಗಳಂ ಕೇಳಿದವರು. ಇವರು ಪುರಾಣಂಗಳಂ ದಾನಮಾಡಿದವರು. ಇವರು ಅಷ್ಟಾದಶಸ್ಮೃತಿಗಳಂ ಪೇಳಿದವರು. ಇವರು ಸ್ಮೃತಿಗಳಂ ದಾನಮಾಡಿದವರು. ಇವರೆಲ್ಲರೂ ಅಗ್ನಿಕಾಂತಿಯುಳ್ಳವರು. ಆರೋಗ್ಯಶಾಲೆಯಂಕಟ್ಟಿಸಿ, ವೈದ್ಯರ ಸಂತರಿಸಿ, ಚಿಕಿತ್ಸೆಯಂಮಾಡಿಸಿದವರು ಆರೋಗ್ಯಭಾಗ್ಯ ಸಂಪನ್ನರಾಗಿ, ಇಲ್ಲೊಂದು ಕಲ್ಪಪರ್ಯಂತರವ್ಯೂ ಇರುವರು. ತೀರ್ಥಂಗಳಲ್ಲಿ ನಿರ್ಬಂಧವಂ ಬಿಡಿಸಿದವರು ನನ್ನರಮನೆಯೊಳು ನನ್ನ ಪುತ್ರರಂತೆ ಸನ್ಮಾನದಿಂದಿರುವರು. ವಿಷ್ಣುವಿಗೆ, ಎನಗೆ, ವರಮೇ

ಶ್ವರನಿಗೆ, ನಮ್ಮೆಲ್ಲರಿಗೂ ಬ್ರಾಹ್ಮಣರೇ ಹಿತರು. ಆ ಬ್ರಾಹ್ಮಣಸ್ವರೂಪದಿಂ ನಾವು ತ್ರಿಮೂರ್ತಿಗಳೂ ಭೂತಲದೊಳು ಸಂಚರಿಪೆವು. ಆ ಬ್ರಾಹ್ಮಣರೂ ಗೋವುಗಳೂ ಸ್ವಭಾವದಿಂದೇಕರೂಪವು. ಅದನೆರಡು ಭಾಗಮಾಡಿ, ಬ್ರಾಹ್ಮಣರಲ್ಲಿ ಸಕಲಮಂತ್ರಂಗಳನ್ನೂ, ಗೋವುಗಳಲ್ಲಿ ಘೃತಾದಿ ಹವಿಸ್ಸುಗಳನ್ನೂ ನಿಲ್ಲಿಸಿದೆವು. ಬ್ರಾಹ್ಮಣರನ್ನು ಸರ್ವಾಭೀಷ್ಟಸಿದ್ಧಿಯಂ ಕೊಡುವ ಚರಣತೀರ್ಥವುಳ್ಳವರನ್ನಾಗಿ ನಿರ್ಮಿಸಿದೆವು. ಆ ಚರಣತೀರ್ಥವು ಗಂಗೋದಕಕ್ಕೆ ಸಮಾನವು. ಹಸುಗಳ ಕೆನ್ನೆ ಕೊಂಬುಗಳಲ್ಲಿ ಸಕಲತೀರ್ಥಂಗಳುಂಟು. ಕೊರಳ್ಗಳಲ್ಲಿ ಸಕಲಪುಣ್ಯಶೀಲಂಗಳಿಹವು. ಕೊಂಬುಗಳ ನಡುವೆ ಪಾರ್ವತೀದೇವಿ ಇಹಳು. ಗೋದಾನವಂ ಮಾಡಿದವನ ಪಿತೃಗಳು ನರಕದಿಂದ ಮುಕ್ತರಾಗಿ ನನ್ನಲೋಕಮನೆಯ್ದುವರು. ಋಷಿಗಳೂ, ತ್ರಿಮೂರ್ತಿಗಳಾದ ನಾವೂ, ಗೋದಾನವ ಮಾಳ್ಪವರಂ ಕಂಡು, ಸಂತೋಷಪಡುವೆವು. ಗೋದಾನವಂಮಾಡಿದವರ ವ್ಯಾಧಿ, ದರಿದ್ರ, ಪಾಪಗಳು, ನಮಗೇನುಗತಿಯೆಂದು ಮೊರೆಯಿಡುವವು. ಸಕಲಲೋಕಕ್ಕೂ ಆಕಳುಗಳೇ ವೇದಾದಿಗಳು. ತಾಯಿಗಳು, ಆ ಧೇನುಗಳ ಸ್ತೋತ್ರಪ್ರದಕ್ಷಿಣ ನಮಸ್ಕಾರಗಳಿಂದ ಭೂಪ್ರದಕ್ಷಿಣ ಫಲವಹುದು. ಲಕ್ಷ್ಮೀದೇವಿಯೂ, ಸ್ವಾಹಾದೇವಿಯೂ, ಧೇನುರೂಪವಂಧರಿಸಿ ದಾನವನಿತ್ತವರಿಗಭೀಷ್ಟಾರ್ಥಂಗಳಂ ಕೊಡುವರು. ಗೋಮಯವೇ ಯಮುನೆ. ಗೋಮೂತ್ರವೇ ನರ್ಮದೆ. ಗೋಕ್ಷೀರವೇ ಗಂಗೆ. ಅದರಿಂದಿವಕ್ಕಿಂತಲೂ ಪವಿತ್ರವಾದದ್ದೇನಿರುವದು. ಆಕಳುಗಳಂಗಂಗಳಲ್ಲಿ ಚತುರ್ದಶ ಭುವನಂಗಳಿಹವು. ಅದರಿಂ ಗೋದಾನವಿಹಪರ ಸಾಧನವು. ನಾನೂ, ವಿಷ್ಣುವೂ, ಮಹಾದೇವನೂ, ಸಕಲಋಷಿಗಳೂ, ಏಕಸ್ಥರಾಗಿ ಗೋವುಗಳಗುಣಂಗಳಂ ವಿಚಾರಿಸಿ, ನಮ್ಮ ಹಿಂದೆಯೂ, ಮುಂದೆಯೂ, ಇಕ್ಕೆಲದಲ್ಲಿಯೂ, ಹೃದಯದಲ್ಲಿಯೂ, ಮಧ್ಯದಲ್ಲಿಯೂ ಇದ್ದು ನಮ್ಮನ್ನು ರಕ್ಷಿಸೆಂದು ಪ್ರಾರ್ಥಿಸುತ್ತಿರುವೆವು. ಪ್ರಾತಃಕಾಲದೊಳೆದ್ದು ಗೋವುಚ್ಛದಿಂ ತನ್ನವಯವಂಗಳಲ್ಲಿ ಪರಿಮಾರ್ಜನಂ ಗೈಯಲು ಜ್ಯೇಷ್ಠೆ, ಕಲಹ, ರೋಗಂಗಳು ಪರಿಹಾರವಾಗು

ಪ್ರ... ಹಸುಗಳೂ, ಪತಿವ್ರತೆಯರೂ, ವೇದಂಗಳೂ, ವಿಪ್ರರೂ, ಸದಾಚಾರಿಗಳೂ, ಲೋಭಿಗಳಲ್ಲದವರೂ; ದಾನಶೀಲರೂ, ಇವರಿಂದಲೇ ಭೂಮಿಯು ಧರಿಸಲ್ಪಡುವುದು. ನಮ್ಮ ಲೋಕದ ಮೇಲೆ ವೈಕುಂಠವಿರುವುದು. ಅದರ ಮೇಲೆ ಕುಮಾರಲೋಕವಿರುವುದು. ಅದರ ಮೇಲೆ ಗೌರೀಲೋಕವಿರುವುದು. ಅದರ ಮೇಲೆ ಶಿವಲೋಕವಿರುವುದು. ಅದರ ಸಮೀಪದೊಳ್ ಗೋಲೋಕವಿರುವುದು. ಶಿವನ ಪಂಚಮುಖದಲ್ಲಿಯೂ ಪುಟ್ಟಿದ ನಂದೆ, ಭದ್ರೆ, ಸುರಭಿ, ಸುಶೀಲೆ, ಸುಮನೆಗಳೆಂಬೈದು ಕಾಮಧೇನುಗಳು ಅಲ್ಲಿ ಪ್ರಧಾನವಾಗಿರುವವು. ಗೋಸೇವೆಯಂ ಗೋದಾನವಂ ಮಾಡಿದವರು ಪಾಯಸವೆಂಬ ಕೆಸರು ಕ್ಷೀರವೆಂಬ ಜಲವುಳ್ಳ ನದಿಗಳಿಂ ಕೂಡಿದ ಗೋಲೋಕದೊಳು ಜರಾಮರಣಂಗಳಿಲ್ಲದೆ ಸುಖದೊಳಿರುವರು. ಶ್ರುತಿಸ್ಮೃತಿ ಪುರಾಣಜ್ಞರಾದ, ಸದಾಚಾರಿಗಳೇ ಬ್ರಾಹ್ಮಣರು. ಮಿಕ್ಕವರು ನಾಮಧಾರಕರು. ಶ್ರುತಿಸ್ಮೃತಿಗಳೆರಡೂ ವಿಪ್ರರ ಕಣ್ಣುಗಳು. ಪುರಾಣವು ಹೃದಯವು. ಶ್ರುತಿಸ್ಮೃತಿಗಳನರಿಯದವರು ಕುರುಡರು. ಇದರೊಳೊಂದನರಿಯದವನು ಒಕ್ಕಣ್ಣನು. ಪುರಾಣವಿಲ್ಲದವನಿಗಿಂತಲೂ, ಏಕನೇತ್ರ, ಗತನೇತ್ರರೇ ಲೇಸು. ಪುರಾಣಜ್ಞನೆಂತೆಂದರೆ ಶ್ರುತಿಸ್ಮೃತಿಗಳರ್ಥವು ಪುರಾಣದಲ್ಲಿರುವದಾಗ ಪುರಾಣಜ್ಞನೇ ಅಧಿಕನು. ಅದರಿಂ ವೇದಶಾಸ್ತ್ರಜ್ಞನಾದ ಆಚಾರವಂತನಿಗೆ ದಾನವಂ ಕೊಡಬೇಕು. ಅಶ್ರೋತ್ರಿಯಂಗೆ ದಾನವಂ ಕೊಡಲು ದಾನವಿತ್ತವನು ನರಕಕ್ಕೆ ಕೊಂಡೊಯ್ವರು. ಅದರಿಂದ ಅಶ್ರೋತ್ರಿಯಂಗೆ ದಾನವ ಕೊಡಲಾಗದು. ಯಾವ ಪುರುಷನಿಗೆ ಧರ್ಮಪ್ರೀತಿಯು ಬೇಕಾಗಿರುವುದೋ ಆ ಪುರುಷನು ಧರ್ಮವಂ ಬೋಧಿಸುವ ಪುರಾಣಂಗಳಂ ಕೇಳಬೇಕು. ಹದಿನಾಲ್ಕು ಮಹಾವಿದ್ಯೆಗಳಲ್ಲಿ ಪುರಾಣವು ದೀಪದಂತೆ ಜ್ಞಾನೋದಯವು. ಅಂಧಕನಾದರೂ ಪುರಾಣವೆಂಬ ದೀವಿಗೆ ಬೆಳಕಿನಿಂದ ಸಂಸಾರಸಮುದ್ರದೊಳು ಬೀಳನು. ಕೇಳುತ್ತ ದೇವರ್ಕಳಿಗೆ ಸಾರತರವಾದ ವಚನವಿದು. ನಮ್ಮ ಲೋಕವಂ ಬಯಸುವ ಬುದ್ಧಿವಂತರು ಪುರಾಣಂಗಳನೇ ಕೇಳಬೇಕು. ಯಾವಾಗಲೂ ಬ್ರಾಹ್ಮಣ

ರನೇ ರಕ್ಷಿಸಬೇಕು. ಈ ರೀತಿಯೊಳು ತನ್ನ ಲೋಕಕ್ಕೆ ಸಾಧನವಾದ ಕರ್ಮಂಗಳಂ ಬೋಧಿಸಿ ಮತ್ತಿಂತೆಂದನು—ಕೇಳಿರೈ ದೇವರ್ಕಳಿರಾ ಈಗ ಮೇರುವಿನೊಡನೆ ಮತ್ಸರಿಸಿದ ವಿಂಧ್ಯನು ಸೂರ್ಯನಮಾರ್ಗವಂ ನಿರೋಧಿಸಲು ಬಂದಿರಲ್ಲ. ಅದರ ಉಪಾಯವುಮಂ ನಿಮಗೆ ಪೇಳುವೆನು ಕೇಳಿ—ತಾರಕಬ್ರಹ್ಮೋಪದೇಶದಿಂ ಲೋಕರಕ್ಷಣಮಂ ಮಾಡುವ ವಿಶ್ವನಾಥನಿಗೆ ನಿವಾಸವಾದ, ಸಕಲರಿಗೂ ಮುಕ್ತಿಸಾಧನವಾದ, ಅವಿಮುಕ್ತವೆಂಬ ಪುಣ್ಯಕ್ಷೇತ್ರದೊಳು ವಿಶ್ವನಾಥನಲ್ಲಿ ಚಿತ್ತವನಿರಿಸಿ, ಮಿತ್ರಾವರುಣಪುತ್ರನಾದಗಸ್ತ್ಯನು ಉಗ್ರತಪವ ಮಾಡುತ್ತಿರುವನು. ನೀವಲ್ಲಿಗೆ ಪೋಗಿ, ಆತನಂ ಪ್ರಾರ್ಥಿಸಿದೊಡೆ, ನಿಮ್ಮ ಕಾರ್ಯವನಾತನೇ ಸಾಧಿಸಿಕೊಡುವನು. ಆತನು ಪೂರ್ವಕಾಲದೊಳಿಲ್ವಲವಾತಾಪಿಗಳಂ ಸಂಹರಿಸಿ, ಲೋಕವಂ ರಕ್ಷಿಸಿರುವನು. ಸೂರ್ಯನಿಗಿಂತಧಿಕ ತೇಜೋವಂತನು. ಅಂದುಮೊದಲಾಗಗಸ್ತ್ಯಗೆ ಅಂಜದವರಾರು. ಇಂತೆಂದು ಬ್ರಹ್ಮನು ದೇವತೆಗಳಿಗೆ ನಿರೂಪಿಸಿ, ಅಂತರ್ಧಾನವನೆಯ್ದಿದನು.

ಅನಂತರದೊಳಾ ದೇವರ್ಕಳು ಸಂತುಷ್ಟಚಿತ್ತರಾಗಿ, ತಮ್ಮೊಳು ತಾವಿಂತೆಂದು ನುಡಿದರು. ಅದೆಂತೆನೆ—ನಾವಿಂದು ಧನ್ಯರಾದೆವು. ಈ ನೆವದಿಂದಲಾದರೂ ಕಾಶೀನಾಥನನೋಳ್ಪ ಪುಣ್ಯಮುಂಟಾಯಿತು. ಬಹುದಿವಸಕ್ಕಾಗಿ ನಮ್ಮ ಮನೋರಥವು ಫಲಿತವಾಯಿತು. ಇಂದು ನಮ್ಮ ಪುಣ್ಯಕ್ಕೆ ಕಣ್ಣುಂಟಾಯಿತು. ಯಾವಪಾದಗಳು ಕಾಶಿಗಿದಿರಾಗಿ ನಡೆಯುವವೋ ಆ ಪಾದಂಗಳೇ ಪುಣ್ಯಮಾಡಿದವು. ಆ ಬ್ರಹ್ಮದೇವರು ನಿರೂಪಿಸಿದ ಕಥಾಶ್ರವಣದಿಂದ ಕಾಶೀಪಟ್ಟಣವಂ ಕಾಣಬೇಕಾಯಿತು. ಪುಣ್ಯವಂತರಿಗೊಂದು ಕ್ರಿಯೆಯಿಂದೆರಡುಫಲ ಕೈಸೇರುವದೆಂದು ಮಾತನಾಡಿಕೊಳ್ಳುತ್ತ, ಸಂತೋಷಮುಖರಾಗಿ, ಕಾಶೀಪಟ್ಟಣವನೆಯ್ದಿದರೆಂದು ವ್ಯಾಸರು ಸೂತಂಗೆ ಪೇಳಿದರು. ಈ ಅಧ್ಯಾಯವುಮಂ ಕೇಳಿದವರ್ಗೆ ಫಲವನಿರೂಪಿಸುವರು ಯಾರು. ಯಾರು ಸ್ವಸ್ಥಚಿತ್ತರಾಗಿ, ಅತ್ಯಂತ ಪುಣ್ಯಪ್ರದಮಾದೀ ಅಧ್ಯಾಯದ ಕಥೆಯಂ ಕೇಳುವರೋ ಅವರು ಸಕಲಪಾಪಗಳಂ ಪರಿಹರಿಸಿಕೊಂಡು ಪುತ್ರಪೌತ್ರಾದಿ ಸಕಲೈಶ್ವ

ರ್‍ಯಸಹಿತರಾಗಿ, ಇಹದೊಳು ಸಕಲ ಭೋಗಂಗಳನನುಭವಿಸಿ, ಅನಂತರ ಸ್ವರ್ಗದೊಳು ಬಹುಕಾಲ ಸುಖವಿದ್ದು, ಸತ್ಯಲೋಕಕ್ಕೆ ಪೋಗಿ, ಚಿರಕಾಲ ಸೌಖ್ಯದಲ್ಲಿದ್ದು ಮೋಕ್ಷವನೈದುವರೆಂದು ವ್ಯಾಸರು ಸೂತ ಪೌರಾಣಿಕಂಗೆ ನಿರೂಪಿಸಿದರ್ಥವಂ ಸೂತಪೌರಾಣಿಕನು ಶೌನಕಾದಿ ಋಷಿಗಳಿಗೆ ವಿವರಿಸಿಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥವು.

ಇಂತು ಶ್ರೀಮತ್ಸಮಸ್ತೇತ್ಯಾದಿ ಬಿರುದಾಂಕಿತರಾದ ಮಹೀಶೂರ ಶ್ರೀ ಕೃಷ್ಣರಾಜ ವೊಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಭಾಷೆಯಿಂದ ವಿರಚಿಸಿದ ಕೃಷ್ಣರಾಜ ವಾಣೀವಿಲಾಸವೆಂಬ ಸ್ಕಂದ ಪುರಾಣೋಕ್ತ ಕಾಶೀಮಹಿಮಾರ್ಥ ದರ್ಪಣದಲ್ಲಿ ವಿಂಧ್ಯನು ಸೂರ್‍ಯಮಾರ್ಗವಂ ತಡೆಯಲು ದೇವತೆಗಳು ಬ್ರಹ್ಮನಬಳಿಗೆ ಪೋಗಿ ಬಿನ್ನೈಸಲು ಬ್ರಹ್ಮನು ಸತ್ಯಲೋಕವೃತ್ತಾಂತವನ್ನು ಬ್ರಾಹ್ಮಣರ ಮಹಿಮೆಯನ್ನು ಪೇಳಿ ಅಗಸ್ತ್ಯರಬಳಿಗೆ ಕಳುಹಲು ದೇವತೆಗಳು ಕಾಶೀಪಟ್ಟಣಕ್ಕೆ ಬಂದ ಪ್ರಸಂಗವೆಂಬ ಎರಡನೆಅಧ್ಯಾಯಾರ್ಥ ನಿರೂಪಣಕ್ಕಂ—

ಮಂಗಳಮಹಾ.

ಮೂರನೇ ಅಧ್ಯಾಯ.

ಮೂರನೆಯ ಅಧ್ಯಾಯದಲ್ಲಿ ದೇವತೆಗಳಿಗೆ ಅಗಸ್ತ್ಯರ ದರ್ಶನವಾದದ್ದು,

ಅಗಸ್ತ್ಯಾಶ್ರಮ ವರ್ಣನೆ.

ಶ್ರೀ ವಿಶ್ವೇಶ್ವರಾಯನಮಃ ॥ ಈಪ್ರಕಾರವಾಗಿ ಕೇಳ್ದ ಸೂತಪೌರಾಣಿಕನು ತನ್ನ ಗುರುವಾದ ವ್ಯಾಸರಿಗೆ ಬಿನ್ನೈಸಿದನು. ಅದೆಂತೆನೆ— ಎಲೈ ಷಡ್ಗುಣೈಶ್ವರ್‍ಯಸಂಪನ್ನನಾದ ಸರ್ವಶಕ್ತ್ಯಾಢ್ಯವಾದ ಸಮಸ್ತ ಜ್ಞಾನನಿಧಿಯಾದ ನಾಶರಹಿತನಾದ ವ್ಯಾಸಮುನೀಶ್ವರನೇ ದೇವರ್ಕಳು

ಕಾಶಿಸ್ಥೋಗಿ ಸಾಧಿಸಿದ ಧರ್ಮವೇನು? ತಪೋನಿಧಿಯಾದ ಅಗಸ್ತ್ಯನು ಹೇಗೆ ಪ್ರಾರ್ಥಿಸಿದನು? ಅತ್ಯುನ್ನತನಾದ ವಿಂಧ್ಯನು ಹೇಗೆ ಸ್ವರ್ಗ ರೋಧವನ್ನೆಸಗಿದನು? ನಿಮ್ಮ ವಾಕ್ಯಗಳೆಂಬ ಅಮೃತಸಮುದ್ರದಲ್ಲಿ ನನ್ನ ಮನಸ್ಸು ಸ್ನಾನವಂ ಮಾಡಲಿಚ್ಛೈಸಿರುವುದೆಂಬ ವಾಕ್ಯಗಳಂ ಕೇಳಿ ಪರಾಶರನ ಕುಮಾರನಾದ ವೇದವ್ಯಾಸರು ವಿಶ್ವಾಸವುಳ್ಳ ಶಿಷ್ಯಶ್ರೇಷ್ಠ ನಾದ ಸೂತಂಗೆ ಪ್ರಶ್ನೆಗುತ್ತರವನೀಯಲುಪಕ್ರಮಿಸಿದರು. ಎಲೈ ಸೂಕ್ಷ್ಮಬುದ್ಧಿಯುಳ್ಳ ಸೂತನೇ ಭಕ್ತಿವಿಶ್ವಾಸವುಳ್ಳವನಾಗಿ ಕೇಳು, ಶುಕವೈಶಂಪಾಯನ ಮೊದಲಾದ ಬಾಲಕರು ಕೇಳಲಿ. ಆ ದೇವರ್ಕಳು ಋಷಿಸಮೇತರಾಗಿ ಕಾಶೀಪಟ್ಟಣವಂ ಪೊಕ್ಕು ಶೀಘ್ರದಲ್ಲಿಯೆ ವಿಷ್ಣ್ವ ಕ್ತನಾಗಿ ಮಣಿಕರ್ಣಿಕೆಯಲ್ಲಿ ಸಚೇಲಸ್ನಾನಸಂಧ್ಯಾವಂದನೆಗಳಂ ಮಾಡಿ, ತಿಲಾಕ್ಷತೆ ದರ್ಭೆಗಳಿಂದ ದೇವರ್ಷಿ ಪಿತೃತರ್ಪಣಂಗಳಂ ಕೊಟ್ಟು, ತೀರ್ಥವಾಸಿಗಳಿಗೆ ಪ್ರತ್ಯೇಕ ದಾನಂಗಳನಿತ್ತರು. ಅದೆಂತೆನೆ-ರತ್ನಹಿರಣ್ಯ ವಸ್ತ್ರ ಆಭರಣ ಧೇನುವಿಚಿತ್ರವಾದ ಚಿನ್ನ ಬೆಳ್ಳಿಯ ಪಾತ್ರೆಗಳು ಅಮೃತದವೋಲ್ ಸವಿಯಾದ ಶಾಲ್ಯನ್ನ ಸಕ್ಕರೆಬೆರೆದ ಪರಮಾನ್ನ ಹಾಲು ಮೊಸರು ತುಪ್ಪ ಮಜ್ಜಿಗೆ ನಾನಾವಿಧ ಧಾನ್ಯ ಸುಗಂಧ ಕರ್ಪೂರ ತಾಂಬೂಲ ಚಪ್ಪರಪಟ್ಟೆ ಮಂಚ ಸುಪ್ಪತ್ತಿಗೆ, ಹಾಣಾದೀವಿಗೆ ಕನ್ನಡಿ ಮಣಿದಂಡಿಗೆ ಪಲ್ಲಕ್ಕಿ, ಗೌಡಿಯರು ಭೃತ್ಯರು ರಥಗಳು ಜೀವದನಗಳು ಗೃಹಗಳು ವಿಚಿತ್ರ ಧ್ವಜಪಟಗಳು ಸಂವತ್ಸರಗ್ರಾಸಗೃಹೋಪಕರಣ ಇವುಗಳನಿತ್ತು, ಯತಿಗಳಿಗೆ ತಪಸ್ವಿಗಳಿಗೆ ಯೋಗ್ಯವಾದ ದೃಢವಾದ ದುಕೂಲವಸ್ತ್ರಂಗಳಂ ಮೃದುವಾದ ನಾರುಮಡಿಗಳಂ ದಂಡಕಮಂಡಲುಗಳಂ ವ್ಯಾಘ್ರಚರ್ಮ ಕೃಷ್ಣಾಜಿನಗಳಂ ಕೌಪೀನಗಳಂ ಹಲಗೆಮಂಚಂಗಳಂ, ಸೇವಕರ್ಗೆ ಸಂಬಳಗಳಂ, ನಾನಾಪ್ರಕಾರವಾದ ಔಷಧಂಗಳಂ ಅನ್ನಸತ್ರಗಳಂ ಪಥಿಕರ್ಗೆ ಹಾವುಗೆಗಳಂ ಪಾದರಕ್ಷೆಗಳಂ ಇತ್ತರು. ಬೇಸಗೆಯಲ್ಲಿ ಅರವಟ್ಟಿಗೆ ಸಂಬಳಗಳಂ, ಹಿಮಋತುವಿನಲ್ಲಿ ಅಗ್ನಿಗೆ ಕಾಷ್ಠಂಗಳಂ, ವರ್ಷಾಕಾಲಕ್ಕೆ ತಕ್ಕ ಕಂಬಳಿ ತೋಪ್ಪುಪ್ರಾವ ವಂಕಕೊಡೆಗಳಂ, ರಾತ್ರಿಸಮಯದಲ್ಲಿ ದೀಪಸ್ತಂಭಂಗಳಂ ಪಾದಾಭ್ಯಂ

ಗಂಗಳೇ, ಪ್ರತಿದೇವಾಲಯದಲ್ಲಿಯೂ ಪುರಾಣಂಗಳಂ ಹೇಳಿಸುವರ್ಗೆ
ದ್ರವ್ಯಂಗಳಂ, ದೇವಾಲಯಂಗಳಲ್ಲಿ ನೃತ್ಯಗೀತ ವಾದ್ಯಕಾರರಿಗೆ ಜೀಂಬ
ಳಗಳಂ ಕೊಟ್ಟು ದೇವಗೃಹದ ಸುಣ್ಣಗಾರೆಗಳಂ; ಜೀರ್ಣೋದ್ಧಾರಂಗ
ಳಂ ಮಾಡಿಸಿ, ಚಿತ್ರಮಂ ಬರೆವರ್ಗೆ ವೇತನಮಂ, ಸಮ್ಮಾರ್ಜನೆ ಸಾರಣೆಕಾ
ರಣೆ ರಂಗವಲ್ಲಿಗಳಿಂದಲಂಕರಿಸುವರ್ಗೆ ದ್ರವ್ಯಂಗಳಂ ಕೊಟ್ಟು ದಶಾಂಗಧೂ
ಪಮುಂ ಕರ್ಪೂರದಾರತಿಯುಂ, ದೇವತಾರ್ಚನಯೋಗ್ಯವಾದ ಫಲಪುಷ್ಪ
ಗಳುಪ್ಪತೋಟಂಗಳಂ, ತ್ರಿಕಾಲವೂ ಮಹಾಪೂಜೆಗೆ ಹೂಮಾಲೆಯಂ ಕ
ಟ್ಟುವರ್ಗೆ ಸುವರ್ಣಮಂ, ಭೇರಿ ಶಂಖ ಮೊದಲಾದ ವಾದ್ಯಾರ್ಥದ್ರವ್ಯ
ಮಂ ಘಂಟೆಗಳಂ ಅಗ್ನಿಧರಪಾತ್ರಗಳಂ ಪರಿಮಾರ್ಜನೆ ವಸ್ತ್ರಮಂ
ಯಕ್ಷಕರ್ದಮಮುಮಂ ಸಮರ್ಪಿಸಿ, ಜಪಹೋಮಸ್ತೋತ್ರನಮಸ್ಕಾರ
ಪ್ರದಕ್ಷಿಣನಮಸ್ಕಾರ ಮೊದಲಾದ ಬಹುಸೇವೆಗಳಂ ಮಾಡಿ, ತಮ್ಮ
ತಮ್ಮ ಪೆಸರ ತೀರ್ಥಂಗಳಂ ನಿರ್ಮಿಸಿ, ದೀನರಂ ಅನಾಥರಂ ಅನ್ನವ
ಸ್ತ್ರಂಗಳಿಂ ಸಂತೋಷಪಡಿಸಿ, ಪುಣ್ಯಕ್ಷೇತ್ರದಲ್ಲಿ ನಡೆಯುತಕ್ಕ ಬ್ರ
ಹ್ಮಚರ್ಯಾದಿ ನಿಯಮಂಗಳಿಂದ ಪಂಚರಾತ್ರವಿದ್ದು, ವಿಶ್ವೇಶ್ವರಂಗೆ ಪ್ರ
ದಕ್ಷಿಣನಮಸ್ಕಾರವಂ ಮಾಡಿ, ಪುನಃಪುನಃ ನೋಡಿ ಸ್ತುತಿಗೈದು,
ಲೋಕೋಪಕಾರನಿಮಿತ್ತವಾಗಿ ಅಗಸ್ತ್ಯಾಶ್ರಮಮಂ ಕುರಿತು ತೆರಳಿ
ದರು. ಮುಂದೆ ತನ್ನ ಪೆಸರಿನ ಲಿಂಗಮಂ ಪೂಜಿಸಿ ನಿಶ್ಚಲಚಿತ್ತನಾಗಿ
ಶತರುದ್ರೀಯ ಜಪಮಂ ಮಾಡುತ್ತ ಎರಡನೆಯ ಸೂರ್ಯನಂತೆಯುಂ,
ಅಗ್ನಿಜ್ವಾಲೆಗಳಂತಿರ್ದ ಅಂಗಂಗಳಿಂದೊಪ್ಪುವ ಸಾಕ್ಷಾದ್ಬಡಬಾಗ್ನಿಯೋ
ವಿಗ್ರಹವೆನಿಸಿ, ತಪಮಂ ತಾಳ್ದಿಪ್ಪುದೋ ಎಂಬುವಹಾಗೆಯೂ, ಪೆಂಟು
ಮುಖದಂತೆ ಕದಲದೆಯೂ ಇದ್ದಂಥಾ ಸತ್ಪುರುಷರ ಮನದಪ್ರೋಲ್ ನಿ
ರ್ಮಲವಾದ ಅಗಸ್ತ್ಯಮುನಿಯಂ ಕಂಡು ಇಂತೆಂದರು. ಚಂದ್ರಸೂರ್ಯ
ಅಗ್ನಿಮೊದಲಾದ ತೇಜಸ್ಸುಗಳು ಈ ಮುನಿಯ ರೂಪಮಂ ಧರಿಸಿ
ತಮ್ಮ ಮೋಕ್ಷಕ್ಕೋಸ್ಕರ ಪರವಸ್ತುವನು ಧ್ಯಾನಿಸುತ್ತಿರುವುದೇಕೆಂ
ಬಹಾಗೆ ಇರ್ದನು. ಈತನ ತಪಸ್ಸಿನ ಭಯದಿಂ ಸೂರ್ಯನು ಮೆಗ್ಗಳ
ವಾಪಾತನ್ನ ಉಷ್ಣಮಂ ತೋರಿಸಂ ಅಗ್ನಿಯು ಮಿತಿತಪ್ಪಿ ತನ್ನ ಗುಣ

ವಂ ಕ್ರೂರನು ಮಿಂಚುಚಂಚಲವಸ್ವದಿತು. ಈ ಮುನಿಯ ಆಶ್ರಮದಲ್ಲಿ ಕ್ರೂರಪ್ರಾಣಿಗಳು ಮೊದಲಾಗಿ ತಮ್ಮ ನಿಜವೈರವಂ ಬಿಟ್ಟು ಸಾತ್ವಿಕ ಗುಣವುಳ್ಳವಾದವು. ಆನೆ ಸಿಂಹಮೃಗ, ಗೋವ್ಯಾಘ್ರವು, ಸಿಂಹಶರಭವು, ಮರಾಹಶುನಕವು, ಮೊಲ ತೋಳವು, ಮುಂಗಸಿ ಸರ್ಪವು, ಮೊದಲಾದ ಪ್ರಾಣಿಗಳು ತಮ್ಮತಮ್ಮ ಜಾತಿವೈರಗಳಂ ಬಿಟ್ಟು ಮಿತ್ರರಂತೆ ಕೂಡಿರುವುವು. ಇಹಪರವನಪೇಕ್ಷಿಸಿದವರು ಮಾಂಸಭಕ್ಷಣವ ಮಾಡಬಾರದು. ದೇವತಾರ್ಥವಲ್ಲದೆ ತನ್ನ ಶರೀರವಂ ಪೋರೆಯಬೇಕೆಂದು ಪಶುಹಿಂಸೆಯಂ ಮಾಡುವವನು ಆ ಪಶುವಿನ ರೋಮಂಗಳಷ್ಟು ಕಾಲವು ನರಕದಲ್ಲಿದ್ದು ಮರುಹುಟ್ಟುಹುಟ್ಟದನೇಲೆ ಆ ಪ್ರಾಣಿಗಳಿಗೆ ತಾವು ಆಹಾರವಹರು. ಅದಲ್ಲದೇ ಮಾಂಸವಂ ಭಕ್ಷಿಸಬೇಕಾದಲ್ಲಿ ತನ್ನ ಮಾಂಸವನ್ನೇ ತಾನು ಭಕ್ಷಿಸಬೇಕಲ್ಲದೆ ಸ್ವಾರ್ಥವಾಗಿ ಪಶುಹಿಂಸೆಯಂ ಮಾಡಲಾಗದು. ಆದುದರಿಂದಿಲ್ಲಿರುವ ಕ್ರೂರಮೃಗಂಗಳಿಗೂ ಮಾಂಸಭಕ್ಷಣದಲ್ಲಿ ಬುದ್ಧಿ ಹುಟ್ಟಲಿಲ್ಲ. ಶಾಸ್ತ್ರದಲ್ಲಿ ಎಲ್ಲಾಮಾಂಸಭಕ್ಷಣದ ಪಾಪವೊಂದು ತೂಕ, ಮತ್ಸ್ಯಭಕ್ಷಣದ ಪಾಪವೊಂದೇ ಒಂದುತೂಕವೆಂದು ಅರಿದವೋ ಎಂಬಂತೆ ಬಕಗಳು ಮತ್ಸ್ಯಗಳಮುಟ್ಟದೆ ಇರುವುವು. ಮದ್ಯಪಾನವಂ ಮಾಡಿದವರು ನರಕಾಂತದಲ್ಲಿ ತುಂಬಿಗಳಾಗಿ ಪುಟ್ಟುವರೆಂದು ಅರಿದವೊ ಎಂಬಂತೆ ಭ್ರಮರಂಗಳು ಪುಷ್ಪರಸಂಗಳಂಬಿಟ್ಟರುವುವು. ಆದುದರಿಂ ಮಾಂಸವಂ ಸೇವಿಸುವರ್ಗೆ ಶಿವನು ದೂರಸ್ಥನಹನು. ಪಶುಪಕ್ಷಿ ಮೃಗಾದಿಗಳಿಗೂ ತಾರಕೋಪದೇಶವುಂಟು. ಅಂಥಾ ಮೃಗಂಗಳಂ ನೋಡುತ್ತ ಮುಂದೆ ತೆರಳಿ, ಹಂಸಚಾತಕಚಕ್ರವಾಕ ಕೋಗಿಲೆ ಚಕೋರ ಅರಗಿಣಿಗೊರವಂಕ ನವಿಲು ಮೊದಲಾದ ಪಕ್ಷಿಗಳಂ ಕಂಡು, ನಮಗೆ ಪುನರಾವೃತ್ತಿವುಂಟು. ಇವಕ್ಕೆ ಪುನರಾವರ್ತಿಯಿಲ್ಲ. ನಮಗಿಂತಲೂ ಈ ಪಶುಪಕ್ಷಿ ಮೃಗಂಗಳೇ ಲೇಸು. ಬ್ರಹ್ಮಲಯವಾದರೂ ಕಾಶೀವಾಸಿಗಳಿಗೆ ಲಯವಿಲ್ಲ. ಅದುಕಾರಣ ಬ್ರಹ್ಮಾಂಡದೊಳಗಿರುವ ಮುಕ್ಕವರಿಗೆ ಕಾಶಿಯಲ್ಲಿರುವವರ ಸುಖವಿಲ್ಲ. ಆ ಕಾಶೀವಾಸವು ವಿಶ್ವೇಶ್ವರನ ಅನುಗ್ರಹಹೊರತಾಗಿ ದೊರಕೊಳ್ಳದು. ಅದಱ

ಮಿತ್ತವಾಗಿ ಆ ವಿಶ್ವಪತಿಯನ್ನೇ ಭಜಿಸಬೇಕು. ಬೇಸರಿಕೆ ಪರಿಹಾರಕ್ಕೋಸ್ಕರವಾದಡೆಯೂ, ವಿಶ್ವೇಶ್ವರನ ನೋಡುವದಕ್ಕೆ ತೆರಳಲು ಹೆಜ್ಜೆ ಹೆಜ್ಜೆಗೂ ಅಶ್ವಮೇಧಾಧಿಕ ಫಲವುಂಟು, ಭಕ್ತಿಯಿಂದ ಗಂಗೆಯಲ್ಲಿ ಮಿಂದು ವಿಶ್ವಪತಿಯನ್ನೋಡಿದವರ ಪುಣ್ಯಕ್ಕೆ ಕಡೆಯಿಲ್ಲ, ಕಾಶಿಯಲ್ಲಿ ಗಂಗೆಯದರ್ಶನಸ್ಪರ್ಶನ ಸ್ನಾನಸಂಧ್ಯಾವಂದನೆ ಜಪತರ್ಪಣ ಪೂಜೆಮೊದಲಾದ ಕರ್ಮಗಳಂ ಮಾಡುವವರ್ಗೆ ಧರ್ಮಾರ್ಥಕಾಮ ಮೋಕ್ಷಂಗಳು ಪರಿಪೂರ್ಣವಾದಂತೆ ಮತ್ತೊಂದು ಕಡೆಯಲ್ಲಿ ಆಗವು. ಕಾಶಿಯಲ್ಲಿ ಅಸಿಗಂಗಾಸಂಗಮ, ದಶಾಶ್ವಮೇಧ, ಮಣಿಕರ್ಣಿಕೆ, ಪಂಚಗಂಗೆ, ವರಣಾ ಗಂಗಾಸಂಗಮವೆಂಬ ಪಂಚತೀರ್ಥಂಗಳಂ ಸೇವಿಸಿ, ವಿಶ್ವನಾಥನಂ ನೋಡಿ ಆ ಸ್ವಾಮಿಯಂ ಕರದಿಂ ಮುಟ್ಟಿ ಪೂಜೆಯಂ ಮಾಡಿ, ಧೂಪ ದೀಪ ನೈವೇದ್ಯ ಪ್ರದಕ್ಷಿಣನಮಸ್ಕಾರ ಸ್ತೋತ್ರಜಪನಾಟ್ಯ, ಶಿವಸ್ಮರಣೆ ಕೀರ್ತನೆಗಳಂ ಮಾಡಿ, ಮುಕ್ತಿಮಂಟಪದಲ್ಲಿ ಕುಳ್ಳಿರ್ದು ಪುಣ್ಯಕಥೆಗಳಂ ಕೇಳಿ, ಸ್ವಶಕ್ತಿಯಿಂದ ದಾನಂಗಳಂ ಮಾಡಿದವರ ಧರ್ಮಂಗಳು ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿಯನ್ನೈದುವವು. ಧರ್ಮವೆಂಬ ವೃಕ್ಷಕ್ಕೆ ಸದಾಚಾರವೇ ಗುರುವು. ವಿಶ್ವಾಸವೇ ಬೀಜವು. ಬ್ರಾಹ್ಮಣ ಪಾದೋದಕವೇ ಉದಕ. ಹದಿನಾಲ್ಕು ವಿದ್ಯೆಗಳೇ ಕೊಂಬೆಗಳು. ಪುರುಷಾರ್ಥಂಗಳೇ ಪುಷ್ಪಗಳು. ಕಾಮಮೋಕ್ಷಗಳೇ ಸೂಕ್ಷ್ಮಫಲಂಗಳು ಕಾಶೀಪಟ್ಟಣದಲ್ಲಿ ಸಕಲರ್ಗೂ ಸಕಲ ಧನಗಳನು ಕೊಡುವವಳು ಅನ್ನಪೂರ್ಣೆ ಢುಂಢಿಗಣಪತಿಯು ನಿರ್ವಿಘ್ನದಿಂದ ಇಷ್ಟಾರ್ಥವಂ ಪೂರೈಸುವನು. ವಿಶ್ವನಾಥನು ತಾರಕಬ್ರಹ್ಮೋಪದೇಶವಂ ಮಾಡಿ ಸಕಲಪ್ರಾಣಿಗಳನ್ನೂ ತನ್ನ ಸ್ವರೂಪವನ್ನೈದಿಸುವನು. ಆ ರೂಪವಾಗಿಯೇ ಧರ್ಮಾರ್ಥಕಾಮಮೋಕ್ಷ ರೂಪವಾಗಿ ವಿಶ್ವನಾಥನಿರುವ ಕಾಶೀಪಟ್ಟಣಕ್ಕೆ ಮೂರುಲೋಕದಲ್ಲಿಯೂ ಸರಿಯಿಲ್ಲ. ಹೀಗೆಂದು ನುಡಿಯುತ್ತ, ಪರಿಮಳಿಸುವ ಹೋಮಧೂಮವನ್ನೂ, ವೇದವಂ ಪಠಿಸುವ ಬ್ರಹ್ಮಚಾರಿಗಳೂ, ಋಷಿಕುಮರಿಯರ ಹಸ್ತದಲ್ಲಿರುವ ಧಾನ್ಯಗಳ ಬಳಿಹಿಡಿದು ಬರುತಿದ್ದವಾಗಿ ಋಷಿಗಳ ಕೈಯ್ಯಲ್ಲಿದ್ದ ಪವಿತ್ರದರ್ಭಾಗ್ರಂಗಳಂ ಮೆಲುವ ಎರ

ಳಯ ಮಣಿಗಳೂ, ಶಿಷ್ಯವೃಗಂಗಳಂ ಪಠಿಸುವೋಸುಗ ಬೀಸಿದ, ಬಲೆಗಳಂತೆ ಒಣಗಿದ ಕೌಪೀನ ನಾರುಶೀರೆಗಳೂ ಉಳ್ಳಂಥಾ, ಪತಿವ್ರತಾಶಿರೋಮಣಿಯಾದ ಲೋಪಾಮುದ್ರೆಯೆಂಬ ಅಗಸ್ತ್ಯರ ಪತ್ನಿಯ ಹೆಜ್ಜೆಗಳಿಂದಲಂಕೃತವಾದ ಪರ್ಣಶಾಲೆಯಲ್ಲಿ ದರ್ಭಾಸನದಲ್ಲಿ ಕುಳ್ಳಿರ್ದು ಜಪಸಮಾಧಿಯಂ ಮಾಡಿ ಜಪಮಾಲಿಕೆಯಂ ಕರದಲ್ಲಿ ಧರಿಸಿ ಪರಮೇಶ್ವರನಂತೆಸೆವ ಅಗಸ್ತ್ಯಋಷಿಯಂ ಕಂಡು, ಸಂತೋಷದಿಂ ಜಯಜಯವೆಂದು ನಮಸ್ಕರಿಸಲು, ಆ ಅಗಸ್ತ್ಯನು ದೇವತೆಗಳಂ ಕಂಡು ಪಿಡಿದೆತ್ತಿ ಆಶೀರ್ವಾದವಂ ಮಾಡಿ ಯಥೋಚಿತವಾದ ಪೀಠಗಳಲ್ಲಿ ಕುಳ್ಳಿರಿಸಿ, ಬಂದಪ್ರಯೋಜನವಂ ಬೆಸಗೊಳ್ಳರೆಂದು ನುಡಿದನೆಂಬವಾಗಿ ವೇದವ್ಯಾಸರು ಸೂತಂಗರುಹಿ ಈ ಅಧ್ಯಾಯದ ಫಲವಂ ಬುದ್ಧಿಗಲಿಸಿದರು. ಯಾವನೊಬ್ಬನಾದಡೆ ಪರಿಶುದ್ಧಭಕ್ತಿಯಿಂದೀಕಥೆಯ ನೋದಲಿ ಕೇಳಲಿ ಕೇಳಿಸಲಿ ಅವನು ಸಕಲಪಾಪವಂ ಪರಿಹರಿಸಿ ಕೊಂಡು ಹಂಸಯುಕ್ತ ವಿಮಾನದಿಂ ಶಿವಲೋಕವನೈದುವನೆಂದು ಹೇಳ್ದರ್ಥವನು ಸೂತಪೌರಾಣಿಕನು ಶೌನಕಾದಿಋಷಿಗಳಿಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ——ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಭಾಷೆಯಿಂದೆ ವಿರಚಿಸಿದ ಕೃಷ್ಣರಾಜ ವಾಣೀವಿಲಾಸವೆಂಬ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ದೇವತೆಗಳು ಕಾಶೀಪಟ್ಟಣಕ್ಕೆ ಬಂದು ಅಗಸ್ತ್ಯರ ದರ್ಶನವಂ ಮಾಡಿದರೆಂಬ ಅಗಸ್ತ್ಯಾಶ್ರಮವರ್ಣನೆಯಂ ಹೇಳ್ದ ಮೂರನೆಯ ಅಧ್ಯಾಯಾರ್ಥ ನಿರೂಪಣಕ್ಕಂ-

ಮಂ ಗ ಳ ಮ ಹಾ.

ಶ್ರೀ ವಿಶ್ವೇಶ್ವರಾಯನಮಃ.

ನಾಲ್ಕನೇ ಅಧ್ಯಾಯ.

ಪತಿವ್ರತಾ ಪ್ರಶಂಸೆ, ವಿಧವಾಧರ್ಮ.

ಅನಂತರದಲ್ಲಿ ಸೂತಪುರಾಣೀಕನು ವ್ಯಾಸ ಋಷೀಶ್ವರನಂ ಬೆಸಗೊಂಡನದೆಂತೆನೆ—ಎಲೈ ಷಡ್ಗುಣೈಶ್ವರ್ಯ ಸಂಪನ್ನನಾದ ವೇದವ್ಯಾಸ ಋಷಿಯೆ, ಅಗಸ್ತ್ಯನು ಬೆಸಗೊಂಡ ದೇವರ್ಕಳಿಗಿತ್ತ ಉತ್ತರವದೇನೆನಲಾ ವ್ಯಾಸಮುನಿ ಇಂತೆಂದನು, ಆಗ ದೇವರ್ಕಳು ಅಗಸ್ತ್ಯ ವಚನವಂಕೇಳಿ ತಮ್ಮಗುರುವಾದ ಬೃಹಸ್ಪತಿಯ ಮುಖವಂ ನೋಡಲಾ ಬೃಹಸ್ಪತಿಯು ಅಗಸ್ತ್ಯ ಮುನಿಗಿಂತೆಂದನು, ಎಲೈ ಅಗಸ್ತ್ಯಮುನೀಶ್ವರನೇ ದೇವರ್ಕಳು ಬಂದ ಪ್ರಯೋಜನವಂ ಕೇಳೈ! ನೀನು ಧನ್ಯನು ಕೃತಕೃತ್ಯನು ಪ್ರತಿವನವಲ್ಲಿಯೂ ಋಷಿಗಳಿಲ್ಲವೆ? ಹಾಗಲ್ಲ, ನಿನ್ನ ಮಹಿಮೆ ಘನವಾದುದು, ತಪವೂ ಬ್ರಹ್ಮತೇಜಸ್ಸೂ ಪುಣ್ಯವೂ, ಉದಾರತ್ವವೂ ನಿಮ್ಮಲ್ಲಿ ಸ್ಥಿರವಾಗಿರುವುವು. ನಿಮ್ಮ ಸತಿಯಾದ ಲೋಪಾಮುದ್ರೆಯು ಶುಭಲಕ್ಷಣವುಳ್ಳ ಪುಣ್ಯವತಿಯಾದ ನಿಮ್ಮೊಡಲ ನೆಳಲಂತೆ ಅನುಕೂಲವಾದ ಪತಿವ್ರತೆಯೂ, ಅರುಂಧತಿ, ಸಾವಿತ್ರೀ, ಅನಸೂಯೆ, ಶಾಂಡಿಲ್ಯೆ, ಸತೀದೇವೀಮಹಾಲಕ್ಷ್ಮೀಶತರೂಪೆಮೇನಕೆ, ಸುನೀತಿ, ಸಂಜ್ಞಾದೇವೀ, ಸ್ವಾಹಾದೇವೀ,ಮೊದಲಾದ ಪತಿವ್ರತೆಯರೊಳಗೆ ಕೊಂಡಾಡತಕ್ಕವಳು, ನೀವು ಭುಜಿಸಲು ಭುಜಿಪಳು, ಮಾತನಾಡಿಸಿದರೆ ಮಾತನಾಡುವಳು, ನೀವು ನಿದ್ರೆಗೈದರೆ ನಿದ್ರೆಗೈವಳು, ಅಲಂಕರಿಸಿಕೊಳ್ಳದೆ ನಿಮಗೆ ಮುಖವಂತೋರಿಸಳು. ಕಾರ್ಯಾರ್ಥವಾಗಿ ನೀವು ಕರೆಯುಲು, ಅಲಂಕಾರವಿಲ್ಲದಿರ್ದೊಡಂಬರ್ಪಳು, ನಿಮ್ಮ ಆಯುಷ್ಯವನಪೇಕ್ಷಿಸಿ ನಿಮ್ಮ ಪೆಸರುಗೊಳ್ಳಳು, ಮತ್ತೊಬ್ಬರ ಹೆಸರ ಪಿಡಿವವಳಲ್ಲ. ಶೆಳೆದುಕೊಂಡರೂನೋವವಳಲ್ಲ. ಈಪ್ರಯೋಜನವಮಾಡೆನಲು ಮಾಡಿದೆ ಎಂದು ಬಿನ್ನವಿಪಳು. ಕರೆಯಲು ಬೇಗದಿಂಬಂದು ಬೆಸನೇನೆಂದು ಕೇಳುವಳು, ಕಾರ್ಯಾರ್ಥವಾಗಿ ತಲೆಬಾಗಿಲಿಗೆ ಪೋದರೂ ಅಲ್ಲಿ ತಡಮಾಡಿರುವವಳಲ್ಲ, ನಿಮ್ಮಪ್ಪಣೆಹೊರತಾಗಿ ಆರಿಗೂ ಏನೂಕೊಡುವವಳಲ್ಲ. ಶಿವಪೂಜಾಕಾಲ

ದಲ್ಲಿ ಅಪ್ಪಣೆಹೊರತಾಗಿಯೂ ಪೂಜಾದ್ರವ್ಯಂಗಳಂ ಸಮಯವರಿತು ತ್ವರೆಬಡದೆ ನೀಡಿಕೊಡುವಳು. ನಿಮ್ಮ ಭುಕ್ತಶೇಷವಂ ವಿಶ್ವಾಸದಿಂ ಸೇವಿಪಳು, ದೇವರ್ಕಳೂ ಪಿತೃಗಳೂ ಅತಿಥಿಗಳೂ ಪರಿಚಾರಕರೂ ಭಿಕ್ಷದವರೂ ಮೊದಲಾದವರ್ಗೆ ಅನ್ನವನ್ನಿಕ್ಕದೆ ತಾನುಂಬವಳಲ್ಲ. ಗೃಹಕೃತ್ಯದಲ್ಲಿಚ್ಚರಿಕೆಯಾಗಿ ದೃಢವಾಗಿ ನಿತ್ಯಸಂತೋಷವುಳ್ಳವಳಾಗಿಹಳು. ನಿಮ್ಮನುಜ್ಞೆಹೊರತಾಗಿ ವ್ರತೋಪವಾಸಂಗಳಂ ಮಾಡಳು. ನಿಮ್ಮ ಹೊರತಾಗಿ ಮದುವೆ ಮುಂಜಿ ಮೊದಲಾದ ಉತ್ಸವಂಗಳಂ ನೋಡುವವಳಲ್ಲ. ಸುಖದಿಂ ನಿದ್ರೆಗೈಯುವ ನಿಮ್ಮನು ನಿರ್ಬಂಧಕಾರ್ಯಂಗಳಲ್ಲಿಯೂ ಎಚ್ಚರಿಸುವವಳಲ್ಲ. ತಾನು ಋತುವಾಗಿರಲು ಸ್ನಾನವಂ ಮಾಡುವ ಪರ್ಯಂತರವೂ ನಿಮಗೆ ಮುಖವಂ ತೋರಳು, ಮಾತನಾಡಳು. ಸ್ನಾನವಂ ಮಾಡಿಬಂದು ನಿಮ್ಮನ್ನಲ್ಲದೆ ಮಿಕ್ಕವರಂ ನೋಡಳು ಆ ಸಮಯದಲ್ಲಿ ನೀವಿಲ್ಲದಿದ್ದರೆ ಮನದಲ್ಲಿ ನಿಮ್ಮಂ ಧ್ಯಾನಿಸುತ್ತಲೇ ಸೂರ್ಯನಂ ನೋಳ್ಪಳು. ಇಂತೆಂದು ಬೃಹಸ್ಪತಿಯು ಲೋಪಾಮುದ್ರೆಯಂ ಸ್ತುತಿಸಿ, ಮತ್ತೂ ಸ್ತ್ರೀಧರ್ಮಂಗಳಂ ಪೇಳುತಿದ್ದಾನು. ಅರಿಸಿನ ಕುಂಕುಮ ಗಂಧ ಚಂದ್ರ ಕಂಣುಕಪ್ಪು ಕುಪ್ಪಸ ತಾಂಬೂಲ ಕರಿಯಮಣಿ, ಮಂಡೆಯ ಬಾಚಿಕಟ್ಟಿಕೊಂಬುದು ಬಳೆ ಕಡಗ ಮೊದಲಾದ ಅಲಂಕಾರ ವಸ್ತುಗಳಂ ಮುತ್ತೈದಿಯಾದವಳುವಳಿಯಲಾಗದು. ಅಗಸಗಿತ್ತಿ, ಬಹುರೂಪವಂತಳು, ಭಿಕ್ಷುಕಿ, ಕ್ಷಣಹೀನೆ, ತಿದ್ವೇಷಿಣಿ ಮೊದಲಾದವರೊಡನೆ ಸ್ನೇಹವಂ ಮಾಡಲಾಗದು. ಒರಳು ಒನಕೆ ಕುಂದಣಿಗೆ ಅಸಿಕಲ್ಲು, ಗಾಣ, ಹೊಸ್ತಿಲುಗಳಲ್ಲಿ ಕುಳ್ಳಿರಲಾಗದು. ರತಿಸಮಯ ಹೊರತಾಗಿ ಸರಸಸಲ್ಲದು. ಪತಿಯ ಸಂತೋಷಪಡಿಸಿ ಪತಿವಾಕ್ಯವಂ ಮೀರದಿಹುದೆ ಸ್ತ್ರೀಯರಿಗೆ ಮುಖ್ಯವಾದ ತೀರ್ಥವ್ರತ ದೇವತಾಪೂಜೆ ಮೊದಲಾದ ಕರ್ಮವು, ಪತಿ ನಪುಂಸಕನಾಗಲೀ ವ್ಯಾಧಿಗ್ರಸ್ತನಾಗಲೀ ಶರೆಯಲ್ಲಿ ಇರಲೀ ಒಳ್ಳೆಯವನಾಗಲೀ ದುಷ್ಟನಾಗಲೀ ಪತಿಯ ಮೀರಲಾಗದು. ಪತಿಯ ಸಂತೋಷವೇ ತನ್ನ ಸಂತೋಷವು. ಪತಿಯ ದುಃಖವೇ ತನ್ನ ದುಃಖವು, ಆಗಿಯೂ ಕಷ್ಟಬಂದ

ರೂ ಸಂತೋಷಬಂದರೂ ಸಂಪತ್ತು ಬಂದರೂ ಒಂದೇ ಪ್ರಕಾರದಲ್ಲಿ ಇರಬೇಕು. ಉಪ್ಪು ಮೆಣಸು ಮೊದಲಾದವಿಲ್ಲದಿದ್ದರೂ ಅವೇಳೆಯಲ್ಲಿ ಹೇಳಲಾಗದು. ತೀರ್ಥಸ್ನಾನವ ಬಯಸಿದವಳಾದರೆ ತನ್ನ ಪತಿಯ ಪಾದೋದಕವನ್ನೆ ಸೇವಿಸುವುದು. ಪತಿಯು ಹರಿಹರರಿಗಿಂತಧಿಕನಾದ ಕಾರಣ ಪತಿಯ ಅಪ್ಪಣೆಯಿಲ್ಲದ ವ್ರತೋಪವಾಸಂಗಳಂ ಮಾಡೆ ಪತಿಗೆ ಆಯುಷ್ಯವಲ್ಪವಹುದು, ತಾನೂ ನರಕವನ್ನೈದುವಳು. ಕೋಪದಿಂ ಪತಿಗೆ ಇದಿರುತ್ತರವನೀಯೆ ಜೇನು ನೊಣವಾಗಿ ಪುಟ್ಟುವಳು. ತನ್ನ ಪತಿಯ ಪಾದವಂ ಪೂಜಿಸದೆ ಉಣಲಾಗದು, ಉನ್ನತಪೀಠದಲ್ಲಿ ಕುಳ್ಳಿರಲಾಗದು. ಪತಿಯ ಅಪ್ಪಣೆಹೊರತಾಗಿ ಪರರಮನೆಗೆ ಹೋಗಲಾಗದು. ಪತಿಯ ಲಜ್ಜೆಬಡಿಸುವ ನಿಷ್ಠುರವಾದ ಅಪವಾದವಾಕ್ಯಂಗಳಂ ನುಡಿಯಲಾಗದು. ಹಿರಿಯರಮುಂದೆ ಒತ್ತಿ ಮಾತನಾಡಲಾಗದು. ಪತಿಯಂ ವಂಚಿಸಿ ಪರಪುರುಷರೊಡನೆ ಸಂಪರ್ಕವಮಾಡಲು ಮರದ ಪೊಟರೆಯಲ್ಲಿ ಹೆಣ್ಣು ಗೂಬೆಯಾಗಿ ಪುಟ್ಟುವಳು. ಪತಿಯನ್ನು ಕೊಲ್ಲಲುದ್ಯೋಗಿಸಿದವಳೂ ಧಿಕ್ಕರಿಸಿದವಳೂ ಹೆಣ್ಣು ಹುಲಿಯಾಗಿ ಪುಟ್ಟುವಳು. ಕ್ರೂರದೃಷ್ಟಿಯಿಂದ ಪತಿಯಂ ನೋಡಲು ಮುಚ್ಚುಗಂಣಿನವಳಹಳು. ಗಂಡನ ವಂಚಿಸಿ ಒಳ್ಳಿತನುಂಬುವಳು ಊರ ಹಂದಿಯಾಗಿಯೂ ದರಿದ್ರೆಯಹಳು. ಗಂಡನ ದೃಷ್ಟಿಯಂ ವಂಚಿಸಿ ಪರಪುರುಷನಂ ನೋಡಲು ಕುರುಡಿಯಾಗಿ ಪುಟ್ಟುವಳು. ಮತ್ತೂ ವಿಕಾರಿಯಾಗಿ ಪುಟ್ಟುವಳು, ಮತ್ತೂ ಗೊರವಂಕದ ಹಕ್ಕಿಯಾಗಿ ಪುಟ್ಟುವಳು. ಹೊರಗಿನಿಂದ ಮನೆಗೆ ಬಂದ ಪತಿಯಂ ಕಂಡು ಶೀಘ್ರದಿಂ ಕಾಲತೊಳೆದು ಪೀಠದಲ್ಲಿ ಕುಳ್ಳಿರಿಸಿ ಪಾದಸೇವೆಯಂ ಮಾಡಿ ಬೀಸಣಿಗೆಯಿಂದ ಬೀಸಿ ತಾಂಬೂಲಮೊದಲಾದ ಸಂತೋಷಕರವಾದ ಮೃದುನುಡಿ ಉಪಚಾರಗಳಿಂದ ಪ್ರೀತಿಯಿಂ ಸಂತೋಷಪಡಿಸಲು ಮೂರು ಲೋಕವಂ ಸಂತೋಷಪಡಿಸಿದಷ್ಟು ಫಲವುಂಟು. ತಾಯಿ ತಂದೆ ಒಡಹುಟ್ಟಿದವರು ಮಕ್ಕಳು, ಇವರೆಲ್ಲರೂ ವಸ್ತುಗಳಂ ಮಿತವಾಗಿ ಕೊಡುವರು. ಲೆಕ್ಕವಿಲ್ಲದ ಪದಾರ್ಥವಂ ಕೊಡುವವನು ಗಂಡನೊ

ಬ್ಬನೆ ಅದುಕಾರಣ ಸ್ತ್ರೀಯರು ಗುರುದೈವ ಧರ್ಮತೀರ್ಥ ವ್ರತಾ
ದಿಗಳಂ ಬಿಟ್ಟಾದರೂ ಪತಿ ಸೇವೆಯನ್ನೇ ಮಾಡಬೇಕು. ಜೀವವಿಲ್ಲದ
ದೇಹ ಅಶುಚಿಯಾವವೋಲ್ ಗಂಡನಿಲ್ಲದವಳು ಅಶುಚಿಯೂ ಸಮಸ್ತ
ವಾದ ಅಮಂಗಳದೊಳಗೂ ತಮ್ಮ ತಾಯಿಹೊರತಾಗಿ ಗಂಡನಿಲ್ಲದವಳು
ಅತ್ಯಂತ ಅಮಂಗಳಳೇಸರಿ. ಹಾವಿನಂತೆ ಅವಳು, ಅವಳನೋಡಿ
ಪ್ರಯಾಣವಂ ಹೋಗಲಾಗದು. ಹೋದರೆ ಕಾರ್ಯ ಹಾನಿ, ಹಿರಿಯ
ರು ಮದುವೆ ಸಮಯದಲ್ಲಿ ಚಂದ್ರನು ಬೆಳದಿಂಗಳು ಕೂಡಿದಹಾಗೆಯೂ
ತನ್ನ ಶರೀರದ ನೆಳಲೋಪಾದಿಯಲ್ಲಿಯೂ ಕೂಡಿರಬೇಕೊ ಎಂದು
ಕಟ್ಟುಮಾಡಿಹರಾದ ಕಾರಣ ಗಂಡನು ಮೃತವಾಗಲಾತನ ಬಳಿವಿಡಿ
ಯಬೇಕು. ಮನೆಯಿಂದ ರುದ್ರಭೂಮಿಗೆ ಕೊಂಡೊಯ್ಯುವ ಪತಿಯ
ಬಳಿವಿಡಿದು ನಡೆಯಲು ಹೆಜ್ಜೆಹೆಜ್ಜೆಗೆ ಅಶ್ವಮೇಧ ಫಲವುಂಟು. ಸಹ
ಗಮನವ ಮಾಡುವ ಸ್ತ್ರೀಯು ಹಾವಾಡಿಗನು ಬಿಲದಲ್ಲಿದ್ದ ಸರ್ಪವನು
ಹೊರತೆಗೆದವೋಲ್ ಯಮದೂತರಿಗೆ ಸಿಲುಕಿದ ಪತಿಯಂ ಬಿಡಿಸಿಕೊಂ
ಡು ಸ್ವರ್ಗವನ್ನೈದುವಳು. ಸಹಗಮನವಂ ಮಾಡುವ ಪತಿವ್ರತೆಯಂ
ನೋಡಿ ಪಾಪಾತ್ಮರಾದರೂ ಆಕೆಯ ಗಂಡನಂ ಬಿಟ್ಟು ಯಮದೂತರು
ದೂರದಿಂದಲೇ ಓಡುವರು. ಸಹಗಮನಿಪ ಪತಿವ್ರತೆಯಂ ನೋಡಿ
ಯಮದೂತರು ಅಂಜಿದಂತೆ ಸಿಡಲಿಗೂ ಅಗ್ನಿಗೂ ಅಂಜರು. ಪತಿವ್ರತೆ
ಯ ಸಾಮರ್ಥ್ಯದಿಂ ಭಯಪಟ್ಟು ಸೂರ್ಯನು ಪ್ರಕಾಶಿಸುತ್ತಿ
ರುವನು. ಅಗ್ನಿಯೂ ಪ್ರಜ್ವಲಿಸುತ್ತಿರುವುದು, ತೇಜಸ್ಸು
ಗಳೆಲ್ಲವೂ ನಡುಗುತ್ತಿಹವು. ಸಹಗಮನವಮಾಡುವ ಸ್ತ್ರೀಯು
ತನ್ನ ಶರೀರದಲ್ಲಿ ರೋಮಂಗಳೆಷ್ಟುವುಂಟೋ ಅಷ್ಟುಕೋಟಿ ಯು
ಗಪರ್ಯಂತರವು ಪತಿಯೊಡಗೂಡಿ ತಂದೆತಾಯಿ ಕುಲತ್ರಯಸಹಿತ
ಸ್ವರ್ಗದಲ್ಲಿ ಸುಖವನನುಭವಿಸುವಳು. ದುರಾಚಾರಿಣಿಯಾದವಳು
ತನ್ನ ಪತಿ ತಾಯಿತಂದೆ ಕುಲತ್ರಯವಂ ಇಹದಲ್ಲಿ ದುಃಖಪಡಿಸಿ
ಪರದಲ್ಲಿ ತಾನೂಸಹಿತ ನರಕದಲ್ಲಿ ಬೀಳುವಳು. ಎಲ್ಲೆಲ್ಲಿ ಪತಿವ್ರತೆಯ
ಪಾದ ಸೋಂಕಲೂ ಅಲ್ಲಲ್ಲಿ ತಾನು ಪವಿತ್ರವಾಗುವೆನೆಂದು ಭೂಮಿದೇವಿ

ನೆನೆವಳು. ಸೂರ್ಯ ಚಂದ್ರ ವಾಯು ಉದಕ ಇವು ತಾವು ಪವಿತ್ರವಾಗಬೇಕೆಂದು ಪತಿವ್ರತೆಯಂ ಮುಟ್ಟುವವು. ಮನೆಮನೆಗೆ ಲಕ್ಷಣವಾದ ಸ್ತ್ರೀಯರಿಲ್ಲದೇಹೋದರೆ ದಾರಿದ್ರ್ಯವುಂಟಾಗುವದು. ವಿಶ್ವನಾಥನ ಭಕ್ತಿವಂತರಿಗಲ್ಲದೆ ಪತಿವ್ರತೆಯಾದಸ್ತ್ರೀಯು ದೊರಕಳೊ, ಅನುಕೂಲವಾದ ಸ್ತ್ರೀಯಿಂದಲೆ ಗೃಹಸ್ಥನಿಗೆ ಸುಖ, ಧರ್ಮ, ಸಂತಾನ, ಇಹಪರಲೋಕ ಸೌಖ್ಯ, ದೇವಪಿತೃತಿಥಿಪೂಜೆಗಳು ಸಫಲವಹುದು ಎಂದು ಈ ಪರಿಯಿಂದ ಮುತ್ತೈದೆಯಾದ ಪತಿವ್ರತೆಯ ಧರ್ಮಂಗಳಂ ಪೇಳಿ ಪ್ರಸಂಗದಿಂ ಪೇಳತಕ್ಕ ವಿಧವಾಧರ್ಮಂಗಳಂ ಪೇಳುತ್ತಿದ್ದನು, ಅದೆಂತೆನೆ,—ಮೈನೆರೆಯದವರು, ಗರ್ಭಿಣಿಯರು, ಎಳೆಯಮಕ್ಕಳುಳ್ಳವರೂ ಸಹಗಮನಮಾಡಬಾರದಾಗಿ ನಿಂತವರ್ಗೆ ಧರ್ಮವಪೇಳುವೆನು ಎತ್ತಲಾನು ಪತಿಯೊಡನೆ ಪೋಗದೆ ನಿಂತರೆ ತನ್ನ ಶೀಲವಂ ಪಾಲಿಸಬೇಕು. ಶೀಲಭಂಗವಾದರೆ ಕುಲತ್ರಯಕ್ಕೂ ನರಕ. ಸದಾಚಾರದಲ್ಲಿರಲು ಜನ್ಮಾಂತರದಲ್ಲಿ ತನ್ನ ಪತಿಯೊಡಗೂಡಿ ಸ್ವರ್ಗದಲ್ಲಿ ಸುಖದಿಂದಿಹಳು. ವಿಧವೆಯಾದವಳು ಮುಂಡೆಯುಕೊದಲಂ ಧರಿಸಲಾಗದು. ಸಂತಾನವಿಲ್ಲದ ಪತಿಹೀನೆಯರು ಏಕಭುಕ್ತ, ಮಾಸೋಪವಾಸ, ಚಾಂದ್ರಾಯಣ, ಪರಾಕಕೃಚ್ಛ್ರವೂ, ತಪ್ತಕೃಚ್ಛ್ರವೂ, ಯವೆಯಆಹಾರವೂ, ಫಲಾಹಾರ, ಶಾಕಾಹಾರ, ಉದಕಾಹಾರ, ಮೊದಲಾದ ವ್ರತಂಗಳಿಂದ ಪ್ರಾಣವು ಎಂದುಪೋಪುದೋ ಅಂದುಪರ್ಯಂತರವೂ ಇಂತಿರಬೇಕು. ತಾನು ಮಂಚದಲ್ಲಿ ಮಲಗಲು ಪತಿಗೆ ನರಕವಹುದು. ಅದುಕಾರಣ ಭೂಮಿಯಲ್ಲಿ ಮಲಗಬೇಕು. ಶರೀರಕ್ಕೆ ತಿಗುರವಿಕ್ಕಬಾರದು. ಗಂಧಾಧಿಗಳನ್ನೂ ಧರಿಸಬಾರದು. ತನ್ನ ಗಂಡ, ಆತನಪಿತೃ. ಪಿತಾಮಹರಿಗೆ ನಾಮಗೋತ್ರಗಳನುಚ್ಚರಿಸಿ ತಿಲದರ್ಭೋದಕಗಳಿಂದ ಪ್ರತಿದಿನವೂ ತರ್ಪಣವನ್ನು ಕೊಡಬೇಕು. ವಿಷ್ಣು ಈಶ್ವರಪೂಜೆಗಳಂ ಮಾಡಬೇಕು. ಪೂಜೆಯಂ ಮಾಳ್ಪಾಗ ತನ್ನ ಪತಿಯಂ ಧ್ಯಾನಿಸಿ ಪೂಜಿಸಬೇಕು. ತನ್ನ ಪತಿಗೆ ಇಷ್ಟವಾದ ವಸ್ತುಗಳನ್ನು ತನ್ನ ಪತಿಗೆ ತೃಪ್ತಿಗೋಸ್ಕರ ದಾನವಂ ಕೊಡಬೇಕು. ವೈಶಾಖ ಕಾರ್ತೀಕ ಮಾಘಮಾಸಗಳಲ್ಲಿ ಪ್ರ

ತಸ್ಥೆಯಾಗಿ, ಸ್ನಾನ, ದಾನ, ತೀರ್ಥಯಾತ್ರೆ, ಈಶ್ವರಸ್ಮರಣೆಯಂ ಮಾಡಬೇಕು. ವೈಶಾಖಮಾಸದಲ್ಲಿ ಉದಕುಂಭ, ಕಾರ್ತಿಕಮಾಸದಲ್ಲಿ ನಂದಾದೀಪ, ಮಾಘಮಾಸದಲ್ಲಿ ತಿಲದಾನ, ಹೀಗೆಮಾಡಲು ಪತಿಗೆ ಸ್ವರ್ಗವುಂಟು. ವೈಶಾಖಮಾಸದಲ್ಲಿ ಅರವಟ್ಟಿಗೆ, ಈಶ್ವರಗೆ ವಸುಧಾರೆ, ಬ್ರಾಹ್ಮಣಗೆ ಬೀಸಣಿಗೆ, ಛತ್ರಿ, ಪಾವುಗೆ, ಸೂಕ್ಷ್ಮವಸ್ತ್ರ, ಗಂಧ, ಕರ್ಪೂರಸಹಿತವಾದ ತಾಂಬೂಲ, ಪುಷ್ಪ, ಉದಕಪಾತ್ರೆ, ಪುಷ್ಪಮಂಟಪ, ಪಾನಕ, ರಸಾಯನ, ದ್ರಾಕ್ಷೀಹಣ್ಣು ಮೊದಲಾದ ಫಲಂಗಳನ್ನು ತನ್ನ ಪತಿಪ್ರೀತಿಯಾಗಿ ದಾನವಮಾಡಬೇಕು. ಕಾರ್ತಿಕದಲ್ಲಿ ಯಾವಅನ್ನವಾಗಲಿ ಹವಿಸ್ಸು ಭುಂಜಿಸಬೇಕು. ಬದನೆಕಾಯಿ, ಸೂರಣದಗಡ್ಡೆ, ಅವರೆ, ತೊಗರಿ ಮುಂತಾದ ಶಾಕಗಳನ್ನೂ ಧಾನ್ಯಗಳನ್ನೂ, ಎಣ್ಣೆ, ಜೇನುತುಪ್ಪ, ಕಂಚಿನತಳಿಗೆ, ಮಜ್ಜಿಗೆ, ಇವಂ ವರ್ಜಿಸಬೇಕು. ಪತ್ರಾವಳಿಯಲ್ಲಿ ಊಟವಮಾಡಿ ತಳಿಗೆಯಲ್ಲಿ ತುಪ್ಪವತುಂಬಿ ದಾನವನೀಯ್ಯಬೇಕು. ಭೂಮಿಯಲ್ಲಿ ಮಲಗಿವರೂ ಮಂಚ ಸುಪ್ಪತ್ತಿಗೆ ದಾನವಂ ಭೂದಾನವಂ ಮಾಡಬೇಕು. ಫಲವ್ರತದಲ್ಲಿ ಆ ಫಲವನ್ನೂ, ರಸವ್ರತದಲ್ಲಿ ಆ ರಸವನ್ನೂ, ಧಾನ್ಯವ್ರತದಲ್ಲಿ ಆ ಧಾನ್ಯವನ್ನೂ, ದಾನವಂಕೊಡಬೇಕು. ಈ ಮುಂತಾದ ಸಮಸ್ತವ್ರತ ಉದ್ಯಾಪನೆಗಳುಂಟೋ ಆ ಉದ್ಯಾಪನೆಗಳಲ್ಲಿಯೂ ಗೋದಾನಮಾಡಬೇಕು. ಮಾಘಮಾಸದಲ್ಲಿ ಸ್ನಾನವಂಮಾಡಿ ನಿಯಮವಂತರಾಗಿ ನಾನಾವಿಧವಾದ ಭಕ್ಷ್ಯಭೋಜ್ಯಾದಿಗಳಿಂದ ಬ್ರಾಹ್ಮಣಭೋಜನವಂ ಮಾಡಿಸಿ ಶೀತ ಪರಿಹಾರಾರ್ಥವಾಗಿ, ತೋಪಿನ ಹಚ್ಚಡಂಗಳಂ ಲೇಪುಗಳಂ, ಜಾಯಿಕಾಯಿ ಜಾಪತ್ರೆ, ಕ್ಷೌರಗುಳಿಗೇ, ತಾಂಬೂಲ ಕಂಬಳಿ, ಮಾಳಿಗೆಯಮನೆ, ಮೃದುವಾದ ಪಾದರಕ್ಷೆಗಳಂ, ಸುಗಂಧಪುಷ್ಪಾದಿಗಳಂ ದಾನವನೀಯ್ಯಬೇಕು. ದೇವರ್ಕಳಿಗೆ ಘೃತಸ್ನಾನ, ಕರೀಅಗರಿನ ಧೂಪ, ಜಗಂಜ್ಯೋತಿ ಮಹಾನೈವೇದ್ಯ ಮೊದಲಾದ ಉಪಚಾರಂಗಳಂ. ತನ್ನ ಪತಿರೂಪವಾದ ಸ್ವಾಮಿಸುಪ್ರೀತನಾಗಲಿ ಎಂದು ಮಾಳ್ಪುದು. ವಿಧವೆಯಾದವಳು ಎತ್ತನೇರಬಾರದು. ಕುಪ್ಪಸವ ತೊಡಬಾರದು. ಹೊಸಸೀರೆಯನುಡಬಾರದು. ಪುತ್ರಪತಿಯಾ

ಪವಳು ಅವರ ಅಪ್ಪಣೆಯಿಲ್ಲದೆ ಆವ ಧರ್ಮಂಗಳನ್ನೂ ಮಾಡಬಾರದು. ಇಂತೀ ಧರ್ಮಂಗಳಂ ಮಾಳ್ಪ ಪತಿವ್ರತೆಯು, ತನ್ನ ಪತಿಯೊಡಗೂಡಿ ಸುಖದಲ್ಲಿಹಳು. ಆ ಪತಿವ್ರತೆಯು ಗಂಗೆ ಗೌರಿಯರಿಗೆ ಸಮಾನಳಹಳು. ಎಂದು ಬೃಹಸ್ಪತಿಯು ನುಡಿದು ಎಲೆ ಪತಿವ್ರತೆಯಾದ ಲೋಪಾಮುದ್ರೆಯೆ ನಿಮ್ಮ ದರ್ಶನದಿಂದ ನಮಗೆ ಗಂಗಾ ಸ್ನಾನಕ್ಕಿಂತ ಅಧಿಕ ಪುಣ್ಯವುಂಟಾಯಿತು. ಎಂದು ಸ್ತುತಿಸಿ ನಮಸ್ಕಾರವಂಮಾಡಿ ಅನಂತರದಲ್ಲಿ ಅಗಸ್ತ್ಯನಿಂತೆಂದನು. ಶ್ರುತಿಯಿಂ ಪ್ರಣವವು, ಕ್ಷಮೆಯಿಂ ತಪವು, ಕ್ರಿಯೆಯಿಂ ಫಲವು, ರಂಜಿಪಂತೆ ಈ ಪತಿವ್ರತಾಶಿರೋಮಣಿಯಿಂದೊಪ್ಪುವನೇ ಧನ್ಯನು. ಈ ಪಾತಿವ್ರತ್ಯತೇಜಸ್ಸೂ ಈ ತಪೋಮಹಿಮೆಯು ಈ ಬ್ರಹ್ಮತೇಜಸ್ಸೂವುಳ್ಳ ನಿಮಗೆ ಈ ತ್ರೈಲೋಕ್ಯದೊಳಸಾಧ್ಯವೇನು, ನೀನು ಅರಿಯದುದಿಲ್ಲ, ನಾವುಬಂದ ಪ್ರಯೋಜನವಂ ಪೇಳುವೆವು ಕೇಳು, ಅಷ್ಟೈಶ್ವರ್ಯಸಂಪನ್ನನಾದ ಕಲ್ಪವೃಕ್ಷ ಕಾಮಧೇನು ಚಿಂತಾಮಣಿಗಳಿಗೊಡೆಯನಾದ, ವೃತ್ರಾಸುರನಿಗೆ ವೈರಿಯಾದ ದೇವೇಂದ್ರನೀತನು, ಈತನು ವಾಯುವು. ಈತನು ಯಮನು. ಈತನು ನೈರುತ್ಯನು. ವರುಣನೀತನು. ಈತನು ಕುಬೇರನು. ಈತ ಈಶಾನ್ಯನು ಇವರೆಲ್ಲರೂ ಪ್ರಾರ್ಥಿಸಲ್ಪಟ್ಟ ಇಷ್ಟಾರ್ಥಂಗಳಕೊಡುವ ದಿಕ್ಪಾಲಕರು. ಸಮಸ್ತ ಲೋಕೋಪಕಾರಾರ್ಥವಾಗಿ ಇವರು ನಿನ್ನ ಪ್ರಾರ್ಥನೆಯಂ ಮಾಡುತ್ತಿರುವರಾದಕಾರಣ ಇನ್ನೇನಕೇಳುವರೋ ಎಂದು ಅನುಮಾನಿಸಬ್ಯಾಡ ಆ ಉಪಕಾರವು ನಿಂನ್ನ ವಾಙ್ಮಾತ್ರದಿಂದಲೆ ಸಾಧ್ಯವಾಗುವುದು, ಅದೇನೆಂದರೆ ಕೇಳೈ ಅಗಸ್ತ್ಯಋಷೀಶ್ವರನೆ ವಿಂಧ್ಯನೆಂಬೊಂದು ಪರ್ವತವು ಮೇರುಪರ್ವತದೊಡನೆ ವೈರದಿಂಬಳೆದು ಸೂರ್ಯನಮಾರ್ಗವಂ ಕಟ್ಟಿರುವನಾದಕಾರಣ ಆಕಟ್ಟನ್ನು ನೀವು ಪರಿಹರಿಸಬೇಕು. ನೀವು ಹೊರತಾಗಿ ಮತ್ತೆಯಾರೂ ಈ ಕಾರ್ಯವಂ ಮಾಡಲಾರರು. ಆದಕಾರಣ ಆರುಸ್ವಭಾವದಿಂದ ಕಠಿನರೋ ಸನ್ಮಾರ್ಗವ ನಡ್ಡಗಟ್ಟುವರಾರುಂಟೋ ಸತ್ಪುರುಷರ ಐಶ್ವರ್ಯವ ನೋಡಿ ಅವರಿ ಸರಿಯಾಗಬೇಕೆಂಬರೊ ಅಂಥವರ ಹೆಚ್ಚಿಗೆಯನ್ನು ಪರಿಹರಿಸಬೇಕ

ಲ್ಲಾ ಎಂಬ ಬೃಹಸ್ಪತಿಯ ವಾಕ್ಯವಂ ಕೇಳಿ, ಅಗಸ್ತ್ಯಮುನೀಶ್ವರನು ಎಲೈದೇವರ್ಕಳಿರಾ ನಿಮ್ಮಕಾರ್ಯವಂ ಸಾಧಿಸುವೆನೆಂದು ನುಡಿದು ಮನಸ್ಸಿನಲ್ಲಿ ಆಲೋಚನೆಯಂ ಮಾಡದೇ ಈ ಪ್ರಕಾರವಾಗಿ ಹೇಳಿ ದೇವರ್ಕಳಂ ಬೀಳ್ಕೊಟ್ಟು ಅನಂತರದಲ್ಲಿ ತನ್ನ ಮನದೊಳಾಲೋಚಿಸಿ ಅತ್ಯಂತವಾಗಿ ಚಿಂತಪಟ್ಟನೆಂದು ಸೂತಪುರಾಣೀಕನಿಗೆ ವೇದವ್ಯಾಸ ಋಷೀಶ್ವರರು ನಿರೂಪಿಸಿ ಅಧ್ಯಾಯ ಶ್ರವಣ ಪಠನಫಲವಂ ಹೇಳುತ್ತಿದ್ದರು. ಆರೊಬ್ಬರೀ ಅಧ್ಯಾಯವನ್ನು ಕೇಳುವರೋ ಪಠಿಸುವರೋ ಅವರು ಪಾಪವೆಂಬ ಕುಪ್ಪಸವಂಬಿಟ್ಟು ಸ್ವರ್ಗಸುಖದಲ್ಲಿಹರೆಂದು ನಿರೂಪಿಸಿದರೆಂಬದಾಗಿ ಸೂತರು ಶೌನಕಾದಿ ಋಷಿಗಳಿಗೆ ಹೇಳಿದರೆಂಬಲ್ಲಿಗೆ ಅಧ್ಯಾಯಾರ್ಥ॥ ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರವರಿಂದ ಲೋಕೋಪಕಾರಾರ್ಥವಾಗಿ ಕರ್ಣಾಟಕ ಭಾಷೆಯಿಂದವಿರಚಿತವಾದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ, ಅಗಸ್ತ್ಯದೇವರ್ಕಳಸಂವಾದ ಪತಿವ್ರತಾ ಮಹಿಮೆ ವಿಧವಾಧರ್ಮಂಗಳಂ ಹೇಳ್ದ ನಾಲ್ಕನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ.

ಐದನೇ ಅಧ್ಯಾಯ.

ಅಗಸ್ತ್ಯರು ವಿಂಧ್ಯಪರ್ವತವಂ ತಗ್ಗಿಸಿ ಕೊಲ್ಲಾಪುರಿಗೆಬಂದು ಮಹಾಲಕ್ಷ್ಮಿಯಂ ಸ್ತುತಿಸಿದ್ದು.

ಇಂತೀ ವೃತ್ತಾಂತಮಂಪೇಳ್ದ ವ್ಯಾಸರು ಸೂತಂಗಿಂತೆಂದರು. ಕೇಳೈಸೂತನೆ ಅನಂತರದಲ್ಲಿ ಅಗಸ್ತ್ಯನು ವಿಶ್ವೇಶನಂಧ್ಯಾನಿಸಿ, ಎಲೆಪ್ರಿಯಳೆ ಮುನಿ ಮಾರ್ಗದಲ್ಲಿಹನಮಗೆತ್ತಣಕಾರ್ಯ ಬಂತೊ, ಆವನಾನೊಬ್ಬ ದೇವೇಂದ್ರನ ಅಂಗಳದಲ್ಲಿ ಕಲ್ಪ ವೃಕ್ಷಂಗಳಿಹವೊ ಕೈಯಲ್ಲಿ ವಜ್ರಾಯುಧವೊ ಅಷ್ಟೈಶ್ವರ್ಯವುಂಟಾಗಿಯು ವಿಲಾಸದಿಂದಲಿ ಸಕಲಗಿರಿಗಳಂ ಜಯಿಸಿದವನಾಗಿಯೂ ಇರುವನೊ ಅಂಥಾ ದೇವೇಂದ್ರನಿಗೊಂದು ಪರ್ವತಮಾತ್ರ ನಿಗ್ರಹದಲ್ಲಿ ಸಾಮರ್ಥ್ಯವಿಲ್ಲದೆ ಬ್ರಾಹ್ಮಣಮಾತ್ರನಾದ ನನ್ನ

ನ್ನು ಯಾಕೆ ಪ್ರಾರ್ಥಿಸಿದನೋ ಸಕಲ ಪರ್ವತಂಗಳನೂ ಕ್ಷಣಮಾತ್ರದಲ್ಲಿ ದಹಿಸುವ ಅಗ್ನಿಯ ಸಾಮರ್ಥ್ಯವು ವಿಂಧ್ಯನಲ್ಲಿಕೊಳ್ಳದೆ ಎಲ್ಲಿ ಹೋಯಿತು, ಸಮಸ್ತ ಪ್ರಾಣಿಗಳನ್ನು ದಂಡಿಸುವ ಕಾಲದಂಡವುಳ್ಳ ಯಮನಿಗೆ ಶಕ್ತಿಯಿಲ್ಲವೆ, ತಮ್ಮ ನೋಟದಿಂದಲೆ ಸಕಲ ಭುವನಂಗಳನು ಸಂಹರಿಸುವ ಶಕ್ತಿಯುಳ್ಳ ದ್ವಾದಶಾದಿತ್ಯರೂ ಅಷ್ಟವಸುಗಳೂ, ತುಷಿತರೂ, ನಾಲ್ವತ್ತೊಂಭತ್ತು ಮರುದ್ಗಣಂಗಳೂ, ಐವತ್ತು ವಿಶ್ವೇದೆವತೆಗಳು ಮೊದಲಾದ ದೇವತೆಗಳ ಶಕ್ತಿ ಎಲ್ಲಿಹೋಯಿತು. ಬಲ್ಲವರು ಕಾಶೀಕ್ಷೇತ್ರವಂ ಬಿಡಲಾಗದು, ಅಲ್ಲಿದ್ದವರಿಗೆಡೆಯೆಡೆಗೆ ವಿಘ್ನಗಳು ಬಹದೆಂದು ಹಿರಿಯರು ಹೇಳುವರು. ಈಗ ನಮಗೆ ವಿಶ್ವೇಶ್ವರನು ವಿಮುಖನಾದಕಾರಣ ಅಂಥಾ ವಿಘ್ನಬಂತು, ಬೃಹಸ್ಪತಿಯ ಮಾತಿಗೆ ಬೆರಗಾಗಿ ಮುಂದರಿಯದೆ ಹೋದೆನು. ಬ್ರಾಹ್ಮಣಾಶೀರ್ವಾದದಿಂದ ದೊರೆಕೊಂಡ ಈ ಕಾಶೀಕ್ಷೇತ್ರವನು ಆರು ಬಿಡಲಿಚ್ಛೈಸುವರೋ ಅವರು ಕೈಯ್ಯಲ್ಲಿರ್ದ ತೊಟ್ಟಿಡುವ ತುಪ್ಪದೋಗರದ ತುತ್ತುಬಿಟ್ಟು, ಮೊಳಕೈಯ್ಯ ನೆಕ್ಕಿದಂಥಾವರಹರು. ತಾವರೆಯ ಗೆಣಸಂ ಬಯಸಿ ನೀರೊಳು ಮುಳುಗಿದವಂಗೆ ಒಂದುವೇಳೆ ಸಿಕ್ಕಿ ಮತ್ತೊಂದುವೇಳೆ ಸಿಕ್ಕದಂತೆ ಪುಣ್ಯದಿಂದ ಒಮ್ಮೆ ದೊರಕಿದ ಕಾಶಿಯನು ಜನರು ಜಡರಂತೆ ಬಿಡುವರೇಕೋ, ಆರೊಬ್ಬರು ಪ್ರಯಾಸದಿಂ ಮಾಡಿದ ಜನ್ಮಾಂತರದ ಪುಣ್ಯಂಗಳಿಂದ ದೊರಕೊಂಡ ಕಾಶೀಪಟ್ಟಣವ ನತಿಗಳೆದು ಬಿಡಲಿಚ್ಛೈಸುವರಾರುಂಟೋ ಅವರು ನರಕವಂ ಬಯಸಿದವರು. ಆಪಿನ ಗಂಟಲಿನಲ್ಲಿ ಕಂಬಳಕಾಯಿ ಇಳಿಯದಂತೆ ಅಲ್ಪ ಪುಣ್ಯರಿಗೆ ದೊರಕೊಳ್ಳದು, ಆರು ಈ ಕ್ಷೇತ್ರವಂ ಬಿಡುವರೋ ಅವರು ತಮ್ಮ ಪುಣ್ಯಗಳಂ ಬಿಟ್ಟವರು, ಪಾಪವಂ ಪರಿಹರಿಸುವಂಥಾ ದೇವರ್ಕಳಿಗೂ ದೊರಕೊಳ್ಳದಂಥಾ ಭವಬಂಧನವಂ ಬಿಡಿಸುವಂಥಾ ಶಿವನಿಂದ ಬಿಡುಗಡೆಯಿಲ್ಲದಂಥಾ ಈ ಕ್ಷೇತ್ರವನೂ ಗಂಗೆಯನೂ, ಮುಕ್ತಿಯ ನಿಚ್ಛೈಸಿದಂಥಾವರು ಬಿಡಲಾಗದು, ಸಕಲ ಪುರುಷಾರ್ಥಗಳನೀವ ಈ ಕಾಶಿಯನು ಬಿಟ್ಟು ತಮ್ಮೊಡಲಹೊರೆಯುವ ನಿಮಿತ್ತ ದೇಶಾಂತರಕ್ಕೆ ಪೋಪರು, ಇವರೆಂಥಾ ಪಾಪಿಗಳೋ

ಗಂಗೆಯಿಂದೊಪ್ಪುವಂಥಾ ಪ್ರಳಯದಲ್ಲಿ ಪರಮೇಶ್ವರನ ಶೂಲಾಗ್ರದಿಂ
ಧರಿಸಲ್ಪಡುವ ಈ ಕ್ಷೇತ್ರವಂಬಿಟ್ಟು ಪೋಪರು ಅವರು ಯಂಥಾಜ
ಡರೋ. ಶೋಕವೆಂಬ ಉದಕವುಳ್ಳ ಪಾತಕವೆಂಬ ಸಮುದ್ರದೊಳು
ಬೀಳುತ್ತಾಇಥೇನಲ್ಲಾ, ಕಾಶಿಯ ವಾಸವು ಸನ್ಮಾರ್ಗದಲ್ಲೂ ಯೋಗಿ
ಗಳಿಂದಲೂ ದಾನಗಳಿಂದಲೂ, ಉಗ್ರ ತಪಸ್ಸುಗಳಿಂದಲೂ, ದೊರಕೊ
ಳ್ಳದು ವಿಶ್ವನಾಥನ ಅನುಗ್ರಹದಿಂದ ಬ್ರಾಹ್ಮಣ ವಿಶ್ವಾಸದಲ್ಲಿ ದೊರ
ಕೊಂಬದೂ. ಐಶ್ವರ್ಯಗಳಿಂದ ಧರ್ಮಾತ್ಮನೆಂದು. ತ್ಯಾಗಭೋಗಗ
ಳಿಂದ ಅರ್ಥವಂತನೆಂದು ಅವಿರಕ್ತಿಯಿಂದ ಕಾಮಿಯೆಂದು ತಿಳಿಯ
ಬೇಕು. ಅವಿರಕ್ತರಿಗೆ ಮೋಕ್ಷವೆಲ್ಲಿಹುದು. ವೇದಸ್ಮೃತಿ ಪುರಾಣಂ
ಗಳಂ ಈ ಕಾಶೀಕ್ಷೇತ್ರ ಅಧಿಕವೆಂದು ಪೇಳಲಾಗಿ ಕಾಶಿಯನ್ನು ಬಿಡಲಾ
ಗದು. ಅಸೀಎಂಬ ನದಿಯೆಇಡೆಯು, ವರಣಾಎಂಬ ನದಿಯೇ ಪಿಂಗಳೆ
ಯು, ಆ ಉಭಯಮಧ್ಯವು ಅವಿಮುಕ್ತವೆನಿಸುವ ಸುಷುಮ್ನೆಯಂ
ದು ಜಾಬಾಲಶ್ರುತಿಪೇಳುತ್ತಾ ಇರುವದು. ಈ ಕ್ಷೇತ್ರದಲ್ಲಿದ್ದ ಪ್ರಾಣಿ
ಗಳಿಗೆ ಅಂತ್ಯಕಾಲದಲ್ಲಿ ವಿಶ್ವೇಶ್ವರನು ತಾರಕೋಪದೇಶವಂ ಮಾಡಿ ತನ್ನ
ಲ್ಲಿ ಐಕ್ಯವಂ ಮಾಡಿಕೊಂಬನು. ಅವಿಮುಕ್ತ ಕ್ಷೇತ್ರಕ್ಕೂ ಅವಿಮುಕ್ತ
ಲಿಂಗಕ್ಕೂ ಸಮಾನವಿಲ್ಲ. ಇಂಥಾಕ್ಷೇತ್ರವಂಬಿಟ್ಟು ಮತ್ತೊಂದುಪದವ
ಬಯಸಿದವನಹೆನು. ಇಂತೆಂದು ಅಗಸ್ತ್ಯನು ಕ್ಷೇತ್ರವಂ ಕೊಂಡಾಡಿ
ಕಾಲಭೈರವಂಗೆರಗಿ ಬಿನ್ನೈಸಿದನು. ಎಲೈ ಕಾಲಭೈರವನೆ, ಕಾಶಿಯಲ್ಲಿ ಇ
ದ್ದವರ ಮುಕ್ತಿಗೆ ನೀನು ಹೊಣೆಗಾರನು, ನಿನಗೆ ನಾನು ಅಷ್ಟಮಿ ಆದಿ
ವಾರ ಮಂಗಳವಾರಗಳಲ್ಲಿ ಪುಷ್ಪಫಲಾದಿಗಳಿಂದ ಪೂಜಿಸಲಿಲ್ಲವೆ, ಯಾ
ತಕ್ಕೆ ಪರಾಕುಮಾಡಿದಿರಿ, ಕಾಶೀವಾಸಿಗಳ ಪುಣ್ಯಪಾಪಂಗಳ ವಿಚಾ
ರಿಸಿ ದುಷ್ಟನಿಗ್ರಹವಂಮಾಳ್ಪ ಸಂಭ್ರಮವಿಭ್ರಮರೆಂಬ ಭೃತ್ಯರುಳ್ಳ
ಶುಭ್ರವರ್ಣನಾದ ಪೂರ್ಣಭದ್ರ ಕುಮಾರನಾದ ಎಲೈ ದಂಡಪಾಣಿಯೆ
ತಪಸ್ಸಿನ ಕಷ್ಟವಂ ನೀನು ಬಲ್ಲೆ, ಇಲ್ಲಿದ್ದವರ್ಗೆ ಅನ್ನವನಿಕ್ಕಿ
ರಕ್ಷಿಸಿ, ಅಂತ್ಯದಲ್ಲಿ ಶಿವಸಾರೂಪ್ಯವನುಂ ಕೊಡಿಸುವಂಥಾ ನೀನು ನಿರಪ
ರಾಧಿಯಾದ ನನ್ನನ್ನು ಯಾತಕ್ಕೆ ಹೊರಡಿಸುತ್ತಾಇದ್ದೀಯೆ. ಎಲೈ

ಢುಂಢಿರಾಜನ ಅನಾಥನಂತೆ ಮೊರೆಯಿಡುವನನಗೆ, ದುರಾಚಾರಿಗೆ ವಿಘ್ನಂಗಳನಿತ್ತಂತೆ ಎನಗೆ ಎತಕ್ಕೆ ವಿಘ್ನವು ಮಾಡಿದೆ. ಎಲೈ ಚಿಂತಾಮಣಿ ವಿನಾಯಕನೆ, ಆಶಾವಿನಾಯಕನೆ, ಅಘೋರವಿನಾಯಕನೆ, ಸಿದ್ಧಿವಿನಾಯಕನೆ, ತಾನು ಪರಾಪವಾದವನು ಅಪಕಾರವನೂ ಕಳವನೂ, ಪರಸ್ತ್ರೀಗಮನವನೂ ಮಾಡಿದವನಲ್ಲ, ತ್ರಿಕಾಲದಲ್ಲೂ ಗಂಗಾಸ್ನಾನವಂಮಾಡಿ ವಿಶ್ವಪತಿಯಂ ನೋಡಿ ಸಕಲ ಯಾತ್ರೆಯಂ ಮಾಡುವ ನನಗೆ ವಿಘ್ನವೆತ್ತಣದು. ಎಲೈ ವಿಶಾಲಾಕ್ಷಿಯೆ ಭವಾನಿ, ಮಂಗಳಗೌರಿ, ಜ್ಯೇಷ್ಠಗೌರಿ, ಶಿವಗೌರಿ, ತ್ರಿಪುರಸುಂದರಿ, ವಿಶ್ವಗೌರಿ, ವಿಧಿಗೌರಿ, ವಿಶ್ವಭುಜಾದೇವಿ, ಚಿತ್ರಘಂಟೆ ಮೊದಲಾದ ದೇವಿಯರಾ ನಾನು ಪರೋಪಕಾರಕ್ಕಾಗಿ ದೇವರ್ಕಳು ಪ್ರಾರ್ಥಿಸಲೂ ಪೋಪೆನಲ್ಲದೆ ಸುಮ್ಮನೆ ಪೋಗುವನಲ್ಲ, ಅದಕ್ಕೆ ನೀವು ಸಾಕ್ಷಿ, ಪರೋಪಕಾರವು ಮಾಡಬೇಕು ಅದೇತಕ್ಕೆನಲು, ದಧೀಚಿಋಷಿಯು ತನ್ನ ಬೆನ್ನಿನ ಎಲುಬಂ ಕೊಡಲಿಲ್ಲವೆ, ಬಲಿಚಕ್ರವರ್ತಿಯು ತ್ರೈಲೋಕ್ಯವಂ ಕೊಡಬೇಕೆಂದು ನಿಶ್ಚೈಸಿ ಕೊಡಲಿಲ್ಲವೆ, ಮಧುಕೈಟಭರು ತಮ್ಮ ಶಿರಸ್ಸುಗಳಂ ವಿಷ್ಣುವಿಗೆ ಕೊಡಲಿಲ್ಲವೇ ಗರುಡನು ನಾರಾಯಣಗೆ ವಾಹನವಾಗಲಿಲ್ಲವೆ, ಅದುಕಾರಣ ಪರೋಪಕಾರವನೆ ಮಾಡಬೇಕೆಂದು, ಅಲ್ಲಿ ಸ್ತ್ರೀಬಾಲವೃದ್ಧರಾದ ಮುನಿಗಳಿಗೆ ತೃಣವೃಕ್ಷ ಮೊದಲಾದ ಸಕಲಗೃಹೋಳ ಪಟ್ಟಣವಂ ಬಲಬಂದು ಸಂಚರಿಪ ನಮಗಿಂತಲು ಇಲ್ಲಿಯಚೇತನಗಳೇ ಲೇಸೆಂದು ಗಂಗೆಯಲ್ಲಿ ಮಿಂದು ವಿಶ್ವನಾಥನ ದರ್ಶನವಂಮಾಡಿ ಇದಿರ್ಸೆಯಲ್ಲಿರುವ ಉಪ್ಪರಿಗೆಯ ಸಾಲ್ಗಳನೋಡುತ್ತಾ, ಎಲೆ ಕಣ್ಣುಗಳಿರಾ ಕಾಶೀಪಟ್ಟಣವಂ ಮತ್ತುಮತ್ತೂ ನೋಡಿ, ಯಲೈ ಭೂತಗಣಂಗಳಿರಾ, ಆಗಸ್ತ್ಯನು ಉಚ್ಚನಾಗಿ ಕಾಶೀಪಟ್ಟಣವಂ ಬಿಟ್ಟು ಪೋಗುತಿರುವನು ಎಂದುನಿಮ್ಮೊಳು ನೀವು ಕೈಗಳಂಹೊಯ್ದು ಪರಿಹಾಸವಂ ಮಾಡಿ ನಗಬೇಡಿ ಇಂತೆಂದು ಸತಿಪತಿಗಳಾದ ಇರ್ವರೂಕ್ರೌಂಚಮಿಥುನದಂತೆ ಒರಲುತ್ತಲು, ಎಲೆ ಕಾಶೀಪಟ್ಟಣವೆ ಯಲ್ಲಿಹೋದೆ, ಇನ್ನೊಂದುವೇಳೆ ಯಮಗೆ ನೋಗದೋರೆಂಬು ವಿರಹಿಯಪ್ಪೋಲು ಪ್ರಳಾಪಿಸಿ ಮೂರ್ಛಿತನಾಗಿ ಎದ್ದು

ಶಿವಶಿವಾ ಎಂದು ದೇವರ್ಕಳು ದಯವಿಲ್ಲದವರು ಸಕಲರಿಗೂ ಸುಖಕರನಾದ ಮನ್ಮಥನನ್ನು ಶಿವನಮುಂದಿಟ್ಟು ಉರಹಿದವರಲ್ಲವೆ, ಹೇಳುವದೇನು ಎಂದು ನುಡಿದು, ಎರಡುಮೂರು ಹೆಜ್ಜೆಗಳಿಕ್ಕೆ ಭೂಮಿ ನಡುಗಿ ಬೆವರಿಕ್ಕಿ ಈ ಮುನಿಯು ಇದಿರ್ಗೊಳ್ಳದಿರೆ ತನಗೆ ಅಶುಭವೆಂಬವೊಲು ಭೂಮಿಯು ತಗ್ಗಿತು. ಈ ವರಿಯಿಂದ ಅಗಸ್ತ್ಯನು ತಪಸ್ಸೆಂಬ ವಾಹನವನೇರಿ ಸಿವಿಷಾರ್ಧದಿಂ ಬಂದು ಅತ್ಯುನ್ನತವಾಗಿ ಬೆಳದಿದ್ದ ವಿಂಧ್ಯನಂ ಕಂಡನು. ಇಲ್ವಲವಾತಾಪಿಗಳಿಗೆ ವೈರಿಯಾದಂಥ ತಪ್ಪೋಗ್ನಿ ಕ್ರೋಧಾಗ್ನಿ, ಮತ್ತು ಕಾಶಿಯಂ ಬಿಟ್ಟ ಸಂತಾಪಾಗ್ನಿ ಈ ಮೂರು ಅಗ್ನಿಗಳಿಂ ಜ್ವಲಿಸುವಂಥ ಪತ್ನೀಸಮೇತನಾದ ಮುಂದಿರ್ದ ಆಗಸ್ತ್ಯಮುನಿಯಂ ಕಂಡು ವಿಂಧ್ಯನು ಭೂಮಿಯಂ ಪುಗುತಿದ್ದನೇ ಕ್ಕೈ ಎಂಬಹಾಗೆ ಅತ್ಯಂತ ಗುಡ್ಡನಾಗಿ ಯಲೈ ಅಗಸ್ತ್ಯಋಷೀಶ್ವರನೆ ನಾನು ಮಾಡತಕ್ಕ ಊಳಿಗವೇನು ನಿರೂಪಿಸಿ ರಕ್ಷಿಸಬೇಕು ಎನಲು, ಅಗಸ್ತ್ಯನಿಂತೆಂದನು ಎಲೈ ವಿಂಧ್ಯನೆ ನೀನು ಸತ್ಪುರುಷನು, ತನ್ನನು ಚೆನ್ನಾಗಿಬಲ್ಲೆಯಾ ನಾನು ರುಗಿ ಬರುವ ಪರ್ಯಂತರವೂ ನೀನು ಹೀಗೆಯೇ ಇರುಎಂದು ನುಡಿದು, ತೆಂಕಣದಿಕ್ಕನು ದಿಕ್ಕುವುಳ್ಳದ್ದಾಗಿ ಮಾಡುತ್ತಾ ಕಾಲುನಡಿಗೆಯಲ್ಲಿ ಪತ್ನೀಸಮೇತನಾಗಿ ಕದಲಿದನು. ತದನಂತರ ನಡುಗುವಂಥಾವಿಂಧ್ಯನು ತಲೆಯನೆತ್ತುತ್ತಿ ಹಲವುಭಾರಿ ನೊಂಡುತ್ತಲು ಇಂದು ಮರುಹುಟ್ಟ ಹುಟ್ಟದೆನು ನಾನು ಧನ್ಯನಾದೆನೆಂದು ತಿಳದನು. ಆ ವೇಳೆಯಲ್ಲಿ ಅಂತರಿಕ್ಷಮಾರ್ಗದಲ್ಲಿ ಅರುಣನು ಕುದುರೆಗಳಪ್ಪೊಡೆಯೆ ಜಗತ್ತಿಗೆ ಸೂರ್ಯಸಂಚಾರದಿಂದ ಅತ್ಯಂತ ಹರ್ಷವಾಯಿತು. ಅಗಸ್ತ್ಯನು ಇಂದು ಬಂದಾನು ನಾಳೆಬಂದಾನು ಎಂಬ ಚಿಂತೆಯೆಂಬ ಭಾವದಿಂದ ದುರ್ಜನರ ಮನೋರಥದಂತೆ ಅಭಿವೃದ್ಧಿಯಾಗಲಿಲ್ಲ. ಲೋಕದಲ್ಲಿ ಆರು ಕರುಬುವರೋ, ಅವರ ಮನೋರಥವು ವಿಧವೆಯ ಸ್ತನದಂತೆ, ಅಲ್ಪನದಿಯಂತೆ ದಿನದಿನಕ್ಕೆ ಕ್ಷಯವನ್ನೈದುವದು. ಆರೊಬ್ಬರು ಪರರ ಶಕ್ತಿಯನರಿಯದೆ ತಮ್ಮ ಶಕ್ತಿಯ ತೋರಬೇಕೆಂಬರೋ ಅವರು ಈ ವಿಂಧ್ಯನಂತೆ ನಗೆಗೇಡಿಯಾಗುವರು ಎಂದು ಸೂತಂಗರುಹಿ ವ್ಯಾಸಮುನಿಯಿಂತೆಂದನು. ಎಲೈ ಸೂತನೆ

ಕೇಳು ತಂಕೆಲಾಗಿಬಂದ ಅಗಸ್ತ್ಯನು ವೃದ್ಧಗಂಗೆಯಾದ ಗೋದಾವರಿಯಲ್ಲಿ ಸ್ನಾನವಂ ಮಾಡಿ ಈ ಕಾಶಿಯಂಬಿಟ್ಟ ಸಂತಾಪವಂ ಬಿಡಲಿಲ್ಲ. ಬಡಗನಿಂದ ಬಂದ ಘಾಳಿಯನಾಲಿಂಗಿಸಿ ಕಾಶಿಯು ಚನ್ನಾಗಿದ್ಧೀತೆ ಎಂದು ಕೇಳುವನು. ನಿಲ್ಲುತ್ತಲೂ, ಮೊರೆಯಿಡುತ್ತಲೂ ಪಾಡುತ್ತಲೂ, ಎಡವುತ್ತಲೂ, ಕುಳ್ಳಿರುತಲೂ, ನಾನಾಕಥೆಯಲ್ಲಿಯೂ ತಿರುಗುತ್ತಾ ತಪ್ರೋಧನನಾದ ಅಗಸ್ತ್ಯನು ಶರತ್ಕಾಲದ ಚಂದ್ರನ ನೂರುಮಡಿ ಕಾಂತಿಯುಳ್ಳ ಕೋಲಾಸುರನ ಸಂಹರಿಸಿದ ಕೊಲ್ಲಾಪುರದ ಲಕ್ಷ್ಮಿಯಂ ಕಂಡು ನಮಸ್ಕಾರವಂಮಾಡಿ ಸ್ತೋತ್ರವಂ ಮಾಡಬುಪಕ್ರಮಿಸಿದನು. ಎಲೆ ಲೋಕಮಾತೆ ಕಮಲಾಕ್ಷೆ ವಿಷ್ಣುವಿನ ಹೃದಯದಲ್ಲಿಯು ಅಂಥಾಸಮುದ್ರರಾಜನ ಮಗಳಾದಂಥಾ ಕಮಲಗರ್ಭದಂತೆ ಕಾಂತಿವುಳ್ಳಂಥಾ, ಲಕ್ಷ್ಮೀದೇವಿಯೆ ನಮಸ್ಕಾರ, ವಿಷ್ಣುವಿನಲ್ಲಿ ಲಕ್ಷ್ಮಿದೇವಿಯಾಗಿಯೂ, ಚಂದ್ರನಲ್ಲಿ ಕಾಂತಿಯಾಗಿಯೂ, ಸೂರ್‍ಯನಲ್ಲಿ ಪ್ರಭೆಯಾಗಿಯೂ, ಇರುವಂಥಾ ನಿನಗೆ ನಮಸ್ಕಾರ, ಆದಿಶಕ್ತಿಯೇ ನೀನು, ನಿನ್ನಿಂದ ಬ್ರಹ್ಮನು ಸೃಷ್ಟಿಗೆಕರ್ತನಾದನು, ವಿಷ್ಣುವು ನಿನ್ನಿಂದಾ ಪಾಲಕನಾದನು, ನೀ ಬಿಟ್ಟ ಜಗವುಂ ರುದ್ರನು ಸಂಹರಿಸುವನು, ಉತ್ಪತ್ತಿ ಸ್ಥಿತಿಸಂಹಾರಗಳಿಗೆ ಕಾರಣಳೂ ನೀನು, ನಿನ್ನಿಂದ ವಿಷ್ಣು ಅಧಿಕಾರಿಯಾದನು, ನಿನ್ನ ಕಟಾಕ್ಷವುಳ್ಳವನೆ ಶೂರನು, ವಿವೇಕಿಯು ಗುಣವಂತನು, ಧನುವುಳ್ಳವನು ಮಾನ್ಯನು ಕುಲರೂಪಕಲಾವಂತನು ಶುಚಿಯಾದವನು. ಆನೆ, ಕುದುರೆ, ಪುರುಷರು ಸ್ತ್ರೀಯರು, ಮಕ್ಕಳು, ಮನೆ, ಅನ್ನ, ರತ್ನ, ಪಶು ಪಕ್ಷಿ, ಭೂಮಿ, ತೃಣ ಮೊದಲಾದ ವಸ್ತುಗಳಲ್ಲಿ ನೀನಿರಲಾಗಿಯೆ ರಮ್ಯವಾಗಿಹುದು. ನೀನು ಇಲ್ಲದೆ ಇದ್ದರೆ ಅಶುಚಿ ಅಲಕ್ಷ್ಮಿಯು, ಶ್ರೀವಿಷ್ಣು ವಿಷ್ಣುವಿನಪತ್ನಿ, ಕಮಲೆ ಕಮಲಾಲಯೆ, ಪದ್ಮೆ ರಮೆ, ಅಮೃತಕುಂಭಧಾರಿಣಿ, ಎಂದು ನಿತ್ಯವೂ ಪೂಜಿಸುವರ್ಗೆ ದುಃಖವೆತ್ತಣದೆಂದು ಸ್ತೋತ್ರವಂ ಮಾಡಿ ಸ್ತ್ರೀಪುರುಷರೀರ್ವರು ಸಾಷ್ಟಾಂಗ ನಮಸ್ಕಾರವಂಮಾಡಲು ಏಳೈಅಗಸ್ತ್ಯ ಏಳು ಲೋಪಾಮುದ್ರೆ ನೀವು ಮಾಡಿದ ನಮಸ್ಕಾರದಿಂದೆನಗೆ ಸಂತೋಷವಾಯಿತು ನಿಮಗೆ ಬೇಕಾದ ವರಗಳಂ ಬೇಡಿಕೊಳ್ಳಿರಿ

ಬಾ ಲೋಪಾಮುದ್ರೆ ಕೇಳ್ಳಿರು, ನಿನ್ನ ಶುಭಲಕ್ಷಣವುಳ್ಳ ಶರೀರದಿಂ ದೈತ್ಯರ ಬಾಣದಿಂನೊಂದ ಯನ್ನ ಘಾಯದನೋವಂ ಪರಿಹರಿಸಿಕೊಂಬೆ ನೆಂದು ನುಡಿವುತ್ತ ತೆಕ್ಕೈಸಿ ದಿವ್ಯಾಭರಣಗಳಿಂದಲಂಕರಿಸಿ ಅಗಸ್ತ್ಯಂಗಿಂತೆಂದಳು. ಕೇಳ್ಳೆ ಅಗಸ್ತ್ಯಮುನಿಯೆ, ನಿನ್ನ ಮನಸ್ತಾಪದ ಕಾರಣವಂ ಬಲ್ಲೆನು, ಪೂರ್ವದಲ್ಲಿ ಮಂದರಪರ್ವತಕ್ಕೆ ಪೋದ ಪರಮೇಶ್ವರಗೆ ಕಾಶೀವಿರಹದಿಂದ ನಿನಗಾದ ಅವಸ್ಥೆ ತೋರಲಾಗಿ ಕಾಶೀವೃತ್ತಾಂತವಂ ತಿಳಿಯಲು ಬ್ರಹ್ಮ ವಿಷ್ಣುಗಣಂಗಳನೂ ಯೋಗಿನಿಯರನೂ ಗಣಪತಿಯನೂ ಕಳುಹಲವರು ಕಾಶೀಮಾಹಾತ್ಮ್ಯಯಂ ವಿಚಾರಿಸಿ ಅಲ್ಲಿಯೆ ಇದ್ದರಾದಕಾರಣ ಕಾಶಿಗೆ ಸರಿಯಾದ ಕ್ಷೇತ್ರವಾವುದೆಂದು ಲಕ್ಷ್ಮೀದೇವಿ ನಿರೂಪಿಸಲು, ಅಗಸ್ತ್ಯನಿಂತೆಂದನು, ಎಲೆ ಮಹಾಲಕ್ಷ್ಮಿ ನನಗೆ ಕೊಡಬೇಕಾದರೆ ಕಾಶೀವಾಸವೆ ಕೊಡುಯೆಂದು ಪ್ರಾರ್ಥಿಸಿ ಈ ಸ್ತೋತ್ರವಂ ಭಕ್ತಿಯಿಂದಾರು ಪಠಿಸುವರೋ ಅವರಿಗೆ ದರಿದ್ರಬೇಡ, ಸಂತಾಪಬೇಡ, ಸಂತಾನ ಸೌಭಾಗ್ಯವುಂಟಾಗಲಿ, ವಿಜಯವಾಗಲಿ ಎಂದು ವಿಜ್ಞೈಸಲು, ಲಕ್ಷ್ಮೀದೇವಿಯಿಂತೆಂದಳು, ಆರು ಈ ಸ್ತೋತ್ರವಂ ಪಠಿಸುವರೋ ಅವರ್ಗೆ ನಾನು ಪ್ರಸನ್ನಳಹೆನೂ, ಇದನು ಯಂತ್ರದಲ್ಲಿ ಬರೆದು ಕೊರಳಲ್ಲಿ ಧರಿಸಲು ಸರ್ವರಕ್ಷೆ, ಇನ್ನು ಮುಂದೆಬಹ ಒಂಭತ್ತನೆ ದ್ವಾಪರದಲ್ಲಿ ನೀನು ವೇದವ್ಯಾಸನಾಗಿ ವೇದಪುರಾಣಂಗಳಂ ವಿಂಗಡಿಸಿ ಕಾಶಿಯಲ್ಲಿ ಮುಕ್ತಿಯಾದೀತು ನಿನಗೊಂದು ಹಿತವಾದ ವಚನವಂ ಪೇಳುವೆನು ಕೇಳು, ಇಲ್ಲಿಂದ ಮುಂದೆ ನಡೆ ಕುಮಾರಸ್ವಾಮಿ ಇದ್ದಾನು, ಆತನು ಶಿವನಿಂದ ನಿರೂಪಿಸಲ್ಪಟ್ಟ ಕಾಶೀಮಹಾತ್ಮ್ಯವನ್ನು ನಿನಗೆ ಸಂತೋಷವಾಗುವಂತೆ ಪೇಳುವನುಯೆಂದು ಮಹಾಲಕ್ಷ್ಮಿನಿರೂಪಿಸಲು, ನಮಸ್ಕಾರವಂಮಾಡಿ ಕಳುಹಿಸಿಕೊಂಡು ಕುಮಾರಸ್ವಾಮಿಯಿದ್ದ ಬಳಿಗೆ ಕದಲಿದನೆಂದು ವ್ಯಾಸರು ತನಗರುಹಿದರೆಂಬದಾಗಿ ಸೂತಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿಋಷಿಗಳಿಗೆ ನಿರೂಪಿಸಿದನೆಂಬಲ್ಲಿಗೆ ಅಧ್ಯಾಯಾರ್ಥಂ.

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗೀ ಕರ್ನಾಟಕಭಾಷೆಯಿಂದ ವಿರಚಿಸಿದ ಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಅಗಸ್ತ್ಯರು ಕಾಶಿಯಿಂದ ಹೊರಟು ವಿಂಧ್ಯಪರ್ವತವಂ ತಗ್ಗಿಸಿ ಕೊಲ್ಲಾಪುರೀ ಮಹಾಲಕ್ಷ್ಮಿಯಂ ಕಂಡು ಸ್ತುತಿಸಿದರೆಂಬ ಐದನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ.

ಆರನೇ ಅಧ್ಯಾಯಂ.

ತೀರ್ಥಕ್ಷೇತ್ರಪ್ರಶಂಸೆ.

ಶ್ರೀ ವಿಶ್ವೇಶ್ವರಾಯನಮಃ ॥ ಅನಂತರದಲ್ಲಿ ವೇದವ್ಯಾಸರು ಸೂತಪೌರಾಣಿಕಂಗೆ ಮತ್ತಿಂತೆಂದರು. ಎಲೈ ಸೂತನೆ ಅಗಸ್ತ್ಯಋಷೀಶ್ವರನು ಮಹಾಲಕ್ಷ್ಮಿಯ ಸಂದರ್ಶನವಂ ಮಾಡಿ ಅಲ್ಲಿರ್ದ ವಹ್ನಿತೀರ್ಥದಲ್ಲಿ ಸ್ನಾನವಂಮಾಡಿ ಆನಂದಭರಿತನಾದನು, ಹಾಗೆಯಹುದಲ್ಲಾ ಪರೋಪಕಾರವಂ ಮಾಳ್ಪವರ್ಗೆ ವಿಪತ್ತುಗಳಿಲ್ಲ, ಬಂದರೂ ನಿಲ್ಲವು ಐಶ್ವರ್ಯಗಳಹವು ಪರೋಪಕಾರದಿಂದಬಹು ಪುಣ್ಯವು ತೀರ್ಥಸ್ನಾನ ದಾನ ತಪಸ್ಸುಗಳಿಂದ ದೊರಕಲರಿಯವು, ಪರೋಪಕಾರಧರ್ಮವನ್ನು ನಾನಾಧರ್ಮಗಳನೂ ಬ್ರಹ್ಮನು ತೂಗಿ ನೋಡಲು, ಪರೋಪಕಾರವೇ ಅಧಿಕವಾಯಿತು, ಸಕಲ ಶಾಸ್ತ್ರಗಳಲ್ಲಿಯೂ ನಿರ್ಣಯವಾದ ಅರ್ಥವೇನೆ ಪರೋಪಕಾರದಿಂದಾದ ಪುಣ್ಯಕ್ಕಿಂತಲೂ ಅಧಿಕವಾದ ಪುಣ್ಯವಿಲ್ಲ. ಅಪಕಾರಕ್ಕಿಂತಲೂ ವಿಶೇಷವಾದ ಪಾಪವಿಲ್ಲ. ಉಪಕಾರಿಯಾದ ಅಗಸ್ತ್ಯನು ಕಾಶಿಯನ್ನು ಬಿಟ್ಟುಬಂದಂಥಾ ದುಃಖವು ಮಹಾಲಕ್ಷ್ಮಿಯ ದರ್ಶನ

ದಿಂದಾ ಪರಿಹಾರವಾಯಿತು. ಐಶ್ವರ್ಯವತ್ಯಂತ ಚಂಚಲವು ಜೀವನವೂ ಸ್ಥಿರವಲ್ಲ ಅದುಕಾರಣ ಬಲ್ಲವರು ಪರೋಪಕಾರವನೆ ಮಾಡಬೇಕೆಂದು ಹೇಳ್ದ ವ್ಯಾಸರು ಮತ್ತಿಂತೆಂದರು, ಅನಂತರದಲ್ಲಿ ಆ ಮುನೀಶ್ವರನು ನಿತ್ಯಸನ್ನಿಧಾನವಾಗಿ ತ್ರಿಪುರಾಂತಕನಿದ್ದ ಶ್ರೀಶೈಲವಂ ಕಂಡು ತನ್ನಸತಿಗಿಂತೆಂದನು, ಯಲೆ ಕಾಂತೆಯೆ ಕೇಳು ಇಲ್ಲಿ ದೂರದರ್ಶನಮಾತ್ರದಿಂದಲೆ ಮುಕ್ತಿಯನೀವ ಶ್ರೀಶೈಲಶಿಖರವಂ ನೋಡು ಈ ಪರ್ವತವು ಎಂಭತ್ತುನಾಲ್ಕು ಯೋಜನ ವಿಸ್ತಾರವು ಇದು ಲಿಂಗಸ್ವರೂಪವಾದಕಾರಣ ಪ್ರದಕ್ಷಿಣವಂ ಮಾಡಬೇಕೆಂದು ತನ್ನ ಪತಿಯು ನುಡಿಯಲು ಆ ತಂಗೆ ಲೋಪಾಮುದ್ರೆಯಿಂತೆಂದಳು, ಯಲೈ ಪ್ರಿಯನೆ ಪತಿವ್ರತೆಗೆ ಪತಿಯನುಜ್ಞೆ ಹೊರತಾಗಿ ಮಾತನಾಡಲಾಗದು, ನಿಮ್ಮ ಅನುಜ್ಞೆಯಾಗಲೂ ಬಿನ್ನವಿಪೆನು ಎನಲಾಋಷಿ ಯಿಂತೆಂದನು, ಎಲೈ ಪ್ರಿಯಳೆ ಕೇಳು ನಿನ್ನಂಥಾವರಾಡಿದ ಮಾತು ಪತಿಗೆ ಅಸಹ್ಯವಲ್ಲವಷ್ಟೆ ನೀನು ಕೇಳಬೇಕಾದುದನ್ನು ಶಂಕೆಯಿಲ್ಲದೆ ಕೇಳೆನ್ನಲು, ಲೋಪಾಮುದ್ರೆ ತನ್ನ ಪತಿಗೆ ನಮಸ್ಕರಿಸಿ, ಲೋಕೋಪಕಾರವಾಗಿಯೂ ತನ್ನ ಸಂದೇಹನಿವಾರಣಕ್ಕಾಗಿಯೂ ಬಿನ್ನೈಸಿದಳು, ಶ್ರೀಶೈಲಶಿಖರದ ದರ್ಶನದಿಂ ಮುಕ್ತಿಯಹುದೆಂಬುದು ದಿಟವಾದರೆ ಕಾಶಿಯನ್ನೇಕೆ ಬಯಸುತ್ತಿದ್ದೀರೆಂದು ಸತಿ ನುಡಿಯೆ ಮುನಿಯಿಂತೆಂದನು, ತತ್ವವಂ ಬಲ್ಲವರಿಂದ ಪೇಳಲ್ಪಟ್ಟ ಅರ್ಥವನೆ ನೀನೂ ನನ್ನ ಕೇಳದೆ ಮುಕ್ತಿಸ್ಥಾನಂಗಳು ಬಹಳವುಂಟು, ಅದರ ನಿರ್ಣಯವಂ ಪರಾಕಿಲ್ಲದೆ ಕೇಳು, ಪ್ರಯಾಗ, ಗಯೆ, ಕಾಮಿಕ, ನೈಮಿಷ, ಕುರುಕ್ಷೇತ್ರ, ಗಂಗಾದ್ವಾರ, ಅವಂತೀ, ಅಯೋಧ್ಯಾ, ಮಧುರೆ, ದ್ವಾರಕಾಪುರೀ, ಅಮರಕಂಟಕ, ಸರಸ್ವತೀ, ಸಮುದ್ರಸಂಗಮ, ಗಂಗಾಸಾಗರಸಂಗಮ. ಕಂಚೀ, ತಿರುಮಕೂಡಲು, ಸಪ್ತಗೋತಾವರೀ, ಕಾಲಂಜರ, ಪ್ರಭಾಸ, ಬದರಿಕಾಶ್ರಮ, ಮಹಾಲಯ, ಓಂಕಾರಕ್ಷೇತ್ರ, ಪುರುಷೋತ್ತಮ, ಗೋಕರ್ಣ, ಭೃಗು, ಕೇಷ್ಟ ಭೃಗುತುಂಡ, ಪುಷ್ಕರ, ಶ್ರೀಪರ್ವತ, ಮೊದಲಾದವು ಭೂಮಿಯಲ್ಲಿದ್ದ ಪುಣ್ಯಸ್ಥಾನ ಪುಣ್ಯತೀರ್ಥಂಗಳೂ ಜ್ಞಾನಿಗಳಾದವರ್ಗೆ ತಮ್ಮ

ಶರೀರಗಳಲ್ಲಿ ತೀರ್ಥಗಳುಂಟು.ಪೇಳುವೆನು ಕೇಳು ಸತ್ಯ, ಕ್ಷಮೆ, ಇಂದ್ರಿಯನಿಗ್ರಹ, ದಯೆ, ಮೃದುತ್ವ, ದಾನ, ದಮೆ, ಸಂತೋಷ,ಬ್ರಹ್ಮಚರ್ಯ, ಪ್ರಿಯವಾಕ್ಯ, ಜ್ಞಾನ, ಧೈರ್ಯ, ಪುಣ್ಯ, ಮನಶುದ್ಧಿ,ಇವಾರಿಗುಂಟೋ ಅವನೀಗಲೆ ನಿತ್ಯವ್ರಸ್ನಾನವಂಮಾಡಿದವನು. ಅವನಿಗಿಂತಾವಿಶೇಷತೀರ್ಥವಿಲ್ಲ ಅವರೇ ಚರತೀರ್ಥಗಳು ಲೋಭಿ, ಚಾಡಿಕಾರ, ದಯವಿಲ್ಲದವನು, ಬೂಟಕನು, ಅತಿಕಾಮಿ, ಇವರು ಮುಂತಾದ ಪಾಪಿಗಳು ಆವತೀರ್ಥದಲ್ಲಿಸ್ನಾನವಂಮಾಡಿದರೂ ಶುಚಿಯಾಗರೂ ಅಶುಚಿಗಳೇಸರಿ. ಶರೀರವ ತೊಳೆಯೆ ಶುಚಿಯಲ್ಲ ಮನಸ್ಸಿನಲ್ಲಿ ಶುಚಿಯಾದವನೆ ಪವಿತ್ರನು. ಅದೆಂತೆನೆ ಜಲದಲ್ಲಿ ಇರುವ ಪ್ರಾಣಿಗಳು ಅಲ್ಲಿಯೇ ಹುಟ್ಟಿ ಅಲ್ಲಿಯೆ ಅಳಿದರೂ ಸ್ವರ್ಗವನೈದುವದಿಲ್ಲ ವಿಷಯಾದಿಗಳಲ್ಲಿ ಅತ್ಯಂತ ಸಂಸರ್ಗವಂ ಮಾಡೆ ಅದು ಮನೋಮಲವೆನಿಸುವದು. ಅಂಥಾ ನಾನಾ ವಿಷಯಂಗಳಲ್ಲಿ ವಿರಕ್ತಿಯುಳ್ಳವರ್ಗೆ ಮನಸ್ಸು ನಿರ್ಮಲವಹುದು. ಕುಂಭದಲ್ಲಿ ಸುರೆಯತುಂಬಿ ಮೇಲೆ ಗಂಗೋದಕದಿಂ ತೊಳೆಯಲು, ಆ ಕುಂಭದಂತೆ ಪವಿತ್ರವಲ್ಲ. ಆ ಮರ್ಯಾದೆಯಲ್ಲಿ ಅಂತಃಕರಣ ಶುದ್ಧಿ ಯಿಲ್ಲದಿರೆ ತೀರ್ಥಸ್ನಾನದಿಂ ಶುಚಿತ್ವವಿಲ್ಲ ದಾನವು, ಯಜ್ಞ, ತಪಸ್ಸು, ಶೌಚ, ತೀರ್ಥಯಾತ್ರೆ, ಪುರಾಣಶ್ರವಣ, ಇವು ಮನಶ್ಶುದ್ಧಿಯುಳ್ಳವರನ್ನು ಪವಿತ್ರವಂಮಾಳ್ಪವು. ಆವ ಸ್ಥಳದಲ್ಲಿ ಜಿತೇಂದ್ರಿಯನಿಹನೋ ಅದೇ ಪುಣ್ಯಕ್ಷೇತ್ರವು, ಧ್ಯಾನದಿಂ ಶೋಧಿಸಲ್ಪಟ್ಟ ರಾಗದ್ವೇಷಂಗಳಂ ಪರಿಹರಿಪ ಜ್ಞಾನವೆಂಬ ಉದಕವುಳ್ಳ ಮಾನಸತೀರ್ಥಸ್ನಾನಮಾಡಲವನು ಮೋಕ್ಷಮನೈದುವನು ಇಂತಿವು ಮಾನಸ ತೀರ್ಥಂಗಳು. ಈ ಭೂಮಿಯೊಳಿರ್ಪ ತೀರ್ಥಂಗಳಿಗೆ ಮಹತ್ವಬಂದಕಾರಣವೇಕೆನೆ, ಶರೀರದಲ್ಲಿದ್ದ ಶಿರಸ್ಸುಮೊದಲಾದ ಅಂಗಗಳಿಗೆ ಮಹತ್ವ ಬಂದಕಾರಣವೇಕೆನೆ ಈ ಭೂಮಿಯ ತೀರ್ಥಂಗಳಿಗೂ ಮಹತ್ವವುಂಟು ಕೆಲವು ಭೂಪ್ರಭಾವದಿಂದ, ಉದಕ ಮಹಿಮೆಯಿಂದ ಕೆಲವು ಮಹಾತ್ಮರ ಪರಿಗ್ರಹದಿಂದ ಕೆಲವು ಈ ಮರ್ಯಾದೆಯಲ್ಲಿ ಕೆಲವು ತೀರ್ಥಂಗಳು ಪೂಜ್ಯವಾದವು. ಅದುಕಾರಣ ಮಾನಸತೀರ್ಥ ಭೂತೀರ್ಥಂಗಳಲ್ಲಿ ಚಿತ್ತಶುದ್ಧಿಯಿಂಸ್ನಾನವಂಮಾಡಲು

ಕೃತಕೃತ್ಯನಹನು. ಉಪವಾಸವಿರದೆ ತೀರ್ಥಯಾತ್ರೆಯಂಮಾ ಡದೆ ಗೋದಾನಾದಿ ನಾನಾವಿಧ ದಾನಂಗಳಂ ಮಾಡದವರು ದರಿದ್ರರಹರು. ಸಾಂಗವಾದ ದಕ್ಷಿಣೆವುಳ್ಳ ಯಜ್ಞಫಲವೂ ತೀರ್ಥಯಾತ್ರೆಯ ಫಲವೂ ಸಮಾನವು. ಆವನೊಬ್ಬನುಕಚ್ಚೆ, ಕೈಯಿ, ಬಾಯಿಶುದ್ಧವಾಗಿ ವಿದ್ಯಾ, ತಪಸ್ಸು ಕೀರ್ತಿ ವುಂಟಾದವನೋ ಅವನು ತೀರ್ಥಸ್ನಾನಮಾಡಿದವನೇಸರಿ. ದುರ್ದಾನವಂ ಪಡಿಯಬೇಕೆಲ್ಲನೆಂ ತೋಷಿಯಾಗಿ ಅಹಂಕಾರವಿಲ್ಲದವಗೆ ತೀರ್ಥಸ್ನಾನ ಫಲವುಂ ಟು. ಬೂಟಕವಿಲ್ಲದೆ ಕಾಮ್ಯ ಕರ್ಮಂಗಳಂ ಮಾಡದೆ,ಶುಚಿಯಾದ ಲಘುವಾದ ಆಹಾರವುಳ್ಳವನಾಗಿ ಜಿತೇಂದ್ರಿಯನಾಗಿ ದುಸ್ಸಂಗವಂಮಾಡದೆ, ಕೋಪವಂಬಿಟ್ಟು ಶುದ್ಧ ಬುದ್ಧಿಯುಳ್ಳವನಾಗಿ, ಸತ್ಯವಂತನಾಗಿತನ್ನಂತೆ ಪ್ರಾಣಿಗಳಂ ನೋಡುತ್ತಿರುವವನು ತೀರ್ಥಸ್ನಾನ ಫಲವನ್ನೈದುವನು. ವಿಶ್ವಾಸದಿಂ ತೀರ್ಥಸ್ನಾನಮಾಡಿದ ಪಾಪಿಯು ಶುದ್ಧನಹನು. ಮೊದಲು ಪರಿಶುದ್ಧನಾದವಂಗೆ ಹೇಳಲೇನು. ಅಂಥಾ ಪರಿಶುದ್ಧನಾದವನು ಪಶುಗಳಲ್ಲಿ ಹುಟ್ಟನು. ಕುದೇಶದಲ್ಲಿ ಜನಿಸನು. ದುಃಖಿಯಾಗನು, ಸ್ವರ್ಗವಂ ಪಡೆವನು, ಮೋಕ್ಷಕ್ಕೆ ಉಪಾಯವಂ ಕಾಂಬನು, ವಿಶ್ವಾಸವಿಲ್ಲದವನು, ಪಾಪಿಯಾದವನು, ಗುರುದೈವಾದಿಗಳಿಲ್ಲವೆಂಬುವನು, ಸಂಶಯ ಪಡುವನು ಪಿಡಿವಾದಿಯೂ ಇವರ್ಗೆ ತೀರ್ಥಯಾತ್ರೆಯಂಮಾಡಿದರೂ ಫಲವಿಲ್ಲ. ಈ ತೀರ್ಥಯಾತ್ರೆಯ ವಿಶ್ವಾಸದಿಂದ ಶಾಸ್ತ್ರೋಕ್ತವಾಗಿ ಮಾಡಿದವರ್ಗೆ ಅಧಿಕಫಲವುಂಟು, ಅದೆಂತೆನೆ ತೀರ್ಥಯಾತ್ರೆಯಂ ಮಾಡಬೇಕೆಂಬವನು ಉಪವಾಸವಿದ್ದು ಮರುದಿನ ವಿನಾಯಕ ಪೂಜೆಯಂಮಾಡಿ, ಪಿತೃಗಳನರ್ಚಿಸಿ, ಬ್ರಾಹ್ಮಣಭೋಜನವಂಮಾಡಿಸು ತನಗಪೇಕ್ಷೆಯಾದೊಂದುವಸ್ತುವಂಬಿಟ್ಟು ತಿರುಗಿ ಬಂದಲ್ಲದೆ ಮುಟ್ಟೆನೆಂದು ವ್ರತವಂ ಸಂಕಲ್ಪಿಸಿ, ಪಾರಣೆಯಂಮಾಡಿ ತೀರ್ಥಯಾತ್ರೆಗೆ ಹೋಗಿ ಕ್ಷೌರವಂಮಾಡಿಸಿಕೊಂಡು ಕ್ಷೇತ್ರೋಪವಾಸವಂಮಾಡಿ, ಬೆಳಗಾಗ ದೇವಋಷಿಪಿತೃಗಳನರ್ಚಿಸಿ ಯಥಾಶಕ್ತಿದಾನಂಗಳಂಮಾಡಿ, ಬ್ರಾಹ್ಮಣ ಸಮಾರಾಧನೆಯಂಮಾಡಿ, ತಿರಿಗಿಬಂದು ಮೊದಲಿನಂತೆ ಪೂಜಾದಿಗಳಂಮಾಡಿ ಬ್ರಾಹ್ಮಣಭೋಜ

ನಾಭಿಗಳಂಮಾಡಿಸಿದವಂಗೆ ಪೂರ್ಣವಾದ ಫಲವುಂಟು ತೀರ್ಥವಾಸಿಗ
ಳಾದ ಬ್ರಾಹ್ಮಣರನು ಪರೀಕ್ಷಿಸಲಾಗದು. ತೀರ್ಥವಾಸಿಗಳಾದಬ್ರಾಹ್ಮ
ಣರಿಗೆ ಯಥಾಶಕ್ತಿದಾನವಂಕೊಡಬೇಕು. ಅನ್ನವನಿಕ್ಕಬೇಕು ಸತ್ವದಹಿ
ಟ್ಟು ಪರಮಾನ್ನ ಬೆಲ್ಲಗಳಿಂದ ಪಿಂಡಪ್ರದಾನವಂ ಮಾಡಬೇಕು, ಅರ್ಘ್ಯ
ಆವಾಹನಹೊರತಾಗಿ ಶ್ರಾದ್ಧವಂಮಾಡಬೇಕು. ತೀರ್ಥಕ್ಕೆ ಆವವೇಳೆ
ಹೋದರೂ ಆಗಲೇ ತರ್ಪಣಾದಿಗಳಂ ಮಾಡಬೇಕು. ಏನಾದರೂ ಒಂ
ದು ನೆವದಿಂ ತೀರ್ಥಸ್ನಾನವಂಮಾಡೆ ಸ್ನಾನದ ಫಲವುಂಟು. ಯಾತ್ರೆ
ಯ ಫಲವಿಲ್ಲ, ಪಾಪಿಷ್ಠರು ಸ್ನಾನವಂಮಾಡೆ ಪಾಪಹರಿದು ಪುಣ್ಯವಂ
ತರಹರು. ಪುಣ್ಯವಂತರು ಸ್ನಾನವಂಮಾಡೆಶಾಸ್ತ್ರೋಕ್ತವಾದ ಫಲವುಂ
ಟು. ಕೂಲಿಗೆ ತೀರ್ಥಯಾತ್ರೆಯಂಮಾಡೆ ಹದಿನಾರರಲ್ಲೊಂದು ಪಾಲು
ಫಲವುಂಟು. ಆವನೊಬ್ಬನು ಪರರಿಂದ ಪುರುಷಾರ್ಥವಂಬಯಸದೆ ಅ
ವರಿಗೆ ಪುಣ್ಯವಾಗಬೇಕಾಗಿ ಸ್ನಾನವಂ ಮಾಡಿಸುವ ಕ್ರಮವೇನೆಂದರೆ,
ದರ್ಭೆಯಿಂದ ಪವಿತ್ರವಂ ಕಟ್ಟಿ ಅವರ ಕುರಿತು ಆ ಪವಿತ್ರಸಹಾ ಸ್ನಾ
ನವಂಮಾಡಿಸುವನೋ ಆ ಮಾಡಿಸಿಕೊಂಡವನಿಗೆ ಅಷ್ಟಮಾಂಶ ಫಲ
ವುಂಟು, ತೀರ್ಥಕ್ಕೆ ಹೋಗುವನೊದಲುದಿನ ಉಪವಾಸವಿದ್ದು ತೀರ್ಥ
ಕ್ಕೆಹೋಗಿ ವಪನವಾಗಿ ಶ್ರಾದ್ಧವಂಮಾಡಬೇಕು. ಪ್ರಸಂಗದಿಂ ಬಂದ
ತೀರ್ಥಯಾತ್ರೆಯ ವಿಧಿಯನು ಪೇಳಿದೆನು. ಕಾಶಿ, ಕಾಂಚಿ, ಹರಿದ್ವಾರ,
ಅಯೋಧ್ಯೆ, ದ್ವಾರಕಾಪುರ, ಮಥುರೆ, ಉಜ್ಜಯಿನಿ, ಇವು ಏಳು ಕ್ಷೇ
ತ್ರಂಗಳೂ ಮುಕ್ತಿಸಾಧನಂಗಳು. ಶ್ರೀಶೈಲವೂ ಮೋಕ್ಷಪ್ರದ ಅದರಿಂ
ದಧಿಕವಾದದ್ದು ಕೇತಾರಕ್ಷೇತ್ರ. ಅವೆರಡರಿಂದಧಿಕ ಪ್ರಯಾಗ ಪ್ರಯಾ
ಗದಿಂದಧಿಕವಾದದ್ದು ಕಾಶೀಕ್ಷೇತ್ರ ಅದಕ್ಕೆ ಸಂಶಯವಿಲ್ಲ ಮಿಕ್ಕಾದ ಕ್ಷೇ
ತ್ರವೆಲ್ಲವೂ ಕಾಶಿಯನೈದಿಸುವಂಥಾ ಫಲವಕೊಡುವವು. ಸಮಸ್ತ ತೀ
ರ್ಥಕ್ಕೂ ಅಧಿಕ ಕಾಶೀಕ್ಷೇತ್ರವೆಂದು ವಿಷ್ಣುಗಣಂಗಳು ಶಿವಶರ್ಮನೆಂ
ಬ ಬ್ರಾಹ್ಮಣಂಗೆ ಪೇಳ್ದ ಇತಿಹಾಸವುಂಟೆಂದು ಪೇಳಿ ಈ ಅಧ್ಯಾಯ
ದ ಫಲವಂ ಪೇಳುತ್ತಾ ಇದ್ದನು ಆರೊಬ್ಬರು ಸ್ವಸ್ಥದಿಂ ಕುಳ್ಳಿರ್ದು
ಈ ತೀರ್ಥಾಧ್ಯಾಯವಂ ಕೇಳಿದವರೂ ಕೇಳಿಸುವರೂ ವಿಶ್ವಾಸದಿಂ ಕೇ

ಳಿದ ಬ್ರಾಹ್ಮಣ ಕ್ಷತ್ರಿಯ ವೈಶ್ಯಶೂದ್ರರೊಳು ಆರು ಕೇ ಳಿದರೂ ಕೃತಾರ್ಥರಹರು. ತೀರ್ಥಸ್ನಾನಫಲ ಯಾತ್ರಾಫಲವಂ ಬೆಂದು ಅಗಸ್ತ್ಯರು ತನ್ನ ಸತಿಯೂದ ಲೋಪಾಮುದ್ರೆಗೆ ಪೇಳ್ದ ರೆಂದು ವ್ಯಾಸರು ನಿರೂಪಿಸಿದ ಅರ್ಥವಂ ಸೂತಪುರಾಣೀಕನು ನೈಮಿ ಶಾರಣ್ಯವಾಸಿಗಳಾದ ಶೌನಕಾದಿ ಋಷಿಗಳಿಗೆ ವಿವರಿಸಿದನೆಂಬಲ್ಲಿಗೆ ಅ ಧ್ಯಾಯಾರ್ಥ. ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರು ದಾಂಕಿತರಾದ ಮಹಿಶೂರ ಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರ ವರು ಲೋಕೋಪಕಾರಾರ್ಥವಾಗಿ ಕರ್ನಾಟಕ ಭಾಷೆಯಿಂದ ವಿರಚಿಸಿದ ಸ್ಕಾಂದ ಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಅಗಸ್ತ್ಯರು ಲೋಪಾಮುದ್ರೆಗೆ ಪೇಳ್ದ ತೀರ್ಥಕ್ಷೇತ್ರಪ್ರಶಂಸೆ ಯೆಂಬ ಆರನೇಅಧ್ಯಾ ಯಾರ್ಥನಿರೂಪಣಕ್ಕಂ ಮಂಗಳಮಹಾ.

ಆರನೇ ಅಧ್ಯಾಯು ಸಂಪೂರ್ಣಂ.

ಶ್ರೀರಸ್ತು.

ಶ್ರೀವಿಶ್ವೇಶ್ವರಾಯನಮಃ.

ಏಳನೇ ಅಧ್ಯಾಯು,

ಅಯೋಧ್ಯ ಮೊದಲಾದ ಸಮಸ್ತಪುರಿಗಳ ಪ್ರಶಂಸೆ,
ಶಿವಶರ್ಮನೆಂಬ ಬ್ರಾಹ್ಮಣನಿಗೆ ಸಾರೂಪ್ಯಪ್ರಾಪ್ತಿ.

ಇಂತೆಂದು ಪೇಳ್ದ ಅಗಸ್ತ್ಯರು ಅನಂತರ ಇತಿಹಾಸವಂ ಪೇಳು ತ್ತಾಇದ್ದರು. ಮಥುರಾಪುರದಲ್ಲಿ ಒಬ್ಬಾನೊಬ್ಬ ಬ್ರಾಹ್ಮಣೋತ್ತಮ ನುಂಟು ಆ ಬ್ರಾಹ್ಮಣೋತ್ತಮನಾದ ವಿಷ್ಣುಶರ್ಮಂಗೆ ಜ್ಯೇಷ್ಠನಾ ದ ಶಿವಶರ್ಮನೆಂಬೊಬ್ಬಾನೊಬ್ಬ ಕುಮಾರನುಂಟು ಆ ಶಿವಶರ್ಮನು ಸ ಕಲವಾದ ವೇದವನೋದಿ ಅದರರ್ಥವಂ ತಿಳಿದು ಧರ್ಮಶಾಸ್ತ್ರ, ಪುರಾ

ಣ, ವೇದಾಂಗ, ತರ್ಕ, ಪೂರ್ವಮೀಮಾಂಸೆ, ಉತ್ತರಮೀಮಾಂಸೆ, ಧನುರ್ವೇದ, ಆಯುರ್ವೇದ, ಭರತಶಾಸ್ತ್ರ, ನೀತಿಶಾಸ್ತ್ರ, ಗಜಶಾಸ್ತ್ರ, ಹಯಶಾಸ್ತ್ರಾದಿ ನಾನಾ ಸಕಲಶಾಸ್ತ್ರ, ನಾನಾ ದೇಶಭಾಷೆ, ನಾನಾ ಲಿಪಿಗಳ ಅಭ್ಯಾಸವಂಮಾಡಿ ಧರ್ಮದಿಂ ಧನವಂ ಘಳಿಸಿ ಸಕಲಭೋಗಗಳನನುಭವಿಸಿ, ಸಂತಾನವಂ ಪಡೆದು ಅವರ್ಗೆ ಧನವನ್ನು ಹಂಚಿಕೊಟ್ಟು ತನಗೆ ಮುಪ್ಪು ಪ್ರನರೆಬರಲು ವೃದ್ಧಾಪ್ಯಬಂತೆಂದು ತಿಳಿದು ಚಿಂತೆಯಿಂದಿಂತೆಂದನು. ಎನಗೆ ವಿದ್ಯಾಭ್ಯಾಸದಿಂ ಕೆಲವುಕಾಲ, ಧನಾರ್ಜನಚಿಂತೆಯಿಂಕೆಲವುಕಾಲ, ಸಂಸಾರಲೋಲುಪ್ತಿಯಿಂ ಕೆಲವುಕಾಲಹೋದುದು. ಮೋಕ್ಷಪ್ರದವಾದ ಈಶ್ವರಪೂಜೆಯಂ ಮಾಡಲಿಲ್ಲ ಪಾಪವಂ ಪರಿಹರಿಪ ವಿಷ್ಣುವಿನರ್ಚಿಸಲಿಲ್ಲ ವಿಘ್ನಂಗಳಂ ಪರಿಹರಿಪ ಗಣಾಧಿಪತಿಯಂ ಬಲಗೊಂಡವನಲ್ಲ ಅಜ್ಞಾನವಂ ಪರಿಹರಿಪ ಸೂರ್ಯನನಾರಾಧಿಸಲಿಲ್ಲ, ಬಂಧನಿವೃತ್ತಿಗೆ ಸಾಧನವಾದ ಮಹಾದೇವನಂ ಪೂಜಿಸಲಿಲ್ಲ. ಸಕಲದೇವತಾತೃಪ್ತಿಕರವಾದ ಯಜ್ಞಂಗಳಂಮಾಡಲಿಲ್ಲ, ಬೃಂದಾವನ ಸೇವೆಯಂ ಮಾಡಲಿಲ್ಲ, ಇಹಪರಸಾಧನವಾಗಿ ಮೃಷ್ಟಾನ್ನದಿಂ ಬ್ರಾಹ್ಮಣಭೋಜನವಂಮಾಡಿಸಲಿಲ್ಲ, ನಾನಾವಿಧ ಪುಷ್ಪಂಗಳಂ ನೆಳಲ್ಗಳುಳ್ಳ ತೋಟವನ್ನುಮಾಡಿಸಲಿಲ್ಲ ಮುತ್ತೈದೆಯರ್ಗೆ ಅಲಂಕಾರ ದಾನಂಗಳನ್ನು ಮಾಡಲಿಲ್ಲಯಮಬಾಧೆಯಂ ಪರಿಹರಿಪ ಬೆಳಸಹಿತವಾದಸುಭೂಮಿಯಂದಾನವಂಕೊಡಲಿಲ್ಲ. ಸಕಲರೋಪದ್ರವಂಗಳಂ ಪರಿಹರಿಪ ಹಿರಣ್ಯದಾನವಂ ಮಾಡಲಿಲ್ಲ, ಅಲಂಕಾರಗೋದಾನವಂ ಮಾಡಲಿಲ್ಲ, ತಾಯಿರುಣವಂಪರಿಹರಿಪ ಕೆರೆಕಟ್ಟೆ ಕುಂಟೆ ಭಾವಿ ಮೊದಲಾದ ಧರ್ಮಂಗಳಂಮಾಡಲಿಲ್ಲ. ಸ್ವರ್ಗಮಾರ್ಗವಂ ತೋರುವ ಅತಿಥಿ ಪೂಜೆಯಂ ಮಾಡಲಿಲ್ಲ, ಪರಲೋಕವನ್ನೈದಿಸುವ ಮಾರ್ಗದಲ್ಲಿ ಉಪಕರಿಸುವ ಬಿಸಲುಕೊಡೆ ಪಾದರಕ್ಷೆ ಕಮಂಡುಲು ಮೊದಲಾದ ದಾನವನಿತ್ತವನಲ್ಲ, ಇಹದಲ್ಲಿ ಸಕಲೈಶ್ವರ್ಯಪ್ರಾಪರದಲ್ಲಿ ದೇವಸ್ತ್ರೀಸಂಭೋಗಂಗಳನೀವಂಥಾ ವಿವಾಹಾರ್ಥವಾಗಿಧನವಂಕೊಟ್ಟುದಿಲ್ಲ, ಇಹಪರದಲ್ಲಿಯೂ ಸೌಖ್ಯವನೀವ ವಾಜಪೇಯಯಾಗವಂಮಾಡಲಿಲ್ಲ, ಚತುರ್ದಶ ಭುವನಂಗಳನು ಪ್ರತಿಷ್ಠೆಯಂಮಾಡಿ

ದ ಫಲವನೀವ ಶಿವಲಿಂಗಪ್ರತಿಷ್ಠೆಯಂ ಮಾಡಲಿಲ್ಲ, ಸಕಲೈಶ್ವರ್ಯವಂ ಕೊಡುವ ವಿಷ್ಣುಪ್ರತಿಷ್ಠೆಯಂ ಮಾಡಲಿಲ್ಲ, ಆರೋಗ್ಯವನೀವ ಸೂರ್ಯ ಗಣಪತಿ ಮೊದಲಾದ ದೇವರ್ಕಳ ಪ್ರತಿಷ್ಠೆಯಂಮಾಡಲಿಲ್ಲ. ಜನ್ಮಾಂತ ರದಲ್ಲಿ ಚಲುವಿಕೆಯನ್ನೂ ಐಶ್ವರ್ಯವನ್ನೂ ಕೊಡುವ ಶ್ರೀಸೂಕ್ತರುದ್ರಾ ಧ್ಯಾಯಮೊದಲಾದ ಮಂತ್ರಂಗಳಂ ಜಪಿಸಲಿಲ್ಲ ಆದಿತ್ಯವಾರ ಅಂಗಾರಕ ವಾರ ಶುಕ್ರವಾರ ತ್ರಯೋದಶೀರಾತ್ರಿಕಾಲಂಗಳಲ್ಲಿ ಬಿಟ್ಟು ಉಳಿದಾಗ ಅಶ್ವತ್ಥಸೇವೆಯಂ ಮಾಡಲಿಲ್ಲ, ಸಕಲಭೋಗಗಂಳನ್ನು ಕೊಡುವ ಮಂ ಚ ಸುಪತ್ತಿಗೆಯಂ ದಾನಕೊಡಲಿಲ್ಲ ಸೂರ್ಯಲೋಕವನೀವ ಅಶ್ವದಾನವ ಮಾಡಲಿಲ್ಲ. ಅಪಮೃತ್ಯುಪರಿಹರವಾದ ಮಹಿಷೀ, ದಾಸೀ, ಆಡು, ಕೃ ಷ್ಣಾಂಜಿನ, ತೈಲಘಟ, ತಿಲ, ಉದಕ, ಪೀಠ, ಹಾವುಗೆ, ಕಂಬಳಿ, ಕ ಬ್ಬಿಣಂಗಳ ದಾನವನಿತ್ತುದಿಲ್ಲ. ಪಾದಾಭ್ಯಂಗ, ದೀಪಾರಾಧನ, ಅರವ ಟ್ಟಿಗೆ, ಬೀಸಣಿಗೆ ತಾಂಬೂಲ, ಕೈಮರಗಾಳಿಗೆ, ಕರ್ಪೂರ, ನಿತ್ಯ ಬ್ರಾಹ್ಮಣಭೋಜನ, ಬಲಿಹರಣ ಅತಿಥಿಪೂಜೆಯಂಬ ಯಮಲೋಕ ನಿವಾರಣವಾದ ದಾನಂಗಳನಿತ್ತುದಿಲ್ಲ ತಾನು ಪರಲೋಕವನೈದು ವಾಗ ತನ್ನ ಗೃಹಕ್ಷೇತ್ರ ಹೆಂಡರುಮಕ್ಕಳು ಧನಧಾನ್ಯಂಗ ಳು ಸಂಗಡಬಾರವು. ಶರೀರಶುದ್ಧಿಕರವಾದ ಕೃಛ್ರಚಾಂದ್ರಾಯಣನಕ್ತ ವ್ರತಗಳನುಮಾಡಲಿಲ್ಲ, ಗೋಲೋಕದಲ್ಲಿ ಸುಖವಂಕೊಡುವ ಯಮಲೊ ಕನಿವಾರಕವಾದ ಗೋದಾನವನಿತ್ತುದಿಲ್ಲ, ಹಾಲುಕೊಡುವ ಹಸುವಿಗೆ ಹುಲ್ಲುಹಾಕಿತುರಿಸಲಿಲ್ಲ. ಉಮ್ಮರೊಳಗೆಬಿದ್ದ ಜೀವದನಗಳನೆತ್ತಲಿಲ್ಲ ಐಶ್ವರ್ಯಮಂಕೊಡುವ ಮಹಾಲಕ್ಷ್ಮೀಗೌರಿಯರ ಚಿತ್ತದಲ್ಲಿ ಸ್ಮರಿಸಲಿ ಲ್ಲ. ಪರಲೋಕದಲ್ಲಿ ದಿವ್ಯವಸ್ತ್ರಗಳನೀವ ವಸ್ತ್ರದಾನವಂಮಾಡಲಿಲ್ಲ, ಅರ್ಥಿಗಳು ಬೇಡಿದ ವಸ್ತುಗಳ ನಿತ್ತುದಿಲ್ಲ. ಈ ಶರೀರ ನಿತ್ಯವಲ್ಲ ಅ ದುಕಾರಣ ಬಲ್ಲವರು ಧರ್ಮಂಗಳನೇಮಾಡಬೇಕೆಂದು ಶಿವಶರ್ಮನುಚಿಂ ತಿಸಿ ಈ ಶರೀರವು ಕಂಣು ಕೈಕಾಲು ಸತ್ವವಾಗಿದ್ದಾಗಲೆ ತೀರ್ಥಯಾ ತ್ರಯುಮಾಡಬೇಕೆಂದು ನಿಶ್ಚೈಸಿಕೊಂಡು ಐದಾರು ದಿನವಮೇಲೆ ಶುಭ ದಿವಸದಲ್ಲಿ ವಿಧ್ಯುಕ್ತವಾಗಿ ಉಪವಾಸವಂಮಾಡಿ ಗಣಪತಿಯನ್ನು ಪಿತೃ

ದೇವತೆಗಳನ್ನೂ ಬ್ರಾಹ್ಮಣರನ್ನೂ ಪೂಜಿಸಿ, ತೀರ್ಥಯಾತ್ರೆಗೋಸ್ಕರಹೋಕದಲ್ಲಿ ಕೆಲವುದೂರನಡೆದು ಮರದಡಿಯಲ್ಲಿಕುಳಿತು ಭೂಮಿಯಲ್ಲಿ ಅನೇಕತೀರ್ಥಂಗಳಿರುವವು. ಶರೀರನಿತ್ಯವಲ್ಲ ಆಯುಷ್ಯಕೊಂಚವುಮನಸ್ಸು ಚಂಚಲವು ಆದುಕಾರಣ ಅಯೋಧ್ಯಾಮೊದಲಾದ ಏಳು ಮುಕ್ತಿಕ್ಷೇತ್ರಂಗಳಂ ಸೇವಿಪೆನೆಂದು ನಿಶ್ಚೈಸಿ ಅಯೋಧ್ಯಾಪಟ್ಟಣಕ್ಕೆ ಪೋಗಿ ಸರಯೂ ನದಿಮೊದಲಾದ ಸಕಲತೀರ್ಥಂಗಳಲ್ಲಿಯೂ ಸ್ನಾನದಾನ ಪಿತೃತರ್ಪಣ ದೇವತಾರಾಧನೆಗಳಂಮಾಡುತ್ತಾ ಐದುರಾತ್ರಿಯಿದ್ದು ಪ್ರಯಾಗೆಗೆ ಬಂದುನಿಂತನು, ಆ ಕ್ಷೇತ್ರಮಹಾತ್ಮ್ಯವೆಂತೆನೆ ಸಕಲಯಾಗಫಲಂಗಳಿಂದಧಿಕ ಫಲವನೀವಂಥಾ ಪರಂಜ್ಯೋತಿಸ್ವರೂಪನಾದ ಶೂಲಟಂಕೇಶ್ವರನುಳ್ಳಂಥ ಪಾತಾಳದಿಂದುದ್ಭವಿಸಿದ ಪ್ರಳಯದಿ ಮಾರ್ಕಂಡೇಯಂಗಾಶ್ರಯವಾದ ವಟವೃಕ್ಷವುಳ್ಳ, ವೈಕುಂಠದಿಂ ಬಂದ ಪ್ರಯಾಗಮಾಧವನೆಂಬ ಹೆಸರುಳ್ಳ ವಿಷ್ಣುವಿಗೆ ಆವಾಸವಾದ ಮಾಘಸ್ನಾನಕ್ಕೆ ಬರುವಚತುರ್ದಶ ಭುವನ ಜನಂಗಳುಳ್ಳದು ತನ್ನ ನಾಮಸ್ಮರಣೆಯಿಂದ ಸಪ್ತಧಾತುಗಳಲ್ಲಿರ್ದ ಪಾಪವಂ ಪರಿಹರಿಸಲುಳ್ಳದು, ರಜೋರೂಪದಿಂ ಕೆಂಪಾದ ಸರಸ್ವತಿಯೂ ತಮೋರೂಪದಿಂ ನೀಲವರ್ಣವಾದ ಯಮುನೆಯೂ ಸತ್ವರೂಪದಿಂ ಶುದ್ಧವಾದ ಗಂಗೆಯೂ ಕೂಡಿತ್ರಿವೇಣಿಯೆನಿಸಿಕೊಂಬ ತೀರ್ಥವುಳ್ಳಂಥ, ತ್ರಿವೇಣಿಯು ತನ್ನಲ್ಲಿ ಮಾಡಿದ ಸ್ನಾನಫಲದಿಂಬ್ರಹ್ಮಲೋಕಕ್ಕೆ ಪೋಪರ್ಗೆ ನಿಚ್ಚಣಿಗೆಯಂತಿರ್ದುದು, ಕಾಶೀಕ್ಷೇತ್ರವೆಂಬ ಕಾಂತೆಗೆ ಲೋಲಾರ್ಕಕೇಶವಮೂರ್ತಿಗಳು ಕಣ್ಣುಗಳು ವರಣಾ ಅಸಿಗಳೆಂಬನದಿಗಳೇ ತೋಳುಗಳು ತ್ರಿವೇಣಿಯೆಂಬ ಜಡೆಯಿಂದೊಪ್ಪುವ ತೀರ್ಥರಾಜನಾದ ಪ್ರಯಾಗೆಯಲ್ಲಿ ಶಿವಶರ್ಮನು ಮಾಘಮಾಸ ತಿಂಗಳೂ ಇರ್ದು ಸ್ನಾನದಾನ ಪಿತೃತರ್ಪಣಂಗಳಂಮಾಡಿ, ಕಾಶೀಪಟ್ಟಣವಂ ಪೋಗುವಾಗ ದೆಹಳೀವಿನಾಯಕನಂ ಬಲಗೊಂಡು ಪಟ್ಟಣವಂ ಪೊಕ್ಕು ಉತ್ತರವಾಹಿನಿಯಾದ ಗಂಗೆಯೊಡಗೂಡಿದ ಮಣಿಕರ್ಣಿಕೆಯಲ್ಲಿ ಸ್ನಾನವಂಮಾಡಿ ದೇವಋಷಿ ಪಿತೃತರ್ಪಣಂಗಳಂಕೊಟ್ಟು ಪಂಚತೀರ್ಥಯಾತ್ರೆಯಂಮಾಡಿ ಪ್ರಾಣಿಗಳಿಗೆ ಪ್ರಯಾಣಕಾಲದ

ಲ್ಲಿ ಪ್ರಣವರೂಪವಾದ ತಾರಕೋಪದೇಶವಂಮಾಡುವ ವಿಶ್ವೇಶ್ವರನ ಆರಾಧನಂಗೈಯುತ್ತ ಕಾಶಿಯಲ್ಲಿರ್ದ ಲಿಂಗತೀರ್ಥಮೊದಲಾದ ವಿಶೇಷಂಗಳಂ ನೋಡಿ ಚಿರಗಾಗಿ, ಜೀವವುಳ್ಳವರಿಯಂತರವೂ ಇಲ್ಲಿಯೇ ಇರಬೇಕು ಮೊದಲುನಾನು ಸಂಕಲ್ಪವಂಮಾಡಿದ್ದಾಥಾ ಕಡಮೆ ನಾಲ್ಕು ತೀರ್ಥಂಗಳಂ ಸೇವಿಸಿ ಕಾಶೀಪಟ್ಟಣಕ್ಕೆ ತಿರುಗಿ ಬರುವೆನೆಂದು ನಿಶ್ಚೈಸಿ, ಬಂದುವರ್ಷ ಕಾಶಿಯಲ್ಲಿರ್ದ ಸಕಲಶಾಸ್ತ್ರಂಗಳಿಂದಲೂ ಕಾಶೀಕ್ಷೇತ್ರ ಅಧಿಕಶ್ರೇಷ್ಠವೆಂದು ತಿಳಿದಿರ್ದು ಮತ್ತೊಂದು ಕ್ಷೇತ್ರಕ್ಕೆ ಪೋದನು. ಪ್ರಾರಬ್ಧವಂ ಮೀರಲಾರಿಗೆ ಶಕ್ಯವೆಂದು ಅಗಸ್ತ್ಯಮುನಿಯು ತನ್ನ ಸತಿಗೆ ಪೇಳ್ದು ಮತ್ತಿಂತೆಂದನು, ಆ ಶಿವಶರ್ಮನು ಅನೇಕ ತೀರ್ಥಂಗಳುಳ್ಳ ಮಹಾಕಾಳವತಿ, ಅವಂತಿ, ಉಜ್ಜಯಿನಿ, ಎಂಬ ಪೆಸರುಗಳುಳ್ಳ ಮಹಾಕಾಳೀಕ್ಷೇತ್ರದಲ್ಲಿ ಮಹಾಲಿಂಗ ಪ್ರಾದುರ್ಭಾವವಾದಾಗ ಪಾತಾಳದಲ್ಲಿ ಪಾದುಕೇಶ್ವರನೆಂದು ಆ ಕಾಶದಲ್ಲಿ ತಾರಕೇಶ್ವರನೆನಿಸಿರ್ದ ಲಿಂಗವಂ ಸೇವಿಸಿ, ಅಲ್ಲಲ್ಲಿಮಾಡತಕ್ಕ ಸತ್ಕ್ರಿಯೆಗಳಂಮಾಡಿ ಕಾಂಚೀನಗರಕ್ಕೆ ಪೋಗಿ ವೇಗವತೀ ಪಂಪಾತೀರ್ಥದಲ್ಲಿ ಸ್ನಾನ ತರ್ಪಣಾದಿ ಕ್ರಿಯೆಗಳಂಮಾಡಿ ಏಕಾಮ್ರೇಶ್ವರ ವರದರಾಜರಂ ಸೇವಿಸಿ ದ್ವಾರಕಾಪಟ್ಟಣವಂ ಪೊಕ್ಕು ಆ ದ್ವಾರವತೀ ಪಟ್ಟಣದಲ್ಲಿ ಮೃತವಾದ ಪ್ರಾಣಿಗಳ ಅಸ್ಥಿಗಳು ಚಕ್ರಗಳಾಗುವಕಾರಣ ವಿಷ್ಣುಸಾರೂಪ್ಯವುಂಟು, ಯಮನು ತನ್ನ ಭಟರೊಡನೆ ದ್ವಾರಕಿಯೆಂದು ನುಡಿದವರಂ ಗೋಪೀಚಂದನವಂ ತುಳಸೀ ವನಮಾಲೆಯುಂ ಧರಿಸಿದವರನ್ನು ದೂರದಲ್ಲಿಯೇ ಬಿಟ್ಟುಬಿಡಿ ಎಂಬನು. ಇಂಥಾ ದ್ವಾರಕಾಕ್ಷೇತ್ರದಲ್ಲಿ ದೇವಋಷಿ ಪಿತೃಮಾನವರನ್ನು ಕುರಿತು ಸಂತರ್ಪಣೆಯಂಮಾಡಿ ಹರಿದ್ವಾರಕ್ಕೆ ಹೋದನು. ಈ ಕ್ಷೇತ್ರವು ಹರಿದ್ವಾರ, ಮೋಕ್ಷದ್ವಾರ, ಮಾಯಾಪುರಿಯೆಂಬ ಪೆಸರುಗಳಿಂದ ಪ್ರಸಿದ್ಧವಾದುದು ಗಂಗೆಗೆ ದ್ವಾರವಾದಕಾರಣಗಂಗಾದ್ವಾರವೆನಿಸಿಕೊಂಡಿತು. ಅಂಥಾ ಪುರಿಯಲ್ಲಿ ಕ್ಷೇತ್ರೋಪವಾಸವಂಮಾಡಿ ರಾತ್ರಿಯಲ್ಲಿ ಜಾಗರಣವಂಮಾಡಿ ಪ್ರಾತಃಕಾಲದಲ್ಲಿ ಸ್ನಾನವಂಮಾಡಿ, ಪಾರಣೆಯಂಮಾಡಲುದ್ಯೋಗಿಸುವನಿತರೊಳು ಸೀತಜ್ವರಬಂದು ಪೀಡಿಸಲು, ಪರದೇಶದ

ಲ್ಲಿ. ಬಂಟಗನಾದಕಾರಣ ಚಿಂತಿಸಿ ನಡುಸಮುದ್ರದಲ್ಲಿ ಹಡಗೊಡೆದು ಸಿಕ್ಕಿದ ಬೇಹಾರಿಯಂತೆ ತನ್ನ ಪುತ್ರಮಿತ್ರ ಕಳತ್ರಾದಿಗಳು ದೂರದಲ್ಲಿ ಪ್ದಾರು. ಚಿಕಿತ್ಸೆಗೆ ಬಳಗಾಗದಿರ್ದ ಜ್ವರವೆನ್ನಪೀಡಿಸಲು, ಮನೆ ಸುಡುವಾಗ ಭಾವಿಯತೆಗೆದಂತೆ ಈಕೆ ನಾನು ಮಾಡುವುದೇನಿರುವುದು. ಶ್ರೀಹರಿಯನ್ನು ಧ್ಯಾನಿಸುವೆನೆಂದು ನಿಶ್ಚಿಂತನಾಗಿಂತೆಂದನು. ನಾನು ಮುಕ್ತಿಸಾಧನವಾದ ಸಪ್ತಪುರಿಗಳಂ ಸೇವಿಸಿದೆನು. ಯುದ್ಧದಲ್ಲಿ ಮರಣವಾದವರಿಗೂ, ತೀರ್ಥದಲ್ಲಿ ಮರಣವಾದವರಿಗೂ, ಪುಣ್ಯಲೋಕವುಂಟು. ಆದುಕಾರಣ ಹಿಮವತ್ಪರ್ವತದಿಂ ಬಂದಿರುವ ಗಂಗಾದ್ವಾರದಲ್ಲಿ ಜೀವಿಸುವ ಎನಗೆ ಚಿಂತೆಯೇನೆಂದು ವಿಷ್ಣುಸ್ಮರಣೆಯಂ ಮಾಡುತ್ತಲೇ ಕೋಟಿಚೇಳ್ಗಳೊಂದೇವೇಳೆ ಊರಲು ಎಷ್ಟು ವೇದನೆಯಹುದೊ ಅಂಥಾ ವೇದನೆಯಿಂದ ಶರೀರಮಂ ತ್ಯಜಿಸಲು, ಅಕ್ಷಣವೇ ವೈಕುಂಠದಿಂದ ಸಾರೂಪ್ಯವನೈದಿದ ಪುಣ್ಯಶೀಲ ಸುಶೀಲರೆಂಬ ಗಣಂಗಳು ಬಂದು ದಿವ್ಯವಿಮಾನದಲ್ಲಿ ಸಾರೂಪ್ಯವಂಪಡೆದ ಶಿವಶರ್ಮನೂ ಆಕಾಶಮಾರ್ಗದಲ್ಲಿ ಅಡರಿದನೆಂದು ಅಗಸ್ತ್ಯನು ತನ್ನ ಸತಿಯಾದ ಲೋಪಾಮುದ್ರೆಗೆ ನಿರೂಪಿಸಿದನೆಂದು ವೇದವ್ಯಾಸರು ತನಗರುಹಿದರೆಂಬರ್ಥವಂ ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ || ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀಕೃಷ್ಣರಾಜವಡೆಯರವರಿಂದ ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿತವಾದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಅಯೋಧ್ಯೆ ಮೊದಲಾದ ಸಪ್ತಪುರಿಗಳ ಪ್ರಶಂಸೆ ಶಿವಶರ್ಮನಿಗೆ ಸಾರೂಪ್ಯಪ್ರಾಪ್ತಿ ಏಳನೆಯ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ.

ಏಳನೇ ಅಧ್ಯಾಯ ಸಂಪೂರ್ಣಂ.

ಶ್ರೀರಸ್ತು.

ಶ್ರೀ ವಿಶ್ವೇಶ್ವರಾಯನಮಃ.

ಎಂಟನೇ ಅಧ್ಯಾಯ.

ಪಿಶಾಚಲೋಕ ಗುಹ್ಯಲೋಕ ಗಂಧರ್ವಲೋಕ ವಿದ್ಯಾಧರಲೋಕ ಯಮಲೋಕವರ್ಣನೆ.

ಇಂತೆಂದು ತನ್ನಪತಿನಿರೂಪಿಸಲು, ಕೇಳಿ ಲೋಪಾಮುದ್ರೆಯಿಂತೆಂದಳು. ನೀವು ಬುದ್ಧಿಗಲಿಶಿದ ಕಥೆಯಂಕೇಳ್ದನು. ಈ ಮುಕ್ತಿಕ್ಷೇತ್ರವಾದ ಹರಿದ್ವಾರದಲ್ಲಿ ದೇಹತ್ಯಾಗವಂ ಮಾಡಿದ ಶಿವಶರ್ಮಂಗೆ ಮುಕ್ತಿಯಿಲ್ಲವೆ ಎಂದುಬೆಸಗೊಳ್ಳಲು, ಅಗಸ್ತ್ಯನಿಂತೆಂದನು. ಎಲೆ ಪ್ರಿಯಳೆ ಕಾಶೀ ಹೊರತಾದ ಕ್ಷೇತ್ರಗಳಲ್ಲಿ ಸಾಕ್ಷಾನ್ಮುಕ್ತಿಯಿಲ್ಲವೆಂಬದು ದುಸ್ತರವಲ್ಲವೆ, ನಿನಗೆ ಇತಿಹಾಸವಂ ಪೇಳ್ದರ್ಥದಿಂ ಮುಕ್ತಿಯರಿದು ಶಿವಶರ್ಮನಂ ಕರದುಕೊಂಡುಪ್ರೋಪ ಪುಣ್ಯಶೀಲ, ಸುಶೀಲರು ಪೇಳ್ದ ಕಥೆಯಂ ನಿನಗೆ ಪೇಳುವೆನೆಂದು ಸತಿಗಿಂತೆಂದನು. ಆಗಲಾ ಶಿವಶರ್ಮನು ವಿಷ್ಣುಗಣಂಗಳಿಗೆ ಕೈಮುಗಿದು ನಿಮಗೆ ಬಿನ್ನಹವಂಮಾಡುತ್ತಿದ್ದೇನೆ. ನಾನು ನಿಮ್ಮನಾಮಧೇಯವನರಿಯೆನು. ನಿಮ್ಮ ಆಕಾರದಿಂದಲೇ ನೀವು ಪುಣ್ಯಶೀಲ, ಸುಶೀಲರೆಂದು ತನಗೆ ತೋರುತಿಧೆ ಎನಲಾತಂಗೆ ಗಣಂಗಳಿಂತೆಂದರು. ವಿಷ್ಣುಭಕ್ತರಾದ ನಿಮ್ಮಂಥಾವರಿಗೆ ತಿಳಿಯಬಾರದಿರುವದೇನುಂಟು. ನೀನು ನುಡಿದುದೇ ಎಮ್ಮನಾಮಧೇಯಂಗಳು. ನೀನು ಶಂಕೆಪಡದೆ ಕೇಳಬೇಕಾದ ವೃತ್ತಾಂತವಂ ಕೇಳೆಂದು ನುಡಿಯಲು, ಆ ಶಿವಶರ್ಮನಿಂತೆಂದನು. ವಿಕಾರಶರೀರಿಗಳಾದ ಜನರುಳ್ಳದ್ದಾವಲೋಕವೆಂಬುದೆನಗೆ ಬುದ್ಧಿಗಲಿಸಬೇಕೆನಲು, ಆ ಗಣಂಗಳಿಂತೆಂದರು. ಎಲೈ ಶಿವಶರ್ಮನೆ ಇದು ಪಿಶಾಚಲೋಕವು, ದಾನವಂಮಾಡಿ ಅರಿಯದೆ ಇತ್ತೆನಲ್ಲಾ ಎಂಬವರು, ಕೊಡಲೋ ಕೊಡಬೇಡವ್ವೋ ಎಂದು ಯರಡುಮನಸ್ಸಿನಲ್ಲಿ ದಾನವಕೊಟ್ಟ

ವರು, ಅಶುಚಿಗಳಾಗೀಶ್ವರಪೂಜೆಯಂ ಮಾಡಿದವರು, ಅಷ್ಟೈಶ್ವರ್ಯವುಳ್ಳ ಪಿಶಾಚಿಗಳಾಗೀಲೋಕದಲ್ಲಿಹರೆಂದು ಪೇಳುವಸಮಯದಲ್ಲಾಗಲೇ ವಿಮಾನ ಮುಂದೆ ನಡೆಯೆ ಶಿವಶರ್ಮನಿಂತೆಂದನು. ಎಲೈ ಮಹಾಪುರುಷರಿರಾ ನಡಿಪೊಟ್ಟೆ, ಗಂಟುಮುಖ. ಗುಡುಗಿನಂತಿರ್ಪಧ್ವನಿ, ರೋಮಯುಕ್ತವಾದ ಕಪ್ಪನದೇಹಂಗಳುಳ್ಳ ಜನರು, ಈ ಲೋಕದಲ್ಲಿರುವರು, ದಾವಲೋಕ ಆಪುಣ್ಯದಿಂದೀಲೋಕವಹುದೆನಲು. ಗಣಂಗಳು ಶಿವಶರ್ಮಂಗಿಂತೆಂದರು, ಇದು ಗುಹ್ಯಕಲೋಕ, ಧರ್ಮದಿಂದರ್ಥಗಳಿಸಿ ಭೂಮಿಯಲ್ಲಿ ನಿಕ್ಷೇಪಿಸಿ ತಮ್ಮ ಜಾತಿಯಾಚಾರವಂ ಬಿಡದ, ಗ್ರಹಣಸಂಕ್ರಾಂತಿ ಮೊದಲಾದ ಪುಣ್ಯಕಾಲಗಳನರಿತು ತಮ್ಮ ಗುರುಗಳಾದ ಬ್ರಾಹ್ಮಣರಿಗೆ ಗೋದಾನ ಮೊದಲಾದ ದಾನವಮಾಡಬೇಕೆಂದು ಮಾಡಿದವರೀಲೋಕದಲ್ಲಿ ನಿರ್ಭಯರಾಗಿ ಗುಹ್ಯಕರೆನಿಸಿಕೊಂಡಿಹರೆಂದು ವಿವರಿಸುವನಿತರೊಳು ವಿಮಾನಮೇಲಕ್ಕಡರಲು, ಮತ್ತೊಂದುಲೋಕವಂ ಕಂಡಿದಾವಲೋಕವೆಂದು ಶಿವಶರ್ಮನು ಬಿನ್ನೈಸೆ, ಗಣಂಗಳಿಂತೆಂದರು. ಕೇಳೈ ಶಿವಶರ್ಮ, ಇದು ಗಂಧರ್ವಲೋಕ, ಕಾಮ್ಯವ್ರತಂಗಳಂಮಾಡಿದವರು ದೇವರ್ಕಳಮುಂದೆ ಸಂಗೀತವಂ ಪಾಡಿದವರು, ದೇವಾಂಕಿತವಾದ ಸಂಗೀತಗಳನು ಧನಲಾಭಕ್ಕೋಸುಗ ಅರಸುಗಳಮುಂದೆ ಪಾಡಿ ಆವರಿತ್ತವಸ್ತ್ರಭೂಷಣಂಗಳನು ಬ್ರಾಹ್ಮಣರಿಗಿತ್ತವರೂ, ಸ್ತುತಿಪಾಠಕರು, ಈ ಗಂಧರ್ವಲೋಕವಲ್ಲಿ ಗಂಧರ್ವರಾಗಿ ಹುಟ್ಟಿರುವರು. ಹರಿಹರರಿಬ್ಬರೊ ಗಾನಸ್ವರೂಪಿಗಳು ಅವರಮುಂದೆ ಸಂಗೀತವಂ ಪಾಡಿದವರಿಗೆ ಮೋಕ್ಷವುಂಟು ಅದುನಿಮಿತ್ತ ನರಸ್ತುತಿಯಂ ಮಾಡಲಾಗದೆಂದು ಗಣಂಗಳುಪೇಳಲು, ಕೇಳದ ಶಿವಶರ್ಮನು ಮತ್ತೊಂದುಲೋಕವಂಕಂಡು ಬೆಸಗೊಳಲಾಗಣಂಗಳಿಂತೆಂದರು. ಇದು ವಿದ್ಯಾಧರಲೋಕವು ವಿದ್ಯಾರ್ಥಿಗಳಿಗೆ ಅನ್ನಪಾನಾದಿಗಳನ್ನಿಕ್ಕಿ ಶಿಷ್ಯರನ್ನು ತಮ್ಮ ಮಕ್ಕಳೊಡನೆ ಸರಿಯಾಗಿ ನಾನಾವಿದ್ಯೋಪದೇಶವಂ ಮಾಡಿದವರು, ಅಲಂಕಾರ ಕನ್ಯಾದಾನವಂಮಾಡಿದವರು, ಫಲವನಪೇಕ್ಷಿಶಿ ಇಷ್ಟದೇವರ ಪೂಜೆಯಂಮಾಡಿದವರು, ಇಲ್ಲಿ ವಿದ್ಯಾಧರರಾಗಿಹರೆಂದು ಗಣಂಗಳು ಕಥೆಯಂ ಹೇಳುತ್ತಿರಲು, ದೇವದುಂದುಭಿಗಳು ಮೊಳಗೆ, ವಿಮಾನಾರೂಢನಾಗಿ ಸೌಮ್ಯದೇಹವುಳ್ಳವನಾಗಿ

ಚಿತ್ರಗುಪ್ತಮೊದಲಾದ ಧರ್ಮಜ್ಞರೊಡಗೊಂಡು ಕೊಂಚವಾದ ಪರಿವಾರವುಳ್ಳವನಾಗಿ ಗಣಂಗಳನ್ನೂ ಶಿವಶರ್ಮನನ್ನೆದುರ್ಗೊಂಬುವನಾಗಿ ಯಮನು ಬಂದಿಂತೆಂದನು. ಎಲೈ ಶಿವಶರ್ಮ ನೀನು ಪ್ರಾಜ್ಞನು ಬ್ರಾಹ್ಮಣರಿಗುಚಿತವಾದ ವೇದಶಾಸ್ತ್ರಪುರಾಣಗಳನ್ನೋದಿ ಶರೀರವಸ್ಥಿರವೆಂದು ತಿಳಿದು ಧರ್ಮದಿಂ ನಡೆದು ಪುಣ್ಯತೀರ್ಥದಲ್ಲಿ ಶರೀರತ್ಯಾಗವಂ ಮಾಡಿದೆ. ಇದು ವಿವೇಕಿಯಾದುದಕ್ಕೆ ಫಲವಲ್ಲವೆ, ನಿಮ್ಮಂಥಾ ವಿವೇಕಿಗಳ ದೇಹಪುತ್ರಮಿತ್ರಕಳತ್ರಾದಿಗಳೆಲ್ಲವೂ ಅನಿತ್ಯವೆಂದು ತಿಳಿದು ವ್ಯರ್ಥವಾಗಿ ಕಾಲಕ್ಷೇಪವಂ ಮಾಡದೆ ಧರ್ಮವನೇ ಮಾಳ್ಪರು. ನಿನ್ನ ಪುಣ್ಯದಿಂ ವಿಷ್ಣುಗಣಂಗಳು ನಿನಗೆಣೆಯಾದರು, ನಿನ್ನ ಪುಣ್ಯಕ್ಕೆ ಸರಿಯಿಲ್ಲ, ನಾನು ನಿಮಗೆ ಮಾಡತಕ್ಕ ಊಳಿಗವೇನು, ನಿಮ್ಮ ದರ್ಶನದಿಂದ ನಾನು ಧನ್ಯನಾದೆನೆಂದು ಬಿನ್ನೈಸಲು, ಗಣಂಗಳು ಯಮನಂ ಸಂತೋಷಿಸಿ ಕಳುಹಲಾ ಯಮನು ತನ್ನ ಪಟ್ಟಣವಂ ಪೊಕ್ಕನು. ತದನಂತರದಲ್ಲಿ ಗಣಂಗಳಿಗೆ ಶಿವಶರ್ಮನಿಂತೆಂದನದೆಂತೆಂದೆನೆ. ಭೂಲೋಕದಲ್ಲಿರುವ ಜನರು ಯಮನು ಕ್ರೂರನೆಂದು ಬಣ್ಣಿಪರು. ಯಮನು ನನ್ನ ಕಣ್ಣಿಗೆ ಸೌಮ್ಯಮೂರ್ತಿಯಾಗಿಯೂ ಧರ್ಮಯುಕ್ತಮಪ್ಪ ವಾಕ್ಯವುಳ್ಳವನಾಗಿಯೂ ಆತನ ಪಟ್ಟಣವು ರಮ್ಯವಾಗಿಯೂ ಕಾಣಿಸುತ್ತಿದೆ. ಈತನಿಗೆ ಮತ್ತು ಸೌಮ್ಯರೂಪವುಂಟೆ, ಈ ಯಮಲೋಕವನೇನು ಪುಣ್ಯವಮಾಡಿದವರು ನೋಡರೊ ಇದೆಲ್ಲವನೂ ಬುದ್ಧಿಗಲಿಸಬೇಕೆನಲು. ಗಣಂಗಳು ಶಿವಶರ್ಮಂಗಿಂತೆಂದರು. ನಿಮ್ಮಂಥಾ ಪುಣ್ಯಾತ್ಮರಿಗೆ ಯಮನು ತನ್ನ ಸ್ವಭಾವದಿಂದಲೇ ಸೌಮ್ಯನಾಗಿರ್ಪನು. ಈ ಯಮನು ಪಾಪಿಗಳಿಗೆ ಕೆಂಪಾದ ಚಕ್ರಕಣ್ಣು, ಕೋರೆದಾಡೆಯಿಂ, ತೆರೆದಬಾಯಿ, ಮಿಂಚಿನಂಥಾ ಕೂದಲು, ಕಾಳದೇಹ, ಸಿಡಿಲಿನಂಥಾ ಧ್ವನಿ. ಕೈಯಲ್ಲಿ ಕಾಲದಂಡ, ಗಂಟಿಕ್ಕಿದ ಹುಬ್ಬುಗಳೂವುಳ್ಳವನಾಗಿ ತನ್ನ ಕಿಂಕರರಂ ಕರೆದು ಪಾಪಿಗಳನ್ನು ಬಾಧಿಸಹೇಳಿ ಕಟ್ಟುಮಾಡುವನದೆಂತೆನೆ. ಇವನ ಹಿಡಿ, ಇವನ ಕಟ್ಟಿಹಾಕು, ಇವನಂ ಕೆಡವು, ದುರಾಚಾರಿಯಾದಿವನ ತ್ರಿಯಂ ಚಮ್ಮಟಿಗೆಯಿಂದ ಬಡಿ, ಈ ಮುಶ್ರಲನಂ ಅರೆದು ಮೇಲೆಬಗೆ, ಇವನ ಕಟಪಾಯ ಕೀಳು, ಇವನ ಕೊರಳಿಗೆ ಉರುಳುಹಾಕು, ಮರಕ್ಕೆ ಏರಗಟ್ಟು, ಇವನ ತಲೆಯಂ ಗರಗಸದಿಂದ ಕೊಯಿ, ಇವನ ಹಾಲಿನ ಮೇಲೆ

ಹಿಮ್ಮಡಿಯಿಂದೊದೆ, ಪರಸ್ತ್ರೀಗಮನವಂಮಾಡಿದವನ ಕೈಯನುಕೊಯಿ
ಪರಸ್ತ್ರೀಯರ ಅಂಗಗಳಂ ಸಖಕ್ಷತ್ರಂಗಳಂಮಾಡಿದವನ ರೋಮಕೂ
ಪಗಳಲ್ಲಿ ಸೂಜಿಗಳನೇರಿಸು, ಪರಸ್ತ್ರೀಯರಮುಖವನಾಘ್ರಾಣಿಪ ಇವ
ನ ಮುಖದ ಮೇಲೆ ಉಗಳು, ಪರಾಪವಾದಿಯಾದಿವನ ಬಾಯೊಳಗೆ ದಶೀ
ಹೆಟ್ಟು. ಮತ್ತು ಹುರಿಯೋಡಿನಲ್ಲಿ ಮಳಲೊಡನೆ ಕಡಲೆಯಂ ಹುರಿವಂತೆ
ಹುರಿ, ಎಲೆ ವಿಶ್ವತಮುಖನೆ ಈ ಪರಸಂತಾಪವಂಮಾಡಿದವನ ಓಡಿನಲ್ಲಿ ಬಾ
ಡಿಸು, ಎಲೊ ಕ್ರೂರಲೋಚನ ಪಾಪವಿಲ್ಲದವರ ಮೇಲೆ ಪಾಪವನಾರೋ
ಪಿಸಿದವನ ಬಾಯೊಳಗೆ ಕೀವು, ರಕ್ತವತುಂಬು, ಎಲೈ ಉತ್ಕಟನೆ ಕೊಡ
ದೇಲೆ ಪರರವಸ್ತುಗಳಂ ಮುಟ್ಟಿದವನ ಕೈಯ್ಯಂ ಎಣ್ಣೆಯಲ್ಲಿ ಅದ್ದಿಸುಡು,
ಎಲೈ ಭೀಷಣ ದೇವ, ಗುರು ನಿಂದೆಯಂ ಮಾಡಿದವನ ಮುಖದಲ್ಲಿ ಲೋ
ಹದ ಸಲಾಕಿಗಳಂ ಕಾಶಿಹೊಡೆ, ಪರರ ಮರ್ಮವಂ ಪರರ ಗೃಹಛಿದ್ರವಂ
ಪ್ರಕಟವಮಾಡಿದವನ ದೇಹದ ಸಂಧಿಸಂಧಿಗಳಲ್ಲಿ ಕಾದಕಬ್ಬಿಣದ ಮೊಳೆಗ
ಳಂಬಿಗಿ, ಎಲೊ ದುರ್ಮುಖ ಪರರಿಗೀವವಸ್ತುವಿಗೆ ವಿಘ್ನವಾಪವನ ನಾಲಿಗೆ
ಯಂ ಕೊಯ್ಯಿ, ಎಲೈ ಕ್ರೋಡಾಸ್ಯ ದೇವಬ್ರಾಹ್ಮಣರವಡವೆಯಂ ಮು
ಟ್ಟುವನ ಹೊಟ್ಟೆಯಂಸೀಳಿ ಅಮೇಧ್ಯದೊಳಗಣ ಕ್ರಿಮಿಯಂ ತುಂಬು,
ಎಲೆ ಅಂಧಕದೇವಬ್ರಾಹ್ಮಣರಿಗಲ್ಲದೆ ತನ್ನ ಹೊಟ್ಟೆಗೆ ತಾನು ಅಡಿಗೆಯಂ
ಮಾಡಿಕೊಂಡು ಉಂಬವನ ಕುಂಭಿಯಪಾಕದಲ್ಲಿ ಕುದಿಸು, ಎಲೆ ಉಗ್ರಾ
ಸ್ಯನೆ ಈ ಶಿಶುಹತ್ಯಗಾರನ ವಿಶ್ವಾಸಘಾತುಕನ ಕೃತಘ್ನನ ಮಹಾರೌರವ
ದಲ್ಲಿ ಹಾಕು ಬ್ರಹ್ಮಹತ್ಯಗಾರನನ್ನು ಅಂಧತಾಮಿಶ್ರದಲ್ಲಿ ಸುರಾಪಾನಿಯಂ
ಕೀವು ರಕ್ತದಗುಂಡಿಯಲ್ಲಿ ಸುವರ್ಣಸ್ತೇಯಿಯಂಬವನಂ ಕಾಲಸೂತ್ರದಲ್ಲಿ
ಹಾಕು ಗುರುಪತ್ನೀಗಮನವಂ ಮಾಡಿದವನ ಮಹಾರೌರವದಲ್ಲಿ ಹಾಕಿ,
ಸುರಾಪಾನಸ್ವರ್ಣಸ್ತೇಯ ಗುರುಪತ್ನೀಗಮನ, ಬ್ರಹ್ಮಹತ್ಯಾ ಈ ಪಾತಕಂ
ಗಳ ಮಾಡಿದ ನಾಲ್ವರಕೂಡೆ ಒಂದುವರ್ಷ ಈ ನಾಲ್ವರಸಂಗವಂ ಮಾಡಿದ
ಪಂಚಮಮಹಾಪಾತಕನ ಒಂದೊಂದುವರ್ಷ ಪ್ರತ್ಯೇಕ ಪ್ರತ್ಯೇಕವಾಗಿ
ನಾಲ್ವರೊಡಗೂಡಿ ಇದ್ದವರನ್ನೂ ಕತ್ತಿಗಳು, ಅಲಗು ಮೇಲಾಗಿ ನೆಡಿಶಿವ
ನ ರಕದಲ್ಲಿ ಬಾಧಿಸು, ಕಾವಯಣ್ಣೆಯೊಳಗದ್ದಿ ಕಬ್ಬಿಣದ ಮೂರ್ತಿ ಕಾಗೆಗಳ

ಕ್ರೈಯ್ಯಲ್ಲಿ ಪ್ರತಿದಿನವೂ ಚುಚ್ಚಿಸು ಒಂದುಕಲ್ಪಪರ್ಯಂತರವೂ ಬಾಧಿಸು ಎಲೆ ಮಹಾಭಜನೆ ಸ್ತ್ರೀಹತ್ಯಾ, ಗೋಹತ್ಯಾ, ಶಿಶುಹತ್ಯಾ, ಬ್ರಹ್ಮಹತ್ಯಾ, ಅಶ್ವಹತ್ಯಾ ಈ ಪಂಚಮಹಾಪಾತಕಂಗಳ ಮಾಡಿದವರನೂ ಬೂರಗಮರ ದಲ್ಲಿ ಕಾಲುಮೇಲಾಗಿ ಯೇರಗಟ್ಟಿ ಕೊಲ್ಲಿರಿ ಇವರ ಚರ್ಮವನ್ನೂ ಕಾದಯಿ ಕ್ಕಳಗಳಿಂದ ಕೀಳಿ ಸಭಾ, ಮಂತ್ರೀ, ಸಂಗಾತಿ, ವಿಶ್ವಾಸಿ ಇವರ ಹೆಂಡಿರ ತಬ್ಬಿಕೊಂಡವನ ಭುಜಗಳ ಕಡಿದು ಜಾಲಕೀಲವೆಂಬ ಮಹಾನರಕದಲ್ಲಿ ಹಾ ಕೀ, ಪರಕ್ಷೇತ್ರ ಪರಗೃಹಗಳ ದಹಿಸಿದವನ ಪುಣ್ಯತೀರ್ಥದಲ್ಲಿ ಮುಳುಗ ದವನಿಗೆ ನಾಯಿಜೊಲ್ಲ ಕುಡಿಸೀ, ಗರ್ಭಹತ್ಯ ಮಾಡಿದವನ ಶೂಲಪಾಕನರಕ ದಲ್ಲಿ ಹಾಕೀ, ಪರರ ದುಃಖಪಡಿಸಿದವನಂ ರಸದ್ರವ್ಯಂಗಳಂ ಮಾರಿದ ಬ್ರಾಹ್ಮ ಣನಂ ಕಬ್ಬಿಣದ ಗಾಣದಲ್ಲಿ ಹಾಕಿ ತಿರುಹಿರಿ, ಅರಸಾಗಿ ತನ್ನ ದೇಶದ ಪ್ರಜೆ ಗಳನೂ ಅಪರಾಧವಿಲ್ಲದೆ ಬಾಧಿಸುವ ನೃಪನ ಅಂಧಕೂಪನರಕದಲ್ಲಿ ಹಾಕೀ, ಎಲೆ ಹಲಾಯುಧ ಮಗಳ ಮಾರಿಕೊಂಡವನ ವರಳೊಳಗೆ ಹಾಕಿ ಕಬ್ಬಿ ಣದ ವನಕೆಯಲ್ಲಿ ಕುಟ್ಟೀ. ನಿಮಿತ್ತವಿಲ್ಲದೆ ಬ್ರಾಹ್ಮಣರ ಹಳಿದವನ ಗುರು ಹಿರಿಯರು ಬ್ರಾಹ್ಮಣರ ಸಮೂಹದಲ್ಲಿ ಉನ್ನತಪೀಠದಲ್ಲಿ ಕುಳಿತವನ ಅಧೋಮುಖ ಮಹಾನರಕದಲ್ಲಿ ಹಾಕೀ, ನಾನೂ ಬ್ರಾಹ್ಮಣನುಯುಂದು ಮರೆಮಾಚಿ ದಾನವತಕ್ಕೊಂಡ ಕ್ಷತ್ರಿಯು, ವೈಶ್ಯರನ್ನೂ ಅತಿನರಕವೆಂಬ ನರಕದಲ್ಲಿ ಹಾಕು, ಹಾಲು, ತುಪ್ಪ, ಮೊಸರು, ಸಜ್ಜಿಗೆ, ಲವಣ, ತಕ್ರ, ಬೆಲ್ಲ, ಸಕ್ಕರೆ ಇವುಮೊದಲಾದ ರಸದ್ರವ್ಯಗಳ ಮಾರುವಬ್ರಾಹ್ಮಣರನ್ನು ಕಾದಕರ್ದಮದಲ್ಲಿ ಹಾಕೀ, ಕುಲಗೇಡಿಯಾಗಿ ಪರಪುರುಷರ ತಬ್ಬಿಕೊಂ ಡವಳ ಕಾದ ಕಬ್ಬಿಣದ ಪುರುಷನ ಆಲಿಂಗನವಂ ಮಾಡಿಸೀ, ಎಲೋ ದು ರ್ದರ್ಶನನೆ ಒಂದು ನಿಯಮವನ್ನು ಮಾಡಿ ಹಿಡಿದು ನಿರ್ನಿಮಿತ್ತವಾಗಿ ಬಿಟ್ಟ ವನ ತುಂಬಿಗಳು ಕಚ್ಚುವ ನರಕದಲ್ಲಿ ಹಾಕಿ ಎಂದು ಈ ರೀತಿಯಲ್ಲಿ ತನ್ನ ಭಟರಿಗೆ ಆಜ್ಞಾಪಿಸಿ, ಮತ್ತೆ ಪುಣ್ಯಾತ್ಮರಾದವರ ಉಪಚರಿಸುವದನ್ನೂ ಕೇಳು ಪುಣ್ಯಪುರುಷರು ತನ್ನ ಪಟ್ಟಣಕ್ಕೆ ಬರಲು ತಾನು ಸೌಮ್ಯರೂ ಪನಾಗಿ ಚಿತ್ರಗುಪ್ತರು ಸೌಮ್ಯವಾದ ಭಟರು ಸಹಾ ಬಂದು ಎಲೆ ತಂದೆ ಗಳಿರಾ, ಎಲೆ ಅಣ್ಣಗಳಿರಾ, ಎಲೆ ಮಹಾಪುರುಷರಿರಾ, ನಿಮ್ಮ ದರ್ಶನದಿಂ

ದೆನ್ನದೇಶವೂ ಪವಿತ್ರವಾಯಿತು ನಿಮ್ಮ ಪಾದರೇಣು ಬಿದ್ದ ಎನ್ನಪಟ್ಟ
ಣವು ಪವಿತ್ರವಾಯಿತು ಎಂದು ಪ್ರಿಯವಾಕ್ಯದಿಂ ಸಂತುಷ್ಟಿಬಡಿಶಿ ಚಿತ್ರಗು
ಪ್ತರಿಂದ ಅವರು ಮಾಡಿದ ಪುಣ್ಯವಕೇಳುತ್ತಿದ್ದನು. ಎಂಥಾಪುಣ್ಯಗ
ಳೆಂದರೆ ಎಲೈ ಧರ್ಮರಾಜನೆ ಕೇಳು ಈ ಅರಸು ತನ್ನದೇಶದ ಪ್ರಜೆಗಳನ್ನು
ತನ್ನ ಮಕ್ಕಳವ್ವೋಲು ಪರಿಪಾಲಿಸಿದವನು ಅಪರಾಧಕ್ಕೆ ತಕ್ಕಹಾಗೆ ದಂಡಿ
ಸುವನು, ಇವನ ರಾಜ್ಯದಲ್ಲಿ ವರ್ಣಾಶ್ರಮ ಧರ್ಮಂಗಳು ಚನ್ನಾಗಿ ನಡೆವವು
ಇವನು ದೇವಬ್ರಾಹ್ಮಣಭಕ್ತ, ಇವ ದೇವಬ್ರಾಹ್ಮರವಡವೆಯ ವಿಷದಂತೆ
ಕಂಡವನು, ಇವನು ಸಕಲಧರ್ಮದಲ್ಲಿ ನಡದವನು, ಇವನು ಯಜ್ಞಾದಿಷಟ್ಕ
ರ್ಮ ಮಾಡಿದ ಬ್ರಾಹ್ಮಣನು, ಇವನ ಕರೆ ಧನ ನಿಕ್ಷೇಪ ಬ್ರಾಹ್ಮಣರ ಮುಂ
ಜಿ, ಮದುವೆ, ದೇವತಾಪ್ರತಿಷ್ಠೆ, ವನ, ಭಾವಿ, ಕೆರೆ, ತೋಪು ಇವಂ
ಮಾಡಿದವನು, ಇವ ಸಕಲರಲ್ಲಿ ಯೂ ದಯವಂಮಾಡಿದವನು, ಇವನು
ಪರಸ್ತ್ರೀ ಪರದ್ರವ್ಯವಕಂಡರೆ ಭೀತಿಯುಳ್ಳವನು, ಇವ ದಾಕ್ಷಿಣ್ಯಪರನು,
ಇವ ಅರ್ಥಸಹಾಯ ವಾಕ್ಸಹಾಯ ಶರೀರಸಹಾಯದಿಂದ ಧರ್ಮವಮಾಡಿ
ಕೊಂಡವನು, ಇವ ಮುಂಜಿ ಮದುವೆಯಲ್ಲಿ ಯೂ ಮನುಷ್ಯರಿಗೆ ಪ್ರಾಣ
ಹೋಗುವ ಉಪದ್ರವಗಳು ಬಂದಾಗಲೂ ಅನೃತವನಾಡಿ ಕಡೆಹಾಯಿಶಿದ
ಪುಣ್ಯಾತ್ಮನು, ಇವನು ಗೋದಾನ ಭೂದಾನ ಕನ್ಯಾದಾನ ಅನ್ನದಾನ ಉದ
ಕದಾನ, ವಸ್ತ್ರದಾನ, ಹಿರಣ್ಯದಾನಾದಿ ದಾನಗಳಂ ಮಾಡಿದವನು, ಇವರು
ಗಳನ್ನು ವಿಮಾನಂಗಳಲ್ಲಿ ಇವರ ಪುಣ್ಯಕ್ಕೆ ತಕ್ಕ ಪುಣ್ಯಲೋಕಂಗ
ಳಲ್ಲಿ ಇರಿಶಿ ಬನ್ನೀಯೆಂದು ತನ್ನ ಸೌಮ್ಯವಾದ ಭಟರಿಗೆ ಹೇಳಿ ಪುಣ್ಯವ
ಮಾಡಿದ ರಾಯರಂ ದೇವೇಂದ್ರನ ಕೆಲದಲ್ಲಿ ದಿವ್ಯಸಿಂಹಾಸನದಲ್ಲಿ ಕುಳ್ಳಿರಿಶಿ
ಬನ್ನೀ, ಈ ರಾಯರು ಯಾರ್ಯಾರೆಂದರೆ ಕೇಳಿರೈ ಇವ ಸುಧನ್ವನು, ವೃಷ
ಪರ್ವನು, ಜಯದ್ರಥನು, ರುಚಿ, ಸಹಜಿತು, ಕುಕ್ಷಿ, ದೃಢಧನ್ವಾ, ರಿಪುಂ
ಜಯ, ಯುವನಾಶ್ವ, ದಂತವಕ್ತ್ರ, ರಿಪುಮರ್ದನ, ಕರಂಧಮ, ಧರ್ಮಸೇನ
ಪರಮರ್ದನ, ಪರಾಂತಕ ಇವರು ಮೊದಲಾದರಾಯರು ಧರ್ಮದಿಂ ರಾಜ್ಯ
ವಾಳಿದವರು. ಧರ್ಮವಿಚಾರವ ಬಲ್ಲವರೂ ಯೆಂದು ತನ್ನ ಭಟರಿಗೆ ಹೇಳಿ
ಮತ್ತೂ ಯಮನು ತನ್ನಭಟರಂಕರದು ಹರಿಹರನಾಮಂಗಳೇಕವಾದಸ್ತೋ

ತ್ರವುಂಟು ಈ ಸ್ತೋತ್ರವನ್ನಾರು ಪಠಿಸ್ತಾರೋ ಅವರ ದಾರಿಯು ಹೋಗದೆ ಬನ್ನೀಯುಂಬನೂ ಆ ಸ್ತೋತ್ರ ಹ್ಯಾಗಂದರೆ ಶ್ಲೋ॥ ಹರಿಹರಸ್ತೋತ್ರ॥ ಗೋವಿಂದಮಾಧವ ಮುಕುಂದಹರೇ ಮುರಾರೇ ಶಂಭೋಶಿವೇಶ ಶಶಿಶೇಖರ ಶೂಲಪಾಣೇ। ದಾಮೋದರಾಚ್ಯುತ ಜನಾರ್ದನ ವಾಸುದೇವತ್ಯಾಜ್ಯಾಭಟಾಯ ಇತಿಸಂತತಮಾಮನಂತಿ ॥೧॥ ಗಂಗಾಧರಾಂಧಕರಿಪೋಹರ ನೀಲಕಂಠ ವೈಕುಂಠಕೈಟಭರಿಪೋಕಮಠಾಬ್ಜಪಾಣೇ। ಭೂತೇಶಖಂಡಪರಶೋ ಮೃಡ ಚಂಡಿಕೇಶ ತ್ಯಾಜ್ಯಾಭಟಾಯ ಇತಿ ಸಂತತಿಮಾಮನಂತಿ ॥೨॥ ವಿಷ್ಣೋನೃಸಿಂಹಮಧುಸೂದನಚಕ್ರಪಾಣೇ ಗೌರೀಪತೇ ಗಿರಿಶಶಂಕರಚಂದ್ರಚೂಡ। ನಾರಾಯಣಾಸುರನಿಬರ್ಹಣಶಾರ್ಙ್ಗಪಾಣೇ ತ್ಯಾಜ್ಯಾಭಟಾಯ ಇತಿ ಸಂತತಮಾಮನಂತಿ ॥೩॥ ಮೃತ್ಯುಂಜಯೋಗ್ರವಿಷಮೇಕ್ಷಣಕಾಮಶತ್ರೋ ಶ್ರೀಕಾಂತಪೀತವಸನಾಂಬುದನೀಲವರ್ಣ॥ ಈಶಾನಕೃತ್ತಿವಸನತ್ರಿದಶೈಕನಾಥ ತ್ಯಾಜ್ಯಾಭಟಾಯ ಇತಿಸಂತತಮಾಮನಂತಿ॥೪॥ಲಕ್ಷ್ಮೀಪತೇಮಧುರಿಪೋಪುರುಷೋತ್ತಮಾದ್ಯ ಶ್ರೀಕಂಠದಿಗ್ವಸನಶರ್ವಪಿನಾಕಪಾಣೇ। ಆನಂದಕಂದಧರಣೀಧರಪದ್ಮನಾಭ ತ್ಯಾಜ್ಯಾಭಟಾಯ ಇತಿ ಸಂತತಮಾಮನಂತಿ॥೫॥ ಸರ್ವೇಶ್ವರತ್ರಿಪುರಸೂದನದೇವದೇವ ಬ್ರಹ್ಮಣ್ಯದೇವಗರುಡಧ್ವಜಶಂಖಪಾಣೇ। ತ್ರ್ಯಕ್ಷೋರಗಾಭರಣಬಾಲಮೃಗಾಂಕಮೌಳೇ ತ್ಯಾಜ್ಯಾಭಟಾಯ ಇತಿ ಸಂತತಮಾಮನಂತಿ ॥೬॥ ಶ್ರೀರಾಮರಾಘವ ರಮೇಶ್ವರರಾವಣಾರೇ ಭೂತೇಶಮನ್ಮಥರಿಪೋಪ್ರಮಥಾಧಿನಾಥ। ಚಾಣೂರಮರ್ದನಹೃಷೀಕಪತೇ ಮುರಾರೇತ್ಯಾಜ್ಯಾಭಟಾಯ ಇತಿ ಸಂತತಮಾಮನಂತಿ ॥೭॥ ಶೂಲಿನ್‌ಗಿರೀಶ ರಜನೀಶ ಕಳಾವತಂಸ ಕಂಸಪ್ರಣಾಶಕರಸರ್ವಗಕೇಶಿನಾಶಿನ್॥ಭರ್ಗತ್ರಿನೇತ್ರಭವಭೂತಪತೇಮುರಾರೇ ತ್ಯಾಜ್ಯಾಭಟಾಯ ಇತಿಸಂತತಮಾಮನಂತಿ॥ ಗೋಪೀಪತೇಯದುಪತೇ ವಸುದೇವಸೂನೋ ಕರ್ಪೂರಗೌರವೃಷಭಧ್ವಜಫಾಲನೇತ್ರ॥ ಗೋವರ್ಧನೋದ್ಧರಣಧರ್ಮಧುರೀಣ ಗೋಪತ್ಯಾಜ್ಯಾಭಟಾಯ ಇತಿಸಂತತಮಾಮನಂತಿ ॥೯॥ ಸ್ಥಾಣೋತ್ರಿಲೋಚನಪಿನಾಕಧರಸ್ಮರಾರೇ ಕೃಷ್ಣಾನಿರುದ್ಧಕಮಲಾಕರಕಲ್ಮಷಾರೇ। ವಿಶ್ವೇಶ್ವರತ್ರಿಪಥಗಾರ್ದ್ರಜಟಾಕಲಾಪತ್ಯಾಜ್ಯಾಭಟಾಯ ಇತಿ ಸಂತತಮಾಮನಂತಿ ॥೧೦॥ ಇಂತೆಂಬ

ನೂರೆಂಟಾದ ಹರಿಹರನಾಮಂಗಳೆಂಬ ಮಣಿಗಳುಳ್ಳ ಸಾತ್ವಿಕಗುಣಂಗಳೆಂಬ ಘುಟ್ಟಧಾರದಿಂ ಪೋಣಿಶಿ ಈ ಕಂಠಮಾಲೆಯನ್ನು ಆರುಕೊರಳಲ್ಲಿ ಧರಿಶ್ಯಾರೋ ಅವರು ನಮ್ಮಂ ನೋಡರೂ, ಅವರನ್ನು ನೀವು ತಡಹಬೇಡೀ ಎಂದು ಯಮನು ತನ್ನ ಭೃತ್ಯರ್ಗೆ ಬುದ್ಧಿಯಂ ಹೇಳಿದನು, ಅದರಿಂದ ಈ ಸ್ತೋತ್ರವಂ ಪಠಿಶಿದವರು ಮರಳಿ ತಾಯಿಯ ಮೊಲೆ ಹಾಲುಣರೆಂದು ಗಣಂಗಳು ಶಿವಶರ್ಮಂಗೆ ಬುದ್ಧಿಗಲಿಸಲಾ ಶಿವಶರ್ಮನು ಕೇಳುತ್ತಾ ಮುಂದೆ ಕಾಣಪಡುವ ಅಪ್ಸರಲೋಕವಂ ಕಂಡನೆಂದು ಅಗಸ್ತ್ಯನು ತನ್ನ ಸತಿಗೆ ಬುದ್ಧಿಗಲಿಶಿದನೆಂದು ವ್ಯಾಸರು ತನಿಗೆನಿರೂಪಿಶಿದ ಅರ್ಥವಂ ಸೂತಪುರಾಣೀಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ ॥ ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥವರ್ಣನದಲ್ಲಿ ಪಿಶಾಚಲೋಕ, ಗುಹ್ಯಕಲೋಕ, ಗಂಧರ್ವವಿದ್ಯಾಧರಲೋಕ ಯಮಲೋಕವರ್ಣನೆಯೆಂಬ ಎಂಟನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ.

ಎಂಟನೇ ಅಧ್ಯಾಯಂ ಸಂಪೂರ್ಣಂ.

ಶ್ರೀರಸ್ತು.

ಶ್ರೀ ವಿಶ್ವೇಶ್ವರಾಯ ನಮಃ

ಒಂಭತ್ತನೇ ಅಧ್ಯಾಯಂ.

ಅಪ್ಸರೋಲೋಕ ಸೂರ್ಯಲೋಕವರ್ಣನೆ.

ಅನಂತರದಲ್ಲಿ ಶಿವಶರ್ಮನು ಅಪ್ಸರೋಲೋಕವಂ ಕಂಡು ರೂಪು ಲಾವಣ್ಯ ಸೊಬಗು ದಿವ್ಯಾಲಂಕಾರಭೋಗಂಗಳುಳ್ಳ ಈ ಪುರುಷರು ಈ ಸ್ತ್ರೀಯರ್ಯಾರೆಂದು ಬೆಸಗೊಳಲು ಗಣಂಗಳಾತೆಂದರು, ನೃತ್ಯಗೀತ

ಕಾಮಶಾಸ್ತ್ರ, ಕಾಮಕೇಳಿ, ಕಳೇಜಣಾಜು, ನವರಸಹಾಸ್ಯ, ಭಾವಜಾಣನುಡಿ, ನಾನಾದೇಶಭಾಷೆ, ಪುರುಷವಂಚನೆ, ಪರಿಹಾಸಕ, ನಿದ್ರಾಭಂಗ, ಪಾಂಡಿತ್ಯ ಇವು ಮೊದಲಾದ ತಮ್ಮ ಪ್ರೌಢಿಮೆ ಚಾತುರ್ಯಗಳಿಂದಲೂ ಪ್ರಾಯದ ಪುರುಷರನ್ನು ವಶವಂ ಮಾಡಿಕೊಂಬ ಮದನಬಾಣಂಗಳಾದ ಸಮುದ್ರಮಥನದಲ್ಲಿ ಹುಟ್ಟಿದ ಸ್ವರ್ಗಫಲವಂ ಬಯಸಿ ಯಜ್ಞಾದಿ ಕ್ರಿಯೆಗಳಂ ಮಾಡಿದವರ್ಗೆ ಪ್ರಿಯರಾದ ಊರ್ವಶೀ, ಮೇನಕಾ, ರಂಭೆ, ಚಂದ್ರರೇಖೆ, ತಿಲೋತ್ತಮೆ, ವಸುಷ್ಕಲೇ ಕಾಂತಿಮತಿ ಶೀಲವತಿ ಉತ್ಪಲಾವತಿ ಅಲಂಬುಸಾ ಗುಣವತೀ ಸ್ಥೂಲಕೇಶೀ ಕಲಾವತೀ ಕಲಾನಿಧೀ ಕರ್ಪೂರಲತೆ ಅನಂಗತಿಲಕೆ ಮದನಮೋಹಿನೀ ಚಕೋರಾಕ್ಷಿ ಚಂದ್ರಕಳೆ ಮಾನಿನಿ ಮೋಹನೆ ಗ್ರಾವದ್ರಾವೆ ತಪೋದ್ವೇಷಿ ಚಾರುಗಾತ್ರಿ ರಾಜಸೂಯಾಧ್ವರಿಜೀವನೆ ಶುಭಾನನೆ ಕ್ರತುಫಲದೆ ಕ್ರತುಶುಲ್ಕೆ ತಪಶ್ಶುಲ್ಕೆ ದಾನಶುಲ್ಕೆ ಹಿಮಾವತಿ ಪಂಚಾಶ್ವಮೇಧೆ ಅಷ್ಟಾಗ್ನಿಷ್ಟೋಮೆ ಮೇಧಾಜಪೆ ಇವರು ಮೊದಲಾದ ಅರವತ್ತುನಾಲ್ಕು ಸಾವಿರಮಂದಿ ಅಪ್ಸರಸ್ತ್ರೀಯರು ಈ ಲೋಕದಲ್ಲಿ ಇಹರು, ಮಾಸೋಪವಾಸವಂ ಮಾಡುತ್ತಲೂ ನಡುವಂತರದಲ್ಲಿ ದೈವವಶದಿಂದ ಬಿಟ್ಟವರಿವರು, ಸಾಂಗವಾಗಿ ಕಾಮ್ಯವ್ರತಂಗಳಂ ಮಾಡಿದ ಸ್ತ್ರೀಯರಿವರು, ಪಾತಿವ್ರತ್ಯದಲ್ಲಿ ಇರಲೂ ದುಷ್ಟಪುರುಷನು ಬಲಾತ್ಕಾರದಿಂದನುಭವಿಸಲಾಗ ತನ್ನ ಪತಿಬುದ್ಧಿಯಿಂದಲಿದ್ದವಳಿವಳು, ತನ್ನ ಪತಿ ಪಯಣವಂ ಪೋಗಲೂ ಕೆಲವುಕಾಲ ನಿಯಮದಿಂದಿರ್ದು ಒಮ್ಮೆ ವ್ರತಗೆಟ್ಟವಳಿವಳೂ, ಪರಿಮಳದ ಪುಷ್ಪ ಸುಗಂಧ ಸುವಸ್ತ್ರ ಕರ್ಪೂರತಾಂಬೂಲ ಪಟ್ಟೆಮಂಚ ಸುಪ್ಪತ್ತಿಗೆ ಮೊದಲಾದ ನಾನಾವಿಧ ಭೋಗಸಾಧನಗಳನ್ನು ಗ್ರಹಣ ಸಂಕ್ರಾಂತಿ ವ್ಯತೀಪಾತ ಮೊದಲಾದ ಪುಣ್ಯಕಾಲಗಳಲ್ಲಿ ಬ್ರಾಹ್ಮಣದಂಪತಿಗಳನ್ನು ಅರ್ಚನೆಯಂಮಾಡಿ ಧನಸಹಿತ ದಾನವಂಮಾಡಿದ ಸ್ತ್ರೀಯರಿವರು. ಕನ್ಯೆಯಾಗಿದ್ದಾಗ ಬಲಾತ್ಕಾರದಿಂದ ಪುರುಷನನುಭವಿಸಲೂ ಅಂದು ಮೊದಲಾಗಿ ಆತನೇಪತಿಯೆಂದು ನಿಯಮದಲ್ಲಿದ್ದು ಮೃತವಾದವಳಿವಳು ಹೀಗೆಂದು ಅಪ್ಸರೆಯರ ಗುಣಂಗಳಂ ಪೇಳೆ ಕೇಳುತ್ತಾ ಶಿವಶರ್ಮನು ಮುಂದೆ ಸೂರ್ಯಲೋಕಮಂಕಂಡನು. ಅಲ್ಲಿ ಸೂ

ರ್ಯ ಹ್ಯಾಗೆ ಇದ್ಧಾನೆಂದರೆ ಸೇವಿಸುವ ಕಿನ್ನರಗಣಂಗಳಿಂದ ದೇದೀಪ್ಯಮಾನವಾದ ಕರದ್ವಯದಿಂದ ಕಮಲಂಗಳಂ ಧರಿಸಿ ಒಂಭತ್ತು ಸಾವಿರ ಯೋಜನ ವಿಸ್ತಾರವುಳ್ಳ ಏಳು ಕುದುರೆಯಂ ಕಟ್ಟಿದ ರಥವನೇರಿ ಕುದುರೆಗಳ ಹಗವಂ ಪಿಡಿದು ರಥನಡೆಸುವ ಅತಿಕಾಂತಿಯುಳ್ಳ ಸಾರಥಿಯಾದ ಅರುಣನಿಂದಲೂ ಕಿನ್ನರ ಕಿಂಪುರುಷ ಯಕ್ಷ ರಾಕ್ಷಸ ಗಂಧರ್ವ ವಿದ್ಯಾಧರರಿಂ ಸೇವಿಸಲ್ಪಡುವ ಸೂರ್ಯನಂ ಕಂಡು ಕೈಮುಗಿದು ನಮಸ್ಕರಿಸಲಾ ಸೂರ್ಯನು ಕಣ್ಣುಸಂಜ್ಞೆಯಿಂ ಸ್ವಪ್ರೋದಯದಿಂದಂಗೀಕರಿಸಿ ದೂರಪ್ರೋಗಲು, ಶಿವಶರ್ಮನು ಗಣಂಗಳಿಗೆ ಕೈಮುಗಿದು ಎಲೈ ಗಣಂಗಳಿರಾ ಸೂರ್ಯಲೋಕವು ಮನುಜರಿಗೆ ಆವಪುಣ್ಯದಿಂದ ದೊರಕುವದು ಎಂಬುದಂ ಬುದ್ಧಿಗಲಿಸಬೇಕೆನಲು ಆ ಗಣಂಗಳಿಂತೆಂದರು, ಕೇಳೈ ಶಿವಶರ್ಮ ನಿನಗೆ ಹೇಳಬಾರದ ರಹಸ್ಯವೇನಿದ್ದೀತು ನಿನ್ನ ಸುಸಂಗವೆಂಬುದರಿಂದ ಪುಣ್ಯಕಥೆಗಳು ನಡೆವುತ್ತಿದ್ದಾವು ಎಂದು ಸಂತೋಷದಿಂದಿಂತೆಂದರು, ಸಕಲಪ್ರಾಣಿಗಳಿಗೂ ನಿಯಾಮಕನಾದಂಥಾ ನಾಮಗೋತ್ರ ಸ್ವರೂಪವುಳ್ಳಂಥಾ ಕಣ್ಣ ಸಂಜ್ಞೆಯಿಂ ಲೋಕದ ಉತ್ಪತ್ತಿ ಸ್ಥಿತಿಲಯಂಗಳಂ ಕಲ್ಪಿಸುವ ತ್ರಿಮೂರ್ತಿಸ್ವರೂಪನಾದಂಥಾ ಸಾಕ್ಷಾತ್ಪರಬ್ರಹ್ಮವೆ ಈ ಸೂರ್ಯನೆಂದು ಭಾವಿಸಿದವರಿಗೆ ಇಷ್ಟಾರ್ಥವಂ ಕೊಡುವಂಥಾ ಈ ಸೂರ್ಯನು ಪರಬ್ರಹ್ಮನಲ್ಲೆಂದು ಭಾವಿಸಿದವರ ಅಂಧಕಾರತಮಿಶ್ರವೆಂಬ ನರಕವಂ ನೈದಿಸುವ ಪಾಪವಂ ಕೊಡುವಂಥಾ ಶ್ರುತಿವಿಹಿತವಾದ ಸೂರ್ಯಕವಚ ಸ್ತೋತ್ರವಂ ಪಠಿಸುತ್ತಾ ಬ್ರಾಹ್ಮರು ಸೂರ್ಯ ಉಪಾಸನೆಯಂ ಮಾಡುತ್ತಿಹರು ಉಪನಯನವಾದಬಳಿಕ ಕಾಲಕಾಲವನರಿತು ಸಂಧ್ಯಾವಂದನೆಯಂ ಮಾಡದಿರುವನು ಪತಿತನು ಆದರಿಂದ ಸೂರ್ಯೋದಯಕಾಲಕ್ಕೆ ಮೊದಲೇ ಸ್ನಾನವಂ ಮಾಡಿ ಅರ್ಘ್ಯವಂ ಕೊಟ್ಟು ಸೂರ್ಯೋದಯಪರ್ಯಂತರ ಗಾಯತ್ರೀ ಜಪವಂ ಪಠಿಸಬೇಕು ಮಧ್ಯಾಹ್ನದಲ್ಲಿ ನೆತ್ತಿಯಮೇಲೆ ಸೂರ್ಯನಿರುವಾಗ ಅರ್ಘ್ಯವಂ ಕೊಟ್ಟು ಜಪಿಸಬೇಕು ಸಾಯಂಕಾಲದಲ್ಲಿ ಸೂರ್ಯನಿಗೆ ಇದಿರಾಗಿ ಅರ್ಘ್ಯವಂ ಕೊಟ್ಟು ನಕ್ಷತ್ರ ಉದಯಪರ್ಯಂತರ ಜಪಿಸುವದು ಸಸ್ಯಾದಿಗಳೂ ತರುಗಳೂ ತಮ್ಮ ತಮ್ಮ ಕಾಲಂಗಳಲ್ಲಿಯೇ ಫಲಿಸುವದಾದಕಾರಣ ಆ ಕಾಲ

ವಲ್ಲಿಯೇ ಸಂಧ್ಯಾವಂದನೆಯಂ ಮಾಡಬೇಕು, ಉದಯ ಮಧ್ಯಾನ್ಹ ಸಾಯಂಕಾಲಗಳಲ್ಲಿ ಕಾಲವರಿತು ಅರ್ಘ್ಯವಂ ಕೊಟ್ಟು ಜಪಿಸಲು ಸೂರ್‍ಯನಿಗೆ ಹಗೆಯಾಗಿ ದಾರಿಯಂಕಟ್ಟುವ ಮಂದೇಹರೆಂಬ ರಾಕ್ಷಸರು ನಾಶವಹರು ಅದುನಿಮಿತ್ತ ಬ್ರಾಹ್ಮಣರ ಅರ್ಘ್ಯಜಪವಂ ಸೂರ್‍ಯನಪೇಕ್ಷಿಸುವನು, ಅದುಕಾರಣ ಕಾಲದಲ್ಲಿ ಅರ್ಘ್ಯವಂಕೊಟ್ಟು ಜಪವಂಮಾಡಿದವರಿಗೆ ಸೂರ್‍ಯನು ಪ್ರಸನ್ನನಾಗುವನು. ಪ್ರಸನ್ನನಾಗಿ ಅವರಿಗೆ ಆಯುರಾರೋಗ್ಯ ಐಶ್ವರ್‍ಯ ಪುತ್ರಮಿತ್ರಕಳತ್ರ ಮೊದಲಾದ ಅಷ್ಟಭೋಗವನ್ನು ಇಹದಲ್ಲಿ ಕೊಟ್ಟು ಪರದಲ್ಲಿ ಸ್ವರ್ಗಭೋಗ ಮೋಕ್ಷಂಗಳಂ ಕೊಡುವನು. ಅಷ್ಟಾದಶವಿದ್ಯೆಗಳಲ್ಲಿ ಮಿಮಾಂಸ ಅಧಿಕವು ಅದಕ್ಕಿಂತ ತರ್ಕಶಾಸ್ತ್ರವಧಿಕವು ಆ ತರ್ಕಕ್ಕಿಂತ ಪುರಾಣವಧಿಕವು ಆ ಪುರಾಣಕ್ಕಿಂತ ಧರ್ಮಶಾಸ್ತ್ರಗಳಧಿಕವು ಆ ಧರ್ಮಶಾಸ್ತ್ರಗಳಿಗಿಂತ ಶ್ರುತಿಗಳಧಿಕವು ಆ ಶ್ರುತಿಗಳಿಗಿಂತಲೂ ಉಪನಿಷತ್ತುಗಳಧಿಕವು ಉಪನಿಷತ್ತುಗಳಿಗಿಂತ ಗಾಯತ್ರೀಮಂತ್ರವಧಿಕವು ಸಕಲಮಂತ್ರಗಳೂ ಪ್ರಣವಯುಕ್ತವಾದ ಗಾಯತ್ರಿಗೆ ಸರಿಯಿಲ್ಲ, ಕಾಶಿಗೆ ಸರಿಯಾದ ಕ್ಷೇತ್ರವಿಲ್ಲ, ವಿಶ್ವೇಶ್ವರಗೆ ಸರಿಯಾದಲಿಂಗವಿಲ್ಲ, ಈ ಗಾಯತ್ರಿಯೇ ವೇದಮಾತೆ ಬ್ರಾಹ್ಮಣರು ವೇದಸ್ವರೂಪವು, ಅದುಕಾರಣ ಬ್ರಾಹ್ಮಣರಿಗೆ ಗಾಯತ್ರೀ ತಾಯಾದಳು ತನ್ನನು ಭಕ್ತಿಯಿಂದ ಗಾನವಮಾಡುವರಂ ರಕ್ಷಿಸಳಾಗಿ ಗಾಯತ್ರೀಯೆಂಬ ಪೆಸರಾಯಿತು ಗಾಯತ್ರೀಮಂತ್ರದಿಂದ ಪ್ರತಿಪಾದಿಸಲ್ಪಟ್ಟವನು, ಸೂರ್‍ಯರೂಪಾದ ಸಾಕ್ಷಾತ್ಪರಬ್ರಹ್ಮನು ಗಾಯತ್ರೀಜಪ ಪ್ರಭಾವದಿಂದಲೇ ವಿಶ್ವಾಮಿತ್ರನು ಕ್ಷತ್ರಿಯತ್ವಮಂಬಿಟ್ಟು ಬ್ರಹ್ಮರ್ಷಿಯಾದನು, ಬ್ರಹ್ಮಸೃಷ್ಟಿಗೆ ಪ್ರತಿಸೃಷ್ಟಿಯಂ ಮಾಡಿದನು, ವೇದಶಾಸ್ತ್ರಗಳನೋದಿದ ಮಾತ್ರವೇ ಬ್ರಾಹ್ಮಣನಲ್ಲ ತ್ರಿಕಾಲದಲ್ಲಿಯೂ ಗಾಯತ್ರಿಯಂ ಜಪಿಸುವನೇ ಬ್ರಾಹ್ಮಣನು, ಬ್ರಹ್ಮಾವಿಷ್ಣು ಮಹೇಶ್ವರ ಮೊದಲಾದವರು ಗಾಯತ್ರೀ ಸ್ವರೂಪವಾಗಿ ಇಹರು, ಇಂಥಾ ತ್ರಿಮೂರ್ತಿಸ್ವರೂಪನಾದ ಸೂರ್‍ಯನು ತೇಜೋಮಯನು ಕಾಲಸ್ವರೂಪನು ಕಾಲಪರಿವರ್ತಕನು ಇದಲ್ಲದೆ ಸಕಲವೂ ತಾನಾದಕಾರಣ ಸೂರ್‍ಯನು ಪ್ರತ್ಯಕ್ಷವಾದ ಪರಬ್ರಹ್ಮನು ಎಂದು ವೇದಗಳು ಹೇಳುತ್ತಿಹ

ವು, ಈ ಸೂರ್ಯಲೋಕದಲ್ಲಿ ಇಹರೆಲ್ಲರೂ ಪೂರ್ವದಲ್ಲಿ ಸೂರ್ಯನಕುರಿತು ಪುಷ್ಯಾರ್ಕ, ಮೂಲಾರ್ಕ, ಉತ್ತರಾರ್ಕ, ಹಸ್ತಾರ್ಕ, ಮೊದಲಾದ ಪುಣ್ಯಕಾಲಗಳಲ್ಲಿ ಸ್ನಾನ ದಾನ ಪೂಜೆ ಜಪ ಅರ್ಘ್ಯ ಹೋಮ ಬ್ರಾಹ್ಮಣ ಸಂತರ್ಪಣೆ ಮೊದಲಾದ ಧರ್ಮಂಗಳಂ ಮಾಡಿದವರು ಸಂಕ್ರಾಂತಿ ಗ್ರಹಣ ಅಮಾಸ ಮೊದಲಾದ ಪುಣ್ಯಕಾಲಗಳಲ್ಲಿ ಸ್ನಾನ ದಾನ ಪಿತೃತರ್ಪಣ ಮೊದಲಾದ ಧರ್ಮಂಗಳನ್ನು ಮಾಡದವರೂ ಸೂರ್ಯನ ಕುರಿತು ಪೂಜೆಯಂ ಮಾಡದೆ ಇರುವವರೂ ಕುರೂಪಿಗಳಾಗಿ ದರಿದ್ರರಾಗಿ ಪರರಮನೆಯಬಾಗಿಲಲ್ಲಿ ದೇಹೀಯೆಂದು ಭಂಗಪಡುತ್ತಿಹರಾದಕಾರಣ ಹೀಗೆ ದುಃಖಪಡದೆ ಪುಣ್ಯಕಾಲಗಳಲ್ಲಿ ಪುಣ್ಯಪುರುಷರಾದವರು ಯಥಾಶಕ್ತಿ ಸ್ನಾನ ದಾನ ಪೂಜೆಯಂ ಮಾಡಬೇಕೆಂದು ಹೇಳಿ ಪೂಜೆಯಂ ಮಾಡಿದವರಿಗೆ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯವಂ ಕೊಡುವ ವ್ರತಮಂತ್ರಮಂ ಬುದ್ಧಿಗಲಿಸಿದರು, ಅದೆಂತೆನೆ ॥ಶ್ಲೋಕ॥ ಹಂಸೋಭಾನುಸ್ಸಹಸ್ರಾಂಶು ಸ್ತಪನಸ್ಸವಿತಾರವಿಃ ॥ ವಿಕರ್ತನೋರ್ಕೋಮಾರ್ತಾಂಡೋ ವಿಶ್ವಕರ್ಮಾವಿಭಾವಸುಃ ॥೧॥ ವಿಶ್ವರೂಪೋವಿಶ್ವಕರ್ತಾ ವಿವಸ್ವಾನ್ಮಿಹಿರೋಂಶುಮಾನ್ ॥ ಆದಿತ್ಯಶ್ಚಾರ್ಯಮೋಷ್ಣಾಂಶುಸ್ಸೂರ್ಯೋಬ್ರಧ್ನೋದಿವಾಕರಃ ॥೨॥ ದ್ವಾದಶಾತ್ಮಾಸಪ್ತಹಯೋಭಾಸ್ಕರೋಹಸ್ಕರಃಖಗಃ॥ ಸೂರ್ಯಃಪ್ರಭಾಕರಃಶ್ರೀಮಾನ್ಲೋಕಚಕ್ಷುರ್ಗ್ರಹೇಶ್ವರಃ ॥೩॥ ತ್ರಿಲೋಕೇಶೋಲೋಕಸಾಕ್ಷೀ ತಮೋರಿರ್ಭಾಸ್ಕರಶ್ಶುಚಿಃ ॥ ಗಭಸ್ತಿಹಸ್ತಸ್ತೀವ್ರಾಂಶುಸ್ತರಣಿಸ್ಸುಮನೋಮಣಿಃ ॥೪॥ ದ್ಯುಮಣಿರ್ಹರಿದಶ್ವೋರ್ಕೋ ಭಾನುಮಾನ್ಭಯನಾಶನಃ ॥ ಛಂದೋಮಯೋವೇದವೇದ್ಯೋ ಭಾಸ್ವಾನ್ಪೂಷಾವೃಷಾಕಪಿಃ॥೫॥ಏಕಚಕ್ರರಥೋ ಮಿತ್ರೋ ಹಿಮಹಾರೀತಮಿಸ್ರಹಾ ॥ ದೈತ್ಯಹಾಪಾಪಹರ್ತಾಚ ಧರ್ಮಾಧರ್ಮಪ್ರಕಾಶಕಃ॥೬॥ ಹೇಳಿಕಶ್ಚಿತ್ರಭಾನುಶ್ಚ ಕಾಳಿಂಗಸ್ತಾರ್ಕ್ಷ್ಯವಾಹನಃ ॥ ದಿಕ್ಪತಿಃಪದ್ಮಿನೀನಾಥೋಕುಶೇಶಯಕರೋಹರಿಃ ॥೭॥ ಘರ್ಮರಶ್ಮಿರ್ದುರ್ನಿರೀಕ್ಷ್ಯಶ್ಚಂಡಾಂಶುಃಕಶ್ಯಪಾತ್ಮಜಃ ॥ ಇಂತೀಪವಿತ್ರವಾದ ಪ್ರಣವದಿಂದ ಯುಕ್ತವಾದ ಸೂರ್ಯನ ಎಪ್ಪತ್ತು ನಾಮಂಗಳನ್ನು ಒಂದೊಂದು ನಾಮವಂ ಹೇಳಿ ಸೂರ್ಯನ ನಿರೀಕ್ಷಿಸಿ ತಾಮ್ರಪಾತ್ರೆಯಲ್ಲಿ ಕೆಂಪುಕಣಿಗಿಲು ಹೂವು

ಮೊದಲಾದ ಕೆಂಪಿನಪುಷ್ಪ ಕೆಂಪಿನ ಚಂದನಗಂಧ ಕೆಂಪಿನಅಕ್ಷತೆ ದೂರ್ವೆಯುಕ್ತವಾದ ಉದಕವನ್ನು ಕರಕಮಲಂಗಳಿಂದ ಶಿರಸ್ಸಿನಲ್ಲಿ ಧರಿಸಿ ಮಂಡಿಗಾಲಹಾಕಿ ವಿಧಾನಪೂರ್ವಕವಾಗಿ ಸೂರ್ಯಾಭಿಮುಖವಾಗಿ ಅರ್ಘ್ಯವಂ ಕೊಟ್ಟು ಪ್ರತಿನಾಮದಿಂದಲೂ ನಮಸ್ಕಾರಂಗಳಂ ಮಾಡಿ ಪುನರರ್ಘ್ಯವಂ ಕೊಟ್ಟು ಬ್ರಾಹ್ಮಣನ ಪೂಜೆಯಂ ಮಾಡಿ ಯಥಾಶಕ್ತಿ ದಾನವಂ ಕೊಟ್ಟು ಯಥಾಶಕ್ತಿ ಬ್ರಾಹ್ಮಣ ಭೋಜನವಂ ಮಾಡಿಸಲು ಸೂರ್ಯನು ಪ್ರಸನ್ನನಾಗಿ ಸಕಲ ವ್ಯಾಧಿ ದರಿದ್ರ ಮೊದಲಾದ ಉಪದ್ರವಂಗಳಂ ಪರಿಹರಿಸಿ ತನ್ನ ಲೋಕವಂ ಕೊಡುವನು, ಆದಾಗಿ ಮಹಾಮಹಿಮೆಯುಳ್ಳ ಸೂರ್ಯನ ಮಾಹಾತ್ಮ್ಯವಂ ಬಣ್ಣಿಸಲೆ ಅರಿಯೆವಯ್ಯ ಬ್ರಾಹ್ಮ ಕ್ಷತ್ರಿಯ ವೈಶ್ಯ ಶೂದ್ರ ಮೊದಲಾದವರು ಈ ಅಧ್ಯಾಯವಂ ಭಕ್ತಿಯಿಂ ದಾರು ಕೇಳುವರೋ ಅವರು ಸಕಲಪಾಪಂಗಳ ನೊದೆದು ಉತ್ತಮಗತಿಯನ್ನೈದುವರು ಎಂದು ಗಣಂಗಳು ಶಿವಶರ್ಮಂಗರುಹಿದರೆಂದು ಸೂತಪುರಾಣಿಕನು ಶೌನಕಾದಿಋಷಿಗಳಿಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ ಇಂತು ಶ್ರೀಮತ್ಸಮಸ್ತಭೂಮಂಡಲೇಶ್ವರಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಅಪ್ಸರೋಲೋಕ ಸೂರ್ಯಲೋಕವರ್ಣನೆಯೆಂಬ ಒಂಭತ್ತನೇ ಅಧ್ಯಾಯಾರ್ಥ ನಿರೂಪಣಕ್ಕೆ ಮಂಗಳಮಹಾ.

ಒಂಭತ್ತನೇ ಅಧ್ಯಾಯ ಸಂಪೂರ್ಣವು.

ಶುಭಮಸ್ತು.

ಶ್ರೀ ವಿಶ್ವೇಶ್ವರಾಯನಮಃ.

ಹತ್ತನೇ ಅಧ್ಯಾಯ.

ವಿಶ್ವಾನರನೆಂಬ ಬ್ರಾಹ್ಮಣನಿಗೆ ವಿಶ್ವೇಶ್ವರನು ವರವಂ ಕೊಟ್ಟದ್ದು.

ಅನಂತರದಲ್ಲಿ ಶಿವಶರ್ಮನು ನಯನಾನಂದಕರವಾದ ಸ್ವರ್ಗಲೋಕದ ಅಮರಾವತಿ ಪಟ್ಟಣವನ್ನು ಕಂಡು ಈ ಪಟ್ಟಣ ಯಾವದು ಎಂದು ಬೆಸಗೊಳ್ಳಲು ವಿಷ್ಣುಗಣಂಗಳಿಂತೆಂದರು, ಎಲೈ ಶಿವಶರ್ಮನೆ ಕೇಳು ವಿಶ್ವಕರ್ಮ

ಸು ತನ್ನ ತಪೋಬಲದಿಂದ ಕಾಮಧೇನು ಕಲ್ಪವೃಕ್ಷ ಚಿಂತಾಮಣಿ ಐರಾವತ
ವೆಂಬ ಆನೆ, ಉಚ್ಚೈಶ್ರವಸ್ಸೆಂಬ ಕುದುರೆ. ದೇವಗಂಗೆ. ಅಮೃತ ಇವು
ಮೊದಲಾದ ವಿಶೇಷವಸ್ತುಗಳುಳ್ಳ ಪಟ್ಟಣವಂ ನಿರ್ಮಿಸಿದನು. ಅದರಹೆಸರು
ಅಮರಾವತಿಯು. ಈ ಪಟ್ಟಣಕ್ಕಧಿಪತಿ ದಿಕ್ಪಾಲಕರಿಗೊಡೆಯನಾದಂಥಾ
ದೇವೇಂದ್ರನು, ಈ ಪಟ್ಟಣದೊಳಗೆ ಸಕಲ ದೇವರ್ಕಳೂ ನಾರದಾದಿ ದೇ
ವಋಷಿಗಳೂ ವಶಿಷ್ಠಾದಿ ಬ್ರಹ್ಮಋಷಿಗಳೂ ರಾಜಋಷಿಗಳೂ ಇವರು
ಮೊದಲಾದ ಸಕಲ ರಾಕ್ಷಸರೂ ಯಕ್ಷ ಗರುಡಗಂಧರ್ವ ಕಿನ್ನರಕಿಂಪುರುಷ
ರೊಳ್ಳೈಸಲೂ ಶಚೀದೇವಿಯೆಂಬ ಪಟ್ಟದರಾಣಿ ಸಹಿತಾಗಿ ದೇವೇಂದ್ರನಾ
ಳುತ್ತಿಹನು, ಇಂದ್ರಪಟ್ಟವು ನೂರುಯಜ್ಞವ ಮಾಡಿದವರ್ಗೆ ದೊರಕೂ
ವದು, ಕೆಲವು ಕಡಮೆಯಾಗಿ ಯಜ್ಞಂಗಳಂಮಾಡಿದವರು ಷೋಡಶಮಹಾ
ದಾನಂಗಳಂ ಮಾಡಿದವರೂ ಸತ್ಯವಾದಿಗಳೂ ಶೂರರೂ ಇವರು ಮೊದ
ಲಾದ ಧರ್ಮವುಳ್ಳವರೂ ಈ ಪಟ್ಟಣದಲ್ಲಿ ಇಹರು ಎಂದು ಗಣಂಗಳು
ಶಿವಶರ್ಮಂಗಿಂತೆಂದರು, ಎತ್ತ ಶಿವಶರ್ಮನೆ ಮುಂದೆತೋರ್ಪದು ಅರ್ಚಿ
ಷ್ಮತೀಯೆಂದು ತೇಜೋವತೀಯೆಂದು ಎರಡು ಹೆಸರುಳ್ಳ ಈ ಪಟ್ಟಣ
ಅಗ್ನಿಯದು, ಅಗ್ನಿಯ ಪೂಜೆಯಂ ಮಾಡಿದವರು ದೃಢದಿಂದ ಅಗ್ನಿಪ್ರ
ವೇಶವಂಮಾಡಿದ ಸ್ತ್ರೀಯರೂ ಅಗ್ನಿಹೋತ್ರನಿರತರಾದವರೂ ನಿತ್ಯವೂ
ಅಗ್ನಿಹೋತ್ರವಮಾಡಿದ ಪುಣ್ಯಪುರುಷರೂ ಅಗ್ನಿಕಾರ್ಯಮಾಡಿದ ನಿಷ್ಠೆಯು
ಳ್ಳ ಬ್ರಹ್ಮಚಾರಿಗಳೂ ಶೀತಕಾಲದಲ್ಲಿ ಕಾಷ್ಟಗಳ ದಾನವಮಾಡಿದವರೂ,
ಅನಾಥರ್ಗೆ ಅಗ್ನಿಯಸಂಸ್ಕಾರವಂ ಮಾಡಿಶಿದವರೂ ಮಂದಾಗ್ನಿಗೆ ಔಷಧವಂ
ಕೊಟ್ಟವರೂ ಯಜ್ಞಕ್ಕೆ ಬೇಕಾದ ವಸ್ತುಗಳನ್ನೂ ಸುವರ್ಣ ಮೊದಲಾದ
ದ್ರವ್ಯಗಳನ್ನೂ ತನ್ನ ಯಥಾಶಕ್ತಿಯಿಂದ ಕೊಟ್ಟವರು ಇವು ಮೊದಲಾದ
ಅಗ್ನಿಸೇವಕರೂ ಅಗ್ನಿಲೋಕದಲ್ಲಿ ಇಹರು, ದ್ವಿಜರ್ಗೆ ಚತುರ್ವಿಧಪುರು
ಷಾರ್ಥಗಳಂ ಕೊಡುವದಕ್ಕೆ ದೇವತೆ, ಗುರು ವ್ರತ ತೀರ್ಥ ಇವೆಲ್ಲವಾಗಿ
ಯೂ ಅಗ್ನಿಯೇಸರಿ ಅಪವಿತ್ರವಾದ ವಸ್ತುಗಳೆಲ್ಲವನ್ನೂ ಪಾವನವಮಾ
ಡುವನು ಅಗ್ನಿಯಾದಕಾರಣ ಅಗ್ನಿಗಿಂತಲೂ ಪಾವನವಾದುದೇ ಇಲ್ಲ ಅಗ್ನಿ
ಯಂಬಿಟ್ಟು ಮತ್ತೊಂದು ದೇವತೆಯಂ ಭಜಿಸುವನು ವೇದಾರ್ಥವಬಲ್ಲವ

ನಲ್ಲ ಸ್ತ್ರೀಯರ ಕುಕ್ಷಿಯಲ್ಲಿರ್ದ ಗರ್ಭವನ್ನು ದಹಿಸದೆ ಇರುವನಾದ ಕಾರಣ ಅಗ್ನಿಯು ಪರಮೇಶ್ವರನ ಪ್ರತ್ಯಕ್ಷವಾದ ದಾಹಕಶಕ್ತಿಯು ಉತ್ಪತ್ತಿ ಸ್ಥಿತಿ ಲಯಂಗಳಿಗೆ ಕರ್ತೃವಾದ ಪರಮೇಶ್ವರನ ನೇತ್ರವಾಗಿ ಲೋಕದ ಕತ್ತಲೆಯನ್ನು ಪರಿಹರಿಸುವನು, ಧೂಪ ದೀಪ ನೈವೇದ್ಯ ಹಾಲು ತುಪ್ಪ ಬೆಲ್ಲ ಇವು ಮೊದಲಾದ ವಸ್ತುಗಳೆಲ್ಲವನ್ನೂ ಅಗ್ನಿಯನುಭವಿಸಿದ ಬಳಿಕ ಸಕಲದೇವತೆಗಳೂ ಅನುಭವಿಸುತ್ತಿಹರು ಎಂದು ಗಣಂಗಳು ಪೇಳಲು, ಅಗ್ನಿಯು ಅರಕುಮಾರನು ಈತಂಗೆ ಲೋಕಾಧಿಪತ್ಯವನಾರುಕೊಟ್ಟವರು ಎಂದು ಶಿವಶರ್ಮ ಬೆಸಗೊಳ್ಳಲು ಗಣಂಗಳಿಂತೆಂದರು, ಪೂರ್ವದಲ್ಲಿ ವಿಶ್ವಾನರನೆಂಬ ಪರಮೇಶ್ವರನ ಭಕ್ತನಾದ ಬ್ರಾಹ್ಮಣನಿದ್ದನು. ಆತನು ಶಾಂಡಿಲ್ಯ ಗೋತ್ರಜನು ಸದಾಚಾರಸಂಪನ್ನನು ಆಚಾರನಿಷ್ಠನಾದ ಬ್ರಹ್ಮಚಾರಿಯೂ ಸಕಲ ವೇದಶಾಸ್ತ್ರಜ್ಞನೂ ಆತನು ಒಂದಾನೊಂದುದಿನದಲ್ಲಿ ಮನದಲ್ಲಿ ಮಹೇಶ್ವರನನ್ನು ಧ್ಯಾನಿಸಿ ಬ್ರಹ್ಮಚಾರಿ ಗೃಹಸ್ಥ ವಾನಪ್ರಸ್ಥ ಸನ್ಯಾಸಿ ಈ ನಾಲ್ಕು ಆಶ್ರಮಗಳೊಳಗೆ ಆವ ಆಶ್ರಮ ಅಧಿಕವೆಂದು ವಿಚಾರಿಸಿ ಗೃಹಸಾಶ್ರಮವೇ ಅಧಿಕವೆಂದು ತಿಳಿದು ಸಂತೋಷಪಟ್ಟನು, ಗೃಹಸ್ಥಾಶ್ರಮವೆಂತು ಅಧಿಕವೆಂದರೆ ಇತರವಾದ ಮೂರು ಆಶ್ರಮದವರಿಗೂ ದೇವಋಷಿ ಪಿತೃ ಅತಿಥಿ ಮೊದಲಾದ ಸಕಲ ಪ್ರಾಣಿಗಳಿಗೂ ಗೃಹಸ್ಥನೇ ಆಧಾರವಾಗಿ ರಕ್ಷಿಪನು ಪಂಚಮಹಾಯಜ್ಞಂಗಳಂ ಮಾಡದೆ ದೇವಾದಿಗಳಿಗೆ ಋಣಸ್ಥನಾಗಿ ನರಕವನ್ನೈದುವನೂ ಪರಸ್ತ್ರೀವಿಮುಖನಾಗಿ ಋತುಕಾಲದಲ್ಲಿ ಸ್ವಸ್ತ್ರೀಯನ್ನು ಕಾಮಿಸಿದಂಥಾ ಗೃಹಸ್ಥನೇ ಬ್ರಹ್ಮಚಾರಿಗಿಂತಾ ಅಧಿಕನೆನಿಸುವನು, ರಾಗದ್ವೇಷಾದಿಗಳನ್ನು ಬಿಟ್ಟು ಸ್ವಸ್ತ್ರೀ ಸಹಿತ ಅಗ್ನಿಹೋತ್ರಂಗಳಂ ಮಾಡಿಕೊಂಡು ಇಹಂಥಾ ಗೃಹಸ್ಥನು ವಾನಪ್ರಸ್ಥನಿಗಿಂತಲೂ ಅಧಿಕನು, ಅಯಾಚಿತವ್ರತನಾಗಿ ಅಲ್ಪಸಂತೋಷಿಯಾದ ಗೃಹಸ್ಥನು ಸನ್ಯಾಸಿಗಿಂತಲೂ ಘನವಾದವನೆಂದು ವಿಶ್ವಾನರನು ವಿಚಾರಿಸಿ ಸರ್ವಲಕ್ಷಣಸಂಪನ್ನೆಯಾದ ಶುಚಿಷ್ಮತಿಯೆಂಬ ಸ್ತ್ರೀಯನ್ನು ವಿವಾಹವಾಗಿ ಕಾಲಕಾಲಂಗಳಲ್ಲಿಯೂ ನಿತ್ಯಕರ್ಮಂಗಳನ್ನು ನಡಸುತ್ತಾ ಇರಲಾಗಿ ಒಂದಾನೊಂದು ವ್ಯಾಳೆಯಲ್ಲಿ ಶುಚಿಷ್ಮತಿಯೂ ಪತಿಗೆ ನಮಸ್ಕರಿಸಿ ಬಿನ್ನೈಸಿದಳು ಎಲೈ ಪ್ರಾಣಕಾಂತನೇ ನಿಮ್ಮ ಪಾದಪದ್ಮಂಗಳನ್ನು ಪೂಜೆಯಮಾಡುವಳಾದನಾ

ನು ವಸ್ತ್ರಭೂಷಣ ಪುಷ್ಪ ಅನ್ನಪಾನ ತಾಂಬೂಲ ಶಯನ ಸಂಭೋಗ
ವೆಂಬ ಅಷ್ಟಭೋಗಗಳನ್ನೂ ಅನುಭವಿಸಿದೆನು, ಮತ್ತೇನು ಬೇಕುಯೆಂ
ದರೆ ನೀವು ಈಶ್ವರನ ಭಕ್ತರಾದಕಾರಣ ನಿಮಗೆ ಅಸಾಧ್ಯವಲ್ಲದ್ದರಿಂದ,
ಎನಗೆ ಮಹೇಶ್ವರನ ಸಮವಾದ ಪುತ್ರಸಂತಾನವನಿತ್ತು ರಕ್ಷಿಸಬೇಕೆನಲಾ
ಮುನಿಯು ಮನದಲ್ಲಿ ಚಿಂತಿಸಿ ನೀನು ಅಸಾಧ್ಯವಾದ ವಸ್ತುವಂ ಕೇಳಿದೆ
ಅದು ನಿನ್ನ ಇಚ್ಛೆಯಲ್ಲಿ ನಿನ್ನ ಜಿಹ್ವೆಯಲ್ಲಿ ಮಹೇಶ್ವರನಿರ್ದು ನುಡಿದನು
ಇದು ತಪಸ್ಸಿಂದಲ್ಲದೆ ಮತ್ತೊಂದರಿಂ ಸಾಧ್ಯವಾಗದು ತಪಸ್ಸಿಂದ ಸಾಧಿಸಿ
ಕೊಟ್ಟೇನು ಎಂದು ಸತಿಯುಂ ಸಂತವಿಸಿ ಕಾಶೀಪಟ್ಟಣವಂ ಪೊಕ್ಕು ಮಣಿ
ಕರ್ಣಿಕೆಯಲ್ಲಿ ಸ್ನಾನ ತರ್ಪಣ ಬ್ರಾಹ್ಮಣಭೋಜನ ಮೊದಲಾದ ಧರ್ಮಂ
ಗಳಂ ಮಾಡಿ ಸಕಲ ಗಣಪತಿಗಳನ್ನೂ ಸಕಲ ಗೌರಿದೇವಿಯರನ್ನೂ ಕಾಲ
ಭೈರವ ದಂಡಪಾಣಿ ಮೊದಲಾದ ಗಣಂಗಳನ್ನೂ ಆದಿಕೇಶವ ಮೊದಲಾದ
ವಿಷ್ಣುಮೂರ್ತಿಗಳನ್ನೂ ಅರ್ಕ ಸೂರ್ಯ ಭಾನು ಮೊದಲಾದ ದ್ವಾದಶಾದಿ
ತ್ಯರನ್ನೂ ಪೂಜಿಸಿ ಸಿದ್ಧಿಗಣೇಶ್ವರ ಢುಂಢಿಗಣಪತಿ ಆಶಾಗಣಪತಿ ಗಜ
ಗಣಪತಿ ಮೊದಲಾದ ಗಣಪತಿಗಳನ್ನೂ ಬಲಗೊಂಡು ತನ್ನ ಮನೋ
ರಥವು ಆವಲಿಂಗವ ಪೂಜಿಸಲು ಶೀಘ್ರದಲ್ಲಿ ಸಿದ್ಧಿಯಹುದೋ ಎಂದು
ಲಿಂಗಗಳನ್ನು ವಿಚಾರಿಶಿದನದೆಂತೆನೆ ಓಂಕಾರೇಶ್ವರ ಕೃತ್ತಿವಾಸೇಶ್ವರ ಕಾಳೇ
ಶ್ವರ ವೃದ್ಧಕಾಳೇಶ್ವರ ತಳೇಶ್ವರ ಕೇತಾರೇಶ್ವರ ರಾಮೇಶ್ವರ ತ್ರಿಲೋಕೇ
ಶ್ವರ ಜಂಬುಕೇಶ್ವರ ಜಯೇಶ್ವರ ದಶಾಶ್ವಮೇಧೇಶ್ವರ ದ್ರಾವಿಡೇಶ್ವರ ವೃ
ಕ್ಷೇಶ್ವರ ಗರುಡೇಶ್ವರ ಗೋಕರ್ಣೇಶ್ವರ ಧರ್ಮೇಶ್ವರ ನಂದಿಕೇಶ್ವರ ವಿ
ಶಾಲೇಶ್ವರ ವ್ರತೇಶ್ವರ ಪಶುಪತೀಶ್ವರ ಬ್ರಹ್ಮೇಶ್ವರ ವೈದ್ಯೇಶ್ವರ ಮಧ್ಯೇ
ಶ್ವರ ವಿಭಾಂಡೇಶ್ವರ ಭಾರಭೂತೇಶ್ವರ ಮಹಾಲಕ್ಷ್ಮೀಶ್ವರ ಮಹಾಗೌ
ರೀಶ್ವರ ಮಹಾಸರಸ್ವತೀಶ್ವರ ಮಾರ್ಕಂಡೇಯೇಶ್ವರ ಕಣ್ವೇಶ್ವರ ರತ್ನೇಶ್ವರ
ಯೋಗಿನೀಶ್ವರ ಮರುತೇಶ್ವರ ಮೋಕ್ಷೇಶ್ವರ ಗಂಗಾಧರೇಶ್ವರ ನರ್ಮದೇ
ಶ್ವರ ಲಾಂಗಲೇಶ್ವರ ವಿಶ್ವೇಶ್ವರ ಅವಿಮುಕ್ತೇಶ್ವರ ವಿಶಾಲೇಶ್ವರ ವ್ಯಾಘ್ರೇ
ಶ್ವರ ವ್ಯಾಸೇಶ್ವರ ವೃಷಭೇಶ್ವರ ಉಪಶಾಂತೇಶ್ವರ ಕಪರ್ದೀಶ್ವರ ವಸಿಷ್ಠೇ
ಶ್ವರ ಶನೈಶ್ಚರೇಶ್ವರ ಸೋಮೇಶ್ವರ ಕಿನ್ನರೇಶ್ವರ ಸ್ವರ್ಣೇಶ್ವರ ಸಂಗಮೇ

ಶ್ವರ ಹರಿಪಕೇಶ್ವರ ಹರಿಕೇಶೇಶ್ವರ ತ್ರಿಸಂಗಮೇಶ್ವರ ಮಹಾದೇವೇಶ್ವರ ಕಂತುಕೇಶ್ವರ ಮಹೇಶ್ವರ ಮಿತ್ರಾವರುಣೇಶ್ವರ ಅರ್ಕೇಶ್ವರ ಇವು ಮೊದಲಾದ ಲಿಂಗಗಳು ಎಳ್ಳುಮುಳುಕುವಷ್ಟು ಯಡೆ ಇಲ್ಲದೆ ತೆರಹಿಲ್ಲದೆ ಇದ್ದಾವು ಈ ಲಿಂಗಗಳೊಳಗೆ ವಿಶ್ವಪತಿಯೆಂಬವರ ಪುತ್ರನಾದ ವಿಶ್ವೇಶ್ವರನಲ್ಲದೆ ಶೀಘ್ರದಲ್ಲಿ ವರವಕೊಡುವಂಥಾದ್ದು ಮತ್ತೊಂದು ಲಿಂಗವಿಲ್ಲ ಅದುಕಾರಣ ವಿಶ್ವೇಶ್ವರನೆ ಸರ್ವೋತ್ತಮನಾದಂಥಾವನು ಈ ವಿಶ್ವೇಶ್ವರನ ಮೊದಲು ಆರಾಧಿಸಿ ವರವಪಡೆದವರಾರೆಂದರೆ ಪಂಚಾಸ್ವರನೆಂಬ ಗಂಧರ್ವನೂ ವಿದ್ಯಾಧರನೆಂಬ ಗಂಧರ್ವನೂ ಪ್ರತಿವಿಂಧ್ಯನು ವಸುದತ್ತನೆಂಬ ಜೇಹಾರಿ ರತ್ನವತ್ತಿಯೆಂಬ ಮಗಳ ಪಡೆದನು ಆದ್ದರಿಂದ ನಾನು ವಿಶ್ವೇಶ್ವರನ ಪೂಜಿಸಿ ಧ್ಯಾನಿಸಿ ಉಗ್ರತಪಸ್ಸ ಮಾಡಿ ತನ್ನ ಸ್ತ್ರೀ ಬಯಸಿದಂಥಾ ಅಭಿಲಾಷೆಯಂ ಪಡದೇನು ಎಂದು ನಿಶ್ಚೈಸಿ ಚಂದ್ರ ತೀರ್ಥದಲ್ಲಿ ಸ್ನಾನವಂಮಾಡಿ ವಿಶ್ವೇಶ್ವರನ ಕುರಿತು ತಿಂಗಳು ಏಕಭುಕ್ತ ತಿಂಗಳು ನಕ್ತ ತಿಂಗಳು ಅಯಾಚಿತವ್ರತ ತಿಂಗಳು ಉಪವಾಸ ತಿಂಗಳು ಕ್ಷೀರಾಹಾರ ತಿಂಗಳು ಶಾಕಾಹಾರ ತಿಂಗಳು ಫಲಾಹಾರ ತಿಂಗಳು ಯಳ್ಳು ಕಾಳಷ್ಟು ಆಹಾರ ತಿಂಗಳು ಪಂಚಗವ್ಯಾಹಾರ ತಿಂಗಳು ದರ್ಭೆಯ ಕೊನೆಯಲ್ಲಿ ಇದ್ದಿದ ಉದಕಬಿಂದುವೆ ಆಹಾರ ತಿಂಗಳು ವಾಯುವಾಹಾರ ತಿಂಗಳು ನಿರಾಹಾರ ಈತೆರದಲ್ಲಿ ವ್ರತತಪಸ್ಸು ಮಾಡಿ ಹದಿಮೂರು ತಿಂಗಳಾದ ಮೇಲೆ ಪ್ರಾತಃಕಾಲದಲ್ಲಿ ಗಂಗಾಸ್ನಾನವಂ ಮಾಡಿ ವಿಶ್ವೇಶ್ವರನ ಆರಾಧನೆಗೆ ಬರುತ್ತಿರಲೂ ಮಧ್ಯದಲ್ಲಿ ಎಂಟುವರ್ಷದ ಬಾಲಕನಾಗಿ ವಿಭೂತಿಭೂಷಿತನಾಗಿ ವಿಶಾಲನೇತ್ರ ಶುಭ್ರವಾದ ದಂತಪಂಕ್ತಿ ಕೆಂಜೆಡೆ ಬಾಲ್ಯಕ್ಕೆ ಅನುರೂಪವಾದ ಆಭರಣಂಗಳು ಇವಂಧರಿಸಿ ಮುಗುಳುನಗೆಯುಳ್ಳವನಾಗಿ ವೇದವಾಕ್ಯಗಳ ನುಡಿಯುತ್ತ ಪ್ರಸನ್ನನಾಗೆ ವಿಶ್ವಾನರಂಕಂಡು ರೋಮಾಂಚನ ಯುಕ್ತನಾಗಿ ಭಯಭಕ್ತಿಯಿಂ ನಮಸ್ಕಾರವಂಮಾಡಿ ಎದ್ದು ಕೈಮುಗಿದು ಸ್ತೋತ್ರವಂಮಾಡಿದನದೆಂತೆನೆ ॥ ನಮೋವಿಶ್ವೇಶ್ವರನಪ್ರಿಯ ಪುತ್ರನಾದಂಥಾ ವಿಶ್ವೇಶ್ವರನೆ ಲೋಕಕ್ಕೆ ಏಕರೂಪನಾಗಿ ಅದ್ವಿತೀಯನಾಗಿ ರೂಪವಿಲ್ಲದೆಯಿದ್ದ ಪರಬ್ರಹ್ಮಸ್ವರೂಪವೆಂದು ಶ್ರುತಿಗಳು ಹೇಳುತ್ತಿದ್ದಾವು ಏಕರೂಪನಾದಂಥಾ ಸೂ

ರ್ಯನು ನಾನಾಘಟೋದಕದಲ್ಲಿ ನಾನಾರೂಪವಾದಂತೆ ನೀನೊಬ್ಬನಾಗಿಯೂ ಮಾಯಾಕಲ್ಪಿತವಾದ ದೇಹಗಳಲ್ಲಿ ನಾನಾರೂಪವಾದವನು ಸರವಿಯು ಸರ್ಪದ ಆಕಾರವ ತೋರಿದಂತೆ ಶುಕ್ತಿಯಲ್ಲಿ ಬೆಳ್ಳಿಯೂ ಬಿಸಲುಗುದುರೆಗಳಲ್ಲಿ ಉದಕವು ತೋರಿದಂತೆ ನಿನ್ನಲ್ಲಿ ಇರುವ ಮಹಿಮೆಯು ತಿಳಿದ ಬಳಿಕ ಪ್ರಪಂಚವು ತೋರದು, ಉದಕದಲ್ಲಿ ಶೈತ್ಯ ಅಗ್ನಿಯಲ್ಲಿ ದಾಹಶಕ್ತಿ ಸೂರ್ಯನಲ್ಲಿ ಪ್ರಕಾಶ ಚಂದ್ರನಲ್ಲಿ ಬೆಳ್ದಿಂಗಳು ಪುಷ್ಪದಲ್ಲಿ ಗಂಧ ಕ್ಷೀರದಲ್ಲಿ ಘೃತದಪ್ರೊಲು ವ್ಯಾಪಕನಾಗಿ ಯಿದ್ದಂತಾ ನೀನು ಕಿವಿಯಿಲ್ಲದೆ ಕೇಳುವೆ ಮೂಗಿಲ್ಲದೆ ಆಘ್ರಾಣಿಸುವೆ ಪಾದವಿಲ್ಲದೆ ನಡೆಯುತ್ತಿದ್ದೀಯೆ ಕಣ್ಣಿಲ್ಲದೆ ಕಾಂಬೆ ನಾಲಿಗೆ ಯಿಲ್ಲದೆ ರುಚೀತೆಗದುಕೊಳ್ಳುವೆ ನಿನ್ನ ಸ್ವರೂಪವಂ ನಿಶ್ಚಯವಾಗಿ ಬಲ್ಲವರಾರು ನಿನ್ನ ಸ್ವರೂಪವನ್ನು ನಿನ್ನ ಭಕ್ತರು ಬಲ್ಲಂತೆ ಯಾರೂ ಅರಿಯರು ವೇದಂಗಳೂ ವಿಷ್ಣುವೂ ಬ್ರಹ್ಮನೂ ದಿಗಂಬರನೂ ಶಾಂತನೂ ವೃದ್ಧನೂ ಪ್ರಾಯದವನೂ ಬಾಲಕನೂ ಸಕಲವೂ ನೀನು ಹೊರತಾಗಿ ಯೇನು ಯಿದ್ದೀತು ಅದು ಕಾರಣ ನಿನಗೆ ನಮಸ್ಕಾರವಂ ಮಾಡುತ್ತಾ ಯಿದ್ದೇನೆಂದು ನಮಸ್ಕರಿಸಿ ಏಳು ಪವಿತ್ರರೊಳ್ ಆ ಬಾಲಕ ರೂಪನಾಗಿ ವಿಶ್ವೇಶ್ವರನು ಪ್ರೀತಿಯಿಂದ ಎಲೆ ವಿಶ್ವಾನರ ಶುಚಿಷ್ಮತೀಯೆಂಬ ಸ್ತ್ರೀಗು ನಿನಗು ಸಹಾ ಪ್ರಸನ್ನನಾದೆನು ವರವ ಬೇಡಿಕೊ ಯೆನಲಾ ವಿಶ್ವಾನರನು ಸಂತೋಷದಿಂದೆದ್ದು ಬಿನ್ನೈಸಿದನು ಎಲೈ ವಿಶ್ವೇಶ್ವರನೇ ಸರ್ವಜ್ಞನಾದ ಪರಮೇಶ್ವರನೇ ನೀನು ಅರಿಯದುದೇನು ಇದ್ದೀತು ಎನ್ನ ಕೇಳುವವೇನು ಇದ್ದೀತು ಎಂದು ಬಿನ್ನೈಸಲಾ ವಿಶ್ವೇಶ್ವರನು ಮತ್ತೂ ಬಾಲಕರೂಪದಿಂದಿಂತೆಂದನು ಎಲೈ ವಿಶ್ವಾನರನೆ ಶುಚಿಷ್ಮತೀ ಎಂಬ ನಿನ್ನ ಸತಿಯಲ್ಲಿ ನೀನು ಬಯಸಿದ ಮನೋರಥವು ಶೀಘ್ರದಲ್ಲಿ ಆದೀತು ಸಂದೇಹವಿಲ್ಲ ನಾನು ನಿನಗೆ ಗೃಹಪತಿಯೆಂಬ ಕುಮಾರನಾಗಿ ಹುಟ್ಟೇನೂ ಈಗ ನೀನು ಮಾಡಿದ ಅಭಿಲಾಷಾಷ್ಟಕವೆಂಬ ಸ್ತೋತ್ರವು ಪವಿತ್ರವಾದದ್ದು ಈ ಸ್ತೋತ್ರವನ್ನು ಶುಚಿಯಾಗಿ ತ್ರಿಕಾಲದಲ್ಲೂ ಪಠಿಸಲೂ ಪುತ್ರ ಪೌತ್ರಾದಿ ಸಕಲಾಭೀಷ್ಟ ಸಕಲ ಶಾಂತಿ ಸ್ವರ್ಗ ಮೋಕ್ಷಂಗಳು ಅಹವು ಎಂದು ಬುದ್ಧಿ ಗಲಿಸಿ ಆ ಬಾಲಕನು ಲಿಂಗ

ರೂಪವನ್ನೈದಲು ವಿಶ್ವಾನರನು ಸಂತೋಷದಿಂ ತನ್ನ ಮನೆಗೆ ಬಂದನು ಎಂದು ಗಣಂಗಳು ಶಿವಶರ್ಮಂಗೆ ಪೇಳ್ದರು ಎಂದು ಅಗಸ್ತ್ಯರು ಲೋಪಾಮುದ್ರೆಗೆ ನಿರೂಪಿಸಿದರೆಂಬುದಾಗಿ ವ್ಯಾಸರು ತನಗೆ ಬುದ್ಧಿಗಲಿಶಿದರೆಂದು ಸೂತಪುರಾಣಿಕನು ಶೌನಕ ಮೊದಲಾದ ಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ ॥ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರ ಪುರವರಾಧೀಶ ಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ವಿಶ್ವಾನರನೆಂಬ ಬ್ರಾಹ್ಮಣನಿಗೆ ವಿಶ್ವೇಶ್ವರನು ಪ್ರಸನ್ನನಾಗಿ ವರವಂ ಕೊಟ್ಟ ವೃತ್ತಾಂತ ನಿರೂಪಣವೆಂಬ ಹತ್ತನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ

ಹತ್ತನೇ ಅಧ್ಯಾಯ ಸಂಪೂರ್ಣವು.

ಶುಭಮಸ್ತು.

ಶ್ರೀ ವಿಶ್ವೇಶ್ವರಾಯನಮಃ.

ಹನ್ನೊಂದನೇ ಅಧ್ಯಾಯ.

ವಿಶ್ವಾನರನ ಮಗನಿಗೆ ಅಗ್ನಿಲೋಕಾಧಿಪತ್ಯಪ್ರಸಂಗ

ಅನಂತರದಲ್ಲಿ ಗಣಂಗಳು ಶಿವಶರ್ಮಂಗೆ ಪೇಳ್ದ ಯಜ್ಞೇಶ್ವರನ ಉತ್ಪತ್ತಿಯಂ ಅಗಸ್ತ್ಯನು ತನ್ನ ಸತಿಯಾದ ಲೋಪಾಮುದ್ರೆಗೆ ಪೇಳ್ದ ಸದೆಂತೆನೆ ವಿಶ್ವಾನರನು ವಿಶ್ವೇಶ್ವರನಿಂದ ವರವಂ ಪಡೆದು ತನ್ನ ಮನೆಗೆ ಬಂದು ಶಾಸ್ತ್ರೋಕ್ತದಿಂದ ಗರ್ಭಾದಾನವಂ ಮಾಡಲು ಆತನ ಸತಿಯಾದ ಶುಚಿಷ್ಮತಿಯು ಗರ್ಭಮಂ ಧರಿಸಿದಳು ತದನಂತರ ಮೂರನೇ ತಿಂಗಳಲ್ಲಿ ಪುಂಸವನ ಎಂಟನೇ ತಿಂಗಳಲ್ಲಿ ಸೀಮಂತವಂ ಮಾಡಲು ಹತ್ತನೆ ತಿಂಗಳಲ್ಲಿ ಶುಭ ತಿಥಿ ಸುದಿವಸ ಕೃತ್ತಿಕಾನಕ್ಷತ್ರ ಚಂದ್ರ ಬೃಹಸ್ಪತಿ ಮೊದಲಾದ ಶುಭಗ್ರಹ ಸಂಪತ್ತಿ

ಯುಳ್ಳ ಶುಭಲಗ್ನದಲ್ಲಿ ಕುಮಾರನು ಜನಿಸಿದನು ಆ ಸಮಯದಲ್ಲಿ ಮೂರು ಲೋಕಕ್ಕೂ ಸಂತೋಷವಾಯಿತು ಪುಷ್ಪವೃಷ್ಟಿಕರೆಯಿತು ದೇವದುಂದುಭಿ ಮೊಳಗಿದವು ನದಿಗಳಲ್ಲಿ ನಿರ್ಮಲೋದಕವಾದವು ಭೂದೇವಿಯು ಸಕಲವಸ್ತುಗಳ ತೊಡವ ತೊಡಹಾಗೆ ಸಂತೋಷವಂ ಪಟ್ಟಳು ಎಲ್ಲಾ ಕಡೆಯಲ್ಲೂ ಶುಭವಚನಂಗಳು ಕೇಳಲ್ಪಟ್ಟವು ಊರ್ವಶಿ ಮೊದಲಾದ ದೇವಸ್ತ್ರೀಯರು ನಾನಾವಿಧ ವಸ್ತ್ರಾಭರಣಭೂಷಿತರಾಗಿ ಚಿನ್ನದ ಹರಿವಾಣಂಗಳಲ್ಲಿ ಮುತ್ತಿನ ಅಕ್ಷತೆ ವಜ್ರವೈಢೂರ್ಯದ ದೀಪಗಳು ಅರಿಸಿನ ಜೇನು ತುಪ್ಪ ಪಚ್ಚೆ ಮಣಿಗಳೆಂಬ ದೂರ್ವೆ ದಧಿ ಕೆಂಪು ಹಳದಿ ಚೂರ್ಣವೆಂಬ ಕುಂಕುಮ ಗೋಮೇಧಿಕ ಪುಷ್ಯರಾಗ ನೀಲಮಣಿ ಎಂಬ ಪುಷ್ಪಮಾಲಿಕೆ ಇವು ಮೊದಲಾದ ಮಂಗಳದ್ರವ್ಯಗಳಂ ಕೊಂಡು ವಿದ್ಯಾಧರ ಸ್ತ್ರೀಯರು ಕಿನ್ನರಿಯರೂ ದೇವಸ್ತ್ರೀಯರೂ ಗಂಧರ್ವ ಯಕ್ಷರಾಕ್ಷಸ ನಾಗಸ್ತ್ರೀಯರೂ ಪಾಡಲು ಮರೀಚಿ ಅತ್ರಿ ಆಂಗೀರಸ ಪುಲಸ್ತ್ಯ ಕ್ರತುಪುಲಹ ಅಂಗಿರಸ್ಸು ವಸಿಷ್ಟ ಕಶ್ಯಪ ವಿಭಾಂಡಕ ಮಾಂಡವ್ಯ ರೋಮಹರ್ಷಣಿ ರೋಮಪಾದ ಭಾರದ್ವಾಜ ಗೌತಮ ಭೃಗು ಗಾಲವ ಗರ್ಗ ಜಾತುಕರ್ಣ ಪರಾಶರ ಆಪಸ್ತಂಬ ಯಾಜ್ಞವಲ್ಕ್ಯ ದಕ್ಷ ವಾಲ್ಮೀಕಿ ಮುದ್ಗಲ ಶಾಂತ ಮಾಂಡವ್ಯ ಶಿಲಾದ ಜಮದಗ್ನಿ ಮತಂಗ ಭರತ ಸುಮಂತ ವ್ಯಾಸ ಕಾತ್ಯಾಯನ ಕುತ್ಸ ಶೌನಕ ಋಷ್ಯಶೃಂಗ ದೂರ್ವಾಸ ರುಚಿ ನಾರದ ತುಂಬುರ ಜಾಬಾಲಿ ವಾಮದೇವ ಚ್ಯವನ ಅಸಿತ ದೇವಲ ಸಾಂಖ್ಯಾಯನ ಹಾರಿತ ವಿಶ್ವಾಮಿತ್ರ ಭಾರದ್ವಜ ಧೌಮ್ಯ ಮಾರ್ಕಂಡೇಯ ದಾಲ್ಭ್ಯ ಉದ್ದಾಲಕ ಉಪಮನ್ಯು ವತ್ಸ ಮೊದಲಾದ ಋಷಿಗಳೂ ಋಷಿಪತ್ನಿಯರೂ ಕುಮಾರತಿಯರೂ ಶಿಷ್ಯರೂ ಬೃಹಸ್ಪತಿ ಬ್ರಹ್ಮ ಸರಸ್ವತೀ ವಿಷ್ಣು ಲಕ್ಷ್ಮೀದೇವಿ ಪರಮೇಶ್ವರ ಪಾರ್ವತೀದೇವಿ ದೇವೇಂದ್ರ ಮೊದಲಾದ ದೇವರ್ಕಳೂ ತಕ್ಷಕ ಮೊದಲಾದ ಸರ್ಪಗಳೂ ಸಮುದ್ರಂಗಳೂ ಮೊದಲಾದ ಅರುವತ್ತುನಾಲ್ಕು ನದಿಗಳೂ ಜಂಗಮರೂ ಸ್ಥಾವರಂಗಳು ಮೊದಲಾದ ಸಕಲರೂ ತಮ್ಮ ತಮ್ಮ ಲೋಕದಿಂದ ವಿಶೇಷ ವಸ್ತುಗಳಂ

ಕೊಂಡುಬಂದಿರಲು ಬ್ರಹ್ಮನು ಶಿಶುವಿಗೆ ಜಾತಕರ್ಮವಂ ಮಾಡಿ ಹರಿ ಹರ ಬ್ರಹ್ಮ ಮೂವರೂ ಕೂಡಿ ಶಿಶುವಿಗೆ ರಕ್ಷೆಯಂ ಕಟ್ಟಿ ಆಶೀರ್ವಾದವಂ ಮಾಡಿ ಬ್ರಹ್ಮ ಮೊದಲಾದ ದೇವರ್ಕಳು ತಮ್ಮ ತಮ್ಮ ಲೋಕಗಳಿಗೆ ಹೋಗುವಾಗ ವಿಶ್ವಾನರಂಗೆ ಪರಮೇಶ್ವರನು ತಾನೇ ಶಿಶುವಾಗಿ ಜನಿಸಿದನು ಈತನ ಪುಣ್ಯಪ್ರಭಾವವನೇನೆಂದು ಬಣ್ಣಿಸಬಹುದು ಸಂತಾನವಿಲ್ಲದವರಿಗೆ ಲೋಕವಿಲ್ಲ ಆತನ ಬಾಳಿಕೆ ವ್ಯರ್ಥ ಅವನ ಸಂತತಿ ನಷ್ಟ ಅದು ಕಾರಣ ಅಗ್ನಿಸಾಕ್ಷಿಯಾಗಿಮದುವೆಯಾದ ಸ್ತ್ರೀಯಲ್ಲಿ ತನ್ನಿಂದ ಪುಟ್ಟಿದ ಪುರುಷನು ಉತ್ತಮ ಪತಿಯು ಅಪ್ಪಣೆಯಿಂದ ಸ್ತ್ರೀಯಲ್ಲಿ ಪುಟ್ಟಿದ ಕ್ಷೇತ್ರಜನು ಕ್ರಯದಿಂಬಂದವಕ್ರೀತನು ಹೆತ್ತ ತಾಯಿ ತಂದೆಗಳು ವಪ್ಪಿಕೊಟ್ಟವನು ದತ್ತನು ತಾನೇ ಮಗನಾದೆನೆಂದು ಬಂದ ಸ್ವಯಂದತ್ತನು ಮಗಳ ಮಗನು ಪುತ್ರಿಕಾಸುತನು ಶರಣಾಗತನಾದವನು ರಕ್ಷಿತನು ಇಂತೆಂಬ ಒಂಭತ್ತು ಬಗೆ ಪುತ್ರರೊಳಗೆ ಇಹಪರವನ್ನಪೇಕ್ಷಿಸುವನು ಸಂಪಾದಿಸಬೇಕು ಎಂದು ತಮ್ಮೊಳು ತಾವು ಮಾತನಾಡಿಕೊಳ್ಳುತ್ತಾ ತಮ್ಮ ತಮ್ಮ ಲೋಕಂಗಳಿಗೆ ಹೋದರು ಅನಂತರದಲ್ಲಿ ವಿಶ್ವಾನರನು ನಾಲ್ಕನೆಯ ತಿಂಗಳಲ್ಲಿ ತನ್ನ ಕುಮಾರಂಗೆ ದೇವಾಲಯದರ್ಶನವಂ ಮಾಡಿಸಿ ಆರನೆಯ ತಿಂಗಳಲ್ಲಿ ಅನ್ನಪ್ರಾಶನ ವರ್ಷದೊಡ್ಡಂತಿ ಚೌಳಂಗಳ ಐದನೆ ವರ್ಷದಲ್ಲಿ ಉಪನಯನವಂ ಮಾಡಿ ಶಾಸ್ತ್ರಂಗಳೂ ವೇದಶ್ರುತಿಗಳೂ ಮೊದಲಾದ ವಿದ್ಯಂಗಳಂ ಕಲಿಸೆ ಒಂಬತ್ತನೆಯ ವರ್ಷದಲ್ಲಿ ಆ ಕುಮಾರನು ವಿನಯವಂತನಾಗಿ ತಾಯಿ ತಂದೆಗಳ ಸೇವೆಯಂ ಮಾಡಿಕೊಂಡು ಇರಲು. ಅನಿತರೊಳು ವಿಶ್ವಾನರನ ಮನೆಗೆ ನಾರದನೈತರಲು ವಿಶ್ವಾನರನು ಆ ಋಷಿಯ ನಿದಿರ್ಗೊಂಡು ಪೀಠದಲ್ಲಿ ಕುಳ್ಳಿರಿಸಿ ಅರ್ಘ್ಯಪಾದ್ಯಾಚಮನೀಯ ಮುಂತಾದ ಪೂಜೆಯಂ ಮಾಡಿ ಭಕ್ತಿಯಿಂ ಕೈಮುಗಿದು ಇರಲು ಆ ಪೂಜೆಯಂ ಕೈಕೊಂಡು ನಾರದನಿಂತೆಂದನು ಎಲೈ ವಿಶ್ವಾನರನೆ ಈ ನಿನ್ನ ಮಗನು ನಿಮ್ಮ ಸೇವೆಯಂ ಮಾಡುವಂಥಾ ಪುಣ್ಯವಂತನು ಕುಮಾರಂಗೆ ಗುರುವನ್ನೆನೆ ತೀರ್ಥ ಷಟ್ಕರ್ಮವೆಲ್ಲವೂ ತಾಯಿ ತಂದೆಗಳ ಸೇವೆಯೇ ನೋಡುಪ್ಪೆ ಗರ್ಭದಿಂದಾಧರಿಸಿ ಸಲಹಿದಳಾದಕಾರಣ ತಂದೆಗಿಂತಲೂ

ತಾಯಿಯು ಪೂಜ್ಯಳೆನಿಸುವಳು ತಾಯಿಯಪಾದೋದಕ ಪಾನವಂ ಮಾಡಲು ಗಂಗಾಸ್ನಾನಕ್ಕೆ ಮಿಗಿಲು ಸನ್ಯಾಸವ ತಕ್ಕೊಂಡ ಮಗನಿಗೆ ತಂದೆ ನಮಸ್ಕಾರವಂ ಮಾಡಬೇಕು ಅಂಥಾ ಸನ್ಯಾಸಿಯೂ ತಾಯಿಗೆ ವಂದಿಸಬೇಕಾದ ಕಾರಣ ಈ ತ್ರಿಲೋಕದಲ್ಲಿಯೂ ತಾಯಿಗೆ ಸಮಾನವಾದ ಪೂಜ್ಯರಿಲ್ಲವೆಂದು ಹೇಳ್ದು ಕುಮಾರಂಗಿಂತೆಂದನು ಎಲೈ ವಿಶ್ವಾನರನ ಕುಮಾರನಾದಕಾರಣ ವೈಶ್ವಾನರನಾದ ಗೃಹಪತಿಯೆ ಬಂದೆನ್ನ ತೊಡೆಯಮೇಲೆ ಕುಳ್ಳಿರು ನಿನ್ನ ಶುಭಲಕ್ಷಣಗಳಂ ನೋಡಬೇಕು ಬಲವಕೈಯ ತೋರು ಎಂದು ನುಡಿಯಲಾಬಾಲಕನು ತಾಯಿತಂದೆಗಳ ಅಪ್ಪಣೆಯಿಂದ ನಾರದರಿಗೆ ನಮಿಸಿ ವಿನಯದಿಂ ಕುಳ್ಳಿರಲು ನಾರದನು ತಾನು ಬಡಗ ಮುಂದಾಗಿ ಕುಳ್ಳಿರ್ದು ಕಂಕುಮಗಂಧದಲ್ಲಿ ಅದ್ದಿದ ಮುಪ್ಪುರಿಯ ಸೂತ್ರವಂ ಕೊಂಡು ಕುಮಾರನನ್ನು ಮೂಡುಮುಂದಾಗಿ ನಿಲ್ಲಿಸಿ ಪಾರ್ವತೀಪರಮೇಶ್ವರ ಗಣಪತಿಯರಂ ಸ್ಮರಿಸಿ ಕುಮಾರನ ಆ ಪಾದಮಸ್ತಕವನಳದು ನೂರೆಂಟು ಅಂಗುಲದಿಂದ ಉನ್ನತನಾದವನು ಈತ ಲಕ್ಷಣವಂತನು ಈತನಿಗೆ ರಾಯಪಟ್ಟವಾಘೀತು ತೋಳು ತೊಡೆಗಳು ನೇತ್ರನಾಸಿಕ ಕವಪು ಈ ಐದೂ ರಮ್ಯವಾಗಿ ದೀರ್ಘವಾದ ಕಾರಣ ದೀರ್ಘಾಯುಷ್ಯವುಳ್ಳವನೂ ಕೂದಲು ಚರ್ಮ ಬೆರಳು ಬೆರಳಗಿಣ್ಣುಗಳೂ ದಂತ ಇವು ಐದೂ ಸೂಕ್ಷ್ಮವಾದಕಾರಣ ದಿಕ್ಪಾಲಕನಾದಾನೂ ಅಂಗೈಯಿ ಅಂಗಾಲು ಕಡೆಗಣ್ಣು ಕಟವಾಯಿ ಅಧರ ನಾಲಿಗೆ ನಖಗಳು ಕೆಂಪಾದಕಾರಣ ರಾಜ್ಯಾಧಿಪತ್ಯವಾಧೀತು ಕಂಕುಳು ಹೊಟ್ಟೆ ಭುಜ ಶಿರ ಮುಂಗೈಯಿ ಮುಖ ಇವು ಆರೂ ಉನ್ನತವಾಗಿ ಇದ್ದಕಾರಣ ಐಶ್ವರ್ಯವಂತನಾದಾನೂ ಹಣೆ ಎದೆ ಉಡಿ ಈ ಮೂರೂ ಅಗ್ರವಾದ ನಿಮಿತ್ತ ಲಕ್ಷಣವಂತನು ಕೊರಳು ಕಣಕಾಲು ಪ್ರಜಾಪತಿ ಈ ಮೂರು ಕೊಂಚವಾದಕಾರಣ ಭಾಗ್ಯವಂತನು ಧ್ವನಿ ಶರೀರ ಬಲ ನಾಭಿ ಇವು ಮೂರು ಗಂಭೀರವಾದುದರಿಂದ ಶುಚಿವಂತನು ಉದ್ಯೋಗವಂ ಮಾಡದೆ ಆಮೆಯ ಬೆನ್ನಿನಂತೆ ಕಠಿನವಾದ ಅಂಗೈಗಳುಳ್ಳವನು ಮೃದುವಾದ ಪಾದತಲಗಳಾದಕಾರಣ ರಾಜ್ಯ ಭೋಗವುಳ್ಳವನು ಕಿರುಬೆರಳಿನ ಮೊದಲಿಂದ ತರ್ಜನೀಮೂಲ ಪರ್ಯಂತವೂ ಅತಿಕ್ರಮಿಸಿ ರೇಖೆ ಇರೆ ದೀರ್ಘಾಯುಷ್ಮಂತನು

ಮಾಂಸವುಳ್ಳದಾಗಿ ಕೆಂಪಾಗಿ ಸಮವಾಗಿ ಮಟ್ಟವಾಗಿ ಹರಡುಗಳುಳ್ಳವ
ನಾಗಿ ನುಣುಪಾದ ಬೆಮರಿಲ್ಲದ ಪಾದವುಳ್ಳವನಾದಕಾರಣ ಐಶ್ವರ್ಯವಂತನು
ಕೆಂಪಾಗಿ ಕೊಂಚವಾದ ಕೈಗೆರೆಗಳುಳ್ಳವನಾದಕಾರಣ ಸುಖಿಯಾಗಿಹನು
ಸಣ್ಣನಾಗಿ ಬಟುವಾಗಿ ಪ್ರಜಾಪತಿಯ ಲಿಂಗವುಳ್ಳವನಾದಕಾರಣ ರಾಜಾಧಿ
ರಾಜನಹನು ಅಪಾನವಲ್ಲಿ ಹರಡುಗಳಲ್ಲಿ ಪಚ್ಚಳಗಳಲ್ಲಿ ನೇತ್ರಗಳಲ್ಲಿ ಕೆಂಪಾ
ಗಿ ಬಟುವಾದ ಕೆಂಪಾದ ಸುಳಿಗಳುಂಟಾದವನಾದಕಾರಣ ಮಹದೈಶ್ವರ್ಯವಂ
ತನು ಮೂತ್ರಗ್ರೈಯುಲು ಪ್ರದಕ್ಷಿಣವಾಗಿ ಏಕಧಾರೆಯಾಗಿದ್ದ ಕಾರಣ ವೀ
ರ್ಯದಲ್ಲಿ ಮತ್ಸ್ಯಗಂಧ ಮಧುಗಂಧ ವುಂಟಾದರೆ ಈ ಘನವಾದ ಧೊರ
ಯಹನು ವಿಶಾಲವಾದ ಮಾಂಸ ವತ್ತಾಗಿ ನುಣುಪಾದ ಪಚ್ಚಳಗಳದ್ದರೆ ದಂ
ಡಿಗೆ ಪಲ್ಲಕ್ಕಿ ಪಟ್ಟೆಮಂಚ ಸುಪ್ಪತ್ತಿಗೆ ಇವರಲ್ಲಿ ಸುಖವನನುಭವಿಸು
ಹನೂ ಈತನ ಅಂಗೈಯಲ್ಲಿ ಶ್ರೀವತ್ಸ ವಜ್ರರೇಖೆ ಕಮಲಮತ್ಸ್ಯರೇಖೆ
ಇಷ್ರು ಮೊದಲಾದ ಶುಭಾಕಾರರೇಖೆಗಳಿದ್ದವಾಗಿ ದೇವರ್ಕಳಿಗೆ ಸ್ವಾಮಿ
ಯಾದಾನು ಶಂಖದಂತೆ ಕೊರಳುಳ್ಳ ಮೂವತ್ತೆರಡು ದಂತಗಳಿದ್ದವಾಗಿ
ಮೇಘಸಿಂಹಧ್ವನಿಯಂತೆ ಗಂಭೀರಧ್ವನಿಯುಳ್ಳವನಾದಕಾರಣ ಸಕಲ
ದೇವಾಧಿಕನಹನು ಜೇನುತುಪ್ಪದ ಕಾಂತಿಯು ಪೋಲುನೇತ್ರಕಾಂತಿಯುಳ್ಳ
ವನಾದಕಾರಣ ಈತನ ಮುಖದಲ್ಲಿ ಮಹಾಲಕ್ಷ್ಮಿ ನಿತ್ಯವಾಗಿ ಇಹಳು
ಲಲಾಟದಲ್ಲಿ ಅಡ್ಡಲಾಗಿ ಇರುವ ರೇಖೆಗಳು ಸಿಂಹದ ಉದರದಂಥಾ ಉ
ದರವು ಅಂಗಾಲಲ್ಲಿ ಊರ್ಧ್ವರೇಖೆಯೂ ಉಸುರಿನಲ್ಲಿ ಪದ್ಮಗಂಧವೂ
ಕೂಡಿ ಹಿಡಿದಲ್ಲಿ ಎಡೆಬಿಡದಿರ್ದ ಬೆರಳುಳ್ಳ ವಳ್ಳಿತ್ತಾದ ಮೂಗುವುಳ್ಳ
ವನಾದಕಾರಣ ಮಹಾ ಭಾಗ್ಯವಂತನೂ ಇಂಥಾ ಶುಭಲಕ್ಷಣಂಗಳುಳ್ಳವ
ನಾದರೂ ಹನ್ನೆರಡನೆಯ ವರ್ಷದಲ್ಲಿ ಅಗ್ನಿಯಿಂದಾದರೂ ಸಿಡಲಿನಿಂದಾದರೂ
ವಿಘ್ನವು ತೋರುವದು ಆದರೇನಾಯಿತು ದೇವಾನುಗ್ರಹದಿಂದ ಆ ದೋ
ಷವು ಗುಣವಾಗುವದು ಈತನನ್ನು ಜಪ ಹೋಮ ನೇಮಗಳಿಂದ
ಚನ್ನಾಗಿ ರಕ್ಷಿಶಿಕೊಂಬುದೂ ಎಂದು ಹೇಳಿ ನಾರದನು ನಭವನಡದನು.
ಅನಂತರದಲ್ಲಿ ದಂಪತಿಗಳಿಬ್ಬರೂ ಬಹು ಶೋಕದಿಂ ಪ್ರಲಾಪಿಸಲಾ
ಕುಮಾರನು ಕೇಳಿ ಸಮೀಪಕ್ಕೆ ಬಂದು ನೀವು ಯಾತಕ್ಕೆ ವ್ಯಥೆಪಡುತ್ತಿ

ದ್ಧೀರಿ, ನಿಮ್ಮ ಪಾದರೇಣು ಎಂಬ ಜೋಡನ್ನು ಕೊಟ್ಟಂಥಾ ಎನ್ನನ್ನು ಅಗ್ನಿಯೂ ಶಿಡಲೂ ಏನಮಾಡಬಲ್ಲವು, ಮೃತ್ಯುಂಜಯನಾದ ಸದಾಶಿವನ ಆರಾಧಿಸಿ ಶಿಡಲು ಅಗ್ನಿಗಳನ್ನೂ ಅಂಜಿಸಿ ಗೆಲಬಲ್ಲೆನು ಎಂದು ನುಡಿದ ಕುಮಾರನ ವಾಕ್ಯವಂ ಕೇಳಿ, ಅಮೃತಸಾಗರದಲ್ಲಿ ಮುಳುಗಿದಂತೆ ಸಂತೋಷಪಟ್ಟು; ಎಲೈ ಕುಮಾರನೆ! ಯಮನು ಎನ್ನ ಏನಮಾಡಬಲ್ಲನೆಂಬ ವಚನವಂ ಇನ್ನೊಮ್ಮೆ ನುಡಿ, ಪೂರ್ವದಲ್ಲಿ ಪರಮೇಶ್ವರನು ಶ್ವೇತಕೇತುವನ್ನು ರಕ್ಷಿಸಲಿಲ್ಲವೆ, ಕಾಲಕೂಟವಿಷದೋಪಾದಿಯಲ್ಲಿದ್ದ ಜಲಂಧರ, ಅಂಧಕಾಸುರ ತಾರಕಾಸುರ, ಗಜಾಸುರ, ತ್ರಿಪುರರಾಕ್ಷಸರು ಮೊದಲಾದವರ ವಧಿಸಿ ತ್ರಿಲೋಕದ ಉಪದ್ರವವಂ ಪರಿಹರಿಸಿ ಸಲಹಲಿಲ್ಲವೆ, ಬ್ರಹ್ಮಾದಿಗಳಿಗೊಡೆಯನಾದ ಮೃತ್ಯುಂಜಯನನ್ನು ಆರಾಧಿಸು ಎಂದು ಮಾತಾಪಿತೃಗಳು ಬುದ್ಧಿಗಲಿಸಲಾಗ್ಗೃಹಪತಿ ಕೇಳಿ; ತಾಯಿತಂದೆಗಳಿಗೆ ನಮಸ್ಕರಿಸಿ ಕಳುಹಿಸಿಕೊಂಡು ಕಾಶೀಪಟ್ಟಣಕ್ಕೆ ಪೋಗಿ ಮಣಿಕರ್ಣಿಕೆಯಲ್ಲಿ ಸ್ನಾನವಂ ಮಾಡಿ ಮೂರುಲೋಕವನ್ನೂ ಸಲಹುವಂಥಾ ಪರಮಾನಂದದ ಗೆಣಿಸಿನಪೋಲಿರ್ದಂಥಾ ಕ್ಷೀರಸಮುದ್ರದಲ್ಲಿ ಪುಟ್ಟಿದ ಅಮೃತದ ಮುದ್ದೆಯೊ. ಬ್ರಹ್ಮಜ್ಞಾನದ ಅಂಕುರವೊ, ಮೋಕ್ಷವೃಕ್ಷದ ಫಲವೊ, ಮೋಕ್ಷಲಕ್ಷ್ಮಿಯ ಮುತ್ತಿನ ಚಂಡೋ ಎಂಬ ಪೋಲು ತೋರಲ್ಪಟ್ಟ ವಿಶ್ವನಾಥನಂ ಕಂಡು ನಮಸ್ಕರಿಸಿ ನಾರದ ಮುನಿಯಿಂದ ನಾನು ಕೃತಾರ್ಥನಾದೆನೆಂದು ಶುಭಲಗ್ನದಲ್ಲಿ ಲಿಂಗಪ್ರತಿಷ್ಠೆಯಂ ಮಾಡಿಕೊಂಡು ನಿತ್ಯವೂ ನೂರೆಂಟು ಕಲಶಂಗಳ ಗಂಗೋದಕದಿಂದ ಅಭಿಷೇಕವಂ ಮಾಡಿ, ಸಾವಿರದ ಎಂಟು ಕನ್ನೈದಿಲ ಪುಷ್ಪದಲ್ಲೂ ರಚಿಸಿದ ಮಾಲೆಯುಂ ಸಮರ್ಪಿಸಿ. ಆರುತಿಂಗಳುತರಗೆಲೆ ಆಹಾರ; ಆರುತಿಂಗಳುಫಲಾಹಾರ, ಆರುತಿಂಗಳುವಾಯ್ವಾಹಾರ, ಆರುತಿಂಗಳುಉದಕಾಹಾರ ಈರೀತಿಯಲ್ಲಿ ಎರಡುವರ್ಷತಪಸ್ಸಂ ಮಾಡುತ್ತಿರಲೂ, ವಿಶ್ವನಾಥನು ದೇವೇಂದ್ರನ ರೂಪಿನಿಂದವಜ್ರಧರನಾಗಿ ಬಂದು ತಾನು ದೇವೇಂದ್ರನು ನಿನ್ನ ಮನದಲ್ಲಿದ್ದ ವರವಂ ಕೇಳಿಕೊ; ಎನಲಾಗ ಆ ಬಾಲಕನಿಂತೆಂದನು, ನಾನು ನಿಂನ್ನಿಂದವರವನೊಲ್ಲೆನು, ಎನಗೆ ಮೃತ್ಯುಂಜಯನೆ ವರವಕೊಟ್ಟಾನೂ, ಎನಲಾದೇವೇಂದ್ರನಿಂತೆಂದನು, ತಾನು ಸಕಲದೇವಾಧಿಪತಿಯೂ, ತಾನು ಹೊರತಾಗಿ ಪರಮೇಶ್ವರನ್ಯಾರು, ನೀನು ಹುಚ್ಚುತನವಂಬಿಟ್ಟು ವರವಂ

ಕೇಳಿಕೆೊ ಎನಲು, ಶಿಶುವಾದ ಗೃಹಪತಿಯು ಇಂದ್ರನಿಗಿಂತೆಂದನು, ಎಲೈ ಅಹಲ್ಯಾಜಾರನೆ! ಪರಮೇಶ್ವರನುಹೊರತಾಗಿಮಿಕ್ಕವರಿಂದವರವನೊಲ್ಲೆನೆನಲು, ಇಂದ್ರನು ವಜ್ರವಂ ಝಡಿದು ಭಯಪಡಿಸಲುಬಾಲಕನು ಮೂರ್ಛಿತನಾದನು, ಅನಂತರದಲ್ಲಿ ಗೌರೀಪತಿಯು ನಿಜರೂಪದಿಂ ಪ್ರಸನ್ನನಾಗಿ ಏಳೈಬಾಲಕ! ಎಂದು ತನ್ನ ಹಸ್ತದಿಂದ ತಡಹಲು ಕಣ್ದೆರದು ನಿದ್ರೆಯಿಂದೆದ್ದವನೊಪಾದಿಯಲ್ಲಿ ಎದ್ದುಮುಂದಿರ್ದ ಕೋಟಿಸೂರ್ಯಪ್ರಕಾಶನಾದ ಫಾಲಲೋಚನನಾದಂಥಾ, ನೀಲಕಂಠನಾದ, ವೃಷಭಧ್ವಜನಾದ, ಚಂದ್ರಶೇಖರನಾದ, ಕಪರ್ದಿಯಾದ, ತ್ರಿಶೂಲಧರನಾದ, ಕರ್ಪೂರದಂತೆಶುಭ್ರನಾದ, ಗಜಚರ್ಮವಂಧರಿಸಿ ಪಾರ್ವತೀದೇವೀಸಹಿತ ಪ್ರಸಂನನಾದಮಹಾದೇವನಂಕಂಡು ತನ್ನ ಸ್ವಾಮಿಯೆಂದು ನಿಶ್ಚೈಸಿ ಹರ್ಷದಿಂದ ಪರವಶನಾಗಿ ಬಿಂನೈಸಲರಿಯದಿರ್ದ ಬಾಲಕನಂನೋಡಿ ಪರಮೇಶ್ವರನಿಂತೆಂದನು ಕೇಳೈಗೃಹಪತಿ ನಾನು ನಿನ್ನ ಭಕ್ತಿಯಂ ನೋಡಬೇಕಾಗಿ ಇಂದ್ರನರೂಪದಿಂ ಭಯಪಡಿಸಿದೆನು, ನೀನು ಅಗ್ನಿಲೋಕಕ್ಕೆ ಅಧಿಪತಿಯಾಗು, ಸಕಲದೇವತೆಗಳಿಗೂ ಮುಖವಾಗು, ಅಂತರ್ಯಾಮಿಯಾಗು. ನೀನು ಪೂಜಿಸಿದ ಅಗ್ನೀಶ್ವರನೆಂಬಲಿಂಗವನ್ನು ಆರುಪೂಜಿಸುವರೋ! ಅವರಿಗೆ ಅಗ್ನಿಮಾಂದ್ಯ, ಅಕಾಲದಲ್ಲಿ ಮರಣ ಇವುಗಳ ಬಾಧೆಯು ಇಲ್ಲದೆ ಸುಖದಲ್ಲಿರ್ದು, ಕಾಶಿಯಲ್ಲಿ ಮೋಕ್ಷವನೈದುವರು. ಈ ವಿಶ್ವೇಶ್ವರನಿಗೆ ಮೂಡಲು, ಗಂಗೆಗೆ ಪಡುವಲಾಗಿರ್ದ ಅಗ್ನೀಶ್ವರನನ್ನು ಮುಂದೆ ಆರಾಧಿಸುವರೊ ಅವರು ಅಗ್ನಿಲೋಕದಲ್ಲಿ ಇಹರು ಎಂದು ಶಿವನು ಬುದ್ಧಿಗಲಿಸಿ, ಅವನ ತಾಯಿತಂದೆ ಮೊದಲಾದವರಂಕರೆಸಿ ಅವರಮುಂದೆ ಕುಮಾರನಿಗೆ ಪಟ್ಟಾಭಿಷೇಕವಂಮಾಡಿ ಅಗ್ನಿಲೋಕಕ್ಕೆ ಕಳುಹಿ ತಾನು ಅದೃಶ್ಯನಾಗಿ ಲಿಂಗದಲ್ಲಿ ಐಕ್ಯವಾದನು ಎಂದು ಗಣಂಗಳು ಶಿವಶರ್ಮಂಗೆಪೇಳೆ, ಇನ್ನೂ ಕೇಳಬೇಕಾದ ಕಥೆಗಳಂಕೇಳು ಎಂದು ನುಡಿದರೆಂಬದಾಗಿ ಅಗಸ್ತ್ಯನು ಲೋಪಾಮುದ್ರೆಗೆ ನಿರೂಪಿಸಿದರೆಂದು ವ್ಯಾಸರು ತನಗರುಹಿದ ಅರ್ಥವಂಸೂತನು ಶೌನಕಾದಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ೪। * ಇಂತು ಶ್ರೀಮತ್ಸಮಸ್ತಭೂಮಂಡಲೆತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀ ಕೃಷ್ಣರಾಜವಡಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕ ಭಾಷೆಯಿಂದ ವಿರಚಿಸಿದ ಸ್ಕಂ

ದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ವಿಶ್ವಾನರಪುತ್ರನಾದ ಗೃಹಪತಿಗೆ ಸಾಮುದ್ರಿಕಲಕ್ಷಣ ಅಗ್ನಿಲೋಕಾಧಿಪತ್ಯವಂಪೇಳ್ದ ಹನ್ನೊಂದನೆಯ ಅಧ್ಯಾಯಾರ್ಥನಿರೂಪಣಕ್ಕಂ ಮಂಗಳಮಹ .ಶ್ರೀ॥

ಹನ್ನೊಂದನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ಹನ್ನೆರಡನೇ ಅಧ್ಯಾಯ

ನೈಋತ್ಯಲೋಕ, ವರುಣಲೋಕವರ್ಣನೆ.

ಅನಂತರದಲ್ಲಿ ವಿಷ್ಣುಗಣಂಗಳಿಗೆ ಶಿವಶರ್ಮನು ನೈಋತ್ಯವೊದಲಾದ ಲೋಕಗಳ ಸ್ವರೂಪವಂಪೇಳಿ ಎನಲಾ ಗಣಂಗಳಿಂತೆಂದರು, ಕೇಳ್ಕೈ ಶಿವಶರ್ಮ! ಯಮನಪಟ್ಟಣಕ್ಕೆ ಪಡುವಲು ನೈಋತ್ಯನ ಪಟ್ಟಣ, ಅಲ್ಲಿ ಪರೋಪದ್ರವವಿಲ್ಲದೆ ಜಾತಿಮಾತ್ರದಿಂ ರಾಕ್ಷಸರೆನಿಸಿಕೊಂಬ ಪುಣ್ಯಾತ್ಮರುಂಟು. ಆರು ಕೆಲವರು ಹೀನಜಾತಿಗಳಾದರೂ ತಮ್ಮ ಕುಲಾಚಾರವಂಬಿಡದೆ, ನಿಂದ್ಯವಾದ ಅನ್ನಪಾನವಂಕೊಳ್ಳದೆ ಪರಸ್ತ್ರೀಪರಧನಗಳಂ ಬಯಸದೆ ನಿಜವೃತ್ತಿಯಿಂ ಬಂದಷ್ಟು ದ್ರವ್ಯದಿಂ ಜೀವನವಂಮಾಡಿಕೊಂಡು ಬ್ರಾಹ್ಮಣಸೇವೆಯಂ ಮಾಡುತ್ತಾ ವಿನಯಪರರಾಗಿ ತೀರ್ಥಯಾತ್ರೆಯಂಮಾಡಿಕೊಂಡು ದೇವಗುರುಭಕ್ತಿಯಿಂದ ಶಮೆದಮೆದಾನದಯೆ, ಸ್ಥೈರಣೆ, ಶುಚಿ ಇಂದ್ರಿಯನಿಗ್ರಹ, ಶೂರತ್ವ, ಸತ್ಯ, ಅಹಿಂಸೆಯೆಂಬಿವು ಸಕಲರಿಗೂ ಧರ್ಮಸಾಧನಂಗಳು, ಈ ಧರ್ಮಂಗಳಂ ಮಾಡಿದವರು ಈ ನೈಋತ್ಯಲೋಕದಲ್ಲಿ ಇಹರು, ಕಾಶೀಪ್ರಯಾಗಹೊರತಾದ ಕ್ಷೇತ್ರಗಳಲ್ಲಿ ದುರ್ಮರಣವಲ್ಲದೆ ಮೃತವಾದವರು ಈ ಲೋಕವಂಪಡೆವರು, ಅದುಕಾರಣ ಆತ್ಮಘಾತಕರಾಗಬಾರದು, ಆತ್ಮಘಾತಕರು ಅಂಧತಾಮಿಸ್ರವೆಂಬ ನರಕವನನುಭವಿಸುವರು. ಇಂತೀಲೋಕಾಧಿಪತಿಯಾದ ನೈಋತ್ಯನ ಉತ್ಪತ್ತಿಯಂ ಕೇಳು, ಪೂರ್ವದಲ್ಲಿ ವಿಂಧ್ಯಪರ್ವತದಲ್ಲಿ ಇಹ ನಿರ್ವಿಂಧ್ಯವೆಂಬ ನದಿಯ ತೀರದಲ್ಲಿ ಕಿರಾತಪಾಳಯದಲ್ಲಿ ಪಿಂಗಾಕ್ಷನೆಂಬ ಕಿರಾತನಾಯಕನುಂಟು ಆತನು ಕ್ರೂರ

ಕರ್ಮವಮಾಡುವನಲ್ಲ, ತೀರ್ಥಯಾತ್ರೆಗೆ ಬಂದು ಹೋಹರಂ ಬಾಧಿಸುವಂಥಾ ಸಿಂಹವ್ಯಾಘ್ರ ಮೊದಲಾದ ಕ್ರೂರಮೃಗಗಳನ್ನು ಸಂಹರಿಸುತ್ತಾ ಮಾಂಸಾಹಾರದಿಂ ಬದುಕುವವನಾದರೂ ನಂಬಿದ ಕೂಟದಲ್ಲಿ ಇದ್ದಂಥಾ ತನಯಾದಂಥಾ ಪಕ್ಷಿಮೃಗಂಗಳನ್ನು ಕೊಲ್ಲುವವನಲ್ಲ, ವ್ಯಾಧಿವಂತರನ್ನು, ಬಳಲಿಬಂದವರನ್ನೂ ರಕ್ಷಿಸುವನು, ಪಥಿಕರಿಗೆಪಾದರಕ್ಷೆ, ಕೃಷ್ಣಾಜಿನ ಮೊದಲಾದವಂ ಕೊಟ್ಟು ಅನಪ್ರುಬೇಡದೆ ಕಣಿವೆಯುಂದಾಂಟಿಸಿ ಈ ವಿಂಧ್ಯಾದ್ರಿಯೊಳಗಾಗಿ ನಿಮ್ಮ ನಾರೂತಡಹರೆಂದು ಅಭಯವನಿತ್ತು ಪಥಿಕರನು ತನ್ನ ಮಕ್ಕಳಂದದಿ ನೋಡಿ ರಕ್ಷಿಸುತ್ತಿರಲು, ಆ ಪಥಿಕರು ಆತಂಗೆ ಪ್ರತಿ ತೀರ್ಥದಲ್ಲಿಯೂ ಬಂದು ಸ್ನಾನಫಲವಂ ಕೊಟ್ಟು ಆಶೀರ್ವಾದವಂ ಮಾಡುವರು, ಇಂತು ಮಾರ್ಗವಂ ನಡಸುತ್ತಿರಲು, ಆ ಸಮೀಪಗ್ರಾಮದಲ್ಲಿರ್ದ ಈ ಪೈಂಗಾಕ್ಷನ ಚಿಕ್ಕಪ್ಪನಾದಂಥಾ ತಾರಕಾಕ್ಷನು ಒಂದು ರಾತ್ರಿಯಲ್ಲಿ ಮಾರ್ಗದವರನ್ನು ಸುಲಿಯಬೇಕೆಂದು ದಾರಿಯಂ ಕಟ್ಟಿ ಇರಲು, ಬೆಳಗಾಗುವ ಸಮಯದಲ್ಲಿ ಮಾರ್ಗಸ್ಥರು ಬರೇದಾರಿಯಂ ಕಟ್ಟಿ ಅವರನ್ನು ಕೊಲ್ಲು ಕಡೀ ಕಟ್ಟೂ ಎಂದು ಗರ್ಜಿಸಲು, ಆ ಧ್ವನಿಯಂ ಪೈಂಗಾಕ್ಷನು ಕೇಳಿ ತನ್ನ ಪ್ರಾಣಪದಕವಾದ ಪರದೇಶಿಗಳನ್ನು ತಡವವರಾರೋ ಎಂದು ಅದ್ದಲಿಸುತ್ತಾ ಬರಲು, ಆ ತಾರಕಾಕ್ಷನು ತನ್ನ ಭೃತ್ಯರಿಂಗಿಂತೆಂದನು, ಮೊದಲುಪೈಂಗಾಕ್ಷನಂ ಕೊಂದು ಮತ್ತೆ ಮಾರ್ಗಸ್ಥರಂ ಸುಲುಕೊಳ್ಳಿ ಎಂದು ಅದ್ದಲಿಸುತ್ತಾ ಬರಲು, ಆ ಮಾತನ್ನು ಕೇಳಿ ಪೈಂಗಾಕ್ಷನು ತನ್ನ ಪ್ರಾಣಪದಕವಾದಂಥಾ ಪಥಿಕರನ್ನು ಸುಲಿಸಲೀಸದೆ ಆ ಪಥಿಕರಂ ಬೆನ್ನಹಾಕಿಕೊಂಡು ಅವರ ಕೂಡೆ ಕಾದಿ ತಾನು ಘಾಯವಡೆದು ಅವರಂ ಸಂಹರಿಸಿ ಈ ಪಥಿಕರಂ ಸುಮಾರ್ಗವಂ ಸೇರಿಸಿ, ತಾನು ಘಾಯದಿಂ ಮರಣವಿಲ್ಲದೆಮತ್ತೂ ಮಾರ್ಗವ ನಡಸುತ್ತಿರಲು, ಈ ಪೈಂಗಾಕ್ಷನ ದೃಢಕ್ಕೆ ಪರಮೇಶ್ವರನು ಮೆಚ್ಚಿ ಪ್ರತ್ಯಕ್ಷನಾಗಿ ಆ ಪೈಂಗಾಕ್ಷನಿಗೆ ಚಿರಂಜೀವಿತ್ವಮಂ ಕೊಟ್ಟು ನೈಋತ್ಯನೆಂದು ಹೆಸರನ್ನೂ ನೈಋತ್ಯಪದವಿಯನ್ನೂ ಕೊಟ್ಟನು, ಎಂದು ಗಣಂಗಳು ಶಿವಶರ್ಮಂಗೆ ನೈಋತ್ಯನ ಉತ್ಪತ್ತಿಯಂ ಪೇಳಿ ಮತ್ತಿಂತೆಂದರು ಕೇಳೈ ಶಿವಶರ್ಮನೆ! ಈ ನೈಋತ್ಯನ ಲೋಕಕ್ಕೆ ಬಡಗಲಾಗಿ ಕಾಣಿಸುವದು ವರುಣಲೋಕವು, ಇದರ ಮಹಿಮೆಯಂ ಕೇಳು; ಎಂದು ಹೇಳ್ವ

ತ್ತಿದ್ದಾರು, ನ್ಯಾಯಾರ್ಜಿತವಾದದ್ರವ್ಯದಿಂದ ಕೆರೆ, ಕುಂಟೆ, ಭಾವಿಯಂ ಕಟ್ಟಿಸಿದವರು, ನಿರ್ಜಲವಾದ ಭೂಮಿಯಲ್ಲಿ ಉದಕದಾನವ ಮಾಡಿದವರು, ಶೈತ್ಯೋಪಚಾರಗಳಿಂದ ಪರರ ಸಂತಾಪವಂ ಬಿಡಿಸಿದವರು, ಛತ್ರ, ಕಮಂಡಲ, ಅರವಟ್ಟಿಗೆ, ಗಂಧೋದಕವಾದ ಉದಕುಂಭ, ತೃಣನೆಯ ಚಪ್ಪರ ಸಾಲುಮರಗಳು,ಬೀಸಣಿಗೆ, ಪಾನಕ, ರಸಾಯನ, ಮೊಸರು,ಮಜ್ಜಿಗೆಇವಂ ದಾನವಂ ಮಾಡಿದವರು, ಬ್ರಾಹ್ಮಣರಿಗೆ ಗೋದಾನ, ಮಹಿಷೀದಾನವಂ ಮಾಡಿದವರು, ಶಿವಲಿಂಗಕ್ಕೆ ವಸುಧಾರೆಯಂ ಕಟ್ಟಿಸಿದವರು, ಹೊದರುಗಳಶೋಧಿಸಿ ಅಮಾರ್ಗವನುಮಾರ್ಗವಮಾಡಿದವರು, ಅಂಜುವವರಿಗೆಅಭಯವನಿತ್ತವರು ಕೆರೆಸಂಕೋಲೆಗಳನು ಬಿಡಿಸಿದರು, ಹರಿಗೋಲುಮಾಡೆಮೊದಲಾದ್ದರಿಂದನದಿಯ ದಾಂಟಿಸಿದವರು, ಇವುಮೊದಲಾದ ಧರ್ಮಗಳಂ ಮಾಡಿದವರು ಈ ವರುಣಲೋಕದಲ್ಲಿ ಸುಖದಿಂದಿಹರು. ಈ ಲೋಕಕ್ಕೆ ಅಧಿಪತಿವರುಣನು ಈ ವರುಣನ ಉತ್ಪತ್ತಿಯಂ ಕೇಳು! ಪೂರ್ವದಲ್ಲಿ ಕರ್ದಮನೆಂಬ ಋಷಿಗೆ ಶುಚಿಷ್ಮಂತನೆಂಬ ಕುಮಾರನು ವುಂಟು ಆತನು ಕೊಳದಲ್ಲಿ ಸ್ನಾನವಂ ಮಾಡುತಿರೆ ನೆಗಳು ಬಂದು ಅಪಹರಿಸಿಕೊಂಡು ಹೋಯಿತು ಆತನ ಸಂಗಡ ಹೋದ ಬಾಲಕರು ಬಂದು ಅವರ ತಂದೆಗೆ ಹೇಳಲು ಸಮಾಧಿಯಲ್ಲಿ ಶಿವಪೂಜೆಯಂ ಮಾಡುವ ಕರ್ದಮ ಋಷಿಯು ಪುತ್ರನ ವಿಪತ್ತಂ ಕೇಳಿ ಮನಸ್ಸು ಚಂಚಲವಾದುದಿಲ್ಲಾ ಆ ಧ್ಯಾನದಿಂದ ಹೃತ್ಕಮಲಮಧ್ಯದಲ್ಲಿ ಶಿವನಂ ಕಂಡನು ಆ ಶಿವನ ಶರೀರದಲ್ಲಿ ಬ್ರಹ್ಮಾಂಡದೊಳಗಾದ ಚತುರ್ದಶಭುವನವನ್ನೂ ಚಂದ್ರ ಸೂರ್ಯ ನದಿ ಪರ್ವತ ಸಮುದ್ರಗಳು ನಾನಾರಣ್ಯ ದೇವತಾ ಪಟ್ಟಣ ಕೆರೆ ಕುಂಟೆ ಭಾವಿ ಕೊಳಗಳು ಇವು ಮೊದಲಾದವಂ ಕಂಡು ಉದಕದಲ್ಲಿ ಸ್ನಾನವಂ ಮಾಡುವ ಬಾಲಕರೊಳು ತನ್ನ ಕುಮಾರನನ್ನು ನೆಗಳುಕೊಂಡು ಹೋಗಲು ಓರ್ವ ಜಲದೇವತೆ ಬಂದು ಮೊಸಳೆಯುಕ್ಕೆಯಿಂದ ತನ್ನ ಕುಮಾರನಂ ಬಿಡಿಸಿ ಸಮುದ್ರನಿಗೆ ಒಪ್ಪಿಸಲು ಅನಿತರೊಳು ಶೂಲಪಾಣಿಯೆಂಬ ಒಬ್ಬ ರುದ್ರಗಣವು ಬಂದು ಐಯ್ಯಾ ಸಮುದ್ರನೆ ಶಿವಭಕ್ತನಾದ ಕರ್ದಮನ ಕುಮಾರನಾದವನ ನೀನೇತಕ್ಕೆ ಕರಸಿದೆ ಎನಲು ಆ ಸಮುದ್ರನು ಭಯಪಟ್ಟು ಬಾಲಕನಂ ವಸ್ತ್ರರತ್ನಾಭರಣಗಳಿಂದಲಂಕರಿಸಿ ನೆಗಳನು ಹಗ್ಗದಿಂದ ಕಟ್ಟಿಸಿಕೊಂಡು ಈಶ್ವರನ ಸಮೀಪಕ್ಕೆ

ಬಂದು ನಮಸ್ಕರಿಸಿ ಬಿನ್ನವಿಸಿದನು ಎಲೈ ಸ್ವಾಮಿಯೆ ನೆಗಳು ಈ ಕುಮಾ
ರನಂ ಕೊಂಡುಬಂತು ತಾನು ಅರಿತುವನಲ್ಲವೆನಲು ಪರಮೇಶ್ವರನು ತನ್ನ
ಗಣಂಗಳು ಕರದು ಈ ನೆಗಳು ಸಹಾ ಈ ಕುಮಾರನ ಇವರ ಮನೆಗೆ ಕ
ರಕೊಂಡು ಹೋಗಿ ಕೊಟ್ಟು ಬನ್ನಿ ಎನಲಾ ಗಣಂಗಳು ಕರ್ದಮನ ಬಳಿ
ಗೆ ಬಂದು ನಿನ್ನ ಕುಮಾರನ ಈ ನೆಗಳು ಕೊಂಡುಬಂತು ನಿನ್ನ ಕುಮಾರ
ನತೆಗದುಕೊ ಎನಲಾ ಕರ್ದಮನು ತನ್ನ ಧ್ಯಾನವಲ್ಲಿ ಇದೆಲ್ಲಮಂ ಕಂಡು ಕ
ಣ್ದೆರದು ನೋಡುವನಿತರೊಳು ಮುಂದಿರ್ದ ಕುಮಾರನಂ ಕಂಡು ತಕ್ಕೈಸಿ
ಶಿರವನಾಘ್ರಾಣಿಸಿ ಇಂದು ಪುನರ್ಜನನವಾದನೆಂದು ಕರ್ದಮನು ಧ್ಯಾನದಿಂ
ಕಣ್ದೆರವನಿತರೊಳು ವರ್ಷ ವೈನೂರ ಯಿಪ್ಪತ್ತಾಯಿತ್ತು ಕರ್ದಮಂಗೆ
ಇಂಥಾ ವರ್ಷ ಕ್ಷಣವಾಯಿತು. ಅನಂತರವೊಳು ಶುಚಿಷ್ಮಂತನೆಂಬ ಕುಮಾ
ರನು ಕಾಶೀಪಟ್ಟಣಕ್ಕೆ ಹೋಗಿ ಲಿಂಗಪ್ರತಿಷ್ಠೆಯಂ ಮಾಡಿಕೊಂಡು ಐದು
ಸಾವಿರ ವರ್ಷ ಉಗ್ರತಪವಂ ಮಾಡಲು ಈಶ್ವರನು ಪ್ರಸನ್ನನಾಗಿ ಎಲೈ
ಬಾಲಕನೆ ಉತ್ತಮವಾದ ವರವಂ ಬೇಡಿಕೊ ಎನಲಾ ಕುಮಾರನಿಗೆ ತನಿಗೆ
ಸಕಲ ನದೀ ಸಮುದ್ರಗಳಿಗೂ ಜಲಚರ ಪ್ರಾಣಿಗಳಿಗೂ ಆಧಿಪತ್ಯವಂ ಕೊ
ಡಬೇಕು ಎನಲು ಪರಮೇಶ್ವನು ಆ ಕುಮಾರಂಗೆ ಸಕಲ ಜಲಚರಸಮುದಾ
ಧಿಪತ್ಯವುಳ್ಳ ವರುಣಲೋಕಾಧಿಪತ್ಯವುಮಂ ಕೊಟ್ಟು ಮಣಿಕರ್ಣಿಕೇಶ್ವರ
ನ ನೈಋತ್ಯದಲ್ಲಿ ನೀನು ಪ್ರತಿಷ್ಠೆಯಂ ಮಾಡಿದ ವರುಣೇಶ್ವರನ ಪೂಜೆಯಂ
ಮಾಡಿದವರ್ಗೆ ಸಂತಾಪ ಅಕಾಲಮರಣ ಜಲೋದರ ಬಾಯಾರಿಕೆ ಇಂತಿವ
ರ ಭಯವಿಲ್ಲ ಈ ಲಿಂಗಸ್ಮರಣೆಯಿಂ ನೀರಸವಾದ ಅನ್ನಪಾನಂಗಳು ರಸವ
ಹವು ಎಂದು ನಿರೂಪಿಸಿ ಈಶ್ವರನು ಪ್ರತ್ಯಕ್ಷವಾಗಿರಲು. ವರುಣನು ತನ್ನ
ಸಮಸ್ತ ಬಂಧುಗಳೊಡಗೂಡಿ ಅಂದಿನಾರಭ್ಯ ವರುಣಲೋಕಕ್ಕೆ ಅಧಿಪತಿ
ಯಾಗಿದ್ದನು ಈ ವರುಣನ ವೃತ್ತಾಂತವನಾರು ಕೇಳುವರೊ ಅವರ ಪಾ
ಪಂಗಳು ಪರಿಹಾರವೆಂದು ಗಣಂಗಳು ಶಿವಶರ್ಮಂಗೆ ಪೇಳ್ದರೆಂದು ಅಗಸ್ತ್ಯ
ನು ಲೋಪಾಮುದ್ರೆಗೆ ಪೇಳ್ದ ವೃತ್ತಾಂತವಂ ಸೂತಪುರಾಣಿಕನು ಶೌ
ನಕಾದಿ ಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ ॥ ಇಂತು ಶ್ರೀಮ
ತ್ಸಮಸ್ತಭೂಮಂಡಲೇತ್ಯಾದಿಬಿರುದಾಂಕಿತರಾದ ಮಹಿಶೂರಪುರವರಾಧೀಶ
ಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕ

ಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಕರ್ದಮ ಋಷಿಪುತ್ರನಿಗೆ ವರುಣಲೋಕಾಧಿಪತ್ಯವಾದುದೆಂಬಂಥಾ ಹನ್ನೆರಡನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ ಶ್ರೀಃ

ಹನ್ನೆರಡನೇ ಅಧ್ಯಾಯ ಸಂಪೂರ್ಣವು.

ಶ್ರೀ ವಿಶ್ವೇಶ್ವರಾಯನಮಃ

ಹದಿಮೂರನೇ ಅಧ್ಯಾಯ.

ವಾಯುಲೋಕ ಕುಬೇರಲೋಕ ಇವರ ಉತ್ಪತ್ತಿಸಹಾ ||

ಅನಂತರದಲ್ಲಿ ವಿಷ್ಣುಗಣಂಗಳಂತೆಂದರು ಕೇಳ್ಳೈ ಶಿವಶರ್ಮ ಈ ವರುಣಲೋಕಕ್ಕೆ ಉತ್ತರದಲ್ಲಿ ಗಂಧವತೀ ಎಂಬ ಪಟ್ಟಣವು ಈ ಪಟ್ಟಣಕ್ಕೆ ಅಧಿಪತಿ ವಾಯುವು ವಾಯುವಿನ ಉತ್ಪತ್ತಿಯಂ ಕೇಳು ಪೂರ್ವದಲ್ಲಿ ಕಶ್ಯಪ ವಂಶದಲ್ಲಿ ಪುಟ್ಟಿದ ಪೂತಾತ್ಮನೆಂಬ ಬ್ರಾಹ್ಮಣನೋರ್ವನು ಕಾಶಿಯಲ್ಲಿ ಪರಮೇಶ್ವರನೆಂಬ ಲಿಂಗವಂ ಪ್ರತಿಷ್ಟೆಯಂ ಮಾಡಿಕೊಂಡು ಹತ್ತು ಸಾವಿರ ವರ್ಷ ಉಗ್ರತಪಸ್ಸಂ ಮಾಡಿಕೊಂಡು ಇರಲು. ಪರಮೇಶ್ವರನು ಪ್ರಸನ್ನನಾಗಿ ಎಲೈ ಪೂತಾತ್ಮನೆ ವರವಂ ಬೇಡಿಕೊ! ನಿನ್ನ ತಪಸ್ಸಿಗೆ ಅಸಾಧ್ಯವೇನಿದ್ದೀತು ಎನಲು ಆ ಬ್ರಾಹ್ಮಣನು ಕೇಳಿ ಕೈಮುಗಿದು ಭಕ್ತಿಯಿಂ ಸ್ತೋತ್ರವಂ ಮಾಡಿದನು ಎಲೈ ದೇವದೇವನೆ ಬ್ರಹ್ಮಾದಿಗಳಿಗೆ ವರಗಳನಿತ್ತವನೀನು ಅನಂತವೇದಂಗಳು ನಿನ್ನ ಮಹಿಮೆಯಂ ಕೇಳಿ ಅರಸಿ ಕಾಣದೆ ಮರಳಿದವು ನಿನ್ನನು ಬ್ರಹ್ಮಾದಿಗಳೂ ಕಾಣರೂ ನನ್ನ ಮನಸ್ಸು ನಿನ್ನ ಸ್ತುತಿಯಂ ಮಾಡಬೇಕೆಂದು ಪೀಡಿಸುತ್ತಿದೆ ತನ್ನ ಅಂತಃಕರಣಗಳು ನೀನೆ; ಸಗುಣನಿರ್ಗುಣ ಶ್ರುತಿಸ್ಮೃತಿ ಶಾಸ್ತ್ರಂಗಳು ನೀನೇ ಸರಿ, ಸ್ತುತಿಸಲ್ಪಟ್ಟವನೂ ನೀನೆ ಸ್ತುತಿಯೂ ನೀನೇ, ಸೃಷ್ಟಿಗೆ ಮುನ್ನ ನಾಮಗೋತ್ರರಹಿತನಾಗಿ ಸ್ವತಂತ್ರನಾಗಿಯೂ ನೀನೊಬ್ಬನೆ ಸರೀ ಕ್ರೀಡಿಸಲು ಶಕ್ಯವಲ್ಲ ಎಂದು ನಿನ್ನ ಅಧೀನವಾದ ಶಕ್ತಿಯಿಂ ಸಂಪಾದಿಸಿದೆ ಮೊದಲು ನೀ

ನೊಬ್ಬನಾಗಿದ್ದು ದ್ವಿರೂಪನಾದೆ ನೀನು ಜ್ಞಾನರೂಪನು ನಿನ್ನ ಹೆಚ್ಚಿನ ರೂ
ಪು ಶಿವಶಕ್ತಿಗಳೆಂಬ ನಿಮ್ಮ ಇಬ್ಬರಿಂದಲೂ ಕ್ರಿಯಾಶಕ್ತಿಯಾಯಿತು ಆ ಶ
ಕ್ತಿಯಿಂ ಸಕಲ ಪ್ರಪಂಚವಾಯಿತು ಜ್ಞಾನಶಕ್ತಿ ನೀನು ಇಛ್ಛಾಶಕ್ತಿ ಪಾ
ರ್ವತೀ ಕ್ರಿಯಾಶಕ್ತಿ ಜಗತ್ತು ಇದೆಲ್ಲಕ್ಕೂ ಕಾರಣ ನೀನು ನಿನ್ನ ಬಲಭಾ
ಗ ಬ್ರಹ್ಮ ನಿನ್ನ ಯಡದಭಾಗ ವಿಷ್ಣುವು ಚಂದ್ರಸೂರ್ಯಾಗ್ನಿಗಳು ನಿನ್ನ
ನೇತ್ರಗಳು, ನಿನ್ನ ಶ್ವಾಸವೇ ವೇದಗಳು, ನಿನ್ನ ಶ್ರೋತ್ರವೆ ವಾಯುವು ನಿನ್ನ
ತೋಳ್ಗಳೆ ದಿಕ್ಕುಗಳು ನಿನ್ನ ಮುಖವೆ ಬ್ರಾಹ್ಮಣನು ಕ್ಷತ್ರಿಯರು ನಿನ್ನ
ಬಾಹುಗಳು, ವೈಶ್ಯರು ನಿನ್ನ ತೊಡೆಗಳು, ಶೂದ್ರರು ನಿನ್ನ ಪಾದಗಳು ನೀ
ಘಗಳು ನಿನ್ನ ಮುಡಿಯು ಕೂದಲು ನೀನು ಸ್ತ್ರೀಪುರುಷರೂಪಿನಿಂದ
ಬ್ರಹ್ಮಾಂಡವಂ ಸೃಜಿಸಿ ಒಳಗೂ ಹೊರಗೂ ವ್ಯಾಪಿಸಿ ಜಗನ್ಮಯನಾಗಿರು
ತಿಹೆ ನಿನಗೆ ನೀನೆ ಒಡೆಯನೆಂದು ನನ್ನ ಬುದ್ಧಿ ಸ್ಥಿರವಾಗಿ ಇದೆ ಎಂದು ಪೂ
ತಾತ್ಮ ನುಡಿಯಲು. ಈಶ್ವರನಾತಂಗೆ ತನ್ನ ಮೂರ್ತಿತ್ರಯಾತ್ಮಕಶಕ್ತಿಯಂ
ಕೊಟ್ಟು ದಿಕ್ಪತಿಯಾಗಿ ಸಕಲ ತತ್ವವನೂ ಬಲ್ಲವನಾಗಿ ಸಕಲರಿಗೂ ಆ
ಯುಷ್ಯರೂಪನಾಗಿ ಸುಖದಲ್ಲಿ ಇರು ಜ್ಯೇಷ್ಠೇಶ್ವರನ ಪಡುವಲಲ್ಲಿ ವಾಯು
ತೀರ್ಥದ ಬಡಗಲಲ್ಲಿ ಯಿದ್ದ ನಿನ್ನ ಹೆಸರಿನ ಲಿಂಗವಂ ಒಂದು ಭಾರಿ ಆ
ರು ಪೂಜಿಸುವರೊ ನೋಡುವರೋ ಅವರು ಸಕಲೈಶ್ವರ್ಯವುಳ್ಳ ನಿನ್ನ
ಲೋಕದಲ್ಲಿ ಸುಖಿಯರಾಗಿ ಇರಲಿ ಎಂದು ವರವನಿತ್ತು ಆಲಿಂಗದಲ್ಲಿಯೆ
ಐಕ್ಯವಾದನು. ಎಂದು ವಾಯುವಿನ ಉತ್ಪತ್ತಿಯಂ ಪೇಳಿ. ಈ ಪಟ್ಟಣಕ್ಕೆ ಮೂಡ
ಲಲ್ಲಿ ಅಳಕಾಪುರಿ ಇರುವದು ಆ ಪಟ್ಟಣಕ್ಕೆ ಕುಬೇರನು ಅಧಿಪತಿ ಆ ಕು
ಬೇರನು ಭಕ್ತಿಯಿಂದ ಈಶ್ವರಂಗೆ ಮಿತ್ರನಾದನು. ಶಿವಪೂಜೆಯಿಂದ ಪದ್ಮ
ಮಹಾಪದ್ಮ ಮೊದಲಾದ ನವನಿಧಿಗಳಿಗೂ ಕರ್ತನಾದನು, ಎಂದು ಪೇಳ್ದ ಗ
ಣಂಗಳಿಗೆ ಶಿವಶರ್ಮನಿಂತೆಂದನು ಕುಬೇರನೆಂಬವನಾರು ಈಶ್ವರನ ಮಿತ್ರ
ನಾದುದಕ್ಕೆ ಆತ ಮಾಡಿದ ಭಕ್ತಿಯೇನು ಎಂದು ಬೆಸಗೊಳ್ಳಲು ಗಣಂಗ
ಳಿಂತೆಂದು ನುಡಿದರು ಕೇಳೈ ಶಿವಶರ್ಮನೆ ಕಾಂಚೀಪಟ್ಟಣದಲ್ಲಿ ಯಜ್ಞ
ದತ್ತನೆಂಬ ಒಬ್ಬ ಸೋಮಯಾಜಿಯಿದ್ದನು ವೇದವೇದಾಂಗಗಳ ಪಠಿಸಿದ
ನು ರಾಜಪೂಜ್ಯನು ಧನಿಕನು ಕೀರ್ತಿವಂತನು ಅಗ್ನಿಹೋತ್ರನಿರತನು ಆ
ತನ ಕುಮಾರನು ಗುಣನಿಧಿಯೆನಿಸಿಕೊಂಬುವನು ಸಕಲವಿದ್ಯಗಳನ್ನೂ ಬಲ್ಲ

ವನು ಕೆಲವುಕಾಲದಮೇಲೆ ಜೂಜುಗಾರನಾದನು, ತಾಯಕ್ಕೈಯ್ಯಧನಮಂ ಕೊಂಡು ದುರ್ಜನರೊಡನೆ ಸ್ನೇಹವಂಬೆಳಸಿ ವೇದಶಾಸ್ತ್ರಪುರಾಣಬ್ರಾಹ್ಮಣರಂನಿಂದಿಸಿ ಗೀತನೃತ್ತವಾದ್ಯಂಗಳಲ್ಲಿ ಪ್ರವೀಣನಾಗಿ ನಟವಿಟವಿಾಷಂಡಭಂಡರೊಳು ಇಷ್ಟವಂಮಾಡಿ ತಾಯಿಯ ಮಾತಂಕೇಳದೆ ಇಹನು. ಆಸೋಮಯಾಜಿಯು ಮನೆಗೆ ಬಂದಬಂದಾಗ ತನ್ನಸ್ತ್ರೀಯಕರೆದು ನಿನ್ನ ಮಗನೆಲ್ಲಿ ಹೋದನು, ಒಂದು ವ್ಯಾಳೆಯೂ ಕಾಣೆನೆಂದು ಕೇಳಿದಾಗ ಸ್ನಾನ, ದೇವಪೂಜೆಯಂಮಾಡಿ, ವೂಟವಂಮಾಡುತ್ತಲೆ, ತನ್ನಗೆಳೆಯರಂಕೂಡಿಕೊಂಡು ಓದುವದಕ್ಕೆ ಹೋದನು, ಎಂದು ಒಬ್ಬನೇಮಗನಾದ ಕಾರಣ ತಾಯಿಯು, ಮಗನ ದುರ್ಗುಣಂಗಳಂ ಹೇಳದೆ ಮರಸುತ್ತಾ ಇಹಳು, ಹೀಗೆ ಕುಮಾರನಡೆಯುತ್ತಾ ಇರಲು. ದೀಕ್ಷಿತನು ಅತಂಗೆ ಹದಿನಾರನೆಯ ವರ್ಷದಲ್ಲಿ ಮದುವೆಯಂಮಾಡಿದನು. ಅನಂತರದಲ್ಲಿ ಅವನು ದುರ್ಗುಣವಂಬಿಡದಿರಲು, ತಾಯಿ ಮಗನಿಗಿಂತೆಂದಳು ಎಲೆ ಗುಣನಿಧಿಯೆ! ನೀನು ನಡಿಯುವದು ದುರಾಚಾರ, ನಿಮ್ಮಪ್ಪನು ಕೋಪಿಸಿಕೊಂಡರೆ ನಂಮ್ಮಿಬ್ಬರನ್ನು ಕೊಂದಾನು, ನಿನ್ನ ಕುಚೇಷ್ಟೆಗಳಂ ನಾನುಮರಸಿಕೊಂಡು ಇದ್ದೇನೆ, ನಿಮ್ಮವರೆಲ್ಲರೂ ಶ್ರೋತ್ರಿಯರು, ಸೋಮಯಾಜಿಗಳು ಎಂದು ಲೋಕಪ್ರಸಿದ್ಧರು. ನೀನು ಸದಾಚಾರಿಯಾಗಿ ಸುಜ್ಞಾನಿಯಾಗಿ ವಿದ್ಯಾಭ್ಯಾಸವಂಮಾಡು; ನಿನಗೆ ತಕ್ಕಂಥಾ; ಕುಲಗುಣರೂಪವುಳ್ಳಂಥಾ ಮದವಳಗಿತ್ತಿ ಹದಿನಾರು ವರ್ಷದವಳು, ನೀನು ಹತ್ತೊಂಭತ್ತು ವರ್ಷದವನು, ಇವಳನ್ನು ಆಳುವನಾಗು; ಪಿತೃಭಕ್ತನಾಗು, ನಿನ್ನ ಮಾವನು ಸೋಮರಥನು, ಮಾವಂದಿರು ಘನವಾದವರು, ನೀನು ಉಭಯಕುಲಪ್ರಸಿದ್ಧನು, ಮನೆ ಮನೆಗಳಲ್ಲಿ ಓದಿಕೊಂಬುವ ಬುದ್ಧಿವಂತರ ಮಕ್ಕಳ ನೋಡು, ನಿನ್ನ ವರ್ತಮಾನವನ್ನು ಅರಸು ಕೇಳಿದರೆ ನಿನ್ನ ತಂದೆಯನ್ನು ಅವಮನ್ನಣೆಯಂ ಮಾಡ್ಯಾರು. ಲೋಕದವರು ತಾಯಂತೆ ಮಕ್ಕಳೆಂಬರು, ತಾನು ತನ್ನ ಪತಿಯನ್ನು ದೇವತೆಯೆಂದುಭಾವಿಸುವದಕ್ಕೆ ಈಶ್ವರನೇಸಾಕ್ಷಿ. ಋತುಮತಿಯಾದಾಗಲೂ, ಮತ್ತೊಬ್ಬರಮುಖವಂನೋಡಿದವಳಲ್ಲ, ವಿಧಿಯಿಂಥಾಮಗನನೆಲ್ಲಿಕೊಟ್ಟಿತೋ ಎಂದು ವಿಧಿಯಂ ಜರಿದು ಎಷ್ಟು ಬುದ್ಧಿಯ ಹೇಳಿದರೂ ಕೇಳುವವನಲ್ಲ, ದುರಾಚಾರಿಯನೆಂತುಳುಹಲುಬಹುದು, ಜೇಟಿ, ಮದ್ಯ

ಪಾನ, ಚಾಡಿ, ಕಳವು, ಜೂಜು, ಪರಸ್ತ್ರೀವ್ಯಸನ, ವೇಶ್ಯಾಗಮನ, ಇವು
ಮೊದಲಾದ ಅವಗುಣವುಳ್ಳವರು ಸನ್ಮಾರ್ಗಗಳೆಂತಾದಾರು, ನಿನ್ನಮತಿ ಇ
ಷ್ಟೆಲ್ಲದೆ ಸುಬುದ್ಧಿಯಿಲ್ಲಾ; ಮನೆಯ ವಸ್ತುಗಳೆಲ್ಲವನ್ನು ಜೂಜುಗಾರರಿ
ಗೆ ಕೊಟ್ಟು, ತಾನು ನಿದ್ರೆಯಮಾಡಿದಾಗ ಕೈಯ್ಯಲ್ಲಿರ್ದ ಮುದ್ರೆಯುಂಗುರ
ವಕೊಂಡುಪೋಗಿ ಜೂಜುಗಾರರಿಗೆ ಕೊಟ್ಟ ಎಂದು ಮಗನಿಗೆ ಬುದ್ಧಿ
ಯ ಹೇಳ ತಾಯಿ ಚಿಂತಿಸುತ್ತಿರಲೂ. ದೈವಾಧೀನದಿಂದ ಜೂಜುಗಾರನ
ಕೈಯ್ಯಲ್ಲಿರ್ದ ತನ್ನ ಗುರುತಿನುಂಗುರವನೀಕ್ಷಿಸಿ ದೀಕ್ಷಿತನು ಕಂಡವನಾ
ಗಿ, ಆಗ ಎಲೆಜೂಜುಗಾರನೆ! ಈ ಉಂಗುರ ನಿನಿಗೆಲ್ಲಿಬಂತು, ನಮ್ಮದೆನಲು.
ನಾನು ನಿಮ್ಮ ಮನೆಯಲ್ಲಿ ಕದ್ದು ತಂದೆನೆ, ನಿನ್ನ ಮಗನು ನಿನ್ನೆ ನಮ್ಮ ತಾ
ಯಿಯಪಟ್ಟೆ ಶೀರೆಯನ್ನುಕದ್ದುಕೊಂಡುಹೋಗಿ ವೇಶ್ಯೆಗೆಕೊಡಲು, ನಾವು
ಕಂಡು ನಿರ್ಬಂಧಿಸಲು, ಈ ವುಂಗುರವಂತೆಗದುಕೊಟ್ಟನು, ನನಿಗೊಬ್ಬ ಸಿಗೆ
ಈ ವುಂಗುರಬಂದೇಅಲ್ಲ; ಮನೆಯಬಡವೆಯನೆಲ್ಲವನ್ನೂ ತಂದು ಜೂಜು
ಗಾರರಿಗೆ ಕೊಟ್ಟನು, ನಿನ್ನ ಮಗನು ಜೂಜುಗಾರಶಿಖಾಮಣಿ, ಎನಲಾದೀ
ಕ್ಷಿತನು ಕೇಳ, ಮುಸುಕನಿಟ್ಟುಕೊಂಡು ಮನೆಗೆ ಬಂದು, ಎಲೆ ತನ್ನ ವೈ
ಯ್ಯಾರಿಯಾದ ಸ್ತ್ರೀಯೆ! ಗುಣನಿಧಿಯೆನಿಸಿಕೊಂಬ ನಿನ್ನ ಸುಪುತ್ರ ಎಲ್ಲಿ
ಹೋದನು, ಅವನು ಎಲ್ಲಿಯಾದರೂ ಹೋಗಲಿ, ಯನ್ನ ಮದುವೆಯಂ ಮಾ
ಡುವಾಗ ನಿಮ್ಮವರು ಕೊಟ್ಟ ದಿವ್ಯವಾದ ಮುದ್ರೆಯುಂಗುರವೆಲ್ಲಿ ಕೊಂ
ಡುಬಾ, ಅದನ್ನಿಟ್ಟುಕೊಂಡು ಸ್ನಾನ, ಜಪ, ದೇವತಾಪೂಜೆ, ನೈವೇದ್ಯವಂ
ಮಾಡಬೇಕೆಂದು ಅಥಿತಿಗಳು ಬಂದು ಇದ್ದಾರು, ಅವರ ಸತ್ಕರಿಸಬೇಕು
ಬೇಗತಾರೆಂದು ಕೇಳಲೂ, ಮನೆಯೊಳಗೆ ಎಲ್ಲಿ ಇರಿಸಿದೇನೆಯೋ ಕಾಣೆ,
ಅರಸಿ ಪುತ್ತೇ ಕೊಟ್ಟೇನು, ಎನಲಾದೀಕ್ಷಿತನಿಂತೆಂದನು; ಎಲೆ ಸತ್ಯವಾದಿ
ಯೆ! ಸುಪುತ್ರನ ಪೆತ್ತವಳೆ; ನಿನ್ನಮಗನೆಲ್ಲಿ ಪೋದನೆಂದು ಕೇಳಪಾಗಲಿಲ್ಲಾ
ದೇವರ ಪೂಜೆ, ವೂಟವಂ ಮಾಡಿ ಓದುವದಕ್ಕೆ ಪೋದನು ಎಂಬೆ. ಅದಂತಿ
ರಲಿ ತನ್ನ ಮಂಜಿಷ್ಠೆ ಹಚ್ಚಡವೆಲ್ಲಿ, ನವರತ್ನಖಚಿತವಾದ ಗಿಂಡಿಎಲ್ಲಿ, ಆ
ರಸುಗಳು ಕೊಟ್ಟ ಪಟ್ಟೆನೂಲುಜಾಲರಿಯಿಂದಲಂಕೃತವಾದ ಚಿನ್ನದ ಮು
ಕ್ಕಾಲುಮಣೆ ಎಲ್ಲಿ, ದಕ್ಷಿಣದೇಶದಿಂದ ತರಿಶಿದ ಪರಿವಾಣವೆಲ್ಲಿ, ಗೌಡದೇಶ
ದಿಂದ ತಂದ ಹಿತ್ತಾಳೀ ಚರುವಿಗೆಎಲ್ಲಿ, ದಂತದ ಮಂಚವೆಲ್ಲಿ, ಕಾಶ್ಮೀರದೇ

ಶದಿಂ ತಂದ ಚಂದ್ರಕಾಂತನಿರ್ಮಿತವಾದ ಪ್ರತಿಮೆಯ ದೀವಿಗೆ ಕಂಭವೆಲ್ಲಿ, ಎಲೆ ಕುಲಗೆಡಕಿ ಹೇಳ ಮಾಡುವದೇನು ನಿನ್ನಂ ತ್ಯಜಿಸಿಬಿಟ್ಟು ಇನ್ನೊಬ್ಬಳ ಮದುವೆಯಾದಲ್ಲದೆ ಊಟಮಾಡೆನು; ಮದುವೆಯಾಗಿಯೇ ಊಟಮಾಡೇನೂ, ಈದುಷ್ಟನಾದಮಗನಿಂದಸಂತಾನವಿಲ್ಲದವನಾದೆನು,ದರ್ಭೆಯನ್ನೂ ಯಳ್ಳನ್ನೂ ಕೂಡಾ ತಾ ಅವನಿಗೆ ತಿಲೋದಕವ ಬಿಟ್ಟೇನು, ಎಂದು ಹೀಗೆ ನುಡಿದು ಸ್ನಾನಾದಿಕ್ರಿಯೆಗಳಂ ಮಾಡಿ, ಮತ್ತೊಬ್ಬ ಸ್ತ್ರೀಯ ವಿವಾಹವಾದನು. ಈ ವೃತ್ತಾಂತವಂ ಕಂಡು ಆ ಕುಮಾರನು ತನ್ನಿಂದ ಹೀಗೆ ತಾಯಿಗೆ ಅವಮಾನ್ಯತೆ ಆಯಿತೆಂದು ವೈರಾಗ್ಯದಿಂದ ದೇಶಾಂತರವಂ ಪೋಗುವೆನೆಂದು ಬಂದಾನೊಂದುದಿನ ಹೊರವಟ್ಟು ಬಂದು ಮರದಕೆಳಗೆ ಕುಳಿತು, ನಾನು ಎಲ್ಲಿಗೆಪೋಗಲಿ ಎಂದು ಚಿತಿಸಿದನು; ತನಗೆ ವಿದ್ಯವಿಲ್ಲ, ಧನವಿಲ್ಲ, ಪರದೇಶದಲ್ಲಿ ಹ್ಯಾಗೆ ಬದುಕುವೆನು; ತನಗೆ ಯಜ್ಞಸಂತತಿಯಲ್ಲಿ ಜನನವೆಂತಾಯಿತು, ಈ ದುರಾಚಾರವೆತ್ತ ವಿಧಿಯ ವಿಚಾರಬಾರದು, ಭಿಕ್ಷವಬೇಡಲರಿಯೆನು, ಉದಯಕಾಲಕ್ಕೆ ನನ್ನವೆ ಮೃಷ್ಟಾನ್ನವನಿಕ್ಕುವ ತಾಯಿಲ್ಲ. ಹೀಗೆಂದು ಚಿಂತಿಸುತ್ತಿರೆ ಸಾಯಂಕಾಲವಾಗಲು, ಆನಿತರೊಳೊಬ್ಬ ಶಿವಭಕ್ತನಾದ ಬ್ರಾಹ್ಮಣನು ಷಡ್ರಸೋಪೇತವಾದ ನೈವೇದ್ಯವಂ ಕೊಂಡು, ಊರಹೊರಗೆ ಇದ್ದ ಶಿವಾಲಯಕ್ಕೆ ಶಿವರಾತ್ರಿಯ ದಿನ ಪೋಗುತ್ತಿರೆ ಮೋಘಾಳಿಯಿಂದ ಭಕ್ಷ್ಯಭೋಜ್ಯಗಳ ಗಂಧವನಾಘ್ರಾಣಿಸಿ, ಬಳಿವಿಡಿದು ಪೋಗಿ ಶಿವಾಲಯದ ಬಾಗಿಲಲ್ಲಿ ನಿಂತಿರೆ, ಆ ಭಕ್ತನು ಶಿವರಾತ್ರೆಯಲ್ಲಿ ಮಾಡತಕ್ಕ ಕಲ್ಪೋಕ್ತಪೂಜೆ, ನೈವೇದ್ಯಗಳಂ ಮಾಡಿ, ಜಾಗರವಂ ಮಾಡುತ್ತಾ ಮರವೊರಗಲೂ. ಈ ದೀಕ್ಷಿತಕುಮಾರನು ಆ ಭಕ್ತ ಮರದುಮಲಗಿದುದಂ ಕಂಡು ನೈವೇದ್ಯವಂ ಕ್ಷುದ್ಬಾಧೆಯಿಂದ ತಕ್ಕೊಂಬುವನಾಗಿ ಒಳಹೋಗಲು ಅಷ್ಟರಲ್ಲಿಯೆ ದೀಪವು ನಂದುತ್ತಿರೆ; ಈ ದೀಪ ನಂದಿದರೆ ಕತ್ತಲೆಯಾದೀತು ಈ ಬೆಳಕಿನಲ್ಲಿಯೇ ತಕ್ಕೊಂಡೇನೆಂದು ಗರ್ಭಾಗಾರಕ್ಕೆ ಹೋಗಿ ಆಕ್ಷಣದಲ್ಲಿಯೇ ತಾನುಹೊದ್ದಿದ್ದ ಪಚೆಯಲ್ಲಿ ವಂದಿಷ್ಟು ಶೀಳಿ ಬತ್ತಿಯಂ ಮಾಡಿ ಕೆಳಗೆ ಬಿದ್ದಿದ್ದ ಘೃತದಲ್ಲಿ ಅದ್ದಿ ದೀವಿಗೆಯನ್ನು ಹೊತ್ತಿಸಿ ಆ ನೈವೇದ್ಯವಂ ತೆಗದುಕೊಂಡು ಶೀಘ್ರದಲ್ಲಿ ಹೊರವಟ್ಟು ಬರುತ್ತಿರಲು, ಆ ಭಕ್ತನು ಎಚ್ಚರಿತು ಇವನಾರೋ ಕಳ್ಳನು ಹಿಡಿ ಹಿಡಿ, ಎಂಬನಿತರೋ

ಳ್ ತಳವಾರರು ಕೇಳಿ ಬಂದು ಇವನ ಶಿರಸ್ಸನಿಳುಹಲು, ಅವಗೆ ಮುಂದೆ ಆಗಲುಳ್ಳ ಪುಣ್ಯಪ್ರಭಾವದಿಂದ ನೈವೇದ್ಯಮಂ ಭಕ್ಷಿಸಲಿಲ್ಲ; ಉಪವಾಸವಾಗಿ ಶಿವರಾತ್ರಿಯಲ್ಲಿ ಮಡಿಯಲು, ಆ ಸಮಯದಲ್ಲಿ ಯಮದೂತರು ಬಂದು ಇವನ ಕಟ್ಟಿ ತಗದುಕೊಂಡು ಹೋದೇವೂ ಎಂಬಷ್ಟರಲ್ಲಿಯೇ ಕೈಲಾಸದಿಂದ ದಿವ್ಯವಿಮಾನವಂ ಕೊಂಡು ಶಿವಗಣಂಗಳು ಬರಲಾ, ಯಮದೂತರು ನಮಸ್ಕರಿಸಿ ಬಿನ್ನೈಸಿದರು; ಯೆಲೈ ಗಣಂಗಳಿರಾ, ಇವನು ದುರಾಚಾರಿ! ತಂದೆತಾಯಿಗಳ ಮಾತುಕೇಳುವವನಲ್ಲ, ಇವನ ಆಚಾರವಂತಿರಲಿ, ಅದಲ್ಲದೆ ಶಿವಭಕ್ತನ ವಂಚಿಸಿ, ಶಿವದ್ರವ್ಯವನಪಹರಿಸಿದವನು, ನೀವು ಈ ಪಾಪಿಯ ಮುಟ್ಟಬಾರದೂ; ವಿಷವನಾದರೂ ಧರಿಸಬಹುದಲ್ಲದೆ ಪ್ರಾಣಹೋಹಾಗಲಾದರೂ ಶಿವದ್ರವ್ಯವಂ ಮುಟ್ಟಲಾಗದು, ಇವನು ಮಾಡಿದ ಪುಣ್ಯವಿದ್ದರೆ ಹೇಳೀ ಎನಲಾ ಗಣಂಗಳಿಂತೆಂದರು. ಎಲೈ ಯಮದೂತರಿರಾ. ಶಿವಧರ್ಮಗಳು ಪರಮಸೂಕ್ಷ್ಮಂಗಳು ನಿಮಗೆ ಕಾಣಿಸುವವಲ್ಲ, ಇವನ ಧರ್ಮವಂ ಕೇಳಿ, ಶಿವರಾತ್ರಿಯಲ್ಲಿ ಉಪವಾಸವಿರ್ದು ಭಕ್ತರು ಮಾಡುವ ಪೂಜೆಯಂ ನೋಡಿ, ಶಿವನಾಮಂಗಳಂ ಕೇಳಿ, ತನ್ನ ಉದರಪೋಷಣನಿಮಿತ್ತಕ್ಕಾದರೂ ದೀವಿಗೆಯಂ ಪ್ರೊತ್ತಿಸಿದನಾದ ಕಾರಣ ಇವನ ಸಕಲ ಪಾಪಗಳೂ ಬೆಂದು ಮುಂದೆ ಮಹಾ ಶಿವಭಕ್ತನಾದನು; ಪುಣ್ಯಪುರುಷನಾದನು ಕಳಿಂಗದೇಶಕ್ಕೆ ಅಧಿಪತಿಯಾಗಿ ಹುಟ್ಟಬೇಕೆಂದು ಬಿಡಿಸಿ ಶಿವಗಣಂಗಳು ಪೋಗಲು. ಈ ದೀಕ್ಷಿತನ ಕುಮಾರನು ಕಳಿಂಗದೇಶಾಧಿಪತಿಯಾಗಿ ಅಲ್ಲಿ ಧರ್ಮನೆಂಬ ರಾಯಂಗೆ ಧರ್ಮನೆಂಬ ಕುಮಾರನಾಗಿ ಪುಟ್ಟಿ, ತಾನು ರಾಜ್ಯವನ್ನಾಳುವ ಕಾಲದಲ್ಲಿ ತನ್ನ ಜಾತಿಸ್ಮರಣೆ ಪುಟ್ಟಿ, ಶಿವಭಕ್ತಿಯುಳ್ಳವನಾಗಿ ಸುಧರ್ಮದಿಂ ರಾಜ್ಯವನ್ನಾಳುತ್ತಾ ತನ್ನ ರಾಜ್ಯದ ಪ್ರಜೆಗಳ ಕರಸಿ ನೀವು ನಿಮ್ಮ ಗ್ರಾಮಂಗಳಲ್ಲಿರ್ದ ಶಿವಾಲಯಂಗಳಿಗೆ ರುದ್ರಾಭಿಷೇಕ ಶಿವಸಹಸ್ರನಾಮ ಪೂಜೆ ದೀಪಾರಾಧನೆಯಂ ಭಕ್ತಿಯಿಂ ಮಾಡುವರಾಗಿ, ಮಾಡದೆಯಿದ್ದರೆ ದಂಡಿಸುವೆನೆಂದು ಆಜ್ಞಾಪಿಸಲಾಗ ಆ ದೇಶದವರೆಲ್ಲರೂ ಶಿವಲಿಂಗಗಳಿಗೆ ಪೂಜೆ, ದೀಪಾರಾಧನೆಯಂ ಸಹಾ ವಿಶೇಷವಾಗಿ ಮಾಡುತ್ತಾ ಇದ್ದರು. ಆ ಧರ್ಮನೆಂಬರಾಯನು ತನ್ನ ಯಾವಜ್ಜೀವವೂ ದೀಪಾರಾಧನೆಯಂ ಮಾಡುತ್ತಿದ್ದನು; ದೀಪಾರಾಧನೆಯಂ ಮಾಡಿದ ಕಾರಣ ಅವನು ಜನ್ಮಾಂತರದಲ್ಲಿ ಮಾಡಿ

ದ ದೀಪಾರಾಧನೆಯ ಪುಣ್ಯದಿಂದಲೂ ಶ್ರೇಷ್ಠನಾದ ಮುನಿಪುಂಗವನಾದ ವಿಶ್ರವಸ್ಸಿನ ಮಗನಾಗಿ ಕುಬೇರನಾದನು, ಎನಲಾ ಶಿವಶರ್ಮನು ವಿಸ್ತಾರವಾಗಿ ಬುದ್ಧಿಗಲಿಸಬೇಕೆಂದು ಗಣಂಗಳಿಗೆ ಕೈಮುಗಿಯೆ ಗಣಂಗಳಿಂತೆಂದರು. ಕೇಳೈ ಶಿವಶರ್ಮ! ಪದ್ಮಕಲ್ಪದಲ್ಲಿ ಬ್ರಹ್ಮಪುತ್ರನಾದ ಪುಲಸ್ತ್ಯನಿಂದಲೂ ವಿಶ್ರವಸ್ಸು ಪುಟ್ಟಿದನು; ಆತನಿಗೆ ಸ್ವಲ್ಪಕಲ್ಪ ತದನಂತರ ಮೇಘವಾಹನಕಲ್ಪದಲ್ಲಿ ಈ ಧರ್ಮನೆಂಬ ರಾಯನು ವಿಶ್ರವಸ್ಸಿಗೆ ಕುಲಸ್ತ್ರೀಯಲ್ಲಿ ವೈಶ್ರವಣನೆಂಬ ಕುಮಾರನಾಗಿ ಪುಟ್ಟಿ ಕಾಶೀಪಟ್ಟಣಕ್ಕೆ ಪೋಗಿ ಲಿಂಗಪ್ರತಿಷ್ಠೆಯಂ ಮಾಡಿಕೊಂಡು ನಾನಾವಿಧ ಉಪಚಾರಗಳಿಂದ ಬಾಹ್ಯಪೂಜೆಯಂ ಮಾಡಿ, ಹೃದಯದಲ್ಲಿ ಜ್ಞಾನದೀಪವಂ ಸಮರ್ಪಿಸಿದನು;- ಅದೆಂತೆನೆ:ಹೃದಯದಲ್ಲಿ ಧ್ಯಾನಿಸಲ್ಪಡುವ ಶಿವನೆಂಬ ಪಾತ್ರೆ, ಮುಖ್ಯವಾದ ಭಕ್ತಿಯೆನಿಸಿಕೊಂಬ ತೈಲಚಿತ್ತವೆಂಬ ಬತ್ತಿ, ತಪೋಗ್ನಿಯಿಂದ ಪ್ರೋತ್ತಿಸಲ್ಪಡುವದು; ಕಾಮ ಕ್ರೋಧ ಮೊದಲಾದ ವಿಘ್ನಗಳೆಂಬ ಪತಂಗದ ಹೊಯಿಲಿಲ್ಲದ್ದು ಕಂಬದಿಂದ ಕದಲದೆ ಇದ್ದಂಥಾದ್ದು; ಇಂಥಾ ಶಿವಜ್ಞಾನವೆಂಬ ದೀಪವಂ ಸಮರ್ಪಿಸಿ ಹತ್ತುಲಕ್ಷ ವರ್ಷಪರ್ಯಂತ್ರವೂ ಅಸ್ಥಿಚರ್ಮ ಮಾತ್ರಶರೀರವುಳ್ಳವನಾಗಿ ತಪಸ್ಸಂಮಾಡುತ್ತಿರಲು. ವಿಶ್ವೇಶ್ವರನುವಿಶಾಲಾಕ್ಷೀಸಮೇತನಾಗಿ ಬಂದು ಪ್ರಸನ್ನನಾಗಿ ಮುಂದೆಅಳಕಾಧಿಪತಿ ಯಾಗೆಂದು ವೈಶ್ರವಣಗೆ ಪೆಸರಂಕೊಟ್ಟು ನಿನ್ನ ತಪಸ್ಸಿಗೆ ಮೆಚ್ಚಿದೆನು; ವರವ ಬೇಡಿಕೊ? ಎನಲು ಕಣ್ದರದು ಕೋಟಿಸೂರ್ಯಪ್ರಕಾಶನಾದ ಪರಮೇಶ್ವರನಂ ಕಂಡು, ಆತನದಿವ್ಯತೇಜಸ್ಸಿನ ದೇಹವಂ ನೋಡಲಸಮರ್ಥನಾಗಿ ನೇತ್ರಗಳಂ ಮುಚ್ಚಿಕೊಂಡು ಇಂತೆಂದನು. ಎಲೈ ದೇವದೇವ! ನಿನ್ನ ಪಾದಪದ್ಮಂಗಳನ್ನೋಡುವದಕ್ಕೆ ದೃಷ್ಟಿಯನ್ನಿತ್ತು ರಕ್ಷಿಸು, ಎನಗೆ ಇದೇ ಮುಖ್ಯವಾದ ವರವೂ, ಇದಕ್ಕಿಂತಲೂ ಮಿಕ್ಕಾದ ವರವೇನಿದ್ದೀತು ಎಂಬ ವಚನವಂ ಕೇಳಿ ಪರಮೇಶ್ವರನು ತನ್ನ ಹಸ್ತದಿಂದ ಆತನ ನೇತ್ರಂಗಳ ಸ್ಪರ್ಶವಂ ಮಾಡಿ, ದಿವ್ಯದೃಷ್ಟಿಯಂ ಕೊಡಲೂ; ಕಣ್ದರದು ಮಹಾದೇವಿಯಂ ನೋಡುತ್ತಾ ಇಂತೆಂದನು. ಈ ಪರಮೇಶ್ವರನ ಅರ್ಧಾಂಗಿಯಾದ ಮಹಾದೇವಿಯು ಅಧಿಕವಾದ ಏನು ತಪಸ್ಸಂ ಮಾಡಿದಳೋ, ಈ ದೇವಿಯು ರೂಪುಲಾವಣ್ಯವತ್ವಾಶ್ಚರ್ಯವೆಂದು ಕ್ರೂರದೃಷ್ಟಿಯಿಂ ನೋಡಲು, ಆತನಯೆಡದಕಂಣು ವಡೆಯ

ತ್ತು. ಆಗ ಮಹಾದೇವಿಯಿಂತೆಂದಳು ಈತನು ಎಂಥಾ ದುಷ್ಟತಪಸ್ವಿ
ಯೋ ತನ್ನ ಪ್ರಭಾವವಂ ತಿಳಿದು ಮತ್ತು ಮತ್ತೂ ತನ್ನನ್ನೇ ನೋಡಲು ಎ
ಡದಕಣ್ಣು ಒಡೆಯಿತು; ಈಗ ಬಲದಕಣ್ಣಿನಿಂದ ಎನ್ನಂ ನೋಡುತ್ತಾ ಇ
ದ್ದಾನೂ; ಎಂದು ನುಡಿಯಲು ಮಹಾದೇವಿಯಂ ಸಂತವಿಸಿ ಪರಮೇಶ್ವರನಿಂ
ತೆಂದನು; ಎಲೈ ದೇವಿ; ಈ ತನ್ನ ಕುಮಾರನು ನಿನ್ನನ್ನು ಕ್ರೂರದೃಷ್ಟಿಯಿಂ
ದ ನೋಡಿದವನಲ್ಲ, ನಿನ್ನ ತಪೋಮಹಿಮೆಯನ್ನೇ ವರ್ಣಿಸಿದನು! ಎಂದು
ದೇವಿಗೆ ಹೇಳಿ, ಆವೈಶ್ರವಣಗೆ ಇಂತೆಂದನು. ಎಲೈ ಬಾಲಕ ನೀನು ಮಾ
ಡಿದ ತಪಃಪ್ರಭಾವಕ್ಕೆ ಮೆಚ್ಚಿ ಪ್ರಸನ್ನನಾದೆನು; ನೀನು ನವನಿಧಿಗಳು. ಯ
ಕ್ಷ, ಕಿನ್ನರ, ಗಂಧರ್ವ, ಗುಹ್ಯಕ, ವಿದ್ಯಾಧರಮೊದಲಾದವರ್ಗೆ ಒಡೆಯನಾಗು;
ಈ ಮಹಾದೇವಿಗೆ ನಮಸ್ಕಾರವಂ ಮಾಡು; ಈಕೆ ನಿನ್ನ ತಾಯಿಯೆಂದು ನು
ಡಿದು ದೇವಿಗೆ ಪರಮೇಶ್ವರನಿಂತೆಂದನು. ಈತ ನಿನ್ನ ಕುಮಾರನಾದ ಈ ತ
ಪಸ್ವಿಯಲ್ಲಿ ದಯವಿಡೆನಲು, ದೇವಿ ಇಂತೆಂದಳು; ಎಲೈ ಬಾಲಕನೆ ನಿನಗೆ
ಈಶ್ವರನಲ್ಲಿ ನಿರಂತರ ದೃಢವಾದ ಭಕ್ತಿಯಿರಲಿ, ನಿನ್ನ ಎಡದ ಕಣ್ಣು ಪಿಶಂ
ಗವರ್ಣವಾಗಿಯಿರಲಿ, ನಿನಗೆ ಶಿವಕೊಟ್ಟ ವರವೆಲ್ಲವೂ ಯಥಾರ್ಥವಾಗ
ಲಿ, ನೀನು ನನ್ನ ನೋಡಿ ಕರುಬಿದೆಯಾದಕಾರಣ ನಿನ್ನ ಹೆಸರು ಕುಬೇರ
ನಾಗಲಿ, ಎಂದು ಪ್ರಸಿದ್ಧನಾಗೆಂದು ನೀನು ಪೂಜಿಸಿದ ಲಿಂಗವು ನಿನ್ನ ಹೆಸರಿ
ನಿಂದ ಪ್ರಸಿದ್ಧವಾಗಿ ಪೂಜಿಸಿದವರ್ಗೆ ಸಕಲಾಭೀಷ್ಟವನ್ನು ಕೊಡಲಿ. ಆರೊ
ಬ್ಬರು ವಿಶ್ವೇಶ್ವರನ ದಕ್ಷಿಣಭಾಗದಲ್ಲಿರ್ದ ಕುಬೇರೇಶ್ವರನ ಪೂಜೆಯಂ ಮಾ
ಡುವರೋ ಅವರಿಗೆ ದರಿದ್ರ ಮೊದಲಾದ ದುಃಖಗಳು ಪೊಂದದೆ ಇರಲಿ;
ನೀನು ಪರಮೇಶ್ವರನಿಗೆ ಸಖನಾಗಿ ಇರು, ಎಂದು ದೇವಿಯು ಕುಬೇರನಿ
ಗೆ ವರವನಿತ್ತು ರಕ್ಷಿಸಿದಳು. ಪರಮೇಶ್ವರನೂ ದೇವಿಸಹಿತ ಅಂತರ್ಧಾ
ನವಾಗಲು. ಕುಬೇರನು ಕೈಲಾಸಸಮೀಪದಲ್ಲಿ ಇರುವ ಅಳಕಾಪಟ್ಟಣದಲಿ
ಇದ್ದನು. ಈ ಅಧ್ಯಾಯದ ಕಥೆಯಂ ಕೇಳಿದವರ್ಗೆ ಸಕಲ ಪಾಪ ಪರಿಹಾರ
ವೆಂದು ಗಣಂಗಳು ಶಿವಶರ್ಮಂಗೆ ನಿರೂಪಿಸಿದರೆಂದು ಸೂತಪುರಾಣಿಕನು
ಶೌನಕಾದಿಋಷಿಗಳಿಗೆ ಹೇಳ್ದರೆಂಬಲ್ಲಿಗೆ ಅಧ್ಯಾಯಾರ್ಥ॥ ಇಂತು ಶ್ರೀ
ಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತ ಶ್ರೀ ಮಹಿಶೂರ ಪುರವ
ರಾಧೀಶ ಶ್ರೀ ಕೃಷ್ಣರಾಜವಡಯರವರು ಲೋಕೋಪಕಾರಾರ್ಥವಾಗಿ ಕ

ರ್ಣಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾ ರ್ಥವರ್ಣನದಲ್ಲಿ ವಾಯು ಕುಬೇರರ ಉತ್ಪತ್ತಿ ವೃತ್ತಾಂತವೆಂಬ ಹದಿ ಮೂರನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * ಶ್ರೀ

ಹದಿಮೂರನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ಪದಿನಾಲ್ಕನೇ ಅಧ್ಯಾಯ.

ಈಶಾನ್ಯಲೋಕ, ಚಂದ್ರನ ಉತ್ಪತ್ತಿ,

ಅನಂತರದಲ್ಲಿ ವಿಷ್ಣುಗಣಂಗಳು ಶಿವಶರ್ಮಂಗಿಂತೆಂದರು ಕೇಳೈ ಶಿವಶರ್ಮನೆ ಅಳಕಾವತೀ ಪಟ್ಟಣಕ್ಕೆ ಪೂರ್ವಭಾಗದಲ್ಲಿ ಈಶಾನನ ಪಟ್ಟಣ, ಅದಕ್ಕೆ ಅಧಿಪತಿ ಈಶಾನ್ಯನು, ಪರಮೇಶ್ವರನ ವೀಣೆಯಲ್ಲಿ ಗಾನವಂ ಮಾಡಿ ಮೆಚ್ಚಿಸಿದ ಶಿವಭಕ್ತನು; ತಪಸ್ಸು ಶಿವಸ್ಮರಣೆ, ಶಿವಪ್ರೀತಕರವಾದ ಕರ್ಮ ಶಿವಪೂಜೆ ಹೋಮ ಮೊದಲಾದವನ್ನು ಧ್ಯಾನ ಬಯಸಿ ಮಾಡಿದವರು ಸಾರೂಪ್ಯವಂ ಪಡದು ಸುಖದಲ್ಲಿ ಇಹರು. ಹನ್ನೊಂದುಮಂದಿ ರುದ್ರರೂ ಏಕಸ್ಥರಾಗಿ ಕಾಶಿಯಲ್ಲಿ ಈಶಾನೇಶ್ವರನಂ ಪೂಜಿಸಿ, ಆತನ ವರದಿಂದ ಶಿವಸಾರೂಪ್ಯವುಳ್ಳವರಾಗಿ ಎಲ್ಲಿ ಹೋದರೂ ಕೂಡಿರುವರಾಗಿಹರೂ; ಭೂಮಿಯಲ್ಲಿ, ಅಂತರಿಕ್ಷದಲ್ಲಿ, ಸ್ವರ್ಗದಲ್ಲಿ, ಇಹ ಅಸಂಖ್ಯಾತರುದ್ರರೂ ಇಲ್ಲಿ ನಿತ್ಯವಾಸಿಗಳಾಗಿ ಇಹರು, ಇಂತೀ ಕಥೆಯಂ ಕೇಳ್ದ ಶಿವಶರ್ಮನು ಆಕಾಶವಂ ಬೆಳಗುತ್ತ ಆನಂದಕರಮಪ್ಪ ಬೆಳದಿಂಗಳಂ ನೋಡಿ ಆಶ್ಚರ್ಯದಿಂದೀಲೋಕವಾವುದೆಂದು ಬೆಸಗೊಳ್ಳಲು ಗಣಂಗಳಿಂತೆಂದರು; ಕೇಳೈ ಶಿವಶರ್ಮ, ಇದು ಚಂದ್ರಲೋಕ ಈತನು ತನ್ನ ಕಿರಣಗಳಿಂದ ಲೋಕವನ್ನಾಪ್ಯಾಯನವಂ ಮಾಡುತ್ತಿಹನು, ಇವನ ಉತ್ಪತ್ತಿಯಂ ಕೇಳು; ಬ್ರಹ್ಮಪುತ್ರನಾದ ಅತ್ರಿಋಷಿಯು ಪ್ರಜಾಸೃಷ್ಟಿ ನಿಮಿತ್ತ ದೇವಮಾನದಿಂ ಮೂರು ಸಾವಿರ ವರ್ಷ ತಪಸ್ಸು ಮಾಡುತ್ತಿರಲು; ಆತನ ರೇತಸ್ಸು ಊರ್ಧ್ವಮುಖವಾಗಿ ನೇತ್ರಗಳಿಂದ ದಶದಿಕ್ಕುಗಳನ್ನು ಪ್ರಕಾಶಿಸುತ್ತಾ ಹೊರಬೀಳಲು, ಬ್ರಹ್ಮದೇವನ ಅಪ್ಪಣೆಯಿಂದ ದಶದಿಕ್ಕುಗಳು ಆ ರೇತಸ್ಸನ್ನು ಧರಿಸಿ

ದವರಾಗಿ ಸಹಿಸಲಾರದೆ ಬಿಡಲು, ಗರ್ಭರೂಪದ ಚಂದ್ರನು ಭೂಮಿಗೆ ಬೀಳುತ್ತಿರಲು, ಬ್ರಹ್ಮದೇವನು ಆ ಗರ್ಭಪಿಂಡವನ್ನು ರಥದೊಳಗಿಟ್ಟುಕೊಂಡು ಲೋಕಹಿತಾರ್ಥವಾಗಿ ಸಕಲದ್ವೀಪ,ಸಮುದ್ರಯುಕ್ತವಾದ ಭೂಮಂಡಲವನ್ನು ಇಪ್ಪತ್ತೊಂದುಬಾರಿ ಪ್ರದಕ್ಷಿಣಾಕಾರವಾಗಿಅಂತರಿಕ್ಷದಲ್ಲಿ ಸುತ್ತಲೂ, ಎಲ್ಲೆಲ್ಲೂ ಸಂಚರಿಸಲು,ಆಗ ಭೂಮಿಯಮೇಲೆ ಬಿದ್ದ ತೇಜಸ್ಸಿನಿಂದ ಸಕಲ ಪ್ರಾಣಿಗಳನ್ನೂ ರಕ್ಷಿಸುವ ಓಷಧಿಗಳು ಪುಟ್ಟಿದವು. ಇಂತೀ ಪರಿಯಲ್ಲಿ ಬ್ರಹ್ಮನಿಂದ ಆಕಾರವಡೆದ ಚಂದ್ರನು ಕಾಶೀಪಟ್ಟಣದಲ್ಲಿ ಚಂದ್ರೋದಯವೆಂಬ ತೀರ್ಥವಂ ಮಾಡಿಕೊಂಡು ಚಂದ್ರೇಶ್ವರನೆಂಬ ಲಿಂಗವನ್ನು ಪ್ರತಿಷ್ಠೆಯಂ ಮಾಡಿಕೊಂಡು, ನೂರುಪದ್ಮವರ್ಷಪರ್ಯಂತರವೂ ಉಗ್ರತಪಸ್ಸಂ ಮಾಡಿ, ಆ ಶಿವನ ಅನುಗ್ರಹದಿಂ ಸಕಲ ಬೀಜೌಷಧಿ, ಉದಕ, ಬ್ರಾಹ್ಮರು, ಮೊದಲಾದವರ್ಗೆ ಅಧಿಪತಿಯಾಗಿ ಶಿವನ ಶಿರೋಮಾಣಿಕ್ಯವಾಗಿ ಸಕಲ ಸಂಜೀವನವಾದ ಕಳೆಯಂ ಪಡೆದು, ತನ್ನ ಮಾವನಾದ ದಕ್ಷನಿಂದ ತಿಂಗಳು ತಿಂಗಳಿಗೆ ಕ್ಷಯವಾಗು ಎಂದು ಶಾಪವನ್ನೈದಿ, ಈಶ್ವರಕೊಟ್ಟ ಸಾಮ್ರಾಜ್ಯದಿಂ ರಾಜಸೂಯಯಾಗವಂ ಮಾಡಿ, ದ್ವಿಜರ್ಗೆ ಮೂರುಲೋಕವಂ ದಕ್ಷಿಣೆಯಿತ್ತು ಸಿನೀ, ಕುಹೂ, ಜ್ಯೋತಿ, ಪುಷ್ಟಿ, ಪ್ರಭಾ, ವಸು, ಕೀರ್ತಿ, ಋದ್ಧಿ, ಲಕ್ಷ್ಮಿಯೆಂಬ ನವಶಕ್ತಿಯುತನಾಗಿ ಉಮಾಮಹೇಶ್ವರನ ಪೂಜೆಯಿಂ ಸೋಮನೆಂಬ ಪೆಸರಂ ಪಡೆದು, ಆ ಶಿವನ ಮೂರ್ತಿಯಾಗಿ ಪರಮೇಶ್ವರನಿಂದ ಎಲೈ ಚಂದ್ರಮನೀನು ಪ್ರತಿಷ್ಠೆಯಂಗೈದ ಚಂದ್ರೇಶ್ವರನಲ್ಲಿ ಪ್ರತಿಮಾಸವೂ, ಪೌರ್ಣಮಿಯಲ್ಲಿ ಪೂರ್ಣವಾಗಿ ಇಹೆನು; ಈ ಲಿಂಗಸಮೀಪದಲ್ಲಿ ಮಾಡಿದ ಸ್ನಾನ, ಜಪ, ಹೋಮ, ಮೊದಲಾದವೆಲ್ಲವೂ ಶಿವಸಾನ್ನಿಧ್ಯವಂ ಕೊಡುವವು; ಶನಿತ್ರಯೋದಶಿಯಲ್ಲಿ ನಕ್ತವಂ ಮಾಡಿ, ಚತುರ್ದಶೀ ದಿವಸ ಉಪವಾಸವಿದ್ದು, ಪೂಜಾಜಾಗರಣಂಗಳಂ ಮಾಡಿ, ಅಮಾವಾಸ್ಯೆ, ಸೋಮವಾರ, ಉಪವಾಸವಿದ್ದು ಚಂದ್ರ ತೀರ್ಥದಲ್ಲಿ ಸ್ನಾನವಂ ಮಾಡಿ, ತಂಮ ಪಿತೃಗಳಿಗೆ ಶ್ರಾದ್ಧಾದಿಗಳಂ ಮಾಡೆ, ಗಯಾಶ್ರಾದ್ಧದಿಂದಧಿಕತೃಪ್ತಿಯುಂಟು; ಚೈತ್ರಶುಕ್ಲ ಪೌರ್ಣಮಿ ದಿವಸ ಈ ಚಂದ್ರೇಶ್ವರಂಗೆ ಯಾತ್ರೆಯಂಮಾಡಲೂ, ತಾರಕಬ್ರಹ್ಮಜ್ಞಾನೋಪದೇಶ ದೊರಕುವದು, ಈ ಚಂದ್ರೇಶ್ವ

ರವ ಸಮೀಪದಲ್ಲಿರ್ದ ಯೋಗೇಶ್ವರೀಪೀಠದಲ್ಲಿ ಸಿದ್ಧರು ಸಪ್ತಕೋಟಿ ಮಹಾಮಂತ್ರಗಳಂ ಜಪಿಸಲೂ, ಆ ಮಂತ್ರಗಳು ನಾನಾಸಿದ್ಧಿಯಂ ಕೊಡುತ್ತಿಹವು; ಅಷ್ಟಮೀ ಚತುರ್ದಶಿಯಲ್ಲಿ ಸಿದ್ಧೇಶ್ವರನ ಯಾತ್ರೆಯಂ ಮಾಡಲು, ಸಿದ್ಧೇಶ್ವರಪ್ರಸನ್ನನಹನೂ ಯೆಂದು ಈಶ್ವರನು ಚಂದ್ರನಿಗೆ ಹೇಳಿ ವರವನಿತ್ತು ಅಂತರ್ಧಾನವನೈದಿದನೂ. ಸೋಮಪಾನವಂ ಮಾಡಿದವರು ಈ ಚಂದ್ರನ ಉತ್ಪತ್ತಿ, ಈತನ ಮಹಿಮೆಯಂ ಕೇಳಿದವರು ಈ ಚಂದ್ರನ ಲೋಕದಲ್ಲಿ ಇಹರೆಂದು ಗಣಂಗಳು ಶಿವಶರ್ಮಂಗೆ ಪೇಳೆ, ಮುಂದೆ ನಕ್ಷತ್ರಮಂಡಲವಂ ಕಂಡನೆಂದು ಅಗಸ್ತ್ಯರು ಲೋಪಾಮುದ್ರೆಗೆ ನಿರೂಪಿಸಿದರ್ಥವನ್ನು ಸೂತರು ಶೌನಕಾದಿ ಋಷಿಗಳಿಗೆ ಪೇಳ್ದರೆಂಬಲ್ಲಿಗೆ ಅಧ್ಯಾಯಾರ್ಥ || ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರ ಪುರವರಾಧೀಶ ಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಈಶಾನಲೋಕ ಚಂದ್ರನ ಉತ್ಪತ್ತಿಯಂ ಪೇಳ್ದ ಹದಿನಾಲ್ಕನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ

ಹದಿನಾಲ್ಕನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ಹದಿನೈದನೇ ಅಧ್ಯಾಯ.

ನಕ್ಷತ್ರಲೋಕ ಬುಧನ ಉತ್ಪತ್ತಿ.

ಅನಂತರದಲ್ಲಿ ನಕ್ಷತ್ರಲೋಕವಂ ಕಂಡ ಶಿವಶರ್ಮನು ಈ ನಕ್ಷತ್ರಲೋಕದಮಹಿಮೆ, ಈ ನಕ್ಷತ್ರಗಳ ಉತ್ಪತ್ತಿಯಂನಿರೂಪಿಸಬೇಕೆಂದು ಬೆಸಗೊಳ್ಳಲಾಗಣಂಗಳಂತೆಂದರೂ, ಕೇಳೈಶಿವಶರ್ಮನೆ! ಚತುರ್ಮುಖಬ್ರಹ್ಮನ ಉಂಗುಷ್ಠದಿಂ ದಕ್ಷಬ್ರಹ್ಮನು ಪುಟ್ಟಿದನು. ಆತನಿಗೆ ರೋಹಿಣೀದೇವಿ ಮೊದಲಾದ ಅರುವತ್ತುಮಂದಿ ಕುಮಾರತಿಯರು ಪುಟ್ಟಿದರು. ಇವರೊಳು ಅಶ್ವಿನೀಮೊದಲಾದ ಇಪ್ಪತ್ತೇಳುಮಂದಿ ಕುಮಾರತಿಯರು ಕಾಶೀಪಟ್ಟಣ

ದಲ್ಲಿ ವರುಣೆ ಎಂಬ ನದೀ ತೀರದಲ್ಲಿ ಇಹ ಸಂಗಮೇಶ್ವರನ ಸಮೀಪದಲ್ಲಿ ನಕ್ಷತ್ರೇಶ್ವರನೆಂದು ತಮ್ಮ ಹೆಸರಿನ ಲಿಂಗವಂ ಪ್ರತಿಷ್ಠೆಯಂ ಮಾಡಿಕೊಂಡು, ತಮತಮಗೆ ಪರಮೇಶ್ವರನೇ ಪತಿಯಾಗಬೇಕೆಂದು, ದಿವ್ಯಸಹಸ್ರವರ್ಷ ತಪವಂ ಮಾಡಲು? ಪರಮೇಶ್ವರನು ಪ್ರಸನ್ನನಾಗಿ ನಿಮ್ಮ ತಪಸ್ಸಿಗೆ ಸರಿಯಾದ ತಪಸ್ಸಂ ಕಾಣೆನು ಅದರಿಂದ ನೀವು ನಕ್ಷತ್ರನಾಮವುಳ್ಳವರಾಗಿ ಪುರುಷತ್ವವೆಂಬ ತಪವ ಮಾಡಿದಿರಾದ ಕಾರಣ ನಿಮಗೆ ಬೇಕಾದಾಗ ಪುರುಷರೂಪು ಉಂಟಾದೀತು. ಜ್ಯೋತಿಶ್ಚಕ್ರಕ್ಕೆ ನೀವು ಮುಂದೆ ನಡೆಯುತ್ತ ಮೇಷರಾಶಿ ಮೊದಲಾದ ರಾಶಿಗಳಿಗೆ ನೀವು ಕಾರಣವಾದಿರಿ. ಈ ಚಂದ್ರ ನಿಮಗೆ ಪತಿಯಾದಾನು. ಈ ನಿಮ್ಮ ಹೆಸರಿನ ಲಿಂಗವ ಪೂಜಿಸಿದವರಿಗೆ ನಿಮ್ಮ ಲೋಕವಾಗಲಿ. ಈ ಚಂದ್ರಲೋಕದ ಮೇಲೆ ನಿಮ್ಮ ಲೋಕವಿರಲಿ, ಆಕಾಶದಲ್ಲಿನ ಸಮಸ್ತನಕ್ಷತ್ರಗಳೊಳಗೆ ನೀವು ಇಪ್ಪತ್ತೇಳುಮಂದಿಯೂ ಪೂಜ್ಯರಾಗಿ, ನಿಮ್ಮ ಚರಿತ್ರಮಂ ಕೇಳದವರ್ಗೆ ಗ್ರಹಪಡೆಯಿಲ್ಲವೆಂದು ಹೇಳಲು. ಈ ವೃತ್ತಾಂತವಂ ಕೇಳುತ್ತಾ ಮುಂದಿರ್ದ ಬುಧಲೋಕವಂ ಕಂಡು ಈ ಮನೋಹರವಾದ ಲೋಕವಾವುದು, ಇದಕ್ಕೆ ಪತಿಯಾರು ಎಂದು ಬೆಸಗೊಳ್ಳಲು ಗಣಂಗಳಂತೆಂದರೂ, ಕೇಳ್ಳೈ ಶಿವಶರ್ಮ! ಇದು ಬುಧಲೋಕ, ಈ ಬುಧನ ಉತ್ಪತ್ತಿಯೆಂತೆನೆ, ಚಂದ್ರನು ಪರಮೇಶ್ವರನ ವರಪ್ರಸಾದದಿಂದ ಸಾಮ್ರಾಜ್ಯದಿಂ ಮತ್ತನಾಗಿ ತನಗೆ ವಡಹುಟ್ಟಿದವನಾದ ದೇವಗುರುವಾದ ಬೃಹಸ್ಪತಿಯು ಪತ್ನಿಯಾದ ತಾರಾದೇವಿಯನ್ನು ದೇವರ್ಕಳು ಬೇಡವೆಂದರೂ ಕೇಳದೆ ಬಿಡದೆ ಹಾಕಿಕೊಂಡು ರಮಿಸಿದನೂ. ಹಾಗೆಯೆನ್ನುವಲ್ಲಾ ಈಶ್ವರಹೊರತಾಗಿ ಮನ್ಮಥನ ಬಾಣಗಳಿಗೆ ವಳಗಾಗದವರಾರು ಬ್ರಹ್ಮನು ಜಗದ ಅಂಧಕಾರ ಪರಿಹಾರಕ್ಕೋಸ್ಕರ ಚಂದ್ರಸೂರ್ಯರೆಂಬ ದೀವಿಗೆಗಳ ನಿರ್ಮಿಸಿದನಲ್ಲದೆ ಐಶ್ವರ್ಯವೆಂಬ ಅಂಧಕಾರಕ್ಕೆ ಬ್ರಹ್ಮನು ಪರಿಹಾರವ ಕಂಡುದಿಲ್ಲ, ಅದರಿಂದಾ ಚಂದ್ರನು ಐಶ್ವರ್ಯಸಂಪತ್ತೆಂಬ ಅಂಧಕಾರದಿಂದ ಕಂಗಾಣದೆ ಬೃಹಸ್ಪತಿಯ ಸ್ತ್ರೀಯ್ಯ ಹಾಕಿಕೊಂಡು ಬಿಡದಿರಲು. ಆ ಬೃಹಸ್ಪತಿಯು ಜಗಕ್ಕೆ ಕರ್ತನಾದ ರುದ್ರನಂ ಮರೆಹೊಕ್ಕು ಹೇಳಿಕೊಳ್ಳಲು, ರುದ್ರನು ಪಿನಾಕವೆಂಬ ಬಿಲ್ಲಂ ಪಿಡಿದು ಬ್ರಹ್ಮಶರವೆಂಬ ಅಸ್ತ್ರವಂ ಪಿಡಿದು ಚಂದ್ರನೊಡನೆ ಘೋರವಾದ ಯುದ್ಧವಂ ಮಾಡಲು, ಲೋಕಕ್ಕೆ ಪ್ರಳಯಬಂತೂ ಎಂ

ದು ಬ್ರಹ್ಮನೂ ರುದ್ರನಂ ಬಿಡಿಸಿ ಚಂದ್ರನ ದಂಡಿಸಿ ಬೃಹಸ್ಪತಿಯ ಹೆಂಡತಿಯನ್ನು ತಿರುಗಿಸಿ ಬಿಡಿಸಲೂ. ಆ ಸಮಯದಲ್ಲಿ ಬೃಹಸ್ಪತಿಯು ಗರ್ಭಿಣಿಯಾದ ತನ್ನ ಸ್ತ್ರೀಯಂ ನೋಡಿ ತನ್ನ ಕ್ಷೇತ್ರದಲ್ಲಿ ಪರವೀರ್ಯ ವಿರಬಾರದೆಂದು ದರ್ಭೆಯಂ ಮಂತ್ರಿಸಿ ಇಡಲೂ, ಆ ಗರ್ಭವು ಭೂಮಿಲ್ಲಿ ಬಿದ್ದ ಆಕ್ಷಣ ಶಿಶುವಾಗಿ ಅತ್ಯಂತ ತೇಜಸ್ಸಿನಿಂದ ಇರಲೂ, ದೇವತೆಗಳು ಸಂಶಯದಿಂದ ತಾರೆಯಂ ಕುರಿತು ಇಂತೆಂದರೂ! ಈಗರ್ಭವಾರಿಂದಾ ಆಯಿತೋ ಎಂದು ತಾರೆಯಂ ಕೇಳಲೂ ಆ ತಾರೆಯು ನಾಚಿಕೆಯಿಂದ ಹೇಳದೆಯಿರಲೂ ಆ ಕುಮಾರನು ತನ್ನ ಪುಟ್ಟನ್ನು ಹೇಳದೆ ಇದ್ದ ತಾಯಿಂ ಶಪಿಸುತ್ತಿರಲೂ ಬ್ರಹ್ಮನು ಬಿಡಿಸಿ ರಹಸ್ಯದಲ್ಲಿ ಕೇಳಲು ಇದು ಚಂದ್ರನಿಂದಾದ ಗರ್ಭವೆಂದು ಹೇಳಲು, ಆ ಶಿಶುವನ್ನು ಬ್ರಹ್ಮನು ಚಂದ್ರನಮಗನೆಂದು ಚಂದ್ರನವಶವಂ ಮಾಡಿದನು. ಚಂದ್ರನು ತನ್ನ ಕುಮಾರನ ಶಿರವನಾಘ್ರಾಣಿಸಿ ಬುಧನೆಂದು ಹೆಸರನಿಟ್ಟು, ಅನಂತರದಲ್ಲಿ ಆ ಬುಧನು ತಮ್ಮ ತಂದೆಯಾದ ಚಂದ್ರನ ಅಪ್ಪಣೆಯಿಂದ ಕಾಶೀಪಟ್ಟಣಕ್ಕೆ ಹೋಗಿ ತನ್ನ ಹೆಸರಿನ ಲಿಂಗವಂ ಪ್ರತಿಷ್ಠೆಯಂ ಮಾಡಿಕೊಂಡು ಧ್ಯಾನಾರೂಢನಾಗಿ ಸಾಸಿರ ವರುಷ ತಪಸ್ಸಂ ಮಾಡಲೂ! ಆ ಲಿಂಗದಿಂದ ಪರಮೇಶ್ವರನು ಪ್ರಸನ್ನನಾಗಿ ಎಲೈ ಬುಧನೆ ನೀನು ಮಾಡಿದ ತಪಸ್ಸಿಗೆ ನಾನು ಮೆಚ್ಚಿದೆನು ಬೇಕಾದ ವರವಂ ಬೇಡಿಕೊ ಎನಲೂ, ಬುಧನು ಕಣ್ದೆರೆದು ಮುಂದಿರ್ದ ಶಿವನಂ ನೋಡಿ ಸ್ತುತಿಗೈದನು. ಎಲೈ ಭೂತಾತ್ಮನೆ; ಜ್ಯೋತೀರೂಪ ವಿಶ್ವರೂಪ ರೂಪಾತೀತಸರ್ವರೂಪ ಜ್ಞಾನರೂಪ ಸರ್ವಕರ್ತೃ ಭಕ್ತಗಮ್ಯ ತಪಃಫಲದಾಯಕ ಸತ್ವರೂಪ ರಜೋರೂಪ ತಮೋರೂಪ ಶಂಭುಶಿವ ಅಜಶಾಂತಶ್ರೀಕಂಠಸದಾಶಿವ ಶೂಲಪಾಣಿ ಶಶಿಶೇಖರಸರ್ವೇಶಶಂಕರಪಿನಾಕಪಾಣಿಗಿರೀಶ ಶಿತಿಕಂಠಸದಾಶಿವ ಮಹಾದೇವನೆ ನಿನಗೆ ನಮಸ್ಕಾರ ನಿನ್ನ ಪಾದಪದ್ಮಂಗಳಲ್ಲಿ ಭಕ್ತಿಯಂ ಕೊಡು ಇದೆ ತನಗೆ ವರವೆಂದು ಬುಧನು ಬಿನ್ನೈಸಲು. ಸದಾಶಿವನು, ಸಂತೋಷದಿಂ ಎಲೈ ಬುಧನೆ! ನೀನು ನಕ್ಷತ್ರಲೋಕ ಮೇಲಣಲೋಕದಲ್ಲಿರ್ದ ಗ್ರಹಗಳ ಮಧ್ಯದಲ್ಲಿ ಪ್ರಾಜ್ಞನಾಗು, ನೀನು ಪೂಜೆಮಾಡಿದ ಬುಧೇಶ್ವರನ ಸಂಪೂಜಿಸಿದವರ್ಗೆ ನಿನ್ನ ಲೋಕವುಂಟಾಗಲೀ ಎಂದು ನಿರೂಪಿಸಿ, ಆ ಶಿವನು ಬುಧೇಶ್ವರನೆಂಬ ಲಿಂಗದಲ್ಲಿ ಐಕ್ಯವಾದನು. ಬುಧನು ತನ್ನ ಲೋಕಕ್ಕೆ ಬಂದನೂ. ಆದ್ದರಿಂದ

ಚಂದ್ರೇಶ್ವರನ ಮೂಡಲಲ್ಲಿರ್ದ ಬುಧೇಶ್ವರನ ಪೂಜಿಸಲು ಬುಧಲೋಕವ ಹುದು. ಅಂತ್ಯಕಾಲದಲ್ಲಿ ಶಿವನಮೇಲಣ ಸುಜ್ಞಾನದೊರಕೊಂಬುದೂ ಎಂದು ಗಣಂಗಳು ಬುಧನ ವೃತ್ತಾಂತಮಂ ಪೇಳುತ್ತಿರಲು. ವಿಮಾನವು ಶುಕ್ರಲೋಕವನ್ನೈದಿತೆಂದು ಅಗಸ್ತ್ಯನು ತನ್ನ ಸತಿಗೆಪೇಳ್ದ ವೃತ್ತಾಂತಮಂಸೂತಪುರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿಋಷಿಗಳಿಗೆಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ॥ ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದಮಹಿಶೂರಪುರವರಾಧೀಶಶ್ರೀಕೃಷ್ಣರಾಜವಡಯರವರು ಲೋಕೋಪಕಾರಾರ್ಥವಾಗಿ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಅಶ್ವಿನ್ಯಾದಿನಕ್ಷತ್ರಗಳಉತ್ಪತ್ತಿ ನಕ್ಷತ್ರಲೋಕಬುಧನ ಉತ್ಪತ್ತಿ ಬುಧಲೋಕವರ್ಣನೆಯೆಂಬ ಹದಿನೈದನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ ಶ್ರೀ

ಹದಿನೈದನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ಹದಿನಾರನೇ ಅಧ್ಯಾಯ.

ಶುಕ್ರನಉತ್ಪತ್ತಿ, ಶುಕ್ರಲೋಕವರ್ಣನೆ.

ಅನಂತರದಲ್ಲಿ ಮತ್ತೂ ಗಣಂಗಳಿಂತೆಂದರೂ ಕೇಳ್ಳೈ ಶಿವಶರ್ಮ! ಇದು ನಕ್ಷತ್ರಲೋಕ, ದೈತ್ಯದಾನವರ್ಗೆಗುರುವಾದ ಶುಕ್ರನಲ್ಲಿಹನು. ಸಾವಿರವರ್ಷ ಕಿಡಿಸಹಿತವಾದ ಧೂಮಪಾನವಂ ಮಾಡಿ ಮೃತಸಂಜೀವಿನೀ ವಿದ್ಯವಂ ಪಡದು ಪಾರ್ವತೀಪರಮೇಶ್ವರಷಣ್ಮುಖವಿನಾಯಕ ಹೊರತಾಗಿ ಬೃಹಸ್ಪತಿ ಮೊದಲಾದವರು ಮತ್ತ್ಯಾರೂ ಅರಿಯರೆಂದು ಪೇಳ್ದ ಗಣಂಗಳಿಗೆ ಶಿವಶರ್ಮನಿಂತೆಂದನು. ಶುಕ್ರನೆಂಬವನ್ಯಾರು! ಈಶ್ವರನಿಂ ಆಮೃತಸಂಜೀವಿನೀ ವಿದ್ಯವ ಪಡದುದೆಂತು ಈ ವೃತ್ತಾಂತಮಂ ತನಗೆ ಬುದ್ಧಿಗಲಿಸೀ ಎಂದು ಕೇಳಲಾಗಣಂಗಳಿಂತೆಂದರೂ, ಪೂರ್ವದಲ್ಲಿ ಅಂಧಕಾಸುರನೊಡನೆ ಶಿವಗಣಂಗಳು ಧನುರ್ಬಾಣಗಳಂ ಕೊಂಡು ಗಿರಿವ್ಯೂಹ ವಜ್ರವ್ಯೂಹವೆಂಬ

ಯುದ್ಧವಂ ಮಾಡಲು, ಅಂಧಕಾಸುರನು ಸೋತು ಶುಕ್ರಾಚಾರ್ಯರ ಸಮೀಪಕ್ಕೈಪೋಗಿ ರಥವನಿಳಿದು ಬಿನ್ನೈಸಿದನು, ಎಲೈಸ್ವಾಮಿ; ನಿಮ್ಮ ಅನುಗ್ರಹದಿಂದ ತಾನು ಹರಿಹರಬ್ರಹ್ಮಾದಿ ದೇವರ್ಕಳನ್ನು ತೃಣಕ್ಕೆ ಸಮಾನವಾಗಿ ಕಂಡೆನು, ಆ ದೇವರ್ಕಳು ನನ್ನ ಕಂಡರೆ ಸಿಂಹವಕಂಡ ಆನೆಗಳಂತೆ ಗರುಡನಕಂಡ ಸರ್ಪಗಳಂತೆ ಪೋಡುತ್ತಿಹರು, ಈಪರಮೇಶ್ವರನ ವಜ್ರಪ್ರಹವನ್ನು ಕೊಂಡು ಪ್ರಮಥರು ನಮ್ಮನ್ನು ಪೋಡಿಸಿ ಬೆಟ್ಟಗಳಹಾಗೆಯೂ ಯಜ್ಞಗಳಲ್ಲಿ ಬ್ರಾಹ್ಮರು ಇಹಂತೆಯೂ ರಣದಲ್ಲಿ ಸ್ಥಿರವಾಗಿ ನಿಂತರು ಆದ್ದರಿಂದ ನಿಮ್ಮ ಪಾದಪದ್ಮಂಗಳನ್ನು ಶರಣುಹೊಕ್ಕೆವು ನಮ್ಮ ರಕ್ಷಿಸಬೇಕು. ಮುಂಡ ಸುಮುಂಡ ಕುಂಭಜಂಭಮೊದಲಾದ ಪರಿವಾರವನ್ನು ಶ್ರೀಗಂಧದ ತರುಗಳನ್ನು ದ್ರಾವಿಡರು ಬೇವರಿಸಿ ಅಗದುಹಾಕುವಂತೆ ಪ್ರಮಥರು ನಮ್ಮ ಸೇನೆಯುಂಮೃತವನೈದಿಸಿದರು, ನೀವು ಪ್ರಯಾಸಬಟ್ಟು ಸಂಪಾದಿಸಿದ ಮೃತಸಂಜೀವಿನಿಯು ವಿದ್ಯಕ್ಕೆ ಇದು ವಳ್ಳೆಯಸಮಯವೆಂದುಬಿನ್ನೈಸಿದ ಅಂಧಕಾಸುರನಂ ನೋಡಿ ಮುಗುಳುನಿಗೆಯಿಂ ನಕ್ಕು ಶುಕ್ರಾಚಾರ್ಯನು ಮೃತಸಂಜೀವಿನಿಯಂ ಜಪಿಸಲು ಮೃತವಾದ ದೈತ್ಯರು ನಿದ್ರೆಯು ಮಾಡಿ ಏಳುವಂತೆ ಎದ್ದು ತಮ್ಮ ತಮ್ಮ ಆಯುಧಂಗಳಂ ತೆಗದುಕೊಂಡು ಚನ್ನಾಗಿ ಅಭ್ಯಾಸವಾದ ವೇದಶಾಸ್ತ್ರಂಗಳಂತೆ ಕಾಲದಲ್ಲಿ ಪುಟ್ಟದ ಮೇಘಗಳಂತೆಯೂ ಬ್ರಾಹ್ಮರಿಗೆ ಕೊಟ್ಟ ದಾನ ಫಲಗಳು ಆಪತ್ತಿನಲ್ಲಿ ಪದಗುವಂತೆ ಪದ್ದು ಯುದ್ಧಕ್ಕೆ ಬಂದ ರಾಕ್ಷಸರನ್ನು ನಂದೀಶ್ವರನು ಕಂಡು ಪರಮೇಶ್ವರನ ಸಮೀಪಕ್ಕೆ ಬಂದು ಇಂತೆಂದನು. ಎಲೆ ಸ್ವಾಮೀ ನಿಮ್ಮ ಪ್ರಮಥರು ಇಂದ್ರಾದಿಗಳಿಗೆ ಶಕ್ಯವಲ್ಲದಂಥಾ ರಾಕ್ಷಸರೊಡನೆ ಯುದ್ಧವಂ ಮಾಡಿ ದೈತ್ಯರೆಲ್ಲರಂ ಕೊಲ್ಲಲು ದೈತ್ಯರೆಲ್ಲರನ್ನು ಶುಕ್ರನು ಮೃತಸಂಜೀವಿನಿಯಿಂದ ಎಬ್ಬಿಸಿ ಯಮಲೋಕದಿಂತಿರುಗಿಸಿದನು, ಹೀಗಾಗೆ ನಿಮ್ಮ ಪ್ರಮಥರಿಗೆ ಜಯವೆಂತಹುದೆಂದುಬಿನ್ನೈಸಲು, ಶಿವನು ನಂದೀಶ್ವರನಿಗಿಂತೆಂದನು, ಎಲೆನಂದೀಶ್ವರನೆ ನೀನು ಹೋಗಿ ಗಿಡುಗನು ಗುಬ್ಬಿಯಮರಿಯನೆತ್ತಿಕೊಂಡು ಬರ್ಪಂತೆ ದೈತ್ಯರಮಧ್ಯದಲ್ಲಿರ್ದ ಶುಕ್ರನಂ ಕೊಂಡುಬಾರೆನಲು, ನಂದಿಕೇಶ್ವರನು ನಾನಾಯುಧಪಾಣಿಗಳಾಗಿ ಕಾದಿದ್ದ ದೈತ್ಯರಮಧ್ಯದಿಂದ ಉಟ್ಟವಸ್ತ್ರಸಡಿಲ್ಕೆ ಕೊಟ್ಟಾಭರಣಂಗಳು ಜಾರೆ, ಕಂಗೆಟ್ಟಿರ್ದ ಶುಕ್ರನನ್ನು ಶರಭನು

ಆನೆಯುಮುರಿಯು ಕೊಂಡು ಪೋಪತ್ರೆ ಕೊಂಡು ಬರಲು, ದೈತ್ಯರು ಸಿಂಹಧ್ವನಿಗೈದು ಬಾಣವರ್ಷವಂ ಕರೆಯಲೂ, ಆವರ ಬಾಣಂಗಳೆಲ್ಲವನ್ನೂ ತನ್ನ ಮುಖಾಗ್ನಿಇಂದಾ ದಹಿಸಿ ಶುಕ್ರನಾ ಬಂದು ಎಲೈ ಸ್ವಾಮಿ ಈತನೀಗ ಶುಕ್ರನೂ ಎಂದು ನಂದಿಕೇಶ್ವರಬಿನ್ನೈಸಲೂ, ಪರಮೇಶ್ವರನುಭಕ್ತವತ್ಸಲನಾದಕಾರಣ ಭಕ್ತರು ಸಮರ್ಪಿಸಿದ ನೈವೇದ್ಯದ ಮಧುರಫಲದಂತೆ ಶುಕ್ರನಂ ನುಂಗಲೂ, ದೈತ್ಯರು ಮಹಾ ದುಃಖಪಟ್ಟು ತಮಗಿನ್ನು ಜಯವಿಲ್ಲವೆಂದು ನಿಶ್ಚೈಶಿಕೊಂಡು ಸುಂಡಿಲಗಳಿಲ್ಲದ ಆನೆಗಳಂತೆ ಕೊಂಬುಗಳಿಲ್ಲದ ಬಸವಗಳಂತೆ ಜೀವವಿಲ್ಲದ ಶರೀರದಂತೆ ವೇದಗಳಿಲ್ಲದ ಬ್ರಾಹ್ಮಣನಂತೆ ಬಲಪುಂಟಾಗಿಯೂ ಉದ್ಯೋಗವ ಮಾಡದವನಂತೆ ಉದ್ಯೋಗವ ಮಾಡಿದರೂ ಫಲವಿಲ್ಲದೆ ಭಾಗ್ಯಹೀನರಾದಂತೆ ಪತಿಹೀನರಾದ ಸ್ತ್ರೀಯುರಂತೆ ಪಕ್ಷಗಳಿಲ್ಲದ ಪಕ್ಷಿಗಳಂತೆ ಆಯುಷ್ಯವಿಲ್ಲದವನ ಐಶ್ವರ್ಯದಂತೆ ಆಚಾರವಿಲ್ಲದವನ ವೇದಶಾಸ್ತ್ರಂಗಳಂತೆ ಉತ್ಸಾಹವಿಲ್ಲದಿರಲೂ. ಅಂಧಕಾಸುರನಿಂತೆಂದನು, ನಂದಿಕೇಶ್ವರನು ನಮ್ಮ ಮೋಸಗೊಳಿಸಿ ಆಚಾರ್ಯನಂ ಕೊಂಡೊಯ್ಯಲೂ ನಮ್ಮ ಪ್ರಾಣ ಧೈರ್ಯ ಕೀರ್ತಿ ಬಲ ತೇಜಸ್ಸು ಪರಾಕ್ರಮಗಳೆಲ್ಲವನ್ನೂ ನಮ್ಮ ಅಪಹರಿಸಿದಂತಾಯಿತು. ಕುಲಗುರುವಿಗೆ ಆಪತ್ತು ಬರಲೂ ಪರಿಹರಿಸದಿರಲು ನಮ್ಮ ಜನ್ಮ ವ್ಯರ್ಥವು. ಆದರಿಂದ ನೀವು ಧೈರ್ಯವಂತರಾಗಿ ಗಣಂಗಳೊಡನೆ ಯುದ್ಧವ ಮಾಡಿ, ನಾನು ಮುಂದಿ ಮೊದಲಾಗಿ ಪ್ರಮಥರೊಡನೆ ಯುದ್ಧವ ಮಾಡಿ ಯೋಗೀಶ್ವರನು ಯೋಗದಿಂ ತನ್ನ ಆತ್ಮಬಂಧವಂ ಬಿಡಿಸಿಕೊಂಡಂತೆ ನಮ್ಮ ಆಚಾರ್ಯನಂ ಬಿಡಿಸಿಕೊಂಡೇನು ಆ ಆಚಾರ್ಯನು ಯೋಗೀಶ್ವರನಾದಕಾರಣ ತನ್ನ ಹೃದಯದಲ್ಲಿ ಪರಮೇಶ್ವರನಂ ಭಾವಿಸಿ ಶಿವನ ಶರೀರದಿಂ ಪೊರಮಟ್ಟು ಬಂದು ನಮ್ಮ ರಕ್ಷಿಶ್ಯಾನು ಎಂದು ಅಂಧಕಾಸುರ ನುಡಿಯಲೂ, ದೈತ್ಯರು ಹರ್ಷಪಟ್ಟು ಪ್ರಮಥರೊಡನೆ ನಾನಾವಿಧ ಶಸ್ತ್ರಾಸ್ತ್ರಗಳಿಂ ಘೋರ ಯುದ್ಧವಂ ಮಾಡಿ ಸೈರಿಸಲಾರದೆ ಓಡಿಬರಲೂ ವಿಘ್ನೇಶ್ವರನೂ ಷಣ್ಮುಖನೂ ನಂದೀಶ್ವರನೂ ಸೋಮನಂದಿಯೂ ನೈಗನು ವಿಶಾಖನು ಇವರು ಮೊದಲಾದ ಗಣಂಗಳು ಅಂಧಕಾಸುರನ ಅಂಧಕನಾಗುವಹಾಗೆ ಮಂತ್ರಿಸಿ ಅಂಧಕನಮಾಡಿದರು, ಈಉಭಯದಳವೂ ಶಾಂತವಾಗಲೂ ಪರಮೇಶ್ವರನ ಉದರದಲ್ಲಿರ್ದ ಶುಕ್ರನು ಹೊ

ರವಂತು ಬರುವದಕ್ಕೆ ಮಾರ್ಗವಂ ಕಾಣದೆ ತೊಳಲಿ ಪರಮೇಶ್ವರನ ಕುಕ್ಷಿಯಲ್ಲಿರ್ದ ಬ್ರಹ್ಮ ನಾರಾಯಣ ಇಂದ್ರ ಮೊದಲಾದವರ ಲೋಕಂಗಳಂ ನೋಡಿ ಅಲ್ಲಿ ಅಂಧಕಾಸುರ ಪ್ರಮುಖರ ಯುದ್ಧವಂ ಕಂಡು ದೇವತೆಗಳ ನೂರು ವರ್ಷ ಪರ್ಯಂತರವೂ ತಿರುತಿರುಗಿ ದುರ್ಜನನು ಸಜ್ಜನರಲ್ಲಿ ಊಣೆಯವಂ ಕಾಣದಂತೆ ತಾನು ಹೊರವಂತು ಬಹದಕ್ಕೆ ಮಾರ್ಗವಂ ಕಾಣದೆ ಪರಮೇಶ್ವರನ ಶುಕ್ಲಮಾರ್ಗದಿಂ ಪೊರಪಟ್ಟು ಬಂದು ನಮಸ್ಕರಿಸಲು, ಪರಮೇಶ್ವರನಿಂತೆಂದನು ಕೇಳ್ ಭಾರ್ಗವ ನೀನು ಶುಕ್ಲಮಾರ್ಗದಿಂ ಪೊರಮಟ್ಟು ಬಂದೆಯಾಗಿ ಶುಕ್ರನೆಂಬ ಪೆಸರುಳ್ಳನಾಗು, ನೀನು ನಮ್ಮ ಪುತ್ರನ ಸಮಾನನು ಹೋಗು ಎನಲಾ ಶುಕ್ರನು ಮೇಘಮಂಡಲಮಂ ಪೋಗುವ ಶಶಿಯಂತೆ ದೈತ್ಯಸೇನೆಯಂ ಪ್ರವೇಶವಾಗಲು, ಚಂದ್ರೋದಯದಲ್ಲಿ ಎಸೆವ ಸಮುದ್ರದಂತೆ ಶುಕ್ರನಂ ಕಂಡು ದೈತ್ಯರು ಸಂತೋಷವನ್ನೈದಿದರು. ಇದು ಶುಕ್ರನ ವೃತ್ತಾಂತವು. ಈ ಶುಕ್ರನು ಮೃತಸಂಜೀವನೀ ವಿದ್ಯೆಯಂ ಪಡದ ಪ್ರಕಾರವಂ ಪೇಳ್ವೆನು ಕೇಳು ಪೂರ್ವದಲ್ಲಿ ಭೃಗುಪುತ್ರನು ಕಾಶೀಪಟ್ಟಣಕ್ಕೆ ಪೋಗಿ ಲಿಂಗಪ್ರತಿಷ್ಠೆಯಂ ಮಾಡಿಕೊಂಡು ಅಲ್ಲಿ ಬಂದು ತೀರ್ಥವಂ ಸಂಪಾದಿಸಿ ಸದಾಶಿವಧ್ಯಾನಪರನಾಗಿ ಉಗ್ರತಪವಂ ಮಾಡಿದನದೆಂತೆನೆ ಕಕ್ಕೆ ಸಂಪಿಗೆ ಉಮ್ಮತ್ತ ಮಲ್ಲಿಗೆ ಕಣಿಗಿಲು ನೂರುಯೆಸಳುಗಳುಳ್ಳ ತಾವರೆ ಜಾಜಿ ಬೆಟ್ಟದಾವರೆ ಕಡವೆ ಬಕುಳ ಸೆವಂತಿಗೆ ಲೊಕ್ಕಿ ಮುಳ್ಳುಮುತ್ತುಗ ಅಶೋಕ ಸುರಹೊನ್ನೆ ನಾಗಕೇಸರ ಹೆಗ್ಗುಳ್ಳದ ಹೂವು ನಂದಿವರ್ಧನ ಅಗಸೆ ಮುತ್ತುಗ ದೇವದಾರು ಕಂಚುವಾಳ ತೇರಣ ದೂರ್ವೆ ಕೆಂಪಿನತೇರಣ ಪಾದರಿ ಇವು ಮೊದಲಾದ ಪುಷ್ಪಂಗಳಂ ಬಗೆ ಬಗೆಗೆ ಒಂದೊಂದುಲಕ್ಷ ಪುಷ್ಪಂಗಳಂ ನಾಗುಳ್ ಮಿತವಾದ ಪಂಚಾಮೃತಾಭಿಷೇಕವು ಲಕ್ಷ ಸಾವಿರಭಾರಿ ಯಕ್ಷಕರ್ದಮ ಗಂಧಲೇಪನ ಗೀತ ನೃತ್ಯ ವಾದ್ಯಂಗಳಿಂದಲು ವೇದ ಪಾರಾಯಣ ಸ್ತೋತ್ರಪಾಠ ಸಹಸ್ರನಾಮ ಮೊದಲಾದ ಸ್ತೋತ್ರಂಗಳ ನೋದಲು ಪ್ರತಿದಿನದಲ್ಲಿಯೂ ಐದುಸಾವಿರ ವರ್ಷ ಪೂಜೆಯಂ ಮಾಡಿದರೂ ಪರಮೇಶ್ವರ ಪ್ರಸನ್ನನಾಗದಿರಲು, ಮತ್ತೊ ನಿಯಮವಂ ಮಾಡಿಕೊಂಡನದೆಂತೆನೆ, ಸಮಾಧಾನದಿಂ ಮನೋಮಲಿನಮಂ ಪರಿಹರಿಸಿ ಚಿತ್ತವಂ ಸಮರ್ಪಿಸಿ ಸಾವಿರ ವರ್ಷ ಪರ್ಯಂತರವೂ ಕಿಡಿಸಹಿತ

ವಾದ ಧೂಪದೀಪನವಂ ಮಾಡಲೂ ಆಗ ಮಹಾದೇವನು ಆ ಲಿಂಗದಿಂ ಪ್ರ
ಸನ್ನನಾಗಿ ಎಲೆ ಭಾರ್ಗವ! ನೀನು ಮಾಡಿದ ತಪಸ್ಸಿಗೆ ನಾನು ಪ್ರಸನ್ನನಾದೆ
ನೂ ಎನಲೂ ಶುಕ್ರನು ಸಂತೋಷಪಟ್ಟು ಹಸ್ತಗಳಂ ಮುಗಿದು ಆ ಮೂ
ರ್ತಿಯು ಅಷ್ಟಮೂರ್ತಿಗಳಂ ಸ್ತುತಿಗೈವನದೆಂತೆನೆ, ನೀನು ಸೂರ್ಯರೂಪ
ದಿಂ ಅಂಧಕಾರವಂ ಪರಿಹರಿಸಿ ಲೋಕತ್ರಯವಂ ರಕ್ಷಿಸುತ್ತಿದ್ದೆ, ಚಂದ್ರ
ರೂಪದಿಂ ಬೆಳದಿಂಗಳಂತಾಳ್ದು ಲೋಕದ ಅಂಧಕಾರವಂ ಪರಿಹರಿಸಿ ಆ
ಪ್ಯಾಯನವಂ ಮಾಡಿ ಸಮುದ್ರಂಗಳನಭಿವೃದ್ಧಿಯನೈದಿಸುತಿರ್ದೆ, ವಾಯು
ರೂಪವಂಧರಿಸಿ ಸಕಲ ಪ್ರಾಣಿಗಳಲ್ಲಿಯೂ ಸಂಚರಿಸುತಿದ್ದೆ, ನೀನುಹೊರ
ತಾಗಿ ಲೋಕವಲ್ಲಿ ಬದುಕುವರಾರು, ನೀನು ಲೋಕದ ಉತ್ಪತ್ತಿಸ್ಥಿತಿ ಸಂ
ಹಾರಕ್ಕೆ ಕಾರಣವಾದೆ, ಅಗ್ನಿರೂಪದಿಂ ಅಣುರೇಣುತೃಣಕಾಷ್ಟಗತನಾಗಿ
ಸಕಲವಾದ ದೇವರ್ಕಳಿಗೂ ಆಹಾರಪ್ರದನಾಗಿ ಸಕಲ ಸಂಹಾರಕನಾಗಿ ವ
ರ್ತಿಸುತಿರ್ದೆ, ಉದಕರೂಪದಿಂ ಜಗತ್ತಿಗೆ ಜೀವನವಾಗಿ ಸ್ನಾನಪಾನಾದಿಗ
ಳಿಂದ ಸಕಲ ಲೋಕವಂ ಪವಿತ್ರವಂ ಮಾಡುತಿದ್ದೆ, ಆಕಾಶರೂಪಿನಿಂದ ಸ
ಕಲ ಪ್ರಾಣಿಗಳಿಗೂ ಒಳಗೂ ಹೊರಗೂ ತೆರಪುಗೊಟ್ಟು ಸಕಲವನ್ನೂ ಸ
ಲಹುತಿದ್ದೆ, ಭೂರೂಪದಿಂ ಸಮಸ್ತ ವಸ್ತುವನ್ನೂ ಧರಿಸಿ ಸಕಲಪ್ರಾಣಿಗಳ
ನ್ನೂಸಲಹುತಿದ್ದೆ, ನಿನಗಿಂತಲೂಸ್ತೋತ್ರಾರ್ಹನಾರು,ಜೀವರೂಪದಿಂಚರಾ
ಚರವನ್ನೂ ವ್ಯಾಪಿಸಿಕೊಂಡಿರುವ ನಿನಗೆ ನಮಸ್ಕಾರ, ಬ್ರಹ್ಮ ಮೊದಲಾದ
ವರಿಗೆ ವಂದ್ಯನಾದ ಪಾರ್ವತೀರಮಣನಾದ ಸಕಲಜನಸಹಿತವಾದಸಮಸ್ತ
ಪ್ರಪಂಚಮಂ ವಿಸ್ತರಿಸುವ ಅಷ್ಟಮೂರ್ತಿಯಾದ ಪರಮಾರ್ಥಸ್ವರೂಪ
ನಾದ ನಿನಗೆ ನಮಸ್ಕಾರವೆಂದು ಶುಕ್ರನು ನಮಸ್ಕಾರವಂ ಮಾಡಲೂ. ಪರ
ಮೇಶ್ವರನು ತನ್ನ ಹಸ್ತಗಳಂ ಪಿಡಿದು ಎಬ್ಬಿಸಲೂ ಎದ್ದು ಸ್ತುತಿಗೈಯ್ಯ
ಲೂ ನೀನು ಮಾಡಿದ ಲಿಂಗಪ್ರತಿಷ್ಠೆ ಪೂಜೆ ತಪಸ್ಸು ಮೊದಲಾದ ನಿಯ
ಮಂಗಳಂ ಸಂತೋಷಪಟ್ಟೆನೂ ನೀನು ಸ್ಕಂದ ಗಣಪತಿಗಳಿಗೆ ಸಮಾನ
ನೂ ಈ ಶರೀರದಿಂದಲೇ ತನ್ನ ಶರೀರವಂ ಪೊಕ್ಕು ಪೊರಮಟ್ಟು ತನ್ನ ಕು
ಮಾರನಾದೀಯೆ ಇದು ಬ್ರಹ್ಮಾದಿಗಳಿಗೂ ದೊರಕದು ಅದರಿಂ ತನ್ನ ತಪೋ
ಬಲದಿಂದಲೇ ತಾನು ಸಂಪಾದಿಸಿದ ಮೃತಸಂಜೀವಿನೀ ಎಂಬ ಮಹಾ ವಿದ್ಯೆ
ಯನ್ನು ನಿನಗೆ ಉಪದೇಶವಂ ಮಾಡಿದೆನು, ಈ ವಿದ್ಯೆಯನ್ನು ಮೃತವಾದವ

ರಂ ಕುರಿತು ಜಪಿಸಿದರೆ ಅವರು ಆಕ್ಷಣದಲ್ಲಿಯೇ ಮನಸ್ಸಿನಂತೆ ಧಾನ್ಯ ಬಂದು ಬಲವಂತರಹರೂ, ನೀನು ಗ್ರಹಗಳೊಳಗೆ ಅತಿ ತೇಜಸ್ವಿಯಾಗಿ ಆಕಾಶದಲ್ಲಿಯೂ ಅತಿ ತೇಜಸ್ಸುವುಳ್ಳವನಾಗೂ. ನಿನಿಗೆ ಇದಿರಾಗಿ ಸ್ತ್ರೀ ಪುರುಷಪಕ್ಷಿಗಳು ಬಂದರೂ ಅವರ ಕಾರ್ಯಹಾನಿ, ನಿನ್ನಂಬಲಕ್ಕೆ ಮಾಡಿಕೊಂಡುಬಂದವರೂ ಕಾರ್ಯಹಾನಿ, ನಿನ್ನನ್ನು ಎಡದ ಬೆನ್ನು ಮಾಡಿಕೊಂಡು ಬಂದರೆ ಸಕಲ ಕಾರ್ಯವೂ ಲೇಸಹುದು, ನಿನ್ನ ಅಸ್ತಮಯದಲ್ಲಿ ಏನು ಕಾರ್ಯವ ಮಾಡಲೂ ಅಶುಭ, ನಿನ್ನ ಉದಯದಲ್ಲಿ ಏನುಕಾರ್ಯವ ಮಾಡಿದರೂ ಶುಭವು, ಪಾಡ್ಯ, ಷಷ್ಠಿ, ಏಕಾದಶೀ ಇವರಲ್ಲಿ ನಿನ್ನ ವಾರಕೂಡಲೂ ಅಮೃತ ಸಿದ್ಧಿ ಯೋಗ, ನಿನ್ನ ಭಕ್ತರು ಕೀರ್ತಿವಂತರಾಗಿ ಶುಚಿಗಳಾಗಿ ಸಂತಾನವುಳ್ಳವರಾಗಿ ಇರಲಿ, ವಿಶ್ವೇಶ್ವರನ ದಕ್ಷಿಣದಲ್ಲಿರ್ದ ನೀನು ಪೂಜಿಸಿದ ನಿನ್ನ ಹೆಸರಿನ ಶುಕ್ರೇಶ್ವರನಂ ಆರು ಪೂಜಿಸುವರೋ! ಒಂದು ವರ್ಷ ಶುಕ್ರವಾರಗಳಲ್ಲಿ ನಕ್ತವ್ರತವಂ ಮಾಡಿದವರು ಇವರೆಲ್ಲರೂ ಆಯುರಾರೋಗ್ಯ ಐಶ್ವರ್ಯವಂತರಾಗಿ ಶುಚಿಗಳಾಗಿ ಸಂತಾನವುಳ್ಳವರಾಗಿ ಇಹದಲ್ಲಿ ಸಕಲಸೌಖ್ಯದಲ್ಲಿರ್ದು, ಪರದಲ್ಲಿ ನಿನ್ನಲೋಕಕ್ಕೆ ಬರಲೀ ಎಂದು ಪರಮೇಶ್ವರನು ಶುಕ್ರನಿಗೆ ವರವಂ ಕೊಟ್ಟು ಆ ಲಿಂಗದಲ್ಲಿ ಪ್ರವೇಶವಾದನೂ ಎಂದು ಈರೀತಿಯಲ್ಲಿ ಶುಕ್ರನ ಲೋಕದ ವೃತ್ತಾಂತವಂ ಗಣಂಗಳು ಪೇಳಲೂ, ಶಿವಶರ್ಮನು ಕೇಳುತ್ತಾ ಮುಂದೆ ಅಂಗಾರಕಲೋಕವಂ ಕಂಡನೂ ಎಂದು ಅಗಸ್ತ್ಯನು ತನ್ನ ಸತಿಗೆ ಪೇಳ್ದ ವೃತ್ತಾಂತವಂ ವ್ಯಾಸರು ತನಗರುಹಿದರೆಂದು ಸೂತಪುರಾಣೀಕನು ಶೌನಕಾದಿಋಷಿಗಳಿಗೆಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ|| * ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರ ಪುರವರಾಧೀಶ ಶ್ರೀಕೃಷ್ಣರಾಜವಡೆಯರವರೂ ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಶುಕ್ರನುತ್ಪತ್ತಿ ಶುಕ್ರಲೋಕವೃತ್ತಾಂತವಂ ಪೇಳ್ದ ಹದಿನಾರನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ. ಶ್ರೀ *

ಹದಿನಾರನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ಹದಿನೇಳನೇ ಅಧ್ಯಾಯಂ.

ಅಂಗಾರಕಲೋಕ, ಬೃಹಸ್ಪತಿಲೋಕ. ಶನಿಲೋಕ ವರ್ಣನೆ.

ಅನಂತರದಲ್ಲಿ ಶಿವಶರ್ಮನು ಎಲೈ ಗಣಂಗಳಿರಾ ನೀವು ಬುದ್ಧಿಗಲಿಸಿದ ಶುಕ್ರನಲೋಕ ವೃತ್ತಾಂತವಂ ಕೇಳಿ ಎನಗೆ ಶ್ರವಣಾನಂದವಾಯಿತು. ಮುಂದೆ ತೋರ್ಪ ಈ ಲೋಕ ಆವ ಪುಣ್ಯಾತ್ಮನದು ಎಂದು ಕೇಳಲು ಗಣಂಗಳಿಂತೆಂದರು. ಕೇಳೈ! ಶಿವಶರ್ಮನೆ ಇದು ಅಂಗಾರಕಲೋಕ ಈತನು ಭೂಮಿಯ ಪುತ್ರನು, ಈತ ಭೂಮಿಯಪುತ್ರನಾದ ವೃತ್ತಾಂತವಂ ಕೇಳು; ಪೂರ್ವದಲ್ಲಿ ದಕ್ಷನಮಗಳಾದ ಸತೀದೇವಿಯರು ವಿಯೋಗವಾಗಲು ಪರಮೇಶ್ವರನು ಯೋಗದಿಂದ ತಪವಂ ಮಾಡುತ್ತಿರಲು ಆ ಪರಮೇಶ್ವರನ ಲಲಾಟದಿಂ ಬೆವರಿನ ಹನಿ ಭೂಮಿಯಲ್ಲಿ ಬೀಳಲು ಆ ಭೂಮಿಯಲ್ಲಿ ರಕ್ತವರ್ಣನಾದ ಕುಮಾರ ಪುಟ್ಟಿದನು. ಆ ಕುಮಾರನಂ ಭೂಮಿದೇವಿ ಪೋಷಿಸಲು ಮಹೇಶ್ವರನಪುತ್ರನೆನಿಸಿ ಖ್ಯಾತಿಪಡೆದನು. ಆ ಅಂಗಾರಕನು ಕಾಶೀಪಟ್ಟಣದಲ್ಲಿ ಕಂಬಳಾಶ್ವತರ ಲಿಂಗಕ್ಕೆ ಬಡಗಲಲ್ಲಿ ತನ್ನ ಹೆಸರಿನಲ್ಲಿ ಲಿಂಗವಂ ಪ್ರತಿಷ್ಠೆಯಂ ಮಾಡಿಕೊಂಡು ಪಂಚಾಮೃತಸ್ನಾನ ಪೂಜೆಯಂ ತನ್ನ ಶರೀರದಿಂದ ಕೆಂಡದಂಥಾ ತೇಜಸ್ಸು ಪೊರಮಡುವ ಪರ್ಯಂತರವೂ ತಪವ ಮಾಡಲು, ಪರಮೇಶ್ವರನು ಪ್ರಸನ್ನನಾಗಿ ಗ್ರಹಪದವಿಯಂ ಕೊಟ್ಟನು, ಹಾಗೆ ಅವನಂ ಕುರಿತು ಎಲೈ ನೀನು ತಪಸ್ಸಂ ಮಾಡುವಾಗ ನಿನ್ನ ಶರೀರದಿಂದ ಅಂಗಾರಗಳು ಪೊರಮಟ್ಟವಾಗಿ ಅದರಿಂದ ನೀನು ಅಂಗಾರಕನೆಂದು ಪ್ರಸಿದ್ಧನಾಗು, ನಿನ್ನ ವಾರದಲ್ಲಿ ಚತುರ್ಥೀಕೂಡೆ ಗ್ರಹಣಕ್ಕೆ ಸಮಾನವಾದ ಪುಣ್ಯಕಾಲವು, ಆದಿನದಲ್ಲಿ ನೀನು ಪ್ರತಿಷ್ಠೆಯಂ ಮಾಡಿದ ಅಂಗಾರಕೇಶ್ವರನ ಪೂಜೆಯಂ ಮಾಡಿ ದಾನಗಳಂ ಮಾಡಲು ಪಿತೃಗಳಿಗೆ ಹನ್ನೆರಡು ವರ್ಷ ಪರ್ಯಂತರ ತೃಪ್ತಿಯಹುದು. ಆದಿನದಲ್ಲಿ ವಿನಾಯಕನ ಪೂಜೆಯಂ ಮಾಡಲು ಸಕಲ ವಿಘ್ನ ಪರಿಹರವು. ಹೀಗೆ ಮಾಡಿದವರು ನಿನ್ನ ಲೋಕದಲ್ಲಿ ಇಹರೆಂದು; ಪರಮೇಶ್ವರನು ನಿರೂಪಿಸಿದನು ಎಂದು ಗಣಂಗಳು ಪೇ

ಳುತ್ತಿರೆ; ಮುಂದೆ ಬೃಹಸ್ಪತಿಯ ಲೋಕವಮಂ ಕಂಡು ಶಿವಶರ್ಮನು ಇದಾ ವಲೋಕವೆಂದು ಗಣಂಗಳಂ ಬೆಸಗೊಳ್ಳಲೂ ಗಣಂಗಳಿಂತೆಂದರೂ. ಕೇಳೈ ಶಿವಶರ್ಮನೆ. ಇದು ಬೃಹಸ್ಪತಿಯುಲೋಕ ಈತನ ವೃತ್ತಾಂತವನ್ನುಉತ್ಪತ್ತಿಯನ್ನು ಕೇಳೂ ಪೂರ್ವದಲ್ಲಿ ಬ್ರಹ್ಮದೇವರಿಂದ ಅಂಗಿರಸ್ಸು ಪುಟ್ಟಿದನು ಆತಂಗೆ ಈ ಬೃಹಸ್ಪತಿ ಪುಟ್ಟಿದನು ಈ ಬೃಹಸ್ಪತಿ ಕಾಶೀಪಟ್ಟಣಕ್ಕೆ ಬಂದು ತನ್ನ ಹೆಸರಿನ ಲಿಂಗವಂ ಪ್ರತಿಷ್ಠೆಯಂ ಮಾಡಿಕೊಂಡು ಮಹಾ ತಪಸ್ಸಂ ಮಾಡಲೂ, ಆ ಲಿಂಗದಿಂದ ಪರಮೇಶ್ವರನು ತೇಜೋಮಯುವಾಗಿ ಪ್ರಸನ್ನನಾಗೆ; ಈ ಬೃಹಸ್ಪತಿ ಕಣ್ದೆರದು ಮಹಾದೇವನ ತೇಜೋಮಯವಾದ ದಿವ್ಯಮೂರ್ತಿಯಂ ಕಂಡು ಸ್ತೋತ್ರವಂ ಮಾಡಿದನೂ.ಶಂಕರ ಶಾಂತ ಚಂದ್ರವರ್ಣ ಚಂದ್ರಶೇಖರ ಸಮಸ್ತರಿಗೂಭುಕ್ತಿ ಮುಕ್ತಿ ಪ್ರದಾಯಕಪರಮಪವಿತ್ರನೆ ಭಕ್ತರಿಂ ಸಮರ್ಪಿತವಾದವಸ್ತುವಿನಲ್ಲಿ ರುಚಿಯುಳ್ಳವನು ಜನನ ಮರಣಂಗಳಿಲ್ಲದವನು ನಿನ್ನಲ್ಲಿ ಸ್ಥಿರಮತಿಯುಳ್ಳವರಿಗೆ ಮನೋರಥಮಂ ಪೂರೈಸುವವನು ಭುಜಂಗಭೂಷಣನು ಪಾರ್ವತಿಗೆ ವಾಮಾಂಗವಂ ಕೊಟ್ಟು ನಿನ್ನ ಅಷ್ಟ ತನುಗಳಿಂದಜಗತ್ರಯದಲ್ಲಿ ಪೂರ್ಣನಾಗಿ ಇಹೆ, ತ್ರಿಜಗನ್ಮಯನು ನಿರೂಪನು ಕನಕಾಭರಣ ಭೂಷಿತನು ಚಂದನವಂಧರಿಸಿದವನು ಭೂಪಾಲಪಾಲಕನು ಪ್ರಮಥಗಣನಾಥನು ಸಂಸಾರವೆಂಬ ಸಮುದ್ರದಲ್ಲಿ ಬಿದ್ದವರಿಗೆ ಕೈ ಕೊಟ್ಟು ಎತ್ತಿ ರಕ್ಷಿಸುವನು ಭಕ್ತಿಯುಳ್ಳ ಸ್ಥಳದಲ್ಲಿ ಸಂಚರಿಸುವನು ಪ್ರಣವದಿಂದ ತಿಳಿಯಲ್ಪಡುವವನು ಚಂದ್ರಶೇಖರನೆ ಪಾರ್ವತೀಸಮೇತನು ಶುಭಮಪ್ಪ ದೇವಗಣಂಗಳಿಗೆ ಸ್ವಾಮಿಯಾದವನು ಶಿವದೇವ ಮಹೇಶ ಗಿರೀಶ ಮೃಡ ಚಂದ್ರನಧರಿಸಿದವನು ಸಕಲ ಲೋಕಂಗಳಲ್ಲಿಯೂ ನಿನ್ನ ಭಕ್ತರ್ಗೆ ವಿಘ್ನನಂ ಮಾಳ್ಪವರ ಹೆಜ್ಜೆಗೆಯಂ ಪರಿಹರಿಸುವವನೂ, ನಿನ್ನ ಬಲವನವಲಂಬಿಸಿ ಯಮನಿಗೆ ಅಂಜಲಿಲ್ಲ ನಿಮ್ಮ ಪಾದಭಕ್ತಿ ಹೊರತಾಗಿ ಮಗನ್ನೊಂದುವರವನ್ನೊಲ್ಲೆನು ಸಕಲ ಲೋಕದಲ್ಲಿಯೂ ನಿನ್ನ ಪೂಜೆ ಇಷ್ಟಾರ್ಥವಂ ಕೊಡುವುದೂ ಹೀಗೆ ಇಷ್ಟಾರ್ಥವಂ ಕೊಡುವದ ಮತ್ತೊಂದು ಕಾಣೆನು ನಿರ್ಗುಣನಾದ ಮಹಾ ಪ್ರಳಯಕರನಾದ ನಿನಗೆ ನಮಸ್ಕಾರ ಇಂತೆಂದು ಸ್ತುತಿಸಿ ಸುಮ್ಮನಿರಲೂ. ಆ ಸ್ತೋತ್ರದಿಂದ ಸದಾಶಿವನು ಸಂತುಷ್ಟನಾಗಿ ಬಹು ವರಗಳಂ ಕೊಟ್ಟು ಮತ್ತಂ

ಕೊಂಡನು; ನೀನು ಮಾಡಿದ ಬಹು ತಪದಿಂ ಬೃಹಸ್ಪತಿಯೆಂಬ ಹೆಸರುಳ್ಳವನಾಗು ನೀನು ತನ್ನ ಜೀವನಾದಕಾರಣ ನಿನಿಗೆ ಜೀವನೆಂಬಹೆಸರಾಗಲಿ ವಾಕ್ಕಿನ ವಿಸ್ತಾರದಿಂದ ನನ್ನನ್ನು ಸ್ತುತಿಸಿದೆಯಾದಕಾರಣ ವಾಕ್ಪತಿಯಾಗು, ಈ ಸ್ತೋತ್ರವಂ ತ್ರಿಕಾಲದಲ್ಲಿ ಪಠಿಸಲು ಮೂಗನಾದರೂ ಪ್ರೌಢನಹನೂ ಎಂದು ವರಗಳಂ ಕೊಟ್ಟು ಬ್ರಹ್ಮ ಮೊದಲಾದ ಸಕಲ ಲೋಕಾಧಿಪತಿಗಳಂ ಕರದು ಎತ್ತಿ ಚತುರ್ಮುಖನೆ ವಾಚಸ್ಪತಿಯನ್ನು ಸಕಲ ದೇವರ್ಕಳಿಗೂ ಗುರುವಾಗಿ ಇರ್ಪಂತೆ ಪಟ್ಟಾಭಿಷೇಕವಂ ಮಾಡೂ ಈತನು ತನಗೆ ಪ್ರಿಯನೂ ಎಂದು ಪರಮೇಶ್ವರನು ಬುದ್ಧಿಗಲಿಸಲೂ, ಆ ಮರ್ಯಾದೆಯಲ್ಲಿ ಪಟ್ಟವಂ ಕಟ್ಟಲೂ ದೇವದುಂದುಭಿಗಳು ಮೊಳಗಿದವು, ಅಪ್ಸರಸ್ತ್ರೀಯರು ನಾಟ್ಯವಾಡಿದರೂ ದೇವರ್ಕಳು ಕಾಣಿಕೆಯನಿತ್ತರೂ ವಸಿಷ್ಠಾದಿ ಋಷಿಗಳು ಆಶೀರ್ವಾದವಂ ಮಾಡಿದರೂ, ಅನಂತರದಲ್ಲಿ ಸದಾಶಿವನು ಕೇಳ್ಳೈ ಬೃಹಸ್ಪತಿಯೆ! ಚಂದ್ರೇಶ್ವರನ ದಕ್ಷಿಣದಲ್ಲಿ ವಿಶ್ವೇಶ್ವರನ ನೈರುತ್ಯದಲ್ಲಿ ಇರ್ಪ ನೀನು ಪೂಜಿಸಿದ ಬೃಹಸ್ಪತೀಶ್ವರನನ್ನು ಗುರುಪುಷ್ಯ ಮೊದಲಾದ ಪುಣ್ಯಕಾಲದಲ್ಲಿ ಪೂಜಿಸಲೂ ಸಕಲ ಕಾರ್ಯ ಸಿದ್ಧಿಯಾಗಿ ನಿನ್ನ ಲೋಕವಹುದು, ಗುರುಸ್ತ್ರೀಗಮನ ಮೊದಲಾದ ಪಾಪ ಪರಿಹರವೆಂದು ಪರಮೇಶ್ವರನು ಆ ಲಿಂಗದಲ್ಲಿ ಐಕ್ಯವಾದನು. ಬ್ರಹ್ಮನುಬೃಹಸ್ಪತಿಯಂ ಕರದೊಯ್ದು ದೇವೇಂದ್ರ ಮೊದಲಾದ ದೇವರ್ಕಳ ಮುಂದೆ ಗುರುಲೋಕದಲ್ಲಿ ಇರ್ಪಂತೆ ಪಟ್ಟವಮಾಡಿ, ವಿಷ್ಣು ಮೊದಲಾದವರು ತಮ್ಮ ತಮ್ಮ ಲೋಕಕ್ಕೆ ಹೋದರು. ಅನಂತರದಲ್ಲಿ ಶಿವಶರ್ಮನು ಶನಿಲೋಕವಂ ಕಂಡು ಇದಾವ ಲೋಕವೆಂದು ಬೆಸಗೊಳ್ಳಲೂ ಗಣಂಗಳಿಂತೆಂದರೂ, ಎತ್ತೈ ಶಿವಶರ್ಮನೆ ಬ್ರಹ್ಮಪುತ್ರನಾದ ಮರೀಚಿಯ ಮಗನಾದ ಕಶ್ಯಪನಿಂದ ಅದಿತಿಯಲ್ಲಿ ಸೂರ್ಯನುಪುಟ್ಟಿದನು, ಆತನಿಗೆತ್ವಷ್ಟೃವಿನಮಗಳಾದಸಂಜ್ಞಾದೇವಿಯೆಂಬಸ್ತ್ರೀಯುಂಟು, ಆಕೆ ತನ್ನ ಪತಿಯ ಉಷ್ಣವಂಸಹಿಸಲಾರದೆ ಈತನುಬ್ರಹ್ಮಾಂಡದಲ್ಲಿ ಮೃತನಾಗಿ ಹೋಗಲಿಲ್ಲಾ ಎಂದು ಬ್ಯಾಸರಿಕೆಯಿಂದಾಡಲೂ ಅಂದು ಮೊದಲು ಮಾರ್ತಾಂಡನೆನಿಸಿಕೊಂಬನು. ಅನಂತರದಲ್ಲಿ ಸೂರ್ಯನು ಸಂಜ್ಞಾದೇವಿಯಲ್ಲಿ ವೈವಸ್ವತಮನುವು, ಯಮನು, ಯಮುನೆಎಂಬಮಕ್ಕಳನ್ನು ಪಡದನು. ಸಂಜ್ಞಾದೇವಿಯು ತನ್ನಗಂಡನ ಉಷ್ಣತೇಜಸ್ಸಂತಾಳಲಾ

ರದೆ ತನ್ನ ನೆಳಲಿನಿಂದ ಓರ್ವ ಕಾಂತೆಯಂ ತನ್ನಂತೆ ನಿರ್ಮಿಸೆ; ಆ ಛಾಯಾದೇವಿಯು ಸಂಜ್ಞಾದೇವಿಗೆ ನಮಸ್ಕರಿಸಿ ತನಗೆ ಬುದ್ಧಿಯೇನೆಂದು ಬಿನ್ನೈಸಲು, ತಾನು ತನ್ನ ತಂದೆಯಮನೆಗೆ ಹೋಗಿ ಬಂದೇನು ತಾನು ಬಾಹಪರ್ಯಂತರ ಈ ಮಕ್ಕಳನ್ನು ನಿನ್ನ ಮಕ್ಕಳೆಂದು ಕಂಡು ಯನ್ನಂತೆ ಪತಿಸೇವೆಯಂ ಮಾಡಿಕೊಂಡು ಯಿರು. ಈ ವರ್ತಮಾನವಂ ಪತಿಗೆ ಹೇಳಬ್ಯಾಡವೆಂದು ಕಟ್ಟುಮಾಡಿ ಛಾಯಾದೇವಿಯು ಸಂಜ್ಞಾದೇವಿಗಿಂತೆಂದಳು. ತನ್ನ ಮುಂದಲೆಯ ಹಿಡಿದು ಕೊಲ್ಲುವಪರ್ಯಂತರವೂ ಈ ವೃತ್ತಾಂತವಂ ಪೇಳೆನು, ನೀನು ಹೋಗೂ ಎನಲು, ಸಂಜ್ಞಾದೇವಿಯು ತನ್ನ ತಂದೆಯ ಮನೆಗೆ ಹೋಗಿ ತಂದೆಗೆ ನಮಸ್ಕರಿಸಿ, ತಾನು ನಿಮ್ಮ ಅಳಿಯನ ಉಷ್ಣತೇಜಸ್ಸಂ ತಾಳಲಾರದೇ ಬಂದೆನೆನಲಾ ಮಾತಂ ತಂದೆ ಕೇಳಿ ಮಗಳಂ ಬೈದು ಗಂಡನ ಸಮೀಪಕ್ಕೆ ಹೋಗೆನಲು, ಸಂಜ್ಞಾದೇವಿ ಚಿಂತೆಪಟ್ಟು ಮತ್ತೂ ಮತ್ತೂ ತನ್ನಂತಾನೆ ನಿಂದಿಸಿಕೊಂಡಳು ಅದೆಂತೆನೆ; ಚಿಕ್ಕಂದು ತನ್ನ ತಂದೆತಾಯಿಗಳ ಭಯ, ಯೌವನದಲ್ಲಿ ತನ್ನಗಂಡನ ಭಯ, ಮುಪ್ಪಿನಲ್ಲಿ ಮಕ್ಕಳ ಭಯ, ಆದಾಗಲೂ ಸ್ತ್ರೀಯರಿಗೆ ಸ್ವತಂತ್ರವಿಲ್ಲವಾದಕಾರಣ ಸ್ತ್ರೀಜನ್ಮವೆ ನಿಂದ್ಯವೂ, ಮನೆಗೆ ಪೋದೇನೂ ಎಂದರೆ ಅಲ್ಲಿ ಛಾಯಾದೇವಿ ಇದ್ದಾಳೂ ಇಲ್ಲಿ ಇದ್ದೇನೂ ಎಂದರೆ ತಂದೆ ಕೋಪಿಸುತ್ತಿದ್ದಾನು, ಕೋಪಕಾರನು ಚನ್ನಾಗಿ ಇದ್ದು ತನ್ನ ಮನೆಯು ಬಿಟ್ಟು ಹೋದರೆ ತನ್ನ ಮನೆಯು ತಾನೇ ಸುಟ್ಟುಕೊಂಡಂತೇ ಎಂಬಂಥಾ ಗಾಧೆ ಸರಿಯಾಯಿತು, ತಾನು ಪ್ರಾಯದವಳು ಸಕಲರೂ ಅಪೇಕ್ಷಿಸುವಂಥಾ ಚಂದವುಳ್ಳವಳೂ ತಮ್ಮ ಕುಲವು ಪವಿತ್ರವಾದದೂ ತನ್ನ ಗಂಡನು ಸರ್ವಜ್ಞನೂ ಲೋಕನೇತ್ರನು ಸಕಲ ಸಾಕ್ಷಿಯಾದವನೂ ಎಲ್ಲಾ ಕಡೆಯಲ್ಲೂ ಪೂಜ್ಯನು ಆದುಕಾರಣ ತನಗಿದು ಉಚಿತವಲ್ಲೆಂದು ಆಲೋಚಿಸಿ ಈಗೋಳಿಗೆ ಕುದುರೆಯ ರೂಪವಂ ಧರಿಸಿ ಉತ್ತರ ಕುರುದೇಶಕ್ಕೆ ಪೋಗಿ ತಪೋಬಲದಿಂದ ತನ್ನ ಗಂಡನ ಉಷ್ಣವಂ ಪರಿಹರಿಸಿಕೊಂಡೇನೆಂದು ಪತಿಯಂ ಮನದಲ್ಲಿ ಧ್ಯಾನಿಸುತ್ತಾ, ವಣಹುಲ್ಲು ಆಹಾರವಂ ಮಾಡಿಕೊಂಡು ತಪವಿರಲು. ಅನಂತರದಲ್ಲಿ ಸೂರ್ಯನು ಛಾಯಾದೇವಿಯಲ್ಲಿ ಸಾವರ್ಣಿ ಎಂಬ ಕುಮಾರನನ್ನೂ ಶನೈಶ್ಚರನನ್ನೂ ಭದ್ರೆ ಎಂಬ ಕುಮಾರತಿಯನ್ನೂ ಈ ಮೂವರು ಮಕ್ಕಳಂ ಪಡದು; ಛಾಯಾದೇ

ವಿಯು ತನ್ನ ಮಕ್ಕಳನ್ನು ಸಂಜ್ಞಾದೇವಿಯು ಮಕ್ಕಳನ್ನು ಸರಿಯಾಗಿ ನೋಡದಿರಲೂ ಯಮನು ಛಾಯಾದೇವಿಯಂ ಬೈದು ಒದೆಯಹೋಗಲಾಗ ಪಾದವನೆತ್ತಿ ಒದೆಯಬಂದ ಯಮನನ್ನು ಛಾಯಾದೇವಿ ಇಂತೆಂದಳೂ ಎನ್ನ ಒದೆಯಬೇಕೆಂದೆತ್ತಿದ ನಿನ್ನ ಪಾದ ಬಿದ್ದುಹೋಗಲಿ ಎಂದು ಶಪಿಸಲೂ, ಯಮನು ಬಯಪಟ್ಟು ಬಂದು ತಂದೆಗೆ ಹೇಳಿದನು. ತಾಯಿಯಾದವಳು ಮಕ್ಕಳೆಲ್ಲರನ್ನು ಸರಿಯಾಗಿ ನೋಡಬೇಕು, ಹಾಗೆ ನೋಡದಿರಲೂ ಅಜ್ಞಾನದಿಂದ ಬೈದು ಒದೆಯಲು ಪಾದವನೆತ್ತಿದೆನು; ಒದ್ದವನಲ್ಲ, ಅಪರಾಧವನ್ನು ನೀವು ಕ್ಷಮಿಸಿ ನನ್ನ ಪಾದ ಬೀಳದಂತೆ ಮಾಡಬೇಕೆನಲೂ ಸೂರ್ಯನಿಂತೆಂದನು ಸಾವಿರ ಅಪರಾಧವಂ ಮಾಡಿದರೂ ತಾಯಿ ಮಕ್ಕಳನ್ನು ಶಪಿಸಬಾರದು, ಧರ್ಮಜ್ಞನಾಗಿ ಸತ್ಯವಂತನಾದ ನಿನ್ನನ್ನು ಹೀಗೆ ಶಪಿಸಿದಳು. ಅಲ್ಲಿ ಯೇನೋ ಕಾರಣವುಂಟು. ತಾಯಿಯ ಶಾಪವು ಅತಿಗೂ ಪರಿಹರಿಸಲು ತಕ್ಕುದಲ್ಲ ನಿನ್ನ ಪಾದದಲ್ಲಿ ಮಾಂಸವಂ ತಕ್ಕೊಂಡ ಹುಳುಗಳು ಬೀಳಲಿ, ನಿನ್ನ ಪಾದವು ಬಿದ್ದುಹೋಗಬಾರದು ಇಷ್ಟರಿಂದಲೇ ನಿನಗೆ ವಿಶಾಪವೆಂದು ನುಡಿದು ಸೂರ್ಯನು ಅಂತಃಪುರವಂ ಪೊಕ್ಕು ಛಾಯಾದೇವಿಯಂ ಅನೇಕ ಹೊತ್ತು ನೋಡಿ ಸಾವರ್ಣೆ ಮೊದಲಾದವರಲ್ಲಿ ಸ್ನೇಹವೂ ಮಿಕ್ಕಾದ ಮಕ್ಕಳಲ್ಲಿ ಸ್ನೇಹವಿಲ್ಲದ್ದು ಏನು ಕಾರಣವೆಂದು ಕೇಳಲೂ, ಆ ಛಾಯಾದೇವಿ ಹೇಳದಿರಲೂ ಸೂರ್ಯನು ದಿವ್ಯಜ್ಞಾನದಿಂದ ಧ್ಯಾನಿಸಿ ಸಕಲವನ್ನೂ ತಿಳಿದು ಛಾಯೆಗೆ ಶಾಪವಂ ಕೊಡುವನಿತರೊಳು ಆಕೆಯು ಎಲ್ಲಾ ವೃತ್ತಾಂತಮಂ ಹೇಳಲೂ ಸಂತೋಷವಂ ಮಾಡಿ ತನ್ನ ಮಾವನಾದ ತ್ವಷ್ಟೃವಿನ ಮನೆಗೆ ಪೋಗಲೂ, ಅತ್ಯಂತ ಕೋಪದಲ್ಲಿದ್ದ ಅಳಿಯನನ್ನು ನೋಡಿ ಪೂಜಾದಿಗಳಂ ಸಂತವಿಟ್ಟು, ಸೂರ್ಯನಿಗೆ ತ್ವಷ್ಟೃವಿಂತೆಂದನೂ. ತನ್ನ ಮಗಳಾದ ಸಂಜ್ಞಾದೇವಿ ನಿನ್ನ ಉಷ್ಣವಂ ತಾಳಲಾರದೆ ಉತ್ತರಕುರುದೇಶದಲ್ಲಿ ಸ್ತ್ರೀ ಅಶ್ವರೂಪದಿಂದ ನಿನ್ನಂ ಧ್ಯಾನಿಸುತ್ತಾ ತಪವಿದ್ದಾಳು. ನಿನ್ನ ಉಷ್ಣವಂ ಕೊಂಚ ಪರಿಹರಿಸಬೇಕೆನಲೂ ಸೂರ್ಯನು ಸಮ್ಮತಪಡಲೂ ಸೂರ್ಯನ ಉಷ್ಣವಂ ಯಂತ್ರದಲ್ಲಿರಿಸಿ ಶಾಂತವಂ ಮಾಡಲೂ ಸೂರ್ಯ ಕಳುಹಿಸಿಕೊಂಡು ಉತ್ತರಕುರುದೇಶಕ್ಕೆ ಪೋಗಿ ಹೆಣ್ಣುದುರೆಯುರೂಪದಿಂದ ತಪವಂ ಮಾಡುವ ತನ್ನ ಸ್ತ್ರೀಯಂ ಕಂಡು ತಾನೂ ಗಂಡುಗುದುರೆಯುರೂಪಾಗಿ ಆಕೆಯು ಮುಖವನಾಘ್ರಾಣಿ

ಸುವನಿತರೊಳು ತನ್ನ ವೀರ್ಯವು ತನ್ನ ನಾಸಿಕಾದ್ವಾರಗಳಿಂದ ತನ್ನ ಸ್ತ್ರೀಯಾದ ಹೆಣ್ಣುಕುದುರೆಯ ನಾಸಿಕಕ್ಕೆ ಪ್ರವೇಶವಾಗಲೂ ಅಶ್ವಿನೀ ದೇವತೆಗಳು ಪುಟ್ಟಿದರೂ. ಅವರು ದೇವವೈದ್ಯರಾದರೂ. ಆ ಸೂರ್ಯನೂ ಸಂಜ್ಞಾದೇವಿಯೂ ತಮ್ಮ ನಿಜರೂಪವಂ ತಾಳಿ ತಂಮೊಳ್ ತಾವು ಸಂತೋಷಬಟ್ಟು ತಪವೇ ಸಕಲಕ್ಕೂ ಕಾರಣವೆಂದು ತಪವಂ ಕೊಂಡಾಡಿ, ತಮ್ಮ ಲೋಕಕ್ಕೆ ಪೋದರೂ. ಈ ಮರ್ಯಾದೆಯಲ್ಲಿ ಸೂರ್ಯನಿಂದ ಛಾಯಾದೇವಿಯಲ್ಲಿ ಪುಟ್ಟಿದ ಶನೈಶ್ಚರನು ಕಾಶೀಪಟ್ಟಣಕ್ಕೆ ಪೋಗಿ ವಿಶ್ವೇಶ್ವರನ ದಕ್ಷಿಣದಲ್ಲಿ ಶುಕ್ರೇಶ್ವರನ ಉತ್ತರದಲ್ಲಿ ತನ್ನ ಹೆಸರಿನ ಲಿಂಗವಂ ಪ್ರತಿಷ್ಠೆಯಂ ಮಾಡಿಕೊಂಡು ಮಹಾ ಪೂಜೆಗಳಿಂದ ತಪಸ್ಸಂ ಮಾಡಲೂ; ಪರಮೇಶ್ವರನು ಪ್ರಸನ್ನನಾಗಿ ಶನಿಗೆ ಗ್ರಹತ್ವವಂ ಕೊಟ್ಟು ನಿನ್ನ ವಾರದಲ್ಲಿ ನಿನ್ನ ಹೆಸರಲಿಂಗವಂ ಪೂಜಿಸಿ ಸ್ನಾನದಾನಂಗಳಂ ಮಾಡಿದವರು ನಿನ್ನ ಲೋಕವನ್ನೈದುವರೆಂದು ಪರಮೇಶ್ವರನು ವರವಂ ಕೊಟ್ಟು ಅಂತರ್ಧಾನವಾಗಲೂ. ಆ ಶನೈಶ್ಚರನು ಈ ಲೋಕದಲ್ಲಿ ಸುಖದಿಂದಿದ್ದಾನೂ. ಈ ಅಧ್ಯಾಯವಂ ಪಠಿಸಲು ಶನಿ ಪೀಡೆಗಳು ಪೊದ್ದವು, ಸಕಲೋಪದ್ರವಗಳೂ ಪರಿಹಾರವಾಗಿ ಶನಿಲೋಕದಲ್ಲಿ ದುರ್ಘ ಮರುಜನ್ಮ ಕಾಶಿಯಲ್ಲಿ ಜನಿಸಿ ವಿಶ್ವೇಶ್ವರನಿಂದ ತಾರಕಬ್ರಹ್ಮೋಪದೇಶಮಂ ಪಡೆದು ಶಿವಸಾಯುಜ್ಯವನ್ನೈದುವರೂ ಎಂದು ಗಣಂಗಳು ಶಿವಶರ್ಮಂಗೆ ಪೇಳ್ದ ಅರ್ಥವಂ ಸೂತಪುರಾಣೀಕನೂ ಶೌನಕಾದಿಋಷಿಗಳಿಗೆ ನಿರೂಪಿಸಿದರೆಂಬಲ್ಲಿಗೆ ಅಧ್ಯಾಯಾರ್ಥ॥ ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರ ಪುರವರಾಧೀಶ ಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀ ಮಹಿಮಾರ್ಥದರ್ಪಣದಲ್ಲಿ ಅಂಗಾರಕಲೋಕ ಬೃಹಸ್ಪತಿಲೋಕ ಶನಿಲೋಕ ವರ್ಣನೆ ಇವರ ಉತ್ಪತ್ತಿಯುಂ ಪೇಳ್ದ ಹದಿನೇಳನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ. ಶ್ರೀ

ಹದಿನೇಳನೇ ಅಧ್ಯಾಯಂ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ಹದಿನೆಂಟನೇ ಅಧ್ಯಾಯಂ.

ಸಪ್ತಋಷಿಲೋಕವರ್ಣನೆ.

ಅನಂತರದಲ್ಲಿ ಮತ್ತಂ ಅಗಸ್ತ್ಯನು ತನ್ನಸತಿಗಿಂತೆಂದನು, ಎಲೈ ಪ್ರಿಯಳೆ! ಕೇಳು ಮತ್ತಾ ಶಿವಶರ್ಮನು ಈ ಕಥೆಯಂ ಕೇಳುತ್ತಾ ಮುಂದೆ ಸಿದ್ಧ ಕಿನ್ನರ ಕಿಂಪುರುಷ ಗರುಡ ಗಂಧರ್ವಾದಿ ಲೋಕಂಗಳಂ ನೋಡುತ್ತಾ, ಅವರು ಮಾಡುವ ಸ್ತುತಿಗಳಂ ಕೇಳುತ್ತಾ, ಆ ಲೋಕದ ದೇವಸ್ತ್ರೀಯರು ನಮ್ಮ ಸೇವೆಯಂ ಕೈಕೊಂಡು ಕ್ಷಣಮಾತ್ರ ನಿಂತು ಹೋಗೆನಲಾತನು ನಿಲ್ಲದೆ ಹೋಗಲು ತಾವು ಭಾಗ್ಯವುಳ್ಳವರಲ್ಲ ಈತನು ಪುಣ್ಯವಾದಲೋಕಕ್ಕೆ ಹೋಗಲುಳ್ಳವನೆಂದು ನುಡಿವುತ್ತಿರಲು. ಶಿವಶರ್ಮನು ಸಪ್ತಋಷಿಲೋಕವಂ ಕಂಡು ಈ ರಮ್ಯವಾದಲೋಕವಾವುದೆನೆ ಗಣಂಗಳಿಂತೆಂದರು, ಕೇಳೈ ಶಿವಶರ್ಮ! ಇದು ಸಪ್ತ ಋಷಿಲೋಕ, ಅವರ್ಯಾರೆಂಬೆಯಾ? ಕಶ್ಯಪ, ಅತ್ರಿ, ಭರದ್ವಾಜ, ವಿಶ್ವಾಮಿತ್ರ, ಗೌತಮ, ಜಮದಗ್ನಿ, ವಸಿಷ್ಠರೆಂಬ ಏಳುಮಂದಿಯು ಸಪ್ತಋಷಿಗಳು, ಮತ್ತೊಂದು ಪ್ರಕಾರದಲ್ಲಿ ಹೇಳುವ ಸಪ್ತಋಷಿಗಳಾರೆಂದರೆ ಮರೀಚಿ ಅತ್ರಿ ಪುಲಹ ಪುಲಸ್ತ್ಯ ಕ್ರತು ಅಂಗಿರಸ್ಸು, ವಸಿಷ್ಠರೆಂಬದಾಗಿ ಈ ಏಳುಮಂದಿಯು ಬ್ರಹ್ಮನ ಪುತ್ರರು ಅವರ್ಗೆ ಕ್ರಮದಿಂ ಸ್ತ್ರೀಯರು ಸಂಭೂತಿ, ಅನಸೂಯೆ, ಕ್ಷಮೆ, ಪ್ರೀತಿ, ಸನ್ನತಿ, ಸ್ಮೃತಿ, ಊರ್ಜೆಯೆಂಬ, ಸ್ತ್ರೀಯರು ಇವರತಪದಿಂದಸಕಲಲೋಕಾಲೋಕವು ರಕ್ಷಿಸಲ್ಪಡುವದು. ಬ್ರಹ್ಮನು ಇವರಂ ಸೃಷ್ಟಿಸಿ, ನೀವು ತಪೋಬಲದಿಂದ ಸೃಷ್ಟಿಯಂ ಮಾಡಿರೆನಲು ಅವರು ಕಾಶೀಪಟ್ಟಣಕ್ಕೆ ಹೋಗಿ ತಮ್ಮ ತಮ್ಮ ಹೆಸರಿನ ಲಿಂಗಗಳಂ ಪ್ರತಿಷ್ಠೆಯಂ ಮಾಡಿಕೊಂಡು ಅತಿ ಭಕ್ತಿಯಿಂದ ಉಗ್ರತಪವಂ ಮಾಡಲು ಈಶ್ವರಪ್ರಸನ್ನನಾಗಿ ಈ ಲೋಕವಂ ಕೊಟ್ಟನು. ಗೋಕರ್ಣೇಶ್ವರತೀರ್ಥಕ್ಕೆ ಪಡುವಣತೀರದಲ್ಲಿ ಇದ್ದ ಅತ್ರೀಶ್ವರನು ಕರ್ಕೋಟಕ ಕೂಪಕ್ಕೆ ಈಶಾನ್ಯದಲ್ಲಿ ಮರೀಚಿ ತೀರ್ಥದಲ್ಲಿ ಮರೀಚೀಶ್ವರನಿಹನು. ಸ್ವರ್ಗದ್ವಾರಕ್ಕೆ ಪಶ್ಚಿಮದಲ್ಲಿ ಪುಲಹೇಶ್ವರನು ಆ ಸಮೀಪದಲ್ಲಿ ಪುಲಸ್ತ್ಯೇಶ್ವರನು, ಹರಿಕೇಶವ ವನದಲ್ಲಿ ಅಂಗೀರಸೇಶ್ವ

ರನು ವರುಣಾತೀರ್ಥದಲ್ಲಿ ವಸಿಷ್ಠೇಶ್ವರನು, ಅಲ್ಲಿಯೆ ಕೃತೀಶ್ವರನು, ಈ ಸಪ್ತಋಷಿಗಳು ಮಾಡಿದ ತೀರ್ಥಗಳಲ್ಲಿ ಸ್ನಾನಗಳಂ ಮಾಡಿ ಸಕಲ ಷಟ್ಕರ್ಮ ಕ್ರಿಯೆಗಳಂ ವಿರಚಿಸಿ ಆ ಲಿಂಗಗಳ ದರ್ಶನಸ್ಪರ್ಶನವಂಮಾಡಿ ಪೂಜಿಸಿ ದಾನಾದಿಗಳಂ ಮಾಡಿದವರು ಈ ಋಷಿಲೋಕದಲ್ಲಿ ಸುಖದಲ್ಲಿ ಇಹರೆಂದು ಗಣಂಗಳು ಹೇಳಿ ಮತ್ತೂ ಶಿವಶರ್ಮಂಗಿಂತೆಂದರು, ಎಲೈ ಶಿವಶರ್ಮ; ವಸಿಷ್ಠರ ಸತಿಯಾಗಿರ್ದ ಅರುಂಧತಿಯಂ ಆವನಾನೊಬ್ಬನು ಪತಿವ್ರತಾಶಿರೋಮಣಿಯಾದ ಈ ಪುಣ್ಯಾಂಗನೆಯ ಸ್ಮರಣೆಯಂಮಾಡಲು ಗಂಗಾಸ್ನಾನ ಫಲವಹುದು. ಶ್ರೀ ಮಹಾವಿಷ್ಣುವು ವೈಕುಂಠದಲ್ಲಿ ಶ್ರೀಲಕ್ಷ್ಮೀದೇವಿಯರಿಗೆ ತನ್ನ ಪ್ರಿಯಭಕ್ತರಾದ ನಂದ, ಸುನಂದ, ಕುಮುದ, ಕುಮುದಾಕ್ಷ, ಬಲ, ಪ್ರಬಲ, ಜಯ, ವಿಜಯ ಇವರೇ ಮೊದಲಾದ ಬ್ರಾಹ್ಮಣರ ಮುಂದೆ ಕೇಳು. ಮಹಾಲಕ್ಷ್ಮಿ, ವಸಿಷ್ಠನ ಸತಿಯಾದ ಅರುಂಧತಿಗೆ ಸರಿಯಾದ ರೂಪಶೀಲಸತ್ಕುಲಕಲಾಪ್ರವೀಣತೆ; ಪತಿಸೇವೆ, ಮಧುರತ್ವವಾದನುಡಿ, ಗಾಂಭೀರ್ಯ,ವಿವೇಕಗಳಲ್ಲಿ ಮತ್ತಾವ ಸ್ತ್ರೀಯರೂ ಸರಿಯಿಲ್ಲ, ಆವಸ್ತ್ರೀಯರಿಗೂ ವಿಶೇಷಗುಣವಿಲ್ಲ, ಈ ಅರುಂಧತಿಯ ಹೆಸರುಗೊಂಡ ಸ್ತ್ರೀಯರು ಪರಮಪತಿವ್ರತೆಯರಹರೂ, ಪುರುಷರೂ ಧನ್ಯರಹರು ಎಂದು ಶ್ರೀ ನಾರಾಯಣನು ಲಕ್ಷ್ಮೀದೇವಿಯರಿಗೆ ಪೇಳ್ದನೆಂದು ಗಣಂಗಳು ಶಿವಶರ್ಮಂಗೆ ಪೇಳುತ್ತಿರೆ. ವಿಮಾನ ಮುಂದೆನಡೆಯೆ ಧ್ರುವಲೋಕಕಣ್ಗೈದುದೆಂದು ಅಗಸ್ತ್ಯರು ಲೋಪಾಮುದ್ರೆಗೆ ನಿರೂಪಿಸಿದ ಅರ್ಥವಂ ಸೂತರು ಶೌನಕಾದಿಋಷಿಗಳಿಗೆ ಪೇಳ್ದರೆಂಬಲ್ಲಿಗೆ ಅಧ್ಯಾಯಾರ್ಥ|| * ಇಂತು||ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕ ಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥ ದರ್ಪಣದಲ್ಲಿ ಸಪ್ತಋಷಿಲೋಕವರ್ಣನವೆಂಬ ಹದಿನೆಂಟನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ ಶ್ರೀ * * * *

ಹದಿನೆಂಟನೇ ಅಧ್ಯಾಯ ಸಂಪೂರ್ಣವು.

ಶ್ರೀ ವಿಶ್ವೇಶ್ವರಾಯನಮಃ

ಹತ್ತೊಂಭತ್ತನೇ ಅಧ್ಯಾಯ.

ಧ್ರುವಲೋಕ ವರ್ಣನೆ, ಧ್ರುವನತಪಸ್ಸು.

ಅನಂತರವಲ್ಲಿ ಶಿವಶರ್ಮನುಗಣಂಗಳಿಗೆ ಕೈಮುಗಿದು ಇದಾವಲೋಕ, ಬಂದೇಪಾದದಲ್ಲಿನಿಂತು ಮರಾಕಿಲ್ಲದೆ ಕೈಯ್ಯಲ್ಲಿ ಹಗ್ಗಗಳತಿರುಹುತ್ತಾ ಬ್ರಹ್ಮಾಂಡ ಮಂಟಪಸ್ತಂಭದಂತೆ ಜ್ಯೋತಿಶ್ಚಕ್ರವನ್ನು ತ್ರಾಸಿನಲ್ಲಿ ತೂಗುಹಂತೆ ಆಕಾಶವನಳವನೊಬ್ಬ ತ್ರಿವಿಕ್ರಮಾವತಾರದಲ್ಲಿ ಎತ್ತಿದ ಪಾದದಪ್ರೋಲು ಇಹಂಥಾ ಈತನಾರು, ಇದನು ಸವಿಸ್ತಾರವಾಗಿ ನನಿಗೆಬುದ್ಧಿಗಲಿಸವೆಳ್ಕನೆ; ಗಣಂಗಳಿಂತೆಂದರು, ಕೇಳ್ಳೈ ಶಿವಶರ್ಮ; ಪೂರ್ವದಲ್ಲಿ ಸ್ವಾಯಂಭುವ ಮನುವಿಗೆ ಉತ್ತಾನಪಾದ, ಪ್ರಿಯವ್ರತರೆಂಬ ಇಬ್ಬರು ಕುಮಾರರು ಆ ಉತ್ತಾನಪಾದಂಗೆ ಸುರಚೀ, ಸುನೀತೀರೆಂಬಇಬ್ಬರು ಸ್ತ್ರೀಯರು, ಸುರುಚಿಗೆ ಉತ್ತಮನೆಂಬ ಕುಮಾರನು, ಸುನೀತಿಗೆ ಧ್ರುವನೆಂಬಕುಮಾರನು, ಇಂತಿರುತ್ತಿರಲೂ; ಆ ಉತ್ತಾನಪಾದನು ಸುರುಚಿಯಮೇಲೆ ಅತ್ಯಂತಪ್ರೀತಿಯುಳ್ಳವನಾಗಿ ಇಹನು, ಒಂದಾನೊಂದುದಿನ ಉತ್ತಾನಪಾದರಾಯನು ಒಡ್ಡೋಲಗದಲ್ಲಿ ಇರಲು, ಸುರಚಿಯೆಂಬ ಕಿರಿಯಮದವಳಿಗೆಯು ಉತ್ತಮನೆಂಬ ತನ್ನಮಗನ ಅಲಂಕರಿಸಿ ಮಗಸಹಿತ ವಾಲಗಕ್ಕೆ ಪೋಗಲು, ಆ ಉತ್ತಮನಂ ತೊಡೆಯಮೇಲೆ ಕುಳ್ಳಿರಿಸಿಕ್ಕೊಂಡು ತನ್ನಕಿರಿಯರಾಣಿಸಹಾ ವಡ್ಡೋಲಗದಲ್ಲಿ ಕುಳಿತಿರಲು. ಈಸುನೀತಿಯು ತನ್ನಮಗನಾದ ಧ್ರುವನಂ ಅಲಂಕರಿಸಿ ಕೆಲವು ದಾದಿಯರ ಮಕ್ಕಳಂಕೂಡಿಸಿ ವಾಲಗಕ್ಕೆ ಕಳುಹಲು. ಆ ಧ್ರುವನು ವಾಲಗಕ್ಕೆ ಬಂದು ರಾಯಂಗೆ ನಮಸ್ಕರಿಸಿ, ತಂದೆಯತೊಡೆಯ ಮೇಲೆ ಕುಳ್ಳಿರ್ದ ಉತ್ತಮನಂನೋಡಿ, ತಾನೂ ಬಾಲಕನಾದಕಾರಣ ತನ್ನ ತಂದೆಯ ತೊಡೆಯಮೇಲೆ ಕುಳಿತೇನೆಂದು ಕೆಳಗೆನಿಂತು ಎಲೇ ತಂದೆಯೆ ನನ್ನನ್ನೂ ತೊಡೆಯನೇರಿಶಿಕೋ ಎಂದು ಮಾತನಾಡುವಧ್ರುವನಂಕಂಡು ಸುರುಚಿ ಧ್ರುವಂಗೆ ಇಂತೆಂದಳು. ಎಲೈ ಭಾಗ್ಯಹೀನೆಯಾದವಳಗರ್ಭದಲ್ಲಿ

ಪುಟ್ಟಿ, ಈ ಮಹಾರಾಯನ ತೊಡೆಯಲ್ಲಿ ಕುಳ್ಳಿರಹೋಗುತ್ತಿರ್ದೆ ನೀನು ಮಾಡಿದ ಪುಣ್ಯವೇನು, ನೀನು ಪುಣ್ಯವಂತನಾದರೆ ನನ್ನಂಥಾ ಪುಣ್ಯವಾಡಿದವಳ ಉದರದಲ್ಲಿ ಬರುಹಿ, ಅದರಿಂದ ನೀನು ಪುಣ್ಯಹೀನನು ಪುಣ್ಯವಂತನಲ್ಲ, ರಾಯನ ತೊಡೆಯನೇರಿರ್ದ ಎನ್ನ ಕುಮಾರನನ್ನು ನೋಡು, ನೀನು ಈ ಸಿಂಹಾಸನವಂ ಬಯಸಿ, ರಾಯನ ತೊಡೆಯನೇರಬೇಕಾದರೆ ಭಾಗ್ಯಹೀನೆಯ ಹೊಟ್ಟೆಯಲ್ಲಿ ಹುಟ್ಟಿದ ಈ ಕಾಯವಂ ಪರಿಹರಿಸಿ ಮುಂದಣ ಜನ್ಮದಲ್ಲಿ ನೀನು ಭಾಗ್ಯವಂತೆಯಾದ ಎನ್ನ ಬಸುರಲ್ಲಿ ಪುಟ್ಟಿ, ಈ ಸಿಂಹಾಸನವನ್ನೂ, ರಾಯನ ತೊಡೆಯನ್ನೂ, ಏರು ಎಂದು ಖಂಡಿತೋಕ್ತಿಯನ್ನು ನುಡಿದು ಸುರುಚಿಯು ರಾಯನ ಮುಂದೆ ನಿಂದಿರಲು. ಆ ಧ್ರುವನು ಕಣ್ಣೀರಂ ಕಂಠಕ್ಕೆಯಿಳುಹಿಕೊಂಡು ಪ್ರತ್ಯುತ್ತರವನೀಯದೆ ಸುಮ್ಮನಿದ್ದನು. ರಾಣಿಗೆ ವಶನಾದ ರಾಯನು ಉಚಿತಾನುಚಿತಗಳೇನನೂ ವಿಚಾರಿಸದಿರಲು, ಧ್ರುವನು ರಾಯಂಗೆ ನಮಸ್ಕರಿಸಿ, ತನ್ನಗೆಳೆಯರಂ ಕೂಡಿಕೊಂಡು ಆ ಸ್ಥಾನವಂ ಬಿಟ್ಟು ಮನೆಗೆ ಬರಲು; ಸುನೀತಿಯೆಂಬ ಧ್ರುವನ ತಾಯಿ ಸುಜ್ಞಾನಸಿಂ ತನ್ನ ಕುಮಾರನಂ ನೋಡಿ ಮುಖಕಾಂತಿಯಿಲ್ಲದಿರೆ ಅವಮಾನಬಟ್ಟನೆಂದು ತಿಳಿದು ಇದಿರಾಗಿ ಪೋಗಿ, ಎತ್ತಿಕೊಂಡು ಬಿಗಿದಪ್ಪಿ ಶಿರವನಾಘ್ರಾಣಿಸಿ ಬಳಲಿದ ಮುಖವಂ ನೋಡಿದವಳಾಗಲು. ಅರಮನೆಯೊಳು ರಹಸ್ಯದಲ್ಲಿ ತಾಯಿಯು ಮುಖವಂ ನೋಡಿ ಅಳುತ್ತಿರಲು, ತಾಯಿ ಆ ಮಗನನ್ನು ಬೇಡಿಕೊಂಡು ತನ್ನ ಮೃದುವಾದ ಶರಗಿನಿಂದಾ ಮುಖವ ನೊರಸಿ ಯಾಕೆ ಅಳುತ್ತಿದ್ದೆ, ನಿನ್ನ ತಂದೆಯು ಮಹಾರಾಯನಾಗಿಯಿರಲು, ನಿನ್ನನು ಅವಮಾನ್ಯವಂ ಮಾಡಿದವರ್ಯಾರು ಎಂದು ನಯದಿಂ ಕೇಳಲು, ಕುಮಾರನು ತಾಂಬೂಲವಂ ಪರಿಹರಿಸಿ ಮುಕ್ಕುಳಿಸಿ ಉಗುಳಿ ಯಿಂತೆಂದನು ಎಲೈ ತಾಯೆ; ನಿನ್ನಂ ಒಂದು ಮಾತ ಕೇಳುತ್ತಿದ್ದೇನೆ ಯಥಾರ್ಥವಾಗಿ ಹೇಳು, ಈ ರಾಯನಿಗೆ ಸುರುಚಿ ಯಾಕೆ ಪ್ರಿಯಳಾದಳು. ನೀನ್ಯಾಕೆ ಅಪ್ರಿಯಳಾದೆ. ಉತ್ತಮನ್ಯಾಕೆ ಪ್ರಿಯನಾದನು, ನಾನೇಕೆ ಅಪ್ರಿಯನಾದೆನು. ನೀನ್ಯಾಕೆ ಭಾಗ್ಯಹೀನೆಯಾದೆ, ಸುರುಚಿಯಾಕೆ ಭಾಗ್ಯವಂತೆಯಾದಳು, ಉತ್ತಮನ್ಯಾಕೆ ಸಿಂಹಾಸನವನೇರಲು ಯೋಗ್ಯನಾದನು. ನನಗ್ಯಾಕೆ ಪ್ರಾಪ್ತಿಯಿಲ್ಲದೆ ಹೋಯಿತು ಎಂದು ನುಡಿ

ದ ವಾಕ್ಯಮಂ ಕೇಳಿ ತಾಯಾದ ಸುನೀತಿಯು ಬಿಸುಸುಯ್ದು ಮಗನಕೋಪವು ಶಾಂತಮಪ್ಪ ಮಧುರ ವಚನವಂನುಡಿದಳದೆಂತೆನೆ ಕೇಳ್ಳೈ, ಕಂದ ನಿಷ್ಕಪಟದಿಂದಹೇಳುತ್ತಿದ್ದೇನೆ ಅವಮನ್ನಣೆಯಂಮಾಡದೇ ಕೇಳು, ಆಕೆಹೇಳಿದ್ದು ಯಥಾರ್ಥ. ಪೂರ್ವದಲ್ಲಿ ಆಕೆಮಾಡಿದ ಪುಣ್ಯದಿಂದ ಈ ರಾಯಂಗೆ ರಾಣಿಯಾದಳು. ರಾಯನಿಗೆ ತನ್ನಂಥಾ ಭಾಗ್ಯಹೀನೆಯರು ಸಾವಿರವುಂಟು; ಆ ಉತ್ತಮನು ಪುಣ್ಯಾತ್ಮನಾದಕಾರಣ ಆಕೆಯ ಬಸುರಲ್ಲಿ ಬಂದು ಸಿಂಹಾಸನಕ್ಕೆ ಯೋಗ್ಯನಾದನು. ಪೂರ್ವಜನ್ಮದಲ್ಲಿ ಹರಿಹರರನು ಪೂಜಿಸಿದವರ್ಗೆ ಚಂದ್ರಮಂಡಲವಂ ಪೋಲ್ವ ಛತ್ರ ಚಾಮರ, ಉನ್ನತವಾದ ರತ್ನಸಿಂಹಾಸನ, ಮದ್ದಾನೆ ಉತ್ತಮವಾಶ್ವಂಗಳು ಆಧಿವ್ಯಾಧಿವಿರಹಿತವಾದ ಆಯುಷ್ಯವೂ, ನಿಷ್ಕಂಟಕವಾದ ಮಹಾರಾಜ್ಯಾಧಿಪತ್ಯವು, ಚೌಷಷ್ಟಿಕಳಾಪ್ರವೀಣತೆಯೂ, ಘನವಾದ ವೇದಶಾಸ್ತ್ರ ಶತ್ರುಜಯ ಅರಿಷಡ್ವರ್ಗ, ಜಯ ಸಾತ್ವಿಕಬುದ್ಧಿ, ಕೃಪಾದೃಷ್ಟಿ, ಮಧುರವಚನ, ಮಾಡತಕ್ಕಕಾರ್ಯಗಳಲ್ಲಿ ಆಲಸ್ಯವಿಲ್ಲದೆ ಇರಣ, ಪರಸ್ತ್ರೀಪರಧನಗಳಲ್ಲಿ ನಿರಾಶೆಯು, ಶುಚಿತ್ವ, ಸದಾಚಾರೋಪಕಾರ, ಮನಸ್ಸಿನಲ್ಲಿ ಉತ್ಸಾಹ, ಗಂಭೀರ, ಮೃದುವಚನ, ಸಭೆಯಲ್ಲಿ ಪಾಂಡಿತ್ಯ, ಪ್ರೌಢಿಮೆ, ನೆಂಟರೆಡೆಯಲ್ಲಿ ಮೃದುತ್ವ, ಕ್ರಯವಿಕ್ರಯಗಳೆಡೆಯಲ್ಲಿ ಕಠಿನತ್ವ, ಸ್ತ್ರೀಯರಲ್ಲಿ ವಾಕ್ಯದಜಾಣ್ಮೆ, ಪ್ರಜೆಗಳಲ್ಲಿ ದಯ, ಬ್ರಾಹ್ಮಣರಲ್ಲಿ ಭಯಭಕ್ತಿಯೂ, ಬುದ್ಧಿವಂತರ ವಚನವಕೇಳುವಲ್ಲಿ ಭಯಭಕ್ತಿ ವಿಶ್ವಾಸ, ಪುಣ್ಯತೀರ್ಥದಲ್ಲಿ ಸ್ನಾನದಾನ, ಕಾಶಿಯಲ್ಲಿ ಗಂಗಾತೀರದಲ್ಲಿಯಾದರೂ ರಣದಲ್ಲಿಯಾದರೂ ಮರಣ, ಪುಣ್ಯತೀರ್ಥದಲ್ಲಿಯೂ ತನ್ನ ಶತ್ರುಗಳಿಗೂ ಮುಖಗೊಡುವದು, ತನ್ನ ಆಶ್ರೈಸಿದವರ ಸಲಹುವದು, ತಾನು ಭೋಗಪಡುವದು, ದಿನವಂ ಬಂಜೆಯಂಮಾಡದೆದಾನಾದಿಸತ್ಕರ್ಮವಂ ಮಾಡುವದು, ನಿತ್ಯವೂ ವೃಥಾಕಾಲಕ್ಷೇಪವಂಮಾಡದೆ ತಾಯಿತಂದೆಯರ ಸೇವೆಯಂ ಮಾಡುವುದು, ನಿತ್ಯವಾದ ಕೀರ್ತಿಸಂಗ್ರಹ, ಸ್ವರ್ಗಮೋಕ್ಷಸಾಧನವಾದ ಚಿತ್ತಶುದ್ಧಿ, ಶೀಲಭೂಷಣನಾಗಿಹನು, ಸತ್ಪುರುಷರಕೂಡಗೋಷ್ಠಿ, ತಂದೆತಾಯಿಕಾಲದ ಆಪ್ತರಕೂಡಸ್ನೇಹ, ಇತಿಹಾಸಪುರಾಣವ ಕೇಳುವದು, ಲವಲವಿಕೆಯಾಗಿಹುದು, ಆಪತ್ತಿನಲ್ಲಿ ಧೈರ್ಯವೂ, ಐಶ್ವರ್ಯಬಂದಾ

ಗನಿಗರ್ವಿಕ, ವಾಗ್ವಿಲಾಸದಲ್ಲಿ ಗಂಭೀರತಾ, ಯಾಚಕರಲ್ಲಿ ಉದಾರತನ ಇವೇ ಮೊದಲಾದ ಗುಣಂಗಳು ತಪದಿಂ ಸರ್ವೇಶ್ವರಾನುಗ್ರಹವುಳ್ಳವರ್ಗೆ ದೊರಕೊಂಬುವವು. ನೀನೂ ತಾನೂ ಅಲ್ಪಪೂಜೆಯಂ ಮಾಡಿದವರಾದಕಾರಣ ರಾಯನ ಸಮ್ಮುಖದೊರಕಿದರ್ಗೈಶ್ವರ್ಯವನನುಭವಿಸುವದಕ್ಕೆ ಪ್ರಾಪ್ತಿ ಇಲ್ಲ. ಮಾನಾವಮಾನಗಳಿಗೆ ತಾನುಮಾಡಿದ ಪಾಪಪುಣ್ಯಗಳೇ ಕಾರಣಗಳು. ಬ್ರಹ್ಮಮೊದಲಾಗಿಯೂ ಅವರು ಮಾಡಿದಷ್ಟಲ್ಲದೆ ಅಧಿಕವಕೊಡಲರಿಯರು. ನೀನು ಕಸ್ತಬಡದಿರು, ದೈವಾಧೀನವೆಂದು ಇರು ಎಂಬದಾಗಿ ಸುನೀತಿಯು ಯುಕ್ತವಾದ ವಾಕ್ಯವುಂ ಪೇಳಲು, ಕೇಳಿ ಧ್ರುವನಿಂತೆಂದನು ಯಲೌ ತಾಯೆ; ದೃಢವಾದ ನನ್ನವಾಕ್ಯವಂ ಕೇಳು ತನ್ನಬಾಲಕನೆಂದು ನೆನೆಯದಿರು, ಪರಮಪಾವನವಾದ ಮನುವಂಶದಲ್ಲಿ ಉತ್ತಾನಪಾದರಾಯನಿಂದ ನಿನ್ನ ಉದರದಲ್ಲಿ ಜನಿಸಿದವನಾದರೆ ಮತ್ತೊಬ್ಬರಿಗೆ ದೊರಕದಂಥಾ ಪದವಿಯಂ ಸಾಧಿಸೇನು, ನೀನು ನನಗೆ ಅಪ್ಪಣೆಯಂಕೊಟ್ಟು ಆಶೀರ್ವಾದವೆಂಬ ವಜ್ರಪಂಜರವಾದ ಸಹಾಯವಂಮಾಡಿ ಕಳುಹೆಂದು ಕುಮಾರನು ಬಿನ್ನೈಸಲು, ಆ ಸುನೀತಿಯು ಕೇಳಿ ಉತ್ಸಾಹಶಕ್ತಿಯಿಂದ ತನ್ನ ಕುಮಾರನನ್ನು ಸಮರ್ಥನಹುದೆಂದು ತಿಳಿದು ಇಂತೆಂದಳು ಕೇಳ್ಕೈ ಕುಮಾರ; ನೀನು ಎಂಟುವರ್ಷದ ಕುಮಾರನು ಹ್ಯಾಗೆ ನಿನ್ನಂ ಕಳುಹಲಿ, ಹಾಗಾದರೆ ನನ್ನದೊಂದುಮಾತಕೇಳು ಸವತಿಯಾಡಿದ ಮಾತುಗಳಿಂದ ತನ್ನಂ ಎದೆಯೊಡದು ನಿನ್ನ ಮಾತುಗಳೆಂಬ ಅಮೃತವು ನಿಲ್ಲದೆ ನನ್ನ ನಯನಮಾರ್ಗದಲ್ಲಿ ಪೊರಮಟ್ಟು ನದಿಗಳಾಗಿ ಹರಿಯುತ್ತಿದ್ದಾವೂ, ತನಿಗೆ ನೀನು ಒಬ್ಬನೇ ಮಗನು, ನಿನ್ನಾಧಾರದಿಂ ಬದುಕಿಧೇನೆ, ಆವ ದೇವತೆಗಳಂ ಪ್ರಾರ್ಥಿಸಿ ನಿನ್ನಂ ಪಡೆದೆನೋ ನಿನ್ನ ಮುಖವೆಂಬ ಚಂದ್ರಮನಂ ನೋಡಿ ತನ್ನಮನವೆಂಬ ಸಮುದ್ರವು ಆನಂದವೆಂಬ ಜಲದಿಂ ಪೂರಿತವಾಗಿ ಕುಚದ್ವಾರದಿಂ ಪೊರಮಡುತ್ತಾ ಇಧೆ, ಯಾಕೋ? ನೀನು ಮಗ್ಗುಲಲ್ಲಿ ಮಲಗಿರೆ ಸುಖದಲ್ಲಿಹೆನು, ನಿನ್ನ ಅಮೃತದಂಥಾ ನುಡಿಗಳಂ ಕೇಳಿ, ಸವತಿಯ ನಿಷ್ಠುರವಾಕ್ಯವೆಂಬ ಕಾಡುಕಿಚ್ಚು ಶಾಂತವಾಗುತ್ತಿಧೆ, ನೀನು ನಿದ್ರೆಯಂ ಮಾಡೆ ಆವಾಗ ಎದ್ದಾನೋ ಎಂದು ಧ್ಯಾನಿಸುತ್ತಿಹೆನು. ನೀನು ಮಕ್ಕಳೊಡನೆ ಆಡಿ ಮ

ನೆಗೆಬರೆ ನಿನಗೆ ಅರ್ಘ್ಯವುಂಕೊಡುವಪ್ರೋಲು ತನ್ನಸ್ತನಗಳು ತೋರುತ್ತಿದ್ದವು. ನೀನು ಮನೆಯುಂಬಿಟ್ಟು ಒಂದೆರಡು ಹೆಜ್ಜೆಯು ಕದಲೆ ನನ್ನಪ್ರಾಣಗಳು ಕಂಠಗತವಹವು, ನೀನು ಹೊರಟುಹೋಗಿ ತಡವಮಾಡಲು ತನ್ನಮನವೆಂಬ ಪಕ್ಷಿ ಹಾರಿಹೋಗಲನುವಾಗುತಿದೆ, ನೀನು ತಪಸ್ಸಿಗೆ ಹೋಗೆ ತನ್ನಪ್ರಾಣಗಳು ಕಂಠಾರಣ್ಯತಪಸ್ಸು ಇಹವು, ಇಂತೆಂಬ ತಾಯಮಾತಿನಿಂದ ಸಕಲವನ್ನೂ ಕೇಳಿ, ಎಲೆ ತಾಯೇ ಸುಚಿತ್ತದಲ್ಲಿ ಅಪ್ಪಣೆಯುಂಕೊಟ್ಟು ಕಳುಹೆಂದು ತಾಯಿಗೆ ನಮಿಸಿ ತಪಸ್ಸಿಗೆ ತೆರಳಲು, ತಾಯಿ ತನ್ನ ಕೃಪಾವೃಷ್ಟಿಯುಂಬ ನೈದಿಲೆಮಾಲೆಯುಂ ಮಗನಿಗೆ ಸಮರ್ಪಿಸಿ ಆಶೀರ್ವಾದವಂಮಾಡಲು, ಅದು ಧ್ರುವನಿಗೆ ವಜ್ರಾಂಗಿಯು ಜೋಡಾಯಿತು, ಈ ಪರಿಯಿಂದ ನಡೆಯುತ್ತಿರಲು ಅನುಕೂಲವಾಯುಸುಳಿಯಲು ವನವಂ ಹೊಕ್ಕು ಮಾರ್ಗವನರಿಯದೆ ಕ್ಷಣಮಾತ್ರಧ್ಯಾನಿಸಿ, ಕಣ್ದೆರೆವನಿತರೊಳು ಸಪ್ತಋಷಿಗಳಂಕಂಡನು ಅದುಕಾರಣ ಲೋಕದಲ್ಲಿ ಪುಣ್ಯವೇ ಸಹಾಯವು, ಈ ಬಾಲಕನೆತ್ತ ವನವೆತ್ತ, ಶಿವಶಿವಾ ವಿಧಿಯೆ ನಿನಗೆ ನಮಸ್ಕಾರ, ಎಲ್ಲಿ ಸುಖದುಃಖವನನುಭವಿಸಬೇಕೋ ಅಲ್ಲಿಗೆ ವಿಧಿ ಹಗ್ಗದಿಂದ ಎಳದು ಕೊಂಡು ಹೋಪುದು, ಮನುಷ್ಯರ ಅಭಿವೃದ್ಧಿಗೆ ಪುಣ್ಯವೇಕಾರಣ; ದುಃಖಕ್ಕೆ ಪಾಪವೇಕಾರಣ, ದೈವಿಕವೇ ಫಲ, ಉದ್ಯೋಗವೇನುಫಲ, ಅದುಕಾರಣ ಧ್ರುವನು ಭಾಗ್ಯದಿಂದತ್ರಿಪುಂಡ್ರವಂಧರಿಸಿ ಪವಿತ್ರಗಳನಿಟ್ಟು ಕೃಷ್ಣಾಜಿನಗಳಲ್ಲಿ ಕುಳ್ಳಿರ್ದು ಯಜ್ಞೋಪವೀತವಂಧರಿಸಿ, ಜಪಮಾಲೆಯುಂಹಾಕಿಕೊಂಡು ಶಿವಧ್ಯಾನದಿಂಮುಡಿದಕಣ್ಗಳುಳ್ಳವರಾಗಿ ಕಾಷಾಯವಸ್ತ್ರವಂಧರಿಸಿ, ಶುಭ್ರವಸ್ತ್ರವಂಧರಿಸಿ, ಸಪ್ತಸಮುದ್ರಗಳ ತೀರ್ಥಸಮಾನರಾದ ಸಪ್ತಋಷಿಗಳಂಕಂಡು, ನಮಸ್ಕರಿಸಿ, ಕರಗಳಂಮುಗಿದು ಬಿನ್ನೈಸಿದನದೆಂತೆನೆ, ಎಲೈ ಮಹಾತ್ಮರಾದ ಋಷಿಗಳಿರಾ, ಉತ್ತಾನಪಾದರಾಯನಿಂದ ಸುನೀತಿಯಲ್ಲಿ ಜನಿಸಿದ ಧ್ರುವನೆಂಬ ಹೆಸರುಳ್ಳವನು ತಾನು, ಮನನೊಂದು ಬಂದೆನು, ನೀವು ಚಿತ್ತಕ್ಕೆ ತಂದುಕೊಳ್ಳಿ ಎಂದು ಬಿನ್ನೈಸಿದ ಬಾಲಕನಂ ಸಮೀಪದಲ್ಲಿ ಕುಳ್ಳಿರಿಸಿಕೊಂಡು ಇಂತೆಂದರು, ಎಲೈ ಬಾಲಕನೆ ದರಿದ್ರರಿಂಗೆ ವೈರಾಗ್ಯಪುಟ್ಟುವದು, ಮಹಾರಾಯನ ಕುಮಾರನಾಗಿ ನಿನಗೆ ವೈರಾ

ಗ್ಯಪುಟ್ಟುವದಕ್ಕೆ ಕಾರಣವಂಕಾಣೆವು. ಲೋಕದಲ್ಲಿ ಬಾಲಕನಾದರೂ ವೃ
ದ್ಧನಾದರೂ ಮನೋವ್ಯಾಪಾರ ಬೇರಹುದಲ್ಲಾ ಎಂದು ನುಡಿದ ಋಷಿಗಳ
ವಾಕ್ಯವಂಕೇಳಿ, ಧ್ರುವನಿಂತೆಂದನು,- ತನ್ನ ತಾಯಿ ತನ್ನನು ರಾಯನ ಬಳಿಗೆ
ಕಳುಹಲು ನಾನು ಹೋಗಿ ಸಿಂಹಾಸನವನೇರಲುದ್ಯೋಗಿಸಲು, ಸುರುಚಿ
ಯು ತನ್ನನ್ನೂ ತನ್ನ ತಾಯಿಯನ್ನೂ ನಿಂದಿಸಲು, ಪೊರಮಟ್ಟು ಬಂದೆನು
ಎಂಬ ವಾಕ್ಯಮಂಕೇಳಿ ಋಷಿಗಳು ತಮ್ಮೊಳ್ತಾವು ಬೆರಗಾಗಿ ಕ್ಷತ್ರತೇ
ಜಸ್ಸು ದೂಷಣೆಯಂತಾಳುವದಲ್ಲವೆಂದು ಕೊಂಡಾಡಿ ಎಲೈ ಧ್ರುವನೆ, ನಿ
ನಿಗೆ ನಮ್ಮಿಂದ ಆಗತಕ್ಕ ಕಾರ್ಯವೇನು ನಿನ್ನ ಮನಸ್ಸಿಗೆ ಇಚ್ಛೆಯೇನೆನಲು,
ಧ್ರುವನಿಂತೆಂದನು;- ಕೇಳಿರೈ ಮುನಿಗಳಿರಾ ಉತ್ತಮನೆಂಬ ತಮ್ಮನು ತನ್ನ
ತಂದೆಯ ಸಿಂಹಾಸನದಲ್ಲಿ ಕುಳಿತು ಸುಖದಲ್ಲಿ ರಾಜ್ಯವಾಳಲಿ. ಮುನ್ನೊ
ಬ್ಬರು ಘಳಿಸಿ ಅನುಭವಿಸಿದ ಒಡವೆಗೆ ಆಶೆಮಾಡದೆ ತನ್ನಗ್ಘಳಿಕೆಯಿಂ
ಬದುಕುವನುತ್ತಮನು. ತಂದೆ ಘಳಿಸಿದ ಒಡವೆಗೆ ಆಶೆಮಾಡುವವನು
ಊರ್ಜಿತನಲ್ಲಾ, ಹೀನನೂ ಎಂದು ಇಂತೀನುಡಿಯ ನುಡಿದ ಧ್ರುವನಂ
ನೋಡಿ, ವಿಷ್ಣುಪದವಂ ಭಜಿಸದವನಿಗೆ ಐಶ್ವರ್ಯವೆತ್ತಣದೂ ಎಂದು
ಮರೀಚಿ ನುಡಿದನು. ವಿಷ್ಣುಪಾದಾರವಿಂದವಂ ಧ್ಯಾನಿಸದವರ್ಗೆ ಸುಜ್ಞಾ
ನಮುಪ್ಪಪದವಿದೊರೆಯುವದು ಎಂದು ಅತ್ರಿ ನುಡಿದನು. ಲಕ್ಷ್ಮೀಪತಿಯ ಚ
ರಣಾರವಿಂದವಂ ಭಜಿಸಿದವರ್ಗೆ ಸಕಲೈಶ್ವರ್ಯವು ಸುಮುಖವಾಗಿ ಬಹವು
ಎಂದು ಅಂಗಿರಸ್ಸು ನುಡಿದನು· ವಿಷ್ಣುಸ್ಮರಣೆಯಿಂದ ಮಹಾಪಾತಕಪ
ರಿಹರವಹುದು ಎಂದು ಪುಲಸ್ತ್ಯನು ನುಡಿದನು. ಪ್ರಕೃತಿಪುರುಷರಿಂ
ದಲೂ ಮಾಯಾತೀತನಾದ ಸಕಲಕಾರಣಮಪ್ಪ ಪರಮಪುರುಷನಾದ ಪರ
ಬ್ರಹ್ಮನಾದ ವಿಷ್ಣುವೇ ಸಮಸ್ತವಸ್ತುವನ್ನೂ ಕೊಡುವನೂ ಎಂದು
ಪುಲಹನುಡಿದನು· ಯಜ್ಞಪುರುಷನಾದ ವೇದವೇದ್ಯನಾದ ದುಷ್ಟಮರ್ದ
ಕನಾದ ಅಂತಕಾಂತಕನಾದ ವಿಷ್ಣುಪ್ರಸನ್ನನಾದರೆ ಸಕಲವಸ್ತುಗಳನ್ನೂ
ಕೊಡುವನು ಎಂದು ಕ್ರತುವು ನುಡಿದನು, ಅಷ್ಟಮಹಾಸಿದ್ಧಿಗಳು ವಿಷ್ಣು
ವಿನ ಅಧೀನವು. ವಿಷ್ಣುವನಾರಾಧಿಸಲು ಮೋಕ್ಷವು ಹಸ್ತಗತವಾಗಿ ಇ
ಹುದೆಂದು ವಸಿಷ್ಠನುಡಿದನು, ಇಂತೀ ಋಷಿಗಳವಾಕ್ಯವಂಕೇಳಿ, ಧ್ರುವ

ನು ವಿಷ್ಣುವಿನ ಧ್ಯಾನ ಪೂಜಾಕ್ರಮವ ಬುದ್ಧಿಗಲಿಸಬೇಕೆನಲು, ಮುನಿಗಳಿಂತೆಂದರು. ಎಲೈ ಧ್ರುವನೇ; ವಿಷ್ಣುವನ್ನು ನಿಂತಾಗ, ಕುಳಿತಾಗ, ಮಲಗಿದಾಗ, ನಿದ್ರೆಗೈವಾಗ, ಎಚ್ಚರಿದಾಗ ಇವು ಮೊದಲಾದ ಆವಾಗಲೂ “ಓಂ ನಮೋಭಗವತೇ ವಾಸುದೇವಾಯ„ ಎಂಬ ದ್ವಾದಶಾಕ್ಷರ ಮಂತ್ರದಿಂ ವಿಷ್ಣುವಂ ಧ್ಯಾನಿಸಿದವರ್ಗೆ ಪುತ್ರಮಿತ್ರಕಳತ್ರ ರಾಜಸಂಪದ ಸ್ವರ್ಗಮೋಕ್ಷಂಗಳು ದೊರಕೊಂಬುವು ಮನೋಭೀಷ್ಟವಾದ ಸಕಲೈಶ್ವರ್ಯಗಳು ಆಗುವವು. ಈ ದ್ವಾದಶಾಕ್ಷರಮಂತ್ರವನ್ನು ಸ್ವಾಯಂಭುವಮನುವೆಂಬವನು ಮೊದಲಾದವರು ಜಪಿಸಿ ಸಿದ್ಧಿಯಂಪಡೆದರು. ಈ ಮಂತ್ರವಂ ಜಪಿಸಲು ನಿನಿಗೆ ಶೀಘ್ರದಲ್ಲಿ ಇಷ್ಟಾರ್ಥವಹುದೆಂದು ನಿರೂಪಿಸಿ, ಋಷಿಗಳು ಅಂತರ್ಧಾನವಾಗಲು, ಧ್ರುವನು ಆ ವಾಸುದೇವನಲ್ಲಿ ಮನವುಳ್ಳವನಾಗಿ ತಪಸ್ಸಿಗೆ ಹೋದನು ಎಂದು ಶಿವಶರ್ಮಂಗೆ ವಿಷ್ಣುಗಣಂಗಳು ಪೇಳಿದ ಅರ್ಥವನ್ನು ಅಗಸ್ತ್ಯರು ಲೋಪಾಮುದ್ರೆಗೆ ನಿರೂಪಿಸಿದರೆಂದು ಸೂತಪುರಾಣಿಕನು ಶೌನಕಾದಿಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ ॥ ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಧ್ರುವನು ತಪಸ್ಸಿಗೆಹೋದದ್ದು ಸಪ್ತಋಷಿಗಳು ಆ ಧ್ರುವನಿಗೆ ಉಪದೇಶವಂಗೈದ ಹತ್ತೊಂಭತ್ತನೇ ಅಧ್ಯಾಯಾರ್ಥನಿರೂಪಣಕ್ಕಂ ಮಂಗಳಮಹಾ.

ಹತ್ತೊಂಭತ್ತನೇ ಅಧ್ಯಾಯ ಸಂಪೂರ್ಣವು.

ಶುಭಮಸ್ತು.

ಶ್ರೀ ವಿಶ್ವೇಶ್ವರಾಯನಮಃ.

ಇಪ್ಪತ್ತನೇ ಅಧ್ಯಾಯ.

ಧ್ರುವನ ತಪೋವರ್ಣನೆ, ಸ್ವಾಮಿ ಪ್ರತ್ಯಕ್ಷವಾದದ್ದು.

ಅನಂತರದಲ್ಲಿ ಗಣಂಗಳು ಶಿವಶರ್ಮಗಿಂತೆಂದರು;-ಕೇಳೈ ಶಿವಶರ್ಮನೆ! ಸಪ್ತಋಷಿಗಳು ತಪಸ್ಸಂಮಾಡೆಂದು ಧ್ರುವಗೆ ನಿರೂಪಿಸಿ ಅದೃಶ್ಯರಾಗಲು, ಆ ಧ್ರುವನು ತಪಸ್ಸಿಗೆ ಪುಣ್ಯಸ್ಥಳವಾವುದೆಂದು ಆಲೋಚಿಸುತ್ತಾ ಮುಂದೆ ನಡೆಯಲು. ಅಷ್ಟರೊಳು ಶತಸೂರ್ಯರ ಸಮಾನವಾದ ದಿವ್ಯಕಾಂತಿಯುಳ್ಳ ನಾರದರು ವೀಣೆಯಂಪಿಡಿದು "ನಾರಾಯಣಾ,, ಎಂಬ ಅಮೃತವಾಕ್ಯದಿಂ ಗಾನವಮಾಡುತ್ತಾ ಬರಲು, ಈ ಧ್ರುವನುಕಂಡು ನಮಸ್ಕಾರವಂ ಮಾಡಿ, ಕೈಮುಗಿದು ನಿಂದಿರಲು. ನಾರದನು ಎಲೈ ಕುಮಾರನೇ, ನೀನಾರು ಎಂದು ಕೇಳಲು, ತನ್ನವೃತ್ತಾಂತವೆಲ್ಲವನ್ನು ವಿಸ್ತಾರವಾಗಿ ಹೇಳಲು, ಕೇಳಿ ನಾರದಋಷಿಯು ದಯದಿಂದ ಎಲೈ ಕುಮಾರ? ನೀನು ಬಾಲಕನು, ತಪಸ್ಸಿಗೆ ಬಹುವಿಘ್ನವುಂಟು, ಸರ್ವಸಂಗಪರಿತ್ಯಾಗವಂ ಮಾಡಿದ ಮಹಾಸಿದ್ಧರಿಗೂ ಅಸಾಧ್ಯವು, ನಿನಿಗೆ ದೇವಬಲವಾದಾಗ ತಪವಂಮಾಡಬಹುದು; ಈಗ ನೀನು ನಿಮ್ಮಪಟ್ಟಣಕ್ಕೆ ಹೋಗು, ನಿನ್ನಂಥಾ ಪಸುಳೆಯನ್ನು ದಯಹೀನರಾದಂಥಾ ನಿಮ್ಮ ತಂದೆತಾಯಿಗಳು ಹ್ಯಾಗೆ ಕಳುಹಿದರು, ಎನಲು ಎಲೈ ಋಷಿಯೇ; ನೀನು ಬುದ್ಧಿಗಲಿಸಿದ್ದು ಯಥಾರ್ಥವಷ್ಟೆ, ಆದರೆ ಈ ನರಜನ್ಮಸ್ಥಿರವಲ್ಲ, ಅದರಿಂದ ಸ್ವಾಮಿಯಾದ ನಾರಾಯಣನಂಭಜಿಸೇನು, ನನಿಗೇನುಭಯವೂ ಇಲ್ಲ, ನಿಮ್ಮಪಾದಾರವಿಂದವಂಕಂಡೆನಷ್ಟೆ; ನೀವು ತಪಸ್ಸಿಗೆ ಅನುಜ್ಞೆಯಂ ಕೊಡಬೇಕೆಂದು ನಮಸ್ಕರಿಸಲು, ಕುಮಾರನಸತ್ವಂ ತಕ್ಕೈಸಿ ಎಲೈ ಮಗನೆ; ಸಪ್ತಋಷಿಗಳು ಉಪದೇಶಮಾಡಿ ಮಂತ್ರಮುಂಕೊಟ್ಟರಲ್ಲಾ ಅವರ ವಾಕ್ಯವೇ ದೇವತಾವಾಕ್ಯವು, ನಿನ್ನಮನಸ್ಸಿನ ಅಭೀಷ್ಟವಾದೀತು. ನೀನು ಯಮುನಾತೀರದಲ್ಲಿ ಹಯಗ್ರೀವನಾದ ವಿಷ್ಣುವಿಗೆ ಮುಖ್ಯ

ಸ್ಥಾನವಾದ ಮಧುವನ ಉಂಟು, ಅದು ತಪಸ್ಸಿಗೆ ಸಿದ್ಧಿಸ್ಥಳವು, ಆವನದಲ್ಲಿ ಋಷಿಗಳು ಹೇಳಿದ ದ್ವಾದಶಾಕ್ಷರಮಂತ್ರವುಂ ಭಕ್ತಿಯಿಂದ ಜಪಿಸಲು ನಿನ್ನ ಅಭೀಷ್ಟವು ಸಿದ್ಧಿಸೀತು. ನಿನಿಗೆ ಸಕಲವಿಘ್ನವೂ ನಿರ್ವಿಘ್ನವಾದೀತು ಎಂದು ಮಧುವನಕ್ಕೆ ಧ್ರುವನಂ ಕಳುಹಿ ತಾನು ಅಂತರ್ಧಾನವಾದನು. ಆಧ್ರುವನು ನಾರದನವಾಕ್ಯದಿಂದ ಯಮುನಾನದಿಗೆ ಬಂದು ಸಚೇಲಸ್ನಾನವಂ ಮಾಡಿ, ಆ ನದೀತೀರದ ಮಧುವನವಂ ಪೊಕ್ಕು; ದ್ವಾದಶಾಕ್ಷರಮಂತ್ರದಿಂ ಪರವಾಸುದೇವನ ಧ್ಯಾನಪರನಾಗಿ ಸಕಲಪ್ರಪಂಚವನ್ನೂ ವಿಷ್ಣುಸ್ವರೂಪವಾಗಿ ಕಾಣುತ್ತಿದ್ದನು. ಅದಂತೆನೆ ? ಸಕಲದಿಕ್ಕುಗಳಲ್ಲಿಯೂ ಮೃಗೇಂದ್ರಮಯವಾದ ನಾನಾವಿಧ ಕಾನನಂಗಳಲ್ಲಿಯೂ ಕೂರ್ಮರೂಪದಿಂ, ಜಲದಲ್ಲಿ ಸೂರ್ಯರೂಪದಿಂ, ಮಂದರಾದ್ರಿಮೊದಲಾದ ಪರ್ವತಂಗಳಲ್ಲಿ ಅನಂತರೂಪಿನಿಂದ, ಪಾತಾಳಗಗನತಳದಲ್ಲಿ ಸಹಾ ತಾನಿರ್ದಕಾರಣ ಸಕಲಪ್ರಾಣಿಗಳನ್ನೂ ಮಾಯದಿಂ ಕ್ರೀಡೆಯಂ ಮಾಡಿಸುವಕಾರಣ ವಾಸುದೇವನೆನಿಸಿಕೊಂಡನು. ಸಕಲವನ್ನೂ ವ್ಯಾಪಿಸಿದನಾದಕಾರಣ ವಿಷ್ಣುವೆನಿಸಿಕೊಂಡನು. ಸಕಲೇಂದ್ರಿಯಗಳಿಗೂ ಒಡೆಯನಾದಕಾರಣ ಹೃಷೀಕೇಶನೆನಿಸಿಕೊಂಡನು. ಪ್ರಳಯದಲ್ಲಿ ತನ್ನ ಭಕ್ತರಂ ಕೇಡಿಲ್ಲದೆ ರಕ್ಷಿಸುವನಾದಕಾರಣ ಅಚ್ಯುತನು. ತನ್ನ ಲೀಲೆಯಿಂ ಚರಾಚರವಪೋಷಿಸಲು ವಿಶ್ವಂಭರನು. ಅದುಕಾರಣ ಅಂಥಾ ವಿಷ್ಣುವನ್ನು ಧ್ರುವನು ಹೃತ್ಕಮಲಮಧ್ಯದಲ್ಲಿರಿಸಿಕೊಂಡು, ಆ ವಿಷ್ಣುಮೂರ್ತಿಯನಲ್ಲದೆ ಧ್ರುವನನೇತ್ರಗಳು ಮತ್ತೊಂದನೋಡವು. ಕಿವಿಗಳು ಹರಿಕಥೆಯನಲ್ಲದೆ ಮತ್ತೊಂದಕೇಳವು. ಹಸ್ತಾಂಗುಳಿಗಳು ವಿಷ್ಣುಪೂಜೆ ಹೊರತಾಗಿ ಮತ್ತೊಂದು ಕ್ರಿಯೆಗಳ ಮಾಡವು. ಮನಸ್ಸು ವಿಷ್ಣುವಿನ ಧ್ಯಾನಹೊರತಾಗಿ ಮತ್ತೊಂದುಧ್ಯಾನಮಾಡದು. ಪಾದಗಳುವಿಷ್ಣುಸ್ಥಾನಕ್ಕಲ್ಲದೆ ಮತ್ತೊಂದು ಬಳಿಗೆ ಹೋಗವು. ವಾಕ್ಕು ವಿಷ್ಣುವನೇ ಸ್ತುತಿಸುವದು. ನಾಲಿಗೆಯು ವಿಷ್ಣುನಾಮಾಮೃತವನೇ ಸೇವಿಸುವದು. ನಾಸಿಕವು ವಿಷ್ಣುನಿರ್ಮಾಲ್ಯವನೇ ಆಘ್ರಾಣಿಸುವದು. ದೇಹವು ವಿಷ್ಣುಪಾದಸ್ಪರ್ಶವನಲ್ಲದೆ ಮತ್ತೊಂದನರಿಯದು. ಈ ತೆರದಲ್ಲಿ ತಪಸ್ಸಮಾಡುವ ಧ್ರುವನತಪಸ್ಸು ಲೋಕತ್ರಯದಲ್ಲಿಯೂ ವ್ಯಾಪಿಸಿ, ಧ್ರುವನತಪಸ್ಸಿಂಬ ಸೂ

ರ್ಯನು ಅತಿಕಾಂತಿಯಿಂದುದಯಿಸಲು? ಸೂರ್ಯ, ಚಂದ್ರ, ಅಗ್ನಿಮೊದಲಾದ ತೇಜಸ್ಸುಗಳು ಮಂದವಾದವು. ಇಂದ್ರಾದಿ ದಿಕ್ಪಾಲಕರು ತಮ್ಮ ಪದವಿಗಳ ಕುರಿತು ತಪಸ್ಸಮಾಡುತ್ತಿದ್ಧಾನೆಂದು ಶಂಕೆಬಟ್ಟರು. ಆತನು ಎತ್ತ ಹೆಜ್ಜೆಯುನಿಡಲು ಆ ಭೂಮಿ ತಗ್ಗುವದು. ಆವಾತನಸ್ನಾನದಿಂದ ನದಿಯುಉದಕ ಪವಿತ್ರವಾಗುವದೋ? ಸಕಲತೇಜಸ್ಸುಗಳೂ ಆವಾತನ ಕಂಗಳಲ್ಲಿ ನಿಂತವೋ? ಇಂದ್ರಾದಿದಿಕ್ಪಾಲಕರು ಆವಾತನ ಮ್ಮವಳಿಯಲ್ಲಿ ಅಡಕವಾದರೋ? ವಾಯುವಿನ ಸ್ಪರ್ಶ ಆವಾತನಿಂದ ತಿಳಿಯಲ್ಪಟ್ಟಿತೋ? ಶಬ್ದಗುಣವಾದ ಆಕಾಶವು ಆವಾತನ ಕಿವಿಗಳಲ್ಲಿ ಪ್ರವೇಶವಾಯಿತೋ? ಈರೀತಿಯಿಂ ಪಂಚಮಹಾಭೂತಂಗಳಿಂ ಸೇವಿಸಲ್ಪಟ್ಟ ಸ್ವಾಮಿಯಂ ಧ್ರುವನುಧ್ಯಾನಿಸುತ್ತಿರಲು. ದೇವೇಂದ್ರನು ಭಯದಿಂದ ಇಂತೆಂದನು- ಧ್ರುವನು ತನ್ನ ಪದವಿಯಂಕುರಿತು ತಪಸ್ಸಂಮಾಡುತ್ತಿದ್ದಾನು, ಅದೂ ಅಲ್ಲದೆ ಈತನ ಉಗ್ರತಪಸ್ಸಿನಜ್ವಾಲೆ ತ್ರೈಲೋಕ್ಯಮಂಸುತ್ತಿಯಿಧೆ, ಅದುನಿಮಿತ್ತ್ಯಾ ಈತನ ತಪಸ್ಸಂ ವಿಘ್ನವಮಾಡುವದಕ್ಕೋಸ್ಕರ ಅಪ್ಸರಸ್ತ್ರೀಯರಕಳುಹೇನು, ಎಂದರೆ ಈತನು ಬಾಲಕನಾದಕಾರಣ ಸ್ತ್ರೀಯರ ಅಪೇಕ್ಷೆಯಿಲ್ಲ. ಕಾಮ, ಕ್ರೋಧ, ಮದ, ಮತ್ಸರ, ಮೋಹವುಳ್ಳವರಿಗೆ ವಿಘ್ನಮಾಡಬಹುದು, ಅವು ಈತನಲ್ಲಿ ಇಲ್ಲ. ಅದುಕಾರಣ ಭೂತಗಳಕಳುಹಿಸಿ ಈ ಬಾಲಕನಂ ಭಯಪಡಿಸಿ ತಪವಕೆಡಿಸುವದೇ ಉಪಾಯವೆಂದುನಿಶ್ಚೈಸಿ, ಭೂತಂಗಳ ಕಿತ್ತೀಡಾಡುತ್ತ, ಗೂಳಿಯಾಗಿಯೂ, ಮಹಾಸರ್ಪವಾಗಿ ಬಾಲದಿಂ ಭೂಮಿಯಬಡಿಯುತ್ತ, ಕಾಡುಕೋಣವಾಗಿ ಮಲಗುತ್ತ, ನೀಳಗಾಲು, ಊರ್ಧ್ವಕೇಶ, ಬೆನ್ನಹತ್ತಿದ ಹೊಟ್ಟೆ, ಬೆಕ್ಕುಕಂಣ್ಣು ಹೀಗೆ ಭಯಂಕರರೂಪಿನಿಂದ ಆರ್ಭಟಿಸುತ್ತಾ, ಖಡ್ಗಕಪಾಲವಂ ಧರಿಸಿ, ಸಿಂಹಧ್ವನಿಯಿಂದಾರ್ಭಟಿಸುತ್ತಾ, ಕೈಯಲ್ಲಿ ಮರವಂಮುರಿದು ಯಮನಂತೆ ಆರ್ಭಟಿಸುತ್ತಾ, ಗೂಬೆಯಂತೆ ಕೂಗುತ್ತಾ, ಕಾಡ್ಗಿಚ್ಚಾಗಿವುರಿಯುತ್ತ, ಪ್ರಳಯಕಾಲದ ಶಿಡಿಲಂತೆಆರ್ಭಟಿಸುತ್ತಾ, ಅಕಾಲವಾಯುವಿನಂತೆ ಬೀಸುತ್ತ, ಪ್ರಳಯಕಾಲದ ಮೇಘದಂತೆ ಘರ್ಜಿಸುತ್ತ, ಸಮುದ್ರಗಳು ಮೇರೆದಪ್ಪಿದಹಾಗೆ ಘೋರೆಂದು ಮೊರೆಯುತ್ತ, ಶಾಕಿನೀ ಡಾಕಿನೀ ಯಕ್ಷರಾಕ್ಷಸರಾಗಿ ಆರ್ಭಟಿಸುತ್ತ, ಪ್ರಳಯಕಾ

ಲದ ಮಳೆಯಂತೆ ಘೋರೆಂದು ಸುರಿಯುತ್ತ, ಇವು ಮೊದಲಾದ ಭಯಂಕರ ಗಳಿಂದ ಭೂತಂಗಳು ಅಂಜಿಸಲು. ಕಣ್ದೆರೆದು ನೋಡದೆ, ಮನಸ್ಸಿನಲ್ಲಿ ಭಯಪಡದೆ, ಹೃತ್ಕಮಲದಲ್ಲಿ ಸ್ವಾಮಿಯಂ ಧ್ಯಾನಿಸುತ್ತಾ, ನಿರ್ಭಯನಾಗಿ ಇರಲು. ಭೂತಂಗಳು ಶಿಶುವಂ ಮುಟ್ಟಲಂಜಿ ಸುತ್ತಲೂ ಭಯಂಕರವಾಗಿ ಕೂಗುತ್ತ, ಮತ್ತೆ ಭೂತಗಳು ಧ್ರುವನತಾಯಾದ ಸುನೀತಿಯರೂಪಿನಿಂದ ಬಂದು ಬಸುರಂ ಬಡಿದುಕೊಳ್ಳುತ್ತ, ಮಹಾ ದುಃಖವಂ ಮಾಡುತ್ತಾ. ದೈನ್ಯದಿಂ ನುಡಿದಳು; ಎಲೈ ಮಗನೇ; ನೀನು ತಪಸ್ಸಿಗೆ ಬರಲು ನಾನು ನಿನ್ನ ಕುರಿತು ಆವಾಗಲು ದುಃಖಪಡುತ್ತಿರಲು, ಸವತಿಯಾದ ಸುರುಚಿಯು ಪತಿಗೆ ಹೇಳಿ ಊರಿಂದಾ ತನ್ನಂ ಹೊರಡಿಸಿದಳು. ನಾನು ನಿನ್ನಂ ಅರಸಿಕೊಂಡು ಊರೂರು, ಪಟ್ಟಣ, ಅಡವಿ, ಘಟ್ಟ, ಬೆಟ್ಟಗಳನ್ನು ಸುತ್ತಿ, ಸವತಿಯ ಮಾತಿನಿಂ ಬಹುನೊಂದು ಬಂದೆನ. ಅನ್ನಪಾನ ನಿದ್ರೆಗಳಿಲ್ಲದೆ ನಿನ್ನನೆ ಧ್ಯಾನಿಸಿದರೂ, ಸ್ವಪ್ನದಲ್ಲಿ ಮೊದಲಾಗಿ ನಿನ್ನ ಕಾಣಲಿಲ್ಲ. ನಿನ್ನ ನುಡಿಯಂ ಕೇಳದ ನನ್ನ ಕಿವಿಗಳು ಕೋಗಿಲೆಯ ಧ್ವನಿಯಂ ಸೊಗಸವು, ನಿನ್ನ ಕೋಮಲವಾದ ಶರೀರವೆತ್ತ ತಪವೆತ್ತ, ರಾಜನ ಕುಮಾರನಾದವನಿಗೆ ಈ ತಪಸ್ಸಿದ್ಧಿಯಿಂದೇನು, ಈ ವಯಸ್ಸಿನಲ್ಲಿ ಬಾಲೆಯರೊಡಗೂಡಿ ಮದುವೆಯಾಗಿ ನಾನಾ ಭೋಗಂಗಳನನುಭವಿಸಿ ಸುತರಂ ಪಡೆದು ಮಕ್ಕಳಿಗೆ ಪಟ್ಟವಂ ಕಟ್ಟಿ ಮತ್ತೆ ತಪಸ್ಸಂ ಮಾಡಬೇಕಲ್ಲದೆ ತಪಸ್ಸಿಗಿದು ಸಮಯವೇ; ತಪಸ್ಸು ಆರಿಗೆಂದರೆ? ಸಕಲಸಂಪತ್ತಿನಲ್ಲಿ ರಾಜ್ಯವನನುಭವಿಸಿ, ವೃದ್ಧತ್ವದಲ್ಲಿ ತಪವ ಮಾಡಬೇಕು. ವೈರಿಗಳಾದ ಅರಿರಾಯರಲ್ಲಿ ಮುರಿದರೂ, ಐಶ್ವರ್ಯಭ್ರಷ್ಟನಾದರೂ ತಪವ ಮಾಡಬೇಕು. ಈ ಬಾಲತ್ವದಲ್ಲಿ ತಪಸ್ಸು ಉಚಿತವೇ; ಅದೂ ಅಲ್ಲದೆ ಎಲೈ ಮಗನೆ! ನಿನ್ನತಿಂದೇವೂ ಎಂದು ಸಮಸ್ತಭೂತಗಳು ಮುಸುಕಿಕೊಂಡುಯಿವೆ. ನೀನೆ ಗತಿಯಾಗಿವುಳ್ಳ ನನ್ನನು ಮೃತ್ಯು ಬಂದು ಕೊಲ್ಲುತಿದೆ ರಕ್ಷಿಸು, ಹೀಗೆಂಬ ಮಾತಂ ಕೇಳಿ ತಾಯಿಬಂದಳೆಂದು ಬಿಸುಸುಯ್ದು ಕಣ್ಣುಬಿಟ್ಟು, ನೋಡಲು, ತಾಯಿಯಿಲ್ಲದಿರಲು. ಅಷ್ಟದಿಕ್ಕಂ ನೋಡಿ ನಾನಾ ಭಯಂಕರಗಳಂ ಕಂಡು, ಅವು ಬಂದೇಭಾರಿ ಆರ್ಭಟಿಸುತ್ತಾಬರಲು, ಅಂಜದೆಯಿದ್ದ ಧ್ರುವನನ್ನು, ಆತನಂ ಬಳಿಸಿರ್ದ ಚಕ್ರವನ್ನು

ಕಂಡು ಸಕಲಭೂತಗಳು ಭಯದಿಂಪೋಗಿ ದೇವೇಂದ್ರಂಗೆ ಬಿನ್ನೈಸಲು. ಆ ದೇವೇಂದ್ರನು ಸಕಲ ದೇವರ್ಕಳು ಸಹಾ ಬ್ರಹ್ಮಲೋಕಕ್ಕೆ ಪೋಗಿ ಬ್ರಹ್ಮನಿಗೆ ನಮಸ್ಕರಿಸಿ ಸ್ತುತಿಸಲು, ಬ್ರಹ್ಮನು ನೀವುಬಂದ ಪ್ರಯೋಜನವೇನೆಂದು ಕೇಳಲು, ದೇವರ್ಕಳಿಂತೆಂದರು. ಎಲೈ ಸ್ವಾಮಿ; ಉತ್ತಾನಪಾದರಾಯನ ಕುಮಾರನಾದ ಧ್ರುವನ ತಪಸ್ಸಿನಿಂದ ಲೋಕವೆಲ್ಲವೂ ಸಂತಾಪಬಟ್ಟು ನೋಯುತಿಧೆ. ಆತನಮನೋರಥವೇನೋ ಕಾಣೆವು ಎನಲು, ಬ್ರಹ್ಮನು ಮುಗುಳುನಗೆಯಿಂದ ಎಲೈ ದೇವರ್ಕಳಿರಾ! ನಿಮಗಾಧ್ರುವನಿಂದ ಭಯಬೇಡ, ಅವಗೆ ಇಂದ್ರಪದವಿಯು ಇಚ್ಛೆಯಿಲ್ಲ, ವಿಷ್ಣುಭಕ್ತರಾದವರು ಪರರಿಗೆ ಸಂತಾಪವಂ ಮಾಡರು. ನಿಮ್ಮ ಪದವಿಗಳಿಗೆಲ್ಲಾ ಆತನೇ ಆಧಾರವಾದಾನು ಎಂದು ನುಡಿದ ಬ್ರಹ್ಮನವಾಕ್ಯವಂಕೇಳಿ ದೇವರ್ಕಳು ತಮ್ಮ ಲೋಕಂಗಳಿಗೆ ಪೋದರು. ಅನಂತರದಲ್ಲಿ ಶ್ರೀ ಮಹಾವಿಷ್ಣುವು ಗರುಡಾರೂಢನಾಗಿ ಬಂದು ಶರಣಾಗತನಾದ ಧ್ರುವನಿಗೆ ಕೃಪೆಯಿಂದಿಂತೆಂದನು; ಕೇಳೈ ಧ್ರುವನೆ;- ನಾನು ನಿನ್ನತಪಸ್ಸಿಗೆ ಮೆಚ್ಚಿ ಪ್ರಸನ್ನನಾದೆನು, ನೀನು ಬಹಳ ಬಳಲಿದೆ, ಇನ್ನು ತಪಸ್ಸು ಸಾಕೆಂದು ಭಕ್ತನ ಮಸ್ತಕದ ಮೇಲೆ ತನ್ನ ಶಿರಿಹಸ್ತವನಿಟ್ಟು ಮೈಯ್ಯತಡವಿ ಏಳೆಂದು ನುಡಿಯಲು. ಸ್ವಾಮಿಯ ವಾಕ್ಯವಂಕೇಳಿ ಧ್ರುವನು ಕಣ್ದೆರೆದು ಕಾರ್ಮುಗಿಲಲ್ಲಿ ಮಿಂಚಿನಂತೆ ಒಪ್ಪುವ ಪೀತಾಂಬರವಂ ಧರಿಸಿ, ಕೋಟಿಸೂರ್ಯಪ್ರಕಾಶವಾದ ಕಿರೀಟದಿಂದೊಪ್ಪುವ ಶಂಖಚಕ್ರಗದಾಪದ್ಮಗಳಂಧರಿಸಿ, ನಾನಾಭರಣ ಭೂಷಿತನಾಗಿ ವೈಜಯಂತೀ ಎಂಬ ವನಮಾಲೆಯಂಧರಿಸಿದವನಾದ, ಕೌಸ್ತುಭಧಾರಿಯಾದ ವಿಷ್ಣುವಂಕಂಡು ನಮಸ್ಕರಿಸಿ, ದುಃಖಪಟ್ಟಮಗನು ತಂದೆಯಮುಂದೆ ನಿಲ್ಲುವಂತೆ ನಿಂದಿರ್ದ ಧ್ರುವನಂಕಂಡು ಸನಕಾದಿಗಳಂ ಲಾಲಿಸುವಂಥಾದಯದಿಂದ ಆನಂದಬಾಷ್ಪವುಳ್ಳವನಾಗಿ ತನ್ನಕರಗಳಿಂಧ್ರುವನನ್ನೆತ್ತಿ ಬಿಗಿದಪ್ಪಿ ಮೈದಡವಲು, ಸ್ವಾಮಿಯ ಹಸ್ತಸೋಂಕಲು ಧ್ರುವನು ಬಳಲಿಕೆಯಂ ಪರಿಹರಿಸಿ ಸ್ವಾಮಿಯಸ್ತುತಿಸುವದಕ್ಕೆ ಮತಿಸಾಲದೆ ಇರಲು, ಸ್ವಾಮಿಯರಿತು ತಾನು ಪಿಡಿದವೇದಮಯವಾದ ಶಂಖದಿಂ ಆ ಧ್ರುವನ ಮುಖವಂಮುಟ್ಟಿಸಲು ಧ್ರುವಂಗೆ ವಾಗ್ದೇವಿಪ್ರತ್ಯಕ್ಷವಾಗಿ ತನ್ನಸ್ವಾಮಿಯಾದ ವಿ

ಷ್ಣುವಂ ಸ್ತುತಿಸಿದನು, ಎಂದು ಅಗಸ್ತ್ಯರು ಲೋಪಾಮುದ್ರೆಗೆ ನಿರೂಪಿಸಿದರೆಂದು ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಹೇಳ್ದರೆಂಬಲ್ಲಿಗೆ ಅಧ್ಯಾಯಾರ್ಥ || * ಇಂತು || ಶ್ರೀಮತ್ಸಮಸ್ತ ಭೂಮಂಡಲಿತ್ಯಾದಿಬಿರುದಾಂಕಿತರಾದ ಮಹೀಶೂರ ಶ್ರೀ ಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಧ್ರುವನ ತಪಸ್ಸಿಗೆ ಸ್ವಾಮಿ ಪ್ರತ್ಯಕ್ಷವಾದನೆಂಬ ಇಪ್ಪತ್ತನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ || ಶ್ರೀ * *

ಇಪ್ಪತ್ತನೇ ಅಧ್ಯಾಯ ಸಂಪೂರ್ಣವು.

ಶ್ರೀ ವಿಶ್ವೇಶ್ವರಾಯನಮಃ|

ಇಪ್ಪತ್ತೊಂದನೇ ಅಧ್ಯಾಯ.

ಧ್ರುವನು ವರವಂ ಪಡೆದದ್ದು, ಲೋಕಪ್ರಾಪ್ತಿ.

ಅನಂತರದಲ್ಲಿ ಗಣಂಗಳು ಶಿವಶರ್ಮಂಗೆ ಧ್ರುವನು ಸ್ವಾಮಿಯಂ ಸ್ತುತಿಸಿದನೆಂದು ಹೇಳ್ದರು- ಆ ಸ್ತುತಿಯೆಂತೆನೆ; ವೇದಗರ್ಭನಾಗಿ ಸಕಲಲೋಕವ ಸೃಷ್ಟಿಸುವಂಥಾ ಹಿರಣ್ಯರೇತನಾದ, ಪ್ರಕೃತಿಸ್ವರೂಪನಾದ, ಪಂಚಭೂತಸ್ವರೂಪಿಯಾದ, ಭೂತಸಂಹಾರಕನಾದ, ಸ್ಥಿತಿಕರ್ತನಾದ, ಸರ್ವವ್ಯಾಪಕನಾದ, ನಾನಾರೂಪನಾದ, ಲೋಕ ಅತಿಭಾರವಾದ, ರಾಕ್ಷಸರೆಂಬ ಅಡವಿಗೆ ಕಾಡ್ಗಿಚ್ಚು ಕೊಡಲಿಯಾದಂಥಾ, ಶಾರ್ಙವೆಂಬ ಬಿಲ್ಲಂಧರಿಸಿದಂಥಾ, ಗದಾಪಾಣಿಯಾದ, ದನುಜಾಂತಕ; ಮಂದರಧರ, ವಾಸುದೇವ, ದೇವಕೀನಂದನ ಪ್ರದ್ಯುಮ್ನ, ಅನಿರುದ್ಧ, ಕಂಸಾರಿ, ಚಕ್ರಪಾಣಿ, ಭೂಧರ ವರಾಹರೂಪ, ಪರಮಾತ್ಮ, ಕಮಲನಾಭ ಕಮಲಾನಾಥ, ಕೂರ್ಮರೂಪ, ಕೌಸ್ತುಭಧರ ವೇದಾಂತವೇದ್ಯ, ಶ್ರೀವತ್ಸಧರ, ಗುಣರೂಪ; ಗಂಗಾಪಿತ, ಪದ್ಮನಾಭ, ಪಾಂಚ

ಜನ್ಯಧರ,ಚಾಣೂರಮರ್ಧನ,ದಾಮೋದರಹೃಷೀಕೇಶ,ಗೋವಿಂದ,ಅಚ್ಯುತ, ಮಾಧವ, ಉಪೇಂದ್ರ,ಕೈಟಭಾರಿ, ಮಧುಸೂದನ,ಅಧೋಕ್ಷಜ, ನಾರಾಯಣ,ನರಕಾಂತಕ,ಪಾಪಹಾರಿ,ವಾಮನ,ಶೌರಿ, ಹರಿ,ಅನಂತಶಯನ,ಲಕ್ಷ್ಮೀಪತಿ, ರುಕ್ಮಮರ್ದನ ಶಿಶುಪಾಲಹರ, ಅಸುರಾರಿ, ಮುರಧ್ವಂಸಿ, ಪರಮಾನಂದಮೂರ್ತಿನಂದಗೋಪಸುತ,ಪುಂಡರೀಕಾಕ್ಷ,ದನುಜಾರಿ,ಗೋಪಾಲರೂಪ ವೇಣುನಾದಪ್ರಿಯ,ಗೋವರ್ಧನಧರ,ರಾಮ,ರಾವಣಾರಿ, ವಿಭೀಷಣಶರಣಪ್ರದ, ಅಜರೂಪ, ರಣರಂಗಧೀರ, ಕಾಲರೂಪಚಕ್ರಧರ,ಇಂದ್ರಪ್ರಿಯ, ಬಲಿ,ಯಜ್ಞಹರ,ಭಕ್ತಫಲಪ್ರದಾಯಕ, ಹಿರಣ್ಯಕಶಿಪುವಿದಾರಣ, ಬ್ರಹ್ಮಣ್ಯದೇವ,ಗೋಬ್ರಾಹ್ಮಣಹಿತ,ಧರ್ಮರೂಪ,ಸಹಸ್ರಶೀರ್ಷ,ಪರಮಪುರುಷ,ಸಹಸ್ರಮೂರ್ತಿ,ಶ್ರೀರಮಣ, ಯಜ್ಞಪುರುಷ,ದೇವಪ್ರಿಯ, ಸದಾಚಾರಗಮ್ಯ ವೈಕುಂಠ,ವೈಕುಂಠವಾಸಿ, ಲೋಕವ್ಯಾಪ್ತ,ಕೀರ್ತಿಗರುಡವಾಹನ,ವಿಷ್ವಕ್ಸೇನ, ಜಗನ್ಮಯ, ಜನಾರ್ಧನ, ತ್ರಿವಿಕ್ರಮ,ನಿತ್ಯರೂಪ,ಸತ್ಯಪ್ರಿಯ,ಕೇಶವ, ಮಾಯಾವಿ, ಬ್ರಹ್ಮರೂಪ, ತಪೋರೂಪ, ತಪಃಫಲಪ್ರದಾಯಕ, ನಿಗಮಸ್ತುತ್ಯ, ಸ್ತುತಿರೂಪ, ಭಕ್ತಸ್ತುತಿಪ್ರಿಯ, ಧರ್ಮಶಾಸ್ತ್ರಸ್ವರೂಪ ಸದಾಚಾರಪ್ರಿಯ, ಅಂಡಜ ಪಿಂಡಜಸ್ವೇದಜಉದ್ಭಿಜರೂಪ, ದೇವತೆಗಳೊಳು ಇಂದ್ರ, ಗ್ರಹಗಳೊಳ್ ಸೂರ್ಯ, ಲೋಕಂಗಳೊಳ್ ಸತ್ಯಲೋಕ, ಸಮುದ್ರಂಗಳೊಳ್ ಕ್ಷೀರಸಾಗರ, ಗಿರಿಗಳೊಳ್ ಹಿಮವಂತ, ಧೇನುಗಳೊಳ್ಕಾಮಧೇನು, ದೇವತಾಶಿಲೆಗಳೊಳ್ ಸಾಲಗ್ರಾಮ, ಮುಕ್ತಿಕ್ಷೇತ್ರಂಗಳಲ್ಲಿ ಕಾಶಿ, ತೀರ್ಥಂಗಳೊಳ್ ಪ್ರಯಾಗೆ, ವರ್ಣಗಳೊಳ್ ಶುಭ್ರವರ್ಣ, ನರಪ್ರಾಣಿಗಳೊಳ್ ಬ್ರಾಹ್ಮಣ, ಪಕ್ಷಿಗಳೊಳ್ಗರುಡ, ವ್ಯವಹಾರದೊಳ್ ಸತ್ಯವಾಕ್ಕು, ವೇದಂಗಳೊಳ್ ಋಗ್ವೇದ, ಮಂತ್ರಗಳೊಳ್ಪ್ರಣವ, ಅಕ್ಷರಗಳೊಳ್ ಅಕಾರ, ಸೋಮಯಾಜಿಗಳೊಳ್ ಚಂದ್ರ, ಪ್ರತಾಪಿಗಳೊಳಗ್ನಿ, ಕ್ಷಮೆಯೊಳ್ ಭೂಮಿ, ದಾತರೊಳ್ ಮೇಘ, ಪವಿತ್ರವಸ್ತುಗಳೊಳ್ ಉದಕ, ಆಯುಧಂಗಳೊಳ್ ವಜ್ರ, ವೇಗವಂತರೊಳ್ ವಾಯುವು, ಇಂದ್ರಿಯಂಗಳೊಳು ಮನಸ್ಸು, ವ್ಯಾಪಕವಸ್ತುಗಳೊಳಾಕಾಶ, ಜೀವದೊಳು ಪರಮಾತ್ಮ, ನಿತ್ಯಕರ್ಮಂಗಳಲ್ಲಿ ಸಂಧ್ಯಾವಂದನೆ,

ಕ್ರತುಗಳೊಳಶ್ವಮೇಧ, ದಾನಂಗಳೊಳಭಯದಾನ, ಲಾಭಂಗಳಲ್ಲಿ ಪುತ್ರಲಾಭ, ಋತುಗಳೊಳ್ ವಸಂತಋತು, ಯುಗಂಗಳೊಳು ಕೃತಯುಗ, ತಿಥಿಗಳೊಳು ಅಮಾವಾಸ್ಯೆ, ನಕ್ಷತ್ರಗಳೊಳು ಪುಷ್ಯ, ಪರ್ವತಿಥಿಗಳೊಳು ಸಂಕ್ರಾಂತಿ, ಯೋಗಂಗಳೊಳು ವ್ಯತೀಪಾತ, ತೃಣಗಳೊಳು ದರ್ಭೆ, ವೃಕ್ಷಂಗಳೊಳು ಅಶ್ವತ್ಥ, ಬಲಿಗಳೊಳು ಸೋಮಬಲಿ, ಯೋಗಸಾಧನಗಳೊಳು ಪ್ರಾಣಾಯಾಮ, ಸಕಲ ಲಿಂಗಗಳಲ್ಲಿ ಕಾಶೀವಿಶ್ವನಾಥ, ವನಗಳಲ್ಲಿ ನಂದನವನ, ಬುದ್ಧಿಗಳಲ್ಲಿ ಧರ್ಮಬುದ್ಧಿ, ಮಿತ್ರರೊಳು ಪತ್ನೀ, ಚರಾಚರಗಳೊಳು ತಾಯಿತಂದೆ, ಸಂಪತ್ತಿನೊಳು ನೀನು. ಆಯುಷ್ಯವೂ ನೀನೆ,ನಿನ್ನ ನಾಮವುಳ್ಳದೆ ಸತ್ಕಥೆಯು, ನಿನ್ನ ಧ್ಯಾನವುಳ್ಳದೆ ಮನಸ್ಸು ನಿನಗರ್ಪಿತವಾದುವೆ ಕರ್ಮ. ನಿನ್ನ ಪೂಜೆಯಂಮಾಡುವದೆ ಕಾಲ. ನಿನ್ನ ಸ್ಮರಿಸುತಿರ್ದುದೆ ಜೀವನ. ನಿನ್ನ ಪಾದೋದಕವೆ ಪಾಪಹರವು. ನಿನ್ನ ಕೀರ್ತನವೆ ಸಕಲ ಪಾಪಹರ, ನಿನ್ನ ಪೂಜಿಸದವರು ಮೂಢರು, ನಿನ್ನ ಕೀರ್ತಿಸುವದೇ ಸಫಲವು, ನಿನ್ನ ಆರಾಧಿಸುವದೆ ಚತುರ್ವಿಧಪುರುಷಾರ್ಥವು, ನಿನ್ನ ಧ್ಯಾನವನರಿವುದೆ ಸುಖ, ನಿನ್ನ ಪಾದೋದಕಪ್ರಸಾದವೆ ಸೋಮಪಾನ, ಪುರೋಡಾಶಕ್ಕೆ ಸಮಾನ. ಸಕಲ ವರ್ಣಾಶ್ರಮಂಗಳಲ್ಲಿ ನಿನ್ನ ಭಕ್ತನೆ ಶ್ರೇಷ್ಠನು, ಶಂಖಚಕ್ರಾಂಕಿತನಾಗಿ ಗೋಪಿಚಂದನವ ಧರಿಸಿ ಬೃಂದಾವನವ ಸೇವೆಯಂಮಾಡಿ ಸಾಲಗ್ರಾಮ, ಚಕ್ರಪಾಣಿ, ಶಂಖಚಕ್ರಮೊದಲಾದವು ಧರಿಸಿದ ನಿನ್ನ ವಿಗ್ರಹಗಳನ್ನು ಭಜಿಸಿ ಪೂಜಿಸಿದವರ್ಗೆ ಯಮಬಾಧೆಯಿಲ್ಲ. ನಿನ್ನನಲ್ಲದೆ ಅನ್ಯದೇವತಾಪೂಜೆ ಧ್ಯಾನದರ್ಶನ ಸತ್ಪುಣ್ಯಗಳಮಾಡಿ ಫಲವೇನು. ಅಣುರೇಣುತೃಣಕಾಷ್ಠಾದಿಗಳಲ್ಲಿ ಹೊರಗೂ ಒಳಗೂ ನೀನೆಅಲ್ಲದೆ ಅನ್ಯರಕಾಣೆನು. ಎಂದು ಸ್ತುತಿಸಿ ಸುಮ್ಮನೆಯಿದ್ದ ಧ್ರುವನನ್ನು ನೋಡಿ ಸ್ವಾಮಿಯಿಂತೆಂದನು ಬುದ್ಧಿವಂತನಾದ ಧ್ರುವನೇ! ನಿನ್ನ ಮನೋರಥವಂಪೇಳೆನಲು, ಎಲೈ, ಸ್ವಾಮಿ ಅಂತರ್ಯಾಮಿಯು, ಸರ್ವವ್ಯಾಪಕನಹನಿನಗೆ ನಾನು ಬಿನ್ನಹವಂಮಾಡುವದೇನು ಇದ್ದೀತು; ತನ್ನ ಮನದ ಅಭೀಷ್ಟವ ನೀನೇಬಲ್ಲೆ ಎಂದು ಸಾಷ್ಟಾಂಗನಮಸ್ಕಾರವಂಮಾಡಲು, ಪಿಡಿದೆತ್ತಿ ತಕ್ಕೈಸಿ ಎಲೆ ಧ್ರುವನೆ ನಿನ್ನ ಮನೋರಥವಂ ತಿಳಿದೆನು. ತಾನು ವಿಶ್ವೇಶ್ವರನ ಕುರಿತು ತಪಸ್ಸಂ

ಮಾಡಲು ತನಗೆ ಪ್ರಸನ್ನನಾಗಿ ವಿಶ್ವೇಶ್ವರ ತನಿಗೆ ಕೊಟ್ಟಪದವಿಯು ನಿನಿಗೆ ಕೊಡುವೆನು;ಆಪದವಿಯೆಂಥಾದ್ದೆಂದರೆ-ಅಂತರಿಕ್ಷಚಾರಿಗಳಾದ ಭೂತಂಗಳ ಅನೇಕವರ್ಷ ಸಂಚಾರಕ್ಕು ಸೂರ್ಯನೂ ಸಕಲಗ್ರಹನಕ್ಷತ್ರಮೊದಲಾದ ಜ್ಯೋತಿಶ್ಚಕ್ರಕ್ಕೆ ವಾಯುಪಾಶಂಗಳಿಂದ ಆಧಾರವಾಗಿ ಮನುಗಳಿಗೆ ಇಂದ್ರಾದಿಗಳಿಗೆ ದೊರಕದಂಥಾ ಧ್ರುವಪದವಿಯಲ್ಲಿ ನಿಮ್ಮತಾಯಿ ಸಹಾ ಒಂದು ಬ್ರಹ್ಮಕಲ್ಪಪರ್ಯಂತರ ಸುಖದಲ್ಲಿ ಇರುವನಾಗು. ಆ ಧ್ರುವಲೋಕವು ಜಲಪ್ರಳಯ, ಅಗ್ನಿಪ್ರಳಯ, ವಾಯುಪ್ರಳಯ, ಬ್ರಹ್ಮಪ್ರಳಯ, ಇವಕ್ಕೆ ಹೊರತಾದಂಥಾದ್ದು. ಆದರೆ-ಕೇಳೈಧ್ರುವನೆ, ನಿನಗೆ ಇನ್ನೂ ರಾಜ್ಯವಾಳುವಂಥಾ ಪುಣ್ಯವಿರುವದು, ಆ ಪುಣ್ಯತೀರುವ ಪರ್ಯಂತರ ಇಪ್ಪತ್ತಾರು ಸಾವಿರವರ್ಷ ಪರ್ಯಂತರವೂ ಸದ್ಧರ್ಮದಲ್ಲಿ ಸಕಲ ಭೋಗಂಗಳಗೂ ಗೇರಹಣ್ಣಿನ ಬೀಜದಂತೆ ಹೊರಚ್ಚಾಗಿ ತನ್ನ ಭಕ್ತಿಯಿಂದ ಸಕಲ ಭಾರವನು ತನ್ನಮೇಲೆ ವಹಿಸಿ ರಾಜ್ಯವನಾಳು. ನಾನು ದಿವ್ಯವಿಮಾನವ ಕಳುಹಿಕೊಟ್ಟೇನು ಎನಲು; ಎಲೈ ಸ್ವಾಮಿ; ನನಿಗೆ ಇನ್ನೂ ರಾಜ್ಯವನಾಳುವ ಪ್ರಾಪ್ತಿಬಿಡದೆ,ತಾನುರಾಜ್ಯವನೊಲ್ಲೆ, ನಿಮ್ಮ ಭಕ್ತಿಯುಂಬ ಪದವೇ ಸಾಕು ಎನಲು. ಶ್ರೀ ಮಹಾವಿಷ್ಣುವು ಧ್ರುವನಂಕುರಿತು ಎಲೈ ಮಗನೆ, ನಿಮ್ಮ ತಂದೆ ಮೃತವಾದಲ್ಲಿ ನಿನ್ನ ಒಡಹುಟ್ಟಿದವನಾದ ಉತ್ತಮನು ಯಕ್ಷರೊಡನೆ ಕಾದಿ ಮಡಿವನು, ಮಗಹೋದ ಅಳುವಿಗೆ ನಿನ್ನ ಬಲತಾಯಿ ಸುರುಚಿಯು ಅಡವಿಗೆ ಹೋಗಿ ಕಾಡಿಚ್ಚಿನಲ್ಲಿ ಸತ್ತುಹೋದಾಳು,ಮುಂದೆ ರಾಜ್ಯಕ್ಕೆದಿಕ್ಕು ಇಲ್ಲದೆ ವಂಶವು ನಡೆಯದೆ ಹೋದೀತು, ಹಾಗಾಗಬಾರದಲ್ಲ, ನೀನು ರಾಜ್ಯವನಾಳಿ ಮಕ್ಕಳಿಗೆ ಪಟ್ಟವಕಟ್ಟಿ, ಆ ಮೇಲೆ ಬಂದು ಧ್ರುವಪದವಿಯಲ್ಲಿ ಸುಖದಲ್ಲಿ ಇರೂಎಂದು ಧ್ರುವನನ್ನು ಸಂತೈಸಿ, ಗರುಡನನೇರಿಕೊಂಡು ಕಾಶೀಪಟ್ಟಣಕ್ಕೆ ಬಂದವನಾಗಿ, ಮಣಿಕರ್ಣಿಕೆಯಲ್ಲಿ ಸ್ನಾನಸಂಮಾಡಿಶಿ ವಿಶ್ವೇಶ್ವರನ ಪೂಜೆಯಂಮಾಡಿಶಿ, ಮತ್ತೂ ಕೆಲವು ಧರ್ಮಂಗಳಂಪೇಳ್ದನೂ, ಕೇಳೈಧ್ರುವನೆ; ಮತ್ತೊಂದುಕಡೆಯಲ್ಲಿ ಹತ್ತುಸಾವಿರಲಿಂಗವಂ ಪ್ರತಿಷ್ಠೆಯ ಮಾಡಿದ ಫಲವು ಇಲ್ಲಿ ಒಂದು ಲಿಂಗ ಪ್ರತಿಷ್ಠೆಯಲ್ಲಹುದು, ಖಿಲವಾದ ದೇವಾಲಯಂಗಳ ಊರ್ಜಿತವ ಮಾಡಲೂ ಆ ಫಲವು ಪ್ರಳಯವಾದರೂ

ಉತ್ತಮನು ಬ್ಯಾಂಟೆಗೆ ಪೋಗಲೂ, ಅಲ್ಲಿಯಕ್ಷರೊಡನೆ ಕಾಳಗವಾಗಿ
ಸತ್ತನೂ, ಮಗನ ಮರಣವಂ ಕೇಳಿ ಸುರುಚಿಯೂ ಸಂತಾಪದಿಂದವ
ಳುತ್ತಾ ಅಡವಿಗೆ ಪೋಗಲು ಕಾಡುಕಿಚ್ಚು ಕವಿದು ಸತ್ತುಹೋದಳು,
ಈ ವರ್ತಮಾನವಂ ಧ್ರುವಮಹಾರಾಯನು ಕೇಳಿ, ಯಕ್ಷರೊಡನೆ ಸಮರ
ಕ್ಕೆಂದು ಸಕಲ ಸನ್ನಾಹದಿಂದ ದಿವ್ಯರಥವನೇರಿ ನಾರಾಯಣಾಸ್ತ್ರವೇ ಮೊ
ದಲಾದ ದಿವ್ಯಾಯುಧಂಗಳಂಕೊಂಡು ಅಳಕಾಪುರಿಗೆಪೋಗಿ ಕಾದಿ ಸಕಲ
ಯಕ್ಷರನ್ನು ಕೊಲ್ಲಲೂ, ಮುತ್ತ್ಯಯ್ಯನಾದಮನುವು ಧ್ರುವನ ಬಳಿಗೆ ಬಂ
ದು ಎಲೈ ಮಗನೆ; ವಿಷ್ಣುಭಕ್ತರಾದವರಿಗೆಪರಹಿಂಸೆ ಸಲ್ಲದೂ, ಬೇಡವೆನ
ಲೂ, ಮಹಾ ಪ್ರಸಾದವೆಂದು ಧನುವನಿಳುಹಿ ಸಂಗರವಂಬಿಡಲೂ, ಕುಬೇ
ರನು ಕೇಳಿ ಬಂದು ಎಲೈ, ವಿಷ್ಣುಭಕ್ತನಾದಂಥಾ ಪ್ರತಾಪಶಾಲಿಯಾದ ನಿನ
ಗೆ ಸರಿಯಿಲ್ಲವೆಂದು ಅಪ್ಪಿಕೊಂಡು ಸಕಲಾಭರಣ ಸಕಲ ವಸ್ತ್ರಗಳಿಂದ
ಸನ್ಮಾನಿಸಿ ಕಳುಹಲೂ, ತನ್ನ ಪುರಕ್ಕೆ ಬಂದು ಸಕಲ ಧರ್ಮದಿಂದಾ ಇ
ಪ್ಪತ್ತಾರುಸಾವಿರ ವರ್ಷ ರಾಜ್ಯವನಾಳಿ, ತನ್ನಕುಮಾರನನ್ನು ರಾಜ್ಯವಾಳ
ಲು ಪಟ್ಟವಂ ಕಟ್ಟಿ, ತಾನೂ ತಪಕ್ಕೆಪೋಗಿ ನಾನಾವಿಧ ಪೂಜೆಯಿಂದಾ
ವಿಷ್ಣುವಂ ಪೂಜಿಸುತ್ತಿರಲೂ ಸ್ವಾಮಿಯ ಅಪ್ಪಣೆಯಿಂದ ಸಂದ ಸುನಂದ
ರೆಂಬ ಸ್ವಾಮಿಯ ಸಾಮೀಪ್ಯದವರು ದಿವ್ಯವಿಮಾನವಂಕೊಂಡುಬಂದು ಎ
ಲೈ ಧ್ರುವನೆ, ಬಾಲ್ಯದಿಂದ ಸ್ವಾಮಿಯನ್ನೇ ಭಜಿಸಿ ಕೀರ್ತಿ ಪುರುಷನಾ
ದೆ, ಆದ್ದರಿಂದ ನಿನ್ನಕರೆಯಲ್ಪಟ್ಟಿದರೆನಲೂ; ಸುನೀತಿಯಂ ಕರಶಿಕೊಂಡು
ಅಮೃತಾಭಿಷೇಕವಮಾಡಿ ದಿವ್ಯವಿಮಾನವನೇರಿಶಿ ಸಕಲಸಂಭ್ರಮದಿಂದದೇ
ವದುಂದುಭಿಮೊಳಗಲೂ; ರಂಭೆಊರ್ವಶಿಯರೂ ನಾಟ್ಯವಾಡಲೂ, ಸಕಲ
ಸುರರೂ ಉಘ್ಘಡಿಸಲೂ ಧ್ರುವಲೋಕಕ್ಕೆ ಕರದುಕೊಂಡುಪೋಗಿ
ಧ್ರುವಪಟ್ಟವಂ ಕಟ್ಟಿ ತಾವೂ ಸ್ವಾಮಿಯ ಸಮೀಪಕ್ಕೆ ಪೋಗಲೂ; ಧ್ರು
ವನು ಸುಖದಲ್ಲಿ ವಿಷ್ಣು ಸೇವಕನಾಗಿ ಮಹಾ ಪುಣ್ಯ ಪುರುಷನಾಗಿ ಇದ್ದ
ನೂ. ಆವನಾನೊಬ್ಬನಾದರೂ ವೈದ್ಯನಾಥೇಶ್ವರನ ಸಮೀಪದಲ್ಲಿದ್ದ ಧ್ರುವ
ತೀರ್ಥದಲ್ಲಿ ಸ್ನಾನವಂಮಾಡಿ ಧ್ರುವೇಶ್ವರನೆಂಬ ಲಿಂಗವಂ ಪೂಜಿಸಲೂ
ಅವರಿಗೆ ಧ್ರುವಲೋಕವಹುದು. ಈ ಧ್ರುವನ ಚಾರಿತ್ರವಂ ಕೇಳಿದವರ್ಗೆ

ಇಹದಲ್ಲಿ ಸಕಲ ಭೋಗ ಪರದಲ್ಲಿ ವಿಷ್ಣುಪದವಹುದೆಂದು ಗಣಂಗಳು ಶಿವಶರ್ಮಂಗೆ ಪೇಳ್ದರೆಂದು ಅಗಸ್ತ್ಯರು ಲೋಪಾಮುದ್ರೆಗೆ ಪೇಳದಿ ಅರ್ಥವಂ ವ್ಯಾಸರುತನಗರುಹಿದರೆಂದು ಸೂತಪುರಾಣಿಕನು ಶೌನಕಾದ ಋಷಿಗಳಿಗೆ ಪೇಳ್ದರೆಂಬಲ್ಲಿಗೆ ಅಧ್ಯಾಯಾರ್ಥ * ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿಬಿರುದಾಂಕಿತರಾದ ಮಹಿಶೂರ ಪುರವರಾಧೀಶ ಶ್ರೀ ಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕ ಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಧ್ರುವನು ವರವಂಪಡೆದು ರಾಜ್ಯವಾಳಿ ಧ್ರುವಲೋಕಾಧಿಪತ್ಯವನ್ನೈದಿದನೆಂಬಲ್ಲಿಗೆ ೨೧ ಇಪ್ಪತ್ತೊಂದನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳ ಮಹಾ ಶ್ರೀ * * * * *

ಇಪ್ಪತ್ತೊಂದನೇ ಅಧ್ಯಾಯ ಸಂಪೂರ್ಣವು.

ಶ್ರೀ ವಿಶ್ವೇಶ್ವರಾಯನಮಃ.

ಇಪ್ಪತ್ತೆರಡನೇ ಅಧ್ಯಾಯ.

ಮಹರ್ಲೋಕ ಜನೋಲೋಕ ತಪೋಲೋಕ

ಸತ್ಯಲೋಕವರ್ಣನೆ ಕಾಶೀವರ್ಣನೆ.

ಅನಂತರದಲ್ಲಿ ಶಿವಶರ್ಮನು ಪರಮಪವಿತ್ರವಾದ ಧ್ರುವನ ಚಾರಿತ್ರಮಂ ಕೇಳಿಸಂತೋಷಪಡುತ್ತಿರಲು; ವಿಮಾನಮುಂದೆನಡೆಯೆ, ಶಿವಶರ್ಮನು ಮುಂದೆ ತೋರುವಲೋಕಮಂ ಕಂಡು ಎಲೈ ಗಣಂಗಳಿರಾ, ಇದಾವ ಲೋಕವೆಂದು ಬೆಸಗೊಳ್ಳೆ, ಗಣಂಗಳಂತೆಂದರು, ಎಲೈ ಶಿವಶರ್ಮ, ಇದು ಮಹರ್ಲೋಕ, ಸರ್ವೇಶ್ವರನಾದಂಥಾ ಮಹಾದೇವನನ್ನು ತ್ರಿಪತಿಪೂಜೆಯಿಂ ದಶುದ್ಧಾತ್ಮರಾಗಿ ಭಜಿಸಿದವರು ಒಂದು ಕಲ್ಪಪರ್ಯಂತರವೂ ಈ ಮಹ

ಲೋಕದಲ್ಲಿ ಇಹರು ಎಂದು ಪೇಳುವನಿತರೊಳು ವಿಮಾನವು ಜನೋ
ಲೋಕಕ್ಕೆ ಪೋಗೆ ಇದಾವಲೋಕವೆಂದು ಶಿವಶರ್ಮನು ಕೇಳೆ ಗಣಂಗ
ಳಿಂತೆಂದರು;-ಎಲೈ ಶಿವಶರ್ಮನೆ, ಇದು ಜನೋಲೋಕ ಬ್ರಹ್ಮನ ಮಾನಸ
ಪುತ್ರರಾದ ಸನಕಸನಂದಾದಿಗಳಿಹರೂ,ಮತ್ತೂ ಪರಮವಿರಕ್ತರಾದ ಯೋ
ಗಿಗಳಿಹರು ಎಂಬನಿತರೊಳು ತಪೋಲೋಕವಂ ಕಂಡು ಇದಾವಲೋಕ
ವೆಂದು ಕೇಳೆ, ಇದು ತಪೋಲೋಕ ಶ್ರೀ ವಾಸುದೇವನಾದ ವಿಷ್ಣುವಿನಲ್ಲಿ
ಶುದ್ಧವಾದ ಮನವನಿರಿಸಿ ಫಲಮಂ ಬಯಸದೆ ಸರ್ವೇಶ್ವರನನ್ನಾರಾಧಿಸಿ ಪ್ರ
ಕೃತಿ ದೋಷರಹಿತರಾದ ವೈರಾಗ್ಯಪುರುಷರಿಹರು, ಮತ್ತೂ ಭೂಮಿಯ
ಮೇಲೆ ಉದುರಿದ ಧಾನ್ಯಗಳಂ ಉಗುರುಕೊನೆಗಳಿಂದೆತ್ತಿ ಕಲ್ಲುಗಳೆ ವನಕೆ
ಗಳ ಮಾಡಿಕೊಂಡು ಇರುವ ವ್ರತವುಳ್ಳವರು, ಕಲ್ಲಿನಲ್ಲಿ ಕುಟ್ಟಿದ ಧಾನ್ಯ
ಹಾರಿಗಳಾಗಿ ಜೀವನವುಳ್ಳವರು, ತರಗೆಲೆಯಾಹಾರಿಗಳು, ಗ್ರೀಷ್ಮಕಾಲದಲ್ಲಿ
ಪಂಚಾಗ್ನಿಮಧ್ಯದಲ್ಲಿ ತಪಸ್ಸಮಾಡಿದವರು, ವರ್ಷಾಕಾಲದಲ್ಲಿ ಬಯಲೊಳ
ಗೆ ತಪವಮಾಡಿದವರು, ನೆಲದಮೇಲೆ ಹಾಸಗೆಯಿಲ್ಲದೆ ಮಲಗುವ ವ್ರತವು
ಳ್ಳವರು, ಹೈಮಂತಶಿಶಿರಋತುಗಳಲ್ಲಿ ತಪವಮಾಡಿದವರು, ಗ್ರೀಷ್ಮಕಾಲದ
ಲ್ಲಿ ದರ್ಭೆಯಕೊನೆಯ ಉದಕಬಿಂದುಪಾನವಮಾಡುವರು, ಏಕಪಾದದಲ್ಲಿ
ನಿಂತು ವಾಯುವಾಹಾರವಮಾಡಿದವರು, ಊರ್ಧ್ವದೃಷ್ಟಿಯಿಂದಾಸೂರ್ಯನ
ನೋಡಿದವರು, ಉಛ್ವಾಸನಿಶ್ವಾಸಗಳಲ್ಲಿ ಉಸುರಬಿಡದೆ ಉಸರಕಟ್ಟಿದವರು,
ಮಾಸೋಪವಾಸಿಗಳೂ. ಚಾತುರ್ಮಾಸ್ಯದಲ್ಲಿ ಶಾಕವ್ರತವಮಾಡಿದವರು,
ಎರಡುತಿಂಗಳಿಗೊಮ್ಮೆ ಉದಕಾಹಾರವಮಾಡಿದವರು,ಆರುತಿಂಗಳುಉಪವಾ
ಸವ್ರತವಮಾಡಿದವರು, ಅನಿಮಿಷದೃಷ್ಟಿವ್ರತರು, ವರ್ಷಧಾರಾವ್ರತಿಗಳು
ಪೋಟುಪುರಗಳಂತೆ ಮೃಗಗಳಿಂದಾತುರಿಸಲ್ಪಟ್ಟ ದೇಹವುಳ್ಳವರು, ಜಡೆ
ಗಳಲ್ಲಿ ಗೂಡಿಕ್ಕಿ ಪಕ್ಷಿಗಳಿಗೆ ಆಶ್ರಯವಾದವರು, ದೇಹಗಳುಹುತ್ತುಬೆಳೆ
ಯುವ ಪರ್ಯಂತರವೂ ಅಸ್ಥಿನರಗಳು ಇರುವವರೆಗೂ ಮೈಮೇಲೆ ಬಳ್ಳಿಹ
ಬ್ಬಿ ಇರ್ದಡೂ ಶರೀರದಲ್ಲಿ ಸರ್ವನಿದ್ರೆಗೈವಪರ್ಯಂತರವೂ ಕೃಶವಾದ ಶರೀ
ರಗಳುಳ್ಳವರು, ಕಲ್ಪಪರ್ಯಂತರವೂ ಆಯುಷ್ಯವುಳ್ಳವರಾಗಿ ಈ ತಪೋ
ಲೋಕದಲ್ಲಿ ಇಹರು, ಎಂದು ಪೇಳುವನಿತರೊಳು ಸತ್ಯಲೋಕವಂ ಕಂ

ಡು ವಿಮಾನದಿಂದಿಳಿದು ಗಣಂಗಳು ಶಿವಶರ್ಮ ಸಹಿತರಾಗಿ ಬ್ರಹ್ಮನಿಗೆ ನಮಸ್ಕರಿಸಲೂ, ಬ್ರಹ್ಮನು ಇವರ್ಗೆ ಇಂತೆಂದನು-ಕೇಳಿರೈ ಗಣಂಗಳಿರಾ! ಈ ಬ್ರಾಹ್ಮಣನು ಸದಾಚಾರವುಳ್ಳವನು, ಮಹಾ ಉತ್ತಮನು, ಕೇಳೈ ಶಿವಶರ್ಮ, ನೀನು ತೀರ್ಥದಲ್ಲಿ ಶರೀರತ್ಯಾಗವಂ ಮಾಡಿದೆಯಾಗಿ ಬಹು ಸುಕೃತವಂ ಪಡೆದೆ, ಈ ದೇಹವು ಶೀಘ್ರದಲ್ಲಿ ಅಳಿಯುಲುಳ್ಳದು,ತಾನು ಸೃಷ್ಟಿಸಿದ ಚರಾಚರವಸ್ತು ರುದ್ರನು ಸಂಹರಿಸುವನು, ಗುಳ್ಳೆಗೆಸಮಾನವಾದ ಮನುಷ್ಯ ಶರೀರದ ಬಾಳು ಯೇನಹೇಳಬೇಕು, ಅಂಡಜ ಪಿಂಡಜ ಸ್ವೇದಜ ಉದ್ಭಿಜಗಳೆಂಬ ದೇಹಗಳಲ್ಲಿಯೂ ಈ ಜಂಬೂದ್ವೀಪದಲ್ಲಿ ಜನ್ಮವನೆತ್ತಿ ಚಂಚಲಮಪ್ಪ ಇಂದ್ರಿಯಗಳನೂ ಮನಗಳನೂ ನಿಗ್ರಹಿಸಲು ಗುಣವಿರೋಧಿಯಾದ ಲೋಭವನು ಗೆದ್ದು, ಧರ್ಮಾಧರ್ಮವನು ಕೆಡಿಸುವ ಕಾಮವೆಂಬ ಯುಸಿ ತಪವನೂ ಕೀರ್ತಿಯನೂ ಐಶ್ವರ್ಯವನೂ ಶರೀರವನೂ ಕೆಡಿಸಿ ಮಹಾಪ್ಪದೋರಿಶಿ ನರಕಪ್ರದಮಪ್ಪ ಕ್ರೋಧವನು ಪರಿಹರಿಸಿ ಮೋಸಗೊಳಿಸುವ ಐಶ್ವರ್ಯ ಹರಮಪ್ಪ ಸಕಲರಲ್ಲಿಯೂ ಲಘುವಂ ಮಾಳ್ಪ ಅಹಂಕಾರವಂ ಬಿಟ್ಟು, ಬುದ್ಧಿಯ ಕೆಡಿಸಿ ಸುಜ್ಞಾನಿಗಳಲ್ಲಿ ದೂಷಣೆಗಳಂ ಸಂಪಾದಿಸುವ ದುರ್ಜನರಂ ಸಜ್ಜನರ ಮಾಡುವ ತಮಿಸ್ರನರಕವಂ ಕೊಡುವ ಮೋಹವಂ ಬಿಟ್ಟು ಸ್ಮೃತಿಪುರಾಣಗಳಲ್ಲಿ ಪ್ರಸಿದ್ಧವಾದ ವೃದ್ಧರು ನಡೆವ ಆಚಾರಮಾರ್ಗವಿಡಿದು ಈ ಜಂಬೂದ್ವೀಪವಂ ಬಯಸುವರು, ಆರ್ಯಾವರ್ತಕ್ಕೆ ಸಮಾನವಾದ ದೇಶವು ಕಾಶಿಗೆಸಮಾನವಾದ ಕ್ಷೇತ್ರವೂ ವಿಶ್ವವತಿಗೆ ಸಮಾನವಾದ ಲಿಂಗವೂ ಬ್ರಹ್ಮಾಂಡದೊಳಗಾಗಿ ಇಲ್ಲ,ಸಕಲೈಶ್ವರ್ಯವುಳ್ಳವಗೆ ನಾನಾವಿಧ ಸ್ವರ್ಗವುಂಟೂ, ಬ್ರಹ್ಮಾಂಡದೊಳಗೆ ಈ ಸ್ವರ್ಗಕ್ಕೆ ಸಮಾನವಾದ ರಮ್ಯಕದೊಳಗೆ ಸಕಲರೂ ಸ್ವರ್ಗವ ಕುರಿತು ತಪ್ಪೋವ್ರತಾದಿಗಳಮಾಡುತ್ತಿಹರೂ, ಸ್ವರ್ಗಕ್ಕಿಂತಲೂ ಪಾತಾಳಾದಿಲೋಕಗಳು ರಮ್ಯವೆಂದು ದೇವಸಭೆಯಲ್ಲಿ ದೇವಋಷಿಯಾದ ನಾರದನು ಪೇಳ್ದನೂ, ಅಲ್ಲಿ ದಿವದಲ್ಲಿ ಸೂರ್ಯಪ್ರಕಾಶ ಬಿಸಲೂ ಇಲ್ಲ, ರಾತ್ರಿಯಲ್ಲಿ ಚಂದ್ರಪ್ರಭೆಯುಯಿಲ್ಲ ಛಳಿಯಿಲ್ಲ, ಸೂರ್ಯ ಚಂದ್ರ ಸಂಚಾರವಿಲ್ಲದಕಾರಣಕಾಲಪರಿಮಾಣವಿಲ್ಲ, ಅಲ್ಲಿ ಸಕಲವಾದ ವನಗಳೂ ರಮ್ಯವಾದ ವಸ್ತುಗಳೂಉಂಟು, ಅಲ್ಲಿ ಹಾಟಕೇ

ಶ್ವರನೆಂಬ ಈಶ್ವರನು ಪೂಜೆಗೊಂಬನು, ಪಾತಾಳಲೋಕಕ್ಕಿಂತಲೂ ಮೇರು ಬಳಸಿರ್ದ ಇಳಾವೃತ ರಮ್ಯವರ್ಷವು; ಅಲ್ಲಿರ್ದ ಜನರು ಸ್ವರ್ಗಭೋಗಯುತರೂ ನಿತ್ಯಯೌವ್ವನವುಳ್ಳವರು, ಈ ಭೋಗಭೂಮಿಯು ನಿನ್ನಂಥಾ ಬಹುಪುಣ್ಯವಮಾಡಿದವರ್ಗೆ ಸತ್ಯವಾದಿಗಳಗೆ ಪುತ್ರಮಿತ್ರಕಳತ್ರರಲ್ಲಿ ನಿಸ್ಪೃಹರಾದವರ್ಗೆ ಪರೋಪಕಾರಕ್ಕೋಸ್ಕರ ದೇಹಪಾಟವ ವಿದ್ದವರಿಗೆ ದೊರಕೊಂಬುದು, ಸಮುದ್ರಮಧ್ಯದಲ್ಲಿ ನಾನಾದ್ವೀಪಗಳುಂಟು, ಆದ್ವೀಪಂಗಳು ಜಂಬೂದ್ವೀಪಕ್ಕೆ ಸರಿಯಿಲ್ಲ, ಅಲ್ಲಿರ್ದ ನವವರ್ಷ ಭೂಮಿಯೊಳಗೆ ಕಿಂಪುರುಷ ಮೊದಲಾದ ಎಂಟುವರ್ಷಗಳೂ ದೇವಯೋಗ್ಯಗಳು, ಒಂಭತ್ತು ಸಾವಿರ ಯೋಜನ ವಿಸ್ತೀರ್ಣವಾದ ಮೇರುವಿಗೆ ದಕ್ಷಿಣದಲ್ಲಿರ್ದ ಭೂಮಿ ಅಂತರ್ವೇದಿ, ಅದರೊಳು ಕುರುಕ್ಷೇತ್ರವಧಿಕ, ಅದರಿಂ ಪ್ರಯಾಗೆಯು ಸಕಲಯಾಗತೀರ್ಥಂಗಳಿಂದಧಿಕವಾದ ಕಾರಣ ಪ್ರಯಾಗೆಯೆನಿಸಿಕೊಂಡಿತು ಆ ಕ್ಷೇತ್ರದರ್ಶನ ಮನನ ಸ್ನಾನದಾನಮೊದಲಾದವಗಳ ಕಾಮ್ಯದಿಂ ಮಾಡಲು ಸ್ವರ್ಗಭೋಗವು, ಕಾಮ್ಯವಿಲ್ಲದೆ ಈಶ್ವರಾರ್ಪಣದಿಂ ಮಾಡಲು ಮೋಕ್ಷವು, ಈ ಪ್ರಯಾಗಕ್ಕೂ ಸತ್ಯಲೋಕಕ್ಕೂ ಭೇದವಿಲ್ಲ, ಅಲ್ಲಿ ಬಲಾತ್ಕಾರದಿಂದ ದೇಹವಂ ತ್ಯಜಿಸಲೂ ಆತ್ಮಹತ್ಯಾದೋಷವಿಲ್ಲ, ಪ್ರಯಾಗತೀರ್ಥದಲ್ಲಿ ಅಸ್ಥಿ ಯೆಷ್ಟು ಕಾಲವಿದ್ದೀತೋ ಅಷ್ಟು ಕಾಲಪರ್ಯಂತರವೂ ದೇವತ್ವವುಂಟು, ಅಂಥಾಪ್ರಯಾಗಕ್ಕಿಂತಲೂ ಕಾಶೀಕ್ಷೇತ್ರವಧಿಕವು, ಈ ಕಾಶೀಕ್ಷೇತ್ರವನ್ನು ಪ್ರಳಯಂಗಳಲ್ಲಿ ಈಶ್ವರನು ತ್ರಿಶೂಲಾಗ್ರದಲ್ಲಿ ಧರಿಸಿಕೊಂಡು ಇಹನೂ, ಈ ಕ್ಷೇತ್ರವು ಭೂಮಿಯಲ್ಲಿ ಇದ್ದುದಾದರೆಯೂ ಅಂತರಿಕ್ಷದಲ್ಲಿ ಇದ್ದಂಥಾದ್ದು, ಅಲ್ಲಿ ಸದಾಕಾಲವು ಕೃತಯುಗಕ್ಕೆ ಸಮಾನವಾಗಿ ಇರುವದು, ಸರ್ವಕಾಲವೂ ಗ್ರಹಣಕ್ಕೆ ಸಮಾನವು, ಗುರುಶುಕ್ರ ದೋಷವಿಲ್ಲ, ಆವಾಗ ಉತ್ತರಾಯಣವೋ ಆಗನಿತ್ಯವೂ ಮಹೋದಯಕ್ಕೆ ಸಮಾನವು, ನಿತ್ಯವೂ ಪುಣ್ಯಕಾಲ, ನಿತ್ಯವೂ ಮಂಗಳಪ್ರದ, ಕಾಶಿಹೊರತಾಗಿ ಹದಿನಾಲ್ಕುಲೋಕಂಗಳಂ ಸೃಷ್ಟಿಮಾಡುವ ತಾನು ಈ ಕ್ಷೇತ್ರವಂ ನಿರ್ಮಿಸಿದವ ವಿಶ್ವಪತಿ, ಈ ಕ್ಷೇತ್ರಕ್ಕೆ ಯಮನ ಪಾರುಪತ್ಯವಿಲ್ಲ, ಅಲ್ಲಿ ಏನಾದರೂ ಪಾರುಪತ್ಯವ ಮಾಡಿದವರ ಕಾಲಭೈರವನುಶಿಕ್ಷಿಸುವನು, ಅಧಿಕಪಾಪ

ವನಮಾಡಿದವರು ರುದ್ರಪಿಶಾಚರಪರು, ಕಾಶಿಯಲ್ಲಿ ಪಾಪವಮಾಡಿದರೆ ಕಾಮುಕನು ತನ್ನ ತಾಯ ಮುಟ್ಟಿದಂತೆ, ಕಾಶಿಯಲ್ಲಿ ಪಾಪವನಮಾಡಿದರೆ ಪರಸ್ತ್ರೀ ಪರವಿತ್ತಗಳಿಗೆ ಆರು ಅಪೇಕ್ಷಿಸುವರೋ ಅವರು ವಿಶ್ವೇಶ್ವರನ ಭಕ್ತರಲ್ಲ, ಪರದ್ರೋಹಿಗಳು, ಸ್ಮರಣೆಯಿಲ್ಲದವರ್ಗೆ, ಪರಸಂತಾಪಬಡಿಸುವರ್ಗೆ, ಈ ಕ್ಷೇತ್ರನಿವಾಸ ದೊರಕದು, ಬ್ರಹ್ಮಜ್ಞಾನವಿಲ್ಲದೆ ಮೋಕ್ಷವಿಲ್ಲವೆಂಬುದು ಸಿದ್ಧ, ಅಂಥಾ ಬ್ರಹ್ಮಜ್ಞಾನದಿಂದ ಚಾಂದ್ರಾಯಣಾದಿವ್ರತಗಳಿಂದ ಯೋಗಾಭ್ಯಾಸವಧಿಕವು, ಇಂಥಾ ಯೋಗಾಭ್ಯಾಸಹೊರತಾಗಿ ತತ್ವಜ್ಞಾನ ದೊರಕದು, ಆ ಯೋಗಾಭ್ಯಾಸಕ್ಕೆ ದೂರಶ್ರವಣ, ದೂರದೃಷ್ಟಿ, ಪರಕಾಯಪ್ರವೇಶವೆಂಬ ಬಹುವಿಧಂಗಳುಂಟು, ಅದುಕಾರಣ ಒಂದು ಜನ್ಮದಿಂದತತ್ವಜ್ಞಾನದೊರಕದು, ಕಾಶೀಕ್ಷೇತ್ರದಲ್ಲಿ ಜಪತಪಯೋಗಾಭ್ಯಾಸವ್ರತಗಳು ಹೊರತಾಗಿ ಸುಮ್ಮನೆ ಆದರು ಅಲ್ಲಿರ್ದು ದೇಹತ್ಯಾಗವ ಮಾಡಿದ ಮಾತ್ರದಲ್ಲಿಯೆ ಮೋಕ್ಷದೊರಕುವದು, ಎಂದು ಬ್ರಹ್ಮನು ಗಣಂಗಳಿಗೆ ಶಿವಶರ್ಮನಿಗೂ ನಿರೂಪಿಸಿದನು ಎಂದು ಅಗಸ್ತ್ಯನು ಲೋಪಾಮುದ್ರೆಗೆ ನಿರೂಪಿಸಿದ ಅರ್ಥವನ್ನು ವ್ಯಾಸರು ತನಗರುಹಿದರೆಂದು ಸೂತಪುರಾಣಿಕನು ಶೌನಕಾದಿಋಷಿಗಳಿಗೆಪೇಳ್ದನೆಂಬಲ್ಲಿಗೆಅಧ್ಯಾಯಾರ್ಥ * ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರ ಪುರವರಾಧೀಶ ಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಮಹರ್ಲೋಕ ಜನೋಲೋಕ ತಪೋಲೋಕ ಸತ್ಯಲೋಕ ವರ್ಣನೆಯೆಂಬ ಇಪ್ಪತ್ತೆರಡನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ ಶ್ರೀ * * * * * *

ಶ್ರೀವಿಶ್ವೇಶ್ವರಾಯನಮಃ.

ಇಪ್ಪತ್ತ್ಮೂರನೇ ಅಧ್ಯಾಯ.

ವಿಷ್ಣು ಪಟ್ಟಾಭಿಷೇಕ.

ಅನಂತರದಲ್ಲಿ ಶಿವಶರ್ಮನು ಎಲೈ ಜಗತ್ಕರ್ತನಾದ ಬ್ರಹ್ಮದೇವನೆ, ನಿನಗೆ ಬಂದು ಬಿನ್ನಹವುಂಟೂ ಎನಲೂ ಬ್ರಹ್ಮನಿಂತೆಂದನು; ಕೇಳೈ ಶಿವಶರ್ಮನೆ, ನಿನ್ನ ಅಭಿಪ್ರಾಯವನ್ನು ಬಲ್ಲೆನೂ, ಈ ಗಣಂಗಳು ಸರ್ವಜ್ಞರೂ, ನಿನ್ನ ಮೋಕ್ಷಪ್ರಾಪ್ತಿಯು ನಿನಗೆಹೇಳ ಯಾರು ಎಂದು ಬ್ರಹ್ಮನುಡಿಯಲೂ? ಆವರು ಬ್ರಹ್ಮನಿಗೆ ವಂದಿಸಿ ವಿಮಾನವನೇರಿ ವೈಕುಂಠಕ್ಕೆ ತೆರಳುವಾಗ ಶಿವಶರ್ಮನು ಗಣಂಗಳಿಗಿಂತೆಂದನೂ-ಎಲೈ ಗಣಂಗಳಿರಾ, ನಾವು ಎಷ್ಟು ದೂರಬಂದೆವು, ಇನ್ನು ಎಷ್ಟುದೂರ ನಡೆಯಬೇಕು, ಅಯೋಧ್ಯೆ ಮೊದಲಾದ ಮುಕ್ತಿಕ್ಷೇತ್ರಗಳಂಬಿಟ್ಟು ವಿಶ್ವಪತಿಯಿದ್ದ ಕಾಶಿಯಲ್ಲಿ ಮುಕ್ತಿಯುಂಟಾಗಿಯಿರುವುದಾದ ಕಾರಣ ಮಾಯಾಪುರಿಯಲ್ಲಿ ದೇಹತ್ಯಾಗವಂ ಮಾಡಿಯೂ ನನಗೆ ಮುಕ್ತಿಯಿಲ್ಲವಾದ ಕಾರಣ ಸಕಲ ಲೋಕವ ಕಂಡೆನು; ನನಗೆ ಲೋಕವಾವುದೂ ಎಂದು ಬಿನ್ನೈಸಲೂ ಗಣಂಗಳಂತೆಂದರೂ-ಕೇಳೈ ಶಿವಶರ್ಮನೆ, ವಿಷ್ಣುವಿನ ಅನುಗ್ರಹದಿಂದಾ ನಮಗೆ ತ್ರಿಕಾಲಜ್ಞಾನವುಂಟು, ನೀನು ಕೇಳಿದ ಪ್ರಶ್ನೆಗೆ ಉತ್ತರವಂ ಕೊಟ್ಟೇವೂ, ಸೂರ್ಯ ಚಂದ್ರಾದಿಕಿರಣಂಗಳು ಬೆಳಗುವ ಲೋಕಂಗಳಲ್ಲವೂ ಭೂಲೋಕವೆನಿಸಿಕೊಂಬವೂ. ಈ ಭೂಮಿ ಎಷ್ಟು ಅಗಲವೋ? ಆಕಾಶವೂ ಈ ಭೂಮಿಗೆ ನಾಲ್ಕುಮಡಿ ಅಗಲ, ಈ ಭೂಮಿಗೆ ಲಕ್ಷಯೋಜನದಲ್ಲಿ ಸೂರ್ಯನಿಹನೂ. ಎರಡುಲಕ್ಷದಲ್ಲಿ ಚಂದ್ರನಿಹನೂ. ಮೂರು ಲಕ್ಷದಲ್ಲಿ ನಕ್ಷತ್ರಮಂಡಲ, ಐದುಲಕ್ಷದಲ್ಲಿ ಬುಧನಿಹನು. ಏಳುಲಕ್ಷದಲ್ಲಿ ಶುಕ್ರನಿಹನು. ಒಂಭತ್ತುಲಕ್ಷದಲ್ಲಿ ಅಂಗಾರಕನಿಹನು. ಹನ್ನೊಂದುಲಕ್ಷದಲ್ಲಿ ಗುರುವಿಹನೂ. ಹದಿಮೂರುಲಕ್ಷದಲ್ಲಿ ಶನಿಯಿಹನು. ಹದಿನಾಲ್ಕುಲಕ್ಷದಲ್ಲಿ ಸಪ್ತಋಷಿಗಳಿಹರೂ. ಹದಿನೈದುಲಕ್ಷದಲ್ಲಿ ಧ್ರುವನಿಹನೂ. ಪಾದದಿಂ ನಡೆವ ಪ್ರಾಣಿಗಳಿಗೆ ಆವಾಸವಾದುದೆಲ್ಲವೂ ಭೂಲೋಕವು, ಆದ್ದರಿಂದಾ ಸೂರ್ಯಲೋಕ

ವು ಭುವರ್ಲೋಕವೆನಿಸುವದೂ. ಸೂರ್ಯನಿಂದಾ ಧ್ರುವಲೋಕ ಪರ್ಯಂತವೂ ಸುವರ್ಲೋಕವೆನಿಸುವದೂ. ಈ ಭೂಮಿಗೆ ಕೋಟಿ ಪ್ರಮಾಣದ ಮೇಲೆ ಮಹರ್ಲೋಕವೂ, ಎರಡುಕೋಟಿಯ ಮೇಲೆ ಜನೋಲೋಕವು, ನಾಲ್ಕುಕೋಟಿಯ ಮೇಲೆ ತಪೋಲೋಕವು, ಭೂಮಿಗೆಎಂಟುಕೋಟಿಯಮೇಲೆ ಸತ್ಯಲೋಕವು, ಆ ಸತ್ಯಲೋಕಕ್ಕೆ ಎಂಟು ಕೋಟಿಯ ಮೇಲೆ ವೈಕುಂಠವೂ, ವೈಕುಂಠದಮೇಲೆ ಹದಿನಾರು ಕೋಟಿಯಲ್ಲಿ ಕೈಲಾಸವೂ, ಅಲ್ಲಿ ಸ್ಕಂದಗಣಪತಿ ನಂದೀಸಮೇತನಾದ ಸಾಂಬಸದಾಶಿವನು ಲೀಲೆಯಿಂದೇಹಧಾರಿಯಾಗಿ ವಿಶ್ವೇಶ್ವರನೆಂದೆನಿಸಿದ ಶಿವನಾಕಾರವೇ ಜಗತ್ತು, ಆತನು ಬ್ರಹ್ಮಾದಿಗಳಿಗೆ ಶಿಕ್ಷಕನು. ಆತಂಗೆ ಶಿಕ್ಷಕರಿಲ್ಲ. ತಾನುತ್ರಿಮೂರ್ತಿಯಾಗಿ ಸೃಷ್ಟಿಸ್ಥಿತಿ ಸಂಹಾರಂಗಳಂ ಮಾಳ್ಪನು. ಅದ್ವಿತೀಯನು, ಸ್ವತಂತ್ರನು, ಆತನಿಗೆ ಪ್ರವರ್ತಕ ನಿವರ್ತಕರಿಲ್ಲ, ನಿಗ್ರಹವಹದ ವಸ್ತು ಪರಬ್ರಹ್ಮವೆನಿಸಿಕೊಂಡಂಥಾ ಸರ್ವವ್ಯಾಪಿಯು, ನಿತ್ಯನು, ಅದ್ವೈತನು, ಸರ್ವಕಾರಣನೂ, ಕಾರಣಪರನು, ಆನಂದರೂಪನು, ಬ್ರಹ್ಮಾದಿಗಳಿಗಗಮ್ಯನು, ಸ್ವಯಂಪ್ರಕಾಶಕನು, ತನ್ನಂತಾನೆತಿಳಿಯಲ್ಪಟ್ಟವನು, ಸರ್ವಪ್ರಾಣಿಗಳಹೃದಯಸ್ಥನು, ಯೋಗಿಗಮ್ಯನು, ನಾಮರಹಿತನು, ಪ್ರತ್ಯಕ್ಷಪ್ರಮಾಣಂಗಳಿಂತಿಳಿಯಲ್ಪಡುವನು, ಅರೂಪನು, ನಾನಾರೂಪನು. ಸಕಲರಲ್ಲಿಯು ಆಯಿದು ಕಾಣಿಸಿಕೊಳ್ಳದಾತನು, ಅನಂತನು, ಸ್ವಭಾವದಿಂನಾಶವಿಲ್ಲದವನು, ಕರ್ಮವಿಲ್ಲದವನಾದರೂ ಕರ್ಮವುಳ್ಳವನು. ಆತನ ಸ್ವರೂಪವೆಂತೆನೆ! ಶಿರಸ್ಸಿನಲ್ಲಿ ಅರ್ಧಚಂದ್ರನು, ಕಂಠದಲ್ಲಿ ಕಪ್ಪು, ಹಣೆಯಲ್ಲಿ ಉರಿಗಣ್ಣು, ಅರ್ಧಶರೀರ ಸ್ತ್ರೀರೂಪ, ಸರ್ಪಭೂಷಣನು, ಜಡೆಯಲ್ಲಿಗಂಗೆಯು, ಮನ್ಮಥದಹನದಿಂದಾದ ಭಸ್ಮೋದ್ಧೂಳನವುಳ್ಳವನು, ವೃಷಭವಾಹನನು, ಪಿನಾಕಪಾಣಿಯು, ಗಜಚರ್ಮಾಂಬರನು, ಪಂಚಮುಖನು, ಮೃತ್ಯು ಮೊದಲಾದವರಪರಿಹಾರವ ಮಾಡಿದವನು, ಶರಣಾಗತವತ್ಸಲನು, ಅವರವರಿಗೆ ತಕ್ಕಂಥಾ ಗತಿಪ್ರದನು, ಅಗೋಚರನು, ವರಪ್ರದನು, ಸುಖರೂಪನು, ರೂಪಾತೀತನು, ನಾಮರೂಪನು, ಆಕಾರನಿರಾಕಾರವೆಂಬ ಎರಡು ರೂಪವುಳ್ಳವನು, ಸಕಲಮಾವ್ಯಾಪಿಸಿಕೊಂಡು ಭುಕ್ತಿ ಮುಕ್ತಿಗೆ ಕಾರಣನಾಗಿ ಇರುವಂಥಾವನು,

ನಾಮರೂಪ ರಹಿತವಾದ ಪರಬ್ರಹ್ಮನು, ಆಕಾರದಿಂ ಸಾಂಬಶಿವನು, ತನ್ನಿಂ
ದಾ ನಿರ್ಮಿಸಲ್ಪಟ್ಟ ಚರಾಚರವೆಲ್ಲವೂ ಸಾಂಬಶಿವನ ಅಧೀನವಂ ಮಾಡಿದವ
ನು, ಆ ಸಾಂಬಶಿವನು ವಿಷ್ಣುಮೂರ್ತಿಯಾಗಿ ಆ ವಿಷ್ಣುವೆ ತನ್ನ ಲೀಲೆ
ಯಿಂ ಕಾಶೀಕ್ಷೇತ್ರದಲ್ಲಿ ಕ್ರೀಡಿಸುತ್ತಾ ಇದ್ದಾನೂ. ಆ ಶಿವನೆ ವಿಷ್ಣುವಾದ
ಕಾರಣಾ ಶಿವವಿಷ್ಣುಗಳಿಗೆ ಅಣು ಮಾತ್ರವೂ ಭೇದವಿಲ್ಲ. ಆವನಾನೊಬ್ಬ
ನು ಹರಿ ಹರಾದಿಗಳಿಗೆ ಭೇದವಂ ಮಾಡಿದವನು ಇಪತ್ತೆಂಟುಕೋಟಿ ನಾ
ಯಕನರಕದಲ್ಲಿ ಸೂರ್ಯಚಂದ್ರಾದಿಗಳುಳ್ಳ ಪರ್ಯಂತರ ಬಿದ್ದು ನರಳುತ್ತಿಹ
ನು. ಪೂರ್ವದಲ್ಲಿ ಆ ವಿಶ್ವಪತಿಯು ಬ್ರಹ್ಮ ಮೊದಲಾದ ಸಮಸ್ತ ದೇವರ್ಕಳ
ನು ವಿದ್ಯಾಧರ ಉರಗ ಸಿದ್ಧ ಗಂಧರ್ವ ಚಾರಣಾದಿಗಳಂ ಕರೆಸಿ ಚಂದ್ರತಾ
ರಾಬಲವುಳ್ಳ ಶುಭತಿಥಿ ಶುಭಲಗ್ನದಲ್ಲಿ ತನ್ನ ಸಿಂಹಾಸನ ಸಮೀಪದಲ್ಲಿ ತನ್ನ
ಸಿಂಹಾಸನಕ್ಕೆ ಸಮಾನವಾದ ಸಿಂಹಾಸನದಲ್ಲಿ ಕುಳ್ಳಿರಿಸಿ, ವಿಶ್ವಕರ್ಮನಿಂ ಲ
ಕ್ಷಕೋಟಿ ಸುವರ್ಣದ ಸಲಾಕಿಗಳಿಂದೊಪ್ಪುವ ಮೇಲೆ ರತ್ನದ ಕಲಶದಿಂದೊ
ಪ್ಪುವ ಸಾವಿರ ಯೋಜನದಗಲವಾದ ನವರತ್ನಮಯವಾದ ಪಟ್ಟೆಯ ಜಗಜಂ
ಪಿನ ಶ್ವೇತಛತ್ರವನಿತ್ತು, ಪಟ್ಟಾಭಿಷೇಕಕ್ಕೆ ಯೋಗ್ಯವಾದ ನಾನಾವಿಧ ಓಷ
ಧಿಗಳಿಂದ ಪ್ರತ್ಯಕ್ಷವಾಗಿ ಬಂದ ತೀರ್ಥೋದಕಗಳಂ ಪಂಚಗವ್ಯ ಬಿಳಿಸಾ
ಸುವೆ ಅಕ್ಷತೆ ದಧಿ ದೂರ್ವೆಗಳಂ ಮೂರ್ತಿಸ್ವರೂಪವಾಗಿ ಬಂದ ವೇದಗಳಿಂ
ದ ದೇವತೆಗಳ ಋಷಿಗಳ ಬ್ರಾಹ್ಮಣರ ಸರ್ಪಗಳ ಬಗೆಬಗೆಗೆ ಹದಿನಾರು
ಮಂದಿ ಕೊಡಗೂಸುಗಳಂ ಕರೆಸಿಕೊಳ್ಳಲು, ವೀಣೆ ಮದ್ದಳೆ ಶಂಖ ಭೇ
ರಿ ಇವು ಮೊದಲಾದ ವಾದ್ಯಗಳಂ ದೇವತಾಸ್ತ್ರೀಯರ ಗಾನಂಗಳಿಂದಲೂ,
ವೇದಧ್ವನಿಗಳಿಂದಲೂ ಬ್ರಹ್ಮಾಂಡಪರಿಪೂರ್ಣವಾಗೆ! ವಿಷ್ಣುವಿನ ಶಿರಸ್ಸಿನಲ್ಲಿ
ರತ್ನದ ಕಿರೀಟವನಿಕ್ಕಿ, ರತ್ನದ ಕಂಕಣವ ಕಟ್ಟಿ, ಹಣೆಗೆ ಮುತ್ತಿನ ಭಾಷಿಂಗ
ವ ಕಟ್ಟಿ, ಪಾರ್ವತೀದೇವಿಯರಿಂ ಅಲಂಕರಿಸಲ್ಪಟ್ಟ ಮಹಾಲಕ್ಷ್ಮೀಸಮೇ
ತನಾದ ವಿಷ್ಣುವಿಗೆ ವಿಶ್ವಪತಿಯೂ ತನ್ನ ಹಸ್ತದಿಂ ಪಟ್ಟಾಭಿಷೇಕವಂ ಮಾ
ಡಿ, ಬ್ರಹ್ಮಾಂಡದೊಳಗಿರ್ದ ತನ್ನ ಅಷ್ಟಮಹದೈಶ್ವರ್ಯಗಳಂ ಕೊಟ್ಟನು. ಬ್ರ
ಹ್ಮನು ನಮಸ್ಕರಿಸಿ ಸ್ತುತಿಸುತ್ತಿಂತೆಂದನು;-ಎಲೈ ದೇವರ್ಕಳಿರಾ, ಈ ವಿಷ್ಣು
ವು ನನ್ನ ನಮಸ್ಕಾರಕ್ಕೆ ಯೋಗ್ಯನು, ನೀವೂ ನಮಸ್ಕರಿಸಿ ಎನಲು, ವಿಷ್ಣು

ವಿಗೆ ನಮಸ್ಕಾರವಂ ಮಾಡಿದರು; ಅನಂತರದಲ್ಲಿ-ಬ್ರಹ್ಮಗಣಂಗಳು, ಮರುತ್ತುಗಳು, ಸನಕಾದಿಗಳು,ದೇವರ್ಷಿಗಳು,ವಿದ್ಯಾಧರರು,ಯಕ್ಷರು,ಗಂಧರ್ವರು,ರಾಕ್ಷಸರು,ಅಪ್ಸರಸ್ತ್ರೀಗಳು,ಕಿನ್ನರರು,ಗುಹ್ಯಕರು,ಚಾರಣರು,ಭೂತಗಳು,ಶೇಷವಾಸುಕಿತಕ್ಷಕಮೊದಲಾದ ಫಣಿಗಳು, ಪಕ್ಷಿಗಳು, ಸಕಲ ಸ್ಥಾವರಜಂಗಮಂಗಳಾದ ಎಲ್ಲರಕ್ಕೆಯ್ಯಲೂ ಸಾಂಬಶಿವನು ನಮಸ್ಕಾರವಂ ಮಾಡಿಸಿ ತಾನೂವಿಷ್ಣುವಿಗೆ ಪಟ್ಟಾಭಿಷೇಕವಂ ಮಾಡಿದನು,ಇಂತೆಂದನು ಸಕಲ ಭೂತಗಳಿಗೂ ಕರ್ತನಾಗಿ,ಸರ್ವರಿಗೂ ರಕ್ಷಕನಾಗಿ, ದುಷ್ಟಜನಗಳಿಗೆ ಶಿಕ್ಷಕನಾಗಿ,ಸಕಲರಿಗೂ ಪೂಜ್ಯನಾಗಿ, ಜಯನಾಗಿ,ಸರ್ವರಿಗೂ ಧರ್ಮಾರ್ಥಕಾಮ ಮೋಕ್ಷಂಗಳಂ ಕೊಟ್ಟು ದುಷ್ಟನಿಗ್ರಹವಂ ಶಿಷ್ಟಪರಿಪಾಲನೆಯಂ ಮಾಡಿ, ಯುದ್ಧದಲ್ಲಿ ಎನಗೆ ಮೊದಲಾಗಿ ಅಸಾಧ್ಯನಾಗಿ, ಇಛ್ಛಾಶಕ್ತಿ ಕ್ರಿಯಾಶಕ್ತಿಯುಳ್ಳವನಾಗಿ, ಸುರಾಸುರರ್ಗೆ ಅಸಾಧ್ಯವುಪ್ಪವಾಯೆಯಂನೀನು ಪರಿಗ್ರಹಿಸು. ಎನ್ನ ಎಡವಭುಜವು ನೀನು, ಈ ಬ್ರಹ್ಮನು ಬಲದಭುಜವು,ಸೃಷ್ಟಿ ಸ್ಥಿತಿ ಲಯವೆಂಬ ಮೂರಕ್ಕೂ ನೀನೇಕರ್ತನು. ನಿನ್ನಶತ್ರುಗಳೇ ಎನ್ನಶತ್ರುಗಳು, ನಿನ್ನ ಭಕ್ತರೇ ಎನ್ನ ಭಕ್ತರು, ನಿನ್ನ ಭಕ್ತರಿಗೆಲ್ಲ ತಾನು ಮೋಕ್ಷವನಿತ್ತೇನು ಎಂದು ಸಾಂಬಸದಾಶಿವನು ವಿಷ್ಣುವಿಗೆ ಪೇಳಿ ವೈಕುಂಠಾಧಿಪತ್ಯವುಂ ಕೊಟ್ಟು,ಕೈಲಾಸದಲ್ಲಿ ಪಾರ್ವತೀದೇವಿಸಮೇತನಾಗಿ ಸುಖದಲ್ಲಿ ಇರ್ದನೂ. ಅಂದು ಮೊದಲಾಗಿ ವಿಷ್ಣುವು ದುಷ್ಟನಿಗ್ರಹ ಶಿಷ್ಟಪರಿಪಾಲನೆಯಂ ಮಾಡಿಕೊಂಡು ತ್ರೈಮೂರ್ತಿಸ್ವರೂಪನಾಗಿ ಭುಕ್ತಿಮುಕ್ತಿಪ್ರದಾಯಕನಾಗಿ ಸಕಲ ದೇವತೆಗಳಿಗೂ ಕರ್ತನಾಗಿ ಮೋಕ್ಷಕ್ಕಧಿಪತಿಯಾಗಿ ಇಹನು. ಆತನಿಂದ ನಿನಿಗೆ ಮುಂದಾಗತಕ್ಕಗತಿಯಂಪೇಳ್ದಪೆವೆಂದು ಈ ಅಧ್ಯಾಯವಂ ಕೇಳಿದವರ್ಗೆ ಫಲವಂ ಪೇಳಿದನು. ಈ ಅಧ್ಯಾಯಮಂ ಏಕಚಿತ್ತದಿಂದ ಕೇಳಿದವರು ಇಹದಲ್ಲಿಸುಖವನನುಭವಿಸಿ ಕಾಶಿಯಲ್ಲಿ ಜನನವಾಗಿ ವಿಶ್ವೇಶ್ವರನಿಂದ ತಾರಕ ಬ್ರಹ್ಮೋಪದೇಶವಂ ಪಡದು ಮೋಕ್ಷವನೈದುವರು.ಯಜ್ಞೋತ್ಸವ,ವಿವಾಹ, ಸಮಸ್ತಶುಭಪಟ್ಟಾಭಿಷೇಕ, ದೇವತಾಪ್ರತಿಷ್ಠೆ,ಪಾರುಪತ್ಯ,ನೂತನಗೃಹಪ್ರವೇಶ ಮೊದಲಾದ ಸಮಯಂಗಳಲ್ಲಿ ಪಠಿಸಲಂ ಕಾರ್ಯಸಿದ್ಧಿ,ಶುಭವಹುದು, ಹರಿಹರಾದಿಗಳಿಗೆ ಸಂತೋಷವಂ

ದು ಗಣಂಗಳು ಶಿವಶರ್ಮನಿಗೆ ಹೇಳ್ದ ಅರ್ಥವಂ ಅಗಸ್ತ್ಯರು ಲೋಪಾಮುದ್ರೆಗೆ ನಿರೂಪಿಸಿದರೆಂದು ವ್ಯಾಸರು ತನಗರುಹಿದರೆಂದು ಸೂತರು ಶೌನಕಾದಿಋಷಿಗಳಿಗೆ ಹೇಳ್ದರೆಂಬಲ್ಲಿಗೆ ಅಧ್ಯಾಯಾರ್ಥ * ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರ ಪುರವರಾಧೀಶ ಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ವಿಷ್ಣುವಿನಪಟ್ಟಾಭಿಷೇಕವೃತ್ತಾಂತವೆಂಬ ೨೩ ಇಪ್ಪತ್ತಮೂರನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ ಶ್ರೀ * *

ಇಪ್ಪತ್ತಮೂರನೇ ಅಧ್ಯಾಯ ಸಂಪೂರ್ಣವು.

ಶ್ರೀ ವಿಶ್ವೇಶ್ವರಾಯನಮಃ.

ಇಪ್ಪತ್ತನಾಲ್ಕನೇ ಅಧ್ಯಾಯ.

ಶಿವಶರ್ಮನ ಮುಕ್ತಿಪ್ರಾಪ್ತಿ.

ಅನಂತರದಲ್ಲಿ ಗಣಂಗಳಂತೆಂದರು-ಕೇಳ್ಳೈ ಶಿವಶರ್ಮನೆ, ನಿನಗೆ ಮುಂದೆ ಆಹಂಥಾಫಲವನ್ನು ಕೇಳು-ನೀನು ವಿಷ್ಣುಲೋಕದಲ್ಲಿ ಬ್ರಹ್ಮನ, ಒಂದು ವರ್ಷಪರ್ಯಂತರ ಅಪ್ಸರಸ್ತ್ರೀಯರೊಡನೆ ಸಕಲ ಭೋಗಂಗಳನ್ನು ಅನುಭವಿಸಿ, ಆ ಪುಣ್ಯಕ್ಷಯದಿಂದ ಭೂಲೋಕದಲ್ಲಿ ನಂದಿವರ್ಧನವೆಂಬ ಪಟ್ಟಣಕ್ಕೆ ರಾಜನಾಗಿ, ಆ ರಾಜ್ಯಕ್ಕೆ ಒಡೆಯನಾಗಿ ಚತುರಂಗಬಲಸಾಮಗ್ರಿಯುಳ್ಳವನಾಗಿ ಸರ್ವಾಭರಣಭೂಷಿತರಾದ ಜನರುಗಳು ಕೆರೆ ತೋಂಟ ವನ ಸಕಲ ದಾನಂಗಳಲ್ಲಿ ನಿರತರಾಗಿ, ನಿತ್ಯಕರ್ಮನಿರತರಾದಂಥಾ ಧರ್ಮಾತ್ಮರು ಸಂಪೂರ್ಣವಾದ ಪೈರುಗಳು ಕ್ಷೇತ್ರಗಳು ಧರ್ಮನಿಷ್ಠರಾದ ಸುಭಾಷಿತರಾದ ಪ್ರಜೆಗಳು, ರಮ್ಯಂಗಳಾದ ದೇವಾಲಯಂಗಳೂ, ತೃಣಕಾಷ್ಟ ಜಲಸಮೃದ್ಧಿಗಳು, ಕಾಮಧೇನುವಿಗೆ ಸರಿಯಾದ ಕೀಲಾರಗಳೂ,

ಯಜ್ಞಶಾಲೆಗಳು, ಯೂಪಸ್ತಂಭಗಳು, ಅಗ್ರಹಾರಗಳು, ಫಲಪುಷ್ಪಯುಕ್ತ ವಾದ ಉಪವನ ಉದ್ಯಾನಂಗಳೂ, ಕಮಲಗಳುಳ್ಳ ಕೊಳಂಗಳೂ ಇವು ಮೊದಲಾದ ವಸ್ತುಗಳುಳ್ಳಂಥಾ ರಾಜ್ಯ; ಆ ರಾಜ್ಯದಲ್ಲಿ ಚತುರಂಗಬಲ ಸಮೃದ್ಧಿಯುಳ್ಳ ಅನೇಕ ದುರ್ಗಗಳೂ, ಎಲ್ಲಿ ನೋಡಿದರೂ ನದಿಗಳೂ, ನದಿಗಳ ಕಾಲುವೆಗಳೂ, ಆ ರಾಜ್ಯದಲ್ಲಿ ಕುಟಿಲವಿಲ್ಲದಿರುವವೂ, ಕುಲಜನರಲ್ಲದೆ ಅಕುಲಜನರಿಲ್ಲ, ನಿಂದಕರಿಲ್ಲ, ವಿಭ್ರಮವು, ಸ್ತ್ರೀಯರಲ್ಲಲ್ಲದೆ ವಿದ್ವಾಂಸರಲ್ಲಿ ಇಲ್ಲ. ತಮವು ರಾತ್ರಿಗಳಲ್ಲಿ ಅಲ್ಲದೇ ಜನಂಗಳಲ್ಲಿ ಇಲ್ಲ. ಠವಳೀ ಜೂಜಿನವರಲ್ಲಿ ಅಲ್ಲದೆ ಮಿಕ್ಕಾದವರಲ್ಲಿ ಇಲ್ಲ. ಜಡತ್ವವೆಂಬುದು ಜಲದಲ್ಲಿ ಅಲ್ಲದೆ ಮತ್ತೊಂದರಲ್ಲಿ ಇಲ್ಲ. ಬಡತನವೆಂಬುದು ಸ್ತ್ರೀಯರ ನಡುವಿನಲ್ಲಿ ಅಲ್ಲದೆ ಜನಗಳಲ್ಲಿ ಇಲ್ಲ. ಧನವಂತರಾಗಿಯೂ ಜನರು ಪಾತ್ರರಲ್ಲ, ಅನ್ಯಾಯವಿಲ್ಲ, ರಾಜ್ಯಾತಂಕವಿಲ್ಲ, ದಂಡವೆಂಬ ಶಬ್ದವಿಲ್ಲ, ರತಿಕಲಹದಿಂ ಕಲ್ಲಿನಹೃದಯರಲ್ಲದೆ ಮಿಕ್ಕಾದವರ್ಗಿಲ್ಲ, ವಿಗ್ರಹವೆಂಬುದು ದೇವತಾವಿಗ್ರಹಗಳಲ್ಲಿ ಅಲ್ಲದೆ ಜನರಲ್ಲಿ ಇಲ್ಲ, ಜ್ವರವು ಕಾಮಿಗಳಲ್ಲಿ ಅಲ್ಲದೆ ಜನರ್ಗಿಲ್ಲ, ಪುಸ್ತಕದಲ್ಲಿ ಅಲ್ಲದೆ ಬಂಧನವೆಂಬುದು ಮತ್ತೆಲ್ಲಿಯೂ ಇಲ್ಲ, ಕೊಟ್ಟೇನೆಂಬುವರಲ್ಲದೆ ಯಾಚಕರಿಲ್ಲ, ಪಾಪಿಗಳೆಂಬವರು ದರಿದ್ರರೆಂಬವರು ಇಲ್ಲ, ಮದವೆಂಬುದು ಆನೆಗಳಲ್ಲಿ ಅಲ್ಲದೆ ಮತ್ತೆಲ್ಲಿಯೂ ಇಲ್ಲ, ಕಂಟಕವೆಂಬುದು ಮುಳ್ಳುಗಳಲ್ಲಿ ಅಲ್ಲದೆ ಜನರ್ಗಿಲ್ಲ, ಬ್ರಹ್ಮಚಾರಿಗಳು ಹೊರತಾಗಿ ಭಿಕ್ಷುಕರಿಲ್ಲ, ತುಂಬಿಗಳಲ್ಲದೆ ಮಧುಪಾಯಿಗಳಲ್ಲ, ಇವು ಮೊದಲಾದ ಗುಣಂಗಳುಳ್ಳ ರಾಜ್ಯಕ್ಕೆ ಅಧಿಪತಿಯಾಗಿ ವೃದ್ಧಕಾಲನೆಂಬ ಹೆಸರಿನಿಂ ಹತ್ತು ಸಾವಿರ ಸ್ತ್ರೀಯರು ಮುನ್ನೂರುಮಂದಿ ಮಕ್ಕಳುಳ್ಳವನಾಗಿ ಬಹು ಯಜ್ಞದಿಂ ಬ್ರಾಹ್ಮಣಸಂತರ್ಪಣವಂ ಮಾಡಿ ಕೃಷ್ಣಧ್ಯಾನಪರನಾ, ಗಿ ರಾಜ್ಯಾಧಿಪತ್ಯದಿಂ ವಾಲಗದಲ್ಲಿ ಇರುತ್ತಿರಲು; ಕಾಶೀಯಿಂದ ಬಂದ ಬ್ರಾಹ್ಮಣನು ವಿಶ್ವೇಶ್ವರನು ನಿಮ್ಮಂ ರಕ್ಷಿಸಲೀ ಎಂದು ಆಶೀರ್ವಾದವಂ ಮಾಡಲು; ನೀನು ಸಂತೋಷದಿಂದ ಅವರ್ಗೆ ಸಕಲ ವಸ್ತುಗಳನಿತ್ತು ಸುಮುಹೂರ್ತದಲ್ಲಿ ಕುಮಾರಂಗೆ ಪಟ್ಟವಂ ಕಟ್ಟಿ, ಅನಂಗಲೇಖೆಯೆಂಬ ಪಟ್ಟದರಾಣಿ ಸಹಿತ ಕಾಶೀಪಟ್ಟಣಕ್ಕೆ ಹೋಗಿ, ಮಣಿಕರ್ಣಿಕೆಯಲ್ಲಿ ಸ್ನಾನವಂ ಮಾ

ಡಿ ನಾನಾದಾನಗಳನಿತ್ತು ವಿಶ್ವೇಶ್ವರನ ಪೂಜೆಯಂ ಮಾಡಿ,ಒಂದುಉಪ್ಪರಿಗೆ ಯಂ ಕಟ್ಟಿಸಿ ವೃದ್ಧಕಾಳೇಶ್ವರನೆಂಬ ನಿನ್ನ ಹೆಸರ ಲಿಂಗವಂ ಪ್ರತಿಷ್ಠೆಯಂ ಮಾಡಿಕೊಂಡು ಕಾಲದಮನವೆಂಬ ತೀರ್ಥವಂ ಕಟ್ಟಿಸಿ ಆ ಲಿಂಗಕ್ಕೆ ಅಂಗರಂ ಗ ವೈಭೋಗವಂ ಕಟ್ಟುಮಾಡಿ ಚಾಂದ್ರಾಯಣ ವ್ರತಗಳಿಂ ಶರೀರವಂ ಕೃಶವಂ ಮಾಡಿಕೊಂಡು ಇರುತ್ತಿರಲು; ಒಂದಾನೊಂದುದಿನ ಮಧ್ಯಾಹ್ನ ಕಾಲದಲ್ಲಿ ಅತಿ ಮುಪ್ಪಾದ ಒಬ್ಬ ಶಿವಭಕ್ತನು ಗರ್ಭಗಾರದಿಂ ಹೊರಪ ಟ್ಟು ನಿನ್ನ ಸಮಿಾಪದಲ್ಲಿ ಕುಳಿತು ಉಪ್ಪರಿಗೆಯಂ ಕಟ್ಟಿಶಿದವರಾರು ಈ ಲಿಂಗದ ಹೆಸರೇನು ತಾನು ವೃದ್ಧನಾದಕಾರಣ ಅರಿಯದೇ ಕೇಳುತ್ತಾ ಇ ದ್ದೇನೆ ಎನಲು, ನೀನು ಇಂತೆಂದೀಯೆ ನನ್ನ ಹೆಸರು ವೃದ್ಧಕಾಲನು,ದಕ್ಷಿಣ ದೇಶದವನು ಕುಟುಂಬಿಯಾಗಿ ಈ ಸ್ವಾಮಿಯ ಧ್ಯಾನವಂ ಮಾಡಿಕೊಂಡು ಇದ್ದೇನೆ. ಈ ಉಪ್ಪರಿಗೆಯಂ ಕಟ್ಟಿಸಿದವನು ಈಶ್ವರನು. ಈ ಸ್ವಾಮಿಯ ಹೆಸರ ನಾನರಿಯೆ ಎನಲು; ಮತ್ತೂ ಈ ಉಪ್ಪರಿಗೆಯಂ ಕಟ್ಟಿಶಿದವರ್ಯಾ ರೆಂದು ನಿರ್ಬಂಧಿಶಿ ಕೇಳಲು, ಎಲ್ಲವನೂ ಮಾಡುವನು ಮಾಡಿಶಿಕೊಂಬನು ಪರಮೇಶ್ವರನು, ಈ ಚಿಂತೆ ನಿಮಗ್ಯಾಕೆನಲೂ; ಆ ಶಿವಭಕ್ತನು ಹಾಗೆಯೆ ಆಹುದು ನಮಗೇನು ಪ್ರಯೋಜನ, ನಮಗೆ ಬಹು ಬಾಯಾರಿಕೆಯಾಗು ತ್ತಿದ್ದೀತು ಉದಕವಂ ತಂದುಕೊಡು ಎನಲು, ನೀನು ಆ ಕಾಲದಮತೀರ್ಥ ದಿಂ ಉದಕವಂ ತಂದುಕೊಡಲು, ಪೊರೆಯಬಿಟ್ಟ ಹಾವಿನಂತೆ ವೃದ್ಧಾಪ್ಯ ವಂ ಬಿಟ್ಟು ಯೌವ್ವನಸ್ಥನಾದ ತಪಸ್ವಿಯಂ ನೋಡಿ-ಎಲೈ ಶಿವಭಕ್ತನೆ,ನಿ ಮಗೆ ಈ ವೃದ್ಧಾಪ್ಯವು ಪೋಗಿ ಯೌವ್ವನಬಂದದ್ದೇನುಕಾರಣವೆನಲು, ಆ ಶಿವಭಕ್ತನಿಂತೆಂದನೂ-ಕೇಳೈ ರಾಯನೆ, ನೀನು ದಕ್ಷಿಣದೇಶದ ವೃದ್ಧಕಾಲ ನೆಂಬ ರಾಯನು,ಈ ನಿನ್ನ ಅನಂಗಲೇಖೆ ಎಂಬ ಸ್ತ್ರೀಯು ಪೂರ್ವಜನ್ಮದ ಲ್ಲಿ ತುರುವಶನೆಂಬಬ್ರಾಹ್ಮಣನಮಗಳು, ನೈಧೃವನೆಂಬವಂಗೆ ವಿವಾಹವಂ ಮಾಡಲು, ಬಾಲ್ಯದಲ್ಲಿ ಪತಿವಿಯೋಗವಾಗೆ ವೈಧವ್ಯದಿಂ ಪಾತಿವ್ರತ್ಯವಂ ಪಾಲಿಶಿಕೊಂಡಿದ್ದು ಶರೀರತ್ಯಾಗವ ಮಾಡಿದಳು.ಆ ಪುಣ್ಯದಿಂ ಪಾಂಡ್ಯ ರಾಯನ ಕುಮಾರತಿಯಾಗಿ ನಿನ್ನ ರಾಣಿಯಾಗಿ ನಿನ್ನೊಡನೆ ಮೋಕ್ಷಾಧಿಕಾ ರಿಯಾದಳು. ನೀನು ಪೂರ್ವಜನ್ಮದಲ್ಲಿ ಮಧುರಾಪಟ್ಟಣದಲ್ಲಿ ಶಿವಶರ್ಮನೆಂಬ

ಬ್ರಾಹ್ಮಣನು ಮಾಯಾಪುರಿಯಲ್ಲಿ ದೇಹತ್ಯಾಗವಂ ಮಾಡಿದವನಾಗಿ ವೈಕುಂಠದಲ್ಲಿ ಬಹುಭೋಗಗಳನನುಭವಿಸಿ, ಪಶ್ಚಿಮದೇಶದಲ್ಲಿ ನಂದಿವರ್ಧನವೆಂಬ ಪಟ್ಟಣದಲ್ಲಿ ವೃದ್ಧಕಾಲನೆಂಬ ರಾಯನಾಗಿಯೂ ಕಾಶೀಪಟ್ಟಣಕ್ಕೆ ಬಂದು ಉಪ್ಪರಿಗೆಯಂ ಕಟ್ಟಿ ಲಿಂಗಪ್ರತಿಷ್ಠೆಯಂ ಮಾಡಿ ಈ ಉಪ್ಪರಿಗೆಯಂ ಕಟ್ಟಿಸಿದವರಾರೂ ಎಂದು ಕೇಳಲು ತಾನುಮಾಡಿದಧರ್ಮವಂ ಕೀರ್ತಿಸಲೂ ಕೆಡುವದೂ, ನೀನು ಧರ್ಮಜ್ಞನಾದಕಾರಣ ನೀ ಮಾಡಿದಧರ್ಮವಂ ಹೇಳಿದವನಲ್ಲ, ವಿಶ್ವನಾಥನ ಪ್ರೇರಣೆಯಿಂ ಉಪ್ಪರಿಗೆಯಂ ಕಟ್ಟಿಸಿ ಲಿಂಗಪ್ರತಿಷ್ಠೆಯಂ ಮಾಡಿದೆ, ಈಲಿಂಗದ ಹೆಸರು ವೃದ್ಧಕಾಲೇಶ್ವರನು, ಈ ಲಿಂಗದ ದರ್ಶನ ಸ್ಪರ್ಶನ ಪೂಜೆ ಸ್ಮರಣೆ ನಮಸ್ಕಾರಂಗಳಿಂದ ಸಕಲಾಭೀಷ್ಟಂಗಳಹವು. ಈ ತೀರ್ಥವು ಕಾಲೋದಕತೀರ್ಥವೆಂಬುದು. ಈಉದಕಪಾನದಿಂ ಕುಷ್ಟ, ಸರ್ಪಗ್ರಂಥಿ, ಸ್ಫೋಟಕ, ಅಗ್ನಿಮಾಂದ್ಯ, ಶೂಲ ಗ್ರಹಣಿ ಮೂತ್ರಕೃಚ್ಛ್ರ ಗಜಚರ್ಮ ಮೊದಲಾದ ವ್ಯಾಧಿಪರಿಹಾರವಹವು, ನಿನ್ನ ಮುಂದೆ ಈಉದಕಪಾನದಿಂ ಹೆನ್ನ ವೃದ್ಧಾಪ್ಯ ಪರಿಹಾರವಾಯಿತು. ಕೃತ್ತಿವಾಸೇಶ್ವರಗೆ ಬಡಗಲ್ಲಿ ಇರ್ಪವೃದ್ಧಕಾಲೇಶ್ವರನಂ ನೋಡೆ ಇಷ್ಟಸಿದ್ಧಿಯಹುದು ಎಂದು ನುಡಿದು-ಆ ವೃದ್ಧಕಾಲೇಶ್ವರನೆಂಬ ನೀನು ಅನಂಗಲೇಖೆಎಂಬಸ್ತ್ರೀಸಹಿತವಾಗಿ ಆ ಲಿಂಗದಲ್ಲಿ ಐಕ್ಯವಾದೆಯೆ? ಈ ರೀತಿಯಿಂದ ವೈಕುಂಠದಲ್ಲಿ ವಿಷ್ಣುದರ್ಶನದಿಂದ ಇಂಥಾ ಭಾಗ್ಯ ನಿನಗಾಯಿತು ಎಂದು ಗಣಂಗಳು ಹೇಳಿದುದಾ ತನ್ನ ಮುಂದಣ ವೃತ್ತಾಂತವಂ ಕೇಳಿ ಸಂತೋಷಪಡುತ್ತಿರಲು ವೈಕುಂಠಕಹ್ಗ ಸದುದು ಎಂದು ಅಗಸ್ತ್ಯನು ತನ್ನ ಸತಿಗಿಂತೆಂದನು-ಎಲೆ ಸ್ತ್ರೀಯೆ; ತ ಶಿವಶರ್ಮನು ವೈಕುಂಠಕ್ಕೆ ಪೋಗಿ ಅಲ್ಲಿ ಬಹುಕಾಲ ಭೋಗಂಗಳನನುಭವಿಸಿ ನಂದಿವರ್ಧನಪಟ್ಟಣದಲ್ಲಿ ವೃದ್ಧಕಾಲನೆಂಬ ರಾಯನಾಗಿ ಬಹುಪುತ್ರರಂ ಪಡೆದು ಕುಮಾರಂಗೆ ಪಟ್ಟವಂ ಕಟ್ಟಿ ಕಾಶಿಯಲ್ಲಿ ಲಿಂಗಪ್ರತಿಷ್ಠೆಯಂ ಮಾಡಿ ಮುಕ್ತಿಯಂ ಪಡೆದನು. ಈ ಶಿವಶರ್ಮನ ಪುಣ್ಯಕ್ಕೆಸರಿಯಿಲ್ಲ. ಈ ಪುಣ್ಯಕಥೆಯಂ ಕೇಳಿದವರೂ ಹೇಳಿದವರೂ ದಿವ್ಯಜ್ಞಾನವಂ ಪಡೆವರೂ ಎಂದು ಗಣಂಗಳು ನಿರೂಪಿಸಿದ ಶಿವಶರ್ಮೋಪೇ

ಪಾಖ್ಯಾನವಂ ಅಗಸ್ತ್ಯರು ತನ್ನ ಸತಿಯಾದ ಲೋಪಾಮುದ್ರೆಗೆ ಬುದ್ಧಿಗಲಿಸಿದರೂ ಎಂದು ವೇದವ್ಯಾಸರು ತನ್ನ ಶಿಷ್ಯನಾದ ಸೂತಂಗರುಹಿದ ಅರ್ಥವಂ ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ॥*॥ ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀಕೃಷ್ಣರಾಜವಡಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಶಿವಶರ್ಮನ ಮುಕ್ತಿಪ್ರಾಪ್ತಿ ವೃತ್ತಾಂತವೆಂಬ ಇಪ್ಪತ್ತನಾಲ್ಕನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ.

ಇಪ್ಪತ್ತನಾಲ್ಕನೇ ಅಧ್ಯಾಯ ಸಂಪೂರ್ಣವು.

ಶ್ರೀ ವಿಶ್ವೇಶ್ವರಾಯನಮಃ

ಇಪ್ಪತ್ತೈದನೇ ಅಧ್ಯಾಯ.

ಅಗಸ್ತ್ಯರಿಗೆ ಕುಮಾರಸ್ವಾಮಿಯ ದರ್ಶನವಾದದ್ದು.

ಇಂತೀ ಕಥೆಯಂ ಪೇಳಿ ಮತ್ತೂ ಕೇಳಿದವರ್ಗೆ ಸಕಲಪಾಪಹರವಾಗಿ ಸುಜ್ಞಾನವನೀವ ಕಥೆಗಳಂ ಪೇಳುತ್ತಾ ಅಗಸ್ತ್ಯಋಷೀಶ್ವರನು ತನ್ನ ಸ್ತ್ರೀಸಹಿತವಾಗಿ ಶ್ರೀಗಿರಿಯ ಪ್ರದಕ್ಷಿಣವಂ ಮಾಡಿ ಮುಂದೆ ನಡೆತರಲೂ ರಮ್ಯವಾದ ಸ್ವಾಮಿಯ ಮಲೆಯಂ ಕಂಡನೂ, ಅದೆಂತೆ ಸೆಡುವೆನೆ-ಸಕಲಋತುಗಳಲ್ಲಿಯೂ ಬೀಯ್ಯದೆ ಇರುವ ಮಹಾಪುಷ್ಪಂಗಳಿಂ, ಫಲಪುಷ್ಪವೃಕ್ಷಂಗಳಿಂ, ಜಾತಿವೈರವಿಲ್ಲದ ಮೃಗಗಳಿಂ, ಕುಮುದಕಮಲಗಳಿಂದೊಪ್ಪುವ ಮಡುವುಗಳಿಂ, ನಾನಾಪಕ್ಷಿಗಳಿಂ, ನಾನಾಮೃಗಗಳಿಂ, ನಾನಾಪ್ರಕಾರವಾದ ಮುನಿಗಳಿಂ, ಗಂಗಾಪ್ರವಾಹದಂತಿರುವ ಕಿರ ದೊರೆಗಳಿಂ, ಜಗಲಿಗಳಿಂ, ಇಂತೊಪ್ಪುವ ಕೈಲಾಸಪರ್ವತದಲ್ಲಿ ಒಂದು ಭಾಗ ಈ ಕರ್ಮಭೂಮಿಗೆ ತಪವಂ ಮಾಡಬಂತೋ ಎಂಬಹಾಗೆ ಸುಮ

ರ್ಣನದೀತಡಿಯಲ್ಲಿ ಒಪ್ಪುವ ಲೋಕಹಿತಾರ್ಥವಾಗಿ ನಿವಾಸವಾಗಿದ್ದ ಕುಮಾರಸ್ವಾಮಿಯಂ ಕಂಡು ಸತೀಸಹಿತ ಸಾಷ್ಟಾಂಗ ನಮಸ್ಕಾರವಂ ಮಾಡಿ ಎದ್ದು ಕರಗಳಂ ಮುಗಿದು ಪಾರ್ವತೀದೇವಿಯ ಕುಮಾರನಾದ ಷಣ್ಮುಖನನ್ನು ವೇದೋಕ್ತವಾದವಾಕ್ಯಂಗಳಿಂದ ಸ್ತುತಿಸಿದರದೆಂತೆನೆ, ಇಂದ್ರಾದಿಗಳಿಂನಮಸ್ಕರಿಸಲ್ಪಟ್ಟ ಪಾದಕಮಲವುಳ್ಳವನು ಗೌರೀದೇವಿಯರಿಗೆ ಆನಂದಕರ, ಶರಣಾಗತರಕ್ಷಕ, ಸರ್ವಕರ್ತೃ, ಭಕ್ತಮನೋರಥಪ್ರದ ತಾರಕಾರಿ, ಸುಮೂರ್ತಿ, ಸಕಲಮೂರ್ತಿ, ಗಣಾಗ್ರಗಣ್ಯ, ಅಪಾರಮಹಿಮಾ, ಶಿಖಿವಾಹನ, ಯೋಗಿವರ, ದಿಗಂಬರ ಹಿರಣ್ಯವರ್ಣ ಹಿರಣ್ಯಬಾಹು ಹಿರಣ್ಯವೀರ್ಯ ತಪಃಸ್ವರೂಪ ತಪೋದಾನಫಲಪ್ರದ ಕುಮಾರ ಮನ್ಮಥಾರಿ ವಿರಾಗೀ ಶರಜನ್ಮ ಷಡಾನನ ಸಹಸ್ರಸೂರ್ಯತೇಜೋರೂಪ ಬಾಲಕ ಅತಿವರಾಕ್ರಮಿ ಷಾಣ್ಮಾತುರ ರೌದ್ರರೂಪಿ, ಜನನಮರಣಾದಿರಹಿತ ಶಕ್ತಿಪಾಣಿ ಕ್ರೌಂಚಾರಿ, ಸ್ವಾಹೇಯ, ಗಾಂಗೇಯ, ಕಾರ್ತಿಕೇಯ ಶಿವಾಯನಮಃ ಎಂದು ಸ್ತುತಿಮಾಡಲು, ಕುಮಾರಸ್ವಾಮಿಯು ಋಷಿಗಿಂತೆಂದನು, ಎಲೈ ಅಗಸ್ತ್ಯಮುನಿಯೆ, ಕುಶಲಿ, ದೇವರ್ಕಳಿಗೆ ಸಹಾಯವಂಮಾಡಿದೆ ನೀನುಚೆನ್ನಾಗಿ ಇದ್ದೀಯಾ ವಿಂಧ್ಯನದೌನ್ನತ್ಯವನ್ನು ಪರಿಹರಿಸಲೋಸುಗ ಬಂದೆಯಲ್ಲಾ ಅವಿಮುಕ್ತಕ್ಷೇತ್ರವು ಕುಶಲವೆ ವಿಶ್ವೇಶ್ವರನು ಚೆನ್ನಾಗಿ ಇದ್ಧಾನೆಯೆ, ತ್ರೈಲೋಕ್ಯದಲ್ಲಿಯೂ ಕಾಶೀಗೆಸಮಾನವಾದಕ್ಷೇತ್ರವಂ ಕಾಣೆನು, ಆಕ್ಷೇತ್ರಕ್ಕೋಸ್ಕರ ನಾನು ಇಲ್ಲಿ ತಪಸ್ಸುಮಾಡುತ್ತಲಿದ್ಧೇನೆ ನನ್ನಮನೋರಥವಿನ್ನೂ ಸಿದ್ಧಿಯಾಗಲಿಲ್ಲ. ಆ ಕಾಶೀವಾಸವು ಈಶ್ವರಾನುಗ್ರಹ ಹೊರತಾಗಿ ಸ್ನಾನದಾನ ವ್ರತಾದಿಗಳಿಂದ ಸಿದ್ಧಿಸದೂ. ಆಕ್ಷೇತ್ರವು ಬ್ರಹ್ಮಸೃಷ್ಟಿಗೆ ವಳಗಲ್ಲ. ಆ ಕ್ಷೇತ್ರಕ್ಕೆ ಹೋಗದವರು ಮತಿಹೀನರು, ದುರ್ಬಲರು, ಅಜ್ಞಾನಿಗಳು, ಶರೀರನಷ್ಟವಾಗುವದು, ಆಯುಷ್ಯವೆಂಬ ಮೃಗವನು ಮೃತ್ಯುವೀಗ ಗುರಿಮಾಡಿಕೊಂಡು ಜರಾವ್ಯಾಧಿಗಳೆಂಬ ಬಾಣಗಳಿಂದ ಬಾಧಿಸುತ್ತಾ ಇಹನು, ಇದನರಿತು ಬಲ್ಲವರು ಕಾಶೀವಾಸವಂ ಮಾಡಬೇಕೊ. ಧರ್ಮದಿಂ ಅರ್ಥದಿಂ ಕಾಮದಿಃ ಸಕಲಸುಖಗಳಿಂದ ಸ್ವರ್ಗಸುಖ ಸುಲಭವಲ್ಲವೆ. ಕಾಶೀವಾಸದುರ್ಲಭ. ಸಕಲವೇದಪುರಾಣ

ಧರ್ಮಶಾಸ್ತ್ರಗಳಿಂ ಹಲವುವೇಳೆ ನಿಷ್ಕರ್ಷಿಸಿದ ಅರ್ಥವಂ ಕೇಳು, ಶಿವ
ಯೋಗದಲ್ಲಿ ಪ್ರಯಾಗಸ್ನಾನ ಶ್ರೀಶೈಲ ಕೇದಾರ ಮೊದಲಾದ ಪುಣ್ಯ
ಕ್ಷೇತ್ರ ಯಾತ್ರೆ ಸನ್ಯಾಸ ತಪಸ್ಸು ಜಪ ಎರಡುನದಿಯೂ ಕೂಡಿದಲ್ಲಿ
ಸ್ನಾನ, ನೈಮಿಷಾರಣ್ಯವಾಸ, ತೀರ್ಥಯಾತ್ರೆ, ಮಾಸತೀರ್ಥ ಸಕಲ ಪು
ಣ್ಯಭೂಮಿಯಲ್ಲಿ ಇಹ ತೀರ್ಥದಿವ್ಯೌಷಧಸೇವೆ, ವೇದಪಾರಾಯಣ, ಮಹಾ
ಮಂತ್ರಜಪ, ಹೋಮ ದಾನ ಯಜ್ಞ ಜಪ ದೇವತಾಪೂಜೆ ತ್ರಿರಾತ್ರ ಪಂ
ಚರಾತ್ರಾದಿ ವ್ರತ, ಸಾಂಖ್ಯಯೋಗ ವಿಷ್ಣುಪೂಜೆ ಅಯೋಧ್ಯಾದಿ ಪುಣ್ಯ
ಪುರಿಗಳಯಾತ್ರೆ ಇವು ಮೊದಲಾದ ಧರ್ಮಂಗಳೂ ಕಾಶೀವಾಸವನೀವ
ವು. ಕಾಶೀವಾಸ ಹೊರತಾಗಿ ಮುಕ್ತಿಯಿಲ್ಲ. ಈ ಬ್ರಹ್ಮಾಂಡದೊಳಗೆ ವಿ
ಶ್ವೇಶ್ವರನಿಗೆ ಪ್ರೀತಿಯಾದುದು ಕಾಶೀಕ್ಷೇತ್ರವು. ಅದುಕಾರಣ ಆ ಕ್ಷೇ
ತ್ರ ಚನ್ನಾಗಿ ಇದ್ದೀತೇ ಎಂದು ಕೇಳಬೇಕಾಯಿತು. ನೀನಿತ್ತಬಾ, ಕಾ
ಶೀಯಿಂದ ಬಂದವರ ಮುಟ್ಟಿ ನಮಸ್ಕರಿಸಲೂ ಅಧಿಕಫಲವಹುದೂ, ಬಹೂ
ರುದಿನ ಕಾಶೀವಾಸವಂ ಮಾಡಿದವರ ಪಾದರೇಣುಗಳಿಂದ ಜಗವು ಪವಿ
ತ್ರವಹುದು. ನೀನು ಕಾಶಿಯಲ್ಲಿ ವಾಸವಾಗಿದ್ದು ಮಹಾತಪಸ್ಸು ಮಾಡಿದ
ಪುಣ್ಯಾತ್ಮನು. ಆರೊಬ್ಬರು ನಿನ್ನ ಅಗಸ್ತ್ಯತೀರ್ಥದಲ್ಲಿ ಮಿಂದು ನಿನ್ನ
ಹೆಸರಿನ ಅಗಸ್ತ್ಯೇಶ್ವರನ ಅರ್ಚಿಸಿ ನಿತ್ಯಕರ್ಮಗಳ ಮಾಡಲು ಕೃತ
ಕೃತ್ಯರಹರು ಎಂದು ಅಗಸ್ತ್ಯನ ಶರೀರವ ತನ್ನ ಕರಗಳಿಂ ತಡವಿ ಅ
ಮೃತಸಾಗರದಲ್ಲಿ ಮುಳುಗಿದಂತೆ ಸಂತುಷ್ಟಚಿತ್ತನಾಗಿ ಧ್ಯಾನವಂ ಮಾ
ಡಿ ಕಣ್ಣುತೆರದು ಪುಳಕಿತನಾದಂಥಾ ಕುಮಾರಸ್ವಾಮಿಯಂ ನೋಡಿ ಅ
ಗಸ್ತ್ಯನು ಬಿನ್ನೈಸಿದನು-ಎಲೈ ಕುಮಾರಸ್ವಾಮಿಯೆ; ಪೂರ್ವದಲ್ಲಿ ಪರ
ಮೇಶ್ವರನು ಪಾರ್ವತೀದೇವಿಯರಿಗೆ ಕಾಶೀಮಹಾತ್ಮ್ಯೆಯಂ ಬುದ್ಧಿಗಲಿ
ಸುವಾಗ ಈಶ್ವರನ ತೊಡೆಯ ಮೇಲೆ ಕುಳ್ಳಿದ್ದ ಆ ವೃತ್ತಾಂತವಂ
ಕೇಳಿದ್ದೀರಲ್ಲ, ಆ ಮಹಾತ್ಮ್ಯೆಯನ್ನು ನನಗೆ ಬುದ್ಧಿಗಲಿಸಬೇಕೆನೆ? ಕುಮಾ
ರಸ್ವಾಮಿ ಇಂತೆಂದನು; ಕೇಳೈ ಅಗಸ್ತ್ಯನೆ; ಪರಮೇಶ್ವರನು ಪಾರ್ವತೀ
ದೇವಿಯರಿಗೆ ಬುದ್ಧಿಗಲಿಸುವಾಗ ಏಕಚಿತ್ತದಿಂ ಕೇಳಿದನಿತು ವೃತ್ತಾಂ
ತವಂ ನಿನಿಗೆ ಹೇಳುತ್ತಾ ಇದ್ದೇನೆ, ಇದು ಅತಿರಹಸ್ಯವಾದ ಪುಣ್ಯಪ್ರ

ಸಂಗವು, ಈ ಕಾಶೀಕ್ಷೇತ್ರವು ಭೂಮಿಯಂ ಮುಟ್ಟಿದುದಲ್ಲ, ಅಂತರಿಕ್ಷದಲ್ಲಿ ಇರ್ದೀತು, ಇದನ್ನು ಯೋಗಾರೂಢರಲ್ಲದೆ ನಿಕೃಷ್ಟದವರರಿಯರು, ಈ ಕ್ಷೇತ್ರದಲ್ಲಿ ವಾಸವಾಗಿ ಇಂದ್ರಿಯನಿಗ್ರಹದಿಂ ತ್ರಿಕಾಲಭೋಜನವಂ ಮಾಡಿದವರು ವಾಯುಭಕ್ಷಾಹಾರಿಗಳಗತಿಯಂ ಪಡೆವರು. ನಿಮಿಷಮಾತ್ರವಾದರೂ ನಿಯಮದಲ್ಲಿ ಇರೆ ಬಹುಕಾಲ ತಪಸ್ಸುಮಾಡಿದ ಫಲವಹುದು. ಒಂದು ತಿಂಗಳು ವಾಸವಂ ಮಾಡೆ ಯಾವಜ್ಜೀವವು ವಾಸವಾಗಿದ್ದ ಜನ್ಮಮೃತ್ಯುಭಯಂಗಳಿಲ್ಲದ ಯೋಗಿಗಳ ಮುಕ್ತಿಯಹುದು. ಮತ್ತೊಂದು ಕ್ಷೇತ್ರದಲ್ಲಿ ಪಶುಪತಿಯ ವ್ರತಮಂ ಮಾಡಿದವನಹನ್ನು ಕಾಮಕ್ರೋಧ ಪರಾನ್ನಪರಿಗ್ರಹ ಪಾಪಪಾಷಂಡಂಗಳಂ ಬಿಟ್ಟು ಯಥಾಶಕ್ತಿದಾನವಂ ಮಾಡಿಕೊಂಡು ಒಂದು ವರುಷ ವಾಸವಂ ಮಾಡೆ ಮತ್ತೊಂದು ಕ್ಷೇತ್ರದಲ್ಲಿ ಹತ್ತುಸಾವಿರ ವರ್ಷ ಮಹಾತಪಸ್ಸುಮಾಡಿದ ಫಲವಹುದು. ಯಾವಜ್ಜೀವವೂ ವಾಸವಾಗಿಯಿರಲು ಜನ್ಮಮೃತ್ಯುಭಯಂಗಳಿಲ್ಲದ ಮುಕ್ತಿಯಹುದು. ಮತ್ತೊಂದು ಕ್ಷೇತ್ರದಲ್ಲಿ ಹತ್ತುಸಾವಿರಜನ್ಮ ಯೋಗಾಭ್ಯಾಸದಿಂದೊರಕುವ ಉತ್ತಮಗತಿಯು ಈ ಕಾಶೀಕ್ಷೇತ್ರದಲ್ಲಿ ಈಶ್ವರಾನುಗ್ರಹದಿಂದ ಸುಲಭವಹುದು. ಬ್ರಹ್ಮಹತ್ಯಾ ಮೊದಲಾದ ಮಹಾಪಾಪಗಳು ಕಾಶಿಯ ಪ್ರೋಗುತ್ತಲೆಬಿಡುವವು, ಯಾವಜ್ಜೀವವು ಕಾಶೀವಾಸವಂ ಮಾಡಿದವರ್ಗೆ ಮಹಾಪಾತಕಗಳ ಹೆಸರೇಯಿಲ್ಲ, ಪ್ರಕೃತಿ ವಿಕೃತಿ ಮೊದಲಾಗಿಬಿಡುವವು. ಮೋಕ್ಷಕಾಂಕ್ಷೆಯುಳ್ಳವರು ಮುಕ್ತಿಕಾಂಕ್ಷಿಗಳಾದ ಮಹರ್ಷಿಗಣಸೇವಿತವಪ್ಪ ಅವಿಮುಕ್ತವನು ಬಿಡಲಾಗದು, ಶತಕ್ರತುಗಳಂ ಮಾಡಿ ದೇವಲೋಕವಂ ಸಾರಿತಿರುಗಿಬಹುದಕ್ಕಿಂತಾ ಕಾಶಿಯಲ್ಲಿರುವ ಪಿಶಾಚಿಯಾಗಿ ಇರುವುದೊಳ್ಳಿತು, ಮನುಷ್ಯರ್ಗೆ ಮರಣಾವಸ್ಥೆಯಲ್ಲಿ ಈಶ್ವರಸ್ಮರಣೆದೊರಕದು, ಈ ಕಾಶೀಕ್ಷೇತ್ರವಾಸಿಗಳಿಗೆ ವಿಶ್ವೇಶ್ವರನು ತಾರಕಬ್ರಹ್ಮೋಪದೇಶವಂ ಮಾಡುವನು, ಅದುಕಾರಣ ವಿವೇಕಿಯಾದವನು ಬಂಧುವಿಘ್ನಂಗಳಂ ನೋಡದೆ ಮುಕ್ತಿಪ್ರದವಪ್ಪ ಕಾಶೀಕ್ಷೇತ್ರಮಂ ಬಿಡಲಾಗದು, ಈ ಕಾಶೀಕ್ಷೇತ್ರವಂ ಬಣ್ಣಿಪರೇ ಸಾವಿರಮುಖದವಡಾಶೇಷನಿಗಳವಲ್ಲ. ಆದ್ದರಿಂದಾ ಆರುಮುಖವುಳ್ಳವನಿಗೆ ಶಕ್ಯವೇ ಎಂದು

ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದರೆಂದು ವ್ಯಾಸರು ತನಗೆ ಬುದ್ಧಿಗಲಿಸಿದರೆಂದು ಸೂತಪುರಾಣಿಕನು ಶೌನಕಾದಿಋಷಿಗಳಿಗೆ ಹೇಳ್ದ ಸಂಬಲ್ಲಿಗೆ ಅಧ್ಯಾಯಾರ್ಥ * * ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದಾ ವಿರಚಿಸಿದಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಅಗಸ್ತ್ಯರಿಗೆ ಕುಮಾರಸ್ವಾಮಿಯು ದರ್ಶನ ಕಾಶೀಪ್ರಭಾವನಿರೂಪಣವೆಂಬ ಇಪ್ಪತ್ತೈದನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ ಶ್ರೀ * * * * * *

ಇಪ್ಪತ್ತೈದನೇ ಅಧ್ಯಾಯ ಸಂಪೂರ್ಣವು.

ಶುಭಮಸ್ತು.

ಶ್ರೀ ವಿಶ್ವೇಶ್ವರಾಯನಮಃ

ಇಪ್ಪತ್ತಾರನೇ ಅಧ್ಯಾಯ.

ಮಣಿಕರ್ಣಿಕಾ ಉತ್ಪತ್ತಿ.

ಅನಂತರದಲ್ಲಿ ಅಗಸ್ತ್ಯನು ಬಿನ್ನೈಸಿದನು-ಎಲೈ ಕುಮಾರಸ್ವಾಮಿಯೆ; ನನ್ನಲ್ಲಿ ನಿನಗೆ ಪ್ರೀತಿಯುಂಟಾದರೆ ನಾನು ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡಬೇಕು, ಆ ಪ್ರಶ್ನೆಗಳಾವಾವೆನೆ-ಈ ಕಾಶೀಕ್ಷೇತ್ರವು ಎಂದು ಮೊದಲಾಗಿ ಪ್ರಸಿದ್ಧವಾಯಿತು, ಈ ಮಣಿಕರ್ಣಿಕೆ ತ್ರೈಲೋಕ್ಯದಲ್ಲಿ ಯು ಹ್ಯಾಗೆ ರೂಢಿಯಾಯಿತು, ಗಂಗೆಬಂದ ಪ್ರಕಾರವೇನು, ಈ ಕಾಶೀಕ್ಷೇತ್ರಕ್ಕೆ ವಾರಣಾಸೀ, ಕಾಶೀ ರುದ್ರಾವಾಸ, ಮಹಾಶ್ಮಶಾನವೆಂಬ ನಾಮಧೇಯಂಗಳೆಂತಾದವು, ಇವೆಲ್ಲವನ್ನೂ ತನಗೆ ಬುದ್ಧಿಗಲಿಸಬೇಕೆನಲು:-ಷಣ್ಮುಖನಾದ ಕುಮಾರಸ್ವಾಮಿ ಇಂತೆಂದನು-ಕೇಳೈ ಅಗಸ್ತ್ಯ; ನೀ ಮಾಡಿದ ಪ್ರಶ್ನೆ ಬಹುರಹಸ್ಯವು, ಪೂರ್ವದಲ್ಲಿ ಪಾರ್ವತೀ

ದೇವಿಯರೂ ಪರಮೇಶ್ವರನಿಗೆ ಈ ಪ್ರಶ್ನೆಗಳಂ ಹೇಳೆಂದು ಬಿನ್ನೈಸ
ಲೂ ಆ ಪಾರ್ವತೀದೇವಿಯರಿಗೆ ಮಹಾದೇವನು ನಿರೂಪಿಸಿದನು,ಆವೃ
ತ್ತಾಂತವನ್ನು ನಿನಗೆ ಹೇಳುತ್ತಾ ಇಧೇ?, ಪೂರ್ವದಲ್ಲಿ ಸೂರ್ಯ ಚಂದ್ರ
ಅಗ್ನಿ ಅನಿಲ ಆಕಾಶ ದ್ರಷ್ಟ್ರುದೃಶ್ಯ ಶಬ್ದ ಸ್ಪರ್ಶ ರೂಪ ರಸ ಗಂಧ
ಮೂಡ ಪಡುವಲು ತೆಂಕ ಬಡಗಲು ಎಂಬ ಭೇದಗಳಿಲ್ಲದೆ ಅಂಧಕಾರ
ತುಂಬಿ ಇರಲು ಅವಾಙ್ಮನಸಗೋಚರನಾದ ನಾಮರೂಪ ಕ್ರಿಯಾರಹಿ
ತನಾದ ಪರಹಿತನಾದ ಸ್ಥೂಲಸೂಕ್ಷ್ಮರಹಸ್ಯದೀರ್ಘ ಗುರು ಲಘು ವೃ
ದ್ಧಿ ಕ್ಷಯರಹಿತನಾದ ಸತ್ಯಜ್ಞಾನಾನಂದಮಯವಾದ್ದು ಆಲಸಿಗೆ.ಅಲಗಾ
ಗದ ಆಧಾರವಿಲ್ಲದ ವಿಕಾರರಹಿತನಾದ ವಿಕಲ್ಪವಿಲ್ಲದ ಮಾಯಾತೀತ
ವಾದ ನಾನಾಉಪದ್ರವಗಳಿಲ್ಲದ ಉಪನಿಷತ್ತುಗಳಿಂ ತಿಳಿಯಲು ತಕ್ಕ
ಆವುದೊಂದು ಪರಬ್ರಹ್ಮವುಂಟೋ ಆ ವಸ್ತುವಿಗೆ ಈ ನಾನಾಪ್ರಕಾ
ರವು ಕಲ್ಪಿತವಾಯಿತು,ಏಕರೂಪವಾದ ಪರಬ್ರಹ್ಮ ಎರಡುರೂಪವಾಗಬೇ
ಕೆಂದು ಇಚ್ಛೆಯಾಗಲೂ ಅಮೂರ್ತಿಯಾದ ಪರಬ್ರಹ್ಮನು ತಾನೊಂ
ದುರೂಪವಾಗಿ ತನ್ನ ಲೀಲೆಯಿಂ ಸರ್ವೈಶ್ವರ್ಯಗುಣವುಳ್ಳ ಸರ್ವಜ್ಞಾನ
ರೂಪವಾಗಿ ಸಕಲವ್ಯಾಪಿಯಾಗಿ ಸರ್ವರೂಪವಾದ ಸಮಸ್ತಕಾರಣವಾದ ಸ
ಕಲರಿಗೂ ವಂದ್ಯನಾದ ಸಕಲಕ್ಕೂ ಮೊದಲಾದ ಸಕಲಕ್ಕೂ ಸಂಹಾರಿ
ಯಾದ ಶಕ್ತಿಸ್ವರೂಪವಾಗಿ ಆಶಕ್ತಿಯಲ್ಲಿ ಪರಬ್ರಹ್ಮಸ್ವರೂಪವಂ ಮಾ
ಡಿ ಆರೂಪವಡದ ಪರಬ್ರಹ್ಮಮೂರ್ತಿನಾನು,ಬಾಹ್ಯದಲ್ಲಿ ಅಂತರದಲ್ಲಿ
ವ್ಯಾಪ್ತವಾದ ವಸ್ತು ತಾನೆಂದು ಜ್ಞಾನಿಗಳು ಬಲ್ಲರೂ,ನಿನ್ನನ್ನು ಎ
ರಡನೆಯ ರೂಪವಂ ಮಾಡಿ ರಮಿಸಬೇಕೆಂಬ ನಾನು ನಿನ್ನ ಶರೀರದಿಂ
ದ ಯಡಬಿಡದಿರ್ದ ಪ್ರಧಾನವೆಂದು ಪ್ರಕೃತಿಯೆಂದೂ ಸತ್ವರಜಸ್ತಮೋ
ಗುಣವುಳ್ಳ ಬುದ್ಧಿ ತತ್ವವಂ ಪುಟ್ಟಿಸುವ ಮಾಯೆಯೆಂದು ಪೆಸರುಳ್ಳ
ದ ನಿನ್ನನ್ನು ಸೃಷ್ಟಿಸಿದೆನು, ಕಾಲಸ್ವರೂಪಿಯಾದ ನಾನು ನಿನ್ನೊಡ
ಗೂಡಿ ನಮ್ಮಿರ್ವರ ನಿವಾಸಕ್ಕೋಸುರ ಈ ಕಾಶೀಕ್ಷೇತ್ರವಂ ನಿರ್ಮಿ
ಸಿದೆನು, ಆ ಶಕ್ತಿರೂಪವೇ ಪಾರ್ವತೀದೇವಿಯು ಪ್ರಕೃತಿ ಪುರುಷನೇ
ಪರಮೇಶ್ವರನು ಪರಮಾನಂದರೂಪಿಗಳಾದ ಶಿವಶಕ್ತಿಗಳಿಬ್ಬರೂ ಕ್ರೀ

ಡಿಸಬೇಕೆಂದು ಪಂಚಕ್ರೋಶ ಪರಿಮಾಣವುಳ್ಳ ಕ್ಷೇತ್ರವನ್ನು ತಮ್ಮ ಪಾದದಿಂದ ನಿರ್ಮಿಸಿ ಅಲ್ಲಿ ಕ್ರೀಡಿಸುತ್ತಿಹರು, ಪ್ರಳಯದಲ್ಲಿಯೂ ಆಕ್ಷೇತ್ರವಂ ಬಿಡದೆ ಇರುವಕಾರಣ ಅವಿಮುಕ್ತವೆಂಬ ಹೆಸರಾಯಿತು, ಈ ಭೂಮಿಯು ಉದಕದಿಂ ಹುಟ್ಟುವ ಮುನ್ನ ಈಶ್ವರನಿಂದ ಈ ಕ್ಷೇತ್ರವು ನಿರ್ಮಿಸಲ್ಪಟ್ಟಿತು, ಇದು ಪರಮ ರಹಸ್ಯ, ಇದು ನಿಂದಕರಿಗೆ ಹೇಳಲಾಗದು, ಶಿವಭಕ್ತರಾಗಿ ಶಾಂತರಾಗಿ ಮುಕ್ತಿಯಂ ಬಯಸುವರಿಗೆ ಹೇಳುವದು, ಶಿವಶಕ್ತಿಗಳಿಗೆ ಈ ಕ್ಷೇತ್ರವು ವಾಸಮಂಚ ಸುಷುಪ್ತಿಗೆಯಂತಿಪ್ಪುದು, ಜಗತ್ತಿನಲ್ಲಿ ಪಾರ್ವತೀಪರಮೇಶ್ವರರಿಲ್ಲವೆಂಬ ಮೂಢರು ಮುಕ್ತಿಪ್ರದವಾದ ಈ ಕ್ಷೇತ್ರವಿಲ್ಲ ಎಂಬರಲ್ಲದೆ ವಿವೇಕಿಗಳು ಅನ್ನರೂ, ಅಷ್ಟಾಂಗಯೋಗವುಳ್ಳವನಾದವರೂ ಕಾಶಿಯಲ್ಲಿ ವಿಶ್ವೇಶ್ವರನನ್ನಾರಾಧಿಸಿದ ಮುಕ್ತಿಯನ್ನೈದುವರೂ. ಈ ಕ್ಷೇತ್ರ ತಮಗೆ ಆನಂದಕರವಾಗಿಯೂ ಆನಂದರೂಪವಾದ ಅನೇಕ ಲಿಂಗಗಳಿರ್ದಕಾರಣದಿಂದಲೂ ಆನಂದಕಾನನವೆನಿಸಿತು. ಮಣಿಕರ್ಣಿಕೆ ಆದ ವೃತ್ತಾಂತವಂ ಕೇಳು-ಪೂರ್ವಕ್ಕೆ ಆನಂದವನದಲ್ಲಿ ಶಿವಶಕ್ತಿಗಳು ಕ್ರೀಡಿಸುತ್ತಿರಲೂ ಬಂದು ಇಛ್ಛೆ ಆಯಿತಂತೆ? ಅದೇನೆಂದರೆ ನಾವು ಒಬ್ಬ ಪುರುಷನನ್ನು ಸೃಜಿಸಿ ಸಕಲ ಭಾರವನ್ನು ಆತನವಶವಮಾಡಿ ನಾವು ಕಾಶೀ ವಾಸಿಗಳಿಗೆ ಮೋಕ್ಷವಂ ಕೊಡುತ್ತಾ ಸುಖದಲ್ಲಿ ಇರಬೇಕು, ಆತನು ಸೃಷ್ಟಿ ಸ್ಥಿತಿ ಸಂಹಾರಗಳಿಗೆ ಕರ್ತನಾಗಿ ಇದ್ದಾನು ಎಂದು ಸರ್ವಜ್ಞನಾದ ಸಮರ್ಥನಾದ ಪರಮೇಶ್ವರನು ತನ್ನ ವಾಮಭಾಗದ ಜ್ಞಾನರೂಪಿಯಾದ ಮಹಾದೇವಿಯನ್ನು ಅಮೃತಮಯವಾದ ದೃಷ್ಟಿಯಿಂದ ನೋಡಲು ಆಗಲೊಬ್ಬ ಸೌಂದರ್ಯವುಳ್ಳಂಥಾ ಶಾಂತನಾದ ಸತ್ವಗುಣವುಳ್ಳ ಗಂಭೀರವೂ ಕ್ಷಮೆಯೂ ವುಳ್ಳ ಇಂದ್ರನೀಲದ ಕಾಂತಿಯುಳ್ಳ ಪುಂಡರೀಕಾಕ್ಷನಾದ ಪೀತಾಂಬರಧರನಾದ ಚತುರ್ಭುಜನಾದ ಪದ್ಮನಾಭನಾದ ತಾನೊಬ್ಬನೆ ಸರ್ವಗುಣಸಂಪನ್ನನಾದ ಸಕಲ ಕಲಾಪ್ರವೀಣನಾದ ಸರ್ವೋತ್ತಮನಾದಕಾರಣ ಪುರುಷೋತ್ತಮನೆನಿಸಿಕೊಂಬ ಒಬ್ಬ ಪುರುಷನುದ್ಭವಿಸಲು ಆ ಪುರುಷನ ನೋಡಿ ಮಹಾವಿಷ್ಣುವೆಂದು ಹೆಸರಿಟ್ಟು ಆತನಂ ಕರೆದು ನಿನ್ನ

ಶ್ವಾಸಗಳಿಂದ ವೇದಗಳಾಗಲಿ, ಆದರಿಂದ ಸಕಲವಂ ತಿಳಿದು ಆ ವೇದೋಚ್ಚಾರಣದಿಂ ಸಕಲವನ್ನೂ ಮಾಡು ಎಂದು ಸತ್ವರೂಪಿಯಾದ ವಿಷ್ಣುವಿಗೆ ಕಟ್ಟುಮಾಡಿ, ಪಾರ್ವತಿಸಹಿತ ಆ ನಂದನವನದಲ್ಲಿ ಪ್ರವೇಶವಾಗೆ ಅನಂತರದಲ್ಲಿ ವಿಷ್ಣುವು ಆ ಪರಮೇಶ್ವರಾಜ್ಞೆಯಂ ಶಿರಸಾವಹಿಸಿ ಲೋಕವ್ಯಾಪಹಾರಕ್ಕೆ ಉಪಾಯವೇನೆಂದು ಕ್ಷಣಮಾತ್ರ ಧ್ಯಾನಿಸಿ, ತಪದಿಂದಲ್ಲದೆ ಲೋಕಸಂರಕ್ಷಣೆಯಂ ಮಾಡಕೂಡದು, ತಪಸ್ಸುಮಾಡಬೇಕೆಂದು ತನ್ನ ಚಕ್ರದಿಂದ ಒಂದು ಕೊಳವಂ ನಿರ್ಮಿಸಿ, ಆ ಸತ್ವರೂಪವಾದ ತನ್ನ ಶರೀರದಿಂ ಪುಟ್ಟಿದ ಬೆವರಿನಿಂದ ಆ ಕೊಳವಂ ತುಂಬಿ ಆ ತೀರದಲ್ಲಿ ಮೋಟುಮರದಂತೆ ನಿಶ್ಚಲನಾಗಿ ದೇವಮಾನದ ಇಪ್ಪತ್ತು ಸಾವಿರವರುಷ ಉಗ್ರತಪವಿರಲು, ಪಾರ್ವತೀಸಮೇತನಾದ ಪರಮೇಶ್ವರನು ಪ್ರಸನ್ನನಾಗಿ, ತಪದಿಂದ ಉಜ್ವಲಮಪ್ಪ ಅರೆಗಣ್ಣುಮುಚ್ಚಿ ತಪವಿರ್ದ ವಿಷ್ಣುವಂನೋಡಿ, ತಲೆದೂಗಿ ಈತನ ತಪವೂ, ಧೈರ್ಯವೂ, ಮಹಾ ಘನವಾದ ಐಶ್ವರ್ಯವುಳ್ಳದ್ದು; ಇದು ಮಹಾಶ್ಚರ್ಯ; ಕಾಷ್ಠವಿಲ್ಲದೆ ಪ್ರಜ್ವಲಿಪ ಅಗ್ನಿಯಂತಿದ್ದಾನು ಎಂದು ಒಂದು ವಾಕ್ಯಮಂ ನುಡಿದನು ; ಎಲೈ ವಿಷ್ಣುವೇ ತಪವುಸಾಕು, ವರವಂ ಬೇಡಿಕೋ ಎನಲು ಇದಿರೆದ್ದು ಪರಮೇಶ್ವರಂಗಿಂತೆಂದನು ಸ್ವಾಮಿ ನೀನು ಪ್ರಸನ್ನನಾಗಿ ಎನಗೆ ವರವಂಕೊಡುವವುಂಟಾದರೆ ಪಾರ್ವತೀಸಹಿತವಾದ ನಿಮ್ಮರೂಪವನ್ನು ನೋಡಲಿಚ್ಛೈಸುತಲಿದ್ದೇನೆ, ಸಕಲ ಕಾರ್ಯಗಳಲ್ಲಿಯೂ ಮುಂಚೆ ಸಂದರ್ಶನವಾಗಬೇಕು, ನಿಮ್ಮ ಪಾದಪದ್ಮಂಗಳಲ್ಲಿ ತನ್ನ ಚಿತ್ತವೆಂಬ ಭ್ರಮರವು ನಿಶ್ಚಲವಾಗಿ ಇರಲಿ ಎಂದು ಬಿನ್ನೈಸಲು, ಹಾಗೇ ಆಗಲಿ; ಮತ್ತೊಂದು ವರವಂ ಕೇಳು ನಿನ್ನ ತಪಸ್ಸಿಗೆ ಮೆಚ್ಚಿ ಶಿರಃಕಂಪನವ ಮಾಡಲೂ ತನ್ನ ಕರ್ಣಾಭರಣವಾದ ಮಣಿಯು ಸರ್ಪಕುಂಡಲವು ನೀನು ನಿರ್ಮಿಸಿದ ಸರಸ್ಸಿನಲ್ಲಿ ಬಿದ್ದ ಕಾರಣ ಈ ಕೊಳದ ಹೆಸರು ಮಣಿಕರ್ಣಿಕೆ ಎಂಬದಾಗಿ ಪ್ರಸಿದ್ಧಿಯಾಗಲಿ, ಎಂದು ಈಶ್ವರನು ನಿರೂಪಿಸಲು, ವಿಷ್ಣುವಿಂತೆಂದನು ಎಲೈ ಸ್ವಾಮಿ, ನಿಮ್ಮ ಕರ್ಣಕುಂಡಲವಿಲ್ಲಿ ಪ್ರವೇಶವಾದ ಕಾರಣ ಈ ತೀರ್ಥವು ಉತ್ತಮೋತ್ತಮವಾದದ್ದು, ನಿಮ್ಮ ದಿವ್ಯತೇಜಸ್ಸು ಇಲ್ಲಿ ಪ್ರವೇಶವಾದ ಕಾರಣದಿಂದಲೂ ಈ

ಕ್ಷೇತ್ರವು ಕಾಶೀ ಎಂದು ಪ್ರಸಿದ್ಧವಾಗಲಿ, ಈ ಲೋಕೋಪಕಾರವಾಗಿ ಮತ್ತೊಂದು ವರವಂ ಬೇಡುತ್ತಿದ್ದೇನೆ ಅದಾವುದೆನೆ ಅಂಡಜ, ಜರಾಯುಜ, ಸ್ವೇದಜ, ಉದ್ಭಿಜವೆಂಬ ಪ್ರಾಣಿಗಳು ಈ ಕ್ಷೇತ್ರವ ಮೆಟ್ಟಿ, ಈ ತೀರ್ಥವಸ್ನಾನವಮಾಡಿ, ನಿಮ್ಮ ದರ್ಶನವಮಾಡಿದಮಾತ್ರದಿಂದ ಶಿವಸಾಯುಜ್ಯ ಮುಕ್ತಿಯಾಗಲಿ, ಈ ತೀರ್ಥದಲ್ಲಿ ಸ್ನಾನವಂಮಾಡಿ ಸಂಧ್ಯಾವಾಸ ಜಪ, ಹೋಮ, ವೇದಪಾರಾಯಣ, ಪಿಂಡ, ದಾನ, ಪೂಜೆ, ಗೋವು, ತಿಲ, ಹಿರಣ್ಯ, ದೀಪ, ಅನ್ನ, ವಸ್ತ್ರ, ಭೂಷಣ, ಕನ್ಯಾದಾನ, ವ್ರತೋದ್ಯಾಪನೆ, ವೃಷೋತ್ಸರ್ಗ, ಲಿಂಗಸ್ಥಾಪನ ಮೊದಲಾದ ಧರ್ಮಗಳಂಮಾಡಿದವರ್ಗೆ ಮುಕ್ತಿಯಾಗಲಿ, ಈ ಮಣಿಕರ್ಣಿಕೆಯಲ್ಲಿ ಮರಣವಾದ ಕ್ರಿಮಿಕೀಟ ಪತಂಗ, ತುರಂಗ, ಭುಜಂಗ, ಶಶಕ, ಮಶಕಾದಿಗಳಿಗೂ ದೇವದಾನವಮಾನವಾದಿಗಳಿಗೂ ಮುಕ್ತಿಯಾಗಲಿ, ನಿರಂತರವೂ ಕೃತಯುಗ ಉತ್ತರಾಯಣಮಹೋದಯಕ್ಕೆ ಸಮಾನವಾದ ಪುಣ್ಯಕಾಲವುಂಟಾಗಲಿ, ಐದುರಾತ್ರಿ ಇದ್ದವರ್ಗೆ ವೇದಪಾರಾಯಣ ಫಲವುಂಟಾಗಲಿ, ನಿಯಮದಿಂ ಮೂರುದಿನವಿದ್ದವರ್ಗೆ ಅಶ್ವಮೇಧ ರಾಜಸೂಯಯಾಗಗಳ ಫಲ ದೊರಕೊಳ್ಳಲಿ, ಈ ಕ್ಷೇತ್ರವಂ ನೋಡಿದಮಾತ್ರದಲ್ಲಿಯೇ ತುಲಾಪುರುಷದಾನಫಲವಾಗಲಿ ಎಂದು ಬಿನ್ನೈಸಿದ ವಿಷ್ಣುವಾಕ್ಯವಂ ಕೇಳಿ, ಪರಮೇಶ್ವರನು ಸಂತೋಷದಿಂದ ಹಾಗೇ ಆಗಲಿ ಎಂದು ಅಂಗೀಕರಿಸಿ ವರವಿತ್ತಂದನು, ನೀನು ವೇದೋಕ್ತವಾದ ನಾನಾವಿಧ ಸೃಷ್ಟಿಯಂಮಾಡಿ ಧರ್ಮದಿಂ ರಕ್ಷಿಸು, ಬಳಿಕ್ಕೈರುಗಳು ತಮ್ಮಿಂದ ತಾವೇ ಕೆಟ್ಟುಪೋಪಂತೆ ತಮ್ಮ ದುಷ್ಕೃತದಿಂ ಕೆಡುವ ಲೋಕಕಂಟಕರಂ ಸಂಹರಿಸು, ತಪೋಬಲದಿಂದ ನಿನಗೆ ಅಶಕ್ಯವಾದಂಥಾವರನ್ನು ನಾನು ಸಂಹರಿಸುವೆನು, ಈ ಕ್ಷೇತ್ರವಲ್ಲಿ ತನ್ನ ಆಜ್ಞೆಯಿಲ್ಲದೆ ಮಿಕ್ಕಾದವರ ಆಜ್ಞೆ ಸಲ್ಲದು, ದೂರದಲ್ಲಿ ಇದ್ದವರಾದರೂ ಈ ಕ್ಷೇತ್ರವಂ ನಮಸ್ಕರಿಸಿ ಮೂರುಬಾರಿ ಕಾಶೀ ಕಾಶೀ ಕಾಶೀ ಎಂದು ನೆನೆದವರು ಇಹದಲ್ಲಿ ಸುಖವನ್ನನುಭವಿಸಿ, ಪರದಲ್ಲಿ ಸ್ವರ್ಗಭೋಗವನ್ನನುಭವಿಸಿ, ಭೂತಳದಲ್ಲಿ ಜನಿಸಿ ಏಕರಾಜ್ಯವನ್ನಾಳಿ ಈ ಕ್ಷೇತ್ರಕ್ಕೆ ಬಂದು ಮುಕ್ತರಾಗಿ ಸಾಯುಜ್ಯವಂಪಡೆ

ವರು, ಈ ಕ್ಷೇತ್ರದಲ್ಲಿ ವಾಸವಾಗಿರ್ದು ದೈವವಶದಿಂದ ಮತ್ತೊಂದು ಕಡೆಯಲ್ಲಿ ಮೃತನಾದರೆ ಆತನು ಸ್ವರ್ಗಭೋಗವನ್ನನುಭವಿಸಿ ಭೋಗಾನಂತರದಲ್ಲಿ ಈ ಕಾಶೀಕ್ಷೇತ್ರದಲ್ಲಿಯೇ ಮುಕ್ತನಾಗಿ ಮೋಕ್ಷವಪಡೆವನು, ಎಂದು ಶಿವನು ಹೇಳಲು ವಿಷ್ಣುವಿಂತೆಂದನು;-ಎಲೈ ಸ್ವಾಮಿಯೆ, ಈ ಕ್ಷೇತ್ರದಲ್ಲಿ ಮಹಿಮೆಯನ್ನು ಅರಿಯದೆ ವಿಶ್ವಾಸವಿಲ್ಲದೆ ಇಲ್ಲಿ ಮೃತರಾದವರ್ಗೆ ಆವಗತಿಯಹುದೆನಲು, ಈಶ್ವರನಿಂತೆಂದನು ಮಿಕ್ಕಾದ ಸಳದಲ್ಲಿ ಬಹಳ ಪಾಪ ಮಾಡಿ, ಕಾಶೀಗೆಬಂದು ವಿಶ್ವಾಸವಿಲ್ಲದೆ ಮೃತರಾದವರಿಗೆ ಆಗುವಗತಿಯಂ ಕೇಳು; ಪಾಪಿಗಳು ಕಾಶೀಪಟ್ಟಣವಂ ಪೋಗಲು ಗಣಂಗಳು ತ್ರಿಶೂಲಪಾಣಿಗಳಾಗಿ ಕ್ಷೇತ್ರದಿಂ ಬಳಸಿರಲು, ಪಾಪಿಗಳು ಅಂಜಿ ಹೊರಗೆನಿಂತಿಹರು; ಅವರು ಪಾಪರಹಿತರಾಗಿ ಮಣಿಕರ್ಣಿಕೆಯಲ್ಲಿ ಸ್ನಾನವಂಮಾಡಿ ಒಂದು ಕ್ಷಣವಾದರೂ ಜಪವಂ ಜಪಿಸಲು,ಸಕಲ ತೀರ್ಥಸ್ನಾನ, ಸಕಲ ದಾನಗಳನಿತ್ತ ಫಲವಹುದು; ವಿಶ್ವಾಸವಿಲ್ಲದೆ ಸ್ನಾನವಂಮಾಡೆ ಸ್ವರ್ಗವಹುದು, ವಿಶ್ವಾಸದಿಂ ಸ್ನಾನವಂಮಾಡಿ ತಿಲ, ದರ್ಭೆ, ಯವೆಗಳಿಂ ದೇವಋಷಿಪಿತೃತರ್ಪಣವಂಮಾಡಿ, ದೇವಪೂಜೆ ಜಪ ಮಂತ್ರಗಳಂ ಜಪಿಸಿ, ಮೌನದಿಂ ವಿಶ್ವೇಶ್ವರನ ದರ್ಶನವಂಮಾಡೆ ಸರ್ವಯಜ್ಞ ಸರ್ವವ್ರತ ಫಲವಹುದು;ನ್ಯಾಯಾರ್ಜಿತವಾದ ದ್ರವ್ಯವಂ ದಾನವಮಾಡಲು ಜನ್ಮಜನ್ಮದಲ್ಲಿಯೂ ದರಿದ್ರವಿಲ್ಲ, ಮೌನದಿಂದೊಮ್ಮೆ ವಿಶ್ವೇಶ್ವರನಪೂಜಿಸಲು ಯಾವಜ್ಜೀವವೂಪೂಜೆಯಂಮಾಡಿದ ಫಲವಹುದು;ಅವನಾನೊಬ್ಬನು ತಾಗಳಿಸಿದ ಧನವಂತಂದು ಈ ಕ್ಷೇತ್ರದಲ್ಲಿ ದಾನವಂಮಾಡುವನು ಅವನು ಕೀಟಕ ಜನ್ಮದಲ್ಲಿ ಜನಿಸಿ, ಕಷ್ಟಪಡದೆ ಉತ್ತಮನು ಜನ್ಮವಂ ಪಡೆವನು; ಈ ಕಾಶೀ ಕ್ಷೇತ್ರದಲ್ಲಿರ್ದ ಲಿಂಗರೂಪವಾದ ವಿಶ್ವೇಶ್ವರನು ಸಿದ್ಧಿಂಪಲೂ ಧ್ಯಾನಿಸತಕ್ಕವನು, ಪಂಚಕ್ರೋಶವಾದ ಈ ಕ್ಷೇತ್ರವು ಜ್ಯೋತಿರ್ಲಿಂಗಸ್ವರೂಪವು, ವಿಶ್ವೇಶ್ವರನು ಈ ಕ್ಷೇತ್ರದಲ್ಲಿ ಒಂದುಕಡೆಯಲ್ಲಿದ್ದರೂ ಸೂರ್ಯನು ಜಗವಂ ಬೆಳಗುವಂತೆ ಸರ್ವವನ್ನು ವ್ಯಾಪಿಸಿಕೊಂಡು ಇಹನು, ವಿಘ್ನವಿಲ್ಲದೆ ಬಹುಜನ್ಮದಲ್ಲಿ ಯೋಗಾಭ್ಯಾಸವಂಮಾಡಿದವಗೆ ಆಗುವಗತಿಯು, ಈ ಕ್ಷೇತ್ರದಲ್ಲಿ ಸುಮ್ಮನೆ ಯಿದ್ದವರಿಗಾಗು

ವದು, ಬಹುಕಾಲ ತಪಸ್ಸು ಮಾಡಿದವರಫಲ ಒಂದುರಾತ್ರಿಯಲ್ಲಿ ಇಲ್ಲಿರ್ದರಿಗುಂಟು, ವಿಶ್ವಾಸಹೀನನಾದ ಅಜ್ಞಾನಿಯು ಕಾಶೀಯಲ್ಲಿ ಮೃತನಾಗೆ ಮೋಕ್ಷವುಂಟು, ಬ್ರಂಹಾದಿಗಳು ಮೊದಲಾಗಿ ತ್ರಿಗುಣಿತವಾದ ಇಪ್ಪತ್ತು ನಾಲ್ಕು ಪಾಶದಿಂದ ಕಂಠದಲ್ಲಿ ಬದ್ಧರಾಗಿರ್ಪುದರ್ ಇಲ್ಲಿ ಮುಕ್ತರಹರು, ಯೋಗಕ್ಕೆ ಅನೇಕ ವಿಘ್ನಗಳು, ತಪಸ್ಸಿಗೆ ಬಹುಕಷ್ಟ, ತಪೋಯೋಗಗಳಿಂದಲೂ ಭ್ರಷ್ಟನಾಗೆ ಪುನರ್ಜನ್ಮವುಂಟಾಗಿ ಕಾಶೀಯಲ್ಲಿ ರುದ್ರಪಿಶಾಚವಾಗಿ ಮುಕ್ತರಹರು, ಇಲ್ಲಿ ಮೃತರಾದ ಪಾಪಿಗಳಿಗೆ ಮೊದಲಾಗಿ ನರಕಬಾಧೆಯಿಲ್ಲ ಅವರನ್ನು ನಾನೇ ಶಿಕ್ಷಿಪೆನು; ಅದುಕಾರಣ ಶರೀರನಿತ್ಯವಲ್ಲ, ಗರ್ಭದಲ್ಲಿ ಬರುವೇದನೆ, ಅದನರಿತು ಆಳುವ ರಾಜ್ಯಸಂಪದವನಾದರೂ ಬಿಟ್ಟು ಕಾಶೀವಾಸವನ್ನೇ ಮಾಡಬೇಕು, ಇಲ್ಲದರೆ ಯಮದೂತರಾವಾಗ ಬಂದಾರೆಂಬುದು ತಿಳಿಯಬಾರದು, ಮರಣ ಆವಗಲೋ ತಿಳಿಯಬಾರದು, ಮರಣವಾಗೆ ಜನನ, ಜನನವಾಗೆ ಮರಣ, ಅದಕಾರಣ ಪತ್ನೀ ಪುತ್ರ ಕ್ಷೇತ್ರಗಳಲ್ಲಿ ಮಮತೆಯಂಬಿಟ್ಟು, ಕಾಶೀಯನ್ನೇ ಸೇರಬೇಕು; ತನಗೆ ಯೌವನಸ್ಥಿರ, ಮರಣವಿಲ್ಲವೆಂದು ಕ್ಷಣಭಂಗುರ ಶರೀರಮಂ ನೆಚ್ಚಿ, ಚಿಂತೆಯಿಲ್ಲದೆ ನಿಶ್ಚಿಂತೆಯಲ್ಲಿರೆ ಅನಿತರೊಳು ಮರಣ ಸಮೀಪವಾಗಲು ಯಮದೂತರಾರ್ಭಟೆಯಿಂ ಯಮವಾಹನವಾದ ಕೋಣನ ಕೊರಳಘಂಟೆಯ ಧ್ವನಿಯಂ ಕೇಳಿದಾಗ ಆ ಸಮಯದಲ್ಲಿ ಕಾಶಿಗೇ ಹೋದೇನೆಂದರೆ ಶಕ್ಯವಲ್ಲ, ಅದನರಿತು ಸ್ವಸ್ಥವಾಗಿ ಇದ್ದಾಗಲೇ ಕಾಶೀಗೆ ಹೋಗಬೇಕೆಂದು ಸಕಲ ಪಾಪವಂ ಪರಿಹರಿಪ ಈಕಥೆಯನ್ನು ಅಗಸ್ತ್ಯರಿಗೆ ಕುಮಾರಸ್ವಾಮಿ ಪೇಳ್ದನೆಂದು ವ್ಯಾಸರು ನಿರೂಪಿಸಿದ ಅರ್ಥವಂ ಸೂತಪುರಾಣೀಕನು ಶೌನಕಾದಿ ಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ* ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕ ಭಾಷೆಯಿಂದ ವಿರಚಿಸಿದಸ್ಕಾಂದಪುರಾಣೋಕ್ತ ಕಾಶೀಮಹಿಮಾರ್ಥ ದರ್ಪಣದಲ್ಲಿ ಮಣಿಕರ್ಣಿಕಾ ಉತ್ಪತ್ತಿ ಎಂಬ ಇಪ್ಪತ್ತಾರನೆಯ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ.

ಇಪ್ಪತ್ತಾರನೇ ಅಧ್ಯಾಯಂ ಸಂಪೂರ್ಣವು.

ವಿಶ್ವೇಶ್ವರಾಯನಮಃ

ಇಪ್ಪತ್ತೇಳನೆಯ ಅಧ್ಯಾಯ.

ಕಾಶೀಮಹಾತ್ಮ್ಯ, ಗಂಗಾಮಹಾತ್ಮ್ಯ.

ಅನಂತರದಲ್ಲಿ ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು, ಕೇಳೈ ಅಗಸ್ತ್ಯನೆ,—ಈಶ್ವರನು ವಿಷ್ಣುವಿಗೆ ಕಾಶೀ ಮಹಾತ್ಮ್ಯೆಯಂ ಪೇಳಿದನದೆಂತೆಂದರೆ ಕೇಳೈ ವಿಷ್ಣುವೆ- ಈ ಕ್ಷೇತ್ರಕ್ಕೆ ಕಾಶೀಯೆಂದೂ ಅವಿಮುಕ್ತವೆಂದೂ ಆನಂದಕಾನನವೆಂದೂ ನಾಮಂಗಳಾದ ಕಾರಣವಂ ಕೇಳಿದೆಯಲ್ಲಾ, ವಾರಣಾಶಿ ಎಂಬ ಹೆಸರು ಬಂದಪ್ರಕಾರವಂನ್ನು ಪೇಳುತ್ತಾಯಿದ್ಧೇನೆ ಕೇಳು,-ಪೂರ್ವಕ್ಕೆ ಸೂರ್ಯವಂಶದಲ್ಲಿ ಪುಟ್ಟ ಧಾರ್ಮಿಕನಾದ ಭಗೀರಥನೆಂಬರಾಯನು ಕಪಿಲಋಷಿಯ ಕೋಪಾಗ್ನಿಯಿಂದ ದಹಿಸಲ್ಪಟ್ಟ ತನ್ನ ಪೂರ್ವೀಕರಿಗೆ ಉತ್ತಮಗತಿಯಂ ಕಾಣಿಸುವದಕ್ಕೋಸ್ಕರ ಗಂಗೆಯನ್ನು ತರುವದಕ್ಕೆ ತಪಮಂ ಮಾಡುವನಿಮಿತ್ಯವಾಗಿ ಮಂತ್ರಿಗಳಿಗೆ ರಾಜ್ಯಭಾರವಂ ಕೊಟ್ಟು, ಹಿಮವಂತಕ್ಕೆ ತಪಸ್ಸಿಗೆ ಪೋದನು; ಹಾಗೆ ಉಚಿತವಹುದಲ್ಲ ಲೋಕದಲ್ಲಿ ಬ್ರಾಹ್ಮರ ಶಾಪದಗ್ಧರಾಗಿ ನರಕವನ್ನೈದಿದವರನ್ನು ಪುಣ್ಯಲೋಕವನ್ನೈದಿಸುವದಕ್ಕೋಸ್ಕರ ವಿಷ್ಣುವಿನ ಪಾದಾರವಿಂದದಲ್ಲಿ ಹುಟ್ಟಿದ ಗಂಗೆ ಹೊರತಾಗಿ ಮತ್ತೊಬ್ಬರು ಸಮರ್ಥರಲ್ಲವಲ್ಲಾ, ಆ ಗಂಗೆ ಪಾರ್ವತೀಸ್ವರೂಪವಾದ ಯನ್ನ ಎರಡನೇ ಮೂರ್ತಿ, ಅನೇಕ ಬ್ರಹ್ಮಾಂಡಗಳಿಗೆ ಆಧಾರವಾದ್ದರಿಂದ ಪ್ರಕೃತಿಸ್ವರೂಪವು, ಶುದ್ಧವಿದ್ಯಾಸ್ವರೂಪವು, ಇಛಾಶಕ್ತಿ ಜ್ಞಾನಶಕ್ತಿರೂಪ, ನಂನ ಆನಂದರೂಪವು; ಪರಬ್ರಹ್ಮಸ್ವರೂಪಿಯಾದ ಆ ಗಂಗೆಯ ವಿಲಾಸದಿಂ ಲೋಕರಕ್ಷಾರ್ಥವಾಗಿ ತನ್ನ ಶಿರಸ್ಸಿನಲ್ಲಿ ಧರಿಸಿದೆನು; ಕೇಳೈ, ವಿಷ್ಣುವೇ— ಮೂರುಲೋಕದಲ್ಲಿ ಇರ್ದ ಸಕಲ ತೀರ್ಥಗಳೂ, ಪುಣ್ಯಕ್ಷೇತ್ರಗಳೂ, ಸಕಲ ಧರ್ಮಗಳೂ, ದಕ್ಷಿಣೆಸಹಿತವಾದ ಯಜ್ಞಗಳೂ, ತಪಸ್ಸುಗಳೂ, ಸಾಂಗವಾದ ಶೃತಿಗಳೂ,

ಪುಣ್ಯವಾದ ಭೂಮಿಯೂ, ನಾನೂ, ನೀನೂ, ಬ್ರಹ್ಮನೂ, ದೇವತೆಗಳೂ, ಚತುರ್ವಿಧ ಪುರುಷಾರ್ಥಗಳೂ, ಇವುಮೊದಲಾದವೆಲ್ಲವೂ ಗಂಗೆಯಲ್ಲಿ ಸೂಕ್ಷ್ಮರೂಪಿನಲ್ಲಿ ಇಹವು ; ಗಂಗೆಯನ್ನು ಆವನಾನೊಬ್ಬನು ದರ್ಶನ ಸ್ನಾನಪಾನಾದಿಗಳಿಂದ ಸೇವಿಸುವನೋ ಸಕಲಪಾಪವೂ ಅನ್ನದಾನ, ಯೋಗ, ತೀರ್ಥಸ್ನಾನ ಯಜ್ಞ, ವ್ರತ, ಆಶ್ರಮ ಧರ್ಮ, ವೇದಾಭ್ಯಾಸಪೂರ್ವಕವಾಗಿ ತ್ರಿಕರಣದಲ್ಲಿಯೂ ಮಾಡಿದ ಪಾಪವಂ ಪರಿಹರಿಸಿಕೊಂಡನು, ಕೃತಯುಗದಲ್ಲಿ ಸಕಲ ತೀರ್ಥಂಗಳೂ ಪ್ರಸಿದ್ಧವು; ತ್ರೇತಾಯುಗದಲ್ಲಿ ಪುಷ್ಕರಪ್ರಸಿದ್ಧಿ, ದ್ವಾಪರದಲ್ಲಿ ಕುರುಕ್ಷೇತ್ರಪ್ರಸಿದ್ಧಿ, ಕಲಿಯುಗದಲ್ಲಿ ಗಂಗೆ ಶ್ರೇಷ್ಠ, ಕೃತಯುಗದಲ್ಲಿ ಧ್ಯಾನವೇ ಮೋಕ್ಷಸಾಧನ, ತ್ರೇತಾಯುಗದಲ್ಲಿ ಧ್ಯಾನತಪಂಗಳೆರಡೂ ಮೋಕ್ಷಸಾಧನ, ದ್ವಾಪರದಲ್ಲಿ ಧ್ಯಾನ, ತಪ ಯಜ್ಞಂಗಳು ಮೋಕ್ಷಸಾಧನ, ಕಲಿಯುಗದಲ್ಲಿ ಗಂಗೆಯೊಂದೇ ಮೋಕ್ಷಸಾಧನ, ಪೂರ್ವಜನ್ಮವಾಸನಾಫಲದಿಂದ ಗಂಗಾತೀರದಲ್ಲಿ ವಾಸದೊರಕೊಂಬುದು ಯಾವಜ್ಜೀವವೂ ಗಂಗಾತೀರದಲ್ಲಿ ಇದ್ದವನೇ ವೇದಾಂತಜ್ಞಾನಿ, ಯೋಗಿ, ಬ್ರಹ್ಮಚಾರಿಯೆನಿಸಿಕೊಂಬನು, ಪರಸ್ತ್ರೀ ಪರಧನಗಳನಪಹರಿಸಿ ಅನಾಚಾರಿಯಾದವಂಗೆ ಗಂಗೆಯಲ್ಲದೆ ಪತ್ತ್ಯಗತಿಯಿಲ್ಲ; ಅಲಕ್ಷ್ಮಿ, ದುಃಸ್ವಪ್ನ, ದುರ್ವಿಚಾರ, ದುರ್ನಿಮಿತ್ತಂಗಳೂ, ಗಂಗಾಸ್ನಾನದಿಂದ ಪರಿಹರ; ಸಕಲ ಪಾಪಿಗಳಿಗೂ ಗಂಗೆ ಆ ಪಾಪಗಳ ಪರಿಹರಿಪ ಸಕಲಧ್ಯಾನ, ದಾನ, ತಪಸ್ಸು, ಜ್ಞಾನಾದಿಗಳು, ಗಂಗಾತೀರದಲ್ಲಿ ವಾಸ ಗಂಗಾಸೇವಿಗಳಲ್ಲಿ ಸಹಸ್ರಾಂಶಕ್ಕೆ ಸರಿಬಾರವು; ಗಂಗಾತೀರವಾಸವು ಬ್ರಹ್ಮಜ್ಞಾನಕ್ಕೆ ಕಾರಣ, ಬಹು ದೂರದಲ್ಲಿ ಇದ್ದರೂ ಗಂಗಾಮಹಾತ್ಮೆಯಂ ಬಲ್ಲನೀಚನಾದರೂ ವಿಶ್ವಾಸವೇ ಸೂಕ್ಷ್ಮಧರ್ಮವಾದಕಾರಣ ವಿಶ್ವಾಸದಿಂದ ಗಂಗೆ ಪ್ರಸನ್ನಳಹಳು, ರಾಗದ್ವೇಷಾದಿಗಳಿಂ ಮೂಢರಾದ ಪ್ರಾಣಿಗಳಿಗೆ ಧರ್ಮದಲ್ಲಿಯೂ ವಿಶ್ವಾಸಪುಟ್ಟದು, ಬಾಹ್ಯದಲ್ಲಿದ್ದ ಉದಕವು ನಾರಿಕೇಳಫಲವಂ ಸೇರುವಂತೆ ಬಾಹ್ಯಾವರಣೋದಕವೆ ಈ ಗಂಗೆಯಾದಕಾರಣ ಈ ಗಂಗಾಸೇವೆಗಿಂತ ಮತ್ತೊಂದು ಸಾಧನ ಲಾಭವಿಲ್ಲ; ಸಮರ್ಥನಾಗಿ

ದಾನಶೀಲನಾದಡೆ ಈ ಗಂಗಾಸ್ನಾನವಂ ಮಾಡಿದರೆ ಅವನ ದಿವ್ಯಜ್ಞಾನಿ, ಯಜ್ಞ, ದಾನ, ತಪಸ್ಸು, ವ್ರತಾದಿಗಳು ಗಂಗಾಸ್ನಾನವಿಲ್ಲದೆ ವ್ಯರ್ಥವು; ಒಂದುಕಲ್ಪಪರಿಯಂತರ ಇತ್ತ ದಾನಫಲವು ಒಂದು ಗಂಗಾಸ್ನಾನಕ್ಕೆ ಸರಿಬಾರದು; ಗಂಗಾಸ್ಮರಣೆಯೆಂಬ ವಜ್ರಾಯುಧದಿಂದ ಪಾಪವೆಂಬ ಗಿರಿಗಳು ಪೋಪುವು; ಗಂಗಾಸ್ನಾನಕ್ಕೆ ಸಮಾನವಾದ ಫಲವಿಲ್ಲ; ಅದುಕಾರಣ ಅಶಕ್ತನಾದವನು ಗಂಗಾಸ್ನಾನಕ್ಕೆ ಹೋಗಲಾರದಿದ್ದಡೆ ನಡೆವಾಗ, ನಿಂದಾಗ, ನಿದ್ರೆಗೈವಾಗ, ಎಚ್ಚರಿತಾಗ, ಉಂಬಾಗ, ಮಾತನಾಡುವಾಗ, ಧ್ಯಾನಿಸುವಾಗ, ಪುಸುರ್ಬಿಡುವಾಗ ಇವು ಮೊದಲಾದ ಸಮಯಗಳಲ್ಲಿಯೂ ಗಂಗೆಯಂ ಸ್ಮರಿಸಲು ಸಕಲ ಪಾಪವಿಮೋಚನ; ಪಿತೃಗಳಂ ಕುರಿತು ತುಪ್ಪ, ಜೇನುತುಪ್ಪ, ಸಕ್ಕರೆ, ಉತ್ತಮವಾದ ಪಾಯಸ ಇವಂ ಗಂಗೆಯ ತೀರದಲ್ಲಿ ದಾನಕೊಡಲು ಪಿತೃಗಳು ನೂರು ವರ್ಷ ತೃಪ್ತರಹರು; ಹಾಗೆ ಅವರು ತೃಪ್ತರಾಗಿ ಸಕಲೈಶ್ವರ್ಯಗಳನ್ನು ಕೊಡುವರು; ಅಗ್ನಿಹೋತ್ರಾದಿ ಧರ್ಮಫಲಂಗಳು ಗಂಗಾತೀರದಲ್ಲಿ ಸ್ನಾನವಂ ಮಾಡಿ, ತರ್ಪಣಾದಿಕ್ರಿಯೆಗಳಂ ವಿರಚಿಸಿ, ಒಂದು ನಿಮಿಷ ಒಂದು ಲಿಂಗವಂ ಪೂಜಿಸಿದ ಫಲವೊಳಗೆ ಒಂದುಕೋಟಿಯಲ್ಲಿ ಒಂದುಭಾಗಕ್ಕೆ ಸರಿಬಾರದು, ಗಂಗಾಯಾತ್ರೆಗೆ ಪೋಪೆವೆಂದು ಸಂಕಲ್ಪಿಸಲು ಅವರ ಪಿತೃಗಳು ಸಂತೋಷಪಡುವರು; ಲೋಭ ಮೋಹಾದಿ ಮಹಾ ಪಾಪಗಳು ನಾನೆಲ್ಲಿ ಪೋಪೆನೆಂದು ಮೊರೆಯಿಟ್ಟು ವಿಘ್ನವಂ ಮಾಡುತ್ತಿಹವು, ಪುಣ್ಯಪುರುಷರು ಪುತ್ರಮಿತ್ರರೆಂಬ ವ್ಯಾಮೋಹವಿಘ್ನವಂ ಪರಿಹರಿಸಿ ಗಂಗಾತೀರವನೆಯ್ದುವರು, ಉತ್ತಮವಾದ ಗತಿಯನ್ನೈದಬೇಕೆಂಬವನು ಒಂದು ನೆವದಿಂದಲಾದರೂ ರೊಕ್ಕದಾಶೆಯಿಂದಾದರೂ, ಪೋಲಗದಿಂದ ಕಾಮಗೋಷ್ಟಿಯಿಂದಲಾದರೂ, ಗಂಗಾಸ್ನಾನವಂ ಮಾಡಲು ಮಾಗಿದ ಕಾಷ್ಟ ಅಗ್ನಿಯಲ್ಲಿ ದಹಿಸುವಂತೆ ಗಂಗೆಯು ಸಕಲ ಪಾಪವಂ ದಹಿಸಿ ಸ್ವರ್ಗವನೈದಿಸುವಳು, ಗಂಗಾಸ್ನಾನವಂ ಮಾಡಿದವನು ಮನುಜರೂಪಿನ ದೇವರು, ಗಂಗಾಯಾತ್ರೆಗೆ ಪೋಪಾಗ ಮಾರ್ಗದಲ್ಲಿ ಮೃತವಾದರೂ ಗಂಗಾಸ್ನಾನ ಫಲವುಂಟು, ಆ ಫಲದ ಮಹಿ

ಮೊಹಿಂದ ಪುರುಜನ್ಮದಲ್ಲಿ ಗಂಗಾಸ್ನಾನದೊರಕಿ ಮೋಕ್ಷವನ್ನೈದುವನು, ಗಂಗಾಮಹಿಮೆಯಂ ಕೇಳುವರ್ಗೆ ಸಕಲ ಪಾಪಹರವು, ಪ್ರಾಯಾಪೋಹತರಾದವರ್ಗೆ ಗಂಗೆಯು ಒಂದು ನದೀಮಾತ್ರವಾಗಿ ತೋರುವಳು, ಜನ್ಮಾಂತರದ ಸುಕೃತದಿಂ ಗಂಗಾಭಕ್ತಿ ದೊರಕೊಂಬುದು, ಆ ಭಕ್ತಿಯುಳ್ಳವರ್ಗೆ ಬ್ರಹ್ಮನು ಅಮರಾವತೀ ಮೊದಲಾದ ಪಟ್ಟಣಗಳಲ್ಲಿ ಬಿಡಾರವಂ ನಾಣಿಕೆಕೊಂಡು ಇಹನು, ಈ ಕಾಶೀಯಲ್ಲಿ ಸಿದ್ಧಲಿಂಗ, ಸ್ಪರ್ಶಲಿಂಗ, ಚಿಂತಾಮಣಿಲಿಂಗ, ರತ್ನನಿಮಿತ್ತಗಳಾದ ಉಪ್ಪರಿಗೆಗಳೂ ಈ ಕಲಿಯುಗದಲ್ಲಿ ಗಂಗೆಯಲ್ಲಿ ಮುಳುಗಿ ಇದ್ದಾವು, ಅದುಕಾರಣ ಗಂಗೆ ದೇವತಾಸ್ವರೂಪವು, ಸೂರ್ಯೋದಯದಿಂದಾತಮಹರಿವಂತೆ, ವಜ್ರದಿಂದ ಗಿರಿಗಳು ಚೂರ್ಣವಪ್ಪಂತೆ ಗರುತ್ಮಂತನಿಂದ ಸರ್ಪಗಳೋಡುವಂತೆ ವಾಯುವಿನಿಂದ ಮೇಘಗಳು ಪರಿದುಪೋಪಂತೆಯೂ, ತತ್ವಜ್ಞಾನದಿಂ ಅಜ್ಞಾನವಡಗುವಂತೆ, ಸಿಂಹಧ್ವನಿಯಿಂ ಗಜಗಳೋಡುವಂತೆ, ದಿವ್ಯೌಷಧಿಯಿಂ ವ್ಯಾಧಿಗಳು ಪೋಪಂತೆ, ಸದ್ಗುಣಗಳಿಂ ಲೋಭವಡಗುವಂತೆ, ಜಲಕ್ರೀಡೆಯಿಂ ಬಿಸಲು ಬಳಲಿಕೆ ಅಡಗುವಂತೆ, ಕಿಡಿಯಿಂದ ಅರಳೆ ದಹಿಸುವಂತೆ, ಕ್ರೋಧದಿಂದ ತಪಕೆಡುವಂತೆ, ದುಷ್ಕಾಮದಿಂದ ಜಾರ ಕೆಡುವಂತೆ, ಅನ್ಯಾಯದಿಂ ಧೈರ್ಯಕೆಡುವಂತೆ, ಗರ್ವದಿಂ ವಿದ್ಯೆಕೆಡುವಂತೆ, ಬೂಟಕಾಟಲ್ಯ ಮಾಯೆಗಳಿಂ ಸದ್ಧರ್ಮ ಕೆಡುವಂತೆ, ಗಂಗಾಸ್ನಾನ ಪಾನ ದರ್ಶನದಿಂ ಸಕಲಪಾಪಪರಿಹರವಪ್ಪುದು, ಸಂಸಾರವಿಮೋಚನವಂ ಮಾಡುವ ತಾನು ಲೋಕೋಪಕಾರವಾಗಿ ಸ್ವರ್ಗಕ್ಕೆ ಪೋಪರ್ಗೆ ಗಂಗೆ ಥರೆಗಳೆಂಬ ಸೋಪಾನಗಳಂ ಕಲ್ಪಿಸಿದನು; ಯಜ್ಞಗಳಲ್ಲಿ, ಅಶ್ವಮೇಧ ಪರ್ವತಗಳಲ್ಲಿ ಹಿಮವಂತ, ವ್ರತಗಳಲ್ಲಿ ಸತ್ಯದಾನಗಳಲ್ಲಿ ಅಭಯದಾನ, ಜಪದಲ್ಲಿ ಪ್ರಾಣಾಯಾಮ, ಮಂತ್ರಗಳಲ್ಲಿ ಪ್ರಣವ, ಧರ್ಮಗಳಲ್ಲಿ ಅಹಿಂಸೆ, ಬಯಕೆಗಳಲ್ಲಿ ಐಶ್ವರ್ಯ, ವಿದ್ಯೆಗಳಲ್ಲಿ ಬ್ರಹ್ಮವಿದ್ಯೆ, ಸ್ತ್ರೀಯರಲ್ಲಿ ಗೌರೀದೇವಿ, ದೇವತೆಗಳಲ್ಲಿ ನಾನು, ಸತ್ಯವ್ರತದಲ್ಲಿ ಶಿವಭಕ್ತನು, ಸಕಲತೀರ್ಥಗಳಲ್ಲಿಯೂ ಗಂಗೆಯೇ ವಿಶೇಷವು; ಕೇಳ್ಕೈ ವಿಷ್ಣುವೆ? ನಮ್ಮಿರ್ವರನು ಸರಿಯಾಗಿ ನೋಡುವನೆ ಶಿವಭಕ್ತನು ಪಾ

ಪವೆಂಬ ಧೂಳಿಗೆ ಬಿರುಘಾಳಿ, ಅಘವೆಂಬ ದ್ರುಮಗಳಿಗೆ ಕೊಡಲೀ, ದುರಿತವೆಂಬ ಕಾಷ್ಟಗಳಿಗೆ ಅಗ್ನಿಯಂತೆ ಸಕಲ ಪಾಪಂಗಳಂ ಗಂಗೆ ಪರಿಹರಿಸುವಳು. ಪಿತೃಗಳು ತಮ್ಮ ವಂಶದಲ್ಲಿ ಹುಟ್ಟಿದವರನ್ನು ಗಂಗಾಸ್ನಾನವಂಮಾಡಿ ದೇವಋಷಿ ಪಿತೃತರ್ಪಣಗಳಂಮಾಡಿ ಅನಾಥರಂ ಸಲಹಿ ಯಮಗೆ ಗತಿಯಾಗಲೀ ಎಂದು ತಿಲತರ್ಪಣವಂ ಕೊಟ್ಟು ಹರಿಹರರಲ್ಲಿ ಸಮಬುದ್ಧಿಯುಳ್ಳವರಾಗಿ ದೇವಾಲಯಮಂ ಕಟ್ಟಿಸಿ ಅಂಗರಂಗ ವೈಭವವಂಮಾಡಿ ಅಲಂಕಾರವಾದ ಗೋಪ್ರದಾನ ಕನ್ಯಾದಾನವ ಮಾಡಿಸುವನಿಲ್ಲವೆಂದು ಬಯಸುತ್ತಿಹರು. ಗಂಗಾತೀರದಲ್ಲಿದುರ್ಗಂಗೆಯಂ ಕೊಂಡಾಡದೆ ಮತ್ತೊಂದು ತೀರ್ಥವಂ ಕೊಂಡಾಡಿದವರ್ಗೆ ನರಕವಹುದು. ನಿನ್ನನ್ನೂ ನನ್ನನ್ನೂ ಗಂಗೆಯನ್ನೂ ಸರಿಯಾಗಿ ನೋಡದೆ ಭೇದವಂ ಮಾಡಲು ಗಣಂಗಳು ಕಾಮಕ್ರೋಧಾದಿಗಳೆಂಬ ಸರಳ್ಗಳಿಂದ ಖಂಡಿಸಿ. ಕಾಶಿಯಲ್ಲಿ ಇರಗೊಡರು ಗಂಗಾತೀರವಾಸಿಯೇ ಕೃತಕೃತ್ಯನು, ಮುಕ್ತನು; ಗಂಗೆಯಲ್ಲಿ ಗ್ರಹಣ ಮೊದಲಾದ ಪುಣ್ಯಕಾಲವೆಂಬ ವಿಶೇಷವಿಲ್ಲ. ಆನಾಗಲೂ ಪುಣ್ಯಕಾಲವೇಸರಿ. ಹೀಗೆ ಸ್ನಾನವಮಾಡಿದವರು ಸಕಲ ಪಾಪಹರರಾಗಿ ಮುಕ್ತಿಯನೈದುವರು. ಇಂಥಾ ಗಂಗೆಯಲ್ಲಿ ಸ್ನಾನವಂ ಮಾಡದವನು ವಿವೇಕಿಯಾದರೂ ಅವಿವೇಕಿ, ಶಕ್ತಿವುಳ್ಳವನಾದರೂ ಅಶಕ್ತನು, ಆಯುರಾರೋಗ್ಯವುಂಟಾದರೂ ನಿಷ್ಫಲ; ಗಂಗಾತೀರದಲ್ಲಿ ಗುಡಿಯಂ ಕಟ್ಟಿಸಿ ಗಂಗಾ ವಿಗ್ರಹಂಮಾಡಿಸಿ ಪ್ರತಿಷ್ಠೆಯಂಮಾಡೆ ಮುಕ್ತಿಯಹುದು. ನಿತ್ಯವೂ ಗಂಗಾಮಹಾತ್ಮೆಯಂ ಪೇಳುವವರನು ಧನಧಾನ್ಯದಿಂ ಸಂತೋಷಪಡಿಸಿ ಆ ಮಹಾತ್ಮೆಯಂ ಕೇಳಲು ಗಂಗಾಸ್ನಾನಫಲ, ಗಂಗೋದಕದಿಂ ರುದ್ರಾಭಿಷೇಕವಂ ಮಾಡೆ ಪಿತೃಗಳಿಗೆಮುಕ್ತಿ, ಗಂಗೋದಕವಂ ಶೋಧಿಸಿ ಪಂಚಾಕ್ಷರಿಯಿಂದ ಎಂಟುಭಾರಿ ಅಭಿಮಂತ್ರಿಸಿ ಅಭಿಷೇಕವಂ ಮಾಡಲು ಘೃತಾಭಿಷೇಕಕ್ಕೆ ಮಿಗಿಲು, ಗಂಗಾಉದಕ, ಕ್ಷೀರ, ದರ್ಭೆ, ತುಪ್ಪ, ಜೇನುತುಪ್ಪ, ಮೊಸರು ಮೊದಲಾದ ಕೆಂಪಿನ ಪುಷ್ಪ, ಗಂಧ ಈ ಅಷ್ಟದ್ರವ್ಯಸಹಿತ ಬಂದುಬಳ್ಳ ಗಂಗೋದಕವನ್ನು

ತಾವು ಪ್ರಾತಃಕಾಲಂ ಸೂರ್ಯಂಗೆ ಅರ್ಘ್ಯವನೀಯಲು ಸೂರ್ಯನೂ ಪಿತೃಗಳೂ ಸಹಾ ಪ್ರಸನ್ನರಾಗಿ ಮುಕ್ತಿಯಂ ಕೊಡುವರು; ಕೆರೆ ಕುಂಟೆ ಭಾವಿ ಅರವಟ್ಟಿಗೆಗಳ ಮಾಡಿಸಿದ ಧರ್ಮವು ಗಂಗಾದರ್ಶನನಿಮಿತ್ತದಿಂದಹುದು; ಸಾವಿರ ಚಾಂದ್ರಾಯಣ ಕನ್ಯಾದಾನ ಗೋದಾನಫಲವು ಬಂದು ಕುಡಿಕೆ ಗಂಗೋದಕವಂ ಪಾನಮಾಡೆ ದೊರಕುವದು; ಒಂದುಸಲ ಗಂಗಾಸ್ನಾನವಂ ಮಾಡೆ ಸ್ವರ್ಗಭೋಗಾಂತ್ಯದಲ್ಲಿ ಮುಕ್ತಿಯಹುದು, ಗಂಗಾದೇವಿಯ ಪಾದುಗೆಯಂ ಪೂಜಿಸಲು ಆಯುರಾರೋಗ್ಯ ಐಶ್ವರ್ಯ ಮೋಕ್ಷಂಗಳಹವು; ಗಂಗಾಸ್ನಾನವಂ ಮಾಡಿದವರಂ ಪೂಜಿಸಲು ಅಶ್ವಮೇಧಫಲ, ವಸ್ತ್ರದಾನದಿಂದ ಆಯುಷ್ಯಾಭಿವೃದ್ಧಿ, ಪುಸ್ತಕದಾನದಿಂದ ಜ್ಞಾನ, ಅಂನದಾನದಿಂದೈಶ್ವರ್ಯ, ಕನ್ಯಾದಾನದಿಂ ಮೋಕ್ಷ ಇವಂ ಗಂಗಾ ತೀರದಲ್ಲಿ ಮಾಡೆ ಸಹಸ್ರಗುಣಿತವು, ಗಂಗಾತೀರದಲ್ಲಿ ಗೋದಾನವಂ ಮಾಡೆ ಆ ಗೋವಿನ ರೋಮಸಂಖ್ಯೆಯಾದ ಯುಗಂಗಳು ನನ್ನ ಲೋಕದಲ್ಲಿಯಾದರೂ ಗೋಲೋಕದೊಳಗಾದರೂ ತಮ್ಮ ಬಂಧುಗಳು ಸಹಿತವಾಗಿ ಬಹುಭೋಗಗಳನನುಭವಿಸಿ ಭೂಮಿಗೆ ಬಂದು ಸತ್ಕುಲದಲ್ಲಿ ಹುಟ್ಟಿ ಭೋಗಿಯಾಗಿ ಕಾಶೀವಾಸವಂ ಮಾಡಿ ಅಂತ್ಯದಲ್ಲಿ ಬ್ರಹ್ಮಸ್ವರೂಪವಂ ಪಡೆಯುವನು ಈ ರೀತಿಯಲ್ಲಿಯೆ ಗಂಗಾತೀರದಲ್ಲಿ ಭೂದಾನವಂ ಮಾಡೆ ಭೂಮಿಯ ಧೂಳು ಯೆಷ್ಟುಂಟೊ ಅಷ್ಟು ಯುಗ ಸ್ವರ್ಗದಲ್ಲಿದ್ದು ನರಕದಲ್ಲಿರ್ದ ಪಿತೃಗಳಂನು ಸ್ವರ್ಗಕ್ಕೆ ಕಳುಹಿ, ಸ್ವರ್ಗದಲ್ಲಿ ಇದ್ದವರಂ ಉಪರಿಲೋಕಕ್ಕೆ ಕಳುಹಿ ತಾವು ಭೂಮಿಯಲ್ಲಿ ಅರಸಾಗಿ ಹುಟ್ಟಿ ಧರ್ಮಂಗಳಂ ಮಾಡಿ ಕಾಶಿಯಲ್ಲಿ ವಾಸವಂ ಮಾಡಿ ಮೋಕ್ಷವಂ ಪಡೆಯುವನು. ಈ ಗಂಗಾತೀರದಲ್ಲಿ ಶ್ರೋತ್ರಿಯರ್ಗೆ ಸುವರ್ಣದಾನವಂ ಮಾಡೆ ಸುವರ್ಣ ಮೊದಲಾದ ವಿಮಾನದಲ್ಲಿ ಕುಳ್ಳಿರ್ದು ಸಕಲ ಲೋಕದಲ್ಲಿಯೂ ಸುಖವನನುಭವಿಸಿ, ಭೂಮಿಯಲ್ಲಿ ಅರಸಾಗಿ ಸದ್ಧರ್ಮದಲ್ಲಿ ರಾಜ್ಯವಾಳುವನಾಗಿ, ಕಾಶಿಗೆ ಹೋಗಿ ವಿಶ್ವೇಶ್ವರಾನುಗ್ರಹದಿಂದ ಮುಕ್ತನಹನು; ಜನ್ಮನಕ್ಷತ್ರದಲ್ಲಿ ಗಂಗಾಸ್ನಾನವಂ ಮಾಡೆ ಜನ್ಮಪ್ರಭೃತಿ ಮಾಡಿದ ಪಾಪಪರಿಹರವಹವು,

ವೈಶಾಖ, ಕಾರ್ತೀಕ, ಮಾಘಮಾಸಗಳಲ್ಲಿ ಗಂಗಾಸ್ನಾನ ದೊರಕುವದು ಅತಿ ದುರ್ಲಭವು; ಅಮಾವಾಸ್ಯೆಯಲ್ಲಿ ಅದರ ಶತಗುಣ. ಸಂಕ್ರಾಂತಿಯಲ್ಲಿ ಲಕ್ಷಗುಣ. ಉತ್ತರಾಯಣ ದಕ್ಷಿಣಾಯನಂಗಳಲ್ಲಿ ದಶಲಕ್ಷಗುಣ. ಸೋಮವಾರದ ಚಂದ್ರಗ್ರಹಣ, ಆದಿತ್ಯವಾರದ ಸೂರ್ಯಗ್ರಹಣವಾಗೆ ಚೂಡಾಮಣಿ ಯೋಗವೆನಿಸಿಕೊಂಬುದು! ಆ ದಿನಗಳಲ್ಲಿ ಮಾಡಿದ ಸ್ನಾನದಾನಾದಿಗಳಿಂದ ಅನಂತಫಲವಹುದು. ಜ್ಯೇಷ್ಠಶುದ್ಧ ದಶಮಿ ಬುಧವಾರ ಹಸ್ತನಕ್ಷತ್ರ ಕೂಡಿದರೆ ಮಹಾಪುಣ್ಯಕಾಲ, ಸ್ತ್ರೀಪುರುಷರಿಬ್ಬರೂ, ಮಾತ್ರಾರಾದರೂ, ಹತ್ತುಬಗೆಯ ಗಂಧ, ಹತ್ತುಬಗೆಯ ಧೂಪ, ದೀಪ, ನೈವೇದ್ಯಸಹಾ ಹತ್ತುಹತ್ತುಬಗೆಯ ಸಂಪಾದಿಸಿ, ಗಂಗಾಪ್ರತಿಮೆಯಂ ಮಾಡಿಸಿ ಪೂಜಿಸಿ, ಜಾಗರಣವಂ ಮಾಡಿ, ತಿಲ, ಆಜ್ಯ, ಗುಡ, ಯವೆಯಹಿಟ್ಟು, ಇವನ್ನು ಗಂಗೆಯಲ್ಲಿ ಹತ್ತು ಮುಷ್ಟಿಗಳಂ ಮಾಡಿ; "ಓಂನಮಃಶಿವಾಯೈ, ನಾರಾಯಣ್ಯೈ, ದಶಹರಾಯೈ, ಗಂಗಾಯೈ ಸ್ವಾಹಾ,, ಎಂಬ ಈಮಂತ್ರದಿಂ ಗಂಗೆಯಲ್ಲಿ ಸಮರ್ಪಿಸಿ, ಪೂಜಾ ಜಪಹೋಮಾದಿಗಳನ್ನು ಈ ಮಂತ್ರದಿಂ ಮಾಡುವದು ಸುವರ್ಣದಲ್ಲಾದರೂ, ಬೆಳ್ಳಿಯಲ್ಲಾದರೂ ಗಂಗಾಪ್ರತಿಮೆಯಂ ಮಾಡಿ, ಚಿನ್ನದ ಕಲಶದಮೇಲೆ ಶುಭ್ರವಾದ ವಸ್ತ್ರದಲ್ಲಿರಿಸಿ ಮೂರ್ತಿಧ್ಯಾನಮಂ ಮಾಡಬೇಕು! ಅದೆಂತನೆ—ಅಮೃತಕಲಶ, ಪದ್ಮ, ವರಾಭಯದಿಂದೊಪ್ಪುವ ನಾಲ್ಕುಹಸ್ತ, ಮೂರುನೇತ್ರ, ಕೋಟಿಚಂದ್ರಪ್ರಕಾಶ, ಶುಭ್ರ ಗಂಧಮಾಲ್ಯಾಂಬರಗಳಂ ಧರಿಸಿ, ಧವಳಛತ್ರ, ಚಾಮರಗಳಿಂದೊಪ್ಪುವ, ನದಿ, ನದ, ಸರ್ವ ದೇವಋಷಿಗಳಿಂದ ಪ್ರೋಕ್ಷಿಸಲ್ಪಟ್ಟ ಗಂಗೆಯಂ ಧ್ಯಾನಿಸಿ, ಪೂರ್ವೋಕ್ತ ಮಂತ್ರದಿಂದರ್ಚಿಸಿ, ಆ ಗಂಗೆಯಮುಂದೆ ನನ್ನನ್ನೂ, ಬ್ರಹ್ಮನನ್ನೂ, ಸೂರ್ಯನನ್ನೂ, ಹಿಮವಂತನನ್ನೂ, ಭಗೀರಥನನ್ನೂ ನಾಲ್ಕುಹಲ, ಬಳ್ಳ, ಮಾನ, ಕೊಳಗ, ಹೀಗೆಂದು ಹೇಳಲ್ಪಟ್ಟಪ್ರಮಾಣ ಹತ್ತುಬಳ್ಳ ಯಳ್ಳನ್ನೂ ಹತ್ತುಮಂದಿ ಬ್ರಾಹ್ಮಣರಿಗೆದಾನವನಿತ್ತು, ಸುವರ್ಣ ರಜತ ತಾಮ್ರಗಳಿಂದಲಾದರೂ. ಯವೆಯಹಿಟ್ಟಿನಿಂದಲಾದರೂ ರಚಿ

ಸಲ್ಪಟ್ಟ ಮತ್ಸ್ಯ, ಕೂರ್ಮ, ಮಂಡೂಕ, ಮೊಸಳೆ, ನೀರು ಕೋಳಿ, ಕೊಕ್ಕರೆ, ಚಕ್ರವಾಕ, ಚಾತಕಗಳಂ ಮಾಡಿ ಪೂಜಿಸಿ, ಗಂಗೆಯಲ್ಲಿ ಬಿಡುವದು;ಈವ್ರತವಂಮಾಡೆ? ಪರದ್ರವ್ಯಮಂ ತೆಗೆದುಕೊಂಡುಕೊಡದೆಇದ್ದ ಪಾಪ, ಪರಹಿಂಸೆ,ಪರಸ್ತ್ರೀಗಮನ, ಇವು ಮೂರೂ ಕಾಯಪಾಪವೆನಿಸಿಕೊಂಬುವು; ನಿಷ್ಠುರವಚನ, ಸಟೆ, ಚಾಡಿ, ಹಾಳಹರಟೆ, ಈ ನಾಲ್ಕೂ ವಾಚಕಪಾಪ; ಪರದ್ರವ್ಯವನಪಹರಿಸುವ ಚಿಂತೆ, ಪರರ್ಗೆ ಅಪಕಾರವ ನೆನೆವುದು, ಕಾರ್ಯವಿಲ್ಲದೆ ಆಘ್ರಾಣಿಸುವುದು, ಈ ಮೂರೂ ಮಾನಸಪಾಪ; ಇಂತೀ ಹತ್ತುಪಾಪಂಗಳೂ ಪರಿಹರವಾಗಿ, ತಂದೆತಾಯಿ ಅತೀತವಾದ ಹತ್ತುಥರವನು, ಮುಂದೆ ಹುಟ್ಟುವ ಹತ್ತುಥರವನೂ ಪುಣ್ಯಲೋಕವನೈದಿಸುವುದು. ಅನಂತರದಲ್ಲಿ ಗಂಗೆಯುಮುಂದೆ ಸ್ತೋತ್ರವ ಪಠಿಸಬೇಳ್ಕುಮದೆಂತೆನೆ—ಶಿವೆ, ಗಂಗೆ, ಶಿವಪ್ರದೆ, ವಿಷ್ಣುರೂಪಿ, ಶಂಕರೀ, ಸರ್ವದೇವಸ್ವರೂಪೆ, ವಿಷಘ್ನಗತಿ, ವ್ಯಾಧಿಹರೆ, ಸ್ಥಾವರಜಂಗಮಜೀವರಕ್ಷೆ, ವಿಷಹರೆ, ಸಂಸಾರ ವಿಷಹರೆ, ಜೀವನಪ್ರದೆ, ತಾಪತ್ರಯಸಂಹಾರಿ, ಪ್ರಾಣಿರಕ್ಷಣೆ, ಶಾಂತಿಪ್ರದೆ, ಶುದ್ಧಮೂರ್ತಿ, ಸರ್ವಸಿದ್ಧಿಪ್ರದೆ, ಪಾಪಾರಿ, ಭುಕ್ತಿಮುಕ್ತಿಪ್ರದೆ, ಐಶ್ವರ್ಯರೂಪೆ, ಭೋಗಪ್ರದೆ, ಭೋಗವತಿ, ಮಂದಾಕಿನಿ, ಸ್ವರ್ಗಪ್ರದೆ, ತ್ರೈಲೋಕ್ಯಭೂಷಣೆ, ತ್ರಿಪಥೆ, ತ್ರಿಶೂಲಿಸ್ಥಿತೆ, ಕ್ಷಮಾವತಿ, ತ್ರಿಶೂಲಾಗ್ರಸ್ಥಿತೆ, ತೇಜೋವತಿ, ನಂದೆ, ಲಿಂಗಧಾರಿಣಿ, ನಾರಾಯಣಿ, ವಿಶ್ವತೋಮುಖಿ, ರೇವತಿ, ಬೃಹತಿ, ಲೋಕಧಾತ್ರೀ, ವಿಶ್ವಮಿತ್ರ, ನಂದಿನೀ, ಪೃಥ್ವೀ, ಆಪದೋದ್ಧಾರಿಣಿ, ಶಿವಮೂರ್ತಿ, ಸರ್ಪಿಷೆ, ಪರಾಪರಾಢ್ಯ, ತಾರೆ, ಪಶುಪಾಲಿನೀ, ಕೃತಿನೀ, ಅಭಿನ್ನೆ, ಶಾಂತೆ, ವರಿಷ್ಠೆ, ವರದೆ, ಉಗ್ರಸಂಭೂತೆ, ಸಂಜೀವಿನಿ, ಬ್ರಹ್ಮಿಷ್ಠೆ, ಬ್ರಹ್ಮದೆ, ದುರಿತಘ್ನೆ ಪ್ರಣತಾರ್ತಿ, ಪ್ರಭಂಜನೆ, ಜಗನ್ಮಾತೆ, ಮಂಗಳೆ, ಶರಣಾಗತಪಾಲನೆ, ಸರ್ವಾರ್ತಿಹರೆ, ನಿರ್ಲೇಪೆ, ದುಃಖಹಂತ್ರೀ, ಮೋಕ್ಷಪ್ರದೆ, ಎನ್ನನ್ನು ಮೂಡಲುಮೊದಲಾದ ನಾಲ್ಕುದಿಕ್ಕಿನಲ್ಲೂ ರಕ್ಷಿಸು. ಆದಿಮಧ್ಯಾಂತಂಗಳಲ್ಲಿ ನೀನು ಇಹೆ. ನೀನು ಆ

ದಿಮಾಯೆ, ವಿಷ್ಣುವೂ, ಶಿವನೂ, ಬ್ರಹ್ಮನೂ, ಸರ್ವವ್ಯಾಪಿನೀನೆ, ಎಂಬ ಈ ಸ್ತೋತ್ರವಂ ಪಠಿಸಿದವರಿಗೆ, ಕೇಳಿದವರ್ಗೆ, ಈ ಹತ್ತು ಬಗೆಯ ಪಾಪಗಳೂ ಪರಿಹರವಾಗುವವು. ರೋಗ, ಸಂಕಟ, ಬಂಧನ, ಶತ್ರುಭಯಂಗಳೂ ಪರಿಹರವಹವು. ಈ ವ್ರತವಂ ಮಾಡಿ ಸ್ತುತಿಸಿದವನು ದೇಹಾಂತ್ಯದಲ್ಲಿ ಮುಕ್ತನಹನು. ಆರೊಬ್ಬರೂ ಜ್ಯೇಷ್ಠಶುದ್ಧ ದಶಮಿ ಬುಧವಾರ ಹಸ್ತನಕ್ಷತ್ರದಲ್ಲಿ ಈ ಸ್ತೋತ್ರವಂ ಮತ್ತೆ ಪಠಿಸಲು ಪೂರ್ವದಲ್ಲಿ ಹೇಳಿದಫಲವುಂಟು. ಈ ಸ್ತೋತ್ರವಂ ಬರೆದು ಮನೆಯಲ್ಲಿ ಪೂಜಿಸಲು ಚೋರಭಯವಿಲ್ಲ, ಸರ್ಪಾದಿಭಯವಿಲ್ಲ. ಎಲೈ ವಿಷ್ಣುವೆ! ನಾನೂ ನೀನೂ ಗೌರಿಯೂ ಗಂಗೆಯೂ, ಈ ನಾಲ್ವರೂ ಬೇರೆ ಎಂಬವರು ರೌರವಾದಿ ನರಕದಲ್ಲಿ ಬೀಳುವರು ಎಂದು ಪರಮೇಶ್ವರನು ವಿಷ್ಣುವಿಗೆ ಪೇಳ್ದ ವೃತ್ತಾಂತವಂ ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನು ಎಂದು ವ್ಯಾಸರು ತನಗೆ ಬುದ್ಧಿಗಲಿಸಿದ ಅರ್ಥವಂ ಸೂತರು ಶೌನಕಾದಿ ಮಹರ್ಷಿಗಳಿಗೆ ಪೇಳ್ದರೆಂಬಲ್ಲಿಗೆ ಅಧ್ಯಾಯಾರ್ಥ ||—|| ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ಣಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀ ಮಹಿಮಾರ್ಥದರ್ಪಣದಲ್ಲಿ ಕಾಶಿ ಗಂಗಾ ಮಾಹಾತ್ಮ್ಯೆಯೆಂಬ ಇಪ್ಪತ್ತೇಳನೇ ಅಧ್ಯಾಯಾರ್ಥನಿರೂಪಣಕ್ಕೆ ಮಂಳಮಹಾ. ಶ್ರೀ ಶ್ರೀ ಶ್ರೀ ಶ್ರೀ ಶ್ರೀ

ಇಪ್ಪತ್ತೇಳನೇ ಅಧ್ಯಾಯ ಸಂಪೂರ್ಣ.

ಶ್ರೀರಸ್ತು.

ಇಪ್ಪತ್ತೆಂಟನೆ ಅಧ್ಯಾಯಂ.

ವಾಹೀಕನ ಕಥೆ.

ಅನಂತರದಲ್ಲಿ ಪರಮೇಶ್ವರನಿಗೆ ಪಾರ್ವತೀದೇವಿಯರು ಬಿನ್ನೈಸಿದರು ಅದೆಂತೆನೆ—ವಿಷ್ಣುವು ತಪವಿರ್ದ ಕಾಲದಲ್ಲಿ ಚಕ್ರ ಪುಷ್ಕರಣಿಯಾಯಿತು, ತದನಂತರದಲ್ಲಿ ಬಹುಕಾಲ ತಪವಿರ್ದ ಭಗೀರಥನು, ದೇವಗಂಗೆಯತ್ತರಲು ಭಾಗೀರಥಿಯಾಯಿತು. ಆ ಭಾಗೀರಥೀ ಮಹಿಮೆಯಂ ನಿರೂಪಿಸುವೆವೂ ಯೆಂದಿರಲ್ಲಾ ಅದು ನನಗೆ ಸಂದೇಹವಾಗಿದೆ. ಈ ಸಂದೇಹವಂ ಪರಿಹರಿಸಬೇಕೆಂದು ದೇವಿಯರುಬಿನ್ನೈಸಲು; ಪರಮೇಶ್ವರನಿಂತೆಂದನು ಎಲೈ ದೇವಿ! ಕೇಳು, ಅತೀತ, ಆಗಾಮಿ, ವರ್ತಮಾನದ ವೃತ್ತಾಂತವಂ ಪೇಳ್ದೆವೂ, ಸಂಶಯಬ್ಯಾಡ ಎಂದು ಗಂಗಾಮಹಿಮೆಯಂ ಹೇಳಿದನೂ ಎಂದು ಷಣ್ಮುಖನು ಅಗಸ್ತ್ಯಂಗೆ ನಿರೂಪಿಸಲೂ, ಅಗಸ್ತ್ಯನು ದೇವಿಯರಿಗೆ ಪರಮೇಶ್ವರನು ಬುದ್ಧಿಗಲಿಸಿದ ಗಂಗಾಮಹಿಮೆಯನ್ನು ನೀವೆನಗೆ ಬುದ್ಧಿಗಲಿಸಬೇಕೆನೆ;-ಕುಮಾರಸ್ವಾಮಿ ಅಗಸ್ತ್ಯಗಿಂತೆಂದನು ಕೇಳೈ ಅಗಸ್ತ್ಯ! ಆವನಾನೊಬ್ಬನು ಗಂಗೆಯಲ್ಲಿ ತನ್ನ ಪಿತೃಗಳಂ ಕುರಿತು ತಿಲತರ್ಪಣವಂ ಮಾಡಲು, ಅಲ್ಲಿ ಎಷ್ಟುತಿಲಗಳುಬಿದ್ದವೋ ಅಷ್ಟುವರ್ಷ ಸ್ವರ್ಗದಲ್ಲಿರ್ದು, ಪುನರ್ಜನ್ಮದಲ್ಲಿ ಕಾಶೀವಾಸವಾಗಿ ಮೋಕ್ಷವನೈದುವರು. ತರ್ಪಣಾರ್ಹರಾರಿಗೆಂದರೆ—ಗುರುಗಳು, ಹೆಣ್ಣುಕೊಟ್ಟ ಮಾವ, ಜ್ಞಾತಿಗಳು, ಅವರಬಂಧುಗಳು, ಹಲ್ಲುಹುಟ್ಟದಮುನ್ನ ಮೃತವಾದವರು, ಗರ್ಭದಲ್ಲಿಯೆ ಮೃತರಾದವರು, ಸಿಡಿಲು, ಚೋರವ್ಯಾಘ್ರ ಕ್ರೋರದಾಡೆಗಳುಳ್ಳ ಪ್ರಾಣಿಗಳಿಂದ ಹತರಾಗಿದ್ದವರು ಕುಲಗೆಟ್ಟವರು, ಪಾಪಿಗಳು, ರೋಗಿಗಳು, ಕಿಚ್ಚಿನಲ್ಲಿ ಮಡಿದವರು, ವಿಷದಲ್ಲಿಯೂ ಗೋವುಗಳಿಂದಲೂ ಹತರಾದವರು, ನಾನಾಪಾಪಗಳ ಮಾಡಿ ಮಡಿದು ಅಸಿಪತ್ರವನ ಕುಂಭೀಪಾಕರೌರವ ಅಂಧತಾ

ಮಿಸ್ರ ಕಾಲಸೂತ್ರವೆಂಬ ನರಕಗಳಲ್ಲಿ ಯಿದ್ದವರು, ತಮ್ಮ ಕರ್ಮ
ಗಳಿಂದಾ ನಾನಾಜಾತಿಗಳಲ್ಲಿ ಹುಟ್ಟಿದವರು, ಪಶುಪಕ್ಷಿ ಮೃಗಕ್ರಿಮಿ
ಕೀಟವೃಕ್ಷಬಳ್ಳಿಗಳಾಗಿ ಹುಟ್ಟಿದವರು, ಯಮಲೋಕದಲ್ಲಿ ಯಿದ್ದ
ಬಂಧುಗಳಾದವರು, ಜನ್ಮಾಂತರದ ಬಂಧುಗಳು, ಹೆಸರನರಿಯದವರು
ಮಕ್ಕಳಿಲ್ಲದವರು, ವಿಷದಿಂ ಮೃತರಾದವರು, ಕೊಂಬುಗಳುಳ್ಳ ಪ್ರಾಣಿ
ಗಳಿಂದ ಮೃತರಾದವರು, ಕೃತಘ್ನರು, ಗುರುದ್ರೋಹಿಗಳು, ಮಿತ್ರ
ದ್ರೋಹಿಗಳು, ಸ್ತ್ರೀಘಾತುಕರೂ, ಶಿಶುಘಾತುಕರೂ, ವಿಶ್ವಾಸಘಾತು
ಕರು, ಅಸತ್ಯವಾದಿಗಳು, ಪರಸ್ತ್ರೀನಿರತರು, ಅಶ್ವವಿಕ್ರಯಿಗಳೂ, ರ
ಸದ್ರವ್ಯವಿಕ್ರಯಿಗಳು, ಪರದ್ರವ್ಯಾಪಹಾರಿಗಳು, ಅನಾಥರು, ಲೋಭಿಗ
ಳು, ದೀನರು, ಅಶಕ್ತರು ಯಿವರೆಲ್ಲರಂ ಕುರಿತು ಕಾಶಿಗೆ ಬಂದು ಗಂಗೆ
ಯಲ್ಲಿ ಪಿಂಡಪ್ರದಾನ ತಿಲತರ್ಪಣವಂ ಮಾಡೆ ಸ್ವರ್ಗಸ್ಥರಾಗಿ, ಪುತ್ರ
ಕಾಶೀಗೆ ಬಂದು ಮುಕ್ತರಹರು. ಬ್ರಹ್ಮಾಂಡದೊಳಗಿರ್ದ ತೀರ್ಥಗಳೆ
ಲ್ಲವೂ ತಮ್ಮ ಪವಿತ್ರತೆಗೋಸ್ಕರ ಗಂಗೆಯಂ ಸೇವಿಸುತ್ತಿಹವು. ಯೆ
ಲ್ಲಾ ಕಡೆಯಲ್ಲೂ ಗಂಗೆಪವಿತ್ರ, ಗಂಗೋದಕವು ಅಮೃತಪಾನಕ್ಕೆ ಸ
ಮಾನವಾದ ಕಾರಣ ನಿತ್ಯವೂ ಗಂಗೋದಕದಿಂದ ನಮ್ಮ ವಂಶದ
ವರು ತರ್ಪಣವಂ ಕೊಡರೆ ಯೆಂದು ಪಿತೃಗಳು ಹಾರೈಸುತಿಹರು
ಯೆಂದು ಪೇಳೆ — ಕಲಿಯುಗದಲ್ಲಿ ಗಂಗಾ ಭಕ್ತಿಪುಟ್ಟದು. ಸ್ವಾ
ರ್ಥವಾಗಲೀ ಪರಾರ್ಥವಾಗಲೀ ಗಂಗಾ ಸ್ನಾನವಂ ಮಾಡಲು ಪಿತೃ
ಗಳು ಪುಣ್ಯಲೋಕವನೈದುವರು. ಅವನಿಗೆ ಸ್ವರ್ಗ ಭೋಗವ
ಹುದು. ಗಂಗಾಸ್ನಾನಕ್ಕೆಂದು ಪಯಣವಾಗಿಪೋಗದಿರೆ ಅವನು ಅವನ
ಪಿತೃಗಳು ಸಹ ನರಕವನ್ನನುಭವಿಸುವರು. ಗಂಗೆಯಲ್ಲಿ ನಿತ್ಯಕರ್ಮ
ಗಳಂ ಮಾಡುವರು ಮನುಷ್ಯರೂಪಿನ ದೇವರ್ಕಳು, ಮನುಷ್ಯರು ಅವ
ರವಯುಸ್ಸಿನಲ್ಲಿ ಗಂಗಾಸ್ನಾನವುಂಮಾಡೆ ಜನ್ಮಪ್ರಭೃತಿಮಾಡಿದ ಪಾಪ
ಪರಿಹರವಾಗಿ ಸದ್ಗತಿಯನೈದುವರೂ. ಮನುಷ್ಯರ ಅಸ್ಥಿಯಷ್ಟುಕಾ
ಲಗಂಗೆಯಲ್ಲಿ ಯಿದ್ದೀತೋ ಆ ಮನುಷ್ಯನು ಅಷ್ಟುಸಾವಿರವರ್ಷ ಸ್ವ
ರ್ಗದಲ್ಲಿ ಯಿಹನೆಂಬುದಾಗಿ ಶಿವನು ನಿರೂಪಿಸಲು, ವಿಷ್ಣು ಕೇಳಿ ಯಿಂ

ತೆಂದನು— ದುರಾತ್ಮನಾದವನ ಅಸ್ಥಿ ಗಂಗೆಯಲ್ಲಿಬೀಳೆ ಉತ್ತಮಗತಿ ಹ್ಯಾಗೆ ಆಹುದುಯೆನೆ— ಶಿವನಿಂತೆಂದನು—ಅಸ್ಥಿಯು ದೈವವಶದಿಂದಲಾದರು ಗಂಗೆಯಲ್ಲಿ ಬೀಳೆ, ಮಹಾಪಾಪಿಗಳಾದವರು ಅವರ್ಗೆ ಸದ್ಗತಿಯುಂಟಪ್ಪುಯುಂಬಲ್ಲಿ ಒಂದು ಇತಿಹಾಸವಂ ಪೇಳುವೆನು ಕೇಳು—

ಪೂರ್ವದಲ್ಲಿ ಕಳಿಂಗದೇಶದಲ್ಲಿ ಒಬ್ಬ ವಾಹಿಕನೆಂಬ ಬ್ರಾಹ್ಮಣನಿದ್ದನು. ಅವನುನಿತ್ಯವುಲವಣವಂ ಮಾರುವನು,ವೇದಶಾಸ್ತ್ರವನ್ನರಿಯನು, ಸಂಧ್ಯಾವಂದನೆಯನೊಂದನ್ನೂ ಮಾಡದೆಇಹನು, ಯಜ್ಞೋಪವೀತಮಂ ಧರಿಸಿಇಹನು, ನೂತನವಿಧವೆಯಾದ ಬೇಡತಿಯ ಕೂಡಿಕೊಂಡು ದುರಾಚಾರದಲ್ಲಿ ಇಹನು, ತಾನಿದ್ದ ದೇಶಕ್ಕೆ ದುರ್ಭಿಕ್ಷಬರಲು ಮತ್ತೊಂದುದೇಶಕ್ಕೆ ಹೋಗುವಾಗ ದಂಡಕಾರಣ್ಯಮಧ್ಯದಲ್ಲಿ ವ್ಯಾಘ್ರದಿಂದ ಮೃತನಾದನು. ಅವನ ಪಾದವನ್ನು ವಂದು ಹದ್ದು ಕಚ್ಚಿಕೊಂಡು ಆಕಾಶಕ್ಕೆಹಾರಲು ಮತ್ತೊಂದುಹದ್ದು ಆ ಮಾಂಸವಂ ಕಂಡುಬರಲು ಅವೆರಡಕ್ಕೂ ಗಗನಮಧ್ಯದಲ್ಲಿ ಯುದ್ಧವಾಗಿ ಗಂಗೆಯಮೇಲೆ ಹೋಗುತ್ತಿರಲು ದೈವವಶದಿಂದ ಆ ಪಾದವು ಜಾರಿ ಗಂಗೆಯಲ್ಲಿ ಬಿದ್ದು ಮುಳುಗಿತು, ಅನಿತರೊಳು ಆ ವಾಹಿಕನನ್ನು ಯಮಭಟರು ಕಟ್ಟಿ ಚಬ್ಬುಕಿನಲ್ಲಿ ಕೊಂದು ರಕ್ತವಕಾರುವಂತೆ ದೊಣ್ಣೆಗಳಿಂದ ಹೊಯಿದು ಯಮನಮುಂದೆ ನಿಲ್ಲಿಸಲು, ಯಮನು ಚಿತ್ರಗುಪ್ತರಂ ನೋಡಿ, ಇವನ ಪಾಪಪುಣ್ಯವೇನು ಎನಲು, ಆ ಚಿತ್ರಗುಪ್ತರಿಂತೆಂದರು—ಇವನಿಗೆ ಗರ್ಭದಾನ, ಪುಂಸವನ, ಸೀಮಂತವೆಂಬ ಸಂಸ್ಕಾರಗಳಿಲ್ಲ ಗರ್ಭಗತಪಾಪವಂ ಪರಿಹರಿಸಿ, ಆಯುಷ್ಯವರ್ಧಜಾತಕರ್ಮಗಳಿಲ್ಲ, ಹನ್ನೊಂದನೆಯ ದಿವಸದಲ್ಲಿ ಕುಲಕ್ಕೆ ಪ್ರಸಿದ್ಧಿಯಂ ಮಾಳ್ಪ ನಾಮಕರಣವಿಲ್ಲ, ವಿದೇಶಗಮನವಂ ಪರಿಹರಿಸಿ ಸ್ಥಿರತ್ವವಂ ಕೊಡುವ ನಿಷ್ಕ್ರಮಣವನ್ನು ನಾಲ್ಕನೆಯ ತಿಂಗಳಲ್ಲಿ ಮಾಡಲಿಲ್ಲ. ಆರನೆಯ ತಿಂಗಳಲ್ಲಿನಿತ್ಯಪೂ ಮೃಷ್ಟಾನ್ನಭೋಜನವನೀವ ಅನ್ನಪ್ರಾಶನವಂ ಮಾಡಲಿಲ್ಲ, ಆವಾಗಲೂ ಪುಷ್ಪಾಲಂಕಾರಗಳಂ ಕೊಡುವಚೌಳಂಗಿಯನ್ನು ಕಾಲದಲ್ಲಿ ಮಾಡಲಿಲ್ಲ, ಶ್ರವಣ ನಕ್ಷತ್ರದಲ್ಲಿ ಸರ್ವಾಲಂಕಾರಭೂಷಿತನಾಗಿ ವೇ

ದಶಾಸ್ತ್ರಶ್ರವಣ ಫಲವನೀವ ಕರ್ಣವೇಧೆಯಂ ಮಾಡಲಿಲ್ಲ, ಸಾಂಗವಾದ ಪಾಠಬ್ರಹ್ಮತೇಜಸ್ಸಿನ ಫಲವನೀವ ಉಪನಯನವನ್ನು ಎಂಟನೆಯ ವರ್ಷದಲ್ಲಿ ಮಾಡಲಿಲ್ಲ, ಗೃಹಸ್ಥಾಶ್ರಮಕ್ಕೆ ಕಾರಣವಾದ ವ್ರತಾಚರಣೆಯನ್ನು ಮಾಡಲಿಲ್ಲ, ನೂತನ ವಿಧವೆಯಾದ ಬೇಡತಿಯನ್ನು ಕೂಡಿಕೊಂಡುಇದ್ದನಲ್ಲದೆ ತನ್ನ ಕುಲದಲ್ಲಿ ಮದುವೆಯಾಗಲಿಲ್ಲ, ಜನನಾರಭ್ಯ ಐದು ವರ್ಷದಿಂದ ಈಚೆಗೆ ಪರವಸ್ತುವನ್ನೇ ಅಪಹರಿಸುವನು, ಜೂಜುಗಾರನು, ಮುಪ್ಪಿನ ಮೋಳೆಯಲ್ಲಿ ಉಪ್ಪನಿಕ್ಕುವ ಗೋವಂ ಕೊಂದವನು, ಹೆತ್ತ ತಾಯಿತಂದೆ ಒಡಹುಟ್ಟಿದವರಂ ಕಾಲಲ್ಲಿ ಒದ್ದವನು, ಅವರ ಹಿರಿಯರೆನ್ನದೆ ಹೀನಮಾನವೆತ್ತಿ ಬೈದವನು, ಪರರಕೂಡೆ ಕ್ರೋಂದಾಡಿ ವಿಷವನಿಕ್ಕಿದವನು, ಪರರಬೇಗೆವಡಿಸಿದವನು,ಪರರ ಹೊಟ್ಟೆಯಂ ಸೀಳ್ದವನು, ಕಳ್ಳತನವಂಮಾಡಿ ಮೈಯೆಲ್ಲಾವಂಡಿಸಿಕೊಂಡವನು,ಶ್ವಾನನಕೈಯಿಂ ಕಚ್ಚಿಸಿಕೊಂಡವನು, ಕೊಂಬುಗಳುಳ್ಳ ಪ್ರಾಣಿಗಳಕೈಯಿಂಇರಿಸಿಕೊಂಡವನು,ಸರ್ಪನಕೈಯಿಂ ಕಚ್ಚಿಸಿಕೊಂಡವನು, ಸತ್ಪುರುಷರು ನಡೆವದಾರಿಗೆ ಕಲ್ಲುಮುಳ್ಳುಗಳಿಳದವನು, ತನ್ನ ತಲೆಯ ತಾನೇ ಬಡಿದುಕೊಂಬವನು, ತನ್ನ ತಾನೇ ಶಿಷ್ಟನಲ್ಲದೆ ಬ್ರಹ್ಮನೆಂದುಕೊಂಬವನು, ಹಸುಗಳು ಕುದುರೆ ಚೌರಿತೊಗಲು ಮೊದಲಾದವಂ ವಿಕ್ರಯವಂಮಾಡಿದವನು, ಶೂದ್ರಾನ್ನದಿಂ ಬೆಳದವನು, ಪರ್ವತಿಥಿಗಳಲ್ಲಿಯೂ ಪುಣ್ಯದಿನಗಳಲ್ಲಿಯೂ ಸ್ತ್ರೀಗೋಷ್ಠಿಯಂ ಮಾಡಿದವನು, ದೇವಋಷಿ ಪಿತೃಕರ್ಮಂಗಳನ್ನು ಎಂದೂ ಮಾಡಿದವನಲ್ಲ, ಇವನು ಕೊಂದಂಥಾ ಪಶುಪಕ್ಷಿ ಮೃಗಂಗಳಿಗೆ ಲೆಖ್ಖವೇಯಿಲ್ಲ, ಫಲಪುಷ್ಪಗಳಾದಂಥಾ ವೃಕ್ಷಗಳಂ ಛೇದಿಸಿದವನು, ದಯಾಹೀನನು, ಬಂಧುಗಳಿಗೆ ಉಪದ್ರವವಂಮಾಡಿದವನು, ನಿರಂತರವೂ ಅನೃತವನಾಡುವವನು,ಬಹುಭಾಷಿಕನು, ಸಕಲಪಾಪಂಗಳೆಲ್ಲವೂ ಆಕಾರವಾಗಿ ಹುಟ್ಟಿದವನು, ಇವನಂ ರೌರವ, ಅಂಧತಾಮಿಸ್ರ, ಕುಂಭೀಪಾಕ ಮಹಾರೌರವ, ಕಾಲಸೂತ್ರ,ಕ್ರಿಮಿಭೋಜನ, ಕೀವು ನೆತ್ತರದಗುಂಡಿ, ಅಸಿಪತ್ರವನ, ಕಲ್ಲುಗಾಣ, ಶ್ವಾನಂಗಳಿಂಕಚ್ಚುವನರಕ, ಪೂತಿಗಂಧ,

ವಿಷ್ಠಾಗರ್ತ, ಶ್ವಾನಭೋಜನ, ಸೂಚೀಮುಖ, ಇಕ್ಕಳಗಳಿಂ ಕೀಳುವ ನರಕ, ನಾಯಿಬೊಲ್ಲುಕುಡಿಸುವನರಕ, ನಾಯಿಂಗರಕತ್ತಿಯಿಂ ಕೊಯ್ಯುವ ನರಕ, ತಪ್ತತೈಲಕಟಾಹ, ಕೆಂಡದ ಮಳೆ, ಇವು ಮೊದಲಾದ ನಾಯುಕ ನರಕಂಗಳಲ್ಲಿ ಒಂದೊಂದರಲ್ಲಿ ಒಂದು ಕಲ್ಪ ಪರ್ಯಂತರವೂ ಬಾಧಿಸಬೇಕೆಂದು ಚಿತ್ರಗುಪ್ತರು ಹೇಳಲು; ಯಮನು ಮಹಾ ಕೋಪದಿಂ ಮಾಹಿಕನಂ ನೋಡಿ ದೂತರಂ ಕರೆದು ಬಾಧಿಸಹೇಳಿ ಕಟ್ಟುಮಾಡಲು, ಯಮದೂತರು ಆ ಪ್ರಕಾರದಲ್ಲಿ ಭಾಧಿಸುವೆಂದು ಇರುವಕಾಲಕ್ಕೆ ಅವನು ಪೂರ್ವದಲ್ಲಿ ಆರ್ಜಿಸಿದಪುಣ್ಯಬದಗಲು, ಈ ಜನ್ಮದಲ್ಲಿ ಹದ್ದಿನ ಮುಖದಿಂದ ಪಾಪವು ಗಂಗೆಯಲ್ಲಿ ಬೀಳಲು ಆಕ್ಷಣವೇ ಸ್ವರ್ಗದಿಂದ ವಿಮಾನಬಂದು ಅವನ ಪಾಪವಂ ನಿವೃತ್ತಿಯಿಂ ಮಾಡಿ ದಿವ್ಯ ವಿಮಾನದಿಂದ ಸ್ವರ್ಗಕ್ಕೆ ದೇವತೆಗಳು ಕರದುಕೊಂಡುಹೋದರು. ಎಲೈ ವಿಷ್ಣುವೆ! ಗಂಗಾಮಹಾತ್ಮೆಯಿಂ ಕೇಳಿದೆಯಾ ಎಂದು ಇತಿಹಾಸವನ್ನು ಹೇಳಿ ಮತ್ತು ಇಂತೆಂದನು. ಕೇಳೈ ವಿಷ್ಣುವೆ! ಈ ಅದ್ಭುತವು ಗಂಗಾಮಹಿಮೆಯಲ್ಲಿ ಅಲ್ಲದೆ ಮತ್ತೊಂದು ತೀರ್ಥದಲ್ಲಿ ಇಲ್ಲ. ಲೋಕವನ್ನುದ್ಧರಿಸಲೋಸ್ಕರ ತನ್ನ ಒಂದಾನೊಂದು ಸಾಮರ್ಥ್ಯವನ್ನು ಈ ಗಂಗೆಯ ರೂಪವಾಗಿ ನಿರ್ಮಿಸಿದೆನು, ಅದೂಅಲ್ಲದೆ ವೇದಾಕ್ಷರಂಗಳಂ ಈ ಗಂಗೆಯ ಬಿಂದುಗಳಾಗಿ ನಿರ್ಮಿಸಿದೆನು. ಅದುಕಾರಣ ಈ ಗಂಗೆಯನ್ನು ಲೋಕದ ನದಿಗಳೊಳಗೊಂದಾಗಿ ನೋಡಲಾಗದು, ಅದುಕಾರಣದಿಂ ಗಂಗೆಯಿಲ್ಲದ ರಾಜ್ಯವು ಚಂದ್ರನಿಲ್ಲದ ರಾತ್ರಿಯಂತೆ, ಸೂರ್ಯನಿಲ್ಲದ ಆಕಾಶದಂತೆ, ಪುಷ್ಪವಿಲ್ಲದ ವೃಕ್ಷದಂತೆ, ನ್ಯಾಯವಿಲ್ಲದವನ ನಡವಳಿಕೆಯಂತೆ, ದಾನವಿಲ್ಲದಐಶ್ವರ್ಯದಂತೆ, ವೇದವಿಲ್ಲದ ಬ್ರಾಹ್ಮಣನಂತೆ, ಒಪ್ಪಲರಿಯದು. ಚಾಂದ್ರಾಯಣವಮಾಡಿದವಗಿಂತಲೂ, ಒಂದು ಕುಡಿಕೆ ಗಂಗೋದಕವಂ ಪಾನವಂ ಮಾಡಿದವನೆ ಅಧಿಕ, ಏಕಪಾದದಲ್ಲಿ ನಿಂತು ಸಹಸ್ರವರ್ಷ ತಪವಿರ್ದ ಅನುಷ್ಠಾನವಂ ಮಾಡಿದವನಿಗಿಂತ ಒಂದುವರ್ಷ ಗಂಗಾಸ್ನಾನವಂಮಾಡಿದವನೆ ಅಧಿಕ, ಗ್ರೀಷ್ಮಕಾಲಂಗಳಲ್ಲಿ ತಲೆಕೆಳಗಾಗಿ ತಪವಿರ್ದವ

ನಿಗಿಂತಲೂ, ಗಂಗೆಯಲ್ಲಿ ಮುಳುಗಿದವನೆ ಅಧಿಕ, ಗಂಗಾಮೃತ್ತಿಕೆಯಂ ಧರಿಸಲು ಸೂರ್ಯ್ಯನ ರೂಪರಹರು. ನಾನಾವಿಪತ್ತುಗಳಲ್ಲಿ ನೊಂದವರ್ಗೆ ದರಿದ್ರರಿಗೆ ಗಂಗೆಯು ದರ್ಶನ ಸ್ಪರ್ಶ ಸ್ನಾನ ಪಾನಕ್ಕೆ ದಶಗುಣ ಫಲವುಂಟು, ಪಾಪಗಳ ಸಹಸ್ರವೂ ನಾಶವಹವೂ, ಗಂಗಾಸ್ನಾನದಿಂ ಆಗುವ ಫಲವು ಯಜ್ಞಾದಿ ಕರ್ಮಗಳಿಂದಲೂ ಆಗದು. ಕೈಕಾಲು ಘಟ್ಟಿಯಾಗಿ ಇದ್ದಾಗಲೆ ಗಂಗಾಸ್ನಾನವಂ ಮಾಡದೆ ಇರುವನು ಜಾತ್ಯಂಧನು, ಕುಂಟನು, ಜೀವನ್ಮೃತನು, ಈ ಗಂಗಾ ಮಹಾತ್ಮ್ಯಸಕಲವೇದಸಿದ್ಧವಾದದ್ದು. ಗಂಗೆಯಲ್ಲಿ ಶರೀರವಂ ತೃಣಕ್ಕೆ ಸಮಾನವಾಗಿ ತ್ಯಜಿಸಲು ಸ್ವರ್ಗಾದಿ ಭೋಗವುಂಟು. ಈ ಗಂಗೆಯು ಸ್ವರ್ಗ ಮರ್ತ್ಯ ಪಾತಾಳ, ಈ ಮೂರು ಲೋಕದಲ್ಲಿ ದೇವತಾಮನುಷ್ಯಸರ್ಪಾದಿಗಳ ರಕ್ಷಿಸಿದಳಾದಕಾರಣ ತ್ರಿಪಥಗಾಮಿನೀ ಎನಿಸಿದಳು. ದಿವ್ಯ ಭೌಮಾಂತರಿಕ್ಷದಲ್ಲಿ ಇರುವ ಮೂರುಕೋಟಿಯೂ ಅರವತ್ತು ಲಕ್ಷ ತೀರ್ಥವೂ ಈ ಗಂಗೆಯಲ್ಲಿ ಅಡಕವಾಗಿ ಇಹವು. ಈ ಮಹಿಮೆಯಂ ತಿಳಿದು ಗಂಗಾ ಪ್ರವೇಶವಂ ಮಾಡಿದ ಮಹಾಪಾತಕಿಯಾದರೂ ಸ್ವರ್ಗವಂ ಐದುವನು ಸಂದೇಹವಿಲ್ಲ. ಈ ಗಂಗಾತೀರದಲ್ಲಿ ಅಲಂಕಾರ ಗೋದಾನವಂಮಾಡಲು ಆ ಗೋವಿನ ರೋಮಂಗಳೆಷ್ಟು ಉಂಟೋ ಅಷ್ಟುಯುಗವಸ್ವರ್ಗವುಂಟು. ಈ ಗಂಗಾಸ್ನಾನವೇ ಸಕಲ ತೀರ್ಥಸ್ನಾನಫಲ, ಸಕಲತಪಸ್ಸಿನ ಫಲ, ಸಕಲ ಪುಣ್ಯಕ್ಷೇತ್ರಯಾತ್ರಫಲವು, ಇಂತೆಂದು ಪರಮೇಶ್ವರನು ವಿಷ್ಣುವಿಗೆ ಪೇಳ್ದ ಗಂಗಾಮಹಿಮೆಯನ್ನು ಕುಮಾರಸ್ವಾಮಿಅಗಸ್ತ್ಯಂಗೆ ನಿರೂಪಿಸಿದ ಅರ್ಥವನ್ನು ವ್ಯಾಸರು ತಮಗರುಹಿದರೆಂದು ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ವಿಸ್ತರಿಸಿದರೆಂಬಲ್ಲಿಗೆ ಅಧ್ಯಾಯಾರ್ಥ ॥-॥ ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರು ಪುರವರಾಧೀಶ ಶ್ರೀ ಕೃಷ್ಣರಾಜಬಡಯರವರು ಲೋಕೋಪಕಾರಾರ್ಥವಾಗಿ ಕರ್ಣಾಟಕಭಾಷೆಯಿಂ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀ ಮಹಿಮಾರ್ಥದರ್ಪಣದಲ್ಲಿ ಗಂಗಾಪ್ರಭಾವ, ವಾಹಿಕನವೃತ್ತಾಂತವೆಂಬ ಇಪ್ಪತ್ತೆಂಟನೇ ಅಧ್ಯಾಯಾರ್ಥನಿರೂಪಣಕ್ಕಂ ಮಂಗಳಮಹಾ*

ಇಪ್ಪತ್ತೆಂಟನೇಅಧ್ಯಾಯ ಸಂಪೂರ್ಣವು.

ಶ್ರೀರಸ್ತು.

ಇಪ್ಪತ್ತೊಂಭನೇ ಅಧ್ಯಾಯ.

ಗಂಗಾ ಸಹಸ್ರನಾಮ.

ಅನಂತರದಲ್ಲಿ ಕುಮಾರಸ್ವಾಮಿಗೆ ಅಗಸ್ತ್ಯನಿಂತೆಂದು ಬಿನ್ನೈಸಿದನು. ಎಲೈ ಪಾರ್ವತೀಪ್ರಿಯಪುತ್ರನಾದ ಗಣಾಗ್ರಗಣ್ಯನಾದ ತಾರಕಾರಿಯಾದ ಕುಮಾರಸ್ವಾಮಿಯೆ! ನನಿಗೆ ಗಂಗಾ ಮಹಿಮೆಯಂ ಹೇಳುವಾಗ ಆವನಾನೊಬ್ಬನು ಗಂಗಾಸ್ನಾನವಂ ಮಾಡದೆ ಇದ್ದರೆ ಆವನ ಜನ್ಮ ವ್ಯರ್ಥವೆಂದು ನಿರೂಪಿಸಿದರಲ್ಲ, ಆದರೆ ಅಶಕ್ತರಾದವರಿಗೆ, ಕುಂಟರಾದವರಿಗೆ, ಆಲಸ್ಯಗಾರರಿಗೆ, ಇಂಥಾವರಿಗೆ ಗಂಗಾಸ್ನಾನವು ದೊರಕದಲ್ಲ, ಅವರಿಗೆ ಗಂಗಾಸ್ನಾನಫಲವಂ ಕೊಡುವಂಥಾ ದಾನ, ಮಂತ್ರ, ಸ್ತೋತ್ರ ಜಪ ಮತ್ತೊಂದು ತೀರ್ಥಸ್ನಾನ ದೇವತೋಪಾಸನೆ ಇವುಮೊದಲಾದವೇನಾದರೂ ಇದ್ದರೆ ನನಿಗೆ ಬುದ್ಧಿಗಲಿಸಬೇಕು, ಗಂಗಾ ಮಹಿಮೆಯಂ ಬಲ್ಲವರಿಲ್ಲವಷ್ಟೆ? ಇಂತೆಂದು ಅಗಸ್ತ್ಯನು ಬಿನ್ನಹವಂಮಾಡಲು, ಕುಮಾರಸ್ವಾಮಿ ಇಂತೆಂದನು. ಕೇಳೈ ಅಗಸ್ತ್ಯನೆ! ಈಗ ನೀಮಾಡಿದ ಪ್ರಶ್ನೆಯನ್ನೆ ಪೂರ್ವದಲ್ಲಿ ವಿಷ್ಣುವು ಪರಮೇಶ್ವರನ ಕೇಳಲಾಗಿ ವಿಷ್ಣುವಿಗೆ ಪರಮೇಶ್ವರನು ಗಂಗಾಮಹಿಮೆಯಂ ಹೇಳಿದನು ಕೇಳೆಂದು ಅಗಸ್ತ್ಯಂಗೆ ಕುಮಾರಸ್ವಾಮಿ ಇಂತೆಂದನು. ಎಲೈ ವಿಷ್ಣುವೆ! ಲೋಕದಲ್ಲಿ ಮಹಾಮಹಿಮೆಯುಳ್ಳ ಪ್ರತ್ಯಕ್ಷಫಲಂಗಳಂ ಕೊಡುವಂಥಾ ಅನೇಕ ತೀರ್ಥಗಳುಂಟು, ಅನೇಕ ನದಿಗಳುಂಟು, ಅವು ಗಂಗೆಯ ಕೋಟ್ಯಂಶಕ್ಕೆ ಸರಿಬಾರವು, ಅದುಹ್ಯಾಗೆಂದರೆ, ನಾನು ನನ್ನ ಲೀಲಾವಿನೋದಕ್ಕೋಸ್ಕರವಾಗಿ ಈ ಗಂಗೆಯಂ ಶಿರಸ್ಸಿನಲ್ಲಿಧರಿಸಿದೆನು, ಅದೂಅಲ್ಲದೆ, ಸಕಲರೂ ಪುಣ್ಯತೀರ್ಥ ಕೆರೆ ಬಾವಿ ಮೊದಲಾದವುಗಳಲ್ಲಿಸ್ನಾನವಂಮಾಡುವಾಗ ಗಂಗೆ, ಗಂಗಾಸ್ನಾನವೆಂದು ಸ್ಮರಿಸುವರಲ್ಲದೇ ಮತ್ತೊಂದು ತೀರ್ಥವಂಸ್ಮರಿಸುವದಿಲ್ಲವಷ್ಟೆ, ಮಹಾಪಾತಕಂಗಳಪರಿಹರಿಸಿ ಉತ್ತಮಗತಿಯನೀವುದಕ್ಕೆ ಮತ್ತೊಂದು ತೀರ್ಥ

ಕ್ಕೆ ಸಾಮರ್ಥ್ಯವಿಲ್ಲ. ಗಂಗೆಯಲ್ಲಿ ಅಲ್ಲದೆ ಗಂಗಾಸ್ನಾನ ಫಲ ದೊರಕದು ಅದೆಂತೆಂದಡೆ, ದತ್ರ ಶ್ರೀಹರ್ಷ್ಣನಸ್ಪದವು ಮತ್ತೊಂದು ಫಲದಲ್ಲಿ ಇಲ್ಲವಾಗಿ ಈ ಗಂಗಾಸ್ನಾನಫಲವು ಗಂಗೆಯಲ್ಲಿ ಅಲ್ಲದೆ ಮತ್ತೊಂದರಲ್ಲಿಯಿಲ್ಲ. ಗಂಗಾಸ್ನಾನಕ್ಕೆ ಹೋಗಲಾರದವರಿಗೆ ಗಂಗಾಸ್ನಾನಫಲದೊರಕುವ ಉಪಾಯವುಂಟೆ ಎಂದು ಬೆಸಗೊಂಡೆಯಲ್ಲಾ ಆದರೆ ಕೇಳ್ಳೆ ಮಹಾವಿಷ್ಣುವೆ, ಗಂಗಾಸ್ನಾನಫಲದೊರಕೊಂಬುವದಕ್ಕೆ ಒಂದು ಉಪಾಯವುಂಟು, ಆ ಉಪಾಯವೇನೆಂಬೆಯಾ, ಹರಿಹರರಾದ ನಮ್ಮಿಬ್ಬರಲ್ಲಿಯೂ ಭೇದವಿಲ್ಲದವನಾಗಿ, ನಮ್ಮಿಬ್ಬರಲ್ಲಿಯೂ ಭಕ್ತಿವಿಶ್ವಾಸವುಳ್ಳವನಾಗಿ, ನಾಸ್ತಿಕನಾಗದೆ ಸಂಸಾರಬಿಡುಗಡೆ ಬಯಸುವನಾಗಿ ಇರುವ ಪುಣ್ಯಾತ್ಮಂಗೆ ಗಂಗಾಸ್ನಾನಕ್ಕೆ ಹೋಗದಿದ್ದರು ಗಂಗಾಸ್ನಾನಫಲವುಂಟು ಈ ಉಪಾಯವಂ ಅಂಥಾ ಪುಣ್ಯಾತ್ಮರಿಗೆ ಹೇಳಬೇಕಲ್ಲದೆ ನನ್ನ ನಿನ್ನ ಭೇದವಾದಿಗಳಿಗೆ ನನ್ನ ನಿನ್ನಲ್ಲಿ ವಿಶ್ವಾಸಹೀನರಿಗೆ ಈ ಉಪಾಯವಂ ಆವಾಗಲು ಹೇಳಲಾಗದು. ಅದು ಪರಮರಹಸ್ಯ, ಪವಿತ್ರತರ, ಪಾಪನಾಶನ, ಶ್ರೇಯಸ್ಕರ. ನನಗೂ ನಿನಗೂ ಗಂಗಾಭವಾನಿಗು ಸಂತೋಷಕರ, ಆಯುಷ್ಕರವಾದದ್ದು, ಇಂಥಾದ್ದೊಂದು ದಿವ್ಯಸ್ತೋತ್ರವುಂಟು, ಅದೇನೆಂಬೆಯಾ, ಗಂಗಾಸಹಸ್ರನಾಮಸ್ತೋತ್ರವೆಂಬ ದಿವ್ಯಮಂತ್ರವಿರುವದು ಅದು ಹ್ಯಾಗೆಂಬೆಯಾ ಕೇಳು, ಇದು ಸಕಲವೇದವು, ಸಕಲ ಉಪನಿಷತ್ತುಗಳ ಸಾರವು. ಈ ಸ್ತೋತ್ರವಂ ಭಕ್ತಿಯಿಂದ ಪಠಿಸಿದರೆ ಗಂಗಾಸ್ನಾನಕ್ಕೆ ವಿಶೇಷವಾದ ಫಲವುಂಟು, ಹ್ಯಾಗೆ ಪಠಿಸಬೇಕೆಂಬೆಯಾ, ಸ್ನಾನಮಂ ಮಾಡಿ, ಷಟ್ಕರ್ಮ ನಿರತನಾಗಿ, ಶುಚಿಯಾಗಿ, ರುಜುಕಾಯನಾಗಿ, ಸಮಗ್ರಶರೀರನಾಗಿ, ಸ್ಥಿರನಾಗಿ, ಪದ್ಮಾಸನದಲ್ಲಿ ಕುಳಿತು ಬಾಯಿಂದಾ ಕೂಗಿ ಉಚ್ಚರಿಸದೆ, ಮನಸ್ಸಿನಿಂದ ಬೇಗಪಡದೆ ಪ್ರಣವಸಂಯುಕ್ತವಾಗಿ ನಮಃ ಶಬ್ದ ಕಡೆಯಾಗಿ ಜಪಿಸಬೇಕು. ಆ ನಾಮವುಂಗಳಂ ಕೇಳು ಎಂದು ವಿಷ್ಣುವಿಗೆ ಪರಮೇಶ್ವರನು ನಿರೂಪಿಸಿದಂಥಾ ಗಂಗಾಸಹಸ್ರನಾಮವಂ ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನು.

ಆ ಸ್ತೋತ್ರನಾಮಸಹಸ್ರನಾಮವೆಂತೆಂದರೆ.—

ಗಂಗಾಸಹಸ್ರನಾಮ.

ಓಂಕಾರರೂಪಿಣ್ಯೈ ನಮಃ
ಅಜರಾಯೈ
ಅತುಲಾಯೈ
ಅನಂತಾಯೈ
ಅಮೃತಸ್ರವಾಯೈ
ಅತ್ಯುದಾರಾಯೈ
ಅಭಯಾಯೈ
ಅಶೋಕಾಯೈ
ಅಲಕನಂದಾಯೈ
ಅಮೃತಾಯೈ ನಮಃ
ಅಮಲಾಯೈ ನಮಃ
ಅನಾಥವತ್ಸಲಾಯೈ ನಮಃ
ಅಮೋಘಾಯೈ
ಅಪಾಂಯೋನಯೇ
ಅಮೃತಪ್ರದಾಯೈ
ಅವ್ಯಕ್ತಲಕ್ಷಣಾಯೈ ನಮಃ
ಅಕ್ಷೋಭ್ಯಾಯೈ
ಅನವಚ್ಛಿನ್ನಾಯೈ
ಅಪರಾಜಿತಾಯೈ
ಅನಾಥನಾಥಾಯೈ ನಮಃ ೨೦
ಅಭೀಷ್ಟಾರ್ಥಸಿದ್ಧಿದಾಯೈ
ಅನಂಗವರ್ಧಿನ್ಯೈ
ಅಣಿಮಾದಿಗುಣಾಧಾರಾಯೈ
ಅಗ್ರಗಣ್ಯಾಯೈ
ಅಲೀಕಹಾರಿಣ್ಯೈ ನಮಃ
ಅಚಿಂತ್ಯಶಕ್ತಯೇ
ಅನಘಾಯೈ
ಅದ್ಭುತರೂಪಾಯೈ
ಅಘಹಾರಿಣ್ಯೈ
ಅದ್ರಿರಾಜಸುತಾಯೈ ನಮಃ

ಅಷ್ಟಾಂಗಯೋಗಸಿದ್ಧಿಪ್ರದಾ
ಅಚ್ಯುತಾಯೈ ನಮಃ
ಅಕ್ಷುಣ್ಣಶಕ್ತಯೇ ನಮಃ
ಅಸುದಾಯಿನ್ಯೈ ನಮಃ
ಅನಂತತೀರ್ಥಾಯೈ ನಮಃ
ಅಮೃತೋದಕಾಯೈ ನಮಃ
ಅನಂತಮಹಿಮಾಯೈ ನಮಃ
ಅಪಾರಾಯೈ ನಮಃ
ಅನಂತಸೌಖ್ಯಪ್ರದಾಯೈ
ಅನ್ನದಾಯೈ ನಮಃ ೪೦
ಅಶೇಷದೇವತಾಮೂರ್ತಯೇ
ಅಘೋರಾಯೈ ನಮಃ
ಅಮೃತರೂಪಿಣ್ಯೈ ನಮಃ
ಅವಿದ್ಯಾಜಾಲಶಮನ್ಯೈ
ಅಪ್ರತರ್ಕ್ಯಗತಿಪ್ರದಾಯೈ
ಅಶೇಷವಿಘ್ನಸಂಹರ್ತ್ರ್ಯೈ ನ
ಅಶೇಷಗುಣಗುಂಫಿತಾಯೈ
ಅಜ್ಞಾನತಿಮಿರಜ್ಯೋತಿಷೇ
ಅನುಗ್ರಹಪರಾಯಣಾಯೈ
ಅಭಿರಾಮಾಯೈ
ಅನವದ್ಯಾಂಗ್ಯೈ ನಮಃ
ಅನಂತಾಯೈ
ಅಕಳಂಕಿನ್ಯೈ
ಆರೋಗ್ಯದಾಯಿನ್ಯೈ
ಆನಂದವಲ್ಲ್ಯೈ ನಮಃ
ಆಪನ್ನಾರ್ತಿವಿನಾಶಿನ್ಯೈ ನಮಃ
ಆಶ್ಚರ್ಯಮೂರ್ತಯೇ ನಮಃ
ಆಯುಷ್ಯಾಯೈ ನಮಃ
ಆಢ್ಯಾಯೈ ನಮಃ
ಆದ್ಯಾಪಾಯೈ ನಮಃ ೬೦

ಆರ್ಯಸೇವಿತಾಯೈ ನಮಃ
ಆಪ್ಯಾಯಿನ್ಯೈ ನಮಃ
ಆಪ್ತವಿದ್ಯಾಯೈ ನಮಃ
ಆಖ್ಯಾಯೈ ನಮಃ
ಆನಂದಾಯೈ ನಮಃ
ಆಶ್ವಾಸದಾಯಿನ್ಯೈ ನಮಃ
ಆಲಸ್ಯಘ್ನ್ಯೈ ನಮಃ
ಆಪದಾಂಹಂತ್ರ್ಯೈ ನಮಃ
ಆನಂದಾಮೃತವರ್ಷಿಣ್ಯೈ
ಇರಾವತ್ಯೈ ನಮಃ ೮೦
ಇಷ್ಟದಾತ್ರ್ಯೈ ನಮಃ
ಇಷ್ಟಾಪೂರ್ತಫಲಪ್ರದಾಯೈ
ಇತಿಹಾಸಶ್ರುತೀಡ್ಯಾರ್ಥಾಯೈ
ಇಹಾಮುತ್ರಶುಭಪ್ರದಾಯೈ
ಇಜ್ಯಾಶೀಲಸಮಾಯೈ ನಮಃ
ಇಜ್ಯಾಯೈ ನಮಃ
ಇಷ್ಟಾಯೈ ನಮಃ
ಇಂದ್ರಾದಿವಂದಿತಾಯೈ
ಇಲಾಲಂಕಾರಮಾಲಾಯೈ
ಇದ್ಧಾಯೈ ನಮಃ ೧೦೦
ಇಂದಿರಾರಮ್ಯಮಂದಿರಾಯೈ
ಇಂದಿಂದಿರಾದಿಸಂಸೇವ್ಯಾಯೈ
ಈಶ್ವರ್ಯೈ ನಮಃ
ಈಶ್ವರವಲ್ಲಭಾಯೈ ನಮಃ
ಈತಿಭೀತಿಹರಾಯೈ ನಮಃ
ಈಡ್ಯಾಯೈ ನಮಃ
ಈಡನೀಯಚರಿತ್ರಭೃತೇ ನ
ಉತ್ಕೃಷ್ಟಶಕ್ತಯೇ ನಮಃ
ಉತ್ಕೃಷ್ಟಾಯೈ ನಮಃ
ಉಡುಪಮಂಡಲಚಾರಿಣ್ಯೈ ನ

ಉದಿತಾಂಬರಮಾರ್ಗಾಯೈ
ಉಗ್ರಾಯೈನಮಃ
ಉರಗಲೋಕವಿಹಾರಿಣ್ಯೈ
ಉಕ್ಷ್ಣ್ಯೈನಮಃ
ಉರ್ವರಾಯೈನಮಃ
ಉತ್ಪಲಾಯೈನಮಃ
ಉತ್ಕುಂಭಾಯೈನಮಃ
ಉಪೇಂದ್ರಚರಣದ್ರವಾಯೈ
ಉದನ್ವತ್ಪೂರ್ತಿಹೇತವೇ
ಉದಾರಾಯೈನಮಃ ||೧೦೦||
ಉತ್ಸಾಹಪ್ರವರ್ಧಿನ್ಯೈನಮಃ
ಉದ್ವೇಗಘ್ನ್ಯೈನಮಃ
ಉಷ್ಣಶಮನ್ಯೈನಮಃ
ಉಷ್ಣರಶ್ಮಿಸುತಾಪ್ರಿಯಾಯೈ ಐತಿಹ್ಯಾಯೈನಮಃ
ಉತ್ಪತ್ತಿಸ್ಥಿತಿಸಂಹಾರಕಾರಿ
ಉಪರಿಚಾರಿಣ್ಯೈನಮಃ
ಊರ್ಜಂವಹಂತ್ಯೈನಮಃ
ಊರ್ಜಧರಾಯೈನಮಃ
ಊರ್ಜಾವತ್ಯೈನಮಃ
ಊರ್ಮಿಮಾಲಿನ್ಯೈನಮಃ||೧೧೦
ಊರ್ಧ್ವರೇತಃಪ್ರಿಯಾಯೈ
ಊರ್ಧ್ವಾಧ್ವನ್ಯೈ
ಊರ್ಮ್ಯಾಯೈನಮಃ
ಊರ್ಮಿಳಾಯೈನಮಃ
ಊರ್ಧ್ವಗತಿಪ್ರದಾಯೈ
ಋಷಿಬೃಂದಸ್ತುತಾಯೈ
ಋದ್ಧ್ಯೈನಮಃ
ಋಣತ್ರಯವಿನಾಶಿನ್ಯೈನಮಃ
ಋತಂಭರಾಯೈನಮಃ
ಋದ್ಧಿದಾತ್ರ್ಯೈನಮಃ||೧೨೦

ಋಕ್ಸ್ವರೂಪಾಯೈ
ಋಜುಪ್ರಿಯಾಯೈನಮಃ
ಋಕ್ಷಮಾರ್ಗವಹಾಯೈ
ಋಕ್ಷಾರ್ಚಿಷೇನಮಃ
ಋಜವೇನಮಃ
ಋಜುಮಾರ್ಗಪ್ರದರ್ಶಿನ್ಯೈ
ಏಧಿತಾಖಿಲಧರ್ಮಾರ್ಥಾಯೈ
ಏಕಸ್ಯಾಮೃತದಾಯಿನ್ಯೈ
ಏಧನೀಯಸ್ವಭಾವಾಯೈ
ಏಜ್ಯಾಯೈನಮಃ ||೧೩೦
ಏಧಿತಾಶೇಷಪಾತಕಾಯೈ
ಐಶ್ವರ್ಯದಾಯೈನಮಃ
ಐಶ್ವರ್ಯರೂಪಾಯೈನಮಃ
ಐಂದ್ರ್ಯೈನಮಃ
ಐಂದವದ್ಯುತಯೇನಮಃ
ಓಜಸ್ವಿನ್ಯೈನಮಃ
ಓಷಧಿಕ್ಷೇತ್ರಾಯೈ
ಓಜಸೇನಮಃ
ಓದನದಾಯಿನ್ಯೈ ||೧೪೦
ಓಷ್ಠಾಮೃತಾಯೈನಮಃ
ಔನ್ನತ್ಯದಾತ್ರ್ಯೈನಮಃ
ಔಷಧರೂಪಾಯೈ
ಔದಾರ್ಯಚಂಚವೇನಮಃ
ಔಪೇಂದ್ರ್ಯೈನಮಃ
ಔಗ್ರ್ಯೈನಮಃ
ಔಮೇಯರೂಪಿಣ್ಯೈನಮಃ
ಅಂಬರಾಧ್ವವಹಾಯೈ
ಅಂಬರಮಾಲಾಯೈ ||೧೫೦
ಅಂಬುಜೇಕ್ಷಣಾಯೈನಮಃ

ಅಂಬಿಕಾಯೈನಮಃ
ಅಂಬುಮಹಾಯೋನಯೇ
ಅಂಧೋದಾಯೈ
ಅಂಧಕಹಾರಿಣ್ಯೈನಮಃ
ಅಂಶುಮಾಲಾಯೈನಮಃ
ಅಂಶುಮತ್ಯೈನಮಃ
ಅಂಗೀಕೃತಷಡಾನನಾಯೈ
ಅಂಧತಾಮಿಸ್ರಹಂತ್ರ್ಯೈ
ಅಂಧವೇನಮಃ ||೧೬೦
ಅಂಜನಾಯೈನಮಃ
ಅಸ್ತೋಕಪುಣ್ಯಸಲಿಲಾಯೈ
ಅಸ್ತೋದಯವಿವರ್ಜಿತಾಯೈ
ಅಸ್ತಾಭಿಲಾಷಸಂಸೇವ್ಯಾಯೈ
ಅಶ್ಮಚಿತ್ತನಿಕೇತನಾಯೈ
ಅಸ್ತ್ರರೂಪಾಯೈನಮಃ
ಅಸ್ತಮಾಯಾಯೈನಮಃ
ಅಸ್ತವ್ಯಸ್ತಜಲಾವಿಲಾಯೈ
ಅಸ್ತುರಾತ್ರ್ಯೈನಮಃ ||೧೭೦
ಅಮರಸ್ತುತಾಯೈನಮಃ
ಅಸಲದ್ಗತಿದಾಯೈನಮಃ
ಕಲ್ಯಾಣಕಾರಿಣ್ಯೈನಮಃ
ಕಾಮ್ಯಾಯೈನಮಃ
ಕಮಲೋತ್ಪಲಗಂಧಿನ್ಯೈ
ಕುಮುದ್ವತ್ಯೈನಮಃ
ಕಮಲಿನ್ಯೈನಮಃ
ಕಾಂತ್ಯೈನಮಃ
ಕಲ್ಪಿತದಾಯಿನ್ಯೈನಮಃ
ಕಾಂಚನಾಕ್ಷ್ಯೈನಮಃ ೧೮೦
ಕಾಮಧೇನ್ವೈನಮಃ
ಕೀರ್ತಿಕೃತೇನಮಃ

ಕ್ಲೇಶನಾಶಿನ್ಯೈ ನಮಃ
ಕ್ರತುಶ್ರೇಷ್ಠಾಯೈ ನಮಃ
ಕ್ರತುಫಲಾಯೈ ನಮಃ
ಕರ್ಮಬಂಧವಿಭೇದಿನ್ಯೈ
ಕಮಲಾಕ್ಷ್ಯೈ ನಮಃ
ಕ್ಲಮಹರಾಯೈ ನಮಃ
ಕೃಶಾನುತಪನದ್ಯುತಯೇ ನಮಃ
ಕರುಣಾರ್ದ್ರಾಯೈ ॥೧೯೦
ಕಲ್ಯಾಣ್ಯೈ ನಮಃ
ಕಲಿಕಲ್ಮಷನಾಶಿನ್ಯೈ ನಮಃ
ಕಾಮರೂಪಾಯೈ ನಮಃ
ಕ್ರಿಯಾಶಕ್ತ್ಯೈ ನಮಃ
ಕಮಲೋತ್ಪಲಮಾಲಿನ್ಯೈ
ಕೂಟಸ್ಥಾಯೈ ನಮಃ
ಕರುಣಾಯೈ ನಮಃ
ಕಾಂತಾಯೈ ನಮಃ
ಕೂರ್ಮಯಾನಾಯೈ ನಮಃ
ಕಲಾವತ್ಯೈ ನಮಃ ॥೨೦೦॥
ಕಮಲಾಯೈ ನಮಃ
ಕಲ್ಪಲತಿಕಾಯೈ ನಮಃ
ಕಾಳ್ಯೈ ನಮಃ
ಕಲುಷವೈರಿಣ್ಯೈ ನಮಃ
ಕಮನೀಯಜಲಾಯೈ ನಮಃ
ಕಮ್ರಾಯೈ ನಮಃ
ಕಪರ್ದಿಸುಕಪರ್ದಗಾಯೈ
ಕಾಲಕೂಟಪ್ರಶಮನ್ಯೈ
ಕದಂಬಕುಸುಮಪ್ರಿಯಾಯೈ
ಕಾಳಿಂದ್ಯೈ ನಮಃ ೨೧೦
ಕೇಳಿಲಲಿತಾಯೈ ನಮಃ
ಕಲಮಾಲಾಯೈ ನಮಃ

ಕಲ್ಲೋಲಮಾಲಿಕಾಯೈ
ಕ್ರಾಂತಲೋಕತ್ರಯಾಯೈ
ಕಂಡ್ವೈ ನಮಃ
ಕಂಡೂತನಯವತ್ಸಲಾಯೈ
ಖಡ್ಗಿನ್ಯೈ ನಮಃ
ಖಡ್ಗಧಾರಾಭಾಯೈ ನಮಃ
ಖಗಾಯೈ ನಮಃ
ಖಂಡೇಂದುಧಾರಿಣ್ಯೈ ॥೨೨೦
ಖೇಖೇಲಗಾಮಿನ್ಯೈ ನಮಃ
ಖಸ್ಥಾಯೈ ನಮಃ
ಖಂಡೇಂದುತಿಲಕಪ್ರದಾಯೈ
ಖೇಚರ್ಯೈ ನಮಃ
ಖೇಚರೀವಂದ್ಯಾಯೈ
ಖ್ಯಾತ್ಯೈ ನಮಃ
ಖ್ಯಾತಿಪ್ರದಾಯಿನ್ಯೈ
ಖಂಡಿತಪ್ರಣತಾಘೌಘಾಯೈ
ಖಲಬುದ್ಧಿವಿನಾಶಿನ್ಯೈ
ಖಾತೈನಃಕಂದಸಂದೋಹಾ
ಖಡ್ಗಖಟ್ವಾಂಗಖೇಟಿನ್ಯೈ ೩೦
ಖರಸಂತಾಪಶಮನ್ಯೈ
ಪೀಯೂಷಪಾಥಸಾಂಖನ್ಯೈ
ಗಂಗಾಯೈ ನಮಃ
ಗಂಧವತ್ಯೈ ನಮಃ
ಗೌರ್ಯೈ ನಮಃ
ಗಂಧರ್ವನಗರಪ್ರಿಯಾಯೈ
ಗಂಭೀರಾಂಗ್ಯೈ ನಮಃ
ಗುಣಮಯ್ಯೈ ನಮಃ
ಗತಾತಂಕಾಯೈ ನಮಃ
ಗತಿಪ್ರದಾಯೈ ನಮಃ
ಗಣನಾಥಾಂಬಿಕಾಯೈ ನಮಃ

ಗಾಂಧಾರ್ಯೈ ನಮಃ
ಗರ್ಭಶಮನ್ಯೈ ನಮಃ
ಗತಿಭ್ರಷ್ಟಗತಿಪ್ರದಾಯೈ
ಗೋಮತ್ಯೈ ನಮಃ
ಗುಹ್ಯವಿದ್ಯಾಯೈ
ಗವೇ ನಮಃ
ಗೋಪ್ತ್ರ್ಯೈ ನಮಃ
ಗಗನಗಾಮಿನ್ಯೈ ನಮಃ ॥೨೫೦
ಗೋತ್ರಪ್ರವರ್ಧಿನ್ಯೈ ನಮಃ
ಗುಹ್ಯಾಯೈ ನಮಃ
ಗುಣಾತೀತಾಯೈ ನಮಃ
ಗುಣಾಗ್ರಣ್ಯೈ ನಮಃ
ಗುಹಾಂಬಿಕಾಯೈ ನಮಃ
ಗಿರಿಸುತಾಯೈ ನಮಃ
ಗೋವಿಂದಾಂಘ್ರಿಸಮುದ್ಭವಾಯೈ
ಗುಣನೀಯಚರಿತ್ರಾಯೈ
ಗಾಯತ್ರ್ಯೈ ನಮಃ
ಗಿರೀಶಪ್ರಿಯಾಯೈ ನಮಃ ೨೬೦
ಗೂಢರೂಪಾಯೈ ನಮಃ
ಗುಣವತ್ಯೈ ನಮಃ
ಗುರ್ವ್ಯೈ ನಮಃ
ಗೌರವವರ್ಧಿನ್ಯೈ ನಮಃ
ಗ್ರಹಪೀಡಾಹರಾಯೈ ನಮಃ
ಗುಂದ್ರಾಯೈ ನಮಃ
ಗರಘ್ನ್ಯೈ ನಮಃ
ಗಾನವತ್ಸಲಾಯೈ ನಮಃ
ಘರ್ಮಹಂತ್ರ್ಯೈ ನಮಃ
ಘೃತವತ್ಯೈ ನಮಃ ೨೭೦
ಘೃತತುಷ್ಟಿಪ್ರದಾಯೈ ನಮಃ
ಘಂಟಾರವಪ್ರಿಯಾಯೈ ನಮಃ

ಘೋರದುಃಖೌಘವಿಧ್ವಂಸಕಾರಿಣ್ಯೈ ನಮಃ		ಜೀವನಸ್ವರೂಪಾಯೈ ನಮಃ
ಘೋರಾಘೌಘವಿಧ್ವಂಸಿನ್ಯೈ ನಮಃ	ಚಂದನಕ್ಷೋದಲಿಪ್ತಾಂಗ್ಯೈ ನಮಃ	ಜಗ[illegible]
ಘೋರಪಾತಕ್ಯೈ ನಮಃ	ಚರ್ವಣೀಯಚರಿತ್ರಾಯೈ ನಮಃ	ಜಗನ್ಮಯ್ಯೈ ನಮಃ
ಘನಾನಂದಾಯೈ ನಮಃ	ಚರಸ್ಥಿರಾಯೈ ನಮಃ	ಜೀವಾಯೈ ನಮಃ
ಘನಪ್ರಭಾಯೈ ನಮಃ	ಚಾರುಚಂದ್ರಕಲಾಧಾರ್ಯೈ	ಜೀವಾತು[illegible]
ಘಾತುಕಘ್ನ್ಯೈ ನಮಃ	ಚ[illegible]ಯೈ	ಜನ್ಮಿಜನ್ಮನಿಬರ್ಹಣ್ಯೈ
ಘೂರ್ಣಿತಜಲಾಯೈ	ಚಿದಾಕಾಶವಹಾಯೈ ನಮಃ	ಜಾಡ್ಯವಿಧ್ವಂಸನಕರ್ಯೈ ನಮಃ
ಘೃಷ್ಟಪಾತಕಸಂಹತ್ಯೈ	ಚಿಂತ್ಯಾಯೈ ನಮಃ	ಜಗದ್ಯೋನಯೇ ನಮಃ
ಘಟಕೋಟಿಪ್ರಪೀತಾಪಾಯೈ	ಚಂಚಚ್ಚಾಮರವೀಜಿತಾಯೈ	ಜಲಾವಿಲಾಯೈ ನಮಃ
ಘಟಿತಾಶೇಷಮಂಗಳಾಯೈ	ಚೋರಿತಾನೇಕವೃಜಿನಾಯೈ	ಜಗದಾನಂದಜನನ್ಯೈ ನಮಃ
ಘೃಣಾವತ್ಯೈ ನಮಃ	ಚರಿತಾಶೇಷಮಂಡಲಾಯೈ	ಜಲಜಾಯೈ ನಮಃ
ಘಸ್ಮರಾಯೈ ನಮಃ	ಛೇದಿತಾಖಿಲಪಾಪೌಘಾಯೈ	ಜಲಜೇಕ್ಷಣಾಯೈ ನಮಃ
ಘೂಕನಾದಿನ್ಯೈ ನಮಃ	ಛದ್ಮಘ್ನ್ಯೈ ನಮಃ	ಜನಲೋಚನಪೀಯೂಷಾಯೈ
ಘುಸೃಣಾಪಿಂಜರತನ್ವೈ ನಮಃ	ಛಲಹಾರಿಣ್ಯೈ ನಮಃ ೨೦೦	ಜಟಾತಟವಿಹಾರಿಣ್ಯೈ ನಮಃ
ಘರ್ಘರಾಯೈ ನಮಃ	ಛನ್ನತ್ರಿವಿಷ್ಟಪತಲಾಯೈ	ಜಯಂತ್ಯೈ ನಮಃ
ಘರ್ಘರಸ್ವನಾಯೈ ನಮಃ ೯೦	ಛೋಟಿತಾಶೇಷಬಂಧನಾಯೈ	ಜಂಜಪೂಕಘ್ನ್ಯೈ ನಮಃ
ಚಂದ್ರಿಕಾಯೈ ನಮಃ	ಛುರಿತಾಮೃತಧಾರೌಘಾಯೈ	ಜನಿತಜ್ಞಾನವಿಗ್ರಹಾಯೈ
ಚಂದ್ರಕಾಂತಾಂಬ್ವೈ ನಮಃ	ಛಿನ್ನೈನಸೇ ನಮಃ	ಝಲ್ಲರೀವಾದ್ಯಕುಶಲಾಯೈ
ಚಲಚ್ಚಲಾಂಗಾಯೈ ನಮಃ	ಛಂದೋಗಾಮಿನ್ಯೈ ನಮಃ	ಝಲಜ್ಝಲಜಲಾವೃತಾಯೈ
ಚಲದ್ವೀಚ್ಯೈ ನಮಃ	ಛತ್ರೀಕೃತಮರಾಳೌಘಾಯೈ	ಝಂಟೀಶ[illegible]
ಚಿನ್ಮಯ್ಯೈ ನಮಃ	ಛಟೀಕೃತನಿಜಾಮೃತಾಯೈ	ಝೋಂಕಾರ[illegible]
ಚಿತ್ಸ್ವರೂಪಾಯೈ ನಮಃ	ಜಾಹ್ನವ್ಯೈ ನಮಃ	ಝಷ[illegible]
ಚಂದ್ರಾಯುತಶತಾನನಾಯೈ	ಜ್ಯಾಯೈ ನಮಃ	ಟೀಕಿತಾ[illegible]
ಚಾಂಪೇಯಲೋಚನಾಯೈ	ಜಗನ್ಮಾತ್ರೇ ನಮಃ ೩೦	ಟಂಕಿತ[illegible]
ಚಾರ್ವೈ ನಮಃ [illegible]	ಜಪ್ಯಾಯೈ ನಮಃ	ಟಂಕಾರ[illegible]
ಚಾರ್ವಂಗ್ಯೈ ನಮಃ	ಜಂಘಾಲವೀಚಿಕಾಯೈ	ಟೀಕನೀಯ[illegible]
ಚಾರುಗಾಮಿನ್ಯೈ ನಮಃ	ಜಯಾಯೈ ನಮಃ	[illegible]ಡಂಬರಪ್ರವಹ[illegible]
ಚಾರ್ಯಾಯೈ ನಮಃ	ಜನಾರ್ದನಪ್ರೀತಾಯೈ ನಮಃ	ಡಮರು[illegible]
ಚಾರಿತ್ರನಿಲಯಾಯೈ ನಮಃ	ಜುಷಣೀಯಾಯೈ ನಮಃ	ಡಾಮರೋಕ್ತ[illegible]
ಚಿತ್ರಕೃತೇ ನಮಃ	ಜಗದ್ಧಿತಾಯೈ ನಮಃ	ಡಿಂಡಿ[illegible]
ಚಿತ್ರರೂಪಿಣ್ಯೈ ನಮಃ	ಜೀವನಾಯೈ ನಮಃ	ಡಕ್ಕಾನಾದ[illegible]

ತುಂ[illegible]ಸ್ಯೈ   ತುರ್ಯಾತೀತಫಲಪ್ರದಾಯೈ ೯೦   ದೇವದ್ರುಮಚ್ಛನ್ನಾಯೈ
ತು[illegible]ಯೈನಮಃ   ತ್ರೈಲೋಕ್ಯಲಕ್ಷ್ಮ್ಯೈನಮಃ   ದುರ್ಮದಾವಾಗ್ನಿವಿನಾಶಿನ್ಯೈ
[illegible]ನಮಃ   ತ್ರಿಪಥಾಯೈನಮಃ   ದಮಗ್ರಾಹ್ಯಾಯೈನಮಃ
ತೀರ್ಥತೀರ್ಥಾಯೈನಮಃ   ತಥ್ಯಾಯೈನಮಃ   ದೇವಮಾತ್ರೇನಮಃ
ತ್ರಿ[illegible]ಯೈನಮಃ   ತಿಮಿರಚಂದ್ರಿಕಾಯೈನಮಃ   ದೇವಲೋಕಪ್ರದರ್ಶಿನ್ಯೈ
ತ್ರಿ[illegible]ನಮಃ   ತೇಜೋಗರ್ಭಾಯೈನಮಃ   ದೇವದೇವಪ್ರಿಯಾಯೈ
ತ್ರಿ[illegible]ನ್ಯೈ   ತಪಸ್ಸಾರಾಯೈನಮಃ   ದೇವ್ಯೈನಮಃ
ತೋಯ[illegible]ನಮಃ   ತ್ರಿಪುರಾರಿಶಿರೋಗೃಹಾಯೈ   ದಿಕ್ಪಾಲಪದದಾಯಿನ್ಯೈನಮಃ
ತ್ರೈಲೋಕ್ಯಪಾವನ್ಯೈನಮಃ ತ್ರಯೀಸ್ವರೂಪಿಣ್ಯೈನಮಃ   ದೀರ್ಘಾಯುಃಕಾರಿಣ್ಯೈ
[illegible]ಸಂಹರ್ತ್ರ್ಯೈ   ತನ್ವ್ಯೈನಮಃ   ದೀರ್ಘಾಯೈನಮಃ ೬೦
[illegible]ವಿವರ್ಧಿನ್ಯೈ   ತಪನಾಂಗಜಭೀತಿನುದೇ ೧೦   ದೋಗ್ಧ್ರ್ಯೈನಮಃ
ತ್ರಿಲಕ್ಷ್ಯಾಯೈನಮಃ ೪೦   ತರ್ಯೈನಮಃ   ದೂಷಣವರ್ಜಿತಾಯೈ
[illegible]ನಮಃ   ತರಣಿಜಾಮಿತ್ರಾಯೈನಮಃ   ದುಗ್ಧಾಂಬುವಾಹಿನ್ಯೈ
[illegible]ಯೈನಮಃ   ತರ್ಪಿತಾಶೇಷಪೂರ್ವಜಾಯೈ   ದೋಹ್ಯಾಯೈನಮಃ
[illegible]ಯೈ   ತುಲಾವಿರಹಿತಾಯೈ   ದಿವ್ಯಾಯೈನಮಃ
ತ್ರೈಲೋಕ್ಯ[illegible]ನಮಃ ತೀವ್ರಪಾಪತೂಲತನೂನಪದೇ   ದಿವ್ಯಗತಿಪ್ರದಾಯೈನಮಃ
[illegible]ಯೈನಮಃ   ದಾರಿದ್ರ್ಯದಮನ್ಯೈನಮಃ   ದ್ಯುನದ್ಯೈನಮಃ
[illegible]ಯೈನಮಃ   ದಕ್ಷಾಯೈನಮಃ   ದೀನಶರಣಾಯೈನಮಃ
[illegible]ನಮಃ   ದುಷ್ಪ್ರೇಕ್ಷಾಯೈನಮಃ   ದೇಹಿದೇಹನಿವಾರಿಣ್ಯೈನಮಃ
[illegible]ನಮಃ   ದಿವ್ಯಮಂಡನಾಯೈನಮಃ   ದ್ರಾಘೀಯಸ್ಯೈನಮಃ ೭೦
[illegible]ನಮಃ   ದೀಕ್ಷಾವತ್ಯೈನಮಃ ೨೦   ದಾಹಹಂತ್ರ್ಯೈನಮಃ
ತ್ರಿ[illegible]ಯೈ ದುರಾವಾಪ್ಯಾಯೈನಮಃ   ದಿತಪಾತಕಸಂತತ್ಯೈನಮಃ
[illegible]ನಮಃ   ದ್ರಾಕ್ಷಾಮಧುರವಾರಿಭೃತೇ   ದೂರದೇಶಾಂತರಚರ್ಯೈನಮಃ
[illegible]ನಮಃ   ದರ್ಶಿತಾನೇಕಕುತುಕಾಯೈ   ದುರ್ಗಮಾಯೈನಮಃ
[illegible]ಯೈ   ದುಷ್ಟದುರ್ಜಯದುಃಖಹೃತೇ ದೇವವಲ್ಲಭಾಯೈನಮಃ
[illegible]   ದೈನ್ಯಹೃತೇನಮಃ   ದುರ್ವೃತ್ತಘ್ನ್ಯೈನಮಃ
[illegible]ನಮಃ   ದುರಿತಘ್ನ್ಯೈನಮಃ   ದುರ್ವಿಗಾಹ್ಯಾಯೈನಮಃ
[illegible]ನಮಃ   ದಾನವಾರಿಪದಾಬ್ಜಜಾಯೈ   ದಯಾಧಾರಾಯೈನಮಃ
[illegible]ನಮಃ   ದಂದಶೂಕವಿಷಘ್ನ್ಯೈ   ದಯಾವತ್ಯೈನಮಃ
[illegible]   ದೈತ್ಯದರ್ಪಘ್ನ್ಯೈನಮಃ ದುರಾಸದಾಯೈನಮಃ ೮೦
[illegible]ನಮಃ   ದೈತ್ಯಾಯೈನಮಃ ೩೦   ದಾನಶೀಲಾಯೈನಮಃ

ದ್ರಾವಿಣ್ಯೈ ನಮಃ
ದ್ರುಹಿಣಸ್ತುತಾಯೈ ನಮಃ
ದೈತ್ಯದಾನವಸಂಶುದ್ಧಿಕರ್ತ್ರ್ಯೈ
ದುರ್ಬುದ್ಧಿಹಾರಿಣ್ಯೈ ನಮಃ
ದಾನಸಾರಾಯೈ ನಮಃ
ದಯಾಸಾರಾಯೈ ನಮಃ
ದ್ಯಾವಾಭೂಮಿವಿಗಾಹಿನ್ಯೈ
ದೃಷ್ಟಾದೃಷ್ಟಫಲಪ್ರಾಪ್ತ್ಯೈ
ದೇವತಾವೃಂದವಂದಿತಾಯೈ ನಮಃ
ದೀರ್ಘವ್ರತಾಯೈ ನಮಃ
ದೀರ್ಘದೃಷ್ಟ್ಯೈ ನಮಃ
ದೀಪ್ತತೋಯಾಯೈ ನಮಃ
ದುರಾಲಭಾಯೈ ನಮಃ
ದಂಡಯಿತ್ರ್ಯೈ ನಮಃ
ದಂಡನೀತಯೇ ನಮಃ
ದೂರಾಯೈ ನಮಃ
ದಂಡಧರಾರ್ಚಿತಾಯೈ
ದುರೋದರಘ್ನ್ಯೈ ನಮಃ
ದಾವಾರ್ಚಿಷೇ ನಮಃ ೮೦
ದರಿದ್ರಸ್ಯೈಕಸೇವಧ್ಯೈ ನಮಃ
ದೀನಸಂತಾಪಶಮನ್ಯೈ
ದಾತ್ರ್ಯೈ ನಮಃ
ದವಥುವೈರಿಣ್ಯೈ ನಮಃ
ದರೀವಿದಾರಣಪರಾಯೈ
ದಾಂತಾಯೈ ನಮಃ
ದಾಂತಜನಪ್ರಿಯಾಯೈ
ದಾರಿತಾದ್ರಿತಟಾಯೈ ನಮಃ
ದುರ್ಗಾಯೈ ನಮಃ
ದುರ್ಗಾರಣ್ಯಪ್ರಚಾರಿಣ್ಯೈ
ಧರ್ಮದ್ರವಾಯೈ ನಮಃ
ಧರ್ಮಧುರಾಯೈ ನಮಃ

ಧೇನವೇ ನಮಃ
ಧೀರಾಯೈ ನಮಃ
ಧೃತ್ಯೈ ನಮಃ
ಧ್ರುವಾಯೈ ನಮಃ
ಧೇನುದಾನಫಲಸ್ಪರ್ಶಾಯೈ
ಧರ್ಮಕಾಮಾರ್ಥಮೋಕ್ಷದಾ
ಧರ್ಮೋರ್ಮಿವಾಹಿನ್ಯೈ
ಧಾತ್ರೀಧಾತ್ರ್ಯೈ ನಮಃ
೬೦ ಧಾತ್ರೀವಿಭೂಷಣಾಯೈ
ಧರ್ಮಿಣ್ಯೈ ನಮಃ
ಧರ್ಮಶೀಲಾಯೈ
ಧನ್ವಿಕೋಟಿಕೃತಾವನಾಯೈ
ಧ್ಯಾತೃಪಾಪಹರಾಯೈ
ಧ್ಯೇಯಾಯೈ
ಧಾವನ್ಯೈ ನಮಃ
ಧೂತಕಲ್ಮಷಾಯೈ ನಮಃ
ಧರ್ಮಧಾರಾಯೈ ನಮಃ ೧೦೦
ಧರ್ಮಸಾರಾಯೈ ನಮಃ
ಧನದಾಯೈ ನಮಃ
ಧೃತಿವರ್ಧಿನ್ಯೈ ನಮಃ
ಧರ್ಮಾಧರ್ಮಗುಣಚ್ಛೇತ್ರ್ಯೈ
ಧತ್ತೂರಕುಸುಮಪ್ರಿಯಾಯೈ
ಧರ್ಮೇಶ್ಯೈ ನಮಃ
ಧರ್ಮಶಾಸ್ತ್ರಜ್ಞಾಯೈ
ಧನಧಾನ್ಯಸಮೃದ್ಧಿಕೃತೇ
ಧರ್ಮಲಭ್ಯಾಯೈ ನಮಃ
ಧರ್ಮಜಲಾಯೈ ನಮಃ ೨೦
ಧರ್ಮಪ್ರಸವಧರ್ಮಿಣ್ಯೈ
ಧ್ಯಾನಗಮ್ಯಸ್ವರೂಪಾಯೈ
ಧರಣ್ಯೈ ನಮಃ
ಧಾತೃಪೂಜಿತಾಯೈ ನಮಃ

ಧುರೇ ನಮಃ
ಧೂರ್ಜಟಿಜಟಾಸಂಸ್ಥಾಯೈ
ಧನ್ಯಾಯೈ ನಮಃ
ಧಿಯೇ ನಮಃ
ಧಾರಣಾವತ್ಯೈ ನಮಃ
ನಂದಾಯೈ ನಮಃ
೪೦ ನಿರ್ವಾಣಜನನ್ಯೈ ನಮಃ
ನಂದಿನ್ಯೈ ನಮಃ
ನುನ್ನಪಾತಕಾಯೈ ನಮಃ
ನಿಷಿದ್ಧವಿಘ್ನನಿಚಯಾಯೈ
ನಿಜಾನಂದಪ್ರಕಾಶಿನ್ಯೈ
ನಭೋಂಗಣಚರ್ಯೈ ನಮಃ
ನೀತ್ಯೈ ನಮಃ
ನಮ್ಯಾಯೈ ನಮಃ
ನಾರಾಯಣ್ಯೈ ನಮಃ
ನುತಾಯೈ ನಮಃ ೯೦
೧೦ ನಿರ್ಮಲಾಯೈ ನಮಃ
ನಿರ್ಮಲಾಖ್ಯಾನಾಯೈ ನಮಃ
ತಾಪಸಂಪದಾಂನಾಶಿನ್ಯೈ
ನಿಯತಾಯೈ ನಮಃ
ನಿತ್ಯಸುಖದಾಯೈ
ನಾನಾಶ್ಚರ್ಯಮಹಾನಿಧಯೇ
ನದೀನದಸರೋಮಾತ್ರೇ
ನಾಯಿಕಾಯೈ ನಮಃ
ನಾಕದೀರ್ಘಿಕಾಯೈ
ನಷ್ಟೋದ್ಧರಣಧೀರಾಯೈ ೪೦
ನಂದನಾಯೈ ನಮಃ
ನಂದದಾಯಿನ್ಯೈ ನಮಃ
ನಿರ್ಣಿಕ್ತಾಶೇಷಭುವನಾಯೈ
ನಿಸ್ಸಂಗಾಯೈ ನಮಃ
ನಿರುಪದ್ರವಾಯೈ

ನಿರಾಲಂಬಾಯೈನಮಃ
ನಿಷ್ಪ್ರಪಂಚಾಯೈನಮಃ
ನಿರ್ನಾಶಿತಮಹಾಮಲಾಯೈ
ನಿರ್ಮಲಜ್ಞಾನಜನನ್ಯೈ
ನಿಶ್ಶೇಷಪ್ರಾಣಿತಾಪಹೃತೆ ೬೦
ನಿತ್ಯೋತ್ಸವಾಯೈ
ನಿತ್ಯತೃಪ್ತಾಯೈನಮಃ
ನಮಸ್ಕಾರ್ಯಾಯೈನಮಃ
ನಿರಂಜನಾಯೈನಮಃ
ನಿಷ್ಠಾವತ್ಯೈನಮಃ
ನಿರಾತಂಕಾಯೈನಮಃ
ನಿರ್ಲೇಪಾಯೈನಮಃ
ನಿಶ್ಚಯಾತ್ಮಿಕಾಯೈನಮಃ
ನಿರವದ್ಯಾಯೈನಮಃ
ನಿರೀಹಾಯೈನಮಃ ೭೦
ನೀಲಲೋಹಿತಮೂರ್ಧಗಾಯೈ
ನಂದಿಭೃಂಗಿಗಣಸ್ತುತ್ಯಾಯೈ
ನಾಗಾಯೈನಮಃ
ನಂದಾಯೈನಮಃ
ನಗಾತ್ಮಜಾಯೈ
ನಿಷ್ಪ್ರತ್ಯೂಹಾಯೈನಮಃ
ನಾಕನದ್ಯೈನಮಃ
ನಿರಯಾರ್ಣವದೀರ್ಘನಾಯೈ
ಪುಣ್ಯಪ್ರದಾಯೈನಮಃ
ಪುಣ್ಯಗರ್ಭಾಯೈನಮಃ ೮೦
ಪುಣ್ಯಾಯೈನಮಃ
ಪುಣ್ಯತರಂಗಿಣ್ಯೈ
ಪೃಥುವೇನಮಃ
ಪೃಥುಫಲಾಯೈನಮಃ
ಪೂರ್ಣಾಯೈನಮಃ
ಪ್ರಣತಾರ್ತಿಪ್ರಭಂಜನ್ಯೈ
ಪ್ರಾಣದಾಯೈನಮಃ
ಪ್ರಾಣಿಜನನ್ಯೈನಮಃ
ಪ್ರಾಣೇಶ್ಯೈನಮಃ
ಪ್ರಾಣರೂಪಿಣ್ಯೈ ೯೦
ಪದ್ಮಾಲಯಾಯೈನಮಃ
ಪರಾಶಕ್ತ್ಯೈನಮಃ
ಪುರಜಿತ್ಪರಮಪ್ರಿಯಾಯೈ
ಪರಾಪರಫಲಪ್ರಾಪ್ತ್ಯೈ
ಪಾವನ್ಯೈನಮಃ
ಪಯಸ್ವಿನ್ಯೈನಮಃ
ಪರಾನಂದಾಯೈನಮಃ
ಪ್ರಕೃಷ್ಟಾರ್ಥಾಯೈ
ಪ್ರತಿಷ್ಠಾಯೈ
ಪಾಲಿನ್ಯೈನಮಃ ೬೦೦
ಪರಾಯೈನಮಃ
ಪುರಾಣಪಠಿತಾಯೈ
ಪ್ರೀತಾಯೈನಮಃ
ಪ್ರಣವಾಕ್ಷರರೂಪಿಣ್ಯೈ
ಪಾರ್ವತ್ಯೈನಮಃ
ಪ್ರೇಮಸಂಪನ್ನಾಯೈ
ಪಶುಪಾಶವಿನಾಶಿನ್ಯೈ
ಪರಮಾತ್ಮಸ್ವರೂಪಾಯೈ
ಪರಬ್ರಹ್ಮಪ್ರಕಾಶಿನ್ಯೈ
ಪರಮಾನಂದನಿಷ್ಯಂದಾಯೈ
ಪ್ರಾಯಶ್ಚಿತ್ತಸ್ವರೂಪಿಣ್ಯೈ
ಪಾನೀಯರೂಪನಿರ್ವಾಣಾಯೈ
ಪರಿತ್ರಾಣಾಯೈ
ಪರಾಯಣಾಯೈ
ಪಾಪೇಂಧನದವಜ್ವಾಲಾಯೈ
ಪಾಪಾರಯೇನಮಃ
ಪಾಪನಾಮನುದೇನಮಃ
ಪರಮೈಶ್ವರ್ಯಜನನ್ಯೈ
ಪ್ರಜ್ಞಾಯೈ
ಪ್ರಾಜ್ಞಾಯೈನಮಃ ೨೦
ಪರಾಯಣಾಯೈನಮಃ
ಪ್ರತ್ಯಕ್ಷಲಕ್ಷ್ಮ್ಯೈ
ಪದ್ಮಾಕ್ಷ್ಯೈನಮಃ
ಪರವ್ಯೋಮಾಮೃತಸ್ರವಾಯೈ
ಪ್ರಸನ್ನರೂಪಾಯೈನಮಃ
ಪ್ರಣಿಧಯೇನಮಃ
ಪೂತಾಯೈನಮಃ
ಪ್ರತ್ಯಕ್ಷದೇವತಾಯೈ
ಪಿನಾಕಿಪರಮಪ್ರೀತಾಯೈ
ಪರಮೇಷ್ಠಿಕಮಂಡಲ್ವೈ
ಪದ್ಮನಾಭಪದಾರ್ಘ್ಯೇಣಪ್ರಸೂತಾಯೈ
ಪದ್ಮಮಾಲಿನ್ಯೈನಮಃ
ಪರರ್ಧಿದಾಯೈ
ಪುಷ್ಟಿಕರ್ಯೈನಮಃ
ಪಥ್ಯಾಯೈನಮಃ
ಪೂರ್ತ್ಯೈನಮಃ
ಪ್ರಭಾವತ್ಯೈನಮಃ
ಪುನಾನಾಯೈನಮಃ
ಪೀತಗರ್ಭಘ್ನ್ಯೈ
ಪಾಪಪರ್ವತನಾಶಿನ್ಯೈ ೩೦
ಫಲಿನ್ಯೈನಮಃ
ಫಲಹಸ್ತಾಯೈನಮಃ
ಫುಲ್ಲಾಂಬುಜವಿಲೋಚನಾಯೈ
ಫಾಲಿತೈನೋಮಹಾಕ್ಷೇತ್ರಾಯೈ
ಫಣಿಲೋಕವಿಭೂಷಣಾಯೈ
ಫೇನಚ್ಛಲಪ್ರಣುನ್ನೈನಸೇ
ಫುಲ್ಲಕೈರವಗಂಧಿನ್ಯೈನಮಃ
ಫೇನಿಲಾಚ್ಛಾಂಬುಧಾರಾಭಾಯೈ

ಫಣೀಂದ್ರಪ್ರಕಟಿತತೀರ್ಥಾಯೈ
ಫೇನಾತ್ತಹಸ್ಯೈ ವಿಶಾರಯೈ
ಫಂಡಪದ್ಮಾಜಲಾವಿಲಾಯೈ
ವಿಶ್ವಮಾತ್ರೇನಮಃ
ವಿಶ್ವಶಾಸ್ತ್ರ್ಯೈನಮಃ
ವಿಶ್ವಾಯೈನಮಃ
ವಿಶ್ವೇಶ್ವರಪ್ರಿಯಾಯೈ
ಬ್ರಹ್ಮಣ್ಯಾಯೈ
ಬ್ರಹ್ಮಕೃತೇನಮಃ
ಬ್ರಾಹ್ಮ್ಯೈನಮಃ
ಬ್ರಹ್ಮಿಷ್ಠಾಯೈನಮಃ
ವಿಮಲೋದಕಾಯೈ ೬೦
ವಿಭಾವರ್ಯೈನಮಃ
ವಿರಜಸೇನಮಃ
ವಿಕ್ರಾಂತಾನೇಕವಿಷ್ಟಪಾಯೈ
ವಿಶ್ವಮಿತ್ರಾಯೈನಮಃ
ವಿಷ್ಣುಪದ್ಯೈನಮಃ
ವೈಷ್ಣವ್ಯೈನಮಃ
ವೈಷ್ಣವಪ್ರಿಯಾಯೈ
ವಿರೂಪಾಕ್ಷಪ್ರಿಯಾಯೈ
ವಿಭೂತ್ಯೈನಮಃ
ವಿಶ್ವತೋಮುಖ್ಯೈ ೭೦
ವಿಪಾಶಾಯೈನಮಃ
ವೈಬುಧ್ಯೈನಮಃ
ವೇದ್ಯಾಯೈನಮಃ
ವೇದಾಕ್ಷರರಸಸ್ರಾವಾಯೈ
ವಿದ್ಯಾಯೈನಮಃ
ವೇಗವತ್ಯೈನಮಃ
ವಂದ್ಯಾಯೈನಮಃ
ಬೃಹತ್ಯೈನಮಃ
ಬ್ರಹ್ಮವಾದಿನ್ಯೈ

ವರದಾಯೈನಮಃ
ಶಿಂಶುಮಾರ್ಯೈ ಕೃಷ್ಣಾಯೈನಮಃ
ವಿಶಿಷ್ಟಾಯೈನಮಃ
ವಿಶೋಧಿನ್ಯೈನಮಃ
ವಿದ್ಯಾಧರ್ಯೈನಮಃ
ವಿಶೋಕಾಯೈನಮಃ
ವಯೋವೃಂದನಿಷೇವಿತಾಯೈ
ಬಹೂದಕಾಯೈನಮಃ
ಬಲವತ್ಯೈನಮಃ
ವ್ಯೋಮಸ್ಥಾಯೈನಮಃ
ವಿಬುಧಪ್ರಿಯಾಯೈ ೯೦
ವಾಣ್ಯೈನಮಃ
ವೇದವತ್ಯೈನಮಃ
ವಿತ್ತಾಯೈನಮಃ
ಬ್ರಹ್ಮವಿದ್ಯಾತರಂಗಿಣ್ಯೈ
ಬ್ರಹ್ಮಾಂಡಕೋಟಿವ್ಯಾಪ್ತಾಂಬ್ವೈ
ಬ್ರಹ್ಮಹತ್ಯಾಪಹಾರಿಣ್ಯೈ
ಬ್ರಹ್ಮೇಶಾಯೈನಮಃ
ವಿಷ್ಣುರೂಪಾಯೈನಮಃ
ಬುದ್ಧ್ಯೈನಮಃ
ವಿಭವವರ್ಧಿನ್ಯೈನಮಃ ೧೦೦
ವಿಲಾಸಿಸುಖದಾಯೈ
ವಶ್ಯಾಯೈನಮಃ
ವ್ಯಾಪಿನ್ಯೈನಮಃ
ವೃಷಾರಣ್ಯೈ
ವಿಪನ್ನಾರ್ತಿಪ್ರಭಂಜನ್ಯೈ
ವಿನೀತಾಯೈನಮಃ
ವಿನತಾಯೈನಮಃ
ಬ್ರಧ್ನತನಯಾಯೈ
ವಿನಯಾನ್ವಿತಾಯೈನಮಃ ೧೦
ವಿಪಂಚೀವಾದ್ಯಕುಶಲಾಯೈ

ವೇಣುಶ್ರುತಿವಿಚಕ್ಷಣಾಯೈ
ವರ್ಚಸ್ಕರ್ಯೈನಮಃ
ಬಲಕರ್ಯೈನಮಃ
ಬಲೋನ್ಮೂಲಿತಕಲ್ಮಷಾಯೈ
ವಿಪಾಪ್ಮನೇನಮಃ
ವಿಗತಾತಂಕಾಯೈ
ವಿಕಲ್ಪಪರಿವರ್ಜಿತಾಯೈ
ವೃಷ್ಟಿಕರ್ತ್ರ್ಯೈನಮಃ
ವೃಷ್ಟಿಜಲಾಯೈನಮಃ ೨೦
ವಿಧಯೇನಮಃ
ವಿಚ್ಛಿನ್ನಬಂಧನಾಯೈ
ವ್ರತರೂಪಾಯೈ
ವಿತ್ತರೂಪಾಯೈ
ಬಹುವಿಘ್ನವಿನಾಶಕೃತೇ
ವಸುಧಾರಾಯೈ
ವಸುಮತ್ಯೈನಮಃ
ವಿಚಿತ್ರಾಂಗ್ಯೈನಮಃ
ವಿಭಾವಸವೇ
ವಿಜಯಾಯೈನಮಃ ೩೦
ವಿಶ್ವಬೀಜಾಯೈನಮಃ
ವಾಮದೇವ್ಯೈನಮಃ
ವರಪ್ರದಾಯೈನಮಃ
ವೃಷಾಶ್ರಿತಾಯೈ
ವಿಷಘ್ನ್ಯೈನಮಃ
ವಿಜ್ಞಾನೋರ್ಮ್ಯಂಶುಮಾಲಿನ್ಯೈ
ಭವ್ಯಾಯೈನಮಃ
ಭೋಗವತ್ಯೈನಮಃ
ಭದ್ರಾಯೈನಮಃ
ಭವಾನ್ಯೈನಮಃ ೪೦
ಭೂತಭಾವನ್ಯೈ
ಭೂತಧಾತ್ರ್ಯೈನಮಃ

ಭವ[illegible]ನ್ಯೈನಮಃ
ಭಕ್ತದಾರಿದ್ರ್ಯಘಾತಿನ್ಯೈ
ಭುಕ್ತಿಮುಕ್ತಿಪ್ರದಾಯೈ
ಭೇಶ್ಯೈನಮಃ
ಭಕ್ತಸ್ವರ್ಗಾಪವರ್ಗದಾಯೈ
ಭಾಗೀರಥ್ಯೈನಮಃ
ಭಾಸುಮತ್ಯೈನಮಃ
ಭಾಗ್ಯಾಯೈನಮಃ ೫೦
ಭೋಗವತ್ಯೈನಮಃ
ಭೃತ್ಯೈನಮಃ
ಭವಪ್ರಿಯಾಯೈ
ಭವದ್ವೇಷ್ಟ್ರ್ಯೈನಮಃ
ಭೂತಿದಾಯೈನಮಃ
ಭೂತಿಭೂಷಣಾಯೈ
ಭಾಲಲೋಚನಭಾವಜ್ಞಾಯೈ
ಭೂತಭವ್ಯಭವತ್ಪ್ರಭವೆ
ಭ್ರಾಂತಿಜ್ಞಾನಪ್ರಶಮನ್ಯೈ
ಭಿನ್ನಬ್ರಹ್ಮಾಂಡಮಂಡಪಾಯೈ
ಭಕ್ತಿದಾಯೈನಮಃ
ಭಕ್ತಿಸುಲಭಾಯೈ
ಭಾಗ್ಯವದ್ದೃಷ್ಟಿಗೋಚರಾಯೈ
ಭಂಜಿತೋಪಪ್ಲವಕುಲಾಯೈ
ಭಕ್ಷ್ಯಭೋಜ್ಯಸುಖಪ್ರದಾಯೈ
ಭಿಕ್ಷುಮಾತ್ರೆನಮಃ
ಭಾವಾಭಾವಸ್ವರೂಪಿಣ್ಯೈ
ಮಂದಾಕಿನ್ಯೈನಮಃ
ಮಹಾನಂದಾಯೈನಮಃ ೭೦
ಮಾತ್ರೇನಮಃ
ಮುಕ್ತಿತರಂಗಿಣ್ಯೈನಮಃ
ಮಹೋದಯಾಯೈನಮಃ
ಮಧುಮತ್ಯೈನಮಃ

ಮಹಾಪುಣ್ಯಾಯೈ
ಮುದಾಕರ್ಯೈನಮಃ
ಮುನಿಸ್ತುತಾಯೈನಮಃ
ಮೋಹಹಂತ್ರ್ಯೈನಮಃ
ಮಹಾತೀರ್ಥಾಯೈ
ಮಧುಸ್ರವಾಯೈ ೮೦
ಮಾಧವ್ಯೈನಮಃ
ಮಾನಿನ್ಯೈನಮಃ
ಮಾನ್ಯಾಯೈನಮಃ
ಮನೋರಥಪಥಾತಿಗಾಯೈ
ಮೋಕ್ಷದಾಯೈನಮಃ
ಮತಿದಾಯೈನಮಃ
ಮುಖ್ಯಾಯೈನಮಃ
ಮಹಾಭಾಗ್ಯಜನಾಶ್ರಿತಾಯೈ
ಮಹಾವೇಗವತ್ಯೈ
ಮೇಧ್ಯಾಯೈನಮಃ ೯೦
ಮಹಾಮಹಿಮಭೂಷಣಾಯೈ
ಮಹಾಪ್ರಭಾವಾಯೈ
ಮಹತ್ಯೈನಮಃ
ಮೀನಚಂಚಲಲೋಚನಾಯೈ
ಮಹಾಕಾರುಣ್ಯಸಂಪೂರ್ಣಾಯೈ
ಮಹರ್ದ್ಧ್ಯೈನಮಃ
ಮಹೋತ್ಪಲಾಯೈ
ಮೂರ್ತಿಮತೆನಮಃ
ಮುಕ್ತಿರಮಣ್ಯೈ
ಮಣಿಮಾಣಿಕ್ಯಭೂಷಣಾ೧೦೦
ಮುಕ್ತಾಕಲಾಪನೇಪಥ್ಯಾಯೈ
ಮನೋನಯನನಂದಿನ್ಯೈ
ಮಹಾಪಾತಕರಾಶಿಘ್ನ್ಯೈ
ಮಹಾದೇವಾರ್ಧಹಾರಿಣ್ಯೈ
ಮಹೋರ್ಮಿಮಾಲಿನ್ಯೈ

ಮುಕ್ತಾಯೈನಮಃ
ಮಹಾದೇವ್ಯೈನಮಃ
ಮನೋನ್ಮನ್ಯೈನಮಃ
ಮಹಾಪುಣ್ಯೋದಯಪ್ರಾಪ್ಯಾ
ಮಾಯಾತಿಮಿರಚಂದ್ರಿಕಾಯೈ ೧೧೦
ಮಹಾವಿದ್ಯಾಯೈ
ಮಹಾಮಾಯಾಯೈ
ಮಹಾಮೇಧಸೆನಮಃ
ಮಹೌಷಧಾಯೈ
ಮಾಲಧರ್ಯೈನಮಃ
ಮಹೋಪಾಯಾಯೈನಮಃ
ಮಹೋರಗವಿಭೂಷಣಾಯೈ
ಮಹಾಮೋಹಪ್ರಶಮನ್ಯೈ
ಮಹಾಮಂಗಳಮಂಗಳಾಯೈ
ಮಾರ್ತಾಂಡಮಂಡಲಚರ್ಯೈ
ಮಹಾಲಕ್ಷ್ಮ್ಯೈನಮಃ
ಮದೋಜ್ಝಿತಾಯೈ
ಯಶಸ್ವಿನ್ಯೈನಮಃ
ಯಶೋದಾಯೈ
ಯೋಗ್ಯಾಯೈನಮಃ
ಯುಕ್ತಾತ್ಮಸೇವಿತಾಯೈ
ಯೋಗಸಿದ್ಧಿಪ್ರದಾಯೈ
ಯಾಜ್ಯಾಯೈನಮಃ
ಯಜ್ಞೇಶಪರಿಪೂರಿತಾಯೈ
ಯಜ್ಞೇಶ್ಯೈನಮಃ ೧೩೦
ಯಜ್ಞಫಲದಾಯೈ
ಯಜನೀಯಾಯೈನಮಃ
ಯಶಸ್ಕರ್ಯೈನಮಃ
ಯಮಿಸೇವ್ಯಾಯೈ
ಯೋಗಯೋನ್ಯೈನಮಃ
ಯೋಗಿನ್ಯೈನಮಃ

ಯುಕ್ತವೃದ್ಧಿದಾಯೈ ರಾಮಣೀಯಕಶಾಲಿಕಾಯೈ ೩೦೦ ವೈಶ್ವಾನರ್ಯೈನಮಃ
ಯೋಗಜ್ಞಾನಪ್ರದಾಯೈ ರಾಜಾರ್ಯೈನಮಃ ವಾಸವೇಡ್ಯಾಯೈ
ಯುಕ್ತಾಯೈನಮಃ [ಯುಕ್ತೇ ರೋಗಶೋಷಣ್ಯೈನಮಃ ವಂಧ್ಯಾತ್ವಪರಿಹಾರಿಣ್ಯೈ
ಯಮಾದ್ಯಷ್ಟಾಂಗಯೋಗ ರಾಕಾಯೈನಮಃ ವಾಸುದೇವಾಂಘ್ರಿರೇಣುಘ್ನ್ಯೈ
ಯಂತ್ರಿತಾಘೌಘಸಂಚಾರಾಯೈ ರಂಕಾರ್ತಿಶಮನ್ಯೈ ವಜ್ರಿವಜ್ರನಿವಾರಿಣ್ಯೈ
ಯಮಲೋಕನಿವಾರಿಣ್ಯೈ ರಮ್ಯರೋಲಂಬರಾವಿಣ್ಯೈ ಶುಭಾಯೈನಮಃ
ಯಾತಾಯಾತಪ್ರಶಮನ್ಯೈ ರಾಗಿಣ್ಯೈನಮಃ ಶುಭಫಲಾಯೈನಮಃ
ಯಾತನಾನಾಮಕೃಂತನ್ಯೈ ರಂಜಿತಶಿವಾಯೈ ಶಾಂತ್ಯೈನಮಃ
ಯಾಮಿನೀಶಹಿಮಾಚ್ಛೋದಾಯೈ ರೂಪಲಾವಣ್ಯಶೇವಧ್ಯೈ ಶಂತನುವಲ್ಲಭಾಯೈ
ಯುಗಧರ್ಮವಿವರ್ಜಿತಾಯೈ ಲೋಕಪ್ರಸವೇನಮಃ ಶೂಲಿನ್ಯೈನಮಃ ೩೦೦
ರೇವತ್ಯೈನಮಃ ಲೋಕವಂದ್ಯಾಯೈನಮಃ ಶೈಶವದಾಯೈನಮಃ
ರತಿಕೃತೇನಮಃ ಲೋಲತ್ಕಲ್ಲೋಲಮಾಲಿನ್ಯೈ ಶೀತ...ಯೈ
ರಮ್ಯಾಯೈನಮಃ ಲೀಲಾವತ್ಯೈನಮಃ ಶೋಭನಾಯೈ
ರತ್ನಗರ್ಭಾಯೈನಮಃ ಹ್ರಾಂ ಲೋಕಭೂಮಯೇನಮಃ ಶೀಲವತ್ಯೈನಮಃ
ರಮಾರತಯೇನಮಃ ಲೋಕಲೋಚನಚಂದ್ರಿಕಾಯೈ ಶೋಷಿತಾಶೇಷಕಿಲ್ಬಿಷಾಯೈ
ರತ್ನಾಕರಪ್ರೇಮಪಾತ್ರಾಯೈ ಲೇಖವತ್ಯೈನಮಃ ಶರಣ್ಯಾಯೈನಮಃ
ರಸಜ್ಞಾಯೈನಮಃ ಲಟಭಾಯೈನಮಃ ಶಿವದಾಯೈನಮಃ
ರಸರೂಪಿಣ್ಯೈನಮಃ ಲಘುವೇಗಾಯೈನಮಃ ಶಿಷ್ಟಾಯೈನಮಃ
ರತ್ನಪ್ರಾಸಾದಗರ್ಭಾಯೈ ಲಘುತ್ವಹೃತೇನಮಃ ಶರಜನ್ಮಪ್ರಸುವೇನಮಃ
ರಮಣೀಯತರಂಗಿಣ್ಯೈ ಲಾಸ್ಯತ್ತರಂಗಹಸ್ತಾಯೈ ಶಿವಾಯೈನಮಃ ೩೦೦
ರಾಗದ್ವೇಷವಿನಾಶಿನ್ಯೈ ಲಲಿತಾಯೈನಮಃ ಶಕ್ತ್ಯೈನಮಃ
ರಮಾಯೈನಮಃ ಲಯಭಂಗಿಸ್ವಾಯೈ ಶಶಾಂಕವಿಮಲಾಯೈ
ರಾಮಾಯೈನಮಃ ಲೋಕಬಂಧವೇನಮಃ ಶಮನಸ್ವಸೃಸಂಮತಾಯೈ
ರಮ್ಯರೂಪಾಯೈನಮಃ ಲೋಕಧಾತ್ರ್ಯೈನಮಃ ಶಮಾಯೈನಮಃ
ರೋಗಿಜೀವಾತುರೂಪಿಣ್ಯೈ ಲೋಕೋತ್ತರಗುಣೋರ್ಜಿತಾಯೈ ಶಮನಮಾರ್ಗಘ್ನ್ಯೈ
ರುಚಿಕೃತೇನಮಃ ಲೋಕತ್ರಯಹಿತಾಯೈ ಶಿತಿಕಂಠಮಹಾಪ್ರಿಯಾಯೈ
ರೋಚನೀರಮ್ಯಾಯೈ ಲೋಕಾಯೈನಮಃ ಶುಚಯೇನಮಃ
ರುಚಿರಾಯೈನಮಃ ಲಕ್ಷ್ಮ್ಯೈನಮಃ ಶುಚಿಕರ್ಯೈನಮಃ
ರೋಗಹಾರಿಣ್ಯೈನಮಃ ಲಕ್ಷಣಲಕ್ಷಿತಾಯೈ ಶುಕ್ಘ್ನ್ಯೈನಮಃ
ರಾಜಹಂಸಾರವವತ್ಯೈ ಲೀಲಾಲಕ್ಷಿತನಿರ್ವಾಣಾಯೈ ಶೇಷಶಾಯಿಪದೋದ್ಭವಾಯೈ
ರಾಜತ್ಕಲ್ಲೋಲರಾಜಿತಾಯೈ ಲಾವಣ್ಯವೃತವರ್ಷಿಣ್ಯೈ ಗಂಗೇಸಿನಾಸಾಕ್ರಿತಾಯೈ

ಶ್ರದ್ಧಾಯೈ ನಮಃ
ಶ್ರೀಮತ್ಯೈ ನಮಃ
ಶ್ರಿಯೈ ನಮಃ
ಶುಭವ್ರತಾಯೈ
ಶ್ಮಶಾನಶೋಧನ್ಯೈ
ಶಾಂತಾಯೈ ನಮಃ
ಶಶ್ವಚ್ಛತಧೃತಿಸ್ತುತಾಯೈ
ಶಾಲಿನ್ಯೈ ನಮಃ
ಶಾಲಿಶೋಭಾಢ್ಯಾಯೈ ೪೦
ಶಿಖಿವಾಹನಗರ್ಭಭೃತೇ
ಶಂಸನೀಯಚರಿತ್ರಾಯೈ
ಶಾತಿತಾಶೇಷಪಾತಕಾಯೈ
ಷಡ್ಗುಣೈಶ್ವರ್ಯಸಂಪನ್ನಾಯೈ
ಷಡಂಗಶ್ರುತಿರೂಪಿಣ್ಯೈ
ಷಂಢತಾಹಾರಿಸಲಿಲಾಯೈ
ಸ್ತ್ಯಾಯನ್ನದನದೀಶತಾಯೈ
ಸರಿದ್ವರಾಯೈ ನಮಃ
ಸುಪ್ರಭಾಯೈ ನಮಃ
ಸುರದೀರ್ಘಿಕಾಯೈ ೫೦
ಸ್ವಃಸಿಂಧವೇ ನಮಃ
ಸರ್ವದುಃಖಘ್ನ್ಯೈ
ಸರ್ವವ್ಯಾಧಿಮಹೌಷಧಾಯೈ
ಸೇವ್ಯಾಯೈ ನಮಃ
ಸಿದ್ಧಾಯೈ ನಮಃ
ಸತ್ಯೈ ನಮಃ
ಸೂಕ್ತ್ಯೈ ನಮಃ
ಸ್ಕಂದಸುವೇ ನಮಃ
ಸರಸ್ವತ್ಯೈ ನಮಃ ೬೦
ಸಂಪತ್ತರಂಗಿಣ್ಯೈ ನಮಃ
ಸ್ತುತ್ಯಾಯೈ ನಮಃ
ಸ್ಥಾಣುಮೌಲಿಕೃತಾಸ್ಪದಾಯೈ
ಸ್ಥೈರ್ಯದಾಯೈ ನಮಃ
ಸುಭಗಾಯೈ ನಮಃ
ಸೌಖ್ಯಾಯೈ ನಮಃ
ಸ್ತ್ರೀಷುಸೌಭಾಗ್ಯದಾಯಿನ್ಯೈ
ಸ್ವರ್ಗನಿಃಶ್ರೇಣಿಕಾಯೈ
ಸೂಕ್ಷ್ಮಾಯೈ ನಮಃ
ಸ್ವಧಾಯೈ ನಮಃ ೭೦
ಸ್ವಾಹಾಯೈ ನಮಃ
ಸುಧಾಜಲಾಯೈ ನಮಃ
ಸಮುದ್ರರೂಪಿಣ್ಯೈ
ಸ್ವರ್ಗ್ಯಾಯೈ ನಮಃ
ಸರ್ವಪಾತಕವೈರಿಣ್ಯೈ
ಸ್ಮೃತಾಘೌಘಹರಾಯೈ
ಸುರಸಾಯೈ ನಮಃ
ಸೀತಾಯೈ ನಮಃ
ಸಂಸಾರಾಬ್ಧಿತರಂಡಿಕಾಯೈ
ಸೌಭಾಗ್ಯಸುಂದರ್ಯೈ
ಸಂಧ್ಯಾಯೈ ನಮಃ ೮೦
ಸರ್ವಸಾರಸಮನ್ವಿತಾಯೈ
ಹರಪ್ರಿಯಾಯೈ
ಹೃಷೀಕೇಶ್ಯೈ ನಮಃ
ಹಂಸರೂಪಾಯೈ
ಹಿರಣ್ಮಯ್ಯೈ ನಮಃ
ಹೃತಾಘಸಂಘಾಯೈ
ಹಿತಕೃತೇ ನಮಃ
ಹೇಲಾಯೈ ನಮಃ
ಹೇಲಾಘಗರ್ವಹೃತೇ ನಮಃ ೯೦
ಕ್ಷೇಮದಾಯೈ ನಮಃ
ಕ್ಷಾಲಿತಾಘೌಘಾಯೈ ನಮಃ
ಕ್ಷುದ್ರವಿದ್ರಾವಿಣ್ಯೈ ನಮಃ
ಕ್ಷಮಾಯೈ ನಮಃ
ಕ್ಷೇತ್ರಸಂಚಾರಕುಶಲಾಯೈ
ಕ್ಷಾಂತ್ಯೈ ನಮಃ
ಕ್ಷೌಮವಾಂಛುರಪ್ರಿಯಾಯೈ
ಕ್ಷೀರೋದಪಾಂಡುರಾಯೈ
ಕ್ಷೀರಪೂರ್ಣಾಯೈ ನಮಃ
ಕ್ಷೋಭಿತಪರ್ವತಾಯೈ ನಮಃ ॥೧೦೦೦॥

ಇತಿ ಗಂಗಾಸಹಸ್ರನಾಮಾನಿ ಸಂಪೂರ್ಣಾನಿ.

ಇಂತೆಂಬ ಗಂಗಾಸಹಸ್ರನಾಮವನ್ನು ಪಠಿಸಲು ಗಂಗಾಸ್ನಾನ ಫಲವುಂಟು, ಸರ್ವಪಾಪಹರವು, ಸರ್ವವಿಘ್ನನಿವಾರಣವು, ಚತುರ್ವಿಧಪುರುಷಾರ್ಥಪ್ರದವು, ಒಂದಾವರ್ತಿ ಪಠಿಸಲು ಅಶ್ವಮೇಧಯಾಗಫಲವುಂಟು; ನಿತ್ಯವೂ ತ್ರಿಕಾಲದಲ್ಲಿಯೂ ಪಠಿಸಲು ಸಕಲ ತೀರ್ಥಸ್ನಾನ, ಸಕಲವ್ರತ, ಸಕಲತಪಸ್ಸು, ದಾನಗಳ ಫಲವುಂಟು. ಸ್ನಾನಕಾಲದಲ್ಲಿ ಈ ಗಂಗಾಸ್ನಾನವಂ ಪಠಿಸಲು ಗಂಗೆ ಪ್ರಸನ್ನಳಾಗಿ ಸಕಲಪಾಪವಂ ಪರಿಹರಿಸಿ ಇಹದಲ್ಲಿ ಸಕಲ ಸೌಖ್ಯಗಳನ್ನು ಅನಂತರದಲ್ಲಿ ಸಾಯುಜ್ಯಪದವಂ ಕೊಡುವಳು; ಅಪುತ್ರನಾದ ಪುರುಷನಾಗಲೀ, ಸ್ತ್ರೀಯಾಗಲೀ ಒಂದುವರ್ಷ ತ್ರಿಕಾಲವೂ ಗಂಗಾಸಹಸ್ರನಾಮವಂ ಪಠಿಸಲು ಅವರಿಗೆ ಸುಪುತ್ರನಹನು. ಅವರಿಗೆ ಅಕಾಲಮರಣವೂ, ಅಗ್ನಿಭಯ, ಚೋರಭಯ, ರಾಜಭಯಂಗಳು ಮೊದಲಾದ ಸಕಲ ಉಪದ್ರವಂಗಳು ಪರಿಹಾರವಾಗುವವು. ಮತ್ತು ಈ ಗಂಗಾಸಹಸ್ರನಾಮವಂ ಪಠಿಸಿ ಗ್ರಾಮಾಂತರಗಳಿಗೆ ಹೋಗಲು ಅವರ ಸಕಲಕಾರ್ಯಸಿದ್ಧಿಯಹುದು. ಪಂಚಮಹಾಪಾತಕ, ಪಿತೃಮಾತೃವಧೆ, ಕೃತಘ್ನತೆ, ವಿಶ್ವಾಸಘಾತುಕತನ, ಗೃಹದಾಹತ್ವ, ಗೋವಧೆ, ಗುರುಹತ್ಯಾಪಾತಕ, ಗುರುದ್ರವ್ಯಾಪಹಾರ, ಪರಸ್ತ್ರೀಗಮನ ಇವು ಮೊದಲಾದ ಪಾಪಂಗಳು ಈ ಸ್ತೋತ್ರಪಠನಮಾತ್ರದಿಂದ ಪರಿಹಾರವಾಗುವವು. ಹತ್ತುಸಾವಿರಗಾಯತ್ರೀಜಪವಂ ಮಾಡಿದಫಲವು ಈ ಗಂಗಾಸಹಸ್ರನಾಮಸ್ತೋತ್ರವಂ ಒಂದಾವರ್ತಿಜಪಿಸಲು ಗೋದಾನಮಾಡಿದ ಫಲವುಂಟು, ಯಾವಜ್ಜೀವವೂ ಗುರುಸೇವೆಯಮಾಡಿದ ಫಲವುಂಟು, ಆರುತಿಂಗಳು ಪಠಿಸಲು ವೇದಪಾರಾಯಣ ಫಲವುಂಟು, ಹರಿಹರರಲ್ಲಿ ಭಕ್ತಿದೊರಕೊಂಬುದು, ಗಂಗೆಯು ಆತನ ಸಮೀಪದಲ್ಲಿ ಇಹಳು, ಈ ಸ್ತುತಿಪಾಠಕನು ಪೂಜ್ಯನು, ವಿಜಯವಹನು, ಶುಚಿಯನಹನು, ಸದಾಚಾರಿಯೂ ದೇವಪೂಜೆಯಂ ಮಾಡಿದವನು, ಆರೋ ಅವರು ಇಹದಲ್ಲಿ ಸುಖವನನುಭವಿಸಿ ಅಂತ್ಯದಲ್ಲಿ ಸ್ತ್ರೀಯರುಸಹಿತ ದಿವ್ಯವಿಮಾನದಿಂದ ಸಕಲಲೋಕಂಗಳಲ್ಲಿಯೂ ಸಂಚರಿಸಿ, ಸಕಲ ಭೋಗಂಗಳಂ ಅನುಭವಿಸಿ ಶಾಶ್ವತವಾದ ಮೋಕ್ಷವ ಪ

ಪಡೆವರು; ಶ್ರಾದ್ಧಕಾಲದಲ್ಲಿ ಪಿತೃಗಳಿಗೆ ಗಯೆಯಲ್ಲಿ ಪಿಂಡವನಿಕ್ಕಿದಂತೆ ತೃಪ್ತಿಯಹುದು, ಇದಕ್ಕೆ ಸಂದೇಹವೇ ಇಲ್ಲ. ಈ ಗಂಗಾಸಹಸ್ರನಾಮಸ್ತೋತ್ರಪಾಠಕನು ಎಲ್ಲಿ ಮೃತನಾದರೂ ಗಂಗಾತೀರದಲ್ಲಿ ಮರಣವಾದ ಫಲವುಂಟು ; ಈ ಗಂಗಾಸ್ತೋತ್ರವು ಗಂಗಾಸ್ನಾನಕ್ಕೆ ಸಮನೆಂದು ಪರಮೇಶ್ವರನು ವಿಷ್ಣುವಿಗೆ ಪೇಳ್ದನೆಂದು ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು—ಕೇಳ್ಳೆ ಅಗಸ್ತ್ಯನೆ! ಒಂದು ಪಕ್ಷದಲ್ಲಿ ಮನುಷ್ಯನಾದವನು ಗಂಗಾಸ್ನಾನವಂ ಮಾಡಬೇಕು, ಹಾಗಲ್ಲವೆ ಗಂಗಾಸಹಸ್ರನಾಮಸ್ತೋತ್ರವಂ ಪಠಿಸಬೇಕು, ಎಂಬದಾಗಿ ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದರೆಂದು ವೇದವ್ಯಾಸ ಋಷೀಶ್ವರರು ಸೂತಪುರಾಣಿಕನಿಗೆ ಬುದ್ಧಿಗಲಿಸಿದ ಅರ್ಥವನ್ನು ಸೂತಪುರಾಣಿಕರು ನೈಮಿಶಾರಣ್ಯವಾಸಿಗಳಾದ ಶೌನಕಾದಿಋಷಿಗಳಿಗೆ ಪೇಳ್ದರೆಂಬಲ್ಲಿಗೆ ಇಪ್ಪತ್ತೊಂಭತ್ತನೇ ಅಧ್ಯಾಯಾರ್ಥ.

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಗಂಗಾಸಹಸ್ರನಾಮವಂ ಪೇಳ್ದ ಇಪ್ಪತ್ತೆಂಟನೇ ಅಧ್ಯಾಯಾರ್ಥನಿರೂಪಣಕ್ಕಂ ಮಂಗಳಮಹಾ.

ಇಪ್ಪತ್ತೆಂಟನೇ ಅಧ್ಯಾಯ ಸಂಪೂರ್ಣ.

ಶ್ರೀ ಗಂಗಾಯೈನಮಃ

ಇಪ್ಪತ್ತೊಂಭತ್ತನೇ ಅಧ್ಯಾಯ.

ಗಂಗಾಮಹಿಮೆ ಧನಂಜಯನಕಥೆ.

ಅನಂತರದಲ್ಲಿ ಅಗಸ್ತ್ಯನು ಕುಮಾರಸ್ವಾಮಿಗಿಂತೆಂದನು :—
ಎಲೈ ಕುಮಾರಸ್ವಾಮಿಯೆ ! ಭಗೀರಥಮಹಾರಾಜನು ಗಂಗಾಭವಾನಿ

ಯಂ ತರುವದಕ್ಕೋಸ್ಕರ ಪಾದಸೇವನಂಗೈಯುತ್ತ ತಪಸ್ಸುಮಾಡಿ ಗಂಗೆಯಂತಂದು ಕಾಶಿಯಲ್ಲಿದ್ದ ಮಣಿಕರ್ಣಿಕಾ ತೀರ್ಥವನ್ನು ಕೂಡಿಸಿದನು ಎಂದಿರಲ್ಲು ಕುಂಡದಲ್ಲಿ ಕೆತ್ತಿದ ದಿವ್ಯರತ್ನದಂತೆ ಮುನ್ನ ವಿಷ್ಣುವಿನ ಚಕ್ರದಿಂ ನಿರ್ಮಿತವಾಗಿ ಅನಂತರವಲ್ಲಿ ಪರಮೇಶ್ವರನ ರತ್ನಮಯಕುಂಡಲಯುಕ್ತವಾಗಿ ಮಣಿಕರ್ಣಿಕೆ ಎಂದು ಪ್ರಸಿದ್ಧವಾಯಿತು, ಅದರಲ್ಲಿ ಗಂಗೆಯುಡಗೂಡಲು ಈ ಕ್ಷೇತ್ರಮುಕ್ತಕರೆಂದು ಈತೀರ್ಥವು ಪುಣ್ಯಕ್ಷೇತ್ರನೆಂದು ಪೇಳುವದು ಏನಿದ್ದೀತು ; ಕುಮಾರಸ್ವಾಮಿ ಅಗಸ್ತ್ಯನಂನೋಡಿ ಇಂತೆಂದನು, ಕೇಳೈ ಅಗಸ್ತ್ಯನೆ! ಪುಣ್ಯಪಾಪರೂಪವಾದ ನಾನಾಕರ್ಮಗಳಂ ಮಾಡಿದವನು ಗಂಗೆಯಲ್ಲಿ ಮೃತನಾಗಲು ವರಣಾಸೀ ಎಂಬ ಖಡ್ಗದಿಂ ಪುಣ್ಯಪಾಪರೂಪ ಆ ಕರ್ಮಂಗಳಂ ಕತ್ತರಿಸಿ ವೇದಾಂತಜ್ಞಾನ ಯೋಗಾಭ್ಯಾಸ ಹೊರತಾಗಿ ಈಶ್ವರಾನುಗ್ರಹದಿಂ ಮುಕ್ತನಹನು, ಈ ಗಂಗೆಯಲ್ಲಿ ದೇಹತ್ಯಾಗವೇ ವೇದಾಂತಜ್ಞಾನವು, ಮಹಾಪಾತಕಿಯಾದರೂ ಗಂಗಾಸ್ನಾನಮಾತ್ರದಿಂ ಮುಕ್ತನಹನು. ದೇವತೆಗಳು, ಯಮನು ಪರಮೇಶ್ವರಂಗೆ ಸಾಷ್ಟಾಂಗನಮಸ್ಕಾರವಂಮಾಡಿ ಇಂತೆಂದು ಬಿನ್ನೈಸಿದರು, ಎಲೈ ಸ್ವಾಮಿಯೆ! ಒಂದೊಂದು ಅಧಿಪತ್ಯವಂ ಕಟ್ಟುಮಾಡಲು ನಿಮ್ಮ ಆಜ್ಞೆಯಂ ಶಿರಸಾವಹಿಸಿಕೊಂಡು ಸುಖದಿಂದಿಧೇವೆ, ಎಲೈ ಸ್ವಾಮಿ! ಈ ಕಾಶೀಕ್ಷೇತ್ರದಲ್ಲಿ ಮಹಾಪಾತಕಿಯಾದರು ಗಂಗಾಸ್ನಾನವಂಮಾಡಿದ ಮಾತ್ರದಲ್ಲಿಯೇ ನಿಮ್ಮ ಅನುಗ್ರಹದಿಂ ಮುಕ್ತನಾಗುತ್ತಿದ್ದಾನು, ಮುಂದೆ ಲೋಕಸ್ಥಿತಿಗೆ ಬುದ್ಧಿ ಏನೆಂದು ಬಿನ್ನಹವಂಮಾಡಿದ ಇಂದ್ರಾದಿಗಳಂನೋಡಿ ಆಲೋಚಿಸಿ ಪರಮೇಶ್ವರನು ಆ ಕಾಶೀಕ್ಷೇತ್ರಮಂ ದುರ್ಜನರಾದವರು ಪೋಗಲಾರದಂತೆ ಸತ್ಪುರುಷರ ವಿಘ್ನನಿವಾರಣವಪ್ಪಂತೆಯೂ ಈ ಕ್ಷೇತ್ರವು ಉತ್ತರದಕ್ಷಿಣದಲ್ಲಿ ವರುಣೆ ಅಸಿ ಎಂದು ಎರಡು ನದೀರೂಪಗಳಾದ ಪಾಪಕತ್ತರಿಗಳಂ ನಿರ್ಮಿಸಿ ಈಕ್ಷೇತ್ರಕ್ಕೆ ಕಾವಲಾಗಿ ಇರಿಸಿದನು. ಈ ಕ್ಷೇತ್ರದ ಪಶ್ಚಿಮ ದಿಕ್ಕಿನಲ್ಲಿ ದೆಹಲಿ ವಿನಾಯಕನೆಂಬ ಗಣಪತಿಯನ್ನು ಕಟ್ಟುಮಾಡಿ ಇರಿಸಿದನು ಆದ್ದರಿಂದ ಈಶ್ವರಾನುಗ್ರಹ ಹೊರತಾಗಿ ಕಾಶೀಪ್ರವೇಶವು ಗಂ

ಗಾಸ್ನಾನವೂ ದೊರಕದು, ಅದುಕಾರಣ ಈ ಕ್ಷೇತ್ರಪ್ರವೇಶವು ಗಂಗಾಸ್ನಾನವು ಇಲ್ಲದವರು ಜನನಮರಣ ಪಾಪಪುಣ್ಯಗಳನನುಭವಿಸುವರು ಇದಕ್ಕೆ ಒಂದು ಇತಿಹಾಸವುಂಟು, ಈ ಕಥೆಯಂ ಕೇಳೆಂದು ಪೇಳ್ವೆನು ಕೇಳೈ ಅಗಸ್ತ್ಯನೆ! ದಕ್ಷಿಣಸಮುದ್ರತೀರದಲ್ಲಿ ಸೇತುಬಂಧದ ಸಮೀಪದಲ್ಲಿ ಒಂದು ಪಟ್ಟಣವುಂಟು, ಆ ಪಟ್ಟಣದಲ್ಲಿ ಒಬ್ಬ ಮಹಾತ್ಮಭಕ್ತನಾದಂಥಾ ಧನಂಜಯನೆಂಬ ಹೆಸರುಳ್ಳ ಒಬ್ಬ ವೈಶ್ಯನುಂಟು. ಆ ಧನಂಜಯನು ನ್ಯಾಯದಿಂ ಧನವನಾರ್ಜಿಸಿ ಅರ್ಥದಿಂ ಅತಿಥಿಗಳಂ ಸಂತೋಷಪಡಿಸಿ ಅದರಿಂದ ಕೀರ್ತಿಯುಳ್ಳವನಾಗಿ ವಿಷ್ಣುಪೂಜಾಪರನಾಗಿ, ಶಮ ದಮ, ದಾಕ್ಷಿಣ್ಯಸತ್ಯವುಂಟಾಗಿ ನಾನಾ ಸದ್ಗುಣಂಗಳುಳ್ಳ ಧನಂಜಯನು ಸಂತೋಷದಿಂದಿರುತ್ತಿರಲು, ಆ ಧನಂಜಯನ ತಾಯಿ ದೈವವಶದಿಂ ಮೃತಿಯನ್ನೈದಿದಳು, ಆಕೆ ತನ್ನ ಯೌವನವಯಸ್ಸಿನಲ್ಲಿ ತನ್ನ ಪತಿಯಂ ವಂಚಿಸಿ ನಡೆದವಳು, ಪತಿಯಾದವನು ಎಷ್ಟು ಧರ್ಮಿಷ್ಠನಾದರೂ ಸ್ತ್ರೀನಡವಳಿಕೆಯಿಂದ ನರಕವನ್ನೈದುವನು, ಪುರುಷನೆಷ್ಟು ಪಾಪಿಷ್ಠನಾದರೂ ಸ್ತ್ರೀಯ ಸುಕೃತದಿಂ ಪುಣ್ಯವನನುಭವಿಸುವನು; ಪಾಪಿಷ್ಠಳಾದ ಸ್ತ್ರೀಯು ವಿಷ್ಮಕೂಪವೆಂಬ ನರಕದಲ್ಲಿ ಒಂದುಕಲ್ಪ ಪರ್ಯಂತರವೂ ಯಾತನೆಯನನುಭವಿಸಿ ಆ ಮೇಲೆ ಊರಹಂದಿಯಾಗಿ ತನ್ನಮಲ ಪರಮಲವಂ ತಿಂಬಳು, ಬಾವುಲೀ ಹಕ್ಕಿಯಾಗಿ ಗುಬ್ಬಿಯಾಗಿ ಆದರೂ ಆ ಸ್ತ್ರೀ ಪುಟ್ಟುವಳು, ಅದುಕಾರಣ ಸ್ತ್ರೀಯಾದವಳು ಪತಿವ್ರತೆಯಾಗಿರಬೇಕು. ಪೂರ್ವದಲ್ಲಿ ಸಾವಿತ್ರೀದೇವಿಯುರು ಪಾತಿವ್ರತ್ಯ ಮಹಿಮೆಯಿಂದ ಅನೇಕಕಾಲ ಸೂರ್ಯ ಉದಯವಂ ತಡದಳು; ಅತ್ರಿ ಮುನಿಯ ಸ್ತ್ರೀಯಾದ ಅನಸೂಯಾ ದೇವಿಯರು ಪಾತಿವ್ರತ್ಯವಿಶೇಷದಿಂದ, ಬ್ರಹ್ಮ, ವಿಷ್ಣು, ರುದ್ರ ಈ ಮೂವರನ್ನೂ ಮಕ್ಕಳಮಾಡಿಕೊಂಡಳು, ಅದುಕಾರಣ ಪತಿವ್ರತಾ ಸ್ತ್ರೀಯರು ಇಹದಲ್ಲಿ ಸಕಲಸುಖವನನುಭವಿಸಿ ಪರದಲ್ಲಿ ಪತಿಯುಕಡೆಯವರನ್ನು ಸ್ವರ್ಗವನ್ನೈದಿಸಿ ಲಕ್ಷ್ಮೀ, ಪಾರ್ವತಿ, ಸರಸ್ವತೀದೇವಿಯರ ಸಖೀತ್ವವುಂಟಾಗಿ ಇರುವಳು; ಅದುಕಾರಣ ಈ ಧನಂಜಯನತಾಯಿ ಪತಿವ್ರತಾಸೊ

ಸ್ತ್ರೀಧರ್ಮವನ್ನರಿಯದೆ ಅಜ್ಞಾನದಿಂ ಪರಪುರುಷ ಪ್ರಸಂಗದಿಂ ಕೆಟ್ಟು
ನಡದು ಇಹುದಲ್ಲಿ ದುಃಖಪಟ್ಟು ಪರದಲ್ಲಿ ಪತಿಸಹಾ ನರಕವನ್ನೈದು
ವಳು; ಇತ್ತಲಾಗಿ ಧನಂಜಯನು ತನ್ನ ತಾಯಿಯು ಪತಿವ್ರತೆಯಲ್ಲವೆಂಬು
ದಂ ಪರರಮುಖದಿಂ ಕೇಳಿದವನಾಗಿ ಪತಿವ್ರತೆಯಲ್ಲದ ಸ್ತ್ರೀಯಿಂದ
ಪತಿಯು ಸಮಸ್ತಪಿತೃಗಳೂ ನರಕವನ್ನೈದುವರು, ಎಂಬುದನರಿತು
ಅದೇ ಚಿಂತೆಯಿಂದಿರುತ್ತಿರಲು ಕೆಲವುಕಾಲದಮೇಲೆ ಕಾಶಿಯಿಂದ ಬಂದ
ಶಿವಭಕ್ತನ ಮುಖದಿಂದ ಗಂಗಾಮಹಾತ್ಮ್ಯವಂ ಕೇಳಲು, ಎಲೆ ಧನಂ
ಜಯನೆ! ಸಕಲಪಾಪಗಳಂ ಮಾಡಿದವರು ಕಾಶೀಕ್ಷೇತ್ರವಂ ಮುಟ್ಟಿ ಗಂ
ಗಾಸ್ನಾನವಂ ಮಾಡಲು ಸಕಲಪಾಪಹರವು, ಅದಕ್ಕೆ ಕೂಡದಿದ್ದರೆ, ಮೃ
ತವಾದವರ ಅಸ್ತಿ ಗಂಗೆಯಲ್ಲಿ ಬೀಳಲು ಸಮಸ್ತಪಾಪವು ಹೋಗಿ ಪಿ
ತೃಗಳುಸಹಾ ಸ್ವರ್ಗವನ್ನೈದಿ ಭೋಗವನನುಭವಿಸುವರು ಎಂದು
ಹೇಳಲಾಗಿ ಆ ಶಿವಭಕ್ತನಿಂದ ಕ್ಷೇತ್ರಮಹಾತ್ಮೆ, ಗಂಗಾಮಹಾತ್ಮೆಯಂ
ತಿಳದು, ತನ್ನ ತಾಯಿಗೆ ನರಕನಿವೃತ್ತಿಯಾದ ಗತಿಯಂ ಕಾಣಿಸುವೆನು,
ಅದರಿಂದ ಪಿತೃಗಳು ಸಕಲಪುಣ್ಯವನ್ನೈದುವರು, ಎಂದು ಗಂಗಾಸ್ನಾ
ನಕ್ಕೆ ಪ್ರೋಪವನಾಗಿ, ತನ್ನ ತಾಯಿ ಅಸ್ಥಿಗಳನ್ನು ಪಂಚಾಮೃತ ಪಂಚ
ಗವ್ಯದಿಂ ಸ್ನಾನವಂ ಮಾಡಿಸಿ, ಗಂಧಕರ್ಪೂರಾದಿಗಳಿಂ ಪೂಜೆಯಂ ಮಾಡಿ
ಪಟ್ಟೆಯವಸ್ತ್ರ ತೋಪಿನವಸ್ತ್ರ ನೇಪಾಳದ ಕಂಬಳಿಯಲ್ಲಿ ಭದ್ರ
ವಾಗಿ ಕಟ್ಟಿ ಅದರಮೇಲೆ ಶುದ್ಧಮೃತ್ತಿಗೆಯಂ ಲೇಪಿಸಿ ಅದನ್ನು ಒಂ
ದು ತಾಮ್ರದ ಸಂಪುಟದಲ್ಲಿರಿಸಿ ತೆಕೊಂಡು ತಾನು ಪಯಣವಾಗಿ
ಅಧಃಶಯನ ಬ್ರಹ್ಮಚರ್ಯವ್ರತವಂ ನಡಸುತ್ತಾ ಪಯಣಗತಿಯಲ್ಲಿ
ಪೋಪಾಗ ಮಾರ್ಗದಲ್ಲಿ ಜ್ವರತಾಪದಲ್ಲಿ ನೊಂದು ತನ್ನ ಸಂಪುಟ
ವಂ ಹೊರಲಾರದೆ ಹೊರುವದಕ್ಕೆ ಶಬರನೆಂಬ ಒಬ್ಬ ಭೃತ್ಯನಂ ಮಾಡಿ
ಕೊಂಡು ಅತಿಪ್ರಯಾಸದಿಂ ಕಾಶೀಪಟ್ಟಣವಂ ಸೇರಿ ತನ್ನ ಭೃತ್ಯನಂ
ಕರೆದು ಸಂಪಾದ್ಯದ ಕಾವಲಾಗಿ ಇರಿಸಿ ತಾನು ವೆಚ್ಚವ ತರುವಕ್ಕೆ
ಹೋಗಲು ಆ ಭೃತ್ಯನು, ಆ ಮೊಟ್ಟೆಯಲ್ಲಿದ್ದ ತಾಮ್ರದ ಸಂಪು
ಟವಂ ಕಂಡು ಇದು ತೂಕವಾಗಿದ್ದೀತು ಇದರೊಳಗೆ ರೊಕ್ಕವಿರುವದೆಂ

ಹುಗಿಸಿದನು ಅವನು ಆ ಸಂಪುಟವನ್ನೆತ್ತಿಕೊಂಡು ಕಾಶೀಕ್ಷೇತ್ರಮಂ
ಬಿಟ್ಟು ಹೊರಡದಾನೊಂದು ವನಾಂತರಕ್ಕೆ ಪೋಗಿ ಅಲ್ಲಿಂದ ತನ್ನ ಮನೆಯ
ಮಾಳಿಗೆಯಲ್ಲಿ ಆ ಸಂಪುಟವಂ ಬಿಚ್ಚಿನೋಡಿ ಅವು ಅಸ್ಥಿಗಳಾಗಿರಲು, ಬಂ
ದು ಹೊಳೆಯೊಳಗೆ ಬಿಸುಟು ತನ್ನ ಮನೆಗೆ ಬಂದು ಇರಲಾಗಿ; ಈ ಧನಂ
ಜಯನು ಬಂದು ತಾನಿರಿಸಿದ್ದ ಭೃತ್ಯನಂ ಕಾಣದೆ ತಾನು ಕಟ್ಟಿದ್ದ ವಸ
ತ್ರದ ಗುರುತಿನ ಕಟ್ಟನ್ನು ಬಿಚ್ಚಿರಲು ಆ ಮೂಟೆಯಂ ಶೋಧಿಸಿ ತಾಂ
ತಂದ ಘನ ಸಂಪುಟವಿಲ್ಲದಿರಲು ಅತಿದುಃಖಿತನಾಗಿ ಕಂಗೆಟ್ಟು ಗಂಗಾ
ಸ್ನಾನ ವಿಶ್ವೇಶ್ವರ ಸೇವೆಯಂ ಬಿಟ್ಟು ಆ ಭೃತ್ಯ ಸಹಜ್ಜೆಗೊಂಡು ಅರಸುತ್ತಾ
ಅವನ ಮನೆಗೆ ಬಂದು ನೋಡುವನಿತರೊಳು ಅವನ ಮನೆಯವನು ಅಂತೆ
ಬಿಸುಟಿದ್ದ ಸಂಪುಟವಂ ಕಟ್ಟಿದ್ದ ಕೌಪಿನವಸ್ತ್ರಮಂ ಕಂಡು ಅವನ
ಸ್ತ್ರೀಯಂ ಕರೆದು ನಿನ್ನ ಗಂಡನು ಎಲ್ಲಿ ಹೋದನು, ನಿನಗೆ ಬೇಕಾದ
ದ್ರವ್ಯವಂ ಕೊಟ್ಟೇನು ನಿನ್ನ ಗಂಡನ ತೋರು, ನಿನ್ನ ಗಂಡ ಬಂದು
ಸಂಪುಟವಂ ಕೊಂಡು ಇದ್ದಾನೆ ಅದನಾದರೂ ಕೊಡು ಅಂಜಬೇಡ ಯಥಾರ್ಥ
ವ ನುಡಿ, ನಿನ್ನ ಗಂಡ ತಂದ ಸಂಪುಟದ ವಸ್ತು ದ್ರವ್ಯವಲ್ಲ, ಅದರೊಳಗೆ
ನನ್ನ ತಾಯಿಯ ಅಸ್ಥಿ ಇದೆ ಅರಿಯದೆ ತಂದನಷ್ಟೆ ಅವು ಎಲ್ಲಿ ಇದ್ದಾವು
ಅದ ತೋರಿಸು, ಇಲ್ಲವೆ ನಿನ್ನ ಗಂಡನ ತೋರು, ಅವ ಬಂದು ಆ ಅಸ್ಥಿ
ಗಳ ತೋರಲು ಬೇಕಾದ ದ್ರವ್ಯವಂ ಕೊಟ್ಟೇನು, ಅದು ಅವನ ಇಷ್ಟ
ವೂ ಅಲ್ಲ ತನ್ನ ಇಷ್ಟವೂ ಅಲ್ಲ, ತನ್ನ ತಾಯಿ ಮಾಡಿದ ಪಾಪವ
ಶದಿ ಅವಗೆ ಪಿತೃಕೃತ್ಯವಂ ಮಾಡುವ ಪುಣ್ಯವಿಲ್ಲದೆ ಹೋಯಿತು, ತಾ
ವು ಮಾಡುವ ಉಪಕಾರವನ್ನು ಮಾಡಿದವನು, ಅದಕ್ಕೆ ತನ್ನ ಭಯಬೇಡ, ಅಸ್ಥಿಗಳು ಇದ್ದ
ಠಾವನ್ನು ತೋರೆಂದು ನುಡಿದ ಧನಂಜಯನ ವಾಕ್ಯವಂ ಕೇಳಿ ಆ ಶ
ಬರಿಯು ತನ್ನ ಗಂಡನ ತಿಳುಹಲು ಅವನು ಲಜ್ಜೆಯಿಂದ ತಲೆವಾಗಿ
ಧನಂಜಯನಂ ಕರಕೊಂಡು ತಾನು ಮುನ್ನ ಅಸ್ಥಿಯ ಬಿಸಾಟಿದ್ದಂ
ಥಾ ವನಕ್ಕೆ ಪೋಗಿ ಆ ಅಸ್ಥಿಗಳಂ ಬಿಸುಟ ಹೊಳೆಯ ಗುರುತಂ ಕಾಣಿ
ಸಿಕೊಡುವೆನೆಂದು ಆ ಶಬರನು ತಪ್ಪಿಸಿಕೊಂಡು ಹೋಗಲು ಆ ಧನಂ
ಜಯನು ಶೋಕದಿಂ ಚಿಂತಾತುರನಾಗಿ ಕಾಶೀಪಟ್ಟಣಕ್ಕೆ ಬಂದು ಗಂ

ಗೆಯಲ್ಲಿ ಸ್ನಾನವಂಮಾಡಿ ವಿಶ್ವೇಶ್ವರನ ದರ್ಶನವಂ ಮಾಡಿಕೊಂಡು ಅಲ್ಲಿ ಮಾಡತಕ್ಕ ಕ್ರಿಯೆಗಳಂ ಮಾಡಿ ಗಯೆಗೆಬಂದು ಪಿಂಡಪ್ರದಾನವಂ ಮಾಡಿ ತನ್ನ ಪಟ್ಟಣಕ್ಕೆ ಬಂದನು. ಅದುಕಾರಣ ಕಾಶೀಕ್ಷೇತ್ರವಂ ಸೇರಿದಾಗ್ಯೂ ಅಸ್ಥಿಗಳುಗಂಗೆಯಲ್ಲಿ ಬೀಳುವದಕ್ಕೆ ಪುಣ್ಯವಿಲ್ಲದೆಹೋಯಿತು, ಅದರಿಂದ ಈಶ್ವರಾನುಗ್ರಹ ಹೊರತಾಗಿ ಕಾಶೀಪ್ರವೇಶ ದೊರಕಿದ್ದರೂ ಅಸ್ಥಿಯಾದರೂ ಗಂಗೆಯಲ್ಲಿ ಬೀಳುವದಕ್ಕೆ ಲಭ್ಯವಿಲ್ಲದೆಹೋಯಿತು, ಅದುಕಾರಣ ಈಶ್ವರಾನುಗ್ರಹ ಹೊರತಾಗಿ ಗಂಗಾಸ್ನಾನದೊರೆಕದು. ಎಂದು ಕುಮಾರಸ್ವಾಮಿಯು ಅಗಸ್ತ್ಯಂಗಿಂತೆಂದನು:--ಕೇಳೈ ಅಗಸ್ತ್ಯನೆ! ಆ ಅಸಿ ವರಣ ಎಂಬ ಎರಡುನದಿಗಳೂ ಕ್ಷೇತ್ರಸಂರಕ್ಷಣೆಗೋಸ್ಕರ ನಿರ್ಮಿಸಲ್ಪಟ್ಟವು, ಈ ಕಾಶೀಕ್ಷೇತ್ರವು ಎರಡುನದಿಗಳ ಮಧ್ಯದಲ್ಲಿಇರಲಾಗಿ ವಾರಣಾಸಿ ಎಂಬ ಹೆಸರಾಯಿತು. ಈ ಕ್ಷೇತ್ರಹೊರತಾಗಿ ಮಿಕ್ಕಾದ ಕ್ಷೇತ್ರಗಳಲ್ಲಿ ಬ್ರಾಹ್ಮಣನು ಮೃತನಾದರೆ ಜನ್ಮವುಂಟು, ಈ ವಾರಣಾಸಿಯಲ್ಲಿ ಅಂತ್ಯಜಾತಿ ಮೃತನಾದರೂ ಮೋಕ್ಷವುಂಟು ಪುನರ್ಜನ್ಮವಿಲ್ಲ, ಧರ್ಮಕಾಮಂಗಳಿಗೆ ಸಾಧನವಾದ ಶರೀರವಂ ಕಾಶಿಯಲ್ಲಿ ತ್ಯಜಿಸಿ, ಅಧಿಕಶ್ರೇಯಸ್ಸುಪಡೆದೇನು ಎಂದರೆ ಮೊದಲಿಗೆ ಮೋಸಹೋದಂತೆ ಶರೀರವೆ ಇಲ್ಲವಾಯಿತು, ಕಾಶಿಯಲ್ಲಿ ಮೃತವನ್ನೈದಿದವರೆಲ್ಲರೂ ಈಶ್ವರಾನುಗ್ರಹದಿಂದ, ಕೊರಳಲ್ಲಿ ಕಪ್ಪು ಹಣೆಯಲ್ಲಿ ಕಣ್ಣು, ವಾಮಪಾರ್ಶ್ವ ಸ್ತ್ರೀರೂಪವುಳ್ಳವರಾಗಿ, ರುದ್ರಸ್ವರೂಪಿಗಳಾಗಿ ಮುಕ್ತರಾಗುವರು, ಈ ಆನಂದಕಾನನವು ವಿಶ್ವೇಶ್ವರಗೆ ನಿವಾಸವಾದುದು ಈ ಸ್ಥಳದಲ್ಲಿ ಮಣಿಕರ್ಣಿಕೆಇರೋಣ ಆವೋಲೆ ಗಂಗೆಬಿದ್ದು ಇರೋಣವು ಆದರಿಂದ ಈ ಕ್ಷೇತ್ರವು ಮುಕ್ತಿಯನೀವುದುನಿಶ್ಚಯವಾಗಿ ಇದ್ದೀತು, ಕೈಯಲ್ಲಿದ್ದ ವಸ್ತುವನ್ನು ಬಿಟ್ಟಂತೆ ಈ ಕಾಶೀಕ್ಷೇತ್ರವಂ ಬಿಟ್ಟವರಾರುಂಟೋ ಅವರು ಈ ಕ್ಷೇತ್ರವಂ ಮತ್ತೊಂದುಕ್ಷೇತ್ರಕ್ಕೆ ಸಮಾನವೆಂಬವರಾರುಂಟೋ ಅವರೀಗೆ ಮಹಾಪಾತಕಿಗಳು ಅವರೊಡನೆ ಸಂಭಾಷಣೆಯಂ ಮಾಡಲಾಗದು, ಪ್ರಿಯಉಳ್ಳವರ್ಗೆ ವಿದ್ಯಾಧನಧಾನ್ಯವನಿತಾದಿಗಳು ಸುಲಭ, ಸ್ವರ್ಗಭೋಗವಹುದು. ಅದರಿಂದ ಕಾಶೀ

ಯೋಗವು ದುರ್ಲಭವು, ಪೂರ್ವದಲ್ಲಿ ಬ್ರಹ್ಮನು ಲೋಕಪಾಲಲೋಕಂಗಳನ್ನು ಒಂದುಕಡೆಯಲ್ಲಿರಿಸಿ ಕಾಶೀಪಟ್ಟಣವ ಒಂದುಕಡೆಯಲ್ಲಿರಿಸಿ ತೂಗಲು ಕಾಶೀಪಟ್ಟಣವೇ ಅಧಿಕವಾಯಿತು, ಅದುಕಾರಣ ಈ ಕಾಶಿಯಲ್ಲಿ ಮೂರುಬಾರಿಯೂ ಪಾಪವಂಮಾಡಿಕೊಂಡು ಸ್ವೇಛ್ಛಾವಿಹಾರದಲ್ಲಿ ಇದ್ದವನಿಗಾದರೂ ಮೋಕ್ಷವುಂಟು, ಇಲ್ಲಿ ಸ್ವೇಚ್ಛೆಯಿಂ ಇದ್ದವನಿಗೆ ಮಾತ್ರಂ ಮುಕ್ಷೇತ್ರದಲ್ಲಿ ವಾಯುವಾಹಾರದಲ್ಲಿ ತಪಸ್ಸಂ ಮಾಡಿದವನು ಸರಿಬಾಳನು, ಕಾಶೀವಾಸಸಂಮಾಡಿದವರ ಕರ್ಮಬೀಜಂಗಳಂ ಈಶ್ವರನು ತನ್ನ ಲಲಾಟಾಗ್ನಿಯಿಂದ ದಹಿಸುವನು ಕಾಶಿಯಲ್ಲಿರ್ದ ಕೀಟಕಮಶಕಾದಿಗಳು ಮೊದಲಾಗಿ ಮೋಕ್ಷವನ್ನೈದುವವು, ಮಳೆಯೆ ಆಯುಧಂಗಳಾಗಿ ಆಕಾಶದಲ್ಲಿರುವ ರುದ್ರರು ಎಷ್ಟುಮಂದಿ ಉಂಟೋ, ವಾಯುವೇ ಆಯುಧಂಗಳಾಗಿ ಅಂತರಿಕ್ಷದಲ್ಲಿರುವ ರುದ್ರರು ಎಷ್ಟುಮಂದಿ ಉಂಟೋ, ಅಂನಾಯುಧರಾಗಿ ಭೂಮಿಯಲ್ಲಿರುವ ರುದ್ರರು ಎಷ್ಟುಮಂದಿ ಉಂಟೋ ಮತ್ತೊಂದಾದಿಕ್ಕಿನಲ್ಲಿ ಹತ್ತುಹತ್ತುಮಂದಿರುವ ರುದ್ರಲಿಂಗದಲ್ಲಿ ಅಷ್ಟದಿಕ್ಕಿನಲ್ಲಿಯೂ ಇರುವ ರುದ್ರರು ಎಷ್ಟುಮಂದಿ ಉಂಟೋ ಅವರು ಮೊದಲಾದ ಅಸಂಖ್ಯಾತ ರುದ್ರರಿಗಿಂತಲು ಕಾಶಿಯಲ್ಲಿ ವಾಸವಾಗಿದ್ದವರೆ ಅಧಿಕರು ಅವರೇ ರುದ್ರರೂಪಿಗಳು ಕಾಶೀಕ್ಷೇತ್ರವು ವಿಶ್ವನಾಥನಿಂದ ಎಡಬಿಡದೆ ಇದ್ದಕಾರಣ, ಈ ಕ್ಷೇತ್ರವು ಅವಿಮುಕ್ತಕ್ಷೇತ್ರವೆಂದು ಹೆಸರಾಗಿಇತ್ತು ಈಕ್ಷೇತ್ರದಲ್ಲಿ ವಾಸವಾಗಿದ್ದವರ ಜಾತ್ಯಾಚಾರಂಗಳಂ ವಿಚಾರವಂಮಾಡದೆ ಪೂಜೆಯಂಮಾಡಲು ಸಾಕ್ಷಾತ್‌ರುದ್ರರ ಆರಾಧನೆಯಂಮಾಡಿದ ಫಲವುಂಟು, ಈ ಕಾಶಿಯು ಸರ್ವೇಶಶಬ್ಧವು ಹೇಳಲ್ಪಟ್ಟದು, ಈಶಾನಶಬ್ದವು ಹೇಳಲ್ಪಟ್ಟದು, ಆದರಿಂದ ಮಹಾಪ್ರಳಯದಲ್ಲಿ ಮಹಾಭೂತಂಗಳೆಂಬ ಜೀವಗಳಿಗೆ ಸ್ಥಾನವಾದಕಾರಣ ಮಹಾಸ್ಮಶಾನವೆಂಬ ಹೆಸರಾಯಿತು, ಮಹಾಪ್ರಳಯವೆಂತಹುದೆನೆ—ಬ್ರಹ್ಮಂಗೆ ಪರಮಾಯುಃಪ್ರಮಾಣ ಶತವರ್ಷವಾಗಲು ಭೂಮಿಯು ಉದಕದಲ್ಲಿ ಲಯವಾಗುವದು, ಉದಕವು ಅಗ್ನಿಯಲ್ಲಿ ಅಡಕವಾಗುವದು, ಅಗ್ನಿಯು ವಾಯುವಿನಲ್ಲಿ ಅಡಕವಾಗುವದು, ವಾಯುವು ಆಕಾಶದಲ್ಲಿ

ಕೂಡುವುದು, ಆಕಾಶವು ಅಹಂಕಾರದಲ್ಲಿ ಅಡಕವಾಗುವುದು, ಷೋಡಶ ವಿಕಾರವುಳ್ಳ ಅಹಂಕಾರವು ಮಹತ್ತತ್ವದಲ್ಲಿ ಅಡಕವಾಗುವುದು. ಮಹ ತ್ತತ್ವವು ಪ್ರಕೃತಿಯೊಳ್ಳಿ ಕೂಡುವುದು. ತ್ರಿಗುಣಾತ್ಮಕವಾದ ಪ್ರಕೃತಿ ಯು ಮಹಾಪುರುಷನಲ್ಲಿ ಕೂಡುವುದು. ಇಪ್ಪತ್ತನಾಲ್ಕು ತತ್ವಗಳ್ಲಿ ಮಹಾಪುರುಷನಿದ್ದು ಜೀವಿಯಾಗಿ ಜೀವನೆನಿಸಿಕೊಂಬುವನು ಪ್ರಕೃ ತಿಗೆ ಆಶ್ರಯವಾದ ಜೀವನೆನಿಸಿಕೊಂಬ ಮಹಾಪುರುಷನು. ಕಾಲರೂಪ ವಾದ ಈಶ್ವರನಲ್ಲಿ ಅಡಗುವನು ಈಶ್ವರನು ಪರಂಜ್ಯೋತಿಯಾದ ವಸ್ತುವಿನಲ್ಲಿ ಕೂಡಿರುವನು. ಪರಂಜ್ಯೋತಿಯಾದ ವಸ್ತುವು ಮಹಾ ವಿಷ್ಣುವೆಂದು, ಮಹಾದೇವನೆಂದೂ, ಬ್ರಹ್ಮನೆಂದೂ ಹೇಳುವರು; ಇಂ ಥಾ ಪ್ರಳಯವು ಪ್ರಾಕೃತಪ್ರಳಯವೆನಿಸಿಕೊಂಬುವುದು, ಈ ಪ್ರಳಯ ದಲ್ಲಿ ತ್ರಿಮೂರ್ತಿಗಳಿಗೂ ಅಳಿವುಂಟು, ಅಂಥಾಪ್ರಳಯದಲ್ಲಿಯೂ ಪ ರಂಜ್ಯೋತಿಯಾದ ಈಶ್ವರನು ಕಾಶೀಪಟ್ಟಣವಂ ತನ್ನ ತ್ರಿಶೂಲಾಗ್ರ ದಿಂದೆತ್ತಿಕೊಂಡಿಹನು; ಅದುಕಾರಣ ಈ ಕಾಶೀಪಟ್ಟಣಕ್ಕೆ ಪ್ರಳಯದ ಭಯವಿಲ್ಲವೆಂದು ಹೇಳಲ್ಪಡುವದು; ಈ ಕ್ಷೇತ್ರಕ್ಕೆ ವಾರಣಾಶಿ ಎಂದೂ ರುದ್ರಾವಾಸವೆಂದೂ, ಮಹಾಸ್ಮಶಾನವೆಂದೂ, ಆನಂದಕಾನನವೆಂದೂ, ಅವಿಮುಕ್ತಕ್ಷೇತ್ರನೆಂದೂ ಈ ನಾಮಂಗಳು ಪ್ರಸಿದ್ಧವಾದುದು ಎಂದು ಪರಮೇಶ್ವರನು ವಿಷ್ಣುವಿಗೆ ಹೇಳಿದಪ್ರಕಾರವಂ ತದನಂತರದಲ್ಲಿ ಪಾ ರ್ವತೀದೇವಿಯರಿಗೆ ಹೇಳುತ್ತಿರಲಾಗಿ ತಾನು ಕೇಳಿದಂಥಾ ಈ ಕಾಶೀ ಮಹಾತ್ಮೆಯನ್ನು ನಿನಗೆ ಹೇಳ್ದನು ಎಂದು ಕುಮಾರಸ್ವಾಮಿ ಅಗಸ್ತ್ಯ ಋಷೀಶ್ವರನಿಗಿಂತೆಂದನು;--ಕೇಳೈ ಅಗಸ್ತ್ಯನೆ! ಆರೊಬ್ಬರು ಈ ಅ ಧ್ಯಾಯವಂ ನಿತ್ಯವೂ ಪಠಿಸಲು ಸರ್ವಪಾಪಹರ, ಕೇಳಿದವರು ಸಹಾ ಪ ಬ್ಬಗೂ ಶಿವಲೋಕದಲ್ಲಿ ಸುಖವನನುಭವಿಸಿ ಆಮೇಲೆ ಕಾಶೀಕ್ಷೇತ್ರ ದಲ್ಲಿ ಮುಕ್ತರಹರು; ಇನ್ನು ನೀನು ಕೇಳತಕ್ಕ ಸಂಶಯಗಳೇನಾದರು ಇದ್ದರೆ ಕೇಳು ನಿನ್ನ ಕೂಡಣ ಸಂಭಾಷಣೆಯಿಂದ ಕಾಶೀ ಮಹಾತ್ಮ್ಯೆ ಯಂ ಪೇಳಲು ನನಗೆ ಮಹಾ ಆನಂದವಾಗುತ್ತಿದ್ದೀತು ಎಂದು ಕುಮಾರ ಸ್ವಾಮಿ ಪೇಳಲು; ಅಗಸ್ತ್ಯಋಷಿಯು ಸಂತೋಷದಿಂದ ಮತ್ತು ಕು

ಮಾರಸ್ವಾಮಿಯನ್ನು ಹೇಳತಕ್ಕ ಕಥೆಯನ್ನು ಕೇಳತೊಡಗಿದನು ಎಂದು ವೇದವ್ಯಾಸರು ತನಗೆ ನಿರೂಪಿಸಿದರೆಂದು ಸೂತಪುರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಋಷಿಗಳಿಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ.

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂಧ ಪುರಾಣೋಕ್ತ ಕಾಶೀ ಮಹಿಮಾರ್ಥದರ್ಪಣದಲ್ಲಿ ಗಂಗಾಮಹಿಮೆ ಧನಂಜಯನವೃತ್ತಾಂತಮಂ ಪೇಳ್ದ ಇಪ್ಪತ್ತೊಂಭತ್ತನೇಅಧ್ಯಾಯಾರ್ಥನಿರೂಪಣಕ್ಕಂ ಮಂಗಳಮಹಾ.

ಇಪ್ಪತ್ತೊಂಭತ್ತನೇ ಅಧ್ಯಾಯ ಸಂಪೂರ್ಣ.

ಶ್ರೀರಸ್ತು

ಮೂವತ್ತನೇ ಅಧ್ಯಾಯ.

ಕಾಲಭೈರವನ ಉತ್ಪತ್ತಿ.

ಅನಂತರದಲ್ಲಿ ಅಗಸ್ತ್ಯನಿಂತೆಂದನು:—ಎಲೈ ಕುಮಾರಸ್ವಾಮಿ! ನೀವು ನಿರೂಪಿಸಿದಕಾರಣ ವಾರಣಾಸೀ ಮಹಾತ್ಮ್ಯಂಕೇಳಿ ಮಹಾ ಆನಂದವಾಗುತ್ತಿದ್ದೀತು, ನಿಮಗೆ ಇನ್ನೊಂದು ಬಿನ್ನಹವಿಧೆ ಅದಾವುದೆಂದರೆ—ಕಾಲಭೈರವನ ಉತ್ಪತ್ತಿ ಹ್ಯಾಗೆ? ಆತನ ನಾಮಧೇಯಂಗಳಾವಾವು? ಆತನ ಪೂಜಾಕ್ರಮವೇನು? ಆತ ಕೊಡುವ ಫಲವೇನು? ಆತನ ಪೂಜಿಸುವ ಕಾಲವಾವುದು ಇವು ಮೊದಲಾದವೆಲ್ಲವನ್ನು ವಿಸ್ತಾರವಾಗಿ ಬುದ್ಧಿಗಲಿಸಬೇಕೆನಲು, ಅಗಸ್ತ್ಯಮುನೀಶ್ವರಗೆ ಕುಮಾರಸ್ವಾಮಿ ಇಂತೆಂದನು—ಎಲೈ ಅಗಸ್ತ್ಯ ಋಷಿಯೆ! ಈಗ ಕಾಲಭೈರವನ ಉತ್ಪತ್ತಿಯನ್ನು ಹೇಳಬೇಕೆಂದು ಕೇಳಿದೆಯಲ್ಲಾ ಸಕಲ ಪಾಪಂಗಳಂ

ಪರಿಹರಿಸಿ ಕಾಶಿಯಲ್ಲಿ ಮುಕ್ತಿಯಂ ಕೊಡುವಂಥಾ ಕಾಲಭೈರವನ ಉತ್ಪತ್ತಿಯಂ ಪೇಳುವೆನು ಅದೆಂತೆನೆ:—ಶ್ರೀ ಮಹಾವಿಷ್ಣುವಿನಂತೆ ಸಕಲ ಬ್ರಹ್ಮಾಂಡಗಳನ್ನು ತನ್ನ ಎರಡುಕರಗಳಿಂ ಹಿಡಿದು ಹಿರಿದಾದ ಪಾದದಿಂದ ಸೊಕ್ಕಿ ಸೊಕ್ಕಿ ನಾಟ್ಯವನಾಡುವಂಥಾ ಮಹಾಕಾಲಭೈರವನು ಸಕಲ ಲೋಕಂಗಳಂ ಸಲಹಲೆಂದು ಭೈರವನಿಗೆ ನಮಸ್ಕಾರವಂ ಮಾಡಿ ಇಂತೆಂದನು—ಕೇಳಯ್ಯ ಅಗಸ್ತ್ಯನೇ! ಮಹಾದೇವನ ಮಹಿಮೆಯನ್ನು ಬ್ರಹ್ಮಾದಿಗಳೂ ಕೂಡ ಅರಿಯರು. ಶಿವನ ಮಾಯೆಯಂ ಮೀರಿದವರಿಲ್ಲ, ಅದೇನು ಕಾರಣವೆಂದರೆ, ಮಹೇಶ್ವರನು ಸರ್ವಗತನಾದ ಅವಾಙ್ಮನಸಗೋಚರನಾಗಿ ಇಹನಾದಕಾರಣ ಮೂಢರಿಂಗೆ ತಿಳಿಯಲ್ಪಡನು, ಅದೆಂತೆಂದರೆ, ಪೂರ್ವಕಾಲದಲ್ಲಿ ಸಪ್ತಋಷಿಗಳು ಪರತತ್ವವ ತಿಳಿಯದೆ ಒಂದಾನೊಂದುದಿನ ಮಹಾಮೇರುಪರ್ವತಕ್ಕೆ ಹೋಗಿ ಅಲ್ಲಿ ಸುರಾಸುರರು ಯಕ್ಷ ಕಿನ್ನರ ಗಂಧರ್ವ ಸಿದ್ಧ ವಿದ್ಯಾಧರರು ಸನಕ ಸನಂದನ ಸನತ್ಕುಮಾರ ನಾರದಾದಿ ಯೋಗೀಂದ್ರರು ಓಲೈಸಲು ಸುಖದಿಂ ಕುಳ್ಳಿರ್ದ್ದ ಬ್ರಹ್ಮದೇವರಿಗೆ ನಮಸ್ಕಾರವಂ ಮಾಡಿ ಇಂತೆಂದರೂ—ಎಲೈ ಬ್ರಹ್ಮನೆ! ಎಂದಿಗೂ ಅಳಿವಿಲ್ಲದ ಏಕರೂಪವಾದ ಪರತತ್ವ ಯಾವುದೆಂದು ಬೆಸಗೊಳ್ಳಲು: ಆ ಸಪ್ತಋಷಿಗಳಂ ನೋಡಿ ಬ್ರಹ್ಮನು ಈಶ್ವರನ ಮಾಯೆಯಿಂ ರಜೋಹಿತನಾಗಿ ಪರತತ್ವವಂ ತಿಳಿಯಲರಿಯದೆ ತಾನೇ ಪರತತ್ವವೆಂದು ತಿಳಿದು ಇಂತೆಂದನು—ಕೇಳಿರೈ ಸಪ್ತಋಷಿಗಳಿರಾ! ತಾನು ಈ ಜಗತ್ತಿಗೆ ಆಧಾರನು, ತಾನೇ ಸೃಷ್ಟಿಕರ್ತನು, ತನ್ನನ್ನೊಬ್ಬರೂ ಸೃಷ್ಟಿಸಿದವರಿಲ್ಲ ತಾನು ಅದ್ವಿತೀಯನೂ, ಸಮರ್ಥನೂ, ಆದ್ಯಂತರಹಿತನಾದಂಥಾ ಪರಬ್ರಹ್ಮಸ್ವರೂಪ ತಾನು, ತನಗಿಂತ ಅಧಿಕವಿಲ್ಲ, ಹೀಗೆಂದು ರಾಜಸಗುಣಪ್ರೇರಿತನಾಗಿ ಆಡಲು ಬ್ರಹ್ಮನ ವಾಕ್ಯವಂ ಕೇಳಿ ಸಪ್ತಋಷಿಗಳೊಳು ಕ್ರತುವೆಂಬವನು ಮಹಾವಿಷ್ಣುವಿನ ಅಂಶಭೂತನಾದಕಾರಣ ಮಹಾಕೋಪದಿಂದ ಅರುಣಾಯತನೇತ್ರನಾಗಿ ಇಂತೆಂದನು, ಎಲೈ ಚತುರ್ಮುಖ ಬ್ರಹ್ಮನೆ! ನೀನು ಪರತತ್ವವನರಿಯದೆ ಏನೆಂದು ಆಡುತ್ತಾ ಇದ್ದೆ ? ನೀನು ಮಹಾಯೋಗ್ಯನಾದವನು ಹೀಗೆ ಆಡುವದು ಉಚಿತವಲ್ಲ-

ಈ ಲೋಕಂಗಳಿಗೆ ನಾರಾಯಣಾಂಶಭೂತನಾದಕಾರಣ ಈ ಜಗತ್ತಿಗೆ ಕರ್ತೃತಾನು, ನಾರಾಯಣನು ತಾನು, ಯಜ್ಞಪುರುಷನುತಾನು, ಪರಂಜ್ಯೋತಿಯೆನಿಸಿಕೊಂಬುವನುತಾನು, ತಾನಲ್ಲದೆ ಪರತರವಾಗಿ ಈ ಜಗತ್ತಿಗೆ ಒಡೆಯರಾರು, ತನ್ನ ನಾಭೀಕಮಲದಲ್ಲಿ ನಿನ್ನ ಸೃಜಿಸಿಯೆ ನಿನ್ನನು ಜಗತ್ತಿಗೆ ಸೃಷ್ಟಿಕರ್ತನನಮಾಡಿದನು, ಎಂದು ಯಜ್ಞಪುರುಷರೂಪನಾದ ಕ್ರತುವೆಂಬ ಋಷಿ ನುಡಿಯಲು; ಆ ಬ್ರಹ್ಮನೂ ಋಷಿಗಳೂ ತಂವೊಳುತ್ತಾವು ವಾಗ್ವಾದವಂಮಾಡಿ ಪರತತ್ವವಂ ಕಾಣಲರಿಯದೆ ಈ ತತ್ವನಿರ್ಣಯವಂ ಪ್ರಮಾಣರೂಪವಾದ ದೇವತೆಗಳಂ ಕೇಳುವಾ ಎಂದು ವೇದಂಗಳಬಳಿಗೆಬಂದು ಇಂತೆಂದು ಬೆಸಗೊಂಡರು:—ಎಲೆ ವೇದಂಗಳಿರಾ! ನೀವು ಸಕಲಕ್ಕೂ ಪ್ರಮಾಣಯುಕ್ತರಾಗಿದ್ದೀರಿ, ನಮಗೆ ಪರತತ್ವನಿರ್ಣಯವಂ ಪೇಳಬೇಕೆನಲು; ವೇದಂಗಳಿಂತೆಂದವು—ಎಲೈ ನಾರಾಯಣಯಜ್ಞಪುರುಷರೂಪವಾದ ಕ್ರತುಋಷಿಯೆ! ಎಲೈ ಬ್ರಹ್ಮನೆ! ನಾವು ನಿಮಗೆ ಮಾನ್ಯರಾದರೆ ನಿಮ್ಮ ಸಂದೇಹವಂ ಬಿಡಿಸುವ ಪ್ರಮಾಣವಂ ಪೇಳುವೆವು ಎನಲು, ಮತ್ತೆ ಬ್ರಹ್ಮನೂ ಋಷಿಗಳೂ ಇಂತೆಂದರು—ಎಲೈ ಶ್ರುತಿಗಳಿರಾ! ನಿಮ್ಮ ವಾಕ್ಯವೇ ನಮಗೆ ಪ್ರಮಾಣ, ನಮಗೆ ಪರತತ್ವವಂ ಪೇಳಬೇಕೆನಲು ಶ್ರುತಿಗಳಿಂತೆಂದವು—ಆವ ವಸ್ತುವಿನಲ್ಲಿ ಸಕಲಭೂತಂಗಳಿಹವೋ? ಆವುದರಿಂದ ಸಕಲಪ್ರಪಂಚವೂ ಪ್ರವರ್ತಿಸುವದೋ ಅವನು ಆತ್ಮರೂಪನು ಅಂಥಾವಸ್ತುವೆ ರುದ್ರನೆಂದು ಋಗ್ವೇದ ಪೇಳಿತು, ಆವಾತನು ಸಕಲ ವೇದಂಗಳಿಂದ ಆರಾಧಿಸಲ್ಪಡುವನೋ? ಆವನಿಂದ ನಾವು ಪ್ರಮಾಣರೂಪಾದೆವೋ? ಸಕಲವನ್ನೂ ಸೃಜಿಸುವನಾರೋ ಆ ಸದಾಶಿವನೇ ಪರತತ್ವವೆಂದು ಯಜುರ್ವೇದ ಪೇಳಿತು, ಆವ ವಸ್ತುವಿನಿಂದ ಸಕಲಪ್ರಪಂಚನಾಗುತ್ತಾ ಇದ್ದೀತೋ? ಆವನನ್ನು ಯೋಗಿಗಳು ಹೃದಯಾಕಾಶದಲ್ಲಿ ಧ್ಯಾನವಂಮಾಡುತ್ತಾ ಇಹರೋ? ಆವಾತನ ಪ್ರಭೆಯಿಂ ಸಕಲವೂ ಬೆಳಗುತ್ತಾ ಇಹುದೋ? ಅಂಥಾ ತ್ರಿಯಂಬಕನೇ ಪರತತ್ವವೆಂದು ಸಾಮವೇದ ಪೇಳಿತು; ಆ ದೇವನು ಭಕ್ತವತ್ಸಲನೋ, ಆವನು ಅದ್ವಿತೀಯನೋ, ಆವಾತನು ಸಂಸಾ

ರದುಃಖಭೇದಕನೋ? ಆತನು ಮೋಕ್ಷಪ್ರದನಾದ ಶಿವನೇ. ಆತ್ಮಾ ಪರಂಜ್ಯೋತಿಯಾದ ಈಶ್ವರನೇ ಪರತತ್ವವೆಂದು ಅಥರ್ವಣವೇದ ಹೇಳಿತು, ಈ ಪ್ರಕಾರದಿಂ ನುಡಿವ ಚತುರ್ವೇದಗಳ ವಾಕ್ಯಗಳ ಕೇಳಿ ಯಜ್ಞಪುರುಷನೂ ಬ್ರಹ್ಮನೂ ನಕ್ಕು ಎಲೈ ವೇದಗಳಿರಾ! ನಮ್ಮ ಇಬ್ಬರಿಗಿಂತಲೂ ಮಹಾದೇವನು ಹ್ಯಾಗೆ ಅಧಿಕನಾದವನು. ಅವನು ಪ್ರಮಥನಾಥನು, ದೇಶವಂ ತಿರುಗುವವನು, ದಿಗಂಬರನು, ರುದ್ರಭೂಮಿಯಲ್ಲಿ ಶ್ಮಶಾನಭಸ್ಮವಂ ಪೂಸಿಕೊಂಡು ಪಾರ್ವತಿಯ ಸಹಾ ಭೂತಗಳ ಕೂಡಿಕೊಂಡು ತಿರುಗುತ್ತಿಹನು. ವಿಕಾರವೇಷದವನು, ಜಟಾಧಾರಿ, ಎತ್ತನೇರಿ ತಿರುಗುವವನು, ಸರ್ಪಭೂಷಣನು, ಸತ್ಸಂಗವಿಲ್ಲದವನು, ಅಂಥಾವನ ಪರತತ್ವವೆಂದು ಹ್ಯಾಗೆ ನುಡಿದಿರಿ ಎಂದು ಯಜ್ಞಪುರುಷನೂ ಬ್ರಹ್ಮನೂ ನುಡಿಯಲು ಕೇಳಿ, ಪ್ರಣವವು ಎಲೈ ಯಜ್ಞಪುರುಷ ಬ್ರಹ್ಮರಿರಾ, ಮಹಾದೇವನು, ಲೀಲಾವಿಗ್ರಹನು, ಸಂಸಾರದುಃಖಹರನು, ಅಮೂರ್ತಿಯಾದರೂ ಸುಮೂರ್ತಿಯಾದವನು ಷಡ್ಗುಣೈಶ್ವರ್ಯ ಸಂಪನ್ನನು, ಸಂಸಾರದುಃಖಹರನು, ಪರತತ್ವನು, ಇಂಥಾ ಪರಮೇಶ್ವರನು ಒಂದುವೇಳೆಯಲ್ಲಿ ಇಚ್ಛಾಶಕ್ತಿರೂಪಳಾದ ದೇವಿಯೊಡನೆ ಕ್ರೀಡಿಸುತ್ತಾ ಇಹನು. ಸ್ವಯಂಪ್ರಕಾಶನಾದ ಶಿವನಿಗೆ ಶಿವೆಯೆಂಬ ಹೆಸರುಳ್ಳ ಶಕ್ತಿ ಬೇರೊಬ್ಬಳಲ್ಲ. ಇಂತೆಂದು ಪ್ರಣವ ನುಡಿಯಲು ಯಜ್ಞಪುರುಷ ಬ್ರಹ್ಮರು ಶಿವನ ಮಾಯೆಯಿಂ ಮೋಹಿತರಾಗಿ ಅಜ್ಞಾನವಂ ಬಿಡದಿರಲು ಅವರ ಮಧ್ಯದಲ್ಲಿ ಒಂದು ತೇಜಸ್ಸು ಪ್ರಕಟವಾಗಿ ಭೂಮಿ ಆಕಾಶವನ್ನು ತುಂಬಲು ಆ ತೇಜಸ್ಸಿನ ಮಧ್ಯದಲ್ಲಿ ಒಂದು ಪುರುಷಾಕಾರ ಕಾಣಿಸಲು, ಬ್ರಹ್ಮನು ನೋಡಿ ಕೋಪಾರೂಢನಾಗಿ ತನ್ನ ಮುಂದೆ ನಿಂತವನಾರೋ ಎಂದು ಬ್ರಹ್ಮನ ಐದನೆ ಶಿರಸ್ಸು ಪ್ರಜ್ವಲಿಸಿ ನೋಡುವನಿತರೊಳು ಆ ನಡುವಿನ ಮಹಾ ತೇಜಸ್ಸಿನಿಂದಾ ಕಾಣಿಸಲ್ಪಟ್ಟ ಪುರುಷಾಕಾರವು ಪ್ರಜ್ವಲಿತವಾಗಿ ಕೊರಳಿನಲ್ಲಿ ಕಪ್ಪು, ಕೆಂಜೆಡೆ, ತ್ರಿಶೂಲ, ಡಮರುಗ, ಚಾಪ, ಬಾಣ, ಗದೆ, ಶಕ್ತಿ ಪಾಶಗಳು, ಮುಸಲಾದಿ, ಕತ್ತಿಗಳು,

ಶೂಲಾದಿ ಮಹಾಯುಧಂಗಳಂ ಧರಿಸಿದ ಹಸ್ತಂಗಳಿಂ, ಫಣಿಗಣಂಗಳ ಚಂ
ದ್ರಶೇಖರ ಕಪರ್ದಮುಂ ಧರಿಸಿದ ಪುರುಷನು ಕಾಣಿಸಿಕೊಳ್ಳಲು
ಬ್ರಹ್ಮನಿಂತೆಂದನು:— ಎಲೈ ಚಂದ್ರಶೇಖರನೆ, ನಾನು ನಿನ್ನಂ
ಬಲ್ಲೆನು, ಪೂರ್ವದಲ್ಲಿಯೇ ನೀನು ನನ್ನ ಲಲಾಟದಲ್ಲಿ ಪುಟ್ಟಿ
ರೋದನವಂ ಮಾಡಲಾಗಿ ರುದ್ರನೆಂದು ಪೆಸರನಿಟ್ಟೆನು, ನೀನು ಈಗ
ನನ್ನ ಮರೆಹೊಗು ಕೈಗಾಯ್ವೆನೆಂದು ಬ್ರಹ್ಮನ ಐದನೆ ಶಿರಸ್ಸು ಮಹಾ
ಗರ್ವದಿಂ ನುಡಿಯಲು ಆ ತೇಜೋರೂಪನಾದ ಪರಮೇಶ್ವರನು
ಅತ್ಯಂತ ಕೋಪದಿಂದ ಒಬ್ಬ ಪುರುಷನನ್ನು ಪುಟ್ಟಿಸಲು, ಆ ಪುರು
ಷನು ಬ್ರಹ್ಮಾಂಡವೆಲ್ಲವೂ ಉದ್ವೇಲಕಲ್ಲೋಲವಪ್ಪಂತೆ ಭಯಂ
ಕರವಾದ ರವವಂ ಮಾಡಲು ಪರಮೇಶ್ವರನು ಬಾರಯ್ಯಾ ಭೈರವ
ಎಂದು ಹೆಸರನ್ನಿಟ್ಟು ಕರೆದು ನೀನು ಪ್ರಳಯಕಾಲದ ಕಾಲನಂತೆ
ರಾಜಿಪ ಕಾರಣದಿಂ ಕಾಲರಾಜನು ನೀನು, ಸಕಲಮುಂ ಭಕ್ಷಿಸುವುದಕ್ಕೆ
ಸಮರ್ಥನಾದುದರಿಂ ಮಹಾ ಭೈರವನು, ನಿನ್ನ ಕಂಡರೆ ಕಾಲನುಂ
ಭಯಪಡುವ ಕಾರಣ ಕಾಲಭೈರವನು, ದುಷ್ಟರಂ ಮರ್ದಿಸುವನಾದ ಕಾರಣ
ಆಮರ್ದಕನು ಭಕ್ತರನ್ನು ರಕ್ಷಿಸಿ ಅವರ ಪಾಪಂಗಳಂ ಭಕ್ಷಿಸುವನಾದ
ಕಾರಣದಿಂ ಪಾಪಭಕ್ಷಕನೆಂದು ಹೆಸರ ಕೊಟ್ಟು ಮುಕ್ತಿಪ್ರದವಾದ
ಕಾಶೀಕ್ಷೇತ್ರವಂ ಪಾಲಿಸಿಕೊಂಡು ಕ್ಷೇತ್ರಪಾಲಕನೆಂದು ಪ್ರಸಿದ್ಧ
ನಾಗಿ ಆ ಕಾಶೀಕ್ಷೇತ್ರಕ್ಕೆ ಶ್ರೇಷ್ಠನಾಗಿ ಅರಸಾಗಿ ಆ ಕ್ಷೇತ್ರದಲ್ಲಿ
ಸ್ಥಿರ ಪುಣ್ಯಪಾಪಂಗಳಂ ಚಿತ್ರಗುಪ್ತರು ಬರೆಯಲು ನೀನು ಕ್ಷೇತ್ರ
ದಲ್ಲಿದ್ದು ಸಜ್ಜನರಂ ರಕ್ಷಿಸಿ ದುರ್ಜನರೆಂಬ ಪಾಪಿಗಳಂ ದಂಡಿಸು
ಎಂದು ವರಗಳಂ ಕೊಟ್ಟು ಮತ್ತಂತೆಂದನು. ಎಲೈ ಭೈರವ!
ನೀನು ಗರ್ವದಿಂ ಮತ್ತನಾದ ಬ್ರಹ್ಮನ ಶಿರಸ್ಸಂ ಛೇದಿಸು ಎಂದು
ನಿರೂಪಿಸಲು ಭೈರವನು ಶಿವನಾಜ್ಞೆಯಂ ಶಿರಸಾವಹಿಸಿ ಅವನು ಆವಂಗ
ದಲ್ಲಿ ತಪ್ಪುಮಾಡಲು ಆ ಅಂಗಕ್ಕೆ ಶಿಕ್ಷೆಯಂ ಮಾಡಬೇಕೆಂದು
ಬ್ರಹ್ಮನು ಈಶ್ವರನನ್ನು ಕೋಪದಿಂದ ನೋಡಿ ನುಡಿದ ಐದನೆ ಶಿರಸ್ಸ
ನ್ನು ತನ್ನ ವಾಮ ಹಸ್ತದ ಉಗುರುಕೊನೆಯಲ್ಲಿ ಛೇದಿಸಲು, ಅನಿತ

ರೊಳು ಯಜ್ಞಪುರುಷ ಮೊದಲಾದ ಸಪ್ತಋಷಿಗಳು ಆದಿ ಪರಮೇಶ್ವರಗೆ ನಮಸ್ಕಾರವಂ ಮಾಡಿದರು. ಬ್ರಹ್ಮನು ಮಹಾಭೀತನಾಗಿ ಶತರುದ್ರೀಯವಂ ಜಪಿಸಲು, ಅನಂತರದಲ್ಲಿ ದಯಾಳುವಾದ ಪರಮೇಶ್ವರನು ಆ ಸ್ತೋತ್ರಕ್ಕೆ ಮೆಚ್ಚಿ ಪ್ರೀತನಾಗಿ ತನ್ನ ಎರಡನೆ ಮೂರ್ತಿಯಾದ ಭೈರವಗಿಂತೆಂದನು. ಎಲೈ ಭೈರವನೇ! ನಿನಗೆ ಯಜ್ಞಪುರುಷನೂ ಬ್ರಹ್ಮನೂ ಪೂಜ್ಯರು, ಈ ಬ್ರಹ್ಮನ ಕಪಾಲವಂ ಧರಿಸುವುದ್ಯಾಕೆಂದರೆ :—ಲೋಕದಲ್ಲಿ ಬ್ರಹ್ಮಹತ್ಯವ ಮಾಡಿದ ಹಾಗೂ ಮಾಡದವರು ಈ ವ್ರತವಂ ಆಚರಿಸಿ ಮಾಡಲೆಂದು ತೋರಬೇಕಾಗಿ ನೀನು ಕಾಪಾಲಿಕ ವ್ರತದಿಂ ಭಿಕ್ಷಾಟನವಂ ಮಾಡು, ಎಂದು ಹೇಳಿ ಭೈರವನ ಸಂಗಡಲೆ ತಿರುಗುವದಕ್ಕಾಗಿ ಬ್ರಹ್ಮೇತಿ ಸ್ವರೂಪವಾದ ಒಬ್ಬ ಸ್ತ್ರೀಯನ್ನು ಸೃಜಿಸಿದನದೆಂತೆನೆ:—ರಕ್ತವಸ್ತ್ರಧಾರಿಣಿಯಾದ ರಕ್ತಗಂಧಾಕ್ಷತೆಯಂ ಧರಿಸಿದ, ಕೋರೆದಾಡೆಯಿಂ ಭಯಂಕರವಾಪ್ಪ ಮದದಿಂ ಜೋಲುವ ನಾಲಿಗೆಯಿಂ ಅಂತರಿಕ್ಷದಲ್ಲಿ ಒಂದು ಪಾದವು ಭೂಮಿಯಲ್ಲಿ ಒಂದು ಪಾದವು ಕೈಯಲ್ಲಿ ಕಪಾಲವಂ ಧರಿಸಿ ರಕ್ತಪಾನವಂ ಮಾಡುವಂಥಾ ಮಿಣುಗುಟ್ಟುವ ಬೆಕ್ಕಿನ ಕಂಣುಗಳ ಹೋಲುವ ಕಂಣಾಲಿಗಳಿಂದ ಕೆದರಿದ ಕೇಶಂಗಳಿಂದ ಅತಿ ಭಯಂಕರವಾದ ಒಬ್ಬಳು ಬ್ರಹ್ಮಹತ್ಯಾ ಸ್ತ್ರೀಯಂ ನಿರ್ಮಿಸಿ, ಆ ಶಕ್ತಿಯೊಡನಿಂತೆಂದನು. ಎಲೆ ಸ್ತ್ರೀಯೆ! ನೀನು ಕಾಲಭೈರವ ಎಲ್ಲಿಹೋದನೋ ಅಲ್ಲಿಯೇ ಬೆಂಬಿಡದೆ ಹೋಗು ಕಾಶೀಪಟ್ಟಣಕ್ಕೆ ಮಾತ್ರ ಹೋಗಬೇಡವೆಂದು ಕಟ್ಟು ಮಾಡಿ ಪರಮೇಶ್ವರನು ಅಂತರ್ಧಾನವಾಗಲು ಅನಂತರದಲ್ಲಿ ಕಾಲಭೈರವನು ಆ ಕಪಾಲವಂ ಧರಿಸಿ ಅಸ್ಥಿರುಂಡಮಾಲೆಗಳಂ ತೋಳಗಳಲ್ಲಿ ಧರಿಸಿ ದಿಗಂಬರನಾಗಿ ಭಯಂಕರವಾಪ್ಪ ಬ್ರಹ್ಮಹತ್ಯೆಯು ತನ್ನ ಸಂಗಡ ಬರಲು, ಕಪಾಲವ್ರತವೆಂಬ ವ್ರತವಂ ಕೈಕೊಂಡು ಭಿಕ್ಷಾಟನಕ್ಕಾಗಿ ಭೂಮಿಯಲ್ಲಿದ್ದ ಸಕಲ ಋಷಿಗಳ ಆಶ್ರಮಗಳಲ್ಲಿಯೂ ಸಕಲ ಪುಣ್ಯಕ್ಷೇತ್ರಗಳಲ್ಲಿಯೂ ಸಕಲ ನದೀನದ ಮೊದಲಾದ ಸಪ್ತದ್ವೀಪಂಗಳಲ್ಲಿಯೂ ಭಿಕ್ಷಾಟನವಂ ಮಾಡಿ ಅಷ್ಟರೊಳೆ ಇಂದ್ರಾಗ್ನಿ ಯಮನಿರೃತಿ

ಚಿತ್ತಾವಧಾರ್ಯ ಕುಬೇರ ಈಶಾನಾದ್ಯಷ್ಟ ದಿಕ್ಪಾಲಕರ ಪಟ್ಟಣಂ
ಗಳಂ ಪ್ರೋಕ್ಷ್ಯ ಭೂಲೋಕ ಭುವರ್ಲೋಕ ಸುವರ್ಲೋಕ ಮಹರ್ಲೋಕ
ಜನೋಲೋಕ ತಪೋಲೋಕ ಸತ್ಯಲೋಕ, ಅತಲ ವಿತಲ ಸುತಲ
ತಲಾತಲ ರಸಾತಲ ಪಾತಾಳವೆಂಬ ಲೋಕಂಗಳಂ ಪ್ರೋಕ್ಷ್ಯ ಭಿಕ್ಷಾಟನವಂ ಮಾಡಿ
ತೃಪ್ತಿಯಿಲ್ಲದೆ ಕಪಾಲ ಮೋಕ್ಷವಂ ಬ್ರಹ್ಮೇತಿ ಬಿಡುಗಡೆಯನ್ನು ಕಾಣದೇ
ವೈಕುಂಠಕ್ಕೆ ಪೋಗೆ ಅಲ್ಲಿ ಮಹಾ ವಿಷ್ಣುವಂ ಕಾಣಲು ಸಕಲ ದೇವತಾ
ಸಾರ್ವಭೌಮನಾದಂಥಾ ಈಶ್ವರರೂಪನಾದಂಥಾ ಮಹಾ ಭೈರವನು
ಬರುವುದಂ ಕಂಡು ಭಕ್ತಿಯಿಂ ನಮಸ್ಕಾರವಂ ಮಾಡಿ, ಸಿಂಹಾಸನದಲ್ಲಿ
ಕುಳ್ಳಿರಿಸಿ ತನ್ನ ಅರ್ಧಾಂಗಿಯಾದ ಮಹಾಲಕ್ಷ್ಮೀದೇವಿಯಂ ಕರೆದು
ಇಂತೆಂದನು. ಎಲೆ ದೇವಿಯೇ ಇಂದೀಗ ಪರಮಪುರುಷನಂ ನೋಡಿ
ಪಾದಕಮಲ ನಾವು ಧನ್ಯರಾದೆವು. ಈತನು ಲೋಕರಕ್ಷಕನು.
ಸೃಷ್ಟಿ ಸ್ಥಿತಿ ಸಂಹಾರಕರ್ತನು ಆದಿಮಧ್ಯಾಂತರಹಿತನು. ಶಾಂತ
ನು ಷಟ್ತ್ರಿಂಶತ್ತತ್ವಕ್ಕೆ ಪರನು, ಸರ್ವಜ್ಞನು, ಸಕಲ
ಯೋಗೀಶ್ವರನು, ಅಂತರ್ಯಾಮಿಯು ಸಕಲರಿಗೂ ಮುಕ್ತಿಪ್ರದಾಯ
ಕನು, ಅರೂಪಿಯು, ರೂಪವಂ ತಾಳಿದವನು, ತನ್ನ ಸ್ಮರಣೆಯಂ
ಮಾಡುವವರ್ಗೆ ತನ್ನ ನಿಜರೂಪವಂ ತೋರಿ ಪುನರ್ಜನ್ಮವಿಲ್ಲದಂತೆ
ಮುಕ್ತಿಯಂ ಕೊಡುವಂಥಾ ಈ ಸ್ವಾಮಿಯು ನಮಗೆ ಪ್ರಸನ್ನನಾದ
ನು. ನಿನ್ನ ನೇತ್ರಗಳಿಗೆ ಆನಂದವಾಯಿತು, ತಾವು ಮಾನ್ಯರಾದೆ
ವು ಎಂದು ಕೊಂಡಾಡಿ ಲಕ್ಷ್ಮೀದೇವಿಗೆ ತೋರಿಸಿ ಸಂತೋಷದಿಂದ
ಭೈರವನಂ ನೋಡಿ ವಿಷ್ಣು ಇಂತೆಂದನು. ಎಲೈ ದೇವದೇವನಾದ ಸರ್ವ
ಜ್ಞನಾದ ಸಕಲ ಪಾಪನಾಶಕನಾದಂಥಾ ನಿಮಗೆ ಇದೇನು ವಿಲಾಸ
ನಿಮ್ಮ ಸ್ಮರಣೆ ಮಾತ್ರದಿಂದ ಭಕ್ತರುಗಳಿಗೆ ರಾಜ್ಯಾಧಿಪತ್ಯವಂ
ಕೊಡುವಂಥಾ ನಿಮಗೆ ಈ ಭಿಕ್ಷಾಟನವ್ರತವ್ಯಾತಕ್ಕೆಂದು ವಿಷ್ಣು
ಕೇಳಲು ಭೈರವನು ನಗುತ್ತ ಇಂತೆಂದನು. ಎಲೈ ವಿಷ್ಣುವೆ ಕೇಳು
ನೀನು ಸರ್ವಜ್ಞನಾಗಿಯೂ ಅರಿಯದವನಂತೆ ಕೇಳುವದರಿಂದ ಹೇ
ಳುವೆ ಕೇಳು. ನಾನು ಬ್ರಹ್ಮನ ಶಿರವಂ ಛೇದಿಸಿದೆನು. ಆ ಬ್ರಹ್ಮ

ಹತ್ಯಾ ನಿವಾರಣಾರ್ಥಕ್ಕೋಸ್ಕರ ಪತಿವ್ರತೆಯರ ಕೈಯ್ಯ ಭಿಕ್ಷಾಟನವಂ ಮಾಡುತ್ತ ಇಥೇನೆಯೆಂದು ನುಡಿಯಲು ವಿಷ್ಣುವು ಕೇಳಿ ಮುಗುಳುನಗೆಯಂ ನಕ್ಕು ಭೈರವಗಿಂತೆಂದನು :—ನೀನು ಸಕಲಲೋಕನಾಯಕನು ನಿನ್ನ ಮನಸ್ಸಿಗೆ ಬಂದಂತೆ ಕ್ರೀಡಿಸು ನಿನ್ನ ಮಾಯೆಯಂ ತಾನು ಬಲ್ಲೆನು. ತನ್ನ ನಾಭೀಕಮಲದಲ್ಲಿ ಅನೇಕ ಬ್ರಹ್ಮರಂ ಸೃಜಿಸುವೆನು. ಅಂಥಾ ಬ್ರಹ್ಮಾಂಡವುಂ ಸಂಹಾರಕಾಲದಲ್ಲಿ ನೀನು ಕ್ಷಣಮಾತ್ರಕ್ಕೆ ಧರಿಸುವೆ. ಅಂಥಾ ನಿನಗೆ ಬ್ರಹ್ಮಹತ್ಯವೆಲ್ಲಿಯದು? ನೀನು ಪರಾಧೀನನಲ್ಲ. ಅಸಾಹಸಿಗಳಾದ ಬ್ರಹ್ಮರ ಶಿರಸ್ಸುಗಳ ರುಂಡಮಾಲೆ ನಿನ್ನ ಕಂಠಮಾಲೆಯಾಗಿ ಒಪ್ಪುತ್ತ ಇದ್ದೀತು. ಅನೇಕ ಪಾಪಂಗಳಂ ಮಾಡಿದವರು, ಬ್ರಹ್ಮಹತ್ಯಾದಿ ಪಂಚಮಹಾ ಪಾತಕವ ಮಾಡಿದವರು ನಿನ್ನ ಸ್ಮರಣೆಯಂ ಮಾಡಲು, ಸೂರ್ಯನು ಉದಯಿಸಲು ಅಂಧಕಾರವು ಪರಿಹಸ್ಪೋಪುವಂತೆ, ಅವರ ಸಕಲ ಪಾಪಂಗಳು ಪರಿಹರವಾಗುವವು. ಯೋಗಿಗಳಿಗೂ ಅಗಮ್ಯವಾದ ನಿಮ್ಮ ಸಾಕ್ಷಾತ್ಕಾರವಾದ ಪರಂಜ್ಯೋತಿಯೆಂದು ಕಂಡವರ್ಗೆ ಮೋಕ್ಷಂಗಳು ಸುಲಭವಹವು. ಅವರ ಪುಣ್ಯಕ್ಕೆ ಸರಿಯಿಲ್ಲ. ಹೀಗೆಂದು ನುಡಿದು ಲಕ್ಷ್ಮೀದೇವಿಯರ ಕೈಯ್ಯ ಮನೋಹರವೆಂಬ ಭಿಕ್ಷವನ್ನು ಬ್ರಹ್ಮಕಪಾಲ ಪಾತ್ರೆಯಲ್ಲಿ ಸಮರ್ಪಣೆಯಂ ಮಾಡಿಸಿ, ಭೈರವನಂ ಸಂತುಷ್ಟನಂ ಮಾಡಿ ಆ ಭೈರವನ ಸಂಗಡ ಬೆಂಬಿಡದೆ ಅತಿ ಭಯಂಕರವಾಗಿ ತಿರುಗುವಂಥಾ ಬ್ರಹ್ಮಹತ್ಯೆಯಂ ನೋಡಿ ವಿಷ್ಣುವಿಂತೆಂದನು :—ಎಲೈ ಬ್ರಹ್ಮಹತ್ಯೆಯೆ ನೀನು ಈ ಮಹಾದೇವನಂ ಬಿಟ್ಟು ಬಿಡು ಎಂದು ಹೇಳಲು, ಬ್ರಹ್ಮಹತ್ಯೆ ಇಂತೆಂದಳು ;—ಎಲೈ ಸ್ವಾಮಿ ನಾನು ದೇವದೇವನಂ ಸೇವಿಸಿಕೊಂಡು ಪವಿತ್ರಳಾಗುತ್ತ ಇಥೇನೆ, ತನಗೆ ಇಂಥಾ ಪುಣ್ಯವು ದೊರಕಿದುದು ಅಪೂರ್ವವಲ್ಲವೆ? ತಾನು ಬಿಡುವವಳಲ್ಲವೆಂದು ನುಡಿಯಲು. ಆ ವಾಕ್ಯವಂ ಕೇಳಿ ಕಾಲಭೈರವನು ವಿಷ್ಣುವಿಗಿಂತೆಂದನು ;—ಎಲೈ ಸರ್ವಜ್ಞನಾದಂಥಾ ವಿಷ್ಣುವೇ ತಾನನ್ನು ಭಿಕ್ಷಾಂತವುಂ ಪ್ರೋಕ್ಷದ ರಿಂದಾ ನಿನ್ನ ದರ್ಶನವು, ನಿನ್ನದೊಂದು ವಾಕ್ಯಾಮೃತ

ವಾಗಿ

ಪಾಪದಿಂದಾ ತಾನು ಸಕಲಲೋಕವನ್ನು ತಿರುಗಿದ ಬಳಿಕ ಪರಿಹಾರವಾ
ಯಿತು. ಅದ್ದರಿಂದಾ ತನಗೆ ಸಂತೋಷವಾಗುತ್ತಾ ಇದ್ದೀತು ನೀನು
ನನಗೂ ಸಕಲ ಸುರಾಸುರ ಬ್ರಹ್ಮ ಮೊದಲಾದವರಿಗೂ ಪೂಜ್ಯನು.
ನಿನಗೆ ಸಕಲಲೋಕಂಗಳಂ ಸಲಹುವಂಥಾ ಸಾಮರ್ಥ್ಯ ಉಂಟಾಗ
ಲೆಂದು ಹರಸಿ ವಿಷ್ಣುವಂ ಬೀಳ್ಕೊಂಡು ವೈಕುಂಠವಂ ಪೊರಮಟ್ಟು
ಬ್ರಹ್ಮಹತ್ಯೆ ಸಹಾ ಬ್ರಹ್ಮಾದಿ ಸಕಲ ಲೋಕಂಗಳಿಗೆ ವೆಗ್ಗಳವಾದ
ಕಾಶೀಪಟ್ಟಣಕ್ಕೆ ಬಂದನು. ಮತ್ತೊಂದುಕಡೆಯಲ್ಲಿ ಏಕಛತ್ರದಿಂ
ರಾಜ್ಯವಾಳುವ ಅಧಿಪತ್ಯಕ್ಕಿಂತಲೂ, ಕಾಶೀಕ್ಷೇತ್ರದಲ್ಲಿ ದಿಗಂಬರನಾ
ಗಿ ಭಿಕ್ಷಾಟನವಂ ಮಾಡುವುದೇ ಲೇಸು. ಆ ರಾಜ್ಯಾಧಿಪತಿಗೆ ಪುನ
ರ್ಜನ್ಮ ಉಂಟು. ಈ ಕಾಶಿಯಲ್ಲಿ ನಿರಾಧಿಪತ್ಯದಲ್ಲಿ ಇದ್ದವರ್ಗೆ
ಪುನರ್ಜನ್ಮವಿಲ್ಲ. ಬಲ್ಲವರು ವರ್ಷಾಶನವನಿತ್ತು ಕಾಶೀವಾಸವಂ
ಮಾಡಿಸಲು ಅವರು ಎಷ್ಟುದಿವಸವಿದ್ದಾರೋ ಅಷ್ಟುಸಾವಿರ ವರ್ಷ
ಸ್ವರ್ಗ ಸುಖ ಉಂಟು. ಕಾಶೀ ಕಾಶೀ ಕಾಶೀ ಎಂದು ಮೂರುಬಾರಿ
ಸ್ಮರಿಸಲು ಬ್ರಹ್ಮಹತ್ಯಾದಿ ಮಹಾ ಪಾತಕ ಪರಿಹರವು. ಅದರಿಂದಾ
ಭೈರವನು ಕಾಶಿಯಂ ಪೊಕ್ಕಮಾತ್ರದಲ್ಲಿಯೆ ಬ್ರಹ್ಮಹತ್ಯವು ಹಾಹಾ
ಎಂದು ಧ್ವನಿಗೈದು ಪಂಚಕ್ರೋಶದಿಂದೀಚೆಯೇ ಮಹಾ ಭಯದಿಂದ
ಪಾತಾಳವಂ ಪೊಕ್ಕಳು. ಆಗ ಭೈರವನ ಕೈಯ್ಯ ಕಪಾಲವು ಕಳ
ಚಿಬೀಳಲು ಭೈರವನು ಆನಂದದಿಂದ ನಾಟ್ಯವನಾಡಿದನು. ತಾನು
ಸಕಲಲೋಕಂಗಳನ್ನು ಸಂಚರಿಸುವಾಗ ಬೆಂಬಿಡದಂಥಾ ಬ್ರಹ್ಮಹತ್ಯವು
ಕಾಶಿಯಂ ಪೊಕ್ಕಮಾತ್ರದಲ್ಲಿಯೆ ಪರಿಹರವಾಯಿತಾದಕಾರಣ ಕಾಶಿಗೆ
ಸಮಾನವಾದ ಕ್ಷೇತ್ರವಿಲ್ಲವೆಂಬುದು ಸಿದ್ಧವಾದ್ದರಿಂದ ವಾರಣಾಸೀ,
ಕಾಶೀ, ಅವಿಮುಕ್ತಕ್ಷೇತ್ರ, ಆನಂದಕಾನನ, ರುದ್ರವಾಸ, ಮಹಾ ಶ್ಮಶಾ
ನವೆಂಬ ನಾಮಂಗಳಂ ಯಾವಜ್ಜೀವವೂ ಪಠಿಸುವರ್ಗೆ ಪುನರ್ಜನ್ಮ
ವಿಲ್ಲ. ಈ ಕಾಲಭೈರವನ ಉತ್ಪತ್ತಿಯಂ ಕೇಳಿದವರ್ಗೆ ನಾನಾಪಾ
ತಕಂಗಳು ಪರಿಹರ. ಕಪಾಲ ಮೋಚನವಾದ ಸ್ಥಳದಲ್ಲಿ ಒಂದು ತೀ
ರ್ಥವಾಯಿತು. ಆ ತೀರ್ಥಸ್ನಾನವಂ ಮಾಡಿ ದೇವ ಪಿತೃತರ್ಪಣವಂ

ಮಾಡಲು ಬ್ರಹ್ಮಹತ್ಯಾದಿ ಪಾಪಹರ, ಈ ದೇಹ ನಿತ್ಯವೆಂದು ತಿಳಿದು ಕಾಶೀವಾಸವಂ ಮಾಡಿದ ಜನಕ್ಕೆ ಅಂತ್ಯಕಾಲದಲ್ಲಿ ಈಶ್ವರನು ತಾರಕ ಬ್ರಹ್ಮೋಪದೇಶವಂ ಮಾಡಿ ತನ್ನ ಸ್ವರೂಪವನ್ನು ಕೊಡುವನು. ಇದು ಶಿವದ್ವೇಷಿಗಳಿಗೆ ಸುಲಭವಲ್ಲ. ಅನಿರ್ವಾಚ್ಯವಾದ ಆನಂದರೂಪವಾದ ಕಾಶೀಕ್ಷೇತ್ರವೆಲ್ಲಾ ಪರಮೇಶ್ವರನ ಸ್ವರೂಪವು ಅದರಿಂದ ಕಾಲಭೈರವನು ಕಾಶೀ ಮಹಿಮೆಯಂ ತಿಳಿದು ಅಲ್ಲಿಯೆ ವಾಸವಾಗಿ ನಿಂತನು. ಅಂಥಾ ಭೈರವನು ಕಾಶೀಕ್ಷೇತ್ರವ ಪಾಲಿಸುವನಾಗಿ ಕ್ಷೇತ್ರಪಾಲನೆನಿಸಿಕೊಂಡನು. ಭಕ್ತರ ಪಾಪಗಳ ಭಕ್ಷಿಸುವನಾದಕಾರಣ ಪಾಪಭಕ್ಷಕನು, ದುರ್ಜನರ ಮರ್ದಿಸುವನಾದಕಾರಣ ಅಮರ್ದಕನೆನಿಸಿಕೊಂಡನು. ಕಾಶೀವಾಸಿಗಳ ಕಾಲಭಯವಂ ಪರಿಹರಿಸುವದರಿಂದ ಕಾಲಭೈರವನೆನಿಸಿಕೊಂಡನು. ಶಿವಭಕ್ತರ್ಗೆ ಯಮಬಾಧೆ ಇಲ್ಲದಂತೆ ಮಾಡುವನಾದ್ದರಿಂದ ಭೈರವನು ಮಾರ್ಗಶಿರ ಶುದ್ಧ ಅಷ್ಟಮಿ, ಚತುರ್ದಶೀ ಆದಿವಾರ, ಅಂಗಾರಕವಾರ ಉಪವಾಸವ ಮಾಡಿ, ಕಪಾಲ ಮೋಕ್ಷತೀರ್ಥದಲ್ಲಿ ಸ್ನಾನವಂ ಮಾಡಿ ದೇವಋಷಿ ಪಿತೃತರ್ಪಣವಂ ಮಾಡಿ ಜಾಗರಣವಂ ಮಾಡಲು ಸಕಲ ಪಾಪಂಗಳು ಪರಿಹರವಾಗಿ ನಿರ್ವಿಘ್ನದಿಂ ಕಾಶಿಯ ವಾಸ ದೊರಕಿ ಈಶ್ವರಾನುಗ್ರಹವಾದ ತಾರಕಬ್ರಹ್ಮೋಪದೇಶದಿಂ ಮುಕ್ತನಹನು. ಈ ಭೈರವನ ಸನ್ನಿಧಿಯಲ್ಲಿ ಸಪ್ತಕೋಟಿ ಮಹಾ ಮಂತ್ರಗಳಂ ಜಪಿಸಲು ಆರು ತಿಂಗಳಿಗೆ ಸಿದ್ಧಿಯಹುದು. ಕಾಶಿಯಲ್ಲಿ ಅಷ್ಟಮಿ ಚತುರ್ದಶೀಯಲ್ಲಿ ಕಾಲಭೈರವನ ಪೂಜೆಯಂ ಮಾಡಿದವರ ಪಾತಕಂಗಳು ಕೃಷ್ಣಪಕ್ಷದ ಚಂದ್ರನಂತೆ ನಷ್ಟವಹವು. ಪೂಜೆಯಂ ಮಾಡಿದವನ ಪಾಪ ಪರಿಹರವಾಗಿ ಪುಣ್ಯವು ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿಯಹುದು. ಈ ಭೈರವನ ಉತ್ಪತ್ತಿಯಂ ಭಕ್ತಿಯಿಂ ಕೇಳಲು ಬ್ರಹ್ಮಹತ್ಯಾದಿ ಪಾಪಹರ. ಸೆರೆ ಸಂಕೋಲೆ ಮೊದಲಾದ ವಿಪತ್ತುಗಳು ಪರಿಹರವಹವು ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದರೆಂದು ವ್ಯಾಸರು ತನಗೆ ಬುದ್ಧಿಗಲಿಸಿದ ಅರ್ಥವಂ ಸೂತನು ಶೌನಕಾದಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ.

ಇಂತು ಶ್ರೀಮತ್ಸಮಸ್ತ ಭೂಮಂಡಲೇಶ್ವರ ಬಿರುದಾಂಕಿತರಾದ ಮಹಿಶೂರು ಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಕಾಲಭೈರವನ ಉತ್ಪತ್ತಿಯೆಂಬ ಮೂವತ್ತೊಂದನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ.

ಮೂವತ್ತೊಂದನೇ ಅಧ್ಯಾಯಂ ಸಂಪೂರ್ಣಂ.

ಶ್ರೀರಸ್ತು.

ಮೂವತ್ತೆರಡನೇ ಅಧ್ಯಾಯಂ.

ದಂಡಪಾಣಿಯ ಉತ್ಪತ್ತಿಯು.

ಅನಂತರದಲ್ಲಿ ಅಗಸ್ತ್ಯಂಗೆ ಕುಮಾರಸ್ವಾಮಿ ಇಂತೆಂದನು :— ಕೇಳೈ ಅಗಸ್ತ್ಯ, ಕಾಲಭೈರವನ ಉತ್ಪತ್ತಿಯಂ ಪೇಳ್ದೆನಲ್ಲವೆ, ಇನ್ನೂ ಬೇಕಾದ ಪ್ರಶ್ನೆಯಂ ಮಾಡು ಎನಲು ಕುಮಾರಸ್ವಾಮಿಗೆ ಅಗಸ್ತ್ಯನಿಂತೆಂದನು. ಎಲೈ ಕುಮಾರಸ್ವಾಮಿ, ದಂಡನಾಯಕನಾದಪರಿಹ್ಯಾಗೆ ಆತ ಅನ್ನದಾನಿಯೆಂತಾದನು, ಈತನಿಗೆ ಸಂಭ್ರಮವಿಭ್ರಮರೆಂಬ ಭೃತ್ಯರಂ ಕೊಟ್ಟವರಾರು, ಇವು ಎಲ್ಲವನ್ನು ವಿಸ್ತರವಾಗಿ ಬುದ್ಧಿಗಲಿಸಬೇಕೆನಲು ಕುಮಾರಸ್ವಾಮಿ ಇಂತೆಂದನು :—ಕೇಳೈ ಅಗಸ್ತ್ಯನೆ! ನೀನು ಕೇಳಿದ ಪ್ರಶ್ನೆ ಚನ್ನಾಯಿತು! ಪೂರ್ವದಲ್ಲಿ ಗಂಧಮಾದನ ಪರ್ವತದಲ್ಲಿ ರತ್ನಾಕರನೆಂಬೊಬ್ಬ ಯಕ್ಷನುಂಟು. ಆತನಿಗೆ ಪೂರ್ಣಭದ್ರನೆಂಬ ಕುಮಾರನುಂಟು. ಆ ರತ್ನಾಕರನೆಂಬ ಯಕ್ಷನು ಸಕಲಭೋಗಂಗಳನನುಭವಿಸಿ ಮಗನಿಗೆ ಪಟ್ಟವಂ ಕಟ್ಟಿ ತಾನು ಯೋಗಮಾರ್ಗದಲ್ಲಿ ದೇಹತ್ಯಾಗವಂ ಮಾಡಿ ಮುಕ್ತನಾದನು. ಈ ಪೂರ್ಣಭದ್ರನು ನಾನಾಭೋಗ ಸಾಧನಂಗಳನನುಭವಿಸಿ ಗೃಹಸ್ಥಾಶ್ರಮಕ್ಕೆ ಭೂಷ

ಣವಾದ ಪಿತೃಗಳಿಗೆ ಹಿತವಪ್ಪ ಸಂಸಾರ ತಾಪವಂ ಪರಿಹರಿಪ ಪುತ್ರಸಂತಾನವಿಲ್ಲದಿರಲು ಸಕಲೈಶ್ವರ್ಯ ಉತ್ಕೃಷ್ಟವಾಗಿಯೂ, ಬಾಲಕರಿಲ್ಲದ ಅರಮನೆಯಂ ನೋಡಿ ಚಿಂತಾಕ್ರಾಂತನಾಗಿ, ಕನಕಮಾಲಿನಿಯೆಂಬ ತನ್ನ ಪಟ್ಟದರಾಣಿಯಂ ನೋಡಿ ಇಂತೆಂದನು:—ಎಲೈ ಪ್ರಿಯಳೇ ನನ್ನ ಅರಮನೆಯು ದರ್ಪಣದ ಕಾಂತಿಯಂತೆ ಪ್ರಕಾಶವಾಗಿ ಮುತ್ತಿನ ಗವಾಕ್ಷ ಚಂದ್ರಕಾಂತದ ಸೋಪಾನ ಪದ್ಮರಾಗ ವಜ್ರ ವೈಡೂರ್ಯ ಪುಷ್ಯರಾಗ ಗೋಮೇಧಿಕ ಪಚ್ಚೆ ಪವಳ ನೀಲ ಮೌಕ್ತಿಕವೆಂಬ ನವರತ್ನಗಳಿಂ ಸ್ಥಾಪಿತಗಳಾದ ಶ್ರೇಣಿಗಳಿಂ, ಪವಳದ ಸ್ತಂಭಗಳಿಂ ಸ್ಫಟಿಕದ ಗೋಡೆಗಳಿಂ, ಸಂಚರಿಪ ಚಿತ್ರಧ್ವಜ ಪತಾಕೆಗಳಿಂ ರತ್ನದ ತೋರಣಗಳಿಂ ವಜ್ರಮಯ ಕವಾಟಗಳಿಂ, ಕೃಷ್ಣಾಗರು ಧೂಪವಾಸನೆಗಳಿಂ ಅನರ್ಘ್ಯವಾದ ಮಣಿಮಂಚಗಳಿಂ ಪಟ್ಟೆಯ ಮೇಲುಕಟ್ಟಿನಿಂದೆಸೆವ ರಮ್ಯವಾದ ರತಿಶಾಲೆಗಳಿಂ ಕಾಮಾಗಮನವಪ್ಪ ದಿವ್ಯ ಪುಷ್ಪಗಂಧ ಉತ್ತಮವಾದ ರಥ ಅಶ್ವ ಗಜಗಳಿಂ ಅಪರಿಮಿತ ಸೇನೆಗಳಿಂ ಅನೇಕ ವೀರಭಟರಿಂ ಊರ್ವಶೀಯರಿಗೆ ಮಿಗಿಲಾದ ಚಲುವಿನ ಸಹಸ್ರಸಂಖ್ಯಾತ ದಾಸೀಜನಗಳಿಂ, ನಂದನವನವ ಹೀನೈಸುವ ಉದ್ಯಾನವನಗಳಿಂ ರನ್ನದ ಕಿರುಘಂಟೆಗಳಿಂದ ನೃತ್ಯವಾಡುವ ನವಿಲುಗಳಿಂ, ಪೂದೋಟಗಳಲ್ಲಿ ಸಂಚರಿಪ ಭ್ರಮರಗಳಿಂ ಮಾಣಿಕ್ಯವರ್ಣದಿಂ ಥಳಥಳಿಪ ಮರ್ಕಟಗಳಿಂ, ದಾಳಿಂಬಬೀಜದಂತೊಪ್ಪುವ ನಾಸಿಕದ ಗಿಳಿಗಳಿಂ, ಮೌಕ್ತಿಕ ಥಾಳಗಳಂತೊಪ್ಪುವ ಪಾರಿವಾಳಗಳಿಂ ಚಮತ್ಕಾರವಾಗಿ ನುಡಿವ ಹೂರವಹಕ್ಕಿಗಳಿಂ ಇದಲ್ಲದೆ ಹಂಸೆ ಮೊದಲಾದ ಪಕ್ಷಿಗಳಿಂ ಧನಧಾನ್ಯ ಸಮಗ್ರವಾಗಿ ಲಕ್ಷ್ಮೀವಿಲಾಸ ಮಂಟಪದಿಂದೊಪ್ಪುವ ಅರಮನೆಯಂ ನೋಡಿ ತನಗೆ ಸಂತೋಷಕರವಾಗಲಿಲ್ಲ. ಆದಕಾರಣ ಸಂತಾನವಿಲ್ಲದವರ ಜನ್ಮವು ವ್ಯರ್ಥವೇ ಸರಿ. ಸಂತಾನವಹುದಕ್ಕೆ ನೀನು ಒಂದು ಉಪಾಯವಂ ಪೇಳೆನಲು, ಆ ಕನಕಮಾಲಿನಿ ಎಂಬ ಸ್ತ್ರೀಯು ಇಂತೆಂದಳು:—ಎಲೈ ಕಾಂತನೆ! ಸ್ತ್ರೀಯಾದವರು ಪತಿಯ ವಾಕ್ಯ ಹೊರತಾಗಿ ಪೇಳಲಾಗದು ಎಂಬುದಾಗಿ ಸುಮ್ಮನೆ

ಇಷ್ಟೆವು. ನೀನು ಚಿಜ್ಞಾನಿಯಲ್ಲವೆ ? ಯಾಕೆ ಚಿಂತೆ ಪಡುತ್ತಿದ್ದೀಯೆ ? ಸಂತಾನವಹುವಕ್ಕೆ ಒಂದು ಉಪಾಯವುಂಟು, ನಿಮ್ಮಂಥಾ ಶಿವಭಕ್ತರಾದವರಿಗೆ ದುರ್ಲಭವೇನಿದ್ದೀತು, ಪುರುಷಾರ್ಥವುಳ್ಳವರು ಸುಖದುಃಖಂಗಳಿಗೆ ದೈವವೇ ಕಾರಣವೆಂದು ದೈವವಂ ದೂರುವರು, ತಾವುಮಾಡಿದಸುಕೃತ ದುಷ್ಕೃತಂಗಳ ಅನುಭವವಲ್ಲದೆ ದೈವಕೊಡುವದೇನು, ಆದರೂ ಮನುಷ್ಯಜನ್ಮವಾದಕಾರಣ ಪುರುಷಪ್ರಯತ್ನದಿಂದ ಈಶ್ವರನ ಮರೆಹೊಗಲು ಈಶ್ವರನು, ಸಂತಾನವೊಂದೇ ಅಲ್ಲ ಸಂತಾನಸ್ತ್ರೀಯರು, ರತ್ನಭೂಷಣ, ಉಪ್ಪರಿಗೆ, ಆನೆಕುದುರೆಮೊದಲಾದ ನಾನಾಭೋಗಸ್ವರ್ಗಮೋಕ್ಷಗಳೆಲ್ಲವೂ ನಿಮ್ಮಮನೆಯ ಬಾಗಿಲಲ್ಲಿ ಕಾದುಯಿಹವು; ಈಶ್ವರನ ಭಕ್ತಿಯಿಂದಲೇ ವಿಷ್ಣುವೂ ಷಡ್ಗುಣೈಶ್ವರ್ಯಸಂಪನ್ನನಾಗಿ ಅಂತರಾತ್ಮನಾಗಿ ಚರಾಚರಕ್ಕೆ ಕರ್ತನಾದನು, ಹಾಗೆ ಬ್ರಹ್ಮನೂ ಸೃಷ್ಟಿಕರ್ತನಾದನು, ಇಂದ್ರಾದಿ ದಿಕ್ಪಾಲಕರು ದಿಕ್ಪಾಲಪದವನೈದಿದರು; ಶಿಲಾದನೆನಿಸಿಕೊಂಬುವನೊಬ್ಬನು ಮೃತ್ಯುವಂಗೆದ್ದು ಮಗನಂ ಪಡೆದನು, ಶ್ವೇತಕೇತುವೆಂಬ ರಾಯನು ಕಾಲಪಾಶವನತಿಳಿದು ಉತ್ತಮಪದವಿಯನೈದಿದನು ; ಉಪಮನ್ಯುವೆಂಬವನು ಕ್ಷೀರಸಾಗರವ ಪಡೆದನು, ಅಂಧಕಾಸುರನು ಭೃಕುಟಿಯೆಂಬ ಗಣಪತಿಯಾದನು, ದಧೀಚಿ ಎಂಬ ಋಷೀಶ್ವರನು ಯುದ್ಧದಲ್ಲಿ ವಿಷ್ಣುವ ಜಯಿಸಿದನು, ದಕ್ಷನು ನವಬ್ರಹ್ಮರಿಗಧಿಪತಿಯಾದನು, ಅದರಿಂದ ಈಶ್ವರಪೂಜೆಯಂಮಾಡಬೇಕು, ಈಶ್ವರಪೂಜೆಯಂಮಾಡದೆ ಆರಿಗೂ ಭಾಗ್ಯವಿಲ್ಲ ಎಂಬುದು ಸಿದ್ಧ, ನಮಗೆ ಸತ್ಪುತ್ರನಾಗಬೇಕಾದರೆ ಶಂಕರನಂ ಆರಾಧಿಸಿ ಶರಣುಹೋಗಿ ಎಂದು ತನ್ನ ಸತಿ ನುಡಿಯಲು, ಹಾಗೇಆಗಲೆಂದು ಪೂರ್ಣಭದ್ರನು ಅವಿಮುಕ್ತಕ್ಷೇತ್ರಕ್ಕೆಬಂದು, ಗೀತಗಳಿಂ ವಿಶ್ವನಾಥನಂ ಪಾಡಲು, ಪರಮೇಶ್ವರನಾದ ವಿಶ್ವೇಶ್ವರನು ಭಕ್ತಪ್ರಿಯನಾದ ಕಾರಣದಿಂದ ಪ್ರಸನ್ನನಾಗಿ ಎಲೈ ಯಕ್ಷನೇ ನೀನು ಮಾಡಿದ ಗೀತದಿಂದ ಸಂತುಷ್ಟನಾಗಿ ಪ್ರಸನ್ನನಾದೆನು ವರವಂಬೇಡಿಕೊ ಎನಲು ಪೂರ್ಣಭದ್ರನು ಪರಮೇಶ್ವರನಿಗೆ ನಮಸ್ಕಾರವಂಮಾಡಿ ನನಿಗೆ ಸಂತಾನವಂ

ಕೊಡಬೇಕೆನಲು ಹಾಗೇ ಆಗಲೀ ಎಂದು ವರವಂ ಕೊಟ್ಟು ಪರಮೇಶ್ವರನು ಅಂತರ್ಧಾನನಾಗಲು ಪೂರ್ಣಭದ್ರನು ತನ್ನ ಸ್ತ್ರೀಯಲ್ಲಿ ಶೀಘ್ರದಿಂದ ಸುಪುತ್ರನಂ ಪಡೆದನು; ಆ ಕುಮಾರಂಗೆ ಹರಿಕೇಶವ ಎಂಬ ನಾಮಕರಣಮಂ ಮಾಡಿ ಭೂರಿದಾನಂಗಳಿಂ ಭೂಸುರರಂ ಸಂತುಷ್ಟಿಯಂ ಮಾಡಿ ಪೂರ್ಣಭದ್ರನು ಸುಖದಲ್ಲಿ ಇರಲು, ಹರಿಕೇಶವನೆಂಬ ಕುಮಾರನು ಎಂಟು ವರ್ಷದವನಾಗಿ ಆದಿನಮೊದಲಾಗಿ ನಿತ್ಯವೂ ಈಶ್ವರನೇ ದೈವವೆಂದು ನೆನೆಯುತ್ತಾ ಇರುವನು, ಧೂಳುಗಳಲ್ಲಿ ಆಡುವಾಗ ಧೂಳಿನಲ್ಲಿ ಲಿಂಗವಂ ಮಾಡಿ ಹಸುರು ಹುಲ್ಲು ಮೊದಲಾದ ಪತ್ರೆಗಳಿಂ ಪೂಜಿಸಿ ನಮಸ್ಕಾರವಂ ಮಾಡುತ್ತಾ ಇರುವನು, ತನ್ನ ಸಂಗಡ ಆಡುವ ಮಕ್ಕಳನ್ನು, ಶಿವ, ಶಂಕರ, ಶಂಭು, ಸದಾಶಿವನೆಂದು ಕರೆವನು; ಆತನ ಕಿವಿಗಳು ಶಿವನಾಮಗಳಲ್ಲದೆ ಮತ್ತೊಂದನೂ ಕೇಳವು, ಕಾಲುಗಳು ಈಶ್ವರಾಲಯ ಹೊರತಾಗಿ ಮತ್ತೆಲ್ಲಿಯೂ ಪೋಗವು, ನೇತ್ರವು ತ್ರಿಣೇತ್ರನ ರೂಪಲ್ಲದೆ ಮತ್ತೊಂದು ಮೂರ್ತಿಯಂ ನೋಡವು, ಜಿಹ್ವೆಯು ಶಿವನಾಮಾಮೃತವಲ್ಲದೆ ಮತ್ತೊಂದು ಸವಿಯನರಿಯದು, ನಾಸಿಕವು ನಾಗಭೂಷಣನ ನಿರ್ಮಾಲ್ಯವಲ್ಲದೆ ಮತ್ತೊಂದನಾಘ್ರಾಣಿಸದು, ಕೈಗಳು ಕೈಲಾಸಪತಿಯನಲ್ಲದೆ ಅನ್ಯರ ಪೂಜೆಯನರಿಯದು, ಮನಸ್ಸು ಮಹೇಶ್ವರನ ಧ್ಯಾನವಲ್ಲದೆ ಅನ್ಯದೇವತೆಗೆ ಸಮರ್ಪಿಸನು, ಈ ಪ್ರಪಂಚವೆಲ್ಲವೂ ಈಶ್ವರಮಯವೆಂದು ಕಾಣುತ್ತಾ ಇರುವನು ನಿದ್ರೆಗೈವಾಗಲೂ ಈಶ್ವರನೇ ನೀನು ಎಲ್ಲಿ ಹೋಗುತ್ತಿದ್ದೀ ಎಂದು ಎಚ್ಚರಿತು ಏಳುವನು, ಹೀಗೆ ಮರುಳಿನಂತಿಹ ಕುಮಾರನಂ ನೋಡಿ ಪೂರ್ಣಭದ್ರನಿಂತೆಂದನು:- ಎಲೈ ಮಗನೆ ಮರುಳನಂತೆ ಆಡುತ್ತಾ ಇದ್ದೆ, ಆನೆ ಕುದುರೆ ರತ್ನಮಯವಾದ ರಥಗಳೂ ಅನರ್ಘ್ಯವಾದ ರತ್ನಗಳೂ ಚಿನ್ನ ಬೆಳ್ಳಿ ಪರಿಮಳದ್ರವ್ಯಗಳೂ ಇವು ಮೊದಲಾದ ಭಾಗ್ಯಂಗಳೆಲ್ಲ ನಿನ್ನವು ನಿನಗೆ ಬೇಕಾದ ವಸ್ತುಗಳಂ ಭೋಗಿಸು ಬಡವರ ಮಕ್ಕಳಂತೆ, ಧೂಳುಗಳೊಳಗೆ ಆಡುವದಂ ಬಿಡುವನಾಗು, ವೇದಶಾಸ್ತ್ರ ಧನುರ್ವಿದ್ಯಾಭ್ಯಾಸವಂ ಮಾಡು, ಸಕಲ ಭೋಗಂಗಳಂ ಅನುಭವಿಸಿ ಅಪರವಯಸ್ಸಿನಲ್ಲಿ ಭಕ್ತಿಯುಳ್ಳವ

ನಾಗಿ ಯೋಗಾರೂಢನಾಗಿ ಈಶ್ವರನಂ ಪೂಜಿಸೆಂದು ಬುದ್ಧಿಗಲಿಸಿದ ತಂದೆ ಯಂ ಕೋಪದಿಂ ನೋಡಿ ಆ ಹರಿಕೇಶವನು ತನ್ನ ಅರಮನೆಯಿಂ ಹೊರವಟ್ಟು ಕೆಲವು ದೂರ ಹೋಗಿ ಒಂದು ಮರದ ನೆಳಗೆ ಕುಳಿತು ಚಿಂತಿಸಿ, ತನ್ನೊಳಗೆ ತಾನು ಇಂತೆಂದನು:—ನಾನು ತಂದೆಯ ಬುದ್ಧಿಯಂ ಕೇಳದೆ ಹುಚ್ಚನಾಗಿ ಬಂದೆನು, ನಾನು ಎಲ್ಲಿ ಹೋಗಲಿ! ಎಲೈ ಪರಮೇಶ್ವರನೆ! ತಾನು ಏನನೂ ಅರಿತವನಲ್ಲವೆಂದು ಚಿಂತಿಸಿ ತನ್ನೊಳು ತಾನು ಇಂತೆಂದುಕೊಂಡನು—ತಾನು ಚಿಕ್ಕಂದು ತಮ್ಮ ತಂದೆಯ ತೊಡೆಯ ಮೇಲೆ ಕುಳಿತಿರಲಾಗಿ ಒಬ್ಬ ಶಿವಭಕ್ತನು ಬರಲು ತಮ್ಮ ತಂದೆಯು ಎಲೈ ಶಿವಭಕ್ತನೇ ಎಲ್ಲಿಂದ ಬಂದಿರಿ ಎತ್ತ ಪಯಣವೆಂದು ಕೇಳಲಾಗಿ ಆ ಶಿವಭಕ್ತನು ತಮ್ಮ ತಂದೆಯೊಡನೆ ಇಂತೆಂದನು, ತಾನು ಕಾಶೀಯಾತ್ರೆಗೆ ಹೋಗುತ್ತಿದ್ದೇನೆ ಎಂದು ಹೇಳಲಾಗಿ ಎಲೈ ಶಿವಭಕ್ತನೆ! ಏಕಾಕಿಯಾಗಿ ಬಂದು ಸೋಪಸ್ಕರವಿಲ್ಲದೆ ಹ್ಯಾಗೆ ಹೋದೀರಿ ಎನಲು, ಎಲೈ ಪೂರ್ಣಭದ್ರನೆ ಅನಾಥರಿಗೆ ಬಡವರಿಗೆ ತಂದೆತಾಯಿಯುಂ ತಿರಸ್ಕರಿಸಿದವರಿಗೆ ಬಂಧುಗಳಂತೊರದವರಿಗೆ ಪಾಪಿಗಳಿಗೆ, ಸಂಸಾರದಿಂ ಭಯಪಟ್ಟವರಿಗೆ, ವೇದಶಾಸ್ತ್ರವನರಿಯದವರಿಗೆ, ಆಚಾರಹೀನರಿಗೆ, ಲೋಕಭ್ರಷ್ಟರಿಗೆ, ಪತಿತರಾದವರಿಗೆ, ತಪದಾನಂಗಳಂ ಮಾಡದವರಿಗೆ ಬಂಧುಗಳಲ್ಲಿ ಧೊರೆಗಳಲ್ಲಿ ಮನ್ನಣೆಯಿಲ್ಲದವರಿಗೂ ಮಂದಮಾದವರಿಗೆಲ್ಲರಿಗೂ ಕರ್ಮಬೀಜಂಗಳನರುಹಿ ತಾರಕಬ್ರಹ್ಮೋಪದೇಶವನಿತ್ತು ಮೋಕ್ಷವಂ ಕೊಡುವ ಕಾಶೀಕ್ಷೇತ್ರವಂ ಪೊಕ್ಕು ಗಂಗೆಯಲ್ಲಿ ಸ್ನಾನವಂ ಮಾಡಿ ಆನಂದಕಾನನದಲ್ಲಿ ತಪಸ್ಸಂ ಮಾಡಲು ಗತಿಯುಂಟೆಂದು ಹೇಳ್ದನು; ಅದರಿಂದ ತಾನು ಇಲ್ಲಿ ಚಿಂತೆಬಡಲು ಕಾರಣವೇನು ವಿಶ್ವಪತಿಯ ಸ್ಥಾನವಾದ ಕಾಶೀಪಟ್ಟಣಕ್ಕೆ ಹೋಗೇನು ಎಂದು ಹರಿಕೇಶವನು ಮನಸ್ಸಿನ ದೃಢವ ಮಾಡಿಕೊಂಡು ಭಕ್ತಿಪೂರ್ವಕವಾಗಿ ಶೀಘ್ರದಿಂದ ಕಾಶೀಪಟ್ಟಣಕ್ಕೆ ಹೋಗಿ ಗಂಗೆಯಲ್ಲಿ ಸ್ನಾನವಂ ಮಾಡಿ ವಿಶ್ವಪತಿಯ ದರ್ಶನವಂ ಮಾಡಿ ಆನಂದಕಾನನದಲ್ಲಿ ನಿರಾಹಾರಿಯಾಗಿ ಪರಮೇಶ್ವರನಂ ಕುರಿತು ಉಗ್ರತಪಸ್ಸಂ ಅನೇಕಕಾಲ ಮಾಡುತ್ತಿರಲು, ಒಂದಾನೊಂದು ದಿನದಲ್ಲಿ ಪರಮೇಶ್ವರನು ಪಾರ್ವತೀದೇವಿ ಸಹಿತ ವೃಷಭಾರೂಢನಾಗಿ ದೇವಿಯು

ಷ್ಠೆಯಿಂ ನಿಜಕ್ಷೇತ್ರಮಾದ ಕಾಶಿಯ ಮಹಿಮೆಯಂ ಹೇಳುತ್ತಾ ಪಾರ್ವ
ತಿಯೊಡನೆ ಅಹೇ ಪ್ರಿಯೆ, ಮುಕ್ತಿ ಕ್ಷೇತ್ರವೆನಿಸಿದ ಈ ಕಾಶಿಯು ನನಗೆ ಪ್ರೀತಿಯಾದಂತೆ
ಬೇರೆ ಯಾವ ಕ್ಷೇತ್ರವೂ ನನಗೆ ಪ್ರಿಯವಲ್ಲ, ಇಲ್ಲಿ ಮೃತರಾದ
ವರಿಗೆ ಪುನರ್ಜನ್ಮವಿಲ್ಲ. ಈ ಕ್ಷೇತ್ರದಲ್ಲಿ ದೇಹತ್ಯಾಗಮಾಡಿದ
ವರಿಗೆ ಪುನರ್ಗರ್ಭವಾಸವಿಲ್ಲ. ಪ್ರಾಣಿಗಳಿಗೆ ಬ್ರಹ್ಮಜ್ಞಾನವಿಲ್ಲದೆ
ಮುಕ್ತಿ ಇಲ್ಲ. ಅಂಥಾ ಬ್ರಹ್ಮಜ್ಞಾನವಾದರೂ ಈ
ಕ್ಷೇತ್ರದಲ್ಲಿ ಮೃತರಾದವರಿಗೆ ಜ್ಞಾನ ಮೋಕ್ಷದಾಯಕವಾಗಿರು
ವುದು. ಈ ಕ್ಷೇತ್ರಕ್ಕೆ ಅಂಥಾ ಸಾಮರ್ಥ್ಯವಿರುವುದು. ಎಂದು. ಕಾಶಿ
ಯಲ್ಲಿ ಅನುಮಾನ ಪಟ್ಟವರಿಗೆ ಪಂಚಮಹಾಪಾತಕಂಗಳೂ ಬಿಡವು.
ಅವರ ಪಾಪಗಳಿಗೆ ಮಿತಿಯಿಲ್ಲ ಈ ಕ್ಷೇತ್ರದ ಮಹಿಮೆಯಂ ಕೊಂಡಾ
ಡುವರ ಪುಣ್ಯಕ್ಕೆ ಮಿತಿಯಿಲ್ಲ. ಇಲ್ಲಿ ವಾಸವಂ ಮಾಡಿದವರಿಗೆ ಜ್ಞಾನ
ಮಂ ಕೊಟ್ಟು ಅಂತ್ಯದಲ್ಲಿ ತಾರಕ ಬ್ರಹ್ಮೋಪದೇಶದಿಂ ಮುಕ್ತಿ
ಯಂ ಕೊಡುವೆನು. ಈ ಕ್ಷೇತ್ರ ಹೊರತಾಗಿ ಮಿಕ್ಕಾದ ಕ್ಷೇತ್ರದ
ಲ್ಲಿ ಮೋಕ್ಷವಿಲ್ಲ. ಆದರೂ ಈ ಕ್ಷೇತ್ರದಲ್ಲಿಯೇ ಮುಕ್ತಿ ಯಾದುದು. ಕಲಿ
ಯುಗದಲ್ಲಿ ಕಾಶೀವಾಸ, ಗಂಗಾಸ್ನಾನ, ವಿಶ್ವಪತಿಯ ಪೂಜೆಯಲ್ಲದೆ
ಅನ್ಯವಾದುದರಲ್ಲಿ ಮುಕ್ತಿ ಇಲ್ಲ. ಅಂತ್ಯದಲ್ಲಿ ಸಕಲಲೋಕ ಸಂಹಾರ
ವಾಗುವಾಗ ಈ ಕ್ಷೇತ್ರವು ತ್ರಿಶೂಲಾಗ್ರದಲ್ಲಿ ಧರಿಸಿ ರಕ್ಷಿಸುವೆನು
ಎಂದು ಆನಂದಕಾನನದ ಮಹಿಮೆಯಂ ಹೇಳುತ್ತಿರೆ ಮುಂದೆ ಬರಲು,
ಬಂದು ಅಶೋಕವೃಕ್ಷದ ಕೆಳಗೆ ಬಂದಿದ್ದ ನರರಂ ಬಿದ್ದವರಾಗಿ ರಕ್ತ
ಮಾಂಸವಿಲ್ಲದೇ ಶುಷ್ಕಪ್ರೇತಗಳಂತೆ ಅಸ್ಥಿರಾಶಿಯಾಗಿ, ಉಚ್ಛ್ವಾಸ
ನಿಶ್ವಾಸದಿಂ ಕೂಡಿದವರ್ಪಟ್ಟಂಥಾ ಸಿಂಹಾದಿ ಮೃಗಗಳಿಂ ರಕ್ಷಿಸಲ್ಪಟ್ಟ
ಉಗ್ರತಪಸ್ವಿಯಾದ ಮಾಕೇತನಂ ಕಂಡು ಪರಮೇಶ್ವರಂ ಪಾರ್ವತಿ
ಯೊಡನೆ ಎಲೈ ಸಾಧ್ವಿ! ಉಗ್ರತಪದಿಂ ರಕ್ತಮಾಂಸವಿಲ್ಲದಂತಾಗಿ
ಅಸ್ಥಿಮಾತ್ರ [illegible] ತಪಸ್ವಿಯು ಈ ವೃಕ್ಷದ
ನೆರಳಲ್ಲಿ ಕುಳಿತು ರಕ್ಷಿಸುತ್ತಿರಲು ಪರಮೇಶ್ವರನು ವೃಷಭನ ಕ್ರಿಯೆ
ದಿಂದ ಇಳಿದು ಶ್ರೀಪಾದವು ತ್ರಿಶೂಲವಂ ಕೊಡಲು ಹರಿ ಕೇಶವನ ಹತ್ತಿರ

ಕ್ಕೆ ಬಂದು ತನ್ನ ಅಮೃತಮಯ ಹಸ್ತದಿಂ ಆತನ ಶರೀರವಂ ಮುಟ್ಟಲು ಹರಿಕೇಶನು ದೃಢವಾದ ಶರೀರವುಳ್ಳವನಾಗಿ ಕಣ್ದೆರದು ಮುಂದಿರ್ದ ಕೋಟಿಸೂರ್ಯಪ್ರಕಾಶನಾದ ಪರಮೇಶ್ವರನಂ ಕಂಡು ಹರ್ಷದಿಂ ಗದ್ಗದ ಸ್ವರವುಳ್ಳವನಾಗಿ ಸ್ತುತಿಯಂಮಾಡಿದನೆಂತೆನೆ,—ಈಶ, ಶಂಭು, ಗಿರಿಜೇಶ, ಶಂಕರ, ತ್ರಿಶೂಲಪಾಣಿ, ಶಶಿಖಂಡಶೇಖರ, ಜಯಜಯವೆಂದು ಸ್ತುತಿಯಂ ಮಾಡಿ, ಸ್ವಾಮಿ ನಿಮ್ಮ ಹಸ್ತಸ್ಪರ್ಶದಿಂದಾ ದೃಢವಾದ ಶರೀರವುಳ್ಳವನಾದೆನು. ಎಲೈ ಯಕ್ಷನೆ ನೀನು ಮಾಡಿದ ಉಗ್ರತಪಸ್ಸಿಗೆ ಮೆಚ್ಚಿದೆನು! ನೀನು ಕಾಶೀಕ್ಷೇತ್ರಕ್ಕೆ ದಂಡಪಾಣಿಯೆಂಬ ಹೆಸರಿಂ ದುಷ್ಟನಿಗ್ರಹ, ಶಿಷ್ಟಪರಿಪಾಲನೆಯಂ ಮಾಡಿಕೊಂಡು, ನನಗೆ ಪ್ರಿಯಭಕ್ತನಾಗು, ಸಂಭ್ರಮ ವಿಭ್ರಮರೆಂಬ ಭೃತ್ಯರು ನಿನ್ನ ಓಲೈಸಿಕೊಂಡು ಬಂದಾರು ನೀನು ಕಾಶಿಯಲ್ಲಿ ಶರೀರವಂ ಬಿಡುವರ್ಗೆ ಕಂಠದಲ್ಲಿ ಕಪ್ಪು, ಹಣೆಯಲ್ಲಿ ಕಣ್ಣು, ಚರ್ಮದ ಉಡಿಗೆ, ಅರ್ಧನಾರೀತ್ವ ಕಪರ್ದವೆಂಬ ಶಿರೋವೇಷ್ಟ, ಚಂದ್ರಕಳೆ, ವೃಷಭವಾಹನ ಇವರಿಂದ ಅಲಂಕರಿಸಿ, ತನ್ನ ಕೈಯಿಂ ತಾರಕಬ್ರಹ್ಮೋಪದೇಶವಂ ಕೊಡಿಸಿ ಮೋಕ್ಷವಂ ಕೊಡಿಸುವವನು ನೀನು. ಈ ಕ್ಷೇತ್ರವಾಸಿಗಳಿಗೆ ಅನ್ನವನಿಕ್ಕು, ನಿನ್ನ ಪೂಜೆಯಂ ಮಾಡದವರಿಗೆ ಮೋಕ್ಷ ದೊರಕದೆ ಹೋಗಲೀ ನಿನಗೆ ಪೂರ್ಣಭದ್ರಕುಮಾರ, ದಂಡನಾಯಕ, ತ್ರ್ಯಕ್ಷ, ಯಕ್ಷ, ಹರಿಕೇಶವ, ಪಿಂಗಳ, ಎಂತೆಂಬ ಹೆಸರುಗಳುಳ್ಳವನಾಗಿ ಶ್ರೇಷ್ಠನಾಗಿರು. ಜ್ಞಾನವಾಪಿಯಲ್ಲಿ ಸ್ನಾನಾದಿ ಕ್ರಿಯೆಗಳಂ ಮಾಡಿ ನಿನ್ನ ಪೂಜೆಯಂ ಮಾಡಿದವರು ನನ್ನ ಭಕ್ತರಾಗಿ ಶ್ರೇಷ್ಠರಾಗಿ ಇಹರು. ನೀನು ನನ್ನ ಸಮೀಪದಲ್ಲಿ ದಕ್ಷಿಣಪಾರ್ಶ್ವದಲ್ಲಿ ಇರು ಎಂದು ವರಗಳನಿತ್ತು ಪರಮೇಶ್ವರನು ವೃಷಭವಾಹನನಾಗಿ ದೇವಿಯುತಸಹಿತ ಆನಂದಕಾನನಕ್ಕೆ ಪ್ರವೇಶ ಮಾಡಿದರು. ಕೇಳೈ ಅಗಸ್ತ್ಯ ನಾನು ದೂರದಲ್ಲಿರ್ದು ಕಾಶೀವಾಸಕ್ಕೋಸ್ಕರವಾಗಿ ಆ ದಂಡಪಾಣಿಯ ಪ್ರಾರ್ಥನೆಯಂ ಮಾಡುತ್ತಾ ಇದ್ದೇನೆ, ಅದೆಂತೆಂದರೆ,—ಶತ್ರುಭಯಾಂಗ, ಭೂತಪತಿ, ಪೂರ್ಣಭದ್ರಸುತೋತ್ತಮ, ತ್ರ್ಯಕ್ಷ, ಕಾಶೀನಿವಾಸಿ, ಕಾಶೀ

ವಾಸಿಗಳ ವಿಘ್ನವಂ ಪರಿಹರಿಪಂ ಮಹಾಬಲನೆ, ಯಕ್ಷಪತಿ, ಧೀರ, ಪಿಂಗಳಲೋಚನ, ಪಿಂಗಳಜಟಾಧಾರಿ, ದಂಡಪಾಣಿ, ಅವಿಮುಕ್ತಕ್ಷೇತ್ರಸೂತ್ರಧಾರಿ, ಉಗ್ರ, ಭಾಸುರ, ದಂಡನಾಯಕ, ಭೀಮ, ವಿಶ್ವೇಶಪ್ರಿಯ, ಭೀಷಣ, ಭಯಂಕರ, ಸೌಮ್ಯ, ಸೌಭಾಗ್ಯ, ಸೌಮ್ಯಕ್ಷೇತ್ರ, ವಿಘ್ನಕಾರಿಗಳಿಗೆ ಕಾಲಯಮ, ಯಕ್ಷೇಂದ್ರ, ಕಾಶೀವಾಸಿಜನ, ಮೋಕ್ಷಪ್ರದ, ಮಹಾರತ್ನಸ್ಫುರದ್ರಶ್ಮಿಕೆಯು, ಚಂದನಚರ್ಚಿತವಿಗ್ರಹ, ಮಹಾಸಂಭ್ರಾಂತ, ಶಾಂತ, ಮಹಾಭ್ರಾಂತಿಹರ, ವರಪ್ರದಾಯಕ ಪ್ರತ್ಯಕ್ಷಮಹಾಚತುರ, ಜ್ಞಾನನಿಧಿ, ಜ್ಞಾನಪ್ರದ, ಚರಮಕಾಲ ವಿಮೋಕ್ಷಣ, ವಿಚಕ್ಷಣ, ಇಂತೆಂದು ದಂಡಪಾಣಿಯ ಅಷ್ಟಕವನ್ನು ಕಾಶೀವಾಸಕೋಸ್ಕರ ಜಪಿಸುತ್ತಾ ಇದ್ದೇನೆ. ಈ ಸ್ತೋತ್ರವಂ ಪಠಿಸಿ ಈ ದಂಡಪಾಣಿಯ ಉತ್ಪತ್ತಿಯಂ ಕೇಳಲು ನಿರ್ವಿಘ್ನದಿಂದ ಕಾಶೀವಾಸವಾಗಿ ಮೋಕ್ಷವಹುದೆಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದರೆಂದು ವ್ಯಾಸರು ತನಗೆ ಬುದ್ಧಿಗಲಿಸಿದರೆಂದು ಸೂತಪೌರಾಣಿಕನು ಶೌನಕಾದಿ ಋಷಿಗಳಿಗೆ ಹೇಳಿದನೆಂಬಲ್ಲಿ ಅಧ್ಯಾಯಾರ್ಥ ॥

ಇಂತು ಶ್ರೀಮತ್ಸಮಸ್ತ ಭೂಮಂಡಲ ಮಂಡಲೇಶ್ವರಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜವಡೆಯರವರಿಂದ ಲೋಕೋಪಕಾರಾರ್ಥವಾಗಿ ಕರ್ಣಾಟಕ ಭಾಷೆಯಿಂದಾ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ, ದಂಡಪಾಣಿಯ ಉತ್ಪತ್ತಿಯಂ ಪೇಳ್ದ ಮೂವತ್ತೆರಡನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ.

ಮೂವತ್ತೆರಡನೇ ಅಧ್ಯಾಯ ಸಂಪೂರ್ಣ

ಶ್ರೀ ವಿಶ್ವೇಶ್ವರಾಯನಮಃ

ಮೂವತ್ತ್ಮೂರನೇ ಅಧ್ಯಾಯಂ.

ಅನಂತರದಲ್ಲಿ ಕುಮಾರಸ್ವಾಮಿಗೆ ಅಗಸ್ತ್ಯನಿಂತೆಂದನು :— ಎಲೈ ಕುಮಾರಸ್ವಾಮಿ ದೇವತೆಗಳು ಮೊದಲಾಗಿ ಈ ಜ್ಞಾನವಾಪೀ ತೀರ್ಥವಂ ಕೊಂಡಾಡುತ್ತಾ ಇಹರು ಈ ಜ್ಞಾನವಾಪೀತೀರ್ಥದ ಮಹಿಮೆಯಂ ಈ ತೀರ್ಥದ ಉತ್ಪತ್ತಿಯಂ ಎನಗೆ ನಿರೂಪಿಸಬೇಕೆನಲು ಅಗಸ್ತ್ಯಂಗೆ ಕುಮಾರಸ್ವಾಮಿ ಇಂತೆಂದನು ಕೇಳೈ ಅಗಸ್ತ್ಯ! ಮಹಾಪಾಪಹರವಪ್ಪ ಜ್ಞಾನವಾಪಿಯ ಉತ್ಪತ್ತಿಯಂ ಕೇಳು ಅನಾದಿಯಾದ ಬ್ರಹ್ಮಸೃಷ್ಟಿಯೊಳು ಬಂದಾನೊಂದು ಕೃತಯುಗದಲ್ಲಿ, ಸ್ವೇಚ್ಛಾವಿಹಾರದಿಂ ಸಂಚಾರವಂಮಾಡುವಂಥಾ ಈಶಾನದಿಕ್ಪಾಲಕನಾದ ರುದ್ರನು ಭೂಮಿಯಲ್ಲಿ ಮಳೆಗಳು ನದಿಗಳು ಇಲ್ಲದಮುನ್ನ ಕ್ಷೀರಸ್ವಾದೋದಕದಿ ಸಮುದ್ರಂಗಳಲ್ಲದೆ ಭೂಮಿಯಲ್ಲಿ ಉದಕಂಗಳಿಲ್ಲದೆ ಅಲ್ಲಲ್ಲಿ ಮನುಷ್ಯಸಂಚಾರಮಾಗುತ್ತಾ ಇರಲು, ಆ ಕಾಲಂಗಳಲ್ಲಿ ಈಶಾನದಿಕ್ಪಾಲಕರುದ್ರನು ಮೋಕ್ಷಲಕ್ಷ್ಮೀನಿವಾಸಸ್ಥಾನವಾದ ಮಹಾಶ್ಮಶಾನ ಶ್ರೀನಂಧಕಾನನಂಗಳೆಂಬ ಸಕಲಕರ್ಮಬೀಜಂಗಳಿಗೆ ಚೌಳುಭೂಮಿಯಾದ, ಪ್ರಾಣಿಗಳಿಗೆ ಜ್ಞಾನಪ್ರದವಾದ ಸಂಸಾರಸಾಗರವಂ ದಾಂಟುವರಿಗೆ ಹಡಗು, ಅಣಿಯಾದಂಥಾ ಸಂಸಾರದಲ್ಲಿ ತೊಳಲಿ ತೋಳಬಂದ ಪ್ರಾಣಿಗಳಿಗೆ ಬಳಲಿಕೆಯಂ ಪರಿಹರಿಪಚಪ್ಪರದಂತೊಪ್ಪುವ ಬಹುಜನ್ಮಂಗಳಲ್ಲಿ ಬಂದ ಕರ್ಮಪಾಶಂಗಳಿಗೆ ಕತ್ತರಿಯಾದಂಥಾ ಸಚ್ಚಿದಾನಂದ ಬ್ರಹ್ಮಕ್ಕೆ ಆಸ್ಪದವಾದನಿರಂತರಸುಖವನ್ನೀವ ಮೋಕ್ಷಸಾಧನವಪ್ಪ ಕಾಶೀಕ್ಷೇತ್ರಕ್ಕೆ ಬಂದು ಅಲ್ಲಿ ಬ್ರಹ್ಮವಿಷ್ಣುಗಳಿಗೆ ಪ್ರಸನ್ನವಾದ, ಜ್ಯೋತಿರ್ಮಯವಾದ ದೇವಋಷಿ ಸಿದ್ಧಾದಿಗಳಿಂ ಪೂಜಿಸಲ್ಪಡುವ ಗಂಧರ್ವರು ಗಾನವಂಮಾಡುತ್ತಾ ಇರಲು, ಚಾರಣರು ಸ್ತುತಿ ಗೆಯ್ಯುತ್ತಿರಲು,

ಅಮರಸ್ತ್ರೀಯರ್ಕಳು ನಾಟ್ಯವನಾಡಿ ಮಾಣಿಕ್ಯವೃಷ್ಟಿಗಳಂ ನಾಗ ಸ್ತ್ರೀಯರು ಆರತಿಯಂ ಬೆಳಗಲೂ ವಿದ್ಯಾಧರ ಕಿನ್ನರರು ಚಾಮರಗಳಂ ಬೀಸುತ್ತಾ ಶೋಭಿಸುವ ವಿಶ್ವನಾಥಮಹಾಲಿಂಗವಂ ಕಂಡು ಈಶಾನದಿಕ್ಪಾಲಕರುದ್ರನು ನಮಸ್ಕರಿಸಿ ಮಹಾಲಿಂಗಕ್ಕೆ ಅಭಿಷೇಕವಂ ಮಾಡಲಿಚ್ಛೈಸಿ ವಿಶ್ವನಾಥಸ್ವಾಮಿಯ ದಕ್ಷಿಣಭಾಗದಲ್ಲಿ ತನ್ನ ತ್ರಿಶೂಲದಿಂ ಭೂಮಿಯಂ ಕೆಳಗಣ ಉದಕ ಮೇಲಕ್ಕೆ ಬರ್ಪಂತೆ ನಡಿಯುಳ್ಳ ಆಕಳ ದೇಹದಂತೆ ಸುಖಸ್ಪರ್ಶನವುಳ್ಳ ಪಾಪಿಗಳ ಸುಕೃತವಾದ ಚಂಚಲವಾದ ತಾವರೆ ಮೊದಲಾದ ಪುಷ್ಪಂಗಳುಳ್ಳ ತಾಪತ್ರಯದ ಬಳಲಿಕೆಯಂ ಪರಿಹರಿಸ ಪಂಚಾಮೃತ ಸ್ನಾನಫಲವಂ ಕೊಡುವ, ವಿಶ್ವಾಸದಿಂ ಪಾನವಮಾಡಿದ ವರ ಹೃದಯದೊಳು ಮೂರು ಲಿಂಗವಾದಂಥಾ, ಅಜ್ಞಾನವೆಂಬ ಅಂಧ ಕಾರಕ್ಕೆ ಸೂರ್ಯನಂತಪ್ಪ ಜ್ಞಾನಪ್ರದನಾದ ಪರಮೇಶ್ವರಗೆ ದೇವಿಯಾ ಗಾಢಾಲಿಂಗನದಿಂದ ಆಗುವಂಥಾ ಸುಖವಂ ಕೊಡುವ ಇಂಥಾ ತೀರ್ಥವು ಆ ಭೂಮಿಯಲ್ಲಿ ಬರ್ಪುದಂ ಕಂಡು ಈಶಾನ ರುದ್ರನು ಸಾವಿರವೆಳ್ಳವುಳ್ಳ ಸುವರ್ಣ ಕಲಶಂಗಳಿಂ ಸಾವಿರವೇಳ್ ಅಭಿಷೇಕವಂ ಮಾಡಲು ವಿಶ್ವನಾಥನಾದ ಪರಮೇಶ್ವರನು ಪ್ರಸನ್ನನಾಗಿ ಈಶಾನರುದ್ರನಿಗಿಂತೆಂದನು— ಎಲೈ ಈಶಾನ! ನೀನುಮಾಡಿದ ಮಹಾಭಿಷೇಕದಿಂ ಸಂತೋಷಪಟ್ಟು ಪ್ರಸನ್ನನಾದೆನು, ವರವಂ ಬೇಡಿಕೊ ಎನಲು, ಆ ಈಶಾನನು ಎಲೈ ಸ್ವಾಮಿಯೆ! ಈ ತೀರ್ಥವು ನಿನ್ನ ಪೆಸರಿಂ ಪ್ರಸಿದ್ಧವಾಗಲೀ ಎನಲು, ಪರಮೇಶ್ವರನಿಂತೆಂದನು. ಕೇಳೈ! ಈಶಾನ ಈ ತೀರ್ಥವು ತ್ರೈಲೋಕ್ಯದಲ್ಲಿರ್ದ ತೀರ್ಥಂಗಳಿಗೆ ಹೆಗ್ಗಳವಾಗಿ ಶಿವಜ್ಞಾನ ತೀರ್ಥವೆನಿಸಿಕೊಳ್ಳಲೀ ತನ್ನ ಜ್ಞಾನಶಕ್ತಿಯೇ ಈ ಉದಕರೂಪವಾದಕಾರಣ ಈ ತೀರ್ಥವು ಜ್ಞಾನೋದಕವೆಂದು ಪ್ರಸಿದ್ಧವಾಗಲೀ, ಈ ತೀರ್ಥವಂ ಸ್ಪರ್ಶನವಮಾಡಲು ಪಾಪಹರ, ಶುದ್ಧಾಚಮನವಂ ಮಾಡಲು ಅಶ್ವಮೇಧ ರಾಜಸೂಯಯಾಗಫಲ, ಇಲ್ಲಿ ಶ್ರಾದ್ಧವಂ ಮಾಡಲು ಗಯಾಶ್ರಾದ್ಧ ವಂ ಮಾಡಿದ ಫಲಕ್ಕಿಂತಧಿಕವು, ಕೃಷ್ಣಪಕ್ಷದ ಅಷ್ಟಮಿ, ಗುರುಪುಷ್ಯ ಯೋಗ, ವ್ಯತೀಪಾತ ಇವರಲ್ಲಿ ಈ ತೀರ್ಥಸ್ನಾನ ತರ್ಪಣ ಶ್ರಾದ್ಧವಂ

ಮಾಡಲು ಕೋಟಿ ಯಾಗಫಲ, ಇಲ್ಲಿ ತಿಲತರ್ಪಣವಂ ಮಾಡಲು ಪುಷ್ಕರ ತೀರ್ಥದಲ್ಲಿ ಶ್ರಾದ್ಧವಂ ಮಾಡಿಸಫಲ, ಕುರುಕ್ಷೇತ್ರದಲ್ಲಿ, ಸೂರ್ಯಗ್ರಹಣದಲ್ಲಿ, ಬ್ರಹ್ಮಹತ್ಯಾಹರ ತೀರ್ಥದಲ್ಲಿ ಸ್ನಾನತರ್ಪಣ ಶ್ರಾದ್ಧವ ಮಾಡಿದಫಲ. ಈ ತೀರ್ಥದಲ್ಲಿ ಪ್ರತಿದಿನವೂ ಉಂಟು, ಅಷ್ಟಮೀ ಚತುರ್ದಶಿಗಳಲ್ಲಿ ಉಪವಾಸವಿದ್ದು ಮರುದಿನ ಮೂರುಕುಡಿಕೆ ಉದಕ ಪಾನವು ಮಾಡಲು ಹೃದಯದಲ್ಲಿ ಮೂರು ಲಿಂಗವಹವು. ಸೋಮವಾರ ಸ್ನಾನ ದಾನಾದಿಗಳಂಮಾಡಿ ವಿಶ್ವೇಶ್ವರನ ಪೂಜಿಸಲು ಕೃತಕೃತ್ಯರಹರು ಈ ತೀರ್ಥದಲ್ಲಿ ಸಂಧ್ಯಾವಂದನೆಯಂ ಮಾಡಲು ಯಾವಜ್ಜೀವವೂ ಸಂಧ್ಯಾವಂದನೆ ಲೋಪವಾದ ಪಾಪಹರ, ಮಹಾಜ್ಞಾನಿಯಹನು, ಇದು ಶಿವತೀರ್ಥ, ಜ್ಞಾನತೀರ್ಥ, ತಾರಕಬ್ರಹ್ಮತೀರ್ಥ, ಈ ತೀರ್ಥಸ್ನಾನದಿಂ ಶಾಕಿನಿ ಢಾಕಿನೀ ಭೂತಪ್ರೇತ ಪಿಶಾಚ ಕೂಶ್ಮಾಂಡ ಝೋಟಕ, ಕಾಲಕರ್ಣ, ಬಾಲಗ್ರಹ, ಅಪಸ್ಮಾರ, ವಿಷಭುಸ್ಫೋಟಕ, ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕ, ಇವೇ ಮೊದಲಾದ ಮಹಾಜ್ವರವೆಲ್ಲವೂ ಪರಿಹರವು. ಈ ತೀರ್ಥದಿಂ ಶಿವಲಿಂಗಕ್ಕೆ ರುದ್ರಾಭಿಷೇಕವಂ ಮಾಡೆ ಸಕಲ ಫಲವುಂಟು. ಎಂದು ಪರಮೇಶ್ವರನು ಪರಮನಿತ್ತು ಅಂತರ್ಧಾನವಾಗಲು ಈಶಾನರುದ್ರನು ಮಹಾಸಂತೋಷದಿಂ ಆ ತೀರ್ಥಸ್ನಾನವಂಮಾಡಿ ಸುಜ್ಞಾನಿಯಾಗಿ ಕೃತಕೃತ್ಯನಾದೆನು ಎಂದು ದಾನವಂಮಾಡಿ ತನ್ನ ಪಟ್ಟಣಕ್ಕೆ ಬಿಜಯಂಗೈದನು ಎಂದು ಕುಮಾರಸ್ವಾಮಿ ಆಗಸ್ತ್ಯಂಗಿಂತೆಂದನು:—ಕೇಳೈ ಅಗಸ್ತ್ಯ! ಈ ಜ್ಞಾನವಾಪಿ ತೀರ್ಥದ ಮಹಿಮೆಯಲ್ಲಿ ಒಂದು ಇತಿಹಾಸವುಂಟು ಆ ಕಥೆಯಂ ಪೇಳೇನು, ಈ ಕಾಶೀ ಪಟ್ಟಣದಲ್ಲಿ ಹರಿಸ್ವಾಮಿ ಎಂಬ ಒಬ್ಬ ಬ್ರಾಹ್ಮಣನುಂಟು ಆತಂಗೆ ಪ್ರೀತಿಮತಿ ಎಂಬ ಸ್ತ್ರೀಯುಂಟು ಆಕೆಯಲ್ಲಿ ಸುಶೀಲ ಎಂಬ ಕುಮಾರತಿಯಾದಳು ಆ ಕುಮಾರತಿಯು ಯೌವ್ವನರೂಪುರೇಖೆ ಸುಶೀಲ ವಿಲಾಸವಿಭ್ರಮಗಳಿಗೆ ಸಮಾನವಾದ ಸ್ತ್ರೀಯರು ಯಾರೂ ಇಲ್ಲ, ಆ ಸುಶೀಲೆ ಪ್ರತಿದಿನವೂ ಈ ಜ್ಞಾನವಾಪೀ ತೀರ್ಥದಲ್ಲಿ ಯೋ ಸ್ನಾನವಮಾಡಿ ವಿಶ್ವೇಶ್ವರನ ಪೂಜಿಸಿಕೊಂಡು ಸಂಮಾರ್ಜನ ಉಪ

ಲೇಪನ ರಂಗವಲ್ಲಿಗಳಂ ಸೇವೆಯಂ ಮಾಡಿಕೊಂಡು ಪರಪುರುಷರ ಮುಖವಂ ನೋಡದೆ ಪರರ ವಚನವಂ ಕೇಳದೆ ಸ್ವಾಮಿಯ ಸೇವೆಯಂ ಮಾಡುತ್ತಾ ಇರಲು, ಆ ಸ್ತ್ರೀಯ ಲಾವಣ್ಯದಿಂ ಮೋಹಿತನಾಗಿ ಒಬ್ಬ ವಿದ್ಯಾಧರನು ರಾತ್ರಿಯಲ್ಲಿ ಮರದು ನಿದ್ರೆಯಂ ಮಾಡುವಾಗ ಆ ಸುಶೀಲೆಯು ಎತ್ತಿಕೊಂಡು ಮಲಯಪರ್ವತಕ್ಕೆ ಹೋಗುತ್ತಿರಲು ಅನಿತರೊಳು ಮಾರ್ಗದಲ್ಲಿ ಕುಂಡಲಗಳಂ ಧರಿಸಿದ ಕೆಂತಕರ್ಣಗಳಿಂ, ರಕ್ತಮಂ ಸ್ರೋಲ್ವ ಕೆಂಗಣ್ಣು ಕೆಂಮೀಸೆ ಕೋರೆದಾಡೆಗಳಿಂ ಭಯಂಕರವಾದ ವಿದ್ಯುನ್ಮಾಲೀ ಎನಿಸಿಕೊಂಬುವ ರಾಕ್ಷಸನೊಬ್ಬನು ಬಂದು ಮಾರ್ಗವಂ ಅಡ್ಡಗಟ್ಟಿ ಎಲೈ ವಿದ್ಯಾಧರ ಬಹುಕಾಲಕ್ಕೆ ಸಿಕ್ಕಿದ ನಿಂನ ಇಂದು ಕೊಂದು ಈ ಸ್ತ್ರೀಯಂ ಕೊಂಡೊಯ್ವೆನೆಂಬ ವಾಕ್ಯವಂ ಕೇಳಿ ಆ ಸ್ತ್ರೀಯು ಹುಲಿಯ ಕಂಡ ಮೃಗದಂತೆ ನಡುಗುತ್ತಿರಲು, ಆ ವಿದ್ಯುನ್ಮಾಲೀ ಎಂಬ ರಾಕ್ಷಸನು ತನ್ನ ಶೂಲದಿಂ ವಿದ್ಯಾಧರನ ಇರಿಯಲು ಆ ವಿದ್ಯಾಧರನು ಆ ರಾಕ್ಷಸನ ಎದೆಯ ತನ್ನ ಮುಷ್ಟಿಯಿಂ ಪ್ರಹರಿಸಲು ಆ ಕ್ಷಣವೆ ಆ ರಾಕ್ಷಸನ ಮೂಗಿನಲ್ಲು ಬಾಯಿಯಲ್ಲು ರಕ್ತವಂ ಕಾರಿ ವಜ್ರಹತಿಯಿಂ ನೊಂದ ಪರ್ವತದಂತೆ ಭೂಮಿಯ ಮೇಲೆ ಬಿದ್ದು ಪ್ರಾಣವಂ ಬಿಟ್ಟು ಜ್ಞಾನ ತೀರ್ಥೋದಕ ಪಾನದಿಂ ಹೃದಯದಲ್ಲಿ ಮೂರು ಲಿಂಗವುಳ್ಳ ಸುಶೀಲೆಯ ಸಂದರ್ಶನದಿಂದ ಅವನ ಪಾಪ ಪರಿಹಾರವಾಗಿ ದಿವ್ಯ ವಿಮಾನವನೇರಿ ಸ್ವರ್ಗವನೈದಿದನು. ಆ ವಿದ್ಯಾಧರನು ರಾಕ್ಷಸನ ಶೂಲದ ಘಾಯದಿಂದ ನೊಂದು ಆ ಸ್ತ್ರೀಯನು ಕರದು ಎಲೆ ಪ್ರಿಯಳೇ! ಅಮೃತವಂ ತಂದು ಘಾಯವಂ ಗುಣಮಾಡಿಕೊಂಡೇನೆಂದು ಅರ್ಧ ನುಡಿಯ ನುಡಿಯುತ್ತಾ ಪ್ರಾಣವಂ ತ್ಯಜಿಸಿ ಈ ಸುಶೀಲೆಯ ಸ್ಪರ್ಶನ ಪುಣ್ಯದಿಂದ ಮಲಯಕೇತುವೆಂಬ ರಾಯನ ಗರ್ಭದಲ್ಲಿ ಮಾಲ್ಯಕೇತುವೆಂಬ ಕುಮಾರನಾಗಿ ಪುಟ್ಟಿದನು. ಈ ಸುಶೀಲೆಯು ಆ ವಿದ್ಯಾಧರನಿಂದ ಸುಖವನನುಭವಿಸಿದವಳಲ್ಲ. ಅದರೂ ತನ್ನಿಂದ ಇವನು ಮೃತಿಯೈದಿದನು ಎಂದು ಆ ವಿದ್ಯಾಧರನ ಮೇಲಣ ಸ್ಮರಣೆಯೆಂಬ ದುಃಖಾಗ್ನಿಯಿಂದ ಶರೀರವಂ ಬಿಟ್ಟು ಕರ್ಣಾಟಕರಾಯನ ಗರ್ಭದಲ್ಲಿ ಕಳಾವ

ಶಿವಶರ್ಮ ಹೆಸರುಳ್ಳ ಕುಮಾರಿಯಾಗಿ ಹುಟ್ಟಿದಳು. ಆ ಮಾಲ್ಯಕೇತು ರಾಜನು ಈ ಕಳಾವತಿಯೆಂಬ ಸ್ತ್ರೀಯನ್ನು ಮದುವೆಯಾಗಿ ಸುಖದಿಂದ ರಾಜ್ಯವಾಳುತ್ತಾ ಇರಲು, ಈ ಕಳಾವತಿಯೆಂಬ ಸ್ತ್ರೀಯು ಪೂರ್ವ ಜನ್ಮ ವಾಸನೆಯಿಂದಾ ಶಿವಪೂಜೆಯಂ ಮಾಡುತ್ತಾ ರತ್ನಭೂಷಣಾದಿಗಳಂ ಬಿಟ್ಟು ವಿಭೂತಿ ರುದ್ರಾಕ್ಷಿಗಳಲ್ಲಿ ಪ್ರಿಯವುಳ್ಳವಳಾಗಿ ಧರಿಸಿ ಇಹಳು. ಹೀಗೆ ಇಹ ಸಮಯದೊಳಾ ಕಳಾವತಿಯಲ್ಲಿ, ಮಾಲ್ಯಕೇತು ರಾಯನು ಮೂವರು ಮಕ್ಕಳಂ ಪಡೆದನು. ಆ ಕುಮಾರರಿಗೆ ಜಾತಕರ್ಮ ನಾಮಕರಣಗಳಂ ಮಾಡಿಸಿ ಅವರಿಗೆ ಸಮಸ್ತ ವಿದ್ಯಾಭ್ಯಾಸಮಂ ಮಾಡಿಸಿ ಸುಖದಲ್ಲಿಹ ಸಮಯದಲ್ಲಿ ಉತ್ತರದೇಶದಿಂದಾ ಒಬ್ಬ ಬ್ರಾಹ್ಮಣನು ಕಾಶೀಮಹಿಮೆಯುಂ ಬರದ ಪತ್ರಮಂ ತಂದು ಮಾಲ್ಯಕೇತುರಾಯಂಗೆ ಕೊಡಲು, ಆ ಪತ್ರಮಂ ತನ್ನ ಪ್ರಿಯಸತಿಯಾದ ಕಳಾವತಿಗೆ ಕೊಡಲು ಆ ಕಳಾವತಿಯು ಪತ್ರವ ನೋಡಿ. ಜಾತಿಸ್ಮರತ್ವ ಪುಟ್ಟಲ್ಲಿರ್ದ ತನ್ನ ಪ್ರಾಣಲಿಂಗವಾದ, ಜ್ಯೋತಿರ್ಮಯವಾದ ವಿಶ್ವನಾಥ ಮಹಾ ಲಿಂಗವಮಂ ಕಂಡು, ರೋಮಾಂಚಿತೆಯಾಗಿ ಧ್ಯಾನದಲ್ಲಿರ್ದ ಯೋಗಿನಿಯಂತೆ, ಮೈಮರೆದು ಕಣ್ದೆರೆದು, ತನ್ನ ತರ್ಜನೀ ಬೆರಳಿನಿಂದಾ ತನ್ನೊಳ್ ತಾನು ನೋಡಿಕೊಂಡು ಇಂತೆಂದಳು. ಇದು ತ್ರೈಲೋಕ್ಯ ಸಮಾನವಾದ ಅಸಿಗಂಗಾಸಂಗವು, ಇದು ಆದಿಕೇಶವನ ಸನ್ನಿಧಾನವಾದ ವರಣಾನದೀ, ಇದು ಉತ್ತರವಾಹಿನಿಯಾದ ಗಂಗಾಭವಾನಿ, ಇದು ಮಣಿಕರ್ಣಿಕಾ ತೀರ್ಥ, ಈ ತೀರ್ಥದಲ್ಲಿ ಮರಣವೆ ಮಂಗಳ. ಇಲ್ಲಿರ್ದ ಜನಕ್ಕೆ ಸ್ವರ್ಗವು ತೃಣೀಕೃತ, ವಿವೇಕಿಯಾದವರು ತಾವು ಗಳಿಸಿದ ದ್ರವ್ಯಂಗಳಂ ಈ ತೀರ್ಥದಲ್ಲಿ ವೆಚ್ಚಿಸಿ ಯತಿಗಳಂತೆ ಪ್ರಾಣಗಳಂ ತ್ಯಜಿಸುವರು. ಈ ಮಣಿಕರ್ಣಿಕಾತೀರದಲ್ಲಿ ಮೃತರಾದವರನ್ನು, ಪರಮೇಶ್ವರನು ಅರಸಿ ತನ್ನ ಕಿರೀಟದಲ್ಲಿ ಬಾಲಚಂದ್ರನಂ ಅಲಂಕರಿಸಿ ಮುಕ್ತಿಮಾರ್ಗವಂ ತೋರಿ, ಅಪಾರ ಸಂಸಾರವಮಂ ಪರಿಹರಿಸನೂ. ಇಲ್ಲಿ ಮೃತವಾದವರು, ಈ ಮಣಿಕರ್ಣಿಕಾತೀರದ ಜನರು ಪರಮೇಶ್ವರನಿಂದಾ ತಾರಕಬ್ರಹ್ಮೋಪದೇಶಮಂ ಸಂಸಾರದ

ಕಳೆದು ಮಾರ್ಗವಂ ಪರಿಹರಿಸಿ ಮುಕ್ತಿಯಂ ಪಡೆಯುವರು. ಈ ಮಣಿಕರ್ಣಿಕೆಯು ಬಲುಮೋಹಂಗಳುಮನಂ ತೃಣೀಕರಿಸುವರು. ಹರಿಶ್ಚಂದ್ರಮಹಾರಾಜನು ತನ್ನಂತಾನೇ ಮಾರಿಕೊಂಡ ಸ್ಥಳವಿದು. ವೈಕುಂಠವಾಸಿಗಳು ಈ ಮೊಳಲತಿಟ್ಟುಗಳಲ್ಲಿ ಶಯನವಂ ಬಯಸುವರು, ಸತ್ಯಲೋಕವಾಸಿಗಳು ಇಲ್ಲಿ ಮರಣವಂ ಬಯಸುವರು, ಕಾಲಭೈರವನು ಇಲ್ಲಿ ವಾಸಿಗಳ ಬಾಧಿಸುವ ಕಾಲಸ್ತಂಭವಿದು, ಇದು ಕಪಾಲಮೋಚನತೀರ್ಥ, ಇದು ಋಣವಿಮೋಚನತೀರ್ಥ, ಈತನು ಓಂಕಾರೇಶ್ವರನು, ಇದು ಮತ್ಸ್ಯೋದರೀತೀರ್ಥ, ಈತನು ತ್ರಿಲೋಚನೇಶ್ವರನು, ಈತ ಕಾಮೇಶ್ವರನು, ಈತ ಸ್ವಯಂಜ್ಯೋತೀಶ್ವರನು, ಈತ ವೀರೇಶ್ವರನು, ಇದು ವಿಶ್ವೇಶ್ವರನ ಉಪ್ಪರಿಗೆ, ಈತ ಸ್ಕಂದೇಶ್ವರನು, ಈಕೆ ಕಾಶೀದೇವಿ, ಈತ ಪಾರ್ವತೀಶ್ವರನು, ಈತ ಭೃಂಗೀಶ್ವರನು, ಈತ ಚತುರ್ವೇದೇಶ್ವರನು, ಈತ ಯಜ್ಞೇಶ್ವರನು, ಈತ ಪುರಾಣೇಶ್ವರನು, ಈತ ಧರ್ಮಶಾಸ್ತ್ರೇಶ್ವರನು, ಈತ ಸರಸ್ವತೀಶ್ವರನು, ಈತ ಸರ್ವತೀರ್ಥೇಶ್ವರನು, ಈತ ಶೈಲೇಶ್ವರನು, ಈತ ಸಪ್ತಸಾಗರೇಶ್ವರನು, ಈತ ಮಂತ್ರೇಶ್ವರನು, ಈತ ತ್ರಿಪುರೇಶ್ವರನು, ಈತ ಪ್ರಹ್ಲಾದೇಶ್ವರನು, ಈತ ವೈರೋಚನೇಶ್ವರನು, ಈತ ಬಲೀಶ್ವರನು, ಈತ ಬಾಣೇಶ್ವರನು, ಈತ ಆದಿಕೇಶವೇಶ್ವರನು, ಈತ ದತ್ತಾತ್ರೇಯೇಶ್ವರನು, ಈತ ಆದಿಗದಾಧರನು, ಈತ ಕೂರ್ಮೇಶ್ವರನು, ಈತ ಮತ್ಸ್ಯೇಶ್ವರನು, ಈತ ವರಾಹೇಶ್ವರನು, ಈತ ನಾರಸಿಂಹೇಶ್ವರನು, ಈತನು ವಾಮನೇಶ್ವರನು ಈತನು ಭಾರ್ಗವರಾಮೇಶ್ವರನು, ಈತ ದಶರಥರಾಮೇಶ್ವರನು, ಇವರು ನರನಾರಾಯಣೇಶ್ವರರು, ಈತ ಯಜ್ಞವಾರಾಹಮೂರ್ತಿ, ಈತ ಹಿರಣ್ಯಕವಿದಾರಣನರಸಿಂಹನು, ಈತ ಭಾರ್ಗವನು, ಇವರು ಗೋಪೀಗೋವಿಂದರು, ಇದು ಲಕ್ಷ್ಮೀನರಸಿಂಹನ ರತ್ನಮಯ ಉಪ್ಪರಿಗೆ, ಈತ ಶಿವವಿನಾಯಕನು, ಈತ ಕೇಶವಮಾಧವನು, ಈತ ಬಿಂದುಮಾಧವನು, ಈತ ಹರಿಶಂಕರೇಶ್ವರನು, ಇದು ಗಂಗಾಸಂಗಮವಾದ ಸರಸ್ವತೀತೀರ್ಥ, ಈ ಬಿಂದುಮಾ

ಧವಗೆ ನಮಸ್ಕರಿಸಲುಪುನರ್ಜನ್ಮವಿಲ್ಲ, ಆಧಿವ್ಯಾಧಿಹರ, ಅವರನು ಯಮನು ತಡಹಲಂಜುವನು, ನಾದಬಿಂದುಗಳೊಡಗೂಡಿ ಪ್ರಣವವೇ ರೂಪಾದ ಪರಬ್ರಹ್ಮವೇ ಈ ಬಿಂದುಮಾಧವನಾದಕಾರಣ ಈತನಂ ಭಕ್ತಿಯಿಂ ಪೂಜಿಸಲು ಮುಕ್ತರಹರೂ, ಇದು ಪಂಚಬ್ರಹ್ಮಸ್ವರೂಪವಾದ ಪಂಚನದ ತೀರ್ಥ, ಈಕೆ ಮಂಗಳಗೌರಿ, ಈತನು ಮಯೂಖಾದಿತ್ಯನು, ಈತ ಗಭಸ್ತೀಶ್ವರನು, ಈತ ಕಿರಣೇಶ್ವರನು, ಈತ ಚಂದ್ರೇಶ್ವರನು, ಈತ ಮಂಗಳೇಶ್ವರನು, ಈತ ಬುಧೇಶ್ವರನು, ಈತ ಬೃಹಸ್ಪತೀಶ್ವರನು, ಈತ ಶುಕ್ರೇಶ್ವರನು, ಈತ ಶನೈಶ್ಚರೇಶ್ವರನು, ಈತ ಧೂತಪಾಪೇಶ್ವರನು, ಈತ ಗೀರ್ವಾಣನರಸಿಂಹನು, ಈತ ನಾಗೇಶ್ವರನು, ಈತನು ಕಪಿಲೇಶ್ವರನು, ಈತನು ಪ್ರಿಯವ್ರತೇಶ್ವರನು, ಈ ಮಣಿಮಯವಾದ ಪೀಠದಲ್ಲಿ ತೋರುವಾತ ಕಾಲಭೈರವನು, ಈತ ಗಂಗೇಶ್ವರನು, ಈತ ರತ್ನೇಶ್ವರನು, ಇದು ಕೃತ್ತಿವಾಸೇಶ್ವರನ ಉಪ್ಪರಿಗೆ, ಈ ಕಾಶೀ ಎಂಬ ಪುರುಷನಿಗೆ ಕೃತ್ತಿವಾಸೇಶ್ವರನೆ ಶಿರಸ್ಸು, ಓಂಕಾರೇಶ್ವರನೇ ಶಿಖೆ, ತ್ರಿಲೋಚನೇಶ್ವರನೇ ನೇತ್ರಗಳು, ಗೋಕರ್ಣಭಾರ ಭೂತೇಶ್ವರರು ಕರ್ಣಗಳು, ವಿಶ್ವೇಶ್ವರ ಅವಿಮುಕ್ತೇಶ್ವರರು ದಕ್ಷಿಣ ಉತ್ತರ ಹಸ್ತಗಳು, ಧರ್ಮೇಶ್ವರನು ಮಣಿಕರ್ಣಿಕೇಶ್ವರರು ವಾಮ ಹಸ್ತಗಳು, ಕಾಮೇಶ್ವರ ಕಪರ್ದೀಶ್ವರರು ಪಾದಗಳು, ಜ್ಯೇಷ್ಠೇಶ್ವರಪೂರ್ವಾರು, ಮದ್ಯೇಶ್ವರನು ನಾಭಿ. ಮಹಾದೇವನು ಕಪರ್ದೀಶ್ವರನು ಶ್ರುತೀಶ್ವರನು ಶಿರೋಮಾಣಿಕ್ಯ, ಚಂಡೀಶ್ವರನುಹೃದಯ, ವಿಶ್ವೇಶ್ವರನು ಆತ್ಮಸ್ವರೂಪ, ಕೇತಾರೇಶ್ವರನು ಪ್ರಜಾಪತಿ, ಶುಕ್ರೇಶ್ವರನು ಶುಕ್ಲ, ಮಿಕ್ಕಾದ ಲಿಂಗಗಳು ನಖರೋಮಂಗಳು, ಈಕೆ ದುರ್ಗಾದೇವಿ, ಈಕೆ ಚಿತ್ರಘಂಟೆ, ಇದು ಘಂಟಾಕರ್ಣತೀರ್ಥ, ಈಕೆ ಲಲಿತಾಗೌರಿ, ಈಕೆ ವಿಶಾಲಾಕ್ಷಿ, ಈತನು ಆಶಾವಿನಾಯಕನು, ಇದು ಧರ್ಮಕೂಪ, ಈಕೆ ವಿಶ್ವಭುಜಾದೇವಿ, ಈಕೆ ಬಂದೀಯೆಂಬ ಶಕ್ತಿ, ಇದು ದಶಾಶ್ವಮೇಧತೀರ್ಥ, ಇದು ಪ್ರಯಾಗತೀರ್ಥ, ಇದು ಅಶೋಕತೀರ್ಥ, ಈತನು

ಗಂಗಾ ಕೇಶವನು, ಇದು ಮೋಕ್ಷದ್ವಾರ, ಇದು ಸ್ವರ್ಗದ್ವಾರವು ಎಂದು ಕಳಾವತಿಯು ಚಿತ್ರಪಟದಲ್ಲಿ ಸಖಿಯರಿಗೆ ತೋರುತಿರ್ದಳೆಂದು ಕುಮಾರಸ್ವಾಮಿಯು ಅಗಸ್ತ್ಯಂಗೆ ಪೇಳ್ದನೆಂದು ವ್ಯಾಸರು ತನಗೆ ನಿರೂಪಿಸಿದ ಅರ್ಥವಂ ಸೂತರು ಶೌನಕಾದಿ ಋಷಿಗಳಿಗೆ ಪೇಳ್ದರೆಂಬಲ್ಲಿಗೆ ಅಧ್ಯಾಯಾರ್ಥ.

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಕಳಾವತಿಯು ಚಿತ್ರಪಟದ ಕಾಶೀವಿಸ್ತಾರವಂ ನೋಡಿದಳೆಂಬ ಮೂವತ್ತಮೂರನೇ ಅಧ್ಯಾಯಾರ್ಥನಿರೂಪಣಕ್ಕಂ ಮಂಗಳಮಹಾ.

ಮೂವತ್ತಮೂರನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ.

ಮೂವತ್ತನಾಲ್ಕನೇ ಅಧ್ಯಾಯ.

ಪಾಲ್ಯಕೀರ್ತರಾಯ ಕಳಾವತೀಪ್ರಸಂಗ, ಜ್ಞಾನವಾಪೀತೀರ್ಥದ ಮಹಿಮೆ.

ಅನಂತರದಲ್ಲಿ ಕುಮಾರಸ್ವಾಮಿಯು ಅಗಸ್ತ್ಯಂಗಿಂತೆಂದನು:— ಕೇಳ್ಳೈ ಅಗಸ್ತ್ಯನೆ! ಈ ರೀತಿಯಲ್ಲಿ ಸಖಿಯರಿಗೆ ಚಿತ್ರಪಟದಲ್ಲಿರ್ದ ಕಾಶೀಮಹಿಮೆಯಂ ಪೇಳುತ್ತಿರ್ದ ಕಳಾವತಿಯು ಸ್ವರ್ಗದ್ವಾರಕ್ಕೆ ಮೂಡಲಲ್ಲಿರ್ದ ಮಣಿಕರ್ಣಿಕಾತೀರ್ಥಮಂ ಕಂಡು ಮನಸ್ಸಿನಲ್ಲಿ ನಮಸ್ಕಾರವಂಮಾಡಿ ತನ್ನ ಸಖಿಯರಿಗಿಂತೆಂದಳು :—ಇದು ಮಣಿಕರ್ಣಿಕಾತೀರ್ಥವು, ಇಲ್ಲಿ ಕಪಿಲಮುಖ್ಯ ಮುಮುಕ್ಷುಗಳಿಗೆ ಮುಕ್ತಿಯಂ ಕೊಟ್ಟಂಥಾಭೂಮಿ ಇದು. ವೈಕುಂಠವಾಸಿಗಳು ಈ ತೀರ್ಥದಲ್ಲಿ ಮಾಡೆ

ಣವಂ ಧರಿಯಿಸಿ ಈ ಮಣಿಕರ್ಣಿಕಾ ನಾಮವಂ ಜಪಿಸುತ್ತಿಹರು. ಅಗ್ನಿಹೋತ್ರನಿರತರೂ ವೇದಪಾರಾಯಣಂಗಳಂ ಮಾಡಿದವರು ಸಾಂಗವಾದ ದಕ್ಷಿಣೆಗಳಿಂ ಯಜ್ಞವಮಾಡಿದವರು, ಸ್ವಕರ್ಮನಿರತರಾದ ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ, ಮಹಾಪತಿವ್ರತಾಸ್ತ್ರೀಯರೂ, ನೈಷ್ಟಿಕಬ್ರಹ್ಮಚಾರಿಗಳೂ, ಅತಿಥಿಪೂಜೆಯಂಮಾಡಿದವರೂ, ಪಂಚಯಜ್ಞಪರರೂ, ಏಕದಂಡೀ ತ್ರಿದಂಡೀ ಮೊದಲಾದ ಸನ್ಯಾಸಿಗಳೂ, ಶಿಖಾಯಜ್ಞೋಪವೀತಧಾರಿಗಳಾದವರೂ, ಬೋಳುತಲೆಯುವರೂ, ಇವು ಒಂದೂಇಲ್ಲದವರೂ ಇವರೆಲ್ಲರಿಗೂ ಮಣಿಕರ್ಣಿಕಾತೀರ್ಥವೇಗತಿ. ಈ ತೀರ್ಥದಲ್ಲಿ ನೂರುಬಾರಿ ಊಟವಮಾಡಿದವರಿಗೂ ನಿರಾಹಾರನಿಷ್ಠರಿಗೂ ಮುಕ್ತಿ ಒಂದೇಸಮ, ಈ ಮಣಿಕರ್ಣಿಕೆಯಲ್ಲಿ ಸ್ನಾನವಂಮಾಡಿ ಸ್ವರ್ಗದ್ವಾರವಂ ಪೋಗಲು ಸ್ವರ್ಗ ದೂರವಿಲ್ಲ. ಸ್ವರ್ಗದಲ್ಲಿ ಸುಖವನನುಭವಿಸಿ ಕಡೆಯಲ್ಲಿ ಮೋಕ್ಷವಪಡೆಯುವರು. ಎರಡು ಸುಖವೂ ಈ ತೀರ್ಥದಲ್ಲಿ ಉಂಟು. ಮಣಿಕರ್ಣಿಕಾತೀರ್ಥದಲ್ಲಿ ಸ್ನಾನ ಪಾನದ ಸುಖ ದೇವೇಂದ್ರನಿಗೂ ಇಲ್ಲ. ಸೂರ್ಯಕಿರಣಂಗಳಂ ವ್ಯಾಪ್ತಮಾದ ಭೂಮಿಯಲ್ಲಿ ಎಷ್ಟುಮಳಲುಂಟೋ ಅಷ್ಟುಮಂದಿ ಬ್ರಹ್ಮರಳಿದರು ಈ ಮಣಿಕರ್ಣಿಕಾ ತೀರ್ಥದಲ್ಲಿ ಸ್ನಾನಪಾನವಂ ಮಾಡಿದವರ ಪುಣ್ಯಕ್ಕೆ ಅಳಿವಿಲ್ಲ. ಈ ಮಣಿಕರ್ಣಿಕೆಯಂ ಬಳಸಿ ಎಳ್ಳು ಹಾಕುವದಕ್ಕೆ ತೆರಪಿಲ್ಲದ ಸಕಲ ತೀರ್ಥಂಗಳೂ ಲಿಂಗಗಳೂ ಬಳಸಿಇಹವು. ಈ ತೀರ್ಥದ ಮೂಡಲು ಗಂಗೆಯಮಧ್ಯದೇಶ, ತೆಂಕಲು ಗಂಗಾಕೇಶವರು, ಪಡುವಲು ಸ್ವರ್ಗದ್ವಾರ, ಬಡಗಲು ಹರಿಶ್ಚಂದ್ರನ ಮಂಟಪ. ಈ ನಾಲ್ಕರ ನಡುವೆ ಎಷ್ಟುತೆರಪು ಇದ್ದೀತೂ ಅಷ್ಟುಅಗಲವೂ ಮಣಿಕರ್ಣಿಕೆಯನಿಸಿಕೊಂಬುದು ಇಂತೆಂದು ಕಳಾವತಿ ಪೇಳುತ್ತಾ ವಿಶ್ವೇಶ್ವರನ ದಕ್ಷಿಣಭಾಗದಲ್ಲಿರ್ದ ಜ್ಞಾನವಾಪೀತೀರ್ಥ ಮಂಕಂಡು ಇಂತೆಂದಳು—ಈ ಜ್ಞಾನವಾಪಿತೀರ್ಥವನ್ನು ದುರಾಚಾರಿಗಳಾದ ಪಾಪಿಗಳು ಮುಟ್ಟದಂತೆ ಸಂಭ್ರಮವಿಭ್ರಮರೆಂಬ ಭೃತ್ಯರು ಸಹಾ ದಂಡಪಾಣಿಯಾದ ಹರಿಕೇಶವನು ಕಾದಿಹನು. ಈ ತೀರ್ಥವು ಶಿವರೂಪವಾದ ಜಲಮೂರ್ತಿಯೆಂದು ರೋ

ಮಾಂಚಿತೆಯಾಗಿ ನಡುಗಿ ಬೆವತು ಡೋರಿ ಆನಂದ ಭಾಷ್ಪದಿಂ ಮುಖಬಿಳುಪೇರಿ ಮಾರು ಧ್ವನಿ ಪುಟ್ಟದೆ ಆನಂದದಿಂ ಮೈಮರಸಿ, ಕೈಯಲ್ಲಿರ್ದ ಚಿತ್ರಪಟವಂ ಜರಿದು ಮೂರ್ಛಿತೆಯಾಗಲೂ ಸಖಿಯರು ಭಯದಿಂ ಆಶ್ಚರ್ಯಬಟ್ಟು ಬಳಲಿದಳೆಂದು ಮೂರ್ಛೆಯಂ ತಿಳಿವುದಕ್ಕೆ ಶೈತ್ಯೋಪಚಾರವಂ ಮಾಡವೇಕೆಂದು, ಬಾಳೆಸುಳಿಯೆಲೆಯಂ ಹಾಸಿ ಮಲಗಿಸಿ, ತಾವರೆಯ ಬಳ್ಳಿಗಳಂ ಸ್ಥಾನಸ್ಥಾನಂಗಳಿಗೆ ಆಭರಣಂಗಳಂ ಮಾಡಿ ಧರಿಸಿ, ಪನ್ನೀರು ಗಂಧೋದಕಮಂ ತಳಿದು ಜಲಸೂತ್ರದ ಮನೆಗಳಲ್ಲಿ ಚಂದ್ರಕಾಂತದ ಹಾಸುಮಂಚಗಳಲ್ಲಿ ಪಚ್ಚಕರ್ಪೂರ ತಾವರೆಯಸಳ ಹಾಸಿಗೆಯಿಂ ನಾನಾಶೈತ್ಯೋಪಚಾರಗಳಂ ಮಾಡಿದರೂ ಮೂರ್ಛೆ ತಿಳಿಯದೇ ಇರಲು, ಓರ್ವ ಪ್ರವೀಣೆಯಾದ ಸಖಿಯು ನೋಡಿ ಈ ಕಳಾವತಿಯು ಚಿತ್ರಪಟದಲ್ಲಿರ್ದ ಜನ್ಮಾಂತರದಲ್ಲಿ ಕಂಡ ವಸ್ತುವಂ ನೋಡಿ ಮೂರ್ಛಿತೆಯಾದಳಲ್ಲದೆ ಮತ್ತೊಂದಲ್ಲ. ತನ್ನ ಚಮತ್ಕಾರ ದಿವ್ಯೌಷಧಿಯಿಂದ ಮೂರ್ಛೆ ತಿಳಿವಂತೆ ಮಾಡುತ್ತಾ ಇರ್ದೆನೇ· ನೋಡಿಯೆಂದು ಕೆಳಗಿರ್ದ ಚಿತ್ರಪಟವಂ ತೆಗದು ಮುಟ್ಟಿಸಿ ಈ ಚಿತ್ರಪಟವಂ ನೋಡೆಂದು ಎಚ್ಚರಿಸಲು ಬಾಡಿದ ಪೈರು ಜಡಿಮಳೆಯಿಂದಾ ತಿಳಿವಂತೆ ಮೂರ್ಛೆ ತಿಳಿದು ಚಿತ್ರಪಟದಲ್ಲಿರ್ದ ಜ್ಞಾನವಾಪೀ ತೀರ್ಥವಂ ನೋಡಿ ಜಾತಿಸ್ಮರತ್ವ ಪುಟ್ಟಿ ಸಖಿಯರ್ಗಿಂತೆಂದಳು :—ಎಲೈ ಸಖಿಯರಿರಾ ! ಈ ಚಿತ್ರಪಟದಲ್ಲಿರ್ದ ಜ್ಞಾನವಾಪಿಯ ತೀರ್ಥ ಸ್ನಾನಪಾನದ ಮಹಿಮೆಯಿಂದೆನಗೆ ಜಾತಿಸ್ಮರತ್ವ ಉಂಟಾಯಿತು. ತನ್ನ ಪೂರ್ವದ ವೃತ್ತಾಂತವಂ ಪೇಳ್ವೆನದೇನಂದರೆ ;—ನಾನು ಪೂರ್ವದಲ್ಲಿ ಕಾಶೀಪಟ್ಟಣದಲ್ಲಿ ಹರಿಸ್ವಾಮಿ ಎಂಬ ಬ್ರಾಹ್ಮಣರಿಗೂ ಪ್ರಿಯಾವತೀ ಎಂಬ ಆತನ ಸ್ತ್ರೀಗೂ ಸುಶೀಲೆ ಎಂಬ ಕುಮಾರತಿಯಾಗಿ ಪುಟ್ಟಿ ಈ ಜ್ಞಾನವಾಪಿಯ ತೀರ್ಥದ ಸ್ನಾನಂಗಳಂ ಮಾಡಿ ವಿಶ್ವೇಶ್ವರನ ಪೂಜೆಯಂ ಮಾಡಿಕೊಂಡು ಇರಲು, ತನ್ನನ್ನು ಒಬ್ಬ ವಿದ್ಯಾಧರನು ರಾತ್ರಿಯಲ್ಲಿ ಮರೆದು ಮಲಗಿದ್ದಾಗ ಎತ್ತಿಕೊಂಡು ಹೋಗುತ್ತಿರಲು, ವಿದ್ಯುನ್ಮಾಲೀ ಎಂಬ ರಾಕ್ಷಸನೋರ್ವನು ಕಂಡು ಆ ವಿದ್ಯಾಧರನ

ಣವಂ ಬಯಸಿ ಈ ಮಣಿಕರ್ಣಿಕಾ ನಾಮವಂ ಜಪಿಸುತ್ತಿಹರು. ಅಗ್ನಿಹೋತ್ರನಿರತರೂ ವೇದಪಾರಾಯಣಂಗಳಂ ಮಾಡಿದವರು ಸಾಂಗವಾದ ದಕ್ಷಿಣೆಗಳಿಂ ಯಜ್ಞವಮಾಡಿದವರು, ಸ್ವಕರ್ಮನಿರತರಾದ ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ, ಮಹಾಪತಿವ್ರತಾಸ್ತ್ರೀಯರೂ, ನೈಷ್ಟಿಕಬ್ರಹ್ಮಚಾರಿಗಳೂ, ಅತಿಥಿಪೂಜೆಯಂಮಾಡಿದವರೂ, ಪಂಚಯಜ್ಞಪರರೂ, ಏಕದಂಡೀ ತ್ರಿದಂಡೀ ಮೊದಲಾದ ಸನ್ಯಾಸಿಗಳೂ, ಶಿಖಾಯಜ್ಞೋಪವೀತಧಾರಿಗಳಾದವರೂ, ಬೋಳುತಲೆಯವರೂ, ಇವು ಬಂದೂ ಇಲ್ಲದವರೂ ಇವರೆಲ್ಲರಿಗೂ ಮಣಿಕರ್ಣಿಕಾತೀರ್ಥವೇಗತಿ, ಈ ತೀರ್ಥದಲ್ಲಿ ನೂರುಬಾರಿ ಊಟವಮಾಡಿದವರಿಗೂ ನಿರಾಹಾರನಿಷ್ಠರಿಗೂ ಮುಕ್ತಿ ಒಂದೇಸಮ, ಈ ಮಣಿಕರ್ಣಿಕೆಯಲ್ಲಿ ಸ್ನಾನವಂ ಮಾಡಿ ಸ್ವರ್ಗದ್ವಾರವಂ ಪೋಗಲು ಸ್ವರ್ಗ ದೂರವಿಲ್ಲ. ಸ್ವರ್ಗದಲ್ಲಿ ಸುಖವನನುಭವಿಸಿ ಕಡೆಯಲ್ಲಿ ಮೋಕ್ಷವಪಡೆಯುವರು. ಎರಡು ಸುಖವೂ ಈ ತೀರ್ಥದಲ್ಲಿ ಉಂಟು. ಮಣಿಕರ್ಣಿಕಾತೀರ್ಥದಲ್ಲಿ ಸ್ನಾನ ಪಾನದ ಸುಖ ದೇವೇಂದ್ರನಿಗೂ ಇಲ್ಲ. ಸೂರ್ಯಕಿರಣಂಗಳಿಂ ವ್ಯಾಪ್ತವಾದ ಭೂಮಿಯಲ್ಲಿ ಎಷ್ಟುಮಳಲುಂಟೋ ಅಷ್ಟುಮಂದಿ ಬ್ರಹ್ಮರಳಿದರು ಈ ಮಣಿಕರ್ಣಿಕಾ ತೀರ್ಥದಲ್ಲಿ ಸ್ನಾನಪಾನವಂ ಮಾಡಿದವರ ಪುಣ್ಯಕ್ಕೆ ಅಳಿವಿಲ್ಲ. ಈ ಮಣಿಕರ್ಣಿಕೆಯಂ ಬಳಶಿ ಎಳ್ಳು ಹಾಕುವದಕ್ಕೆ ತೆರಪಿಲ್ಲದೆ ಸಕಲ ತೀರ್ಥಂಗಳೂ ಲಿಂಗಗಳೂ ಬಳಶಿಇಹವು. ಈ ತೀರ್ಥದ ಮೂಡಲು ಗಂಗೆಯಮಧ್ಯದೇಶ, ತೆಂಕಲು ಗಂಗಾಕೇಶವರು, ಪಡುವಲು ಸ್ವರ್ಗದ್ವಾರ, ಬಡಗಲು ಹರಿಶ್ಚಂದ್ರನ ಮಂಟಪ, ಈ ನಾಲ್ಕರ ನಡುವೆ ಎಷ್ಟುತೆರಪು ಇದ್ದೀತೊ ಅಷ್ಟುಅಗಲವೂ ಮಣಿಕರ್ಣಿಕೆಯನಿಸಿಕೊಂಬುದು ಇಂತೆಂದು ಕಳಾವತಿ ಪೇಳುತ್ತಾ ವಿಶ್ವೇಶ್ವರನ ದಕ್ಷಿಣಭಾಗದಲ್ಲಿದ್ದ ಜ್ಞಾನವಾಪೀತೀರ್ಥಮಂಕಂಡು ಇಂತೆಂದಳು—ಈ ಜ್ಞಾನವಾಪೀ ತೀರ್ಥವನ್ನು ದುರಾಚಾರಿಗಳಾದ ಪಾಪಿಗಳು ಮುಟ್ಟದಂತೆ ಸಂಭ್ರಮವಿಭ್ರಮರೆಂಬ ಭೃತ್ಯರು ಸಹಾ ದಂಡಪಾಣಿಯಾದ ಹರಿಕೇಶನು ಕಾದಿಹನು. ಈ ತೀರ್ಥವು ಶಿವರೂಪವಾದ ಜಲಮೂರ್ತಿಯೆಂದು ರೋ

ಮಾಂಚಿತೆಯಾಗಿ ನಡುಗಿ ಬೆವರು ದೋರಿ ಆನಂದ ಭಾಷ್ಪ ದಿಂ ಮುಖಬಿಳುಪೇರಿ ಮಾರು ಧ್ವನಿ ಪುಟ್ಟದೆ ಆನಂದದಿಂ ಮೈಮ ರಸ್ತು, ಕೈಯಲ್ಲಿರ್ದ ಚಿತ್ರಪಟವಂ ಜರಿದು ಮೂರ್ಛಿತೆಯಾಗಳೂ ಸಖಿ ಯರು ಭಯದಿಂ ಆಶ್ಚರ್ಯಬಟ್ಟು ಬಳಲಿದಳೆಂದು ಮೂರ್ಛೆಯುಂ ತಿಳಿ ವುದಕ್ಕ ಶೈತ್ಯೋಪಚಾರವಂ ಮಾಡಬೇಕೆಂದು, ಬಾಳೆಸುಳಿಯಲೆಯಂ ಹಾಸಿ ಮಲಗಿಸಿ, ತಾವರೆಯ ಬಳ್ಳಿಗಳಂ ಸ್ಥಾನಸ್ಥಾನಂಗಳಿಗೆ ಆಭರಣಂ ಗಳಂ ಮಾಡಿ ಧರಿಸಿ, ಪನ್ನೀರು ಗಂಧೋದಕಮಂ ತಳಿದು ಜಲಸೂತ್ರ ದ ಮನೆಗಳಲ್ಲಿ ಚಂದ್ರಕಾಂತದ ಹಾಸುಮಂಚಗಳಲ್ಲಿ ಪಚ್ಚಕರ್ಪೂರ ತಾವರೆಯಸಳ ಹಾಸಿಗೆಯಿಂ ನಾನಾ ಶೈತ್ಯೋಪಚಾರಗಳಂ ಮಾಡಿದರೂ ಮೂರ್ಛೆತಿಳಿಯದೇ ಇರಲೂ, ಓರ್ವ ಪ್ರವೀಣೆಯಾದ ಸಖಿಯು ನೋಡಿ ಈ ಕಳಾವತಿಯು ಚಿತ್ರಪಟದಲ್ಲಿರ್ದ ಜನ್ಮಾಂತರದಲ್ಲಿ ಕಂಡ ವಸ್ತುವಂ ನೋಡಿ ಮೂರ್ಛಿತೆಯಾದಳಲ್ಲದೆ ಮತ್ತೊಂದಲ್ಲ. ತನ್ನ ಚಮತ್ಕಾರ ದಿವ್ಯೌಷಧಿಯಿಂದ ಮೂರ್ಛೆ ತಿಳಿವಂತೆ ಮಾಡುತ್ತಾ ಇದೇನೇ ನೋ ಡೆಯೆಂದು ಕೆಳಗಿರ್ದ ಚಿತ್ರಪಟವಂ ತೆಗದು ಮುಟ್ಟಿಸಿ ಈ ಚಿತ್ರಪಟ ವಂ ನೋಡೆಂದು ಎಚ್ಚರಿಸಲೂ ಬಾಡಿದ ಪೈರು ಜಡಿಮಳೆಯಿಂದಾ ತಿಳಿವಂತೆ ಮೂರ್ಛೆ ತಿಳಿದು ಚಿತ್ರಪಟದಲ್ಲಿರ್ದ ಜ್ಞಾನವಾಪೀ ತೀರ್ಥ ವಂ ನೋಡಿ ಜಾತಿಸ್ಮರತ್ವ ಪುಟ್ಟಿ ಸಖಿಯರ್ಗಿಂತೆಂದಳು :—ಎಲೈ ಸಖಿಯರಿರಾ ! ಈ ಚಿತ್ರಪಟದಲ್ಲಿರ್ದ ಜ್ಞಾನವಾಪಿಯ ತೀರ್ಥ ಸ್ನಾ ನಪಾನದ ಮಹಿಮೆಯಿಂದೆನಗೆ ಜಾತಿಸ್ಮರತ್ವ ಉಂಟಾಯಿತು. ತನ್ನ ಪೂರ್ವದ ವೃತ್ತಾಂತವಂ ಪೇಳ್ವೆನದೇನಂದರೆ ;—ನಾನು ಪೂರ್ವದಲ್ಲಿ ಕಾಶೀಪಟ್ಟಣದಲ್ಲಿ ಹರಿಸ್ವಾಮಿ ಎಂಬ ಬ್ರಾಹ್ಮಣರಿಗೂ ಪ್ರಿಯಂವದೇ ಎಂಬ ಆತನ ಸ್ತ್ರೀಗೂ ಸುಶೀಲೆ ಎಂಬ ಕುಮಾರತಿಯಾಗಿ ಪುಟ್ಟಿ ಈ ಜ್ಞಾನವಾಪಿಯ ತೀರ್ಥದ ಸ್ನಾನಂಗಳಂ ಮಾಡಿ ವಿಶ್ವೇಶ್ವರನ ಪೂಜೆ ಯಂ ಮಾಡಿಕೊಂಡು ಇರಲೂ, ತನ್ನನ್ನು ಒಬ್ಬ ವಿದ್ಯಾಧರನು ರಾತ್ರಿಯಲ್ಲಿ ಮರೆದು ಮಲಗಿದ್ದಾಗ ಎತ್ತಿಕೊಂಡು ಹೋಗುತ್ತಿರಲೂ, ವಿದ್ಯುನ್ಮಾಲೀ ಎಂಬ ರಾಕ್ಷಸನೋರ್ವನು ಕಂಡು ಆ ವಿದ್ಯಾಧರನ

ತನ್ನ ತ್ರಿಶೂಲದಿಂದಿರಿಯಲೂ ಈ ವಿದ್ಯಾಧರನು ಅವನ ವಕ್ಷಸ್ಥಳವ ಮುಷ್ಟಿಯಿಂದಿರಿಯಲೂ ಇಬ್ಬರೂ ಹತವಾದರೂ. ಈ ವಿದ್ಯಾಧರನು ತನ್ನ ಕೈಸೋಂಕಿನಿಂದಾ ಮುಕ್ತಿ ಪಡೆದು ಸ್ವರ್ಗವನ್ನೈದಿದನು. ಆ ವಿದ್ಯಾಧರನ ಹಂಬಲೆಂಬ ಸಂತಾಪಾಗ್ನಿಯಲ್ಲಿ ಮರಣವಾಗಿ ಕರ್ನಾಟಕ ರಾಯನ ಕುಮಾರತಿಯಾಗಿ ಈ ಕಳಾವತಿಯೆಂಬ ಪೆಸರಿನಿಂ ಪುಟ್ಟಿದೆನು ನಮ್ಮಿಬ್ಬರಿಗೂ ಸ್ತ್ರೀಪುರುಷ ಸಂಬಂಧ ದೊರಕಿತು. ಪೂರ್ವ ಜನ್ಮದ ಜ್ಞಾನವು ಈ ಪಠದಲ್ಲಿರ್ದ ಜ್ಞಾನವಾಪೀ ತೀರ್ಥ ದರ್ಶನ ದಿಂದ ಜಾತಿಸ್ಮರತ್ವ ದೊರಕೊಂಡುದೂ ಎಂದು ಕಳಾವತಿಯು ಪೇಳಲೂ ಸಖಿಯರು ಸಂತೋಷದಿಂ ಜ್ಞಾನವಾಪಿಗೆ ನಮಸ್ಕಾರವಂ ಮಾಡಿ ಎಲೇ ಕಳಾವತೀ ! ಈ ತೀರ್ಥಪ್ರಭಾವವಂ ಪೇಳದೆಯಲ್ಲ ಈ ತೀರ್ಥ ಸೇವೆ ಹ್ಯಾಗೆ ದೊರಕೊಂಬುವದು, ಈ ಜ್ಞಾನವಾಪಿಯಂ ನೋಡಿ ಸ್ನಾನಪಾನವಂ ಮಾಡದವನ ಜನ್ಮ ವ್ಯರ್ಥ. ನೀನು ರಾಯಂಗೆ ಭಿನ್ನಹವಂ ಮಾಡಿ ಜ್ಞಾನವಾಪಿಯಂ ತೋರಿ ನಮ್ಮ ಜನ್ಮಂಗಳಂ ಸಫಲವ ಮಾಡಬೇಕು. ನಾವು ಇಂದು ಮೊದಲಾಗಿ ಜ್ಞಾನವಾಪಿಯಂ ನೋಡಿ ಸ್ನಾನಪಾನವಂ ಮಾಡಿದಲ್ಲದೆ ಅನ್ನಪಾನವಂ ಕೊಳ್ಳೆವು. ಪ್ರತ್ಯಕ್ಷ ವಾಗಿ ನಮಗೆ ಜಾತಿಸ್ಮರತ್ವ ಪುಟ್ಟಿದ ಕಾರಣ ಜ್ಞಾನವಾಪೀ ಎಂಬ ಹೆಸರು ಸಲ್ಲುವದು. ಇಂತೆಂದು ಸಖಿಯರು ಪ್ರಾರ್ಥಿಸಲೂ ಕಳಾವತಿಯು ಹಾಗೇ ಆಗಲೀಯೆಂದು ಅವರಿಗೆ ನಂಬಿಕೆಯಂ ಕೊಟ್ಟು ಬಂದಾನೊಂದುದಿನ ರಾಯನಕೂಡೆನೇ ಹಗಲಹದಿಂ ಮುನಿದವಳಂತೆ ಇರಲೂ, ರಾಯನು ಎಲೇ ಪ್ರಿಯಳೇ ! ಯಾಕೆ ನಿನಗೆ ಎಂದೂಯಿಲ್ಲದ ಮುನಿಸು ? ನಿನಗೇನುಬೇಕು ? ನಿನ್ನಪ್ರಿಯವೇನು ತನ್ನಾಣೆ ಹೇಳೆಂದು ತೆಗದು ತೊಡೆಯಲ್ಲಿ ಕುಳ್ಳಿರಿಸಿ, ಪರಿದ ಕುರುಳ ಸಂತವಿಟ್ಟು ವಕ್ಷಸ್ಥಳವಂ ನೇವರಿಸುತ್ತಾ ಅತಿ ಮೋಹಿತನಾಗಿ ಕೇಳಲೂ ರಾಯನ ಪ್ರಿಯವರಿತು, ರಾಯಂಗೆ ಕಳಾವತಿ ಇಂತೆಂದಳೂ ;—ಎಲೇ ಸ್ವಾಮೀ! ನಿಮ್ಮ ವಿವಾಹವಾದಮೇಲೆ ಸಮಸ್ತ ಭೋಗಂಗಳನನುಭವಿಸಿದೆನು, ಇನ್ನೊಂದು ಮನೋರಥವಿದ್ದೀತು ? ತಾನು ಪರಾಧೀನೆಯಾದಕಾರಣ ಸುಲಭವಲ್ಲ.

ಸ್ವತಂತ್ರರಾದ ನಿಮಗೆ ಬಿನ್ನವಿಸುತ್ತಾ ಇದ್ದೇನೆ, ಆ ಮನೋರಥವಂ ಸಲಿಸಲೂ ಪ್ರಾಣಂಗಳಿಹವು. ಅಲ್ಲದಡೇ ಸಹ್ಯವಲ್ಲವಾಯೆಂದು ನುಡಿದು ಬಿನ್ನೈಸಲೂ. ಮಲಯಕೇತುರಾಯನು ತನ್ನ ಪ್ರಿಯಳ ವಾಕ್ಯವನು ಕೇಳಿ ನೀನು ಬಯಸಿ ಕೇಳುವ ವಸ್ತುವಾವದು ಆಲಸ್ಯವಂ ಮಾಡದೆ ಕೇಳು. ಏನು ಬೇಕಾದುದನ್ನೂ ಕೊಟ್ಟೇನೂ. ಕೊಡುವರಾರು ಕೊಂಬವರಾರು, ಈ ತನ್ನ ದೇಹ, ಈ ದೇಶ, ಈ ಭಂಡಾರ, ಈ ಬಲ ಈ ದುರ್ಗಂಗಳು ಮುಂತಾದ ಸಮಸ್ತ ವಸ್ತುವೂ ನಿನ್ನದು. ಈ ರಾಜ್ಯವು ನಿನಗೆ ತೃಣಪ್ರಾಯವೆಂದು ನುಡಿದ ಪ್ರಿಯನ ವಾಕ್ಯವಂ ಕೇಳಿ ಸಂತೋಷಗೊಂಡಳಿಸಾಧ್ವಿಯಾ ಪೂರ್ವದಲ್ಲಿ ಬ್ರಹ್ಮನು ಸಕಲ ಪ್ರಜೆಗಳಂ ಸೃಷ್ಟಿಸಿ ಅವರ ಸಂರಕ್ಷಣೆಗೆ ಪುರುಷಾರ್ಥಂಗಳಂ ಸೃಷ್ಟಿಸಿದನೂ. ಅನಿತ್ಯ ಸಂಸಾರಂಗಳಲ್ಲಿ ಇಹಪರಂಗಳ ಸಾಧಿಸದವನ ಜನ್ಮವು ವ್ಯರ್ಥವು. ಸ್ತ್ರೀಪುರುಷರು ಅನುಕೂಲವಾಗಿ ಇರಲೂ ಧರ್ಮಾರ್ಥಕಾಮಂಗಳು ಸುಲಭವಾಗಿ ಇಹವೂ ಎಂಬುದನೂ ಸಿದ್ಧವಾಗಿ ಕಂಡೆನು. ನಿನಗೆ ತನ್ನಂಥಾ ಸ್ತ್ರೀಯರು ಸಾವಿರಜನ ಉಂಟು. ನಿಮ್ಮ ಅರಮನೆಯಲ್ಲಿ ಇಹದಾಸಿಯರಿಗೂ ಐಶ್ವರ್ಯ ಉಂಟೂ. ನಿಮ್ಮ ಅರ್ಧಾಂಗಿಯಾಗಿಹ ತನಗೆ ಹೇಳುವದೇನು. ವಿವೇಕಿಗಳಾದವರು ಕೆರೆ ಕುಂಟೆ ಭಾವಿ ಮೊದಲಾದ ಧರ್ಮಸಂಗ್ರಹಕ್ಕೋಸ್ಕರ ಧನವ ಸಂಗ್ರಹವಂ ಮಾಳ್ಪರು. ತಪಸ್ಸಿಗೋಸ್ಕರ ಆಯುಷ್ಯಮಂ ಬಯಸುವರು, ಸಂತಾನಕ್ಕೋಸ್ಕರ ಸ್ತ್ರೀಯಂ ಸಂಪಾದಿಸುವರೂ, ಇವೆಲ್ಲವೂ ನಿಮಗೆ ವಿಶ್ವಪತಿಯ ಅನುಗ್ರಹದಿಂದಾ ಇದ್ದವೂ, ಎನ್ನ ಮನೋರಥಂಗಳೇನೆಂದರೆ:—ತನ್ನಂ ಕಾಶೀಕ್ಷೇತ್ರಕ್ಕೆ ಕರಕೊಂಡು ಹೋಗಬೇಕು, ಎನ್ನ ಪ್ರಾಣಂಗಳು ಮುಂದಾಗಿಯೆ ಕಾಶೀಪಟ್ಟಣಕ್ಕೆ ಹೋಗಿಯಿದ್ದಾವು. ಇಲ್ಲಿ ಶರೀರಮಾತ್ರವೇ ಇದ್ದೀತು ಎಂದು ಬಿನ್ನೈಸುವ ಪ್ರಿಯಳ ವಾಕ್ಯಮಂ ಕೇಳಿ ಸಂತೋಷಪಟ್ಟು ಹಾಗೆ ಆಗಲೀ ಒಳ್ಳೇ ಉದ್ಯೋಗವನ ಪೇಳಿದೆ, ಈ ರಾಜ್ಯ ಭೋಗದಿಂದಾ ತನಗೇನು ಪ್ರಯೋಜನವು ಈ ಪರ್ಯಂತವೂ ನಿಷ್ಕಂಟಕದಿಂ ರಾಜ್ಯವನಾಳುತಿದ್ದೆನು, ಈ ಸಕಲ

ಭೋಗಂಗಳನನುಭವಿಸಿದೆನು. ಸಂತಾನವಂ ಪಡೆದೆನು, ಇನ್ನು ತನಗೆ ಅಪೇಕ್ಷೆ ಏನಿದ್ದೀತು, ಅವಶ್ಯವಾಗಿ ನಾವಿಬ್ಬರೂ ಕಾಶೀಪಟ್ಟಣಕ್ಕೆ ಪೋಗಿ ಗಂಗಾಸ್ನಾನವಂ ಮಾಡಿ, ವಿಶ್ವೇಶ್ವರನ ಪೂಜಿಸಿ, ಉಗ್ರತಪಸ್ಸಂ ಮಾಡಿ ಮುಕ್ತಿರಾಜ್ಯವನಾಳಬೇಕೆಂದು ನಿಶ್ಚಯವಂ ಮಾಡಿ, ಜೋಯಿಸರಂ ಕರೆಸಿ ಪಟ್ಟಣಕ್ಕೆ ಸುಮುಹೂರ್ತವಂ ನಿಶ್ಚೈಸಿ ಮಂತ್ರಿ ಪ್ರಧಾನಿಗಳಂ ಕರೆಸಿ ಚತುರಂಗಬಲವಂ ಬರಿಸಿ ಕುಮಾರಂಗೆ ರಾಜ್ಯಾಧಿಪತ್ಯ ಪಟ್ಟವಂ ಕಟ್ಟಿ, ಆ ಕುಮಾರನಿಂದ ಕೆಲವು ದ್ರವ್ಯ ವಸ್ತ್ರಾಭರಣವಂ ತೆಗೆದುಕೊಂಡು ರಾಯಂ ಪೊರಡಲು, ಕಳಾವತಿಯು ಸಖಿಯರು ಸಹಾ ತಾನೂ ಸಂತೋಷದಿಂ ತೆರಳೆ ಮಗನ ಕರೆಸಿ ಪೂರ್ವಜನ್ಮ ವಾಸನೆಯಿಂ ತಾನೆ ಮಾರ್ಗವನರಿತು ಕರೆಕೊಂಡು ಪೋಗಿ ಕಾಶೀಪಟ್ಟಣವಂ ಪೊಕ್ಕು ಮಣಿಕರ್ಣಿಕೆ ಜ್ಞಾನವಾಪಿಯಲ್ಲಿ ಸ್ನಾನಾದಿಗಳಂ ಮಾಡಿ ವಿಶ್ವೇಶ್ವರನ ಪೂಜೆಯಂ ಮಾಡಿ ಮುಕ್ತಿಮಂಟಪದಲ್ಲಿ ಕುಳಿತು ಧರ್ಮಶಾಸ್ತ್ರಗಳಂ ಕೇಳಿ ಸಕಲವಾದ ಷೋಡಶಮಹಾ ದಾನಗಳಂ ಮಾಡಿ, ಸಾಯಂಕಾಲದಲ್ಲಿ ಮಹಾಪೂಜೆ ನೈವೇದ್ಯ ನೃತ್ತಗೀತ ವಾದ್ಯಂಗಳಿಂ ಜಾಗರಣವಂ ಮಾಡಿ, ಪ್ರಾತಃಕಾಲದಲ್ಲಿ ಸಂಧ್ಯಾವಂದನಾದಿ ಕ್ರಿಯೆಗಳಂ ಮಾಡಿ, ಜ್ಞಾನವಾಪಿಯಲ್ಲಿ ಸ್ನಾನ ತರ್ಪಣ ಶ್ರಾದ್ಧಾದಿಗಳಂ ಮಾಡಿ, ಅನ್ನವಸ್ತ್ರಗಳಂ ಅನಾಥರ ತೃಪ್ತಿಪಡಿಸಿ, ಜ್ಞಾನವಾಪಿಗೆ ಶತ್ಯಸೋಪಾನವಂ ಕಟ್ಟಿಸಿ ಆ ತೀರ್ಥದಲ್ಲಿಯೇ ಮಹಾ ಪ್ರೀತಿಯುಳ್ಳವರಾಗಿ ಎರಡುದಿನಕ್ಕೆ ಒಂದುಭಾರಿ ಹದಿನೈದುದಿನಕ್ಕೊಂದುಭಾರಿ ತಿಂಗಳಿಗೊಂದುಭಾರಿ, ಆಹಾರಂಗಳಂ ಮಾಡಿಕೊಂಡು ಕೃಚ್ಛ್ರ ಚಾಂದ್ರಾಯಣಾದಿ ವ್ರತಗಳಿಂ ಶರೀರವಂ ಕೃಶವಾಗಿ ಮಾಡಿಕೊಂಡು ಮನುಷ್ಯಶೇಷವಂ ತೃಣವಾಗಿ ಕಂಡು ಇರುತ್ತಿರಲು. ಒಂದಾನೊಂದು ದಿನದಲ್ಲಿ ಒಬ್ಬ ಶಿವಭಕ್ತನಾಗಿ ಪರಮೇಶ್ವರನು ಬಂದು ವಿಭೂತಿಯಂ ಕೊಟ್ಟು ಆಶೀರ್ವಾದಂಗಳಂ ಮಾಡಿ ಅವರಿಗಂತೆಂದನು:—ನೀವು ಬೇಗ ಏಳಿ, ಅಲಂಕರಿಸಿಕೊಳ್ಳಿರಿ, ನಿಮಗೆ ಈ ಕ್ಷಣದಲ್ಲಿ ತಾರಕ ಬ್ರಹ್ಮೋಪದೇಶಕ್ಕೆ ವಿಶ್ವನಾಥ ಬರುತ್ತಾನೆಂದು ಶಿವಭಕ್ತನು ನುಡಿ

ವನಿತರೊಳು ಚಂದ್ರಮೌಳಿಯಾದ ಮಹಾದೇವನು ದಿವ್ಯವಿಮಾನಾರೂಢನಾಗಿ ಬಂದು ರಥದಿಂದಿಳಿದು ಅವರ್ಗೆ ತಾರಕಬ್ರಹ್ಮೋಪದೇಶವಂ ಮಾಡಲು, ಆಕ್ಷಣವೇ ಅವರು ಪರಮೇಶ್ವರನಲ್ಲಿ ಐಕ್ಯರಾದರು. ಪರಮೇಶ್ವರನು ಅಂತರ್ಧಾನವಾದನು. ಈ ಜ್ಞಾನವಾಪಿಯೇ ಸಕಲ ತೀರ್ಥಂಗಳಲ್ಲಿಯೂ ಶ್ರೇಷ್ಠವಾದುದು. ಈ ತೀರ್ಥವು ಜ್ಞಾನರೂಪ ಲಿಂಗರೂಪ ಶಿವರೂಪವು, ಸಮಸ್ತ ತೀರ್ಥಗಳೂ ಈ ತೀರ್ಥದ ಹದಿನಾರುಭಾಗದಲ್ಲಿ ಒಂದುಭಾಗಕ್ಕೆ ಸರಿಬಾರದು, ಈ ಜ್ಞಾನವಾಪಿಯ ಮಹಿಮೆಯಂ ಪರಾಕಿಲ್ಲದೆ ಕೇಳಿದವರ್ಗೆ ಮರಣಕಾಲದಲ್ಲಿ ಅಜ್ಞಾನವಿಲ್ಲ. ಕ್ಷತ್ರಿಯರ್ಗೆ ರಣದಲ್ಲಿ ವಿಜಯ, ವೈಶ್ಯಶೂದ್ರಾದಿಗಳಿಗೆ ಸಕಲ ಪಾಪಹರ. ಪಾರ್ವತೀ ಪರಮೇಶ್ವರರಿಗೆ ಸಂತೋಷಕರ. ಈ ಅಧ್ಯಾಯಮಂ ಪಠಿಶಿದರೂ, ಪಾತವಮಾಡಿಶಿದರೂ, ಕೇಳಿಶಿದರೂ ಶಿವಲೋಕ ಉಂಟು ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನು ಎಂದು ವ್ಯಾಸರು ತನಗೆ ಬುದ್ಧಿಗಲಿಸಿದರೆಂದು ಸೂತಪೌರಾಣಿಕನು ಶೌನಕಾದಿಋಷಿಗಳಿಗೆ ಹೇಳ್ದರೆಂಬಲ್ಲಿಗೆ ಅಧ್ಯಾಯಾರ್ಥ.

ಇಂತು ಶ್ರೀಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರಿಂದ ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಜ್ಞಾನವಾಪೀಮಹಿಮೆ, ಮೂಲ್ಯಕೇತುರಾಯ ಕಳಾವತಿ ಪ್ರಸಂಗವೆಂಬ ಮೂವತ್ತನಾಲ್ಕನೇ ಅಧ್ಯಾಯಾರ್ಥನಿರೂಪಣಕ್ಕಂ ಮಂಗಳಮಹಾ.

ಮೂವತ್ತನಾಲ್ಕನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ಮೂವತ್ತೈದನೇ ಅಧ್ಯಾಯ.

ಸದಾಚಾರ ವರ್ಣನೆ.

ಅನಂತರದಲ್ಲಿ ಕುಮಾರಸ್ವಾಮಿಗೆ ಅಗಸ್ತ್ಯನಿಂತೆಂದನು :— ಎಲೈ ಕುಮಾರಸ್ವಾಮಿ ! ಈ ಅವಿಮುಕ್ತಕ್ಷೇತ್ರವು ಮೋಕ್ಷಕ್ಕೆ ಕಾರಣ, ಕ್ಷೇತ್ರಗಳೊಳಗೆ ಉತ್ತಮ, ಮಂಗಳಸ್ವರೂಪಗಳಲ್ಲಿ ಮಂಗಳಸ್ವರೂಪ, ಶ್ಮಶಾನಗಳಲ್ಲಿ ಮಹಾಶ್ಮಶಾನ, ಪೀಠಗಳಲ್ಲಿ ಮಹಾಸಿದ್ಧಪೀಠ, ಚೌಳುಭೂಮಿಯಲ್ಲಿ ಮಹಾಚೌಳುಭೂಮಿ, ಧರ್ಮಾರ್ಥಕಾಮಮೋಕ್ಷಂಗಳಂ ಕೊಡುವುದು, ಪರಬ್ರಹ್ಮಸ್ವರೂಪವೆಂದು ಎಲ್ಲಿಯೂ ನಿರ್ಣಯಿಸಲ್ಪಟ್ಟಿತು, ಈ ಕ್ಷೇತ್ರದಲ್ಲಿ ಬಂದಾನೊಂದು ಸ್ಥಳದಲ್ಲಿ ಈ ಜ್ಞಾನವಾಪಿಯು ಮಹಿಮೆಯಂ ಕೇಳಿ ಮಹಾಸಂತೋಷವಾಯಿತು, ಈ ಕ್ಷೇತ್ರದಲ್ಲಿ ಅಣುವಿನಗಲವಾದರೂ ಮೋಕ್ಷಪ್ರದವಾದ್ದಲ್ಲದೆ ವ್ಯರ್ಥವಾದಭೂಮಿ ಇಲ್ಲ. ಭೂಮಿಯಲ್ಲಿ ಎಷ್ಟು ತೀರ್ಥಂಗಳುಂಟೋ ಅಷ್ಟು ಈ ಕಾಶಿಯಲ್ಲಿರ್ದ ತೀರ್ಥದ ಅಣುಮಾತ್ರಕ್ಕೆ ಸರಿಬಾರದು. ಸಕಲನದಿಗಳೂ ಗಂಗೆಗೆ ಸರಿಯಾಗವು, ಕಾಶೀಕ್ಷೇತ್ರ, ಗಂಗೆ, ವಿಶ್ವೇಶ್ವರ ಈ ಮೂರಕ್ಕೂ ಸರಿಯಿಲ್ಲ, ಈ ಮೂರು ಇದ್ದ ಸ್ಥಳದಲ್ಲಿ ಇದ್ದವರು ಮುಕ್ತಿಯಂ ಪಡೆವದು ಏನಾಶ್ಚರ್ಯ, ಕಲಿಯುಗದಲ್ಲಿ ಚಂಚಲಚಿತ್ತರಾದ ಜನಕ್ಕೆ ಈ ಕಾಶೀಕ್ಷೇತ್ರವಾಸವು ವಿಶೇಷ, ಆವ ನಿಯಮಂಗಳಂ ಮಾಡಿ, ಕಾಶೀವಾಸದೊರಕೊಂಬುದು, ತನ್ನ ಮನಸಿಗೆ ಸದಾಚಾರ ಹೊರತಾಗಿ, ಕಾಶೀವಾಸ, ಗಂಗಾಸ್ನಾನ, ವಿಶ್ವೇಶ್ವರನಪೂಜೆ ಈ ಮೂರರಿಂದಲ್ಲದೆ ಪರಮೇಶ್ವರನು ಪ್ರಸನ್ನನಾಗನು, ಧರ್ಮ, ತಪ, ಆಯುಷ್ಯ, ಪಾಪಪರಿಹಾರ, ಇವು ಎಲ್ಲವೂ ಸದಾಚಾರದಿಂದಲ್ಲದೆ ದೊರಕದು, ಅದುಕಾರಣ ಪಾರ್ವತೀದೇವಿಯರಿಗೆ, ಪರಮೇಶ್ವರನು ನಿರೂಪಿಸಿದ ಸದಾಚಾರವಂ ತನಗೆ ಬುದ್ಧಿಗಲಿಸಬೇಕೆನಲು, ಅಗಸ್ತ್ಯಂಗೆ ಕುಮಾರ

ಸ್ವಾಮಿ ಇಂತೆಂದನು—ಕೇಳೈ ಅಗಸ್ತ್ಯ ! ಸಕಲ ಪುರುಷಾರ್ಥಪ್ರದಮಾದ ಸದಾಚಾರಮಂ ಪೇಳುವೆನುಕೇಳೂ, ಸ್ಥಾವರ, ಜಂಗಮ, ಕ್ರಿಮಿ, ಜಲ, ಜಂತು, ಪಶು, ಪಕ್ಷಿ, ನರರು ಮೊದಲಾದ ಪ್ರಾಣಿಗಳೊಳು, ಒಬ್ಬರಿಗಿಂತಾ ಒಬ್ಬರು ಸಾವಿರಮಡಿಗೆ ಹೆಚ್ಚು, ಅದಂ ಜಾಣರು ಬಲ್ಲರು. ಅಂಡಜ, ಜರಾಯುಜ, ಸ್ವೇದಜ, ಉದ್ಭಿಜಗಳೆಂಬ ಚತುರ್ವಿಧ ಪ್ರಾಣಿಗಳಲ್ಲಿ ಮನುಷ್ಯಜನ್ಮವಧಿಕ, ಅದರೊಳು ಸ್ತ್ರೀಯಾಗಿ ಪುಟ್ಟುವ, ಪುರುಷನಾಗಿ ಪುಟ್ಟುವದಧಿಕ, ಅದರೊಳು ಬುದ್ಧಿವಂತನಾಗುವದಧಿಕ, ಅದರೊಳು ಶೂದ್ರನಾಗುವದಧಿಕ, ಅವನಿಂದಾ ವೈಶ್ಯನಾಗುವದಧಿಕ, ಅದರಿಂದ ಕ್ಷತ್ರಿಯನಾಗುವದಧಿಕ, ಅದರಿಂದ ಬ್ರಾಹ್ಮಣನಾಗಿ ಪುಟ್ಟುವದಧಿಕ, ಅದರೊಳು ವಿವೇಕಿಗಳಧಿಕ, ವಿವೇಕಿಗಳೊಳು ಧರ್ಮಬುದ್ಧಿಯುಳ್ಳವರಧಿಕ, ಅದರೊಳು ಧರ್ಮವಂಮಾಳ್ಪವರಧಿಕ, ಅದರೊಳು ನಿಷ್ಕಾಮವಾಗಿ ಧರ್ಮವಂ ಮಾಳ್ಪವರಧಿಕ, ಅದರೊಳು ಬ್ರಹ್ಮಜ್ಞಾನಿಗಳಧಿಕ, ಅಂಥಾ ಜ್ಞಾನ ಉಂಟಾದವರಿಂದ ಅಧಿಕವಿಲ್ಲ. ಜ್ಞಾನವೂ, ತಪವೂ ಎರಡೂ ಅಧಿಕ, ಆದಿಯಲ್ಲಿ ಬ್ರಹ್ಮನು ಸರ್ವದೇವಸ್ವರೂಪಮಾದಂಥಾ ಬ್ರಾಹ್ಮಣರನ್ನು ಸೃಜಿಸಿದನಾದಕಾರಣ, ಲೋಕಸ್ಥಿತಿಯುಳ್ಳಕ್ಕೂ ಬ್ರಾಹ್ಮಣ ಅಧಿಕ, ಅದರೊಳು ಸದಾಚಾರಿಗಳಾದ ಬ್ರಾಹ್ಮಣರೇ ಅಧಿಕ, ಅದುಕಾರಣ ಬ್ರಾಹ್ಮಣರು ಸದಾಚಾರಪರರಾಗಬೇಕು, ರಾಗದ್ವೇಷಾದಿಗಳಿಲ್ಲದೆ ಇರಬೇಕು, ವೇದಶಾಸ್ತ್ರಸಂಪನ್ನರಾಗಿರಬೇಕು, ವೇದಶಾಸ್ತ್ರಸಂಪನ್ನರಾದವರು ಆಚರಿಸುವದೆ ಆಚಾರ, ಲಕ್ಷಣಹೀನರಾದರೂ ಆಚಾರವಂತರಾಗಿರಲು ಆಯುಷ್ಯವುಳ್ಳವರಾಗುವರು, ಅನಾಚಾರದಿಂದ ಆಯುಷ್ಯಹೀನರಾಗಿ ವ್ಯಾಧಿಗ್ರಸ್ತರಾಗಿ ದುಃಖಿಗಳಾಗಿಸಂಭವಿಸುವರು, ಪರಾಧೀನನಲ್ಲದೆ ಸ್ವತಂತ್ರನಾಗಿದ್ದವನಿಗಲ್ಲದೆ ಆಚಾರಧರ್ಮವಂ ನಡಿಸಕೂಡದು, ಆವಧರ್ಮವಂ ಮಾಡಲು ಈಶ್ವರಪ್ರಸನ್ನನಹನೋ ಅಂಥಾ ಧರ್ಮವಾವುದೆಂಬೆಯಾ, ಯಾಮನಿಯಾಮಂಗಳೆಂಬ ಎರಡುತೆರದ ನೇಮಗಳಿರಬೇಕು, ಅವಾವೆಂದರೆ--ಸತ್ಯ, ಕ್ಷಮೆ, ಪುತ್ರ, ಮಿತ್ರ, ಕಳತ್ರರಲ್ಲಿ ಸಮಬುದ್ಧಿ, ದೇವತಾಧ್ಯಾನ, ಅಕ್ರೂರ

ತ್ವ, ಅಹಿಂಸೆ, ಇಂದ್ರಿಯನಿಗ್ರಹ, ನಿರ್ಮಲಚಿತ್ತ, ಮಧುರವಚನ, ಅಕಠಿನತ್ವ, ಈ ಹತ್ತೂ ಯಮಗಳೆನಿಸಿಕೊಂಬವು, ಶುಚಿತ್ವ, ದಾನ, ತಪ, ಮೌನ, ಹೋಮ, ಅಧ್ಯಯನ, ವ್ರತ, ಉಪವಾಸ, ಬಾಹ್ಯೇಂದ್ರಿಯ ನಿಗ್ರಹ, ಈ ಹತ್ತು ನಿಯಮಂಗಳೆನಿಸಿಕೊಂಬವು, ಕಾಮ ಕ್ರೋಧ, ಲೋಭ, ಮೋಹ ಮದ, ಮತ್ಸರಂಗಳೆಂಬ ಅರಿಷಡ್ವರ್ಗಂಗಳಂ ಬಿಟ್ಟು ಮೆಲ್ಲಮೆಲ್ಲನೆ ಧರ್ಮವನಾರ್ಜಿಸಬೇಕು, ಪರಲೋಕಪರೋಧಿಯಾದ ಪರಪೀಡೆಯಂ ಮಾಡಲಾಗದು, ಪುತ್ರ ಪೌತ್ರ ಕಳತ್ರಾದಿಗಳು ಸಂಗಡಬಾರರು, ಧರ್ಮವಂತೇ ಸಹಾಯವಾದಕಾರಣ ಧರ್ಮವನೇ ಆರ್ಜಿಸಬೇಕೂ, ಹೀನಕುಲದಲ್ಲಿ ಹೆಣ್ಣುಕೊಟ್ಟು ತಂದುಕೊಂಡಾಗದೆ, ಶ್ರೇಷ್ಠರಲ್ಲಿಯೇ ಕೊಟ್ಟು ತಂದು ಅಧಿಕರಾಗಬೇಕು, ಬ್ರಾಹ್ಮಣನಾಗಿ, ವೇದವನೋದದೆ ಆಚಾರವಿಲ್ಲದೇ, ದುರಾನ್ನ ದುಷ್ಟನಿಗ್ರಹವಂ ಮಾಡಲುಯಮಬಾಧೆಯುಂಟು, ಆದುಕಾರಣ ಸದಾಚಾರಿಯಾಗಬೇಕು, ಸಕಲತೀರ್ಥಂಗಳೂ ತಮ್ಮತಮ್ಮ ಶುದ್ಧಿಗೋಸ್ಕರ, ಸದಾಚಾರಿಗಳ ಅಂಗಸ್ಪರ್ಶನವನಪೇಕ್ಷಿಸುತ್ತಿಹರು, ಅದಾಗಿ ಸದಾಚಾರಿಯಾದವನು, ಸೂರ್ಯೋದಯಕ್ಕೆ ಮೊದಲೆ ನಾಲ್ಕು ಘಳಿಗೆಯಲ್ಲಿ ಎದ್ದು ಬಾಯಿಮುಕ್ಕಳಿಸಿ ಶುದ್ಧಾಚಮನವಂ ಮಾಡಿ, ತನ್ನ ಆತ್ಮಹಿತವಂ ಚಿಂತಿಸಬೇಕು, ಅದೆಂತೆನೆ—ಮೊದಲು ವಿಘ್ನೇಶ್ವರನಂ ನೆನೆದು, ಆಮೇಲೆ ಉಮಾಮಹೇಶ್ವರ, ಲಕ್ಷ್ಮೀನಾರಾಯಣ, ಬ್ರಹ್ಮ, ಸರಸ್ವತೀ, ಬ್ರಾಹ್ಮಣರೂ, ಇಂದ್ರಾದಿ ದಿಕ್ಪಾಲಕರೂ, ವಸಿಷ್ಠಾದಿ ಬ್ರಹ್ಮಋಷಿಗಳೂ, ನಾರಾಯಣಾದಿ ದೇವಋಷಿಗಳೂ, ಗಂಗೆ ಮೊದಲಾದ ನದಿಗಳೂ, ಶ್ರೀಶೈಲಾದಿ ಪುಣ್ಯಸ್ಥಾನಗಂಗಳೂ, ಅಯೋಧ್ಯೆ ಮೊದಲಾದ ಮುಕ್ತಿಕ್ಷೇತ್ರಂಗಳೂ, ಅಹಲ್ಯೆ ಮೊದಲಾದ ಪುಣ್ಯಸ್ತ್ರೀಯರೂ, ಕ್ಷೀರಸಮುದ್ರಾದಿ ಸಾಗರಂಗಳೂ, ಮಾನಸಾದಿ ಕೊಳಂಗಳೂ, ನಂದನಾದಿ ವನಂಗಳೂ, ಕಾಮಧೇನುಮೊದಲಾದ ಧೇನುಗಳಂ, ಕಲ್ಪವೃಕ್ಷಾದಿ ಪುಣ್ಯವೃಕ್ಷಂಗಳಂ, ಊರ್ವಶ್ಯಾದಿ ದೇವಸ್ತ್ರೀಯರಂ, ಗರುಡಾದಿ ಪಕ್ಷಿಗಳಂ, ಶೇಷಾದಿ ಸರ್ಪಗಳಂ, ಐರಾವತಾದಿ ಗಜಗಳಂ, ಉಚ್ಚೈಃಶ್ರವಾದಿ ಅಶ್ವಗಳಂ, ಬಾಣಾಸುರಾದಿ

ಪಾಶುಪತವ್ರತಿಗಳಂ, ಪ್ರಜ್ಞಾದಾದಿ ಪರಮಭಾಗವತರಂ, ಅಶ್ವತ್ಥಾಮಾದಿ ಚಿರಂಜೀವಿಗಳಂ, ದಧೀಚ್ಯಾದಿ ತ್ಯಾಗಿಗಳಂ, ಹರಿಶ್ಚಂದ್ರಾದಿ ಪುಣ್ಯಪುರುಷರಂ, ತಾಯಿತಂದೆ ಮೊದಲಾದ ಗುರುಗಳಂ ಸ್ಮರಿಸಿ, ಎಷ್ಟು ಗ್ರಾಮಕ್ಕೆ ಇನ್ನೂರು ಮಾರು, ಪಟ್ಟಣಕ್ಕೆ ಎಂಟುನೂರುಮಾರು, ಹೀಗೆ ನೈರುತ್ಯದಿಕ್ಕಿಗೆಹೋಗಿ ಮೂತ್ರಾದಿಗಳಿಂ ಭೂಮಿಯಂ ಮುಚ್ಚಿ, ಯಜ್ಞೋಪವೀತವಂ ಕಿವಿಯಲ್ಲಿ ಧರಿಸಿ, ತಲೆಗೆ ವಸ್ತ್ರವಂ ಸುತ್ತಿಕೊಂಡು, ದಿವದಲ್ಲಿ ಸಂಧ್ಯಾಕಾಲದಲ್ಲಿ ಬಡಗಲಮುಖವಾಗಿ, ರಾತ್ರಿಯಲ್ಲಿ ತೆಂಕಲಮುಖವಾಗಿ ಕುಳಿತು ಮಲಮೂತ್ರಂಗಳ ವಿಸರ್ಜನೆಯಂ ಮಾಡಬೇಕು, ಬ್ರಾಹ್ಮಣ, ಗೋವು, ಅಗ್ನಿ, ವಾಯು ಮೊದಲಾದವಗೆ ಇದಿರಾಗಿಯೂ, ಉತ್ತಮಭೂಮಿಯಲ್ಲಿಯೂ ಅಂಗಡಿಯಭೂಮಿ, ಮನುಷ್ಯರು ಕುಳಿತು ನಿಲ್ಲುವಕಡೆ, ಉದಕ ಮೊದಲಾದ ಪವಿತ್ರವಸ್ತುಗಳಲ್ಲಿಯೂ ಮಲಮೂತ್ರಗಳ ವಿಸರ್ಜನೆಯಂ ಮಾಡಲಾಗದು, ಶೌಚವಂ ಮಾಡದೆ ದಿಕ್ಕುಗಳಂ, ಸೂರ್ಯಚಂದ್ರಾದಿ ತೇಜಸ್ಸುಗಳಂ, ವಸ್ತುಗಳಂ ನೋಡಲಾಗದು, ನಿಸ್ಸಂದೇಹದಿಂ ಮಲಮೂತ್ರಂಗಳಂ ಮಾಡಿ ಎಡದಹಸ್ತದಲ್ಲಿ ವಸ್ತ್ರಸಹಿತವಾಗಿ ಶಿಶ್ನವಪಿಡಿದುಕೊಂಡು ಏಳುಹೆಜ್ಜೆ ಬಳಗಾಗಿಬಂದು ಇಲೀ ಹೆಗ್ಗಣ ಅಗದ ಮೃತ್ತಿಗೆ, ನಬ್ಬುರಶೌಚಶೇಷದಮೃತ್ತಿಗೆ ಹುಳುಗಳುಳ್ಳ ಮೃತ್ತಿಗೆಮೊರಬು, ಇವು ಹೊರತಾಗಿ ಶ್ಯಾಮವಾದ ಮೃತ್ತಿಗೆಯಂ ತಗದುಕೊಂಡು ಪಾತ್ರೆಯಲ್ಲಿ ಉದಕವುಂ ತಂಬಿರಿಸಿಕೊಂಡು ಎಚ್ಚರಿಕೆಯಾಗಿ ಶೌಚವಂ ಮಾಡಬೇಕು, ಅದರಕ್ರಮವೆಂತೆಂದರೆ, ನೆಲ್ಲೀಕಾಯಮಳಗರ್ಧಪ್ರಮಾಣ ಮೃತ್ತಿಗೆಯಂ ತೆಗದುಕೊಂಡು ಐದುವ್ಯಾಳಿ ತೊಳೆದು ಮೃತ್ತಿಗೆ ಸಹಾ ಶೌಚವಂಮಾಡಿ ಆಮೇಲೆ ಎಡದಕೈಗೆ ಮೂರುಭಾರಿ ಮೃತ್ತಿಗೆಯನಿಕ್ಕಿಕೊಳ್ಳುವದು, ಎರಡುಕಾಲ್ಗಳಿಗೂ ಎರಡೆರಡುವ್ಯಾಳಿ ಮೃತ್ತಿಗೆಯನಿಕ್ಕಿಕೊಳ್ಳುವದು, ಹೀಗೆ ಗೃಹಸ್ಥಶೌಚವಂ ಮಾಡಬೇಕು, ಇದರ ದ್ವಿಗುಣ ಬ್ರಹ್ಮಚಾರಿಗೆ, ಇದರ ತ್ರಿಗುಣವಾನಪ್ರಸ್ಥರಿಗೆ, ಇದರನಾಲ್ಕುಮಡಿ ಸನ್ಯಾಸಿಗಳಿಗೆ ದಿವದಲ್ಲಿ ಈತೆರದ ಶೌಚವು ಮಾಡಬೇಕು. ರಾತ್ರಿಯಲ್ಲಿ ಇದರ

ಅರ್ಧ, ಅದರೊಳರ್ಧ ವ್ಯಾಧಿಗ್ರಸ್ತರಿಗೆ, ವ್ಯಾಘ್ರ ಚೋರರಾಜಭಯ ಸ್ಥಾನಗಳಲ್ಲಿ ತದರ್ಧ, ಸ್ತ್ರೀಯರಿಗೆ ಅದರೊಳರ್ಧ ಸ್ವಸ್ಥವಾಗಿದ್ದರೆ ಶೌಚಕರ್ಮವನು ಮಾಡಲಾಗದು. ಈ ಭೂಮಿಯಲ್ಲಿ ಎಷ್ಟು ಮೃತ್ತಿಕೆಯೆಷ್ಟು ಉದಕ ಉಂಟೋ ಅಷ್ಟರಲ್ಲಿಯೂ ಮರಣಪರಿಯಂತವು ಶೌಚವಂ ಮಾಡುವದರೂ ಸಾಲದು. ಅದು ಹ್ಯಾಗೆಂದರೆ :—ಅಂತಃಕರಣ ಶುದ್ಧಿಯಿಲ್ಲದೆ ಶುದ್ಧಿಯಾಗದು, ಅನಂತರದಲ್ಲಿ ಹೊಟ್ಟು ಇದ್ದಲು ಓಡು ಇವು ಮೊದಲಾದ ಅಪವಿತ್ರ ವಸ್ತುಗಳು ಇಲ್ಲದ ಸ್ಥಳದಲ್ಲಿ ಮಂಡು ಮುಂದಾಗಿ ಕುಳಿತು, ನೊರೆ, ಗುಳ್ಳೆಯಿಲ್ಲದ ಉಷ್ಣವಲ್ಲದ ಶುದ್ಧೋದಕದಿಂ ಬ್ರಾಹ್ಮಣನು, ಹೃದಯ ನೆನೆಯುವಂತೆ, ಸ್ತ್ರೀ ಶೂದ್ರರು ತಾಲುಯು ಮುಟ್ಟುವಂತೆ ಶುದ್ಧಾಚಮನವಂ ಮಾಡಿ, ಪಾಡ್ಯ ಹುಣ್ಣಿಮೆ ಅಮಾವಾಸ್ಯೆ ಷಷ್ಠೀ, ನವಮಿ ಮೊದಲಾದ ದಿನಗಳಲ್ಲಿ, ದಂತಧಾವನವಂ ಮಾಡದೇ ಹನ್ನೆರಡುಭಾರಿ ಮುಕ್ಕಳಿಸಿ ಉಗುಳಿ ಮುಖ ಶುದ್ಧಿಯಂ ಮಾಡಿಕೊಂಡು, ಕಿರುಬೆರಳ ಕೊನೆಯಷ್ಟುಗಾತ್ರವಾದ ಹುಳುಕಿಲ್ಲದ ಮೃದುವಾದ ಹಸಿಯಾಗಿದ್ದ ದಂತಕಾಷ್ಟದಲ್ಲಿ ದಂತಧಾವನವಂ ಮಾಡಿಕೊಳ್ಳಬೇಕು. ಬ್ರಾಹ್ಮಣಗೆ ಹನ್ನೆರಡಂಗುಲ ಪ್ರಮಾಣ, ಕ್ಷತ್ರಿಯಗೆ ಹನ್ನೊಂದಂಗುಲ ಪ್ರಮಾಣ, ವೈಶ್ಯನಿಗೆ ಹತ್ತಂಗುಲ ಪ್ರಮಾಣ, ಶೂದ್ರನಿಗೆ ಒಂಭತ್ತಂಗುಲ ಪ್ರಮಾಣ, ದಂತಕಾಷ್ಠಗಳ್ಯಾವುವೆಂದರೆ :—ಮಾವು, ಹುಚ್ಚುಬ್ಯಾಲ, ಕೂರೆಮಾವು, ನೆಲ್ಲಿ, ಅಂಕೋಲೆ, ಕಗ್ಗಲಿ, ಬನ್ನಿ, ಉತ್ತರಣೆ, ಜಾಳ್ಳಿ, ಮುರಡೀ, ಗುಳ್ಳ, ಹೆರಳೆ, ಇವುಮೊದಲಾದ ಹಾಲುಳ್ಳ ಮರಗಳಲ್ಲಿ ದಂತಕಾಷ್ಠಂಗಳಂ ಮಾಡಿಕೊಂಡು ಆ ಕಾಷ್ಠವಂ ಸೀಳಿ ಬಿಲ್ಲಿನಾಕಾರದಿಂ ಎರಡು ಹಸ್ತದಿಂ ಹಿಡಿದು, ಜಿಹ್ವೆಯಂ, ಪಳಿಶಿಕೊಂಬುದು, ಉಪವಾಸ ದಿನಗಳಲ್ಲಿ ದಂತಧಾವನ ಗಂಧ ಪುಷ್ಪಾದಿ ಅಲಂಕಾರಗಳಂ ಮಾಡಿಕೊಳ್ಳಲಾಗದು. ತದನಂತರದಲ್ಲಿ ತಮ್ಮ ತಮ್ಮ ಕುಲಾಚಾರಗಳಂ ಶಾಸ್ತ್ರೋಕ್ತಪ್ರಕಾರದಿಂ ಸ್ನಾನಸಂಧ್ಯಾವಂದನೆ ಜಪ ಸೂರ್ಯೋಪಾಸನೆ, ಅಗ್ನಿಹೋತ್ರ, ಔಪಾಸನ ಬ್ರಹ್ಮಯಜ್ಞ ದೇವಋಷಿ ಪಿತೃತರ್ಪಣವಂ ಮಾಡಿ, ಮಧ್ಯಾಹ್ನದಲ್ಲಿ ಸ್ನಾನ

ವಂ ಮಾಡಿ ವೈಶ್ವದೇವ ಬಲಿಹರಣವಂ ಮಾಡಿ ಹದಿನಾರು ಕಬಳ ಅಥ ತಕಾರವೆನಿಸುವದು. ನಾಲ್ಕು ಕಬಳ ಪುಷ್ಟವೆನಿಸುವದು. ಒಂದು ಕಬಳ ಭಕ್ಷವೆನಿಸುವದೂ, ಇದರೊಳು ತನ್ನ ಶಕ್ತಿಗೆ ತಕ್ಕ ಹಾಗೆ ಅತಿಥಿ ಪೂಜೆಯಂ ಮಾಡಬೇಕೂ. ಅನಂತರದಲಿ ಮಾರ್ಗಕ್ಕೆ ನಡದು ಬಂದ ಪರದೇಶಿ ಹೊಟ್ಟೆಗಿಲ್ಲದವನು ವಿದ್ಯಾರ್ಥಿ ಗುರುಬ್ರಾಹ್ಮಣ್ಯ,ಯತಿ ಬ್ರಹ್ಮಚಾರಿ ಭಿಕ್ಷುಕರನೂ ಅವಶ್ಯಕ ತೃಪ್ತಿಬಡಿಸಬೇಕೂ. ಅನ್ನವ ನಿಕ್ಕುವದಕ್ಕೆ ಪಾತ್ರಾಪಾತ್ರವೆಂದು ವಿಚಾರವಂ ಮಾಡಲಾಗದು. ಶುನಕ, ಪತಿತ,ಶ್ವಪಚ,ಪಾಪಿ,ರೋಗಿ,ವಾಯಸ,ದೇವ,ಮನುಷ್ಯ,ಪಿತೃ,ಯಕ್ಷ,ರಾಕ್ಷಸ,ಉರಗ,ಖಗ,ದೈತ್ಯ,ಸಿದ್ಧ,ಪಿಶಾಚ,ಪ್ರೇತ, ಭೂತ,ದಾನವಂತರು, ಕ್ರಿಮಿ,ಕೀಟ, ಪತಂಗ ಮೊದಲಾದವೆಲ್ಲವೂ ಬಲಿಹರಣದಿಂದಾ ತೃಪ್ತರಾಗುತ್ತಿಹರು. ಅನಂತರದಲ್ಲಿ ನಿತ್ಯಶ್ರಾದ್ಧವಂ ಮಾಡುವನಾಗಿ ಪುತ್ರ ಮಿತ್ರ ಜ್ಞಾತಿಗಳಂ ಪಙ್ತಿಯಲ್ಲಿಟ್ಟುಕೊಂಡು ಮೂಡ ಮುಂದಾಗಿ ಕಂಬಳಿ ಮೊದಲಾದ ಗದ್ದುಗೆಗಳಲ್ಲಿ ಕುಳಿತು ಬೆರಳಲ್ಲಿ ಪವಿತ್ರವಂ ಧರಿಸಿ ಅನ್ನದ ಗುಣ ಅವಗುಣಗಳಂ ವಿಚಾರಿಸದೆ ಷಡ್ರಸಾನ್ನಗಳಂ ತನಗೆ ಶುಚಿಯಾದಂತೆ ಭುಂಜಿಸಿ ಕೈ ತೊಳದು ಶುದ್ಧಾಚಮನವಂ ಮಾಡಿ, ತಾನು ಕೊಂಡ ಅನ್ನಪಾನಂಗಳು ಶೀಘ್ರದಿಂ ಆರೋಗ್ಯವಪ್ಪಂತೆ ಪಂಚಭೂತ ಪಂಚವಾಯು, ಸಮುದ್ರ ಬಡಬಾಗ್ನಿ ಸೂರ್ಯ ಯಮ ಇವರ ಸ್ಮರಣೆಯಂ ಮಾಡಿ ತಾಂಬೂಲ ಚರ್ವಣವಂ ಗೈದು ತದನಂತರದಲ್ಲಿ ಮುಕ್ಕಳಿಸಿ ಉಗುಳಿ ಪುರಾಣಶ್ರವಣದಿಂದಿವಸಭಾಗವನತಿಕ್ರಮಿಸಿ ಸಾಯಂಕಾಲದಲ್ಲಿ ಗೃಹ, ಗೃಹಂಗಳಂದಾ ತಟಾಕ ಹತ್ತುಮಡಿ ಫಲಾದಿಕವಾದುದು, ಅದಕ್ಕಿಂತ ಹತ್ತುಮಡಿ ಅಧಿಕ ನದೀತೀರ. ಆ ನದೀತೀರಕ್ಕಿಂತಾ ನೂರುಮಡಿ ಅಧಿಕ ಎರಡು ನದೀ ಕೂಡಿದ ಸಂಗಮ, ಅದಕ್ಕಿಂತಾ ನೂರುಮಡಿ ಗುಣಾಧಿಕ ಶಿವ ಸನ್ನಿಧಿ, ಇಂಥಾ ಸ್ಥಳದಲ್ಲಿ ಕುಳಿತು ಬಾಹ್ಯ ಸಂಧ್ಯಾವಂದನೆಯಂ ಮಾಡಬೇಕು, ಬಾಹ್ಯ ಸಂಧ್ಯಾವಂದನೆಯಿಂದಾ ದಿನದಲ್ಲಿ ಸ್ತ್ರೀ ಸಂಗವ ಮಾಡಿದ ದೋಷ, ಮದ್ಯ ಗಂಧದೋಷ ಅಸತ್ಯದೋಷ ಪಾಪ

ಮುಂತಾದ ದೋಷ ಪರಿಹರ. ಅದುಕಾರಣ ಬಾಹ್ಯದಲ್ಲಿ ಸಂಧ್ಯಾವಂದನೆಯುಂ ಮಾಡಿ ಅಗ್ನಿಹೋತ್ರ ಔಪಾಸನಂಗಳಂ ಮಾಡಿ ರಾತ್ರಿಯಲ್ಲಿ ಬಂದ ಅತಿಥಿಗಳಂ ಅನ್ನಪಾನಗಳಿಂ ಸತ್ಕಾರವ ಮಾಡಿ ಬಳ್ಕೆಮಾತು, ಮಲಗುವರೆ ತೆರಪು ಹಾಸಿಗೆಯುಂ ಸಂತರಿಸಿ, ತಾನು ರಾತ್ರಿಯ ಮೊದಲು ಯಾಮವನ್ನು ವೇದಶಾಸ್ತ್ರ ವಿದ್ಯಾಗೋಷ್ಠಿಗಳಿಂದಾ ಅತಿಕ್ರಮಿಸಿ ನಿಯತವಾದ ಅನ್ನಪಾನಂಗಳಂ ಕೊಂಡು, ಒಂದೆ ಜಾತಿಯ ಮರದಲ್ಲಿ ಮಾಡಿದ ಮಂಚದಲ್ಲಿ ಶಯನಮಂ ಮಾಡುವುದು ಈ ರೀತಿಯಲ್ಲಿ ನಿತ್ಯಕರ್ಮಂಗಳಂ ಮಾಡಿದವರು ಇಹದಲ್ಲಿ ಸುಖವಿದ್ದು ಪರದಲ್ಲಿ ಮೋಕ್ಷವ ನೈದುವರು ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದರೆಂಬುದಾಗಿ ವ್ಯಾಸರು ತನಗರುಹಿದರೆಂದು ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ.

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕ ಭಾಷೆಯಿಂದಾ ವಿರಚಿಸಿದ ಸ್ಕಂದ ಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಸದಾಚಾರನಿರೂಪಣವೆಂಬ ಮೂವತ್ತೈದನೆ ಅಧ್ಯಾಯಾರ್ಥನಿರೂಪಣಕ್ಕಂ ಮಂಗಳಮಹಾ.

ಮೂವತ್ತೈದನೇ ಅಧ್ಯಾಯ ಸಂಪೂರ್ಣ

ಶ್ರೀ ವಿಶ್ವೇಶ್ವರಾಯನಮಃ.

ಮೂವತ್ತಾರನೇ ಅಧ್ಯಾಯ.

ಬ್ರಹ್ಮಚರ್ಯ, ಷೋಡಶಕರ್ಮ.

ಅನಂತರದಲ್ಲಿ ಕುಮಾರಸ್ವಾಮಿ ಅಗಸ್ತ್ಯಗಿಂತೆಂದನು: — ಕೇಳೈ ಅಗಸ್ತ್ಯನೇ: ಕೇಳುವರಿಗೆ ಸರ್ವ ಪಾಪ ಪರಿಹರಮಪ್ಪ ಸದಾಚಾರವಂ ಪೇಳ್ವೆನು. ಬ್ರಾಹ್ಮಣ ಕ್ಷತ್ರಿಯ ವೈಶ್ಯರಾದ ಮೂವ

ವರ್ಣದವರಿಗೆ ಗರ್ಭಾದಾನ ಮೊದಲಾದ ಷೋಡಶಕರ್ಮಗಳಂ, ಉಪನಯನಕಾಲಂಗಳಂ ವಿವರವಾಗಿ ಪೇಳುವೆನು ಕೇಳು, ಅದಂತೆಂದರೆ-ಬ್ರಾಹ್ಮಣ, ಕ್ಷತ್ರಿಯ. ವೈಶ್ಯ ಈ ಮೂರು ವರ್ಣದವರೂ ದ್ವಿಜರೆನಿಸಿಕೊಂಬರು, ಅದೆಂತನೆ-ಬಸುರಲ್ಲಿ ಬಂದದ್ದು ಒಂದುಜನ್ಮ, ಸಂಸ್ಕಾರದಿಂದ ಬಂದು ಜನ್ಮ; ಆದಾಗಿ ಈ ಮೂವರಿಗೂ ಗರ್ಭಾದಾನ ಮೊದಲಾಗಿ ಅಪರ ಕರ್ಮಪರ್ಯಂತರವೂ ತಮ್ಮತಮ್ಮ ಶಾಸ್ತ್ರೋಕ್ತ ಮಂತ್ರಗಳಿಂ ಹದಿನಾರುಸಂಸ್ಕಾರಂಗಳಂಮಾಡಬೇಕು. ಆ ಹದಿನಾರು ಸಂಸ್ಕಾರಂಗಳಾವವೆಂದರೆ ಮಘಾನಕ್ಷತ್ರ ಮೂಲಾನಕ್ಷತ್ರಂಗಳಂಬಿಟ್ಟು ಮಿಕ್ಕಾದ ನಕ್ಷತ್ರಂಗಳಲ್ಲಿ ಸ್ವಸ್ತ್ರೀಯ ಋತುಕಾಲಂಗಳಲ್ಲಿ ಗರ್ಭಾದಾನವುಂಮಾಡಿ.ಮೂರನೇತಿಂಗಳಲ್ಲಿ ಪುಂಸವನ, ನಾಲ್ಕನೇತಿಂಗಳಲ್ಲಿ, ಆರನೇತಿಂಗಳಲ್ಲಿ ಎಂಟನೆ ತಿಂಗಳಲ್ಲಿ ಆದರೂ ಸೀಮಂತ, ಪುಟ್ಟಿದಾಗಹೊಕ್ಕಳುಕುಯ್ಯುವದಕ್ಕೆ ಮುಂಚೆ ಜಾತಕರ್ಮ, ಹನ್ನೊಂದನೆದಿನ ನಾಮಕರಣ, ನಾಲ್ಕನೆ ತಿಂಗಳಲ್ಲಿ ನಿಷ್ಕ್ರಮಣ, ಆರನೇ ತಿಂಗಳಲ್ಲಿ ಅನ್ನಪ್ರಾಶನ, ವರ್ಷದಲ್ಲಿ ಚೋಳಂಗೀ ಈ ಎಂಟು ಕರ್ಮಂಗಳಂ ಮಾಡಲು ಗರ್ಭಗತಪಾಪ ಪರಿಹರ, ಈಗ ಹೇಳಿದ ಸಂಸ್ಕಾರಗಳು ಸ್ತ್ರೀಯರಿಗೆ ಅಮಂತ್ರಕ, ವಿವಾಹ ಒಂದೆ ಸಮಂತ್ರಕ. ಬ್ರಾಹ್ಮಣನಿಗೆ ಎಂಟನೇ ವರ್ಷದಲ್ಲಿ ಉಪನಯನವಂ ಮಾಡಬೇಕು ಕ್ಷತ್ರಿಯನಿಗೆ ಹನ್ನೊಂದನೇ ವರ್ಷ, ವೈಶ್ಯನಿಗೆ ಹನ್ನೆರಡನೇ ವರ್ಷ, ಇದು ಉಪನಯನ ಕಾಲ. ಕಾಮ್ಯವಾದರೆ ಬ್ರಾಹ್ಮಣರಿಗೆ ಐದನೆಯ ವರ್ಷ, ಕ್ಷತ್ರಿಯನಿಗೆ ಆರನೆಯ ವರ್ಷ, ವೈಶ್ಯನಿಗೆ ಎಂಟನೆಯ ವರ್ಷ, ಈ ಕಾಲಗಳಲ್ಲಿ ಅವರ್ಗೆ ಬ್ರಹ್ಮೋಪದೇಶವಂ ಮಾಡಿ, ಮೂರುವೇಳೆ ಸಂಧ್ಯಾವಂದನೆ, ಎರಡು ವೇಳೆ ಅಗ್ನಿಕಾರ್ಯ, ಗುರು ಮೊದಲಾದ ಶ್ರೇಷ್ಠರಿಗೆ ನಮಸ್ಕಾರ, ಸ್ನಾನ ಮೊದಲಾದ ಆಚಾರ, ಗುರುವಿನಲ್ಲಿ ವೇದ ಪಾಠವಂ ಮಾಡಬೇಕು. ಶಿಷ್ಯನಾದವನು ಗುರುಗಳು ಕರೆದು ಹೇಳದಾಗಲ್ಲದೆ ಮಿಕ್ಕಾದಾಗ ವೇದವ ಓದಲಾಗದೂ. ಪೂಜ್ಯರಾದ ತಾಯಿ, ಚಿಕ್ಕವ್ವ, ಸೋದರತ್ತೆ, ಅಕ್ಕ ಇವರು ಮೊದಲಾಗಿ ಇಲ್ಲವೆನ್ನದವರ ಮನೆಯ ಭಿಕ್ಷವಂ ಕೇಳ

ಬೇಕು. ಭಿಕ್ಷವಂ ಕೇಳುವ ಕ್ರಮವೆಂತೆಂದರೆ:-ಬ್ರಾಹ್ಮಣನು "ಭಿಕ್ಷಾಂ ದೇಹಿ" ಎಂದು, ಕ್ಷತ್ರಿಯನು " ಭಿಕ್ಷಾಂಭವತೀ " ಎಂದು, ವೈಶ್ಯನು "ಭಿಕ್ಷಾಂದೇಹಿ ಭವತೀ" ಎಂದು ಈ ಪ್ರಕಾರ ಭಿಕ್ಷವಂಬೇಡಿ ಆ ಭಿಕ್ಷವಂ ತನ್ನ ಗುರುಗಳ ಮುಂದೆ ತಂದಿರಿಸಿ ಅವರ ಅಪ್ಪಣೆಯಿಂದಾ ಮಾಡ ಮುಂದಾಗಿ ಕುಳಿತು ಮೌನದಿಂ ಭುಂಜಿಸುವದೂ, ಆಪತ್ಕಾಲದಲ್ಲಿ, ಶ್ರಾದ್ಧಕಾಲಂಗಳಲ್ಲಿ, ಬ್ರಹ್ಮಚಾರಿಯಾದವನು ಒಬ್ಬರ ಮನೆಯಲ್ಲಿ ಊಟವಂ ಮಾಡಬಾರದು. ಅತ್ಯಾಹಾರವಂ ಕೊಳ್ಳಲೂ ಅನಾರೋಗ್ಯ, ಅಶ್ಲಾಘ್ಯ, ಲೋಕನಿಂದೆ, ಅದರಿಂದಾ ಮಿತಿಯಾದ ಆಹಾರವಂ ಕೊಳ್ಳಬೇಕು. ಹಗಲು ಎರಡುಭಾರಿ ಊಟಮಾಡಲಾಗದು. ಜೇನುತುಪ್ಪ, ಪ್ರಾಣಿಹಿಂಸೆ, ಸೂರ್ಯದರ್ಶನ, ಕಣ್ಣುಕಪ್ಪು, ಸ್ತ್ರೀಸಂಗ, ತಂಗಳು, ಒಬ್ಬರ ಸಂಗಡ ಊಟ, ಪರನಿಂದೆಗಳಂ ಮಾಡಲಾಗದೂ. ಮೊದಲು ಹೇಳಿದ ಎರಡು ಬಗೆ ಉಪನಯನಕಾಲ ತಪ್ಪಿದರೆ ಬ್ರಾಹ್ಮಣನಿಗೆ ಹದಿನಾರು ವರ್ಷ, ಕ್ಷತ್ರಿಯನಿಗೆ ಇಪ್ಪತ್ತೆರಡುವರ್ಷ, ವೈಶ್ಯನಿಗೆ ಇಪ್ಪತ್ತನಾಲ್ಕು ವರ್ಷ, ಈ ಕಾಲಂಗಳಂ ಮೀರಿದರೆ ಪ್ರಾಯಶ್ಚಿತ್ತಗಳಂ ಮಾಡಿ ಉಪನಯನಗಳಂ ಮಾಡಿದಲ್ಲದೆ ಅವರ ಕೂಡೆ ಸಂಬಂಧವಂ ಮಾಡಲಾಗದೂ. ಬ್ರಾಹ್ಮಣನಿಗೆ ಕೃಷ್ಣಾಜಿನ, ಕ್ಷತ್ರಿಯನಿಗೆ ಸಾರಗದ ಚರ್ಮ, ವೈಶ್ಯನಿಗೆ ಆಡಿನ ಚರ್ಮ, ಬ್ರಾಹ್ಮಣನಿಗೆ ನೊಳೆ ಹುಲ್ಲು ಮುಂಜೇ, ಕ್ಷತ್ರಿಯನಿಗೆ ಆಚದ ನಾರು, ವೈಶ್ಯನಿಗೆ ಸೆಣಬೂ, ದೊರಕದಿದ್ದರೆ ಎಲ್ಲರಿಗೂ ದರ್ಭೆ, ಬೆಟ್ಟಸಾಲೆಯಲ್ಲಿ ಮಾಡಿದ ಮುಂಜಿಯುಂ ಧರಿಸಬಹುದು. ಬ್ರಾಹ್ಮಣಂಗೆ ಅರಳಿಯಲ್ಲಿ ನೂತಯಜ್ಞೋಪವೀತ, ಕ್ಷತ್ರಿಯಂಗೆ ಪಟ್ಟೆಧಾರ, ವೈಶ್ಯನಿಗೆ ಕಂಬಳೀಧಾರ, ಬ್ರಾಹ್ಮಣನಿಗೆ ತಾನು ನಿಂತು ತನ್ನ ಮಂಡೆಯು ಕೂದಲು ಪ್ರಮಾಣ ಮುತ್ತುಗ, ಬೆಲ್ಲಪತ್ರೆದಡದಂಕೋಲು,ಕ್ಷತ್ರಿಯಂಗೆ ಭ್ರೂಮಧ್ಯದ ಪ್ರಮಾಣ ಅರಳೀ ಆಲದ ಮರದ ದಂಡಕೋಲು, ವೈಶ್ಯನಿಗೆ ನಾಸಿಕಾಗ್ರ ಪ್ರಮಾಣ ಗೋಣಿ ಮತ್ತಿಯು ದಂಡಕೋಲು, ಈ ದಂಡಕೋಲು ಅಗ್ನಿ ತಾಕದೆ ದೊಂಕಾಗದೆ ಪ್ರಮಾಣಿಲ್ಲದೆ ಇರಲಾಗದು. ನಾರು ಉಂಟಾಗಿ ಇರ

ಬೇಕು. ಈ ಮರ್ಯಾದೆಯಲ್ಲಿ, ಬ್ರಹ್ಮಚರ್ಯವ್ರತಪುಷ್ಟನಾಗಿ ವಿವಾಹಾಪೇಕ್ಷೆಯಿಲ್ಲದೆ ಉಪಕುರ್ವಾಣನು ಯಾವಜ್ಜೀವವೂ ಬ್ರಹ್ಮಚರ್ಯವ್ರತವ ನಡಸುವನು ನೈಷ್ಠಿಕ ಬ್ರಹ್ಮಚಾರಿ ಎನಿಸುವನು. ಬ್ರಹ್ಮಚಾರಿ ಗೃಹಸ್ಥ, ವಾನಪ್ರಸ್ಥ, ಯತಿ ಈ ನಾಲ್ಕು ಆಶ್ರಮಂಗಳಲ್ಲಿ ಒಂದು ಆಶ್ರಮ ಹೊರತಾಗಿ ಇರಲಾಗದು. ಈಗ ಹೇಳಿದ ಯಜ್ಞೋಪವೀತ, ಅಜಿನ, ದಂಡ, ಮುಂಜೀ ಇವು ಜೀರ್ಣವಾಗಲು, ಉದಕದಲ್ಲಿ ಹಾಕಿ ಹೊಸದಾಗಿ ಮಂತ್ರಪೂರ್ವಕದಿಂ ಧರಿಸಬೇಕು. ಹದಿನಾರು ವರ್ಷ ಇಪ್ಪತ್ತು ವರ್ಷ, ಇಪ್ಪತ್ತನಾಲ್ಕು ವರ್ಷಂಗಳಲ್ಲಿ ಬ್ರಹ್ಮ, ಕ್ಷತ್ರಿಯ, ವೈಶ್ಯರೂ ಈ ಕ್ರಮದಿಂ, ಗೋದಾನಿಕ ವ್ರತವಂ ಮಾಡಬೇಕು. ಈ ಮೂರುಜಾತಿಯವರೂ ವೇದಾಭ್ಯಾಸ ಹೊರತಾಗಿ, ಮತ್ತೊಂದು ವಿದ್ಯಾಭ್ಯಾಸವಂ ಮಾಡಲು ಮನೆಯಲ್ಲಿ ಕರೆಯುವ ಹಸುವಂ ಬಿಟ್ಟು ಕತ್ತೆಯಂ ಸಾಕಿದಂತಹುದು. ಉಪನಯನವಂ ಮಾಡಿಶಿ ವೇದಾಭ್ಯಾಸವಂ ಕಲಿಸಿದವನು ಆಚಾರ್ಯನೆನಿಸಿಕೊಂಬನು. ಸಂಬಳವಂ ತೆಗೆದುಕೊಂಡು ವೇದಾಭ್ಯಾಸವಂ ಮಾಡಿದಾತನು ಉಪಾಧ್ಯಾಯನೆನಿಶಿಕೊಂಬನು. ಗರ್ಭಾದಾನ ಮೊದಲಾದ ಷೋಡಶ ಕ್ರಿಯೆಗಳಂ ಒಬ್ಬನೇ ಮಾಡಿಶಿ ಅನ್ನಪಾನಂಗಳನಿಕ್ಕಿ ವೇದಾಭ್ಯಾಸವಂ ಮಾಡಿಶಿದಾತನು ಗುರುವೆನಿಶಿಕೊಂಬನೂ. ಉಪಾಧ್ಯಾಯನಿಗಿಂತಲೂ ಆಚಾರ್ಯನಧಿಕನು. ಆಚಾರ್ಯನಿಗಿಂತಲೂ ನೂರುಮಡಿ ಗುರುವಧಿಕನು. ಗುರುವಿಗಿಂತಾ ನೂರುಮಡಿ ತಂದೆಯಧಿಕನು. ತಂದೆಗಿಂತಾ ಸಾವಿರಮಡಿ ತಾಯಿ ಅಧಿಕಳೂ. ಬ್ರಾಹ್ಮಣನಿಗೆ ವೇದ ವಿದ್ಯವೇ ಹಿರಿಯತನವೂ, ಕ್ಷತ್ರಿಯನಿಗೆ ಪರಾಕ್ರಮವೇ ಹಿರಿಯತನವು. ವೈಶ್ಯರಿಗೆ ಧನಧಾನ್ಯಸಮೃದ್ಧಿಯಾಗಿ ಇದ್ದುದೇ ಹಿರಿಯತನ. ಶೂದ್ರನು ಶುದ್ಧವಾದ ತಾಯಿತಂದೆಗಳಲ್ಲಿ ಜನನವಾದುದೇ ಶ್ರೇಷ್ಠತ್ವ. ಬ್ರಹ್ಮಚಾರಿ ತನ್ನ ವ್ರತವಂ ನಡಶಿ ಸ್ಪಷ್ಟೇಂದ್ರಿಯ ಮೊದಲಾದುದರಲ್ಲಿ ಅವಕೀರ್ಣ ವ್ರತವಂ ಮಾಡಿಕೊಳ್ಳಬೇಕು. ಗುರುಗಳ ಮುಂದೆ ಅಂಗಚೇಷ್ಟೆಯಂ ಮಾಡದೆ ಭಯಭಕ್ತಿಯಿಂದಾ ಇರಬೇಕು. ಗುರುಗಳನನುಕರಿಸಿ ದೂಷಣೆಯಂ ಕಲ್ಪಿಸಲೂ

ಕತ್ತ್ರಿಯಾಗಿ ಹುಟ್ಟುವನೂ. ಗುರುಗಳ ದುರ್ಗುಣಗಳ ಪೇಳಲೂ ಶುನಕನಾಗಿ ಹುಟ್ಟುವನೂ. ಗುರುಗಳಲ್ಲಿ ಮತ್ಸರಿಸಲೂ ಕ್ಷುದ್ರವಾದ ರೆಕ್ಕೆಯು ಹುಳುವಹನೂ. ಗುರುಗಳ ಆಜ್ಞೆಹೊರತಾಗಿ ಆಸನ, ಶಯನ, ಭೋಜನಂಗಳಂ ಮಾಡಲೂ ಕ್ರಿಮಿ ಹುಳುವಾಗಿ ಹುಟ್ಟುವನೂ. ವಿವೇಕಿಯಾದರೂ ಪ್ರಾಯವೆಂಬ ಮಾಯೆ ನೋಸಗೊಳಿಸುವಳಾಗಿ, ತಾನು ಪ್ರಾಯದವನಾಗಿ ಗುರುಪತ್ನಿಯಂ ಮುಟ್ಟಿ ನಮಸ್ಕಾರ ಸೇವೆಯಂ ಮಾಡಲಾಗದು. ತಾಯಿ ಒಡಹುಟ್ಟಿದವಳಾದರೂ ಅವರೊಡನೆ ಏಕಾಂತದಲ್ಲಿ ಮಲಗಲಾಗದು. ಮಾತಾಡಲಾಗದು. ಸೂರ್ಯ ಉದಯ ಅಸ್ತಮಯಂಗಳಲ್ಲಿ ನಿದ್ರೆಯಂ ಮಾಡಲಾಗದು. ಮಾತಾಡಲಾಗದು. ತಂದೆ ತಾಯಿಗಳ ಋಣವನ್ನು ಅನೇಕ ಜನ್ಮಗಳಂ ತಿದ್ದುವದಕ್ಕೆ ಶಕ್ಯವಲ್ಲ. ಅದುಕಾರಣ ತಾಯಿತಂದೆಗಳ ಸೇವೆಯಂ ಮಾಡಲೂ ಸಕಲ ಪುರುಷಾರ್ಥವಹುದೂ. ನಾಲ್ಕು ವೇದಗಳೊಳಗೆ, ಯಥಾಶಕ್ತಿ ವೇದವ ನೋದಿ ಈ ಕ್ರಮದಿಂ ಬ್ರಹ್ಮಚರ್ಯ ವ್ರತವಂ ನಡಿಸಿ, ಗುರುಗಳ ಅನುಜ್ಞೆಯಿಂ ಗೃಹಸ್ಥನಾಗಬೇಕೂ. ಹೀಗೆ ಸದಾಚಾರದಿಂ ವಿಶ್ವೇಶ್ವರನ ಅನುಗ್ರಹದಿಂದಾ ಕಾಶೀವಾಸ ದೊರಕೊಂಬುದು. ಕಾಶೀವಾಸದಿಂ ಜ್ಞಾನ ಸಿದ್ಧಿಯಹುದು. ಅದುಕಾರಣ, ಇವು ಎಲ್ಲಕ್ಕೂ ಸದಾಚಾರವೇ ಕಾರಣವು. ಮರ್ಯಾದೆಯಲ್ಲಿ ಸದಾಚಾರದಿಂ ಬ್ರಹ್ಮಚಾರಿ ವ್ರತವಂ ನಡಸಿ, ಆಮೇಲೆ ಗುರುವಿನನುಜ್ಞೆಯಿಂ ಗೃಹಸ್ಥಾಶ್ರಮವಂ ಧರಿಸಬೇಕು. ಗೃಹಸ್ಥಾಶ್ರಮಕ್ಕೆ ಅನುಕೂಲವಾದ ಸ್ತ್ರೀಯು ದೊರಕಿದರೆ ಗೃಹಸ್ಥಾಶ್ರಮಕ್ಕಿಂತಲೂ ಮತ್ತೆ ಬೇರೆ ಸುಖವಿಲ್ಲ. ದಂಪತಿಗಳು ಅನುಕೂಲವಾಗಿರಲೂ ಸ್ವರ್ಗಕ್ಕಿಂತಾ ಅಧಿಕ ಸುಖ ಉಂಟು. ಸ್ತ್ರೀಯು ಅನುಕೂಲವಿಲ್ಲದಿರ್ದರೆ ಅದರಿಂದಾ ಬೇರೇ ನರಕವಿಲ್ಲ. ಅರಿಯದವರು ಸ್ತ್ರೀಯನ್ನೂ ಜಿಗಣೆಯನ್ನೂ ಸರಿಯೆಂಬರೂ. ವಿಚಾರಿಸಿ ನೋಡಲೂ ಜಿಗಣೆಗಿಂತಾ ಸ್ತ್ರೀಯೇ ಹೆಚ್ಚು ಅದೆಂತೆಂದರೇ ;—ಜಿಗಣೆಗಳು ರಕ್ತಮಾತ್ರವನ್ನೇ ಹೀರುವವು, ಸ್ತ್ರೀಯರು ಚಿತ್ತವೃತ್ತಿ ಬಲ ಸುಖಂಗಳ ಸಪಹರಿಸುವರು. ಅದುಕಾರಣಾ ಗೃಹಸ್ಥನಾಗಬೇಕೆಂಬ

ವನು ದೃಢಾಂಗಿಯಾಗಿ ಸಂತಾನವುಳ್ಳ ವಂಶದವಳಾಗಿ, ಪತಿವ್ರತೆಯಾಗಿ ಪ್ರಿಯವುಳ್ಳವಳಾಗಿ, ಚಂದವುಳ್ಳವಳಾಗಿ ಕುಲವಂತೆಯಾಗಿದ್ದ ಸ್ತ್ರೀಯನ್ನು ವಿವಾಹವಾಗಬೇಕು. ಅದರೊಳು, ಪರ್ವತ, ನದೀ, ನಕ್ಷತ್ರ ಸರ್ಪ, ಪಕ್ಷಿ, ಇದರೊಳೊಬ್ಬರ ಹೆಸರನ್ನಿಕ್ಕಿದವಳೂ, ಒಡವೆಯ ಆಶೆಯಿಂ, ಅವಯವಂಗಳಲ್ಲಿ ಹೆಚ್ಚು ಕಂದಾದವಳು, ಮೈಯಲ್ಲಿ ರೋಮಗಳಿಲ್ಲದವಳೂ, ಬಹು ರೋಮಗಳುಂಟಾದವಳೂ, ನುಣುಪಾಗಿ ಮೃದುವಾಗಿ ಇರದೆ ಘಾತ್ರವಾಗಿ ಬಿರುಸಾದ ಮಂಡೆಯ ಕೂದಲುಳ್ಳವಳೂ, ಕುಲಹೀನೆಯಾದವಳೂ, ಸಾಕಿಕೊಂಡವಳೂ, ಇಂಥಾವರಲ್ಲದೆ ಉತ್ತಮ ಲಕ್ಷಣಂಗಳುಳ್ಳ ಸ್ತ್ರೀಯನ್ನು ಮದುವೆಯಾಗಲು ಆಯುಷ್ಯವುಳ್ಳವನಾಗಿ, ಅವಗೆ ಅನೇಕ ಸುಖ ಉಂಟಾಗುವದೂ ಎಂದೂ ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನೆಂಬದಾಗಿ ವ್ಯಾಸರು ತನಿಗೆ ಬುದ್ಧಿಗಲಿಸಿದರೆಂದು ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಹೇಳ್ದ ದೆಂಬಲ್ಲಿಗೆ ಅಧ್ಯಾಯಾರ್ಥ.

ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಶ್ರೀ ಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀ ಮಹಿಮಾರ್ಥದರ್ಪಣದಲ್ಲಿ ಬ್ರಹ್ಮಚರ್ಯಾದಿ ಷೋಡಶಕರ್ಮವಂ ಪೇಳ್ದ ಮೂವತ್ತಾರನೆ ಅಧ್ಯಾಯಾರ್ಥನಿರೂಪಣಕ್ಕಂ ಮಂಗಳಮಹಾ.

ಮೂವತ್ತಾರನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ಮೂವತ್ತೇಳನೇ ಅಧ್ಯಾಯಂ.

ಸ್ತ್ರೀಲಕ್ಷಣ.

ಅನಂತರದಲ್ಲಿ ಅಗಸ್ತ್ಯನು ಕುಮಾರಸ್ವಾಮಿಗಿಂತೆಂದನು :— ಎಲೈ ಕುಮಾರಸ್ವಾಮಿ ಗೃಹಸ್ಥಾಶ್ರಮಕ್ಕೆ ಸ್ತ್ರೀಯು ಲಕ್ಷಣವಂತೆ ಯಾಗಲು ಮಹಾಸುಖವುಂಟು ಎಂದು ಬುದ್ಧಿಗಲಿಸಿದಿರಲ್ಲ, ಅಂಥಾ ಸ್ತ್ರೀಯ ಲಕ್ಷಣವನ್ನು ಬುದ್ಧಿಗಲಿಸಬೇಕೆನಲು, ಕುಮಾರಸ್ವಾಮಿ ಇಂತೆಂದನು:—ಎಲೈ ಅಗಸ್ತ್ಯನೆ! ಗೃಹಸ್ಥಾಶ್ರಮಕೆ, ಸ್ತ್ರೀಲಕ್ಷಣವಂತೆಯಾಗಲು ಅನೇಕ ಸುಖವುಂಟು, ವಿವಾಹಕ್ಕೆ ಮೊದಲೇ ಆದಿಯಲ್ಲಿ ಲಕ್ಷಣಂಗಳು ಶರೀರ, ಗಂಧ, ಕಾಂತಿ, ಬಲ, ಗಮನ, ವರ್ಣ, ರೇಖೆ, ಸುಳಿ, ಈ ಎಂಟು ಲಕ್ಷಣಂಗಳು, ಈ ಲಕ್ಷಣಂಗಳು ಅಂಗಾಲು ಮೊದಲಾಗಿ ಮುಡಿಯುಕೂದಲಪರ್ಯಂತರ ಈ ಒಂದೊಂದಕ್ಕೆ ಎಂಟುಲಕ್ಷಣದಲೆಕ್ಖದಲ್ಲಿ, ಅರವತ್ತನಾಲ್ಕು ಲಕ್ಷಣಗಳುಂಟು, ಅವು ಯಾವವೆಂದರೆ :— ಅಂಗಾಲು, ಅಂಗಾಲರೇಖೆ, ಅಂಗುಷ್ಠ, ಬೆರಳು, ನಖ, ಮೇಗಾಲು, ಹರಡು, ಹಿಂಮಡ, ಕಾಲರೋಮಂಗಳು, ಉಡಿ, ಹೊರವಾರು, ಅಂಡುಗಳು, ಗುಹ್ಯ, ಆಸನ, ಕಿಬ್ಬೊಟ್ಟೆ, ಹೊಟ್ಟೆ, ಹೊಕ್ಕಳು, ಅಳ್ಳೆ, ಮೊಗ್ಗಲು, ನಡುವು, ವಳಿತ್ರಯ, ಬಡಬಾಸೆ, ಹೃದಯ, ಯದೆ, ಸ್ತನ, ಕೊರಳದಂಡೆಯುಲುಬು, ಭುಜ, ಸಿರಸ್ಸು, ಕಂಕುಳು ಮಣಿಕಟ್ಟು, ಕರಗಳು, ಅಂಗೈರೇಖೆಗಳು, ಕೈಯ್ಯುವುಗುರುಗಳು, ಹೆಬ್ಬೆರಳು, ಮಿಕ್ಕಾದಬೆರಳುಗಳು, ಬೆನ್ನು, ಕೊರಳು, ಕಂಠ, ಕೊರಳಹಿಂಭಾಗ, ಗಡ್ಡ, ಗಲ್ಲಗಳು, ಕದಪು, ಮುಖ, ಕೆಳಗಣತುಟಿ, ಮೇಲಣತುಟಿ, ದಂತಗಳು, ನಾಲಿಗೆ, ಗೋಮಾಳೆ, ಕಟವಾಯಿ, ಮೂಗು, ಶೀನು, ಕಣ್ಣುಗಳು, ಹುಬ್ಬಿನನಡುವು, ಹುಬ್ಬುಗಳು, ಕಿವಿಗಳು, ಫಣೆ, ಶಿರಸ್ಸು, ಬೈತಲೆ, ಮುಂಡೆ, ಮುಂಡೆಯುಕೂದಲು, ಹೆಡತಲೆ. ಇಂತೆಂಬ ಅರವತ್ತನಾಲ್ಕು

ಲಕ್ಷಣವಿಲ್ಲದೆ ಲಕ್ಷಣಗಳುಳ್ಳವಳು ಸ್ತ್ರೀರತ್ನವೆನಿಸಿಕೊಳ್ಳುವಳು, ಸೌಭಾಲಕ್ಷಣಂಗಳು ಎಂತು ಇರಬೇಕೆಂದರೆ ವಿವರಿಸೇನು ಕೇಳು--ಸ್ತ್ರೀಯರ ಅಂಗಾಲು ನುಣುವಾಗಿ; ಮಾಂಸವತ್ತಾಗಿ, ಮೃದುವಾಗಿ ಸರಿಯಾಗಿ ಬೆವರಿಲ್ಲದೆ, ಬೆಚ್ಚನಾಗಿ, ಕೆಂಪಾಗಿ ಇರಬೇಕು, ಮಹಾ ಶುಭ, ಬಹು ಭೋಗಿಯಾಗಿ ಇಹಳು, ನುಣುಪಿಲ್ಲದೆ ಬಹು ಕಠಿಣವಾಗಿ, ಕಾಂತಿಯಿಲ್ಲದ್ದು ಹಾವಿಗೆಗಾಲಾದರೂ, ಮೊರಗಾಲಾದರೂ, ಬಿಳಿಗಿದ್ದರೂ ದುಃಖದರಿದ್ರೆಯುಹಳು, ಚಕ್ರ, ಶಂಖ, ಕಮಲ, ಸ್ವಸ್ತಿಕ, ಅಂಕುಶ, ಮತ್ಸ್ಯ ಛತ್ರ, ಈ ರೇಖೆಗಳೊಳಗೆ ಒಂದು ರೇಖೆಯಿದ್ದರೂ, ಎಡೆಬಿಡದೆ ನಡುಬೆರಳು ಮುಟ್ಟುವಂತೆ ಊರ್ಧ್ವರೇಖೆಇದ್ದರೆ ರಾಜಪತ್ನಿಯುಹಳು. ಉಗುರುಗಳು ಕೆಂಪುದೋರಿ, ಬಟುವಾಗಿ, ಕಾಂತಿಯುಳ್ಳವಾಗಿ ನುಣುವಾಗಿ ಇರಲು ಮಹಾಶುಭವು, ಇಲಿಯವರ್ಣ, ಸರ್ಪನವರ್ಣ, ಕಾಗೆವರ್ಣವಾಗಿ ಇರಲು ದುಃಖಿಯಾಗುವಳು, ಉಂಗುಷ್ಟವು ಧಪ್ಪವಾಗಿ ಬಟುವಾಗಿ, ಮಾಂಸಯುಕ್ತವಾಗಿ ಇರಲು ಭೋಗಿಯುಹಳು, ಬೆರಳುಗಳು ಡೊಂಕಾಗಿ ಗುಜ್ಜನಾದರೂ ಚಪ್ಪಟ್ಟೆಯಾಗಿರಲು ಭಾಗ್ಯಹೀನೆಯು ಳು, ಉಂಗುಷ್ಟ ಮಿತಿಮೀರಿ ಎಡೆಬಿಟ್ಟು ಇರಲು, ವಿಧವೆಯುಹಳು, ಅತಿವೃದ್ಧವಾಗಲು ಭಾಗ್ಯಹೀನೆ, ಬೆರಳು ಮೃದುವಾಗಿ ಅತಿಸಣ್ಣನಾಗದೆ ಬಟುವಾಗಿ, ಮೇಂಭಾಗದಲ್ಲಿ ಅತಿಪುಷ್ಟತದೋರಿ ಇರಲು ಪೂಜ್ಯಳಹಳು, ಬೆರಳುಗಳು ಅತಿ ನೀಳವಾಗಲು ವ್ಯಭಿಚಾರಿಯುಹಳು, ಅತಿಸಣ್ಣನಾಗಲು ದರಿದ್ರೆ, ಸಮವಾಗಿ ಪುಷ್ಟಿಯಾಗಿ ದಂಡುದೋರಿ ಇರಲು ಐಶ್ವರ್ಯವಂತೆಯಾಗುವಳು, ಮುಂಡುಬೆರಳಾಗಿ ಚಪ್ಪಟೆಯಾಗಿ ಕೊನೆಬೆರಳು ಇರಲು ದಾಸಿಯುಹಳು, ಎಡೆಬಿಟ್ಟು ಬೆರಳುಗಳಾಗೆ ದರಿದ್ರೆ, ಒಂದುಬೆರಳಮೇಲೆ ಒಂದುಬೆರಳು ಕುಳಿತಿರಲು, ಬಹು ಪತಿಗಳಂ ಕೊಂದು ಕಡೆಯಲ್ಲಿ ದಾಸಿಯಾಗುವಳು, ನಡೆವಾಗ, ಧೂಳಿ ಮುಸುಕಲು ತಂದೆತಾಯಿ ಗಂಡನೊಳಗಾಗಿ ಮೂರು ಕುಲವಂ ಕೆಡಿಸುವಳು, ನಡೆವಾಗ ಬೆರಳು ಭೂಮಿಯ ಮುಟ್ಟದಿರಲು ವಿಧವೆಯಾಗುವಳು, ಆ ಸಮಿಾಪದಬೆರಳು ಭೂಮಿಯ ಮುಟ್ಟದಿರಲು ಮೂವರು ಪತಿಗಳಂ ಕಳುಹುವಳು, ಮಿಕ್ಕ ಎರಡು

ಬೆರಳೂ ಗಿಡ್ಡನಾಗಿ ಇದ್ದರೆ ಪತಿಹೀನೆಯಾಗುವಳು ಉಂಗುರದ ಬೆರಳು ಗಿಡ್ಡವಾದ್ದವ ವಿಚಾರಿಯಿರಲೂ ಮೈ ನೆರೆಯದ ಮೊದಲೇ ಕೆಟ್ಟು ನಷ್ಟಯ್ಯುವಳೂ. ಕಾಲ ಉಗುರುಗಳು ನುಣ್ಣವಾಗಿ ಬಟುವಾಗಿ, ಉಬ್ಬಾಗಿ ಇರಲೂ, ರಾಜಪತ್ನಿಯಹಳೂ. ಮೇಗಾಲು ಉಬ್ಬಾಗಿ, ಬೆವರಿಲ್ಲದೆ, ನರಗಳು ಕಾಣಿಸದೆ, ಇಂಬಾಗಿ ಮಾಂಸಯುಕ್ತವಾಗಿರೆ ಶುಭ, ಪ್ರಾವೃಗೆಗಾಲಾಗಿರೆ ದರಿದ್ರೆಯಹಳೂ. ಬರಿಯು ನರಗಳು ಕಾಣಪಟ್ಟರೆ ನಿತ್ಯವೂ ದಾರಿಯು ನಡೆವಳೂ, ಮೇಗಾಲಲ್ಲಿ ರೋಮಗಳು ಇರಲೂ ದಾಡಿಯಹಳೂ. ಒಣಗಿ ಇರಲೂ ದರಿದ್ರೆ. ಹರಡುಗಳು ತೋರ್ಪಡದೆ ನರಗಳು ಕಾಣಿಸದೆ ಬಟುವಾಗಿ ಇರಲೂ ಶುಭ. ಹರಡುಗಳು ಚಪ್ಪಟೆಯಾಗಿ ಒಡಕಾಗಿ ನರಗಳು ಕಾಣಪಟ್ಟರೆ ಭಾಗ್ಯಹೀನೆ. ಹಿಮ್ಮಡವೆರಡೂ ಸರಿಯಾಗಿ ಇರಲೂ ಶುಭ. ಹಿಮ್ಮಡ ಅಗಲವಾಗಿ ಇರಲೂ ದರಿದ್ರೆ, ಉಬ್ಬಾಗಿರಲೂ ದರಿದ್ರೆ, ಕುಲಗೆಡಕಿ, ಬಿಡಿದಿರಲೂ ಬಹು ದುಃಖೀ, ಕಣಕಾಲುಗಳು ರೋಮಗಳಿಲ್ಲದೆ ಸರಿಯಾಗಿ ದುಂಡಾಗಿ ಬಟುವಾಗಿ ನರಗಳು ಕಾಣಿಸದೇ ಇರಲೂ ರಾಜವಲ್ಲಭೆ, ಹೀಗಿಲ್ಲದಿರೆ ದುಃಖಿಯಹಳೂ, ರೋಮಗಳು ರೋಮಕೂಪದಲ್ಲಿ ಒಂದೊಂದು ಇರೆ ರಾಜಪಟ್ಟದ ರಾಣಿಯಹಳೂ, ಎರಡೆರಡು ರೋಮಗಳಿರಲು ಸುಖವಂತೆ, ಮೂರುಮೂರು ರೋಮಗಳಿರಲೂ ಪತಿವಿಯೋಗವಹುದೂ, ಮೊಳಕಾಲು ಬಟುವಾಗಿ ಮಾಂಸಯುಕ್ತವಾಗಿರೆ ಮಹಾ ಶ್ರೇಷ್ಠ, ಮಾಂಸವಿಲ್ಲದಿರಲೂ ಸ್ವೇಚ್ಛೆಯಿಂದಾ ತಿರುಗಾಡುವಳೂ, ಜಜ್ಜಾಗಿರಲೂ ದರಿದ್ರೆ, ತೊಡೆಗಳು ನರಗಳು ಕಾಣಪಡದೆ ಇಂಬಾಗಿ ದುಂಡಾಗಿ ತೋರವಾಗಿ ಬಟುವಾಗಿ ರೋಮಂಗಳು ತೋರ್ಪಡದಿರಲು ರಾಜಪತ್ನಿಯಹಳೂ, ಗಿಡ್ಡನಾಗಿ ರೋಮಯುಕ್ತವಾಗಿರಲೂ ವಿಧವೆಯಾಗುವಳೂ, ಮೊರಪಾರು ಉನ್ನತವಾಗಿ ಮಾಂಸಯುಕ್ತವಾಗಿ ಘನವಾಗಿರಲೂ ಮಹಾ ಭೋಗಿಯಾಗುವಳೂ, ಹೀಗಲ್ಲದಿರೆ ಸುಖವಿಲ್ಲ. ಅಂಗಾಲುಗಳು ಮುಕ್ಕಿಲ್ಲದಿರಲೂ ರತಿಸೌಖ್ಯ ಉಂಟು. ಹೀಗಿಲ್ಲದಿರೆ ದುಃಖಉ. ಯೋನಿಯು ಕೂರ್ಮನ ಬೆನ್ನಿನಂತೆಯೂ, ಆನೆಯ ಮುಂಗಾಲು

ಕೊರಳ ಸಂದಿನಂತಿರೆ ಶುಭ. ಎಡದಕಡೆ ಉನ್ನತವಾಗಲೂ ಬಹಳ ಹೆಣ್ಣು ಮಕ್ಕಳಂ ಪಡೆವಳೂ, ಬಲದಕಡೆ ಉನ್ನತವಾಗಿರೆ ಗಂಡು ಸಂತಾನವಂ ಪಡೆವಳೂ, ಇಲಿಯ ರೋಮದಂತೆ ರೋಮ ಉಂಟಾಗಿ ಗ್ರಂಥಿ ಕಾಣ ಬಂದರೆ, ಇಭ್ಭಾಗವೂ ಕೂಡಿ ಅಗಲವಾಗದೆ ಉಬ್ಬಾಗಿ ಬಳಪ್ರದೇಶ ಕೆಂದಾವರೆಯ ಎಸಳನಂತೆ ಕೆಂಪಾಗಿ ಅರಳೀಯಲೆಯ ಹಿಂಭಾಗದಂತೆ ನಡು ಉಬ್ಬಾಗಿ, ಎರಳೆಯ ಪಾದದಂತೆಯೂ ಚನ್ನಾಗಿ ನಿರ್ಮಿಸಿದ ಪಳಿಯ ಆಕಾರದಂತೆ, ಗದ್ದೆಯ ಮಡವಾಯಂತೆ ಯೋನಿ ಇರಲೂ ನಿರಂತರ ಸುಖಸಂತಾನದಿಂ ಭೋಗಿಯಹಳೂ, ರೋಮಗಳುಂಟಾಗಿ ಹೊರ ಗ್ರಂಥಿಯಾಗಿರಲೂ ಭಾಗ್ಯಹೀನೆ, ಒಳಗೆ ಶಂಖದ ಸುಳಿಯಂತಿರಲೂ ಗರ್ಭ ನಿಲ್ಲದೂ, ಚಪ್ಪಟೆಯಾಗಿ ಕಪ್ಪರದಾಕಾರವಾಗಿರಲೂ ದಾಸಿಯಹಳೂ, ಯೋನಿಯ ಮೇಲಣ ಪ್ರದೇಶ ಜಘನವೆನಿಸುವದೂ. ಆ ಜಘನ ಅತಿ ಅಗಲವಾಗದೆ ನೀಳವಾಗದೆ ಉಬ್ಬಾಗಿ ಮಾಂಸ ಉಂಟಾಗಿ ಮೃದುವಾಗಿ ಮೃದುವಾದ ರೋಮಂಗಳುಂಟಾಗಿ ಪ್ರದಕ್ಷಿಣಸುಳಿಯಿರೆ ಶುಭ, ಮತ್ತೂ ನಿರ್ಮಾಂಸವಾಗಿ ರೋಮೆಯಾಗಿ ಅಪ್ರದಕ್ಷಿಣವಾದ ಸುಳಿಯಿರಲು ವೈಧವ್ಯ, ಇರುಕಾಗಿ ಚಪ್ಪಟ್ಟೆಯಾಗಿ ಕಾಂತಿಯಿಲ್ಲದಿರಲು ದುಃಖಿಯಹಳೂ, ಕಿಬ್ಬೊಟ್ಟೆ ವಿಶಾಲವಾಗಿ ಮೃದುವಾಗಿ ಬಂದಿಷ್ಟ ಬಾಗಿಯಿರಲೂ ಪ್ರಶಸ್ತ, ರೋಮಯುಕ್ತವಾಗಿ ನರಗಳು ತೋರ್ಪಟ್ಟ ರೇಖೆಗಳುಂಟಾಗಿರಲೂ ಒಳ್ಳಿತಲ್ಲ. ಹೊಕ್ಕುಳು ಗುಣಿಯಾಗಿ ಪ್ರದಕ್ಷಿಣ ಸುಳಿ ಉಂಟಾಗಿರೆ ಶುಭ, ಪ್ರದಕ್ಷಿಣ ಸುಳಿ ಉಂಟಾಗಿ ಗ್ರಂಥಿ ಕಾಣಪಟ್ಟರಲೂ ಅಶುಭ, ಹೊಟ್ಟೆ ಅಗಲವಾಗಿರಲೂ ಬಹು ಕುಮಾರರಂ ಪಡೆವಳೂ, ಕಪ್ಪೆಯ ಹೊಟ್ಟೆಯಂತೆ ಹೊಟ್ಟೆ ಅಗಲವಾಗಿರಲೂ ರಾಜಪತ್ನಿಯಾಗಿ ರಾಜ್ಯವನಾಳುವ ಕುಮಾರನಂ ಪಡೆವಳೂ, ಹೊಟ್ಟೆ ಉಬ್ಬಿಗಿರಲೂ ಬಂಜೆಯಹಳೂ, ತ್ರಿವಳಿಗಳಿಲ್ಲದೆ ವಿಶೇಷವಾಗಿ ವಳಿಗಳಿರಲೂ ವಿರಕ್ತೆಯಾಗುವಳೂ, ಹೊಟ್ಟೆಯಮೇಲೆ ಸುಳಿ ಯಿರಲೂ ದಾಸಿಯಾಗುವಳೂ, ನೆಗ್ಗಲುಗಳೆರಡೂ ಪುಂಭಾಗ ಹಿಂಭಾಗ ಹೆಚ್ಚು ಕುಂದಾಗದೆ ಮೃದುವಾಗಿ ಅಸ್ಥಿಗಳು ಕಾಣಪಡದೆ ಯಿರಲೂ

ಐಶ್ವರ್ಯವಂತೆಯಾಹಳೂ, ಪಾದಗುಲುಗಳಲ್ಲಿ ನರಗಳು ಕಾಣಪಟ್ಟು ಉಬ್ಬಿಗಿ ರೋಮಗಳೂ ಕಾಣಪಟ್ಟರೂ ಸಂತಾನವಾಗವಳೂ, ಧುರಂಭಾರದಿಂ ದುಃಖಿಯಾಗುವಳೂ, ಅಳ್ಳೆ ಕೊಂಚವಾಗಿ ನರಗಳು ತೋರದೆ ಮೃದುವಾಗಿ ನಸುಬೆವರುಂಟಾಗಿರಲೂ ಮೃಷ್ಟಾನ್ನ ಭೋಜನ ಉಂಟಾಗಿ ಸುಖದಿಂದಿಹಳೂ, ಹೊಟ್ಟೆ ಕೊಡನಂತೆ, ಮದ್ದಳೆಯಂತಿರಲೂ ದರಿದ್ರೆ, ಕುಂಬಳಕಾಯಂತೆ, ಗುಡಾಣದಂತೆ ಯಿರಲೂ ಸಂತಾನವಿಲ್ಲ, ದರಿದ್ರೆಯಾಹಳೂ, ಜೋಲುಹೊಟ್ಟೆಯಾಗಿರೆ ಮಾವಮೈದುನರು ಬದುಕರೂ, ನಡುವು ಸಣ್ಣನಾಗಿ ಬಡಬಾಸೆ ಕವಾಗಿ, ಡೊಂಕಾಗದೆ ಸಣ್ಣನಾಗಿರೆ ಸುಖ, ಕಪಿಲೆಬಣ್ಣವಾಗಿರೆ ಕಳ್ಳೆಯಾಗುವಳೂ, ಕೊಂಕಾಗಿರೆ ವಿಧವೆ ಅಗಲವಾಗಿ ನಾಭಿಯಿಂದ ಎದೆಯು ಮುಟ್ಟದೆ ಬಡಬಾಸೆ ಯಿರಲೂ ದರಿದ್ರೆ, ಹೃದಯದಲ್ಲಿ ರೋಮಂಗಳಿಲ್ಲದೆ ಗುಣಿಯಾಗದಿರಲೂ ವಿಧವೆಯಾಗಿ ಭಾಗ್ಯವನನುಭವಿಸುವಳೂ, ಎದೆಕಟ್ಟು ಅತ್ಯಂತ ಅಗಲವಾಗಿರೆ ಪುರುಷನಂತೆ ಸಂಚರಿಸುವಳೂ, ಉರಸ್ಥಳದಲ್ಲಿ ನಟ್ಟನೆ ರೋಮ ಉಂಟಾಗಿರಲೂ ಗಂಡ ಬದುಕನು, ಎದೆ ಹದಿನೆಂಟು ಅಂಗುಲ ಪ್ರಮಾಣವಾಗಿ ಉಬ್ಬಾಗಿರಲೂ ಸುಖಿಯಾಗುವಳೂ, ಈ ಪ್ರಮಾಣಕ್ಕೆ ಕಡಮೆಯಾಗಿ ಬಹು ರೋಮಂಗಳುಂಟಾಗಿರಲೂ ದುಃಖಿಯಹಳೂ, ಸ್ತನಗಳು ಬಟ್ಟುವಾಗಿ ತೋರವಾಗಿ ಎಡೆಬಿಡದೆ ಯಿರಲೂ ಶುಭ, ತೊಟ್ಟುಗಳು ಕಾಣಪಡದೆ ಇದ್ದರೂ ಅತಿ ನೀಳವಾದರೂ ಅತಿ ಸಣ್ಣವಾದರೂ ದುಃಖೀ, ಕೊರಳದಂಡೆ ಎಲುಬು ತಕ್ಕಹಾಗೆ ಘಾತ್ರವಾಗಿ ಇರಲೂ ಧನ ಧಾನ್ಯ ಸಮೃದ್ಧಿ, ಬಜ್ಜಾಗಿ ಡೊಂಕಾಗಿ ಹೆಚ್ಚು ಕುಂದಾಗಿ, ಘಾತ್ರವಾಗಿ ಆ ಸಮೀಪದಲ್ಲಿ ಉಬ್ಬಾಗಿರಲೂ ಶುಭವಲ್ಲ, ಮೊದಲಲ್ಲಿ ಘಾತ್ರವಾಗಿ ಕ್ರಮದಿಂದಾ ಸಣ್ಣನಾಗಿ ಕೊನೆಯಲ್ಲಿ ಸಣ್ಣವಾಗಿರಲೂ ಬಹುಕಾಲ ಸುಖವನನುಭವಿಸಿ ಕಡೆಯಲ್ಲಿ ದುಃಖವನನುಭವಿಸುವಳು, ಭುಜಗಳು ಹಿಂದಕ್ಕಾದರೂ ಮುಂದಕ್ಕಾದರೂ ಎಳದು ಕಟ್ಟಿದಂತಿರದೇ ಸಮವಾಗಿ ಅತಿ ಸಣ್ಣನಾಗದೆ ಅತಿ ದೀರ್ಘವಾಗದೇ ಯಿರಲೂ ಸುಖಿಯಹಳೂ, ಡೊಂಕಾಗಿ ಘಾತ್ರವಾಗಿ ರೋಮಂಗಳುಂಟಾಗಲೂ ವಿಧವೆಯಹಳೂ, ಭುಜ

ಶಿರಸ್ಸುಗಳು ಸಂದುಬಿಡದೆ ಮೊಣಗಳಲ್ಲಿ ಭೂಷಣವಾಗಿ ಇರಲೂ ಶುಭ. ಮೊನೆಯಾಗಿ ಮಾಂಸವಿಲ್ಲದೆ ಇರಲೂ ಮಹಾದುಃಖ, ಕಂಕುಳು ಸಣ್ಣ ರೋಮವುಂಟಾಗಿ, ಮಧ್ಯದಲ್ಲಿ ಉಬ್ಬಾಗಿ ನುಣುಪಾಗಿ ಮಾಂಸಯುಕ್ತವಾಗಿರೆ ಒಳ್ಳಿತು, ಗುಣಿಗಳಾಗಿ ನರಗಳು ಕಾಣಪಟ್ಟು ಬೆವರು ಪುಟ್ಟಿ ರೋಮಗಳಧಿಕವಾಗಿರಲೂ, ಹೊಕ್ಕುಳ, ತೋಳ್ಗಳು ಎಲುವುಗಳು ಕಾಣಬರದೆ ಕೋಮಲವಾದ ಮೊಣಕೈಯುಚಿಪ್ಪುಗಳುಂಟಾಗಿ ನರಗಳು ಕಾಣಪಡದೆ ರೋಮಂಗಳಿಲ್ಲದೇ ಸರಳಾಗಿ ಇರಲೂ ಶುಭವೂ, ಘಾತ್ರವಾದ ರೋಮಂಗಳುಂಟಾಗಿ ಗುಡ್ಡನಾಗಿ ಇರಲೂ ವೈಧವ್ಯ, ಭಾಗ್ಯಹೀನೆ. ಅತಿ ದೀರ್ಘವಾಗಿ ನರಗಳು ಕಾಣಪಡಲೂ ದುಃಖಿಯಹಳೂ, ಕರಗಳೆರಡನೂ ಕೂಡಿಸಲೂ ತಾವರೆಯ ಮೊಗ್ಗಿನಂತೆ ಬೆರಳುಗಳು ಮೃದುವಾಗಿ, ಕೇದಗೆಯ ಸುಳಿಯಂತೆ ರಕ್ತವರ್ಣಗಳಾದ ಉಗುರುಗಳಿಂದೊಪ್ಪಲೂ ಬಹು ಭೋಗಿಯಹಳೂ, ಅಂಗೈಗಳು ಮೆತ್ತನಾಗಿ ನಡುವೆ ಉಬ್ಬಾಗಿ ಕೆಂಪಾಗಿ ಬೆರಳುಗಳು ಸಂದುಬಿಡದೆ ಉಭಯ ರೇಖೆಗಳುಂಟಾಗಿ ಬಹು ರೇಖೆಗಳಿಲ್ಲದಿರಲೂ ಪ್ರಶಸ್ತವು. ಅಪ್ರಶಸ್ತ ರೇಖೆಗಳು ಬಹಳವಾಗಿರಲೂ ವಿಧವೆಯಾಗುವಳೂ. ರೇಖೆಗಳಿಲ್ಲದಿರಲೂ ದರಿದ್ರೆಯಾಗುವಳೂ, ಬಹಳವಾಗಿ ಅಂಗೈಯ್ಯಲ್ಲಿ ನರಗಳು ಕಾಣಬರಲೂ ಭಿಕ್ಷುಕನ ಹೆಂಡತಿಯಹಳೂ, ಮೇಗೈಯ್ಯಲ್ಲಿ ರೋಮಂಗಳು ನರಗಳು ಕಾಣಿಸುತ್ತಿರಲೂ ದುಃಖಿಯಹಳೂ, ಎಡವಕೈಯ್ಯಲ್ಲಿ ಗಂಭೀರವಾಗಿ ನುಣುಪಾಗಿ ಬಟುವಾಗಿ ರೇಖೆಗಳಿರಲೂ ಭಾಗ್ಯವಂತೆಯಹಳೂ, ಅಂಗೈಯ್ಯಲ್ಲಿ ಮತ್ಸ್ಯರೇಖೆ ಇರಲೂ ಐಶ್ವರ್ಯವಂತೆಯಹಳೂ, ಸರ್ವತೋಭದ್ರರೇಖೆಯಿಂ ಧನವಂತೆಯಹಳೂ, ಪದ್ಮರೇಖೆ ಇರಲೂ ರಾಜಪತ್ನಿಯಾಗಿ ರಾಜ್ಯವನಾಳುವಂಥಾ ಮಗನ ಪಡೆವಳೂ, ನಂದ್ಯಾವರ್ತರೇಖೆ ಇರಲೂ ಚಕ್ರವರ್ತಿಯ ರಾಣಿಯಹಳೂ, ಶಂಖರೇಖೆ ಚಕ್ರರೇಖೆ ಕೂರ್ಮರೇಖೆಗಳಿರಲೂ, ಬೆಹಾರಿಸ್ತ್ರೀಯಹಳೂ, ಆನೆ, ಕುದುರೆ, ವಜ್ರರೇಖೆಗಳಿರಲೂ ಪತಿವ್ರತೆಯಾಗಿ ಮಹಾ ಐಶ್ವರ್ಯವಂತೆಯಹಳೂ, ಘಂಟೆಯಂತೆ ನೊಗದಂತೆ ರೇಖೆಗಳಿರಲೂ ಆರಂಭವನಧಿಕವಾಗ ಮಾಳ್ಪ

ವನ ಹೆಂಡತಿಯಾಹಳೂ, ವಿಂಚಾಮರ ಅಂಕುಶಧ್ವಜ ರೇಖೆಗಳಿರಲೂ ರಾಜಪತ್ನಿಯಾಹಳೂ, ಹೆಬ್ಬೆರಳ ಮೊದಲಿಂದಾ ಕಿರುಬೆರಳು ಮುಟ್ಟ ರೇಖೆ ಇರಲೂ ವೈಧವ್ಯ, ತ್ರಿಶೂಲ, ಖಡ್ಗ, ಗದೆ, ಶಕ್ತಿಭೇರಿ, ಇವರ ಆಕಾರದ ರೇಖೆಗಳಿರಲೂ ತ್ಯಾಗ ಭೋಗ ಕೀರ್ತಿಯುಳ್ಳವಳಹಳೂ, ಹದ್ದು, ಕಪ್ಪೆ, ನರಿ, ತೋಳ, ಹಾವು, ಚೇಳು, ಕತ್ತೆ, ಬೆಕ್ಕು, ಈ ಆಕಾರದ ರೇಖೆಗಳಿರಲೂ ಮಹಾ ದುಃಖಿಯಾಹಳೂ, ಚನ್ನಾಗಿ ಗಿಣ್ಣುಗಳುಂಟಾಗಿ ನೀಳವಾಗಿ, ಗುಡ್ಡನಾಗದೆ ಕ್ರಮದಿಂದಾ ಸಣ್ಣನಾಗಿರೆ ಶುಭವೂ, ಚಪ್ಪಟೆಯಾಗಿ ಅಂಚುವುಳ್ಳದ್ದಾಗಿ ಕಾಂತಿ ಇಲ್ಲದೆ ರೋಮಗಳುಂಟಾಗಿ ಅತಿಗುಡ್ಡನಾಗಿ ಬೆರಳುಗಳಿಡೆಬಿಟ್ಟು ಗಿಣ್ಣುಗಳಲ್ಲಿ ರೋಮಂಗಳುಂಟಾಗಿ ಬಹು ರೇಖೆಗಳುಂಟಾಗಿರಲು ಅತ್ಯಂತ ದುಃಖಿಯಾಹಳೂ, ಉಗುರುಗಳು ಕೆಂಪಾಗಿ ಉಬ್ಬಾಗಿರಲೂ ಶುಭ, ಗುಣಿಗಳಾಗಿ ವಿವರ್ಣಗಳಾಗಿ, ಕಪ್ಪೆಚಿಪ್ಪಿನ ಆಕಾರವಾಗಿರಲೂ ಅಶುಭ, ಉಗುರುಗಳಲ್ಲಿ ಮಚ್ಚೆ ಇರಲೂ ವ್ಯಭಿಚಾರಿಯಾಹಳೂ, ಈ ಲಕ್ಷಣವು ಪುರುಷರಿಗೂ ಒಳ್ಳಿತಲ್ಲ. ಬೆನ್ನ ಎಲುವು ತೋರದೆ ಇದ್ದರೆ ಭಾಗ್ಯವಂತೆಯಾಹಳೂ, ಬೆನ್ನ ಎಲುಬು ತೋರಪಟ್ಟು ರೋಮಯುಕ್ತವಾಗಿರಲೂ ವೈಧವ್ಯ, ಅಗಲವಾಗಿ ನರಗಳು ಕಾಣಬರಲೂ ದುಃಖಿಯಾಹಳೂ, ಕೊರಳ ಹಿಂಭಾಗ ಸರಳಾಗಿ ಮಾಂಸ ಉಂಟಾಗಿ ಉಬ್ಬಾಗಿರಲೂ ಶುಭ, ಬಣಗಿತೊಂಡು ನರಗಳು ಉಬ್ಬಾಗಿ ಡೊಂಕಾಗಿ ಇರಲು ಅಶುಭ, ಕೊರಳು ನಾಲ್ಕಂಗುಳ ಪ್ರಮಾಣವಾಗಿರಲು ಮೂರು ರೇಖೆ ಉಂಟಾಗಿ ಗೋಮಾಳೆ ಕಾಣಿಸದೆ ಇರಲೂ ಅತಿ ಶುಭ, ನೀಳವಾಗಿ ಮಾಂಸವಿಲ್ಲದೆ ಚಪ್ಪಟೆಯಾಗಿ ಮುಮ್ಮೂಲೆಯಾಗಿರಲು ಅಶುಭವೂ, ಕೊರಳು ಘಾತ್ರವಾಗಿರೆ ವೈಧವ್ಯ, ಕೊರಳು ಡೊಂಕಾಗಿರಲೂ ದಾಸಿಯಾಹಳೂ, ಹಾವಿಗೆಗೊರಳಾಗೆ ಭಾಗ್ಯಹೀನೆಯಾಗಿ ಬಂಜೆಯಾಗುವಳು. ಔಕಿದ ಕೊರಳಾಗೆ ಸ್ವರ ಹೀನೆ, ಗಡ್ಡ ಎರಡಂಗುಲ ಪ್ರಮಾಣವಾಗಿ ಧಪ್ಪನಾಗಿ, ಬಟುವಾಗಿ, ಕೋಮಲವಾಗಿರಲೂ ಶುಭ, ಗಡ್ಡ ಘಾತ್ರವಾಗಿ, ಇಬ್ಭಾಗವಾಗಿ ರೋಮಯುಕ್ತವಾಗಿರಲೂ ಅಶುಭ, ಗಡ್ಡದ ಕೆಳಗಣ ದಾಡೆ ರೋಮಂಗಳಿಲ್ಲದೆ ಗಡ್ಡ

ಜೊಡನೆ ಕೂಡಿರಲೂ ಮಹಾ ಶುಭ, ದಾಡೆಗಳು ಘಾತ್ರವಾಗಿ ಜತೆಯಾಗಿ ರೋಮಯುಕ್ತವಾಗಿರಲೂ ಅಶುಭ, ಕದಪುಗಳು ಬಟುವಾಗಿ ಉಬ್ಬಾಗಿರಲು ಶುಭವು, ಕದಪುಗಳು ರೋಮಗಳುಂಟಾಗಿ ಕಠಿಣವಾಗಿ ನಿರ್ಮಾಂಸವಾಗಿ ಗುಣಿಯಾಗಿರಲೂ ಅಶುಭ, ಬಾಯಿ ಸಮವಾಗಿ ನುಣುಪಾಗಿ ದಟ್ಟವಾಗಿ ಬಟುವಾಗಿ ಬೆಳದಿಂಗಳ ಕಾಂತಿಯುಳ್ಳ ದಂತಗಳುಂಟಾಗಿ ಸುಗಂಧ ವಾಸನೆಯಾಗಿರಲೂ ಮಹಾ ಪೂಜ್ಯವಂತೆಯಹಳು, ಕೆಳಗಣ ತುಟಿ ಬಿಳುದು ಕೂಡಿದ ಕೆಂಪಾಗಿ ಬಟುವಾಗಿ ಮಿಂಚಾಗಿ ನಡುವೆ ರೇಖೆಯುಂಟಾಗಿಯಿರಲು ಮಹಾಶುಭ, ಕೃಶವಾಗಿ ಲಂಬವಾಗಿ ಮೂಲೆಯಾಗಿ ಮಿಂಚಿಲ್ಲದಿರಲು ಅಶುಭ, ಭಾಗ್ಯಹೀನೆಯಾಗುವಳು, ಕಪ್ಪಾಗಿ ಘಾತ್ರವಾಗಿಯಿರಲು ವೈಧವ್ಯ, ಕಲಹಪ್ರಿಯೆ, ಮೇಲಣ ತುಟಿ ನುಣುಪಾಗಿರಲು ಶುಭವು. ನಡುವೆ ಉಬ್ಬಾಗಿ ರೋಮಯುಕ್ತವಾಗಿರಲು ದುಃಖಿಯಹಳು, ಗೋಕ್ಷೀರದಂತೆ ಬಿಳಿದಾಗಿ ಕೆಳಗೂ ಮೇಲೂ ಸರಿಯಾಗಿ ಸಣ್ಣನಾಗಿ ಕಾಂತಿಯುಳ್ಳವಾಗಿ ಗುಡ್ಡನಾಗಿ ಮೂವತ್ತೆರಡು ದಂತಗಳುಯಿರೆ ಶುಭ, ಅರಿಶಿನವರ್ಣವಾಗಿ ಕಪ್ಪಾಗಿ ಘಾತ್ರವಾಗಿ ನೀಲವಾಗಿ ಎರಡುಮೂರು ಸಾಲುಗಳಾಗಿ ಕಪ್ಪೆಚಿಪ್ಪಿನ ಆಕಾರವಾಗಿ ಯಡೆಬಿಟ್ಟಿರಲು ನಾನಾದುಃಖವನನುಭವಿಸುವಳು, ಕೆಳಗಣ ಹಲ್ಲು ಹದಿನಾಲ್ಕಕ್ಕೆ ಹೆಚ್ಚಾಗಿರಲು ತಾಯಿಗಾಗದು, ಶಿಂಗಿವಲ್ಲಾಗಲು ವಿಧವೆಯಾಗುವಳು, ಎಡೆಬಿಟ್ಟಿರಲು ವ್ಯಭಿಚಾರಿಯಹಳು, ನಾಲಿಗೆ ಮಿಂಚಾಗಿ ಕೆಂಪಾಗಿ ಮೃದುವಾಗಿರಲು ಮೃಷ್ಟಾನ್ನಭೋಜನವುಂಟಾಗಿಯಿಹಳು, ನಾಲಿಗೆ ನಡುವೆ ಸಣ್ಣನಾಗಿರಲು ದುಃಖ, ನಾಲಿಗೆ ಮುಂಭಾಗ ಅಗಲವಾಗಿರಲು ಜಾತಿಸಂಕರೆಯಹಳು, ಡೊಂಕಾಗಿರಲು ತಮ್ಮ ಬಂಧುಗಳು ಬಹುಮಂದಿಯ ಮರಣವಕಾಬಳು, ಕಪ್ಪಾಗಿರಲು ಕಲಹಪ್ರಿಯೆ, ದಪ್ಪವಾಗಿಯಿರಲು ದರಿದ್ರ, ಲಂಬವಾಗಿರಲು ಅಭಕ್ಷ್ಯಭಕ್ಷಣೆಯಾಗುವಳು, ಅಗಲವಾಗಿ ಬಡವಾಗಿರಲು ಕುಲಗೆಡಕಿಯಹಳು, ಕಣ್ಣುಗಳು ಆಡಿನ ಕಣ್ಣು ಎಮ್ಮೆಯ ಕಂಣಿನಹಾಗಿರಲು ಪ್ರಶಸ್ತವಲ್ಲ. ಹಸುವಿನಕಣ್ಣು ಬೆಕ್ಕುಕಣ್ಣಿನವಳು ಅಶುಭೆ, ಪಾರಿವಾಳದಕಣ್ಣಿನಂತವಳು ದುರಾಚಾರೆ, ದುಃ

ಕ್ಕೀಲೆ, ಕಾಂತಿಹೀನವಾದ ಕಣ್ಣುಳ್ಳವಳು ಪತಿಯಂ ಕೊಲ್ಲುವಳು, ಗುಣಿಕಣ್ಣುಳ್ಳವಳು ಮಹಾದುಷ್ಟೆ, ಆನೆಯಕಣ್ಣಿನಂತಿರಲು ಧನಧಾನ್ಯಸಮೃದ್ಧಿಯುಳ್ಳವಳು, ಎಡದಕಣ್ಣು ಮೆಳ್ಳೆಯಾಗಲು ಪುರುಷನಂ ಧಿಕ್ಕರಿಸುವಳು, ಬಲದಕಣ್ಣು ಮೆಳ್ಳೆಯಾಗಲು ಬಂಜೆ, ಜೇನುತುಪ್ಪದಕಾಂತಿಯಂತೆ ಕೆಂಗಣ್ಣುಳ್ಳವಳು ಮಹಾ ಭಾಗ್ಯವಂತೆಯಹಳು, ತಾವರೆಯ ಹೂವು ನೈದಿಲೆಯಹೂವು ಎರಳೆಯಕಣ್ಣು, ದೊಡ್ಡವಾದ ತಾರೆಗಣ್ಣಾದವಳು ಭಾಗ್ಯವಂತೆ, ಯವೆಗಳು ದೀರ್ಘವಾಗಿ ಮಿತವಾಗಿ ಕಪ್ಪಾಗಿ ಸೂಕ್ಷ್ಮವಾಗಿರಲು ಸೌಭಾಗ್ಯವಂತೆಯಹಳು, ಕಪಿಲವರ್ಣವಾಗಿ ಯಡೆಬಿಟ್ಟು ಕಪ್ಪಾದ ಕೂದಲಿರಲು ನಿಂದೆಯಹೊರುವಳು, ಹುಬ್ಬುಗಳುದುಂಡಾಗಿ ಸೂಕ್ಷ್ಮ ನುಣುಪಾಗಿ ಕಪ್ಪಾಗಿ ಕೂಡದೆ ಮೃದುರೋಮವುಳ್ಳುಂಟಾಗಿ ಶಿಂಗಾಡಿಯ ಬಿಲ್ಲಿನಾಕಾರ, ಜೇನಿನಸಯಿಂಹಾಕಾರವಾಗಿರೆ ಶುಭ, ಕತ್ತರಿಯರೋಮವುಳ್ಳಂಥಾ ರೋಮಂಗಳುಂಟಾಗಿ ಅಗಲವಾಗಿ ಕೆದರಿದ್ದು ದಪ್ಪಗಿ ಕೂಡಿದ ಹುಬ್ಬಾಗಿ ನೀಳವಾಗಿ ಕೆಂಚುರೋಮಗಳಿರಲು ಅಶುಭವು, ಕಿವಿಗಳು ಉರುಟಾಗಿ ಮಾಂಸಯುಕ್ತವಾಗಿ ಪ್ರದಕ್ಷಿಣವಾದ ಸುಳಿಗಳುಂಟಾಗಿರಲು ಮಹಾಶುಭ, ಡೊಂಕಾಗಿ ಕೊಂಚವಾಗಿ ಬಹಳ ಕೆಗ್ಗವುಟಾಗಿರಲು ಮಹಾನಿಂದೆಯಹೊರುವಳು, ಹಣೆಯಲ್ಲಿ ನರಗಳುತೋರದೆ ರೋಮಗಳಿಲ್ಲದೆ ಅರ್ಧಚಂದ್ರನಂತೆ ಗುಣಿಯಾಗದೆ ಮೂರು ಅಂಗುಲ ಪ್ರಮಾಣದಗಲವಾಗಿರಲು ಬಹುಸೌಭಾಗ್ಯವಂತೆಯಾಗಿ ಬಹಳ ಆರೋಗ್ಯದಲ್ಲಿರುವಳು, ಹಣೆಯಲ್ಲಿ ಸ್ವಸ್ತಿಕ ರೇಖೆ ಇರಲು ರಾಜಪತ್ನಿಯಹಳು, ಜೋಲುಹಣೆಯಾಗಲು ಮಾವನಿಗಾಗದು, ರೋಮಂಗಳಿದ್ದರೂ ನರಗಳು ಕಾಣಿಸಿದರೂ ಬಂಜೆಯಹಳು, ಬೈತಲೆ ಸರಳಾಗಿರೆ ಶುಭ, ಹಲ್ಲಿಯ ಆಕಾರದಲ್ಲಿರೆ ವಿಪತ್ತನ, ಡೊಂಕಾಗಿರೆ ಅಶುಭ, ಶಿರಸ್ಸು ಬಟ್ಟವಾಗಿರೆ ಆನೆಯಕುಂಭಸ್ಥಳದಂತಿರಲು ಐಶ್ವರ್ಯವನನುಭವಿಸುವಳು, ಅತಿ ತೋರವಾಗಿಯಿರಲು ವೈಧವ್ಯ, ನೀಳವಾಗಿರಲು ವ್ಯಭಿಚಾರಿಯಹಳು, ನಡುತಲೆ ಅಗಲವಾಗಿರಲು ಮಹದೈಶ್ವರ್ಯ, ಮಂಡೆಯಕೂದಲು ಅತಿದೀರ್ಘವಾಗಿ ತುಂಬಿಗಳಂತೆ ಕಪ್ಪಾಗಿ ಮಿಂಚುದೋರಿ ಸಣ್ಣನಾಗಿ ಕೊನೆಯಲ್ಲಿ ಬಂ

ದಿಷ್ಟ್ಯ ಕರುಳುಗಳುಂಟಾಗಿರಲು ಸೌಭಾಗ್ಯವಂತೆಯಹಳು, ಭಿರುಸಾಗಿ
ದೊಂಕಾಗಿ, ಹೆಕ್ಕಳಾಗಿ ಕೆಂಚುಕೂದಲಾಗಿ ನುಣುಪಿಲ್ಲದಿರಲು ವೈಧವ್ಯ
ದರಿದ್ರೆಯಹಳು, ಎರಡುಹುಬ್ಬಿನ ನಡುವೆಯಾಗಲೀ ಹಣೆಯಲ್ಲಿ ಆಗಲೀ
ಮತ್ತಿ ಇರಲು ರಾಜಯೋಗ, ಯೆಡದಕದಗಿನಲ್ಲಿ ಮತ್ತಿ ಇರಲು ಮೃಷ್ಟಾ
ನ್ನವುಂಟು, ಎದೆಯಲ್ಲಿ ಕಾರೆಳ್ಳಾಗಲೀ ಮಚ್ಚೆಯಾಗಲೀ ಇರಲು ಮಹಾ
ಶುಭ, ಬಲದ ಸ್ತನದಮೇಲೆ ಕೆಂಪಿನಮಚ್ಚೆ ಇರಲು ನಾಲಕ್ಕು ಹೆಣ್ಣು
ಆಮೇಲೆ ಮೂರು ಗಂಡುಮಕ್ಕಳಂ ಪಡೆವಳು, ಯೆಡದಸ್ತನದಮೇಲೆ
ಮಚ್ಚೆ ಇರಲು ಶುಭ, ಹರಡಿನಲ್ಲಿ ಮಚ್ಚೆಯಿರಲು ದರಿದ್ರ, ಎಡದಹಸ್ತಕ
ರ್ಣ ಕದಪುಗಳಲ್ಲಿ ಕೆಂಪಿನ ಮಚ್ಚೆಯಿರಲು ಚಚ್ಚೆ ಗಂಡುಮಗನಂ ಪಡೆ
ವಳು, ಹಣೆಯಲ್ಲಿ ತ್ರಿಶೂಲವಾಕಾರದ ಮಚ್ಚೆ ಇರಲು ಸಾವಿರ ಸ್ತ್ರೀ
ಯರಿಗೆ ಒಡತಿಯಹಳು, ನಿದ್ರೆಗೈವಾಗ ಹಲ್ಲುಗಳ ಕಡಿಯಲು ಯಂಥಾಲ
ಕ್ಷಣವುಳ್ಳವಳಾದರೂ ಅವಳ ಬಿಡಬೇಕು, ಬಲದ ಅಂಗೈಯಲ್ಲಿ ಪ್ರದ
ಕ್ಷಿಣಸುಳಿ ಇರಲು ಲೇಸು, ಎಡದಕೈಯಲ್ಲಿ ಸುಳಿಯಿರಲು ಅಶುಭ,
ನಾಭಿಯಲ್ಲಿ, ಕಿವಿಯಲ್ಲಿ, ಎದೆಯಲ್ಲಿ, ಬೆನ್ನಿನ ಬಲದಭಾಗದಲ್ಲಿ ಪ್ರದ
ಕ್ಷಿಣವಾದ ಸುಳಿಇರಲು ಶುಭ, ನಾಭಿಗೆ ಸರಿಯಾಗಿ ಬೆನ್ನಿನಲ್ಲಿ ಪ್ರದ
ಕ್ಷಿಣಸುಳಿಇರಲು ಬಹುಪುತ್ರರಂ ಪಡೆವಳು, ಯೋನಿಯಮೇಲ್ಗಡೆ
ಯಲ್ಲಿ ಪ್ರದಕ್ಷಿಣಸುಳಿಯಿರಲು ರಾಜಪತ್ನಿಯಾಗಿ ಬಹುಸಂತಾನವಂಪಡೆ
ವಳು, ಯೋನಿಗೆ ಸಮಾನವಾಗಿ ಗುದಸ್ಥಾನದಲ್ಲಿ ಸುಳಿಯಿರಲು ಗಂಡುಮ
ಕ್ಕಳಿಗಾಗದು, ಹೊಟ್ಟೆಯಸರಿಸದಲ್ಲಿ ಬೆನ್ನಿನಮೇಲೆ ಸುಳಿಯಿರಲು ಗಂಡ
ಗಾಗದು, ಎರಡುಸುಳಿಯಿರಲು ವ್ಯಭಿಚಾರಿಯಹಳು, ಕಂಠದಲ್ಲಿ ಒಂದು
ಸುಳಿಯಿರಲು ವೈಧವ್ಯವು, ಬೈತಲೆಯಲ್ಲಿ, ಹಿಡತಲೆಯಲ್ಲಿ, ಹಣೆಯಲ್ಲಿ
ಸುಳಿಯಿರಲು ಮದುವೆಯಾದ ವರುಷದೊಳಗೇ ಗಂಡ ಮೃತನಹನು,
ನಡುತಲೆಯಲ್ಲಿ ಪ್ರದಕ್ಷಿಣವಾದಸುಳಿ ಒಂದು ಅಪ್ರದಕ್ಷಿಣವಾದ ಸುಳಿ
ಒಂದು ಈ ಎರಡುಸುಳಿಯೂ ಇರಲು ಮದುವೆಯಾದ ಹತ್ತು ದಿನದೊ
ಳಗೆ ಪತಿಯಂ ಕೊಲ್ಲುವಳು, ಸೊಂಟದಮೇಲೆ ಸುಳಿಯಿರಲು ವ್ಯಭಿಚಾರಿ
ಯಹಳು, ನಾಭಿಯಲ್ಲಿ ಸುಳಿಯಿರಲು ಪತಿವ್ರತೆ, ನಾಭಿಯಸಮವಲ್ಲದೆ

ಜನ್ಮದಿನಲ್ಲಿ ಸುಳಿಯಿಂದಲು ವಿಧವೆಯಾಗಿ ವ್ಯಭಿಚಾರಿಯಾಹಳು, ಈಗ ಹೇಳಿದ ಒಳ್ಳೆಯ ಲಕ್ಷಣಂಗಳುಂಟಾದವಳು ದುರಾಚಾರಿಯಾದರೂ ಲಕ್ಷ್ಮೀವಂತೆಯಲ್ಲ, ದುರ್ಲಕ್ಷಣಗಳುಂಟಾದವಳು ಸದಾಚಾರಿಯಾದರೂ ಲಕ್ಷಣವಂತೆಯೆನಿಸುವಳು, ಲಕ್ಷಣವಂತೆಯಾಗಿ, ಸದಾಚಾರಿಯಾಗಿ, ಪತಿಯುವಶವರ್ತಿನಿಯಾಗಿ ಪತಿವ್ರತೆಯಾದ ಸ್ತ್ರೀಯರು ವಿಶ್ವೇಶ್ವರನ ಅನುಗ್ರಹದಿಂದಲ್ಲದೆ ದೊರಕೊಳ್ಳರು. ಪೂರ್ವಜನ್ಮದಲ್ಲಿ ಮುತ್ತೈದೆಯರಿಗೆ ಅಲಂಕಾರದಾನವಂಮಾಡಿದವರು, ಪುಣ್ಯತೀರ್ಥದಲ್ಲಿ ಮಹಾದಾನ ಸ್ನಾನಂಗಳಂ ಪುಣ್ಯವ್ರತಗಳಂಮಾಡಿದವರು, ಗೌರೀದೇವಿಯಂ ಪೂಜಿಸಿದವರೂ, ಸೌಂದರ್ಯವುಳ್ಳವರಾಗಿ ಲಕ್ಷಣವಂತೆಯರಾಗಿ ಐಶ್ವರ್ಯವುಳ್ಳವರಾಗಿ ಪುಟ್ಟುವರು. ಲಕ್ಷಣವುಂಟಾಗಿ ಪತಿವ್ರತೆಯರಾದ ಸ್ತ್ರೀಯರಿಗೆ ಸ್ವರ್ಗಮೋಕ್ಷಂಗಳೆರಡೂ ಇಲ್ಲಿಯೇ ಇಹವು, ಸ್ತ್ರೀಯರು ತಮ್ಮ ಲಕ್ಷಣಂಗಳಿಂದ ಆಯುಷ್ಯಹೀನನಾದ ಪತಿಯಂ ಆಯುಷ್ಯವಂತನಂ ಮಾಡುವರು, ಅದುಕಾರಣ ಮೊದಲೆ ಲಕ್ಷಣಂಗಳಂ ಪರೀಕ್ಷಿಸಿ ಲಕ್ಷಣವಂತೆಯಾದವಳಂನೆ ಮದುವೆಯಾಗಬೇಕು. ಆದ್ದರಿಂದ ಗೃಹಸ್ಥಾಶ್ರಮಕ್ಕೆ ಸುಖಕರವಾದ ಕನ್ಯಾಲಕ್ಷಣವಂ ಪೇಳ್ದೆನು. ಇನ್ನು ವಿವಾಹಭೇದಗಳಂ ಪೇಳ್ವೆನು ಕೇಳು—ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಸ್ತ್ರೀಲಕ್ಷಣಂಗಳನ್ನು ವೇದವ್ಯಾಸರು ಸೂತಪುರಾಣೀಕರಿಗೆ ಬುದ್ಧಿಗಲಿಸಿದರೆಂದು ಸೂತನು ನೈಮಿಷಾರಣ್ಯದಲ್ಲಿ ಶೌನಕಾದಿ ಋಷಿಗಳಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ.

ಇಂತು ಶ್ರೀವತ್ಸವುಸ್ತು ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರ ಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಸ್ತ್ರೀಲಕ್ಷಣಂಗಳಂಪೇಳ್ದ ಮೂವತ್ತೇಳನೇ ಅಧ್ಯಾಯಾರ್ಥ ನಿರೂಪಣಾಕ್ಕಂ ಮಂಗಳಮಹಾ.

ಮೂವತ್ತೇಳನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ಮೂವತ್ತೆಂಟನೇ ಅಧ್ಯಾಯಂ.

ವಿ ವಾ ಹ ಭೇ ದ ಗೃ ಹ ಸ್ಥಾ ಶ್ರ ಮ ಪ್ರ ಸಂ ಗ

ಅನಂತರ ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು ;—ಕೇಳೈ ಅಗಸ್ತ್ಯ ವಿವಾಹಭೇದಂಗಳಾವಾವೆಂದರೆ ಬ್ರಾಹ್ಮ, ದೇವ, ಆರ್ಷ, ಪ್ರಾಜಾಪತ್ಯ, ಆಸುರ, ಗಾಂಧರ್ವ, ರಾಕ್ಷಸ, ಪೈಶಾಚವೆಂಬ ಎಂಟು ತೆರದ ವಿವಾಹ ಉಂಟು. ಆ ವಿವಾಹದಕ್ರಮವೆಂತೆಂದರೆ ;—ಮದುವಳಿಗೆಯನಲಂಕರಿಸಿ ಪರಸ್ಪರದಲ್ಲಿ, ರಾಶಿಕೂಟಂಗಳ ನೋಡಿಸಿ ಶ್ರೇಷ್ಠವಾದ ಕುಲದಲ್ಲಿ ವೇದಶಾಸ್ತ್ರ ಆಚಾರಸಂಪನ್ನನಾದ ವರನ ಕರೆತಂದು ಪಾದವ ತೊಳೆದು ಕನ್ಯಾದಾನವಂ ಮಾಡೆ ಇದು ಬ್ರಾಹ್ಮ ವಿವಾಹ ವೆನಿಸುವದು. ಆ ಸ್ತ್ರೀಯಲ್ಲಿ ಜನಿಸಿದ ಕುಮಾರನು ತಂದೆಯ ದಶೆಯಲ್ಲಿ ಹತ್ತು ತಾಯಿ ದಶೆಯಲ್ಲಿ ಹನ್ನೊಂದು, ಇಪ್ಪತ್ತೊಂದು ಕುಲದವರನ್ನು ಪವಿತ್ರವ ಮಾಡುವನು; ಯಜ್ಞವಂ ಮಾಡಿ ದಕ್ಷಿಣೆ ಸಹಿತ ಕನ್ಯೆಯಂ ಕೊಡಲು ಅದು ದೇವ ವಿವಾಹ ವೆನಿಸುವುದು, ಅವಳಲ್ಲಿ ಪುಟ್ಟಿದ ಕುಮಾರನು ತಂದೆಯಲ್ಲಿ ಏಳು, ತಾಯಿಯಲ್ಲಿ ಏಳು, ಹದಿನಾಲ್ಕು ತರದವರನ್ನು ಪವಿತ್ರವಂ ಮಾಡುವನು; ವರನ ಕೈಯಿಂದಾ ಎರಡು ಗೋವಿನ ಕ್ರಯುವನ್ನು ತೆಗದುಕೊಂಡು ಕನ್ಯಾದಾನವಂ ಮಾಡಲು ಇದು ಆರ್ಷ ವಿವಾಹ ವೆನಿಸುವುದು. ಅವಳಲ್ಲಿ ಜನಿಸಿದ ಕುಮಾರನು ಮೂರತರದವರನ್ನು ಪವಿತ್ರವಂ ಮಾಡುವನು. ವರನು ಹೋಗಿ ಪ್ರಾರ್ಥಿಸಲು ಮದಮಕ್ಕಳು ಧರ್ಮವನಾಚರಿಸಿಕೊಂಡು ಇರಲೀ ಎಂದು ವಿವಾಹವಂ ಮಾಡಲು, ಅದು ಪ್ರಾಜಾಪತ್ಯ ವಿವಾಹ ವೆನಿಸುವುದು. ಅವರಲ್ಲಿ ಜನಿಸಿದ ಕುಮಾರನು ಆರುತರದವರಂ ಪವಿತ್ರವಂ ಮಾಡುವನು. ಬೇಡಿದಷ್ಟು ದ್ರವ್ಯವಂ ಕೊಟ್ಟು ಮದುವೆಯಾಗಲು ಆಸುರ ವಿವಾಹ ವೆನಿ

ಸಂವುದು. ಸ್ತ್ರೀ ಪುರುಷರು ತಮ್ಮೊಳು ತಾವೆ ಅನುಕೂಲವಾಗಿ ವಿವಾಹವಾಗಲು, ಅದು ಗಾಂಧರ್ವ ವಿವಾಹ ವೆನಿಸುವುದು. ಬಲಾಹಿಸಿಂದಾ ಮದವಳಿಗೆಯನ್ನೆತ್ತಿಕೊಂಡು ಹೋಗಿ ಮದುವೆಯಾಗಲು ರಾಕ್ಷಸ ವಿವಾಹ ವೆನಿಸುವುದು. ಹೆಣ್ಣಿನ ತಂದೆ ತಾಯಿಗೆ ಮದ್ದನ್ನಿಕ್ಕಿ ಮೋಸದಿಂದಾ ವಿವಾಹವಾಗಲು, ಅದು ಪಿಶಾಚ ವಿವಾಹ ವೆನಿಸುವುದು. ಈ ಎಂಟು ಬಗೆಯಾದ ವಿವಾಹದೊಳಗೆ, ಬ್ರಾಹ್ಮ ವಿವಾಹ, ದೇವವಿವಾಹ, ಆರ್ಷವಿವಾಹ, ಪ್ರಾಜಾಪತ್ಯವಿವಾಹ, ಈ ನಾಲ್ಕು ಬಗೆಯ ವಿವಾಹವೂ ಬ್ರಾಹ್ಮಣರಿಗೆ ಉಚಿತ. ಆಸುರವಿವಾಹ, ಗಾಂಧರ್ವವಿವಾಹ, ರಾಕ್ಷಸ ವಿವಾಹ, ಈ ಮೂರು ತೆರದ ವಿವಾಹವೂ ಕ್ಷತ್ರಿಯರಿಗೆ ಉಚಿತ. ಆರ್ಷ ವಿವಾಹ, ಗಾಂಧರ್ವವಿವಾಹ, ಈ ಎರಡೂ ವೈಶ್ಯರಿಗೆ ಉಚಿತ. ಆಸುರ ವಿವಾಹ ಶೂದ್ರರಿಗೆ ಉಚಿತ. ಪೈಶಾಚವಿವಾಹ ಪಾಪಿಗಳಿಗೆ ಉಚಿತ. ಪಿಶಾಕ್ಕದವರಿಗೆ ಯೋಗ್ಯವಲ್ಲ. ನಾಲ್ಕು ಜಾತಿಯವರು ಮದುವೆಯಾಗುವಾಗ, ಧಾರೆಯುಪಿಡಿವ ಕ್ರಮವೆಂತೆಂದರೆ;—ಬ್ರಾಹ್ಮಣನು ಸ್ವಜಾತಿ ಸ್ತ್ರೀಯ ಮದುವೆಯಲ್ಲಿ ಧಾರೆಯ ಕೈಯ್ಯಲ್ಲಿ ಪಿಡಿಯಬೇಕು. ಕ್ಷತ್ರಿಯ ಸ್ತ್ರೀಯನ್ನು ಮದುವೆಯಾಗುವಾಗ ಅಂಬಿನ ಕೊನೆಯಲ್ಲಿ ಪರಿಗ್ರಹಿಸಬೇಕು. ವೈಶ್ಯಸ್ತ್ರೀಯನ್ನು ಮದುವೆಯಲ್ಲಿ ಮುಳ್ಳುಗೋಲಿನಿಂದಾ ಪರಿಗ್ರಹಿಸಬೇಕು. ಶೂದ್ರಸ್ತ್ರೀಯನ್ನು ಮದುವೆಯಾಗುವಲ್ಲಿ ಶರಗ ಪಿಡಿಯಬೇಕು. ಕ್ಷತ್ರಿಯನು ಸ್ವಜಾತಿ ಸ್ತ್ರೀಯನ್ನು ಮದುವೆಯಾಗುವಾಗ ಅಂಬಿನ ಕೊನೆಯಲ್ಲಿ ಪ್ರತಿಗ್ರಹಿಸಬೇಕು. ವೈಶ್ಯಜಾತಿಸ್ತ್ರೀಯನ್ನು ಮದುವೆಯಾಗುವಾಗ ಮುಳ್ಳುಗೋಲಿಂದಾ ಪ್ರತಿಗ್ರಹಿಸಬೇಕು. ಶೂದ್ರಜಾತಿಸ್ತ್ರೀಯನ್ನು ಮದುವೆಯಾಗುವಾಗ ಶರಗ ಪಿಡಿಯಬೇಕು. ವೈಶ್ಯನು ಸ್ವಜಾತಿಯಸ್ತ್ರೀಯನ್ನು ಮದುವೆಯಾಗುವಾಗ ಮುಳ್ಳುಗೋಲಿಂದಾ ಪ್ರತಿಗ್ರಹಿಸಬೇಕು. ಶೂದ್ರಸ್ತ್ರೀ ಮದುವೆಯಾಗುವಾಗ ಶರಗ ಪಿಡಿಯಬೇಕು. ಶೂದ್ರನು ಸ್ವಜಾತಿಯಲ್ಲದೆ ಮದುವೆಯಾಗಬಾರದು. ಮದುವೆಯಾಗುವಾಗ ಶರಗಪಿಡಿಯಬೇಕು. ಹೀಗೆ ನಾಲ್ಕುಜಾತಿಯವರೂ ತಮ್ಮತಮ್ಮ ಜಾತ್ಯಾಚಾರಕ್ಕೆ ವಿವಾಹವಾಗಲು ನೂರುವರ್ಷ

ಬದುಕಿ ಸುಖದಲ್ಲಿ ಇಹರೂ. ಜಾತ್ಯಾಚಾರಂಗಳಂ ತಪ್ಪಿ ವಿವಾಹವಾಗಲೂ ಆಯುಷ್ಯಗಳು ಕಡಮೆಯಾಗಿ ಭಾಗ್ಯಹೀನರಾಗಿ ದುಃಖಪಡುವರೂ. ಬ್ರಾಹ್ಮಣಂಗೆ ಋತುಕಾಲದಲ್ಲಿಗರ್ಭಾಧಾನ ಮುಖ್ಯವಾಗಿಹುದು. ಸ್ತ್ರೀಯ್ಯರು ಪೂರ್ವದಲ್ಲಿ ದೇವೇಂದ್ರನಿಂದಾ ವರವನ್ನು ಪಡೆದಗಾದಕಾರಣಾ ಪ್ರಸವಕಾಲದೊಳಗಾಗೀ ಸ್ತ್ರೀಯ್ಯರ ಕಾಮವನನುಸರಿಸಿ ಸಂಗವ ಮಾಡಬಹುದೂ. ಬ್ರಾಹ್ಮಣನು ದಿವಾಸ್ತ್ರೀಸಂಗವಂ ಮಾಡಲೂ ಆಯುಷ್ಯಹಾನಿ. ಪರ್ವತಿಥಿ ಶ್ರಾದ್ಧದಿವಸಗಳಲ್ಲಿ ಸ್ತ್ರೀಸಂಗವಂ ಮಾಡೆ ಧರ್ಮಹಾನಿ, ಋತುಕಾಲಂಗಳಲ್ಲಿ ಸ್ತ್ರೀಸಂಗವಂ ಮಾಡಲೂ ಬ್ರಹ್ಮಚಾರಿ ಎನಿಸುವನೂ. ಹದಿನಾರುದಿವಸ ಪರ್ಯ್ಯಂತರವು ಋತುಕಾಲವೆನಿಸಿಕೊಂಬುದು. ಇದರೊಳು ಸೂತಕವಾದ ನಾಲ್ಕುದಿವಸವನ್ನು ಬಿಟ್ಟು ಮಿಕ್ಕ ಸಮದಿವಸಗಳಲ್ಲಿ ಸಂಗವು ಮಾಡಲೂ ಹೆಣ್ಣು ಸಂತಾನವಹುದೂ. ವಿಷಮದಿವಸಗಳಲ್ಲಿ ಸಂಗವು ಮಾಡಲೂ ಗಂಡು ಸಂತಾನವಹುದೂ. ಮಖಾನಕ್ಷತ್ರ ಮೂಲಾನಕ್ಷತ್ರ ಹೊರತಾಗಿ ಶುಭನಕ್ಷತ್ರ ಶುಭತಿಥಿಯಲ್ಲಿ ಸಂಗವಂ ಮಾಡಲೂ ಆಯುಷ್ಯವುಳ್ಳ ಸಂತಾನವಹುದೂ. ಮೊದಲು ವಿವಾಹಂಗಳಂ ಪೇಳುವಾಗ ಆರ್ಷವಿವಾಹದಲ್ಲಿ ಎರಡು ಹಸುವಂ ತೆಕ್ಕೊಂಡು ಹೆಣ್ಣು ಕೊಟ್ಟು ವಿವಾಹವಂ ಮಾಡಬೇಕೆಂದು ಹೇಳಿತಲ್ಲಾ ಅದು ಮುಖ್ಯವಲ್ಲ. ಕನ್ಯಾನಿಮಿತ್ತವಾಗಿ ಅದು ಮಾತ್ರವಾದರೂ ತೆಕ್ಕೊಂಡರೂ ತಮ್ಮ ಪಿತೃಗಳು ಇಪ್ಪತ್ತೊಂದುತರದವರೂ ನರಕವನೈದುವರೂ. ಸ್ತ್ರೀಪುರುಷರು ಅನ್ಯೋನ್ಯ ಸಂತೋಷದಲ್ಲಿರಲೂ ಅಲ್ಲಿ ಮಹಾಲಕ್ಷ್ಮಿ ಇಹಳೂ. ಬ್ರಾಹ್ಮಣನು ವೇದವನೋದದಿದ್ದರೂ ಬೇಹರವನಾಡಿದರೂ, ಅಧರ್ಮ ವಿವಾಹವಾದರೂ, ನಿತ್ಯಕರ್ಮಲೋಪವಾದರೂ ಬ್ರಾಹ್ಮಣಿಕೆ ಹಾನಿ. ಕಟ್ಟಿಗೆ ಮೊದಲಾದವಂ ಕತ್ತರಿಸಿದುದೂ, ಮೆಣಸು ಮೊದಲಾದವ ಅರೆದುದೂ, ಒಲೆ ಮೊದಲಾದ ಸ್ಥಳವನಗೆದುದೂ, ನೀರಕಾಸಿದುದೂ, ಗುಡಿಸುವಾಗ ಕ್ರಿಮಿ ಕೀಟಾದಿಗಳವಧಿಸಿದುದು ಇವು ಐದು ದೋಷಂಗಳ ಪರಿಹರಕ್ಕೋಸ್ಕರ ಪಂಚಯಜ್ಞಂಗಳಂ ಮಾಡಬೇಕು. ಅವು ಆವಾವೆಂದರೆ;—ಹೋಮವ ಮಾಡು

ವದು ದೇವಯಜ್ಞ, ವೇದವ ನೋದುವುದು ಬ್ರಹ್ಮಯಜ್ಞ, ಪಿತೃಗಳ ಕುರಿತು ಮಾಡುವಂಥಾದ್ದು ಪಿತೃಯಜ್ಞ, ಅತಿಥಿಪೂಜೆಯೇ ಮನುಷ್ಯಯಜ್ಞ, ಬಲಿಹರಣವಂ ಮಾಡುವದೇ ಭೂತಯಜ್ಞ, ಇಂತಿವು ಪಂಚಮಹಾಯಜ್ಞಂಗಳೆನಿಸುವವು. ನಿತ್ಯಹೋಮಾದಿಗಳೆಲ್ಲವನ್ನು ಔಪಾಸನಾಗ್ನಿಯಲ್ಲಿ ಮಾಡಬೇಕು. ಯತಿಬ್ರಹ್ಮಚಾರಿಗಳಿಗೆ ಅನ್ನವನ್ನಿಕ್ಕಲು ಗೋದಾನ ಮಾಡಿದ ಫಲ. ವೇದಶಾಸ್ತ್ರ ತಪೋಜ್ಞಾನಾಧಿಕರಿಗೆ ಅನ್ನವನ್ನಿಕ್ಕಲು, ಸಕಲ ಶ್ರೇಯಸ್ಸುಗಳಹವು. ಮಧ್ಯಾಹ್ನಕಾಲದಲ್ಲಿ ಮನೆಗೆ ಬಂದ ಅತಿಥಿಸತ್ಕಾರವಂ ಮಾಡಿದರೆ ಜನ್ಮಾಂತರದ ಪಾತಕ ಪರಿಹರವಾಗಿ ಸಕಲ ಪುಣ್ಯವಹುದು. ಅತಿಥಿಯಂ ಸತ್ಕಾರವ ಮಾಡದೆ ಅವಮನ್ನಣೆಯಂ ಮಾಡಲು, ಆ ಅಥಿತಿಯು ತಾನು ಮಾಡಿದ ತನ್ನ ಜನ್ಮಾಂತರದ ಪಾಪವನ್ನು ಆ ಮನೆಯ ಗೃಹಸ್ಥರಿಗೆ ಕೊಟ್ಟು ಆ ಗೃಹಸ್ಥ ಮಾಡಿದ ಜನ್ಮಾಂತರದಲ್ಲಾರ್ಜಿಸಿದ ಪುಣ್ಯಗಳ ತೆಕ್ಕೊಂಡು ಪೋಗುವನು. ಅದುಕಾರಣದಿಂ ಮನೆಗೆ ಬಂದ ಅಥಿತಿಯನ್ನು ಆಸನ ಭೋಜನಾದಿಗಳಿಂ ಸತ್ಕರಿಸಬೇಕು. ರಾತ್ರಿಯ ಕಾಲದಲ್ಲಿ ಬಂದ ಅತಿಥಿಯಂ ಶಯನ ಭೋಜನಾದಿಗಳಿಂ ಸತ್ಕರಿಸಬೇಕು. ಗೃಹಸ್ಥನಾದವನು ನಿತ್ಯವು, ಬೇಕೆಂದು ಅಪೇಕ್ಷೆಯಿಂದಾ, ಪರಾನ್ನವ ಭುಂಜಿಸಲು, ಸಕಲ ಶ್ರೇಯಸ್ಸುಗಳು ನಷ್ಟವಹವು, ಎಂದು ಕುಲುಹನರಿಯುದವನ್ನು, ಬಲಿಹರಣಕಾಲ ಸಾಯಂಕಾಲದಲ್ಲಿ ಬಂದವ ಅತಿಥಿಯೆನಿಸಿಕೊಂಬನು. ಅವನ ಸರ್ವದಾ ಸತ್ಕರಿಸಬೇಕು. ಬಲಿಹರಣವನಿಕ್ಕುವನಿತರೊಳು ಅತಿಥಿ ಬರಲು ಆತನ ಸತ್ಕರಿಸಿ ಮತ್ತೆ ಬಲಿಹರಣವಂ ಮಾಡಬೇಕು. ಅತಿಥಿಗಿಂತಾ ಮೊದಲು ಗರ್ಭಿಣೀ, ಬಾಣಂತೀ, ವೃದ್ಧರು, ಅಶಕ್ತರು, ವ್ಯಾಧಿಸ್ತರು, ಶಿಶುಗಳು ಇವರಂ ಸತ್ಕರಿಸಬೇಕು. ಹೋಮ ದೇವತಾನೈವೇದ್ಯವಂ ಮಾಡದೆ ತನ್ನ ಉದರಕ್ಕಾಗಿ ಅಡಿಗೆಯಂ ಮಾಡಿ ಉಂಬವನು ಸಕಲಪಾಪವಂ ಭುಂಜಿಸಿದವನಹನು. ಪಂಚಮಹಾಯಜ್ಞಂಗಳಂ ಮಾಡದೆ ಊಟವಂ ಮಾಡಿದವನು, ದರಿದ್ರನಾಗಿ ಕಡೆಯಲ್ಲಿ ಕಾಗೆಯಾಗಿ ಹುಟ್ಟುವನು. ಪಂಚಮಹಾಯಜ್ಞಂಗಳಂ ಮಾಡಲು,

ಸಕಲ ಪಾಪಹರವಾಗಿ ಸ್ವರ್ಗವನ್ನೈದುವನು. ಪಂಚಪರ್ವಂಗಳಲ್ಲಿ, ಷಷ್ಠಿಯಲ್ಲಿಯೂ, ತೈಲಸೇವನ, ಕ್ಷೌರ, ಸ್ತ್ರೀಸಂಗವಂ ಮಾಡಲಾಗದು. ನಿರ್ವಾಣವಿಂದಾ ನೀರಲ್ಲಿ ಪೋಗಲಾಗದು, ಬ್ರಾಹ್ಮಣರು, ದೇವಾಲಯ, ಆಕಳು, ಜೇನುತುಪ್ಪ, ತುಪ್ಪ, ವಯೋವೃದ್ಧರು, ವಿದ್ಯಾವೃದ್ಧರು, ತಪೋವೃದ್ಧರು, ಅಶ್ವತ್ಥವೃಕ್ಷ, ರಚ್ಚೆಯಲ್ಲಿದ್ದ ಜನ, ಪೂರ್ಣಕುಂಭ, ಅನ್ನ, ದಧಿ, ಬಿಳಿಯಸಾಸುವೆ, ಇವು ಎಲ್ಲವನ್ನೂ ಎಡದಲ್ಲಿ ಬಿಟ್ಟುಕೊಂಡು ಹೋಗಲಾಗದು. ಬಲಕ್ಕಿಟ್ಟುಕೊಂಡು ಹೋಗಲು ಸಕಲ ಕಾರ್ಯ ಜಯ. ರಜಸ್ವಲೆಯ ಸಂಗವ ಮಾಡಲಾಗದು, ಸೂತಕವಾದವರ ಕೂಡೆ ಮಾತನಾಡಬಾರದು. ಮೇಲೆಭೈರವಾಸವಂ ಉತ್ತರೀಯವಾಗಿ ಹೊದೆಯದೇ ಯಾವ ಕರ್ಮಂಗಳನ್ನೂ ಮಾಡಲಾಗದು, ದೇವಬ್ರಾಹ್ಮಣ ಸಭಾಮಧ್ಯದಲ್ಲಿ ಪೀಠದಲ್ಲಿ ಕುಳ್ಳಿರಲಾಗದು, ಹೊಸಫಲ, ಪುಷ್ಪ ಅನ್ನ ಇವಂ ದೇವಬ್ರಾಹ್ಮಣರಿಗೆ ಸಮರ್ಪಿಸದೆ ತೆಕ್ಕೊಳ್ಳಲಾಗದು ಅಗ್ನಿಯನ್ನು ಮುಖದಿಂದ ಊದಲಾಗದು, ಪರಸ್ತ್ರೀಯನ್ನು ಬತ್ತಲೆ ಇದ್ದಾಗ ನೋಡಬಾರದು, ತನ್ನ ಸ್ತ್ರೀಯನಾದರೂ ರತಿಕಾಲ ಹೊರತಾಗಿ ಮಿಕ್ಕ ವೇಳೆಯಲ್ಲಿ ವಸ್ತ್ರವಿಲ್ಲದವಳಾಗಿ ಇರಲು ನೋಡಲಾಗದು, ಅಶುಚಿಯಾಗಿ ಹೋಮದೇವತಾಪೂಜೆ ಮೊದಲಾದ ಕರ್ಮಗಳಂ ಮಾಡಲಾಗದು, ಅಶುಚಿಯಾದ ದ್ರವ್ಯಂಗಳಿಂ ಹೋಮವಂ ಮಾಡಲಾಗದು, ಯಜ್ಞಕಾಲ ಹೊರತಾಗಿ ಪ್ರಾಣಿಹಿಂಸೆಯಂ ಮಾಡಲಾಗದು, ಅಸ್ತಮಯ ಉದಯಕಾಲಗಳಲ್ಲಿ ಭೋಜನ, ಸ್ತ್ರೀಸಂಗ, ನಿದ್ರೆಯಂ ಮಾಡಲಾಗದು, ಬಡಗಲು ಪಡುವಲು ಮಂಡೆಯಾಗಿ ಮಲಗಬಾರದು, ನಿದ್ರಾಗೈವರಂ ನಿರ್ನಿಮಿತ್ತವಾಗಿ ಎಬ್ಬಿಸಬಾರದು, ಒಬ್ಬನೇ ದಾರಿಯಂ ನಡೆಯಲಾಗದು, ಬಗಸೆಯಲ್ಲಿ ನೀರು ಕುಡಿಯಲಾಗದು, ರಾತ್ರಿಯಲ್ಲಿ ಮೊಸರು ಹಗಲು ಬೆಣ್ಣೆಯಲ್ಲಿ ಉಣ್ಣಲಾಗದು, ರಾತ್ರಿಯಲ್ಲಿ ಮಿತಾಹಾರವಾಗಿ ಉಣ್ಣಬೇಕು, ನೃತ್ತ ಗೀತ ವಾದ್ಯಲೋಲನಾಗಿ ಇರಬಾರದು, ಉಂಬುವ ತಳಿಗೆಯಲ್ಲಿ ಉಗುಳಬಾರದು, ತಾನು ಶ್ರಾದ್ಧವನಾಚರಿಸುತ್ತಿದ್ದು ಶ್ರಾದ್ಧದಲ್ಲಿ ಭೋಜನವ ಮಾಡಲಾಗದು ಮಾಡಿದರೆ ಶ್ರಾದ್ಧ

ವಸಿಕ್ಕಿದ ಫಲವಿಲ್ಲ, ಒಬ್ಬರುಧರಿಸಿದ ವಸ್ತ್ರವಂ ಧರಿಸಲಾಗದು, ಒಬ್ಬರು ಮೆಟ್ಟಿದ ಪಾವರಕ್ಷೆಯಂ ಮೆಟ್ಟಲಾಗದು, ಎರಡುಕೈಗಳಿಂ ಮಂಡೆಯಂ ತುರಿಸಲಾಗದು, ಗದ್ದುಗೆಯಮೇಲೆ ಕುಳಿತು ಪಾದವನೀಡಲಾಗದು, ತೆಗದವುಗುರಂ ಹಲ್ಲಿನಿಂದ ಕಡಿಯಲಾಗದು, ಉಗುರುಗಳಿಂದ ಉಗುರಂ ತೆಗೆಯಲಾಗದು, ಆವಾಗಲೂ ತೃಣವಂ ಛೇದಿಸಲಾಗದು, ದಾರಿಯಲ್ಲದ ದಾರಿಗಳಿಂದ ತನ್ನ ಮನೆ ಪರರಮನೆಗಳಿಗೆ ಹೋಗಲಾಗದು, ಜೂಜನಾಡಲಾಗದು, ಜೋಗಿಗಳೊಡನೆ ಅಧರ್ಮಿಗಳೊಡನೆ ಗೋಷ್ಠಿಯಂ ಮಾಡಲಾಗದು, ಚಿತ್ರದೆ ಮಲಗಬಾರದು, ಅಂಗೈಯೊಳಗೆ ಉಣ್ಣಲಾಗದು, ಕೈಕಾಲುಗಳಂ ತೊಳೆಯದೆ ಮುಕ್ಕಳಿಸಿ ಉಗಳದೆ ಭೋಜನವಂ ಮಾಡಲಾಗದು, ಒದ್ದೆಗಾಲಲ್ಲಿ ಮಲಗಲಾಗದು, ಎಂಜಲುಕೈಯಲ್ಲಿ ಹೊರಟು ದೂರಹೋಗಲಾಗದು, ಮಲಗಿದ್ದ ಹಾಸಿಗೆಯಲ್ಲಿ ಉದಕಪಾನಂಗಳಂ ಮಾಡಲಾಗದು, ಪಾದರಕ್ಷೆಯಂ ಮೆಟ್ಟಿಕೊಂಡು ನಿಂತುಕೊಂಡು ಉದಕವಂ ತೆಕ್ಕೊಳ್ಳಲಾಗದು, ರಾತ್ರಿಯಲ್ಲಿ ಎಳ್ಳನ್ನು ವದಗಾಗಿಹಾಕಿದ ಅನ್ನ ಮೊದಲಾದವಂ ಮುಟ್ಟಲಾಗದು, ಮಲಮೂತ್ರಂಗಳಂ ದೃಷ್ಟಿಸಿ ನೋಡಲಾಗದು, ಉಚ್ಛಿಷ್ಟಸಮಯಂಗಳಲ್ಲಿ ಮಂಡೆಯು ತುರಿಸಲಾಗದು, ಹೊಟ್ಟು, ಇದ್ದಲು, ಕೂದಲು. ಹೆಂಚುಗಳಿದ್ದ ಸ್ಥಳದಲ್ಲಿ ಕುಳ್ಳಿರಲಾಗದು, ಬ್ರಾಹ್ಮಣನು ವೇದಮಂತ್ರಗಳಂ ಶೂದ್ರನಿಗೆ ಕಲಿಸಲಾಗದು, ಕಲಿಸಲು ಬ್ರಾಹ್ಮಣ್ಯಹಾನಿ, ಕಲಿತಶೂದ್ರನಿಗೂ ಹಾನಿ, ಉತ್ತಮಜಾತಿಗೆ ಧರ್ಮವಂ ಬೋಧಿಸಲಾಗದು, ಬೋಧಿಸಲು ಆ ಶೂದ್ರನಿಗೆ ಆಯುಷ್ಯಹಾನಿ, ನಿಮಿತ್ತವಿಲ್ಲದೆ ಕೈಚಪ್ಪಾಳೆಯನಿಕ್ಕಲಾಗದು, ಅನ್ಯಾಯಾರ್ಜಿತದಿಂದ ವಿತ್ತವಕೊಂಬ ರಾಯನಿಂದ ಬ್ರಾಹ್ಮಣನು ದಾನವ ತೆಕ್ಕೊಳ್ಳಲಾಗದು, ತೆಕ್ಕೊಂಡ ಬ್ರಾಹ್ಮಣನು ತನ್ನ ವಂಶಸಹಿತ ನರಕವಂ ಸೈದುವನು, ಆಕಾಲಮಿಂಚು, ಗುಡುಗು, ಸುಂಟರಗಾಳಿ, ನಡುವಿರುಳು, ಕೊಳ್ಳಿಗಳು ಬಿದ್ದಾಗ, ನೆಲಗುಡುಗು, ಶೂದ್ರರಸಮೀಪ, ಸೂತಕದಲ್ಲಿಯೂ, ಅಮಾವಾಸ್ಯೆ, ಮಾರ್ಗಶಿರಾದಿ ನಾಲ್ಕುತಿಂಗಳು ಕೃಷ್ಣಪಕ್ಷ ಸಪ್ತಮಿ, ಅಷ್ಟಮಿ, ನವಮಿ, ಚತುರ್ದಶೀ, ಶುಕ್ಲಪಕ್ಷದ ಪಾಡ್ಯ ಪುಣ್ಣಿಮೆಗ

ಹಲ್ಲಿ ಕತ್ತೆ ಬಂಟ, ನರಿಗಳು ಧ್ವನಿಗೈದಾಗಲೂ, ಉಪಾಕರ್ಮೋತ್ಸರ್ಜನೆ ಸಮಯದಲ್ಲಿ, ಓತಿ, ಬೆಕ್ಕು, ಸರ್ಪ, ಇಲಿ, ನಾಯಿ, ಕಪ್ಪೆ, ಮುಂಗಸೀ ಇವು ನಡುವೆ ಹಾಯ್ದಾಗಲೂ, ವೇದವನ್ನೋದಲಾಗದು, ಅಷ್ಟಮಿ ಚತುರ್ದಶಿಗಳಲ್ಲಿ ಬ್ರಹ್ಮಚರ್ಯವಾಗಿರಬೇಕು, ಪರಸ್ತ್ರೀಸಂಗದಿಂದ ಆಯುಷ್ಯಹಾನಿ, ಪರರನ್ನು ನಿಂದಿಸಲಾಗದು ತನ್ನತಾನಿಂದಿಸಿಕೊಳ್ಳಲಾಗದು, ತನ್ನಂ ತಾನು ಹೊಗಳಿಕೊಳ್ಳಲಾಗದು, ಸತ್ಯವೆಂದು ಅಪ್ರಿಯವನುಡಿಯಲಾಗದು, ಮನೋವಾಕ್ಕಾಯಕರ್ಮಗಳಲ್ಲಿ ಭೇದಪಡಲಾಗದು, ನಿತ್ಯವೂ ಶುಭವನೇ ನುಡಿಯಬೇಕು, ಧರ್ಮವನ್ನೇ ಚಿಂತಿಸಬೇಕು, ಸತ್ಸಂಗವಂ ಮಾಡಬೇಕು, ರೂಪು, ಧನ, ಕುಲ, ವಿದ್ಯಾ ಇವಿಲ್ಲದವರ ನೀಕರಿಸಲಾಗದು, ಪ್ರಿಯವೆಂದು ಅಸತ್ಯವ ನುಡಿಯಲಾಗದು, ಒಬ್ಬರ ಬೆದರಿಸಲಾಗದು, ಜೂಜನಾಡಲಾಗದು, ಕುಂಠಣಿತನವಂಮಾಡಿ ಧನವ ಘಳಿಸಲಾಗದು, ಗೋಬ್ರಾಹ್ಮಣ ಅಗ್ನಿಯನ್ನು ಅಶುಚಿಯಿಂದ ಮುಟ್ಟಲಾಗದು, ಅವಯವಗಳಂ ಅಧೋರ್ಧ್ವವಂ ಮುಟ್ಟಿ ಕೈತೊಳೆಯಬೇಕು. ಕಾಲತೊಳೆದನೀರು, ಉಚ್ಛಿಷ್ಟ, ಮೂತ್ರ, ವುಗುಳುದಕ. ಇವಂ ಮನೆಗೆ ದೂರದಲ್ಲಿ ಪರಿಹರಿಸಬೇಕು, ನಿತ್ಯವೂ ವೇದಪಾರಾಯಣ ಅಗ್ನಿಹೋತ್ರಗಳ ಮಾಡಬೇಕು, ಅದ್ರೋಹಬುದ್ಧಿಯಿಂದಿರಬೇಕು, ಹಿರಿಯರನ್ನು, ಗುರುಗಳನ್ನು, ಬ್ರಾಹ್ಮಣರನ್ನು ನಮಸ್ಕಾರದಿಂ ವಿನಯದಿಂ ಸತ್ಕಾರ ಮಾಡಬೇಕು, ವೇದವನ್ನೂ, ಬ್ರಾಹ್ಮಣರನ್ನೂ, ದೇವತೆಗಳನ್ನೂ, ತಪಸ್ವಿಗಳನ್ನೂ, ಪತಿವ್ರತೆಯರನ್ನೂ ನಿಂದಿಸಲಾಗದು. ಪರಸ್ತುತಿಯಂ ಮಾಡಲಾಗದು, ಅರಸುಗಳಾದವರು ಅಧರ್ಮರಂ ದುರ್ಜನರಂ ನಿಗ್ರಹಿಸಬೇಕು, ಧರ್ಮವಂತರು ಸುಜನರಂ ಪರಿಗ್ರಹಿಸಬೇಕು, ಪರರು ಕಟ್ಟಿಸಿದ ಕೆರೆ ಕುಂಟೆಗಳಲ್ಲಿ ಸ್ನಾನವಮಾಡುವಾಗ ಐದುಹಿಡಿ ಮಣ್ಣುತೆಗದು ಕಟ್ಟೆಯಮೇಲೆಹಾಕಿ ಮತ್ತೆ ಸ್ನಾನವಂ ಮಾಡಬೇಕು, ಹಾಗೇ ಸ್ನಾನವಂ ಮಾಡಲಾಗದು, ಆ ಸ್ನಾನಫಲ ಕರ್ತೃವಿನಪಾಲಾಗುವದು, ದೇಶಕಾಲ ಪಾತ್ರಂಗಳ ವಿಚಾರಿಸಿ ದಾನವಮಾಡಲು ಅನಂತಫಲ, ಭೂದಾನದಿಂ ಮಂಡಲಾಧಿಪತ್ಯ, ಅನ್ನದಾನದಿಂದ ಸಕಲ ರಾಜಭೋಗ,

ಉದಕದಾನದಿಂದ ನಿತ್ಯತೃಪ್ತನಾಗುವನು, ಶಯ್ಯಾದಾನದಿಂ ಚಲುವನಾಗಿ ಹುಟ್ಟುವನು, ದೀಪದಾನದಿಂ ಜ್ಞಾನಿಯಾಗಿ ಶುದ್ಧದೃಷ್ಟಿಯುಳ್ಳವನಹನು, ಗೋದಾನದಿಂ ಸೂರ್ಯಲೋಕವಹುದು, ಸುವರ್ಣದಾನದಿಂ ಆಯುಷ್ಯಾಭಿವೃದ್ಧಿ, ತಿಲದಾನದಿಂ ಸಂತಾನ, ಗೃಹದಾನದಿಂ ಉಪ್ಪರಿಗೆ ಮೊದಲಾದ ದಿವ್ಯಭವನಪ್ರಾಪ್ತಿ, ವಸ್ತ್ರದಾನದಿಂ ರುದ್ರಲೋಕ, ಅಶ್ವದಾನದಿಂ ದಿವ್ಯವಿಮಾನ, ವೃಷಭದಾನದಿಂದೈಶ್ವರ್ಯ, ಪಲ್ಲಕ್ಕಿ ದಂಡಿಗೆಯು ದಾನದಿಂ ಸ್ತ್ರೀಲಾಭವಹುದು, ಧಾನ್ಯದಾನದಿಂ ಸರ್ವಕಾರ್ಯಸಿದ್ಧಿ, ಅಭಯದಾನದಿಂ ನಿರ್ಭಯತ್ವ, ವಿದ್ಯಾದಾನದಿಂ ಬ್ರಹ್ಮಲೋಕ, ದಾಸೀದಾನದಿಂ ಮೃತ್ಯುಹರ, ಈ ಷೋಡಶದಾನಗಳ ಮಾಡುವಾತನಿಗೂ ದಾನವಕೊಂಬಾತನಿಗೂ ವಿಶ್ವಾಸವಿರಬೇಕು. ಅವಿಶ್ವಾಸದಿಂಕೊಟ್ಟರೆ ಫಲವಿಲ್ಲ, ತಕ್ಕೊಂಡವಗೆ ಅಧೋಗತಿ, ಸಟೆಯನಾಡಲು ಪುಣ್ಯಕ್ಷಯವಹುದು; ಮರಹಿನಿಂದ ತಪೋಹಾನಿ, ಮಾಡಿದ ಧರ್ಮಗಳಂ ಹೇಳಿಕೊಳ್ಳಲು ಧರ್ಮಹಾನಿ, ಬ್ರಾಹ್ಮಣರ ತಿರಸ್ಕಾರದಿಂದ ಆಯುಷ್ಯಹಾನಿ, ಗಂಧ ಪುಷ್ಪ, ದರ್ಭೆ, ಮಂಚ, ಶಾಕಮಾಂಸ, ಹಾಲು, ಮೊಸರು, ಘೃತ, ಮಣಿ, ಮತ್ಸ್ಯ, ಗೃಹದಾನಂಗಳೂ ಇವಂ ತಾವಾಗಿ ತಂದುಕೊಡಲು ತಕ್ಕೊಳ್ಳಬಹುದು, ಜೇನುತುಪ್ಪ ಕಂದಮೂಲಫಲಂಗಳೂ ನಿಕೃಷ್ಟ ಜಾತಿಯವರು ತಂದುಕೊಟ್ಟರೆ ತೆಗದುಕೊಳ್ಳಬೇಕು, ದಾಸ,ಗೊಲ್ಲ,ಕುಲಪಂತ, ಮಿತ್ರ, ಒಕ್ಕಲಿಗ, ಶಿಷ್ಯ ಇವರಲ್ಲಿ ಭೋಜನವಸ್ತುಗಳ ತೆಗದುಕೊಳ್ಳಬಹುದು, ಈರೀತಿಯಲ್ಲಿ ಗೃಹಸ್ಥನಾದವನು, ದೇವಋಷಿ, ಪಿತೃ, ಈ ಋಣತ್ರಯಂಗಳಂ ತಿದ್ದಿಕೊಂಡು ಸ್ವಗೃಹದಲ್ಲಿ ಬ್ರಹ್ಮಜ್ಞಾನದಲ್ಲಿ ಇರಬೇಕು, ಇಲ್ಲವೇ ಕಾಶೀವಾಸದಲ್ಲಿ ಮುಕ್ತಿಯಂ ಪಡೆಯಬೇಕು. ಮನೆಯಲ್ಲಿದ್ದರೆ ಒಂದು ಜನ್ಮದಲ್ಲಿ ಮುಕ್ತಿ ದೊರಕೊಳ್ಳದು. ಈ ಶರೀರ ಆವಾಗ ಬೀಳುವದೋ ಕಾಣಬಾರದು. ಅದುಕಾರಣ ಶೀಘ್ರದಿಂ ಕಾಶೀವಾಸವಂ ಮಾಡಬೇಕು. ಕಾಶೀವಾಸಹೊರತಾಗಿ ಒಂದು ಜನ್ಮದಲ್ಲಿ ಮುಕ್ತಿಯಿಲ್ಲವೆಂದು ಕುಮಾರಸ್ವಾಮಿ ಗೃಹಸ್ಥಾಶ್ರಮ ಧರ್ಮಂಗಳಂ ಪೇಳಲು ಕೇಳಿ ಅಗಸ್ತ್ಯನಿಂತೆಂದನು;-ಎಲೈ ಕುಮಾರಸ್ವಾಮಿ!

ಮಿಯು ಇನ್ನು ತನಗೆ ಕಾಶೀಮಹಿಮೆಯನ್ನು ಜ್ಞಾನಪ್ರದವಾದ ಲಿಂಗಗಳ ಮಹಾತ್ಮೆಯನ್ನೂ ಬುದ್ಧಿಗಲಿಸಬೇಕು. ಕಾಶೀಮಹಿಮೆಹೊರತಾಗಿ ಕೇಳುವದಕ್ಕೆ ಮತ್ತೇತರದ್ದಿಯೂ ಅಪೇಕ್ಷೆ ಇಲ್ಲ. ಕಾಶೀಮಹಾತ್ಮೆಯಂಬ ಅಮೃತಪಾನದಿಂ ಬಳಲಿಕೆ ಆಗುವದಿಲ್ಲವೆಂದು ಅಗಸ್ತ್ಯರು ಬಿನ್ನೈಸಲು ಮತ್ತೂ ಕುಮಾರಸ್ವಾಮಿ ಅಗಸ್ತ್ಯಂಗೆ ಕಾಶೀ ಮಹಾತ್ಮೆಯಂ ನಿರೂಪಿಸಿದನೆಂದು ವೇದವ್ಯಾಸರು ತನಗರುಹಿದರೆಂದು ಸೂತಪುರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ.

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರ ಪುರವರಾಧೀಶ ಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂಧಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ವಿವಾಹ ಬೇಧ ಗೃಹಸ್ಥಾಶ್ರಮಾಚಾರ ನಿರೂಪಣವೆಂಬ ಮೂವತ್ತೆಂಟನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ.

ಮೂವತ್ತೆಂಟನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ಮೂವತ್ತೊಂಭತ್ತನೇ ಅಧ್ಯಾಯ.

ಪರಮೇಶ್ವರನು ಮಂದರ ಪರ್ವತದಲ್ಲಿ ನಿಂತದ್ದು ಅವಿಮುಕ್ತೇಶ್ವರನ ಮಹಿಮೆ.

ಅನಂತರದಲ್ಲಿ ಕುಮಾರಸ್ವಾಮಿ ಅಗಸ್ತ್ಯಂಗೀತೆಂದನು :— ಕೇಳೈ ಅಗಸ್ತ್ಯ! ಸಕಲ ಪಾಪಹರವಾಗ್ಯು ಮೋಕ್ಷಕ್ಕೆ ಕಾರಣವಾದ ಅವಿಮುಕ್ತಕ್ಷೇತ್ರದ ಮಹಿಮೆಯಂ ಕೇಳು, ಪ್ರಪಂಚರಹಿತನಾದ ಆತ್ಮ

ನು ಭೇದವಿಲ್ಲದೆ ನಾಮಜಾತಿಗಳಿಲ್ಲದ ಅವ್ಯಕ್ತವಾದ ಸ್ಥೂಲ ಸೂಕ್ಷ್ಮ ರೂಪದಿಂದಿರುವ ಪರಬ್ರಹ್ಮವು ಈ ಕಾಶೀಕ್ಷೇತ್ರವುಂ ತುಂಬಿಕೊಂಡು ಇದ್ದೀತು, ಪರಮೇಶ್ವರನು ಈ ಕ್ಷೇತ್ರದಲ್ಲಿ ಅಲ್ಲದೆ ಮತ್ತೊಂದು ಕಡೆಯಲ್ಲಿ ಪ್ರಾಣಿಗಳಿಗೆ ಮೋಕ್ಷವ ಕೊಡುವದಕ್ಕೆ ಸಮರ್ಥನಲ್ಲವೇನೋ? ಇದು ಮಹಾ ಆಶ್ಚರ್ಯ, ಪರಮೇಶ್ವರನು ಮತ್ತೊಂದುಕಡೆಯಲ್ಲಿ ಯೋಗಾಭ್ಯಾಸದಿಂ ಮಹಾದಾನಂಗಳಿಂದ, ತಪಸ್ಸುಗಳಿಂದ ಮುಕ್ತಿಯಂ ಕೊಡುವನು. ಈ ಕಾಶೀಕ್ಷೇತ್ರದೊಳಗೆ ವಾಸವಮಾಡುವದೆ ಯೋಗ, ವಿಶ್ವೇಶ್ವರಗೆ ಪತ್ರಪುಷ್ಪಾದಿಗಳಿಂ ಸಮರ್ಪಿಸುವದೆ ಮಹಾದಾನ, ಗಂಗಾಸ್ನಾನವಂ ಮಾಡಿ ಮುಕ್ತಿಮಂಟಪದಲ್ಲಿ ಒಂದು ಕ್ಷಣಮಾತ್ರ ಕುಳಿತು ಯಥಾಶಕ್ತಿ ಜಪವಂ ಮಾಡಿದುದೇ ಮಹಾ ತಪಸ್ಸು. ಅದೆ ತುಲಾಪುರುಷ ಮಹಾದಾನವ ಮಾಡಿದ ಫಲವು. ಕಾಶಿಯಲ್ಲಿ ಒಬ್ಬ ಸನ್ಯಾಸಿಗೆ ಭಿಕ್ಷವನಿಕ್ಕಿದ ಫಲಕ್ಕೆ ಮತ್ತೊಂದು ಕಡೆಯು ಸಾವಿರಸನ್ಯಾಸಿಗಳಿಗೆ ಏಕಕಾಲದಲ್ಲಿ ಭಿಕ್ಷವ ಕೊಟ್ಟದ್ದು ಸರಿಬಾರದು. ಇಲ್ಲಿ ಇಂದ್ರಿಯನಿಗ್ರಹವ ಮಾಡಿದುದೆ ಮಹಾ ಯೋಗ, ಈ ಕ್ಷೇತ್ರದಲ್ಲಿ ಅಷ್ಟಮಿ ಚತುರ್ದಶೀಗಳಲ್ಲಿ ನಕ್ತಭೋಜನವೇ ಮತ್ತೊಂದುಕಡೆಯಲ್ಲಿ ಸಾವಿರ ಚಾಂದ್ರಾಯಣವ ಮಾಡಿದಫಲ, ಈ ಸ್ಥಳದಲ್ಲಿ ಒಂದು ಉಪವಾಸವಂ ಮಾಡಲು ಮತ್ತೊಂದು ಕ್ಷೇತ್ರದಲ್ಲಿ ಮಾಸೋಪವಾಸವಂ ಮಾಡಿದ ಫಲ, ಇಲ್ಲಿ ಒಂದು ಏಕಾದಶೀ ಉಪವಾಸವು ಮತ್ತೊಂದು ಕಡೆಯಲ್ಲಿ ಚಾತುರ್ಮಾಸದಲ್ಲಿ ಬಿಡದೆ ನಾಲ್ಕುತಿಂಗಳು ದಿನಪ್ರತಿಯಲ್ಲೂ ಉಪವಾಸವಂಮಾಡಿದಫಲ, ಇಲ್ಲಿ ಏಕರಾತ್ರಿ ಉಪವಾಸದಫಲಕ್ಕೆ ಮತ್ತೊಂದುಕಡೆಯಲ್ಲಿ ವರ್ಷ ಉಪವಾಸವಂ ಮಾಡಿದಫಲವು ಸರಿಬಾರದು ಇಲ್ಲಿ ಗಂಗೆಯಲ್ಲಿ ಒಂದು ಕುಡಿಕೆ ಉದಕಪಾನವಂಮಾಡಿದಫಲಕ್ಕೆ ಮತ್ತೊಂದು ಕಡೆಯಲ್ಲಿ ದರ್ಭೆಯಕೊನೆಯ ಉದಕಬಿಂದುವ ಪಾನವಂಮಾಡಿ ವರ್ಷಪರ್ಯಂತರವು ತಪಸ್ಸುಮಾಡಿದ ಫಲಕ್ಕೆ ಸರಿಇಲ್ಲ ಕಾಶಿಯಲ್ಲಿ ಮರಣವಾಗುವರಿಗೆ, ಪರಮೇಶ್ವರನು, ತಾರಕಬ್ರಹ್ಮೋಪದೇಶವಮಾಡುವನು ಅಂಥಾ ಕ್ಷೇತ್ರದ ಮಹಿಮೆಯನ್ನು ಬಣ್ಣಿಸಲು

ಅರಿಗೆ ಶಕ್ಯವು, ಪೂರ್ವದಲ್ಲಿ ಪರಮೇಶ್ವರನು ಮಂದರ ಮಹಾಪರ್ವತದಲ್ಲಿ ವಾಸಕ್ಕೆಹೋಗಿ ಕಾಶೀಕ್ಷೇತ್ರವನ್ನೆನಸು, ಅತ್ಯಂತ ಚಿಂತೆಬಟ್ಟನೂ ಎಂದು ಕುಮಾರಸ್ವಾಮಿ ಬುದ್ಧಿಗಲಿಸಲು, ಎಲೈ ಕುಮಾರಸ್ವಾಮಿ! ದೇವತೆಗಳು ತಮ್ಮ ಕಾರ್ಯಾರ್ಥವಾಗಿ ನನ್ನ ಬೇಕಾದರೆ ಕಾಶಿಯಿಂಬಿಟ್ಟು ಹೊರಡಿಸಿದರಲ್ಲದೆ ಪರಮೇಶ್ವರನು ಸ್ವತಂತ್ರನಾಗಿಯೂ ಕಾಶೀಕ್ಷೇತ್ರವಂ ಬಿಟ್ಟ ಕಾರಣವೇನು, ತನ್ನಹಾಗೆ ಪರಾಧೀನನಲ್ಲವಷ್ಟೆ ಎಂದು ಅಗಸ್ತ್ಯ ಬಿಂನೈಸಲು, ಕುಮಾರಸ್ವಾಮಿ ಇಂತೆಂದನು ಕೇಳೈ ಅಗಸ್ತ್ಯನೆ ! ಪರಮೇಶ್ವರನು ಬ್ರಹ್ಮನ ಪ್ರಾರ್ಥನೆಯಿಂದ ಕಾಶೀಪಟ್ಟಣವಂ ಬಿಟ್ಟನು. ನೀನು ಪರೋಪಕಾರಕ್ಕಾಗಿ ಕಾಶಿಯಂ ಬಿಟ್ಟು ಬಂದೆಯಷ್ಟೆ ನಿಂನಂತೆ ಪರೋಪಕಾರಕ್ಕಾಗಿ ಬ್ರಹ್ಮನು ಪ್ರಾರ್ಥಿಸಲು ಮಂದರಪರ್ವತಕ್ಕೆ ಪ್ರಸನ್ನವಹಕಾರಣದಿಂ ಕಾಶೀಪಟ್ಟಣವಂ ಬಿಟ್ಟನು ಎನಲು, ಅಗಸ್ತ್ಯನಿಂತೆಂದನು--ಎಲೈ ಕುಮಾರಸ್ವಾಮಿ ! ಪರಮೇಶ್ವರನು ಮಂದರಪರ್ವತಕ್ಕೆ ಹೋದಕಾರಣವೇನು? ಬ್ರಹ್ಮನು ಏನುಕಾರಣಪ್ರಾರ್ಥಿಸಿದನು ? ಆ ವೃತ್ತಾಂತವನ್ನು ಬುದ್ಧಿಗಲಿಸಬೇಕೆನಲು, ಕುಮಾರಸ್ವಾಮಿ ಇಂತೆಂದನು-ಕೇಳೈ ಅಗಸ್ತ್ಯನೆ ! ಪೂರ್ವಕ್ಕೆ ಪದ್ಮಕಲ್ಪದಲ್ಲಿ, ಸ್ವಾಯಂಭುವ ಮನ್ವಂತರದಲ್ಲಿ ಐವತ್ತು ವರ್ಷ ಮಳೆಗಳಿಲ್ಲದೆ ಬೆಳೆಯಿಲ್ಲದೆ ಮಹಾಕ್ಷಾಮಡಾಮರಂಗಳು ತೋರಲು, ಸಕಲ ಪ್ರಾಣಿಗಳೂ ಕಂಗೆಟ್ಟು ಕೆಲರು ಸಮುದ್ರವಸೇರಿದರು, ಕೆಲರು ಪರ್ವತತಪ್ಪಲಂಗಳಲ್ಲಿ ಸೇರಿದರು, ಸೂರ್ಯಕಿರಣಂಗಳಿಂದ ಅನೇಕ ಪ್ರಾಣಿಗಳು ಅಳಿದವು, ಭೂಮಿಯೆಲ್ಲವೂ ಅರಣ್ಯವಾಯಿತು, ಪಟ್ಟಣಗಳ ಬೀದಿಗಳೊಳಗೆ, ಹುಲಿ, ಕರಡಿ, ಸಿಂಹ-ಶಾರ್ದೂಲಂಗಳು ಮೊದಲಾದ ಕ್ರೂರ ಮೃಗಂಗಳು ಸಂಚರಿಸತೊಡಗಿದವು, ಎಲ್ಲೆಲ್ಲಿಯೂ ಗಗನಮುಟ್ಟುವಂತೆ ಮರಗಳು ಬೆಳೆದವು, ಘೋರಬಾಧೆಗಳು ಹೆಚ್ಚಿದವು, ಪ್ರಾಣಿಗಳೆಲ್ಲರು ಮಾಂಸಾಹಾರಿಗಳಾದರು, ಪ್ರಜೆಗಳು ನಷ್ಟರಾದರು, ಅದರಿಂದ ಯಜ್ಞನಷ್ಟವಾಯಿತು, ದೇವತೆಗಳೂ ನಷ್ಟರಾದರು, ಇದಂಕಂಡು ದೇವೇಂದ್ರ ಮೊದಲಾದ ದೇವತೆಗಳು, ಸಕಲಮು

ಷಿಗಳುಕೂಡಾ ಸತ್ಯಲೋಕಕ್ಕೆಹೋಗಿ ಬ್ರಹ್ಮನಿಗೆ ಈ ವೃತ್ತಾಂತವಂ ಬಿಂನೈಸಲು, ಬ್ರಹ್ಮನು ಕೇಳಿ ವಿಸ್ಮಿತನಾಗಿ ತನ್ನ ಸೃಷ್ಟಿ ವ್ಯರ್ಥವಾ ಯಿತೆಂದು ಚಿಂತಿಸಿ ಭೂಮಿಯಲ್ಲಿ ಅಧರ್ಮದಿಂ ಅರಸುಗಳು ರಾಜ್ಯವ ನಾಳಲಾಗಿ ಇಂಥಾ ಪ್ರಳಯ ಬಂತು, ಧರ್ಮದಿಂ ರಾಜ್ಯವನಾಳಿದರೆ ಇಂಥಾ ಅಕಾಲಪ್ರಳಯವ್ಯಾಕಾದೀತೆಂದು ಯೋಚಿಸಿ, ಈ ಚತುಸ್ಸಾ ಗರ ಮಧ್ಯಭೂಮಿ ಎಲ್ಲಕ್ಕೂ ಸದ್ಧರ್ಮದಲ್ಲಿ ರಾಜ್ಯವನಾಳುವಂಥಾ, ಏಕ ಛತ್ರವಾಗಿ ಪಾಲಿವಂಥಾ ರಾಯಂಗೆ ಭೂಮಿಯ ಪಟ್ಟವಂ ಕಟ್ಟ ಬೇಕೆಂದು ಬ್ರಹ್ಮನು ಹಂಸಾರೂಢನಾಗಿ ದೇವತೆಗಳು ಸಹಾ, ಕಾಶೀ ಕ್ಷೇತ್ರದಲ್ಲಿ ಮನುವಂಶಜನಾದ ರಿಪುಂಜಯನೆಂಬ ರಾಜ ಋಷಿಯು ಉ ಗ್ರತಪವಂ ಮಾಡುತ್ತಿರಲು ಬ್ರಹ್ಮನು ಬಂದು ಮುಂದೆನಿಂತು ಪ್ರಸನ್ನ ನಾಗಿ ಬಹುಮಾನದಿಂದಿಂತೆಂದನು--ಎಲೆ ರಿಪುಂಜಯನೆ! ನಿಂನ ತಪಸ್ಸಿ ಗೆ ಸಂತೋಷಬಟ್ಟು ನಾನು ನಿನಿಗೆ ಪ್ರಸನ್ನನಾದೆನು, ನೀನು ಇನ್ನು ತಪಸ್ಸುಬಿಟ್ಟು ಸಮುದ್ರಸಹಿತವಾದ ಈ ಭೂಮಿಗೆ ಕರ್ತನಾಗಿ ಸುಧರ್ಮದಲ್ಲಿ ರಾಜ್ಯವನ್ನು ಏಕಛತ್ರದಲ್ಲಿ ಪಾಲಿಸು, ನಿನಿಗೆ ನಾಗರಾ ಜನಾದ ಮಹಾಶೇಷನು ತನ್ನ ಮಗಳಾದ ಅನಂಗಮೋಹಿನಿ ಎಂಬ ಸ್ತ್ರೀಯಂಕೊಟ್ಟನು ನೀನು ಆ ಸ್ತ್ರೀಯ ಮದುವೆಯಾಗಿ ರಾಜ್ಯ ವನಾಳು, ದೇವತೆಗಳು ರತ್ನಮಯವಾದಂಥಾ ದಿವ್ಯ ಪುಷ್ಪವನ್ನು ಕೊಟ್ಟರು ಅದರಿಂದ ನಿನಿಗೆ ದಿವೋದಾಸರಾಯನೆಂಬ ಹೆಸರಾದೀತು, ನಿನಿಗೆ ಕಾಮರೂಪವಾಗುವಂಥಾ ಸಾಮರ್ಥ್ಯ ಉಂಟಾದೀತು, ಈ ಕಾಮ ಗಮನ ಉಳ್ಳಂಥಾ ದಿವ್ಯ ವಿಮಾನವಂ ಕೊಡಲು ಅದರಿಂದ ಸಕಲ ಭೂ ಮಂಡಲವನ್ನೂ ಜಯಿಸಿ ದುಷ್ಟನಿಗ್ರಹವಂಮಾಡಿ, ಶಿಷ್ಟಪರಿಪಾಲನೆ ಯಿಂ ಸುಧರ್ಮದಿಂ ರಾಜ್ಯವನಾಳುತ್ತಿರಲು, ಅದರಿಂದ ಲೋಕಕ್ಕೆ ಬಂದ ಅನಾವೃಷ್ಟಿದೋಷ ಪರಿಹರವಾದೀತು, ಅದರಿಂದ ಪ್ರಜೆಗಳು ಸಂತುಷ್ಟರಾಗಿ, ಯಜ್ಞಾದಿ ಷಟ್ಕರ್ಮಗಳಂ ಮಾಡ್ಯಾರು, ಅದರಿಂದ ದೇವತೆಗಳು ಸಂತುಷ್ಟರಾದಾರು, ಎಂದು ಹೇಳಲು ರಿಪುಂಜಯರಾ ಯನು ಬ್ರಹ್ಮನ ವಾಕ್ಯವಂ ಕೇಳಿ ಸಂತೋಷದಿಂದ ಬ್ರಹ್ಮನಿಗೆ,

ನಮಸ್ಕಾರವಂ ಮಾಡಿ ಅನೇಕ ಬಗೆಯಲ್ಲಿ ಸ್ತುತಿಸಿ ಇಂತೆಂದನು— ಎಲೈ ಸ್ವಾಮಿ ! ನಾನು ಏಕಛತ್ರದಿಂ ರಾಜ್ಯವಾಳುವ ದುಂಬಮಿದರೆ ರಾಜ್ಯವ ನಾಳೇನು, ಅಲ್ಲದಿದ್ದರೆ ಒಲ್ಲೆನೆನಲು, ಬ್ರಹ್ಮನು ಹಾಗೆ ಆಗಲೆಂದು ವರಗಳನಿತ್ತು ಪೋಗಲು, ಈ ದಿವೋದಾಸರಾಯನು ರಾಜ್ಯಾಧಿಪತಿಯಾಗಿ ಕಾಶೀಯಲ್ಲಿ ಸಿಂಹಾಸನಾರೂಢನಾಗಿ ಕುಳಿತು ದೇವತೆಗಳು ಇಂದು ಮೊದಲಾಗಿ ಸ್ವರ್ಗದಲ್ಲಿಯೆ ಇರಲೀ ಎಂದು ಭೇರಿಯಂ ಹೊಡಯಿಸಿ ಸಾರಿಸಲೂ, ಅನಂತರದಲ್ಲಿ ಈ ವೃತ್ತಾಂತವಂ ಪೇಳುವನಾಗಿ ಬ್ರಹ್ಮನು ಕಾಶೀಪಟ್ಟಣಕ್ಕೆ ಹೋಗಿ ಸಕಲ ದೇವತೆಗಳಿಂದ ಓಲೈಸಲ್ಪಟ್ಟ ಪರಮೇಶ್ವರನಂ ಕಂಡು ಈ ವೃತ್ತಾಂತಮಂ ಪೇಳಲು ಪರಮೇಶ್ವರನು ಕೇಳಿ ಬ್ರಹ್ಮಂಗೆ ಇಂತೆಂದನೂ. ಎಲೈ ಚತುರ್ಮುಖನೆ ಹಾಗಾದರೆ ಕುಶದ್ವೀಪದಲ್ಲಿ ಮಂದರನು ಬಹುಕಾಲಗಳಿಂದ ಉಗ್ರತಪವಂ ಮಾಡುತ್ತಾ ಇದ್ದಾನೆ. ಆತನಿಗೆ ವರವನೀಯ್ಯಬೇಕೆಂದು ಪೇಳಿ ಬ್ರಹ್ಮನು ಸಕಲ ದೇವತೆಗಳು ಸಹಾ ನಂದಿ ಭೃಂಗೀ ಮೊದಲಾದ ಅನೇಕ ಗಣಂಗಳುಸಹಿತ ಪಾರ್ವತೀಸಮೇತ ವೃಷಭವಾಹನನಾಗಿ ಪರಮೇಶ್ವರನು ಪ್ರಸನ್ನನಾಗಿ ಮಂದರಂಗಿಂತೆಂದನು. ಎಲೈ ಪರ್ವತೋತ್ತಮನಾದ ಮಂದರನೆ ನಿನ್ನ ತಪಸ್ಸಿಗೆ ಮೆಚ್ಚಿದೆನು. ತಪಸ್ಸು ಸಾಕೇಳು, ವರಮಂ ಬೇಡಿಕೊಳ್ಳೆನಲೂ, ಮಂದರನೂ ಪ್ರಸನ್ನನಾಗಿ ಮುಂದೆ ನಿಂತಿರ್ದ ಪರಮೇಶ್ವರನಂ ನೋಡಿ ಎದ್ದು ನಮಸ್ಕರಿಸಿ ಕರಗಳಂ ಮುಗಿದು ಸ್ತುತಿಸಿದನದೆಂತೆನೆ.

ಶ್ಲೋಕ॥ಶಂಭೋಶಂಕರಶಾಶ್ವತೇಶ್ವರಶಿವಸ್ಥಾಣೋಹ್ಯುಮಾವಲ್ಲಭ।
ಭೂತೇಶತ್ರಿಪುರಾಂತಕತ್ರಿನಯನ ಶ್ರೀಕಂಠಕಾಲಾಂತ
ಕ॥ಶರ್ವೋಗ್ರಾಭಯನೀಲಕಂಠವೃಷಭಾರೂಢತ್ರಿಶೂ
ಲಿನ್ಭವ । ಈಶ ಶ್ರೀಪರಮೇಶ ಪಾರ್ವತಿವರಮಹಾ
ದೇವೇಶತುಭ್ಯಂನಮಃ॥

ಇಂತೆಂದು ಸ್ತುತಿಸಿ ಮುಗುಳಿ ಸಾಷ್ಟಾಂಗನಮಸ್ಕಾರವಂಮಾಡಿ ಎಲೆ ಸ್ವಾಮಿ ಲೀಲಾವಿಗ್ರಹವತಾಳ್ದ ಸರ್ವಜ್ಞನಾದಂಥಾ ಪರಮೇಶ್ವ

ರನೆ ನೀನು ಶರಣಾಗತರಾದ ಭಕ್ತರ ವೃತ್ತಾಂತವಂ ಬಲ್ಲವನು, ಸಕಲ ಪ್ರಾಣಿಗಳ ಹೃದಯದಲ್ಲಿಯೂ ವಾಸವಾಗಿ ಇರುವಂಥಾವನು ಅಂಥಾ ಪರಮಾತ್ಮನಾದ ನೀನು ಅರಿಯದ ಪ್ರಪಂಚವೇನುಯಿದ್ದೀತು, ತಾನು ಸ್ವಭಾವದಿಂದ ಕಠಿಣರೂಪಾದವನು ಅದರಮೇಲೆ ಯಾಚಕನು, ಮಂದದೃಷ್ಟಿಯುಳ್ಳವನು, ದುಃಖಜೀವಿಯಾದವನು, ನೀನು ಶರಣಾಗತರಕ್ಷಕನು ಅದುಕಾರಣ ನೀನು ಕೃಪೆಯಿಂದ ವರವಂ ಕೊಡಬೇಕಾದರೆ, ತಾನು ಕೈಲಾಸಕ್ಷೇತ್ರಕ್ಕೆ ಸರಿಯಾದೇಂಬ ಅಪೇಕ್ಷೆಯಿಂದ ನಿನ್ನ ಪಾದಪದ್ಮಗಳಂ ಭಜಿಸಿದೆನು, ನೀನೂ ದೇವಿಯರೂ ಸಹಾ ಬ್ರಹ್ಮ ಸೂರ್ಯ ಸಕಲ ಯೋಗಿನಿಯರೂ ಗಣಪತಿ ಮೊದಲಾದ ಅಸಂಖ್ಯಾತ ಗಣಂಗಳೂ ಸಮಸ್ತ ದೇವತೆಗಳೂ ಸಹಾ ತನ್ನ ಶಿರಸ್ಸಿನಲ್ಲಿ ವಾಸವಂ ಮಾಡಬೇಕೆನಲೂ, ಇಂತೆಂಬ ವರವಂ ಬೇಡಿದ ಮಂದರನ ವಾಕ್ಯವಂ ಕೇಳಿ ಸಕಲರಿಗೂ ಸಕಲ ಪುರುಷಾರ್ಥಂಗಳ ಕೊಡುವ ಪರಮೇಶ್ವರನೂ ಕ್ಷಣಮಾತ್ರ ಚಿಂತೆಯಂ ಮಾಡುತ್ತಿರಲೂ, ಆ ಸಮಯದಲ್ಲಿ ಬ್ರಹ್ಮನು ಕೈಮುಗಿದು ಬಿನ್ನೈಸಿದನು. ಎಲೈ ಸ್ವಾಮಿ ಮಂದರನು ಕೇಳಿದ ವರವು ಚೆನ್ನಾಯಿತು, ತನಿಗೆ ಒಂದು ವರವ ಕೃಪೆಮಾಡಬೇಕೂ, ಅದಾವುದೆಂದರೆ;—ಎಲೈ ವಿಶ್ವೇಶ್ವರನೆ, ನಿಮ್ಮ ಅನುಗ್ರಹದಿಂ, ನಾನಾವಿಧ ಪ್ರಜೆಗಳಂ ಸೃಷ್ಟಿಸಿದೆನು, ಆ ಪ್ರಜೆಗಳು ಅರವತ್ತು ವರುಷದ ಅನಾವೃಷ್ಟಿಯಿಂದ, ಅರಾಜಕವಾಗಿ ಅವಸ್ಥೆ ಪಡುವರೂ, ಆ ಪ್ರಜೆಗಳನ್ನು ಧರ್ಮದಿಂದ ರಕ್ಷಿಸುವುದಕ್ಕಾಗಿ, ಮನು ವಂಶದಲ್ಲಿ ಹುಟ್ಟಿದ ರಿಪುಂಜಯನೆಂಬ ರಾಜನನ್ನು ಕಾಶಿಯಲ್ಲಿ ಏಕಚ್ಛತ್ರದಿಂದ ರಾಜ್ಯವನಾಳು, ನೀನು ಧರ್ಮದಿಂದ ರಾಜ್ಯವನಾಳೆಲೂ ಆ ಪುಣ್ಯದಿಂದ ಮಳೆ ಬಂದು ಅನಾವೃಷ್ಟಿ ಪರಿಹರವಾದೀತೂ, ಅದರಿಂದ ಸಕಲ ಪ್ರಜೆಗಳೂ ಬದುಕಿ ಯಾರೂ, ಆ ಪ್ರಜಾ ಸಂಪತ್ತಿನಿಂದಾ ಯಜ್ಞಾದಿ ಷಟ್ಕರ್ಮಂಗಳು ನಡದಾವೂ, ಅದರಿಂದ ದೇವತೆಗಳಿಗೆ ತೃಪ್ತಿಯಾದೀತೂ, ಎಂದು ಪಟ್ಟವಂ ಕಟ್ಟಲೂ ಆ ರಾಯನು ರಾಜ್ಯವನಾಳುವಪರ್ಯಂತರ ದೇವತೆಗಳು ತಮ್ಮತಮ್ಮ ಲೋಕಂಗಳಲ್ಲಿ

ಇರಲೀಯೆಂದು ಬೇಡಿಕೊಳ್ಳಲೂ ಹಾಗೇ ಆಗಲೀ ಆದರೆ ನೀನು ತನ್ನ ಎರಡುಘಳಿಗೆ ಈ ಕಾಶೀಕ್ಷೇತ್ರದಲ್ಲಿ ಸುಧರ್ಮದಿಂದಾ ರಾಜ್ಯವನಾಳ್ವಯೆಂದು ವರವಂ ಕೊಟ್ಟನು. ತನ್ನ ಎರಡುಘಳಿಗೆಯೆಂಬುವದು ಇಪ್ಪತ್ತೊಂದು ಮಹಾಯುಗ, ಅದು ಒಂದು ಇಂದ್ರಪಟ್ಟವೆನಿಸುವದು. ಅಂಥಾ ಇಂದ್ರಪಟ್ಟ ನಿಮಗೆ ಕ್ಷಣಮಾತ್ರವೆನಿಸುವದು, ಒಂದು ಕ್ಷಣಮಾತ್ರ ಎನ್ನ ಬಿನ್ನಹವಂಗೀಕರಿಸಿ ಈ ಮಂದರಗೆ ವರವಂಕೊಟ್ಟ ನಿಮಿತ್ತ ಸಕಲ ದೇವತಾ ಸಾರ್ವಭೌಮರಾದ ನೀವು ಮಂದರನ ಶಿರಸ್ಸಿನಲ್ಲಿ ಸಕಲ ದೇವತೆಗಳುಸಹ ಇರಬೇಕೆಂದು ಬ್ರಹ್ಮನು ಬಿನ್ನೈಸಲು ಪರಮೇಶ್ವರನು ಬ್ರಹ್ಮನ ಬಿನ್ನಹವಂ ಕೇಳಿ ಮಂದರ ಕೇಳಿದ ವರವನಿತ್ತು ಆ ಪರ್ವತದಲ್ಲಿರ್ದನು. ಅದುಕಾರಣ, ಕುಶದ್ವೀಪದಲ್ಲಿಹ ಮಂದರಪರ್ವತವು ಮುಕ್ತಿಕ್ಷೇತ್ರವಾಯಿತು, ಪರಮೇಶ್ವರನು ಮಂದರಪರ್ವತಕ್ಕೆ ಹೋದಾಗಲೆ ತನ್ನ ದಿವ್ಯಜ್ಞಾನದಿಂ ಮಂದರನ ಅಭಿಪ್ರಾಯುಮಂ ತಿಳಿದು ತನ್ನ ನಿಜಮೂರ್ತಿಯಾದ ಲಿಂಗವ ಪ್ರತಿಷ್ಠೆಯುಮಾಡಿ ಹೋದನು. ಅದುಕಾರಣ ಪುಣ್ಯಕ್ಷೇತ್ರವಂ ಬಿಡಲಾರದೆ ಮಂದರಪರ್ವತಕ್ಕೆ ಪೋಪಾಗಲೂ, ಪರಮೇಶ್ವರನು ಕಾಶೀಕ್ಷೇತ್ರವಂ ಬಿಟ್ಟುದಿಲ್ಲ. ಅದುಕಾರಣ ಈ ಕಾಶೀಕ್ಷೇತ್ರವು ಅವಿಮುಕ್ತಕ್ಷೇತ್ರವೆನಿಸಿತು. ಆಗ ಅವಿಮುಕ್ತೇಶ್ವರನೆಂಬ ಹೆಸರಾಯಿತು. ಆ ಅವಿಮುಕ್ತಕ್ಷೇತ್ರದಲ್ಲಿ ಅವಿಮುಕ್ತಲಿಂಗವಂ ಸೇವಿಸಲೂ ಪುನರ್ಜನ್ಮವಿಲ್ಲ. ಸಕಲರೂ ವಿಶ್ವನಾಥನಂ ಪೂಜಿಸಲೂ ಆ ವಿಶ್ವನಾಥನು ಅವಿಮುಕ್ತೇಶ್ವರನ ಪೂಜೆಯಂ ಮಾಡುವನು. ಪೂರ್ವದಲ್ಲಿ ಲಿಂಗಸ್ವರೂಪವಂ ತಿಳಿದು ಲಿಂಗಪ್ರತಿಷ್ಠೆಯಂ ಮಾಡಿದವರೊಬ್ಬರೂ ಇಲ್ಲ. ಈಶ್ವರನಿಂ ಪ್ರತಿಷ್ಠೆಯಾದ ಅವಿಮುಕ್ತೇಶ್ವರ ಮಹಾಲಿಂಗವಂ ನೋಡಿ ಬ್ರಹ್ಮ ಮೊದಲಾದ ದೇವತೆಗಳು ಸಕಲ ಋಷಿಗಳೂ ಸಕಲ ರಾಯರೂ ತಮ್ಮ ತಮ್ಮ ನಾಮಂಗಳಿಂದಾ, ಕಾಶಿಯಲ್ಲಿ ಲಿಂಗಪ್ರತಿಷ್ಠೆಯಂ ಮಾಡಿದರೂ, ಆ ಲಿಂಗಗಳಲ್ಲಿ ಅಧಿಕವಾದ ಅವಿಮುಕ್ತೇಶ್ವರ ಲಿಂಗವಂ ಸ್ಮರಿಸಲೂ ಒಂದು ಜನ್ಮದ ಪಾಪಹರ, ಆ ಲಿಂಗದ ಮಹಿಮೆಯುಂ ಕೇಳಿದರೆ ಎರಡು ಜನ್ಮದ ಪಾಪಹರವೂ, ದರ್ಶನದಿಂದ ಮೂರು ಜನ್ಮದ ಪಾಪಹರ, ಸ್ಪರ್ಶ

ನದಿಂ ಐದು ಜನ್ಮದ ಪಾಪಹರ, ಪೂಜೆಯಂ ಮಾಡಲು ಪುನರ್ಜನ್ಮವಿಲ್ಲ. ಬ್ರಹ್ಮಾಂಡದೊಳಗಿರ್ದ ಸಕಲ ಲಿಂಗಗಳು, ಶಿವರಾತ್ರಿದಿನ ಬಂದು ಅವಿಮುಕ್ತೇಶ್ವರನ ಪೂಜೆಯಂ ಮಾಳ್ಪರು. ಅಂಥಾ ಶಿವರಾತ್ರಿಯಲ್ಲಿ ಆರೊಬ್ಬರು ಅವಿಮುಕ್ತೇಶ್ವರನ ಪೂಜೆ, ಉಪವಾಸ ಜಾಗರಣವಂ ಮಾಡಲು, ಮುಕ್ತರಹರು. ಅವಿಮುಕ್ತೇಶ್ವರನು, ಪಾಪವೆಂಬ ಪರ್ವತಕ್ಕೆ ವಜ್ರಾಯುಧವಾದಂಥಾವನು. ಅವಿಮುಕ್ತೇಶ್ವರನ ಪೂಜಿಸಿದ ಭಕ್ತರ ಕಂಡು, ಯಮನು ದೂರದಲ್ಲಿಯೇ, ನಮಸ್ಕರಿಸಿ, ಶಿವಸಾಯುಜ್ಯಕ್ಕೆ ಕಳುಹುವನು. ಅದರಿಂದಾ ಅವಿಮುಕ್ತೇಶ್ವರನ ಧ್ಯಾನಿಸಿದುದೆ ಮನಸ್ಸು, ನೋಡಿದುದೇ ಕಣ್ಣುಗಳು, ಪೂಜೆಯಂ ಮಾಡಿದುದೇ ಹಸ್ತಗಳು, ಆತನ ಚರಿತ್ರವಂ ಕೇಳಿದುದೇ ಕರ್ಣಗಳು, ಆತನ ನಾಮಾಮೃತವನಾಶ್ವಾಸಿದುದೆ ಜಿಹ್ವೆ, ದೇಶಾಂತರದಲ್ಲಿ ಎಲ್ಲಿಯಾದರು ಅವಿಮುಕ್ತೇಶ್ವರನಂ ಸ್ಮರಿಶಿ, ಗೇಹವಂ ಬಿಡಲು, ಕಾಶಿಯಲ್ಲಿ ಮರಣವಾದ ಫಲವುಂಟು. ಅವಿಮುಕ್ತೇಶ್ವರನ ಸ್ಮರಿಸಿ, ಏನುಕಾರ್ಯಕ್ಕೆ ಹೋಗಲು, ಆ ಕಾರ್ಯ ಸಿದ್ಧಿಯಾಗಿ, ಸುಖದಿಂದಿರುವರಾಗಿ, ಮನೆಗೆ ಬಹರೆಂದು ಕುಮಾರಸ್ವಾಮಿ, ಅಗಸ್ತ್ಯಋಷಿಗೆ ನಿರೂಪಿಸಿದನೆಂದು ವ್ಯಾಸರು ತನಗರುಹಿದರೆಂದು ಸೂತಪುರಾಣೀಕನು ಶೌನಕಾದಿ ಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ.

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದಾ ವಿರಚಿಸಿದ ಸ್ಕಂಧಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಪರಮೇಶ್ವರನು, ಮಂದರಪರ್ವತದಲ್ಲಿ ನಿಂತದ್ದು. ಅವಿಮುಕ್ತೇಶ್ವರನ ಮಹಿಮೆಯೆಂಬ ಮೂವತ್ತೊಂಭತ್ತನೇ ಅಧ್ಯಾಯಾರ್ಥನಿರೂಪಣಕ್ಕಂ ಮಂಗಳಮಹಾ. ಶ್ರೀ ಶ್ರೀ

ಮೂವತ್ತೊಂಭತ್ತನೇ ಅಧ್ಯಾಯ ಸಂಪೂರ್ಣ,

ಶ್ರೀ ವಿಶ್ವೇಶ್ವರಾಯ ನಮಃ.

ನಾಲ್ವತ್ತನೆ ಅಧ್ಯಾಯ.

ಗೃಹಸ್ಥಾಶ್ರಮಧರ್ಮ.

ಅನಂತರದಲ್ಲಿ ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು. ಕೇಳೈ ಅಗಸ್ತ್ಯ, ಅವಿಮುಕ್ತೇಶ್ವರನ ಮಹಿಮೆಯಂ ನಿನಗೆ ಪೇಳ್ದನಲ್ಲಾ, ಇನ್ನು ನೀನು ಕೇಳತಕ್ಕ ಕಥೆಯಂ ಕೇಳು ಎನಲು, ಅಗಸ್ತ್ಯನಿಂತೆಂದನು. ಎಲೈ ಕುಮಾರಸ್ವಾಮಿಯೇ! ಸಕಲ ಪಾತಕಂಗಳು ಪರಿಹರಮಪ್ಪ, ಅವಿಮುಕ್ತೇಶ್ವರನ ಮಹಿಮೆಯಂ ಕೇಳಿ ಸಂತೋಷವಾಯಿತು, ಕೃತಾರ್ಥನಾದೆನು. ಅವಿಮುಕ್ತಕ್ಷೇತ್ರದಲ್ಲಿರುವ ಲಿಂಗಗಳ ಸೇವೆಯು, ದೊರಕುವ ಉಪಾಯವು ಹ್ಯಾಗೆ? ಬ್ರಹ್ಮಚಾರೀ, ಗೃಹಸ್ಥ, ವಾನಪ್ರಸ್ಥ, ಯತಿ, ಎಂಬ ನಾಲ್ಕು ಆಶ್ರಮಂಗಳಲ್ಲಿ ಮೊದಲೇ ಬ್ರಹ್ಮಚಾರೀ ಗೃಹಸ್ಥಾಶ್ರಮದ ಆಚಾರವಂ ಬುದ್ಧಿಗಲಿಸಿದರಲ್ಲ. ಇನ್ನು ವಾನಪ್ರಸ್ಥ ಯತ್ಯಾಶ್ರಮಂಗಳ ವಿಚಾರವಂ ವಿಸ್ತಾರವಾಗಿ ಬುದ್ಧಿಗಲಿಸಬೇಕೆನಲು, ಕುಮಾರಸ್ವಾಮಿ ಇಂತೆಂದನು—ಕೇಳೈ ಅಗಸ್ತ್ಯನೆ! ಈ ಅವಿಮುಕ್ತಕ್ಷೇತ್ರವು ಅನೇಕ ಪುಣ್ಯದಿಂದಲ್ಲದೆ. ದೊರಕೊಳ್ಳದು ಸುಲಭವಲ್ಲ. ಆ ಪುಣ್ಯವು ಧರ್ಮಶಾಸ್ತ್ರಾಚರಣೆಯಲ್ಲಿ ನಡೆಯುವವನಂ ಕಲಿಕಾಲಂಗಳು ಪೀಡಿಸುತ್ತಿಹವು. ಶಾಸ್ತ್ರಜ್ಞಾನವಿಲ್ಲದಿದ್ದರೆ ವಿಧಿನಿಷಿದ್ಧಂಗಳೆಂದು ಅರಿಯಬಾರದು. ನಿಷಿದ್ಧಂಗಳಲ್ಲಿ ನಡದ ಬ್ರಾಹ್ಮಣಾದಿಗಳನು, ಮೃತ್ಯುವು ವರಿಸುತ್ತಾ ಇಹುದು. ಅದು ಕಾರಣಾ, ನಿಷಿದ್ಧವಾದ ಆಹಾರಾದಿಗಳಂ ಬಿಡಬೇಕು. ನಿಷಿದ್ಧ ಆಹಾರಂಗಳಾವಾವೆಂದರೆ—ನೀರುಳ್ಳಿ, ಬೆಳ್ಳುಳ್ಳಿ, ಗ್ರಾಮಸೂಕರ, ಭಂಗಿ, ಕರು ಈದ ಹತ್ತು ದಿನದೊಳಗಣ ಹಾಲು, ಕಿರುಕಸಾಲೆಸೊಪ್ಪು, ಮಾಗಿಸೋರೆಕಾಯಿ, ಬಸಲೆಸೊಪ್ಪು, ನುಗ್ಗೆಸೊಪ್ಪು, ಈಕಾಯಿ, ಚೆಲ್ಲಕಾಯಿ, ವೃಕ್ಷದ ತಿಗಡು, ವೃಕ್ಷದಹಗಿನು, ಹಲಸಿನಹಣ್ಣು, ಮೊದಲಾ

ದ್ದರಲ್ಲಿ ಮಾಡಿದ ತಂಗಳು ಕಜ್ಜಾಯ, ದೇವತಾ ಅರ್ಪಿತವಿಲ್ಲದ ಮಾಂಸ, ಕರುವಿಲ್ಲದ ಹಸುವಿನಹಾಲು, ಈ ಮೊಸರು, ಬಂದುಕೋಡಿನ ಹಸುವಿನ ಹಾಲು, ಟೀವನಹಕ್ಕಿ ಗುಬ್ಬಿ, ಚಕ್ರವಾಕ, ಹಂಸೆ, ನೀರುಕೋಳಿ, ಆಮೆ, ಬಾವುಲಹಕ್ಕಿ, ಕೋಳಿ, ಗಿಣಿ, ಕರೀಕುಚ್ಚಿನಹಕ್ಕಿ ಇವು ಎಲ್ಲವಂ ದೇವ ಪಿತೃಕಾರ್ಯಕ್ಕೆ ಮಾಡಲಾಗದು; ಸಾವಿರದಾಡೆಯುಳ್ಳ ಮೀನು, ಕೆಂ ಮೀನು, ಕರಡಿ, ಮುಳ್ಳುಹಂದಿ, ಹಂದಿ, ಉಡ, ಪ್ರಶಸ್ತವಾದ ಮೃಗ ಪಕ್ಷಿಗಳೂ, ಇವಂ ಮಾಂಸಭಕ್ಷಕರಾದವರು ಭಕ್ಷಿಸಬಹುದು; ಯಾವನು ಆಯುಷ್ಯ ಸ್ವರ್ಗಗಳನಪೇಕ್ಷಿಸುವನೋ ಅವನುಬಿಡಬೇಕು, ಸಕಲವಸ್ತು ಗಳಲ್ಲಿಯೂ ತಂಗಳು ನಿಂದ್ಯವು, ತೈಲ ಘೃತಾದಿಗಳಿಂದ ಪಕ್ವವಾದ ಕ ಜ್ಜಾಯಂಗಳು ಮೊದಲಾದ ವಸ್ತುಗಳಿಗು, ಫಲಾದಿಗಳಿಗು, ಇವಕ್ಕೆ ತಂಗ ಳುದೋಷವಿಲ್ಲ. ಪ್ರಾಣಸಂಕಟಗಳಲ್ಲಿ, ಯಜ್ಞಾದಿಗಳಲ್ಲಿ, ಔಷಧಿಗಳಲ್ಲಿ, ಶ್ರಾದ್ಧಾದಿಗಳಲ್ಲಿ ಮಾಂಸ ಭಕ್ಷಣೆಯಿಂದ ದೋಷವಿಲ್ಲಾ. ಶಾಸ್ತ್ರ ಹೊರ ತಾಗಿ ಜಿಹ್ವಾ ಚಾಪಲ್ಯದಿಂದ ಮಾಂಸ ಭಕ್ಷಣೆಯಂಮಾಡಲು ಮಹಾ ಪಾಪ, ಶಾಸ್ತ್ರವಿಧಿಯಿಂದ ಮಾಂಸ ಭಕ್ಷಣೆಯಂಮಾಡಲು ದೋಷವಿಲ್ಲ. ಮುನ್ನ ಪೂರ್ವದಲ್ಲಿ ಬ್ರಹ್ಮನು ಬ್ರಾಹ್ಮಣರ ಸೃಷ್ಟಿಸಿ, ಲೋಕಹಿತವಾಗಿ ಯಜ್ಞಂಗಳಂ ಕಟ್ಟುಮಾಡಿ, ಆ ಯಜ್ಞಾದಿಗಳಲ್ಲಿ ಪಶು, ಪಕ್ಷಿ, ಧಾನ್ಯಾ ದಿಗಳಂ ಸೃಷ್ಟಿಸಿದನಾದಕಾರಣ ಯಜ್ಞಾದಿಗಳಲ್ಲಿ ಪಶುಹಿಂಸೆ ಮಾಡಲು ದೋಷವಿಲ್ಲ, ಅಲ್ಲಿ ಹಿಂಸೆಯುಮಾಡಿಸಿಕೊಂಡ ಪಶು ಮೊದಲಾದವುಗಳಿಗೆ ಉತ್ತಮಗತಿಯುಂಟು, ಹಿಂಸಕರು ಎಂಟುಮಂದಿ ಎನಿಸುವರು, ಅವರಾ ರಾರೆನಲು:—ಹಿಂಸೆಯಂ ಮಾಡಿದವನು, ಮಾಡುವದಕ್ಕೆ ಒಪ್ಪಿದವನು, ಕೊಂದವನು, ಮಾರಿದವನು, ಅಡಿಗೆಯ ಮಾಡಿದವನು, ಉಣಬಡಿಸಿದ ವನು, ಊಟಮಾಡಿದವನೂ, ಇದಕ್ಕೆ ಉಪಕಾರವಾಗಿ ತೆಕೊಟ್ಟವನೂ. ಇವರೆಂಟುಮಂದಿಗೂ ಹಿಂಸಾ ದೋಷವು ಯಜ್ಞದಲ್ಲಿಮಾತ್ರ ಇಲ್ಲಾ, ವ್ಯರ್ಥ ಹಿಂಸೆ ಮಾಡಲು ಈ ಎಂಟುಮಂದಿಗೂ ನರಕವಹುದು ; ಮಾಂ ಸವ ಭಕ್ಷಿಸುವ ಕುಲದವನಾದರೂ ಯಾವಜ್ಜೀವವೂ ಮಾಂಸವ ಬಿಡಲು ಅಶ್ವಮೇಧ ಯಾಗಫಲವುಂಟು, ಸುಖದುಃಖಾದಿಗಳಂ ತನ್ನಂತೆ ಪರರ

ನೋಡಲು, ಇಹಪರ ಸೌಖ್ಯವುಂಟೂ, ಪರರಿಗೆ ಮಾಡಿದ ಸುಖದುಃಖಂಗಳು ಜನ್ಮಾಂತರದಿಂದಾ ತನಗೆ ಸಂಭವಿಸುವದು, ಪ್ರಯಾಸಪಡದೆ ಅರ್ಥಸಂಪಾದನೆ ಕೂಡದು, ಅರ್ಥವಿಲ್ಲದೆ ಸಕಲ ಸತ್ಕರ್ಮ ನಡಿಯದು ಸಕಲ ಸತ್ಕರ್ಮವಿಲ್ಲದೆ ಧರ್ಮವಿಲ್ಲ, ಧರ್ಮವಿಲ್ಲದವರಿಗೆ ಇಹಪರ ಸೌಖ್ಯವಿಲ್ಲ, ಆದುಕಾರಣದಿಂದ ನ್ಯಾಯದಿಂದ ಧನವ ಗಳಿಸಿ ಧರ್ಮವ ಮಾಡಬೇಕು, ದೇಶ ಕಾಲ ಸತ್ಪಾತ್ರಂಗಳಂ ನೋಡಿ ಭಕ್ತಿಯಿಂದ ದಾನವನೀಯಲು ಪರಲೋಕ ಸಾಧನ ಉಂಟು, ವಿಧಿ ಹೊರತಾಗಿ ಧನವನೀಯಲು ಫಲವಿಲ್ಲ. ಪಾಪಂಗಳು ಪರಿಹರವಾಗುವ ನಿಮಿತ್ತ ದೇಶ ಕಾಲ ಪಾತ್ರಂಗಳಿಲ್ಲದೆ ಇದ್ದರೂ ಪರರ ಸಂಕಟ ನಿಮಿತ್ತಕ್ಕಾದರೂ, ಪರರ ಕುಟುಂಬಭರಣಾರ್ಥಕ್ಕಾಗಿಯಾದರೂ ಕೊಟ್ಟ ದಾನ ಅನಂತ ಫಲ. ದಿಕ್ಕಿಲ್ಲದವರಿಗೆ ಉಪನಯನ ವಿವಾಹಾದಿಗಳಂ ಮಾಡಿದರೆ ಅನಂತಫಲವುಂಟು. ಒಬ್ಬ ಬ್ರಾಹ್ಮಣನು ಪ್ರತಿಷ್ಠೆಯಂಮಾಡಿದ ಫಲಕ್ಕೆ ಯಾವಜ್ಜೀವವೂ ಅಗ್ನಿಹೋತ್ರ ಮಾಡಿದಫಲ, ಅಗ್ನಿಷ್ಟೋಮ ಯಾಗಫಲವೂ ಸರಿಯಾಗದು, ಮದುವೆಗೆ ಮೊದಲು ಮಕ್ಕಳು ಮೈನೆರೆದರೆ, ತಂದೆಗೆ ಭ್ರೂಣಹತ್ಯಾದೋಷವುಂಟು, ಆ ಸ್ತ್ರೀಯೂ ವೃಷಲೀ ಎನ್ನಿಸಿಕೊಳ್ಳುವಳು, ಅವಳಂ ಮದುವೆಯಾದವನು ವೃಷಲೀಪತಿ ಎನ್ನಿಸಿಕೊಳ್ಳುವನು, ಅವರೊಡನೆ ಸಂಭಾಷಣ ಸಹಪಂಕ್ತಿಭೋಜನಂಗಳಂ ಮಾಡಲಾಗದು, ಆದಕಾರಣ ಅಷ್ಟವರುಷದ ಹೆಣ್ಣು ಕನ್ಯಾ ಎನ್ನಿಸಿಕೊಂಬಳು, ಕನ್ಯೆಯಾಗಿ ಇದ್ದಾಗಲೆ ಮದುವೆಯು ಮಾಡಬೇಕು, ಒಂಭತ್ತನೆ ವರುಷ ರೋಮದರ್ಶನಸಮಯ, ಆ ರೋಮದರ್ಶನ ಸಮಯದಲ್ಲಿ ಚಂದ್ರನು ಅನುಭವಿಸಿ ಕಾಂತಿಯ ಕೊಡುವನು, ಹತ್ತನೆ ವರುಷದಲ್ಲಿ ಸ್ತನಗಳು ತೋರಲ್ಪಡುವವು, ಸ್ತನಗಳು ತೋರಲ್ಪಡುವ ಸಮಯದಲ್ಲಿ ಗಂಧರ್ವರು ಅನುಭವಿಸಿ ಕಲ್ಯಾಣ ವಾಕ್ಯವಂ ಕೊಡುವರು, ಹನ್ನೊಂದನೆ ವರುಷದಲ್ಲಿ ಯಜ್ಞೇಶ್ವರನು ಅನುಭವಿಸಿ ಸ್ತ್ರೀಯರು ಮುಟ್ಟಿದ ವಸ್ತುಗಳಿಗೆ ಪವಿತ್ರಮಂ ಕೊಡುವನು, ಹನ್ನೆರಡನೆ ವರುಷಕ್ಕೆ ರಜಸ್ವಲೆ ಎನಿಸಿಕೊಳ್ಳುವಳು ; ಆದುಕಾರಣ

ಇವರು ಮೂವರೂ ಮುಟ್ಟಿದ ಮೇಲೆ ಕನ್ಯಾದಾನವಂ ಮಾಡಬಾರದು. ರೋಮದರ್ಶನವಾದವಳಂ ಮದುವೆಯಾಗಲು ವಂಶಕ್ಕೆ ದೋಷ, ಸ್ತನ ತೋರಲ್ಪಟ್ಟವಳಂ ಮದುವೆಯಾಗಲು ಮಾತೃಹತ್ಯಾ ದೋಷ, ರಜಸ್ವಲೆಯು ಕಾಲದೊಳಗೆ ಮದುವೆಯಾಗಲು ಪಿತೃಹತ್ಯಾ ದೋಷ, ವಿವಾಹಕ್ಕೆ ಮೊದಲೆ ರಜಸ್ವಲೆಯಾಗಲು ಆವಳಂ ಅವಶ್ಯವಾಗಿ ತ್ಯಜಿಸಬೇಕು, ತ್ಯಜಿಸದೆ ಮರೆಮಾಚಿ ಮದುವೆಯಂ ಮಾಡಲು ಹೆಣ್ಣಿನ ತಾಯಿ, ತಂದೆ, ಮದುವೆಯಾದ ಗಂಡ ಸಹಾ ನರಕವನ್ನೈದುವರೂ. ಆಸನ, ಶಯನ, ಗೃಹ, ಧಾನ್ಯ, ಕಂಬಳಿ, ಸ್ತ್ರೀಯ ಮುಖ, ಯಜ್ಞಪಾತ್ರೆ, ವಿದ್ವಾಂಸರು ಇವು ಸ್ಪೃಷ್ಟಿಯಾದರೂ ಪರಿಗ್ರಹಿಸಬಹುದು, ಸ್ತ್ರೀಯರ ಮುಖವು ಪವಿತ್ರವಾದ ಕಾರಣ ಅವರ ವಿಶ್ವಾಸಂಗಳು ತಾಕಿದ ವಸ್ತುವೆಲ್ಲಾ ಪವಿತ್ರವು, ಕರುಗಳು ಉಂಡುಬಿಟ್ಟ ಹಾಲು, ಗಿಳಿಗಳು ಮುಟ್ಟಿದ ಹಣ್ಣು, ರತಿಯಲ್ಲಿ ಸ್ತ್ರೀಯರ ಅಧರ, ಬ್ಯಾಟೆಯಲ್ಲಿ ನಾಯಿಗಳು ಮುಟ್ಟಿದ ಮಾಂಸ, ಕುದುರೆಯ ಮುಖ, ಆಡಿನ ಮುಖ, ಹಸುವಿನ ಹಿಂಭಾಗ, ಬ್ರಾಹ್ಮಣಪಾದ ಇವುಗಳು ಪವಿತ್ರ, ಎಂಜಲುದೋಷವಿಲ್ಲ, ಬಲಾತ್ಕಾರದಿಂದಲಾದರೂ, ಪ್ರಮಾದದಿಂದಲಾದರೂ ಒಮ್ಮೆ ವ್ಯಭಿಚಾರಿಯಾದವಳಂ ರಜಸ್ವಲೆಯಾದ ಐದನೆ ದಿನದಲ್ಲಿ ಪ್ರಾಯಶ್ಚಿತ್ತವಂ ಮಾಡಿ ಪರಿಗ್ರಹಿಸಬಹುದು. ವ್ಯಭಿಚಾರಿಯಾಗಿ ಗರ್ಭವಾದವಳೊಡನೆ ಸಂಸ್ಕಾರವಂ ಮಾಡದೆ ಬೇರೆ ಇರಿಸಿ ತುಂಡು ಪಿಂಡಂಗಳಂ ಯಿಕ್ಕಿ ಸಲಹಬೇಕು, ಸಲಹದೆ ಕೊಲ್ಲಲು ಮಹಾ ಪಾತಕವು. ಬ್ರಾಹ್ಮಣನು ಶೂದ್ರಸ್ತ್ರೀಯರ ಸಂಗವ ಮಾಡಲು ಅಧೋಗತಿಯಾದ ನರಕ ಪಡುವನು, ಶೂದ್ರಸ್ತ್ರೀಯಲ್ಲಿ ಸಂತಾನವಾಗಲು ಬ್ರಾಹ್ಮಣ್ಯ ಹಾನಿ, ಅವಮಾಡಿದ ಸತ್ಕ್ರಿಯಂಗಳಂ ದೇವ ಋಷಿ ಪಿತೃಗಳು ಒಲ್ಲರು, ಪವಿತ್ರವಾದ ಪತಿವ್ರತಾ ಸ್ತ್ರೀಯರಿಗೆ ಇಹದಲ್ಲಿ ಸೌಖ್ಯ, ಪರದಲ್ಲಿ ಪಾರ್ವತೀದೇವಿಯರ ಸೇವೆ ದೊರಕೊಂಬುವದು, ಕನ್ಯಾದಾನಕ್ಕೆ ಕರ್ತೃಗಳು ಐದು ಮಂದಿ ಅವರಾರಾರೆಂದರೆ—ತಂದೆ, ತಾಯಿ, ಮುತ್ತಯ್ಯ, ದಾಯಾದಿ, ಒಡಹುಟ್ಟಿದವರು ಇವರಲ್ಲಿ ಮೊದಲನೆಯವ ಇಲ್ಲದಿರಲು ತದನಂತರದವ

ರುಕ್ತರ್ಗಗಳೂ, ಆರೂ ಇಲ್ಲದಿರಲು ಕನ್ನಿಕೆ ತಾನೇವರಿಸಿ ವಿವಾಹವಾಗಬಹುದು, ಅದಃಕಾರಣ ಕಾಲದಲ್ಲಿಯೇ ಕನ್ಯಾದಾನವ ಮಾಡದೆ ಇದ್ದರೆ, ಬ್ರೂಣಹತ್ಯಾ ದೋಷವಹುದು, ಬ್ರಾಹ್ಮಣನಿಗೆ ನಾಲ್ಕುಜಾತಿಯುವರು ಮದುವೆಯಾಗಬಹುದು, ಕ್ಷತ್ರಿಯನಿಗೆ ಮೂರುಜಾತಿ ಸ್ತ್ರೀಯುರಲ್ಲಿ ವಿವಾಹ ಉಚಿತ, ವೈಶ್ಯನಿಗೆ ಎರಡುಜಾತಿ ಸ್ತ್ರೀಯರ ವಿವಾಹ ಉಚಿತ, ಶೂದ್ರನಿಗೆ ತನ್ನ ಜಾತಿ ಸ್ತ್ರೀಯಲ್ಲದೆ ಮತ್ತೆ ಕರ್ತವ್ಯವಿಲ್ಲ. ಹೆಣ್ಣು ಮಕ್ಕಳಂ ತಾರುಗಾಣಿಸದೆ ಇದ್ದರೆ ಮನೆಗೆ ಅಪಜಯು, ಸ್ತ್ರೀಯರು ವಸ್ತ್ರಾಭರಣ, ಊಟ, ವಿನೋದಗಳು ಮೊದಲಾದ ಸಂತೋಷಗಳಿಂದ ಇರಲು ಅಲ್ಲಿ ಸಕಲ ದೇವತೆಗಳೂ ನೆಲಸಿಹರು. ಈ ರೀತಿಯಲ್ಲಿ ಮದುವೆಯಾಗಿ ಗೃಹಸ್ಥಾಶ್ರಮಧರ್ಮಂಗಳಂ ನಡಿಸುತ್ತ ಹೋಮನೇಮಾದಿಗಳಂ ಮಾಡಿಕೊಂಡು ಇರಬೇಕು, ಈ ನಾಲ್ಕುಜಾತಿಯವರ ಯೋಗಕ್ಷೇಮವಂ ಕೇಳುವಾಗ ಬ್ರಾಹ್ಮಣನಂ ಕುಶಲವೇ ಎಂದು ಕೇಳಬೇಕು, ಕ್ಷತ್ರಿಯನಂ ರಾಷ್ಟ್ರಸಿರುಮಪ್ರವವೆ ಎಂದು ಕೇಳಬೇಕು, ವೈಶ್ಯನಂ ಸುಖವೆ ಎಂದು ಕೇಳಬೇಕು, ಶೂದ್ರನನಂ ಸಂತೋಷವೆ ಎಂದು ಕೇಳಬೇಕು. ತಂದೆ, ತಾಯಿ, ಹೆಂಡತಿ, ಗುರು, ಮಕ್ಕಳು, ಆಶ್ರಿತರು, ಅಭ್ಯಾಗತರು, ಅತಿಥಿಗಳು, ಅಗ್ನಿ ಈ ಒಂಭತ್ತು ಪೋಷ್ಯವರ್ಗದವರನ್ನು ಸಲಹದೆ ಇದ್ದರೆ ಮಹಾಪಾತಕವಹುದು, ಬಹುಮಂದಿಯಂ ಸಲಹುವಾತನೆ ಜೀವಂತನು, ತನ್ನ ಉದರವಂ ತುಂಬಿಕೊಂಡು ಇದ್ದವನು ಜೀವನ್ಮೃತನು, ಧನಸಂಪನ್ನನಾಗಿ ಪ್ರತಿದಿನವೂ ಅನಾಥರನ್ನು ಸಲಹದವನು ತಾನೊಬ್ಬರ ಸೇವಕನಾಗಿ ಹುಟ್ಟಿ ಕಡೆಯಲ್ಲಿ ನರಕವನನುಭವಿಸುವನು, ದೇವ ಅತಿಥಿಗಳ ನೈವೇದ್ಯಶೇಷವಂ ಭುಂಜಿಸಿ, ಪೂರ್ವಾಪರರಾತ್ರಿಗಳಲ್ಲಿ ವೇದಶಾಸ್ತ್ರಂಗಳಂ ಎರಡು ಯಾಮ ಪಠಿಸಿ, ಮಿಕ್ಕ ಎರಡು ಯಾಮ ನಿದ್ರೆಯಂ ಮಾಡಿದವನಿಗೆ ಸದ್ಗತಿ ಉಂಟು, ಅತಿಥಿಯಾದವನು ಮನೆಗೆ ಬರಲು ಸೌಮ್ಯದೃಷ್ಟಿಯಿಂದ ನೋಡಿ ಮನದಲ್ಲಿ ಸಂತೋಷಿಸಿ ಇದಿರೆದ್ದು ಇಲ್ಲಿ ಬನ್ನಿರಿ ಕುಳ್ಳಿರಿ ಎಂಬ ಪ್ರೀತಿವಚನವಂ ನುಡಿದು, ಕುಳ್ಳಿರಿಸಿ ಅನ್ನ ಉಪ

ಕಂಗಳಿಂ ಸತ್ಕರಿಸಬೇಕು, ಚಾಡಿ, ಪರಸ್ತ್ರೀಗಮನ, ಕ್ರೋಧ, ದ್ರೋಹ, ಅಸತ್ಯ, ಅಪ್ರಿಯ, ದ್ವೇಷ, ಬೂಟಿಕ ಈ ಒಂಭತ್ತು ದುರ್ಗುಣಂಗಳ ಬಿಡಬೇಕು. ಆಯುಸ್ಸು, ಜನ್ಮನಕ್ಷತ್ರ, ವಿತ್ತ, ಗೃಹ, ಛಿದ್ರ, ಮಂತ್ರ, ಔಷಧ, ಸ್ತ್ರೀಸಂಗ, ದಾನ, ಮಾನ, ಅವಮಾನ, ಈ ಒಂಭತ್ತು ಗೋಪ್ಯವಮಾಡಿಕೊಂಡು ಇರಬೇಕು. ರಹಸ್ಯದಲ್ಲಿ ಮಾಡಿದ ಪಾಪ ಪ್ರಶಸ್ತ, ಉದ್ಯೋಗ, ಸಾಲವಕೊಟ್ಟದ್ದು, ಸಾಲವತೀರಿಸಿದ್ದು, ತನ್ನ ಹೆಸರುಗೊಂಡು ಹೊಣೆಯಾದ್ದು, ಮಾಡಿಸಿದ್ದ ಕನ್ಯಾದಾನ, ತನ್ನ ಸದ್ಗುಣವೆಂಬ ಈ ಒಂಭತ್ತನ್ನು ಪ್ರಕಟವಂಮಾಡಬೇಕು. ಸತ್ಪಾತ್ರ, ಮಿತ್ರ, ಶಿಷ್ಯ, ದೀನ, ಅನಾಥ, ಉಪಕಾರಿ, ತಾಯಿ, ತಂದೆ, ಗುರುಗಳೆಂಬ ಈ ಒಂಭತ್ತು ಕಡೆಯಲ್ಲಿಯೂ ದಾನವಂ ಮಾಡಿದರೆ ಮಹಾ ಅಕ್ಷಯಫಲ. ನಟುವರು, ಭಟರು, ಜೋಳರು, ಕಳ್ಳರು, ಕಪಟರೂ, ವೈದ್ಯರೂ, ಜಾತಿಕಾರರೂ, ಮೋಸಗೊಳಿಸುವರು, ನಿಷ್ಠುರಿಗಳು, ಜೆಟ್ಟಿಗಳು, ಸ್ತುತಿಪಾಠಕರು, ಈ ಒಂಭತ್ತು ಮಂದಿಗೂ ದ್ರವ್ಯವಂ ಕೊಡಬೇಕು. ಕೊಟ್ಟರೆ ಕೀರ್ತಿ, ದಾನಫಲವಿಲ್ಲ. ಸಕಲ ದ್ರವ್ಯಂಗಳನ್ನು, ತನ್ನ ಸ್ತ್ರೀಯನ್ನು, ಮೊರೆಹೊಕ್ಕವರನು, ಒಬ್ಬರು ಬಚ್ಚಿಡಕೊಟ್ಟ ಒಡವೆಯನ್ನೂ, ಸರ್ವಸ್ವಮಾನ್ಯಗಳೆಂಬ ನಿಕ್ಷೇಪವನ್ನು ಧನವನ್ನು ಈ ಒಂಭತ್ತನ್ನೂ ದಾಯಾದಿಗಳ ವಶದಲ್ಲಿ ಕೊಡಬಾರದು. ಸತ್ಯ, ಶೌಚ, ಅಹಿಂಸೆ, ಸೈರಣೆ, ದಾನ, ಬಾಹ್ಯೇಂದ್ರಿಯನಿಗ್ರಹ, ಅಂತರಿಂದ್ರಿಯ ನಿಗ್ರಹ, ಕಳವಮಾಡದಿಹುದು, ಈ ಒಂಭತ್ತು ಧರ್ಮ ಸಾಧನಂಗಳು. ಗೃಹಸ್ಥನು, ಪುಣ್ಯಾತ್ಮನು, ಸ್ತ್ರೀಯರು, ಸುತ, ಭೃತ್ಯ, ಮಿತ್ರ, ದಾಸ, ಆಶ್ರಿತರೂ ಇವರು ಆವಾತನಿಗೆ ನಯವಂತರಹರೋ ಆತನು ಸರ್ವತ್ರ ಪೂಜ್ಯನು; ಮದ್ಯಪಾನ, ದುರ್ಜನರಸಂಗ, ಪತಿಯಬಳಿಯಲ್ಲಿ ನಿಲ್ಲದೆಇಹುದು, ತನ್ನ ಮನಬಂದಂತೆ ಸಂಚಾರವಮಾಡುವದು, ನಿತ್ಯವೂ ಪರಗೃಹವಾಸವಾಗಿಯೂ ಆವಾಗಲು ನಿದ್ರೆಗೈವಣ, ಈ ಆರು ನಿಮಿತ್ತಂಗಳಿಂದ ಸ್ತ್ರೀಯರಿಗೆ ನಿಂದೆ ಬರುವದು. ಅಗ್ಗವಾಗಿ ಕೊಂಡು ತಗ್ಗಿ ಮಾರುವ ಬ್ರಾಹ್ಮ

ವನು ವಾರ್ಧುಷಿಕನೆನಿಸಿಕೊಂಬನು, ವ್ಯಭಿಚಾರಿಯಾಗ ಸ್ತ್ರೀ
ಯನ್ನು ಅಂಗೀಕರಿಸಿಕೊಂಡು ಇರುವವನು ಮಾಹಿಷಿಕನೆನಿಸಿ ಕೊಂಬ
ನು, ತನ್ನ ಜಾತಿಯ ಆಚಾರವಂ ಬಿಟ್ಟು ಪರ ಜಾತಿಯ ಆ
ಚಾರದಲ್ಲಿ ನಡೆಯುವವನು ವೃಷಲನೆನಿಸಿಕೊಳ್ಳುವನು, ಅಂಥಾ
ಸ್ತ್ರೀಯೂ ವೃಷಲೀ ಎನಿಸಿಕೊಂಬಳು, ವೃಷಲೀ ವೃಷಲೀಪತಿ
ಗಳಂ ಶ್ರಾದ್ಧಕಾಲದಲ್ಲಿ ಕರೆಯಲು ಪಿತೃಗಳು ಊಟವಮಾಡದೆ ನಿರಾ
ಶೆಯಿಂದ ಹೋಗುವರು, ಬ್ರಾಹ್ಮಣರಿಗೆ ಇಕ್ಕಿದ ಅನ್ನ ಎಷ್ಟು
ಹೊತ್ತು ಉಷ್ಣವಾಗಿ ಇರುವದೋ ಅಷ್ಟುಹೊತ್ತು ಪಿತೃಗಳು ಭುಂ
ಜಿಸುವರು, ಎಷ್ಟುಹೊತ್ತು ಪರ್ಯಂತವೂ ಅನ್ನ ಮೊದಲಾದ ಸೋಪ
ಸ್ಕರಗಳ ಕೊಂಡಾಡದೆ ಉಣ್ಣುವರೋ ಅಷ್ಟುಹೊತ್ತು ಪಿತೃಗಳು
ಉಣ್ಣುವರು. ಮೌನದಲ್ಲಿ ಎಷ್ಟುಹೊತ್ತು ಉಣ್ಣುತ್ತಾರೋ ಅಷ್ಟು
ಹೊತ್ತು ಪರ್ಯಂತರ ಪಿತೃಗಳು ಉಂಬುವರು, ಶ್ರೋತ್ರಿಯನು ಮನೆಗೆ
ಬರಲು ಅನ್ನದೇವತೆ ಸಂತೋಷಪಡುವಳು, ಶ್ರೋತ್ರಿಯನು ಮನೆಗೆ
ಬಾರದಿರಲು, ಅನ್ನದೇವತೆ ದುಃಖಪಡುವಳು ವೇದಾಭ್ಯಾಸಿಯಾದಂಥಾ
ಅತಿಥಿಗೆ ಅನ್ನವನಿಕ್ಕಲು ಅನ್ನವನಿಕ್ಕಿದವನ ಪಿತೃಗಳು ಸಂತೋಷ
ದಿಂದ ನಾಟ್ಯವನಾಡುವರು. ಸ್ತ್ರೀಯರಿಗೆ ಪ್ರಾಯಶ್ಚಿತ್ತವ ಮಾಡ
ಬೇಕಾದರೆ, ವಪನವಮಾಡದೆ ಮುಂಡೆ ಕೂದಲಲ್ಲಿ ಮೂರಂಗುಲಪ್ರಮಾ
ಣವು ಛೇದಿಸಲೂ ಅದೇ ವಪನ, ಅರಸನಾಗಲೀ, ರಾಜಪುತ್ರನಾಗಲೀ,
ವಿದ್ವಾಂಸನಾಗಲೀ, ಪ್ರಾಯಶ್ಚಿತ್ತಮಾಡಿಕೊಳ್ಳುವಾಗ ವಪನವಂ ಮಾ
ಡಿಕೊಳ್ಳಲಾರದಿದ್ದರೆ ಕೃಚ್ಛ್ರದ್ವಿಗುಣದ್ರವ್ಯದಾನವಂ ಮಾಡಬೇಕು,
ಮದುವೆಯಲ್ಲಿ ಮಾಡಿದ ಔಪಾಸನವಲ್ಲದೆ ಮತ್ತೆ ಮಾಡದಿರಲು, ಅವನು
ವೃಥಾ ಪಾತಕಿ ಎನಿಸಿಕೊಂಬನು, ಅವನ ಮನೆಯಲ್ಲಿ ಅನ್ನಪಾನಂಗಳಂ
ತೆಗೆದುಕೊಳ್ಳಲಾಗದು, ಜ್ಯೇಷ್ಠನಿರಲು ಕಿರಿಯಾತನಿಗೆ ಮುಂಜಿ,
ಮದುವೆ ಯಜ್ಞಂಗಳ ಮಾಡಲಾಗದು, ಮಾಡಿದರೆ ಅವನು ಪತಿತನೆನಿ
ಸಿಕೊಂಬನು. ಕಿರಿಯವನಿಗೆ ಮೊದಲು ಮದುವೆಯಂ ಮಾಡಲು
ಹೆಣ್ಣು, ಗಂಡು, ಹೆಣ್ಣಿನ ಅಪ್ಪ, ಗಂಡಿನ ಅಣ್ಣ, ಪುರೋಹಿತ

ಇವರುಎವರಿಗೂ ಅಧೋನರಕ. ಆದಾಗಿ ಅಣ್ಣನು ನಪುಂಸಕನಾದರೂ, ದೂರದೇಶಕ್ಕೆ ಹೋಗಿ ಬಾರದೆ ಇದ್ದರೂ, ಮೂಕನಾದರೂ, ಸನ್ಯಾಸಿಯಾದರೂ, ಹುಚ್ಚನಾದರೂ, ಗೂನನಾದರೂ, ಗುಜ್ಜಾರಿಯಾದರೂ, ಕಾಲುಗೆಟ್ಟರೂ, ತಮ್ಮನಿಗೆ ಮುಂಜಿ ಮದುವೆಯಂ ಮಾಡೆ ದೋಷವಿಲ್ಲ. ಸಂಬಳತೆಕ್ಕೊಂಡಾದರೆಯೂ, ಧನಕ್ಕೋಸ್ಕರವಾಗಿಯಾದರೂ, ವೇದವಂ ಪರೀಕ್ಷೆಯಂ ಮಾಡಲು, ಅಕ್ಷರ ಒಂದಕ್ಕೆ ಒಂದೊಂದು ಬ್ರೂಣಹತ್ಯೆಯ ಮಾಡಿದ ಪಾತಕವಹುದು, ಸನ್ಯಾಸಿಯೂ ಒಂದು ವ್ಯಾಳೆ ಸ್ತ್ರೀಸಂಗವಂ ಮಾಡಲು, ಘಳಿಗೆಒಂದಕ್ಕೆ ಅರವತ್ತು ಸಾವಿರ ವರುಷ ವಿಷ್ಠೆಕೂಪದಲ್ಲಿ ಕ್ರಿಮಿ ಹುಳುವಾಗಿ ಹುಟ್ಟುವನು. ಶೂದ್ರಾನ್ನ, ಶೂದ್ರಸಂಪರ್ಕ, ಶೂದ್ರ ಏಕಾಸನ, ಶೂದ್ರರಿಂದ ವಿದ್ಯಾಭ್ಯಾಸವಂ ಮಾಡಲು, ಪತಿತನಹನು. ಕೈಯಲ್ಲಿ ಬಡಿಸಿದ ಲವಣ, ಮೇಲೋಗರ, ಹಾಲು, ಮೊಸರು, ತುಪ್ಪ, ಇವಂ ಭುಂಜಿಸಲು ಪಾಪವು. ಕಬ್ಬಿಣದ ಸಟ್ಟುಕದಲ್ಲಿ ಬಡಿಸಿದ ಅನ್ನಾದಿಗಳಂ ಭುಂಜಿಸಲಾಗದು. ತರ್ಜನಿ ಬೆರಳಿನಿಂದ ದಂತಗಳಂ ಉಜ್ಜಿಕೊಂಡರು, ಊಟದ ಮಧ್ಯದಲ್ಲಿ ಬಡಿಸಿದ ಲವಣವಂ ಸೇವಿಸಲು ಗೋಮಾಂಸಸಮಾನ. ಆಶ್ರಿತನಾದ ಅಯೋಗ್ಯನಂ ಬಿಟ್ಟು ದೂರದಿಂದ ಬಂದ ಶ್ರೋತ್ರಿಯಗೆ ದಾನವನೀಯ್ಯಲು ಅನಂತಫಲ. ಸಮೀಪದಲ್ಲಿ ಇದ್ದ ಬ್ರಾಹ್ಮಣನ ಅಲಗಳದ ಪಾಪವಿಲ್ಲ. ಯೋಗ್ಯನಾದ, ಆಶ್ರಿತನಾದ ಬ್ರಾಹ್ಮಣನಂ ಬಿಟ್ಟು ಮತ್ತೊಬ್ಬನಿಗೆ ದಾನವನೀಯಲು ಫಲವಿಲ್ಲ, ಗೋರಕ್ಷೆಯು, ವ್ಯಾಪಾರ, ಶಿಲ್ಪವಿದ್ಯೆ, ಅಧಿಕಬಡ್ಡಿಯು, ಕೊಟ್ಟಿಡುವ ಬ್ರಾಹ್ಮಣನು ಶೂದ್ರನಿಗೆ ಸಮಾನನು. ದೇವದ್ರವ್ಯ, ಬ್ರಾಹ್ಮಣದ್ರವ್ಯ, ಬ್ರಾಹ್ಮಣತಿರಸ್ಕಾರ ಇವುಗಳಿಂದ ವಂಶ ನಷ್ಟವಾಗಿ ಕೆಡುವದು. ಹಸುವಿಗೆ, ಅಗ್ನಿಗೆ, ಬ್ರಾಹ್ಮಣನಿಗೆ ಕೊಡುವಂಥಾ ವಸ್ತುವಂ ಕೊಡಬ್ಯಾಡವೆಂದವನು ನೂರು ಜನ್ಮ ಶುನಕನಾಗಿ ಹುಟ್ಟಿ ಕಡೆಯಲ್ಲಿ ಚಂಡಾಲನಾಗಿ ಹುಟ್ಟುವನು. ಆಶೆಯಮಾತಂಕೊಟ್ಟು ಕೊಡದೆ ಇರಲು ಮಹಾಪಾತಕನಾಗಿ ನರಕವನೈದುವನು. ದೇವರಿಗೆ ಸಮರ್ಪಿತವಾದವಸ್ತು ಅಮೃತಸಮಾನ, ನಿವೇದಿತಾ

ಅಸಪಿರ್ತತ್ರಾದ ವಸ್ತ್ರ ವಿಷಸಪಾನ, ಯಜ್ಞೋಪವೀತ ಕೌಣ ಕ್ಷೈಂಗ್ಯನ ಕೆಳಕ್ಕೆ ಒಂದರೆ ನಡುವಿನಲ್ಲಿ ಸುತ್ತಿದರೆ ಅಪವಿತ್ರವಹುದು, ಗೃಹಸ್ಥನು ಏಕವಸ್ತ್ರ ಏಕಯಜ್ಞೋಪವೀತದಿಂದಿರಲಾಗದು, ಊಟವಂಮಾಡಿ ಎಸ್ಟು ಬಾಯಿ ಮುಕ್ಕಳಿಸಿ ಉಗುಳದೆ ಕೈಯಿನಪಾತ್ರ ತೊಳೆಯಲು ದೇವಋಷಿ ಪಿತೃಗಳಿಗೆ ಆತ್ಮಘಾತುಕನಾಗುವನು, ಹಲ ಮಂದಿಗೆ ಏಕಪಾಕವಾಗಿ ಮಾಡಿದ ಅನ್ನವನ್ನು, ಬಿಳ್ಳುವ ಬರಕೊಂಡು ಜೀವನವಮಾಡಿಕೊಂಡು ಇರುವವನಮನೆಯ ಅನ್ನವನ್ನು, ಗ್ರಾಮ ಪುರೋಹಿತನ ಅನ್ನವನ್ನು, ಸೀಮಂತಾನ್ನವನ್ನು, ಹದಿನೈದುದಿನಕ್ಕೆ ಒಮ್ಮೆಯಾದರೂ ತಿಂಗಳಿಗೆ ಒಮ್ಮೆಯಾದರೂ ಒಬ್ಬ ಬ್ರಾಹ್ಮಣನಿಗೆ ಅನ್ನವನಿಕ್ಕದವನ ಮನೆಯ ಅನ್ನವನ್ನು ಉಣಲಾಗದು. ನಿತ್ಯವೂ ಸತ್ರವನಿಕ್ಕುವರಿಗೂ, ದೀಕ್ಷೆಯುಳ್ಳವರಿಗೂ, ಯತಿಗೂ, ಬ್ರಹ್ಮಚಾರಿಗಳಿಗೂ, ಋತ್ವಿಕ್ಕುಗಳಿಗೂ, ಸೂತಕವಿಲ್ಲ. ವಾಂತಿಭ್ರಾಂತಿಗಳಲ್ಲಿ, ಸೂರ್ಯೋದಯದಲ್ಲಿ, ನಿದ್ರೆಯಂಮಾಡಿದಾಗ, ಋತುಕಾಲ ಸ್ತ್ರೀಸಂಗಮಾಡಿದಾಗ, ಕ್ಷೌರ, ದುರ್ಜನರಸಂಸರ್ಗವಮಾಡಿದಾಗ, ದುಸ್ವಪ್ನವಕಂಡಾಗ ಜಲಸ್ನಾನವಂ ಮಾಡಬೇಕು. ಸ್ಮಶಾನದ ವೃಕ್ಷ, ಶಿದ್ದಿಗೆ, ಯೂಪಸ್ತಂಭ, ದೀಕ್ಷೆಯಿಲ್ಲದವನ, ಶಿವನಿರ್ಮಾಲ್ಯವಂ ಭುಂಜಿಸಿದವನ, ವೇದವಿಕ್ರಯವಂ ಮಾಡಿದವನ ಇವರಂ ಮುಟ್ಟಿದರೆ ಸಚೇಲ ಸ್ನಾನವಂ ಮಾಡಬೇಕು. ಅಗ್ನಿಹೋತ್ರದ ಮನೆಗೆ ಹೋಗುವಾಗ, ಗೋವುಕಟ್ಟುವಸ್ಥಳಕ್ಕೆ ಹೋಗುವಾಗ, ದೇವಬ್ರಾಹ್ಮಣರ ಸನ್ನಿಧಿಗೆ ಹೋಗುವಾಗ, ಅನ್ನಪಾನವಂ ತೆಕೊಂಬುವದಕ್ಕೆ ಹೋಗುವಾಗ, ನೊಪಲಿ ಮೆಟ್ಟಿದ್ದ ಪಾದರಕ್ಷೆಯನ್ನು ದೂರದಲ್ಲಿ ಬಿಡಬೇಕು. ಕಣದಲ್ಲಿ ಇದ್ದ ಧಾನ್ಯ, ಭಾವಿ ಉದಕ, ಮಂದೆಯಿಂದ ತಂದ ಹಾಲು, ಈ ಮೂರನ್ನು ಅಂತ್ಯಜಾತಿಪೊರತಾಗಿ ಮಿಕ್ಕಾದವರು ತಂದುಕೊಟ್ಟರೆ, ತೆಗದುಕೊಳ್ಳಬಹುದು. ಪಾಗಂ ಸುತ್ತಿಕೊಂಡಾದರೂ, ದಕ್ಷಿಣಮುಖವಾಗಿ ಕುಳಿತಾದರೂ, ಪಾದರಕ್ಷೆಯು ಮೆಟ್ಟಿಕೊಂಡಾದರೂ, ಅನ್ನಪಾನಂಗಳಂಕೊಡಲು ಆ ಅನ್ನರಸವ ರಾಕ್ಷಸರು ಗ್ರಹಿಸಿಕೊಂಬುವರು,

ಭೂಮಿಯಂ ಮಂಡಲವಂ ಮಾಡಿ ಭುಂಜಿಸಲು ಬ್ರಹ್ಮಾದಿ ದೇವರ್ಕಳು, ಋಷಿಗಳು, ಪಿತೃಗಳು ತೃಪ್ತರಹರು. ಮಂಡಲವ ಮಾಡುವಕ್ರಮ-ಭೂಮಿಯಮೇಲೆ ಉದಕವಂ ತಳಿದು ಬ್ರಾಹ್ಮಣರಿಗೆ ಚೌಕ, ಕ್ಷತ್ರಿಯರಿಗೆ ಮೂರುಮೂಲೆ, ವೈಶ್ಯರಿಗೆ ಬಟ್ಟು ಮಾಡಬೇಕು, ಶೂದ್ರಂಗೆ ನೀರುತಳಿವುದೇ ಶುದ್ಧಿ, ತೊಡೆಯಮ್ಯಾಲೆ ತಳಿಗೆಯ ಇಟ್ಟುಕೊಂಡು ಉಂಬುವದು, ಒಡೆತಳಗೆ ಇಲ್ಲವೆ ಕರಗಳಲ್ಲಿ ಉಂಬುವದು, ವಸ್ತ್ರದಲ್ಲಿ ಉಂಬುವದು, ಗದ್ದಿಗೆಯಮ್ಯಾಲೆ ಉಂಬುವದು, ಮಂಚದಮೇಲೆ ಉಂಬುವದು, ಈ ಊಟಂಗಳಂ ಮಾಡಲಾಗದು ; ಧರ್ಮಶಾಸ್ತ್ರವೆಂಬ ರಥವನೇರಿ ವೇದವೆಂಬ ಖಡ್ಗವಂ ಧರಿಸಿದ ಬ್ರಾಹ್ಮಣರು ಹೇಳಿದುದೇ ಧರ್ಮ, ರಾತ್ರಿಯಲ್ಲಿ ದಧಿ, ಸತ್ತ್ವದಹಿಟ್ಟು ಇವಂ ಭಕ್ಷಿಸಲು ಧರ್ಮಹಾನಿ, ವ್ಯಾಧಿಪೀಡೆಗಳು ಬರುವವು, ನೀಲವಸ್ತ್ರವಂ ಧರಿಸಿ ಮಾಡಿದ ಷಟ್ಕರ್ಮಂಗಳು ನಿಷ್ಫಲ, ಸ್ತ್ರೀಯರಿಗೂ ಸುಪ್ಪತ್ತಿಗೆಗಳಿಗೂ ಅಭಿಚಾರಿಕಕ್ರಿಯಗಳಿಗೂ ನೀಲವಸ್ತ್ರದೋಷವಿಲ್ಲ, ಶುನಕ ಸೂಕರಾದಿ ನೀಚಪ್ರಾಣಿಗಳ ಸೋಕಿ ಅವುಗಳ ಕ್ರಯವಿಕ್ರಯವಮಾಡಿದರೂ, ಬಹುರೂಪಗಳಂ ವೇಷಧಾರಿಯಾಗಿ ವರ್ತಿಸಿದರೆಯೂ, ಬ್ರಾಹ್ಮಣ್ಯಹಾನಿ, ಅವರಿಗೆ ಪ್ರಾಯಶ್ಚಿತ್ತವೆಂತೆನೆ--ಒಂಭತ್ತು ಕೃಚ್ಛ್ರವಕೊಡಬೇಕು. ಪಂಚಯಜ್ಞವಮಾಡುವನಮನೆಯ ಅನ್ನ ಅಮೃತಸಮಾನ, ನ್ಯಾಯದಿಂದ ಪ್ರಜಾಪಾಲನೆಯ ಮಾಡುವ ಕ್ಷತ್ರಿಯನ ಮನೆ ಅನ್ನ ಕ್ಷೀರಸಮಾನ, ಧರ್ಮದಿಂದ ಬೇಹಾರವಮಾಡುವ ವೈಶ್ಯನಮನೆಯ ಅನ್ನ ಅನ್ನಸಮಾನ, ಅಜ್ಞಾನಿಯಾಗಿ ಮದ್ಯಪಾಯಿಯಾಗಿ ವೇದ ಗುರುಮಂತ್ರಗಳಿಲ್ಲದ ಶೂದ್ರನಮನೆಯ ಅನ್ನ ರಕ್ತಮಾಂಸದ ಸಮಾನ, ಅಲ್ಪಪ್ರಯೋಜನಂಗಳಾಗಿ ಆಣೆಯನಿಕ್ಕಿಕೊಳ್ಳಬಾರದು, ಮದುವೆಯ ನಿಮಿತ್ತ ಸ್ತ್ರೀಯರಲ್ಲಿ, ಪ್ರಾಣಕಂಟಕದಲ್ಲಿ, ಮಾನಭಂಗದಲ್ಲಿ, ಗೋವುಗಳಲ್ಲಿ, ಧನಾಪಹಾರಂಗಳಲ್ಲಿ ಬ್ರಾಹ್ಮಣನ ರಕ್ಷಿಸುವದಕ್ಕಾಗಿ ಆಣೆಯನಿಕ್ಕಿಕೊಳ್ಳೆಲು ದೋಷವಿಲ್ಲ, ಆಣೆಯನಿಕ್ಕಬೇಕಾದರೆ ಬ್ರಾಹ್ಮಣಗೆ ಸುಕೃತದ ಆಣೆ, ಕ್ಷತ್ರಿಯಂಗೆ ವಾಹನ ಆಯುಧಂಗಳಾಣೆ, ವೈಶ್ಯಂಗೆ ಧನಧಾನ್ಯ

ಗಳಾಣೆ, ಶೂದ್ರಂಗೆ ಸಮಸ್ತ ಪಾತಕಿಯಹೆನು ಎಂಬ ಆಣೆ, ಶೂದ್ರನಕೈಯ್ಯ ಅಗ್ನಿ ಪ್ರಮಾಣವು, ವೈಶ್ಯಂಗೆ ಉದಕಪ್ರಮಾಣ, ಕ್ಷತ್ರಿಯನಿಗೆ ತನ್ನ ಸ್ತ್ರೀಯಮುಟ್ಟುವದು, ಬ್ರಾಹ್ಮಣನಿಗೆ ಮಕ್ಕಳ ಮುಟ್ಟುವದು, ಈ ಪ್ರಕಾರದೊಳಗೊಂದಾದರೂ ಮೂರಜಾತಿಯವರ ಕೈಯ್ಯಲ್ಲಿ ಮಾಡಿಸುವದು, ಮನುಷ್ಯನು ತನಗೆ ತಾನೇ ಯಮನಲ್ಲವೆ ಬ್ಯಾರೆಯವನಿಲ್ಲ, ಅಂಜಲೇಕೆಂದರೆ--ತಾನು ನಿಯಮದಲ್ಲಿ ಇರಲು ಯಮನು ಏನುಮಾಡ್ಯಾನು, ಕತ್ತಿ ಮೇಲೆ ಸಾಧನೆಯಂ ಮಾಡಬಹುದು, ಕೃಷ್ಣಸರ್ಪನಂ ಹಿಡಿಯಬಹುದು, ಶತ್ರುವನ್ನಾದರೂ ಗೆಲ್ಲಬಹುದು, ಶಸ್ತ್ರಧಾರಿಯ ಮಧುವನು ನಾಲಿಗೆಯಲ್ಲಿ ತೆಗೆಯಬಹುದು, ಮನಸ್ಸು ನಿಲ್ಲಿಸಲಾಗದು. ಅನೀತರಾದವರು ಸಾತ್ವಿಕರಕಂಡರೆ ಲೆಕ್ಕಿಸರೂ, ಸಾತ್ವಿಕನಾದವನಿಗೆ ಅರಿಯದವರೂ ಅಶಕ್ತನೆಂದಾಡುವ ದೋಷ ಒಂದಲ್ಲದೆ, ಮತ್ತೊಂದುದೋಷವಿಲ್ಲ, ನೀತಿಶಾಸ್ತ್ರ ಪ್ರಮಾಣವೆಂಬವಗೆ ಸ್ತ್ರೀಯರೊಳಗೆ ಅನ್ನವಸ್ತ್ರವಂ ಪರಿಗ್ರಹಿಸಿ ಪರತತ್ವವನರಿಯದವಂಗೆ, ಪರರು ಆಡಿದಹಾಗೆ ಆಡುವಂಗೆ, ಹರಿಹರ ಭೇದವಾದಿಗೆ, ಬ್ರಾಹ್ಮಣನಿಂದ ಕೆಳಗೆ, ಇವರ್ಗೆ ಪರಲೋಕವಿಲ್ಲ, ಧ್ಯಾನದಿಂದ ಅಧಿಕವಾಗಿ ದೇವತಾವಿಶ್ವಾಸ, ಇಂದ್ರಿಯನಿಗ್ರಹ, ಯೋಗಶಾಸ್ತ್ರ, ವೇದಾಂತಶ್ರವಣ, ಅಹಿಂಸೆ, ಇದರಿಂದ ಇಹಲೋಕದಲ್ಲಿ ಸುಖ, ಪರದಲ್ಲಿ ಕಾಶೀವಾಸವಂ ಕೊಡುವದು. ಇಂದ್ರಿಯನಿಗ್ರಹ ವೇದಾಭ್ಯಾಸ ವೇದಾಂತಜ್ಞಾನವಿಲ್ಲದಿದ್ದರೂ, ಕಾಶೀವಾಸವಂಮಾಡಲು ಒಂದೆ ಜನ್ಮಕೆ ಮುಕ್ತಿಯುಂಟಾಗುವದು, ಅದರಿಂದ ಕಾಶೀವಾಸವೇ ತಪಸ್ಸು, 'ಗಂಗಾಸ್ನಾನವೇ ಕೃಛ್ರಾಚರಣೆ, ಅದುಕಾರಣ ನ್ಯಾಯದಿಂದ ಧನವನಾರ್ಜಿಸಿ, ಅತಿಥಿಪೂಜೆ ಅಗ್ನಿಹೋತ್ರ, ಶ್ರಾದ್ಧಕರ್ಮಂಗಳಂ ಬಿಡದೆ ಮಾಡಿ ಕಡೆಯಲ್ಲಿ ಕಾಶೀವಾಸವಂ ಮಾಡುವ ಗೃಹಸ್ಥನಿಗೆ ಪರಮೇಶ್ವರನು ಪ್ರಸನ್ನನಾಗಿ ಸಕಲ ದಾನವ್ರತ ತಪಸ್ಸುಗಳಿಂ ದೊರಕುವಂಥಾ ಮುಕ್ತಿಯಂ ಕೊಡುವನು ಎಂದು ಕುಮಾರಸ್ವಾಮಿಯು ಅಗಸ್ತ್ಯಋಷಿಗೆ ನಿರೂಪಿಸಿದ ಅರ್ಥವನ್ನು ವ್ಯಾಸರು ತನಗೆ ಅರುಹಿದರೆಂದು ಸೂತಪುರಾಣೀಕನು ಶೌನ

ಕಾಣಿ ಋಷಿಗಳಿಗೆ ಹೇಳ್ದನೆಂತೆಂಬಲ್ಲಿಗೆ ಅಧ್ಯಾಯಾರ್ಥ.

ಇಂತು ಶ್ರೀ ಮತ್ಸಮಸ್ತ ಭೂಮಂಡಲೀತ್ಯಾದಿ ಬಿರುದಾಂಕಿತರಾದ ಮಹಿಶೂರಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂಧಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಗೃಹಸ್ಥಾಶ್ರಮ ಧರ್ಮವಂ ಹೇಳ್ದ ನಾಲ್ವತ್ತನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ.

ನಾಲ್ವತ್ತನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ನಾಲ್ವತ್ತೊಂದನೇ ಅಧ್ಯಾಯ ಪ್ರಾರಂಭ.

ವಾನಪ್ರಸ್ಥ, ಯತಿಧರ್ಮ, ಯೋಗಾಭ್ಯಾಸ, ಕಾಶೀಪ್ರಸಂಗ.

ಅನಂತರದಲ್ಲಿ ಕುಮಾರಸ್ವಾಮಿಯು ಅಗಸ್ತ್ಯಂಗೆ ಇಂತೆಂದನೆಂತೆನೆ :—ಕೇಳ್ಳೈ ಅಗಸ್ತ್ಯನೆ! ಈ ರೀತಿಯಲ್ಲಿ ಗೃಹಸ್ಥಾಶ್ರಮಧರ್ಮಂಗಳಂ ನಡಸುತ್ತಾ ಮಕ್ಕಳಂ ಪಡೆದು ತನಗೆ ಅರವತ್ತು ವರುಷದಿಂದಾಚೆಗೆ ಆ ಅಪವಯಸ್ಸಾಗಲು ತನ್ನ ಪತ್ನಿಯನ್ನು ತನ್ನ ಮಕ್ಕಳಬಳಿಯಲ್ಲಿ ಇರಿಸಿ, ಅಲ್ಲದೆ ಸ್ತ್ರೀಯೂ ಬಾದೇನೆಂದರೆ ಅವಳನ್ನು ಒಡಗೊಂಡು, ವಾನಪ್ರಸ್ಥಾಶ್ರಮವನಾಶ್ರಯಿಸಿ, ಮತ್ತು ಬಿತ್ತು ಬೆಳೆದ ಆಹಾರಂಗಳಂ ಬಿಟ್ಟು ಕಂದಮೂಲ ಫಲಾಹಾರಂಗಳಂ ಮಾಡಿಕೊಂಡು, ನಾರುಸೀರೆಗಳಂ ಧರಿಸಿ, ಉದಯ ಅಸ್ತಮಯ ಎರಡುವೇಳೆ ಸ್ನಾನವಂ ಮಾಡಿಕೊಂಡು, ಕಂದಮೂಲ ಫಲಾದಿಗಳಿಂದ ಪಂಚಯಜ್ಞ ಅತಿಥಿ ಪೂಜೆಯಂ ಮಾಡಿಕೊಂಡು ಅಂತರಿಂದ್ರಿಯ ಬಾಹ್ಯೇಂದ್ರಿಯ ನಿಗ್ರಹವಮಾಡಿಕೊಂಡು ಅಧ್ಯಯನಪರನಾಗಿ ಅಪವಿತ್ರದ್ರವ್ಯಗಳಂ ಮುಟ್ಟದೆ, ಅವಾವೆಂದಡೆ--ಚಳೆ, ನುಗ್ಗೆ, ಕೆಂಪಿನಮೂಲಂಗಿ, ಮಾಂಸ, ಜೇನುತುಪ್ಪ ಇವು

ಬಿಟ್ಟು ಸ್ರಂಧಲವಣ ತೈಲಂಗಳಂ ಮುಟ್ಟಬಹುದು, ಮೊದಲು ಸಂಗ್ರ
ಹಿಸಿದ ಧಾನ್ಯವನ್ನು ಆಶ್ವೀಜಮಾಸದಲ್ಲಿ ಬಿಟ್ಟು ತಿರಿಗೀ ಹೊಸದಾಗಿ
ಸಂಗ್ರಹಿಸಿಕೊಂಡು, ಗ್ರಾಮಾಂತ್ರಗಳಲ್ಲಿ ಕಂದಮೂಲ ಫಲಗಳಂ
ಮುಟ್ಟದೆ ಕ್ಷೌರಂಗಳಂ ಮಾಡಿಸಿಕೊಳ್ಳದೆಇಹುದು, ಈ ವಾನಪ್ರಸ್ಥಾ
ಶ್ರಮಕ್ಕೆ ಕೆಲವು ವ್ರತಗಳುಉಂಟು, ಆ ವ್ರತಂಗಳು ಆವಾವೆಂದರೆ--
ತನ್ನ ದಂತಂಗಳೆ ಒರಳುಬಕೆಗಳಾಗಿ ಇಟ್ಟುಕೊಂಡು ಆಹಾರವಮಾ
ಡುವ ವ್ರತ ಒಂದು ಕಲ್ಲಿನಲ್ಲಿಕುಟ್ಟಿ ಆಹಾರವ ಮಾಡುವ ವ್ರತ
ಒಂದು, ಆ ಹೊತ್ತಿಗೆ ತಕ್ಕಹಾಗೆ ಸಂಪಾದಿಸಿ ಆಹಾರವಂ ಕೊಂಬ ವ್ರ
ತಒಂದು, ನಾಡಿಕೆ ತೊಳೆಯು ಇರಿಸುವ ವ್ರತ ಒಂದು, ತಿಂಗ
ಳಿಗೆ ಒಮ್ಮೆ ಧಾನ್ಯವನಿಲ್ಲಿಸುವ ವ್ರತ ಒಂದು, ಆರು ತಿಂಗಳಿಗೆ
ಒಮ್ಮೆ ಧಾನ್ಯವನಿಲ್ಲಿಸುವ ವ್ರತಒಂದು, ಪ್ರತಿದಿನವೂ ರಾತ್ರಿನ
ಕ್ತ ವ್ರತ ಒಂದು, ಏಕಾಂಗಿಯಾಗಿ ಇಹವ್ರತ ಒಂದು, ಚಾಂದ್ರಾಯ
ಣವ್ರತ ಒಂದು, ಪಕ್ಷಕ್ಕೆ ಒಂದುವೇಳೆ ಭೋಜನವ್ರತಒಂದು, ಇಂ
ಥಾ ವ್ರತಂಗಳಂ ಶರೀರ ಕೃಶಮಾಡಿಕೊಂಡು ಅಗ್ನಿಯಂ ಸಮಾರೋ
ಪಣೆಯಂ ಮಾಡಿಕೊಂಡು, ವಾನಪ್ರಸ್ಥರ ಮನೆಗಳಲ್ಲಿ ವೇದ
ವಿತ್ತಮರಾಗಿ, ಷಟ್ಕರ್ಮ ನಿರತರಾಗಿ, ಸದಾಚಾರಿಗಳಾಗಿ, ಇದ್ದವರ
ಮನೆಗಳಲ್ಲಿ ಭಿಕ್ಷವಬೇಡಿಕೊಂಡು ಅಲ್ಲಿ ದೊರಕದೆಇದ್ದರೆ ಗ್ರಾಮಾಂ
ತ್ರದಲ್ಲಿ ಆದರೂ ಭಿಕ್ಷವಂ ತಂದು ಎಂಟು ಕಬಳವಂ ಭುಂಜಿಸಿಕೊಂಡು
ಕ್ರಮದಿಂ ಪ್ರಾಣಪ್ರೋಕ್ಷಂತೆ ಪ್ರತಿಯಾದ ವಾನಪ್ರಸ್ಥಗೆ ಬ್ರಹ್ಮಲೋಕ
ನಿವಾಸದೊರಕೊಂಬುದೂ. ಈಕ್ರಮದಿಂದಾ ಆಶ್ರಮಧರ್ಮಂಗಳಂನಡಸಿ
ಆಮೇಲೆ ಎಪ್ಪತ್ತುವರುಷ ಆದಮೇಲೆ ಸನ್ಯಾಸಿ ಆಗಬೇಕೂ, ದೇವಋಷಿ
ಪಿತೃ ಋಣತ್ರಯಗಳಂತಿದ್ದದೆ ಆಶ್ರಮಧರ್ಮಂಗಳಂ ನಡಿಸದೆ ಸನ್ಯಾ
ಸಿಆಗಲೂ ಅಧೋಗತಿಯನೈದುವನೂ, ಸಕಲಪ್ರಾಣಿಗಳು ಆತನಂಕಂಡು
ಅಂಜದೆಇಹವೂ ಸಕಲ ಆಶ್ರಮಧರ್ಮಂಗಳನಡಸಿ ದೇವಋಷಿಪಿತೃಋ
ಣತ್ರಯಂಗಳಂತಿದ್ದಿ ಸನ್ಯಾಸಿಯಾಗಲೂ ಆತನಿಗೆ ಎಲ್ಲಿಯೂ ಆರಿಂದ
ಲೂಭಯವಿಲ್ಲಾ, ಹೊರಗೆಇದ್ದು ಭಿಕ್ಷಾರ್ಥವಾಗಿ ಭಿಕ್ಷದಹೊತ್ತುನೋಡಿ

ಕೊಂಡು ಗ್ರಾಮಪ್ರವೇಶವಂ ಮಾಡಿ ಭಿಕ್ಷವಂ ತಂದು ದೇಹಪೋಷಣೆಯಂ ಮಾಡುವದೂ, ದೇಹಸಂರಕ್ಷಣ್ಯವಾಗಿ ದೇಹವಂ ಪೋಷಿಸದೆ ಸಕಲವಸ್ತುಗಳಲ್ಲಿಯೂ ಮಮತೆಯಂ ಬಿಟ್ಟು ಅಭೇದಜ್ಞಾನಿಯಾಗಿ ವೃಕ್ಷಮೂಲವನಾಶ್ರಯಿಸಿ ಕೌಚಧಾನ್ಯ ಭಿಕ್ಷಂಗಳಂ ಚರಿಸಿಕೊಂಡು ಏಕಾಕಿಯಾಗಿ ವರ್ಷಾಕಾಲದಲ್ಲಿ ಕ್ರಿಮಿಕೀಟಂಗಳಂ ನಾನಾಬೀಜಾಂಕುರಂಗಳಂ ಸಂದಣಿಸಿ ಇಹವಾಗ್ಗಿ ಅವಂ ಬಾಧೆಪಡಿಸದೆ ನಾಲ್ಕು ತಿಂಗಳು ಒಂದೇಕಡೆಯಲ್ಲಿ ಇರಬೇಕು ನಿತ್ಯವೂ ಮಾರ್ಗದಲ್ಲಿ ಕ್ರಿಮಿಕೀಟಗಳು ಇಲ್ಲದಸ್ಥಳ ನೋಡಿಕೊಂಡು ಹೆಜ್ಜೆಯನಿಕ್ಕಿ ನಡೆಯಬೇಕು, ಉದಕವನು ಶೋಧಿಸಿ ಶ್ರಗದು ಕೊಳ್ಳಬೇಕು ಕೋಪವಂ ಬಿಡಬೇಕೂ ತ್ವರೆಪಟ್ಟು ಮಾತನಾಡದೆ ಮೋಕ್ಷಹೊರತಾಗಿ ಒಂದನೂ ಅಪೇಕ್ಷಿಸದೆ ಅಧ್ಯಾತ್ಮಕನಾಗಿ ಕೂದಲು ನಖಂಗಳಂ ಬೆಳಸದೆ ವಪನವಂ ಹುಣ್ಣಿವೆ ಅಮಾವಾಸ್ಯೆಯಲ್ಲಿ ಮಾಡಿಸಿಕೊಂಡು ಕಾಷಾಯವಸ್ತ್ರವಂ ಡಿಕೋಲುಗಳಂ ಧರಿಸಿ ಪಂಚಲೋಹಪಾತ್ರೆಗಳಂ ಬಿಟ್ಟು ಸೋರೆಬುರುಡೆ ಮರದ ಮೊಗೆ ಮಣ್ಣಿನಗಡಿಗೆ ಈಮೂರರೊಳಗೆ ಒಂದು ಕಮಂಡಲ ಪಾತ್ರೆಯಂ ಧರಿಸಿ, ಧ್ಯಾನಂಗಳು ಹುಟ್ಟುವನಿಮಿತ್ತ ಒರಳು ಒನಕೆಯ ಧ್ವನಿಯಡಗಿ ಅಟ್ಟ ಒಲೆಯಾರಿ ಉಂಡುಮಿಕ್ಕದ ಬಳಿದು ಇರಿಸುವ ಸಮಯವನ್ನರಿತು ಒಂದುವ್ಯಾಳೆಮಿತವಾಗಿ ಭಿಕ್ಷವನೆತ್ತಿತಂದು ಅಲ್ಪವಾಗಿ ಭಕ್ಷಿಸಿ ವಿಷಯಾದಿಗಳ ಬಿಟ್ಟು ರಾಗದ್ವೇಷರಹಿತರಾವಂಥಾ ಯತಿಯೂ ಪ್ರಾಣಪರ್ಯಂತವಾದರೂ ಒಂದುವರ್ಷವಾದರೂ ಒಂದುಮಾಸವಾದರೂ ಒಂದು ದಿನವಾದರೂ ಇಲ್ಲವೆ ಒಂದುಮುಹೂರ್ತವಾದರೂ ಈವ್ರತಗಳಂ ನಡಿಸಲೂ ಮುಕ್ತನಹನು ಇಂಥಾಯತಿಯು ಬಂದು ಆವನಾನೊಬ್ಬನ ಮನೆಯಲ್ಲಿ ಒಂದುದಿನ ಇಹನೋ ಆಗ್ರಹಸ್ಥನು ಜನ್ಮಪ್ರಭೃತಿ ಮಾಡಿದಪಾಪಪರಿಹರ, ವೃದ್ಧಾಪ್ಯ ರೋಗ ದೇಹತ್ಯಾಗ ನಾನಾಯೋನಿಗಳಲ್ಲಿ ಹುಟ್ಟುವದುಃಖ ಇಷ್ಟರವಿಯೋಗ ದುರ್ಜನಸಂಸರ್ಗ ಅಧರ್ಮದಿಂ ಬಾಹಂಥಾದುಃಖ ನಾನಾನರಕವಾಸ ಪುನರುತ್ಪತ್ತಿ ದೇಹ ಅಸಿತ್ವತ್ವ ಇವೆಲ್ಲವೂ ಅನಿತ್ಯವೆಂದು ತಿಳವುದೂ, ಆತ್ಮನಿತ್ಯವೆಂದು ತಿಳಿದು ವಿವೇಕವಾಪವನೂ ಆವಾಶ್ರಮದಲ್ಲಿಯಿದ್ದರು ಮೋಕ್ಷವುಂಟೂ ಈಕ್ರಮದಿಂದಾ ನಾಲ್ಕುಆಶ್ರಮಂಗಳಂ ಚರಿಸಿಸರ್ವ

ಸಂಗಪರಿತ್ಯಾಗವಂ ಮಾಡಿ ಶೀತೋಷ್ಣ ಸುಖದುಃಖಾದಿಗಳಂ ಸಮವೆಂದು ಕಂಡು ಧ್ಯಾನಪರನಾದವನು ಪರಬ್ರಹ್ಮನನ್ನೈದುವನು. ಶ್ರುತಿ ಸ್ಮೃತಿ ಪುರಾಣ ಉಪನಿಷತ್ತು ತರ್ಕಗ್ರಂಥ ಸೂತ್ರ ಭಾಷ್ಯ ಯಾಜ್ಞ ಬ್ರಹ್ಮಚರ್ಯ ಗೃಹಸ್ಥ ವಾನಪ್ರಸ್ಥ ಯತಿ ಈ ನಾಲ್ಕು ಆಶ್ರಮಧರ್ಮ ತಪಸ್ಸು ಇಂದ್ರಿಯನಿಗ್ರಹ ವಿಶ್ವಾಸ ಉಪವಾಸ ಸದಾಚಾರ ಇವು ಸಕಲಾಶ್ರಮಂಗಳಿಗೂ ಮೋಕ್ಷಸಾಧನಂಗಳು. ಎಲ್ಲಾ ಆಶ್ರಮಂಗಳವರೂ ಆತ್ಮವಿಚಾರವಂ ಮಾಡಬೇಕು. ನಿತ್ಯಾನಿತ್ಯ ವಸ್ತುಗಳಂ ನಿಶ್ಚೈಸಿ ಧ್ಯಾನಪರನಾಗಬೇಕು. ಅಂಥಾ ಧ್ಯಾನವೂ ಯೋಗಾಭ್ಯಾಸ ಹೊರತಾಗಿ ಕೂಡದು. ತಾನು ಸನ್ಯಾಸಿಯೆಂಬ ಮಾತ್ರದಲ್ಲಿಯೂ ವನವಾಸ ಗ್ರಂಥವಿಚಾರ ಧ್ಯಾನ ವ್ರತ ತಪಸ್ಸು ಪದ್ಮಾಸನ ಅನಿಮಿಷದೃಷ್ಟಿ ಶೌಚ ಮೌನ ಮಂತ್ರ ಪೂಜೆ ಇವು ಮೊದಲಾದವು ಯೋಗವಲ್ಲ. ಯೋಗಿಯು ನಿತ್ಯಾಭ್ಯಾಸಿಯಲ್ಲದೆ ಯೋಗಿ ಎನಿಸನು. ಅಂಥಾ ನಿತ್ಯಾಭ್ಯಾಸಯೋಗವಿಲ್ಲದೆ ಮುಕ್ತನಾಗನು. ಯೋಗಾಭ್ಯಾಸವಂ ಮಾಡುವವರು ಯೋಗಗಳ ನಾನಾತೆರದ ಯೋಗವೆಂದು ಹೇಳುವರು. ಅದೆಂತೆನೆ ಕೆಲವರು ವಿಷಯೇಂದ್ರಿಯ ಸಂಯೋಗವೆ ಯೋಗವೆಂಬರು. ಅದು ಯೋಗವಲ್ಲಾ. ವಿಷಯಲಂಪಟರಿಗೆ ಮನಸ್ಸು ನಿಲ್ಲದು. ಮನೋವ್ಯಾಪಾರಂಗಳನ್ನು ಇಂದ್ರಿಯಂಗಳ ಸಂಗವ ಬಿಟ್ಟಲ್ಲದೆ ಯೋಗವೆನಿಸದು. ಅಂಥಾ ಯೋಗಾಭ್ಯಾಸವೆಂತೆಂದರೆ ಮನೋವ್ಯಾಪಾರಂಗಳಂ ನಿಲ್ಲಿಸಿ ಜೀವಾತ್ಮ ಪರಮಾತ್ಮರ ಏಕವ ಮಾಡುವದೇ ಯೋಗ, ಬಹಿರ್ಮುಖವಾದ ಇಂದ್ರಿಯಂಗಳಂ ಮನದಲ್ಲಿ ಅಡಗಿಸಿ ಮನವನ್ನು ಜೀವನಲ್ಲಿರಿಸಿ ಜೀವನನೂ ಪರಮಾತ್ಮನಲ್ಲಿ ಲಯವ ಮಾಡುವದೆ ಯೋಗ. ಏಕಾಗ್ರದ ಯೋಗಶಾಸ್ತ್ರಗಳಲ್ಲಿಯೂ ಆತ್ಮಸ್ವರೂಪವನ್ನು ವಿವರಿಸುವಂಥಾವು, ಆತ್ಮನೂ ಘಟಾದಿಗಳಂತೆ ಕಾಣಲ್ಪಡನಾದಕಾರಣ ಆತ್ಮನೂ ಉಂಟೋ ಎಂಬಲ್ಲಿ ಪ್ರಮಾಣವಾವುದೆಂದರೆ ಪ್ರಾಣಿಗಳ ಹೃದಯದಲ್ಲಿದ್ದು ಅನ್ನವೇ ಕಾರಣವಾದ ಆತ್ಮನು ಇಲ್ಲದಿರಲು ಆನಂದವೆತ್ತಣದು ಆತ್ಮನೆಳದಂಥಸ್ವರೂಪವೂ ತನ ಸುಖ ತನಗೆ ಹ್ಯಾಗೆ ತಿಳಿಯುವದುತ್ತಿದ್ದೀತೋ ಹಾಗೆ ಆತ್ಮನೂ ಸ್ವಾನುಭವದಿಂದಲೆ ತಿಳಿಯತಕ್ಕವನೂ ಹುಟ್ಟುಕುರುಡನಾದ

ಪನೂ ಕರೀಮುಬಿಳೀದು ಎಂಬವರ್ಣಗಳ ಕಾಣಿಸಂತೆ ಯೋಗಸಿಲ್ಲಪವನು ಆತ್ಮಸ್ವರೂಪವನ್ನು ಕಾಣನೂ ಅದುಕಾರಣಾ ನಿತ್ಯವ್ರಾ ಆತ್ಮವಿಚಾರ ಮಂಮೂಡಲೂ ತನ್ನ ಅನುಭವದಿಂ ಸಿದ್ಧಿಯುಹುದೂ ಆತ್ಮನೂ ಮಾಡಾ ಪ್ರಯಾಸದಿಂ ತಿಳಿಯಲುತಕ್ಕವನಾದಕಾರಣ ಎಲ್ಲರಿಗೂ ಸುಲಭವ ಲ್ಲಾ ಹಳ್ಳಕ್ಕೆಹರಿವಉದಕದಂತೆ ವಿಷಯವಾಸನೆಯುಕ್ತ ಮಾನಸ್ಸು ತನ್ನಿಂ ತಾನೆನಿಲ್ಲಸೂ ಅದುಕಾರಣಾ ಆತ್ಮಧ್ಯಾನದಿಂ ಮನಸ್ಸು ನಿಲ್ಲಿಸಬೇಕು ಅಂಥಾಮನಸ್ಸು ವಾಯುನಿರೋಧದಿಂದಲ್ಲದೆ ನಿಲ್ಲದಾಗಿ ಅದಕ್ಕೋಸ್ಕರ ಆಸನಪ್ರಾಣಾದಿ ವಾಯುಗಳಂನಿಲ್ಲಿಸಬೇಕು ಯೋಗಂಗಳಿಗೆ ಷಡಂ ಗಗಳುಂಟು ಅವ್ಯಾವಾವೆಂದರೆ ಆಸನಪ್ರಾಣಾದಿವಾಯುಗಳಂ ನಿಲ್ಲಿಸು ವದೂ ವಿಷಯಗಳಲ್ಲಿ ವ್ಯಾಪಿಸಿದ ಇಂದ್ರಿಯ ಗಳಂ ತಿರುಗಿಸುವದು ಆತ್ಮಧ್ಯಾನ, ಧ್ಯಾನವಂಸ್ಥಿರವಂಮಾಳ್ಪ ಧಾರಣೆ ಇವ್ರಾರು ಯೋಗಂಗಳಿನಿ ಸುವವೂ ಈ ಆರು ಅಂಗಗಳನೂ ಅಭ್ಯಾಸವ ಮಾಡಬೇಕು ಭೂಮಿ ಯಲ್ಲಿ ಜೀವರಾಶಿಗಳು ಎಷ್ಟುಉಂಟೋ ಆಸನಂಗಳ್ ಅಷ್ಟುಉಂಟು ಅಂಥಾ ಅನೇಕ ಆಸನಂಗಳೊಳಗೆ ಪದ್ಮಾಸನ, ಸಿದ್ಧಪದ್ಮಾಸನ ಈ ಎ ರಡು ಮುಖ್ಯವಾದವ್ರಾ ಅವೆಂತೆಂದರೆ ಎಡಪತೊಡೆಯಮೇಲೆ ಬಲದಪಾ ದವನಿರಿಸಲೂ ಪದ್ಮಾಸನವೆನಿಸುವದೂ ಜನ್ನನೋಲೆ ತಾರುವಾರಂಗ ಕರಗಳಿಂದಾ ಪಾದಾಂಗುಷ್ಟವಂಪಿಡಿಯೆ ಸಿದ್ಧಪದ್ಮಾಸನ ವೆನಿಸಿಕೊಂ ಬುವದೂ ಅಂಥಾಸಿದ್ಧಾಸನದಲ್ಲಿ ಕುಳಿತು ಬಂಧುಪುರುಷ ಧ್ಯಾನವಂಮಾ ಡಲೂ. ಯೋಗಸಿದ್ಧ ಹುದೂ ಈ ಆಸನಂಗಳಲ್ಲದೆ ತನಗೆ ಆವಆಸನದಲ್ಲಿ ಕುಳ್ಳಿರಲೂ ಶರೀರಕ್ಕೆ ಸುಖವಹುದೋ ಅಂಥಾ ಸ್ವಸ್ತಿಕಾಸನ ಮೊ ದಲಾದ ಆಸನಂಗಳಲ್ಲಿ ಕುಳಿತು ಯೋಗಾಭ್ಯಾಸವಂ ಮಾಡುವದೂ ಅಗ್ನಿಉದಕದಸಮೀಪ ಅರಣ್ಯ ಪಶುಗಳವುಂಟೆ ನೊಣಗುಂಗರು ಬಾಧೆಸ್ಥಳ ಸ್ಮಶಾನವೃಕ್ಷ ಅಂಗಳಕೂದಲೂ ಬೂದಿ ಯಿದ್ದಲೂ ಹೊಟ್ಟ ಅಸ್ಥಿ ದುರ್ಗಂಧಾ ಇಂಥಾ ಸ್ಥಳಂಗಳಲ್ಲಿ ಅಭ್ಯಾಸವಂ ಮಾಡಲಾಗದೂ ಸಕಲಬಾಧೆಗಳಿಲ್ಲದ ಸಕಲೇಂದ್ರಿಯ ಸುಖಕರವಾ ದ್ದ ಮೇಲುಕಟ್ಟು ಸಾಂಬ್ರಾಣಿ ಧೂಪದಿಂದಲಂಕೃತವಾದ ಗುಹೆ

ಅಭ್ಯಾಸವಂ ಮಾಡಬೇಕು. ಪರಿಪೂರ್ಣವಾಗಿ ಅನ್ನವ ಕೊಂಡಾಗ, ಹಸಿದಾಗ ಮಲಮೂತ್ರಂಗಳು ಒತ್ತಿದಾಗ, ದಾರಿಯು ನಡದು ಬಳಲಿ ಬಂದಾಗ, ಚಿಂತೆಯುಳ್ಳದಾಗ, ಯೋಗಾಭ್ಯಾಸಂಗಳಂ ಮಾಡಲಾಗದು, ಅಭ್ಯಾಸವ ಮಾಡುವಕ್ರಮವೆಂತೆಂದರೆ, ನೆಲವು ಅತಿತಗ್ಗಾಗದ ಅತಿಉನ್ನತವಾಗದ ಗದ್ದಿಗೆಯಲ್ಲಿ ಸಿದ್ಧಾಸನದಲ್ಲಿ ಕುಳಿತು ಎಡದ ಅಂಗೈಯಲ್ಲಿ ಬಲದ ಅಂಗೈಯನ್ನಿರಿಸಿ ಬೆನ್ನಿಷ್ಟು ಅಂಗತೆಂಗನಾಗದಂತೆ ಶರೀರವ ಹಿಂದಕ್ಕೆ ಕಳದು ಉದರದಲ್ಲಿ ಗಡ್ಡವನಿರಿಸಿ ಹಲ್ಲುಹಲ್ಲುಗಳು ಸೋಕದಂತೆ ಕಟವಾಯಿ ಸಮದಲ್ಲಿ ಒಳಗೆ ನಾಲಿಗೆಯು ಕದಲದಂತೆಯಿರಿಸಿ ಚೆನ್ನಾಗಿ ಬಾಯನು ತೆಗದುಕೊಂಡು ಸಕಲೇಂದ್ರಿಯಂಗಳಂ ನಿಗ್ರಹಿಸಿ ಉತ್ತಮ ಮಧ್ಯಮ ಅಧಮ ಪ್ರಾಣಾಯಾಮಂಗಳಂ ತನ್ನ ಶಕ್ತಿ ಅರಿತು ಮಾಡುವುದು ವಾಯುಚಂಚಲದಿಂ ಮನಶ್ಚಂಚಲವಾಗುವದು. ವಾಯುನಿರೋಧದಿಂ ಮನಸ್ಸು ನಿಲುಗಡೆಯಾಗುವದು. ಶರೀರದಲ್ಲಿ ವಾಯು ಇದ್ದಷ್ಟು ಕಾಲವು ಜೀವಿಪುದು ವಾಯುಯಿಲ್ಲದಿರಲು ಮರಣ, ಅದು ಕಾರಣ ವಾಯುವ ನಿಲ್ಲಿಸಬೇಕು, ಮನೋಮಾರುತಂಗಳಂ ನಿಗ್ರಹಿಸಿ ಭ್ರೂಮಧ್ಯದಲ್ಲಿ ದೃಷ್ಟಿಯನಿಲ್ಲಿಸಲು ಕಾಲಭಯವಿಲ್ಲ. ಆಯೆಂದು ಅಕಾರವಂನು ಡಿವಷ್ಟು ಕಾಲ ಮಾತ್ರೆಯೆನಿಸುವದು, ಅಂಥಾ ಮಾತ್ರೆ ಹನ್ನೆರಡಾಗಲು ಲಘುಪ್ರಾಣಾಯಾಮವೆನಿಸುವದು, ಅಂಥಾ ಲಘುಪ್ರಾಣಾಯಾಮವು ಇಪ್ಪತ್ತುನಾಲ್ಕು ಆಗಲು ಒಂದು ಮಧ್ಯಮಪ್ರಾಣಾಯಾಮವು, ಮೂವತ್ತಾರಾಗಲು ಉತ್ತಮಪ್ರಾಣಾಯಾಮವೆನಿಸುವದು, ಅಂಥಾ ಉತ್ತಮ ಮಧ್ಯಮ ಅಧಮಪ್ರಾಣಾಯಾಮಂಗಳಂ ಮಾಡಲು ಶರೀರದಲ್ಲಿ ಸ್ವೇದತೋರಲು ಕೊಂಚವಾಗಿ ಯೋಗಸಿದ್ಧಿಯಾಯಿತೆಂದು ಜ್ಞಾಪಕ, ಶರೀರಕಂಪ ಪುಟ್ಟಲು ಅರ್ಧಯೋಗಸಿದ್ಧಿಯು, ಭೂಮಿಯಂ ಬಿಟ್ಟು ಶರೀರ ಮೇಲಕ್ಕೆ ಏಳಲು ಪೂರ್ಣಯೋಗಸಿದ್ಧಿ, ತನ್ನ ಶಕ್ತಿಯಂ ಮೀರಿ ವಾಯುವಂ ನಿಲ್ಲಿಸಲು ವಾಯುವು ರೋಮಕೂಪಂಗಳಲ್ಲಿ ಪೊರಮಟ್ಟು ಗ್ರಂಥಿ ಸ್ಫೋಟಕ ಕುಷ್ಟವ್ಯಾಧಿ ಮೊದಲಾದ ವ್ಯಾಧಿಗಳಂ ಪುಟ್ಟಿಸುವದು, ಆದಕಾರಣ ಕಾಡಾನೆಯಂ ವಶವ ಮಾಡಿಕೊಂಡಂತೆ ಕ್ರಮದಿಂ ವಾಯುಜಯವಂ ಮಾಡಬೇಕು, ಹಂಸನು ನಾಸಿಕಾದ್ವಾರದಿಂ ಪೊರಮಟ್ಟು ಮೂವತ್ತಾರಂಗುಲ ಹೊರಗೆ ಸೂಸುವ

ನೂ ಅಂಥಾ ಹಂಸನೆ ಪ್ರಾಣನೆನಿಸಿಕೊಂಬುವದೂ ಮನಃಪೂರಿತವಾದ ನಾಡಿಶುದ್ಧಿ ಇಲ್ಲದಿರಲು ವಾಯುನಿರೋಧ ಅಶಕ್ಯ. ಅದುಕಾರಣ ನಾಡಿಶುದ್ಧಿಯಂ ಮಾಡಬೇಕೂ, ನಾಡಿಶುದ್ಧಿಯಂ ಮಾಡುವ ಕ್ರಮವೆಂತೆಂದರೆ:-ಧೃಢಾಸನದಲ್ಲಿ ಕುಳಿತು ಚಂದ್ರಮನ ಧ್ಯಾನಿಸುತ ಚಂದ್ರನಾಡಿಯಿಂ ಪೂರೈಸಿ ಕುಂಭಕವಂ ಮಾಡಿ ಸೂರ್ಯನಾಡಿಯಿಂ ರೇಚಿಸುವದು, ಸೂರ್ಯನಾಡಿಯಿಂ ಪೂರೈಸಿ ಚಂದ್ರನಾಡಿಯಿಂ ರೇಚಿಸುವದು ಈ ರೀತಿಯಲ್ಲಿ ತಿಂಗಳಾಗಲೀ ಅಭ್ಯಾಸವಂ ಮಾಡಲೂ ವಾಯುಜಯವಹುದೂ. ವಾಯುಜಯವಾಗುವದಕ್ಕೆ ಕುರುಹು ಏನೂ ಎಂದರೆ: ಬೇಕಾದಷ್ಟು ಹೊತ್ತು ವಾಯುವಂ ನಿಲ್ಲಿಸಬಹುದೂ ಅಗ್ನಿಬಲವಹದೂ ಒಳಗೆ ನಾದ ಕೇಳಬಹುದು, ವಿಷವ ಕೊಂಡರೂ ಆರೋಗ್ಯವಹುವದೂ, ಪ್ರಾಣಗಳಂ ನಿಲ್ಲಿಸುವದರಿಂದಾ ಪ್ರಾಣಾಯಾಮವೆನಿಸುವದೂ ಅಂಥಾ ಪ್ರಾಣಾಯಾಮದಿಂ ತ್ರಿದೋಷಹರ, ಪ್ರತ್ಯಾಹಾರದಿಂ ಪಾಪಹರ, ಧಾರಣೆಯಿಂ ಚಿತ್ತಸ್ಥೈರ್ಯ, ಧ್ಯಾನದಿಂ ಆತ್ಮದರ್ಶನ, ಸಮಾಧಿಯಿಂ ಪುಣ್ಯಪಾಪಂಗಳ ಪರಿಹರಿಸಿ ಮೋಕ್ಷವ ಪಡೆವರೂ, ಅಪಾನನಾಡಿಶುದ್ಧಿಯಿಂದಾ ವಾಯುಜಯವಹುದೂ ಹನ್ನೆರಡು ಪ್ರಾಣಾಯಾಮವಂ ಮಾಡಿ ಬಂದು ಪ್ರತ್ಯಾಹಾರವೆನಿಸುವದೂ, ಅಂಥಾ ಪ್ರತ್ಯಾಹಾರ ಹನ್ನೆರಡಾಗಲೂ ಬಂದು ಧಾರಣೆಯೆನಿಸುವದೂ ಧಾರಣೆ ಹನ್ನೆರಡಾಗಲೂ ಬಂದು ಧ್ಯಾನವೆನಿಸುವದೂ ಅಂಥಾ ಧ್ಯಾನ ಹನ್ನೆರಡಾಗಲೂ ಬಂದು ಸಮಾಧಿಯೆನಿಸುವದೂ ಸಮಾಧಿಜಯವಾಗಲೂ ಸ್ವಪ್ರಕಾಶಮಪ್ಪ ಆತ್ಮಸ್ವರೂಪವಂ ಕಾಣಬಹುದೂ ಆತ್ಮಸ್ವರೂಪವು ಕಾಣಬರಲೂ ಅದರಿಂದಾ ಕಾಲಪರಿಮಾಣವಂ ವಿಚಾರಬಹು ವಾಯುವು ಬ್ರಹ್ಮರಂಧ್ರವಂ ಅಡರಲೂ ಘನವಾದ ಧ್ವನಿಯೂ ತೋರುವದು ಆಧ್ವನಿಯಿಂದಾ ನಾನಾವಾದ್ಯಂಗಳ ನಾದ ಕೇಳಬಹುದೂ ಅದರಿಂದ ಬ್ರಹ್ಮರಂಧ್ರದಿಂದಾ ಮೋಕ್ಷವಹುದು ಮಿತವಂ ವಿಚಾರಿ ವಾಯುಧಾರಣೆಯಂ ಮಾಡಲು ಬಿಕ್ಕು, ಶ್ವಾಸ, ಕಾಸ, ಮಂಡೆ, ಕಿವಿ, ಇದರಲ್ಲಿ ನೋವು ಮೊದಲಾದ ವ್ಯಾಧಿಗಳುಂ ಪುಟ್ಟುವವು, ವಿಷಯಂಗಳಲ್ಲಿ ಮೆರೆವ ಇಂದ್ರಿಯಂಗಳಂ ಯುಕ್ತಿಯಿಂ ತಿರುಗಿಸಲೂ ಪ್ರತ್ಯಾಹಾರವೆನಿಸುವದೂ, ಗಂಟಲಲ್ಲಿ ಇದ್ದ ಚಂದ್ರನೂ ಅಧೋಮುಖನಾಗಿ ಅಮೃತವಂ ಕರೆಯಲೂ ನಾಭಿಯಲ್ಲಿ ಇದ್ದ ಸೂರ್ಯನೂ ಉ

ಧ್ವನಿಮುಖನಾಗಿಪಾನವಂ ಮಾಡುವನೂ, ಅಪುಕಾರಣಾ ಧಾರಣೆಯುಂಮಾಡ
ಬೇಕು ಆಧಾರಣೆ ಸಗುಣನಿರ್ಗುಣವೆಂದು ಎರಡುತೆರನಾಗಿಯಿಹುದೂ
ಅದೆಂತೆನೆ:-ಮಂತ್ರಯುಕ್ತವಾಗಲೂ ಸಗುಣವೆನಿಸುವದೂ ಮಂತ್ರವಿ
ಲ್ಲದ್ದು ನಿರ್ಗುಣವೆನಿಸುವದೂ ಅದರಿಂದಾ ಮಂತ್ರದಲ್ಲಿ ಮನವನಿಲ್ಲಿಸಿ ಸ
ಮಗ್ರೀವಶರೀರಲುಳ್ಳವನಾಗಿ ನಾಸಾಗ್ರದಲ್ಲಿದೃಷ್ಟಿಯನಿರಿಸಲೂ ಧ್ಯಾನ
ಮುದ್ರೆಯನಿಸುವದೂ, ಹೀಗೆಬಂದುಪ್ಯಾಳೆಧ್ಯಾನವಂಮಾಡಲೂ ಅಶ್ವಮೇಧ
ರಾಜಸೂಯವೆಂಬಯಜ್ಞದಿಂದಾಅಧಿಕಫಲ ಬಾಹ್ಯಶಬ್ದಂಗಳು ಕೇಳಬಹದು
ರ್ಯಂತರವೂ ಧ್ಯಾನವೆನಿಸುವದು, ಬಾಹ್ಯಶಬ್ದ ಕೇಳಬಾರದಿರಲೂ ಸಮಾಧಿ
ಯನಿಸುವದೂ, ಪ್ರಾಣವಾಯುವಿನಸಂಚಾರಂಗಳುಅಡಗಿ ಮನವುಆತ್ಮನಲ್ಲಿ
ಲಯವಾಗಲೂ ಸಮಾಧಿಯನಿಸುವದೂ, ಜೀವಾತ್ಮಪರಮಾತ್ಮಏಕವಾಗೀಸ
ಕಲಮನೋರಥಂಗಳು ಐದಿಪದುಸಮಾಧಿಯನಿಸುವದೂ, ಜೀವಪರಮಾತ
ಭೇದವಲ್ಲದೆ ಶೀತೋಷ್ಣಸುಖದುಃಖಂಗಳನರಿಯದೆಇರುವ ಅವಸ್ಥೆ ಸಮಾಧಿ
ಯನಿಸುವನೂ, ಯೋಗೀಶ್ವರನೂ ಸಮಾಧಿಯಲ್ಲಿರಲೂ ಕಾಲಭೇದಂಗಳು
ಕಾಣಿಸದು ಪುಣ್ಯಪಾಪಂಗಳಭೇದವಿಲ್ಲ, ಆಯುಧದಿಂಕಡಿಯಲ್ಕೂ ಘಾಯ
ವಾಗದೂ ಮಿತವಾದಆಹಾರಉಳ್ಳವನಾಗಿ ಶಕ್ತಿಗೆತಕ್ಕಉದ್ಯೋಗಉಳ್ಳವನಾಗಿ
ವ್ಯಾಳೆಅರಿತು ನಿದ್ರೆಎಚ್ಚರಿಕೆಉಳ್ಳ ಯೋಗೀಶ್ವರಗೆ ತತ್ವಜ್ಞಾನವಹುದೂ,
ವಿಜ್ಞಾನಆನಂದರೂಪವಾದ ಬ್ರಹ್ಮವು ಸಾಕ್ಷಾತ್ಕಾರವೆಂಬುದರ್ಥ ಅಂಥಾ
ಬ್ರಹ್ಮವೂ ಇವರಿಂದಲಾಯಿತು ಎಂಬ ಭೇದವಿಲ್ಲ, ಇಂಥಾದ್ದು ಯೆಂಬ
ದೃಷ್ಟಾಂತವಿಲ್ಲದೆ ವಾಕ್ಯವು ಸ್ವಗಳಿಗೆತಿಳಿಯಲ್ಪಡದೆ ತನಗೆಮತ್ತೊಂದು
ಆಧಾರವಿಲ್ಲದೆ ಅಂತ್ಯವಿಲ್ಲದೆ ಹೆಚ್ಚು ಕುಂದುಗಳಿಲ್ಲದೆ ಪರಬ್ರಹ್ಮದಲ್ಲಿ ಯೋ
ಗೀಶ್ವರನಾದವನು ತುಪ್ಪದೊಡನೆ ತುಪ್ಪವು ಕೂಡಿದಹಾಗೆ ಹಾಲಿನೊಡನೆ
ಹಾಲು ಕೂಡಿದಹಾಗೆ ಐಕ್ಯವಾಗುವನೂ, ಈ ಮರ್ಯಾದೆಯಲ್ಲಿ ಒಂದುವರ್ಷ
ಯೋಗಾಭ್ಯಾಸವಂಮಾಡಲೂ ಯೋಗಸಿದ್ಧಿಯಹದೂ, ಮಹಾಮುದ್ರೆ, ನ
ಭೋಮುದ್ರೆ, ಉಡ್ಯಾಣಮುದ್ರೆ, ಜಾಲಂಧರಮುದ್ರೆ, ಮೂಲಬಂಧನಮುದ್ರೆ
ಈ ಐದುಮುದ್ರೆ ಉಳ್ಳವನೂ ಯೋಗೀಶ್ವರನೆನಿಸುವನೂ ಅದೆಂತೆಂದರೆ ನಾ
ಡೀಚಕ್ರವಂ ಚಂದ್ರಸೂರ್ಯರಗತಿಯೂ ಸಪ್ತಧಾತುವಂ ಸೊಕ್ಕಿಯಿರಲೂ

ಮಹಾಮುದ್ರೆಯೆನಿಸುವದು, ಯೆಡದಪಾದದಮಡದದಿಂದಾ ಯೋನಿಸ್ಥಾನವ ನೊತ್ತಿ ಗಡ್ಡವನ್ನು ಎದೆಯಲ್ಲಿ ಅವುಂಕಿ ಎಡದ ಕೈಯನೂ ಊರಿ ಬಲದ ಪಾದಾಂಗುಷ್ಟವ ಪಿಡಿದು ಪ್ರಾಣವಾಯುವಿನಿಂದಾ ಕುಂಭಕವಂ ಮಾಡಿ ಮೆಲ್ಲನೆಬಿಡಲೂ ಮಹಾಪಾತಕಹರನುಪ್ಪ ಮಹಾಮುದ್ರೆಯೆನಿಸುವದೂ, ಇದಂ ಸವ್ಯಾಪಸವ್ಯಕ್ರಮದಿಂದಾ ಮಹಾ ಮುದ್ರಾಭ್ಯಾಸವಂ ಮಾಡಲೂ ಪಥ್ಯಾಪಥ್ಯಂಗಳಿಲ್ಲ, ಷಡ್ರಸಂಗಳು ಸಮಾನವಿಷವ ಕೊಂಡರೂ ಅಮೃತವಹುದು, ಕ್ಷಯ ಕುಷ್ಟ ಗುಲ್ಮ ಮೂಲವ್ಯಾಧಿ ತೊನ್ನುಗಳಂ ಪರಿಹರಿಸುವವು, ನಾಲಿಗೆಯ ತಿರಿಗಿಸಿ ಬ್ರಹ್ಮರಂಧ್ರಕ್ಕೆ ಏರಿಸಿ ಭ್ರೂಮಧ್ಯದಲ್ಲಿ ದೃಷ್ಟಿಯನ್ನಿಳಿಸಲು ಖೇಚರಿಯೆಂಬಮುದ್ರೆ ಎನಿಸುವದು, ಈ ಖೇಚರಿಯ ಮುದ್ರಾಭ್ಯಾಸದಿಂದ ಹಾರುವ ಪಕ್ಷಿಯಂತೆ ಖೇಚರತ್ವಗತಿಯು ಲಭ್ಯವಾಗುವುದು, ನಾಭಿಯಿಂದಾಮೇಲೆ ಉದರಮಧ್ಯದಲ್ಲಿ ವಾಯು ನಿಲ್ಲಿಸೆ ಉಡ್ಯಾಣಮುದ್ರೆ ಎನಿಸುವದು, ಬ್ರಹ್ಮರಂಧ್ರದಿಂ ಕೆಳಗೆ ಒಸರುವ ಅಮೃತವನ್ನು ನಾಡೀದ್ವಾರಗಳಿಂ ಬಾರದಂತೆ ಕಂಠದಿಂ ಒತ್ತುವದು ಇದು ಜಾಲಂಧರೀಮುದ್ರೆ ಎನಿಸುವದು, ಈ ಜಲಂಧರೀ ಮುದ್ರೆಯಿಂದ ಅಭ್ಯಾಸವಂ ಮಾಡಲು ಮೇಲಣ ಅಮೃತ ಜಠರಾಗ್ನಿಯಲ್ಲಿ ಬೀಳದು, ಕೆಳಗಿದ್ದ ವಾಯುವು ಮೇಲಕ್ಕೆ ಸಂಚರಿಸದು ಮಡದದಿಂ ಯೋನಿಸ್ಥಾನವನೊತ್ತಿ ಅಪಾನವಂ ಮುದುಡಿಕೊಂಡು ಅಪಾನವನ್ನು ಪ್ರಾಣವಾಯುಗಳನ್ನು ಏಕವ ಮಾಡಲು ಮೂಲಬಂಧಮುದ್ರೆ ಎನಿಸುವದು, ಈ ಮುದ್ರಾಭ್ಯಾಸದಿಂ ಮೂತ್ರಪುರೀಷಸ್ಥಳಗಳಡಸುವವು ಅದರಿಂದ ವೃದ್ಧನಾದರೂ ಯೌವ್ವನವುಳ್ಳವನಾಗುವನು ಪ್ರಾಣ ಪಾನ ವಾಯುವಶದಿಂ ಜೀವನು ಕೆಳಕ್ಕೆ ಮೇಲಕ್ಕೆ ಸಂಚರಿಸುವನು, ಸೂರ್ಯನಾಡಿ ಚಂದ್ರನಾಡಿಗಳೆಂಬ ಸಂಚಾರಗಳಿಂದ ಹಗ್ಗದಲ್ಲಿ ಕಟ್ಟದ ಪಟದಂತೆ ಎಳದರೆ ಬಂದು ಬಿಟ್ಟರೆ ಪೋಪಂತೆ ಜೀವನು ಪ್ರಾಣಪಾನವಶನಾಗಿ ಇಹನು, ಅಂಥಾ ಜೀವನೇ ಹಂಸನೆನಿಸಿಕೊಂಬನು ಅಂಥಾ ಹಂಸನು ಹಂಎಂದು ಶರೀರದಿಂ ಹೊರವಟ್ಟು ಸಃ ಎಂದು ಪ್ರವೇಶವಾಗುತ್ತಾ ಇಹನಾಗಿ ಹಂಸನೆಂಬ ಮಂತ್ರವನ್ನು ಜೀವನು ದಿನಬಂದಕ್ಕೆ ಇಪ್ಪತ್ತೊಂದುಸಾ

ವಿರದ ಆರುನೂರುವಾಳ್ಯೆ ಜಪಿಸುತ್ತಾ ಇಹನು, ಇದು ಅಜಪವೆನಿಸಿ ಕೊಂಬುದು, ಅದರ ಸ್ವರೂಪವನ್ನು ತಿಳಿದ ಮಾತ್ರದಲ್ಲಿಯೆ ಸಕಲ ಪಾಪ ಕ್ಷಯ, ಯೋಗಸಿದ್ಧಿಯೂ ಬಹುದು. ವಿಘ್ನಂಗಳುಂಟು, ಅವು ಆವಾವೆಂದರೆ--ದೂರಶ್ರವಣ, ಪರಕಾಯಪ್ರವೇಶ, ನಿಮಿಷಮಾತ್ರದಲ್ಲಿ ಬಹು ಯೋಜನಗಮನ, ಓದದೆ ಸಕಲ ಶಾಸ್ತ್ರಂಗಳೂ ಮುಖಸ್ಥವಹವು. ಧಾರಣಾಸಿದ್ಧಿ, ಲಘುವಾಗಿರೋಣ, ಬಹುಕಾಲಕ್ಷಣಮಾತ್ರವಾಗಿರೋಣ, ಗಿಡ್ಡನಾಗಿರೋಣ, ಉದ್ದವಾಗಿರೋಣ, ಸಣ್ಣನಾಗಿರೋಣ, ಘಾತ್ರವಾಗಿರೋಣ, ನಾನಾಭೂಷೆಗಳು ಬರೋಣ, ಶರೀರದಲ್ಲಿ ದಿವ್ಯಗಂಧ ಸೂಸೋಣ, ಕಾಮರೂಪಿಗಳಾಗೋಣ ಇವು ಮೊದಲಾದ ಸ್ವಲ್ಪ ಫಲಂಗಳೂ ತೋರಿರೋಣ, ಇಂಥಾ ಸ್ವಲ್ಪಫಲಂಗಳೆಂಬ ವಿಘ್ನಂಗಳಿಗೆ, ಒಳಗಾಗದೆ ಸ್ಥಿರವಾಗಿ ಇರಲು ಪರಬ್ರಹ್ಮನಹನು, ಇಂಥಾ ಯೋಗವು ಒಂದು ಜನ್ಮದಿಂ ದೊರಕದು, ದೊರಕದೆ ಮುಕ್ತಿಯಿಲ್ಲಾ, ಮನುಷ್ಯರಿಗೆ ಇಂದ್ರಿಯಂಗಳು ಚಂಚಲ, ಆಯುಷ್ಯವು ಅಲ್ಪ, ಅದುಕಾರಣ ಯೋಗಾಭ್ಯಾಸವು ಕೂಡದು. ಮತ್ತೇನೆಂದರೆ- ಸಕಲ ಪ್ರಾಣಿಗಳಿಗು ಮುಕ್ತಿಪ್ರದವಾದ ಕಾಶಿಯುಂಕ್ಷೇತ್ರವಂಮಾಡಿ ದಯಾಳುವಾದ ವಿಶ್ವೇಶ್ವರನಂ ನಿರ್ಮಿಸಿದನು. ಅಂಥಾ ವಿಶ್ವೇಶ್ವರನ ಸೇವೆಯಂ ಮಾಡಬೇಕು. ಅಭ್ಯಾಸಯೋಗವು ಮಹಾ ಕಷ್ಟ, ಕಾಶೀಕ್ಷೇತ್ರದಲ್ಲಿ ಗಂಗಾಸ್ನಾನವಂ ಮಾಡಿಕೊಂಡು ವಿಶ್ವೇಶ್ವರನ ಸೇವೆಯಂ ಮಾಡಿಕೊಂಡು ಇರುವ ಯೋಗವೇ ಮಹಾ ಸುಲಭ, ಅದೆಂತೆಂದರೆ :—ವಿಶ್ವೇಶ್ವರ, ಅನ್ನಪೂರ್ಣ, ವಿಶಾಲಾಕ್ಷಿ, ಗಂಗೆ, ಕಾಲಭೈರವ, ಧುಂಡಿ ವಿನಾಯಕ, ದಂಡಪಾಣಿ ಎಂಬ ಇದೊಂದು ಷಡಂಗ, ಓಂಕಾರೇಶ್ವರ, ತ್ರಿವಿಷ್ಟಪೇಶ್ವರ, ಕೃತ್ತಿವಾಸೇಶ್ವರ, ಕೇತಾರೇಶ್ವರ, ಅವಿಮುಕ್ತೇಶ ಎಂಬುದು ಇದೊಂದು ಷಡಂಗ, ಗಂಗಾಸ್ನಾನವೆ ಮಹಾಮುದ್ರೆ, ಕಾಶೀ ವೀಧಿಗಳಲ್ಲಿ ಸಂಚಾರವ ಮಾಡುವದೆ ಖೇಚರಿ ಮುದ್ರೆ, ದೂರದೇಶದಿಂದ ಕಾಶೀಪಟ್ಟಣಕ್ಕೆ ಬರುವದೆ ಉಡ್ಯಾಣಮುದ್ರೆ, ವಿಶ್ವೇಶ್ವರನ ಅಭಿಷೇಕಾರ್ಥವಾಗಿ ಗಂಗೋದಕವಂ ಶಿರಸ್ಸಿನಲ್ಲಿ ಧರಿಸಿಕೊಂಡು ಬರುವದೆ ಜಾಲಂಧರಮುದ್ರೆ,

ನಾನಾ ವಿಘ್ನಂಗಳು ಬಂದರೂ ಕಾಶಿಯನ್ನು ಬಿಡದಿರುವದೆ ಮೂಲಬಂ ಧಮುನ್ರೆ ಇಂತೆಂದು ಪರಮೇಶ್ವರನು ಪಾರ್ವತಾದೇವಿಗೆ ನಿರೂಪಿಸಿದ ಎರಡುಬಗೆ ಯೋಗವನ್ನು, ನಿನಗೆ ಪೇಳ್ದೆನು, ಈ ಎರಡುಯೋಗ ದೊಳಗೆ ಕಾಶಿಯು ಯೋಗವೆಂ ಉತ್ತಮವು. ಅದರಿಂದ ಮುಕ್ತಿಸಿದ್ಧಿ, ಆಧಿವ್ಯಾಧಿಗಳು ಸಹಾಯಂಗಳಾಗಿ ಮೃತ್ಯು ಇದೆ ಬಂತು ಎಂಬ ವೃದ್ಧಾ ಪ್ಯದಿಂ ಕಾಲನವಿರಾಮವಾಗುತಿರ್ದು, ಕಾಶೀಕ್ಷೇತ್ರಕ್ಕೆ ಹೋಗಿ ವಿಶ್ವೇ ಶ್ವರನ ಆಶ್ರಯಿಸಬೇಕು. ಯಮನು ಕೋಪಿಸಲು ಜೀವವನಪಹರಿಸು ವನು, ಇದು ಕಾಶೀವಾಸಿಗಳಿಗಿಲ್ಲ, ಕಲಿಕಾಲ ಕರ್ಮಂಗಳು ಕಾಶೀ ವಾಸಿಗಳ ತಡಹಲಮ್ಮವು, ಆದುಕಾರಣ ಕಾಶೀಕ್ಷೇತ್ರಕ್ಕೆ ಹೋಗಿ ಗಂಗಾ ವಿಶ್ವೇಶ್ವರರ ಶರಣುಹೋಗಲು ಬಂದಿ ಜನ್ಮದಿಂ ಮುಕ್ತಿಯುಂಟು ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನೆಂದು ವ್ಯಾಸರು ತ ನಗೆ ಬುದ್ಧಿಗಲಿಸಿದರೆಂಬುದಾಗಿ ಸೂತಪುರಾಣಿಕನು ಶೌನಕಾದಿ ಋಷಿ ಗಳಿಗೆ ಪೇಳ್ದನೆಂಬಲ್ಲಿಗೆ, ವಾನಪ್ರಸ್ಥಾಶ್ರಮ ಪ್ರಸಂಗ ಸನ್ಯಾಸ ಯೋಗ ನಿರ್ಣಯವೆಂಬ ಅಧ್ಯಾಯಾರ್ಥ.

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತ ರಾದ ಮಹಿಶೂರ ಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರವರು ಲೋ ಕೋಪಕಾರಾರ್ಥವಾಗಿ ಕರ್ನಾಟಕ ಭಾಷೆಯಿಂದ ವಿರಚಿಸಿದ ಸ್ಕಂದ ಪುರಾಣೋಕ್ತ ಕಾಶೀ ಮಹಿಮಾರ್ಥದರ್ಪಣದಲ್ಲಿ ನಾಲ್ವತ್ತೊಂದನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ.

ನಾಲ್ವತ್ತೊಂದನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ನಾಲ್ವತ್ತೆರಡನೇ ಅಧ್ಯಾಯ ಪ್ರಾರಂಭ.

—:O:—

ಸ್ವಪ್ನಾರಿಷ್ಟ ಸೂಚನೆ.

ಅನಂತರದಲ್ಲಿ ಕುಮಾರಸ್ವಾಮಿಗೆ ಅಗಸ್ತ್ಯನಿಂತೆಂದನು :— ಎಲೈ ಕುಮಾರಸ್ವಾಮಿಯೆ ! ಕಾಲ ಸಮೀಪವಾಗುತ್ತಾ ಎಂಬುವನ್ನು ತಿಳಿದು ಶೀಘ್ರದಿಂದ ಕಾಶೀವಾಸವಂ ಮಾಡಬೇಕೆಂಬುದ ಬುದ್ಧಿಗಲಿಸಿದರಲ್ಲಾ ಆದರೆ ಮನುಷ್ಯನಾದವನಿಗೆ ಕಾಲ ಸಮೀಪವಾಗುವದಕ್ಕೆ ಏನಾದರೂ ಸ್ವಪ್ನಾರಿಷ್ಟಂಗಳು ಉಂಟಾದರೆ ಬುದ್ಧಿಗಲಿಸಬೇಕೆನಲು, ಅಗಸ್ತ್ಯಂಗೆ ಕುಮಾರಸ್ವಾಮಿ ಇಂತೆಂದನು :--ಕೇಳೈ ಅಗಸ್ತ್ಯನೆ ! ಕಾಲ ಸಮೀಪವಾದದ್ದಕ್ಕೆ ಅರಿಷ್ಟಕಾರುಹುಗಳನ್ನು ಹೇಳುವೆನುಕೇಳು ಮೂಗಿನ ಬಿಲದ್ವಾರದಲ್ಲಿ ಒಂದು ದಿನ ಹಗಲಿರುಳು ನಿಶ್ವಾಸ ನಡೆಯಲು, ಅವನಿಗೆ ಮೂರು ವರುಷಕ್ಕೆ ಮರಣ, ಎರಡುದಿನ ಬಿಡದೆನಡೆಯಲು ಎರಡುವರುಷಕ್ಕೆ ಮರಣ, ಮೂರುದಿನ ಬಿಡದೆನಡೆಯಲುಒಂದುವರುಷಕ್ಕೆ ಮರಣ, ಬಲ ಎಡ ಎರಡು ದ್ವಾರದಲ್ಲಿ ಸರಿಯಾಗಿ ಹತ್ತುದಿನ ನಡೆಯಲು ಆರುತಿಂಗಳಿಗೆ ಮರಣ, ಬಾಯಲ್ಲಿ ನಿರಂತರ ಉಸುರು ನಡೆಯಲು ಎರಡುದಿನಕ್ಕೆ ಮರಣ, ಜನ್ಮನಕ್ಷತ್ರದಲ್ಲಿ ವ್ಯಾಧಿಬಂದು ಆನಕ್ಷತ್ರದರಾಶಿಗೆ ಏಳನೆಕಡೆ ಸೂರ್ಯನಿದ್ದು ಮೂಗಿನ ಬಿಲದ್ವಾರದಲ್ಲಿ ವಾಯು ಸಂಚರಿಸಲು, ಶೀಘ್ರದಿಂದ ಮರಣ, ಆಕಸ್ಮಿಕವಾಗಿ ಬೆಕ್ಕುಕಣ್ಣಿನಕಪ್ಪುನೆಪುರುಷ ಕಣ್ಣಿಗೆ ಕಾಣಿಸಿ, ಆ ಕ್ಷಣವೆ ಮಾಯವಾಗಲು ಎರಡು ವರುಷಕ್ಕೆ ಮರಣ, ಮಲ ಮೂತ್ರಂಗಳು ಕ್ಷೀಣವು ಆಗಲು ರೇತ್ಯಮಲಮೂತ್ರಂಗಳಾದರೂ ಮಲಮೂತ್ರ ಬಂದೇವ್ಯಾಳೆ ಬಂದರೂ ಇದರೊಳಗೆ ಒಂದು ಬಹುಕಾಲವಿಲ್ಲದೆ ಇದ್ದರೂ, ಒಂದು ವರುಷವಾಯುಷ್ಯ, ಆ ಕಾಲದಲ್ಲಿ ಇಂದ್ರನೀಲಸಮಾನವಾದ ಕಪ್ಪನೆ ಸರ್ಪಂಗಳಂ ಕಂಡರೆ ಆರು ತಿಂಗಳಿಗೆ ಮರಣ, ಆ ಕಾಲದಲ್ಲಿ ಸೂರ್ಯನ ಹಿಂದೆ ಎರಡುಮೂರುದಿನ

ಬಿಡಿಸಿ ಇಂದ್ರಚಾಪವಂ ಕಂಡಡೆ ಆಕಾಶದಲ್ಲಿ ಬಿಂದ್ವಾಗ್ರವೆಂಬ ಅರುಂ
ಧತಿಯನ್ನು, ನಾಸಿಕಾಗ್ರವೆಂಬ ಧ್ರುವನನ್ನು, ಕಪಿಕರ್ಣಂಗಳೆಂಬ ಹೆಂ
ಬ ಕೃತ್ತಿಕಾ ನಕ್ಷತ್ರವನ್ನು, ಸ್ತ್ರೀ ನಕ್ಷತ್ರವನ್ನು ಇವಂ ಕಾಣದಿ
ರಲು ಆರುತಿಂಗಳಿಗೆ ಮರಣ, ಸಹಜದಲ್ಲಿ ಸರ್ವ ಕಪ್ಪು ಕೆಂಪಾಗಿ, ಕೆಂಪು
ಕಪ್ಪಾಗಿ, ದುಳ ಸೀಯಾಗಿ ಸೀ ಹುಳಿಯಾಗಿ ಇರಲು ಆರುತಿಂಗಳಿಗೆ
ಮರಣ, ಗಂಟಲು, ಕಟವಾಯಿ, ಹಲ್ಲುಗಳು ಒಣಗಿ ವಿವರ್ಣವಾಗಲು
ತನ್ನನು ಕಂಡಿವಳಿಯು ಹಾಲಿನಲ್ಲಿ ಕಪ್ಪು ಕಾಣಿಸಲು ಆರುತಿಂಗ
ಳಿಗೆ ಮೃತ್ಯು, ಸ್ತ್ರೀಸಂಗವ ಮಾಡುವಾಗ ಸೀನು ಬರಲು ಐದು ತಿಂಗ
ಳಿಗೆ ಮರಣ, ತೊನ್ನೆ ಪ್ರಾಸರವಳ ಇಪ್ಪ ಕಾಲಿಂದ ತಲೆಗೆ ಏರಿ ಬರಲು
ಆರುತಿಂಗಳಿಗೆ ಮೃತ್ಯು, ಸ್ನಾನವ ಮಾಡಿದಾಗ ಎದೆ ಕೈಕಾಲು ಬೇಗ
ಒಣಗಲು ಮೂರು ತಿಂಗಳಿಗೆ ಮೃತ್ಯು, ಧೂಳಲ್ಲಿ ಕೆಸರಲ್ಲಿ, ನಡೆವಾಗ
ತನ್ನ ಹೆಜ್ಜೆಯೊಳಗೆ ಅರ್ಧ ಹೆಜ್ಜೆಯಂ ಕಾಣದಿರಲು ಐದು ತಿಂಗಳಿಗೆ
ಮೃತ್ಯು, ಶರೀರ ಕದಲದೆ ನೆಳಲು ಕದಲಲು ನಾಲ್ಕು ತಿಂಗಳಿಗೆ ಮೃ
ತ್ಯು, ಕನ್ನಡಿಯು ನೋಡಲು ತನ್ನ ಶಿರವ ಕಾಣದಿರಲು ತಿಂಗಳಿಗೆ ಮ
ರಣ, ಇದ್ದಿದ್ದು ಮತಿಕೆಟ್ಟು ತಪ್ಪು ಮಾತುಗಳನಾಡಿದರೂ ರಾತ್ರಿಯಲ್ಲಿ
ಇಂದ್ರಚಾಪವಂ ಕಂಡರೂ, ವೃಕ್ಷದಲ್ಲಿ ಆದರೂ, ಪರ್ವತದಲ್ಲಿ ಆದರೂ
ಗಂಧರ್ವ ನಗರವಂ ಕಾಣಲು, ದಿವದಲ್ಲಿ ಪಿಶಾಚವಂ ಕಂಡರೂ ಕರಗಳಿಂ
ತನ್ನ ಕಿವಿಗಳ ಮುಚ್ಚಲು ಧ್ವನಿ ಕೇಳದಿರಲು ನಿಮಿತ್ತವಿಲ್ಲದೆ ಬಡ
ವಾಗಿ ಇದ್ದವನು ಸ್ಥೂಲವಾದರೂ ಸ್ಥೂಲನಾದವನು ಬಡವಾದರೂ ತಿಂಗ
ಳಿಗೆ ಮರಣ, ತನ್ನ ನೆಳಲು ಛಿದ್ರವಾಗಿ ನಡುವೆ ಪ್ರೇತವಂ ಕಾಣಲು
ಐದು ದಿನಕ್ಕೆ ಮರಣ; ಪಿಶಾಚಗಳೂ, ರಾಕ್ಷಸರೂ, ವಾಯಸಗಳೂ,
ಭೂತಪ್ರೇತವಾಗಿ ಇಪ್ಪುದು. ನರಿ, ಕಪ್ಪೆ, ಹಂದಿ, ಶರಭ, ಹುಲಿ, ಗಿಡುಗ,
ಕೊಕ್ಕರೆ, ಹೇಸರಕತ್ತೆ, ಕರಡಿ ಇವು ತನ್ನ ಕನಸಿನಲ್ಲಿ ತನ್ನ ಕಚ್ಚು
ವುದ ಕಾಣಲು ಒಂದು ವರುಷಕ್ಕೆ ಮರಣ, ಸ್ವಪ್ನದಲ್ಲಿ ಕೆಂಪಿನ ವಸ್ತ್ರ
ಗಂಧ ಪುಷ್ಪಾದ್ಯಲಂಕಾರಗಳಿಂದಲಂಕರಿಸಿಕೊಂಡಿದ್ದುದಂ ಕಾಣಲು,
ಧೂಳಿರಾಶಿ ಹುತ್ತ ಯೂಪಂಗಳಂ ಏರಿಕೊಂಡಿಹುದಂ ಕಾಣಲು, ತಲೆಯು

ಬೋಳಿಸಿಕೊಂಡು ಎಣ್ಣೆಯಂ ಒತ್ತಿಕೊಂಡು ಕತ್ತೆಯನೇರಿ ತೆಂಕಲಾಗಿ ಪೋಪುದಂ ಕಾಣಲು, ಒಣಹುಲ್ಲು ಕಟ್ಟಿಗೆಗಳಂ ತಲೆಯಲ್ಲಿ ಹೊತ್ತುಕೊಂಡು ಪೋಪುದು ಸ್ವಪ್ನಂಗಳಂ ಕಾಣಲು ಆರುತಿಂಗಳಿಗೆ ಮೃತ್ಯು, ಕೃಷ್ಣವಸ್ತ್ರವಂ ಧರಿಸಿ ಕೈಯಲ್ಲಿ ಕಬ್ಬಿಣದ ಗುದಿಗೆಯಂ ಪಿಡಿದು ಕಪ್ಪನೆಯ ಪುರುಷನು ಹಗಲು ಕಣ್ಣಮುಂದೆ ಸುಳಿಯಲು ಕಂಡರೆ ಮೂರುತಿಂಗಳಿಗೆ ಮರಣ, ನೀಲೀವಸ್ತ್ರವಂ ಧರಿಸಿ ನೀಲವಸ್ತ್ರದ ಸ್ತ್ರೀಯೂ ತನ್ನ ಆಲಿಂಗನವ ಮಾಡುವದ ಸ್ವಪ್ನದಲ್ಲಿ ಕಾಣಲು ತಿಂಗಳಿಗೆ ಮರಣ, ಕೋತಿಯು ಮೇಲೆ ಏರಿಕೊಂಡು ಮೂಡಲಾಗಿ ಪೋಪುದಂ ಕಾಣಲು ಐದು ದಿನಕ್ಕೆ ಮೃತ್ಯು, ಇದ್ದಿದ್ದು ಲೋಭಿ ಉದಾರಿಯಾಗಲು, ಉದಾರಿ ಲೋಭಿಯಾಗಲು ಅರಿಷ್ಟ, ಇದು ಮೊದಲಾದ ದುರ್ನಿಮಿತ್ತಂಗಳಂ ಕಂಡು ಶೀಘ್ರದಿಂ ಯೋಗಾಭ್ಯಾಸವನಾದರೂ, ಕಾಶೀವಾಸವನಾದರೂ ಮಾಡಬೇಕು, ಯೋಗಾಭ್ಯಾಸ ಮಹಾಪ್ರಯಾಸ, ಕಾಶೀವಾಸವಂ ಮಾಡಿ ಮೃತ್ಯುವಂ ಜಯಿಸಬೇಕು, ಅದರಿಂದ ಮಿಕ್ಕಾದ ಉಪಾಯವು ಕಾಣೆನು. ಕಾಶೀ ಕ್ಷೇತ್ರಕ್ಕೆ ಪೋಗೆ ಗಂಗಾಸ್ನಾನವಂ ಮಾಡಿ ವಿಶ್ವನಾಥನಂ ಶರಣುಪೋಗಲು ಮೃತ್ಯುಪಾಶಂಗಳು ಮುಟ್ಟಲಮ್ಮವು, ಕಾಶೀಕ್ಷೇತ್ರಕ್ಕೆ ಪೋಗಿ ಗಂಗಾಸ್ನಾನವಂ ಮಾಡಿ ವಿಶ್ವೇಶ್ವರನ ದರ್ಶನವಂ ಮಾಡಿದ ಪುಣ್ಯಾತ್ಮನಾದವನಿಗೆ ಲೋಕದಲ್ಲಿ ಆರೂ ಸರಿಯಿಲ್ಲ, ಕಾಲಹರನಾದಂಥಾ ಪರಮೇಶ್ವರನ ಶರಣುಹೊಕ್ಕು ಕಾಶೀವಾಸವ ಮಾಡುವ ಪ್ರಾಣಿಗಳನ್ನು ಯಮನು ಏನು ಮಾಡಬಲ್ಲನು, ವೃದ್ಧಾಪ್ಯಬರಲು ಹೆಂಡರು, ಮಕ್ಕಳು, ಬಂಧುಗಳು ಮಾತ್ರಂ ಕೇಳದೆ ಅವಮನ್ನಣೆಯಂ ಮಾಡುವರು, ಅದುಕಾರಣ ಕೈ ಕಾಲು, ದೃಷ್ಟಿ, ಮುಷ್ಟಿ ಚೆನ್ನಾಗಿ ಇದ್ದಾಗಲೆ ದುರ್ಲಭವಾದಂಥಾ ಕಾಶೀವಾಸವಂ ಮಾಡಬೇಕು, ಕಾಶೀವಾಸಿಗಳು ಸುಕೃತಿಗಳು, ಅವರನ್ನು ಕಲಿಕಾಲಧರ್ಮಂಗಳೂ ಏನು ಮಾಡವು, ಕಾಶಿಯಲ್ಲಿ ಕಷ್ಟದಲ್ಲಿ ಇಹರ್ಗಿಯು ಸ್ವರ್ಗದಲ್ಲಿ ಸುಖದಲ್ಲಿ ಇರುವರು ಸರಿಯಲ್ಲ, ಅದೆಂತೆಂದೆ:—ಸ್ವರ್ಗಸುಖವು ಕಾಲಾಂತರಕ್ಕೆ ತಿರುಗುವವು, ಕಾಶೀವಾಸಿ

ಗಳಿಗೆ ಮೋಕ್ಷವಲ್ಲದೆ ಜನ್ಮವಿಲ್ಲ. ಆವಕಾರಣ ಪರಮೇಶ್ವರನು ಸುಖಂಗಳುಳ್ಳ ಮಂದರಾದ್ರಿಯಲ್ಲಿದ್ದು ದಿವೋದಾಸರಾಯ ಆಳುವ ಕಾಶೀಪಟ್ಟಣವಂ ನೆನೆನೆನೆದು ಸುಖಪಟ್ಟವನಲ್ಲವೆಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವನ್ನು ವ್ಯಾಸರು ತನಗೆ ಬುದ್ಧಿಗಲಿಸಿದರೆಂದು ಸೂತನು ಶೌನಕಾದಿ ಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ. * * * * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಸ್ವಪ್ನಾರಿಷ್ಟ ಸೂಚನೆ ಎಂಬ ನಾಲ್ವತ್ತೆರಡನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ.

ನಾಲ್ವತ್ತೆರಡನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ನಾಲ್ವತ್ತಮೂರನೇ ಅಧ್ಯಾಯ ಪ್ರಾರಂಭ.

—:o:—

ದಿವೋದಾಸರಾಯನ ಪ್ರತಾಪವರ್ಣನೆ.

ಅನಂತರದಲ್ಲಿ ಕುಮಾರಸ್ವಾಮಿಗೆ ಅಗಸ್ತ್ಯನಿಂತೆಂದನು :— ಎಲೈ ಕುಮಾರಸ್ವಾಮಿಯೆ! ಪರಮೇಶ್ವರನು ಸಕಲ ಶುಭಕರವಾದ ಸರ್ವವಸ್ತುಸಮೇತವಾದ ಮಂದರಾದ್ರಿಯಲ್ಲಿದ್ದು ಕಾಶಿಯಂ ನೆನೆನೆನೆದು ಸುಖಪಟ್ಟವನಾಗಲಿಲ್ಲವೆಂದು ಬುದ್ಧಿಗಲಿಸಿದರಷ್ಟೆ, ದಿವೋದಾಸರಾಯನು ಕಾಶೀಪಟ್ಟಣವಂ ಬಿಡದೆ ಎಷ್ಟುದಿವಸ ಆಳಿದನು. ಆ ದಿವೋದಾಸರಾಯನನ್ನು ಪರಮೇಶ್ವರನು ಆವಪ್ರಕಾರದಿಂದ ಪೊರಡಿಸಿದನು? ಪರಮೇಶ್ವರನು ಮಂದರಾದ್ರಿಯಿಂದ ಕಾಶೀ ಪಟ್ಟಣಕ್ಕೆ

ಬಂದಪರಿ ಹ್ಯಾಗೆ? ಈ ವೃತ್ತಾಂತವಂ ತನಿಗೆಬುದ್ಧಿಗಲಿಸಬೇಕೆನಲು, ಕುಮಾರಸ್ವಾಮಿ ಅಗಸ್ತ್ಯಂಗೆ ಇಂತೆಂದನು :—ಕೇಳೈ ಅಗಸ್ತ್ಯನೆ ! ಪರಮೇಶ್ವರನು ಬ್ರಹ್ಮನ ಪ್ರಾರ್ಥನೆಯಿಂದಲೂ, ಮಂದರನಿಗೆ ವರವ ನಿತ್ತ ಕಾರಣದಿಂದಲೂ, ಮಂದರಾದ್ರಿಯಲ್ಲಿ ಪರಮೇಶ್ವರನೂ ಪಾರ್ವತಾದೇವಿಯರ ಸಹಿತ ವಾಸವಾಗಿ ಇರಲು, ಬ್ರಹ್ಮ, ವಿಷ್ಣು, ಗಣಪತಿ, ಸೂರ್ಯ ಮೊದಲಾದ ಸಕಲ ದೇವತೆಗಳೂ ಸಕಲ ಯೋಗಿನೀಯರೂ, ನಂದೀ ಭೃಂಗೀ ಮೊದಲಾದ ಸಮಸ್ತ ಗಣಂಗಳೂ ಸಹಾ ತಮ್ಮ ತಮ್ಮ ಸ್ಥಾನಗಳಂ ಬಿಟ್ಟು ಮಂದರಾದ್ರಿಯಲ್ಲಿರ್ದರು. ದಿವೋದಾಸ ರಾಯನು ಬ್ರಹ್ಮನ ವರದ ಮಹಿಮೆಯಿಂದ ದಿವ್ಯ ಸಾಮರ್ಥ್ಯ ಉಂಟಾಗಿ ಕಾಶೀ ಪಟ್ಟಣದಲ್ಲಿ ಧರ್ಮದಿಂ ನಿಷ್ಕಂಟಕದಿಂ ರಾಜ್ಯವ ಪಾಲಿಸುತ್ತಾ ಶತ್ರುಗಳ ಹೃದಯದಲ್ಲಿ ನೇತ್ರಂಗಳಲ್ಲಿ ಸೂರ್ಯನಂತೆ ಪ್ರಕಾಶಿಸುತ್ತಾ, ಬಂಧುಗಳಲ್ಲಿ ಚಂದ್ರನಂತೆ, ಶತ್ರುವೆಂಬ ವನಂಗಳಿಗೆ ದಾವಾಗ್ನಿಯಂತೆ, ಧರ್ಮಾಧರ್ಮಂಗಳಿಗೆ ಶಿಕ್ಷೆ ರಕ್ಷಣೆಯಂ ಮಾಡುವಲ್ಲಿ ಯಮಧರ್ಮನಂತೆ, ಅರಿಗಳ ಯುದ್ಧದಲ್ಲಿ ದೇವೇಂದ್ರನಂತೆ, ಪುಣ್ಯ ಜನರಿಗೆ ಸ್ವಾಮಿಯಂತೆ, ಗಾಂಭೀರ್ಯದಿಂ ಸಮುದ್ರನಂತೆ, ಸಕಲ ಪ್ರಾಣಿಗಳ ಸಂರಕ್ಷಣೆಯಲ್ಲಿ ವಾಯುವಿನಂತೆ, ಸತ್ಪುರುಷರಿಗೆ ಧನವ ನೀವುದರಿಂದ ಧನಪತಿಯಂತೆ, ರಾಜ್ಯವನಾಳುವಲ್ಲಿ ವಿಷ್ಣುವಂತೆ, ಶತ್ರುಗಳ ಭಯಪಡಿಸುವಲ್ಲಿ ರುದ್ರನಂತೆ, ಪ್ರಜಾಸೃಷ್ಟಿಯಿಂ ಬ್ರಹ್ಮನಂತೆ, ಸ್ತುತಿಸುವವರಿಗೆ ಸಾಧ್ಯನು,ಅಸಾಧ್ಯರಿಗೆ ಅಸಾಧ್ಯನು, ವಸುವೆನಲು ಧನವು ಆ ವಸುವಿನಂತೆ ಧನದಿಂದಧಿಕನು, ಗ್ರಹಂಗಳೊಡನೆ ವಿಗ್ರಹವಂ ಮಾಡುವನು, ಮರುದ್ಗಣಂಗಳಿಗೆ ಅಗಣ್ಯನು, ಸದ್ಗುಣಂಗಳಿಗೆ ತೃಪ್ತಿಕರದಿಂ ಸಂತೋಷಪಡಿಸುವನು, ಗುಹ್ಯಕವಿದ್ಯೆದಿಂ ವಿದ್ಯಾಧರನು, ಗಾನದಿಂ ಗಂಧರ್ವನು, ಯಕ್ಷರಾಕ್ಷಸರಾತಂಗೆ ಸರಿಯಲ್ಲ. ಸರ್ಗರಕ್ಷಕನು ನಾಗಾದಿಗಳಾತಂಗೆ ಅಪರಾಧವಂ ಮಾಡಲಂಜುವರು, ದಾನವರು ಮಾನುಷರೂಪದಿಂ ಸೇವಿಸುತಿರು ಗುಹ್ಯಕರು, ಗೂಢಚಾರಿಗಳು, ಅಸುರರು ತಮ್ಮ ಹೆಸರು ಹೇಳಿಕೊಂಡೆ ಓಲಗಿಸುವರು,

ಆತನ ರಥದ ಕುದುರೆಗಳು ಕಾಮಗಮನ ಉಳ್ಳವಾಗಿ ವಾಯುವಿಗೆ
ಶೀಘ್ರಗತಿಯಂ ಕಲಿಸುವವು, ದಾನವೆನೆಮದವು ಅಲ್ಲಿಯ ಗಜಂಗಳು
ನಿತ್ಯವೂ ದಾನಿಗಳು, ಅಲ್ಲಿಯ ಪ್ರಜೆಗಳು ಶಾಸ್ತ್ರಪ್ರವೀಣರು, ಆ
ತನ ರಾಜ್ಯದಲ್ಲಿ ಪ್ರತಿ ಅರಸುಗಳಂ ಕಂಡುದಿಲ್ಲಾ, ಶತ್ರುಗಳು ಆಪ್ತ
ರಾಗಿ ಇಹರು, ಸ್ವರ್ಗದಲ್ಲಿ ಚಂದ್ರನೊಬ್ಬನೇ ಕಳಾನಿಧಿ, ಇಲ್ಲಿ ಸ
ರ್ವರೂ ಕಳಾನಿಧಿಗಳು, ಸ್ವರ್ಗದಲ್ಲಿ ಕಾಮನೊಬ್ಬನೆ ಅನಂಗ, ಇಲ್ಲಿ
ಸಂಗವಾದ ಸರ್ವ ಕಾಮಂಗಳುಳ್ಳವರು, ಅಲ್ಲಿ ಸೂರ್ಯನೊಬ್ಬನೆ ಕಿರ
ಣಂಗಳುಂಟಾದವನು, ಇಲ್ಲಿ ಎಲ್ಲರೂ ಕಿರಣಂಗಳುಂಟಾದವರೂ, ಗೋ
ತ್ರಭೇದಕನು ಸ್ವರ್ಗದಲ್ಲಿವುಂಟು, ಇಲ್ಲಿ ಗೋತ್ರಭೇದಕರಿಲ್ಲ, ಅಲ್ಲಿ
ಪ್ರತಿಪಕ್ಷದಲ್ಲಿ ಕ್ಷಯವುಳ್ಳವನುಂಟು, ಇಲ್ಲಿ ಕ್ಷಯವುಳ್ಳವರಿಲ್ಲ, ಅಲ್ಲಿ
ನವಗ್ರಹಂಗಳುಂಟು, ಇಲ್ಲಿ ನವಗ್ರಹಬಂಧನವಿಲ್ಲ, ಅಲ್ಲಿ ಬ್ರಹ್ಮ
ನೊಬ್ಬನೆ ಹಿರಣ್ಯಗರ್ಭನು, ಇಲ್ಲಿ ಎಲ್ಲರೂ ಹಿರಣ್ಯಗರ್ಭರು, ಅಲ್ಲಿ
ಅಪ್ಸರಸ್ತ್ರೀಯರುಂಟು, ಇಲ್ಲಿ ಅಪ್ಸರಗಳೆಂಬ ಅನೇಕ ಕೊಳಗಳುಂ
ಟು, ವೈಕುಂಠದಲ್ಲಿ ಪದ್ಮಿನಿ ಒಬ್ಬಳೆ, ಇಲ್ಲಿ ರಾಯಂಗೆ ಅನೇಕ ಪದ್ಮ
ನಿಧಿಯುಂಟು, ಅಲ್ಲಿ ಧನದನು ಒಬ್ಬನೆ, ಇಲ್ಲಿ ಎಲ್ಲರೂ ಧನವಂ
ತರು, ಆ ರಾಯನ ರಾಜ್ಯದಲ್ಲಿ ಈತಿಬಾಧೆ ರಾಜಾತಂಕವಿಲ್ಲ. ಈ ರೀತಿ
ಯಲ್ಲಿ ದಿವೋದಾಸರಾಯನು ಧರ್ಮದಿಂದ ಎಂಭತ್ತುಸಾವಿರ ವರ್ಷ ರಾ
ಜ್ಯವನಾಳುತ್ತಾ ಇರಲು, ದೇವತೆಗಳು ಕಂಡು ತಾಳಲಾರದೆ ಬೃಹಸ್ಪತಿ
ಯೊಡನೆ ಆಲೋಚನೆಯಂ ಮಾಡಿದರೆಂತೆನೆ:-ಕೇಳೈ ಅಗಸ್ತ್ಯ! ನಿನ್ನಂ
ದವಂಗೆ ವಿಘ್ನವಮಾಡಿದರೂ ತಮ್ಮ ಕುರಿತು ಯಜ್ಞಂಗಳಂ ಮಾಡಿದ
ವರ್ಗೆಯು ಒಳ್ಳೇವರಲ್ಲಾ. ಪರರ ಶ್ರೇಯಸ್ಸುಕಂಡು ಕರುಗುವದು,
ಅವರ ಗುಣ ಅದೇಂತೆನೆ—ಬಲಿ, ಬಾಣ, ದಧೀಚಿಗಳು ಮಾಡಿದ ಅಪರಾ
ಧವೇನು? ಅವರ್ಗೆ ನಾನಾ ವಿಘ್ನಂಗಳಂ ಮಾಡಿದರೂ ಲೋಕದಲ್ಲಿ
ಅಧರ್ಮದಿಂ ನಡೆವಂಥಾವರು ಐಶ್ವರ್ಯವಂತರಾಗಿ ಅಧರ್ಮದಿಂ ನ
ಷ್ಟವಾಗಿ ಸಕಲ ಮೂಲದಿಂ ಕೆಟ್ಟು ಅಧೋಗತಿಯನ್ನೈದುವರು. ಅದು
ಕಾರಣ ಪರರ ಐಶ್ವರ್ಯಗಳಂ ಕಂಡು ಸೈರಿಸವೆ ದೇವತೆಗಳೂ ರಾಕ್ಷ

ಸರೂ ಮೊದಲಾದವರಕ್ಕೈಯ್ಯಲ್ಲಿ ಇಷ್ಟ ಪಡುವದು ಸಹಜ, ತನ್ನ ಮಕ್ಕಳೋಪಾದಿಯಲ್ಲಿ ಪ್ರಜಾಪಾಲನೆಯಂ ಮಾಡುತ್ತಿರ್ದ ದಿವೋದಾಸರಾಯನು ರಾಜ್ಯವನಾಳುತ್ತಾ ಇರಲು, ಆತನ ರಾಜ್ಯದಪ್ರಜೆಗಳುಯಂತಿದ್ದರೆನಲು :—ಸಕಲರೂ ಏಕಪತ್ನೀವ್ರತರು, ಸ್ತ್ರೀಯರು ಮಹಾಪತಿವ್ರತೆಯರು, ವೇದವನೋದದೆಇದ್ದ ಬ್ರಾಹ್ಮಣನಿಲ್ಲ, ಶೂರನಲ್ಲದ ಕ್ಷತ್ರಿಯನಿಲ್ಲ, ಧನಿಕನಲ್ಲದ ವೈಶ್ಯನಿಲ್ಲ, ದ್ವಿಜಸೇವೆಯಂ ಮಾಡದ ಶೂದ್ರನಿಲ್ಲ, ಬ್ರಹ್ಮಚರ್ಯವ್ರತವನ್ನು ಬಿಡದ ಬ್ರಹ್ಮಚಾರಿಯಿಲ್ಲ, ಧರ್ಮಶಾಸ್ತ್ರಂಗಳನೋದದ ಅತಿಥಿಪೂಜೆಯ ಮಾಡದ ಸದಾಚಾರಗಳಲ್ಲಿ ನಡೆಯದ ಗೃಹಸ್ಥರಿಲ್ಲ, ತಮ್ಮ ಆಚಾರಂಗಳಲ್ಲಿ ನಡೆಯದ ವಾನಪ್ರಸ್ಥನಿಲ್ಲ, ಯತ್ಯಾಶ್ರಮಕ್ಕೆ ತಕ್ಕ ಕರ್ಮದಲ್ಲಿ ನಡಿಯದ ಸನ್ಯಾಸಿಗಳಿಲ್ಲ, ಮಿಕ್ಕ ಸಂಕರಜಾತಿಯವರು ತಮ್ಮ ಪಾರಂಪರೆಯಿಂ ಬಂದ ಧರ್ಮಂಗಳಿಂ ನಡೆಯುತ್ತಾ ಇರ್ದರು, ಸಂತಾನಂಗಳಿಲ್ಲದೆ ಬಂಜೆಯಾಗಿದ್ದವರಿಲ್ಲ, ಮಕ್ಕಳ ಮರಣವಂ ಕಂಡಂಥಾ ತಾಯಿತಂದೆಗಳಿಲ್ಲ, ಧನಹೀನರಾದವರಿಲ್ಲ, ಮಾತಾಪಿತೃ ಗುರು ಬ್ರಾಹ್ಮಣ ಇವರ ಸೇವೆಯಂ ಮಾಡದವರಿಲ್ಲ, ಬಡವನೂ, ಬಹು ಭಾಷಿಕನೂ, ವಂಚಕನೂ, ಪಾಷಂಡಿಗಳು, ಭಂಡರೂ, ಮದ್ಯಪಾಯಿಗಳೂ ಇಂಥಾವರಿಲ್ಲ, ಎಲ್ಲಾ ಕಡೆಯಲ್ಲೂ ವೇದಶಾಸ್ತ್ರಘೋಷ, ನೃತ್ಯ, ಗೀತ, ವೀಣ ನಾನಾವಾದ್ಯ ಕೊಳಲುಮದ್ದಲೆ, ಭೇರಿ ಶಬ್ದಧ್ವನಿಗಳಿಂ ತುಂಬಿಇಹದು, ಸೋಮಪಾನ ಹೊರತಾಗಿ ಪಾನಗೋಷ್ಠಿಯಿಲ್ಲ, ಜೂಜುಗಾರರು ಇಲ್ಲ, ಸಾಲವತೆಕ್ಕೊಂಬವರಿಲ್ಲ, ಮಗನಿಗೆ ತಾಯಿತಂದೆಯ ಪೂಜೆ ಹೊರತಾಗಿ ಬೇರೆ ದೇವರ ಪೂಜೆ ಇಲ್ಲ, ಆ ರಾಜ್ಯದ ಸ್ತ್ರೀಯರಿಗೆ ವ್ರತ ದಾನ ಉಪವಾಸ, ತೀರ್ಥದ ಪೂಜೆಗಳೆಲ್ಲವೂ ತಮ್ಮ ಪತಿಯ ಪಾದಸೇವೆ ಹೊರತಾಗಿ ಮತ್ತೊಂದು ಇಲ್ಲ, ಪತಿಯ ವಚನವೆ ವೇದವಚನ, ತಮ್ಮನು ಅಣ್ಣನ ಪೂಜಿಸುವನು, ಭೃತ್ಯನು ಆಳುವ ಒಡೆಯನ ಪೂಜಿಸುವನು, ಆ ರಾಯನು ಬ್ರಾಹ್ಮರನ್ನ ಪೂಜಿಸುವನು, ಸಕಲರೂ ವೇದಶಾಸ್ತ್ರ ಪುರಾಣವಂತರಾದ ವಿದ್ವಾಂಸರ ಪೂಜಿಸುವರು, ತಪೋನಿಷ್ಠರು ಜಿತೇಂದ್ರಿಯರ ಪೂಜಿಸ

ವರು, ಜಿತೇಂದ್ರಿಯರು ಜ್ಞಾನಿಗಳ ಪೂಜಿಸುವರು, ಜ್ಞಾನಿಗಳು ಶಿವ
ಯೋಗಿಗಳ ಪೂಜಿಸುವರು, ಸಕಲರೂ ಮಂತ್ರಪೂರಿತವಾದ ಅನರ್ಘ
ವಾದ ಮೃಷ್ಟಾನ್ನವನು ಬ್ರಾಹ್ಮಣಮುಖವೆಂಬ ಅಗ್ನಿಯಲ್ಲಿ ಆಹುತಿ
ಯಂ ಮಾಡುವರು, ಸಕಲ ಜನರೂ ತಾವು ನ್ಯಾಯದಿಂದ ಆರ್ಜಿಸಿದ
ಧನವಂ ತೆಗೆದು ಬಾವಿ, ಕೆರೆ, ಕುಂಟೆ, ಪೂತೋಟ, ತೋಪು, ಸ
ತ್ರ, ಅರವಟಿಗೆ, ಉಪನಯನ, ವಿವಾಹಂಗಳು ಮೊದಲಾದ ನಾ
ನಾ ದಾನಂಗಳಂ ಮಾಡುತಿಹರು, ಬೇಟಗಾರರೂ, ಕಪಟಕರು
ಹೊರತಾಗಿ ಎಲ್ಲರೂ ಹೃಷ್ಟಪುಷ್ಟರಾಗಿ ಇಹರೂ, ಈ ಮ
ರ್ಯಾದೆಯಲ್ಲಿ ಧರ್ಮಪರರಾದ ಪ್ರಜೆಗಳು ಧರ್ಮದಲ್ಲಿ ರಕ್ಷಿಸಿಕೊಂ
ಡುರಾಜ್ಯವನಾಳುವ ದಿವೋದಾಸರಾಯನ ಸಾಮರ್ಥ್ಯವು ಐಶ್ವರ್ಯಂಗಳಂ
ದೇವತೆಗಳು ಬೃಹಸ್ಪತಿಯಂನೋಡಿಯಿಂತೆಂದು ಆಲೋಚನೆಯಂಮಾಡಿ
ದರು, ಕುಲಗುರುವೆ ! ಕಾಶೀಕ್ಷೇತ್ರದಲ್ಲಿ ದಿವೋದಾಸರಾಯನು ರಾಜ್ಯವ
ನಾಳುತ್ತಾಯಿರಲು, ನಮಿಗೆಕಾಶಿಯಸಂಚಾರವೆಹೋಯಿತು. ಅವನಂಮೋ
ಸಗೊಳಿಸಿಹೊರಡಿಸುವದಕ್ಕೆ ಉಪಾಯವಂ ಬುದ್ಧಿಗಲಿಸಬೇಕೆನಲೂ, ಕಾ
ರ್ಯಾಪೇಕ್ಷೆಗಳಾದದೇವತೆಗಳಂನೋಡಿ ಬೃಹಸ್ಪತಿಯು ಇಂತೆಂದನು, ಕೇಳ
ರೈ ದೇವತೆಗಳಿರ! ದಿವೋದಾಸರಾಯನು ಸಂಧಿವಿಗ್ರಹಾದಿಗುಣಂಗಳಂಬಲ್ಲಂ
ತೆ ನಮ್ಮಲ್ಲಿ ಒಬ್ಬರನ್ನೂ ಕಾಣೆನೂ, ಚತುರೋಪಾಯಂಗಳಲ್ಲಿ ಆತನಲ್ಲಿ
ಭೇದೋಪಾಯವಂ ಮಾಡಿದರುನಮಿಗೆಸಿದ್ಧಿಸದೂ, ಮಿಕ್ಕಾದಉಪಾಯಂಗ
ಳುಶಕ್ತಿಗಳು ಆತನಲ್ಲಿಕೊಳ್ಳದೂ, ಅದೂಅಲ್ಲದೆ ನಮಿಗೆಮೊದಲಾಗಿಮಾ
ನ್ಯರಾದಂಥಾ ಪೂಜಿಸುವರಿಗೆಸಕಲೈಶ್ವರ್ಯವಂ ಕೊಡುವ ಬ್ರಾಹ್ಮಣರನ್ನೂ
ತ್ರಿಕಾಲವೂಪೂಜೆಯಂಮಾಡುತ್ತಾಯಿದ್ದನೂ, ಆತನರಾಜ್ಯಲ್ಲಿ ನಡೆವಪತಿ
ವ್ರತಾಸ್ತ್ರೀಯರಸ್ವಭಾವದಿಂದ ಆರಾಯಂಗೆತಪೋಬಲ ಅಧಿಕವಾಗುತ್ತಾ
ಯಿದ್ಧೀತು, ತಪೋಬಲಅಧಿಕವಾಗಲು ದಿವ್ಯಸಾಮರ್ಥ್ಯಉಂಟಾಗಿ ಯಿದ್ಧೀ
ತೂ, ಅದರಿಂದಾಆರಾಯಂಗೆ ಬ್ರಾಹ್ಮಣಪೂಜೆ ದೊರಕದಂತೆ ಭೇದೋಪಾ
ಯವಂಮಾಡಿದಲ್ಲದೆ ನಮಿಗೆಕಾರ್ಯಸಿದ್ಧಿಯಾಗದೂ, ಅದಲ್ಲದೆ ಮತ್ತೆ ಉಪಾ
ಯಾಂತರಮಂಕಾಣೆನೂ ಯಂದುನುಡಿದನೂ, ಹೀಗೆಂಬ ಬೃಹಸ್ಪತಿಯುವಾ

ಕ್ಯವಂ ಕೇಳ ದೇವತೆಗಳು ಅವನರಾಷ್ಟ್ರದಕಡೆಯಲ್ಲಿ ಸಂಚಾರವಮಾಡುತ್ತಾ ಆತನಂವೋಸಗೊಳಿಸುವ ಉಪಾಯಗಳು ಸಾಧ್ಯವಾಗುತ್ತಿಂದು ದೇವೇಂದ್ರಾದಿದಿಕ್ಪಾಲಕರೂ, ನವಗ್ರಹಂಗಳು ಎಲ್ಲಾವಂದುಗೂಡಿ, ಆಲೋಚಿಸಿ ಯಜ್ಞೇಶ್ವರನಂಕರೆದು ಬಹುಮಾನದಿಂದಾಪ್ರಾರ್ಥಿಸಿ, ಯಿಂತೆಂಬರೂ-- ಎಲೈಯಜ್ಞಪುರುಷನೆ! ನೀನು ದಿವೋದಾಸನರಾಷ್ಟ್ರದಲ್ಲಿ ಇರ್ದ ನಿನ್ನಮೂರ್ತಿಯನ್ನು ಉಪಸಂಹರಿಸು, ಅಗ್ನಿನಷ್ಟವಾಗಲೂ ಆತನು ನದೀತೀರದ ವೃಕ್ಷದಂತೆ ಸಮೂಲವಾಗಿ ಕೆಡುವನೂ, ಆರಾಜ್ಯದನಷ್ಟಕ್ಕೆ ವೃದ್ಧಿಗಳಿಗೆ ಪ್ರಜೆಗಳೆ ಕಾರಣಾ, ಅದರಿಂದಾಪ್ರಜೆಗಳು ನಷ್ಟವಾಗುವಮರ್ಯಾದೆಯಲ್ಲಿ, ನಿನ್ನ ಮೂರ್ತಿಯನ್ನು ಉಪಸಂಹರಿಸೂ ಯೆಂದು ಇಂದ್ರಾದಿದೇವತೆಗಳು ಅಗ್ನಿಯಂಪ್ರಾರ್ಥನೆಯಂ ಮಾಡಲು, ಅಗ್ನಿಯೂ ತನ್ನ ಯೋಗಶಕ್ತಿಯಬಲದಿಂದಾ ಆತನರಾಜ್ಯದಲ್ಲಿ ಇದ್ದ ಬಾಹ್ಯಾಗ್ನಿ ಜಠರಾಗ್ನಿಯನ್ನು ಉಪಸಂಹರಿಸಿ, ತನ್ನ ಲೋಕಕ್ಕೆ ಹೋಗಲು, ಆಸಮಯದಲ್ಲಿ ದಿವೋದಾಸರಾಯನು, ವಾಲಗವಂ ಬೀಳ್ಕೊಟ್ಟು ಮಧ್ಯಾನ್ಹದಲ್ಲಿ ಭೋಜನಶಾಲೆಗೆ ಭೋಜನಕ್ಕೆ ಬಂದರಾಯನಂ ನೋಡಿ, ಸುವಾಸನದ ಅಡಿಗೆಯವರೂ ನಡುನಡುಗಿ ಹಸಿದು ಬಂದರಾಯಂಗೆ ಇಂತೆಂದು ಬಿನ್ನೈಸಿದರೂ, ಸೂರ್ಯನ ಕಿರಣವ ಅತಿಕ್ರಮಿಸಿದ ತೇಜಸ್ಸು ಉಳ್ಳ ರಣರಂಗಧೀರನಾದ ಎಲೈಸ್ವಾಮಿಯೆ ! ನೀವು ಅಂಜಬ್ಯಾಡವೆಂದು ಅಭಯವಂ ಕೊಟ್ಟರೆ ಬಿನ್ನೈಸೇವೂಯೆಂದು ಹೇಳುವ ಸುವಾಸನದವರ ಬಿನ್ನಹಕ್ಕೆ, ಅಂಜಬೇಡವೆಂದು ಕಣ್ಣು ಸಂಜ್ಞೆಯಿಂದಾ ಅಪ್ಪಣೆಯಂ ಕೊಡಲು, ಸುವಾಸನದವರೂ ಕೈಮುಗಿದು ಬಿನ್ನೈಸಿದರೂ, ಎಲೈಸ್ವಾಮಿಯೆ ! ನಿಮ್ಮ ಪ್ರತಾಪಾಗ್ನಿಜ್ವಾಲೆಗೆ ಅಂಜಿ ಯಜ್ಞೇಶ್ವರನು ಅಡಗಿಹೋದನು ಅಗ್ನಿ ಇಲ್ಲದೆ ಪಾಕವಾಗದೆ, ಸೂರ್ಯದೀಪ್ತಿಯಿಂದಾ ಪಾಕವಾದ ಅಡಿಗೆಯನ್ನು, ತಹದಕ್ಕೆ ಅಪ್ಪಣೆಯೆ ಎಂದು ಬಿನ್ನೈಸಲು, ರಾಯನೂ ಸುವಾಸರ ಬಿನ್ನಹವಂ ಕೇಳಿ ಕ್ಷಣಮಾತ್ರ ಧ್ಯಾನಿಸಿ ದಿವ್ಯದೃಷ್ಟಿಯಿಂದಾ ತನ್ನ ರಾಜ್ಯದ, ಬಾಹ್ಯಾಗ್ನಿ ಜಠರಾಗ್ನಿ ಹೋದುದಂ ಕಂಡು ಯಿಂತೆಂದನು ಇದು ದೇವತೆಗಳ ಕಪಟ, ಅಗ್ನಿ ಹೋದರೆ ನಮಗೆ ಬಂದ ಕಾರ್ಯಹಾನಿಯೇನು. ದೇವತೆಗಳ ವಿಚಾರದಿಂದಾ ಸಕಲವನ್ನು ನಿರ್ವಹಿಸೇನೂ, ಯಂಬನಿತರೊಳು ರಾಜ್ಯದ ಪ್ರಜೆಗಳು ಪಟ್ಟಣದವರು ಸಹಾ

ಬಂದು, ಅರಮನೆಯು ಬಾಗಿಲಲ್ಲಿ ನಿಂತು ಅವಸರವನರಿ ದಾರಾಯಂಗೆ ಬಿನ್ನಹವಂ ಮಾಡಿಸಿ ಅಪ್ಪಣೆಯಿಂದ ರಾಜಾಲಯವಂ ಪ್ರೇಕ್ಷ ರಾಯನ ಸಮ್ಮುಖಕ್ಕೆ ಹೋಗಿ ಕಾಣಿಕೆಗಳಂ ನೀಡಿ ಸ್ವಾಷ್ಟಾಂಗದಂಡಪ್ರಣಾಮವಂ ಮಾಡಿ ಈ ವೃತ್ತಾಂತವಂ ಬಿನ್ನೈಸಲು; ಪ್ರಜೆಗಳಂ ಕುಳ್ಳಿರೀಯೆಂದು ಪ್ರಿಯವಚನದಿಂ ಸತ್ಕರಿಸಿ ಅವರವರ್ಗೆ ಉಚಿತವಾದ ಪೀಠಗಳಲ್ಲಿ ಕುಳ್ಳಿರಿಸಿ ಗಂಧ ಕರ್ಪೂರ ತಾಂಬೂಲಾದಿಗಳಂ ಕೊಟ್ಟು ಸಂತೋಷಪಡಿಸಿ ಅವರಿಗೆ ತಾನು ಅಭಿಮುಖನಾಗಿ ಕುಳಿತು ಬಂದುವಾಕ್ಯವಂ ನುಡಿದನೂ, ಕೇಳಿರೈ ಪ್ರಜೆಗಳಿರಾ! ನೀವು ಅಂಜಬ್ಯಾಡಿ ಕುಚೋದ್ಯಕಾರದೇವತೆಗಳು ಅಗ್ನಿಯಂ ಅಡಗಿಸಿದರೆ ಏನಾಯಿತು, ಅವರ ಕುಹಕದಿಂದಾಗುವದೇನು, ನಾನೂ ಮುನ್ನ ದೇವತೆಗಳ ಹೊರಡಿಸಿ ಮಿಕ್ಕ ಅಗ್ನಿ, ವಾಯು, ಉದಕ, ಚಂದ್ರ, ಸೂರ್ಯ ಇವರನ್ನು ಹೊರಡಿಸದೆ ಇಷ್ಟಿಲ್ಲಯಿರಲಿ ಎಂದು ಉಪೇಕ್ಷೆಯಂ ಮಾಡಿಕೊಂಡು ಇದ್ದೆನು, ಈಗ ನೆನಪಾಯಿತೊ, ಈ ಅಗ್ನಿ ಕುಹಕವಂ ಮಾಡಿ ಹೋದಮೇಲೆ ಈ ಉಳಿದವರಿಂದ ಪ್ರಯೋಜನವೇನು, ಅಗ್ನಿ ಹೋದಮೇಲೆ ವಾಯುವೂ ಹೋಗಲಿ, ಈ ಜಡವಾದ ಉದಕದಿಂ ಪ್ರಯೋಜನವೇನು, ಉದಕವೂ ಹೋಗಲಿ ನಿಶಾಚರನಾದ ಕ್ಷಯಿಯಾದ ಕಳಂಕಿಯಾದ ಚಂದ್ರನಿಂದ ನಮಗೇನು ಕಾರ್ಯ, ಚಂದ್ರನೂ ಹೋಗಲಿ ನಾನು ತಪೋಬಲದಿಂದಾ ಬಾಹ್ಯಾಭ್ಯಂತರಗಳಿಂದಾ ಜಗತ್ಕಾರ್ಯವಂ ನಿರ್ವಹಿಸುವೆನು, ಮೇಘವಾಗಿ ಮಳೆಯಂ ಕರೆದು ಸಕಲಪೈರುಗಳನ್ನು ಸಲಹೇನು, ಉದಕರೂಪದಿಂದಾ ಸಕಲಜೀವರನ್ನು ಸಲಹೇನು, ವಾಯುರೂಪದಿಂ ಸಕಲಪ್ರಾಣಿಗಳಂ ರಕ್ಷಿಸುವೆನೂ, ನಮ್ಮ ಕುಲಕ್ಕೆ ಮೂಲಪುರುಷನಾದ ಜಗತ್ತಿಗೆ ಅಂತರ್ಯಾಮಿಯಾದ ಸೂರ್ಯನೂ ಯಿದ್ದರೆಯಿರಲೀ ಹೋದರೆ ಆತನೂ ಹೋಗಲೀ ಯಂದು ದಿವೋದಾಸರಾಯನೂ ನುಡಿದ ವಾಕ್ಯಾಮೃತದಿಂದಾ ಸಕಲಪ್ರಜೆಗಳೂ ಸಂತೋಷಚಿತ್ತರಾಗಿ ಮನಸ್ತಾಪಂಗಳಂ ಬಿಟ್ಟು ಪ್ರಜೆಗಳು ತಮ್ಮ ತಮ್ಮ ಸ್ಥಾವರಮನೆಗಳಿಗೆ ಹೋದರು, ಅನಂತರದಲ್ಲಿ ದಿವೋದಾಸರಾಯನು ತಂನ ತಪಸ್ಸಿನ ಯೋಗಮಹಿಮೆಗೆ ಅಸಾಧ್ಯವಾವುದೆಂದು ಅಗ್ನಿ ವಾಯು ಮೇಘ ಉದಕರೂಪಂಗಳಂ ಧರಿಸಿ ಜಗತ್ತಿನ ಕಾರ್ಯಂಗಳಂ ನಡಿಸಿ ನಿರ್ವಹಿಸುತ್ತಿರಲೂ, ದೇವತೆಗಳು ಕಂಡು ನಾವು ಮಾಡಿದ ಯತ್ನವೇನೂ ಪ್ರಯೋಜನವಿಲ್ಲದೆ ಹೋ

ಯಿತು. ಎದೆಯಲ್ಲಿ ಶೂಲಗಳುಪೂಡಿದಹಾಗೆ ಮಹಾಚಿಂತೆಯಿಂದಾ ತಮ್ಮ ತಮ್ಮ ಸ್ಥಾನಂಗಳಲ್ಲಿ ಇರುತಿರ್ದರೂಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವನ್ನು ವ್ಯಾಸರು ತನಗೆಬುದ್ಧಿಗಲಿಸಿದರೆಂದು ಸೂತಪುರಾಣೀಕನು ಶೌನಕಾದಿ ಋಷಿಗಳಿಗೆ ಪೇಳಿದನೆಂಬಲ್ಲಿಗೆ ಅಧ್ಯಾಯಾರ್ಥ.

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿಬಿರುದಾಂಕಿತರಾದಮಹೀಶೂರಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರೂ ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥ ದರ್ಪಣದಲ್ಲಿ ದಿವೋದಾಸರಾಯನ ಪ್ರತಾಪವರ್ಣನೆಎಂಬ ನಲವತ್ತಮೂರನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ. * ಶ್ರೀ * ಶ್ರೀ

ನಲವತ್ತ ಮೂರನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ನಲವತ್ತ ನಾಲ್ಕನೇ ಅಧ್ಯಾಯ.

:O:

ಪರಮೇಶ್ವರನು ಕಾಶೀ ಬಿಟ್ಟ ವಿಯೋಗ ಪ್ರಲಾಪ.

ಅನಂತರದಲ್ಲಿ ಕುಮಾರಸ್ವಾಮಿ ಅಗಸ್ತ್ಯಂಗೆ ಇಂತೆಂದನು, ಕೇಳೈ, ಅಗಸ್ತ್ಯನೆ! ಪರಮೇಶ್ವರನು ಸಕಲದೇವತಾಸ್ಥಾನವಾದ ರಮ್ಯವಾದ ಗುಹೆಗಳುಳ್ಳ ಮಂದರಪರ್ವತದಲ್ಲಿ ಇದ್ದವನಾಗಿಯೂ, ಶಿರಸ್ಸಿನಲ್ಲಿ ಚಂದ್ರನ ಧರಿಸಿ, ಶಿವನಾಗಿಯೂ. ಕಾಶೀಪಟ್ಟಣವಂಬಿಟ್ಟು ವಿಯೋಗದಿಂ ಪುಟ್ಟಿದ ತಾಪಹರನಾಗಿಯೂ ಮಲಯಜಗಂಧಾನುಲೇಪನಂಗೈಯಲು, ಧೂಳಿಗಳಾಗಿ ಕರಿಕಾಗಿ ಹೋಗತೊಡಗಿದವು. ತಾವರೆಪುಷ್ಪಮಾಲಿಕೆಗಳಂ ಧರಿಸಲು; ಒಣಗಿಘುಲಘನೆಕೆಂಡವಾಗ ತೊಡಗಿದವು. ಕ್ಷೀರಸಮುದ್ರದಲ್ಲಿ ಪುಟ್ಟಿದ ಪರಮೇಶ್ವರನ ಶಿರಸ್ಸಿನಲ್ಲಿಹ ಚಂದ್ರನು ಶೈತ್ಯಕರನಾದರೂ ಕೃಶನಾದನು. ಶಿರಸ್ಸಿನಲ್ಲಿಹ ಗಂಗೆಯು ಉಷ್ಣವಾದಳು. ದೇವತೆಗಳು ನಾನಾಶೈತ್ಯೋಪಚಾರಂಗಳಂ ಮಾಡಿದರೂ ಪರಿಹಾರವಾದುದಿಲ್ಲಾ. ಅಂಥಾ ಸಕಲ ಲೋಕಪತಿಯಾಗಿಯೂ, ತನ್ನ

ಸ್ವರೂಪವಾದಕಾಶಿಯವಿರಹಾಗ್ನಿಯಿಂತಾಪಪಟ್ಟನು. ಇದುಮಹಾಶ್ಚರ್ಯ? ಪರಮೇಶ್ವರನುಲಲಾಟಸ್ಥಳದಲ್ಲಿ ಇರುವನಯನಾಗ್ನಿಯಿಂ ತಾಪಪಟ್ಟವನಲ್ಲ. ಕೊರಳಲ್ಲಿ ಧರಿಸಿದ ಕಾಲಕೂಟವಿಷಜ್ವಾಲೆಯಿಂ ಸಂತಾಪಪಟ್ಟವನಲ್ಲ. ವಿಷಜ್ವಾಲೆ ಉಳ್ಳ ಸರ್ಪಾಭರಣದಿಂ ಸಂತಾಪಪಟ್ಟವನಲ್ಲ. ತನ್ನಸ್ಮರಣೆಯಂಮಾಡಿದ ಮಾತ್ರದಲ್ಲಿಯೇ ಮನೋವಾಕ್ಕಾಯ ಕರ್ಮಂಗಳಲ್ಲಿ ತ್ರಿವಿಧ ತಾಪಂಗಳಂ ಪರಿಹರಿಸಿದಂಥಾ ಪರಮೇಶ್ವರನು ಕಾಶಿಯ ವಿಯೋಗದಿಂ ತನಗೆಪುಟ್ಟಿದ ತಾಪಮಂ ಪರಿಹರಿಸಿಕೊಂಡವನಲ್ಲ. ಲಲಾಟದಲ್ಲಿ ಧರಿಸಿಕೊಂಡಿದ್ದ ಚಂದ್ರನ ಶೀತಕಿರಣಗಳಿಂ ಶಿರಸ್ಸಿನಲ್ಲಿ ಧರಿಸಿದ್ದಗಂಗೆಯ ಶೈತ್ಯದಿಂದಲೂ, ಅಭಿಷೇಕವಂಗೈದ ದಿವ್ಯಗಂಧೋದಕದಿಂ ತನಗೆಪುಟ್ಟಿದ ತಾಪಮಂ ಪರಿಹರಿಸಿಕೊಂಡವನಲ್ಲ. ಕಾಶಿಯಿಂದ ಬಂದವಾಯುವು ಶರೀರಮಂ ಸೋಂಕಲು, ತಾಪಹರವಾದಂತೆ ಏನು ಉಪಚಾರದಿಂದಲೂ ಶಾಂತವಾಗದೆ ಪರಮೇಶ್ವರನು ಕಾಶಿಯಂಬಿಟ್ಟು ವಿರಹಾಗ್ನಿಯಿಂದ ಅತ್ಯಂತಸಂತಾಪ ಪಟ್ಟವನಾಗಿ ಪಾರ್ವತೀದೇವಿಯಂ ಕರೆದು ಇಂತೆಂದನು—ಎಲೆದೇವಿ! ನೀನುಇಲ್ಲದಿದ್ದರೆ ತನ್ನಪ್ರಾಣಂಗಳು ಸುಖದಿಂದಿಹವು, ಅದೆಂತೆಂದರೆ—ಪೂರ್ವದಲ್ಲಿ ದಕ್ಷನಕುಮಾರಿಯಾದ ಸತೀದೇವಿಯರ ವಿಯೋಗದಿಂ ಹುಟ್ಟಿದ ವಿರಹತಾಪ ಬಹುಪ್ರಕಾರದಿಂ ಪರಿಹರವಾಯಿತು. ಈಗಕಾಶಿಯಂ ಬಿಟ್ಟ ವಿರಹತಾಪವೂ ನೀನುಸಮೀಪದಲ್ಲಿದ್ದರೂ ಬಿಡದೆಯಿದ್ದೀತು, ಎಲೈ ಕಾಶಿಯೇ! ಎನ್ನಸಕಲಾಂಗಕ್ಕೂ ನಿನ್ನ ಸಂಪರ್ಕದಿಂ ಸುಖಶೀತಳವೆಂತಾದೀತು, ಎಲೈ—ಸಕಲಪಾಪಸಂಹಾರಕವಾದ ಕಾಶಿಯೇ! ನಿನ್ನವಿಯೋಗದಿಂ ಪುಟ್ಟಿದ ಅಗ್ನಿಯು ಚಂದ್ರನಿಂಪಸರುವ ಅಮೃತೋದಕದಿಂದ ಹೆಚ್ಚಿದ ಅಗ್ನಿಯಂತೆ ಹೆಚ್ಚುತ್ತಾಯಿದ್ದೀತು, ಪೂರ್ವದಲ್ಲಿ ದಕ್ಷನಮಗಳ ವಿರಹಾಗ್ನಿಯು ಹಿಮವಂತನ ಮಗಳಾದ ನಿನ್ನಅಂಗಸಂಗದಿಂದ ಸುಖವಾಗಿ ಶಾಂತವಾಯಿತು. ಈಗ ಕಾಶೀಪಟ್ಟಣವಂ ನೋಡದೆ ಇದ್ದರೆ ಎನ್ನಶರೀರ ಹೋದಹೊರತಾಗಿ, ಈತಾಪಾಗ್ನಿಯಿಂದ ಕೃಶವಾಗಿ ಶಾಂತವಾಗದು. ಎಂದು ಮನಸ್ಸಿನಲ್ಲಿ ಚಿಂತೆಗೊಳುತ್ತಾ ಇರುವ ಪರಮೇಶ್ವರನ ನೋಡಿ ಪಾರ್ವತೀದೇವಿ ಇಂತೆಂದಳು:— ಎಲೈ ಸ್ವಾಮಿ! ಸಕಲಲೋಕ ಪಾಲಕನಾದ ನಿಮಗೆ ಸಮಸ್ತವೂ ಹಸ್ತಗತವಾಗಿಹುದು. ಅಂಥಾ ನಿಮಗೆ ವಿಯೋಗವೆಲ್ಲಿಯದು. ಬ್ರಹ್ಮನೂ, ವಿಷ್ಣುವೂ

ಭೂಮಿ, ಮೊದಲಾದಸಕಲವೂ ಸಮಸ್ತದೇವತೆಗಳೂ, ಅಷ್ಟಮೂರ್ತಿಯೂ ನಿಮ್ಮಸ್ವರೂಪವೂ, ನಿಮ್ಮ ಕೃಪಾದೃಷ್ಟಿಯಿಂದಾ ನಿಮ್ಮಸಾರೂಪ್ಯವಂ ಪಡೆವವರುಮೊದಲಾಗಿಯೂ,ತಾಪಪಡುವದಿಲ್ಲ.ನಿಮ್ಮಕೃಪಾದೃಷ್ಟಿಯಿಂ ತಪಸ್ಸು ಸಕಲೈಶ್ವರ್ಯಂಗಳು ಲಯವಾಗವು. ಅಂಥಾಸಕಲಸ್ವತಂತ್ರಿಯಾದ ನಿಮಗೆತಾಪವೆತ್ತಣದು. ಎಲ್ಲಿಯಾವರೂನೀವಿರಲು ನಿಮಗೆತಾಪವೆತ್ತಣದು. ಎಲೈ ತ್ರಿಣೇಶ್ವರನೆ! ನಿಮ್ಮನೇತ್ರಂಗಳಾದ ಸೂರ್ಯ, ಚಂದ್ರ, ಅಗ್ನಿಗಳು ಸಂತಾಪಬಡಿಸುವರಲ್ಲ. ಶಿರಸ್ಸಿನ ರೋಮಂಗಳಲ್ಲಿದ್ದ ಉದಕತೀರ್ಥವು ನಿಮಗೆಮಹಾಪ್ರಿಯವಾಗಿ ಯಿದ್ದಾವು. ಸರ್ಪಂಗಳುನಿಮ್ಮಭುಜಂಗಳುಮೊದಲಾದ ಅಂಗಗಳಲ್ಲಿ ಆಭರಣಗಳಾಗಿ ಇದ್ದಾವು. ನೀಲಕಂಠನಾದನಿಮಗೆ ಉಪಭಾಷೆಯಿಲ್ಲಾ, ನಿಮ್ಮವಾಮಾಂಗದಲ್ಲಿ ನಾನು ಇದ್ದೇನೆ. ಹೀಗೆಅತಿಸುಖವಾಗಿಯೂ, ನಿಮ್ಮಶರೀರವು ಏತಕ್ಕೆತಾಪಪಡುತ್ತಾಇದ್ದೀತು.ಎಂದು ದೇವಿಯರುನುಡಿಯಲು, ಕೇಳಿ, ಪರಮೇಶ್ವರನಿಂತೆಂದನು— ಎಲೈ ಪಾರ್ವತಿಯೇ! ತಾನುಕಾಶೀವಿಯೋಗದಿಂ ಭ್ರಮಿತನಾದೆನು. ಎನಲು ದೇವಿಯರು ತಾನುಚಿಕ್ಕಂದು ಮೊದಲಾಗಿ ವಾಸವಾಗಿರ್ದ ನಾನಾವಿಧಪುಣ್ಯಂಗಳನೀವ ಕಾಶೀಪಟ್ಟಣಕ್ಕೆ ಹೋಗುವಾಎಂದು ಮನಸ್ಸಿನಲ್ಲಿಇಚ್ಛೈಸಿ ಶ್ರೀಪರಮೇಶ್ವರಂಗೆ ಇಂತೆಂದು ಬಿನ್ನೈಸಿದಳು, ಎಲೈ ಸ್ವಾಮಿ! ಗಗನವಂ ಪವಿತ್ರಮಂಮಾಡಿದ ಉದಕವುಳ್ಳ ಮಹಾಪ್ರಳಯದಲ್ಲಿ, ನಿಮ್ಮತ್ರಿಶೂಲಾಗ್ರದಿಂ ಧರಿಸಲ್ಪಟ್ಟಹೃದಯಕಮಲಕೋಶದಂತೊಪ್ಪುವ ಕಾಶೀಪಟ್ಟಣಕ್ಕೆ ಹೋಗುವಭೂಮಿಯಲ್ಲಿ ಇದ್ದದಾದರೂ ಭೂಮಿಯಲ್ಲಿದ್ದಂಥಾ ಸಕಲಮುಕ್ತಿಕ್ಷೇತ್ರಂಗಳೊಳಗೆ ಅಧಿಕಶ್ರೇಷ್ಠವಾದ ಕಾಶೀಪಟ್ಟಣವಂ ಬಿಡಲಾಗಿ ಬಂದಮನೊವ್ಯಥೆಯು ಎನ್ನಜನ್ಮಭೂಮಿಯಂ ಬಿಟ್ಟಾಗಲೂಇಲ್ಲಾ. ಮರಣಜನ್ಮಪಾಪ ಭಯಂಗಳಿಲ್ಲದಂಥಾ ಕಾಶೀಕ್ಷೇತ್ರವನ್ನುಎಂದಿಗೆಕಂಡೇವೂ. ಲೋಕಂಗಳಲ್ಲಿ ಹೆಜ್ಜೆಹೆಜ್ಜೆಗೆ ಅನೇಕ ರಮ್ಯವಾಗಿ ಸಕಲ ಸೌಖ್ಯಂಗಳುಳ್ಳ ಸಾವಿರಸಂಖ್ಯೆ ಪುಣ್ಯಕ್ಷೇತ್ರಂಗಳಲ್ಲದೆ, ಕಾಶಿಗೆಸಮಾನವಾದ ಪುಣ್ಯಕ್ಷೇತ್ರಸಟ್ಟಣಂಗಳಂ ಕಾಣೆನು. ಸ್ವರ್ಗದಲ್ಲಿ ನಾನಾಸುಖಪ್ರದವಾದ ಅನೇಕಸ್ಥಾನಂಗಳುಂಟು. ಅವೆಲ್ಲವನ್ನು ನಿಮ್ಮಸ್ವರೂಪವಾದ ಕಾಶೀಪಟ್ಟಣವು ತೃಣೀಕರಿಸುತ್ತಾಇದ್ದೀತು. ಈ ಕಾಶಿಯಲ್ಲಿ ಯೋಗತಾಪವು ನಿಮ್ಮ

ನೊಬ್ಬರನ್ನೇ ಬಾಧಿಸಲಿಲ್ಲ. ನನ್ನನ್ನೂ ಬಾಧಿಸುತ್ತಾ ಇದ್ದೀತು. ಈ ತಾಪಪರಿಹಾರವಾಗಿ ಶಾಂತನಾಗುವದಕ್ಕೆ ಕಾಶೀಪಟ್ಟಣವಾಗಲೀ; ತನ್ನ ಜನ್ಮಭೂಮಿಯಾಗಲೀ, ಈ ಎರಡುಸ್ಥಳಹೊರತಾಗಿ ಶಾಂತವಾಗದು. ತಾನು ಸಕಲ ಪಾಪಪರಿಹರವಾದ ಶಾಂತಿಕರವಾದ ಕಾಶೀಪಟ್ಟಣಕ್ಕೆ ಬಂದಬಳಿಕ ತನ್ನ ಜನ್ಮಭೂಮಿಯಂಬಿಟ್ಟು ಬಂದ ಸಂತಾಪವಂ ಮರೆತೆನು. ಎಲ್ಲಿಯೂ ಶರೀರಗಳಿಗೆ ಪ್ರತ್ಯಕ್ಷವಾಗಿ ಮೋಕ್ಷವಿಲ್ಲ. ಸಕಲಸೌಖ್ಯವನ್ನೀವ ಮುಕ್ತಿರೂಪವಾದ ಕಾಶೀಪಟ್ಟಣವನ್ನು ಪ್ರತ್ಯಕ್ಷವಾಗಿ ಕಂಡೆನು. ಈ ಕಾಶೀಸ್ಥಳದಲ್ಲಿ ಶರೀರತ್ಯಾಗದಿಂದಲಾಗುವ ಮುಕ್ತಿಯು ಮತ್ತೊಂದುಸ್ಥಳದಲ್ಲಿ ಸಕಲಸಮಾಧಿಯಜ್ಞದಾನ ವ್ರತಂಗಳು ವೇದಾಧ್ಯಯನ ತಪಸ್ಸುಗಳಿಂದಲೂ ದೊರಕದು. ಕಾಶಿಯಲ್ಲಿ ಶರೀರತ್ಯಾಗವಂ ಮಾಡಿದವನ ಸುಖವು ಸ್ವರ್ಗಮರ್ತ್ಯಪಾತಾಳದಲ್ಲಿಯೂ ಇಲ್ಲ. ಎಲೈ ಶೂಲಪಾಣಿಯೇ! ಮೋಕ್ಷಲಕ್ಷ್ಮಿಯುಕ್ತವಾದ ಅವಿಮುಕ್ತಕ್ಷೇತ್ರದಲ್ಲಿ ಮನವನಿಲ್ಲಿಸಿ ವಾಸಮಾಡಿದವನು ಷಡಂಗಯೋಗನಿರತನು. ಕಾಶಿಯಲ್ಲಿ ಇದ್ದ ಪಶು ಪಕ್ಷಿ ಮೃಗಂಗಳು ಲೇಸುಬುದ್ಧಿಯುಂಟಾಗಿಯೂ, ಕಾಶೀಕ್ಷೇತ್ರಕ್ಕೆ ಹೋದ ಮನುಷ್ಯನೂ, ಅಧಮನೂ, ದೇವತೆಗಳೂ, ಮಣಿಕರ್ಣಿಕಾ ತೀರ್ಥದಲ್ಲಿ ಸ್ನಾನವಂ ಮಾಡಿ ನಿಮಗೆ ನಮಸ್ಕಾರವಂ ಮಾಡಿ ತ್ರೈಲೋಕ್ಯದಲ್ಲಿಯೂ ಈ ತೀರ್ಥಕ್ಕೆ ಸಮಾನವಿಲ್ಲಾ ಎಂದು ಕೊಂಡಾಡುತ್ತಾ ಇಹರು. ಈ ಮಣಿಕರ್ಣಿಕೆಯಲ್ಲಿ ಬ್ರಹ್ಮಸ್ವರೂಪವನ್ನೀವ ಮಹಾಪ್ರಯಾಣಕ್ಕೆ ಜ್ಞಾಪಕವಾದ ತಾರಕಶ್ರವಣವಹುದು. ಸೂರ್ಯ ಚಂದ್ರಾದಿಗಳು ಅಗ್ನಿಯು ನಿಗ್ರಹಿಸಲು ಶಕ್ಯವಲ್ಲದಂಥಾ ಬಹುಜನ್ಮಂಗಳಿಂ ಬಂದಂಥಾ ಸಂಸಾರವೂ ನಿವೃತ್ತಿಯಹುದು. ಮಣಿಕರ್ಣಿಕಾಸ್ಥಳವು ಮೋಕ್ಷಲಕ್ಷ್ಮಿಗೆ ಮೃದುವಾದ ಸುಷುಪ್ತಿಗೆ, ಜನ್ಮಭೂಮಿಯೋ! ಎಂಬಂಥಾ ಮಣಿಕರ್ಣಿಕಾತೀರ್ಥದಲ್ಲಿ ಮುಕ್ತರಾದವರು ಈ ಭೂಮಿಯ ಮಳಲು ಎಷ್ಟುಂಟೋ ಅಷ್ಟು ಎಂಬರೂ ಈ ಮರ್ಯಾದೆಯಲ್ಲಿ ಪಾರ್ವತೀದೇವಿಯು ಕಾಶೀಪಟ್ಟಣವನ್ನು ವರ್ಣಿಸಿ ಕಾಶೀಸ್ಥಳಕ್ಕೆ ಹೋಗುವಳಾಗಿ ಪರಮೇಶ್ವರಂಗೆ ಮತ್ತೂ ಬಿನ್ನೈಸಿದಳು—ಎಲೈ ಸ್ವತಂತ್ರನಾದ ಸ್ವಾಮಿಯೇ! ನಾವು ಕಾಶೀಪಟ್ಟಣಕ್ಕೆ ಹೋಗುವ ಪ್ರಯತ್ನವಂ ಮಾಡಬೇಕೆಂದು ಬಿನ್ನೈಸಿದಂಥಾ ದೇವಿಯ ವಾಕ್ಯಾಮೃತವಂ ಕೇಳಿ, ಪರಮೇ

ಶ್ವರನಿಂತೆಂದನು. ಎಲೇ ಪ್ರಿಯಳೆ! ನೀನು ಸ್ತುತಿಗೈದ ಕಾಶಿಯು ನಾಮಮಾತ್ರದಿಂದ ಎನ್ನದೇಹವು ಪರಿಹರವಾಗುತ್ತಾಯಿದ್ದೀತು. ಇನ್ನು ಕಾಶೀಪಟ್ಟಣಕ್ಕೆ ಹೋಗುವಯತ್ನವಂ ಮಾಡುವಾ ಎಂದರೆ, ಒಬ್ಬರು ಅನುಭವಿಸುವಂಥಾದ್ದನ್ನು ಬಲ್ಲೆನೆಂಬುದು ಎನ್ನವ್ರತವೂ, ಅದಂ ನೀನು ಬಲ್ಲೆ, ಈಗ ದಿವೋದಾಸರಾಯನು ತನ್ನ ತಪದಶಕ್ತಿಯಿಂದ ಸರ್ವದೇವತಾರೂಪಂಗಳಂತಾಳಿ ಧರ್ಮದಿಂ ರಾಜ್ಯವನ್ನಾಳುತ್ತಾ ಕಾಶೀಪಟ್ಟಣದಲ್ಲಿ ಇದ್ದಾನು. ಆರಾಯನು ಧರ್ಮದಿಂ ರಾಜ್ಯವನ್ನಾಳುತ್ತಾ ಇರಲು, ನಾವು ಪ್ರವೇಶಯತ್ನವು ಹ್ಯಾಗೆ? ಆ ಕಾಶೀಪಟ್ಟಣವಂ ಬಿಟ್ಟು ಅವನಂ ಹೊರಡಿಸುವದು ಹ್ಯಾಗೆ? ಲೋಕದಲ್ಲಿ ಅಧರ್ಮಿಗಳಾದವರಿಗೆ ವಿಘ್ನವಂ ಮಾಡಬಹುದು. ಆರಾಯನು ಮಹಾಧರ್ಮಿಷ್ಠನಾದ ಕಾರಣ ವಿಘ್ನಂಗಳಂ ಮಾಡಲು ಶಕ್ಯವಲ್ಲ. ಈ ಕಾರ್ಯವಂ ಸಾಧಿಸುವದಕ್ಕೆ ಆರಂ ಕಳುಹಲಿ? ಧರ್ಮಿಷ್ಠನಾದವನಿಗೆ ವಿಘ್ನಂಗಳಂ ಮಾಡಲು ತಮಿಗೆ ಬಹು ವಿಘ್ನಂಗಳಾಗುವವು. ತಪ್ಪು ಕಾಣದೆ ಆರಾಯನಂ ಹೊರಡಿಸಲು ಮನಸ್ಸು ಬಾರದು, ಅದು ಏಕೆಂದರೆ ಧರ್ಮಿಷ್ಠರಾಗಿ ಇರುವರಂ ತಾನು ರಕ್ಷಿಸಬೇಕು. ಆವನಾನೊಬ್ಬನು ಧರ್ಮಿಷ್ಠನಾಗಿ ಇರುವನೋ, ಅವನಂ ಮುಪ್ಪು ಮೃತ್ಯುವ್ಯಾಧಿ ಇವು ಮೊದಲಾದ ಉಪದ್ರವಂಗಳು ಬಾಧಿಸವು. ಈ ರೀತಿಯಲ್ಲಿ ವಿಚಾರದಿಂ ಚಿಂತೆಪಡುವ ಪರಮೇಶ್ವರನು ಗೂಢಕಾರ್ಯದಲ್ಲಿ ಒಂದು ಯೋಚನೆಯಂ ಕಂಡು, ಪ್ರೌಢರಾದ ಯೋಗಿನಿಯರ ಸಮೂಹವಂ ಕಳುಹಬೇಕೆಂದು ಪಾರ್ವತೀದೇವಿಯೊಡನೆ ಆಲೋಚನೆಯಂ ಮಾಡಿ, ಯೋಗಿನಿಯರಂ ಕರೆದು, ಪರಮೇಶ್ವರನಿಂತೆಂದನು. ಎಲೈ ಯೋಗಿನಿಯರಿರಾ! ನೀವು ಕಾಶೀಪಟ್ಟಣಕ್ಕೆ ಹೋಗಿ, ಧರ್ಮದಿಂ ರಾಜ್ಯವನ್ನಾಳುವ ದಿವೋದಾಸರಾಯನನ್ನು ನಿಮ್ಮ ಯೋಗಮಾಯಾಬಲದಿಂದ ಅಧರ್ಮಪ್ರವರ್ತಕನಂ ಮಾಡಿ ಆರಾಯನಂ ಪಟ್ಟಣವಂ ಬಿಟ್ಟು ಹೊರಡಿಸಿ ಕಾಶೀಪಟ್ಟಣವಂ ಶೀಘ್ರದಲ್ಲಿ ನಾವು ಪ್ರವೇಶವಂ ಮಾಡುವ ಯತ್ನಂಗಳಂ ಮಾಡಬೇಕೆಂದು ಬುದ್ಧಿಗಲಿಸಲು, ಯೋಗಿನಿಯರು ಪರಮೇಶ್ವರನ ಆಜ್ಞೆಯಂ ಶಿರಸಾವಹಿಸಿ ಮನೋವೇಗದಿಂ ಆಕಾಶಮಾರ್ಗದಿಂದತಿ ಸಂತೋಷಯುಕ್ತರಾಗಿ ಹೋಗುತ್ತಾ ತಮ್ಮೊಳು ತಾವು ಇಂತೆಂದರು. ಪರಮೇಶ್ವರನು ನಮ್ಮನ್ನು ಆನಂದಕಾನನಕೆ ಕಳುಹಿದನು, ನಾವು ಕೃತಾರ್ಥರಾದೆವು ಇಂದು ಪರಮೇಶ್ವರನು

ಕೃಪಾವೃಷ್ಟಿಯಿಂದ ನಮ್ಮನ್ನು ನೋಡಿದದು ಲಾಭವು. ಕಾಶೀಯುಪಟ್ಟಣವನ್ನು ನೋಡುವದು ಒಂದು ಲಾಭ. ಈ ಎರಡು ಲಾಭವು ದೊರಕಿತೆಂದು ಮಾತನಾಡಿಕೊಳ್ಳುತ್ತಾ ಅತಿಶೀಘ್ರದಿಂದ ಕಾಶೀಪಟ್ಟಣಕ್ಕೆ ಹೋದರು ಎಂದು ಕುಮಾರಸ್ವಾಮಿ, ಅಗಸ್ತ್ಯಂಗೆ ನಿರೂಪಿಸಿದನು ಎಂದು ವ್ಯಾಸರು ತನಗೆ ಬುದ್ಧಿಗಲಿಸಿದ ಅರ್ಥವಂ ಸೂತಪುರಾಣೀಕನು ಶೌನಕಾದಿಋಷಿಗಳಿಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ. * * *

ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀ ಕೃಷ್ಣರಾಜಬಡೆಯುರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದವಿರಚಿಸಿದ ಸ್ಕಂದಪುರಾಣೋಕ್ತಕಾಶೀಮಹಿಮಾರ್ಥದರ್ಪಣದಲ್ಲಿ ಪರಮೇಶ್ವರನುಕಾಶೀಬಿಟ್ಟು ವಿಯೋಗಪ್ರಲಾಪವೆಂಬು ನಲವತ್ತು ನಾಲ್ಕನೇಅಧ್ಯಾಯ ನಿರೂಪಣಕ್ಕಂ ಮಂಗಳಮಹಾ. * *

ನಲವತ್ತು ನಾಲ್ಕನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ನಲವತ್ತೈದನೇ ಅಧ್ಯಾಯ ಪ್ರಾರಂಭ.

:0:

ಅರವತ್ತು ನಾಲ್ಕು ಯೋಗಿನಿಯರು ಕಾಶಿಗೆ ಬಂದ ಪ್ರಸಂಗ

ಅನಂತರದಲ್ಲಿ ಕುಮಾರಸ್ವಾಮಿ ಅಗಸ್ತ್ಯಂಗೆ ಇಂತೆಂದನು— ಕೇಳ್ಳು, ಅಗಸ್ತ್ಯನೇ! ಯೋಗಿನಿಯರು ಆಕಾಶಮಾರ್ಗದಲ್ಲಿ ಬರುತ್ತಾ ಮುಂದೆಅತಿಕಾಂತಿಯಂತೋರ್ಪ ಕಾಶೀಪಟ್ಟಣವಂಕಂಡರೆ, ಬಳಲಿಬಂದ ಪಥಿಕರನು ಇಲ್ಲಿಬನ್ನಿ ಎಂದು ಕರೆಕರೆವವೊಲು, ಚಪಲಚಿತ್ರಧ್ವಜ ಪತಾಕೆಗಳಿಂ ಅತಿರಮ್ಯದಿಂದೊಪ್ಪುವ ಉಪ್ಪರಿಗೆಗಳಲ್ಲಿ ಕೆತ್ತಿದನಾನಾವಿಧ ದಿವ್ಯಮಾಣಿಕ್ಯದ ಕಾಂತಿಗಳಿಂ ಆಕಾಶದಂತೆ ಇಂದ್ರಚಾಪದಿಂ ತೋರ್ಪಟ್ಟಂಥಾ ಅತಿರಮ್ಯವಾದ ಕಾಶೀಪಟ್ಟ

ಣವನ್ನು ಯೋಗಿನೀಗಣವು ದೂರದಿಂದಲೇಕಂಡು, ನಮ್ಮನೇತ್ರಗಳಿಗೆ ಇಂದುಸಫಲವಾಯಿತೆಂದು ಸಂತೋಷದಿಂ ತಮ್ಮತಮ್ಮ ದಿವ್ಯಸ್ವರೂಪಗಳಂ ಮರೆಸಿಕೊಂಡುನಾನಾವೇಷಧಾರಿಗಳಾಗಿಕಾಶೀಪಟ್ಟಣವಂಪ್ರೊಕ್ಕರದೆಂತೆಂದರೆ,— ಯೋಗಶಾಸ್ತ್ರಪ್ರವೀಣೆಯರಾಗಿ ಸವೋಪವಾಸಿಗಳಾಗಿ ಬಣ್ಣಗಾರಸ್ತ್ರೀಯರಾಗಿ ನಾಯಿಂದಗಿತ್ತಿಯರಾಗಿ ವೈದ್ಯವಮಾಡುವರಾಗಿ ವೇಶ್ಯಸ್ತ್ರೀಯರಾಗಿ ಬೆಹರಗಿತ್ತಿಯರಾಗಿ ಮಕ್ಕಳನಾಡಿಸುವರಾಗಿ ದಾಸಿಯರಾಗಿ ದಾದಿಯರಾಗಿ ಪಾತ್ರವಮಾಡುವರಾಗಿಮರ್ದಳೆಯ ನುಡಿಸುವರಾಗಿ ತಾಳವನ್ನುಡಿಸುವರಾಗಿ ವೀಣೆಯನುಡಿಸುವರಾಗಿ ಕೊಳಲನೂದುವಳಾಗಿ ಪರಿಹಾಸ್ಯವಮಾಡುವಳಾಗಿ ಮುತ್ತಿನಮಣಿಯಂಪೋಣಿಸುವಳಾಗಿಪರಿಮಳದ್ರವ್ಯಂಗಳಂಮಾರುವಳಾಗಿ ಪಗಡೆಯನಾಡುವಳಾಗಿ ಚತುರಂಗವನಾಡುವಳಾಗಿ ನಾನಾವಿದ್ಯವನ್ನುಕಲಿಸುವಳಾಗಿ ಅಂಗಳವನ್ನಲಂಕರಿಸುವಳಾಗಿ ದೊಂಬಿತ್ತಿಯಾಗಿ, ಗಣೆಯನೇರಿ ಸುಳಿಘೂಳಿಯಂತೆ, ತ್ರಿಪುರನಕೊಂಬಗಳಾಗಿ ಕಪಿಚೇಷ್ಟೆಯಂ ಮಾಡುವಳಾಗಿ ಅಗ್ನಿಸ್ತಂಭ, ಜಲಸ್ತಂಭ, ವಾಕ್ಯಸ್ತಂಭಗಳ ಕಲಿಸುವಳಾಗಿ, ಖೇಚರಗಮನವಂ ಕಲಿಸುವಳಾಗಿ ಅದೃಶ್ಯಕರಣವಿದ್ಯವಂ ಕಲಿಸುವಳಾಗಿ ಅತ್ಯಂತಸೌಂದರ್ಯದಿಂ ಪ್ರಾಯದಪುರುಷರ ಒಲಿಸಿ, ಮೋಸಗೊಳಿಸುವ ಬೇಡಿದವಸ್ತುವ ಸೀವವಳಾಗಿ, ಜ್ಯೋತಿಷಶಾಸ್ತ್ರವಂ ಬಲ್ಲವಳಾಗಿ ಪ್ರತ್ಯಕ್ಷಫಲಗಳಂ ತೋರಿಸುವಳಾಗಿ ಯೋಗಿನಿಯರು, ಕಾಶೀಪಟ್ಟಣದಲ್ಲಿ ಅರಮನೆಗಳು, ನಾನಾಮನೆಗಳು ಮೊದಲಾದ ಠಾವಿನಲ್ಲಿ ಪ್ರವೇಶವಂಮಾಡಿ ಒಂದುವರುಷದ ಪರಿಯಂತರವೂ ಸಕಲಮಾಯೆಗಳಂಕಲಿಸಿ ಸಂಚಾರವಂಮಾಡಿ, ಆರಾಯನಲ್ಲಿಯೂ, ಪ್ರಜೆಗಳಲ್ಲಿಯೂ, ಲೇಶಮಾತ್ರ ಚಂಚಲಚಿತ್ತವಂ ಕಾಣದೆ, ಯೋಗಿನೀಗಣವೆಲ್ಲವೂ ಬಂದುಗೂಡಿ ತಮ್ಮೊಳು ತಾವಿ ತೆಂದರು. ನಾನಾಮಾಯೆಗಳಮಾಡಿದರೂ ಕೂಡ ಈ ಪಟ್ಟಣದವರು ನಮ್ಮ ಮಾಯೆಗಳಿಗೆ ಒಳಗಾಗರು. ನಾವು ಪರಮೇಶ್ವರನಕ್ಕೈಯ್ಯ ಬಹುಮಾನದಿಂ ಕಳುಹಿಸಿಕೊಂಡುಬಂದುಕಾರ್ಯವಂ ಸಾಧಿಸದೆ ಒಡೆಯನಮುಂದಕ್ಕೆ ಹ್ಯಾಗೆಹೋಗಬೇಕು. ಒಡೆಯ ಕೋಪಿಸಿದರೆ ಜೀವಹಾನಿ. ಈ ಕಾಶೀಪಟ್ಟಣವಂಬಿಟ್ಟರೆ ಚತುರ್ವಿಧ ಪುರುಷಾರ್ಥಹಾನಿ. ಪರಮೇಶ್ವರಂಗೆ ಈ ಕಾಶೀಪಟ್ಟಣವು ಪ್ರಾಣಪದಕವಾದದ್ದು. ಕೆಲವುಕಾಲಕ್ಕಾದರೂ

ಬಂದಾನಲ್ಲದೆಈಪಟ್ಟಣವಂ ಬಿಟ್ಟುಇರನು. ನಾವುಇಲ್ಲಿವಾಸವಂಮಾಡಿಕೊಂ ಡಿರಲು, ಪರಮೇಶ್ವರನು ಬಂದಾಗ ನಮ್ಮ ಅಪರಾಧಂಗಳಂ ಮನ್ನಿಸಿಯಾನು. ನಾವು ಇಲ್ಲಿಯೇ ವಾಸವಾಗಿರಬೇಕೆಂದು ವಿಚಾರಿಸಿಕೊಂಡು ಲೋಕಂಗಳಂ ಸಂಚರಿಸುವರಾದರು. ಸಂಚಾರವಂಬಿಟ್ಟು ಕಾಶೀವಾಸದಲ್ಲಿಯೇ ಇದ್ದರು. ಆ ದಕಾರಣ ವಿವೇಕಿಯಾದವರು ನಾನಾಪಾಪದ್ರೋಹಂಗಳನ್ನು ಮಾಡಿದವರಾದರೂ, ಕಾಶೀವಾಸಿಯಾಗಿರಲು, ಪರಮೇಶ್ವರನು ಶತ ಅಪರಾಧವನ್ನು ಕ್ಷಮಿಸಿ ಮೋ ಕ್ಷವನ್ನೀವನು ಎಂದು ಅಗಸ್ತ್ಯಂಗೆ ಕುಮಾರಸ್ವಾಮಿ ಪೇಳಲು, ಅಗಸ್ತ್ಯನಿಂ ತೆಂದನು. ಎಲೈ ಕುಮಾರಸ್ವಾಮಿಯೇ! ಆಯೋಗಿನಿಯರ ಪೆಸರುಗಳನ್ನೂ, ಅವರಪೂಜಾಕಾಲವಾವುದೂ, ಪೂಜೆಯಮಾಡಲು ಅವರುಕೊಡುವ ಫಲವೇ ನು, ಅವರು ಇರುವಸ್ಥಳವಾವುದು, ಇವಂಬುದ್ಧಿಗಲಿಸಬೇಕೆನಲು, ಕುಮಾರ ಸ್ವಾಮಿ ಇಂತೆಂದನು. ಕೇಳೈ, ಅಗಸ್ತ್ಯನೇ! ಹೆಸರುಕೇಳಿದಮಾತ್ರದಲ್ಲಿ ಸಕ ಲಪಾಪ ಪರಿಹರವಾಗಿ, ಸರ್ವಭಯನಿವಾರಣವಾದಂಥಾ ಯೋಗಿನಿಯರ ನಾ ಮಧೇಯಂಗಳಂ ಪೇಳುವೆನುಕೇಳು.ಪೆಸರುಗಳುಯಾವವೆಂದರೆ:—ಗಜಾನನೆ, ಸಿಂಹಮುಖೀ, ಗೃಧ್ರಾಸ್ಯೆ, ಕಾಕತುಂಡಿಕೆ, ವೃಷಗ್ರೀವೆ, ವಾರಾಹೀ, ಶರಭಾ ನನೆ, ಉಲೂಕಿಕೆ, ಶಿವಾರಾವೆ, ಮಯೂರಾನನೆ, ವಿಕಟಾನನೆ, ಅಷ್ಟವಕ್ತ್ರೀ ಕುಬ್ಜೆ, ವಿಕಟಲೋಚನೆ, ಶುಷ್ಕೋದರೀ, ಲಲಾಟಜಿಹ್ವೆ, ಸುದಂಷ್ಟ್ರಿ, ವಾನರಾ ನನೆ, ವೃತ್ತಾಕ್ಷಿ, ಕೇತರಾಕ್ಷೀ, ಬೃಹತ್ತುಂಡೆ, ಸುರಪ್ರಿಯೆ, ಕಪಾಲಹಸ್ತೆ, ರ ಕ್ತಾಕ್ಷಿ, ಶುಕೆ, ಶಯನೀ, ಕಪೋತಕೆ, ಪಾಶಹಸ್ತೆ,ಪ್ರಚಂಡೆ, ಚಂಡವಿಕ್ರಮೆ, ಶಿಶುಘ್ನೆ, ಪಾಪಹಂತ್ರೀ, ಕೌಮುದೀ, ದೀಪಮೋಹಿನೀ, ರಸೋದಯೆ, ಗರ್ಭಾ ಕ್ಷೆ, ಶವಹಸ್ತೆ,ಆಂತ್ರಮಾಲಿನೀ,ಸ್ಥೂಲಕೇಶಿ, ಬೃಹತ್ಕುಕ್ಷೀ, ಸರ್ಪಾಸ್ಯೆ, ಪ್ರೇ ತವಾಹಿನೀ, ಮದಸೂಕರೆ, ಕ್ರೌಂಚೆ, ಮೃಗಶೀರ್ಷೆ, ವೃಕಾನನೆ, ದ್ವಿಯುಕಾ ಸ್ಯೆ, ಧೂಮನಿಶ್ವಾಸೆ, ವ್ಯೋಮೈಕಚರಣೆ, ಊರ್ಧ್ವಮುಖೀ, ತಾಪಿನೀ, ಶೊ ಷಿಣೀ, ವೃಷ್ಟೀ, ವಿದ್ಯುತ್ಪ್ರಭೆ, ಕೋಟಿಯುಜ್ಞೋ, ಸ್ಥೂಲನಾಸಿಕೆ, ಬಾಲಾಸ್ಯೆ, ಮಾರ್ಜಾಲಿನೀ. ಅಷ್ಟರಾಶೀ, ಕಾಮಾಕ್ಷೀ ಎಂಬ ಪುಣ್ಯಪ್ರದವಾದ ಅರವತ್ತು ನಾಲ್ಕು ಯೋಗಿನಿಯರು, ಈನಾಮಂಗಳಂ ಪ್ರತಿದಿನವೂ ತ್ರಿಕಾಲದಲ್ಲಿಯು. [illegible] ಪಿಡಿಯುಹುದು. ರಾಜಭಯ ಚೋರಭಯ ಸಕ

ಬಂಧನಾದಿಉಪದ್ರವು ಪರಿಹರ. ಶಾಕಿನೀ, ಢಾಕಿನೀ,ಕೂಶ್ಮಾಂಡ,ಬ್ರಹ್ಮರಾಕ್ಷಸ ಮೊದಲಾದ ಗ್ರಹಂಗಳಬಾಧೆ ಪರಿಹರ. ಶಿಶುರಕ್ಷೆ, ಗರ್ಭರಕ್ಷೆ, ರಣದಲ್ಲಿಜಯ, ವಾದದಲ್ಲಿಜಯ,ನೆನದಕಾರ್ಯಕ್ಕೆ ಗೂಡುವದು. ಈಯೋಗಿನಿಯರ ಮಂತ್ರವ ಜಪಿಸಲು, ಶೀಘ್ರದಿಂದ ನೆನದಕಾರ್ಯಸಿದ್ಧಿಯಹುದು. ಅಷ್ಟೈಶ್ವರ್ಯಬಾಹುದು. ಆಶ್ವೀಜಶುದ್ಧಪಾಡ್ಯಮಿ ಆರಭ್ಯ ನವಮಿಪರ್ಯಂತರ ಒಂಭತ್ತುದಿವಸ ಬಲಿಪೂಜೆ ಹೋಮಂಗಳಂಮಾಡಲು ಅಷ್ಟಸಿದ್ಧಿ. ಕಾರ್ತೀಕಬಹುಳಚತುರ್ದಶೀ, ಅಮಾವಾಸ್ಯೆಗಳಲ್ಲಿ ಉಪವಾಸಪೂಜೆ ಜಾಗರಣವಂಮಾಡಿ, ಪ್ರಣವಪೂರ್ವಕವಾಗಿ ನಮಃಶಬ್ದಕಡೆಯಾಗಿ, "ಓಂ ಗಜಾನನಾಯೈನಮಃ"ಎಂದು, ನಾಮವೊಂದಕ್ಕೆ ನೂರೆಂಟುಬಾರಿ ತುಪ್ಪಗುಗ್ಗಳವಂಯುರದಹಣ್ಣಿನಪ್ರಮಾಣಉಂಡೆಗಳಂಮಾಡಿ ರಾತ್ರೆ ಹೋಮಂಗಳಂಮಾಡಲು, ಇಷ್ಟಕಾಮಾರ್ಥಸಿದ್ಧಿ. ಚೈತ್ರಮಾಸಪಾಡ್ಯದಲ್ಲಿ ಈ ಯೋಗಿನಿಯರ ಯಾತ್ರೆಯಂ ಮಾಡಲು,ನಿರ್ವಿಘ್ನದಿಂದ ಕಾಶೀವಾಸವು ದೊರಕೊಂಬುದು. ಕಾಶಿಯಲ್ಲಿದ್ದ ಈ ಯೋಗಿನಿಯರ ಗಣಂಗಳ ಯಾತ್ರೆಯಂಮಾಡದಿರಲು ಕಾಶಿಯಲ್ಲಿ ಇವರು ಇರಗೊಡರು ಈ ಅರವತ್ತನಾಲ್ಕುಮಂದಿ ಯೋಗಿನಿಯರು ಮಣಿಕರ್ಣಿಕಾತೀರ್ಥಕ್ಕೆ ಪಶ್ಚಿಮಭಾಗದಲ್ಲಿ ಇಹರು. ಅವರಂಕುರಿತು ನಮಸ್ಕಾರವಂ ಮಾಡಲು ಸರ್ವವಿಘ್ನಹರವೆಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನೆಂದು, ವ್ಯಾಸರುತನಗೆ ಬುದ್ಧಿಗಲಿಸಿದ ಅರ್ಥವನ್ನು, ಸೂತಪೌರಾಣೀಕನು ಶೌನಕಾದಿಋಷಿಗಳಿಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ. * * *

ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದವಿರಚಿಸಿದಸ್ಕಂದಪುರಾಣೋಕ್ತಕಾಶೀ ಮಹಿಮಾದರ್ಪಣದಲ್ಲಿ ಅರವತ್ತುನಾಲ್ಕುಮಂದಿ ಯೋಗಿನಿಯರು ಕಾಶಿಗೆಬಂದಪ್ರಸಂಗ ಎಂಬನಾಲ್ವತ್ತೈದನೇ ಅಧ್ಯಾಯಾರ್ಥ ನಿರೂಪಣಕ್ಕಂಮಂಗಳಮಹಾ.*

ನಲವತ್ತೈದನೇ ಅಧ್ಯಾಯ ಸಂಪೂರ್ಣಂ.

ಶ್ರೀ ವಿಶ್ವೇಶ್ವರಾಯನಮಃ

ನಲವತ್ತಾರನೇ ಅಧ್ಯಾಯ.

:o:

ಸೂರ್ಯನ ಪ್ರಸಂಗ.

ಅನಂತರದಲ್ಲಿ ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು.—ಕೇಳೈ ಅಗಸ್ತ್ಯನೇ! ಪರಮೇಶ್ವರನು ಯೋಗಿನಿಯರು ಕಾಶೀಪಟ್ಟಣಕ್ಕೆ ಹೋಗಿ ತಿರಿಗಿ ಬಾರದಿರಲು, ಮತ್ತು ಕಾಶಿಗೆ ರಾಯನಾದ ದಿವೋದಾಸರಾಯನ ವೃತ್ತಾಂತವಂ ತಿಳಿಯಲೋಸ್ಕರವಾಗಿ ಸೂರ್ಯನಂ ಕರೆದು ಪರಮೇಶ್ವರನಿಂತೆಂದನು. ಎಲೈ ಸೂರ್ಯನೇ! ನೀನು ಶೀಘ್ರದಿಂದ ಕಾಶೀಪಟ್ಟಣಕ್ಕೆ ಹೋಗಿ, ಧರ್ಮಪರನಾದ ದಿವೋದಾಸರಾಯನನ್ನು ಧರ್ಮವಿರುದ್ಧದಿಂದ ಆತನಂ ತಿರಸ್ಕರಿಸದೆ ಆತನನ್ನು ಉಪಾಯಮಾರ್ಗದಿಂದ ಹೊರಮೊಡಿಸುವದು. ಅದ್ಯಾಕೆಂದರೆ, ಧರ್ಮಿಷ್ಟನಾದವಂಗೆ ಅವಮಾನವಂ ಮಾಡಿದರೆ ಅಮಿತನಗಹುದು. ಆ ರಾಯನು ಧರ್ಮದಲ್ಲಿ ನಡೆದವನಲ್ಲದೆ ಅಧರ್ಮದಲ್ಲಿ ನಡೆದವನಲ್ಲಾ. ಅವನಾವನೊಬ್ಬನು ಕಾಮ ಕ್ರೋಧ ಮದ ಮೋಹ ಮತ್ಸರಂಗಳೆಂಬ ಅರಿಷಡ್ವರ್ಗಜಯು ಉಂಟಾಗಿ ಇಹನೋ, ಅವನಂ ಸಾಧಿಸುವದು ಅಶಕ್ಯವು. ಆದಕಾರಣ ನೀನು ನಾನಾ ಉಪಾಯಗಳಿಂದ ಆ ರಾಯನ ಗುಣವಂ ಶೋಧಿಸಿ, ಕಾಮಕ್ರೋಧಾದಿ ದುರ್ಗುಣಂಗಳಂ ಕಲಸಿ ಹೊರಮೊಡಿಸು. ಆ ರಾಯಂಗೆ ಎಷ್ಟು ಕಾಲ ಧರ್ಮಬುದ್ಧಿಗಳಿಹವೋ ಅನ್ನಬರ ಕಾಲವೂ ವಿಘ್ನಂಗಳಿಲ್ಲಹವು. ನೀನು ಸಕಲಪ್ರಾಣಿಗಳ ಬಾಹ್ಯಾಭ್ಯಂತರ ಚರಿತ್ರೆಗೆ ಸಾಕ್ಷಿಯಾದ ಕಾರಣ ಜಗಚ್ಚಕ್ಷುವೆನಿಸಿಕೊಂಡೆ. ನೀನು ಶೀಘ್ರದಿಂ ಪೋಗು. ನೀನು ಹೋದ ಕಾರ್ಯಸಿದ್ಧಿಯಾಗದೆ? ಇಂತೆಂದು ಬುದ್ಧಿಗಲಿಸಿದ ಪರಮೇಶ್ವರನ ಆಜ್ಞೆಯಂ ಶಿರಸ್ಸಿನಲ್ಲಿ ವಹಿಸಿ, ವೃದ್ಧಬ್ರಾಹ್ಮಣರೂಪವಂ ಧರಿಸಿ ಕಾಶೀಪಟ್ಟಣಕ್ಕೆ ಅಭಿಮುಖವಾಗಿ ಗಗನಮಾರ್ಗದಿಂ ಪೋಪ ಸೂರ್ಯನು ಕಾಶೀಪಟ್ಟಣವಂ ನೋಡಬೇಕೆಂಬ ಲವಲವಿಕೆಯಿಂದ ಸಾವಿರ ಕಿರಣಂಗಳು ಸಾಲದೆಂದು ಬಹಳ ಕಿರಣಂಗಳಂ ಅಪೇಕ್ಷೆಯಂ ಮಾಡುತ್ತಾ ಆಕಾಶದಲ್ಲಿ ಪೋಪ ಸೂರ್ಯಂಗೆ ಹಂಸನೆಂಬ ಹೆಸರು ಸಫಲವಾಯಿತು. ಅನಂತರದಲ್ಲಿ ಸೂರ್ಯನು ಕಾಶೀಪಟ್ಟಣವಂ ಪೊಕ್ಕು ಸಕಲದೊಳು ಹೊರಗೆ ಸಂಚಾರವಂ ಮಾಡಿಕೊಂಡು ಆ ರಾಯನಲ್ಲಿ ಅಣುಮಾತ್ರವೂ ಧರ್ಮ

ಹಾನಿಯಂ ಕಾಣಲಿಲ್ಲವಾಗಿ, ಮತ್ತೂ ಏನುಮಾಡಿದನೆಂದರೆ, ಅತಿಥಿಯಾಗಿ ದುರ್ಲಭವಸ್ತುವಬೇಡಿ ಆತನಿಂದ ನಿರ್ದಯಗುಣವಂಕಂಡುದಿಲ್ಲವಾಗಿ, ಮತ್ತೂ ಯಾಚಕನಾಗಿ ದೀನನಾಗಿ, ಶೀನಭಾಗನಾಗಿ ವೇದಬಾಹ್ಯನಾಗಿ ವೇದನಿಂದೆಕರ್ತಂಗಳಂ ಪ್ರತಿವಾದಿಸುವನಾಗಿ ಕೆಲವುಪ್ರತ್ಯಕ್ಷಂಗಳಾದ ಚೋದ್ಯಂಗಳಂತೋರಿಸಿ ಜಟಾಧಾರಿಯಾಗಿ ದಿಗಂಬರನಾಗಿ ಹಾವಾಡಿಗನಾಗಿ ಪಾಷಂಡಿಯಾಗಿ ಬ್ರಹ್ಮಜ್ಞಾನಿಯಾಗಿ ಇಂದ್ರಜಾಲ ಮಹೇಂದ್ರಜಾಲಕನಾಗಿ, ನಾನಾವಿಧ ವ್ರತೋಪದೇಶಂಗಳಂ ಪತಿವ್ರತಾ ಸ್ತ್ರೀಯರ್ಗೆ ಮನಸ್ಸು ಚಲಿಸುವಂತೆ ಚಂಚಲವಂಪುಟ್ಟಿಸಿ, ಕಾಪಾಲಿಕನಾಗಿಸಕಲವೇದಶಾಸ್ತ್ರಂಗಳಂ ಬಲ್ಲ ಬ್ರಾಹ್ಮಣನಾಗಿ ಶಿಲ್ಪಿಯಾಗಿ ರಸವಾದಿಯಾಗಿ ವೀರಕ್ಷತ್ರಿಯನಾಗಿ ವೈಶ್ಯನಾಗಿ, ಶೂದ್ರನಾಗಿ ಬ್ರಹ್ಮಚಾರಿಯಾಗಿ ಗ್ರುಹಸ್ಥನಾಗಿ ವಾನಪ್ರಸ್ಥನಾಗಿ ಯತಿಯಾಗಿ ಕಾಮಿಯಾಗಿ ಸರ್ವವಿದ್ಯಾವಿಶಾರದನಾಗಿ ಸರ್ವಜ್ಞನಾಗಿ ಈ ರೀತಿಯಲ್ಲಿ ಸೂರ್ಯನು ಬಹು ಮಾಯಾರೂಪಂಗಳಂ ಸಂಚಾರಮಾಡಿ, ಆ ದಿವೋದಾಸರಾಯನಲ್ಲಿಯೂ ಪಟ್ಟಣದಪ್ರಜೆಪರಿವಾರಸ್ತ್ರೀಯರಲ್ಲಿಯೂ ಲವಲೇಶವಾದರೂಛಿದ್ರವಂಕಾಣದೆಸುಯ್ದುತಾನುಬಂದಕಾರ್ಯವು ವ್ಯರ್ಥವಾಯಿತಲ್ಲಾ ಎಂದು, ಸೂರ್ಯನು ತನ್ನನ್ನುತಾನೇನಿಂದಿಸಿಕೊಂಡು, ಇಂತೆಂದನು. ಅದೆಂತೆಂದರೆ,—ಸಕಲ ಅಪಕೀರ್ತಿಕರವಾದ ಪರಾಧೀನತ್ವಂ ಸುಡಬೇಕು, ತಿರುಗಿಮಂದರಾದ್ರಿಗೆಪೋಪೆನೆಂದರೆ, ಸ್ವಾಮಿಕಾರ್ಯವಂಮಾಡದೆ ಹೋಗಬಾರದು. ಆದರೂ ಪರಮೇಶ್ವರನ ಸಂಮುಖಕ್ಕೆಹೋಗಲು, ಕಾರ್ಯವಸಾಧಿಸದೆ ಬಂದನೆಂದು ಕೋಪದಿಂದ ಪೂರ್ವದಲ್ಲಿ ಮನ್ಮಥನನೋಡಿದಂತೆ ನೋಡಿದರೆ,ತನ್ನನ್ನೂ ಪಿತಾಮಹನು ಜಯಿಸಿಕೊಳ್ಳಲಾರನು. ಆದಕಾರಣದಿಂದ ಸ್ವಾಮಿಕಾರ್ಯವಂ ಮಾಡಲಾರದಪಾಪಕ್ಕೆ,ಕಾಶೀವಾಸವೇ ಪ್ರಾಯಶ್ಚಿತ್ತವು. ಅದ್ದರಿಂದನಾನು ಇಲ್ಲಿಯೇವಾಸವಾಗಿಹೆನು,ನಾನು ದಿವೋದಾಸರಾಯನಲ್ಲಿ ಬುದ್ಧಿಪೂರ್ವಕವಾಗಿ ಪಾಪವಂಕಲ್ಪಿಸಬಾರದು. ಮೊದಲು ಪರಮೇಶ್ವರನು ಧರ್ಮವನ್ನೇರಕ್ಷಿಸಬೇಕೆಂದು ಶಿಕ್ಷಿಸಿಕಳುಹಿದನು. ಹಾಗೆ ಇಹುದಲ್ಲ, ತನ್ನ ದೇಹವನ್ನಾದರೂವಂಚಿಸಿ ಧರ್ಮವನ್ನೇಮಾಡಬೇಕು. ಅರ್ಥಕಾಮಂಗಳು ಸಂರಕ್ಷಣೆಯಿಂದಪ್ರಯೋಜನವಿಲ್ಲ ಕಾಮವರಕ್ಷಿಸಬೇಕಾದರೆ, ಪರಮೇಶರನು ಕಾಮನ ಅಸಂಗವಮಾಡಿದ ಕಾರಣವೇನು? ಕೆಲವ

ಧು ಅರ್ಥವನ್ನೇ ರಕ್ಷಿಸಬೇಕೆಂಬರು, ಅದು ಪೂರ್ವಸಮ್ಮತವಲ್ಲ, ಶಿಬಿಮೊದಲಾ
ದರಾಯುಕರೂ ದಧೀಚಿ ಮೊದಲಾದ ಬ್ರಾಹ್ಮಣರು ತಮ್ಮತಮ್ಮ ಶರೀರಂಗಳಂ ವೆ
ಚ್ಚಿಸಿ ಧರ್ಮವನ್ನೇ ರಕ್ಷಿಸಿಕೊಂಡರು. ನಾನುಮಾಡುವ ಧರ್ಮವೇನೆಂದರೆ—ಕಾ
ಶೀಕ್ಷೇತ್ರವಂ ಬಿಡದಿಹುದೇ ಪರಮಧರ್ಮವು. ಪರಮೇಶ್ವರನು ಎನ್ನ ಮೇಲೆ ಕೋ
ಪಿಸಿಕೊಂಡರೂ ಈ ಕಾಶೀಕ್ಷೇತ್ರವಾಸವೇ ರಕ್ಷಿಸೀತು. ಕೈಯ್ಯಲ್ಲಿರ್ದ ರತ್ನ
ವಂ ಬಿಟ್ಟು ಗಾಜಿನ ಮಣಿಯನರಸಿದಂತೆ ಕೈಯ್ಯಲ್ಲಿದ್ದ ಮೃಷ್ಟಾನ್ನವಂ ಬಿಟ್ಟು
ಭಿಕ್ಷಕ್ಕೆ ಪೋಪಂತೆ ದೈವವಶದಿಂ ದೊರಕಿದ ಕಾಶೀಕ್ಷೇತ್ರವಾಸವಂ ಬಿಟ್ಟು ಪೋ
ದವರುಂಟೆ? ಜನ್ಮಾಂತರದಲ್ಲಿ ಪುತ್ರಮಿತ್ರಾದಿಗಳು ದೊರಕುವರು, ಕಾಶೀವಾ
ಸ ಬಂದೇ ದೊರಕದು, ತ್ರೈಲೋಕ್ಯವನ್ನು ರಕ್ಷಿಸುವ ಕಾಶೀವಾಸ ಬಂದೇ ದೊ
ರಕಿದರೆ ಸಕಲಲೋಕಂಗಳಂ ಆಳ್ದ ಸುಖವುಂಟು. ಈಶ್ವರನು ಕೋಪಿಸಿದರೆ, ತ
ನ್ನ ಪ್ರಕಾಶವಂ ತೋರ್ಪನಲ್ಲದೆ ಕಾಶೀವಾಸದಿಂದ ಬ್ರಹ್ಮಬೋಧಕವಾದ ತೇ
ಜಸ್ಸನ್ನು ತೆಗೆಯುವನಲ್ಲ. ಈ ಕಾಶೀತೇಜಸ್ಸಿನ ಮುಂದೆ ಮಿಕ್ಕಾದ ತೇಜಸ್ಸುಗಳೆ
ಲ್ಲವೂ ಮಿಂಚುಪುಳುವಿನ ಮಾತ್ರವೇ ಸರಿಯೆಂದು ನಿಶ್ಚೈಸಿದವನಾಗಿ, ಸೂರ್ಯ
ನು ಲೋಲಾರ್ಕ, ಉತ್ತರಾರ್ಕ, ಸಾಂಬಾದಿತ್ಯ, ದ್ರುಪಾದಿತ್ಯ, ಖಗೋಲ್ಕಾದಿತ್ಯ, ಅ
ರುಣಾದಿತ್ಯ, ಕೇಶವಾದಿತ್ಯ, ವಿಮಲಾದಿತ್ಯ, ಗಂಗಾದಿತ್ಯ, ಯಮಾದಿತ್ಯ, ಮಯೂ
ಖಾದಿತ್ಯರೆಂಬ ದ್ವಾದಶಾದಿತ್ಯರೂಪವಂ ತಾಳಿ, ಕಾಶೀಪಟ್ಟಣದಲ್ಲಿದ್ದನು. ಕಾಶೀ
ಪಟ್ಟಣವಂ ನೋಡಿ ಮನಸ್ಸು ಲೋಲನಾಡಿದಕಾರಣ ಲೋಲಾರ್ಕನೆನಿಸಿಕೊಂ
ಡನು. ಅಸಿಗಂಗಾಸಂಗಮವಾದ ಲೋಲಾರ್ಕತೀರ್ಥದಲ್ಲಿ ದೇವಋಷಿಪಿತೃಗಳಂ
ಕುರಿತು, ತಿಲತರ್ಪಣ ಶ್ರಾದ್ಧಾದಿಗಳಂ ಮಾಡಿದರೆ, ಋಣತ್ರಯವಿಮೋಚನ
ವಾಗುವದು. ಸೂರ್ಯಗ್ರಹಣಕಾಲದಲ್ಲಿ ಸ್ನಾನವಂ ಮಾಡೆ, ಕುರುಕ್ಷೇತ್ರದಲ್ಲಿ
ಸೂರ್ಯಗ್ರಹಣ ಹತ್ತುಗ್ರಹಣದಲ್ಲಿ ಮಾಡಿದ ಸ್ನಾನದಾನಂಗಳ ಫಲವುಂಟು.
ರಥಸಪ್ತಮಿಯಲ್ಲಿಯೂ, ಪ್ರತಿಭಾನುವಾರಂಗಳಲ್ಲಿಯೂ, ಸ್ನಾನದಾನವಮಾ
ಡಲು ಸಪ್ತಜನ್ಮಪಾಪಹರವಾದದ್ದು. ತುರಿ, ಪಟ್ಟದಾವರೆ, ತೊನ್ನು, ಬಂಗು,
ಮೊದಲಾದ ವ್ಯಾಧಿಪರಿಹರವು. ಕಾಶಿಯಲ್ಲಿ ಲೋಲಾರ್ಕನಂ ಸೇವಿಸಲು, ಕ್ಷುತ್ಪಿ
ಪಾಸೆವ್ಯಾಧಿಕ್ಲೇಶಂಗಳು ಪೊಂದಲಮ್ಮವು. ಕಾಶಿಯಲ್ಲಿರ್ದ ಸಕಲತೀರ್ಥಂಗಳಿ
ಗೂ ಈ ಲೋಲಾರ್ಕತೀರ್ಥವೇ ಸರಸ್ಸು. ಈ ಭೂಮಂಡಲದಲ್ಲಿರ್ದ ಸಕಲತೀ

ರ್ಥಂಗಳೊಳು ಈ ಲೋಲಾರ್ಕತೀರ್ಥದಲ್ಲಿ ಹದಿನಾರುರೊಳಗೊಂದು ಭಾಗಕ್ಕೆ ಸರಿಬಾರವು. ಈ ಒಂದೇತೀರ್ಥವೂ ಅಲ್ಲ. ಕಾಶಿಯಲ್ಲಿರ್ದ ಒಂದುತೀರ್ಥಕ್ಕು ಬ್ರಹ್ಮಾಂಡದಲ್ಲಿರ್ದ ಸಕಲತೀರ್ಥಗಳಗೂ ಸರಿಯಲ್ಲ. ಇದುಯಥಾರ್ಥವು. ಕೃತಘ್ನಗಳಾದವರು ಈ ತೀರ್ಥಂಗಳಂ ಪಳಿಯಲು ಕ್ರಿಮಿಕೀಟಂಗಳಾಗಿ ಹುಟ್ಟುವರು, ನಾಸ್ತಿಕರೂ, ವೇದಬಾಹ್ಯರೂ, ಶಿಶ್ನೋದರಪರಾಯಣರೂ, ಇವರಮುಂದೆ ಕಾಶಿಯಮಹಿಮೆಯಂ ಪೇಳಲಾಗದು. ಲೋಲಾರ್ಕನಕರಗಳಂ ಸ್ಪರ್ಶವಾದ ಅಸೀನದಿಯೆಂಬ ಖಡ್ಗಧಾರಿಯಿಂ ಖಂಡಿಸಲ್ಪಟ್ಟವಾಗಿ ಪಾಪಂಗಳು ಕಾಶಿಯ ಸೇರಲಮ್ಮವು. ಈ ಲೋಲಾರ್ಕನಮಹಿಮೆಯಂ ಕೇಳದವರು ದುಃಖಸಂಸಾರದಲ್ಲಿ ಮಗ್ನರಾಗರೂ ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವಂ ವ್ಯಾಸರು ತನಗರುಹಿದರೆಂದು ಸೂತಪುರಾಣೀಕನು ಶೌನಕಾದಿಋಷಿಗಳಿಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ. * * *

ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕ ಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥ ದರ್ಪಣದಲ್ಲಿ ಸೂರ್ಯ್ಯನಪ್ರಸಂಗವೆಂಬ ನಲವತ್ತಾರನೇ ಅಧ್ಯಾಯಾರ್ಥನಿರೂಪಣಕ್ಕಂ ಮಂಗಳಮಹಾ. ಶ್ರೀ * *

ನಲವತ್ತಾರನೇ ಅಧ್ಯಾಯ ಸಂಪೂರ್ಣಂ.

ಶ್ರೀ ವಿಶ್ವೇಶ್ವರಾಯನಮಃ

ನಲವತ್ತೇಳನೇ ಅಧ್ಯಾಯ.

:0:

ಉತ್ತರಾರ್ಕಮಹಿಮೆ.

ಅನಂತರದಲ್ಲಿ ಕುಮಾರಸ್ವಾಮಿ ಅಗಸ್ತ್ಯಂಗೆ ಇಂತೆಂದನು. ಕೇಳೈ ಅಗಸ್ತ್ಯನೇ! ಕಾಶೀಪಟ್ಟಣದ ಬಡಗಲಲ್ಲಿ ಅರ್ಕತೀರ್ಥ. ಆ ತೀರ್ಥದಲ್ಲಿ ಉತ್ತರಾ

ಕಾಸೂರ್‍ಯನೆಂಬುವನು ದುಷ್ಟನಿಗ್ರಹ ಶಿಷ್ಟಪರಿಪಾಲನೆಯಂ ಮಾಡಿಕೊಂಡು ಆ ಕಾ
ಶಿಯನ್ನು ರಕ್ಷಿಸಿಕೊಂಡು ಇಹನು. ಈ ಉತ್ತರಾರ್ಕನೆಂಬ ಸೂರ್ಯನ ಮಹಿಮೆಯ
ಲ್ಲಿ ಒಂದು ಇತಿಹಾಸ ಉಂಟು. ಅದನ್ನು ಹೇಳುತ್ತೇನೆ ಕೇಳು—ಪೂರ್ವದಲ್ಲಿ
ಈ ಕಾಶೀಪಟ್ಟಣದಲ್ಲಿ ಆತ್ರೇಯಸ ಗೋತ್ರನಾದ ಪ್ರಿಯವ್ರತನೆಂಬ ಒಬ್ಬ
ಬ್ರಾಹ್ಮಣನುಂಟು. ಆತನು ಸದಾಚಾರೀ, ಅಥಿತಿಪ್ರಿಯನು. ಆತಂಗೆ ಪತಿವ್ರತೆಯಾ
ದ ಶುಭವ್ರತೆಯೆಂಬ ಸ್ತ್ರೀಯಲ್ಲಿ ಮೂಲಾನಕ್ಷತ್ರಪ್ರಥಮ ಪಾದದಲ್ಲಿ ಕೇಂ
ದ್ರ ಬೃಹಸ್ಪತಿ ಇರಲು, ಸುಲಕ್ಷಣೆ ಎಂಬ ಕುಮಾರತಿ ಪುಟ್ಟಿದಳು. ಆ ಕುಮಾ
ರತಿ ಶುಕ್ಲಪಕ್ಷದ ಚಂದ್ರನಂತೆ ಬೆಳದು, ಯೌವನಪ್ರಾಯ ಉಳ್ಳವಳಾದಳು.
ಮಹಾಸೌಂದರ್ಯ ಉಳ್ಳವಳು, ವಿನಯವಂತೆ, ಸದಾಚಾರಿ ತಾಯಿತಂದೆಗಳಿಗೆ ಹಿತ
ವೃತ್ತಿ ಗೃಹಾಲಂಕಾರಗಳ ಮಾಡುವದರಲ್ಲಿ ಬಹುಪ್ರೌಢೆಯಾದವಳು. ಅಂಥಾ
ಕುಮಾರತಿಯಂ ನೋಡಿ, ತಂದೆತಾಯಿಗಳು ಈಕೆಗೆ ತಕ್ಕ ವರನಾಗಬೇಕೆಂದು
ವಿಚಾರಿಸುವನಿತರೊಳ್ ಮೂಲಾನಕ್ಷತ್ರ ದೋಷದಿಂದ ಆ ಪ್ರಿಯವ್ರತನೆಂಬ
ಬ್ರಾಹ್ಮಣನು ಮೃತನಾಗಲು, ಆ ಸ್ತ್ರೀಯು ಪತಿವ್ರತೆಯಾದ ಕಾರಣ ತನ್ನ
ಮಗಳಂ ಬಿಟ್ಟು, ಪತಿಯೊಡನೆ ಸಹಗಮನವಂ ಮಾಡಲು, ಸುಲಕ್ಷಣೆಯೆಂಬ
ಕುಮಾರತಿಯು ತಾಯಿ ತಂದೆಗಳಿಗೆ ಕ್ರಿಯೆಗಳಂ ಮಾಡಿ, ಅನಂತರದಲ್ಲಿ ಸುಲ
ಕ್ಷಣೆಯು ತಂದೆತಾಯಿ ಮತ್ತೂ ಇಷ್ಟರೂ ಯಾರೂ ಇಲ್ಲದೆ ಒಂಟಿಯಾಗಿ,
ತನ್ನೊಳು ತಾನು ಇಂತೆಂದು ದುಃಖಪಟ್ಟಳು. ತಂದೆತಾಯಿಗಳೂ ಮತ್ತೂ ಇಷ್ಟ
ರೂ ಇಲ್ಲದೆ ಒಂಟಿಯಾಗಿ ಇದ್ದು ತಾನು ಈ ಸಂಸಾರವೆಂಬ ಸಮುದ್ರವ ದಾಂ
ಟುವದು ಹ್ಯಾಗೆ, ಸ್ತ್ರೀಜನ್ಮವೆಂಬುದು ಅತಿಕಷ್ಟ. ಪತಿಯ ಅಧೀನವಾಗಿ ಇದ್ದೇ
ನೆಂದರೆ ನಮ್ಮ ತಾಯಿತಂದೆಗಳು ಮೊದಲೇ ವಿವಾಹ ಮಾಡಿದವರಲ್ಲ, ನಾನೇ
ಹೋಗಿ ನನ್ನನ್ನು ಮದುವೆಯಾಗೀ ಎಂದು ಹ್ಯಾಗೆ ಕೇಳಲೀ, ಆದರೂ ಕಕ್ಕ
ಲಾತಿಯಿಂದ ಒಬ್ಬ ಪುರುಷನ ವಿವಾಹವಾಗಲು, ಅವನು ಗುಣಶೀಲವಂತನಲ್ಲ
ದೆ ಇರಲು, ಅದು ಬಹುಕಷ್ಟ. ಹೀಗೆಂದು ಅತ್ಯಂತ ದುಃಖದಿಂದ ಚಿಂತಿಸುತ್ತಿ
ರಲು, ಬಹುಮಂದಿ ಪ್ರಾಯದ ಪುರುಷರು ನಿತ್ಯವೂ ಬಂದು ತನ್ನ ಮದುವೆ
ಯಾಗೆಂದು ಪ್ರಾರ್ಥಿಸಿಕೇಳಿದರೂ ಅವರೊಬ್ಬರಿಗೂ ಮನಸ್ಸುಕೊಡದೆ ತಮ್ಮ
ತಾಯಿತಂದೆಗಳ ನಾಶವನೆನೆದು ತನ್ನ ಜನ್ಮವ ನಿಂದಿಸಿಕೊಂಡು ಸಕಲಪ್ರಪಂ

ಚವೂ ಅನಿತ್ಯವೆಂದು ತಿಳಿದು ಇಂದ್ರಿಯಗಳಂ ನಿಗ್ರಹಿಸಿ ಬ್ರಹ್ಮಚರ್ಯ ವ್ರತ
ವಂ ಕೈಕೊಂಡು ಉತ್ತರಾರ್ಕನೆಂಬಸೂರ್ಯನಸಮೀಪದಲ್ಲಿ ನಿರಾಹಾರದಿಂದ
ಉಗ್ರ ತಪವಂಮಾಡುತಿರಲೂ, ಅಲ್ಲಿಒಂದು ಆಡಿನ ಮರಿ ಪ್ರತಿನಿತ್ಯವೂ ಆಕೆ
ಯಮುಂದೆ ನಿಂತು ಸಾಯಂಕಾಲಪರ್ಯಂತರವೂ ಉಪವಾಸವಿದ್ದು ಆಮೇಲೆ
ದೊರಕಿದಷ್ಟು ತೃಣಪರ್ಣಗಳಂ ಭಕ್ಷಿಸಿ ಆ ಅರ್ಕತೀರ್ಥದಲ್ಲಿ ಉದಕ ಪಾ
ನವಂಮಾಡಿ ತನ್ನ ಒಡೆಯನ ಮನೆಗೆ ಹೋಗುತ್ತಾ ಇರಲು, ಈರೀತಿಯಲ್ಲಿ
ಆ ಸುಲಕ್ಷಣೆ ಎಂಬ ಕನ್ಯೆಯೂ ಆ ವರುಷ ಪರ್ಯಂತರವೂ ಉಗ್ರ ತಪವಂ
ಮಾಡಲು, ಪರಮೇಶ್ವರನು ದೇವಿಯರು ಸಹಾ ವೃಷಭ ವಾಹನರಾಗಿ ಆಕಾ
ಶ ಮಾರ್ಗದಲ್ಲಿ ಕಾಶೀಪಟ್ಟಣವಂ ನೋಡುತ್ತಾ ಬರುತ್ತಿರಲೂ, ಪಾರ್ವತೀ
ದೇವಿಯರೂಉತ್ತರಾರ್ಕನ ಸಮೀಪದಲ್ಲಿ ಉಗ್ರ ತಪವಂ ಮಾಡುತ್ತಾ ಬಾಲ
ಬ್ರಹ್ಮಚಾರಿಯಾದ ಸುಲಕ್ಷಣೆಯಂ ಕಂಡು ಅತ್ಯಂತ ಕರುಣದಿಂದ ಇಂತೆಂದು
ಬಿನ್ನೈಸಿದಳು. ಎಲೈ ಸ್ವಾಮೀ! ದಿಕ್ಕಿಲ್ಲದೆ ನಿಮ್ಮ ಪಾದಪದ್ಮಂಗಳಲ್ಲಿ ಮನವ
ನಿರಿಸಿ ತಪವಂ ಮಾಡುವ ಈ ಬ್ರಾಹ್ಮಣ ಕನ್ನಿಕೆಗೆ ವರವನಿತ್ತು ರಕ್ಷಿಸಬೇ
ಕೆಂದು ಬಿನ್ನೈಸಲೂ ಕೃಪಾಳುವಾದ ಪರಮೇಶ್ವರನು ದೇವಿಯರ ಬಿನ್ನಹವಂ
ಕೇಳಿ ಹಾಗೇ ಆಗಲೀ ಎಂದು ವೃಷಭವನಿಳಿದು ಸಮಾಧಿಯಿಂದ ಕಣ್ಣು ಮು
ಚ್ಚಿಕೊಂಡು ಇದ್ದಸುಲಕ್ಷಣೆಯಂ ನೋಡಿ ಪರಮೇಶ್ವರನಿಂತೆಂದನೂ, ಎಲೆ ಸು
ಲಕ್ಷಣೆಯೆ! ನಿನ್ನ ತಪಸ್ಸಿಗೆ ಮೆಚ್ಚಿ ಪ್ರಸನ್ನನಾದೆನು ವರವಂಬೇಡಿಕೊ, ತಪ
ಸ್ಸಿನಿಂದ ಬಹು ಬಳಲಿದೆ ಎಂದು ನುಡಿದ ಪರಮೇಶ್ವರನ ವಾಕ್ಯವಂ ಕೇಳಿ ಈ
ಶ್ವರನು ಪಾರ್ವತೀಸಮೇತನಾಗಿ ಪ್ರಸನ್ನನಾಗಿ ಮುಂಭಾಗದಲ್ಲಿಹ ಪರಮೇ
ಶ್ವರಂಗೆ ಸಾಷ್ಟಾಂಗ ನಮಸ್ಕಾರವಂ ಮಾಡಿ ಕೈಮುಗಿದು ತಾನು ಏನು ವರ
ವಂ ಬೇಡಿ ಕೊಳ್ಳಲೀ ಎಂದುಚಿಂತಿಸಿ, ಆಸಿತರೊಳು ಮುಂದಿದ್ದ ಆಡಿನ ಮ
ರಿಯನ್ನು ಕಂಡು ತನ್ನೊಳು ಇಂತೆಂದಳು. ಲೋಕದಲ್ಲಿ ತಮ್ಮಪ್ರಕ್ಕೆ ತಾವೆ
ಬದುಕಿದವರಾರು. ಪರೋಪಕಾರಕ್ಕೆ ಬದುಕಿದುದೆ ಬದುಕು, ತಾನು ಮಾಡಿದ
ತಪಸ್ಸಿಗೆ ಸಾಕ್ಷಿಯಾಗಿರ್ದ ಈ ಆಡಿನಮರಿಗೆ ಮೊದಲು ವರವಂ ಬೇಡಿಕೊಂ
ಬೆನು, ಎಂದು ಆಲೋಚನೆಯಂಮಾಡಿಪರಮೇಶ್ವರಂಗೆ ಇಂತೆಂದಳು, ಎಲೈ ಕೃಪಾ
ಳುವಾದ ಪರಮೇಶ್ವರನೆ! ನೀನು ನನಗೆ ಪ್ರಸನ್ನನಾಗಿ ವರವನೀವುದುಂಟಾದರೆ

ಮೊದಲು ಈ ಆಡಿನ ಮರಿಗೆ ವರವಂ ಕೊಡಬೇಕು, ಇದು ಪಶುವಾದ ಕಾರಣ ಬಿನ್ನಹಂ ಮಾಡಿಕೊಳ್ಳಲರಿಯದು ಎನಲು, ಪರಮೇಶ್ವರನು ಸಂತೋಷಪಟ್ಟು ಪಾರ್ವತಿದೇವಿಯರೊಡನೆ ಇಂತೆಂದನು. ಎಲೈ ದೇವಿಯೇ! ಕೇಳು, ಸತ್ಪುರುಷರ ಬುದ್ಧಿ ಪರೋಪಕಾರದಲ್ಲಿಯೆ ತಾತ್ಪರ್ಯ ಉಳ್ಳದ್ದು ಆವನೊಬ್ಬನೂ ಸರ್ವಪ್ರಕಾರದಿಂ ಪರೋಪಕಾರವ ಮಾಡುತ್ತಾ ಇಹನೋ ಅವನು ಧನ್ಯನು, ಧರ್ಮಾಧಿಕನು; ಗಳಿಸಿದ ವಸ್ತುವು ಬಹುಕಾಲ ಇರದು, ಉಪಕಾರವೆ ಬಹುಕಾಲ ಇರುವದಾಗಿ ಈ ಸುಲಕ್ಷಣೆಯು ಬಹುಕಾಲ ತನ್ನ ಶರೀರವನ್ನು ಕೃಶವಂ ಮಾಡಿಕೊಂಡು ತಪಸ್ಸು ಮಾಡಿಯು ಪರೋಪಕಾರಕ್ಕೆ ವರವ ಬೇಡಿದವಳಾದ ಕಾರಣ ತನ್ನ ಮನಸ್ಸಿಗೆ ಮಹಾ ಸಂತೋಷವಾಯಿತು. ಈ ಆಡಿನ ಮರಿಗೆ ಏನು ವರವ ಕೊಡಬಹುದು ಎಂದು ಪರಮೇಶ್ವರನು ನುಡಿಯಲು ದೇವಿಯರು ಇಂತೆಂದು ಬಿನ್ನೈಸಿದರು. ಎಲೈ ಕೃಪಾಳುವಾದ ಸ್ವಾಮಿಯೆ! ನೀವು ಸಕಲಲೋಕಂಗಳ ಸೃಷ್ಟಿ ಸ್ಥಿತಿ ಲಯಂಗಳಿಗೆ ಕರ್ತರು, ಶರಣಾಗತರಲ್ಲಿ ಭಯವುಳ್ಳವರು ತನ್ನ ಬಳಿಯಲ್ಲಿ ಸಖಿತ್ವವ ಮಾಡಿಕೊಂಡು ಇರುವಂಥಾ ಜಯೆ ವಿಜಯೆ ಜಯಂತೀ ಶುಭಾನಂದೆ ಕೌಮುದೀ ವಿಮಲೆ ಚಂಪಕಮಾಲಿನೀ ಮಲಯವಾಸಿನೀ ಕರ್ಪೂರಲತೆ ಗಂಧಸ್ಮರೆ ಶುಭೆ ಅಶೋಕೆ ವಿಶೋಕೆ ಕಮಲಗಂಧಿ ಮಧುಭಾಷಿಣೀ ಗದ್ಯಪದ್ಯನಿಧೀ ಅನೃತಘ್ನಿ ದೃಗಂಚಲೆ ಇಂಗಿತಜ್ಞೆ ಕೃತೆ ಮನೋಜಯೆ ನತಚಿತ್ತಹರೆ ಎಂಬ ಈ ಸ್ತ್ರೀಯರು ತನಗೆ ಹ್ಯಾಗೆ ಹಿತವಾಗಿ ಇಹರೋ ಆ ರೀತಿಯಲ್ಲಿ ಬಾಲಬ್ರಹ್ಮಚಾರಿಯಾದ ಈ ಸುಲಕ್ಷಣೆಯೂ ದಿವ್ಯಾಭರಣ ದಿವ್ಯಗಂಧ ದಿವ್ಯಪುಷ್ಪ ದಿವ್ಯ ವಸ್ತ್ರಗಳಿಂ ಅಲಂಕೃತೆಯಾಗಿ ಈ ದೇಹದಲ್ಲಿಯೆ ತನಗೆ ವಿಂಜಾಮರ ಸೇವೆಯಂ ಮಾಡಿಕೊಂಡು ಸುಖದಲ್ಲಿ ಇರಲಿ, ಈ ಆಡಿನ ಮರಿಯೂ ಕಾಶೀರಾಯನ ಮಗಳಾಗಿ ಹುಟ್ಟಿ ಸಮಸ್ತ ಭೋಗಂಗಳನ್ನನುಭವಿಸಿ ಕಡೆಯಲ್ಲಿ ಈ ಕಾಶೀ ಕ್ಷೇತ್ರದಲ್ಲಿಯೇ ಮುಕ್ತಿಯಂ ಪಡೆದು ತನ್ನ ಸಮೀಪವನೈದಿ ಸುಖದಿಂದಿರಲಿ, ಆ ಆಡಿನ ಮರಿಯೂ ಈ ಅರ್ಕತೀರ್ಥದಲ್ಲಿ ಪುಷ್ಯಾರ್ಕದಲ್ಲಿ ಛಳಿ ಘಾಳಿಗಂಜದೆ ಸೂರ್ಯೋದಯದಲ್ಲಿ ಸ್ನಾನಾದಿಗಳಂ ಮಾಡಿದ ಪುಣ್ಯದಿಂ ಆಡಿನ ಮರಿಯ ಶರೀರವೂ ಕಾಶಿಯಲ್ಲಿ ಅಜೇಶ್ವರೀ ಎಂಬ ದೇವತೆಯಾಗಿ ಪೂಜೆ

ಗೋಳಲಿಂ, ಅರ್ಕತೀರ್ಥವೂ ಚಕ್ರತೀರ್ಥವೆಂದು ಪ್ರಸಿದ್ಧಿಯಾಗಲಿ, ಪುಷ್ಯಮಾಸದ ಆದಿತ್ಯವಾರಂಗಳಲ್ಲಿ ಈ ಉತ್ತರಾರ್ಕಯಾತ್ರೆಯಂ ಮಾಡಿ ಪೂಜೆ ನಮಸ್ಕಾರಗಳಂ ಮಾಡಲು ಕಾಶೀವಾಸ ಫಲವುಂಟಾಗಿ ಮೋಕ್ಷವನ್ನೈದಲಿ ಎಂದು ದೇವಿಯರು ಬಿನ್ನಹ ಮಾಡಲು ಪರಮೇಶ್ವರನು ಹಾಗೆ ಆಗಲಿ ಎಂದು ದೇವಿಯರು ಕೇಳಿದ ವರವಂ ಕೊಟ್ಟು ಆ ಸುಲಕ್ಷಣೆಯಂ ಬಡಗೊಂಡು ದೇವಿಯರ ಸಹಾ ತನ್ನ ನಗರವೆಂಬ ಕೈಲಾಸಕ್ಕೆ ಪ್ರವೇಶವ ಮಾಡಿದರು ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ಇಂತೆಂದು ಆವನಾನೊಬ್ಬನೂ ಈ ಉತ್ತರಾರ್ಕನ ಮಹಿಮೆಯಂ ಕೇಳಲು ಸರ್ವವ್ಯಾಧಿ ಪರಿಹರವೂ, ದರಿದ್ರವೂ ಪರಿಹಾರವಾಗಿ ಸರ್ವ ಸೌಭಾಗ್ಯವಂತರಾಗುವರೂ ಎಂದು ನಿರೂಪಿಸಿದ ಅರ್ಥವನ್ನು ವ್ಯಾಸರು ತನಗೆ ಅರುಹಿದರು ಎಂದು ಸೂತ ಪುರಾಣಿಕನು ಶೌನಕಾದಿ ಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ.

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಉತ್ತರಾರ್ಕನಮಹಿಮೆಯೆಂಬ ನಾಲ್ವತ್ತೇಳನೇಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ. ಶ್ರೀ * *

ನಲವತ್ತೇಳನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ನಲವತ್ತೆಂಟನೇ ಅಧ್ಯಾಯ.

:0:

ಸಾಂಬಾದಿತ್ಯನ ಮಹಿಮೆ.

ಅನಂತರದಲ್ಲಿ ಕುಮಾರಸ್ವಾಮಿ ಅಗಸ್ತ್ಯಂಗೆ ಇಂತೆಂದನು.—ಎಲೈ

ಅಗಸ್ತ್ಯನೇ! ನಿನಗೆ ಲೋಲಾರ್ಕನ ಉತ್ತರಾರ್ಕನ ಮಹಿಮೆಯಂ ಹೇಳ್ದೆನಲ್ಲಾ ಇನ್ನು ಸಾಂಬಾದಿತ್ಯನೆಂಬ ಸೂರ್ಯನ ಮಹಿಮೆಯಂ ಪೇಳ್ವೆನು ಕೇಳು ಜಗತ್ತಿಗೆ ಕಾರಣಕರ್ತನಾದ ಸರ್ವವ್ಯಾಪಕನಾದ ಬ್ರಹ್ಮಾದಿಗಳಿಗೂ ಅಗಮ್ಯನಾದ ಸೃಷ್ಟಿ ಸ್ಥಿತಿ ಸಂಹಾರಕಗಳಿಗೂ ಕರ್ತನಾದ ಶ್ರೀಮನ್ವಿಷ್ಣುವು ದಾನವರಸಂಹಾರಾರ್ಥವಾಗಿ ೨೮, ೪ನೆ ಯುಗದ ಭೂಭಾರವನ್ನು ಇಳಿಸೋಸ್ಕರವಾಗಿ ಬ್ರಹ್ಮನ ಪ್ರಾರ್ಥನೆಯಿಂದ ವಸುದೇವ ದೇವಕಿಯರ ಗರ್ಭದಲ್ಲಿ ಕೃಷ್ಣದೇವರೆಂಬ ನಾಮಧೇಯದಲ್ಲಿ ಅವತರಿಸಿ ಬಾಲಕ್ರೀಡೆಯಲ್ಲಿ ಪೂತನಿ, ಶಕಟಾಸುರ, ತೃಣಾವರ್ತ, ಗರ್ಧಭಾಸುರ, ಧೇನುಕಾಸುರ, ಪ್ರಲಂಬಕಾಸುರ, ವ್ಯೋಮಕಾಸುರ, ವೃಷಭಾಸುರ, ಕೇಶಿ, ಮುಷ್ಟಿಕಾಸುರ, ಚಾಣೂರ, ಕಂಸಾಸುರ, ನರಕಾಸುರ, ಹಂಸಡಿಭಕ, ಬಾಣಾಸುರ, ಮೊದಲಾದ ರಾಕ್ಷಸರ ಸಂಹಾರವಂ ಮಾಡಿ, ದೇವಲೋಕಕ್ಕೆ ಹೋಗಿ ಸಮಸ್ತ ದಿವಿಜರಂಗೆಲ್ದು ಕಲ್ಪವೃಕ್ಷ, ಕಾಮಧೇನು, ಚಿಂತಾಮಣಿ, ವಿಶ್ವಕರ್ಮವಿರಚಿಸಿದ ಸುಧರ್ಮಾ ಎಂಬ ದೇವಸಭೆಯನ್ನು ತಂದು ಮಯನಿಂ ರಚಿಸಲ್ಪಟ್ಟ ಅತಿರಮ್ಯವಾದ ದ್ವಾರಕಾಪಟ್ಟಣದಲ್ಲಿ ಹದಿನಾರುಸಾವಿರದ ನೂರೆಂಟುಮಂದಿ ಸ್ತ್ರೀಯರಂ ವಿವಾಹವಾಗಿ ಅವರಲ್ಲಿ ತನಗೆ ಸಮಾನವಾದ ಲಕ್ಷಣವುಳ್ಳ ಎಂಭತ್ತು ಸಾವಿರ ಜನ ಕುಮಾರರಂ ಪಡೆದನು. ಆ ಕುಮಾರರೆಲ್ಲರೂ ಸೂರ್ಯಕಾಂತಿಯುಳ್ಳವರು ಸೌಂದರ್ಯವುಳ್ಳವರು ಬಲವಂತರು ಶಸ್ತ್ರಾಸ್ತ್ರ ಪ್ರವೀಣರು ಸರ್ವವಿದ್ಯಾಕೋವಿದರು ಸ್ವರ್ಗದಲ್ಲಿ ಅವರಿಗೆ ಸಮಾನವಾದವರಿಲ್ಲಾ. ಈ ರೀತಿಯಲ್ಲಿ ಪುತ್ರ ಪೌತ್ರ ಕಳತ್ರ ಮಿತ್ರ ಬಾಂಧವಾದಿಗಳು ಸಹಾ ದ್ವಾರಕಾ ಪಟ್ಟಣದಲ್ಲಿ ಅನೇಕವೈಭವದಿಂದ ಕೃಷ್ಣದೇವರು ಸುಧರ್ಮಾ ಎಂಬ ಸಭೆಯಲ್ಲಿ ದಿವ್ಯಸಿಂಹಾಸನಾರೂಢನಾಗಿ ಇರುತಿರಲು, ಬಂದಾನೊಂದುದಿನ ನಾರದಋಷೀಶ್ವರನು ಕೃಷ್ಣದೇವರ ವೈಭವವಂ ನೋಡುವೆನೆಂದು ನಾರಕೌಪೀನ ಕೃಷ್ಣಾಜಿನ ದಂಡಿಕೋಲು ಮುಂಜಿ ಯಜ್ಞೋಪವೀತ ತುಲಸೀವನಮಾಲೆ ಗೋಪೀಚಂದನಗ ನೊಸಲ ಊರ್ಧ್ವಪುಂಡ್ರದಿಂ ಅಲಂಕೃತನಾಗಿ, ತಪಸ್ಸಿನಿಂದ ಕೃಶವಾದ ದೇಹದಿಂ ಅಗ್ನಿಕಾಂತಿಯಿಂದ ಕಂಗೊಳಿಸುತ್ತಾ, ಆಕಾಶಮಾರ್ಗದಿಂ ದಿಳಿದು ಸ್ವರ್ಗಕ್ಕಿಂತಲು ಅಧಿಕವಾದ ದ್ವಾರಕಾನಗರವಂ ನೋಡುತ್ತಾ ಪಟ್ಟಣದ ರಾಜವೀಧಿಯಲ್ಲಿ ಬರುತಿರಲು; ಕೃಷ್ಣದೇವರ ಕುಮಾರರೆಲ್ಲರೂ ನಾ

ದಋಷಿಯಂ ಕಂಡು, ಸಾಷ್ಟಾಂಗನಮಸ್ಕಾರಂಗಳಂ ಮಾಡಿ ಕೈಮುಗಿಯುತ್ತಿರಲು, ಆದರೊಳು ಜಾಂಬವತಿಯ ಕುಮಾರನಾದ ಸಾಂಬನು ತನ್ನ ಸೌಂದರ್ಯಗರ್ವದಿಂ ನಾರದಋಷಿಗೆ ನಮಸ್ಕಾರವಂ ಮಾಡದೆ, ಆತನ ಆಕಾರವಂ ನೋಡಿ, ಹಾಸ್ಯವನ್ನು ಮಾಡುತ್ತಾ ಇದ್ದಂಥಾ ಸಾಂಬನ ಅಭಿಪ್ರಾಯವಂ ತಿಳಿದು ನಾರದಋಷೀಶ್ವರನು ರಮ್ಯವಾದ ಕೃಷ್ಣದೇವನ ಅಂತಃಪುರಕ್ಕೆ ಬರಲು, ಕೃಷ್ಣನು ಮುನೀಶ್ವರನಂ ಕಂಡು, ಧಿಗ್ಗನೆದ್ದು ನಮಸ್ಕಾರವಂ ಮಾಡಿ, ಎದಿಗೊಂಡು ದಿವ್ಯಸಿಂಹಾಸನದಲ್ಲಿ ಕುಳ್ಳಿರಿಸಿ ಅರ್ಘ್ಯಪಾದ್ಯಂಗಳಂ ಕೊಟ್ಟು, ಪಾದಂಗಳಂ ತೊಳೆದು, ಮಧುಪರ್ಕದಿಂ ಪೂಜಿಸಿ, ವಿಚಿತ್ರವಾದ ಕಥಾಪ್ರಸಂಗವಂ ಮಾಡುತ್ತಿರಲು, ಕೃಷ್ಣದೇವರನ್ನು ನೋಡಿ ನಾರದಋಷೀಶ್ವರನಿಂತೆಂದನು. ಎಲೈ ಕೃಷ್ಣಾ! ನೀನು ಸರ್ವಜ್ಞನು ಅರಿಯದ್ದು ಏನುಯಿದ್ಧೀತು ಆದರೊಳು ಹೇಳಬೇಕಾಗಿಹುದು. ಅದು ಏನೆಂದರೆ,—ನಿನ್ನ ಕುಮಾರನಾದ ಸಾಂಬನಲ್ಲಿ ಕಿಂಚಿದದುರ್ಜನಬುದ್ಧಿ ಉಂಟಾಗಿಹುದು. ಆತನಲ್ಲಿ ಇದು ಘಟಿಸಲರಿಯದು ಈ ಗುಣ ಸ್ತ್ರೀಯರಿಗೆ ಸಂಭವಿಸುವದೇನೋ? ಕಂಡವರಾರು. ಸ್ವರ್ಗ ಮರ್ತ್ಯ ಪಾತಾಳ ಈ ಮೂರುಲೋಕದಲ್ಲಿರ್ದ ಪ್ರಾಯದ ಪುರುಷರೊಳಗೆ ಸಾಂಬನು ಅತಿಚಲುವನು. ಸಹಜವಲ್ಲಿಯೂ ಚಂಚಲಾಕ್ಷಿಯರಾದ ಸ್ತ್ರೀಯರ ಮನೋವ್ಯಾಪಾರಂಗಳೂ ನಿಲಕಡೆಯುಳ್ಳವಸಲ್ಲ. ಮೃಗಾಕ್ಷಿಯರಾದ ಸ್ತ್ರೀಯರಂ ಕಲಸೀವಿದ್ಯಾಧನಂಗಳಂ ಬಿಟ್ಟು ಮದನಮೋಹಿತರಾಗಿ ಸೌಂದರ್ಯ ಉಳ್ಳ ಪುರುಷರಂ ನೋಡಿ, ಭ್ರಮಿಸುತ್ತಾ ಇಹರು. ನಿನ್ನ ಅಷ್ಟಮಹಿಷಿಯರು ಹೊರತಾಗಿ ಮಿಕ್ಕಾದವರೆಲ್ಲರೂ ಸಾಂಬನನ್ನೇ ಕಾಮಿಸುತ್ತಾ ಇಹರು. ಎಂದು ನಾರದಋಷೀಶ್ವರನು ತಿಳುಹಲು, ಕೃಷ್ಣನು ಸ್ತ್ರೀಯರ ಭಾವದಿಂದಲೂ ನಾರದನ ವಾಕ್ಯದಿಂದಲೂ, ತಾನು ಸರ್ವಜ್ಞನಾದಾಗ್ಯೂ, ಯಥಾರ್ಥವೆಂದು ತಿಳಿದು, ಸ್ತ್ರೀಯಾದವಳು ಏಕಾಂತವಲ್ಲಿ ಬಂದು ಸಂಭೋಗವಂ ಕೇಳಲು, ಅವಂಗೆ ಒಳಗಾಗದೆ ಇದ್ದರೆ, ಅವನೇ ಧೈರ್ಯವಂತನು. ಹೀಗೆಂದು ಕೃಷ್ಣನು ಮನದಲ್ಲಿ ಆಲೋಚಿಸಿ ಮನಸ್ಸಿನ ಕೋಪವಂ ತಪ್ಪಿಸಿ ನಾರದಋಷಿಯಂ ಕಳುಹಿ ಆ ಮೇಲೆ ಕೃಷ್ಣನು ಹಗಲು, ಇರುಳು, ವಿಚಾರಿಸಿ ಸಾಂಬನಲ್ಲಿ ಲೇಶವಾದರೂ ದುಶ್ಚರಿತ್ರವಂ ಕಾಣದೆ ಈ ರೀತಿಯಲ್ಲಿ ಕೆಲವು ಕಾ-

ಳುಹೋಗಲು, ನಾರದನು ತಿರುಗಿ ದ್ವಾರಕಾಪಟ್ಟಣಕ್ಕೆ ಬಂದು ಕೃಷ್ಣನು ಸ್ತ್ರೀ
ಗೋಷ್ಠಿಯಲ್ಲಿ ಇದ್ದಾನೆಂದು ತಿಳಿದು ರಾಜದ್ವಾರದಲ್ಲಿ ನಿಂತು, ಹೊರಗೆ ಇದ್ದ
ಸಾಂಬಕುಮಾರನಂ ಕರೆದು. ನೀನು ಕೃಷ್ಣದೇವರ ಸಮೀಪಕ್ಕೆ ಹೋಗಿ, ನಾರ
ದಬಂದಿದ್ದಾನೆಂದು ಹೇಳು ಎನಲು, ಸಾಂಬನು ತನ್ನ ಮನಸ್ಸಿನಲ್ಲಿ ಇಂತೆಂ
ದುಕೊಂಡನು. ಈ ಬ್ರಹ್ಮಚಾರಿಯಾದ ನಾರದನ ವಾಕ್ಯದಿಂ ಹೋಗದೆ ಇರ
ಬಾರದು. ಅಲ್ಲದೆ ಹೋದೇನೆಂದರೆ, ತಂದೆಯು ಸ್ತ್ರೀಗೋಷ್ಠಿಯಲ್ಲಿ ಏಕಾಂ
ತದಲ್ಲಿ ಇದ್ದಾನೆ, ಹ್ಯಾಗೆ ಹೋಗಲಿ?, ಮೊದಲು ಅತಿಪ್ರಕಾಶಮಾನ ಅಗ್ನಿ
ಯಂತೆ ಬರುವ ನಾರದಋಷಿಯಂ ಕಂಡು, ಸಕಲ ಕುಮಾರರೆಲ್ಲರು ನಮಸ್ಕರಿ
ಸಲು, ನಾನು ವಂದನೆಯಂ ಮಾಡದೆ ಅವಮಾನವಂ ಮಾಡಿದ್ದು ಒಂದು ಅಪ
ರಾಧ. ಮುನಿಯಂ ಕಂಡು ನಕ್ಕದ್ದು ಒಂದು ಅಪರಾಧ. ಈಗ ಮಹಾಮುನಿಯ
ವಾಕ್ಯವಂ ಕೇಳಿ, ಹೋಗದೆ ಇದ್ದರೆ ಇದು ಒಂದು ಅಪರಾಧ. ಈ ಮೂರು
ಅಪರಾಧಕ್ಕಿಂತಲೂ ಈ ಸಮಯದಲ್ಲಿ ಬರಬಹುದೆ ಎಂಬ ತಂದೆಯ ಕೋಪ
ವೇ ಲೇಸು ಅದೆಂತೆಂದರೆ, ತಂದೆ ತನ್ನ ಮೇಲೆ ಕೋಪಿಸಲು ತನಗೆ ತನ್ನ ದೇಹ
ತ್ಯಾಗವೇ ಪ್ರಾಯಶ್ಚಿತ್ತ. ಈ ಬ್ರಾಹ್ಮಣನ ಮಾತ ಅತಿಕ್ರಮಿಸಿದರೆ ಶಾಪವಂ
ಕೊಟ್ಟಾನು. ಆ ಶಾಪಕ್ಕೆ ಪ್ರಾಯಶ್ಚಿತ್ತವಂ ಕಾಣೆನು. ಬ್ರಹ್ಮಶಾಪದಿಂ ನೊಂ
ದವರು ಎಲ್ಲಿಯೂ ಅಭಿವೃದ್ಧಿಯೈದಲಿಲ್ಲ. ಮಿಕ್ಕಾದವರ ಕೋಪದಿಂ ಕೆಟ್ಟ
ವರು ದಾವಾಗ್ನಿಯಿಂದ ಬೆಂದ ವೃಕ್ಷದ ಬೇರು ಮಳೆ ಬರಲು ತಿರುಗಿ ಚಿಗುರು
ವಂತೆ ಮತ್ತೆ ಅಭಿವೃದ್ಧಿಯಾಗುವರು. ಆದಕಾರಣದಿಂ ಹೋಗುವದೇ ಲೇಸು
ಎಂದು ಕ್ಷಣಮಾತ್ರ ವಿಚಾರಿಸಿಕೊಂಡು ಅಂತಃಪುರಕ್ಕೆ ಹೋಗಿ, ಕೃಷ್ಣದೇವ
ರು ಸ್ತ್ರೀಯರ ಮಧ್ಯದಲ್ಲಿ ಇರಲು, ಸಮೀಪಕ್ಕೆ ಹೋಗಲಂಜಿ ದೂರದ
ಲ್ಲೇ ನಿಂತು ನಮಸ್ಕರಿಸಿ ಸುಮ್ಮನಿರಲು, ಅನಿತರೊಳು ನಾರದನು ಸಾಂಬ
ನನ್ನು ಕೃಷ್ಣದೇವರ ಮನಸ್ಸಿಗೆ ದೂರಸ್ಥನ ಮಾಡುವನಾಗಿ ಸಂಗಡಲೇ ಬರಲು
ಕೃಷ್ಣನು ಸಾಂಬನನ್ನು ಕಂಡು ವೇಗದಲ್ಲೆದ್ದು ಪೀತಾಂಬರವಂ ಧರಿಸಿ ಎದುರಾ
ಗಿ ಬರಲು, ಆ ಸ್ತ್ರೀಯರು ಲಜ್ಜೆಗಳಿಂದ ವಸ್ತ್ರಗಳಂ ಧರಿಸಿ ಕೆಲವರು ಕೇ
ಸ್ಥಾರ್ದರು. ಕೃಷ್ಣದೇವನು ಇತ್ತಲಾಗಿ ನಾರದನಿಗೆ ನಮಸ್ಕಾರವಂ ಮಾಡಿ ಕೈ
ಹಿಡಿದು ಕರೆತಂದು ಮಣಿಮಂಚದಲ್ಲಿ ಕುಳ್ಳಿರಿಸಿ ಅರ್ಘ್ಯಪಾದ್ಯಂಗಳಂ ಕೊಟ್ಟು,

ಉಪಚಾರಂಗಳಂಮಾಡಿದನು. ಅನಿತರೊಳು ನಾರದನು ಆಗ ಕೃಷ್ಣನಲೀಲೆಯಿಂದ ಸ್ಖಲಿತರಾದ ಸ್ತ್ರೀಯರಂನೋಡಿ, ಕೃಷ್ಣನೊಡನೆ ಇಂತೆಂದನು. ಎಲೈ ಜಗನ್ಮಯನಾದ ಕೃಷ್ಣನೇ! ಜಾಂಬವತಿಯಸುತನಂನೋಡು ಈತನಸ್ವರೂಪವನ್ನು ಕಂಡು ಈ ಸ್ತ್ರೀಯರು ಸ್ಖಲಿತರಾದರು. ಇಂಥಾ ಸಮಯದಲ್ಲಿ ಇವನ ಬರಬಹುದೆ ಎನಲು ಕೃಷ್ಣನು ಮಹಾಕೋಪಿಷ್ಟನಾಗಿ ವಿಚಾರಿಸದೆ ಋಷಿಯ ವಾಕ್ಯವೇ ನಿಜವೆಂದು ಯಲೆಲೇ ಸಾಂಬನೇ? ನೀನು ಸಕಲವಾದ ತನ್ನ ಸ್ತ್ರೀಯರನ್ನು ನಿನ್ನತಾಯಿ ಜಾಂಬವತಿಗೆ ಸಮನಾಗಿ ನೋಡಿದರೂ ನೀನು ಈ ಸಮಯದಲ್ಲಿ ಬರಬಾರದು. ನಿನ್ನ ಸೌಂದರ್ಯವಂಕಂಡು ಸ್ತ್ರೀಯರು ಸ್ಖಲಿತರಾದರು. ಅದ್ದರಿಂದ ನೀನು ಶೀಘ್ರದಲ್ಲಿ ಕುಷ್ಠರೋಗಿಯಾಗು ಎಂದು ಶಪಿಸಲು, ಸಾಂಬನು ನಡುನಡುಗಿ ಕೃಷ್ಣನಪಾದಾರವಿಂದದಲ್ಲಿ ಬಿದ್ದುಹೊರಳಿ ಎಲೈ ಸ್ವಾಮಿಯೇ! ತನಗೆ ಎಂದಿಗೆ ಶಾಪವಿಮೋಚನೆ ಎಂದುಕೇಳಿಕೊಳ್ಳಲು, ಕೃಷ್ಣನು ಇಂತೆಂದನು. ಇವನಲ್ಲಿ ಅಪರಾಧವಿಲ್ಲವೆಂದುತಿಳಿದು ಈ ಋಷಿಯತಂತ್ರವೆಂದುತಿಳಿದು ಕರುಣದಿಂದ ಸಾಂಬನಿಗೆ ಇಂತೆಂದನು.—ಎಲೈ ಸಾಂಬಾ? ನೀನು ನನ್ನ ಶಾಪ ಪರಿಹಾರಕ್ಕೋಸ್ಕರವಾಗಿ ಕಾಶೀಕ್ಷೇತ್ರಕ್ಕೆ ಹೋಗಿಸೂರ್ಯನಂಕುರಿತು. ಆರಾಧಿಸಿ ತಪವಂಮಾಡಲು, ಮುನ್ನಿನಂತೆ ನೀನು ದಿವ್ಯರೂಪಧರನಾಗಿರುವೆ. ಕಾಶೀಕ್ಷೇತ್ರವೊಂದಾಗಿ ಮಹಾಪಾತಕಂಗಳಿಗೆ ಕ್ಷಯವಿಲ್ಲ. ಮಹಾಋಷಿಗಳಿಂದಲೂ ಪ್ರಾಯಶ್ಚಿತ್ತವಿಲ್ಲದಂಥಾ ಪಾತಕಂಗಳಿಗೆ ಕಾಶೀವಾಸ, ಗಂಗಾಸ್ನಾನ, ವಿಶ್ವೇಶ್ವರನಪೂಜೆ, ಇದೇ ಪ್ರಾಯಶ್ಚಿತ್ತ. ಹೀಗೆಂದು ಸಕಲವೇದಶಾಸ್ತ್ರಗಳು ಹೇಳುತ್ತಾಇದ್ದಾವು. ಪರಮೇಶ್ವರನ ಆಜ್ಞೆಯಿಂ ಮಹಾ ಮಾಯಾಪಾಶಂಗಳು ಬಿಡಿಸುವವು. ಪರಮೇಶ್ವರನು ಕಾಶಿಯಲ್ಲಿ ಯಾರು ದೇಹತ್ಯಾಗವಂ ಮಾಡುವರೋ ಆ ಜೀವರಿಗೆ ಮೋಕ್ಷಕ್ಕೋಸ್ಕರ ಪೂರ್ವದಲ್ಲಿ ಕಾಶೀಕ್ಷೇತ್ರವಂ ನಿರ್ಮಿಸಿದನು. ಆ ಕ್ಷೇತ್ರದೊರತಾಗಿ ನಿನ್ನಶಾಪಕ್ಕೆ ವಿಮೋಚನೆ ಇಲ್ಲವೆಂದು ಸಾಂಬಗೆ ಹೇಳಲು, ನಾರದನುಸಂತೋಷದಿಂದ ಕೃಷ್ಣನಂಬೀಳ್ಕೊಂಡು ಆಕಾಶಮಾರ್ಗವಂ ಅಡರಿದನು. ಅನಂತರದಲ್ಲಿ ಸಾಂಬನು ಕೃಷ್ಣದೇವರ ನಿರೂಪವಮಂ ಶಿರಸಾವಹಿಸಿ ಇರುವನಿತರೊಳ್ ಶರೀರವೆಲ್ಲವು ಒಡೆದು ಕೀವು, ರಕ್ತಂಗಳೂ ಸೋರಿ ಮಹಾ ಜಿಗುಪ್ಸೆಯಾಗಲು ಕಾಶೀಪಟ್ಟಣಕ್ಕೆ

ಹೋಗಿ ಗಂಗಾಸ್ನಾನವಂಮಾಡಿ, ವಿಶ್ವೇಶ್ವರನ ದರ್ಶನವಂಮಾಡಿ, ಅಲ್ಲಿ ಒಂದು ತೀರ್ಥವಂ ಕಲ್ಪಿಸಿಕೊಂಡು ಆ ಸಮೀಪದಲ್ಲಿ ಸೂರ್ಯನಂಕುರಿತು, ಕೆಲವುದಿನ ಉಗ್ರತಪವಂಮಾಡಲು, ಸೂರ್ಯನು ಪ್ರಸನ್ನನಾಗಿ ಮುನ್ನಿನ ದಿವ್ಯದೇಹವಂಕೊಟ್ಟನು. ಅಂದಾರಭ್ಯ ಸೂರ್ಯನು ಸಾಂಬಾದಿತ್ಯನೆನಿಸಿಕೊಂಡನು. ಆ ಸೂರ್ಯನ ಆರಾಧನೆಯಂ ಮಾಡಿದವರ್ಗೆ ಸಕಲ ವ್ಯಾಧಿಗಳು ಪರಿಹರವಾಗಿ ಸಕಲೈಶ್ವರ್ಯಗಳಂನನುಭವಿಸುವರು. ಆದಿತ್ಯವಾರ ಅರುಣೋದಯದಲ್ಲಿ ಸಾಂಬತೀರ್ಥಕ್ಕೆಹೋಗಿ ಸ್ನಾನವಂಮಾಡಿ, ಸಾಂಬಾದಿತ್ಯನಪೂಜಿಸಲು, ಸಕಲ ವ್ಯಾಧಿಹರ. ಸ್ತ್ರೀಯು ಪೂಜಿಸಲು, ವೈಧವ್ಯವಿಲ್ಲ. ಬಂಜೆಪೂಜಿಸಲು ಸಕಲಸಂಪನ್ನನಾದ ಸೌಂದರ್ಯವುಳ್ಳ ಮಗನಪಡೆವಳು. ಆದಿತ್ಯವಾರ ರಥಸಪ್ತಮೀಕೂಡ ಗ್ರಹಣಸಮಾನವು. ಅದ್ದರಿಂದ ಆ ದಿನದಲ್ಲಿ ಸ್ನಾನಂಗಳಂಮಾಡಲು, ಕುರುಕ್ಷೇತ್ರದಲ್ಲಿ ಸನ್ನಿಹತ್ಯಾತೀರ್ಥಂಗಳಲ್ಲಿ ಸ್ನಾನದಾನಾದಿಗಳಂ ಮಾಡಿದಫಲವುಂಟು. ಮಾಘಮಾಸದ ಆದಿತ್ಯವಾರಗಳಲ್ಲಿ ವಿಶ್ವೇಶ್ವರಗೆ ಪಶ್ಚಿಮದಲ್ಲಿರ್ಪ ಸಾಂಬತೀರ್ಥದಲ್ಲಿ ಸ್ನಾನವಂಮಾಡಿ ಸಾಂಬಾದಿತ್ಯಸೂರ್ಯನ ಅಶೋಕಪುಷ್ಪಂಗಳಿಂದ ಪೂಜಿಸಲು, ಸಕಲಾಭೀಷ್ಟಸಿದ್ಧಿಯಹುದು. ಸಾಂಬಾದಿತ್ಯನ ನಿತ್ಯಪೂಪೂಜಿಸಿ ಎಂಟುನಮಸ್ಕಾರಂಗಳಂ ಮಾಡಲು ಕಾಶೀವಾಸ ಫಲವುಂಟು. ಎಂದು ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು. ಕೇಳೈ ಅಗಸ್ತ್ಯನೇ! ನಿನಗೆ ಸಾಂಬಾದಿತ್ಯನ ಮಹಿಮೆಯಂ ಪೇಳ್ದನಲ್ಲಾ ಸಕಲಭೀಷ್ಟಪ್ರದಮಪ್ಪ ದ್ರೌಪದಾದಿತ್ಯನಮಹಿಮೆಯಂ ಪೇಳ್ವೆನು. ಕೇಳೆಂದು ಹೇಳತೊಡಗಿದನೂ ಎಂದು ವ್ಯಾಸರು ತನಗೆ ಬುದ್ಧಿಗಲಿಸಿದ ಅರ್ಥವಂ ಸೂತಪುರಾಣಿಕನು ಶೌನಕಾದಿಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ. * * *

ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಶ್ರೀಮಹೀಶೂರಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಾಹಮಾರ್ಥ ದರ್ಪಣದಲ್ಲಿ ಸಾಂಬಾದಿತ್ಯನ ಮಹಿಮೆಯೆಂಬ ನಾಲ್ವತೆಂಟನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ, ಶ್ರೀ.

ನಲವತ್ತೆಂಟನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ನಲವತ್ತೊಂಬತ್ತನೇ ಅಧ್ಯಾಯಂ.

:0:

ದ್ರುಪದಾದಿತ್ಯ, ಮಯೂಖಾದಿತ್ಯರ ಮಹಿಮೆ.

ಅನಂತರದಲ್ಲಿ ಆಗಸ್ತ್ಯನು ಕುಮಾರಸ್ವಾಮಿಗಿಂತೆಂದನು -- ಎಲೈ ಕುಮಾರಸ್ವಾಮಿಯೇ! ದ್ರುಪದಾದಿತ್ಯನ ಮಹಿಮೆಯಂ ವಿಸ್ತಾರವಾಗಿ ಬುದ್ಧಿಗಲಿಸಬೇಕು ಎನಲು ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು. ಕೇಳೈ ಅಗಸ್ತ್ಯನೇ! ಪಂಚವಕ್ತ್ರನಾದ ಪರಮೇಶ್ವರನು ಲೋಕಹಿತಾರ್ಥವಾಗಿ ಸೋಮವಂಶದ ಪಾಂಡು ಎಂಬರಾಯಗೆ ಧರ್ಮಪುತ್ರ, ಭೀಮ, ಅರ್ಜುನ, ನಕುಲ, ಸಹದೇವರೆಂಬ ಪಂಚಪಾಂಡವರಾಗಿ ಪುಟ್ಟಿದರು. ಜಗನ್ಮಾತೆಯಾದ ಪಾರ್ವತಿಯು ದ್ರುಪದರಾಯಗೊಲಿದುಆರಾಯನ ಹೋಮಕುಂಡಲದಲ್ಲಿ ದ್ರೌಪದೀ ಎಂಬನಾಮದಿಂಪುಟ್ಟಿದಳು. ಆದಿವಸ್ತುವಾದಂಥಾ ಶ್ರೀಮನ್ನಾರಾಯಣನು ಭೂಭಾರವನಿಳುಹುವ ನಿಮಿತ್ತದಿಂ ಪಾಂಡುಪುತ್ರನಾದ ಧರ್ಮರಾಯನ ಸಹಾಯಕ್ಕಾಗಿ ವಸುದೇವದೇವಕಿಯರ ಗರ್ಭದಲ್ಲಿ ಕೃಷ್ಣದೇವರಾಗಿ ಪುಟ್ಟಿದನು. ಆ ಪಾಂಡುಪುತ್ರರು ದಾಯಾದಿಗಳಾದ ಕೌರವರ ಅನೇಕವಾದ ಉಪದ್ರವ ಜೂಜುಮೊದಲಾದ್ದರಲ್ಲಿ ಧರೆಯಂ ಸಕಲಭಂಡಾರಮಂಸೋತು, ಮಹಾನೊಂದು ತಮ್ಮ ಸತ್ಯವಂ ಪಾಲಿಸಲೋಸ್ಕರ ವನವಾಸಕ್ಕೆ ಪೋಗಲು, ಆ ಪುಣ್ಯಾತ್ಮನಾದ ಧರ್ಮವೇ ಸ್ವರೂಪವಾದ ಧರ್ಮರಾಯನನ್ನು ಬಿಡಲಾರದೆ ಪ್ರಜೆಪರಿವಾರ ಸಕಲಬ್ರಾಹ್ಮಣರು ರಾಯನಹಿಂದೆ ವನವಾಸವಂ ಕೈಕೊಂಡುಬರಲು, ರಾಯನು ಈ ಬಂದ ಮಹಾಮಂದಿಗೆ ಅನ್ನಪಾನವಾಗಬೇಕಲ್ಲಾ ಎಂದು ಮಹಾಚಿಂತೆಯಿಂದ ಕಷ್ಟಪಡುತ್ತಿರಲು; ಆ ರಾಯನ ಸ್ತ್ರೀಯಾದ ದ್ರೌಪದಿಯು ಮಹಾಪತಿವ್ರತೆಯಾದಕಾರಣ ತನ್ನ ಪುರುಷನ ಕಷ್ಟಮಂ ಕಂಡು, ತನ್ನ ಪುರುಷನಾದ ಧರ್ಮರಾಯನ ಅನುಜ್ಞೆಯಿಂ ಕಾಶೀಕ್ಷೇತ್ರಕ್ಕೆ ಹೋಗಿ ನಿಷ್ಟೆಯಿಂದ ಸೂರ್ಯನನ್ನು ಹನ್ನೆರಡು ದಿವಸ ಆರಾಧಿಸಲು, ಆ ದ್ರೌಪದಿಯು ಮಹಾಪತಿವ್ರತೆಯಾದನಿಮಿ

ತ್ಯ ಸೂರ್ಯನು ಶೀಘ್ರದಲ್ಲಿ ಪ್ರಸನ್ನನಾಗಿ, ಸಟುಕಮುಚ್ಚಳಸಹಿತವಾದ ಅಕ್ಷಯ ಕನಕಪಾತ್ರವಂ ಕೊಟ್ಟು ದ್ರೌಪದಿಯೊಡನಿಂತೆಂದನು. ಎಲೈ ಪರಮಪತಿವ್ರತೆಯಾದ ದ್ರೌಪದಿಯೇ! ಈ ಅಕ್ಷಯಪಾತ್ರೆಯಿಂದ ಪಾಕವಾದ ಷಡ್ರಸೋಪೇತವಾದ ಭಕ್ಷ್ಯಭೋಜ್ಯಗಳಂ ಎಷ್ಟುಮಂದಿ ಅನ್ನಾರ್ಥಿಗಳಾಗಿಬಂದಾರೋ ಅಷ್ಟುಮಂದಿಗೂ ನೀನುಬಡಿಸಲು, ಅವರು ತೃಪ್ತರಾದಾರು. ಸಕಲರೂ ಭುಂಜಿಸಿದ ಬಳಿಕ ಆ ಪಾತ್ರೆ ಬರಿದಾದೀತು. ವಿಶ್ವೇಶ್ವರನ ದಕ್ಷಿಣಭಾಗದಲ್ಲಿರ್ದ ನಿನಗೆ ಪ್ರಸನ್ನನಾದ ತನ್ನನ್ನು ಆರಾಧಿಸಿದವಗೆ ಕ್ಷುದ್ಬಾಧೆ ಎಲ್ಲದಿರಲೀ. ಮೊದಲು ತನ್ನ ಮುಂದಿರ್ದ ನಿನ್ನ ದರ್ಶನವಂ ಮಾಡಿ ಪೂಜಿಸಲು, ಅವರ ದುಃಖಾಂಧಕಾರಂಗಳನ್ನು ತನ್ನ ಕಿರಣಗಳೆಂಬ ಪ್ರಭೆಯಿಂದ ಪರಿಹರಿಸುವೆನು. ಧರ್ಮವೇ ಸ್ವರೂಪವಾದಂಥಾ ಧರ್ಮರಾಯನ ರಾಣಿಯಾದ ಪತಿವ್ರತಾ ಶಿರೋಮಣಿಯಾದ ನಿನ್ನ ಪೂಜಿಸಿದವರ್ಗೆ ಪುರುಷರಿಗೆ ಬಂಧುವಿಯೋಗ, ಪತ್ನೀವಿಯೋಗ, ಪತಿವಿಯೋಗ, ಕ್ಷುದ್ಬಾಧೆ, ವ್ಯಾಧಿ, ಅಕಾಲಮರಣ, ಇವು ಇಲ್ಲದೆ ಇರಲೀ. ವರವಿತ್ತು ದ್ರೌಪದಿಯ ಬೀಳ್ಕೊಂಡು ಸೂರ್ಯನು ಅಂತರ್ಧಾನವಾಗಲು, ದ್ರೌಪದಿಯು ಧರ್ಮರಾಯನ ಸಮೀಪಕ್ಕೆ ಬಂದು, ಸೂರ್ಯನು ಕೊಟ್ಟ ಅಕ್ಷಯ ಕನಕ ಪಾತ್ರೆಯಂ ತೋರಿಸಿ, ಸಕಲರಿಗೂ ಅನ್ನಪಾನಂಗಳಿಂ ಸಂತುಷ್ಟಿ ನಡಿಸಿ ತನ್ನ ವನವಾಸವಂ ಪರಿಹರಿಸಿ ದಾಯಾದ್ಯರಾದರಿಪುಗಳಂ ಗೆಲ್ದು ಸುಖದಿಂದ ರಾಜ್ಯವಂಗೈಯ್ಯುತ್ತಿರಲು, ಕೇಳೈ ಅಗಸ್ತ್ಯನೇ? ಆ ಸೂರ್ಯನು ದ್ರುಪದಾದಿತ್ಯನೆಂಬ ಪೆಸರಿನಿಂದ ಪ್ರಸಿದ್ಧನಾಗಿ ಕಾಶೀವಾಸಿಗಳಿಗೆ ತನ್ನ ಸೇವಿಸಿದ ಪುಣ್ಯಪುರುಷರ ದುಃಖಾಂಧಕಾರಗಳಂ ಪರಿಹರಿಸಿಕೊಂಡು ಚಿಂತಿತಾರ್ಥಂಗಳಂ ಕೊಡುತ್ತಾ ಇಹನು. ಈ ದ್ರುಪದಾದಿತ್ಯನ ಮಹಿಮೆಯಂ ಕೇಳಿದವರ್ಗೆ ಸಕಲಪಾಪಪರಿಹರವೆಂದು ಕುಮಾರಸ್ವಾಮಿ ಅಗಸ್ತ್ಯಂಗೆ ದ್ರುಪದಾದಿತ್ಯನ ಮಹಿಮೆಯಂ ನಿರೂಪಿಸಿ, ಮತ್ತಿಂತೆಂದನು. ಕೇಳೈ ಅಗಸ್ತ್ಯನೇ! ಪಂಚನದತೀರ್ಥದಲ್ಲಿ ಮಯೂಖಾದಿತ್ಯನೆಂಬ ಸೂರ್ಯನು ಇದ್ದನು. ಆತನ ಮಹಿಮೆಯಂ ಪೇಳ್ವೆನು ಕೇಳು, ಪೂರ್ವದಲ್ಲಿ ಸೂರ್ಯನು ಗಭಸ್ತೀಶ್ವರನೆಂಬ ಲಿಂಗವನು ಮಂಗಳಗೌರೀ ಎಂಬ ಗೌರಿದೇವಿಯನ್ನು ಪ್ರತಿಷ್ಠೆಯಂ ಮಾಡಿಕೊಂಡು ದಿವ್ಯಲಕ್ಷವರ್ಷ ಉಗ್ರತಪವಂ ಮಾಡುತ್ತಿರಲು, ಆಸೂ

ರ್ಯನು ಸ್ವಭಾವದಿಂ ಪ್ರಸರಿಸಲೋಕದಿಂ [illegible]
ತಿ ಉಗ್ರತೇಜಸ್ಸಿಂ ಪ್ರಕಾಶಿಸುತ್ತಿರಲು, ಆತನ ಕಿರಣಂಗಳು ಪ್ರತ್ಯಕ್ಷವಾದ ಜ್ವಾ
ಲೆಯಿಂದ ಭೂಮಿ ಆಕಾಶಪರ್ಯಂತರಂ ದಿಕ್ಕುದಿಗಂತರಗಳ [illegible]
ಡುವ ಸಕಲದೇವತೆಗಳು, ಈ ತೀವ್ರವಾದ ಕಿರಣಜ್ವಾಲೆಗಳಿಂದ [illegible]
ಳು ಸೀದು ಅಗ್ನಿಯೊಳಗೆ ಬೀಳುವ [illegible]
ದೈತ್ಯರಾದವರು ಆಕಾಶಸಂಚಾರಿಗಳೆಂಬಿಟ್ಟರೆಲ್ಲರೂ [illegible]
ದಿಕ್ಕಿನಲ್ಲಿ ಕಿರಣಂಗಳ ಜ್ವಾಲೆಯೇ ಕಾಣ್ಪುತ್ತಿರ್ಪುದು [illegible]
ಪ್ಪಡಲಿಲ್ಲ. ಆ ಸೂರ್ಯನ ಕಿರಣಂಗಳು ತ್ರಿಪುರಾಗ್ನಿ ಜ್ವಾಲೆಯಂತಿರ್ದು [illegible]
ಳಯಕಾಲಾಗ್ನಿಯಂತೆ ಮೂರು ಲೋಕವು ಸುಡುತ್ತಿರಲು, ಸಮಸ್ತ ದೇವತೆ
ಗಳು ಬಂದುಗೂಡಿ ತಮ್ಮೊಳು ತಾವು ಚಿಂತಿಸಿದರು. ಈ ಸೂರ್ಯನು ಜಗತ್ತಿಗೆ
ಆತ್ಮಸ್ವರೂಪನಾದವನು. ಅಂಥಾ ಸೂರ್ಯನು [illegible] ಸಂತಾಪಪಡಿಸಲೆ
ಕಾಮಾರರು. ಈ ಸೂರ್ಯನು ಜಗಚ್ಚಕ್ಷು, ರಾತ್ರಿ [illegible]
ಕವನ್ನು ತನ್ನ ಉದಯವೆಂಬ ಸಂಜೀವನದಿಂದ [illegible]
ಕಿಸುವನು. ಕತ್ತಲೆಯೆಂಬ ಭಾಷೆಯಲ್ಲಿ ಬಿದ್ದ ಜೀವರನ್ನು ತನ್ನ ಕಿರಣ
ಳೆಂಬ ಕರಗಳಿಂದೆತ್ತುವನು. ಈತನ ಉದಯದಿಂ ಸಕಲಜೀವರೆಲ್ಲ [illegible]
ಈತ ಅಸ್ತಂಗತನಾಗೆ ಸಕಲವೂ ಅಸ್ತಂಗತವು. ತಮಗೆಲ್ಲ ಕಷ್ಟ [illegible]
ಯನೇ ಕಾರಣವೆಂದು ಚಿಂತಿಸಿ ಸಕಲದೇವತೆಗಳು [illegible]
ರಂಗೆ ಬಿನ್ನವಿಸಲು, ಸರ್ವಜ್ಞನಾದ ಪರಮೇಶ್ವರನು ಲೋಕಪೀಡೆಯನ್ನು [illegible]
ಲಪಡುತ್ತಿರಲು, ವೃಷಭವಾಹನನಾಗಿ [illegible]
ಲನಾಗಿ ಬಾಹ್ಯವ್ಯಾಪಾರವಂ ಮರೆದು ಉಗ್ರ [illegible] ಸೂರ್ಯನಂ
ಕಂಡು, ವಿಸ್ಮಯಂಬಟ್ಟು ಭಕ್ತವತ್ಸಲ [illegible]
ಇಂತೆಂದನು. ಎಲೈ ಸೂರ್ಯನೇ ನೀನು [illegible]
ತುಷ್ಟನಾಗಿ ಪ್ರಸನ್ನನಾದೆನು [illegible]
ದೇಹವಂ. ಮರೆಯದೆ ಕೇಳು [illegible]
ಲು, ಮಾತಕೇಳದೆ ಇರಲು [illegible] ತನ್ನ [illegible]
ವೃತನಾಯನಾಸ್ಯ ತನ್ನ ಹಸ್ತದಿಂ [illegible]

ಪ್ರಭಾತಕಾಲದಲ್ಲಿ ಸೂರ್ಯಕಿರಣದಿಂ ಅರಳಿದ ಕಮಲದಂತೆ ಕಣ್ದೆರೆದು ದೇ
ವದೇವ ಜಗತ್ಪತಿ, ಭರ್ಗ, ಭೀಮ, ಭುಜಗೇಂದ್ರಭೂಷಣ, ಭೂತನಾಥ, ಭವಭ
ಯಹರ, ಚಿಂತಿತಾರ್ಥಪ್ರದ, ಚಂದ್ರಚೂಡಾಮೃಡ, ಧೂರ್ಜಟಿಹರ, ತ್ರ್ಯಮು
ಕ್ಷ, ದಕ್ಷಹರ, ಕಂತುನಾಶನ, ಶಾಂತ, ಶಾಶ್ವತಶಿವಾಪತೆ, ಶಿವನೀಲಲೋಹಿತ,
ಇಷ್ಟಾರ್ಥಪ್ರದ, ಏಕಲೋಚನ, ದ್ವಿಲೋಚನ, ತ್ರಿಲೋಚನ, ವ್ಯೋಮ
ಕೇಶ, ಭವಪಾಶವಿಮೋಚನ, ವಾಮದೇವ, ಶಿತಿಕಂಠ, ಶೂಲಭೃತ್, ತ್ರಿಶೂಲ
ಧರ, ಚಂದ್ರಶೇಖರ, ಫಣಿಭೂಷಣ, ಕಾಮನಾಶನ, ಪಶುಪತಿ, ತ್ರಿಯಂಬಕ,
ತ್ರಿಪುರಸೂದನ, ಈಶ್ವರ, ತ್ರಿನಯನ, ಕೃಪಾಮಯ, ಕಾಲಕೂಟಧರ,
ಅಂತಕಾಂತಕ, ಶರ್ವರೀಶಧರ, ಶರ್ವ, ಸರ್ವಜ್ಞ, ಸರ್ವಗ, ಸರ್ವಮಾರ್ಗ, ಸುಖದ,
ಅಪವರ್ಗಪ್ರದ, ಅಂಧಕಾರಿ, ತಾರಕಾರಿಜನಕ, ಜಲಂಧರರಿಪು, ಅಘಮ
ರ್ಷಣ, ಶಂಕರ, ಉಗ್ರ, ಗಿರಿಜಾಪತಿ, ವಿಭುವಿಶ್ವನಾಥ, ವಿಧಿ, ವಿಷ್ಣುಸಂಸ್ತುತ,
ವೇದವೇದ್ಯ, ವಿದಿತಾಖಿಲೇಂಗಿತಜ್ಞ, ವಿಶ್ವರೂಪ, ಪರಾತ್ಪರ, ರೂಪವರ್ಜಿತ,
ಬ್ರಹ್ಮಹರ, ಅಮೃತಪ್ರದ, ವಾಙ್ಮನೋವಿಷಯದೂರ, ದೂರಗ, ಯೋಗಿಹೃ
ದಯಾಂತನಿವಾಸಿ, ಎಂದು ಪರಮೇಶ್ವರನನ್ನು ಸ್ತುತಿಗೈದು ಈಶ್ವರನ ವಾ
ಮಾಂಗದಲ್ಲಿರ್ದ ಗೌರಿದೇವಿಯರಂ ನೋಡಿ, ಸಾಷ್ಟಾಂಗದಿಂ ನಮಸ್ಕರಿಸಿ,
ಇಂತೆಂದು ಸ್ತುತಿಸಿದನು. ಅದೆಂತೆನೆ— ಎಲೆ, ಮಹಾದೇವಪ್ರಿಯೆ! ಸಕಲ
ಮಂಗಳ ಜನ್ಮಭೂಮಿ, ಸಕಲ ಕಿಲ್ಬಿಷಕಲುಷಹರೆ, ಸಕಲ ದಾನವಸಂಹಾರಿಣಿ
ಯಾದ ನೀನು ಲೋಕವಂ ರಕ್ಷಿಸು; ವಿಶ್ವೇಶ್ವರಿಯಾದ ನೀನು ಉತ್ಪತ್ತಿ
ಸ್ಥಿತಿ ಲಯಂಗಳಿಗೆ ಕರ್ತಳಾದವಳು, ಎಲೆ ದೇವಿ! ನಿನ್ನ ಪಾದಕಮಲರೇಣು
ವಿನಿಂದ ಶಿವನು ಕೆಂಬಣ್ಣವುಳ್ಳ ಹಣೆಯುಳ್ಳವನಾದನು. ಶಿರಸ್ಸಿನಲ್ಲಿ ಚಂದ್ರನ
ಧರಿಸಿದವನು, ನಿನ್ನ ನಾಮಸ್ಮರಣೆಯೆಂಬ ಪುಣ್ಯನದಿಯು, ಪಾಪಂಗಳೆಂಬ ವೃಕ್ಷಂ
ಗಳನ್ನು ಸಹಮೂಲವಾಗಿ ಕೆಡಹುವದು, ಎಲೆ ಭವಾನೀತಾಯೆ! ಸಂಸಾರಭ
ಯವನ್ನು ಪರಿಹರಿಸುವದಕ್ಕೆ ನೀನಲ್ಲದೆ ಶರಣ್ಯರಿಲ್ಲ; ಇದ್ದರೂ ಅವರು
ಕೃಪಾಕಟಾಕ್ಷದಿಂದಲೇ ಶರಣ್ಯರಾದವರು. ಈ ಕಾಶೀಕ್ಷೇತ್ರದಲ್ಲಿ ಸ್ಥಿತಿ
ಕಾರಣವಾದ ನಿನ್ನನ್ನು ಆರು ಸ್ಮರಿಸುವರೋ ಅವರು ಮೋಕ್ಷಕ್ಕೆ ಪಾತ್ರ
ರೆಂದು ಪರಮೇಶ್ವರನು ಸ್ಮರಿಸುವನು. ನಿಮ್ಮ ನಾಮಂಗಳಂ ಜಪಿಸಿದ

ರಿಗೆ ಸಕಲವೂ ಹಸ್ತಗತವಾಗಿಹುದು; ಮಂಗಳಗೌರಿ ತಾಯಿಯೆಂದು ನಿತ್ಯವೂ ನಿನ್ನ ನಾಮವ ಸ್ಮರಿಸಿದವರ್ಗೆ ಅವರ ಮನೆಯಲ್ಲಿ ಅಣಿಮಾದಿ ಅಷ್ಟಮಹಾ ಸಿದ್ಧಿಗಳು ಇಹವು, ನೀನು ವೇದಮಾತೆ, ಪ್ರಣವಸ್ವರೂಪೆ, ಗಾಯಿತ್ರಿ ವ್ಯಾಹೃತಿ, ದೇವಪಿತೃಗಳಿಗೆ ತೃಪ್ತಿಯನೀವ ಸ್ವಧಾಸ್ವಾಹಾದೇವಿ, ನೀನು ಪರ ಮೇಶ್ವರನಲ್ಲಿ ಗೌರಿಯಾಗಿಯೂ, ಬ್ರಹ್ಮನಲ್ಲಿ ಸರಸ್ವತಿಯಾಗಿಯೂ, ಶ್ರೀ ಮಹಾವಿಷ್ಣುವಿನಲ್ಲಿ ಶ್ರೀ ಮಹಾಲಕ್ಷ್ಮಿಯಾಗಿಯೂ, ಕಾಶಿಯಲ್ಲಿ ಮೋಕ್ಷಲ ಕ್ಷ್ಮಿಯೆನಿಸಿ ಸಕಲವೂ ನೀನೆ ಆಗಿ ಇದ್ದೀಯೇ. „ಸರ್ವಮಂಗಳಮಾಂಗಲ್ಯೆ ಶಿವೇಸರ್ವಾರ್ಥಸಾಧಕೇ "ಶರಣ್ಯೆತ್ರ್ಯಂಬಕೇದೇವಿ ನಾರಾಯಣಿನಮೋಸ್ತುತೇ" ಎಲೆ ಮಂಗಳಗೌರೀತಾಯೆ! ನಿನ್ನ ಪಾದಪದ್ಮಂಗಳಿಗೆ ನಮಸ್ಕಾರ, ಇಂತೆಂದು ಗೌರಿದೇವಿಯನ್ನೂ ಪರಮೇಶ್ವರನನ್ನೂ ಸ್ತುತಿಸಿ ನಮಸ್ಕಾರಂಗಳಂ ಮಾಡು ತ್ತಿರಲು, ಪರಮೇಶ್ವರನು ಸೂರ್ಯ ಮಾಡಿದ ಸ್ತುತಿಗಳಿಂ ಸಂತುಷ್ಟನಾಗಿ ಇಂತೆಂದನು. ಎಲೆ ಸೂರ್ಯನೆ! ಏಳೇಳು, ನಿನ್ನ ಭಕ್ತಿಗೆ ಮೆಚ್ಚಿ ಪ್ರಸನ್ನನಾ ದೆನು. ನೀನು ನನ್ನ ನೇತ್ರರೂಪವಾಗಿ ಸಕಲ ಕರ್ಮಸಾಕ್ಷಿಯಾಗಿ ಇದ್ದೀಯಮ ಷ್ಟೆ, ತನ್ನ ಎರಡನೇ ರೂಪವ ತಾಳಿದ ನೀನು ಸರ್ವವ್ಯಾಪಿಯಾಗಿ ಸಕಲಜೀ ವರದುಃಖವನ್ನು ಪರಿಹರಿಸು. ಚತುಃಷಷ್ಟಿ ನಾಮಂಗಳಾದ ನೀನು ಮಾಡಿದ ಸ್ತೋತ್ರವನ್ನು ಆವನಾನೊಬ್ಬ ಪಠಿಸುವನೋ ಅವನು ತನ್ನನಿಜಭಕ್ತನಹನು ನೀನು ಸ್ತುತಿಸಿದ ಈ ಮಂಗಳಗೌರೀಸ್ತೋತ್ರವನ್ನು ನಿತ್ಯವೂ ಪಠಿಸಲು, ಇಹದಲ್ಲಿ ಪುತ್ರ ಮಿತ್ರ ಕಳತ್ರ ಧನಧಾನ್ಯಗಳಿಂದ ಐಶ್ವರ್ಯವನನುಭವಿಸಿ ಅಂತ್ಯದಲ್ಲಿ ಪ್ರಸಿದ್ಧಜಾತೀತವಾದ ಮೋಕ್ಷವನ್ನೈದುವರು. ಕೆಂದಾವರೆ, ಕೆಂಡ ಸಂಪಿಗೆಪುಷ್ಪಂಗಳಂತೆ ಪ್ರಕಾಶವಾದಕಿರಣಂಗಳಿಂದ ನೀನುಪೂಜಿಸಿದಲಿಂಗವೂ ಗಭಸ್ತೀಶ್ವರನೆಂದು ಪ್ರಸಿದ್ಧಿಯಾಗಲೀ. ಈ ಲಿಂಗವನ್ನು ರುದ್ರಸೂಕ್ತಂಗಳಿಂ ಅಭಿಷೇಕ, ಈ ನಾಮಗಳಿಂ ಪೂಜೆಯಂ ಮಾಡಿದವರ್ಗೆ ಸಕಲಾಭೀಷ್ಟ ಸಿದ್ಧಿಯಾ ಗಲೀ. ಪಂಚಗಂಗಾ ತೀರ್ಥದಲ್ಲಿ ಸ್ನಾನವಂ ಮಾಡಿ, ರಾತ್ರಿಜಾಗರಣವಂ ಮಾಡಿ ಮರುದಿವಸ ಮಹಾಪೂಜೆಯಂಮಾಡಿ, ಹನ್ನೆರಡುಮಂದಿತೊಡಗೂಸುಕನ್ಯೆಯ ರಿಗೆ ವಸ್ತ್ರಾಭರಣ ಗಂಧಪುಷ್ಪಂಗಳಿಂದ ಅಲಂಕಾರವಂಮಾಡಿ, ಮೃಷ್ಟಾನ್ನ ದಿಂ ತೃಪ್ತಿಪಡಿಸಿ, ತಿಲಾಜ್ಯಗಳಿಂ ನೂರೆಂಟು ಆಹುತಿಯಂಮಾಡಿ ಕೆಪ್ರೀತ್ರಿಯ

ತ್ತಾಗ್ರಿ ಕಸ್ತುರಿಯಿಂದ ಪೂಜಿಸಿ ನಾನಾವಿಧ ಭಕ್ಷ್ಯ ಭೋಜ್ಯ ಬ್ರಾಹ್ಮಣನಿಗೆ ಒಂದು ಹಸುವನ್ನು ಒಂದು ವಸ್ತ್ರ ಸುವರ್ಣ ದಕ್ಷಿಣೆ ಸಹಿತವಾಗಿ ಕೊಟ್ಟು ಬ್ರಾಹ್ಮಣ ದಂಪತಿಗಳನ್ನು ಅಲಂಕರಿಸಿ ಭೋಜನವನ್ನು ಮಾಡಿಸಿ ಗಭಸ್ತೀಶ್ವರ ಮುಂದೆ ... ತಿಯುದ ಹೆಸರಿನಲ್ಲಿ ಚಿನ್ನದ ಲಿಂಗವನ್ನಾಗಲಿ ... ಪ್ರತಿಷ್ಠೆಯನ್ನು ಮಾಡಿ ಗಭಸ್ತೀಶ್ವರ ಮಂಗಳ ಗೌರಿಯರ ಪ್ರೀತ್ಯರ್ಥವಾಗಿ ... ಯಥಾಶಕ್ತಿ ದಕ್ಷಿಣೆಯನಿತ್ತು ಪ್ರತಿವ ರ್ಷವೂ ... ಮಂಗಳಗೌರೀವ್ರತವನ್ನು ಪು ರುಷನಾದವನು ಮಾಡಿದರೆ ದಾರಿದ್ರ್ಯವಿಲ್ಲ ವ್ಯಾಧಿಯಿಲ್ಲ ಸಂತಾನಹಾನಿಯಿಲ್ಲ ಕು ಲನಾಶವಿಲ್ಲ ಸ್ತ್ರೀಯ ವಿಯೋಗವಿಲ್ಲ ಸ್ತ್ರೀಯರು ಮಾಡಲು ವೈಧವ್ಯ ವಿಲ್ಲ ಭಾಗ್ಯವತಿಯರಾಗುವರು ಸಕಲ ಪಾತಕ ... ಕುಲಾಭಿವೃದ್ಧಿಯಾಗುವ ದಲ್ಲದೆ ಬಂಜೆಯಾದವಳು ಪುತ್ರವತಿಯು ಸುಪುತ್ರಸಂಪನ್ನೆಯು ಕುರೂಪಿಗಳು ವಾ ಡಲ್ಲಿ ಕುರೂಪಿಗಳಾದವರು ... ಆದವಳು ಪೂಜಿಸಲು ಸುರೂಪಿಯಾದ ಬಳಿಕ ಪತಿ ... ಮಾಡಲು ಸುರೂಪಿಯಾದ ಸ್ತ್ರೀ ಯೊಡನೆ ... ಲೋಕದಲ್ಲಿ ... ವ್ರತಗಳು ಅನೇಕ ಉಂಟಾದರೂ ಈ ವ್ರತಕ್ಕೆ ಸಮಾನವಾದುದು ... ತದಿಗೆಯಲ್ಲಿ ಗಭಸ್ತೀಶ್ವರ ಮಂಗಳಗೌ ರಿಯರ ಯಾತ್ರೆಯನ್ನು ಮಾಡಲು ನಿರ್ವಿಘ್ನದಿಂ ಕಾಶೀವಾಸ ದೊರಕೊಂಬುದು.

ಮತ್ತೆ ಸೂರ್ಯನ ... ನಿನ್ನನ್ನು ನೋಡುವಾಗ ಬಿಸಿಯ ಕಿರಣಂಗಳೇ ಕಾಣಲ್ಪ ಟ್ಟುವು ... ಶರೀರ ... ದ್ದರಿಂದ ಮಯೂಖಾದಿತ್ಯನೆಂದು ಪ್ರ ಸಿದ್ಧನಾಗಲಿ ಆದಿತ್ಯವಾರ ನಿನ್ನ ಪೂಜೆ ನಮಸ್ಕಾರಗಳಂ ಮಾಡಲು ದರಿದ್ರ ವ್ಯಾಧಿಗಳು ಇಲ್ಲದೆ ಇರಲಿ ಎಂದು ಸರ್ವೇಶ್ವರನು ಸೂರ್ಯಂಗೆ ವರವನಿತ್ತು ಗಭಸ್ತೀಶ್ವರನಲ್ಲಿ ಐಕ್ಯವಾದನು. ಈ ವೃಷಭಾದಿತ್ಯ ಮಯೂಖಾದಿತ್ಯರ ಮ ಹಿಮೆಯನ್ನು ಹೇಳ್ದ ಅಧ್ಯಾಯವನ್ನು ಭಕ್ತಿಯಿಂದ ಕೇಳಲು ಸಕಲ ಪಾಪವೂ ಪರಿ ಹರವಹುದೆಂದು ಕುಮಾರಸ್ವಾಮಿಯು ಅಗಸ್ತ್ಯಂಗೆ ನಿರೂಪಿಸಿದ ಅರ್ಥವನ್ನು ವ್ಯಾಸ ರು ಶಿಷ್ಯರಿಗೆ ... ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಹೇಳ್ದ ನೆಂಬಲ್ಲಿಗೆ ಅಧ್ಯಾಯಾರ್ಥ.

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮ ಹೈಶೂರ ಸಂಸ್ಥಾನಾಧಿಪ ಶ್ರೀ ಕೃಷ್ಣರಾಜ ಒಡೆಯರವರು ಲೋಕೋಪಕಾರಾ

ರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ದ್ರುಪದಾದಿತ್ಯ ಮಯೂಖಾದಿತ್ಯರ ಮಹಿಮೆಯೆಂಬ ನಾಲ್ವತ್ತೊಂಭತ್ತನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ. ಶ್ರೀ

ನಲವತ್ತೊಂಬತ್ತನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ಐವತ್ತನೇ ಅಧ್ಯಾಯ.

:0:

ಖಗೋಲ್ಕಾದಿತ್ಯ ವಿನಿತಾದಿತ್ಯ ಗರುಡೇಶ್ವರರ ಮಹಿಮೆ.

ಅನಂತರದಲ್ಲಿ ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು.— ಕೇಳೈ ಅಗಸ್ತ್ಯನೆ! ಕಾಶೀಕ್ಷೇತ್ರದಲ್ಲಿ ತ್ರಿವಿಷ್ಟಪೇಶ್ವರನ ಉತ್ತರದಲ್ಲಿ ಖಗೋಲ್ಕನೆಂಬ ಸೂರ್ಯನು ಇರುವನು ಆತನ ಉತ್ಪತ್ತಿಯ ಹೇಳ್ವೆನು ಕೇಳು. ಪೂರ್ವದಲ್ಲಿ ಬ್ರಹ್ಮನ ಮಾನಸಪುತ್ರನಾದ ಮರೀಚಿಯೆಂಬ ಋಷಿಗೆ ಕಶ್ಯಪನೆಂಬ ಕುಮಾರನುಂಟು ಆ ಕಶ್ಯಪಋಷಿಗೆ ದಕ್ಷಬ್ರಹ್ಮನ ಕುಮಾರತಿಯರೊಳಗೆ ಹದಿಮೂರುಮಂದಿಯು ವಿವಾಹವಾದನು, ಅವರೊಳು ಕದ್ರುವಿನುತೆಯರೆಂಬ ಸ್ತ್ರೀಯರಿಬ್ಬರೂ ಒಂದಾನೊಂದು ದಿನ ತಮ್ಮೊಳು ತಾವು ಜೂಜನಾಡುವರಾಗಿ ವಿನತೆಯೊಡನೆ ಕದ್ರುವಿಂತೆಂದಳು. ಎಲೆ ವಿನತೆಯೇ! ನೀನು ಆಕಾಶದಲ್ಲಿ ಅತಿಶೀಘ್ರಗತಿ ಉಂಟಾಗುವದಹುದಲ್ಲ ಸೂರ್ಯನ ರಥಕ್ಕೆ ಕಟ್ಟಿರುವ ಕುದುರೆಗಳು ಕಪ್ಪೋ ಬಿಳಿದೋ ನಾನಾವರ್ಣವೋ ಹೇಳು, ಇದಕ್ಕೆ ನಿನ್ನ ಮನಸ್ಸಿಗೆ ಜೂಜಪಣಕ್ಕೆಯೆನಲು ಕದ್ರುವಿನೊಡನೆ ವಿನತೆ ಇಂತೆಂದಳು — ಎಲೆ ಕದ್ರು ನಿನಗೂ ನನಗೂ ಜೂಜೇನು? ನಿನ್ನನ್ನು ನಾನು ಗೆದ್ದರೆ ಎನಗೇನು ಸಂತೋಷ, ನನ್ನನ್ನು ನೀನು ಗೆದ್ದರೆ ನಿನಗೇನು ಸಂತೋಷ, ಸ್ನೇಹವ ಬಯಸುವವರು ಜೂಜನಾಡಲಾಗದು. ಒಬ್ಬರು ಗೆದ್ದರೆ ಒಬ್ಬರಿಗೆ ಕೋಪಹುಟ್ಟುವದು. ಸುಮ್ಮನೆ ವಿನೋದಾರ್ಥವಾಗಿ ಆಡುವಾಯೆನಲು, ವಿನತೆಯು ಕದ್ರುವಿಗಿಂತೆಂದ

ಳು.— ಎಲೌ ವಿನತೆ! ಇದು ವಿನೋದಾರ್ಥವಲ್ಲ, ಮುಂದೆ ಕಾರಣವುಂಟು ಜೂಜನಾಡುವ ಈ ಜೂಜನಾರು ಸೋತರೂ ಗೆದ್ದವಳ ಮನೆಯಲ್ಲಿ ಸೋತವಳು ದಾಸಿಯಾಗಿ ಇರಬೇಕು. ಈ ಪಂಥಕ್ಕೆ ತಪ್ಪಲಾಗದು, ತಪ್ಪಿದವರಿಗೆ ನರಕವು ಇದಕ್ಕೆ ಈ ಸಖಿಯರೆಲ್ಲರೂ ಸಾಕ್ಷಿಯೆನಲು ವಿನತೆ ಹಾಗೆ ಆಗಲೀ ಎಂದು ತಮ್ಮೊಳು ತಾವು ಕೈಹೊಯ್ದು ಕುದುರೆಯ ವರ್ಣವಂ ಪೇಳು ಎನಲು ಕದ್ರುವಿಂತೆಂದಳು,— ಎಲೆ ವಿನತೆ, ಸೂರ್ಯನ ಕುದುರೆ ಬೂದು ಎನಲು ವಿನತೆ ನಕ್ಕು ಸೂರ್ಯನ ಕುದುರೆ ಬೂದವರ್ಣ ಉಂಟೆ? ಬಿಳೀ ಶ್ವೇತವರ್ಣವೆನಲು ಹಾಗಾದರೆ ನಾವು ಶೀಘ್ರದಿಂ ಪೋಗಿ ನೋಡಬೇಕು ಎಂದು ತಮ್ಮ ತಮ್ಮ ಮನೆಗಳಿಗೆ ಪೋದರು. ಅನಂತರದಲ್ಲಿ ಕದ್ರುವು ತನ್ನ ಮಕ್ಕಳಾದ ಕೆಲವು ಸರ್ಪಂಗಳಂ ಕರೆದು ಇಂತೆಂದಳು.— ಎಲೆ ಮಕ್ಕಳಿರಾ! ದೇವಾಸುರರು ಮಂದರಪರ್ವತದಿಂದ ಕ್ಷೀರಸಮುದ್ರವ ಕಡೆಯಲು, ಅಲ್ಲಿ ಪುಟ್ಟಿದ ಕುದುರೆಗಳೂ ಕ್ಷೀರವರ್ಣವಾಗಿ ಇರುವುವು. ನಾನು ವಿನತೆ ಕೂಡೆ ಜೂಜನಾಡುತ್ತಾ ಆ ಕುದುರೆಗಳು ಬೂದವರ್ಣವೆಂದು ನುಡಿದೆನು, ತಪ್ಪು ಮಾತು ಉಂಟಾಗುತ್ತಾ ಇದ್ದೀತು ಆದಕಾರಣ ನನ್ನ ಪಂಥಾ ಗೆಲುವಂತೆಯಲ್ಲಿ ನೀವು ಶೀಘ್ರದಿಂದ ಹೋಗಿ ಮಾಯದಲ್ಲಿ ಆ ಕುದುರೆಗಳಂ ಕಟ್ಟಿ ಅವರ ಬಾಲವನ್ನು ಸ್ಕಂಧದ ಸ್ನಿಗ್ಧಪ್ರದೇಶಂಗಳನ್ನು ನಿಮ್ಮ ವಿಷಜ್ವಾಲೆಯಿಂದ ವ್ಯಾಪಿಸಿ ಚಿತ್ರವರ್ಣವಾದ ಬೂದುವ ಮಾಳ್ಪುದೆಂದು ಕದ್ರುವು ನುಡಿಯಲು ಇವರು ಜೂಜನಾಡಿದ ವೃತ್ತಾಂತವ ಕೇಳಿ, ಆ ಸರ್ಪಂಗಳು ತಮ್ಮೊಳು ತಾವು ಆಲೋಚಿಸಿಕೊಂಡು ಇದು ಅಕಾರ್ಯ, ಉಚಿತವಲ್ಲವೆಂದು ತಾಯಿಗಿಂತೆಂದರು ವಸಕ್ತೆ ತಾಯೆ! ನೀನು ಕರೆಸಲಾಗಿ ಆಡುವ ಆಟಂಗಳಂ ಬಿಟ್ಟು ಸಂತೋಷದಿಂದ ಮೃಷ್ಟಾನ್ನವ ಉಣಲಿಕ್ಕೀಯಳೆಂದು ಬಂದೆವು, ಮೃಷ್ಟಾನ್ನವಂತಿರಲಿ, ವಿಷಕ್ಕಿಂತಾ ಕಹಿಯಾದ್ದಾಗಿ ಮಣಿಮಂತ್ರೌಷಧಿಗಳಿಂದ ಮಾಣದಂಥಾ ಕಠೋರವಾಕ್ಯವಂ ಪೇಳುತ್ತಾ ಇದ್ದೀ, ಲೋಕದಲ್ಲಿ ತಂದೆತಾಯಿಗಳು ಏನಹೇಳಿದರು ಕೇಳುವದು ಮಕ್ಕಳಿಗೆ ಧರ್ಮ, ತಂದೆತಾಯಿಗಳ ಮಾತ ಕೇಳದವರ ಮಕ್ಕಳು ಇಹಪರತ್ರದಲ್ಲಿ ತಿರಸ್ಕಾರಪಟ್ಟು ಶೀಘ್ರದಲ್ಲಿ ಲಯವಹರು. ಆದರೆ ನೀನು ನಮಗೆ ತಾಯಿ ಆಕೆಯೂ ತಾಯಿ, ಆದರಿಂದ ನಿಮ್ಮ ಇಬ್ಬರಿಗೂ ಭೇದಬುದ್ಧಿಯು ನಸೆಯು.

ಬಾರವು, ಅದರಿಂದ ನಾವು ಈ ಕಾರ್ಯಕ್ಕೆ ಹೋಗಲಾರೆವೂ ಎಂಬ ಮಕ್ಕಳ ಮಾತಂ ಕೇಳಿ ಆ ಮಕ್ಕಳಂ ನೋಡಿ, ಕದ್ರುವು ಕೋಪಿಸಿಕೊಂಡು ಎಲೆ ಮಕ್ಕಳಿರಾ! ನನ್ನ ಮಾತು ವಿಚಾರಿಸದಕಾರಣ ನಿಮ್ಮ ಸಂತಾನಂಗಳಂ ನೀವೇ ಭಕ್ಷಿಸಿ, ನೀವು ವಿನತೆಯ ಮಗನಾದ ಗರುಡನಿಂದ ಹತವಾಗಿ ಹೋಗಿ ಎಂದು ಶಪಿಸಲು, ಸರ್ಪಂಗಳು ತಾಯಿಯ ಶಾಪದಿಂ ಕಂಗೆಟ್ಟು ಗರುಡನ ಭಯಕ್ಕಂಜಿ ಪಾತಾಳಲೋಕಕ್ಕೆ ಹೋದರು. ಮತ್ತೆ ಕೆಲವು ಕ್ರೂರಸರ್ಪಂಗಳಂ ಕರೆದು ನಿಮ್ಮ ಮಾತ ಹೇಳೀ ಎನಲು ತಾಯಿಯ ಕೋಪಾಗ್ನಿಯಂ ಕಂಡು ಭಯಪಟ್ಟು ಸೂರ್ಯನ ಕಿರಣಂಗಳು ಸೋಂಕದಂತೆ ಸೂರ್ಯನ ಆರಾಧಿಸಿ, ಸೂರ್ಯನಿಂದ ವರವಂ ಪಡೆದು ಹೋಗಿ ಸೂರ್ಯನ ರಥಕ್ಕೆ ಕಟ್ಟಿರ್ದ ಕುದುರೆಗಳ ಶರೀರವಂ ತಮ್ಮ ವಿಷಾಗ್ನಿ ಧೂಮಂಗಳಿಂದ ದಶವರ್ಣವಂ ಮಾಡಿ, ತಾಯಿಗೆ ಬಂದು ಪೇಳಲು ಅನಂತರವಲ್ಲಿ ಕದ್ರುವು ವಿನತೆಯಂ ಕರೆದು ನಾವು ಸೂರ್ಯನ ಕುದುರೆಗಳ ನೋಡುವ ಬಾರೆನಲು ವಿನತೆ ಹಾಗಾಗಲೀ ಎಂದು ತಾನೂ ಪೋಕರದವನವಂ ಬಲ್ಲವಳಾದಕಾರಣ ಕದ್ರುವನು ತನ್ನ ಬೆನ್ನಿನ ಮೇಲೆ ಕುಳ್ಳಿರಿಸಿಕೊಂಡು ಆಕಾಶಮಾರ್ಗಕ್ಕೆ ಹೋಗಲು, ಅಲ್ಲಿ ಪ್ರಳಯಕಾಲಾಗ್ನಿಯಂತೆ ತೀವ್ರಸೂರ್ಯನ ಕಿರಣಂಗಳಿಂದ ನೊಂದು ಕದ್ರು ವಿನತೆಗಿಂತೆಂದಳು.—ಎಲೆ ವಿನತೆ! ನಿನ್ನ ನಂಬಿದೆನು ಸೂರ್ಯಕಿರಣಂಗಳಿಂದ ತನ್ನ ಶರೀರವು ಅತ್ಯಂತವಾಗಿ ತಪಿಸುತ್ತಾ ಇರ್ದಪುದು, ನೀನು ಪತಂಗಿ. ಈ ಸೂರ್ಯನೂ ಪತಂಗನು ಅದುಕಾರಣ ನಿನಗೆ ಸೂರ್ಯನ ಕಿರಣಂಗಳ ಭಯವಿಲ್ಲಾ ನನಗೆ ಮಹಾಭಯವಾಗುತ್ತಾ ಇರ್ದಪುದು ನೀನು ಆಕಾಶಮಾರ್ಗವಂ ಬಿಟ್ಟು ಮನೆಗೆ ನಡೆ, ನಿನ್ನ ದಾಸಿಯಾದೆನು, ಉತ್ತಿಷ್ಠವಂ ಭಕ್ಷಿಸೇನು. ತನ್ನ ಜೀವವುಳ್ಳಷ್ಟು ಕಾಲವೂ ನಿನ್ನ ಪಾದೋದಕವ ತೆಗದುಕೊಂಡೇನು ಸೂರ್ಯಕಿರಣಂಗಳು ತನ್ನ ಮೇಲೆ ಕೊಳ್ಳಿಗಳಾಗಿ ಬೀಳುತ್ತಾ ಇದ್ದಾವು. ಎಂದು ಸೂರ್ಯಕಿರಣಂಗಳ ಜ್ವಾಲೆಯಂ ತಾಳಲಾರದೆ ಭ್ರಮೆಯಿಂದ ಖಗೋಲಕ್ಕೆ ಎಂದು ನುಡಿಯುತ್ತಾ ಗುರು ಗುರುಧ್ವನಿಯಿಂದ ಮೂರ್ಛಿತೆಯಾದ ಕದ್ರುವನ್ನು ವಿನತೆ ತನ್ನ ಪಕ್ಷಂಗಳಿಂದ ಮರೆ ಮಾಡಿಕೊಂಡು ವಿನತೆ ಸೂರ್ಯನ ಸ್ತುತಿಸಲು, ಸೂರ್ಯನು ತನ್ನ ಸಾರಥಿಯಾದ ಅರುಣನ ತಾಯಿಯೆಂದು ತಕ್ಷಣವೇ ಸೂರ್ಯನು ಮೆಚ್ಚಿ, ಶಾಂತವಾದ ಕಿರಣಂಗಳುಳ್ಳವನಾಗಿ

೮೮. ಅನಂತರದಲ್ಲಿ ವಿನತೆ ಕದ್ರು ಸಹ ಸೂರ್ಯನ ಸಮೀಪಕ್ಕೆ ಹೋಗಿ, ಅಲ್ಲಿ ಚಿತ್ರವರ್ಣಗಳಾದ ಬೂದುಕುದುರೆಗಳಂ ಕಂಡು, ವಿನತೆ ಕದ್ರುವಿಗಿಂತೆಂದಳು. ಎಲೌ ಕದ್ರು! ನೀನುಹೇಳಿದಹಾಗೆ ಚಂದ್ರವರ್ಣಗಳಾದ ಕುದುರೆಗಳು ಚಿತ್ರವರ್ಣಗಳಾದ ಕುದುರೆಗಳಾಗಿ ತೋರುತ್ತಾ ಇದೆ. ವಿಧಿಬಲವಂತನಲ್ಲವೆ? ಅಧರ್ಮವಂ ಧರ್ಮವಮಾಡುವನು. ಧರ್ಮವಂ ಅಧರ್ಮವಮಾಡುವನು ಈಗ ಇದ್ದ ಸ್ಥಿತಿ ಸತ್ಯವು ತಾನು ಸೋತೆನು ಎಂದು ತಿರುಗಿ ಮನೆಗೆ ಬಂದು ಕದ್ರುವಿನ ಮನೆಯಲ್ಲಿ ದಾಸಿಯಾಗಿ ಗೌಡಿಯ ಚಾಕರಿಯಂ ಮಾಡಿಕೊಂಡು ವಿನತೆ ಬಹುಕಾಲವಿದ್ದಳು. ಆ ಕಾರಣ ಕದ್ರು, ಸೂರ್ಯನ ಕಿರಣಗಳಿಂದ ನೊಂದು ತಾಳಲಾರದೆ ಖಗೋಲಕ್ಕೆ ಎಂದು ನುಡಿದ ಕಾರಣ ಅಂದು ಮೊದಲಾಗಿ ಸೂರ್ಯನು ಖಗೋಲಕ್ಕಾದಿತ್ಯನೆನಿಸಿಕೊಂಡನು. ಹೀಗೆಂದು ಅಗಸ್ತ್ಯಂಗೆ ಕುಮಾರಸ್ವಾಮಿ ಇಂತೆಂದನು. ಕೇಳೈ ಅಗಸ್ತ್ಯನೇ! ಕದ್ರುವಿನ ಮನೆಯಲ್ಲಿ ವಿನತೆ ದಾಸಿತ್ವವಂ ಮಾಡಿಕೊಂಡು ಇರ್ದಳಷ್ಟೆ, ಬಂದಾನೊಂದು ದಿನ ವಿನತೆ ಮಹಾ ಬಳಲಿ ಮುಖಕಾಂತಿಗುಂದಿ ಮಲಿನವಸ್ತ್ರವಂ ಧರಿಸಿ. ಮಹಾದೀನಳಾಗಿ ಸೊರಗುತ್ತಾ ಕಣ್ಣೀರಂ ತಂದುಕೊಂಡು ದುಃಖಪಡುವ ತಾಯನ್ನು ಗರುಡನು ಕಂಡು, ಮಹಾ ಆಶ್ಚರ್ಯಪಟ್ಟು ತಾಯಿಯೊಡನೆ ಇಂತೆಂದನು. ಎಲೈ ತಾಯೆ! ನೀನು ದಿನದಿನವೂ ಪ್ರಾತಃಕಾಲದಲ್ಲಿ ಹೋಗಿ ಸಾಯಂಕಾಲಕ್ಕೆ ಬರುತ್ತಾ ಇದ್ದೀ, ಎಲ್ಲಿಯಾದರೂ ಗಂಡ ಬಲ್ಲದವಳಂತೆ, ನಪುಂಸಕನಾದ ಮಗನ ಹಡೆದವಳಂತೆ ದುಃಖಪಡುತ್ತಾ ಇದ್ದೀಯೆ. ಈ ಬ್ರಹ್ಮಾಂಡವನ್ನು ಪ್ರಟ್ಟ ಚೆಂಡನಾಡುವಂತೆ ಆಡುವ ಸಾಮರ್ಥ್ಯ ಉಳ್ಳ ನಾನು ಮಗನಾಗಿರ್ದು ನೀನು ದುಃಖಪಡುವ ಕಾರಣವೇನು? ಲೋಕಕ್ಕೆ ಸಮರ್ಥನಾದಂಥಾ ಕಶ್ಯಪಬ್ರಹ್ಮರ ಸ್ತ್ರೀಯಾಗಿರುವಳಾಗಿಯೂ, ಸರ್ವಮಂಗಳ ಸ್ವರೂಪಳಾಗಿಯೂ, ಮಹಾ ಪತಿವ್ರತೆಯಾದ ನಿನಗೆ ಈ ದುಗುಡವೇನು? ಈ ಮಲಿನವಸ್ತ್ರವಂ ಧರಿಸಿ ಶರೀರವೆಲ್ಲ ಕೃಶವಾಗಿ ಮಂಡೆಯ ಕೂದಲೆಲ್ಲವೂ ಶಿಕ್ಕು ಜಡೆ ಕಟ್ಟಿ ಅಮಂಗಳವಾಗಿ ಇರುವುದಕ್ಕೆ ಕಾರಣವೇನು? ನಿನ್ನಮನಸ್ಸಿನ ಚಿಂತೆಯೇನು ಯಮನನ್ನು ಭಯಪಡಿಸುವ ಎನ್ನಂಥಾ ಕುಮಾರನಿದ್ದೂಕೂಡ ನಿನಗೆ ಕಣ್ಣೀರು ಬರತಕ್ಕ ಕಾರಣವೇನು? ದುಃಖಪಡುವ ತಂದೆತಾಯಿಗಳಂ ನೋಡುತ್ತಿಹ ಮ

ಕ್ಕಳು ಜನ್ಮವಹುದಬೇಕು. ಅಂಥಾಮಕ್ಕಳಂ ಪಡೆವುದಕ್ಕಿಂತಲೂ ಬಂಜೆಯಾಗಿರುವದು ಲೇಸು ಶೀಘ್ರದಿಂ ನಿನ್ನಚಿಂತೆಯು ಪೇಳೆಂದು ಗರುಡನು ಕೇಳಲು ಗರುತ್ಮಂತನ ವಾಕ್ಯವಂ ಕೇಳಿ ವಿನತೆ ಇಂತೆಂದಳು. ಕೇಳೈ ಮಗನೇ! ನಾನು ಕದ್ರುವಿನ ಮನೆ ದಾಸಿಯಾಗಿ, ಕದ್ರುವನ್ನು ಆಕೆಯ ಮಕ್ಕಳನ್ನು ಹೊತ್ತುಕೊಂಡು ಒಂದುದಿನ ಕನಕಾದ್ರಿಗೆ ಪೋಪೆನು, ಒಂದುಸಾರಿ ಮಲಯಾದ್ರಿಗೆ ಪೋಪೆನು, ಎಲೈ ಮಗನಾದ ಗರುಡನೇ! ಒಂದುದಿನ ವಿಂಧ್ಯಾದ್ರಿಗೆ ಪೋಪೆನು, ಒಂದುದಿನ ಸಪ್ತಸಮುದ್ರಂಗಳಿಗೆ ಪೋಪೆನು. ಇಂತೆಂದು ವಿನತೆಯು ಗರುಡನಂ ಕುರಿತು ಹೇಳಿ, ಮತ್ತು ಇದಲ್ಲದೆ ಆ ಕದ್ರುವಿನಮಕ್ಕಳು ಎಲ್ಲೆಲ್ಲಿಗೆ ಹೋಗಬೇಕೆಂದು ಹೇಳುವರೋ ಅಲ್ಲಿಗೆಲ್ಲಾ ಅವರನ್ನ ಹೊತ್ತುಕೊಂಡು ಪೋಪೆನು. ಇದಲ್ಲದೆ ಮಾಡಬಾರದ ಕಾರ್ಯ ಹೇಳಿದುದನ್ನೆಲ್ಲಾ ಮಾಡುವೆನು. ಎಂದು ವಿನತೆ ನುಡಿಯಲು, ಗರುತ್ಮಂತನು ಕೇಳಿ, ಮಹಾದುಃಖಪಟ್ಟು ಆಶ್ಚರ್ಯದಿಂ ತಾಯಿಗಿಂತೆಂದನು. ಎಲೈ ತಾಯೆ! ನೀನು ಲಕ್ಷಣವಂತೆಯಾಗಿಯೂ, ದಕ್ಷಬ್ರಹ್ಮನ ಮಗಳಾಗಿಯೂ, ಕಶ್ಯಪಬ್ರಹ್ಮನ ಸ್ತ್ರೀಯಾದ ಪುಣ್ಯವಂತೆಯಾದ ನಿನಗೆ ದಾಸಿತ್ವ ಬಂದ ಕಾರಣವೇನೆನಲು, ಮಗನಿಗೆ ವಿನತೆ ಇಂತೆಂದಳು. ಪೂರ್ವದಲ್ಲಿ ಅರುಣನ ಶಾಪದಿಂದ ತನಗೆ ದಾಸಿತ್ವಬಂತು. ಈಗ ಬಂದ ಪ್ರತಾಪವನ್ನು ವಿವರಿಸಿ ಪೇಳಲು, ಗರುತ್ಮಂತನು ಕೇಳಿ ತಾಯಿಗಿಂತೆಂದನು. ಎಲೈತಾಯೆ! ನೀನುಕದ್ರುವಿನ ಬಳಿಗೆಹೋಗಿ, ನಿನಗೆಬೇಕಾದ ವಸ್ತುವಂ ತಂದುಕೊಟ್ಟೇನು ಎನ್ನ ದಾಸಿತ್ವವಂ ಬಿಡೂ ಎಂದು ಕೇಳಿ, ಶೀಘ್ರದಿಂ ಬಂದು ಆಕೆಹೇಳಿದಮಾತ ಹೇಳೂ ಎನಲು, ಮಗನ ಮಾತಂಕೇಳಿ, ವಿನತೆ ಕದ್ರುವಿನಬಳಿಗೆ ಹೋಗಿ ಈ ವೃತ್ತಾಂತವ ಕೇಳಲು, ಕದ್ರು ತನ್ನಮಕ್ಕಳಂ ಕರೆದು ಆಲೋಚನೆಯಂಮಾಡಿ, ತನಗೆ ಅಮೃತಕುಂಭವಂ ತಂದುಕೊಟ್ಟರೆ ನಿನ್ನದಾಸಿತ್ವವು ಬಿಡುಗಡೆ ಆದೀತೆಂದು ಪೇಳಲು, ವಿನುತೆ ಇಂತೆಂದಳು ಕೇಳೈ ಮಗನೇ! ನೀನುಹೋಗಿ ಅಮೃತಕಲಶವಂ ತಂದುಕೊಟ್ಟರೆ, ನನ್ನದಾಸಿತ್ವವು ಪರಿಹಾರವಾದೀತೆಂದು ಹೇಳಲು, ಗರುತ್ಮಂತನು ಹಾಗೇ ಆಗಲೀ ನಾನು ಹೋಗಿ ಅಮೃತಕಲಶವನ್ನು ತಂದುಕೊಡುವೆನು ತನಗೆ ಕ್ಷುದ್ಬಾಧೆಆಗುವದು. ಆಹಾರವಂಕೊಡುವಳಾಗೆಂದು ತಾಯಂ ಕೇಳಲು, ವಿನತೆ ಇಂತೆಂದಳು ಎಲೈಮಗನೆ! ಕೇಳು ಮೂಡಣ

ಸಮುದ್ರತೀರದಲ್ಲಿ ಅರವತ್ತು ಯೋಜನದ ಅಗಲದಲ್ಲಿ ಕಿರಾತಕ ಪಾಳಯ ವಿದ್ದೀತು. ಅವರು ಲೋಕಕಂಟಕರಾಗಿ ಪ್ರಾಣಿಗಳ ಹಿಂಸೆಯಂಮಾಡಿ ತಮ್ಮ ಪ್ರಾಣಗಳ ಪೋಷಿಸಿಕೊಂಬ ಮನುಜರು. ಅವರಂ ಕೊಂದರೆ ಶ್ರೇಯಸ್ಸಲ್ಲದೆ ಪಾಪವಿಲ್ಲ. ಬಹು ಪ್ರಾಣಿ ಹಿಂಸಕರಾದವರ ಕೊಲ್ಲಲು, ಕೊಂದವರಿಗೆ ಸ್ವರ್ಗ ಸಾಧನವುಂಟು. ಅವರನ್ನು ಭಕ್ಷಿಸು, ಅವರಲ್ಲಿ ಒಬ್ಬ ಬ್ರಾಹ್ಮಣನಿಧಾನೆ ಆತನಂ ಬಿಡು, ಬ್ರಾಹ್ಮಣನ ಹಿಂಸೆಯಿಂದ ಪುತ್ರ ಪೌತ್ರ ಕಳತ್ರ ಪಶು ದೇಶ ವಂಶವೆಲ್ಲವೂ ಸಹಮೂಲವಾಗಿ ಕೆಡುವದೂ ಎಂದು ವಿನತೆನುಡಿಯಲು, ಗರುಡನಿಂತೆಂದನು. ಎಲೈ ತಾಯೆ! ಬಹುಮಂದಿ ಕಿರಾತರ ಸಮೂಹದಲ್ಲಿ ಒಬ್ಬ ಬ್ರಾಹ್ಮಣನಂ ಹ್ಯಾಗೆಕಾಣಲೀ ಎನಲು, ಎಲೋ ಮಗನೆ! ನೀನು ಆ ಕಿರಾತರಂ ಭಕ್ಷಿಸುವಲ್ಲಿ ಕಂಡದಂತೆ ಗಂಟಲು ಸುಡಲು ಅವನು ಬ್ರಾಹ್ಮಣನೆಂದು ತೆಗದು ಬಿಸಟು ಬಿಡೂಯೆಂದು ಹೇಳಲು, ಹಾಗೇ ಆಗಲೀ ಎಂದು ಗರುಡನು ತಾಯಿಗೆ ನಮಸ್ಕಾರವಂಮಾಡಿ, ಆಶೀರ್ವಾದವಂ ತೆಗದುಕೊಂಡು ಆಕಾಶ ಮಾರ್ಗದಲ್ಲಿ ಹೋಗುತ್ತಾ ದೂರದಲ್ಲಿಯೇ ಪಾಪರೂಪವಾದ ಕಿರಾತರ ಪಾಳ್ಯವಂಕಂಡು, ಗರುಡನು ತನ್ನ ಪಕ್ಷಂಗಳಂ ಕೊಡಹಲು, ಪ್ರಳಯಕಾಲದ ವಾಯುವಿನಂತೆ ಮಹಾವಾಯು ಬೀಸಲು, ಭೂಮಿಯ ಧೂಳೆದ್ದು ಆಕಾಶ ಅಷ್ಟದಿಕ್ಕು ಭೂಮಿಯಂ ಸಹ ಕವಿಯಲು, ತಾನು ಸಮುದ್ರತೀರದಲ್ಲಿದ್ದ ಗುಹೆಯಂತೆ ವದನವಂ ತೆಗದು ಕೊಂಡಿರಲು, ಆ ಕಿರಾತಕರು ಭೂಮಿ ಆಕಾಶ ದಿಕ್ಕುಗಳಂ ಕಾಣದೆ ಕಣ್ದೆರದು ನೋಡಲು ಆಶಕ್ತರಾಗಿ ಕಿರಾತರೆಲ್ಲರೂ ಭಯಪಟ್ಟು ಗರುಡನ ಮುಖನಾಳವನ್ನು ಪರ್ವತ ಗುಹೆಯೆಂದು ತಿಳಿದು ಆ ಕಿರಾತರೆಲ್ಲರೂ ಹೊಕ್ಕು ಒಳಕ್ಕೆ ಹೋಗುತ್ತಾ ಇರಲು, ಆ ಸಮಯದಲ್ಲಿ ಕಡೆಯಲ್ಲಿ ಬ್ರಾಹ್ಮಣನು ಆ ಧೂಳಿಗಂಜಿ ತಾನು ಹೋಗುತ್ತಿರಲು, ಗರುಡನ ಗಂಟಲು ತೀವ್ರವಾದ ಅಗ್ನಿಜ್ವಾಲೆಯಂತೆ ಸುಡುತ್ತಿರಲು ತಾಯಿಯ ಮಾತಂ ನೆನದು ವಿಚಾರಿಸಿಕೊಂಡು ಮುನ್ನ ಪೊಕ್ಕ ಕಿರಾತರಂ ಇಳಿಯನುಂಗಿ ಗಂಟಲಲ್ಲಿರ್ದ ಬ್ರಾಹ್ಮಣನಂ ತೆಗದು ಆತನೊಡನೆ ಇಂತೆಂದನು, ತನ್ನ ಕಂಠವಂ ದಹಿಸಿದ ನೀನು ಆವಜಾತಿಯವನು ಹೇಳೆನಲು, ಅವನಿಂತೆಂದನು. ತಾನು ಬ್ರಾಹ್ಮಣನು, ಬಾಲ್ಯದ ಮೊದಲಾಗಿ ಈ ಕಿರಾತ ಪಾಳ್ಯದಲ್ಲಿ ಇ

ಹೆನು, ಎನಲು ಆತನಂ ಮನ್ನಿಸಿ ಕಳುಹಿ ಮಿಕ್ಕಾದವರೆಲ್ಲರನ್ನು ಭಕ್ಷಿಸಿ ಮಹಾ ಸಂತೋಷದಿಂದ ಪ್ರಳಯ ಕಾಲಾಗ್ನಿಗೆ ಸಮಾನನಾದ ಗರುಡನು ತನಗೆ ಅಮೃತ ಕುಂಭವು ನಿರ್ವಿಘ್ನದಿಂ ಬರ್ಪಂತೆ ವಿಘ್ನೇಶ್ವರಪ್ರಾರ್ಥನೆಯಂ ಮಾಡಿ, ಆಕಾಶಮಾರ್ಗದಿಂದ ಇಂದ್ರನಪುರಿಗಾಗಿ ಬರುತ್ತಿರಲು, ಪ್ರಚಂಡನಾದ ಸೂರ್ಯನಂತೆ ಧಗಧಗಿಸುವ ದಾವಾಗ್ನಿಯಂತೆಯೂ, ಮಹಾ ಮೇರುವಂತೆ ದೇದೀಪ್ಯಮಾನ ದೇಹವುಳ್ಳವನಾಗಿ ಬರುತಿರ್ದ ಗರುತ್ಮಂತನಂ ಕಂಡು ದೇವತೆಗಳು ಕಂಗೆಟ್ಟು ಚತುರಂಗಬಲವಂ ಜೋಡಿಸಿಕೊಂಡು ವಜ್ರದ ಜೋಡುಗಳಂ ಜೋಡಿಸಿ ಧರಿಸಿಕೊಂಡು ನಾನಾವಾಹನಂಗಳಂ ಏರಿಕೊಂಡು ದಿವ್ಯ ಶಸ್ತ್ರಾಸ್ತ್ರಂಧರಿಸಿಯುತವಾಗಿ ಗರುತ್ಮಂತ ಬರುವಂಥಾ ಮಾರ್ಗವಂ ಕಟ್ಟಿ ತಮ್ಮೊಳಗಿಂತೆಂದರು. ಆಕಾಶಮಾರ್ಗದಿಂ ಅಡ್ಡಲಾಗಿಬಹ ಕಾರಣಾ ಸೂರ್ಯನಲ್ಲಾ, ಧೂಮರಕ್ತವರ್ಣವಾಗಿರ್ದ್ದ ಅಗ್ನಿಯಲ್ಲಾ, ನಿಲಗಡೆಯಾದ ತೇಜಸ್ಸು ಉತ್ಕ್ರದಾಗಿ ಇರುವದರಿಂ ಮಿಂಚುಅಲ್ಲಾ, ಕನಕಾಚಲವೇ ಆಯುತವಾಗಿ ಅವಯವಂಗಳಧರಿಸಿ ಬರ್ಪಂತೆ ತಮ್ಮಲ್ಲಿ ಬಾಹವನುಇವನಾರೋ? ಇಂಥಾ ಕಾಂತಿಯುಂ ದೇವದೈತ್ಯ ದಾನವರಲ್ಲಿಯೂ ಕಾಣೆವು. ನಮ್ಮ ಹೃದಯದಲ್ಲಿ ಭಯಕಂಪವನ್ನು ಪುಟ್ಟಿಸುತ್ತಾ ಬಾಹವನು ಇವನಾರೋ? ಎಂದು ಮಾತನಾಡುವನಿತರೊಳ್ ಅವರಬಗೆಯದೆ ಅಮೃತದ ಗ್ರಹಣಕ್ಕಾಗಿನಡಯುತ್ತಿರಲು; ಇವನು ಅಮೃತವನಪಹರಿಸಿಕೊಂಡು ಹೋಗುವದಕ್ಕೆ ಬಂದನು. ಇವನ ಹೋಗಲೀಯ್ಯಬ್ಯಾಡಿ ಎಂದು ಸಕಲ ದೇವತೆಗಳು ಶರಸನ್ನಾಹದಿಂ ಮಾರ್ಗವನಡ್ಡಗಟ್ಟಿ ನಿಲ್ಲಲು, ಆ ದೇವತೆಗಳಂ ಕಂಡು, ಗರುಡನು ತನ್ನಪಕ್ಷಂಗಳಂ ಕೊಡಹಲು, ದೇವತೆಗಳು ಗರುಡನ ಪಕ್ಷದ ಗರಿಯ ಘಾಳಿಯಿಂದ ತರಗೆಲೆಗಳಂತೆ ವಾಹನಾಯುಧಂಗಳು ಸಹಿತವಾಗಿ ದಿಕ್ಕುದಿಕ್ಕಾಗಿ ಹಾರಿಬಿದ್ದು ಮೂರ್ಛಿತರಾದರು. ಅನಂತರದಲ್ಲಿ ಮೂರ್ಛಿತರಾಗಿ ಬಿದ್ದ ದೇವತೆಗಳಂ ನೋಡಿ, ತನಗೆ ಇದೇ ಸಮಯವೆಂದು ಅಮೃತದ ಉಗ್ರಾಣಮಂ ಪೋಗಲು ಅಲ್ಲಿ ಶಸ್ತ್ರಾಸ್ತ್ರಪಾಣಿಗಳಾಗಿ ಕಾವಲಾಗಿರ್ದ್ದ ಮೂರುಕೋಟಿ ದಾನವರೂ ಈ ಗರುಡನಂ ಕಂಡು ಯುದ್ಧಕ್ಕೆ ಬರಲು, ಆ ಮೂರುಕೋಟಿ ದಾನವರಂಬಡಿಸಿ ಅಮೃತಕುಂಭದಸುತ್ತಲೂ ವಾಯುವೇಗ ಮನೋವೇಗದಿಂ ತಿರು

ಗುಪ್ತ ಗುಂಗುರನಾದರೂ ಕತ್ತರಿಸುವ ಕತ್ತರಿ ಯಂತ್ರವಂ ನೋಡಿ, ನಿರ್ಭಯದಿಂ ಹತ್ತಿರ ಕುಳಿತು ತನ್ನೊಳಿಂತೆಂದನು, ನಾನು ಏನು ಮಾಡಲಿ? ಮನಸ್ಸು ಮೊದಲಾಗಿ ಪೋಗದು. ತನ್ನ ಯತ್ನವೂ ವ್ಯರ್ಥವಾಗುತ್ತಾ ಇದೆ. ಇದಕ್ಕೆ ಉಪಾಯವೇನು? ಇಲ್ಲಿ ಸಮಸ್ತ ಸಾಹಸವೂ ಕೊಳ್ಳದು. ದೇವತೆಗಳು ಈ ಅಮೃತವಂ ರಕ್ಷಿಸುವದಕ್ಕೆ ಎಷ್ಟು ಯತ್ನವಂ ಮಾಡಿಕೊಂಡು ಇದ್ದಾರು. ಇದು ಆಶ್ಚರ್ಯ. ತನಗೆ ಪರಮೇಶ್ವರನಮೇಲೆ ದೃಢಭಕ್ತಿ ಉಂಟಾದರೆ ಆ ಈಶ್ವರನಿಗಿಂತಲೂ ತಾಯಿತಂದೆಗಳಲ್ಲಿ ಭಕ್ತಿ ತನಗೆ ಉಂಟಾದರೆ ಈ ಅಮೃತವ ಕೊಂಡು ಹೋಗುವದಕ್ಕೆ ಪರಮೇಶ್ವರನು ತನಗೆ ಸಾಮರ್ಥ್ಯವ ಕೊಡಲಿ! ಈ ಯತ್ನವಂ ತಾನಾಗಿ ಮಾಡಿದವನಲ್ಲ. ತಾಯಾದವಳು ಗುರುವಿಂದಧಿಕ. ಆ ಗುರು ಸೇವೆಗಾಗಿ ಮಾಡಿದೆನೆಂಬುದು ತನ್ನ ಹೃದಯದಲ್ಲಿದ್ದರೆ ಏಕ್ಷ್ಯಗತಿಯೇ ಬಲ್ಲನೆಂದು ಚಿಂತಿಸುವ ಗರುತ್ಮಂತನಿಗೆ ಒಂದು ಉಪಾಯವು ತೋರಿತು. ಅದಾವುದೆನೆ ತನ್ನ ಘನವಾದ ಶರೀರವನ್ನು ಅಣುವಾಗಿ ಮಾಡಿಕೊಂಡು, ಕತ್ತರಿ ಯಂತ್ರವಂ ಪೊಕ್ಕು ಅಲ್ಲಿ ತನ್ನ ವಜ್ರದೇಹಮಂ ಬೆಳಸಿ, ಆ ಯಂತ್ರವನ್ನು ಕೋಟಿ ಭಾಗವಾಗಿ ತುಂಡಿಸಿ ಅಮೃತವಂ ಕುಡಿದು ಕಲಶವಂ ತೆಗೆದುಕೊಂಡು ಹೋಗುವನಿತರೊಳು ದೇವತೆಗಳು ಮೂರ್ಛೆ ತಿಳಿದು ಆತನಂ ತಡೆಯಲಮ್ಮದೆ ಸಕಲ ದೇವತೆಗಳು ಮೊರೆಯಿಡುತ್ತಾ ಮನೋವೇಗದಿಂ ವೈಕುಂಠಕ್ಕೆ ಪೋಗಿ ಶ್ರೀಮನ್ನಾರಾಯಣನಿಗೆ ಇಂತೆಂದು ಬಿನ್ನೈಸಿದರು. ಎಲೈ ದೇವ ದೇವೋತ್ತಮ, ಭಕ್ತವತ್ಸಲ, ಚಕ್ರಪಾಣಿಯಾದ ಸ್ವಾಮಿಯೇ! ನಮಗೆ ಜೀವನವಾದ ಅಮೃತ ಕಲಶವನ್ನು ಗರುಡನು ತಮ್ಮ ಸಕಲರನ್ನೂ ಗೆದ್ದು, ಅಪಹರಿಸಿಕೊಂಡು ಹೋಗುತ್ತಾ ಇದ್ದಾನು ಎಂದು ಬಿನ್ನೈಸಲು, ಆ ವಿಷ್ಣುವು ಅವರಿಗೆ ಅಭಯವಂ ಕೊಟ್ಟು, ದಿವ್ಯ ರಥಾರೂಢನಾಗಿ ವೇಗದಿಂ ಬಂದು ಗರುಡನಿಗೆ ಅಡ್ಡಲಾಗಿ ನಿಂತು ಎಲೈ ಗರುಡಾ! ಅಮೃತ ಕಲಶವಂ ಬಿಡು, ಬಿಡದೆ ಇದ್ದರೆ ತನ್ನ ಚಕ್ರಧಾರೆಯಿಂದ ಹತವಹೆ ಎನಲು ಗರುಡನು ಕೇಳಿ, ಮುಗುಳು ನಗೆಯಿಂದ ವಿಷ್ಣುವಂ ಗಣಿಸದೆ ಪೋಗುತ್ತಿರಲು, ವಿಷ್ಣುವು ಮಹಾಕೋಪಾರೂಢನಾಗಿ ನೂರು ಸೂರ್ಯರ ಕಾಂತಿಯಿಂದ ಧಗಧಗಿಸುವ ಚಕ್ರವನ್ನು ತುಡುಕಿ ಎಸೆಯಲು, ಆ ಚಕ್ರವಂ ಗರುಡನು ತನ್ನ ಮೂಗಿನ ಕೊನೆ

ಯಿಂದ ಇರುಕಿಕೊಂಡು ಭೂಮಿಗಿಳಿಯಲು, ಗರುಡನ ಸಾಮರ್ಥ್ಯಕ್ಕೆ ಮೆಚ್ಚಿ, ಸಂತೋಷದಿಂ ವಿಷ್ಣುವಿಂತೆಂದನು. ಎಲೈ ಗರುಡಾ! ನಿನಗೆ ಪ್ರಸನ್ನನಾದೆನು ನೀನು ಸಕಲ ದೇವತೆಗಳನ್ನು ತನ್ನ ಅಮೋಘವಾದ ಚಕ್ರವನ್ನು ಜಯಿಸಿದೆ ನೀನು ಘನವಾದ ಪರಾಕ್ರಮ ಉಳ್ಳವನು ನಿನಗೆ ಬೇಕಾದ ಒಂದು ವರವಂ ಬೇಡಿಕೋ ಎನಲು, ವಿಷ್ಣುವಂನೋಡಿ ಮುಗುಳುನಗೆಯಿಂದ ಗರುಡನಿಂತೆಂದನು. ಎಲೆ ವಿಷ್ಣುವೇ! ನಿನಗೆ ತಾನು ಮೆಚ್ಚಿದೆನು ತಾನು ಎರಡು ವರಂಗಳಂ ಕೊಟ್ಟೆನು. ಬೇಡಿಕೋ ಎನಲು ವಿಷ್ಣುವು ಸಂತೋಷದಿಂ ಇಂತೆಂದನು. ಎಲೈ ಉದಾರವಾದ ಗರುತ್ಮಂತನೇ! ನನಗೆ ನೀನು ಎರಡು ವರವಂ ಕೊಟ್ಟೆನು ಎಂದೆಯಲ್ಲಾ ಆ ವರಂಗಳಂ ತಾನು ವರಿಸೇನು ಕೊಡೂ ಎನಲು ಗರುಡನು ಕೇಳ್ವ ನಕ್ಕು ವಿಷ್ಣುವಿನೊಡನೆ ಇಂತೆಂದನು. ಲೋಕದಲ್ಲಿ ಘನವಾದವರ ಜೈಸುವದು ಒಂದು ಲಾಭ, ಅಪೂರ್ವವಾದ ವಸ್ತುವು ಒಂದು ದೊರಕುವದು ಈ ಎರಡು ಲಾಭವು ದೊರಕಿದರೆ ಅದರೊಳು ಪಾತ್ರರಾದವರು ಬಂದು ಕೇಳುವ ಅಪೂರ್ವ ವಸ್ತುವಂ ಕೊಟ್ಟು ಜಯುವಂ ತನ್ನದು ಮಾಡಿಕೊಂಬುದು ಉತ್ತಮು, ಅದರಿಂದ ಆಲಸ್ಯವಂ ಮಾಡದೆ ಎರಡು ವರಗಳಂ ಕೇಳಿಕೋ, ಕೊಡುವೆನೆನಲು ವಿಷ್ಣುವಿಂತೆಂದನು. ಎಲೈ ಪಕ್ಷೀಂದ್ರನಾದ ಗರುಡನೇ! ನೀನು ತನಗೆ ವಾಹನವಾಗಿರುವದು ಒಂದು ವರ. ಈ ಅಮೃತವಂ ಕೊಂಡೊಯ್ದು ಸರ್ಪಂಗಳಿಗೆ ತೋರಿ ನಿನ್ನತಾಯಿ ದಾಸಿತ್ವವಂ ಬಿಡಿಸಿ ಸರ್ಪಂಗಳಿಗೆ ಅಮೃತಪಾನ ದೊರಕದಂತೆ ಉಪಾಯುವಂ ಮಾಳ್ಪುದು ಎರಡನೇ ವರ. ಈ ಎರಡು ವರಂಗಳಂನ್ನು ಕೊಡು ಎಂದು ವಿಷ್ಣು ಬುದ್ಧಿಗಲಿಸಲು, ಗರುಡನು ಹಾಗೇ ಆಗಲೀಯೆಂದು ನಮಸ್ಕರಿಸಿ ವಿಷ್ಣುವಂ ಬೀಳ್ಕೊಂಡು ಅಮೃತಕಲಶವುಂ ಕೊಂಡು ಬಂದು ಸರ್ಪಂಗಳ ತಾಯಾದ ಕದ್ರುವಿನ ಮುಂದಿರಿಸಿ ತನ್ನತಾಯಿ ದಾಸಿತ್ವವಂ ಬಿಡಿಸಿ. ಆ ಸಮಯುಮೊ, ಕದ್ರುವಿನ ಮಕ್ಕಳಾದ ಸರ್ಪಂಗಳು ಈ ಅಮೃತವಂ ಸೇವಿಸುವೆವೆಂದು ಯತ್ನವಂ ಮಾಡಲು ಗರುಡನು ಸರ್ಪಂಗಳಿಗೆ ಇಂತೆಂದನು. ಎಲೆ ಸರ್ಪಗಳಿರಾ! ಈ ಅಮೃತವನ್ನು ಶುಚಿಯಾಗಿ ಪಾನವಂ ಮಾಡಬೇಕು, ಅಶುಚಿಯಾಗಿ ಸೇವಿಸಲು ಫಲವಿಲ್ಲದೆ ಅದೃಶ್ಯವಾಗಿ ಹೋಗುವದು. ಶುಚಿಯುಲ್ಲದ ಅಶುಚಿಯಾದ ಸಾಧಾರಣ ವಸ್ತುವನ್ನಾದರೂ, ಅಶುಚಿಯಾಗಿ,

ಹುಟ್ಟಲು ಆ ವಸ್ತುವಿನ ಸಾರವಂ ರಾಕ್ಷಸರು ಅಪಹರಿಸುವರೂ ಎಂದು ಹೇಳಿ ತನ್ನ ತಾಯನ್ನು ಕರೆದುಕೊಂಡು ಹೊರಟು ಹೋದನು. ಅನಂತರದಲ್ಲಿ ಸರ್ಪಗಳು ಸ್ನಾನವಂಮಾಡಿ ಬಂದು ಅಮೃತವಂ ಸೇವಿಸುವೆವೂ ಎಂದು ದರ್ಭೆಯಹಾಸಿ ಅದರಮೇಲೆ ಅಮೃತ ಕಲಶವನ್ನಿರಿಸಿ ತಾವು ಸ್ನಾನವಂಮಾಡಿಕೊಂಡು ಬರುವದಕ್ಕೆ ಹೋಗಲು, ಅನಿತರೊಳು ವಿಷ್ಣುವು ಅದೃಶ್ಯದಿಂ ಬಂದು ಅಮೃತಕಲಶವನ್ನೆತ್ತಿಕೊಂಡು ಹೋಗಿ ದೇವತೆಗಳಿಗಿತ್ತನು. ಆ ಸಮಯದಲ್ಲಿ ಸರ್ಪಗಳು ಸ್ನಾನವಂಮಾಡಿ ಬಂದು ದರ್ಭೆಯಮೇಲೆ ಇರಿಸಿದ್ದ ಅಮೃತಕಲಶವಂ ಕಾಣದೆ ಕಟ ಕಟಾ ಕೈಗೆ ಬಂದ ಅಮೃತವನ್ನು ಹೋಗಲಾಡಿಸಿಕೊಂಡೆವು. ಆಲಸ್ಯದಿಂದ ಅಮೃತ ವಿಷವಾಯಿತು. ಎಂಬ ಗಾಥೆ ಎಮಗಾಯಿತು. ಎಂದು ಚಿಂತಿಸಿ ಅಮೃತಕಲಶವ ಎತ್ತಿಕೊಂಡು ಹೋಪಾಗ ತುಳುಕಿಬಿದ್ದ ಬಿಂದುಗಳು ದರ್ಭೆಯಮೇಲೆ ಬಿದ್ದಿರಲು, ಆ ಸರ್ಪಗಳು ದರ್ಭೆಯ ನೆಕ್ಕಲು ದರ್ಭೆಯ ಸುಂಕುಗಳಿಂದ ನಾಲಿಗೆಗಳು ಎರಡಾಗಿ ಸೀಳಿದವು. ಇದರಿಂದ ಸರ್ಪಗಳಿಗೆ ದ್ವಿಜಿಹ್ವಾ ಎಂಬ ಹೆಸರಾಯಿತು, ಕೇಳೈ ಅಗಸ್ತ್ಯನೇ! ಲೋಕದಲ್ಲಿ ಆವನಾವನೊಬ್ಬನು ಅನ್ಯಾಯದಿಂ ಘಳಿಸಿದ ಅರ್ಥವನ್ನು ಅನುಭವಿಸೇನು ಎಂದು ಬಯಸುವನೋ ಅದು ಆವನಿಗೆ ಫಲಿಸಲರಿಯದು. ಭೋಗಕ್ಕೆ ಬಾರದು. ಆದಕಾರಣ ಧರ್ಮಪ್ರಿಯ ಗರುಡನಿಗೆ ದುರ್ಲಭವಾದ ಅಮೃತಪಾನ ದೊರಕಿತು. ಅಧರ್ಮಿಗಳಾದ ಸರ್ಪಗಳಿಗೆ ದೊರಕಿದ ಅಮೃತಪಾನವ ಮಾಡುವದಕ್ಕೆ ಪುಣ್ಯವಿಲ್ಲದೆ ಹೋಯಿತು. ಹೀಗೆಂದು ಕುಮಾರಸ್ವಾಮಿ ಕೇಳೈ ಅಗಸ್ತ್ಯನೇ! ವಿನತೆ ತನ್ನ ಮಗನಾದ ಗರುಡನಿಂದ ದಾಸಿತ್ವವಂ ಬಿಡಿಸಿಕೊಂಡವಳಾಗಿ ಮಗನಕರೆದು ಇಂತೆಂದಳು. ಎಲೆಮಗನೆ! ತಾನು ದಾಸಿತ್ವವಂ ಅನುಭವಿಸಿದ ಪಾಪಕ್ಕೋಸ್ಕರ ಕಾಶೀಪಟ್ಟಣಕ್ಕೆ ಹೋಗಿ ಗಂಗಾಸ್ನಾನವಂಮಾಡಿ ಪರಮೇಶ್ವರನ ಆರಾಧಿಸಿ ಸುಕೃತವಂ ಪಡೆಯಬೇಕು, ಅದ್ಯಾಕೆಂದರೆ ಎಷ್ಟುದಿವಸ ಪರ್ಯಂತರವು ಪ್ರಾಣಿಗಳು ಕಾಶೀಕ್ಷೇತ್ರಕ್ಕೆ ಹೋಗದೆ ಇಹರೋ ಅನ್ನಬರ ಜನ್ಮಾಂತರಂಗಳಿಂ ಬಂದ ಪಾಪಂಗಳು ವಿಜೃಂಭಿಸುತ್ತಾ ಇಹವು. ಚಂದ್ರಭೂಷಣನಾದ ಪರಮೇಶ್ವರನು ಸಕಲ ಜೀವರಿಗೂ ತಾರಕೋಪದೇಶವಂ ಮಾಡುವ ಮಹಾಪುಣ್ಯ ಸ್ಥಳವಾದ ಕಾಶೀ ಕ್ಷೇತ್ರವಂ

ಸ್ಮರಿಸಿದ ಮಾತ್ರದಲ್ಲಿಯೇ ವಿಶ್ವೇಶ್ವರನ ಅನುಗ್ರಹದಿಂದ ಗರ್ಭಗತ ಮೊದಲಾಗಿ ಬಂದಂಥಾ ಪಾತಕಗಳು ಪರಿಹರವಹವು. ಕಾಶೀಕ್ಷೇತ್ರ ಪ್ರವೇಶವಾಗಲು ಮಹಾ ಪಾತಕಂಗಳು ಪರಿಹರಮಪ್ಪವು. ವಿಶ್ವೇಶ್ವರನ ಅನುಗ್ರಹದಿಂದ ಕರ್ಮಬಂಧಂಗಳು ಹರಿವಕಾಲಕ್ಕೆ ಕಾಲನಬಾಧೆ ಪರಿಹರಮಪ್ಪ ಕಾಶೀಕ್ಷೇತ್ರಕ್ಕೆ ಪೋಪ ಬುದ್ಧಿ ಪುಟ್ಟುವದಲ್ಲದೆ ಮಿಕ್ಕಾದಾಗ ಆ ಬುದ್ಧಿ ಹುಟ್ಟುವದಿಲ್ಲ. ಕಾಶೀಕ್ಷೇತ್ರಕ್ಕೆ ಹೋಗಬೇಕೆಂಬವರಾರುಂಟೋ ಅವರೇ ಮನುಷ್ಯರು, ಮಿಕ್ಕಾದವರು ನರಪಶುಗಳು ಕಾಶೀಕ್ಷೇತ್ರಕ್ಕೆ ಹೋದವರೇ ಬಲ್ಲವರು. ಪಾಪರಹಿತರು ಅವರಿಗೆ ಪುನರ್ಜನ್ಮವಿಲ್ಲ. ಸಕಲ ಶ್ರೇಯಸ್ಸುಗಳಿಗೂ ಆಶ್ರಯವಾದ ಮನುಷ್ಯಜನ್ಮವನ್ನೆತ್ತಿ ಕಾಶಿಯ ದರ್ಶನ ವಾಸವಂ ಮಾಡದವರಜನ್ಮ ವ್ಯರ್ಥ. ಕಲಿಕಾಲಹರಮಪ್ಪ ಕಾಶಿಯಂ ನೋಡದಿಹರ್ಗೆ ಮತ್ತೂ ಕಾಲಕರ್ಮ ಪಾಶಂಗಳಿಂದ ಪುನರ್ಜನ್ಮ ಉಂಟಾಗಿ ಇಹುದು. ಆದಕಾರಣ ಪುನರ್ಜನ್ಮವಂ ಪರಿಹರಿಪ ವಾರಣಾಶಿಯ ವಾಸವಂ ಮಾಡಬೇಕೆಂದು ವಿನತೆ ನುಡಿಯಲು ತಾಯಿ, ಹೇಳಿದ ಕಾಶಿಯ ಧರ್ಮಂಗಳಂ ಕೇಳಿ ಗರುತ್ಮಂತನು ಎಲೈ ತಾಯೆ! ನಿಮ್ಮ ಕೃಪೆಯಿಂದ ನಾನು ನಿಮ್ಮ ಸಂಗಡಲೇ ಬಂದೇನು ಎಂದು ಅತಿ ಸಂತೋಷದಿಂದ ತಾಯಿಯ ಸಹಾ ಗರುಡನು ತಕ್ಷಣದಲ್ಲಿ ಕಾಶೀಪಟ್ಟಣಕ್ಕೆ ಬಂದು ಈರ್ವರೂ ಮಣಿಕರ್ಣಿಕಾ ತೀರದಲ್ಲಿ ಸ್ನಾನವಂ ಮಾಡಿ ಗರುಡನು ಶಿವಲಿಂಗವನ್ನೂ ವಿನತೆ ಖಗೋಲ್ಕನೆಂಬ ಸೂರ್ಯನನ್ನೂ ಪ್ರತಿಷ್ಠೆಯಂ ಮಾಡಿಕೊಂಡು ಈರ್ವರೂ ಉಗ್ರತಪಸ್ಸಂ ಮಾಡುತ್ತಿರಲು; ಶೀಘ್ರದಿಂ ಪರಮೇಶ್ವರನೂ, ಸೂರ್ಯನೂ ಇಬ್ಬರೂ ಪ್ರಸನ್ನರಾಗಿ ಪರಮೇಶ್ವರನು ಗರುಡಗಿಂತೆಂದನು. ಎಲೈ ಗರುಡನೇ! ನಿನ್ನ ತಪಸ್ಸಿಗೆ ಮೆಚ್ಚಿ ಪ್ರಸನ್ನನಾದೆನು ನೀನು ತನಗೆ ಪ್ರಿಯಭಕನಾಗಿ ಪಕ್ಷಿಗಳಿಗೆಲ್ಲಾ ಇಂದ್ರನಾಗಿ ದೇವತೆಗಳಿಗೆ ಒಡೆಯನಾದಂಥಾ ವಿಷ್ಣುವಿಗೆ ವಾಹನವಾಗಿ, ಅಸಾಧ್ಯವಾದ ಕಾರ್‍ಯವ ಸಾಧ್ಯವ ಮಾಡಿಕೊಂಡು, ದಿವ್ಯಜ್ಞಾನಿಯಾಗಿ ಸುಖದಲ್ಲಿ ಇರು. ನೀನು ಪೂಜಿಸಿದ ಲಿಂಗವು ಗರುಡೇಶ್ವರನೆಂದು ಪ್ರಸಿದ್ಧಿಯಾಗಲೀ, ಈ ಲಿಂಗದರ್ಶನ ಸ್ಪರ್ಶ ಪೂಜೆಯಂ ಮಾಡಿದವರ್ಗೆ ವಿಷಬಾಧೆ ಇಲ್ಲದಿರಲೀ, ಅವರಿಗೆ ವಿಶೇಷ ಜ್ಞಾನ ಉಂಟಾಗಲೀ, ಎಲೈ ಪಕ್ಷೀಂದ್ರನಾದ ಗರುಡನೇ! ನಿನಗೆ ರಹಸ್ಯವಾದ ವಾಕ್ಯ

ವಂ ಹೇಳ್ವನು ಕೇಳು, ತನಗೂ, ವಿಷ್ಣುವಿಗೂ, ಅಣುಮಾತ್ರವೂ ಭೇದವಿಲ್ಲ ಯಾರು ಭೇದವಂ ಮಾಡುವರೋ ಅವರು ನರಕದಲ್ಲಿ ಬೀಳಲಿ. ನೀನು ತನ್ನ ಸ್ವರೂಪವಾದ ವಿಷ್ಣುವಿಗೆ ವಾಹನವಾಗಿ ಪ್ರಸಿದ್ಧಿಯಾಗು ಎಂದು ಪರಮೇಶ್ವರನು ಗರುಡನಿಗೆ ವರವನಿತ್ತು ಅಂತರ್ಧಾನವಾಗಲು, ಅನಂತರದಲ್ಲಿ ವಿನತೆಯ ತಪಸ್ಸಿಗೆ ಮೆಚ್ಚಿ ಸೂರ್ಯನು ಪ್ರಸನ್ನನಾಗಿ ಇಂತೆಂದನು ಎಲೆ ವಿನತೆಯೆ ನಿನ್ನ ತಪಸ್ಸಿಗೆ ಮೆಚ್ಚಿದೆನು ನಿನಗೆ ಸಕಲ ಪಾಪಹರಮಪ್ಪ ಶಿವಜ್ಞಾನ ಉಂಟಾಗಲಿ ನೀನು ಪೂಜಿಸಿದ ಸೂರ್ಯನು ವಿನತಾದಿತ್ಯನೆಂದು ಪ್ರಸಿದ್ಧನಾಗಲಿ ಮುನ್ನ ಕದ್ರುವು ಎನ್ನ ಕಿರಣಂಗಳಂ ಇನ್ನೊಂದು ಖಗೋಲ್ಕನೆಂದು ನುಡಿದವಳಾದಕಾರಣ ಖಗೋಲ್ಕಾದಿತ್ಯನೆಂದು ಪ್ರಸಿದ್ಧಿಯಾಗಲಿ, ಎಂದು ವರವನಿತ್ತು ಸೂರ್ಯನು ಆಕಾಶಮಾರ್ಗಕ್ಕೆ ಹೋದನು ಎಂದು ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು. ಕೇಳೈ ಅಗಸ್ತ್ಯ! ಅಂದು ಮೊದಲಾಗಿ ಗರುಡನೂ ವಿಷ್ಣುವಿಗೆ ವಾಹನವಾಗಿ ವೈಕುಂಠಕ್ಕೆ ಹೋದನು. ವಿನತೆ ತನ್ನ ಆಶ್ರಮಕ್ಕೆ ಬಂದು ಸುಖದಲ್ಲಿ ಇದ್ದಳು. ವಿನತಾದಿತ್ಯ ಖಗೋಲ್ಕಾದಿತ್ಯನೆಂದು ಎರಡು ಹೆಸರುಳ್ಳ ಸೂರ್ಯನು ಶಾಂಡಿಲ್ಯತೀರ್ಥದ ಸಮೀಪದಲ್ಲಿರ್ದು ಕಾಶೀವಾಸಿಗಳ ವಿಘ್ನಾಂಧಕಾರಂಗಳನ್ನು ಪರಿಹರಿಸುತ್ತಾ ಇದ್ದ ಸೂರ್ಯನ ದರ್ಶನ ಸ್ಪರ್ಶನ ಪೂಜೆ ನಮಸ್ಕಾರಂಗಳಿಂದ ಸರ್ವಾಭೀಷ್ಟ ಸಿದ್ಧಿಯಹುದು, ಸಕಲ ವ್ಯಾಧಿ ನಿವೃತ್ತಿಯಹುದು,ಈ ಗರುಡೇಶ್ವರ ಖಗೋಲ್ಕಾದಿತ್ಯ ವಿನತಾದಿತ್ಯರ ಮಹಿಮೆಯಂ ಕೇಳಲು ಸಕಲ ಪಾಪಕ್ಷಯವೆಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವನ್ನು ವ್ಯಾಸರು ತನಗರುಹಿದರೆಂದು ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ವಿವರಿಸಿದನೆಂಬಲ್ಲಿಗೆ ಅಧ್ಯಾಯಾರ್ಥ; * * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥ ದರ್ಪಣದಲ್ಲಿ ಖಗೋಲ್ಕಾದಿತ್ಯ ವಿನತಾದಿತ್ಯ ಗರುಡೇಶ್ವರರ ಮಹಿಮೆ ಪ್ರಸಂಗವೆಂಬ ಐವತ್ತನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ. ಶ್ರೀ * * ಶ್ರೀ * *

ಶ್ರೀ ವಿಶ್ವೇಶ್ವರಾಯನಮಃ

ಐವತ್ತೊಂದನೇ ಅಧ್ಯಾಯ.

—:O:—

ಅರುಣಾದಿತ್ಯ, ವೃದ್ಧಾದಿತ್ಯ, ಕೇಶವಾದಿತ್ಯ, ವಿಮಲಾದಿತ್ಯ, ಗಂಗಾದಿತ್ಯ ಯಮಾದಿತ್ಯರ ಮಹಿಮೆ.

ಅನಂತರದಲ್ಲಿ ಅಗಸ್ತ್ಯನು ಕುಮಾರಸ್ವಾಮಿಗಿಂತೆಂದನು. ಎಲೈ ಪಾರ್ವತೀದೇವಿಯ ಹೃದಯಾನಂದಕರನಾದ ಪರಮೇಶ್ವರನ ಕುಮಾರನಾದ ಸರ್ವಜ್ಞನಾದ ಕುಮಾರಸ್ವಾಮಿಯೇ! ಒಂದು ಬಿನ್ನಹ ಉಂಟು. ಅದೇನೆಂದರೆ,— ದಕ್ಷಬ್ರಹ್ಮನ ಕುಮಾರತಿಯಾಗಿ ಕಶ್ಯಪಬ್ರಹ್ಮನ ಸ್ತ್ರೀಯಾಗಿ ಇಂಥಾ ಸಾಹಸವುಳ್ಳ ಗರುಡನಿಗೆ ತಾಯಾಗಿ ಮಹಾಪತಿವ್ರತೆಯಾದ ವಿನತೆಗೆ ದಾಸಿತ್ವಬಂದಕಾರಣವಂ ಬುದ್ಧಿಗಲಿಸಬೇಕೆನಲು, ಕುಮಾರಸ್ವಾಮಿ ಇಂತೆಂದನು, ಕೇಳೈ ಅಗಸ್ತ್ಯನೇ! ವಿನತೆಗೆ ದಾಸೀತ್ವಬಂದ ಕಾರಣವಂ ಪೇಳ್ವೆನು ಕೇಳು, ಪೂರ್ವದಲ್ಲಿ ಕದ್ರುವು ಕಶ್ಯಪನಿಂದ ಅನಂತ, ವಾಸುಕಿ, ತಕ್ಷಕ, ಕಾರ್ಕೋಟಕ, ಗುಳಿಕ, ಮಹಾಪದ್ಮವೆಂಬಅನೇಕ ಮಕ್ಕಳಂಪಡೆದಳು, ವಿನಯು ಕುಮಾರತತ್ರಿಯನಿಕ್ಕಿ ಸಲಹಿಕೊಂಡಿರಲು, ಕದ್ರುವಿನತೆಯೊಡನೆ ಮೇಲೆ ಆವುದನು ಮಕ್ಕಳನೋಡಿ ಬಂದಾನೊಂದುದಿನ ಮನಸ್ಸಿನಲ್ಲಿ ಚಿಂತಿಸಬ್ಬಿ ಸಂತಾನಾಪೇಕ್ಷೆಯಿಂದ ಮೂರುತತ್ತಿಯೊಳಗೆ ಒಂದುತತ್ತಿಯಂಒಡೆಯಲು ಅದರೊಳಗೆ ಭಯಂಕರಧ್ವನಿಯುಳ್ಳ ಗೂಬೆಪುಟ್ಟಲು; ಆ ಹರಿಯು ನಾದಗೂಬೆಗೆ ಕ್ಷಿರಾಜನೆಂಬ ಪೆಸರನಿಟ್ಟು ಪಟ್ಟವ ಕಟ್ಟಲು ಪತಂ ಮೊದಲಾದ ಪಕ್ಷಿಗಳೆಲ್ಲವೂ ಆ ಮಕ್ಕಳುಗಳೆಲ್ಲಾ ಒಂದುಗೂಡಿ ಆಲೋಚನೆಯಂಮಾಡಿ ಈ ಗೂಬೆಯು ಮಹಾಕ್ರೂರದೃಷ್ಟಿಯುಳ್ಳದ್ದು, ಹಗಲು ಕಣ್ಣುಕಾಣದು, ಕಾರ್ಯವುಪ್ರಕ್ಷವು, ಇದರಧ್ವನಿ ಭಯಂಕರವಾದದ್ದು ಎಂದು ಆ ಗೂಬೆಯ ದುರ್ಗುಣಂಗಳಂ ವಿಚಾರಿಸಿ ಪಟ್ಟಕ್ಕೆ ಅರ್ಹನಲ್ಲವೆಂದು ಅಲ್ಲಗಳೆದು ಪಕ್ಷಿಗಳೆಲ್ಲಾ ತಮ್ಮಇಚ್ಛೆಬಂದಂತೆ ಇರುತ್ತಿರಲು;

ವಿನತೆಯು ಮನಸ್ಸಿನಲ್ಲಿ ಮಹಾವ್ಯಾಕುಲಪಟ್ಟು ಸಾವಿರವರುಷಪರ್ಯಂತ ಸುಖಪ್ರಸುವವಾದಂಥಾ ತತ್ತಿಯನ್ನೋಡಿ ಇದು ಬಹುಕಾಲಕ್ಕಲ್ಲದೆ ಪಕ್ವವಾಗಿ ಒಡೆಯದೆಂದು ತಾಳಲಾರದೆ ಎಂಟುನೂರು ವರುಷದಲ್ಲಿಯೇ ತತ್ತಿಯನ್ನೊಡೆಯಲು, ತೊಡೆಗಳಿಂದ ಮೇಲೆ ಪರಿಪೂರ್ಣವಾಗಿದ್ದ ತೊಡೆಗಳಿಂದ ಕೆಳಗೆ ದೇಹ ಪರಿಪೂರ್ಣವಾಗದೆ ಇದ್ದ ಶಿಶುವು ತತ್ತಿಯಿಂ ಪೊರಮಡುತ್ತಲೆ ಅಗ್ನಿಜ್ವಾಲೆಯಂತೆ ಉಜ್ವಲವಾದ ದೇಹದಿಂದ ಘುಳುಘುಳುಗುಟ್ಟುವ ಕೆಂಡದಂತೆ ಕಣ್ಣು ಕೆಂಪಗೆ ಮಾಡಿಕೊಂಡು ಕೋಪಾರೂಢನಾಗಿ ತಾಯಿಯನ್ನೋಡಿ ಇಂತೆಂದು ಶಪಿಸಿದನು; ಎಲೈ ತಾಯೇ! ಕದ್ರುವಿನ ತೊಡೆಯಮೇಲೆ ವಿಲಾಸದಿಂದಾಡುವ ಮಕ್ಕಳಂ ನೋಡಿ ಸವತಿಯ ಮತ್ಸರದಿಂದ ತಾಳಲಾರದೆ ತತ್ತಿಯಲ್ಲಿ ಸಾವಿರವರುಷ ಪರಿಯಂತರವು ಬೆಳೆವ ತನ್ನ ದೇಹವನ್ನು ಪೂರ್ಣವಾಗದಹಾಗೆ ಅಕಾಲದಲ್ಲಿ ಒಡೆದು ಕೆಡಿಸಿದೆಯಾದಕಾರಣ ನೀನು ಕದ್ರುವಿನ ಮನೆ ದಾಸಿಯಾಗಿರು, ಎಂದು ಶಪಿಸಲು ವಿನತೆ ಮಹಾಭಯಪಟ್ಟು ಎಲೆಮಗನೆ! ಈ ಶಾಪವಿಮೋಚನೆ ಎಂದಿಗಾಗುವದೆಂದು ಕೇಳಲು, ಆ ಶಿಶು ಇಂತೆಂದನು. ಎಲೈ ತಾಯೆ! ಈ ತತ್ತಿಯನ್ನು ಅಕಾಲದಲ್ಲಿ ಒಡೆಯಬ್ಯಾಡ, ಈ ತತ್ತಿಯೊಳಗೆ ಉಭಯಕುಲ ಪವಿತ್ರವುಳ್ಳ ತ್ರಿಮೂರ್ತಿಗಳಿಗೆ ಅಸಾಧ್ಯವಪ್ಪ ಸಾಹಸವುಳ್ಳ ಕುಮಾರನು ಪುಟ್ಟುತ್ತಿದ್ದಾನು, ಆತನು ನಿನ್ನ ದಾಸಿತ್ವವಂ ಬಿಡುಗಡೆ ಮಾಡಿಯಾನುಎಂದು ವಿಶಾಪವಂ ಕೊಟ್ಟನು. ಕೇಳೈ ಅಗಸ್ತ್ಯ! ಇದೀಗ ವಿನತೆಗೆ ಮಗನ ಶಾಪದಿಂದ ದಾಸಿತ್ವ ಬಂದಕಾರಣವೆಂದು ಕುಮಾರಸ್ವಾಮಿ ಹೇಳಿ, ಅನಂತರದಲ್ಲಿ ನಡುವಿನಿಂದ ಕೆಳಗೆ ದೇಹಪೂರ್ಣವಿಲ್ಲದಕಾರಣ ಅಧೋರ್ನನೆಂದು ಪೆಸರಾಯಿತು. ಕೋಪದಿಂದ ಕೆಂಪಾದದೇಹ ಕಣ್ಣುಗಳುಳ್ಳವನಾದಕಾರಣ ಅರುಣನೆಂಬ ಪೆಸರಾಯಿತು. ಆ ಅರುಣನು ತಾಯನ್ನು ಶಪಿಸಿ ಕುಂಟ ಕುರುಡ ಮೊದಲಾದವರಿಗೆ ಉತ್ತಮಗತಿಯನ್ನೀವ ಕಾಶೀಕ್ಷೇತ್ರವೇ ಎನಗೆ ಗತಿಯೆಂದು ಕಾಶಿಗೆಪೋಗಿ ಗಂಗಾಸ್ನಾನವಂಮಾಡಿ ವಿಶ್ವೇಶ್ವರದರ್ಶನವಮಾಡಿ ಅಲ್ಲಿ ಸೂರ್ಯನಕುರಿತು ಉಗ್ರತಪವಂಮಾಡುತ್ತಿರಲು; ಸೂರ್ಯನು ಪ್ರಸನ್ನನಾಗಿ ಇಂತೆಂದನು. ಎಲೈ ಅರುಣಾ! ನೀನು ನನ್ನ ಸಾರಥಿಯಾಗಿರು ವಿಶ್ವನಾಥನ ಉತ್ತರದಲ್ಲಿ ನೀನು ಪೂಜಿಸಿದ ಸೂರ್ಯನು ಅರುಣಾದಿತ್ಯನೆಂದು ಪ್ರಸಿ

ದ್ಧಿಯಾಗಲೀ, ಈ ಅರುಣಾದಿತ್ಯನ ಪೂಜಿಸಿದವರ್ಗೆ ಭವಸಕಲಪಾತಕ ದರಿದ್ರ ದುಃಖ ವೃದ್ಧಾಪ್ಯಗಳೆಂಬ ಭಯಂಗಳಿಲ್ಲದಿರಲೀ, ಎಂದು ವರವನಿತ್ತು ಸೂರ್ಯನು ಅರುಣನ ಒಡಗೊಂಡು ತನ್ನರಥಕ್ಕೆ ಪೋದನು. ಕೇಳ್ಳೈ ಅಗಸ್ತ್ಯನೇ! ಅರುಣನು ಸೂರ್ಯನ ಸಾರಥಿಯಾಗಿ ಮೊದಲೇಉದಯವಾಗಿ ಅಂಧಕಾರವಂ ಪರಿಹರಿಸುತ್ತಾ ಇದ್ದಾನು. ಆವನಾವನೊಬ್ಬನು ಪ್ರತಿದಿನವು ಉದಯಕಾಲದಲ್ಲಿ ಅರುಣನಿಗೆ ನಮಸ್ಕರಿಸುವನಾಗಲು, ದುಃಖಭಯಂಗಳಿಲ್ಲ. ಅರುಣಾದಿತ್ಯನಮಹಿಮೆಯಂ ಕೇಳಲು ಸಕಲದುರಿತಹರವೇದು ಕುಮಾರಸ್ವಾಮಿ ಅಗಸ್ತ್ಯಂಗೆ ಹೇಳಿ ಮತ್ತಿಂತೆಂದನು. ಕೇಳ್ಳೈ ಅಗಸ್ತ್ಯನೇ! ಕೇಳಿದಮಾತ್ರದಲ್ಲಿಯೇ ಸಕಲದುರಿತಂಗಳಂ ಪರಿಹರಿಪ ವೃದ್ಧಾದಿತ್ಯನೆಂಬ ಸೂರ್ಯನಮಹಿಮೆಯಂ ಪೇಳ್ವೆನು ಕೇಳು, ಪೂರ್ವದಲ್ಲಿ ಕಾಶೀಕ್ಷೇತ್ರದಲ್ಲಿ ವೃದ್ಧಹಾರಿತನೆಂಬ ತಪಸ್ವಿಯುಂಟು, ಆತನು ತನ್ನ ತಪೋವೃದ್ಧಿಗೋಸ್ಕರ ಅನಂತಪೂರ್ಣವಿಶಾಲಾಕ್ಷಿಗೆ ತೆಂಕಲು ಸೂರ್ಯನ ಆರಾಧಿಸಿ ಉಗ್ರತಪವಂಮಾಡುತ್ತಾ ಇರಲು, ಸೂರ್ಯನು ಮೆಚ್ಚಿ ಪ್ರಸನ್ನನಾಗಿ ವರವಬೇಡೆನಲು, ಆ ಋಷಿ ಇಂತೆಂದನು. ಎಲೈ ಸ್ವಾಮಿಯೇ! ಎನಗೆ ಯೌವ್ವನವಂಕೊಡು ಅದ್ಯಾಕೆಂದರೆ ತಾನು ಮಹಾತಪವಂಮಾಡಬೇಕು. ತಪವೇ ಸರ್ವಸಾಧನವು ತಪಹೊರತಾಗಿಮಹದೈಶ್ವರ್ಯಂಗಳಿಲ್ಲ, ಮುನ್ನ ಧ್ರುವಮೊದಲಾದವರು ತಪಸ್ಸಿನಿಂದಲೇ ಉತ್ತಮ ಪಾಪ ಪದವಿಗಳಂಪಡೆದರು, ಆದಕಾರಣ ತಪವಂಮಾಡಿ ಇಹಪರಂಗಳಂ ಸಾಧಿಸೇನು, ಈ ಸಂಸಾರದಲ್ಲಿ ಏನುಫಲವಿದ್ದೀತು, ಪ್ರಾಯದವನಾದರೂ ಕಾಮುಕನಾಗಿ ಸ್ತ್ರೀಯರ ಆಧೀನವಾಗಿ ಇರಬೇಕು, ಸ್ತ್ರೀಯರ ಸುಖವು ಕ್ಷಣಮಾತ್ರ, ದುಃಖವೇ ಅಧಿಕವಾಗಿಹುವು. ಆದಕಾರಣ ಜಿತೇಂದ್ರಿಯರಾದವರು ತಪಸ್ಸಿನಿಂದ ಆಯುಷ್ಯವಂ ಸಂಪಾದಿಸಿ ಮತ್ತೂ ತಪವಮಾಡುತ್ತಾ ಇಹರು. ಲೋಕದಲ್ಲಿ ಬಲ್ಲವರು ಧರ್ಮವಮಾಡುವದಕ್ಕೋಸ್ಕರ ಧನವಂ ಗಳಿಸುವರು, ಸಂತಾನಕ್ಕೋಸ್ಕರ ಸ್ತ್ರೀಯರಂ ಸಂಪಾದಿಸುವರು, ಮೋಕ್ಷಕ್ಕೋಸ್ಕರ ತಪವನ್ನೇ ಬಯಸಿ ಮಾಡುವರು. ಇಂತೆಂದು ಋಷಿಯು ಬಿನ್ನೈಸಲು ಸೂರ್ಯನು ವೃದ್ಧಹಾರಿತನ ವೃದ್ಧಾಪ್ಯಮಂ ಪರಿಹರಿಸಿ ಆಯುಷ್ಯ ಯೌವ್ವನಂಗಳಂಕೊಟ್ಟು ಮತ್ತಿಂತೆಂದನು.

ವೃದ್ಧಹಾರಿತಮುನಿಯೇ! ನೀನು ಪೂಜಿಸಿದ ವೃದ್ಧಾದಿತ್ಯನೆಂಬ ತನ್ನನ್ನು ಆರು ಪೂಜಿಸುವರೋ ಅವರಿಗೆ ಜರಾಮರಣ ಭಯವಿಲ್ಲದಿರಲೀ, ಎಂದು ವರವನಿತ್ತು ಸೂರ್ಯನು ಅಂತರ್ಧಾನವಾಗಲು, ವೃದ್ಧಹಾರಿತನು ಸೂರ್ಯನಿಂದ ವರವಂಪಡೆದು ಕಾಶಿಯಲ್ಲಿ ಮೋಕ್ಷಕ್ಕೋಸ್ಕರ ತಪವಂಮಾಡುತ್ತಿದ್ದನು. ಕೇಳೈ ಅಗಸ್ತ್ಯನೇ! ಕಾಶಿಯಲ್ಲಿ ವೃದ್ಧಾದಿತ್ಯನ ಆರಾಧನೆಯಂ ಮಾಡಿ ಅನೇಕ ಮಂದಿ ಕೃತಾರ್ಥರಾದರು ಎಂದು ಕುಮಾರಸ್ವಾಮಿ ಮತ್ತಂತೆಂದನು ಕೇಳೈ ಅಗಸ್ತ್ಯನೇ! ಕಾಶೀಕ್ಷೇತ್ರದಲ್ಲಿ ಕೇಶವಾದಿತ್ಯನೆಂಬ ಸೂರ್ಯನು ಇದ್ದನು, ಆ ಸೂರ್ಯನು ಕೇಶವಮೂರ್ತಿಯಾದ ವಿಷ್ಣುವನ್ನಾರಾಧಿಸಿ ದಿವ್ಯಜ್ಞಾನವಂ ಪಡೆದನು, ಅದೆಂತೆಂದರೆ,-ಪೂರ್ವದಲ್ಲಿ ಒಂದಾನೊಂದುದಿನ ರಥಾರೂಢನಾಗಿ ಆಕಾಶದಲ್ಲಿ ಚರಿಸುವ ಸೂರ್ಯನು ಕಾಶಿಯಲ್ಲಿ ಈಶ್ವರನಪೂಜೆಯಂಮಾಡಿಕೊಂಡು ನಿಶ್ಚಲಚಿತ್ತನಾಗಿ ಸಮಾಧಿಯಲ್ಲಿ ಕುಳಿತು ದಿವ್ಯತೇಜಸ್ಸಿನಿಂದಿಹ ವಿಷ್ಣುವಂ ಕಂಡು ಸೂರ್ಯನು ತನ್ನ ರಥದಿಂದ ಇಳಿದು ವಿಷ್ಣುವಿನ ಸಮೀಪಕ್ಕೆ ಬಂದು ಸದ್ದುಮಾಡದೆ ಪರಾಕಿಸಲ್ಲಿದ್ದ ಸಮಯವನ್ನೋಡಿಕೊಂಡು ಇರಲು, ವಿಷ್ಣುವು ಶಿವಪೂಜೆಯಂ ಮುಗಿಸಿ ಕಣ್ದೆರೆದು ನೋಡುವಷ್ಟರೊಳ್ ಸೂರ್ಯನು ವಿಷ್ಣುವಿಗೆ ನಮಸ್ಕಾರವಂಮಾಡಿ ಇಂತೆಂದು ಬಿನ್ನೈಸಿದನು, ಎಲೈ ಸ್ವಾಮಿ! ನೀನು ಸಕಲ ಚರಾಚರಕ್ಕೆ ಅಂತರಾತ್ಮನು, ಸಕಲಬ್ರಹ್ಮಾಂಡಗಳನ್ನು ಉತ್ಪತ್ತಿಸ್ಥಿತಿ ಲಯಂಗಳಂಮಾಡುವ ಪರತರವಸ್ತುವಾದ ನೀನು ಇಲ್ಲಿ ಆರಪೂಜೆಯಂಮಾಡುತ್ತಾಯಿದ್ದೀರಿ ಎಂದು ಕೇಳುವದಕ್ಕೋಸ್ಕರ ಬಂದೆನೂ ಎಂದು ಗಂಭೀರವಾದ ಧ್ವನಿಯಿಂದ ಬಿನ್ನೈಸುವ ಸೂರ್ಯಂಗೆ ವಿಷ್ಣುವಿಂತೆಂದನು, ಕೇಳೈ ಸೂರ್ಯನೇ! ಈ ಕಾಶೀಕ್ಷೇತ್ರದಲ್ಲಿ ದೇವದೇವನಾದ ಉಮಾಪತಿಯಾದ ಪರಮೇಶ್ವರನು ಒಬ್ಬನೇ ಪೂಜ್ಯನು ಸಕಲಕಾರಣನೂ ಈ ಕ್ಷೇತ್ರದಲ್ಲಿ ತ್ರಿಲೋಚನನಾದ ಈಶ್ವರಹೊರತಾಗಿ ಇತರ ದೇವತೆಯಂ ಪೂಜೆಯಂಮಾಡಿದವನು ಲೋಚನಹೀನನು ಮೃತ್ಯುಂಜಯನಾದ ಪರಮೇಶ್ವರನ ಆರಾಧಿಸಲು ಜನ್ಮಮೃತ್ಯು ಭಯಂಗಳ ಪರಿಹರಿಸುವನು. ಪೂರ್ವದಲ್ಲಿ ಈ ಮೃತ್ಯುಂಜಯನ ಆರಾಧಿಸಿ ಮಾರ್ಕಂಡೇಯ, ಶ್ವೇತಕೇತು ನಂದಿ ಭೃಂಗಿ ಮೊದಲಾದವರು ಮೃತ್ಯುವಂಗೆದ್ದರು ಬಂದು ಬಾಧಿ

ತ್ರಿಪುರವಂಜೈಸಿದ ಪರಮೇಶ್ವರನಪೂಜಿಸಲು ಪ್ರಜ್ವಲಿಸಿದನು, ಪರಮೇಶ್ವರನು ಕಣ್ಣುತೆರದವಮಾತ್ರದಲ್ಲಿಯೇ ಲೋಕಸೃಷ್ಟಿಯಾಗುವುದು. ಎವೆಯಾಡಿಸಿದಮಾತ್ರದಲ್ಲಿಯೇ ಸಂಹಾರವಹುದು. ಅತನಪೂಜೆಯಿಂದ ಚತುರ್ವಿಧ ಪುರುಷಾರ್ಥಂಗಳಹವು. ತಾನು ಅದರಿಂದ ಇಂದ್ರನು ಶಿವಪೂಜೆಯಂಮಾಡಿ ಸಕಲ ಲೋಕಾಧಿಪತ್ಯವುಂಪಡೆದನು. ಈಶ್ವರನಪೂಜೆಯಿಂದ ಜನ್ಮನಿವೃತ್ತಿಯಹುದು ಶಿವನು ಮೋಕ್ಷವ ಕೊಡಬೇಕಾದರೆ ತನ್ನ ಪೂಜಿಸಲು ಮೋಕ್ಷಬುದ್ಧಿಯಂ ಕೊಡುವನು. ರುದ್ರಾಭಿಷೇಕೋದಕ ಸ್ನಾನದಿಂದ ಸಕಲತೀರ್ಥಸ್ನಾನಫಲವಹುದು. ಆ ಕಾರಣ ನೀನು ಅಧಿಕ ತೇಜಸ್ಸಂ ಪಡೆಯಬೇಕಾದರೆ ಶಿವನ ಆರಾಧನೆಯಂ ಮಾಡಿಕೊಂಡು ಇರುವದೆಂದು ವಿಷ್ಣು ನಿರೂಪಿಸಲು, ಸೂರ್ಯನು ಸಂತೋಷದಿಂದ ಆದಿಕೇಶವನ ಉತ್ತರದಲ್ಲಿ ಪಾದೋದಕತೀರ್ಥದ ಸಮೀಪದಲ್ಲಿ ಸ್ಫಟಿಕಲಿಂಗವಂ ಪ್ರತಿಷ್ಠೆಯಂಮಾಡಿಕೊಂಡು ಆ ಶಿವಾರಾಧನೆಯಿಂದ ದಿವ್ಯತೇಜಸ್ಸಂಪಡೆದನು, ಕೇಳ್ಳೈ ಅಗಸ್ತ್ಯನೇ! ಆದಿಕೇಶವನ ಉಪದೇಶದಿಂದ ಶಿವಪೂಜೆಯಂ ಮಾಡಿದಕಾರಣ ಸೂರ್ಯನು ಕೇಶವಾದಿತ್ಯನೆನಿಸಿ ಕೊಂಡನು. ಪಾದೋದಕ ತೀರ್ಥಸ್ನಾನವಂಮಾಡಿ ಕೇಶವಾದಿತ್ಯನಂ ಪೂಜಿಸಲು ಸಕಲಪಾಪಹರ. ಆ ತೀರ್ಥದಲ್ಲಿ ರಥಸಪ್ತಮಿಯಾದಿನದಸ್ನಾನವಂಮಾಡಿ ಕೇಶವಾದಿತ್ಯನಂ ಪೂಜಿಸಲು, ಸಪ್ತಜನ್ಮ ಪಾಪಪರಿಹರ. ಆವನಾದವನೊಬ್ಬನು ಮಕರಮಾಸದ ಮಾಘಶುದ್ಧ ಸಪ್ತಮೀ ದಿನ ಸ್ನಾನಪೂಜೆಯಂಮಾಡಲು, ಶೋಕರೋಗಂಗಳೂ ಇಹ ಜನ್ಮಜನ್ಮಾಂತರಂಗಳಲ್ಲಿ ಮಾಡಿದ ಪಾಪಂಗಳು ಜ್ಞಾನಾಜ್ಞಾನಂಗಳಿಂದ ಮನೋವಾಕ್ಕಾಯ ಕರ್ಮಂಗಳಿಂದ ಮಾಡಿದ ಪಾಪ ಸಕಲವ್ಯಾಧಿಗಳು ಪರಿಹರಿಸಲೀ ಯೆಂದು ಪ್ರಾರ್ಥನೆಯಂಮಾಡಿಕೊಂಡು ಪಾದೋದಕತೀರ್ಥದಲ್ಲಿ ಸ್ನಾನವಂಮಾಡಿ ಕೇಶವಾದಿತ್ಯನ ಪೂಜೆದರ್ಶನವಂಮಾಡಲು, ನಿಷ್ಕಲ್ಮಷನಹನು. ಭಕ್ತಿಯಿಂದ ಕೇಶವಾದಿತ್ಯನ ಮಹಿಮೆಯಂ ಕೇಳಲು, ಸಕಲ ಪಾಪಹರಮಪ್ಪ ಶಿವಜ್ಞಾನ ದೊರಕೊಂಬುದೂ ಎಂದುಹೇಳಿ ಅಗಸ್ತ್ಯಂಗೆ ಕುಮಾರಸ್ವಾಮಿ ಇಂತೆಂದನು, ಕೇಳ್ಳೈ ಅಗಸ್ತ್ಯನೇ! ರಮ್ಯವಾದ ಹರಿಕೇಶವನಲ್ಲಿ ವಿಮಲಾದಿತ್ಯನೆಂಬ ಸೂರ್ಯನಿದ್ದಾನು, ಅತನ ಮಹಿಮೆಯಂ ಹೇಳ್ವೆನು ಕೇಳು, ಪೂರ್ವದಲ್ಲಿ ಮೂಡಣದೇಶದಲ್ಲಿ ವಿಮಲನೆಂಬ ಒಬ್ಬ ಕ್ಷತ್ರಿ

ಯುಮುಂಟು ಆತನಿಗೆ ಪೂರ್ವಜನ್ಮದ ವಾಸನೆಯಿಂದ ಕುಷ್ಠರೋಗ ಬರಲು ಸ್ತ್ರೀಯರು ಮೊದಲಾದ ಸಕಲ ಐಶ್ವರ್ಯವುಂಬಿಟ್ಟು ವಿಮಲನೆಂಬರಾಯನು ಕಾಶೀಪಟ್ಟಣಕ್ಕೆ ಬಂದು ಸೂರ್ಯನ ಪ್ರತಿಷ್ಠೆಯುಂಮಾಡಿಕೊಂಡು ಕಣಿಗಲು ದಾಸವಾಳ ಮುತ್ತುಗದ ಕೆಂಪಿನನ್ಯೆದಲು ಅಶೋಕ ಪಾದರೀ ಕೆಂಡಸಂಪಿಗೆ ಇವು ಮೊದಲಾದ ಕೆಂಪಿನ ಪುಷ್ಪಂಗಳಿಂದ ಕುಂಕುಮ ಅಗಿಲುಚಂದನ ಕರ್ಪೂರರಸಹಿತವಾದ ಕೆಂಪಿನಗಂಧ ಕೆಂಪಿನ ಅಕ್ಷತೆ ರಕ್ತವಸ್ತ್ರ ಸಾಂಬ್ರಾಣಿಧೂಪ ಕರ್ಪೂರದೀಪ ಘೃತದಿಂ ಪಕ್ವವಾದ ಗುಡಸಮೇತವಾದ ಭಕ್ಷ್ಯಭೋಜ್ಯಗಳಿಂ ನಮಸ್ಕಾರ ಅರ್ಘ್ಯ ಸ್ತೋತ್ರಪಾಠ ಜಪ ಈ ರೀತಿಯಲ್ಲಿ ಪ್ರತಿದಿನವೂ ಪೂಜೆಯುಂ ಮಾಡಿಕೊಂಡಿರಲು, ಶೀಘ್ರದಿಂ ಸೂರ್ಯನು ಪ್ರಸನ್ನನಾಗಿ ಇಂತೆಂದನು. ಎಲೈ ವಿಮಲಬುದ್ಧಿಯುಳ್ಳ ವಿಮಲನೇ! ನಿನ್ನ ಭಕ್ತಿಗೆ ಮೆಚ್ಚಿ ಪ್ರಸನ್ನನಾದೆನು ನಿನ್ನ ಕುಷ್ಠವ್ಯಾಧಿಪರಿಹರವಾಗಿ ತೇಜಸ್ಸುಳ್ಳಾದ ದೇಹವಾಗಲೀ, ಇನ್ನೊಂದುವರವಂ ಬೇಡಿಕೊ! ಎಂದು ಹೇಳುವ ಸೂರ್ಯನ ವಾಕ್ಯವಂ ಕೇಳಿ ವಿಮಲನೆಂಬರಾಯನು ಎದ್ದು ಸಾಷ್ಟಾಂಗದಿಂ ನಮಸ್ಕರಿಸಿ ರೋಮಾಂಚಿತವಾಗಿ ಎಲೈ ಸ್ವಾಮಿ! ನೀನ ಜಗಚ್ಚಕ್ಷುವು ಅಂತರಾತ್ಮನು ಅಪ್ರಮೇಯ ಸ್ವರೂಪನು ಜಗತ್ತಿನ ಅಂಧಕಾರವಂ ಪರಿಹರಿಸುವನು ನೀನು ವರನಕೊಡಬೇಕಾದರೆ ನಿನ್ನಮೂರ್ತಿಯುಂ ಪೂಜಿಸಿದವರ ವಂಶದಲ್ಲಿ ಕುಷ್ಠವ್ಯಾಧಿಯುಳ್ಳವರು ಜನಿಸದೇಯಿರಲೀ, ದಾರಿದ್ರ್ಯ ಸಕಲಸಂತಾಪ ಮೊದಲಾದ ಉಪದ್ರವಗಳಿಲ್ಲದೆ ಇರಲೀ, ಎಂದು ಬಿನ್ನವಿಸಲು ಹಾಗೇ ಆಗಲೀ ಈಗ ನೀನು ಪೂಜಿಸಿದ ಮೂರ್ತಿಯಲ್ಲಿ ತಾನು ನಿತ್ಯ ಸನ್ನಿಹಿತನಾಗಿ ಇಹೆನು ಅದರಿಂದ ನೀನು ವಿಮಲಾದಿತ್ಯನೂ ಎಂದು ಪ್ರಸಿದ್ಧಿಯಾಗಲೀ. ನೀನು ವಿಮಲಾದಿತ್ಯರಾಯನೂ ಎಂದು ಪ್ರಸಿದ್ಧನಾಗೂ ಇಂತೆಂದುವರವನಿತ್ತು ಸೂರ್ಯನು ಅಂತರ್ಧಾನವಾಗಲು, ವಿಮಲಾದಿತ್ಯರಾಯನು ನಿರ್ಮಲ ಶರೀರ ಉಳ್ಳವನಾಗಿ ತನ್ನಪಟ್ಟಣಕ್ಕೆ ಹೋದನು. ಇಲ್ಲಿ ವಿಮಲಾದಿತ್ಯನ ದರ್ಶನ ಸ್ಪರ್ಶನ ಪೂಜೆಗಳಿಂದ ಕುಷ್ಠ ವ್ಯಾಧಿ ಮೊದಲಾದ ಸಕಲವ್ಯಾಧಿಪರಿಹರ. ಇಲ್ಲಿ ವಿಮಲಾದಿತ್ಯನ ಮಹಿಮೆಯುಂ ಕೇಳಲು, ಸಕಲ ಮನೋಮಲಂಗಳಂಪರಿಹರಿಸಿ ಮುಕ್ತಿಯುಂ ಪಡೆಯುವರು ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ಪೇಳಿ

ಮತ್ತಿಂತೆಂದನು. ಕೇಳ್ಕೈ ಅಗಸ್ತ್ಯನೇ! ವಿಶ್ವೇಶ್ವರನ ದಕ್ಷಿಣಭಾಗದಲ್ಲಿ ಭಗೀರಥರಾಯನು ಗಂಗಾಭವಾನಿಯಂ ಕಾಶೀಕ್ಷೇತ್ರಕ್ಕೆ ತಂದಾಗ ಗಂಗಾಸ್ತೋತ್ರವಂಮಾಡಿ ತನ್ನ ಅಭಿಮುಖವಂಮಾಡಿಕೊಂಡು ಸೂರ್ಯನು ಭಕ್ತಿಯಿಂದ ಗಂಗೆಯಲ್ಲಿ ಸ್ನಾನವಂಮಾಡಿ ಗಂಗೆಯಂ ಸ್ತುತಿಗೈದು ನಮಸ್ಕಾರವಂಮಾಡಲು, ಗಂಗೆ ಪ್ರತ್ಯಕ್ಷವಾಗಿ ಎಲೈ ಸೂರ್ಯನೇ! ನೀನು ಗಂಗಾದಿತ್ಯನೂ ಎಂದು ಪ್ರಸಿದ್ಧನಾಗಿರೂ ಎಂದು ವರನಂಕೊಡಲು ಗಂಗಾದಿತ್ಯನೆನಿಸಿಕೊಂಡನು. ಈ ಗಂಗಾದಿತ್ಯನ ಪೂಜೆ ನಮಸ್ಕಾರ ಜಪ ಅರ್ಘ್ಯ ಇವಂ ಮಾಡಲು, ಸರ್ವಸಿದ್ಧಿಯಹುದು. ಸಕಲ ಪಾಪಪರಿಹರವೆಂದು ಗಂಗಾದಿತ್ಯನ ಮಹಿಮೆಯಂಪೇಳಿ ಕುಮಾರಸ್ವಾಮಿ ಮತ್ತಿಂತೆಂದನು. ಕೇಳ್ಕೈ ಅಗಸ್ತ್ಯ! ಈ ಕಾಶಿಯಲ್ಲಿ ಯಮನಿಗೆ ಪ್ರಸನ್ನನಾದ ಯಮಾದಿತ್ಯನೂ ಎಂಬ ಸೂರ್ಯನು ಇದ್ದಾನು. ಅತನ ಸೇವೆಯಿಂದ ಯಮದರ್ಶನವಿಲ್ಲ. ಕೃಷ್ಣಚತುರ್ದಶೀ ಅಂಗಾರಕವಾರ ಯಮತೀರ್ಥದಲ್ಲಿ ಸ್ನಾನವಂಮಾಡಿ ಯಮಾದಿತ್ಯನಂ ಸೇವಿಸೆ ಸರ್ವಪಾಪಹರ. ಆ ಸಮೀಪದಲ್ಲಿಯ ಪರಮೇಶ್ವರನೆಂಬ ಈಶ್ವರನಿದ್ದಾನು, ಕೃಷ್ಣಚತುರ್ದಶೀ ಅಂಗಾರಕವಾರ, ಭರಣೀನಕ್ಷತ್ರ ಇವ್ವು ಮೊದಲಾದ ಪುಣ್ಯದಿವಸಗಳಲ್ಲಿ ಯಮತೀರ್ಥದಲ್ಲಿ ಸ್ನಾನವಂಮಾಡಿ ಪಿತೃಗಳಿಗೆ ತಿಲೋದಕಪಿಂಡಪ್ರದಾನಂಗಳಂಮಾಡಿ ಯಮೇಶ್ವರನ ಪೂಜಿಸಲು, ಪಿತೃಋಣಮುಕ್ತಿ. ಗಯಾಶ್ರಾದ್ಧವಂ ಮಾಡಿದಫಲವುಂಟು. ಮತ್ತೂ ಕಾಶೀಕ್ಷೇತ್ರದಲ್ಲಿ ಗುಹ್ಯಕಾದಿತ್ಯ ಮೊದಲಾದ ಅನೇಕ ಆದಿತ್ಯರಿಂದಲೂ ಅವರೊಳು ಈಗ ನಿನಿಗೆ ಪೇಳಿದ ಲೋಲಾದಿತ್ಯ, ಉತ್ತರಾದಿತ್ಯ, ದ್ರುಪದಾದಿತ್ಯ, ವಿನತಾದಿತ್ಯ, ವೃದ್ಧಾದಿತ್ಯ, ಮಯೂಖಾದಿತ್ಯ, ಖಗೋಲ್ಕಾದಿತ್ಯ, ಅರುಣಾದಿತ್ಯ, ಕೇಶವಾದಿತ್ಯ, ವಿಮಲಾದಿತ್ಯ, ಗಂಗಾದಿತ್ಯ, ಯಮಾದಿತ್ಯರೆಂಬ ದ್ವಾದಶಾದಿತ್ಯರು ಸಕಲ ಸೂರ್ಯರೊಳು ಪ್ರಸಿದ್ಧರು. ಈ ದ್ವಾದಶಾದಿತ್ಯರ ಉತ್ಪತ್ತಿಯಂಪೇಳಿದ ಅಧ್ಯಾಯಂಗಳಂ ಕೇಳಿದವರಿಗೆ ಸಕಲಪಾಪಹರವೆಂದು ಕುಮಾರಸ್ವಾಮಿ ಅಗಸ್ತ್ಯಂಗೆ ಪೇಳ್ದ ಅರ್ಥವಂ ಸೂತಪುರಾಣೀಕನು ಶೌನಕಾದಿಋುಷಿಗಳಿಗೆ ಪೇಳಿದ ನೆಂಬಲ್ಲಿಗೆ ಅಧ್ಯಾಯಾರ್ಥ. ಶ್ರೀ

* *

ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಅರುಣಾದಿತ್ಯ, ವೃದ್ಧಾದಿತ್ಯ, ಕೇಶವಾದಿತ್ಯ, ವಿಮಲಾದಿತ್ಯ, ಗಂಗಾದಿತ್ಯ, ಯಮಾದಿತ್ಯರ ಮಹಿಮೆ ಎಂಬ ಐವತ್ತೊಂದನೇ ಅಧ್ಯಾಯ ನಿರಂತರಂ ಮಂಗಳಮಹಾ * ಶ್ರೀ *

ಐವತ್ತೊಂದನೇ ಅಧ್ಯಾಯ ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ಐವತ್ತೆರಡನೇ ಅಧ್ಯಾಯ.

:o:

ಬ್ರಹ್ಮನ ದಶಾಶ್ವಮೇಧ ವೃತ್ತಾಂತ.

ಅನಂತರದಲ್ಲಿ ಕುಮಾರಸ್ವಾಮಿ ಇಂತೆಂದನು, ಕೇಳ್ಗೆ ಅಗಸ್ತ್ಯನೇ! ಲೋಕೋತ್ತರವಾದ ಕಾಶೀಪಟ್ಟಣಕ್ಕೆ ಸೂರ್ಯನುಹೋಗಿ ತಿರಗಿ ಬಾರದಿರಲು, ಮಂದರಾದ್ರಿಯಲ್ಲಿದ್ದ ಪರಮೇಶ್ವರನು ಕಾಶೀವಿಶ್ಲೇಷದಿಂ ಮತ್ತೆ ಘನವಾಗಿ ಚಿಂತೆಪಟ್ಟು ಹೇಳುವನು, ಕಾಶೀಪಟ್ಟಣಕ್ಕೆ ಯೋಗಿನಿಯರಂ ಕಳುಹಿಸಿದೆನು, ತದನಂತರ ಸೂರ್ಯನಂ ಕಳುಹಿಸಿದೆನು, ಇವರೊಳೊಬ್ಬರೂ ತಿರಗಿ ಬಂದವರಿಲ್ಲ. ನಮಿಗೆ ಕಾಶೀಪಟ್ಟಣಕ್ಕೆ ಹೋಗುವ ಪ್ರಾಪ್ತಿಯಿಲ್ಲದೇಹೋಯಿತು. ಈ ಕಾಶಿಯು ಮೊದಲಾಗಿ ತನ್ನ ಮನಸ್ಸಿಗೆ ಚಂಚಲವನ್ನು ಹುಟ್ಟಿಸುತ್ತಾ ಇದ್ದೀತು, ಮಿಕ್ಕಾದವರ ಪಾಡೇನು? ಈಗ ಮೂರುಲೋಕದ

ವೃದ್ಧರಾದ ಮಾರ್ಕಂಡೇಯನ ದೃಷ್ಟಿಯಿಂದ ದರ್ಶಿಸಿದೆನು, ಅಂಥಾ ತಪಸ್ವಿಗಳ್ಗೆ ಈ ಕಾಶಿಯು ಅಭಿಲಾಷೆ ಸಂಪಾದಿಸಿಕೊಡುತ್ತಾ ಇದೆ. ಅದರಿಂದ ಇಷ್ಟಾರ್ಥಪ್ರದಾಯಕಂಗಳು ಹಲವು. ಕಾಶಿಯ ವೃತ್ತಾಂತವಂ ತಿಳಿದುದಕ್ಕೆ ಚತುರ್ಮುಖಬ್ರಹ್ಮನು ನಿರ್ಮಲ ತಪಿಯ ಪರಮೇಶ್ವರನು ವಿಚಾರಿಸಿಕೊಂಡು ಬ್ರಹ್ಮನಂ ಕರೆದು ಸಮೀಪದಲ್ಲಿ ಕುಳ್ಳಿರಿಸಿಕೊಂಡು ಬಹುಮಾನದಲ್ಲಿ ಒಂದು ವಾಕ್ಯವಂ ನುಡಿದನು, ಎಲೈ ಬ್ರಹ್ಮದೇವ! ಕೇಳು, ಕಾಶೀಪಟ್ಟಣಕ್ಕೆ ಹೋಗಿ ದಿವೋದಾಸರಾಯನ ವೃತ್ತಾಂತವಂ ತಿಳಿದು ಬರಹೇಳಿ ಯೋಗಿನಿಯರಂ ಸೂರ್ಯನಂ ಕಳುಹಿದೆನು, ಅವರು ತಿರುಗಿ ಬಾರದವರಲ್ಲಾ, ಒಬ್ಬನೊಬ್ಬ ಪುರುಷನನ್ನು ಒಬ್ಬ ಕಾಂತೆ ಸಂತೋಷಪಡಿಸುವಂತೆ ಕಾಶೀಪಟ್ಟಣವು ತನ್ನ ಮನಸ್ಸಿಗೆ ಬಹು ಸಂತೋಷವಂ ಪುಟ್ಟಿಸುತ್ತಾ ಇದ್ದೀತು, ಈದಿನ ನಾನ ಮಂದರಾದ್ರಿಯಲ್ಲಿ ತನಗೆ ಪ್ರೀತಿಯಿಂದ ತನಗೋಸುಗವಾಗಿ ನೀನು ಶೀಘ್ರದಿಂ ಕಾಶೀಪಟ್ಟಣಕ್ಕೆ ಹೋಗು. ನಾನು ಕಾಶೀಪಟ್ಟಣವಂ ಬಿಟ್ಟು ಬಂದ ಪ್ರಯೋಜನವಂ ಬಲ್ಲೆಯಲ್ಲಾ, ಅಜ್ಞಾನಿ ಮೊದಲಾಗಿ ಕಾಶಿಯಂ ಬಿಡನು. ಬಲ್ಲವನು ಬಿಟ್ಟಾನೆ? ತಾನು ಈ ಹೊತ್ತು ಕಾಶೀಪಟ್ಟಣಕ್ಕೆ ಹೋಗಲಾರದೆ ಇರಲಿಲ್ಲ ಹೋಗಬಾರದು. ಅದೇನೆಂದರೆ ಧರ್ಮಿಷ್ಟನಾಗಿ ರಾಜ್ಯವನ್ನಾಳುವ ದಿವೋದಾಸರಾಯನಂ ಹೊರಡಿಸುವುದಕ್ಕೆ ಮನಸ್ಸು ಬಾರದು. ತಾನು ಮಾಡುವ ಪ್ರಯೋಜನವಂ ನೀನೆ ಮಾಡುತ್ತಾ ಇದ್ದೀ. ನಿನಗೆ ಮಾರ್ಗದಲ್ಲಿ ಶುಭವಾಗಲೀ ಎಂದು ಪರಮೇಶ್ವರನು ನುಡಿದ ವಾಕ್ಯವನ್ನು ಬ್ರಹ್ಮನು ಶಿರಸಾವಹಿಸಿ ಹಂಸವಾಹನಾರೂಢನಾಗಿ ಕಾಶೀಪಟ್ಟಣಕ್ಕೆ ತೆರಳಿ ಹೋಗುತ್ತಾ ಬ್ರಹ್ಮನು ತನ್ನೊಳಗಿಂತೆಂದನು. ಇಂತು ತನಗೆ ಕಾಶೀಪಟ್ಟಣ ದೊರಕಿತು. ಇಂದು ತಾನು ಹಂಸವಾಹನನಾದುದಕ್ಕೆ ಸಫಲವಾಯಿತು, ಕಾಶಿಯ ಪ್ರಯಾಣದಲ್ಲಿ ಹೆಜ್ಜೆ ಹೆಜ್ಜೆಗೆ ಅಶ್ವಮೇಧಫಲ ಉಂಟು ಧರ್ಮಕ್ಕೆ ವಿಘ್ನಂಗಳುಂಟು, ತಾನು ಈಶ್ವರಾನುಗ್ರಹದಿಂದ ಏನು ಕಂಟಕವೂ ಇಲ್ಲದೆ ಈ ಕಾಶೀಕ್ಷೇತ್ರವಂ ಈ ಮಣಿಕರ್ಣಿಕಾ ಕ್ಷೇತ್ರವಂ ನೋಡಿದೆನಾದಡೆ ತನ್ನ ದೃಷ್ಟಿ ಸಫಲವಾಗುವದು. ಆನಂದ ಕಾನನದಲ್ಲಿ ಇರ್ದ ವೃಕ್ಷಂಗಳು ಜನರುಗಳು ಆನಂದಫಲವುಳ್ಳವರು. ಆ ಭೂಮಿಯು ಆನಂದಮಯವಾದದ್ದು, ಶಿವನು ಆನಂದಸ್ವರೂಪಿಯಾದಕಾರಣ ಕಾಶಿಯಲ್ಲಿಹ ಸಕಲ

ಪ್ರಾಣಿಗಳೂ ಅನಂತಸ್ವರೂಪಿಗಳು. ಕಾಶೀಕ್ಷೇತ್ರದಲ್ಲಿ ಸಂಚಾರವಹವೆ ಚರಣಂಗಳು ಕಾಶಿಯನ್ನುಳಿದುದಂ ಕೇಳವೇ ಕಿವಿಗಳು, ಕಾಶಿಕ್ಷೇತ್ರವ ನೋಡಿದುದೇ ಕಣ್ಗಳು, ಸಕಲಶಾಸ್ತ್ರಗಳು ಕಾಶೀಕ್ಷೇತ್ರವೇ ಅಧಿಕವೆಂದು ತಿಳಿಸುವವೇ ಮನ್ನ ಪರಮೇಶ್ವರಗೆ ನಿವಾಸವಾದ ಕ್ಷೇತ್ರವೆಂದು ಮಾಡಿಕೊಂಡಿಹ ಬುದ್ಧಿ ಸಫಲವಾಯಿತು. ಧೂಳಿಯು ದಲಾಪರೂ ಕಾಶಿಯಲ್ಲಿ ಬಿದ್ದ ತೃಣಾದಿಗಳೇ ಲೇಸು. ಕಾಶಿಯು ನೋಡದವ ಜನರು ಕಷ್ಟಪಡುವರು, ತನಗೆ ಮಿತಿಯಾದ ನೂರುವರುಷದಾಯುಷ್ಯ, ಇಂದು ಸಫಲವಾಯಿತು. ಬಹುದಿನದಿಂದ ಬಯಸಿದ ಕಾಶೀಕ್ಷೇತ್ರವ ಕಂಡೆನಾಗಿ, ಇಂದು ತನ್ನ ಐಶ್ವರ್ಯಕ್ಕೆ ಸರಿಯಿಲ್ಲ, ಶಿವಭಕ್ತಿಯಿಂದ ಸಲಿಸಲು ತನ್ನ ತಪೋವೃಕ್ಷ ಫಲಿತವಾಯಿತು. ಇಂತೆಂದು ನುಡಿಯುತ್ತಾ ಬ್ರಹ್ಮನು ಸಂತೋಷದಿಂದ ಕಾಶೀಪಟ್ಟಣಕ್ಕೆ ಹೋಗಿ ವೃದ್ಧಬ್ರಾಹ್ಮಣನ ವೇಷವಂತಾಳಿ ದಿವೋದಾಸರಾಯನಂ ಕಂಡು ಆಶೀರ್ವಾದವಂ ಮಾಡಿ ನೆನೆದ ಮಂತ್ರಾಕ್ಷತೆಯಂ ಕೊಡಲು, ಆ ರಾಯನು ಎದ್ದು ನಮಸ್ಕಾರವಂ ಮಾಡಿ ಸಿಂಹಾಸನದಲ್ಲಿ ಕುಳ್ಳಿರಿಸಿ ಅರ್ಘ್ಯಪಾದ್ಯಾಚಮನೀಯ ಮಧುಪರ್ಕಂಗಳಂ ಕೊಟ್ಟು ಸಂತೋಷಪಡಿಸಿ ನೀವು ಬಂದ ಪ್ರಯೋಜನವಂ ಬುದ್ಧಿಗಲಿಸಬೇಕೆಂದು ಬಿನ್ನೈಸಲು, ಆ ರಾಯನ ವಿನಯೋಕ್ತಿಗೆ ಹರ್ಷಿತನಾದ ಆ ಬ್ರಾಹ್ಮಣನಿಂತೆಂದನು.-ಎಲೈ ರಾಯನೇ! ನಾನು ಬಹುಕಾಲದವನು, ನಿನ್ನನ್ನು ರಿಪುಂಜಯನೆಂದು ಬಲ್ಲೆನು, ನೀನು ನನ್ನಂ ಅರಿಯೆ, ಬಹುದಕ್ಷಿಣೆಗಳಂ ಕೊಟ್ಟು ಬಹು ಯಜ್ಞಂಗಳಂ ಮಾಡಿದಂಥಾ ಜಿತೇಂದ್ರಿಯರಾದ ಸಕಲಶತ್ರುಸಂಹಾರಗಳಾದ ಅರಿಷಡ್ವರ್ಗಗಳಂ ಜಯಿಸಿದಂಥಾ ಸದಾಚಾರಿಗಳಾದ ಸತ್ಯವ್ರತರಾದ ಸಕಲಶಾಸ್ತ್ರಪ್ರವೀಣರಾದ ನೀತಿಜ್ಞರಾದ ದಯಾದಾಕ್ಷಿಣ್ಯಪರರಾದ ಭೂಮಿಯಂತೆ ಕ್ಷಮೆಯುಳ್ಳ ಸಮುದ್ರದಂತೆ ಗಾಂಭೀರ್ಯವುಳ್ಳ ಶೌರ್ಯಸಂಪನ್ನರಾದ ಯಶೋಧನರಾದ ಬಹುಮಂದಿ ರಾಯರಂ ಕಂಡು ಬಲ್ಲೆನು, ಅವರು ನಿನ್ನ ಗುಣಕ್ಕೆ ಸರಿಯಾಗರು, ನೀನು ಪ್ರಜೆಗಳೇ ಕುಟುಂಬ ಉಳ್ಳವನು, ಬ್ರಾಹ್ಮಣರ ಭಾಗದ ರಾಯನು, ತಪವೇ ಸಹಾಯವುಳ್ಳವನು, ಸದ್ಗುಣವಂತನು, ನಿನ್ನ ಸತ್ಯವೆಂಬ ಭಯದಿಂದ ದೇವತೆಗಳು ಮೊದಲಾಗಿ ವಿಮಾನಂಗಳಂ ಸಂಚರಿಸರಲ್ಲ, ನಿಸ್ಪೃಹನಾದಂಥಾ ನಿನಗೆ ತನ್ನ ಸ್ತುತಿ

ಯಿಂದ ಪ್ರಯೋಜನವೇನು? ಆದರೂ ನಿನ್ನ ಸದ್ಗುಣಗಳು ಸಮ್ಮಿಂದ ಸ್ತುತಿಗೈಸುತ್ತಾ ಇದ್ದಾವೆ, ಆದಂತಿರಲಿ ತಾನು ಬಂದ ಪ್ರಸ್ತುತವಂ ಪೇಳ್ವೆನು ಕೇಳು, ನಾನು ಯಜ್ಞವು ಮಾಡುವನಾಗಿ ನಿನ್ನ ಸಹಾಯವಂ ಬಯಸಿ ಬಂದೆನು ನಿನ್ನಿಂದ ಈ ಭೂಮಿಯು ಒಳ್ಳೆಯ ರಸವುಳ್ಳದ್ದಾಗಿ ಇದ್ದೀತು. ನಮಗೆ ಸರ್ವಕಾರ್ಯಸಿದ್ಧಿ. ನೀನು ನ್ಯಾಯದಿಂದ ಘಳಿಸಿದ ಧನವುಳ್ಳವನು ಕರ್ಮಭೂಮಿಗಳಲ್ಲಿ ನಿನ್ನ ಪಟ್ಟಣವೇ ಉತ್ತಮವಾದದ್ದು ಈ ಕ್ಷೇತ್ರದಲ್ಲಿ ಮಾಡಿದ ಕರ್ಮಗಳಿಗೆ ಪ್ರಳಯದಲ್ಲೂ ನಾಶವಿಲ್ಲ, ಮನುಷ್ಯರು ಸನ್ಮಾರ್ಗದಿಂ ಘಳಿಸಿದ ಧನವನ್ನು ಈ ಕ್ಷೇತ್ರದಲ್ಲಿ ದಾನವ ಮಾಡಬೇಕು. ಸಕಲರಿಗೂ ದಿವ್ಯಜ್ಞಾನಪ್ರದವಾದ ಕಾಶೀಮಹಿಮೆಯನ್ನು ಪರಮೇಶ್ವರಹೊರತಾಗಿ ಬಲ್ಲವಿಲ್ಲ. ವಿಶ್ವಪತಿಯ ಮುಖ್ಯಶರೀರವಾದ ಕಾಶೀಪಟ್ಟಣವಂ ರಕ್ಷಿಸುವ ಭಾಗ್ಯಫಲವು ನಿನಗೆ ನೀನು ಅನೇಕ ಜನ್ಮದಿಂದ ಸಂಪಾದಿಸಿದ ಸುಕೃತದಿಂದ ದೊರಕಿತು, ಸಕಲಋಷಿಗಳೂ ಈ ಕ್ಷೇತ್ರವನ್ನು ಚತುರ್ದಶಭುವನಸಾರವೆಂದು ಹೇಳುತ್ತಾ ಇದ್ದಾರೆ. ಈ ಕಾಶೀಪಟ್ಟಣವು ರಕ್ಷಿಸಿದರೆ ಲೋಕಂಗಳಂ ರಕ್ಷಿಸಿದ ಫಲವುಂಟು. ಸಕಲಕ್ರಿಯಾನಿಯಮಗಳಿಂದ ಸಂಪಾದಿಸಿದ ಸುಕೃತದಿಂದ ದೊರಕೀತು. ದೇವತಾಸಾರ್ವಭೌಮನಾಗಿ ವಿಶ್ವಪತಿಯನ್ನೇ ಸಂತುಷ್ಟಪಡಿಸಬೇಕು. ಪರಮೇಶ್ವರನು ಬ್ರಹ್ಮಾದಿಗಳಿಗೆ ಸಮಸ್ತಭಾಗ್ಯವನ್ನೀವ ಒಡೆಯನು. ಸಕಲಲೋಕಂಗಳ ಸೃಷ್ಟಿಸ್ಥಿತಿಲಯಂಗಳಮಾಡುವನು ಆದಕಾರಣ ಮಿಕ್ಕಾದ ದೇವತೆಗಳ ನೋಡಿದ್ದಂತೆ ಪರಮೇಶ್ವರನ ನೋಡಬ್ಯಾಡಾ, ಸದ್ಬ್ರಾಹ್ಮಣರಾದವರು ಅರಸುಗಳಿಗೆ ಧರ್ಮವನ್ನೇ ತಿಳಿಸಬೇಕು ಆದಕಾರಣವಾಗಿ ನಿನಗೆ ಹಿತವಾಗಿ ಹೇಳಿದೆನು. ಇಂತೆಂದು ನುಡಿದ ವೃದ್ಧಬ್ರಾಹ್ಮಣನ ವಾಕ್ಯವಂ ಕೇಳಿ, ದಿವೋದಾಸರಾಯನಿಂತೆಂದನು- ಎಲೈ ಸ್ವಾಮಿಯೇ ಈಗ ನೀವು ಬುದ್ಧಿಗಲಿಸಿದ್ದೆಲ್ಲವು ಎನ್ನ ಹೃದಯದಲ್ಲಿ ಇದ್ದೀತು, ನೀವು ಯಜ್ಞವಮಾಡಬೇಕಾದರೆ ಬೇಕಾದಷ್ಟು ದ್ರವ್ಯಸಂಭಾರವನ್ನು ತನ್ನ ಬಂಡಾರದಿಂದ ಕೊಂಡುಹೋಗಿ ಯಜ್ಞವಂ ಮಾಡಿ, ತನ್ನ ರಾಜ್ಯಕ್ಕೂ ಸಕಲವಸ್ತುವಾಹನ ಭಂಡಾರಾದಿಗಳಿಗೂ ನೀವೇ ಕರ್ತರು, ನೀವು ವಿಕಾಸದಿಂದ ಪ್ರಶ್ನವಂಮಾಡಿದರೆ ತನ್ನ ಅಭೀಷ್ಟ ಸಿದ್ಧಿಯಾದೀತು, ಅದರಿಂದ ನಾನು ಕೃತಾ

ರ್ಥನಾದೇನು, ಈ ರಾಜ್ಯವನ್ನಾಳುವದು ತನಗೋಸ್ಕರವಲ್ಲ, ಪುತ್ರಮಿತ್ರ ಕಳತ್ರಾದಿಗಳು ಮೊದಲಾದ ಸಕಲರಿಗೂ ಪರೋಪಕಾರಾರ್ಥವಲ್ಲದೆ ಮುಖ್ಯದಿಂದಲ್ಲ; ಅರಸುಗಳಿಗೆ ಸಕಲಯಜ್ಞ ತೀರ್ಥಸ್ನಾನ ತಪಸ್ಸುಗಳ ಪುಣ್ಯಕ್ಕಿಂತಲು ಪ್ರಜೆಗಳ ಸಂರಕ್ಷಣವೆ ಪರಮಧರ್ಮ, ಪ್ರಜಾಕ್ಷೋಭೆಯಿಂದ ಪುಟ್ಟಿದ ಅಗ್ನಿಯು ಸಿಡಿಲಿಗಿಂತ ಘನವಾದದ್ದು, ಅದೆಂತೆನೆ;- ಸಿಡಿಲು ಹೊಡೆದರೆ ಇಬ್ಬರು ಮಾನವರಪ್ರಾಣವಕೊಂಬುದು. ಪ್ರಜೆಗಳ ಸಂತಾಪಾಗ್ನಿಯು ರಾಜ್ಯ ಕುಲಶರೀರ ಪುತ್ರಪೌತ್ರ ಕಳತ್ರ ಸಕಲ ಐಶ್ವರ್ಯವನು ದಹಿಸುವದು. ತಾನು ಯಜ್ಞವಂಮಾಡಿ ಅವಭೃತಸ್ನಾನವಂ ಮಾಡುವಾಗ ಬ್ರಾಹ್ಮಣಪಾದೋದಕದಲ್ಲಿ ಸ್ನಾನವಂಮಾಡಿ ಬ್ರಾಹ್ಮಣರಿಗೆ ಮೃಷ್ಟಾನ್ನವನಿಕ್ಕುವದೇ ಸಕಲಯಜ್ಞಫಲ. ತನಗೆ ಅತಿಥಿ ಪೂಜೆಯ ಮಾಡುವಲ್ಲಿ ಬಹು ಅಭಿಲಾಷೆಯುಂಟಾಗಿಹುದು. ಇಂದು ನೀವು ಬಂದಕಾರಣ ಎನ್ನ ಮನೋರಥವೆಂಬ ವೃಕ್ಷ ಫಲಿತವಾಯಿತು. ಆದರಿಂದ ನಾನು ಕೃತಾರ್ಥನಾದನು ಎಂದು ಬಿನ್ನಹವಂಮಾಡಿದ ರಾಯನ ವಾಕ್ಯವಂಕೇಳಿ, ವಿಪ್ರವೇಷದಿಂ ಬಂದ ಬ್ರಹ್ಮನು ಮಹಾಸಂತೋಷದಿಂದ ಯಜ್ಞಶಾಲೆಯಂಮಾಡಿಸಿ ದಿವೋದಾಸರಾಯನ ಸಹಾಯದಿಂದ ಹತ್ತು ಅಶ್ವಮೇಧ ಯಾಗಂಗಳಂಮಾಡಿದನು. ಆ ಯಜ್ಞಂಗಳ ಧೂಮದಿಂದ ಆಕಾಶ ಕಪ್ಪುವರ್ಣ ನೀಲವರ್ಣವಾಗಿ ಇದ್ದೀತು, ಕಾಶಿಯಲ್ಲಿ ಬ್ರಹ್ಮನು ಯಜ್ಞಮಾಡಿದ ಸ್ಥಳವು ದಶಾಶ್ವಮೇಧವೆನಿಸಿತು. ಬ್ರಹ್ಮನು ಯಜ್ಞವ ಮಾಡಿದಮುನ್ನ ಆ ತೀರ್ಥವು ರುದ್ರಸರಸ್ಸು ಎನಿಸಿತು. ಯಜ್ಞವು ಮಾಡಿದ ಬಳಿಕ ಭಾಗಿರಥಿಕೂಡಿ ತಂಗಿ ಮತ್ತು ಮಹಾಪುಣ್ಯತೀರ್ಥವಾಯಿತು. ಬ್ರಹ್ಮನು ಯಜ್ಞವಮಾಡುವಾಗ ಅಲ್ಲಿ ಒಂದು ಲಿಂಗಪ್ರತಿಷ್ಠೆಯಂ ಮಾಕೊಂಡು ಇದ್ದಕಾಗಿ ಆ ಲಿಂಗದ ಹೆಸರು ದಶಾಶ್ವಮೇಧೇಶ್ವರನೆಂಬ ಪ್ರಸಿದ್ಧಿಯಾಯಿತು. ಅನಂತರದಲ್ಲಿ ಬ್ರಹ್ಮನು ದಿವೋದಾಸರಾಯನಲ್ಲಿ ಯಾವತ್ತೂ ಅಧರ್ಮವಂ ಕಾಣದೆ ಇವನಿಗೆ ಹ್ಯಾಗೆ ಉಪದ್ರವಂಮಾಡಲಿ, ಪಮೇಶ್ವರ ಹೇಳಿಕಳುಹಿದ ಕಾರ್ಯವಾಗದೆ ಮಂದರಾದ್ರಿಯಲ್ಲಿರ್ದ ಪರಮೇರನ ಸಮ್ಮುಖಕ್ಕೆ ಹ್ಯಾಗೆಹೋಗಲಿ, ಹೋಗುವದಕ್ಕೆ ನಾಚಿಗೆಯಾಗುತ್ತಇದೆ. ಎಂದು ತನ್ನೊಳಗೆಂತೆಂದನು- ಈ ಕಾಶಿಕ್ಷೇತ್ರವು ಪರಮೇಶ್ವರನ ಶರೀ

ವು, ಈ ಕ್ಷೇತ್ರದಲ್ಲಿ ಇದ್ದರೆ ಪರಮೇಶ್ವರನು ತನ್ನಮೇಲೆ ಕೋಪಿಸಿಕೊಳ್ಳುವನು. ಇಂತೆಂದು ಬ್ರಹ್ಮನು ಅಂತರ್ಗೃಹದ ದಕ್ಷಿಣದ್ವಾರದಲ್ಲಿ ಬ್ರಹ್ಮೇಶ್ವರನೆಂಬ ಲಿಂಗಪ್ರತಿಷ್ಠೆಯಂ ಮಾಡಿಕೊಂಡು ಕಾಶೀಕ್ಷೇತ್ರದಲ್ಲಿಯೇ ಇದ್ದನು ಎಂದು ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು, ಕೇಳೈ ಅಗಸ್ತ್ಯನೇ! ಕಾಶೀಯ ಕ್ಷೇತ್ರಕ್ಕೆ ಬಂದು ತಿರಿಗಿ ಹೋದವನು ಇಹಪರವನೊಲ್ಲದ ನರಪಶುವು, ಸಂಸಾರ ದುಃಖವನ್ನು ಅನುಭವಿಸಿ ಕಡೆಯಲ್ಲಿ ಮೋಕ್ಷವಬೇಕೆಂದು ಅಪೇಕ್ಷಿಸುವನು ಈಶ್ವರಾನುಗ್ರಹದಿಂದ ದೊರಕಿದ ಕಾಶೀಕ್ಷೇತ್ರವನ್ನು ಬಿಡಲಾಗದು, ಬಿಟ್ಟರೆ ಚತುರ್ವಿಧ ಪುರುಷಾರ್ಥವಂ ಬಿಟ್ಟವನಹನು. ಮಹಾಪಾತಕಂಗಳ ಪರಿಹರಿಸಿ ಪುಣ್ಯಂಗಳನ್ನೀವ ಕಾಶೀಕ್ಷೇತ್ರದಲ್ಲಿ ಉಳ್ಳ ಸೌಖ್ಯವು ಸತ್ಯಲೋಕದಲ್ಲಿಯೂ ವೈಕುಂಠದಲ್ಲಿಯೂ ಇಲ್ಲ, ಸರ್ವತೀರ್ಥ ಶಿರೋಮಣಿಯಾದಂಥಾ ದಶಾಶ್ವಮೇಧ ತೀರ್ಥದಲ್ಲಿ ಸ್ನಾನ ದಾನ ಜಪ ಹೋಮ ವೇದಪಾರಾಯಣ ದೇವತಾರ್ಚನೆ ಸಂಧ್ಯಾವಂದನೆ ತರ್ಪಣ ಶ್ರಾದ್ಧಾದಿಗಳಂ ಮಾಡಲು ಅಕ್ಷಯಫಲವುಂಟು, ಜ್ಯೇಷ್ಠ ಶುದ್ಧಪಾಡ್ಯದಲ್ಲಿ ದಶಾಶ್ವಮೇಧ ತೀರ್ಥದಲ್ಲಿ ಸ್ನಾನವಂ ಮಾಡಿ ದಶಾಶ್ವಮೇಧೇಶ್ವರನ ದರ್ಶನ ಸ್ಪರ್ಶನ ಪೂಜೆಗಳಂ ಮಾಡಲು ಬಂದು ಜನ್ಮದಲ್ಲಿ ಪಾಪಪ್ರವೃತ್ತಿಗಳು ಶುದ್ಧಪಾಡ್ಯಮಿ ಆರಭ್ಯ ದಶಮಿಪರ್ಯಂತರ ಹತ್ತು ದಿವಸ ಸ್ನಾನವಂ ಮಾಡಲು ಹತ್ತು ಜನ್ಮದ ಪಾಪಹರ, ಗಂಗೆಯ ಪಡುವಣತೀರದಲ್ಲಿ ದಶಾಶ್ವಮೇಧೇಶ್ವರನ ಯಾತ್ರೆ ಪೂಜೆ ನಮಸ್ಕಾರಂಗಳಂ ಮಾಡಲು ಬ್ರಹ್ಮಲೋಕವಾಸವುಂಟು, ಪುನರ್ಜನ್ಮವಿಲ್ಲ. ಅಶ್ವಮೇಧಯಾಗವಂ ಮಾಡಿ ಅವಭೃತಸ್ನಾನವ ಮಾಡಿದ ಫಲವುಂಟು. ಕಾಶಿಯ ಅಂತರ್ಗೃಹದ್ವಾರದಲ್ಲಿ ಇದ್ದ ಬ್ರಹ್ಮೇಶ್ವರನ ಪೂಜೆ ನಮಸ್ಕಾರಂಗಳಂ ಮಾಡಲು, ಶಾಶ್ವತವಾದ ಬ್ರಹ್ಮಲೋಕ ವಾಸವುಂಟಾಗುವದೆಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನೆಂದು ವ್ಯಾಸರು ತನಗೆ ಅರುಹಿದರೆಂದು ಸೂತಪುರಾಣಿಕನು ಶೌನಕಾದಿಋಷಿಗಳಿಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ,

* ಶ್ರೀ * ಶ್ರೀ *

ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀ ಕೃಷ್ಣರಾಜಬಹದ್ದುರವರು ಲೋಕೋಪಕಾರಾರ್ಥವಾಗಿ ಕರ್ಣಾಟಕ ಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಬ್ರಹ್ಮನ ದಶಾಶ್ವಮೇಧ ವೃತ್ತಾಂತವೆಂಬ ಐವತ್ತೆರಡನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * *

ಐವತ್ತೆರಡನೇ ಅಧ್ಯಾಯು ಸಂಪೂರ್ಣ.

ಶ್ರೀ ವಿಶ್ವೇಶ್ವರಾಯನಮಃ

ಐವತ್ತಮೂರನೇ ಅಧ್ಯಾಯ.

—— :೦. ——

ಗಣಂಗಳು ಕಾಶೀಪ್ರವೇಶವಂ ಮಾಡಿದ ಪ್ರಸಂಗ

ಅನಂತರದಲ್ಲಿ ಕುಮಾರಸ್ವಾಮಿಗೆ ಅಗಸ್ತ್ಯನಿಂತೆಂದನು, ಎಲೈ ಕುಮಾರಸ್ವಾಮಿ! ನೀವು ಬುದ್ಧಿಗಲಿಸಿದ ಬ್ರಹ್ಮನ ವೃತ್ತಾಂತವು ಮಹಾ ಅಪೂರ್ವವಾಯಿತು, ಕಾಶೀಕ್ಷೇತ್ರಕ್ಕೆ ಬ್ರಹ್ಮನು ಹೋಗಿ ಬಾರದಿರಲು, ಪರಮೇಶ್ವರನು ಮತ್ತಾರನ್ನು ಕಳುಹಿದನೆಂಬುದನ್ನು ಬುದ್ಧಿಗಲಿಸಬೇಕೆನಲು, ಕುಮಾರಸ್ವಾಮಿ ಇಂತೆಂದನು— ಕೇಳೈ ಅಗಸ್ತ್ಯ! ಕಾಶಿಯಲ್ಲಿ ಬ್ರಹ್ಮನು ಪೋತು ಬಾರದಿರಲು ಪರಮೇಶ್ವರನು ತಾನು ತನ್ನೊಳಿಂತೆಂದನು 'ಅಹಹಾ! ಈ ಕಾಶೀಕ್ಷೇತ್ರವೆಂಥಾದ್ದೋ? ಹೀಗೆ ವಶೀಕರವಾದ ಪಟ್ಟಣವಂ ಕಾಣೆನು ತಾನು ಆರಾರ ಕಳುಹಲೂ ಅವರು ಅಲ್ಲಿಯೇ ನಿಂತರು, ಯೋಗಿನಿಯರು ಭೋಗಿನಿಯರಾದರು. ಸಾಪಟಕರಂಗಳೆಲ್ಲ ಸೂರ್ಯನಕೈಲಿ ಏನೂ ಆಗದು.

ಹೋಯಿತು, ಬ್ರಹ್ಮನು ಬಾರದೆಹೋದನು ಎಂದು ಚಿಂತಿಸಿ ತನ್ನಬಳಿಯಲ್ಲಿರ್ದ ಶಂಕುಕರ್ಣ, ಮಹಾಕಾಲ, ಘಂಟಾಕರ್ಣ, ಮಹೋದರ, ಸೋಮನಂದಿ, ನಂದೀಷೇಣ, ಕಾಲಪಿಂಗಳ, ಕುಕ್ಕುಟ, ಕುಂಭೋದರ, ಮಯೂರಾಷ್ಯ, ಬಾಣಗೋಕರ್ಣ, ಸ್ಥೂಲಕರ್ಣ, ತಾರಕದ್ರುಮ, ಚಂಡಪ್ರಚಂಡ, ಪ್ರಭಾಮಯ, ಸುಕೇಶ, ವಿಂಧ್ಯಕೇತ, ಚಾಗಕಪರ್ದಿ, ಪಿಂಗಳಾಕ್ಷ, ವೀರಭದ್ರ, ಕಿರಾತ, ಚತುರ್ಮುಖ, ನಿಕುಂಭ, ಪಂಚಾಸ್ಯ, ಬಾಣಭೂತ, ತ್ರ್ಯಕ್ಷ, ಕ್ಷೇಮಕ, ಲಾಂಗಲೀ, ವಿರಾಧ, ಸುಮುಖ, ಆಷಾಢಿ. ಇವರು ಮೊದಲಾದ ಮಹಾಗಣಂಗಳಂ ಕರೆದು ಇಂತೆಂದನು- ಎಲೆ ಗಣಂಗಳಿರಾ! ನೀವು ನನಗೆ ಕುಮಾರಸ್ವಾಮಿಯನ್ನೈಗಣೇಯ ವಿಘ್ನೇಶ್ವರರಹಾಗೆ ಪ್ರಿಯಪುತ್ರರು, ನಿಮ್ಮಂಥಾ ಬಲ್ಲಿಕೆ ಪರಾಕ್ರಮಗಳುದ್ದ ಎನಗೆ ಕಾಶೀವಿಯೋಗವಾಯಿತು ದಿವೋದಾಸರಾಯನ ವೃತ್ತಾಂತವಂ ತಿಳಿದುಕೊಂಡುಬನ್ನಿ ಎಂದು ಯೋಗಿನಿಯರನ್ನೂ ಸೂರ್ಯನನ್ನೂ ಬ್ರಹ್ಮನನ್ನೂ ಕಳುಹಿಸಲು, ಅವರು ಬರಲಿಲ್ಲ. ಯೋಗಿನಿಯರ ಸೂರ್ಯಬ್ರಹ್ಮನ ವೃತ್ತಾಂತವು ತಿಳಿಯದೆಹೋಯಿತು, ಅವರು ಏನುಮಾಡುತ್ತಾ ಇರ್ದಾರೋ ನೀವು ಹೋಗಿನೋಡಿ, ಆ ಕಾರ್ಯವಂ ಸಾಧಿಸಿಕೊಂಡುಬನ್ನಿ ಎಂದು ಗಣಂಗಳಲ್ಲಿ ಅತಿ ಸಾಹಸಿಗಳಾದ ಯಮನಿಗೆ ಮೊದಲಾಗಿ ಭಯಂಕರವಂಪುಟ್ಟಿಸುವ ಶಂಕುಕರ್ಣ ಮಹಾಕಾಲರೆಂಬ ಇಬ್ಬರು ಗಣಂಗಳಂಕರೆದು ನೀವು ಇಬ್ಬರುಹೋಗಿ ಕಾಶಿಯ ವೃತ್ತಾಂತವಂ ತಿಳಿದುಬನ್ನೀ ಎಂದು ಪರಮೇಶ್ವರನು ಬುದ್ಧಿಗಲಿಸಲು, ಅವರಿಬ್ಬರೂ ಪರಮೇಶ್ವರನಾಜ್ಞೆಯಂ ಶಿರಸಾವಹಿಸಿ ಕಾಶೀಪಟ್ಟಣಕ್ಕೆ ಬಂದರು. ಈ ಬಂದವರು ಲೋಕದಜನಗಳಿಂದ್ರಜಾಲಮಂಕಂಡು ವಿಸ್ಮಿತರಾಗುವಂತೆ ಗಣಂಗಳೀರ್ವರೂ ಕಾಶಿಯಂಕಂಡಮಾತ್ರದಲ್ಲಿಯೇ ಪರಮೇಶ್ವರನ ವಾಕ್ಯಮಂಮರೆದು ತಮ್ಮೊಳು ಇಂತೆಂದರು- ಈ ಕಾಶಿಯಲ್ಲಿಹ ತೀರ್ಥೋದಕದಲ್ಲಿ ಒಂದು ಸ್ನಾನವಂಮಾಡಿದ ಮಾತ್ರದಿಂದ ಸಕಲ ಯಜ್ಞಗಳ ಅವಭೃತಸ್ನಾನದಫಲವುಂಟು. ವಿಶ್ವಪತಿಗೆ ಒಂದು ಸುವರ್ಣಪುಷ್ಪವಂ ಸಮರ್ಪಿಸಲು ಹತ್ತುಸುವರ್ಣಗೋದಾನಫಲವುಂಟು. ಇಲ್ಲಿ ಒಬ್ಬ ಬ್ರಾಹ್ಮಣನಿಗೆ ಅನ್ನವನಿಕ್ಕಲು ವಾಜಪೇಯಯಾಗಫಲವುಂಟು, ಒಂದು ಗೋದಾನದಿಂ ಹತ್ತುಸಾವಿರ ಗೋ

ದಾನಶಾಲೆಯುಂಟು. ಬಂದು ನಮಸ್ಕರಿಸಿ ಇಂದ್ರಸನಕ್ಕೆ ಅನೇಕವಾದ ಭೋಗವುಂಟು, ಬಂದು ಲಿಂಗಪ್ರತಿಷ್ಠೆಯಂ ಮಾಡಲು, ಮಾರ್ಕಂಡೇಯನೆಂ ಪ್ರತಿಷ್ಠೆಯಂ ಮಾಡಿದನಲ್ಲವುಂಟು, ಇಂಥಾ ಕ್ಷೇತ್ರವೆಂಬಿದು ಹೋಗುವ ಅಜ್ಞಾನಿಗಳುಂಟೇ ಎಂದು ತನ್ನೆತ್ತಾನೇ ವಿಚಾರಿಸಿಕೊಂಡು ಶಂಕುಕರ್ಣನ ಮಹಾಕಾಳನೆಂಬ ಗಣಂಗಳಿಬ್ಬರೂ ಎರಡು ಲಿಂಗಪ್ರತಿಷ್ಠೆಯಂ ಮಾಡಿಕೊಂಡು ಕಾಶಿಯಲ್ಲಿ ಇದ್ದರು. ಆ ಶಂಕುಕರ್ಣೇಶ್ವರ, ಮಹಾಕಾಳೇಶ್ವರರೆಂಬ ಲಿಂಗಗಳ ದರ್ಶನ ಪೂಜೆ ನಮಸ್ಕಾರಗಳಿಂದ ಕಾಲಭಯವಿಲ್ಲ ಎಂದು ಕುಮಾರಸ್ವಾಮಿ ಹೇಳಿದನು. ಕೇಳೈ ಅಗಸ್ತ್ಯ! ಈ ರೀತಿಯಾಗಿ ಅವರಿಬ್ಬರು ಗಣಂಗಳು ಬಾರದಿರಲು, ಪರಮೇಶ್ವರನು ಘಂಟಾಕರ್ಣ ಮಹೋದರರೆಂಬ ಗಣಂಗಳಂ ಕರೆದು ಕಾಶಿಯ ವೃತ್ತಾಂತವಂ ತಿಳಿದು ಶೀಘ್ರದಲ್ಲಿ ಬನ್ನಿಯೆನಲು, ಆ ಅನಂತರ ಗಣಂಗಳು ಕಾಶೀಪಟ್ಟಣಕ್ಕೆ ಬಂದು ಅಲ್ಲಿ ಸಂಚಾರವಂ ಮಾಡಿ ದಿವೋದಾಸರಾಯಂಗೆ ವಿಘ್ನವಂ ಮಾಡಲು, ಅಸಮರ್ಥರಾಗಿ ತಮ್ಮ ಹೆಸರಲಿಂಗವನ್ನು ಪ್ರತಿಷ್ಠೆಯಂ ಮಾಡಿಕೊಂಡು ಅಲ್ಲಿಯೇ ಇದ್ದರು. ಆವನಾವನೊಬ್ಬನು ಘಂಟಾತೀರ್ಥದಲ್ಲಿ ಸ್ನಾನವಂ ಮಾಡಿ ತರ್ಪಣ ಶ್ರಾದ್ಧಾದಿಗಳಂ ಮಾಡಿ ಘಂಟಾಕರ್ಣೇಶ್ವರಲಿಂಗವಂ ಪೂಜಿಸಲು ಸಕಲಪಿತೃಗಳಿಗೂ ತೃಪ್ತಿಯಹುದು. ಈ ಘಂಟಾಕರ್ಣತೀರ್ಥದಲ್ಲಿ ಮುಳುಗಿ ಆಲಿಸಿಕೊಂಡರು, ಪರಮೇಶ್ವರಂಗೆ ಬ್ರಹ್ಮಾದಿ ದೇವತೆಗಳು ಪೂಜೆಯಂ ಮಾಡುವ ಘಂಟಾನಿನಾದವಾದ ವಾದ್ಯಧ್ವನಿ ಕೇಳಬಹುದು. ಆ ಮಹೋದರನ ಮಹೋದರತೀರ್ಥದಲ್ಲಿ ಸ್ನಾನವಂ ಮಾಡಿ ಮಹೋದರೇಶ್ವರನೆಂಬ ಲಿಂಗವಂ ಪೂಜಿಸಲು, ಮಹೋದರರೋಗ ಮೊದಲಾದ ಸಕಲರೋಗ ಪರಿಹಾರ. ಇಲ್ಲಿ ಅನೇಕ ಋಷಿಗಳು ತಪಸ್ಸನ್ನು ಮಾಡುತ್ತಿರುವರು. ಈ ರೀತಿಯಲ್ಲಿ ಘಂಟಾಕರ್ಣ ಮಹೋದರನ [illegible] ತಿರುಗಲು. ಪರಮೇಶ್ವರನು ಚಿಂತಿತನಾಗಿ ಆಶ್ಚರ್ಯ [illegible] ಮಹಾದೇವಿ [illegible] ಎಂಬುದನು ತಾನು ಅರಿಯನು, ತಾವು [illegible] ರನ್ನು ಮರುಳುಮಾಡುತ್ತಾ ಇದ್ದೀಯಲ್ಲಾ ಈಗ ತನಗುಂಟು. ಸಕಲಗಣಂಗಳಂ ಕಳುಹುತ್ತಾ ಇದ್ದೇನೆ ಅದೇನೆಂದರೆ- ಚಂದ್ರಸೂರ್ಯರು ಗಗನಮಾರ್ಗದಲ್ಲಿ ನಡೆವಾ

ಗ ರಾಹು ಕೇತುಗಳು ತಡದರೂ ಕೂಡಾ ತಮ್ಮ ಗತಿಗಳಂ ಬಿಡದಂತೆ ಬಲ್ಲವ
ತು ಹಿಡಿದ ಕಾರ್ಯಂಗಳಂ ಬಿಡಬಾರದಲ್ಲಾ ಯೆಂದು ವಿಚಾರಿಸಿಕೊಂಡು ಪರ
ಮೇಶ್ವರನು ಸೋಮನಂದೀ, ನಂದೀಷೇಣ, ಕಾಲಪಿಂಗಳ, ಕುಕ್ಕುಟವೆಂಬ
ಗಣಂಗಳಂ ಕರೆದು ಕಳುಹಲು ಅವರು ಕಾಶಿಯ ಹೊಕ್ಕು ದಿವೋದಾಸರಾಯಂ
ಗೆ ವಿಘ್ನವಂ ಮಾಡಲು ಅಸಮರ್ಥರಾಗಿ ತಮ್ಮ ತಮ್ಮ ಹೆಸರಿನ ಲಿಂಗವಂ
ಪ್ರತಿಷ್ಠೆಯ ಮಾಡಿಕೊಂಡು ಅಲ್ಲಿಯೇ ಇದ್ದರು. ಆ ನಂದವನದಲ್ಲಿ ಸೋಮ
ನಂದೀಶ್ವರನೆಂಬ ಲಿಂಗದರ್ಶನದಿಂದ ಸೋಮಲೋಕವುಂಟು, ಅದಕ್ಕೆ ಉತ್ತ
ರದಲ್ಲಿ ನಂದೀಷೇಣೇಶ್ವರನ ದರ್ಶನದಿಂದ ಮೃತ್ಯುಹರ, ಗಂಗೆಯ ವಾಯವ್ಯ
ದಲ್ಲಿ ಕಾಲೇಶ್ವರನ ದರ್ಶನದಿಂದ ಕಾಲಪಾಶ ಪರಿಹರ, ಅದಕ್ಕೆ ಉತ್ತರದಲ್ಲಿ
ಪಿಂಗಳೇಶ್ವರನ ದರ್ಶನದಿಂದ ಸಕಲಪಾಪಹರ, ಆ ಸಮೀಪದ ಕುಕ್ಕುಟಾಂ
ಡದ ಆಕಾರವಾದ ಕುಕ್ಕುಟೇಶ್ವರನ ದರ್ಶನದಿಂದ ಗರ್ಭವಾಸವಿಲ್ಲ, ಅನಂ
ತರದಲ್ಲಿ ಸೋಮನಂದಿ ಮೊದಲಾದ ಗಣಂಗಳು ಬಾರದಿರಲು, ಪರಮೇಶ್ವ
ರನಿಂತೆಂದನು, ತಾನು ಕಳುಹಿದ ನೆವದಿಂದ ಎನಗೆ ಉಂಟಾದವರೆಲ್ಲರೂ ಅಲ್ಲಿ
ಯೇ ಇರಲೀ, ಕಡೆಯಲ್ಲಿ ತಾನು ಹೋದೇನು ಎಂದು ಕುಂಭೋದರ, ಬಾಣ
ಮಯೂರ, ಗೋಕರ್ಣರೆಂಬ ಗಣಂಗಳಂ ಕಳುಹಲು, ಅವರು ಕಾಶಿಯ
ಹೊಕ್ಕು ನಾನಾ ಉಪಾಯದಿಂದ ದಿವೋದಾಸರಾಯನಲ್ಲಿ ಲವಲೇಶಮಾತ್ರ
ಅಧರ್ಮವನ್ನು ಕಾಣದೆ ತಮ್ಮೊಳಿಂತೆಂದರು, ನಾವು ಸ್ವಾಮಿಕಾರ್ಯವ
ಮಾಡಲಾರದೆಹೋದ ಪಾಪವು ಯಾತರಿಂದ ಪರಿಹರವಾದೀತು. ಆದರೆ ಇಲ್ಲಿ
ಲಿಂಗಪ್ರತಿಷ್ಠೆಯಂ ಮಾಡಿ ಪೂಜನಮಸ್ಕಾರವಂ ಮಾಡಿಕೊಂಡು ಇರಲು, ಈ
ಶ್ವರನು ಸಕಲ ಅಪರಾಧವನ್ನು ಮನ್ನಿಸಿ ಮೋಕ್ಷವಂ ಕೊಡುವನು. ಯಜ್ಞ
ದಾನ ತಪಸ್ಸುಗಳ ಫಲವು ಒಂದು ಲಿಂಗಪ್ರತಿಷ್ಠೆಯ ಫಲಕ್ಕೆ ಸರಿಬಾರದು. ವಿ
ಧ್ಯುಕ್ತವಾಗಿ ಶಿವನ ಪೂಜಿಸುವವನು ದ್ವ್ಯಕ್ಷನಾದರೂ ತ್ರ್ಯಕ್ಷನಾಗುವನು.
ನೂರು ಗೋದಾನ ನೂರು ಸುವರ್ಣದಾನ ನೂರು ಅಶ್ವಮೇಧಯಾಗ ಇದರ
ಫಲವು ಒಂದು ವ್ಯಾಳೆ ಭಕ್ತಿಯಿಂದ ಶಿವಾರ್ಚನೆಯಂ ಮಾಡಿದ ಫಲಕ್ಕೆ ಸರಿಬಾ
ರದು. ವಿಧ್ಯುಕ್ತವಾಗಿ ಶಿವನ ಪೂಜಿಸುವವನು ಶಿವನ ಅಭಿಷೇಕತೀರ್ಥವನ್ನು ಶರೀ
ರದ ಮೇಲೆ ತಳಿಸಿಕೊಳ್ಳಲು ತ್ರಿಕರಣದಲ್ಲಿ ಮಾಡಿದ ಪಾಪಪರಿಹರವು. ಅಭಿ

ಶೋಕದ ತೀರ್ಥದಿಂ ಸ್ನಾನವಂಮಾಡಲು, ಗಂಗಾಸ್ನಾನಫಲಂ. ಈಶ್ವರಂಗೆ ಬಿಂದುಸಂಸ್ಕಾರವಂಮಾಡಲು ಪುನರ್ಜನ್ಮವಿಲ್ಲ, ಒಂದು ಲಿಂಗಪ್ರತಿಷ್ಠೆಯಿಂದ ಸಹಸ್ರವರ್ಷ ಪರ್ಯಂತರವಾಗಿ ಸ್ವರ್ಗಲೋಕದಲ್ಲಿ ಸಕಲಭೋಗವನನುಭವಿಸುವನು. ಆದುದರಿಂದ ನಾವು ಇಲ್ಲಿ ಲಿಂಗಪ್ರತಿಷ್ಠೆಯಂಮಾಡಿದರೆ ಸ್ವಾಮಿದ್ರೋಹ ಬರುವುದು. ಗಣಂಗಳು ತಮ್ಮ ಹೆಸರಿನ ಲಿಂಗಗಳಂ ಪ್ರತಿಷ್ಠೆಯಂಮಾಡಿ ಅಲ್ಲಿಯೇ ಇದ್ದರು ಕೇಳು ಅಗಸ್ತ್ಯನೇ! ಲೋಲಾರ್ಕನ ಸಮೀಪದಲ್ಲಿರ್ದ ಕುಂಡೇಶ್ವರನ ದರ್ಶನವಂಮಾಡಲು ಶಿವಲೋಕಪ್ರಾಪ್ತಿ. ಆ ಲಿಂಗದ ಪಶ್ಚಿಮದಲ್ಲಿ ನಿಯಮೇಶ್ವರನ ನೋಡಲು ಸಕಲಪಾಪಪರಿಹರ. ಅದಕ್ಕೆ ಪಶ್ಚಿಮದಲ್ಲಿ ಬಾಣೇಶ್ವರನ ದರ್ಶನದಿಂದ ಸಕಲಬಂಧನ ನಿವೃತ್ತಿ. ಅಂತೆ ಗೃಹಕ್ಕೆ ಪಶ್ಚಿಮದಲ್ಲಿ ಗೋಕರ್ಣೇಶ್ವರನ ದರ್ಶನವಂಮಾಡಿ ಅಲ್ಲಿ ದೇಹತ್ಯಾಗವಂಮಾಡಲು ಪುನರ್ಜನ್ಮವಿಲ್ಲ. ಅನಂತರದಲ್ಲಿ ಕುಂಭೋದರ ಮೊದಲಾದ ಗಣಂಗಳು ಬಂದರೆ ಕಾಶಿಯಲ್ಲೇ ಇರಲು, ಪರಮೇಶ್ವರನು ಇಂತೆ ಮಹಾ-ವಿಷ್ಣು ಮಾಯೆಯಿಂದ ಸಕಲಲೋಕವು ಮೋಹಿಸಿದಂತೆ ಈ ಕಾಶಿಯು ಸಕಲವನ್ನು ಮೋಹಗೊಳಿಸುತ್ತಿದ್ದೀತು, ಸಕಲವಾದ ಮರೆದು ತಮ್ಮ ಪುತ್ರಮಿತ್ರಕಳತ್ರಪಶು ಧನಧಾನ್ಯಗಳಂಬಿಟ್ಟು ಸಂಭ್ರಮತೆ ರುದ್ರಾಕ್ಷಿ ಧರಿಸಿ ಕೌಪೀನವನೇ ವಸ್ತ್ರವಾಗುಳ್ಳ ಮಂಗಳಶೀಲಗವೃತ್ತಿ ಕಾಶಿಯಂ ತ್ಯಾಗಕ್ಕೆ ಬಿಡದೆ ಇದ್ದ ಬ್ರಹ್ಮಾದಿ ದೇವಗಣಂಗಳೊಳಗೆ ದಮ್ಮುವೆಂದರೂ ಅರಣ್ಯವಾದರೂ ಕಾಶ್ಯದಲ್ಲಿ ಮೋಕ್ಷವನು ಕಷ್ಟಕ್ಕೆ ಪರಿಸುತ್ತಾ ಇರ್ದರು. ಕಾಶಿಯಲ್ಲಿ ಮರಣವಾದವನಿಗೆ ಇಂದ್ರಾದಿ ದೇವತೆಗಳು ಇವರ ಕೋಟಿಯಲ್ಲಿ ಒಂದು ಭಾಗಕ್ಕೆ ಸರಿಯಾಗರು, ಕಾಶಿಯಲ್ಲಿ ದೇಹತ್ಯಾಗವಂ ಮಾಡಿದವಗೆ ಬ್ರಹ್ಮಾದಿಗಳು ನಮಸ್ಕಾರವಂಮಾಡುವರು. ಆದು ಕಾಶೀವಾಸವ ಮಾಡುವರೋ ಅವರನ್ನು ತನ್ನ ಹೃದಯದಲ್ಲಿ ಧರಿಸುವೆನು ಆದಾಗಿ ತಾನೆ ಕಾಶೀವಾಸವಂ ಮಾಡಬೇಕು, ವಾಸವಮಾಡಲು ಕೂಡದೆ ಇದ್ದರೆ ಅನ್ನವಸ್ತ್ರಾಗಳಂ ಕಟ್ಟುಮಾಡಿ ಮತ್ತೊಬ್ಬ ಬ್ರಾಹ್ಮಣನ ವಾಸವಮಾಡಿಸಲು ತಾನೆ ವಾಸವಮಾಡಿದ ಫಲವುಂಟು. ಬಹುಜನ್ಮವನ್ನು ವಾಸಮಾಡಿದರುಂಟಾದರೆ ಅವರು ತಮ್ಮ ಸಮಾನರು, ಪ್ರಾಣಿಯ ಮುಕ್ತಿಗಕ್ಕೆ ಅನರ್ಥ,

ಇಂತೆಂದು ಕಾಶೀಕ್ಷೇತ್ರದ ಮಹಿಮೆಯಂ ಕೊಂಡಾಡಿ ಪರಮೇಶ್ವರನು ತಾರ
ಕ, ತಿಲಕರ್ಣ, ಸ್ಥೂಲಕರ್ಣ, ದ್ರುಮಚಂಡಿ, ಪ್ರಭಾಮಯ, ಸುಕೇಶ, ವಿಂ
ಧ್ಯತೇಜ, ಜಾಗ, ಪಿಂಗಳಾಕ್ಷ, ಕಪರ್ದಿ, ವೀರಭದ್ರ, ಕಿರಾತಕ, ಚತುರ್ಮುಖ, ಬರ
ನಿಕುಂಭಜ, ಪಂಚಾಸ್ಯ, ಭಾರಭೂತ, ತ್ರ್ಯಕ್ಷ, ಕ್ಷೇಮಕ, ಲಾಂಗಲೀ
ವಿರಾಧ, ಸುಮುಖ, ಆಷಾಢಿ, ಎಂಬ ಗಣಂಗಳಂ ಕರೆದು ನೀವು ಮೊದಲವರಂ
ತೆ ಅಲ್ಲಿಯೇ ನಿಲ್ಲದೆ ದಿವೋದಾಸರಾಯನ ವೃತ್ತಾಂತಮಂ ತಿಳಿದು ಶೀಘ್ರದ
ಲ್ಲಿ ಬನ್ನಿರಿ ಎಂದು ಕಳುಹಲು, ಆ ಗಣಂಗಳು ಕಾಶೀಪಟ್ಟಣಕ್ಕೆ ಹೋಗಿ ನಾನಾ
ಉಪಾಯಂಗಳಿಂದ ದಿವೋದಾಸರಾಯನಂ ಶೋಧಿಸಿ ಆ ರಾಯನಲ್ಲಿ ಅಣುಮಾತ್ರ
ಭೇದಬುದ್ಧಿಯಂ ಕಾಣದೆ ತಮ್ಮ ಸಾಮರ್ಥ್ಯಂಗಳಂ ಬಳಿದುಕೊಂಡು ತಮ್ಮೊ
ಳು ತಾವು ಇಂತೆಂದರು.-ನಾವು ಪರಮೇಶ್ವರನಿಂದ ಬಹುಮಾನವನ್ನೈದಿ
ಸ್ವಾಮಿ ಕಾರ್ಯವ ಮಾಡೆವು ಎಂದರೆ ಮನುಷ್ಯಮಾತ್ರದ ದಿವೋದಾಸರಾ
ಯನ ಭೇದಿಸಲಾರದ ನಮ್ಮ ಜನ್ಮ ವ್ಯರ್ಥ. ಸ್ವಾಮಿದ್ರೋಹ ಪಾತಕದಿಂ ಅಧ
ಕಮಿಶ್ರನರಕದಲ್ಲಿ ಬೀಳುವರೆಂಬ ವಚನವುಂಟು. ಆದರಿಂದ ತಾವು
ತನ್ನ ಸ್ವಾಮಿಯ ಕೈಯ್ಯ ಬಹುಸಂಬಳವಂ ತೆಕೊಂಡು ಈಗ ಸ್ವಾಮಿಕಾರ್ಯ
ವಿಘಾತವ ಮಾಡಿ ಶರೀರದಲ್ಲಿ ಒಂದು ಘಾಯವೂ ಇಲ್ಲದೆ ಇದ್ದವನಿಗೆ
ಇಹದಲ್ಲಿ ನೆನೆದಕಾರ್ಯಂಗಳು ಕೈಗೂಡದೆ ಪರದಲ್ಲಿ ಶಾಶ್ವತವಾದ ನರಕ
ವನ್ನೈದುವರು. ಭೂಮಿಗೆ ಸ್ವಾಮಿದ್ರೋಹಿ ಭಾರವಾದಂತೆ ನದಿ ಸಮು
ದ್ರ ಪರ್ವತ ವೃಕ್ಷಂಗಳು ಭಾರವಲ್ಲ. ನಾವು ಸ್ವಾಮಿಕಾರ್ಯವಂ ಮಾಡ
ದೆ ಒಡೆಯನ ಮುಂದಕ್ಕೆ ಹ್ಯಾಗೆ ಹೋದೇವು, ನಮ್ಮ ವಿಚಾರವೇನೆಂದರೆ
ಪಾಪಿಗಳಿಗೆ ವಿಪ್ರರಿಗೆ ಕಾಲನಿವಾಸವಾದವರಿಗೆ ಸ್ವಾಮಿದ್ರೋಹಿಗಳಿಗೆ, ಕೃ
ತಘ್ನರಿಗೆ, ವಿಶ್ವಾಸಘಾತಕರಿಗೆ ಯಾತ್ರೆಯಲ್ಲೂ ಗತಿಯಿಲ್ಲದವರಿಗೆ. ಇವರು
ಮೊದಲಾದ ಪಾಪಿಗಳಿಗೆ ಕಾಶೀವಾಸವೇ ಗತಿಯುಂಟೆಂದು ಸಕಲ ಪುರಾ
ಣಂಗಳಲ್ಲಿಯೂ ನಿಶ್ಚಯಿಸಿ ಹೇಳುತ್ತಾಯಿದ್ದೀತು. ಆದರಿಂದ ನಾವು ಇಲ್ಲಿ
ವಾಸವಾಗಿರಲು, ಪರಮೇಶ್ವರನು ನಮ್ಮ ಅಪರಾಧಂಗಳನ್ನು ಕ್ಷಮಿಸುವನೂ
ಎಂದುಕೊಂಡು ಗಣಂಗಳು ಕಾಶಿಯಲ್ಲಿ ಲಿಂಗಪ್ರತಿಷ್ಠೆಗಳಂ ಮಾಡಿಕೊಂಡು
ದಿವೋದಾಸರಾಯನು ಅರಿಯದಂತೆ ಅಲ್ಲಲ್ಲಿಯಿದ್ದರು. ಅನೇಕ ಬುದ್ಧಿವಂತನಾ

ದ ದಿವೋದಾಸರಾಯನು ಕಾಶೀಪಟ್ಟಣದಲ್ಲಿ ಸಂಚರಿಸುವ ಪ್ರಮಥಗಣಂಗಳು ಮೊದಲಾಗಿ ಸಂಚರಿಸುವವರನರಿತವನಲ್ಲ. ಚಿತ್ರಗುಪ್ತರು ಕಾಶಿಯಲ್ಲಿದ್ದ ಪ್ರಾಣಿಗಳನ್ನು ಎಣಿಸಲರಿಯರು. ಈ ಕ್ಷೇತ್ರದಲ್ಲಿ ಲಿಂಗಪ್ರತಿಷ್ಠೆಯಂಮಾಡಿದವರನ್ನು ಯಮನು ನೋಡಲು ಸಮರ್ಥನಲ್ಲ. ಇಂತೆಂದು ಗಣಂಗಳು ಕಾಶೀಕ್ಷೇತ್ರಮಂ ಬಿಟ್ಟವರಲ್ಲ. ತಾರಕೇಶ್ವರನೆಂಬ ಲಿಂಗದರ್ಶನದಿಂದ ತಾರಕಜ್ಞಾನವಹುದು. ತಿಲಕರ್ಣೇಶ್ವರನ ಪೂಜೆಯಂ ಮಾಡಲು ತಿಲಮಾತ್ರಪಾಪಂಗಳು ಸಂಭವಿಸವು. ಸ್ಥೂಲಕರ್ಣ ಧ್ಯಮುಚಂಡಿ, ಪ್ರಭಾಮಯ ಸಕೇಶರೆಂಬ ಗಣಂಗಳು ಪ್ರತಿಷ್ಠೆಯಂಮಾಡಿದ ಲಿಂಗಗಳ ದರ್ಶನ ಸ್ಪರ್ಶನ ಪೂಜೆಗಳಿಂದ ಸಕಲಪಾಪಂಗಳೂ ಹರಮಾಗಿ ಪಂಚಕ್ರೋಶಯುಕ್ತಮಾದ ಕ್ಷೇತ್ರದೊಳಗೆ ಶರೀರಮಂಬಿಟ್ಟು ಮುಕ್ತರಹರು. ಭೀಮಚಂಡಿಯ ಸಮೀಪದಲ್ಲಿರ್ದ ವಿಂಧ್ಯತೇಜೇಶ್ವರನ ಪೂಜೆಯಂಮಾಡಲು ಸಕಲಭಯ ಪರಿಹರವಾಗಿ ಮುಕ್ತಿಯಹುದು. ಪತೀಶ್ವರನಸಮೀಪದಲ್ಲಿರ್ದ ಜಾಗೇಶ್ವರನ ಪೂಜಿಸಲು ಜನ್ಮಾಂತರದಲ್ಲಿ ಮಾಡಿದ ಸಕಲಪಾಪಹರವೆಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವನ್ನು ವ್ಯಾಸರು ತನಗರುಹಿದರೆಂದು ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ. * ಶ್ರೀ * ಶ್ರೀ *

ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂಧಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಗಣಂಗಳು ಕಾಶೀಪ್ರವೇಶವಂಮಾಡಿದ ಪ್ರಸಂಗವೆಂಬ ಐವತ್ತುಮೂರನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ. ಶ್ರೀ * * ೭

---:O:---

ಐವತ್ತನಾಲ್ಕನೇ ಅಧ್ಯಾಯ.

ಪಿಶಾಚವಿಮೋಚನತೀರ್ಥದ ಮಹಿಮೆ.

ಅನಂತರದಲ್ಲಿ ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು.- ಕೇಳೈ ಅಗಸ್ತ್ಯ! ಪತೀಶ್ವರನ ಉತ್ತರದಲ್ಲಿ ಕಪರ್ದಿ ಎಂಬ ಗಣೇಶನು ವಿಮಲೋದಕವೆಂಬ ತೀರ್ಥವ ನಿರ್ಮಿಸಿ ಆ ತೀರದಲ್ಲಿ ಕಪರ್ದೀಶ್ವರನೆಂಬ ಲಿಂಗಪ್ರತಿಷ್ಠೆಯಂ ಮಾಡಿದವನಾಗೆ ಯಾವನಾವನೊಬ್ಬನು ವಿಮಲೋದಕತೀರ್ಥದಲ್ಲಿ ಸ್ನಾನವಂ ಮಾಡಿ ಕಪರ್ದೀಶ್ವರನ ದರ್ಶನ ಪೂಜೆಯಂ ಮಾಡಲು ಸಕಲಭಯ ನಿವಾರಣ, ಈ ವಿಮಲತೀರ್ಥ ಕಪರ್ದೀಶ್ವರ ಮಹಿಮೆಯಲ್ಲಿ ಒಂದು ಇತಿಹಾಸವುಂಟು. ಅದೆಂತೆಂದರೆ,- ಪೂರ್ವದ ತ್ರೇತಾಯುಗದಲ್ಲಿಯೂ ವಾಲ್ಮೀಕಿಋಷಿಯೆಂಬ ಪಾಶುಪತವ್ರತಿಯುಂಟು, ಆ ಋಷೀಶ್ವರನು ಕಪರ್ದೀಶ್ವರನ ಕುರಿತು ತಪವಂ ಮಾಡುತ್ತಾ ಬಂದಾನೊಂದು ದಿನ ವಿಮಲೋದಕದಲ್ಲಿ ಸ್ನಾನವಂ ಮಾಡಿ ಆಪಾದಮಸ್ತಕವು ಭಸ್ಮಧೂಳನವಂ ಮಾಡಿಕೊಂಡು ರುದ್ರಾಕ್ಷಿಯಂ ಧರಿಸಿಕೊಂಡು ಕಪರ್ದೀಶ್ವರನ ಬಲದಭಾಗದಲ್ಲಿ ಕುಳಿತು ಮಧ್ಯಾಹ್ನ ಕ್ರಿಯೆಗಳಂ ಮಾಡಿ ಶಿರದಲ್ಲಿ ಮುಗಿದ ಕೈಗಳುಳ್ಳವನಾಗಿ ಸಂಹಾರಕ್ರಮದಿಂದ ಪಂಚಾಕ್ಷರಿಯ ಮಂತ್ರವಂ ಜಪಿಸುತ್ತಾ ಕಪರ್ದೀಶ್ವರನಂ ಧ್ಯಾನಿಸುತ್ತಾ ನಮಸ್ಕಾರಸಹಿತ ಪ್ರದಕ್ಷಿಣೆಗಳಂ ಮಾಡುತ್ತಾ "ಹೂಂ' ಹೂಂ' ಹೂಂ" ಎಂಬ ಬೀಜಾಕ್ಷರಗಳಂ ಪ್ರಣವಸಹಿತನಾಗಿ ಷಡ್ಜಮಂದ್ರ ಮೊದಲಾದ ಸ್ವರಗಳಿಂದ ಗಾನವಂ ಮಾಡುತ್ತಾ ಆನಂದದಿಂದ ಅಭಿನಯಸಹಿತ ಮಂತ್ರಾಕಾರ ಸ್ತೋತ್ರಂಗಳಿಂದ ಆ ಕಪರ್ದೀಶ್ವರನಂ ಸೇವಿಸಿ ವಿಮಲೋದಕತೀರ್ಥದ ತೆಂಕಲಲ್ಲಿ ಕುಳಿತಿರಲು, ಆ ಸಮಯದಲ್ಲಿ ಒಬ್ಬ ಬ್ರಹ್ಮರಾಕ್ಷಸನು ಬಂದನದೆಂತೆಂದರೆ- ಬಾಗಿದಪಸಿ ಕೆಂಪಾದ ಗುಣಿಗಣ್ಣು ಕೆದರಿದ ತಲೆ ಅಲ್ಲಾಡುವ ಕೊರಳು ಚಪ್ಪಟ್ಟೆಮೂಗು ಬಾಗಿದತುಟಿ ಹೊರಹೋದಹಲ್ಲು ಹಾವಿನಹೆಡೆಯಂದದಿತಲೆ ಜೋಲುವಕಿವಿ ಜುಂಜರನುಂಡೇಕೂದಲು ಕೆಮ್ರಾಕೆ ನೀಳವಾಗಿ ಇಳಿಯಬಿದ್ದ ಅಲ್ಲಾಡುವ ನಾಲಿಗೇ ಉಬ್ಬಿದಹೆಡತಲೆ ತೋರವಾದ ಕೊರಳು ದಂಡೆ ಎಲು ಬಾಗಿದತೋಳು ಎಡೆಬಿಟ್ಟಬೆರಳುಗಳು ಬಾಗಿದ ಉಗರುಗಳು

ಬತ್ತಿದ ಎದೆ ಬಿದ್ದು ಹತ್ತಿದ ಹೊಟ್ಟೆ ಡೊಂಕಾದ ಉದ್ದ ಬೆಳಗಿದ ಹುಚ್ಚಳ ಬುಸ್ತ ಘಾವ ವೃಷಣ್ಣಗಳು ನಿಮ್ಮಾನದಿಂ ನೀಳವಾದ ತೊಡೆ ಘಾತ್ರವಾದ ಮೊಣಕಾಲು ಅಸ್ಥಿಚರ್ಮಂಗಳ್ ಕಾಣುತ್ತಿತ್ತು, ಕರಡಿಯಂತೆ ತುಂಬಿದ ರೋಮವಗಳುಳ್ಳ ಕಾಡುಗಿಚ್ಚಿನಲ್ಲಿ ಅರಬೆಂದ ಕೊರಡಿನಂತೆ ಕಪ್ಪಾದ ದೇಹದಿಂ ಕೂಡಿದ ನವಸ್ಥಿಯಿಂ ಭಯಂಕರನಾದ ಬ್ರಹ್ಮರಾಕ್ಷಸನು ಬರಲು, ವಾಲ್ಮೀಕಿ ಮುನೀಶ್ವರನು ಕಂಡು ಧೈರ್ಯದಿಂದ ನೋಡುತ್ತ ಇಂತೆಂದನು, ಎಲೈ ರಾಕ್ಷಸನೆ! ಅತಿವ್ಯಾಕುಲ ಮನಸ್ಸುಳ್ಳ ನೀನು ಆರು? ಎಲ್ಲಿಂದ ಬಂದೆ? ನಿನಗೆ ಭಯಂಕರವಾದ ರೂಪವೇನು ಕಾರಣ ಬಂತು? ನಾನು ನಿನ್ನನೀಗ ದಯದಿಂದ ಕೇಳುತ್ತ ಇದ್ದೇನೆ, ಅಂಜಬ್ಯಾಡ ಹೇಳು, ವಿಭೂತಿಯಿಂದೊಡಗೂಡಿ ಶಿವನಾಮಂಗಳಿಂ ಬ ದಿವ್ಯಾಸ್ತ್ರಗಳಿಂದ ರಕ್ಷಿತನಾದ ನಮಗೆ ನಿಮ್ಮಂಥಾವರಿಂದ ಭಯವಿಲ್ಲವೆಂದು ಕೃಪೆಯಿಂದ ಹೇಳುವ ಋಷಿಯ ವಾಕ್ಯವ ಕೇಳಿ ರಾಕ್ಷಸನಿಂತೆಂದನು, ಎಲೈ ಕೃಪೆಯುಳ್ಳ ಋಷಿಯೇ! ಕೇಳು ನನ್ನ ವೃತ್ತಾಂತವನು ಪರಾಕಿಲ್ಲದೆ ಕೇಳುವನಾಗು, ಗೋದಾವರೀತೀರದಲ್ಲಿ ಪ್ರತಿಷ್ಠಾನಗರವೆಂಬ ಅಗ್ರಹಾರವುಂಟು, ಅಲ್ಲಿ ತೀರ್ಥವಾಸಿಯಾಗಿರ್ದು ತೆಗೆಯಬಾರದ ದಾನಂಗಳಂ ತೆಗೆದು ಎಲೈ ಕೃಪೆಯುಳ್ಳವನೆ ಆ ಪಾಪದಿಂದ ಭಯಂಕರವಾದ ದೇಹವನ್ನೈದಿ ನಿತ್ಯಂ ವೃಕ್ಷಚ್ಛಾಯವಿಲ್ಲದ ಸ್ಥಳದಲ್ಲಿ ಹಸಿವು ನೀರಡಿಕೆ ಬಿಸಿಲು ಛಳಿ ಮಳೆಗಳಿಂ ನೊಂದು, ಇಲ್ಲಿಯೇ ಇರುತಿರ್ದೆನು, ಲೋಕದಲ್ಲಿ ಸರ್ವ ಪ್ರವೃತ್ತಿಗಳಲ್ಲಿ ತನ್ನ ಶಕ್ತ್ಯನುಸಾರ ದಾನವ ಮಾಡುವನಲ್ಲಿ ಪ್ರತ್ಯಕ್ಷ ಪುಣ್ಯತೀರ್ಥಂಗಳಲ್ಲಿ ದುರ್ದಾನಂಗಳಂ ತೆಗೆದುಕೊಂಡವರು ಇಂಥಾ ಭಯಂಕರವಾದ ಶರೀರವನ್ನೈದುವರು. ಆದಕಾರಣದಿಂದ ದುರ್ದಾನವ ತೆಗೆದುಕೊಳ್ಳಬಾರದು. ನಾನು ದುರ್ದಾನವ ತೆಗೆದ ದೋಷದಿಂದ ಈ ಶರೀರವನೆತ್ತಿ ಮರುಭೂಮಿಯಲ್ಲಿ ಇರುತಿರಲು; ಒಂದಾನೊಂದು ದಿನ ಸೂರ್ಯೋದಯವಾದ ಬಳಿಕ ಸಂಧ್ಯಾವಂದನೆಯಂ ಮಾಡದೆ ಮಲಮೂತ್ರವಂ ತ್ಯಜಿಸಿ ಶೌಚವಿಲ್ಲದೆ ಅಶೌಚದಿಂದ ಕಚ್ಚೆಯ ಕಟ್ಟದೆ ಒಬ್ಬ ಬ್ರಾಹ್ಮಣನು ಬರುತಿರಲು; ಆವನಂ ಕಂಡು ಆತನಲ್ಲಿ ಪ್ರವೇಶವಾದೆನು, ಆ ಬ್ರಾಹ್ಮಣನು ಧನಲೋಭದಿಂದ ಒಬ್ಬ ವೈಶ್ಯನ ಸಂಗಡ ಬಂದು ಈ ಕಾಶೀಪಟ್ಟಣವಂ ಪೊಗಲು, ನಾನು ಮಹಾಪಾಪಿ

ಯಾವಕಾರಣ ಈ ಕ್ಷೇತ್ರಮಂ ಪ್ರೋಗಲಂಜಿ ಹೊರಗೆ ಇದ್ದೆನು, ಕಾಶೀಕ್ಷೇತ್ರಕ್ಕೆ ಮಹಾ ಪಾಪಿಷ್ಠರಾದವರು ಬಂದು ಪ್ರವೇಶವಾಗಲು, ಅವರಲ್ಲಿದ್ದ ಪಾಪಂಗಳು ಗಣಂಗಳ ಭಯದಿಂದ ಕ್ಷೇತ್ರಮಂ ಪ್ರೋಗಲಂಜಿ ಹೊರಗೆ ಇರ್ದು ಅವರು ಇಂದುಬಂದಾರೋ ನಾಳೆ ಬಂದಾರೋ ಎಂದು ಎದುರುನೋಡುತ್ತಾ ಇರುವುವು, ಆದಕಾರಣ ಆ ಬ್ರಾಹ್ಮಣನು ಹೊರಟುಬರಲಿಲ್ಲ. ನಿನ್ನ ತಂದೆಯು ಹಿಂಗಲಿಲ್ಲ, ಈ ರೀತಿಯಲ್ಲಿ ಈ ಕ್ಷೇತ್ರದ ಹೊರಗೆ ಇರ್ದು ಕ್ಷುದ್ಬಾಧೆಯಂ ತಾಳಲಾರದೆ ಪ್ರಯಾಗಕ್ಕೆ ತಾನುಹೋಗಿ ತಿರುಗಿ ಬರುತ್ತಾ ಮಧ್ಯ ಮಾರ್ಗದಲ್ಲಿ ಅನೇಕ ಭಕ್ಷ್ಯಭೋಜ್ಯಫಲ ಮೂಲಕಂಗಳಂ ಕಂಡು ಅವರಸಮೀಪಕ್ಕೆ ಹೋಗಲು ಅವು ಎಷ್ಟು ದೂರ ಹೋದರೂ ದೂರವಾಗಿಯೇ ಹೋಗುವವು, ಈ ರೀತಿಯಲ್ಲಿ ದೀಪನತ್ತೃಷೆಗಳಿಂದ ಮಹಾ ಪೀಡಿತನಾಗಿ ತಿರುಗುತ್ತಿರಲು, ಒಂದಾನೊಂದು ದಿನ ಒಬ್ಬ ಪರದೇಶಿಯಾದ ಶಿವಭಕ್ತನು ಕಂಡು ಅವನನ್ನು ತಿಂದೇನು ಎಂದು ಹಿಡಿದು ಬಲಾತ್ಕಾರವಂ ಮಾಡಲು ಆ ಶಿವಭಕ್ತನು ತನ್ನ ಪ್ರಾಣಭಯಕ್ಕಾಗಿ ಶಿವನಾಮಂಗಳನ್ನುಚ್ಚರಿಸಲು ಆ ಶಿವನಾಮಂಗಳಂ ಕೇಳಿದಮಾತ್ರದಲ್ಲಿಯೇ ತನ್ನ ಪಾಪಂಗಳು ಪರಿಹಾರವಾಗಿ ಆ ಪರದೇಶಿಯುಂ ಬಿಟ್ಟು ಅತನ ಹಿಂದೆ ತಾನು ಬಂದೆನು ಆ ಪರದೇಶಿ ಈ ಕ್ಷೇತ್ರಮಂ ಪ್ರೋಗುವಾಗ ಕ್ಷೇತ್ರರಕ್ಷಕರಾದ ಗಣಂಗಳಿಗೆ ಕಾಣಿಸದೆ ಆ ಪರದೇಶಿಯೊಡನೆ ಈ ಕಾಶೀಪಟ್ಟಣವಂ ಪ್ರೊಕ್ಕೆನು, ಆ ಪರದೇಶಿಯಾದ ಶಿವಭಕ್ತನು ಅಂತರ್ಗೃಹಕ್ಕೆ ಪ್ರೋದನು, ತಾನು ಇಲ್ಲಿಯೇ ನಿಂತು ಸಂಚಾರವಂ ಮಾಡುತ್ತಾ ತಾನು ಪರದೇಶಿಯಿಂದ ಶಿವನಾಮಂಗಳಂ ಕೇಳಿದ ಪುಣ್ಯದಿಂದ ಈಗ ನಿಮ್ಮ ದರ್ಶನವಂ ಮಾಡಿ ಕೃತಾರ್ಥನಾದೆನು, ತನಗೆ ಈ ಭಯಂಕರವಾದ ಪಿಶಾಚದೇಹವಂ ಬಿಡಿಸಿ ರಕ್ಷಿಸಬೇಕೆಂದು ನಮಸ್ಕಾರವಂ ಮಾಡಲು ಆ ತಪೋಧನನಾದ ವಾಲ್ಮೀಕಿ ಮಹರ್ಷೀಶ್ವರನು ಮನದಲ್ಲಿ ಚಿಂತಿಸಿ ತನ್ನ ಮೊರೆಹೊಕ್ಕ ಈ ರಾಕ್ಷಸನನ್ನು ತನ್ನ ತಪೋಬಲದಿಂದ ರಕ್ಷಿಸಬೇಕು, ಪರೋಪಕಾರಿಯಲ್ಲದವನು ಜನ್ಮವ್ಯರ್ಥವೆಂದು ವಿಚಾರಿಸಿಕೊಂಡು ಆ ರಾಕ್ಷಸನಂ ಕರೆದು ಎಲೋ ರಾಕ್ಷಸನೇ! ನೀನು ಈ ವಿಮಲೋದಕ ತೀರ್ಥದಲ್ಲಿ ಸ್ನಾನವಂ ಮಾಡಿ ಈ ಶಿವಲಿಂಗಕ್ಕೆ ದರ್ಶನವಂ ಮಾಡಲು, ಪಿಶಾಚದೇಹ ನಿವೃತ್ತಿಯಾದೀತು ಎನಲು ಪ

ರಾಕ್ಷಸನಿಂತೆಂದನು-ಎಲೈ ಸ್ವಾಮಿ ! ಈ ತೀರ್ಥವಂ ಜಲದೇವತೆಗಳು ಕಾದು ಇದ್ದಾರು, ಅವರಿಂದ ನನಗೆ ಉದಕಪಾನ ಮೊದಲಾಗಿಯೂ ದೊರಕದು, ಸ್ನಾನವೆತ್ತಣದೂ ಎಂಬ ರಾಕ್ಷಸನಿಗೆ ಋಷಿಯು ಇಂತೆಂದನು-ವಿಭೂತಿಯು ಫಣೆಯಲ್ಲಿ ಧರಿಸಿಕೊಂಡು ಪೋಗಲು ಜಲದೇವತೆಗಳು ಮುಟ್ಟಲಮ್ಮರು, ಹಣೆಯಲ್ಲಿ ವಿಭೂತಿಯಿರಲು ಯಮದೂತರು ಕ್ಷುದ್ರಪ್ರಾಣಿಗಳು ಮುಟ್ಟಲಮ್ಮರು. ವಿಭೂತಿಯು ಸಕಲಭೂತಪ್ರೇತ ಪಿಶಾಚಗಳಂ ಪರಿಹರಿಸಿ ರಕ್ಷಿಸುವದಾಗಿ ಐಶ್ವರ್ಯವೀವುದಾಗಿ ವಿಭೂತಿ ಎನಿಸಿತು. ಪಾಪಗಳಂ ಭಸ್ಮವಂ ವಿಸರ್ಜಿಸುವದಾಗಿ ಭಸ್ಮವೆನಿಸಿತು, ಸಂಸಾರಪಾಶವಂ ಬಿಡಿಸುವದಾಗಿ ಪಾಂಸುವೆನಿಸಿತು ಸಕಲ ಪಾಪಗಳು ಕ್ಷಯವಮಾಡುವದಾಗಿ ಕ್ಷಾರವೆನಿಸಿತು, ಇಂತು ಐದು ಪೆಸರುಗಳುಳ್ಳ ವಿಭೂಯಂ ಕಕ್ಷವಾಲೆಯಿಂದ ತೆಗೆದು ಪಂಚಾಕ್ಷರಿಯ ಮಂತ್ರದಿಂ ಧರಿಸೆಂದು ರಾಕ್ಷಸಂಗೆ ಕೊಡಲು ಆ ರಾಕ್ಷಸನು ಫಣೆಯಲ್ಲಿ ಪಂಚಾಕ್ಷರಿಯಮಂತ್ರದಿಂ ವಿಭೂತಿಯಂ ಧರಿಸಿ ಸ್ನಾನಕ್ಕೆ ತೀರ್ಥದೊಳು ಪೋಗಲು ಜಲದೇವತೆಗಳು ತಡೆಯದೆ ಸುಮ್ಮನೆ ಇರಲು, ಆ ವಿಮಲೋದಕತೀರ್ಥದಲ್ಲಿ ಸ್ನಾನವಂಮಾಡಿ ಕಪರ್ದೀಶ್ವರದರ್ಶನವಮಾಡುವಸಿತರೊಳು ಆ ರಾಕ್ಷಸನು ಪಿಶಾಚ ದೇಹವಂಬಿಟ್ಟು ದಿವ್ಯದೇಹವಂ ಧರಿಸಿ ದಿವ್ಯಾಭರಣ ಪುಷ್ಪಗಳಿಂದ ಅಲಂಕೃತನಾಗಿ ದಿವ್ಯ ವಿಮಾನವನ್ನೇರಿ ವಾಲ್ಮೀಕಿಋಷೀಶ್ವರನಿಗೆ ನಮಸ್ಕರಿಸಿ ಎಲೈ ಸ್ವಾಮಿಾ ನಿಮ್ಮ ದರ್ಶನದಿಂದ ತನ್ನ ಘೋರವಾದ ಪಿಶಾಚದೇಹ ನಿವೃತ್ತಿಯಾಗಿ ದಿವ್ಯದೇಹದಿಂದ ಉತ್ತಮಗತಿಯಂ ಪಡೆದೆನೂ ಎಂದು ಬಿನ್ನೈಸಿ ಕಳುಹಿಸಿಕೊಂಡು ಶಿವಲೋಕವನ್ನೈದಿದನು, ಅಂದುಮೊದಲಾಗಿ ವಿಮಲೋದಕತೀರ್ಥವು ಪಿಶಾಚವಿಮೋಚನ ತೀರ್ಥವೆಂದು ಪ್ರಸಿದ್ಧವಾಯಿತು. ಈ ಅಧ್ಯಾಯವಂ ಪಠಿಸಿದರೂ ಕೇಳಿದರೂ ಭೂತಪ್ರೇತ ಪಿಶಾಚ ಬ್ರಹ್ಮರಾಕ್ಷಸ ಬಾಲಗ್ರಹ ಚೋರಬಾಧೆ ವ್ಯಾಘ್ರಾದಿಗಳ ಭಯವಿಲ್ಲವೆಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವನ್ನು ವೇದವ್ಯಾಸಋಷೀಶ್ವರನು ತನಗೆ ಬುದ್ಧಿಗಲಿಸಿದನೆಂದು ಸೂತಪುರಾಣಿಕನು ಶೌನಕಾದಿಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ. * ಶ್ರೀ

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ಣಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತಕಾಶೀಮಹಿಮಾರ್ಥ ದರ್ಪಣದಲ್ಲಿ ಪಿಶಾಚ ವಿಮೋಚನ ತೀರ್ಥದ ಮಹಿಮೆಯೆಂಬ ಐವತ್ತುನಾಲ್ಕನೆ ಅಧ್ಯಾಯ ನಿರೂಪಣಕ್ಕಂ ಮಂಗಳಮಹಾ. *

ಐವತ್ತನಾಲ್ಕನೆಯ ಅಧ್ಯಾಯ ಸಂಪೂರ್ಣ.

---:o:---

ಶ್ರೀ ವಿಶ್ವೇಶ್ವರಾಯನಮಃ.

ಐವತ್ತೈದನೇ ಅಧ್ಯಾಯ.

ಕಾಶೀ ಪ್ರಶಂಸೆ—ಲಿಂಗ ಮಹಿಮೆ.

ಅನಂತರದಲ್ಲಿ ಕುಮಾರಸ್ವಾಮಿ ಇಂತೆಂದನು, ಕಾಶಿಯಲ್ಲಿ ಪಿಂಗಳಾಕ್ಷ ಗಣೇಶ್ವರನು ಪೂಜಿಸಿದ ಪಿಂಗಳೇಶ್ವರನ ದರ್ಶನವಂ ಮಾಡಲು ಸಕಲ ಪಾಪಹರ. ಅವಿಮುಕ್ತೇಶ್ವರನ ಪಶ್ಚಿಮದಲ್ಲಿ ವೀರಭದ್ರ ಪೂಜಿಸಿದ ವೀರಭದ್ರೇಶ್ವರನ ಪೂಜಿಸಲು ರಣದಲ್ಲಿ ಜಯ, ಆ ಸಮೀಪದಲ್ಲಿ ಭದ್ರಕಾಳೀ ಸಮೇತನಾದ ವೀರಭದ್ರನ ಪೂಜಿಸಲು ಕಾಶೀವಾಸಫಲವುಂಟು. ಕೇದಾರೇಶ್ವರನ ದಕ್ಷಿಣತೀರದಲ್ಲಿದ್ದ ಕಿರಾತೇಶ್ವರನ ಪೂಜಿಸಲು ಸಕಲಭಯ ನಿವಾರಣ. ವೃದ್ಧಕಾಳೇಶ್ವರನ ಸಮೀಪದ ಚತುರ್ಮುಖೇಶ್ವರನ ಪೂಜಿಸಲು ಚತುರ್ಮುಖಸಹನು. ಆ ಸಮೀಪದಲ್ಲಿ ನಿಕುಂಭೇಶ್ವರನ ಪೂಜೆಯಿಂದ ಸರ್ವ ಕಾರ್ಯಸಿದ್ಧಿ. ಮಹಾದೇವನ ದಕ್ಷಿಣದಲ್ಲಿ ಇಹ ಪಂಚಾಕ್ಷರೀಶ್ವರನ ಪೂಜೆಯಂ ಮಾಡಲು ಅಂತ್ಯದಲ್ಲಿ ಜಾತಿ ಸ್ಮರತ್ವ ಹುಟ್ಟಿ ಅದರಿಂದ ಶಿವಧ್ಯಾನಗೂಡಿ ಮೋಕ್ಷವನ್ನೈದುವನು. ಅಂತರ್ಗೃಹದ ಉತ್ತರದ್ವಾರದಲ್ಲಿ ಭೂತಭೂತೇಶ್ವರನಂ ಪೂಜಿಸಿ, ವಿಶ್ವನಾಥನಂ ಪೂಜಿಸಲು ಶಿವಲೋಕವನ್ನೈದು

ವನು. ತ್ರಿಲೋಚನೇಶ್ವರನ ಮೂಡಲಲ್ಲಿ ಹತ್ಯಾಕ್ಷೇಶ್ವರನ ದರ್ಶನ ಸ್ಪರ್ಶನ ಪೂಜೆಯಿಂದ ಅಂತ್ಯದಲ್ಲಿ ಪ್ರತ್ಯಕ್ಷನಹನು. ಆ ಸಮೀಪದಲ್ಲಿ ಕ್ಷೇಮಕನೆಂಬ ಗಣೇಶ್ವರನು ವಿಶ್ವನಾಥನನ್ನು ಪೂಜಿಸುತ್ತಾ ಇಹನು. ಈ ಗಣೇಶ್ವರನ ಪೂಜಿಸಲು ಸಕಲ ವಿಘ್ನಹರ, ಪೂಜಿಸಿ ದೂರಯಾತ್ರೆಯಂ ಪೋಗಲು ಶೀಘ್ರದಿಂದ ಕಾರ್ಯಸಿದ್ಧಿಯಾಗಿ ಮನೆಗೆ ಬರುವರು. ದೂರ ಪಯಣಮಂ ಪೋದವರು ಬಹುದಿನ ಬಾರದಿರಲು ಈ ಕ್ಷೇಮಕನೆಂಬ ಗಣೇಶ್ವರನನ್ನು ಅವರ ಸಂಬಂಧಿಗಳು ಪೂಜಿಸಲು ಬೇಗಬಹರು. ಅದರ ಉತ್ತರಗಲ್ಲಿ ಅಂಗದೇಶ್ವರನ ಪೂಜಿಸಲು ಸಕಲ ರೋಗ ಹರ. ಪಂಚಲಾಂಗಲ ದಾನಫಲವುಂಟು. ದಂಡಪಾಣಿಯ ನೈರುತ್ಯದಲ್ಲಿ ವಿರಾಧೇಶ್ವರನ ಪೂಜೆಯಂ ಮಾಡಲು ಪ್ರತಿದಿನದಲ್ಲಿ ಮಾಡಿದ ಪಾಪಹರ, ಪಿಪ್ಪಲತೀರ್ಥದ ಪಶ್ಚಿಮದಲ್ಲಿ ಸುಮುಖೇಶ್ವರನ ಪೂಜಿಸಲು ಯಮನೂ ತಡೆಯಲಾರನು, ಆ ಸಮೀಪದಲ್ಲಿ ಆಷಾಢೀಯೆಂಬ ಗಣೇಶ್ವರನಿಂದ ಪ್ರತಿಷ್ಠೆಯಾದ ಆಷಾಢೇಶ್ವರನನ್ನು ಆಷಾಢಶುದ್ಧ ಚತುರ್ದಶೀ ಪೌರ್ಣಮಿಗಳಲ್ಲಿ ಪೂಜಿಸಲು ಒಂದು ಸಂವತ್ಸರದಲ್ಲಿ ಮಾಡಿದ ಪಾಪಹರ, ಈ ರೀತಿಯಲ್ಲಿ ಗಣಂಗಳು ತಮ್ಮ ತಮ್ಮ ಪೆಸರಲಿಂಗಗಳಂ ಪ್ರತಿಷ್ಠೆಯಂ ಮಾಡಿಕೊಂಡು ಅಲ್ಲಿಯೇ ಇರಲು, ಮಂದರಾದ್ರಿಯಲ್ಲಿ ಪರಮೇಶ್ವರನು ಇಂತೆಂದನು;-- ತನಗೆ ಕಾಶಿಯ ವೃತ್ತಾಂತವೇ ತಿಳಿಯದೆ ಹೋಯಿತು. ಯೋಗಿನೀಯರು, ಸೂರ್ಯನು, ಬ್ರಹ್ಮನು, ಶಂಕುಕರ್ಣ ಮೊದಲಾದ ಗಣಂಗಳು ಕಾಶಿಯ ವೃತ್ತಾಂತಮಂ ತಿಳಿಯಪೋಗಿ, ಸಮುದ್ರಮಂ ಪೊಕ್ಕ ನದಿಗಳಂತೆ ತಿರುಗಿದವರಾಗಲಿಲ್ಲ. ಅಂಥಾ ಕ್ಷೇತ್ರಮಂ ಪೊಕ್ಕವರು ತಿರುಗಿ ಬಂದಾರೆ? ಬಾರರು. ಆರು ಕಾಶೀಕ್ಷೇತ್ರಮಂ ಪೋಗುವರೋ ಅವರು ತನ್ನ ಹೃದಯಮಂ ಪೊಕ್ಕವರಹರು. ಆರೊಬ್ಬರಂ ಕಾಶೀ ವೃತ್ತಾಂತಮಂ ತಿಳಿಯಲೋಸ್ಕರ ಕಳುಹಿದರೂ ಅಗ್ನಿಗೆ ಕೊಟ್ಟ ಆಹುತಿಯಂತೆ ತಿರುಗಲಿಲ್ಲ. ಕಾಶಿಯಲ್ಲಿ ದ ಶಿವಾರ್ಚನೆಯಂ ಮಾಡುವವರು ತನ್ನ ಚರರೂಪಿಗಳು, ಆ ಕ್ಷೇತ್ರದಲ್ಲಿ ಇದ್ದ ಚರ ಸ್ಥಿರರೂಪಿಗಳು ಎಲ್ಲವೂ ತನ್ನ ಸ್ವರೂಪಿಗಳು. ಆರೊಬ್ಬರೂ ಈ ವಿಶ್ವೇಶ್ವರನ ಆರಾಧನೆಯಂ ಮಾಡುವರೋ ಅವರು ಕಾಶಿ, ವಾರಣಾಸಿ, ರುದ್ರಾವಾಸವಿ

ಮಹಾಶ್ಮಶಾನ, ಆನಂದಕಾನನ, ಅವಿಮುಕ್ತಕ್ಷೇತ್ರ, ಹೀಗೆಂದು ನಿರತವು ಸ್ಮರಿಸುವರೋ ಅವರನ್ನು ಯಮನು ತಡೆಯಲಂಜುವನು. ಈ ಆನಂದಕಾನನದಲ್ಲಿದ್ದು ಮತ್ತೊಂದು ಸ್ಥಳ ಬಯಸುವರೋ ಅವರುಗಳಿಗೆ ನರಕವಾಸವಹುದು; ಕಾಶಿಯಲ್ಲಿದ್ದವರಿಗೆ ಆಕ್ಷಣದಲ್ಲಿ ಆಗಲಿ ಕಾಲಾಂತರದಲ್ಲಿ ಆಗಲಿ ಮರಣವಾಗಲು ಕಲಿಕಾಲ ಭಯವಿಲ್ಲ. ಅವರಿಗೆ ತಾನು ಮೋಕ್ಷವಂ ಕೊಡುವೆನು. ಆಗುವಂಥಾ ಶುಭಾಶುಭಂಗಳು ಎಲ್ಲಿಯಿದ್ದರೂ ಸರಿಯೆಂದು ಕಾಶಿಯಲ್ಲಿ ಇದ್ದವರಿಗೆ ಮೋಕ್ಷವಂ ಕೊಡುವೆನು. ದುಬುದ್ಧಿಗಳಾದವರು ಮೋಕ್ಷಲಕ್ಷ್ಮೀ ನಿವಾಸಸ್ಥಾನವಾದ ಕಾಶಿಯಂ ಬಿಡುವರೋ ಅವರಿಗೆ ಅನೇಕ ವಿಘ್ನಂಗಳು ಹೆಜ್ಜೆಹೆಜ್ಜೆಗೂ ತೋರುವವು. ಕಡೆಗೆ ಗತಿಯಿಲ್ಲದವರು. ಬಲ್ಲವರು ಕಾಶಿಗೆ ಹೋಗುವಾಗ ಹೆಜ್ಜೆಹೆಜ್ಜೆಗೆ ವಿಘ್ನಂಗಳು ಬರುವವು, ಬಂದವರು ಬಿಡದೆ ಕಾಶಿಯಂ ಪೊಕ್ಕು ತಿರುಗಿಬಾರದಿಹುದೆ ಉತ್ತಮ. ಕಡೆಗೆ ಅವರಿಗೆ ತಾರಕ ಬ್ರಹ್ಮೋಪದೇಶವನಿತ್ತು ರಕ್ಷಿಸುವೆನು. ಮತ್ತೊಂದು ಸ್ಥಳದಲ್ಲಿ ನಿಷ್ಕಂಟಕನಾಗಿ ರಾಜ್ಯವನ್ನಾಳುವನು ಶ್ರೇಷ್ಠನಲ್ಲ, ಕಾಶಿಯಲ್ಲಿ ಕಂಟಕದಿಂ ಬಿಕ್ಷವನೆತ್ತಿ ಜೀವಿಸಿ ಇರುವದೇ ಶ್ರೇಷ್ಠ, ಮಿಕ್ಕಾದ ಸ್ಥಳಂಗಳು ನಿಮಿಷಮಾತ್ರ ಸುಖವನ್ನೀವುವು. ಕಾಶಿಯು ನಿರಂತರ ಇಹಪರ ಸೌಖ್ಯವನ್ನೀವುದು. ಈ ಕ್ಷೇತ್ರದಲ್ಲಿ ವಿಶ್ವನಾಥನೆ ತಾನೂ- ಅಲ್ಲಿ ಅಮೃತದ ತೆರೆಗಳು ಗಂಗೆಯು ತೆರೆಗೆಸಮಾನವಾಗವು. ಈ ಕಾಶಿಯೂ ಮುಕ್ತಿಯಂ ಪ್ರಕಾಶಮಾಡುವದು, ಅಂಥಾ ಕ್ಷೇತ್ರಕ್ಕೆ ಮೂಢರು ಯಾತಕ್ಕೆ ಬಾರರೋ? ಪಂಚಕ್ರೋಶ ಪ್ರಮಾಣವುಳ್ಳ ಈ ಕಾಶಿಯು ತನ್ನ ಶರೀರ ತಾಪದಿಂ ಹುಟ್ಟಿ ಹುಟ್ಟಿ ಮರಳು ತ್ತಿಹ ಮನುಜರ ಬಳಲಿಕೆಯಂ ಪರಿಹರಿಸುವದಕ್ಕೆ ಈ ಕ್ಷೇತ್ರವಲ್ಲದೆ ಮತ್ತೊಂದು ಕ್ಷೇತ್ರವಿಲ್ಲ. ಸಂಸಾರವೆಂಬ ಮಹಾ ಪಥವಂ ನಡೆದು ಬಳಲಿ ಬಂದವರಿಗೆ ಮನೋರಥಗಳೆಂಬ ಫಲಂಗಳಿಂದ ಆಲಂಕೃತವಾದ ಚಪ್ಪರವಿದು. ಮೋಕ್ಷಾಧಿಕಾರಿಯಾದವರ್ಯಾರೋ ಅವರಿಗೆ ತನ್ನ ತ್ರಿಶೂಲಾಗ್ರವೆಂಬ ಸತ್ತಿಗೆಯು ತಾಪವುಳ್ಳ ಬಿಸಲ ಬೇಸಗೆಯಂ ಪರಿಹರಿಪ ಛತ್ರವಿದು. ಮಮತೆ ಮೋಹಂಗಳಿಲ್ಲದ ಎನ್ನನ್ನು ಮೋಸಗೊಳಿಸುವ ಈ ಕಾ

ಶಿಯು ನೆನೆಯುವವರಾರೂ, ಪರಮಾನಂದ ಪ್ರಕಾಶವಪ್ಪ ಕಾಶಿಯಂ ಕಾಶಿ ! ಕಾಶಿ ! ಕಾಶಿ ! ಎಂಬ ನಾಮಾಮೃತವೂ ನಿರಂತರವೂ ಆರು ಪಾನವಂ ಮಾಡುವರೋ ಅವರು ಅಮೃತಸ್ಥರು ; ಇಂಥಾ ಕಾಶೀ ಕ್ಷೇತ್ರ ರಹಸ್ಯಮಂ ತಿಳಿದು ಬ್ರಹ್ಮ ಮೊದಲಾದವರೂ ಅಲ್ಲೇ ನಿಂತರಲ್ಲದೆ ತಿರುಗಿ ಬಾರದಿಲ್ಲ, ಅವರು ತನ್ನ ಬಿಟ್ಟು ಇಹರಲ್ಲಾ ನಾನು ಹ್ಯಾಗಾದರೂ ಕಾಶಿಗೆ ಹೋಗುತ್ತೇನೆಯಷ್ಟು ; ಅವರೆಲ್ಲರೂ ಅಲ್ಲಿ ಇಹುದೆ ಲೇಸು ; ಪರರಾಜ್ಯವೃತ್ತಾಂತವು ಮತ್ತೊಬ್ಬರಿಗೆ ಭೇದಿಸಲರಿಯದು, ಆದುಕಾರಣ ತನ್ನ ಸರೂಪಿಗಳಾದವರು ಅಲ್ಲಿ ನಿಂತು ನಮ್ಮ ಪ್ರವೇಶಕ್ಕೋಸ್ಕರ ಯತ್ನವಂ ಮಾಡಿಕೊಂಡು ಇದ್ದಾರು. ಆದಕಾರಣ ತನ್ನ ಸಮುಖದಲ್ಲಿದ್ದವರೆಲ್ಲರಂ ಕಳುಹಿ ಕಡೆಯಲ್ಲಿ ತಾನೂ ಹೋಹೇನೆಂದು ವಿಚಾರಿಸಿ ವಿಘ್ನೇಶ್ವರನಂ ಕರೆದು ನೀನು ಕಾಶೀಗೆ ಹೋಗಿ ಅಲ್ಲಿರ್ದ ಗಣಂಗಳಂ ಕೂಡಿಕೊಂಡು ದಿವೋದಾಸರಾಯಂಗೆ ವಿಘ್ನವಂ ಸಂಪಾದಿಸಿ ತಾವು ಶೀಘ್ರದಿಂ ಕಾಶೀಪಟ್ಟಣಕ್ಕೆ ಬರುವ ಹಾಗೆ ಪ್ರಯತ್ನವಂ ಮಾಡು ಎಂದು ನಿರೂಪಿಸಿದ ಪರಮೇಶ್ವರನ ಆಜ್ಞೆಯಂ ಶಿರಸಾವಹಿಸಿ ವಿಘ್ನೇಶ್ವರನು ಕಾಶೀಪಟ್ಟಣಕ್ಕೆ ತೆರಳಿದನು, ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವಂ ವ್ಯಾಸರು ತನಗರುಹಿದರೆಂದು ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಪೇಳಿದನೆಂಬಲ್ಲಿಗೆ ಅಧ್ಯಾಯಾರ್ಥ, ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ಣಾಟಕ ಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಪ್ರಶಂಸೆ ಲಿಂಗಮಹಿಮೆಯೆಂಬ ಐವತ್ತೈದನೇ ಅಧ್ಯಾಯ ನಿರೂಪಣಕ್ಕಂ ಮಂಗಳ ಮಹಾ * * * * *

ಐವತ್ತೈದನೆಯ ಅಧ್ಯಾಯ ಸಂಪೂರ್ಣಂ.

ಶ್ರೀ ವಿಶ್ವೇಶ್ವರಾಯನಮಃ,

ಐವತ್ತಾರನೇ ಅಧ್ಯಾಯ.

ವಿಘ್ನೇಶ್ವರನ ಮಾಯಾಪ್ರಸಂಗ.

ಅನಂತರದಲ್ಲಿ ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು : ಕೇಳೈ ಅಗಸ್ತ್ಯನೇ ! ಪರಮೇಶ್ವರನ ಆಜ್ಞೆಯಂ ಶಿರಸಾವಹಿಸಿ, ವಿಘ್ನೇಶ್ವರನು ಕಾಶೀಪಟ್ಟಣಕ್ಕೆ ಬಂದು ವೃದ್ಧಬ್ರಾಹ್ಮಣ ವೇಷವಂ ಧರಿಸಿಕೊಂಡು ಶಕುನಗಳಂ ಹೇಳುತ್ತಾ ಮೆಲ್ಲಮೆಲ್ಲನೆ ಕಾಶೀಪಟ್ಟಣದಲ್ಲಿ ಚರಿಸುತ್ತಾ ರಾತ್ರಿಯಲ್ಲಿ ತಾನೆ ಕೆಲವರಿಗೆ ಸ್ವಪ್ನವಂ ಕಾಂಬಂತೆ ಮಾಡಿ, ಉದಯಕಾಲದಲ್ಲಿ ಅವರ ಮನೆಗೆ ಪೋಗಿ ನೀವು ರಾತ್ರಿಯಲ್ಲಿ ಇಂಥಾ ಸ್ವಪ್ನಗಳಂ ಕಂಡಿರಿ ಎಂದು ನಿದರ್ಶನಗಳಂ ಹೇಳುತ್ತ ಸಂಚರಿಸಿದನು. ಅದೆಂತೆಂದರೆ---ಎಲೈ ಪ್ರಜೆಗಳಿರಾ ! ನೀವು ಬೆಳಗಾಗುವಝಾವದಲ್ಲಿ ಒಂದು ಕೊಳದಲ್ಲಿ ಮುಳುಗಿದ್ದ ಮತ್ತೆ ಉಮ್ಮ್ರಲು ಕೆಸರಲ್ಲಿ ಮುಳುಗುವ ಸ್ವಪ್ನವಂ ಕಂಡಿರೇ ಅದು ಮಹಾ ಭಯಂಕರವು. ನೀವು ರಾತ್ರಿಯಲ್ಲಿ ಕಾಷಾಯವಸ್ತ್ರವ ಧರಿಸಿದ ಬೋಳುತಲೆಯವನ ಕಂಡಿರಾಗಿ ಅದು ಶೀಘ್ರದಿಂ ಮಹಾಭಯ. ನೀವು ರಾತ್ರೆಯಲ್ಲಿ ಸೂರ್ಯಗ್ರಹಣವಾಗುವ ಸ್ವಪ್ನವಂ ಕಂಡಿರೇ ಅದು ಮಹಾ ಅಶುಭ. ಪಡುವಲು ಇದ್ದ ಸೂರ್ಯನು ಮೂಡಲು ಎದುರಾಗಿ ಇದ್ದ ಚಂದ್ರನಂ ಬೀಳುಕೆಡಹುದಂ ಕಂಡಿರಿ, ಅದು ಮಹಾ ಅರಿಷ್ಟ, ತಮ್ಮೊಳು ತಾವು ಯುದ್ಧವ ಮಾಡುವ ಧೂಮಕೇತುವಂ ಕಂಡಿರಾಗಿ ಅದು ರಾಷ್ಟ್ರಕ್ಷೋಭ, ತಲೆಯ ಕೆದರಿಕೊಂಡು ಪುರುಷನು ನಿನ್ನ ತೆಂಕಲಾಗಿ ಕರದೊಯ್ಯುವ ಕನಸಂ ಕಂಡಿರಾಗಿ ಅದು ಕುಟುಂಬಕ್ಕೆ ಅರಿಷ್ಟ, ರಾತ್ರಿಯಲ್ಲಿ ಉಪ್ಪರಿಗೆಯು ಮುರಿದು ಬೀಳುವ ಕನಸಂ ಕಂಡೆಯಾಗಿ ಅದು ರಾಯಂಗೆ ಹಾನಿ, ಸಮುದ್ರದ ತೆರೆಗಳಿಂದ ಪಟ್ಟಣ ಕೊಚ್ಚಿ ಪೋಪುದಂ ಕಂಡೆಯಾದಕಾರಣ ಈ ಪಟ್ಟಣಕ್ಕೆ ಲೇಸಲ್ಲ. ನೀನು ಕಪಿಯನೇರಿಕೊಂಡು ತೆಂಕಲಾಗಿ ಪೋಪ ಸ್ವಪ್ನವಂ ಕಂಡೆಯಾಗಿ ಈ ಪಟ್ಟಣವಂ ಬಿಡಬೇಕಾಗಿ ಇಹುದು. ಬೆಳಗಾಗುವ ಝಾವದಲ್ಲಿ

ಏಳುತ್ತಲೆ ತಲೆ ಕೆದರಿಕೊಂಡು ಪೋಪ ಸ್ತ್ರೀಯುರಂ ಕಂಡಿರಾಗಿ ಅದರಿಂದ ರಾಜ್ಯಲಕ್ಷ್ಮಿ ಪೊರಮಟ್ಟು ಪೋಗುವಳು. ದೇವರಗುಡಿಯ ಶಿಖರದ ಕಲಶ ಮುರಿದು ಬೀಳುವದ ಕಂಡೆವಾಗಿ ಅದು ಶೀಘ್ರದಿಂ ರಾಯಂಗೆ ರಾಜ್ಯಭಂಗವ ಹುದು. ರಾತ್ರಿಯಲ್ಲಿ ಮೊರೆಯಿಡುತ್ತ ಮೃಗಂಗಳು ಪಟ್ಟಣವ ಮುತ್ತುವ ಕನಸಂ ಕಂಡೆವಾಗಿ ಅದು ಪಟ್ಟಣಕ್ಕೆ ಏಳಿಗೆಯಲ್ಲ. ಪಟ್ಟಣದಮೇಲೆ ಹದ್ದು ಕಾಗೆಗಳು ಕೂಗುತ್ತ ರಾತ್ರಿಯಲ್ಲಿ ತಿರುಗುತ್ತಯಿದ್ದ ಕನಸಂ ಕಂಡೆಯಾಗಿ ಅದರಿಂದ ರಾಷ್ಟ್ರಭಂಗವಹುದು. ಈ ರೀತಿಯಲ್ಲಿ ಬಹುವಿಧ ಸ್ವಪ್ನಂಗಳಂ ಉಂಟು ಮಾಡುವಂ ಬರುವಂಥಾ ಶುಭಾಶುಭಂಗಳಂ ಪೇಳುತ್ತ ಬಹುಮಂದಿ ಪ್ರಜೆಗಳಂ ಪಟ್ಟಣದಿಂದ ಎಬ್ಬಿಸಿ ಮತ್ತೂ ಕೆಲಬರಿಗೆ ಗ್ರಹಚಾರಂಗಳಂ [illegible]ಗಿದನು. ಎಲೈ ಪ್ರಜೆಗಳಿರಾ ! ಸೂರ್ಯನೂ ಅಂಗಾರಕನೂ ಶನ್ಯೈ[illegible]ರಾಶಿಯಲ್ಲಿ ಇಹರಾಗಿ ಅದು ಒಳ್ಳೆಯದಲ್ಲ, ಸಾಯಂಕಾಲದಲ್ಲಿ [illegible]ಮಂಡಲವಂ ಭೇದಿಸಿಕೊಂಡು ತೆಂಕಲಾಗಿ ಧೂಮಕೇತು ತಿರು[illegible] ಇದ್ದಿತಾಗಿ ರಾಯಂಗೆ ಜಯವಿಲ್ಲ. ಶನ್ಯೈಶ್ವರನು ಅತಿ ಚಾರಗತನಾಗಿ [illegible]ಸಿ ಇದ್ಧಾನಾಗಿ ಅದು ಒಳ್ಳೆಯದಲ್ಲ. ನಿನ್ನೆ ಭೂಕಂಪವಾಯಿತಲ್ಲ. ಅದಕ್ಕೆ ತನ್ನ ಎದೆ ಸಹ ನಡುಗುತ್ತಾ ಇದೆ. ಅದು ರಾಜ್ಯಕ್ಕೆ ಒಳ್ಳೇದಲ್ಲ. ಬ[illegible]ಗಲಿಂದ ಟೆಂಕಲಾಗಿ ಆಕಾಶದಲ್ಲಿ ನಕ್ಷತ್ರಂಗಳು ಕೋಳಿಗಳ ಹಿಂದವಲ್ಲಿ ಚಲ್ಲವರಿದು ಆಡಗುತ್ತ ಇದ್ದವಾಗಿ ಅದು ಶುಭವಲ್ಲ, ಅಂಗಳದಲ್ಲಿ ಪ್ರಳಯವಾದ ಹೊಗೆ ಏಳುತ್ತಾ ಇದ್ದೀತಾಗಿ ಅದು ಮಹಾ ಉತ್ಪಾತ. ಪ್ರಾತಃಕಾಲ ಸೂರ್ಯಸಿಗಿದಿರಾಗಿ ಒಣಗಿದ ಮರದಮೇಲೆ ಕಾಗೆಗಳು ಏರಿ ಕೂಗುತ್ತಾ ಇದ್ದವಾಗಿ ಅದು ಕಠಿಣಕಠೋರವಾದ ಉತ್ಪಾತ. ಅಂಗಡಿಯು ಬೀದಿಗಳಲ್ಲಿ ಕಾಡುಮೃಗಂಗಳು ಓಡಾಡುತ್ತ ಇದ್ದವಾಗಿ- ಆದರಿಂದ ಪ್ರಜೆಗಳಿಗೆ ಮಹಾ ಭಯತೋರಿತು. ಈಪರಿಯಲ್ಲಿ ಪ್ರಜೆಗಳಿಗೆ ಭಯಂಗಳ ಪುಟ್ಟಿಸಲು ಅನೇಕಮಂದಿ ಕಾಶೀಪಟ್ಟಣವಂ ಬಿಟ್ಟು ಹೋದರು. ಅನಂತರದಲ್ಲಿ ಕಪಟೋಪಾಯದಿಂದ ಅರಮನೆಯಂ ಪೊಕ್ಕು ಅಂತಃಪುರ ಸ್ತ್ರೀಯರಿಗೆ ಬಹುವಿಶ್ವಾಸ ಪ್ರತ್ಯಕ್ಷ ಶಕುನಂಗಳಂ ಪೇಳತೊಡಗಿದನು. ಎಲೈ ರಾಜಪತ್ನಿ! ನಿನಗೆ ತೊಂಭತ್ತೇಳು ಮಂದ ಕುಮಾರರೂ, ಆದರೊಳ

ಗೊಬ್ಬನು ರಥವನ್ನೇರಿಕೊಂಡು ಹೋಗುತ್ತ ರಾಜಬೀದಿಯಲ್ಲಿ ಪ್ರಮಾದ ದಿಂದ ಬಿದ್ದು ಮೃತನಾದನು. ಈಕೆ ಗರ್ಭದಲ್ಲಿ ಹೆಣ್ಣು ಮಗಳಾದಳು. ಈಕೆ ಪೂರ್ವಜನ್ಮದಲ್ಲಿ ಮಹಾ ದರಿದ್ರೆ. ಈಗ ಭಾಗ್ಯವಂತೆಯಾದಳು. ಈಕೆ ರಾಯಂಗೆ ಎಲ್ಲಾ ಸ್ತ್ರೀಯರೊಳು ಅತಿ ಪ್ರಿಯಳಾದವಳು. ಈಕೆಗೆ ರಾ ಯನು ತಾನು ಧರಿಸಿದ ಕಂಠಮಾಲೆಯಂ ಕೊಟ್ಟು ಐದಾರು ದಿನವಾಯಿತು ಈಕೆಗೆ ರಾಯನು ನಿನ್ನೆ ಹೊಸದಾಗಿ ಆಭರಣವ ಮಾಡಿಸಿಕೊಟ್ಟನು. ಈ ಕೆಗೆ ರಾಯನು ಗ್ರಾಮಗಳಂ ಕೊಟ್ಟು ಐದಾರು ದಿನವಾಯಿತು. ಇಂತೆಂದು ಪ್ರತ್ಯಕ್ಷ ಶಕುನಂಗಳಂ ಹೇಳುವ ವೃದ್ಧಬ್ರಹ್ಮಚಾರಿಯಂ ನೋಡಿ, ಅಂತಃ ಪುರಸ್ತ್ರೀಯರು ಆಶ್ಚರ್ಯಪಟ್ಟರು. ಅವರು ಇಂತೆಂದರು;- ಇಂಥ ಉತ್ತ ಮವಾದ ಸಕಲ ಶಾಸ್ತ್ರ ಶಕುನಂಗಳಂ ಬಲ್ಲ ಬ್ರಾಹ್ಮಣನ ಎಲ್ಲೂ ಕಾ ಣೆವು. ಸಕಲದರಲ್ಲಿಯೂ ಬಲ್ಲವನೂ, ಸುಶೀಲನೂ, ಸೌಂದರ್ಯವುಳ್ಳ ವನೂ, ಸದಾಚಾರಿಯಾದವನೂ, ಅಶಕ್ತನಲ್ಲ, ಉದಾರಿಯಾದವನೂ, ಜಿತೇಂದ್ರಿಯನೂ, ಅಲ್ಪ ಸಂತೋಷಿ, ಪ್ರತಿಗ್ರಹವ ತೆಗೆದುಕೊಂಬುವನಲ್ಲ ಕ್ರೋಧಿಯಲ್ಲ, ತರುಬನಲ್ಲ, ಪ್ರಸನ್ನಮುಖನು, [illegible]ನಲ್ಲ, ಮಾಡಿದ ಲೇಸುಬಲ್ಲವನು, ನಿಂದಕನಲ್ಲ, ಸಕಲರಿಗೂ ಪುಣ್ಯೋಪದೇಶ[illegible] ಬ ಲ್ಲವನೂ, ಮಹಾ ಪುಣ್ಯಾತ್ಮನೂ, ವ್ರತನಿಷ್ಠೆಯುಳ್ಳವನೂ, ಶುಚಿಸಂ[illegible]ನೂ, ಸುಚರಿತ್ರನೂ, ಶ್ರುತಿಸ್ಮೃತಿಗಳಲ್ಲಿ ಪ್ರವೀಣನೂ, ಧಿಟ್ಟನೂ, [illegible] ಗಳ ಬಲ್ಲವನೂ, ಸಕಲರಿಗೂ ಸಮ್ಮತವಾದವನೂ, ಸಕಲ ಶಾಸ್ತ್ರಗಳ ಬಲ್ಲವನೂ, ಜ್ಯೋತಿಷದಲ್ಲಿ ಪ್ರವೀಣನೂ, ಸ್ನೇಹವುಳ್ಳವನೂ, ಕುಲ ವಂತನೂ, ದೈನ್ಯಪಡುವನಲ್ಲ. ಅಥಿತಿಗಳಿಗೆ ಚನ್ನಾಗಿ ಊಟವನಿಕ್ಕಬಲ್ಲವ ನೂ, ತಾನು ಚೆನ್ನಾಗಿ ಭೋಜನವಂ ಮಾಡಬಲ್ಲವನೂ, ನಿರ್ಮಲವ ಸಸ್ತ್ರ ಉಳ್ಳವನೂ, ಇಂಥ ಗುಣಸಂಪನ್ನನ ಎಲ್ಲಿಯೂ ಕಂಡದ್ದಿಲ್ಲ, ಇಂಥಾ ಬ್ರಾಹ್ಮಣನಂ ರಾಯಂಗೆ ತೋರಿಸಿ ಬಹುಮಾನವಂ ಮಾಡಿಸಿ, ಭೂತಭವಿ ಷ್ಯದ್ವರ್ತಮಾನಂಗಳಂ ಕೇಳುವಾ ಎಂದು ಸ್ತ್ರೀಯರೊಳೆಲ್ಲಾ ಆಲೋ ಚನೆಯಂ ಮಾಡಿ ಪಟ್ಟದ ರಾಣಿಯಾದ ಲೀಲಾವತಿಗೆ ಇಂತೆಂದರು. ಎಲೈ

ಅಕ್ಕಾ ! ಈ ಬ್ರಾಹ್ಮಣನಂ ರಾಯನನ್ನು ಕಾಣಬೇಕೆಂದು ಕೇಳಿಕೊಳ್ಳಲು ಆ ಲೀಲಾವತಿಯೆಂಬ ಸ್ತ್ರೀಯು ರಾಯನ ಸಮೀಪಕ್ಕೆ ಬಂದು ನಿಂತು ಇಂತೆಂದು ಬಿನ್ನೈಸಿದಳು. ಎಲೈ ರಾಯ ! ಬಬ್ಬನೊಬ್ಬ ಗುಣವೃದ್ಧನಾಗಿ ವಿಚಕ್ಷಣನಾದ ವೇದನಿಧಿಯಾದ ಭೂತಭವಿಷ್ಯದ್ವರ್ತಮಾನವಂ ಬಲ್ಲಂಥ ವೃದ್ಧ ಬ್ರಹ್ಮಚಾರಿ ಬಂದು ಇದ್ದನು. ಆತನನ್ನು ನೀವು ಕರೆಸಿಕೊಳ್ಳಬೇಕೆನಲು, ತನ್ನ ಪ್ರಿಯಳ ವಾಕ್ಯವಂ ಕೇಳಿ ಸಂತೋಷದಿಂದ ರಾಯನು ಒಬ್ಬ ಪ್ರವೀಣೆಯಾದ ಸಖಿಯಂ ಕರೆದು- ಆ ಬ್ರಾಹ್ಮಣನಂ ಕರೆದುಕೊಂಡು ಬಾರೆನಲು, ಆ ಸಖಿ ಹೋಗಿ ಎಲೆ ಬ್ರಾಹ್ಮಣನೆ! ನಿಮ್ಮ ವೃತ್ತಾಂತವಂ ಕೇಳಿ ರಾಯನು ನಿಮ್ಮ ಕರತರಹೇಳಿದನು. ಬನ್ನಿ ಎಂದು ಕರೆಯಲು, ಸಖಿಯ ಸಂಗಡ ಆ ತೇಜಸ್ಸು ಉಳ್ಳ ಬ್ರಾಹ್ಮಣ ಬರಲು ಬಹ ಬ್ರಾಹ್ಮಣನ ಕಂಡು ರಾಯನು ಸಿಂಹಾಸನವನಿಳಿದು, ಇದಿರಾಗಿ ಬಂದು ನಮಸ್ಕರಿಸಿ ಕೈವಿಡಿದು ಕರದೊಯಿದು ಸಿಂಹಾಸನದಮೇಲೆ ಕುಳ್ಳಿರಿಸಿ ಅರ್ಘ್ಯಪಾದ್ಯಾಚಮನ ಮಧುಪರ್ಕದಿಂ ಸಂತೋಷಪಡಿಸಿ ಕುಶಲಂಗಳಂ ಕೇಳುತ, ಕೆಲವು ಸದ್ಗೋಷ್ಟಿಯಾದ ಕಥಾಪ್ರಸಂಗವಂ ಕೇಳಿ ಆಬಳಿಕ ಈ ಬ್ರಾಹ್ಮಣನಂ ಇಂದಿಗೆ ಬಿಡಾರಕ್ಕೆ ಚಿತ್ತೈಸಿ ಎಂದು ಕಳುಹಿ ತನ್ನ ಪಟ್ಟದ ರಾಣಿ ಲೀಲಾವತಿಯೊಡನೆ ಇಂತೆಂದನು ;--ಎಲೆ ಪ್ರಿಯಳೇ ! ಈ ಬ್ರಾಹ್ಮಣನಲ್ಲಿ ನೀನು ಹೇಳಿದ ಗುಣಂಗಳಿಂದ ಮತ್ತು ಅಧಿಕ ಗುಣಂಗಳಿದ್ದಾವು. ನಾಳೆ ಉದಯದಲ್ಲಿ ಕರೆಸಿ ನಮಗೆ ಮುಂದೆ ಆಗುವ ಶ್ರೇಯಸ್ಸುಗಳನ್ನು ಕೇಳುವಾ ಎಂದು ರಾಯನು ಅನೇಕ ಭೋಗಂಗಳಿಂದ ರಾತ್ರಿಯಂ ಕಳೆದು ಮರುದಿವ ಉದಯದಲ್ಲಿ ರಾಯನು ಸ್ನಾನ ಸಂಧ್ಯಾವಂದನೆ, ಬ್ರಾಹ್ಮಣರ ವಂದನೆ, ಷೋಡಶ ಮಹಾದಾನಾದಿ ಸತ್ಕ್ರಿಯಗಳಂ ಮುಗಿಸಿ ಒಡ್ಡೋಲಗದಲ್ಲಿ ಕುಳಿತು ಆ ಬ್ರಾಹ್ಮಣನಂ ಕರೆಸಿ ಮತ್ತು ಅರ್ಘ್ಯಪಾದ್ಯಾಚಮನ ಮಧುಪರ್ಕ ಗಂಧಾಕ್ಷತೆ ಧೂಪದೀಪ ದುಕೂಲವಸ್ತ್ರ ದಿವ್ಯಾಭರಣಂಗಳಂ ಪೂಜಿಸಿ ಪ್ರಿಯವಾಕ್ಯದಿಂ ಸಂತುಷ್ಟಿಬಡಿಸಿ ಸತ್ಕರಿಸಲು, ಸಂತುಷ್ಟಚಿತ್ತನಾಗಿ ಸಿಂಹಾಸನದಲ್ಲಿ ಕುಳಿತು ಈ ಬ್ರಾಹ್ಮಣಂಗೆ ರಾಯಂ ನಮಸ್ಕರಿಸಿ ಕೈಮುಗಿದು ಇಂತೆಂದು ಬಿನ್ನವಿಸಿದನು. ಎಲೈ ಕೃಪಾನಿಧಿಯಾದ

ಬ್ರಾಹ್ಮಣೋತ್ತಮನೇ! ನೀನು ತತ್ವಮಂ ಬಲ್ಲಹಾಗೆ ಮತ್ತಾರೂ ಅರಿಯರು. ಅದುಕಾರಣ ಪ್ರಾಜ್ಞನಾದ ನಿನ್ನನ್ನು ಒಂದು ಅರ್ಥವಮಂ ಕೇಳಬೇಕಾಗಿ ಇದ್ದೀತು. ನಿಮಗೆ ತನ್ನಲ್ಲಿ ಕೃಪೆಯುಂಟಾದರೆ ಯಥಾರ್ಥವಾಗಿ ತಾನು ಕೇಳಿದುದ ಬುದ್ಧಿಗಲಿಸಬೇಕೆನಲು, ಅದಾವುದೆಂದರೇ—ಬ್ರಹ್ಮನ ಪ್ರಾರ್ಥನೆಯಿಂದ ತಾನು ರಾಜ್ಯಭಾರವನ್ನು ವಹಿಸಿ ಎಂಭತ್ತು ಸಾವಿರ ವರ್ಷವಾಯಿತು. ತಾನು ರಾಜ್ಯವನ್ನಾಳಿದಂತೆ ಆರೂ ಆಳಿದವರಿಲ್ಲ, ತನ್ನ ಮನಸ್ಸು ಬಂದಂತೆ ಸಮಸ್ತ ಭೋಗಂಗಳನ್ನು ಅನುಭವಿಸಿದೆನು, ತನ್ನ ಪುತ್ರರಸಂರಕ್ಷಣೆ ಮಾಡುವಂತೆ ಸಕಲಪ್ರಜೆಗಳನ್ನು ದಿವಾರಾತ್ರಿಯೂ ಪರಾಕಿಲ್ಲದೆ ರಕ್ಷಿಸಿದೆನು, ಸಕಲ ಧರ್ಮಗಳಂ ಮಾಡಿದೆನು, ಶತ್ರುಗಳಂ ಜೈಸಿದೆನು, ಬ್ರಾಹ್ಮಣರ ಸೇವೆ ಹೊರತಾಗಿ ಮತ್ತೊಂದು ಧರ್ಮವಬಲ್ಲವನಲ್ಲ. ತಾನು ಹಲವುಬಗೆಯಲ್ಲಿ ನಿಮಗೆ ಬಿನ್ನಹಮಾಡುವದೇನು ಇದ್ದೀತು, ಈಗ ರಾಜ್ಯಭೋಗವಲ್ಲಿ ಎನ್ನ ಮನಸ್ಸು ತೃಪ್ತಿಪಟ್ಟು ಬಿಡುಗಡೆಯನ್ನೈದಿತು. ನನಗೆ ಬಹುಕಾರ್ಯ ವೃತ್ತಾಂತವಮಂ ವಿಚಾರಿಸಿ ನಿಶ್ಚಯವಾಗಿ ಬುದ್ಧಿಗಲಿಸಬೇಕೆನಲು ಬ್ರಾಹ್ಮಣನಿಂತೆಂದನು, ಕೇಳೈ ರಾಯಾ! ಅತಿಸ್ವಲ್ಪ ಪ್ರಯೋಜನವಾದರೂ ಅತಿ ರಹಸ್ಯದಲ್ಲಿಯೇ ಹೇಳಬೇಕು. ಅತಿ ರಹಸ್ಯದಲ್ಲಿಯೇ ಕೇಳಬೇಕಲ್ಲದೆ ಬಹಿರಂಗವಂ ಮಾಡಲಾಗದು. ಏಕಾಂತದಲ್ಲಿಯೇ ಕೇಳಲು ತಾನು ಹೇಳಲು ತನ್ನ ವಾಕ್ಯಮಂ ಕೇಳಲು ನಿನ್ನ ಮನಸ್ಸು ನಿರ್ಮಲವಾದೀತು. ತಾನು ಅಸತ್ಯವ ನುಡಿದವನಲ್ಲ, ನೀನು ಶೂರನೂ ಧೀರನೂ ಭಾಗ್ಯವಂತನೂ ಭೂಮಿಗೆ ಹಿತವಾಗಿ ಇಹುದರಿಂದ ನಿನಗೆ ಸರಿಯಿಲ್ಲ. ದೇವೇಂದ್ರಂಗೆ ವೆಗ್ಗಳನೂ, ಬುದ್ಧಿಯಲ್ಲಿ ಬೃಹಸ್ಪತಿಗೆ ಸಮಾನನೂ, ಪ್ರಸನ್ನತೆಯಿಂದ ಚಂದ್ರನೂ, ತೇಜದಿಂದ ಸೂರ್ಯನಿಗೆ ಸಮಾನನೂ, ಪ್ರತಾಪದಿಂದ ಅಗ್ನಿಗೆ ಸಮಾನನೂ, ಬಲದಿಂದ ವಾಯುವಿಗೆ ಸಮಾನನೂ, ರಾಜ್ಯವನ್ನಾಳುವಲ್ಲಿ ಸ್ವಾಯಂಭುವಮನುವಿಗೆ ಸಮಾನನೂ, ಆಜ್ಞೆಯಲ್ಲಿ ರುದ್ರನೂ, ರಣದಲ್ಲಿ ನೈರುತ್ಯನೂ, ದುಷ್ಟನಿಗ್ರಹದಲ್ಲಿ ವರುಣನೂ, ದಂಡಿಸುವಲ್ಲಿ ಯಮನೂ, ಕ್ಷಮೆಯಲ್ಲಿ ಭೂಮಿಗೆ ಸಮಾನನೂ, ಗಾಂಭೀರ್ಯದಲ್ಲಿ ಸಮುದ್ರನೂ, ಧೈರ್ಯದಲ್ಲಿ ಹಿಮವಂತನೂ, ಶೌರ್ಯದಲ್ಲಿ ಪರಶುರಾಮನೂ, ಸಕ

ಲೈಶ್ವರ್ಯವಂ ಕೊಡುವಲ್ಲಿ ಪರಮೇಶ್ವರನೂ, ದಾನದಲ್ಲಿ ಮೇಘಸಮಾನ ನೂ, ಪವಿತ್ರತೆಯಲ್ಲಿ ಗಂಗೆಗೆ ಸಮಾನನೂ, ಸಕಲ ಪ್ರಾಣಿಗಳಿಗೂ ಸುಖ ಬುದ್ಧಿಯ ಕೊಡುವಲ್ಲಿ ಕಾಶೀಕ್ಷೇತ್ರದ ಸಮಾನನೂ, ನಾನಾ ಸೃಷ್ಟಿಯಲ್ಲಿ ಬ್ರಹ್ಮನ ಸಮಾನನೂ, ಲೋಕಪಾಲನೆಯಲ್ಲಿ ವಿಷ್ಣುವಿಗೆ ಸಮಾನನು ಆಗಿ ರುವೆ. ಸಂಹಾರದಲ್ಲಿ ರುದ್ರನಿಗೆ ಸಮಾನನೂ, ನಿನ್ನ ಮುಖಕಮಲದಲ್ಲಿ ಸರಸ್ವತಿ ಇದ್ದಾಳು. ನಿನ್ನ ಪಾದಪದ್ಮಂಗಳಲ್ಲಿ ಶ್ರೀಮಹಾಲಕ್ಷ್ಮೀಯಿದ್ದಾಳು. ನಿನ್ನ ಕೋಧದಲ್ಲಿ ಕಾಲಕೂಟ ವಿಷವಿದ್ದೀತು, ನಿನ್ನ ವಚನದಲ್ಲಿ ಅಮೃತ ವಿದ್ದೀತು, ನಿನ್ನ ಭುಜದಲ್ಲಿ ಅಶ್ವಿನೀದೇವತೆಗಳು ಇದ್ದಾರು, ಇಂಥಾ ಸಕಲ ದೇವತಾಸ್ವರೂಪನಾಗಿ ಭೂರಮಣನಾದ ನಿನಗೆ ನೀನೇ ಸಮಾನನಲ್ಲದೆ ನಿನ ಗೆ ಸಮಾನರಾದ ರಾಯರಂ ಕಾಣೆನು, ಅದುಕಾರಣ ನಿನಗೆ ಮುಂದೆ ಬರು ವಂಥಾ ಶ್ರೇಯಸ್ಸು ನನಗೆ ಈಗಲೇ ಕಾಣಿಸುತ್ತಾ ಇದ್ದೀತು, ಇಂದಿಗೆ ಹದಿ ನೆಂಟು ದಿನಕ್ಕೆ ಉತ್ತರದೇಶದಿಂದ ಒಬ್ಬ ಬ್ರಾಹ್ಮಣ ಬಂದು ನಿನಗೆ ಸಕಲ ವೂ ಹೇಳುತ್ತಾ ಇದ್ದಾನು, ಆ ಬ್ರಾಹ್ಮಣನು ಪೇಳ್ದ ವಾಕ್ಯವಂ ಕೇಳಿ ಯ ಥಾರ್ಥವೆಂದು ತಿಳಿಯಲು ನಿನ್ನ ಮನೋರಥವು ಸಿದ್ಧಿಯಾದೀತು, ಎಂದು ಬ್ರಾಹ್ಮಣನು ರಾಯಂಗೆ ಪೇಳಿ ಕಳುಹಿಸಿಕೊಂಡು ಕಾಶೀಪಟ್ಟಣದಲ್ಲಿಯೇ ಇದ್ದು ಅಲ್ಲಿ ಇದ್ದವರೆಲ್ಲರನ್ನೂ ತನ್ನ ವಶವರ್ತಿಗಳಂ ಮಾಡಿಕೊಂಡು ಕೃತಕೃತ್ಯನಾಗಿ ಸ್ಥಿರವಾಗಿ ನಾನಾರೂಪದಿಂದ ಇದ್ದನು, ಎಂದು ಕುಮಾರ ಸ್ವಾಮಿ ಅಗಸ್ತ್ಯಂಗೆ ಪೇಳಲು, ಅಗಸ್ತ್ಯನು ಕುಮಾರಸ್ವಾಮಿಗಿಂತೆಂದನು, ಎಲೈ ಕುಮಾರಸ್ವಾಮಿ! ಈಶ್ವರನು ತನ್ನ ಕುಮಾರನಾದ ವಿಘ್ನೇಶ್ವರನ ಸ್ತೋತ್ರವಂ ಮಾಡಿದನೆಂದು ಹೇಳುವರು, ಈಶ್ವರನು ಕುಮಾರನಾದ ವಿಘ್ನೇಶ್ವರನ ಸ್ತೋತ್ರವಂ ಮಾಡಿದ ಕ್ರಮವನ್ನು ಕಾಶೀಪಟ್ಟಣದಲ್ಲಿ ವಿಘ್ನೇಶ್ವರನು ಆವಾವ ರೂಪದಲ್ಲಿ ಇದ್ದನೆಂಬುದನ್ನು ಬುದ್ಧಿಗಲಿಸ ಬೇಕೆನಲು ಕುಮಾರಸ್ವಾಮಿ ಅಗಸ್ತ್ಯಂಗೆ ಇಂತೆಂದು ಪೇಳತೊಡಗಿದನೆಂದು ವ್ಯಾಸರು ತನಗೆ ನಿರೂಪಿಸಿದ ಅರ್ಥವಂ ಸೂತಪುರಾಣೀಕನು ಶೌನಕಾದಿ ಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ. * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರ ಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀ ಮಹಿಮಾರ್ಥದರ್ಪಣದಲ್ಲಿ ವಿಷ್ವೇಶ್ವರನ ಮಾಯಾಪ್ರಸಂಗವೆಂಬ ಐವತ್ತಾರನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * * *

ಐವತ್ತಾರನೆಯ ಅಧ್ಯಾಯ ಸಂಪೂರ್ಣ.

:o:

ಶ್ರೀ ವಿಶ್ವೇಶ್ವರಾಯನಮಃ.

ಐವತ್ತೇಳನೇ ಅಧ್ಯಾಯ.

ಸಪ್ತಾವರಣ ಗಣಪತಿಗಳ ಪ್ರಸಂಗ.

ಅನಂತರದಲ್ಲಿ ಕುಮಾರಸ್ವಾಮಿ ಇಂತೆಂದನು, ಕೇಳೈ ಅಗಸ್ತ್ಯನೇ ! ಮುಂದೆ ವಿಷ್ಣುವು ಬಂದು ದಿವೋದಾಸರಾಯನಂ ಪೊರಮಡಿಸಿದ ಬಳಿಕ ಪರಮೇಶ್ವರನು ಪಾರ್ವತೀ ಸಮೇತ ತಾನು ವಿಶಾಖ, ಮಹಾವಿಶಾಖಾ, ನಂದೀ, ಭೃಂಗೀ, ನೈಗಮೇಯ, ಏಕಾದಶರುದ್ರರೂ, ಅಷ್ಟವಸುಗಳೂ, ಸಪ್ತಋಷಿಗಳೂ, ದೇವೇಂದ್ರ ಮೊದಲಾದ ದಿಕ್ಪಾಲಕರೂ, ದೇವಋಷಿಗಳೂ, ಸನಕಾದಿಗಳೂ, ಬ್ರಹ್ಮಋಷಿಗಳೂ, ಸಕಲತೀರ್ಥಗಳೂ, ನದಿಗಳೂ, ಸಕಲ ಉಪನಿಷತ್ತುಗಳೂ, ಸಕಲ ಮಂತ್ರಾಧಿದೇವತೆಗಳೂ, ಸಹಾ ಅಪ್ಸರಸ್ತ್ರೀಯರೂ ನಾಟ್ಯವಾಡುತ್ತಿರಲು ಶಂಖ ದುಂದುಭಿ ಮೃದಂಗ ಧ್ವನಿಗಳಿಂದಲೂ ಬ್ರಾಹ್ಮಣರ ವೇದಘೋಷದಿಂ ದೇವತೆಗಳು ಜಯಜಯವೆಂಬ ಧ್ವನಿಗಳಿಂದ ದಶದಿಕ್ಕುಗಳ ಕಿವುಡುಪಡಿಸುತ್ತ ಸಿದ್ಧಚಾರಣರು ಸ್ತುತಿಸುತ್ತಿರಲು, ದೇವತಾಸ್ತ್ರೀಯರು ಮಂಗಳ ನಿಮಿತ್ತವಾಗಿ ಅರಳಮಳೆಗಳಂ ಕರೆಯುತ್ತಿರಲು ವಿದ್ಯಾಧರಸ್ತ್ರೀಯರು ಕಲ್ಪವೃಕ್ಷದ ಫಲಂಗಳಂ ಕಾಣಿಕೆಗೊಡುತ್ತಿರಲು,

ಯಕ್ಷಕಿನ್ನರರು ಸಂತೋಷದಿಂದ ಗಾನನಂ ಮಾಡುತ್ತಿರಲು, ಮೃಗಪಕ್ಷಿಗಳು ಶಕುನಗಳಂ ಪೇಳುತ್ತಿರಲು, ಕಿನ್ನರ ಸ್ತ್ರೀಯರು ವೀಣೆಗಳಂ ನುಡಿಸುತ್ತಿರಲು, ಮಯ ವಿಶ್ವಕರ್ಮ ಮೊದಲಾದವರು ಓಲೈಸಿ ಬರಲು, ನಾಗಸ್ತ್ರೀಯರು ಮಾಣಿಕ್ಯದ ಆರತಿಗಳಂ ಬೆಳಗುತ್ತಿರಲು, ರಮ್ಯವಾದ ಕಾಶೀ ಪಟ್ಟಣವಂ ಪ್ರವೇಶವಾಗುತ್ತಲೇ ಸಕಲರೂ ನೋಡುತ್ತಿರಲೂ ವೃಷಭನನಿಳಿದು ಮೊದಲು ವಿಘ್ನೇಶ್ವರನಂ ತಕ್ಕೈಸಿ ಮುಂಡಾಡಿ ಸಿರವನಾಘ್ರಾಣಿಸಿ ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು ಸಂತೋಷದಿಂ ಪರಮೇಶ್ವರನಿಂತೆಂದನು, ಎಲೈ ಮಗನೇ! ತನಗೆ ಮೊದಲಾಗಿ ಅಸಾಧ್ಯವಾದ ಈ ಕಾಶೀ ಪಟ್ಟಣಕ್ಕೆ ತಾನು ಬಂದುದೂ ನಿನ್ನ ಯತ್ನದಿಂದ, ಲೋಕದಲ್ಲಿ ತಂದೆಗೆ ಅಸಾಧ್ಯವಾದ ಕಾರ್ಯವೂ ಮಗನಿಗೆ ಸಾಧ್ಯವಾಯಿತು ಎಂಬುದು ನಿನ್ನಿಂದಾ ತನ್ನಲ್ಲಿ ದೃಷ್ಟಾಂತವಾಯಿತು. ಕೇಳಿರೈ ದೇವತೆಗಳಿರಾ! ಈ ವಿಘ್ನೇಶ್ವರನು ನಾನಾ ಉಪಾಯಂಗಳಿಂದ ತನ್ನಂ ಕಾಶೀ ಪಟ್ಟಣಕ್ಕೆ ಬರುವಹಾಗೆ ಮಾಡಿದನ. ತನ್ನ ಪೌರುಷದಿಂದ ನಾನು ಬಹುಕಾಲ ಪ್ರಾರ್ಥಿಸಿದ ಅಭಿಲಾಷೆಯಂ ನೀನು ಸಾಧಿಸಿದೆಯಾದಕಾರಣ ಸತ್ಪುತ್ರನೆಂದು ಸಂತೋಷಚಿತ್ತನಾಗಿ ಬ್ರಹ್ಮಾದಿಗಳಿಂದ ಸ್ತುತಿಸಿಕೊಂಬ ಪರಮೇಶ್ವರನು ಸಕಲ ಬುದ್ಧಿಗಳಿಗೆ ನಿಧಾನವಾದ ಗಣಪತಿಯನ್ನು ಸ್ತುತಿಸಿದನು, ಅದೆಂತೆನೆ ಎಲೈ ವಿಘ್ನರಾಜಾ! ನೀನು ಸಕಲ ನಿರ್ವಿಘ್ನಗಳಂ ಮಾಳ್ಪವರೊಳು ಮೊದಲಿನವನು, ಭಕ್ತರಾದವರಿಗೆ ಸಕಲ ವಿಘ್ನಂಗಳಂ ಪರಿಹರಿಸುವವನು, ವಿಘ್ನಸ್ವರೂಪನಲ್ಲದವನು ಮಹಾ ವಿಘ್ನಪರಿಹಾರಕನು, ಸಕಲ ಗಣಾಗ್ರಗಣ್ಯ, ಜಯಜಯ ಸಮಸ್ತ ಗುಣಂಗಳಂ ಪುರಸ್ಕರಿಸಲ್ಪಡುವ ಪಾದಾರವಿಂದ ಉಳ್ಳವನು, ಎಣಿಸಲಶಕ್ಯವಲ್ಲದ ಸದ್ಗುಣಂಗಳುಳ್ಳವನು, ನೀನೇ ಸರ್ವೇಶ್ವರನು ಸಕಲ ಬುದ್ಧಿಗಳಿಗೆ ನಿಧಾನವಾದವನು ಸಕಲ ಮಾಯಾಪ್ರಪಂಚಕನು ಸಕಲ ಕಾರ್ಯಗಳಲ್ಲಿಯೂ ಮೊದಲು ಪೂಜೆಗೊಂಬವನು ಸಕಲಮಂಗಳಕ್ಕೂ ಮಂಗಳಸ್ವರೂಪನಾದವನು ಸಕಲ ಮಂಗಳಪ್ರದನು ಅಮಂಗಳಪರಿಹಾರಕನು ಬ್ರಹ್ಮವಿಷ್ಣು ರುದ್ರರಿಂ ನಮಸ್ಕರಿಸಿಕೊಳ್ಳಲು ಯೋಗ್ಯನಾದವನು ಸಕಲ ಸತ್ಕರ್ಮಂಗಳ ಸಿದ್ಧಿಯಂ ಮಾಳ್ಪವನು ಮಹಾ ಸಿದ್ಧವಂದ್ಯನು ಸಿದ್ಧರಿಗೆ ಸಿದ್ಧಿಯನೀವವನು ಸಕಲ ಸಿದ್ಧಿ

ಗಳಿಗೂ ಸ್ಥಾನವಾದವನು ಅಷ್ಟಮಹಾ ಸಿದ್ಧಿಗಳಿಗೆ ಕಾರಣವಾದವನು ಸಕಲ ಗುಣಂಗಳಂ ನಿರ್ಮಿಸಿದವನು ಗುಣಾತೀತನು ಗಣಾಗ್ರಗಣ್ಯನು ಪುಣ್ಯಚರಿತ್ರನು ಕ್ಷೀರದಂತೆ ಬಿಳುಪಾದ ದಂತಗಳುಳ್ಳವನು ಬಾಲಂಗೆ ಬಾಲಕನು ಹಿರಿಯರಿಗೆ ಹಿರಿಯನು ಮಹಾ ಪರಾಕ್ರಮವುಳ್ಳವನು ಅನಂತಮಹಿಮನು ಸಕಲ ಪಾಪಭೇದಕನು ವಿಶೇಷವಾದ ದಂತಾಗ್ರದಿಂದ ಇರಿದು ದಿಗ್ಗಜಗಳಂ ಎತ್ತಲ್ಪಡುವ ಶಕ್ತಿಸಾಹಸವುಳ್ಳವನು ಸರ್ವಭೂಷಣನು ಇವು ಮೊದಲಾದ ಸಕಲ ಗುಣಂಗಳುಳ್ಳ ದಿವ್ಯಮೂರ್ತಿಯಾದ ಎಲೈ ಗಣಪತಿಯೇ ! ಆವರೊಬ್ಬರು ನಿನ್ನ ಪೂಜಿಸಿ ನಮಸ್ಕರಿಸುವರೋ ಅವರು ತನ್ನ ಭಕ್ತರು. ಅವರಿಗೆ ಸಕಲ ವಿಘ್ನಂಗಳಂ ಪರಿಹರಿಸಿ ಸ್ವರ್ಗಾಪವರ್ಗಂಗಳಂ ಕೊಡುವನು ನೀನು ಕೃಪೆಯಿಂದ ಆರನೋಡುವೆಯೋ ಅವರಿಗೆ ಲಕ್ಷ್ಮೀಕಟಾಕ್ಷ ಉಂಟಹದು. ಎಲೈ ಪಾರ್ವತೀ ಹೃದಯಕಮಲ ಸೂರ್ಯನಾದ ಗಣೇಶ್ವರನೇ ! ನಿನ್ನಂ ಸ್ತುತಿಸಿದವರು ಸ್ತೋತ್ರನಂ ಮಾಡಿಸಿಕೊಂಬರು ಗಣಪತಿಯಾದ ನಿನ್ನ ಪಾದಾರವಿಂದವಂ ನಿರಂತರವು ಆರು ಭಜಿಸುವರೋ ಅವರು ಧನಧಾನ್ಯ ಸಮೃದ್ಧರಾಗಿ ಪುತ್ರವಂತರಹರು. ನಿನ್ನ ಮಹಿಮೆಯಂ ದೇವೇಂದ್ರಾದಿಗಳು ಅರಿಯರು. ಉತ್ಪತ್ತಿಸ್ಥಿತಿಲಯಂಗಳಂ ಮಾಳ್ಪ ನಿನ್ನ ಸ್ತುತಿಸಲು ಸಮರ್ಥರಾರು ಸಕಲ ವಿಚಾರಂಗಳಲ್ಲಿಯೂ ಪ್ರಧಾನನಾದಕಾರಣ ಧುಂಡಿವಿನಾಯಕನೆಂದು ಪೆಸರಾಗಲಿ. ಎಲೈ ಧುಂಡಿರಾಜ ಗಣಪತಿಯೇ ! ನಿನಗೆ ನಮಸ್ಕರಿಸಿ ಮತ್ತೆನಗೆ ನಮಸ್ಕರಿಸಲು ಅವರಿಗೆ ಪುನರ್ಜನ್ಮವಿಲ್ಲದಂತೆ ತಾರಕಬ್ರಹ್ಮವನುಪದೇಶವಂ ಮಾಡುವೆನು ಆವನೊಬ್ಬನು ಮಣಿಕರ್ಣಿಕೆಯಲ್ಲಿ ಸ್ನಾನವಂ ಮಾಡಿ, ನಿತ್ಯಕರ್ಮಂಗಳಂ ಮುಗಿಸಿ ಭಸ್ಮೋದ್ಧೂಳನವಂ ಮಾಡಿಕೊಂಡು ಅನಂತರ ಜ್ಞಾನವಾಪೀತೀರ್ಥದಲ್ಲಿ ಸ್ನಾನವಂ ಮಾಡಿ, ನಿನ್ನನ್ನು ದಿವ್ಯಗಂಧಪುಷ್ಪಧೂಪದೀಪ ಲಡ್ಡಿಗೆ ಮೊದಲಾದ ಭಕ್ಷ್ಯಭೋಜ್ಯಗಳಿಂದ ನೈವೇದ್ಯವಂ ಮಾಡಿ ಪೂಜಿಸಿ, ಆ ಮೇಲೆ ಎನ್ನಪೂಜೆಯಂ ಮಾಡಲು ಅವರಿಗೆ ಸಕಲ ಸಿದ್ಧಿಯಹುದು, ಈ ಕಾಶಿಯಲ್ಲಿ ಆಚಾರಕರ್ಮಗಳಂ ನಡೆಯದೆ ನೀವು ಕರ್ಮಂಗಳಂ ನಡೆದವರಾದವರೂ ನಿನ್ನ ಸೇವೆಯಂ ಮಾಡುತ್ತಾ ಇರಲು ಅವರಿಗೆ ಸಕಲ ವಿಘ್ನಹರವಾಗಿ ಇಹಪರ ಸೌಖ್ಯವುಂಟು ಆರುನಿನಗೆ

ನಮಸ್ಕರಿಸುವರೋ ಅವರಿಗೆ ಸಕಲ ಲೋಕಂಗಳಲ್ಲಿಯೂ ಒಂದೂ ದುರ್ಲಭವಲ್ಲ. ಧುಂಡಿವಿನಾಯುಕ ಎಂದು ನಿನ್ನ ನಾಮವನ್ನೂ ನಿತ್ಯವೂ ಸ್ಮರಿಸಲು ಇಹದಲ್ಲಿ ಸಕಲ ಭೋಗಂಗಳನನುಭವಿಸಿ ಅಂತ್ಯದಲ್ಲಿ ಮೋಕ್ಷವನ್ನೈದುವರು. ದೂರದೇಶದಲ್ಲಿ ಇದ್ದವರಾದರೂ ನಿರಂತರವೂ ನಿನ್ನ ನಾಮಸ್ಮರಣೆಯಂ ಮಾಡಲು ಕಾಶಿಯ ವಾಸಫಲವುಂಟು. ನೀನು ಈ ಕಾಶೀಕ್ಷೇತ್ರಕ್ಕೆ ಬರುವವಿಘ್ನಂಗಳಂ ಪರಿಹರಿಸುವಿಕಾಗಿ ನಾನಾ ರೂಪಂಗಳಂ ತಾಳಿದೆ. ಅಂಥಾ ನಿನ್ನ ಸ್ವರೂಪಂಗಳಂ ಹೇಳುತ್ತಾ ಇದ್ದೇನೆ. ಮೊದಲು ನನ್ನ ಟೆಂಕಲಲ್ಲಿ ದರ್ಶ ಧುಂಡಿವಿನಾಯುಕನೆಂಬ ನಿನ್ನನನ್ನು ಚೌತಿಯು ಅಂಗಾರಕವಾರದಲ್ಲಿ ಭಕ್ತಿಯಿಂದ ಪೂಜೆಯಂ ಮಾಡಿದವರನ್ನು ಅವರನ್ನು ಗಣೇಶ್ವರರಂ ಮಾಳ್ಪೆನು. ಪ್ರತಿಚೌತಿಯಲ್ಲಿಯೂ ನಿನ್ನ ಪೂಜಿಸಿದವರ್ಗೆ ಎನ್ನಸ್ವರೂಪವಂ ಕೊಡುವೆನು. ಮಾಘಶುದ್ಧ ಚೌತಿಯಲ್ಲಿ ನಿನ್ನ ಪೂಜೆಯಂ ಮಾಡಿದವರು ಅವರನ್ನು ದೇವರ್ಕಳೂ ಪೂಜಿಸುವರು. ಆ ಚೌತಿಯ ದಿವಸ ನಿನ್ನ ಯಾತ್ರೆಯಂಮಾಡಿ ಎಳ್ಳುಂಡೆಗಳಂ ಮಾಡಿ, ಸಮರ್ಪಿಸಿ ಬ್ರಹ್ಮಚಾರಿಗಳಿಗೆ ದಾನವನ್ನೀಯಲು ಸರ್ವಕಾರ್ಯಸಿದ್ಧಿ. ಆ ದಿನದಲ್ಲಿ ನಿನ್ನ ಯಾತ್ರೆಯಂ ಮಾಡಿದವರನ್ನು ಸಕಲ ವಿಘ್ನಂಗಳು ಬಾಧಿಸವು. ಚೌತಿಯಲ್ಲಿ ನಿನ್ನ ಕುರಿತು ತಿಲಾಜ್ಯಂಗಳಂ ಹೋಮವಂ ಮಾಡಲು ಸರ್ವಕಾರ್ಯಸಿದ್ಧಿ. ನಿನ್ನ ಮುಂದೆ ಆಗಮ ಮಂತ್ರವಂ ಜಪಿಸಲು ಶೀಘ್ರದಿಂ ಸಕಲ ಕಾರ್ಯಸಿದ್ಧಿಯಹುದು. ಈಗ ತಾನು ಮಾಡಿದ ಸ್ತೋತ್ರದಿಂದ ನಿನ್ನ ಸ್ತುತಿಸಲು ಸಕಲ ವಿಘ್ನಹರ ಈ ಸ್ತೋತ್ರವಂ ನಿನ್ನ ಸಮೀಪದಲ್ಲಿ ಪಠಿಸಲು ಸಕಲ ಪಾಪಕ್ಷಯ, ಸರ್ವಸಿದ್ಧಿ ಧನ ಧಾನ್ಯ ಸಮೃದ್ಧಿ ಪುತ್ರಮಿತ್ರ ಕಳತ್ರಾದಿಗಳುಂಟಪರು. ಈ ಸ್ತೋತ್ರದ ಹೆಸರು ಸರ್ವಸಂಪತ್ಕರಸ್ತೋತ್ರವೆನಿಸುವದು. ಈ ಸ್ತೋತ್ರದ ಜಪದಿಂದ ಭುಕ್ತಿಮುಕ್ತಿಪ್ರದ. ಈ ಸ್ತೋತ್ರವಂ ಜಪಿಸಿ ಯಾತ್ರೆಯಂ ಪೋಗಲು ಸರ್ವಕಾರ್ಯಸಿದ್ಧಿ. ಎಲೈ ನೆರೆದಂಥಾ ಸಕಲ ದೇವರ್ಕಳಿರಾ! ಇನ್ನೊಂದು ವೃತ್ತಾಂತವಂ ಕೇಳಿ, ಈ ಕಾಶೀಕ್ಷೇತ್ರವಂ ರಕ್ಷಿಸಬೇಕಾಗಿ ಈ ಧುಂಡಿವಿನಾಯುಕನು ಈ ಕ್ಷೇತ್ರದಲ್ಲಿಯೇ ಆವಾವ ಸ್ವರೂಪಿನಿಂದ ಇದ್ದಾನೆಂದರೆ ಅಸಿ ಗಂಗಾ ಸಂಗಮದಲ್ಲಿ

ಸೂರ್ಯನು ಪೂಜಿಸಿದ ಅರ್ಕವಿನಾಯಕನೆಂದು ಹೆಸರಾಗಿ ಇಧಾನೆ. ಆತನಂ ಕಂಡು ಆದಿತ್ಯವಾರ ಪೂಜಿಸಲು ಸಕಲಬಾಧೆಹರ, ಈ ಕಾಶೀಕ್ಷೇತ್ರದ ದಕ್ಷಿಣ ದಲ್ಲಿಹ ದುರ್ಗೆಯಿಂ ಪೂಜಿಸಿ ದುರ್ಗಾ ಗಣೇಶ್ವರನಂ ಪೂಜಿಸಲು ಸಕಲ ವಿ ಘ್ನಹರವೂ, ಈ ಕ್ಷೇತ್ರದ ನೈರುತ್ಯದಲ್ಲಿ ಭೀಮಚಂಡಿಕಾ ದೇವಿಯರೂ ಪೂ ಜಿಸಿದ ಭೀಮಚಂಡಿಗಣಪತಿಯಂ ಪೂಜಿಸಲು ಸಕಲಭಯಹರವು, ಈ ಕ್ಷೇತ್ರ ದ ಪಶ್ಚಿಮದಲ್ಲಿ ಪೃಷ್ಟದೇಹ ವಿನಾಯಕನಂ ಪೂಜಿಸಲು ಸಕಲವಿಘ್ನಹರಾ ಈ ಕ್ಷೇತ್ರದ ವಾಯುವ್ಯದಲ್ಲಿ ವೀರೇಶ್ವರ ಪೂಜಿಸಿದಉದ್ದಂಡಗಣಪತಿಯಂ ಪೂಜಿಸಲು ಉದ್ದಂಡವಾದ ವಿಘ್ನಹರ ಈ ಕ್ಷೇತ್ರದ ಉತ್ತರದಲ್ಲಿ ಪಾಶಧರ ನಾದ ವರುಣ ಪೂಜಿಸಿದ ಪಾಶಪಾಣಿ ಗಣೇಶನಂ ಪೂಜಿಸಲು ಸಕಲ ವಿಘ್ನಂ ಗಳಂ ಕಟ್ಟಿಹಾಕುವನು. ಗಂಗಾಸಂಗಮದಲ್ಲಿ ಖರ್ವವಿನಾಯಕನಂ ಪೂ ಜಿಸಲು ಸಕಲ ವಿಘ್ನಹರ ಈ ಕ್ಷೇತ್ರಕ್ಕೆ ಮೂಡಲಲ್ಲಿರ್ದ ಅರ್ಕವಿನಾ ಯಕನ ಉತ್ತರದಲ್ಲಿ ಲಂಬೋದರ ಗಣಪತಿ ಇಹನು. ಆತನಂ ಪೂಜಿಸ ಲು ಸಮಸ್ತ ವಿಘ್ನಹರ. ಈ ಲಂಬೋದರ ಗಣಪತಿಯ ಮೂಡಲಲ್ಲಿರ್ದ ವಿಕಟದಂತ ವಿನಾಯಕನಂ ಪೂಜಿಸಲು ಕ್ಷುದ್ರೋಪದ್ರವಂಗಳು ಪರಿಹರ. ಭೀ ಮಚಂಡೀ ವಿನಾಯಕನ ಈಶಾನ್ಯದಲ್ಲಿ ಶಾಲಕಟ ಗಣಪತಿಯ ಪೂಜಿಸಲು ವಿಘ್ನಹರ, ಪೃಷ್ಟದೇಹ ವಿನಾಯಕಗೆ ಮೂಡಲಲ್ಲಿ ಇಹ ಕೂಷ್ಮಾಂಡಗ ಣಪತಿಯ ಪೂಜಿಸಲು ಸರ್ವೋಪದ್ರವ ಹರ. ಉದ್ದಂಡಗಣಪತಿಗೆ ಆಗ್ನೇ ಯದಲ್ಲಿಹ ದೇಹವೆಲ್ಲಾ ಪಾತಾಳದಲ್ಲಿ ಮುಂಡವೇ ಧರೆಯಲ್ಲಿ ಕಾಣಬಾ ಹಂಥಾ ಮುಂಡವಿನಾಯಕನಂ ಪೂಜಿಸಲು ಸಕಲ ಕಾರ್ಯಸಿದ್ಧಿ. ಪಾಶಪಾಣಿ ವಿನಾಯಕನ ದಕ್ಷಿಣದಲ್ಲಿಹ ಕಟಗಣಪತಿಯಂ ಪೂಜಿಸಲು ಮನೋರಥಸಿದ್ಧಿ ಗಣಾಧಿಪತ್ಯವುಂಟು. ಖರ್ವವಿನಾಯಕನ ಉತ್ತರದಲ್ಲಿಹ ರಾಜಪುತ್ರಗಣ ಪತಿಯ ಸೇವಿಸಲು ಭ್ರಷ್ಟರಾಜ್ಯ ಕೈಸೇರುವದು. ಗಂಗೆಗೆ ಪಡುವಲಲ್ಲಿಹ ರಾಜಪುತ್ರ ವಿನಾಯಕನಿಗೆ ಟೆಂಕಲಲ್ಲಿಹ ಪ್ರಣವಗಣಪತಿಯನಾರಾಧಿಸಲು ಸ್ವರ್ಗಸುಖವುಂಟು. ಈ ಎಂಟುಮಂದಿಯೂ ಎರಡನೆಯ ಆವರಣ ಗಣ ಪತಿಗಳೂ, ಶಾಲಕಟ ಗಣಪತಿಗೆ ಈಶಾನ್ಯದಲ್ಲಿ ಇಹ ಕಪಿ ಸಿಂಹ ಗಜ ಈ ಮೂರು ಮುಖವಂ ಧರಿಸಿದ ತ್ರಿಮುಖ ಗಣಪತಿಯಂ ಪೂಜಿಸಲು ಸರ್ವ

ಕಾರ್ಯ ಸಿದ್ಧಿ. ಕುಶ್ಮಾಂಡ ಗಣಪತಿಗೆ ಮೂಡಲಲ್ಲಿಹ ಪಂಚಮುಖ ಗಣಪತಿಯಂ ಪೂಜಿಸಲು ಸಕಲ ವಿಘ್ನಹರ. ಮುಂಡವಿನಾಯಕನ ಆಗ್ನೇಯದಲ್ಲಿ ಇಹ ಹೇರಂಬ ಗಣಪತಿಯಂ ಪೂಜಿಸಲು ಮನೋರಥ ಸಿದ್ಧಿ. ವಿಕಟಗಣಪತಿಗೆ ದಕ್ಷಿಣದಲ್ಲಿಹ ವಿಘ್ನರಾಜನಂ ಪೂಜಿಸಲು ಸರ್ವವಿಘ್ನಹರ. ರಾಜಪುತ್ರ ಗಣಪತಿಯ ನೈಋತ್ಯದಲ್ಲಿ ಇಹ ವರದಗಣಪತಿಯಂ ಪೂಜಿಸಲು ಕೇಳಿದವರವನೀವನು. ಈ ಎಂಟುಮಂದಿಯೂ ಮೂರನೆ ಆವರಣಗಣಪತಿಗಳು ಗಂಗೆ ಪಶ್ಚಿಮದಲ್ಲಿ ಇಹ ಪಿಸಿಗಿಲಾತೀರ್ಥದ ಸಮೀಪದ ಪ್ರಣವರಣ ಗಣಪತಿಗೆ ಉತ್ತರದಲ್ಲಿಹ ಅಭಯಪ್ರದ ಗಣಪತಿಯಂ ಪೂಜಿಸಲು ಸೃಷ್ಟಿಹರ. ಪಂಚಮುಖದ ಗಣಪತಿಗೆ ಉತ್ತರದಲ್ಲಿಹ ಕ್ಷಿಪ್ರಪ್ರಸಾದ ಗಣಪತಿಯಂ ಪೂಜಿಸಲು ಕ್ಷಿಪ್ರದಿಂದ ವರಪ್ರದಾ. ಹೇರಂಬ ಗಣಪತಿಯ ಆಗ್ನೇಯದಲ್ಲಿಹ ಚಿಂತಾಮಣಿ ವಿನಾಯಕನಂ ಪೂಜಿಸಲು ಚಿಂತಿತಾರ್ಥ ಸಿದ್ಧಿ. ವಿಘ್ನರಾಜ ಗಣಪತಿಗೆ ಟೆಂಕಲಲ್ಲಿ ಇಹ ದಂತಹಸ್ತಗಣಪತಿಯಂ ಪೂಜಿಸಲು ಇಷ್ಟಕಾರ್ಯಸಿದ್ಧಿ. ವರದಗಣಪತಿಯ ಉತ್ತರದಲ್ಲಿ ರಾಕ್ಷಸರೆ ಪರಿವಾರವಾಗಿ ಉಳ್ಳ ಚಂಡಿಗಣಪತಿಯ ಪೂಜಿಸಲು ಸಕಲ ರಾಕ್ಷಸಬಾಧೆ ನಿವೃತ್ತಿ, ಪಿಲಪಿಲಾ ತೀರ್ಥದ ಸಮೀಪದಲ್ಲಿ ಮೋದಕಪ್ರಿಯ ಗಣಪತಿಯ ದಕ್ಷಿಣದಲ್ಲಿಯಿಹ ಉದ್ದಂಡಶುಂಡಹೇರಂಭಗಣಪತಿಯಂ ಪೂಜಿಸಲು ಉದ್ದಂಡವಾದ ವಿಘ್ನಹರ, ಇವರು ನಾಲ್ಕನೆಯ ಆವರಣದ ಗಣಪತಿಗಳು ಅಭಯಪ್ರದ ಗಣಪತಿಗೆ ಉತ್ತರ ಗಂಗಾತೀರದಲ್ಲಿಹ ಸ್ಥೂಲದಂತ ಗಣಪತಿಯಂ ಪೂಜಿಸಲು ಘನವಾದ ಸಿದ್ಧಿಯಹುದು. ಸಿಂಹಮುಖಗಣಪತಿಯ ಉತ್ತರದಲ್ಲಿಯಿಹ ಕವಿಪ್ರಿಯ ಗಣಪತಿಯ ಪೂಜಿಸಲು ತೀರ್ಥದ್ರೋಹಿಗಳಾದವರ ಶಿಕ್ಷಿಸುವನು. ಕುಣಿಕಾಕ್ಷ ಗಣಪತಿಗೆ ಟೆಂಕಲಲ್ಲಿಹ ಚತುರ್ದಂತ ಗಣಪತಿಯಂ ಪೂಜಿಸಲು ಸರ್ವವಿಘ್ನಹರ. ಕ್ಷಿಪ್ರಪ್ರಸಾದ ಗಣಪತಿಗೆ ಮೂಡಲಲ್ಲಿಹ ಹಿಂದೂ ಮುಂದೂ ಎರಡು ಮುಖವಾಗಿಯಿಹ ದ್ವಿಮುಖ ಗಣಪತಿಯಂ ಪೂಜಿಸಲು ಸಕಲೈಶ್ವರ್ಯಸಿದ್ಧಿ. ಚಿಂತಾಮಣಿ ಗಣಪತಿಗೆ ಆಗ್ನೇಯದಲ್ಲಿಹ ಗಣಪತಿಯಂ ಜೇಷ್ಠಶುದ್ಧ ಚೌತಿಯಲ್ಲಿ ಪೂಜಿಸಲು ಸರ್ವಕಾರ್ಯಸಿದ್ಧಿ. ದಂತಹಸ್ತಗಣಪತಿಗೆ ದಕ್ಷಿಣದಲ್ಲಿಹ

ಗಜಮುಖಗಣಪತಿಯಂ ಪೂಜಿಸಲು ಲಕ್ಷ್ಮಿ ಒಲಿವಳು, ಪಿಚಂಡಿಲ ಗಣಪತಿಗೆ ದಕ್ಷಿಣದಲ್ಲಿಹ ಕಾಲವಿನಾಯಕನಂ ಪೂಜಿಸಲು ಅಕಾಲಮರಣ ಭಯಹರ, ಉದ್ದಂಡಶುಂಡ ಗಣಪತಿಗೆ ದಕ್ಷಿಣದಲ್ಲಿಹ ನಾಗೇಶ್ವರ ಗಣಪತಿಯ ಪೂಜೆಯಂ ಮಾಡಲು ಸರ್ಪಭಯವಿಲ್ಲ, ನಾಗಲೋಕಪ್ರಾಪ್ತಿ. ಇವರು ಐದನೇ ಆವರಣ ಗಣಪತಿಗಳು, ಮಣಿಕರ್ಣಿಕಾ ಗಣಪತಿಗೆ ಆಗ್ನೇಯದಲ್ಲಿ ವಿಘ್ನಹರ ಗಣಪತಿ ಇಹನು. ಆತನ ಪೂಜಿಸಲು ವಿಘ್ನಹರ. ಆ ಸಮೀಪದಲ್ಲಿ ಆಷಾಢಗಣಪತಿ ಇಹನು. ಆತನ ಪೂಜಿಸಲು ಕಾರ್ಯಸಿದ್ಧಿ. ಅದಕ್ಕೆ ತೆಂಕಲಲ್ಲಿ ಸೃಷ್ಟಿಗಣಪತಿ ಇಹನು. ಆತನ ಪೂಜಿಸಲು ಕಾರ್ಯಸಿದ್ಧಿ. ಸೃಷ್ಟಿ ಗಣಪತಿಗೆ ನೈರುತ್ಯದಲ್ಲಿ ಯಕ್ಷಗಣಪತಿ ಇಹನು. ಆತನ ಪೂಜೆಯಿಂದ ಸರ್ವವಿಘ್ನಹರ, ಅದಕ್ಕೆ ಪಡುವಲಲ್ಲಿ ಕರ್ಣಗಣಪತಿ ಇಹನು. ಆತನ ಆರಾಧನೆಯಿಂದ ತಪಸ್ಸಿದ್ಧಿಯಹುದು. ಅದಕ್ಕೆ ವಾಯುವ್ಯದಲ್ಲಿ ಚಿತ್ರಕಂಠ ಗಣಪತಿ ಇಹನು. ಆ ಗಣಪತಿಯ ಪೂಜಿಸಲು ನಾನಾಪ್ರಸವ ಪರಿಹರ. ಸ್ಥೂಲಜಂಘ ಗಣಪತಿಗೂ ಯಮತೀರ್ಥಕ್ಕೂ ಬಡಗಲಾಗಿ ಇಹ ಮಿತ್ರವಿನಾಯಕನಂ ಪೂಜಿಸಲು ಸಕಲವಿಘ್ನಹರ. ಅದಕ್ಕೆ ಈಶಾನ್ಯದಲ್ಲಿ ಮಂಗವಿನಾಯಕನಿಹನು. ಆತನ ಪೂಜೆಯಿಂದ ಸಕಲಮನೋರಥ ಸಿದ್ಧಿ. ಇವರು ಆರನೆಯ ಆವರಣ ಗಣಪತಿಗಳು. ಏಕರೂಪವಾದ ಮೋದಕಾದಿ ಪಂಚವಿನಾಯಕನೂ ಜ್ಞಾನಗಣಪತಿ, ಧ್ರುವಗಣಪತಿ, ಅವಿಮುಕ್ತ ಗಣಪತಿ, ಭಗೀರಥ ಗಣಪತಿ, ಹರಿಶ್ಚಂದ್ರ ಗಣಪತಿ, ಕಪರ್ದಿ ಗಣಪತಿ, ಇವರ ಪೂಜೆಯಂ ಪೂರ್ಣವಾಗಿ ಮಾಡಲು ಸಕಲ ಪಾಪಕ್ಷಯ. ಇವರು ಎಂಟುಮಂದಿಯೂ ಏಳನೆಯ ಆವರಣ ಗಣಪತಿಗಳು. ಈ ಏಳು ಆವರಣದಲ್ಲಿಯೂ ಈ ಕ್ಷೇತ್ರ ರಕ್ಷಣೆಗೋಸ್ಕರ ಐವತ್ತಾರು ಗಣಪತಿಗಳಿದ್ದರು. ಇವರಲ್ಲದೆ ಭಕ್ತರಿಂದ ಪ್ರತಿಷ್ಠಿತರಾದ ಅನೇಕ ಗಣಪತಿಗಳಿದ್ದಾರು, ಈ ಗಣಪತಿಗಳನ್ನು ಪ್ರತಿದಿನವೂ ಪೂಜೆ ನಮಸ್ಕಾರವಂ ಮಾಡಲು ಸಕಲ ಕಾರ್ಯಸಿದ್ಧಿ. ಸರ್ವ ಪಾಪಹರ, ದೂರದೇಶದಲ್ಲಿದ್ದು ಸ್ಮರಿಸಿದರೆ ಸಕಲ ಪಾಪಕ್ಷಯ, ಸಕಲ ವಿಘ್ನ ನಿವಾರಣ, ಸರ್ವಸಿದ್ಧಿಪ್ರದ, ಕಾಶೀವಾಸ ಫಲವುಂಟು. ಎಂದು ಪರಮೇಶ್ವರನು

ಢುಂಢಿವಿನಾಯಕನಂ ಸ್ತುತಿಸಿ ಸನ್ಮಾನವಂಮಾಡಿ ತನ್ನ ಸಿಂಹಾಸನದಲ್ಲಿ ಕುಳ್ಳಿರಿಸಿ ಬ್ರಹ್ಮಾದಿಗಳಿಂ ಪಟ್ಟಾಭಿಷೇಕವಂ ಮಾಡಿಸಿ ಸಕಲ ದೇವತೆಗಳಿಗೂ ತಾನೂ ವಿಷ್ಣುವೂ ಬ್ರಹ್ಮ ಮೊದಲಾಗಿ ಇದ್ದವರಿಗೆ ಸಕಲಾಭೀಷ್ಟವನಿತ್ತು ಸುಖದಲ್ಲಿ ಇರು, ಎಂದು ಪರಮೇಶ್ವರನು ವಿಘ್ನೇಶ್ವರಗೆ ವರವಂ ಕೊಟ್ಟು ತಾನು ಸಂತೋಷದಲ್ಲಿ ಇರ್ದನು. ಕೇಳೈ ಅಗಸ್ತ್ಯನೇ! ಈ ಅಧ್ಯಾಯವಂ ಕೇಳಲು ಸಕಲ ವಿಘ್ನಹರ ಮನೋರಥ ಸಿದ್ಧಿಯಹುದು. ಇಹದಲ್ಲಿ ಸುಖವನನುಭವಿಸಿ ಕಡೆಯಲ್ಲಿ ಪರಮೇಶ್ವರನಿಂದ ತಾರಕ ಬ್ರಹ್ಮೋಪದೇಶವಂ ಪಡೆದು ಮೋಕ್ಷವನೈದುವನು, ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವನ್ನು ವ್ಯಾಸರು ತನಗರುಹಿದರು, ಎಂದು ಸೂತನು ಶೌನಕಾದಿ ಋಷಿಗಳಿಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ಣಾಟಕ ಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀ ಮಹಿಮಾರ್ಥ ದರ್ಪಣದಲ್ಲಿ ಪಿಶಾಚ ವಿಮೋಚನ ತೀರ್ಥದ ಮಹಿಮೆಯೆಂಬ ಐವತ್ತೇಳನೇ ಅಧ್ಯಾಯ ನಿರೂಪಣಕ್ಕಂ ಮಂಗಳಮಹಾ * *

ಐವತ್ತೇಳನೆಯ ಅಧ್ಯಾಯ ಸಂಪೂರ್ಣ.

:o:

ಶ್ರೀ ವಿಶ್ವೇಶ್ವರಾಯನಮಃ.

ಐವತ್ತೆಂಟನೇ ಅಧ್ಯಾಯ.

ವಿಷ್ಣುವಿನ ಮಾಯಾಬೌದ್ಧಶಾಸ್ತ್ರ; ದಿವೋದಾಸರಾಯನಮುಕ್ತಿ.

ಅನಂತರದಲ್ಲಿ ಅಗಸ್ತ್ಯನು ಕುಮಾರಸ್ವಾಮಿಗಿಂತೆಂದನು. ಎಲೈ ಕುಮಾರಸ್ವಾಮೀ! ಕಾಶೀಕ್ಷೇತ್ರಕ್ಕೆ ವಿಘ್ನೇಶ್ವರನು ಹೋಗಿಬಾರದಿರಲು ಪರಮೇಶ್ವರ ಏನೆಂದನು. ವಿಷ್ಣು ಬಂದು ದಿವೋದಾಸರಾಯನ ಪೊರಮಡಿಸಿದ ವೃತ್ತಾಂತ ಹ್ಯಾಗೆ? ಅದಂ ತನಗೆ ವಿಸ್ತಾರವಾಗಿ ಬುದ್ಧಿಗಲಿಸಬೇಕೆನಲು ಕುಮಾರಸ್ವಾಮಿ

ಇಂತೆಂದನು ಕೇಳ್ಕೆ ಅಗಸ್ತ್ಯ! ವಿಘ್ನೇಶ್ವರನು ಕಾಶಿಯಲ್ಲಿ ನಿಂತು ಕಾಲವಿಳಂಬವಂ ಮಾಡುತ್ತಿರಲು ಪರಮೇಶ್ವರನು ವಿಷ್ಣುವಂ ನೋಡಿ ಇಂತೆಂದನು, ಎಲೈ ಪುಂಡರೀಕಾಕ್ಷನಾದ ಮಹಾ ವಿಷ್ಣುವೇ! ಶೀಘ್ರದಿಂ ನೀನು ಕಾಶೀ ಪಟ್ಟಣಕ್ಕೆ ಹೋಗಿ ನಿನ್ನ ಮಾಯೆಯಿಂದ ದಿವೋದಾಸರಾಯನಂ ಸಾಧಿಸು ಎನಲು, ವಿಷ್ಣುವಿಂತೆಂದನು, ಎಲೈ ಸ್ವಾಮೀ! ಸಕಲ ಪ್ರಾಣಿಗಳು ತಮ್ಮ ತಮ್ಮ ಬಲಕ್ಕೆ ತಕ್ಕ ಹಾಗೆ ಯತ್ನವಂ ಮಾಡಿಹರು. ಅಲ್ಲಿ ಫಲಪ್ರಾಪ್ತಿಗಳು ನಿಮ್ಮ ಆಧೀನ ಕರ್ಮಗಳು ಚೈತನ್ಯಪ್ರಳ್ಯವಲ್ಲ ಪ್ರಾಣಿಗಳು ಸ್ವತಂತ್ರವಲ್ಲ, ಕರ್ಮಸಾಕ್ಷಿಯಾಗಿ ನೀನೇ ಪ್ರೇರಕನು, ನೀನೇ ಎಂಬ ಬುದ್ಧಿಯು ನಿನ್ನ ಭಕ್ತರಿಗಲ್ಲದೆ ಮಿಕ್ಕಾದವರ್ಗೆ ತಿಳಿಯದು. ಕರ್ಮಂಗಳು ಅಧಿಕವಾಗಲೀ ಅಲ್ಪವಾಗಲೀ ಚನ್ನಾಗಿ ಮಾಡಲೀ ಮಾಡದೆ ಹೋಗಲೀ ಅದು ನಿಮ್ಮ ನಾಮಸ್ಮರಣೆಯಿಂದ ಫಲಿಸುವದು. ಅಸಾಧ್ಯಕಾರ್ಯವಾದರೂ ನಿಮಗೆ ಪ್ರದಕ್ಷಿಣನಮಸ್ಕಾರಂಗಳಂ ಮಾಡಿಹೋಗಲು ನಿಮ್ಮ ದಯದಿಂದ ಕಾರ್ಯಸಿದ್ಧಿಯಹುದು. ಅದುಕಾರಣ ನಾನು ಪೋಪಕಾರ್ಯವು ನಿಶ್ಚಯವಾಗಿ ಆದೀತು ಇದರಲ್ಲಿ ಸಂದೇಹವಿಲ್ಲವೆಂದು ಬಿನ್ನೈಸಿ ಪರಮೇಶ್ವರನಿಗೆ ಪ್ರದಕ್ಷಿಣೆ ನಮಸ್ಕಾರಂಗಳಂ ಮಾಡಿ ಶ್ರೀ ಮಹಾ ವಿಷ್ಣುವು ಲಕ್ಷ್ಮೀಸಮೇತನಾಗಿ ಗರುಡಾರೂಢನಾಗಿ ನಾನು ಪುಂಡರೀಕಾಕ್ಷನಾದುದಕ್ಕೆ ಸಫಲವಿಂದಾಯಿತೆಂದು ಸಂತೋಷದಿಂದ ಕಾಶೀ ಪಟ್ಟಣಕ್ಕೆ ಬಂದು ಗರುಡನ ಇಳಿದು ಗಂಗಾವರಣಾ ಸಂಗಮದಲ್ಲಿ ಹಸ್ತಪಾದಂಗಳಂ ತೊಳೆದುಕೊಂಡು, ಸಚೇಲಸ್ನಾನವಂಮಾಡಿದನು. ಅದು ಮೊದಲಾಗಿ ಆ ತೀರ್ಥವು ಪಾದೋದಕ ತೀರ್ಥವೆಂದು ಪ್ರಸಿದ್ಧವಾಯಿತು. ಆ ಪಾದೋದಕ ತೀರ್ಥದಲ್ಲಿ ಸ್ನಾನವಂ ಮಾಡಲು ಸಪ್ತಜನ್ಮಪಾಪಹರ, ಅಲ್ಲಿ ಶ್ರಾದ್ಧಾದಿಗಳಂ ಮಾಡಲು ಇಪ್ಪತ್ತೊಂದು ಮಾತಾಪಿತೃಗಳಿಗೂ ಗಂಗೆಯಲ್ಲಿ ಮಾಡಿದ ಶ್ರಾದ್ಧಾದಿಗಳಿಂದಧಿಕ ತೃಪ್ತಿಯಹುದು ಆ ತೀರ್ಥಸ್ನಾನದಿಂದ ಪುನರ್ಜನ್ಮವಿಲ್ಲ, ಆ ತೀರ್ಥವನ್ನೇ ಸಾಲಿಗ್ರಾಮ ಚಕ್ರಾಣಿಕೆಗಳಿಗೆ ಶಂಖದಲ್ಲಿ ಅಭಿಷೇಕವಂ ಮಾಡಿ ಆ ತೀರ್ಥಪಾನವಂ ಮಾಡಲು ದೇವತ್ವವಹುದು, ಆ ಪಾದೋದಕ ತೀರ್ಥಪಾನವಂ ಮಾಡದೆ ಇದ್ದವರ ಜನ್ಮ ವ್ಯರ್ಥ, ಈ ಮರ್ಯಾದೆಯಲ್ಲಿ ಮಹಾ ಲಕ್ಷ್ಮೀಸಮೇತನಾಗಿ ಸರ್ವವ್ಯಾಪಕ

ನಾದ ವಿಷ್ಣುವು ತನ್ನ ಮೂರ್ತಿಯಂ ಅಲ್ಲಿ ಪ್ರತಿಷ್ಠೆಯಂ ಮಾಡಿ, ತಾನು ಮತ್ತೊಂದು ವಿಗ್ರಹವಂ ಧರಿಸಿ ತನ್ನ ಮೊದಲು ಮೂರ್ತಿಯಂ ತಾನೇ ಪೂಜಿಸಿದನು. ಆ ಮೂರ್ತಿಯು ಆದಿಕೇಶವಮೂರ್ತಿ ಎನಿಸಿತು. ಆ ಮೂರ್ತಿಯಂ ಪೂಜಿಸಿದವರಿಗೆ ವೈಕುಂಠ ವಾಸವಹುದು, ಆ ಸ್ಥಳವು ಶ್ವೇತದ್ವೀಪವೆನಿಸುವದು. ಆದಿಕೇಶವನ ಪೂಜಿಸಿದವರು ಶ್ವೇತದ್ವೀಪದಲ್ಲಿ ಸುಖದಲ್ಲಿ ಇಹರು, ಆ ಸ್ವಾಮಿಯ ಮುಂದೆ ಕ್ಷೀರಾಬ್ಧಿಯೆಂಬ ತೀರ್ಥವಿದ್ದೀತು, ಅಲ್ಲಿ ಸ್ನಾನಾದಿಗಳಂ ಮಾಡಿದವರು ಅವರೂ ಕ್ಷೀರಸಮುದ್ರದಲ್ಲಿ ಸುಖದಿಂದಿಹರು. ಅಲ್ಲಿ ಶ್ರಾದ್ಧಾದಿಗಳಂ ಮಾಡಿ ಗೋದಾನವಂ ಮಾಡಲು ಅವರ ಪಿತೃಗಳು ಕ್ಷೀರಸಮುದ್ರದಲ್ಲಿ ವಾಸವಾಗಿಹರು. ಆಸಮೀಪದಲ್ಲಿ ಶಂಖತೀರ್ಥವಿಹುದು, ಆ ಶಂಖತೀರ್ಥದಲ್ಲಿ ಸ್ನಾನವಂ ಮಾಡಲು ವಿಷ್ಣು ಲೋಕವುಂಟು. ಆ ಸಮೀಪದಲ್ಲಿ ಲಕ್ಷ್ಮೀ ತೀರ್ಥವಿರುವದು, ಅದರಲ್ಲಿ ಸ್ನಾನವಂ ಮಾಡಿ ಮುತ್ತೈದೇರಿಗೆ ದುಕೂಲವಸ್ತ್ರಾಭರಣಂಗಳಂ ದಾನವೀಯಲು, ಜನ್ಮ ಜನ್ಮಂಗಳಲ್ಲಿಯೂ ಐಶ್ವರ್ಯವಂತರಾಗಿ ಇರುವರು. ಆಸಮೀಪದಲ್ಲಿರ್ದ ಶ್ರೀ ಮಹಾ ಲಕ್ಷ್ಮಿಯನ್ನು ಶ್ರಾವಣ ಬಹುಳ ಅಷ್ಟಮಿಯಲ್ಲಿ ಪೂಜೆಯ ಮಾಡಲು ಸರ್ವಸಂಪತ್ಸಮೃದ್ಧಿಯಾಗಿ ಆರೋಗ್ಯವಂತರಹರು. ಸಾಂಗವಾಗಿ ವರಲಕ್ಷ್ಮೀವ್ರತವಂ ಮಾಡಿದ ಫಲವಹುದು. ಆ ಸಮೀಪದ ತಾರ್ಕ್ಷ್ಯಕೇಶವನ ಪೂಜಿಸಲು, ಸಂಸಾರವೆಂಬ ಸಮುದ್ರವಂ ದಾಂಟಿಸುವರು ಆ ಸಮೀಪದಲ್ಲಿ ನಾರದಋುಷಿಗೆ ಪರಮೇಶ್ವರನು ತಾರಕಬ್ರಹ್ಮೋಪದೇಶವನಿತ್ತ ಸ್ಥಳದಲ್ಲಿ ನಾರದ ತೀರ್ಥವಿಹುದು, ಅಲ್ಲಿ ಸ್ನಾನವಂ ಮಾಡಿ ನಾರದ ಕೇಶವನಂ ಪೂಜಿಸಲು ಜ್ಞಾನಸಿದ್ಧಿಯಹುದು, ಪುನರ್ಜನ್ಮವಿಲ್ಲ. ಆ ಸಮೀಪದ ಪ್ರಹ್ಲಾದ ತೀರ್ಥದಲ್ಲಿ ಸ್ನಾನಾದಿಗಳಂ ಮಾಡಿ ಅಲ್ಲಿ ಪ್ರಹ್ಲಾದ ಕೇಶವನಂ ಪೂಜಿಸಲು ವಿಷ್ಣುಲೋಕವಹುದು. ಆ ಸಮೀಪದ ಅಂಬರೀಷ ತೀರ್ಥದಲ್ಲಿ ಸ್ನಾನವಂ ಮಾಡಿ ಅಲ್ಲಿ ಅಂಬರೀಷ ಕೇಶವನಂ ಪೂಜಿಸಲು ಸಕಲ ಪಾಪಹರ. ಆ ಸಮೀಪದ ದತ್ತಾತ್ರೇಯ ತೀರ್ಥದಲ್ಲಿ ಸ್ನಾನವಂ ಮಾಡಿ ದತ್ತಾತ್ರೇಯ ಪೂಜಿಸಿದ ಆದಿಗದಾಧರನಂ ಪೂಜಿಸಲು ಜ್ಞಾನಯೋಗಸಿದ್ಧಿ. ಆ ಸಮೀಪದ ಭೃಗುತೀರ್ಥದಲ್ಲಿ ಸ್ನಾನವಂ ಮಾಡಿ

ಭೃಗುಕೇಶವನಂ ಪೂಜಿಸಲು, ಮಹಾ ಜ್ಞಾನಿಯಹನು. ಆ ಸಮೀಪದ ವಾಮನ ತೀರ್ಥದಲ್ಲಿ ಸ್ನಾನವಂ ಮಾಡಿ ವಾಮನಕೇಶವನಂ ಪೂಜಿಸಲು, ವಿಷ್ಣು ಸಾರೂಪ್ಯವಹುದು. ಆ ಸಮೀಪದ ಯಜ್ಞವರಾಹ ತೀರ್ಥದಲ್ಲಿ ಸ್ನಾನವಂ ಮಾಡಿ ಯಜ್ಞವರಾಹ ಕೇಶವನಂ ಪೂಜಿಸಲು, ರಾಜಸೂಯಯಾಗವ ಮಾಡಿದ ಫಲ. ಆ ಸಮೀಪದ ವಿದಾರಣ ನರಸಿಂಹ್ಮ ತೀರ್ಥದಲ್ಲಿ ಸ್ನಾನವಂ ಮಾಡಿ, ವಿದಾರಣ ನರಸಿಹ್ಮನಂ ಪೂಜಿಸಲು, ಮೂರು ಜನ್ಮದ ಪಾಪಹರ. ಆ ಸಮೀಪದ ಗೋಪಿ ಗೋವಿಂದ ತೀರ್ಥದಲ್ಲಿ ಸ್ನಾನವಂ ಮಾಡಿ ಗೋಪಿ ಗೋವಿಂದನಂ ಪೂಜಿಸಲು ವಿಷ್ಣು ಪ್ರೀತನಹನು. ಆ ಸಮೀಪದ ಲಕ್ಷ್ಮೀನರಸಿಹ್ಮ ತೀರ್ಥದಲ್ಲಿ ಸ್ನಾನವಂ ಮಾಡಿ ಲಕ್ಷ್ಮೀನರಸಿಹ್ಮನಂ ಪೂಜಿಸಲು, ಲಕ್ಷ್ಮೀ ಕೃಪೆಯಿಂದ ಭಾಗ್ಯವಂತನಹನು. ಆ ಸಮೀಪದ ಶೇಷತೀರ್ಥದಲ್ಲಿ ಸ್ನಾನವಂ ಮಾಡಿ ಶೇಷಶಯನ ಕೇಶವನಂ ಪೂಜಿಸಲು, ಸಕಲ ಶತ್ರುಹರ. ಆ ಸಮೀಪದ ಹಯಗ್ರೀವ ತೀರ್ಥದಲ್ಲಿ ಸ್ನಾನವಂ ಮಾಡಿ ಹಯಗ್ರೀವ ಮೂರ್ತಿಯಂ ಪೂಜಿಸಲು, ಮಹಾ ಪುಣ್ಯ. ಅಲ್ಲಿ ಪಿತೃಗಳಿಗೆ ಶ್ರಾದ್ಧಾದಿಗಳಂ ಮಾಡಲು ಸಕಲ ಪಿತೃಗಳಿಗೂ ಮುಕ್ತಿಯಹುದು, ಕೇಳೈ ಅಗಸ್ತ್ಯ! ಪ್ರಸಂಗದಿಂದ ಕೆಲವು ತೀರ್ಥವಂ ಪೇಳಿದೆನು, ಕೆಲವು ದೇವತೆಗಳಂ ಪೇಳಿದೆನು, ಇನ್ನು ಆ ಕಾಶೀಕ್ಷೇತ್ರದಲ್ಲಿ ಎಳ್ಳುಹಾಕುವರೇ ತೆರಪಿಲ್ಲದ ಹಾಗೆ ಅನೇಕ ತೀರ್ಥಂಗಳೂ, ಅನೇಕ ಲಿಂಗಗಳೂ, ಅನೇಕವಿಷ್ಣುಮೂರ್ತಿಗಳೂ,ಅನೇಕ ನಾನಾ ದೇವತಾ ಮೂರ್ತಿಗಳು ಇದ್ದಾವು. ಕೇಳೈ ಅಗಸ್ತ್ಯ! ಅನಂತರದಲ್ಲಿ ಶಂಖಚಕ್ರಗದಾ ಪದ್ಮಪಾಣಿಯಾಗಿ ವೈಕುಂಠಪತಿಯಾದ ಶ್ರೀ ಮಹಾ ವಿಷ್ಣುವು ಪರಮೇಶ್ವರನ ಕಾರ್ಯಾರ್ಥವಾಗಿ ತನ್ನ ನಿಜಮೂರ್ತಿಯಂ ಆದಿಕೇಶವನಲ್ಲಿರಿಸಿ ಒಂದು ಅಂಶದಿಂ ಪೊರಮಟ್ಟು ಕಾಶೀಕ್ಷೇತ್ರದಲ್ಲಿ ಸಂಚರಿಸುತಿರ್ದನು, ಎನಲು ಅಗಸ್ತ್ಯನಿಂತೆಂದನು ಎಲೈ ಕುಮಾರಸ್ವಾಮಿ! ಸರ್ವ ವ್ಯಾಪಕನಾದ ನಾರಾಯಣನು ತನ್ನ ನಿಜರೂಪದಿಂ ಸಂಚರಿಸದೆ ಮತ್ತೊಂದು ರೂಪವಂ ಧರಿಸುವ ಕಾರಣವಂ ಬುದ್ಧಿಗಲಿಸಿ ಎನಲು, ಕುಮಾರಸ್ವಾಮಿ ಇಂತೆಂದನು ಎಲೈ ಅಗಸ್ತ್ಯನೇ! ಕೇಳು, ಆ ಮಹಾ ವಿಷ್ಣುವು ಮತ್ತೊಂದು ರೂಪವಂ ಧರಿಸುವದಕ್ಕೆ ಕಾರಣವುಂಟು. ಆ ವೃತ್ತಾಂತವನ್ನು ಪೇಳೇ

ನು ಅದೂ ಅಲ್ಲದೆ ವಿವೇಕಿಯಾದವನು ಬಹು ಪುಣ್ಯರಾಶಿಗಳಿಂ ದೊರಕಿದ ಕಾಶೀಕ್ಷೇತ್ರವಂ ತ್ಯಜಿಸಬಾರದು. ಪೂರ್ವದಲ್ಲಿ ಪರಮೇಶ್ವರನು ಮಂದ ರಾದ್ರಿಗೆ ಪೋಗುವಾಗ ತನ್ನ ನಿಜಶಕ್ತಿಯಂ ಅವಿಮುಕ್ತೇಶ್ವರಲಿಂಗದಲ್ಲಿ ಪ್ರತಿಷ್ಠೆಯಂ ಮಾಡಿ, ಬಂದು ಅಂಶದಿಂದ ಮಂದರಾದ್ರಿಗೆ ಹೊರಟು ಹೋ ದಕಾರಣ ವಿಷ್ಣುವು ಗಂಗಾತೀರದಲ್ಲಿ ಆದಿಕೇಶವನಲ್ಲಿ ತನ್ನ ನಿಜಮೂರ್ತಿ ಯಂ ನಿಲ್ಲಿಸಿ ಮತ್ತೊಂದು ರೂಪದಿಂ ಸಂಚಾರವಮಾಡಿದನು. ಅದೆಂತೆಂದರೆ :- ಕಾಶೀಕ್ಷೇತ್ರಕ್ಕೆ ಉತ್ತರದಿಕ್ಕಿನಲ್ಲಿ ತನ್ನ ನಿವಾಸಕ್ಕೋಸ್ಕರ ಧರ್ಮಕ್ಷೇತ್ರ ವೆಂಬ ಒಂದು ಕ್ಷೇತ್ರವಂ ಕಲ್ಪಿಸಿಕೊಂಡು, ಪ್ರಶಸ್ತವಾದ ಮೃದುವಚನ ವುಳ್ಳಂಥಾ ಧರ್ಮಶಾಸ್ತ್ರಜ್ಞಾನದ ನಿರ್ಮಲಜ್ಞಾನವುಳ್ಳಂಥಾ ಶುಭರೂಪ ವುಳ್ಳ ವ್ಯಕ್ತವಾದ ಮೃದುವಾದ ವಾಕ್ಯಂಗಳುಳ್ಳಂಥಾ ಉಚ್ಚಾಟನ ಆ ಕರ್ಷಣ, ವಶೀಕರಣ, ಸ್ತಂಭನ, ಮೋಹನ, ವಿದ್ವೇಷಣವೆಂಬಷಟ್ಪ್ರಯೋ ಗಂಗಳಂ ಬಲ್ಲಂಥಾ ಶಾಸ್ತ್ರವ್ಯಾಖ್ಯಾನದಿಂನ ನಿರ್ಮಲಜ್ಞಾನವುಳ್ಳಂಥಾ ಪಕ್ಷಿ ಗಳಿಗೆ ಮೊದಲಾಗಿಯೂ ರೋಮಾಂಚ ಪುಟ್ಟುವಂಥಾ ತನ್ನ ವಾಕ್ಯಾಮೃತ ದಿಂದ ಪರವಶವಾಗಿ ಬಂದು ಸೇವಿಸಲ್ಪಡುವ ಮೃಗಪಕ್ಷಿಗಳುಳ್ಳಂಥ ಬಹಳ ಆನಂದವುಳ್ಳ ಸ್ಥಿರಚಿತ್ತವುಳ್ಳ ತನ್ನಿಂತಾನೇ ಉದುರುವ ಪುಷ್ಪಗಳಂ ಪೂಜೆ ಯಂ ಮಾಡಿಸಿಕೊಂಬ ಪುಣ್ಯಕೀರ್ತಿಯೆಂಬ ಸದಾಚಾರಿಯಾಗಿ ರಾಷ್ಟ್ರದ ಪಾಪ ಲವಲೇಶಮಾತ್ರವಿಲ್ಲದ ದಿವೋದಾಸರಾಯಂಗೆ ಅಧರ್ಮವಂ ಹೆಚ್ಚಿಸಿ ವಿಮುಖನಂ ಮಾಡಬೇಕೆಂದು ಮನದಲ್ಲಿ ನಿಶ್ಚಯಿಸಿ ತನ್ನ ಶಿಷ್ಯನಾದ ವಿನ ಯಕೀರ್ತಿ ಎಂಬ ಹೆಸರುಳ್ಳ ಗರುಡನಂ ಪ್ರತಿರೂಪವಂ ಮಾಡಿಕೊಂಡು, ಆತಂಗೆ ಉಪದೇಶವ ಹೇಳುವ ನೆವದಿಂದ ಅಲ್ಲಿ ಇರ್ದ ಪ್ರಜೆಗಳಿಗೆ ತ್ರಿಪುರ ದವರ ಮೋಸಗೊಳಿಸುವ ವೇದವಿರುದ್ಧವಾದ ಬೌದ್ಧಧರ್ಮಂಗಳಂ ಬೋಧಿ ಸತೊಡಗಿದನು. ಎಲೈ ವಿನಯಕೀರ್ತಿಯೇ! ಕೇಳು, ಈ ಸಂಸಾರವು ಅನಾದಿಯಾಗಿ ಬಂದಂಥಾದ್ದು ಇದಕ್ಕೆ ಬಬ್ಬ ಕರ್ತವಿಲ್ಲ. ಅನಾದಿಯಾಗಿ ಬಂದಂಥಾದ್ದು ತಾನೇ ತೋರಿ ತೋರಿ ತಾನೇ ಅಡಗುತ್ತಿಹುದು. ಬ್ರಹ್ಮಮೊ ದಲಾಗಿ ತೃಣಕಡೆಯಾದ ಪ್ರಾಣಿಗಳೆಲ್ಲಾ ಆನಂದಸ್ವರೂಪಿಗಳು ಈಶ್ವರ ನೆಂದು ಮತ್ತೊಬ್ಬನಿಲ್ಲ. ಬ್ರಹ್ಮ ವಿಷ್ಣು ರುದ್ರರೆಂಬವರು ಆ ಹೆಸರಿನ

ಪ್ರಾಣಿಗಳಲ್ಲದೆ ಕರ್ತರಲ್ಲ. ನಮ್ಮಂಥಾವರ ದೇಹಗಳು ಹ್ಯಾಗೆ ತೋರಿ ಅಡಗುತ್ತಿಹುದೋ ಹಾಗೆ ಬ್ರಹ್ಮಮೊದಲಾಗಿ ಗುಂಗುರು ಕಡೆಯಾದ ಪ್ರಾಣಿಗಳು ತಮ್ಮ ತಮ್ಮ ಕಾಲಂಗಳಲ್ಲಿ ಪುಟ್ಟಿ ಲಯವಾಗುತ್ತಿಹರು, ಚನ್ನಾಗಿ ವಿಚಾರಿಸಿ ನೋಡಲು ಈ ಶರೀರವಲ್ಲಿ ವಿಶೇಷವೇನು ಇಪ್ಪೀತು. ಸಮಸ್ತ ಜೀವರಿಗೆಯೂ ಆಹಾರ ಸ್ತ್ರೀಸಂಗ ನಿದ್ರೆ ಸರ್ವತ್ರಸಮಾನ. ಸಕಲ ಪ್ರಾಣಿಗಳೂ ಕೂಡ ಆಹಾರಗಳಿಂದ ತಮ್ಮ ತಮ್ಮ ಜಾತಿಗಳಿಗೆ ತಕ್ಕಹಾಗೆ ತೃಪ್ತಿಪಡುವರಲ್ಲದೆ ಅಧಿಕವಿಲ್ಲ. ನಾವು ಬಾಯಾರಿದರೆ ಹ್ಯಾಗೆ ಉದಕವಂ ತೆಕ್ಕೊಂಬೆವ್ರೋ ಇತರ ಪ್ರಾಣಿಗಳಿಗೂ ಹಾಗೆ ಇವನಲ್ಪನು ಇವನಧಿಕನು ಎಂಬ ಬೇಧವಿಲ್ಲ. ರೂಪುಲಾವಣ್ಯಗಳುಳ್ಳ ಸಾವಿರಾರು ಮಂದಿ ಸ್ತ್ರೀಯರಿದ್ದರೂ ಭೋಗಕಾಲಕ್ಕೆ ಒಬ್ಬ ಸ್ತ್ರೀಯಲ್ಲದೆ ಒಂದೇ ಕಾಲವಲ್ಲಿ ಬಹು ಮಂದಿ ಸ್ತ್ರೀಯರ ಅನುಭವಿಸಲು ಶಕ್ಯವಲ್ಲ. ಒಬ್ಬ ಸ್ತ್ರೀ ಇದ್ದವನಿಗೆ ಭೋಗಕಾಲಕ್ಕೆ ಒಬ್ಬಳೇ ಸರಿ. ಅನೇಕ ಕುದುರೆಗಳಿದ್ದರೂ ಒಂದೇ ಇದ್ದರೂ ಏರುವ ಕಾಲಕ್ಕೆ ಒಂದೇ ಅಲ್ಲದೆ ಮತ್ತೆ ಶಕ್ಯವಲ್ಲ. ಪಟ್ಟೆಮಂಚ ಸುಪ್ಪತ್ತಿಗೆಯಲ್ಲಿ ಮಲಗುವನಿಗೂ ಭೂಮಿಯಲ್ಲಿ ಮಲಗುವನಿಗೂ ನಿದ್ರೆ ಸುಖಸಮಾನ, ದೇಹಧಾರಿಗಳಾದ ನಮ್ಮಂಥಾವರಿಗೆ ಹ್ಯಾಗೆ ಮರಣಭಯವುಂಟೋ ಹಾಗೆ ಬ್ರಹ್ಮಮೊದಲಾದ ಕ್ರಿಮಿಕಡೆಯಾದವರಿಗೂ ಮರಣಭಯ ಸಮಾನ. ವಿಚಾರಿಸಿ ನೋಡಲು ಸಕಲ ಪ್ರಾಣಿಗಳಿಗೂ ಸಮಾನವಾಗಿ ಇರುವದು. ಇದನರಿದು ಬಲ್ಲವರು ಪ್ರಾಣಿಹಿಂಸೆಯಂ ಮಾಡಲಾಗದು ಪ್ರಾಣಿಗಳ ಮೇಲಣ ದಯಕ್ಕೆ ಸಮಾನವಾದ ಧರ್ಮವಿಲ್ಲ. ಪ್ರಾಣಿಗಳ ಮೇಲಣ ದಯವುಂಟಾಗಿ ಒಬ್ಬನನ್ನಾದರೂ ರಕ್ಷಿಸಿದರೆ ಮೂರುಲೋಕವಂ ರಕ್ಷಿಸಿದ ಫಲವುಂಟು. ಒಬ್ಬನ ಕೊಂದರೆ ಮೂರು ಲೋಕವಂ ಕೊಂದ ಪಾಪವಹುದು, ಅದುಕಾರಣದಿಂ ಜೀವಹಿಂಸೆಯಂ ಮಾಡಲಾಗದು. ಅಹಿಂಸಾಪರಮೋಧರ್ಮನೆಂದು ಸಕಲ ಶ್ರುತಿಸ್ಮೃತಿಗಳು ಪೇಳುತ್ತಾ ಇದ್ದಾವು. ಅದರಿಂದ ಹಿಂಸಕನು ನರಕವನ್ನೈದುವನು. ಅಹಿಂಸಕನು ಸ್ವರ್ಗವನ್ನೈದುವನು ಅಲ್ಪ ಫಲಂಗಳಂ ಕೊಡುವ ಅನೇಕವಾದ ದಾನಂಗಳುಂಟು. ಅದರೊಳು ನಾಲ್ಕು ದಾನಂಗಳು ಅಧಿಕವಾದವು. ಅದುಹ್ಯಾವೆಂದರೆ:- ಅಭಯದಾನ,ವ್ಯಾಧಿ

ಸ್ಥರಿಗೆ ಔಷಧ ಕೊಡಿಸಿ ಗುಣಮಾಡಿಸುವನು, ಅನ್ನದಾನ, ವಿದ್ಯಾದಾನ, ಈ ನಾಲ್ಕು ಧರ್ಮಕ್ಕೆ ಸಮಾನವಾದ ಧರ್ಮವಿಲ್ಲ. ವಿವೇಕಿಯಾದವನು ಅರ್ಥವಂ ಗಳಿಸಿ ದ್ವಾದಶಮಂಡಲಂಗಳಂ ಪೂಜಿಸಬೇಕು. ಆ ದ್ವಾದಶಮಂಡಲಂಗಳು ಆವಾವುದೆಂದರೆ- ಘ್ರಾಣ ರಸನ ಚಕ್ಷು ಶ್ರೋತ್ರ ತ್ವಕ್ಕು ವಾಕ್ಕು ಪಾಣೀ ಪಾದ ವಾಯು ಉಪಸ್ಥ ಮನಸ್ಸು ಬುದ್ಧಿ ಈ ಹನ್ನೆರಡು ಸ್ಥಾನದ ಸುಖವೇ ಸ್ವರ್ಗ ಇದರ ದುಃಖವೇ ನರಕವು ಇವಲ್ಲದೆ ಬೇರೆ ಸ್ವರ್ಗ ನರಕಗಳಿಲ್ಲ, ವಿಷಯವಾಸನಾಸಹಿತವಾಗಿ ಈ ಸುಖಗಳನನುಭವಿಸಿ ದೇಹವಂ ಬಿಡುವದೇ ಮೋಕ್ಷ ಬೇರೆ ಮೋಕ್ಷವಿಲ್ಲ. ವಿಷಯವಾಸನಾಸಹಿತವಾಗಿ ಕ್ಲೇಶನಿವೃತ್ತಿಯಾದಬಳಿಕ ವಿಜ್ಞಾನ ಪ್ರಟ್ಟಿಸುವದೆ ಮೋಕ್ಷ ಪ್ರಾಣಿಹಿಂಸೆ ಮಾಡಬಾರದೆಂಬುದೇ ವೇದವಾಕ್ಯ ಯಜ್ಞಾದಿಗಳಲ್ಲಿ ಪ್ರಾಣಿಹಿಂಸೆ ಮಾಡಬಹುದೆಂಬುದು ಮೋಸಗೊಳಿಸುವ ವಾಕ್ಯ. ಲೋಕದಲ್ಲಿ ಉಪಾದಿಗಳಿಗೋಸ್ಕರ ವೃಕ್ಷಂಗಳಂ ಛೇದಿಸಿ ಪಶುಗಳಂ ಕೊಂದು, ರಕ್ತದಿಂದ ಭೂಮಿಯ ಕೆಸರುಮಾಡಿ ಅಗ್ನಿಯಲ್ಲಿ ಎಳ್ಳುಕಾಷ್ಠ ತುಪ್ಪಗಳಂ ಸುಟ್ಟು ಸ್ವರ್ಗವಂ ಪಡದೆಯೆಂಬುದು ಮಹಾ ಆಶ್ಚರ್ಯವೆಂಬ ಇವು ಮೊದಲಾದ ಧರ್ಮಂಗಳಂ ಪುಣ್ಯಕೀರ್ತಿಯೆಂಬ ವೃಹಸ್ಪತ್ಯಾಚಾರ್ಯನು ನಿರೂಪಿಸುತ್ತಾ ಇರಲು ಪಟ್ಟಣದ ಸ್ತ್ರೀಯರಿಗೂ ಪ್ರಜೆಗಳಿಗೂ ನೆರದು ಪರದೇಶಿಯ ವಾಕ್ಯವಂ ಕೇಳಿ ಸಕಲರೂ ಯಜ್ಞಾದಿಸತ್ಕರ್ಮ ಜಾತಿಧರ್ಮಗಳಂ ಬಿಟ್ಟು ನಡೆಯತೊಡಗಿದರು. ಅನಂತರ ಮತ್ತೊಂದು ಸ್ಥಳದಲ್ಲಿ ಲಕ್ಷ್ಮೀದೇವಿಯವರು ವಿಜ್ಞಾನಕೌಮುದಿಯೆಂಬ ಹೆಸರುಳ್ಳ ವಿರಕ್ತೆಯಾಗಿ ಪಟ್ಟಣದ ಸ್ತ್ರೀಯರ ಪಾತಿವ್ರತ್ಯ ಭಂಗಮಪ್ಪಂತೆ ಕೆಲವು ಸ್ತ್ರೀಧರ್ಮಂಗಳಂ ಬೋಧಿಸತೊಡಗಿದರು. ಅದೆಂತೆಂದರೆ ಎಲೈ ಸ್ತ್ರೀಯರಿರಾ! ಬ್ರಹ್ಮವು ಆನಂದಸ್ವರೂಪವು ಆನಂದಮಯವೆಂದು ಹೇಳುವರು. ವೇದಾರ್ಥಗಳಂ ಬ್ರಹ್ಮವು ನಾನಾ ರೂಪವೆಂಬುವದೇ ಸರಿ. ಎಷ್ಟು ಕಾಲ ಶರೀರಪುಷ್ಟಿಯಾಗಿ ಇಂದ್ರಿಯಂಗಳು ದೃಢವಾಗಿ ವೃದ್ಧಾಪ್ಯವಿಲ್ಲದೆ ಇಹವೋ ಅದೇ ಪರಬ್ರಹ್ಮ. ಪ್ರಾಯವಾಗಿ ಇದ್ದಾಗಲೇ ಶರೀರಸೌಖ್ಯವನ್ನೇ ಸಾಧಿಸಬೇಕು ಸುಖವಂ ಬಯಸುವರು ಯಾಚಕಗೆ ತಮ್ಮ ಶರೀರವಾದರೂ ಕೊಡಬೇಕು ಯಾಚಕರ ಮನ

ಸಂತೋಷಬಡಿಸದೆ ಇದ್ದವರು ಭೂಮಿಗೆ ಭಾರವಾದ ಹಾಗೆ ಸಮುದ್ರ ಗಿರಿ ವೃಕ್ಷಂಗಳು ಭಾರವಲ್ಲ, ಈ ಶರೀರವು ಶೀಘ್ರದಿಂದ ಅಳಿದು ಹೋಗಲುಳ್ಳದು ಘಳಿಸಿದ ಧನ ನಿಲ್ಲದು ಅದು ಕಾರಣ ಬಲ್ಲವರು ತಮ್ಮ ಶರೀರಕ್ಕೆ ಸೌಖ್ಯವನ್ನೇ ಮಾಡಿಕೊಳ್ಳಬೇಕು, ನಾಯಿ ನರಿ ವಾಯಸಗಳ ಪಾಲಾಗಿಹೋಗುವ ಅನಿತ್ಯ ಶರೀರವನ್ನು ನಿತ್ಯವೆಂದು ವೇದಗಳು ಹೇಳುತ್ತಿವೆ ಜಾತಿಭೇದವಿಲ್ಲ, ಮನುಷ್ಯರೊಳಗೆ ಉತ್ತಮನಾರೂ ವಾಮವರ್ತನೆಗಳಿಲ್ಲ, ಇದಕ್ಕೆ ಬ್ರಹ್ಮಸೃಷ್ಟಿಯೇ ನಿದರ್ಶನ ಅದೆಂತೆಂದರೆ ಬ್ರಹ್ಮನಿಗೆ ಮರೀಚಿಯೂ ಮಗನು ದಕ್ಷನೂ ಮಗನು ಮರೀಚಿಯ ಮಗನಾದ ಕಶ್ಯಪನೂ ತಮ್ಮ ಚಿಕ್ಕಪ್ಪನಾದ ದಕ್ಷನ ಕುಮಾರತಿಯರೂ ವಾವೆಯಲ್ಲಿ ಒಡಹುಟ್ಟಿದವರಲ್ಲದೆ ಆ ದಕ್ಷನ ಮಕ್ಕಳು ಹದಿಮೂರು ಮಂದಿ ಸ್ತ್ರೀಯರನ್ನು ಮದುವೆಯಾಗಲಿಲ್ಲವೇ? ಹೀಗೆ ಅಲ್ಪಬುದ್ಧಿಯುಳ್ಳ ಜನರೂ ಅವರ ಧರ್ಮಂಗಳೂ ಜರಗುತ್ತಾ ಇದ್ದಾವು, ಅದೂ ಅಲ್ಲದೆ ಬ್ರಹ್ಮನ ಮುಖ ತೋಳು ತೊಡೆ ಪಾದವಲ್ಲಿ ಪುಟ್ಟಿದ ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರೆಂಬ ನಾಲ್ಕು ಜಾತಿಯವರೂ ಒಂದು ಶರೀರದಲ್ಲೇ ಪುಟ್ಟಿಯಿದ್ದು ಅವರಲ್ಲೇ ಭೇದವ ಕಲ್ಪಿಸುತ್ತಾ ಇದ್ದರೂ, ವಿಚಾರಿಸಿನೋಡಲು ಭೇದವಿಲ್ಲ ಅದು ಕಾರಣ ಜಾತಿವಾಮೆಗಳೆಂಬ ಭೇದವನೋಡಲಾಗದು. ಇಂತೆಂದು ಜ್ಞಾನಕೌಮುದೀ ಎಂಬ ಪೆಸರುಳ್ಳ ಲಕ್ಷ್ಮೀದೇವಿ ಬೋಧಿಸುತ್ತಾ ಇರಲು ಇದಂ ಕೇಳಿ ಪಟ್ಟಣದಲ್ಲಿ ಇದ್ದ ಪತಿವ್ರತಾ ಸ್ತ್ರೀಯರು ತಮ್ಮ ತಮ್ಮ ಪತಿಸೇವೆಗಳಂ ಬಿಟ್ಟು ಮಣಿಮಂತ್ರೌಷಧಿಗಳಿಂದ ಪ್ರಿಯದ ಪುರುಷರನ್ನು ತಮ್ಮ ವಶಮಾಡಿಕೊಂಡು ಇರತೊಡಗಿದರು. ಮತ್ತು ಲಕ್ಷ್ಮೀದೇವಿ ಬಂಜೆಯರಿಗೆ ಮಕ್ಕಳ ಸಿತ್ತು ದರಿದ್ರಸ್ತ್ರೀಯರುಗಳಿಗೆ ಐಶ್ವರ್ಯವಂ ಕೊಟ್ಟಳು, ಕೆಲವರಿಗೆ ಮೋಹನತಿಲಕ ಕೆಲವರಿಗೆ ಯಂತ್ರ ಕೆಲವರಿಗೆ ಹೋಮ ಕೆಲವರಿಗೆ ವಶೀಕರಣಾ ಕೆಲವರಿಗೆ ಅಂಜನಾ ಕೆಲವರಿಗೆ ಮಂತ್ರ ಇವುಗಳಂ ಕೊಟ್ಟಳು. ಈ ರೀತಿಯಲ್ಲಿ ಪಟ್ಟಣದಲ್ಲಿ ಇದ್ದ ರಾಜಸ್ತ್ರೀಯರೂ ಸಕಲ ಪುರುಷರೂ ಇವರೆಲ್ಲರು ವೇಷಧಾರಿಯಾದ ನಾರಾಯಣ ಲಕ್ಷ್ಮೀದೇವಿಯರಿಂದ ಮೋಹಿತರಾಗಿ ಸದ್ಧರ್ಮಗಳಂ ಬಿಟ್ಟು ಪತಿವ್ರತಾಧರ್ಮಗಳಂ ಬಿಟ್ಟು ಅಧರ್ಮದಿಂ ನಡೆಯುತೊಡಗಿದರು. ಅದರಿಂದ

ಅಧರ್ಮಹೆಚ್ಚಿ ಉತ್ಪತ್ತಿ ಬಿತ್ತದೆ ತನ್ನಿಂದತಾನೆ ಬೆಳೆಯುವ ಭೂಮಿಯು ಸಕಲ ಸಸ್ಯಾದಿಗಳಲ್ಲವೂ ಬೆಳೆಯದೆ ಉತ್ಪತ್ತಿ ಇಲ್ಲದೆ ... ಆಗಲಿ ರಾಜ್ಯ ವೆಲ್ಲಾ ಬರಹಾದು ಅನಾವೃಷ್ಟಿ ತೋರಿ ಪ್ರಜೆಗಳು ಕಂಗೆಡಲು ರಾಜ್ಯದ ಅಧರ್ಮ ಅನಾವೃಷ್ಟಿತೋರಿಸಲು, ದಿವೋದಾಸರಾಯನಿಂಗೆ ರಾಜ್ಯ ಸಂರಕ್ಷಣೆ ಯಲ್ಲಿ ಅಸಹ್ಯತೋರಿ ಸಕಲ ದೇವತಾಸ್ವರೂಪವಂ ತಾಳುವ ಸಾಮರ್ಥ್ಯ ವೂ ಮಾಂದ್ಯವಾಯಿತು, ತನಗೆ ವೃದ್ಧ ಬ್ರಹ್ಮಚಾರಿ ಹೇಳಿದ ಉಪದೇಶವಂ ಮಾಡುವ ಬ್ರಾಹ್ಮಣನು ಬರಲಿಲ್ಲವೆಂದು ದಿನಗಳ ಎಣಿಕೆಗಳ ಮಾಡುತ್ತಾ ಇರಲು ಹದಿನೆಂಟನೇ ದಿನ ಮಧ್ಯಾಹ್ನ ಸಮಯದಲ್ಲಿ ಧರ್ಮಕೀರ್ತಿಯೆಂಬ ವೃದ್ಧಾಚಾರ್ಯನು ವಿಷ್ಣುವೇ ಬ್ರಾಹ್ಮಣ ವೇಷಗಳಂ ತಾಳಿ ಸೂರವರು ನಾಲ್ವರು ಬ್ರಹ್ಮಚಾರಿಗಳು ಮುಂದೆ ಕೊಂಡಾಡುತ್ತಾ ಬರಲು ವಿಗ್ರಹಂಧರಿಸಿ ದ ಯುಷ್ಣಪುರುಷನಂತೆ ಅರಮನೆಯ ಬಾಗಿಲೊಳಹೊಕ್ಕು ಬರುತ್ತಾ ಇರಲು, ಆ ದಿವೋದಾಸರಾಯನು ದೂರದಲ್ಲಿಯೇ ಕಂಡು ಈ ಬ್ರಾಹ್ಮಣನು ತನಗೆ ಉಪದೇಶವಂಮಾಡುವದಕ್ಕೆ ಸರಿಯಾದ ಯೋಗ್ಯನೂ ಎಂದು ಎದುರ್ಗೊಂಡು ನಮಸ್ಕಾರವಂ ಮಾಡಿ ಆಶೀರ್ವಾದವಂತಕ್ಕೊಂಡು ಅಂತಃಪುರಕ್ಕೆ ಒಡೆ ಗೊಂಡು ಪೋಗಿ ಸಿಹ್ಮಾಸನದಲ್ಲಿ ಕುಳ್ಳಿರಿಸಿ ಗಂಧಧೂಪಕರ್ಪೂರಾದಿಗಳಿಂ ಪೂಜೆ ಯಂ ಮಾಡಿ ಮಾರ್ಗವಂ ನಡೆದು ಬಂದ ಬಳಲಿಕೆ ಪರಿಹಾರವಾಗುವಂತೆ ತಾಂಬೂಲ ಕೈರುಗಳಿಗೆ ಪುಂಪಾದ ವಸ್ತುವನಿತ್ತು ನಿತ್ಯಕರ್ಮಾನಂತರ ದಲ್ಲಿ ಮೃಷ್ಟಾನ್ನ ಭೋಜನದಿಂ ತೃಪ್ತಿಪಡಿಸಿ ಸುಖದಿಂ ಕುಳ್ಳಿರ್ದ ಬ್ರಾಹ್ಮ ಣನ ಪಾದಂಗಳನ್ನು ಒತ್ತುತ್ತಾ ರಾಯನು ಇಂತೆಂದು ಬಿನ್ನೈಸಿದನು, ಎಲೈ ಬ್ರಾಹ್ಮಣೋತ್ತಮನೇ! ನಾನು ರಾಜ್ಯವನ್ನಾಳಿ ಬಳಲಿದೆನು ಬಳಲಿಕೆ ಇಲ್ಲ ದಿದ್ದರೂ ವೈರಾಗ್ಯ ತೋರುತ್ತಾ ಇದೆ, ಏನುಮಾಡಲಿ? ಎನಗೆ ಸುಖವೆಂತ ಹುದೂ ಆಯುಸ್ಸು ಪರಿಪೂರ್ಣವಾಗಿ ಬಂತು ತನ್ನಿಂದಾ ರಾಜ್ಯವು ಸುಖಪ ಟ್ಟಿತು, ಪರಮೇಶ್ವರನಂತೆ ದುಷ್ಟಂಟಕ ಉಳ್ಳ ಐಶ್ವರ್ಯವಂತನಾದೆನು, ತನ್ನ ಯೋಗಬಲ ಸಾಮರ್ಥ್ಯದಿಂದ ಅಗ್ನಿ ಮೊದಲಾದ ದೇವತೆಗಳ ರೂಪ ವಂ ಧರಿಸಿದೆನು ಮಕ್ಕಳಂ ಸಾಕುವಂತೆ ಪ್ರಜೆಗಳ ರಕ್ಷಿಸಿದನು, ತಾನು ಮಾಡಿದ ತಪೋಬಲದಿಂದ ಗಳಿಸಿ ಸಕಲ ದೇವತೆಗಳ ತ್ರಾಣೀಕರಿಸಿ ಇದ್ದ

ದ್ದು ಇನು ಒಂದೆ ಅಪರಾಧವಲ್ಲದೆ ಮತ್ತೊಂದು ಅಪರಾಧವಿಲ್ಲ, ತಮ್ಮ ರಾಜ್ಯದ ಪ್ರಜೆಗಳೆಲ್ಲರೂ ಧರ್ಮಿಷ್ಠರಲ್ಲದೆ ಅಧರ್ಮಿಷ್ಠರಲ್ಲ, ಎಲ್ಲರು ವಿದ್ಯಾವಂತರೂ ಸನ್ಮಾರ್ಗಿಗಳೂ, ಇಷ್ಟು ಬ್ರಹ್ಮಕಲ್ಪ ಪರ್ಯಂತವಿದ್ದರೂ ಅರವ ಹುಟ್ಟನ್ನೇ ಅರವ ಹಾಗೆ ಮೊದಲು ಭೋಗಿಸಿದ ಭೋಗಂಗಳನ್ನೇ ಅನುಭವಿಸುವ ಕಾರಣದಿಂದ ತಾನು ಇದ್ದು ಫಲವೇನು? ಮತ್ತೇನು ಎಂದರೆ ಮುಂದೆ ತನಗೆ ಪುನರ್ಜನ್ಮವಿಲ್ಲದಹಾಗೆ ಉಪದೇಶವಂ ಮಾಡಿ ರಕ್ಷಿಸ ಬೇಕು ನೀವು ಬುದ್ಧಿಗಲಿಸಿದ ಹಾಗೆ ನಡೆಸುವೆನು ನಿಮ್ಮ ದರ್ಶನದಿಂದ ನನ್ನ ಅಭೀಷ್ಟಸಿದ್ಧಿಯಾಯಿತು ಎನ್ನ ಸಕಲರಿಗೂ ಸಕಲ ಮನೋರಥಂಗಳು ಸಿದ್ಧಿ ಯಾಯಿತು ಆದರೆ ದೇವತೆಗಳ ಕೂಡೆ ವಿರೋಧಿಸಿ ಕೆಡದವರಾರೂ? ಅದೆಂ ತೆಂದರೆ ಪೂರ್ವದಲ್ಲಿ ಭೂಮಿಯು ರಥವಂಮಾಡಿ ಚಂದ್ರಸೂರ್ಯಾದಿಗಳ ಗಾಲಿಗಳಂ ಮಾಡಿ ದೇವತೆಗಳಂ ಕುದುರೆಯುಂ ಮಾಡಿ ಹೇಮಮಯವಾದ ಮೇರುಪರ್ವತವಂ ಬಿಲ್ಲಂ ಮಾಡಿ ವಾಸುಕಿಯುಂ ಹೊರಜೆಯುಂ ಮಾಡಿ ಬ್ರಹ್ಮನಂ ಸಾರಥಿಯುಂ ಮಾಡಿ ವಿಷ್ಣುವಂ ಬಾಣವಂ ಮಾಡಿ ಪ್ರಾಣವಂ ಮುಳ್ಳುಗೋಲಂ ಮಾಡಿ ನವಗ್ರಹಂಗಳಂ ಕೀಲಗಳಂ ಮಾಡಿ ಆಕಾ ಶವಂ ತಳಗದ್ದಿಗೆಯುಂ ಮಾಡಿ ಮಹಾ ವೇರುವಂ ಧ್ವಜಸ್ತಂಭವಂ ಮಾಡಿ ಕಲ್ಪವೃಕ್ಷವಂ ಪಠನು ಮಾಡಿ ಮುಖ್ಯಾದ ಸರ್ಪಗಳಂ ಬಿಗಿನೇಣುಗಳಂ ಮಾಡಿ ಇಪ್ಪತ್ತುನಾಲ್ಕು ಛಂದಸ್ಸು ಷಡಂಗಗಳಂ ಪೀಠವಂ ಮಾಡಿ ಕಾಲಾ ಗ್ನಿರುದ್ರನಂ ಬಾಣದ ಅಲಗು ಮಾಡಿ ವಾಯುವಂ ಬಾಣದ ಹಿಲಕಂ ಮಾಡಿ ಶಿವಭಕ್ತರಿಂದ ತ್ರಿಪುರವಂ ಒಂದು ಕ್ಷಣಮಾತ್ರದಿಂ ಪರಮೇಶ್ವರನ ಕೈಯಿಂ ದ ದಗ್ಧವಂ ಮಾಡಿಸಿದರಲ್ಲದೆ ಅನೇಕ ಹಿರಿಯನಾದ ಬಹು ಬಲ್ಲವನಾದ ವಿಷ್ಣುವು ಬಲಿಚಕ್ರೇಶ್ವರನ ಭೂಮಿಯಂ ದಾನವ ಬೇಡಿ ತ್ರಿವಿಕ್ರಮನಾಗಿ ಪಾತಾಳಕ್ಕೆ ತುಳಿಯದಿದ್ದಿಲ್ಲವೆ? ಸದ್ವರ್ತನೆಯುಳ್ಳ ವೃತ್ರಾಸುರರ ದೇವೇಂದ್ರ ಕೊಂದುದಿಲ್ಲವೆ? ಯುದ್ಧದಲ್ಲಿ ತನ್ನ ಹಸ್ತದ ದರ್ಪಯಿಂದ ವಿಷ್ಣುವಂ ಜಯಿ ಸಿದಂಥಾ ದಧೀಚಿಯುಂ ಒಂದು ಎಲುಪಿಗೋಸ್ಕರ ದೇವತೆಗಳು ಕೊಂದುದಿ ಲ್ಲವೆ? ಸತ್ಪುರುಷನಾದ ಬಾಣಾಸುರನತೋಳ್ಗಳಂ ವಿಷ್ಣುವು ಛೇದಿಸಲಿಲ್ಲವೆ? ಅದುಕಾರಣ ದೇವತೆಗಳ ವಿರುದ್ಧ ಬಳ್ಳೇನಲ್ಲ ಸನ್ಮಾರ್ಗವರ್ತಿಯಾದ ತನಗೆ

ದೇವತೆಗಳಿಂದಲೂ ಭಯವಿಲ್ಲ ಅವರಿಗೆ ದೇವತ್ವ ಬಂದದ್ದು ಯಜ್ಞಾದಿಗ
ಳಿಂದಲ್ಲವೆ ಯಜ್ಞ ದಾನ ತಪಸ್ಸುಗಳಿಂದ ಅಧಿಕವಾದ ತನಿಗೆ ಅವರು ಎಷ್ಟುಂಟು
ಈಗ ನಿಮ್ಮ ದರ್ಶನದಿಂದ ವಿರಕ್ತನಾಗಿ ಜ್ಞಾನಿಯಾದ ನನಿಗೆ ಅವರ ತನ್ನ
ಹೆಚ್ಚು ಕುಂದು ಏನುಯಿದ್ದೀತು, ಸರ್ವಕರ್ಮಬಂಧ ವಿಮೋಚನವಂ ಮಾಡು
ವ ಜ್ಞಾನೋಪದೇಶವಂ ಮಾಡಿ ರಕ್ಷಿಸಬೇಕು, ಮೊದಲು ಒಬ್ಬ ವೃದ್ಧ
ಬ್ರಹ್ಮಚಾರಿ ಬಂದು ತನ್ನ ಕೂಡೆ ಹೇಳಿದನು ಹದಿನೆಂಟು ದಿನಕ್ಕೆ ಒಬ್ಬ ವೃದ್ಧ
ಬ್ರಾಹ್ಮಣನು ಬಂದು ಜ್ಞಾನೋಪದೇಶವಂ ಮಾಡಿಯಾನೆಂದು ನಿರೂಪಿಸಿ
ಇದ್ದಾನು, ಆಮುಕಾರಣ ನೀವು ನನಿಗೆ ಜ್ಞಾನೋಪದೇಶವಂ ಮಾಡಿ ರಕ್ಷಿಸ
ಬೇಕೆನಲು ಕಪಟಬ್ರಾಹ್ಮಣನಾದ ವಿಷ್ಣುವು ರಾಯನ ವಾಕ್ಯವಂ ಕೇಳಿ
ಮುಗುಳು ನಗೆಯುಂ ನಕ್ಕು ಇಂತೆಂದನು ಎಲೈ ರಾಯಾ! ನೀನು ನುಡಿದ
ವಾಕ್ಯವು ಮಹಾ ಚನ್ನಾಯಿತು ನಾನು ಮಾಡತಕ್ಕ ಜ್ಞಾನೋಪದೇಶಮಂ
ಮೊದಲೆ ನೀನೆ ನಿಶ್ಚಯಿಸಿ ಹೇಳುತ್ತಾ ಇದ್ದೀಯೆ ನೀನು ಮೊದಲೆ ಜ್ಞಾನಿ
ಯಾಗಿದ್ದು ಎನ್ನ ಬಹುಮಾನವಂ ಮಾಡಿ ಕೇಳುತ್ತಾ ಇದ್ದೀಯೆ, ಬಹು
ತಪಸ್ಸೆಂಬ ಉದಕದಿಂದ ಇಂದ್ರಿಯ ದೋಷಂಗಳೆಂಬ ಪಂಕಮಂ ತೊಳೆದೆ
ನೆಂದೆಯಲ್ಲಾ ಅದು ಸತ್ಯವೇ ಸರಿ. ನಿನಿಗೆ ಮುಂದೆ ಆಗುವ ಶ್ರೆಯಸ್ಸನ್ನೂ
ಭೂತ ಭವಿಷ್ಯದ್ವರ್ತಮಾನಂಗಳಲ್ಲಿ ನಿನಿಗೆ ಸಮಾನವಾದ ರಾಯರಂ ಕಾಣೆ
ನು, ಈಗ ಮೊದಲಾಗಿಯೂ ಪ್ರೀತಿಯಿಲ್ಲ ಹೀಗೆ ಚನ್ನಾಗಿ ರಾಜ್ಯವನ್ನಾ
ಳುತ್ತಾ ಇದ್ದು ರಾಜ್ಯವಂ ಬಿಟ್ಟು ಮುಕ್ತಿಯ ನೈದಿಯೇನು ಎಂಬುದು ಮಹಾ
ಹೆಚ್ಚು, ದೇವತೆಗಳು ನಿನಿಗೆ ವಿರೋಧಿಸಿದಾಗಲೂ ನೀನು ದೇವತೆಗಳಿಗೆ ಮಾ
ಡಿದತಪ್ಪಿಲ್ಲ ನಿನ್ನ ರಾಜ್ಯದಲ್ಲಿ ಅಧರ್ಮವಿಲ್ಲ ಸಕಲ ಪ್ರಜೆಗಳೂ ವರ್ಣಾಶ್ರ
ಮ ಧರ್ಮಂಗಳಂ ತಪ್ಪದ ಹಾಗೆ ನಡಿಸುತ್ತಾ ಇರಲು ಸಕಲ ದೇವತೆಗಳೂ
ಸಂತೋಷಪಡುತ್ತಿದ್ದಾರು. ಮತ್ತೇನೆಂದರೆ ಕಾಶೀ ಪಟ್ಟಣದಲ್ಲಿ ಸುಖದಲ್ಲಿ
ಇರ್ದ ವಿಶ್ವಪತಿಯನ್ನು ದೂರವಾಗಿ ಹೊರಡಿಸಿದ್ದು ಇದು ಒಂದೇ ದೋಷ
ವೆಂದು ನನ್ನ ಮನಸ್ಸಿಗೆ ತೋರುತ್ತಾ ಇದ್ದೀತು ಅದು ಘನವಾದ ಅಪರಾಧ
ವಹುದು ಈ ಅಪರಾಧ ದೋಷಕ್ಕೋಸ್ಕರ ಒಂದು ಪುಣ್ಯದ ಉಪಾಯಮಂ
ಪೇಳುವೆನು ತನ್ನ ಶರೀರದಲ್ಲಿ ಎಷ್ಟು ರೋಮಂಗಳದ್ದಾವೋ ಅಷ್ಟು ದ್ರೋ

ಹ ಅಪರಾಧಂಗಳಂ ಮಾಡಿ ಇದ್ದರೂ ಒಂದು ಶಿವಲಿಂಗ ಪ್ರತಿಷ್ಠೆಯಂ
ಮಾಡಲು ಸಕಲ ಅಪರಾಧ ಪಾಪಂಗಳು ಪರಿಹಾರ ಸಕಲವನ್ನೂ ಪ್ರತಿಷ್ಠೆ
ಯಂ ಮಾಡಿ ರಕ್ಷಿಸಿದ ಫಲವುಂಟು ಸಮುದ್ರದಲ್ಲಿ ಇದ್ದ ರತ್ನಂಗಳ ಎಣಿ
ಸಬಹುದಲ್ಲದೆ ಒಂದು ಲಿಂಗಪ್ರತಿಷ್ಠೆಯಂ ಮಾಡಿದ ಪುಣ್ಯಫಲಂಗಳನ್ನೆಣಿಸೆ
ಶಕ್ಯವಲ್ಲ. ಅದುಕಾರಣ ಲಿಂಗಪ್ರತಿಷ್ಠೆಯಂ ಮಾಡಿಸಲು ಕೃತಕೃತ್ಯನಾದೀ
ಎಂದು ಬ್ರಾಹ್ಮಣನು ಕ್ಷಣಮಾತ್ರ ಧ್ಯಾನವಂ ಮಾಡಿ ಕಣ್ದೆರದು ಸಂತೋ
ಷಮುಖನಾಗಿ ತನ್ನ ಹಸ್ತದಿಂ ರಾಯನ ಮೈಯ್ಯಂ ತಡಹಿ ಇಂತೆಂದನು
ಎಲೈ ಭೂಪಾಲಾ! ನಾನು ಜ್ಞಾನದೃಷ್ಟಿಯಿಂದ ನೋಡಿ ಒಂದು ವರ್ತಮಾ
ನವಂ ಹೇಳುತ್ತಾ ಇದ್ದೇನೆ ಪರಾಕಿಲ್ಲದೆ ಕೇಳು ನೀನು ಧನ್ಯನು ಕೃತಕೃ
ತ್ಯನೂ ಪೂಜ್ಯನೂ ಉದಯಕಾಲದಲ್ಲಿ ಎದ್ದು ನಿನ್ನ ನಾಮಸ್ಮರಣೆಯಂ
ಮಾಡಲು ಸಕಲ ಶುಭಪ್ರಾಪ್ತಿಯಹುದು ನಿನ್ನ ದರ್ಶನದಿಂದ ತಾನು ಧನ್ಯ
ನಾದೆನು ಹೀಗೆಂದು ನೆನನೆನದು ಶಿರಃಕಂಪನವಂ ಮಾಡಿ ತನ್ನ ಮನಸ್ಸಿನಲ್ಲಿ
ತಾನೇ ಸಂತೋಷಪಟ್ಟು ಪುಳಕಾಂಕಿತ ಶರೀರನಾಗಿ ತನ್ನ ಮನದಲ್ಲಿ ಇಂತೆಂ
ದುಕೊಂಡನು ಈ ರಾಯನ ಭಾಗ್ಯವು ಎಷ್ಟು ಘನವಾದುದೋ ಎಂಥಾ
ನಿರ್ಮಲಚಿತ್ತವುಳ್ಳವನೋ ನಿರಂತರವೂ ಸಕಲರ ಕೈಯಲ್ಲೂ ಧ್ಯಾನಿಸಲ್ಪ
ಡುವ ಪರಮೇಶ್ವರನು ಈ ರಾಯನಂ ಧ್ಯಾನಿಸುತ್ತಾ ಇದ್ದಾನು ಆರಿಗೂ
ದೊರಕದು ನನಿಗೆ ಮೊದಲಾಗಿ ದುರ್ಲಭದ ಭಾಗ್ಯವು ಈ ರಾಯಂಗೆ ಆಯಿ
ತೆಂದು ಮನಸ್ಸಿನಲ್ಲಿ ಈ ರಾಯನಂ ಕೊಂಡಾಡಿ ಇಂತೆಂದನು, ಎಲೈ ರಾಯ
ನೇ! ನಿನ್ನ ಮನೋರಥವು ಕಲ್ಪವೃಕ್ಷಫಲಿತವಾಯಿತು ವಿಶ್ವಪತಿ ತನ್ನ ಮನ
ಸ್ಸಿನಲ್ಲಿ ನಿನ್ನ ಧ್ಯಾನಿಸಿದಂತೆ ನಾರಾಯಣ ಬ್ರಹ್ಮರನ್ನು ನೆನೆಯಲಿಲ್ಲಾ ಶೀಘ್ರ
ದಿಂದ ನೀನು ಒಂದು ಲಿಂಗವನ್ನು ಪ್ರತಿಷ್ಠೆಯಂ ಮಾಡು ಇಂದಿನ ಏಳನೇ
ದಿವಸದಲ್ಲಿ ಸಾಂಬಲೋಕದಿಂದ ಒಂದು ದಿವ್ಯವಿಮಾನ ಬರುತ್ತಾ ಇದ್ದೀತು.
ಈ ಶರೀರದಿಂದಲೇ ದಿವ್ಯವಿಮಾನರೂಢನಾಗಿ ಪರಮಪದವನ್ನೈದುತ್ತಾ
ಇದ್ದೀಯೆ. ನೀನು ಕಾಶೀ ಪಟ್ಟಣದಲ್ಲಿ ಇದ್ದು ಧರ್ಮದಿಂದ ಈ ಶರೀರ
ದಿಂದಲೇ ದಿವ್ಯವಿಮಾನವನ್ನೇರುವ ಪ್ರಾಪ್ತವಾಯಿತು ಈ ಕಾಶಿಯಲ್ಲಿ
ಒಬ್ಬನ ರಕ್ಷಿಸಿದರೆ ಇಂಥಾ ಫಲವುಂಟು. ನೀನು ಅನೇಕ ಮಂದಿಯ ರಕ್ಷಿ

ನಿದೆ ನಿನ್ನ ಪುಣ್ಯಕ್ಕೆ ಮಿತಿಯಿಲ್ಲವೆಂದು ಹೇಳ್ದ ಬ್ರಾಹ್ಮಣನ ವಾಕ್ಯವಂ ಕೇಳಿ ರಾಯನು ಬ್ರಾಹ್ಮಣಂಗೆ ನಮಸ್ಕರಿಸಿ ನಿಮ್ಮ ಪಾದಾರವಿಂದ ದರ್ಶನದಿಂದ ಕೃತಾರ್ಥನಾದೆನು ಎಂದು ಆ ಬ್ರಾಹ್ಮಣನ ಅತಿಸಂಸ್ಕಾರದಿಂ ಪೂಜಿಸಲು, ಆ ಬ್ರಾಹ್ಮಣನು ಸಂತೋಷಪಟ್ಟು ರಾಯನ ಕೈಯಿಂ ಕಳುಹಿಸಿಕೊಂಡು ನಮಗೆ ನಿವಾಸಕ್ಕೆ ರಮ್ಯವಾದ ಸ್ಥಳವು ರಮ್ಯವಾದುದು ತಾನು ಇಲ್ಲಿರ್ದ ವಿಶ್ವಪತಿಯು ಅನುಗ್ರಹದಿಂ ತನ್ನ ಭಕ್ತರನ್ನು ಪರಮಪದವನೈದಿಸುವೆನು ಎಂದು ಪಂಚನದೀ ತೀರ್ಥದಲ್ಲಿ ನಿಂತು ಪರಮೇಶ್ವರನು ಯಾವಾಗ ಬಂದಾನೋ ಎಂದು ಇದಿರುನೋಡುತ್ತಾ ರಾಯನ ವೃತ್ತಾಂತವನ್ನು ಪರಮೇಶ್ವರಗೆ ಹೇಳುವದಕ್ಕೆ ಗರುಡನ ಕಳುಹಿಸಿ ವಿಷ್ಣು ಅಲ್ಲೇ ಸುಖದಲ್ಲಿ ಇರಲು ಅನಂತರದಲ್ಲಿ ರಾಯನು ಬ್ರಾಹ್ಮಣನ ಬಹುಸ್ತೋತ್ರವಂ ಮಾಡಿ ತನ್ನ ಪ್ರಧಾನಿಗಳೂ ಮಂಡಲೀಕರೂ ಪಾರುಪತ್ಯಗಾರರೂ ಪುರೋಹಿತರೂ ದ್ವಾರಪಾಲಕರೂ ಸೇನಭೋಗರೂ ಅರಸು ಮಕ್ಕಳೂ ಸವಾರದವರೂ ಶೆಟ್ಟಿಗಳೂ ನಾನಾ ಪ್ರಜೆಗಳೂ ನಾನಾ ವಿಯೋಗದವರೂ ಅಂತಃಪುರದ ರಾಣಿಯಾದ ಸಕಲ ರಾಣಿಯರೂ ವೃದ್ಧರೂ ಬಾಲಕರೂ ಗೋಪಾಲರೂ ಮುಂತಾದ ಸಮಸ್ತರನ್ನು ಕರಿಸಿ ಅವರಿಗೆಲ್ಲಾ ಕೈಮುಗಿದು ಸಂತೋಷದಿಂದ ಇಂತೆಂದನು, ಕೇಳಿರೈ ಪ್ರಜೆಗಳಿರಾ! ಬ್ರಾಹ್ಮಣ ಹೇಳಿದ ಮರ್ಯಾದೆಯಲ್ಲಿ ತನಗೆ ಈ ಭೂಮಿಯ ವಾಸ ಮೂರುದಿವಸ ಇದ್ದೀತು ಎನಲು ಸಕಲರೂ ಕೇಳಿ ಆಶ್ಚರ್ಯಪಟ್ಟು ಮುಖ ಕಾಂತಿಗಳು ಕೆಟ್ಟು ಕೇಳುತ್ತಿರಲು ರಾಯನು ತನ್ನ ಐವರು ಮಂದಿ ಕುಮಾರರಂ ಕರೆಸಿ ಅವರಲ್ಲಿ ಹಿರಿಯನಾದ ಅಮರಜಯನೆಂಬ ಕುಮಾರನಂ ಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕವಂ ಮಾಡಿ ಎಲ್ಲರಿಗೂ ಉಡುಗೆರೆ ಉತ್ಸಾಹಂಗಳಂ ಕೊಟ್ಟು ಬ್ರಾಹ್ಮಣರಿಗೆ ಅನೇಕವಾದ ಧನಧಾನ್ಯವಸ್ತ್ರಾಭರಣ ಮುಂತಾದ ಷೋಡಶದಾನಂಗಳಂ ಮಾಡಿ ತೃಪ್ತಿಪಡಿಸಿ ತಾನು ತನ್ನ ಪಟ್ಟದ ರಾಣಿಸಹಿತ ಅಂತಗೃಹಯಾತ್ರೆಯಂ ಮಾಡಿ ಐವತ್ತಾರು ದೇಶದ ರಾಯರಂ ಗೆದ್ದ ತನ್ನ ಸಕಲ ರತ್ನಂಗಳಿಂದ 'ಭೂಪಾಲ ಶ್ರೀ' ಎಂಬ ಹೆಸರುಳ್ಳ ಉಪ್ಪರಿಗೆಯಂ ಅತಿ ಚಿತ್ರವಾಗಿ ಮಯವಿಶ್ವಕರ್ಮರಿಂದ ಅತಿಶೀಘ್ರದಿಂ ಕಟ್ಟಿಸಿ ಅಲ್ಲಿ ಬಂದು

ಲಿಂಗಪ್ರತಿಷ್ಠೆಯಂ ಮಾಡಿ ಆ ಲಿಂಗಕ್ಕೆ ದಿವೋದಾಸೇಶ್ವರನೆಂಬ ನಾಮಮಂಪ್ರಸ್ಥಾಪಿಸಿ ಭೂಪಾಲ ಶ್ರೀ ಎಂಬ ತೀರ್ಥಮಂ ಕಲ್ಪಿಸಿ ಆ ತೀರ್ಥದಲ್ಲಿ ಸ್ನಾನವಂ ಮಾಡಿ ಆ ಲಿಂಗವನ್ನಾರಾಧಿಸುತ್ತಿರಲು, ಏಳನೇ ದಿನ ಮಧ್ಯಾಹ್ನ ಸಮಯದಲ್ಲಿ ಆಕಾಶದಿಂದ ಶಿವಸಾರೂಪ್ಯವಂ ಪಡೆದ ಪ್ರಮಥರಿಂದ ಓಲೈಸಲ್ಪಡುವ ನಾನಾ ಸೇವೆಗಳಂ ಮಾಡುವ ರುದ್ರಕನ್ಯೆಯರಿಂದ ಅಲಂಕೃತವಾದ ನೂರು ಚಂದ್ರಕಾಂತಿಯಿಂದೊಪ್ಪುವ ದಿವ್ಯ ವಿಮಾನವಂ ಕಂಡು ರಾಯನ ಪಟ್ಟದ ರಾಣಿ ಸಹ ದಿವ್ಯಾಭರಣ ಗಂಧಪುಷ್ಪಗಳಿಂದಲಂಕರಿಸಿ ಶುಭ್ರಶರೀರ ಧವಳಗಾತ್ರ ಕಪ್ಪು ಕೊರಳು ಕಪರ್ದವೆಂಬ ಶಿರೋವೇಷ್ಟಿ ಚತುರ್ಭುಜ ಚಂದ್ರಭೂಷಣ ಶಿರದಲ್ಲಿ ಚಂದ್ರಕಳೆಯುಳ್ಳ ಶಿವಸಾರೂಪ್ಯವಂ ಧರಿಸೆಂದು ವರವಂ ಕೊಟ್ಟು ಶಿವರೂಪವಂ ಧರಿಸಿದ ರಾಯನಂ ಪಾರ್ವತಿ ರೂಪವಂ ಧರಿಸಿದ ಪಟ್ಟದ ರಾಣಿಯನ್ನು ಈಶ್ವರಂ ದಿವ್ಯ ವಿಮಾನದ ಮೇಲೆ ಕುಳ್ಳಿರಿಸಿಕೊಂಡು ಸಾಂಬಲೋಕಕ್ಕೆ ಕರದೊಯಿದರು ದಿವೋದಾಸರಾಯನು ಕಟ್ಟಿಸಿದ ಉಪ್ಪರಿಗೆಯ ಮುಂದೆ ಭೂಪಾಲ ಶ್ರೀ ಎಂಬ ತೀರ್ಥವಿದ್ದೀತಷ್ಟೆ ಆ ತೀರ್ಥದಲ್ಲಿ ಸ್ನಾನ ದಾನ ತರ್ಪಣ ಶ್ರಾದ್ಧಾದಿಗಳಂ ಮಾಡಿ ದಿವೋದಾಸೇಶ್ವರ ಲಿಂಗವಂ ಪೂಜಿಸಿ ದಿವೋದಾಸೇಶ್ವರ ಮಹಿಮೆಯಂ ಕೇಳಲು ಪುನರ್ಜನ್ಮವಿಲ್ಲ ಈ ಅಧ್ಯಾಯವಂ ಓದಿ ಕೇಳಿದರೂ ಸಕಲ ಪಾಪಹರ. ಈ ಅಧ್ಯಾಯವಂ ಅರಸುಗಳು ಕೇಳಿ ಯುದ್ಧಕ್ಕೆ ಹೋಗಲು ಜಯವಹುದು ಸಕಲ ಪಾಪಹರ ಸಕಲ ಭಯಹರ ಅಕಾಲಮರಣವಿಲ್ಲ ಈ ಅಧ್ಯಾಯವಂ ಪಠಿಸಲು ಶಿವಕಾರ್ಯಾರ್ಥವಾಗಿ ಬಂದ ವಿಷ್ಣುವಿನ ಕೃಪೆಯಿಂದ ಸರ್ವಕಾರ್ಯಾರ್ಥ ಸಿದ್ಧಿಯಹುದು ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವನ್ನು ಸೂತಪುರಾಣಿಕನು ಶೌನಕಾದಿ ಮುನಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ * * * * * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ಣಾಟಕ ಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ

ಕಾಶೀ ಮಹಿಮಾರ್ಥ ದರ್ಪಣದಲ್ಲಿ ಪಿಶಾಚ ವಿಮೋಚನ ತೀರ್ಥದ ಮಹಿಮೆಯೆಂಬ ಐವತ್ತೆಂಟನೇ ಅಧ್ಯಾಯ ನಿರೂಪಣಕ್ಕಂ ಮಂಗಳ ಮಹಾ * *

ಐವತ್ತೆಂಟನೆಯ ಅಧ್ಯಾಯ ಸಂಪೂರ್ಣ.

:o:

ಶ್ರೀ ವಿಶ್ವೇಶ್ವರಾಯನಮಃ.

ಐವತ್ತೊಂಭತ್ತನೇ ಅಧ್ಯಾಯ.

ಪಂಚನದೀತೀರ್ಥಪ್ರಶಂಸೆ.

ಅನಂತರದಲ್ಲಿ ಅಗಸ್ತ್ಯನಿಂತೆಂದನು, ಎಲೈ ಸರ್ವಜ್ಞಾನಸಿದ್ಧಿಯಾದ ಪರಮೇಶ್ವರನ ಕುಮಾರನಾದ ಸಕಲ ಗುಣಂಗಳಿಗೂ ಆಲಯನಾದ ಮನ್ಮಥನಿಗಿಂತಲು ಚಲುವಾದ ನಿತ್ಯವೂ ಕುಮಾರ ವಯಸ್ಸುಳ್ಳ ಕುಮಾರಸ್ವಾಮಿಯೇ ನಿನಿಗೆ ನಮಸ್ಕಾರ ಕಪಟವಿಪ್ರವೇಷವಂ ತಾಳಿದ್ದ ಮಹಾ ವಿಷ್ಣುವು ಕಾಶಿಯಲ್ಲಿ ಸಕಲ ತೀರ್ಥಂಗಳಲ್ಲಿ ಅಧಿಕವಾದ ಪಂಚನದಿ ತೀರ್ಥ ನದೀತೀರದಲ್ಲಿ ವಾಸವಂ ಮಾಡಿದನೆಂದು ನಿರೂಪಿಸಿದಿರಲ್ಲಾ ಸ್ವರ್ಗಮರ್ತ್ಯಪಾತಾಳಂಗಳಲ್ಲಿಯೂ ಅಧಿಕವಾಗಿ ಪರಮಪವಿತ್ರವಾದುದು ಕಾಶೀಕ್ಷೇತ್ರವು ಅದರೊಳಗೂ ಪಂಚನದೀ ತೀರ್ಥವೆಂಬುದು ಅಧಿಕವೆಂದು ಅಲ್ಲಿ ವಿಷ್ಣುವು ನೆಲಸಿದನಲ್ಲಾ ಅಲ್ಲಿ ತೀರ್ಥವು ಪಂಚನದೀಯೆಂಬ ಏನು ಕಾರಣ ಪ್ರಸಿದ್ಧಿಯಾಯಿತು. ಅದೂ ಅಲ್ಲದೆ ಷಡ್ಗುಣೈಶ್ವರ್ಯ ಸಂಪನ್ನನಾದ ಸರ್ವ ಜೀವರ ಅಂತರ್ಯಾಮಿಯಾದ ಜಗನ್ನಾಯಕನಾದ ಉತ್ಪತ್ತಿಸ್ಥಿತಿ ಲಯಂಗಳಿಗೆ ಕರ್ತನಾದ ಅರೂಪನಾಗಿಯೂ ರೂಪವಂತನಾದ ಅವ್ಯಕ್ತನಾಗಿಯೂ ವ್ಯಕ್ತನಾದ ನಿರಾಕಾರನಾಗಿಯೂ ಆಕಾರವುಳ್ಳವನಾದ ಪ್ರಪಂಚಾತೀತನಾಗಿಯೂ ಪ್ರಪಂಚಕ್ಕೆ ಒಳಗಾದ ಜನನವಿಲ್ಲದವನಾಗಿಯೂ ಅನೇಕ ಜನ್ಮವುಳ್ಳಂಥಾ ಮಹಾಪುರುಷನಾದ

ಹೆಸರುಗಳಿಲ್ಲದವನಾಗಿಯೂ ಅನಂತನಾಮಗಳುಳ್ಳ ನಿರಾಲಂಬನಾಗಿಯೂ ಸಕಲರಿಗೂ ಆಧಾರವಾದಂಥ ನಿರ್ಗುಣನಾಗಿಯೂ ಸಮಸ್ತ ಗುಣಗಳುಳ್ಳಂಥಾ ಇಂದ್ರಿಯಂಗಳಿಲ್ಲದವನಾಗಿಯೂ ಇಂದ್ರಿಯಂಗಳುಳ್ಳಂಥಾ ಪಾದಂಗಳುಳ್ಳವನಾಗಿಯೂ ಅನೇಕ ಪಾದಂಗಳುಳ್ಳಂಥಾ ಮಹಾಪುರುಷನಾದ ವಿಷ್ಣುವು ತನ್ನ ರೂಪವನ್ನು ಉಪಸಂಹರಿಸಿ ಪಂಚನದೀತೀರ್ಥದಲ್ಲಿ ಮತ್ತೊಂದು ರೂಪವಂ ಧರಿಸಿ ನೆಲಸಿದಕಾರಣವೇನು ? ಇದಂ ಹೇಳಬೇಕೆಂದು ಬಿನ್ನೈಸಲು, ಕುಮಾರಸ್ವಾಮಿಯಿಂತೆಂದನು, ಕೇಳೈ ಅಗಸ್ತ್ಯನೇ ! ತಾನು ಪರಮೇಶ್ವರಂಗೆ ನಮಸ್ಕಾರವನ್ನು ಮಾಡಿ ಸಕಲ ಪಾಪಹರವಪ್ಪ ಸಕಲ ಶ್ರೇಯಸ್ಸುಗಳಂ ಕೊಡುವ ಈ ಕಥಾ ಅಧ್ಯಾಯವಂ ಕೇಳಿದಮಾತ್ರದಲ್ಲಿಯೆ ಪಂಚಮಹಾಪಾಪಗಳು ಪರಿಹರಿಸ ಪಂಚನದೀತೀರ್ಥದ ಉತ್ಪತ್ತಿಯಂ ಹೇಳುತ್ತಾ ಇದ್ದೇನೆ, ಕೇಳೈ ಅಗಸ್ತ್ಯ ! ಪೂರ್ವದಲ್ಲಿ ಭಾರ್ಗವವಂಶದಲ್ಲಿ ಹುಟ್ಟಿದಂಥಾ ವೇದವೆ ಆಕಾರವಾಗಿ ಬಂದಿಹೋ ಎಂಬಂತೆ ವೇದಶಿರನೆಂಬ ಮುನೀಶ್ವರನು ತಪವ ಮಾಡುತ್ತಾ ಇರಲು, ಒಂದಾನೊಂದು ದಿವಸ ದೇವಲೋಕದಿಂದ ಶುಚಿಸ್ಮಿತಾ ಎಂಬ ಅಪ್ಸರಸ್ತ್ರೀಯು ಆ ಮುನೀಶ್ವರನ ಮುಂದೆ ಹೋಗುತ್ತಿರಲು ಆ ಮುನೀಶ್ವರನು ಅಪ್ಸರಸ್ತ್ರೀಯನ್ನು ನೋಡಿದ ಮಾತ್ರದಲ್ಲಿಯೇ ಮನ್ಮಥನ ಬಾಣಂಗಳಿಂ ನೊಂದು ಆ ಮುನಿಯು ಮನಸ್ಸು ವಿಕಾರವನ್ನೈದಿ ವೀರ್ಯಸ್ಖಲಿತವಾಗಲು ಆ ವೀರ್ಯವನ್ನು ತನ್ನ ಹಸ್ತದಲ್ಲಿ ಪಿಡಿದು ಆ ಮುನೀಶ್ವರನಿಂತೆಂದು ಚಿಂತಿಸಿದನು, ಸ್ತ್ರೀಯರು ಸ್ವಭಾವದಿಂದಲೆ ಕಠಿಣ ಹೃದಯರು ಎಂಬ ಮುನಿಗಳ ವಾಕ್ಯಮಂ ಸ್ಮರಿಸಿ ಮನಸ್ಸಿನ ರೋಷವೆಂಬ ನದೀವೇಗಮಂ ವಿವೇಕವೆಂಬ ಕಟ್ಟೆಯಿಂದ ನಿಲ್ಲಿಸಿ ಅಪ್ಸರಸ್ತ್ರೀಯನ್ನು ಕರೆದು ಆ ಮುನೀಶ್ವರನಿಂತೆಂದನು-ಎಲೈ ಶುಚಿಸ್ಮಿತೆಯೇ ! ನೀನು ಮಹಾಶುಚಿಯಾದವಳು, ನಿನಿಗೆ ಅಣುಮಾತ್ರವೂ ದೋಷವಿಲ್ಲ, ನೀನು ನನಿಗೆ ಮಾಡಿದ ದೋಷವು ಇಲ್ಲ, ಮತ್ತೇನೆಂದರೆ ಲೋಕದಲ್ಲಿ ಸ್ತ್ರೀಯರು ಅಗ್ನಿಗೆ ಸಮಾನವಾದವರು, ಪುರುಷನು ಬೆಣ್ಣೆಗೆ ಸಮಾನನೆಂದು ಜ್ಞಾನಿಗಳಾದವರು ವಿಚಾರಿಸಿನೋಡಲು ಸ್ತ್ರೀಯರಲ್ಲಿಯೇ ವಿಶೇಷ ಉಂಟು, ಅದೆಂತೆಂದರೆ-ಅಗ್ನಿಯ ಮೇಲೆ ಇರಿಸಿದಲ್ಲದೆ

ಚಿತ್ತಕರಗದು, ಸ್ತ್ರೀಯರ ಹೆಸರುಗೊಂಡಮಾತ್ರದಲ್ಲಿಯೇ ದೂರದಲ್ಲಿಯಿದ್ದ ಪುರುಷನಿಗಾದರು ಮನಸ್ಸು ಚಂಚಲವನ್ನೈದಿ ಮೋಹಿತವಾಗುವದು, ಆದಕಾರಣ ಅಗ್ನಿಗಿಂತಲು ಸ್ತ್ರೀಯರು ಹೆಚ್ಚು ದೈವಯತ್ನದಿಂದ ನಿನ್ನ ಕಂಡಮಾತ್ರದಿಂದಲೆ ನನ್ನ ಮನಸ್ಸು ಚಂಚಲಿಸಿ ವೀರ್ಯಸ್ಖಲಿತ ವಾಯಿತು ನೀನು ಅಂಜಬ್ಯಾಡ ಮುನಿಗಳಿಗೆ ಕೋಪದಿಂದ ತಪೋಹಾನಿಯಾದಂತೆ ಅಕಾಮದಿಂ ಸ್ಖಲಿತವಾಗಲು ಹಾನಿಯಿಲ್ಲ, ಸೂರ್ಯಚಂದ್ರರ ಪ್ರಕಾಶದಿಂದ ಅಂಧಕಾರ ಪೋಪಂತೆ ಕೋಪದಿಂದ ತಪಸ್ಸು ಕ್ಷಯವಹುದು, ಕೋಪದಿಂದ ತಪಸ್ಸಿದ್ಧಿಯಿಲ್ಲ, ದುರ್ಜನರು ಇದ್ದಲ್ಲಿ ಸಜ್ಜನರಿಗೆ ಏಳಿಗೆ ಇಲ್ಲದಂತೆ ಕೋಪವಿದ್ದಲ್ಲಿ ತಪವೆತ್ತಣದು ಅದೆಂತೆಂದರೆ-ಚಂದ್ರನಂ ರಾಹು ಹಿಡಿಯಲು ಬೆಳದಿಂಗಳುಂಟೆ? ಕೋಪವೆಂಬ ಅಗ್ನಿ ಜ್ವಲಿಸಲು ಮುಕ್ತಿಯೆಂಬವೃಕ್ಷಕ್ಕೆ ನಿಲುಕಡೆಯುಂಟೆ? ಸಿಂಹನಮುಂದೆ ಆನೇಮರಿಯು ನಿಂತದ್ದುಂಟೆ? ಆದಕಾರಣ ಸರ್ವಪ್ರಯತ್ನದಿಂದಲು ಧರ್ಮಾರ್ಥಕಾಮಮೋಕ್ಷಂಗಳಿಗೆ ವಿಘಾತವಾದ ಕೋಪವನ್ನು ಜ್ಞಾನಿಯಾದವನು ಬಿಡಬೇಕು, ಈಗ ನನ್ನದೊಂದು ಮಾತಂ ಕೇಳು ಎನ್ನ ವೀರ್ಯವು ಅಮೋಘವಾದುದು ನಿನ್ನಂ ನೋಡಿದ ನೋಟಮಾತ್ರದಿಂದ ಸ್ಖಲಿತವಾದವೀರ್ಯವನ್ನು ನೀನು ಭಕ್ಷಿಸು ಅದರಿಂದ ನಿನಗೆ ಒಬ್ಬಳು ಶುಚಿಯಾದ ಕುಮಾರತಿಯಾದಾಳು ಇಂತೆಂದ ಋಷಿಯವಾಕ್ಯಮಂ ಕೇಳಿ ಆ ಶುಚಿಸ್ಮಿತೆ ಎಂಬ ಅಪ್ಸರ ಸ್ತ್ರೀಯು ಗಡಗಡನೆ ನಡುಗಿ ಇಂದು ಮರುಹುಟ್ಟು ಹುಟ್ಟಿದೆನು, ಆ ಋಷೀಶ್ವರನು ತನಿಗೆ ಶಾಪಮಂ ಕೊಡದೆ ಕಾರುಣ್ಯದಿಂ ರಕ್ಷಿಸಿದನು ಎಂದು ನೆನದು ಕೊಂಡು ಆ ಋಷಿಯವಾಕ್ಯವೇ ಮಹಾಪ್ರಸಾದವೆಂದು ಆಮುನಿಯ ವೀರ್ಯವನ್ನು ತೆಗದುಕೊಂಡು ನುಂಗಲು ಆಕ್ಷಣವೆ ಸದ್ಯೋಗರ್ಭದಿಂದ ಒಬ್ಬಳು ಕುಮಾರತಿಯಾಗಲು ಆಕುಮಾರತಿಯನ್ನು ಋಷಿಯ ಬಳಿಯಲ್ಲಿ ಇರಿಸಿ ಅಪ್ಸರಸ್ತ್ರೀಯು ತನ್ನಲೋಕಕ್ಕೆ ಪೋದಳು. ಅನಂತರದಲ್ಲಿ ಆ ಋಷೀಶ್ವರನು ಕುಮಾರತಿಯನ್ನು ಅತಿಪ್ರೀತಿಯಿಂದ ಮಡಿಲೊಳಗೆ ಇಟ್ಟುಕೊಂಡು ಯರಳೆಯಹಾಲು ಜೇನುತುಪ್ಪ ಇವನೆರಡು ಸಾಕಿ ಆಕುಮಾರತಿಗೆ ಧೂತಪಾಪೆಯೆಂದು ನಾಮಕರಣವಂ ಮಾಡಿದನು, ಸರ್ವಲಕ್ಷಣಸಂಪನ್ನೆಯಾದ ಸೌಂದರ್ಯವುಳ್ಳ ಆಕುಮಾರತಿಯ ಹೆಸರುಗೊಂಡಮಾತ್ರದಲ್ಲಿಯೇ

ಸಕಲಪಾಪಂಗಳೂ ಪರಿಹಾರವಾಗುವುವು, ಅಂಥಾ ಕುಮಾರತಿಯನ್ನು ತನ್ನ ತೊಡೆಯಮೇಲಿಂದ ಕೆಳಕ್ಕೆ ಇಳಿಸದೆ ದಿನದಿನಕ್ಕೆ ಹೆಚ್ಚುವ ಶುಕ್ಲಪಕ್ಷದ ಚಂದ್ರನಂತೆ ಬೆಳೆಯುತ್ತಿರ್ದ ಕುಮಾರತಿಯನ್ನು ನೋಡಿ ಬೆಳದಿಂಗಳಂಕಂಡು ಕ್ಷೀರಸಮುದ್ರ ಹೆಚ್ಚುವಂತೆ ಸಂತೋಷದಿಂದ ಮುನಿ ಇರುತ್ತಿರಲು ಆ ಕುಮಾರತಿಗೆ ಎಂಟನೇ ವರ್ಷ ನಡಿಯುತ್ತಾ ಇರಲು ಸೌಂದರ್ಯ ಗುಣ ಲಕ್ಷಣ ಶೀಲವುಳ್ಳ ಈಮುಗಳಿಗೆ ತಕ್ಕವರ್ನಾರು ಎಂದು ಚಿಂತಿಸಿ ಆ ಮುನೀಶ್ವರನು ಮಗಳಂ ಕರೆದು ಇಂತೆಂದನು, ಎಲೆ ಶುಭಲಕ್ಷಣಗಳುಳ್ಳ ಧೂತಪಾಪೆ ! ನಿನ್ನನ್ನು ಆರಿಗೆ ಮದುವೆಯುಂಮಾಡಲಿ ನೀನು ಹೇಳು ಎನಲು, ಆಕುಮಾರತಿ ಇಂತೆಂದಳು-ಎಲೈ ತಾತಾ ! ನನ್ನ ಕೊಡಬೇಕಾದರೆ ನಾನು ಪೇಳ್ದವರಿಗೆ ಕೊಡು ಎನ್ನ ಮನಸ್ಸಿನಲ್ಲಿ ಇದ್ದವನು ನಿನ್ನ ಮನಸ್ಸಿಗೆ ಬಂದಾನೋ ಬಾರನೋ ಕಾಣೆನು ಆತನಾರೆಂದರೆ ಆವನಾನೊಬ್ಬನು ಸಕಲರಿಗಿಂತಲೂ ಅಧಿಕವಾಗಿ ಪವಿತ್ರನಾಗಿ ಸಕಲರೂ ಪ್ರಾರ್ಥಿಸಲು ಅವರಿಗೆ ತಕ್ಕ ವರವ ಕೊಡುವನಾಗಿ ಸಕಲರ ಸುಖ ದುಃಖದ ಕಾರಣನಾಗಿ ತ್ರಿಕಾಲದಲ್ಲಿಯೂ ಕೇಡಿಲ್ಲದೆ ಸಕಲರನ್ನು ಪಾಲಿಸಿಕೊಂಡು ಇಹನೋ, ಆವನ ಸ್ಮರಣೆ ಮಾತ್ರದಿಂದ ಸಕಲ ಮನೋರಥಗಳೂ ಪರಿಪೂರ್ಣವಹವೋ, ದಿನ ದಿನಕ್ಕೆ ಸಕಲ ಸೌಭಾಗ್ಯವೂ ಹೆಚ್ಚುವದೋ, ನಿರಂತರವೂ ಆತನ ಸೇವೆಯಂ ಮಾಡೆ ಸಕಲ ಭಯಹರ್‍ವ, ಆವನ ಆಧಾರದಿಂದ ಚತುರ್ದಶ ಭುವನಂಗಳಿಹವೋ ಅಂಥಾವರಿಗೆ ತನ್ನಂ ಮದುವೆಯುಮಾಡು ಮಿಕ್ಕಾದ ಇಹ ಪರಂಗಳ ಕಾಂಕ್ಷೆಯೂ ತನಗಿಲ್ಲ ಇಂತೆಂದು ನುಡಿದ ಮಗಳ ವಾಕ್ಯಮಂ ಕೇಳಿ ದೇವಶಿರನೆಂಬ ಮುನಿ ಇಂತೆಂದನು. ಇಂದು ನಾನು ಧನ್ಯನಾದೆನು ತನ್ನ ವಂಶ ಪವಿತ್ರವಾಯಿತು ಈಮಗಳಿಗೆ ಧೂತಪಾಪೆಎಂಬ ಹೆಸರು ಸಲ್ಲುವದು ಇಂಥಾವರನ್ನು ಮನಃಶುದ್ಧಿಯಿಂದ ಇಂದ್ರಿಯನಿಗ್ರಹನಂ ಮಾಡಿ ಮಹಾತಪಸ್ಸುಗಳಿಂದ ಪುಣ್ಯತೀರ್ಥ ಸ್ನಾನ ದಾನ ಧರ್ಮದಯೆಗಳಿಂದ ಸುಲಭವಾಗಿ ದೊರಕೊಳ್ಳತಕ್ಕವನಲ್ಲದೆ ಮಿಕ್ಕಾದ ಅರ್ಥದಿಂದ ಕುಲದಿಂದ ವೇದಶಾಸ್ತ್ರಾಭ್ಯಾಸದಿಂದ ಐಶ್ವರ್ಯದಿಂದ ಬಲದಿಂದ ಬುದ್ಧಿಯಿಂದ ದೊರಕೊಂಬುವನಲ್ಲ, ಇಂತೆಂದು ನುಡಿದ ತಂದೆಯ ವಾಕ್ಯಮಂ ಕೇಳಿ ಧೂತಪಾಪೆ ತಂದೆಗೆ ನಮಸ್ಕರಿಸಿ ಎನಗೆ ತಪಸ್ಸಿಗೆ ಅಪ್ಪಣೆಯಂ

ಕೊಡು ಎಂದು ಪ್ರಾರ್ಥಿಸಿ ತಂದೆಯ ಅಪ್ಪಣೆಯ ಪಡೆದು ಪರಮಪವಿತ್ರವಾದ ಕಾಶೀಕ್ಷೇತ್ರಕ್ಕೆ ಬಂದು ಅಲ್ಲಿ ಮಹಾತಪಸ್ವಿಗಳ್ಗೆ ಅಸಾಧ್ಯವಾದ ಉಗ್ರತಪಸ್ಸಂ ಮಾಡಲು ಉಪಕ್ರಮಿಸಿದಳು, ಕೋಮಲಾಂಗಿಯಾದ ಈ ಕನ್ನಿಕೆಯಂತೆ ಕಠಿಣ ಶರೀರಗೆ ಅಸಾಧ್ಯವಾದ ತಪವೆತ್ತ ಮನಸ್ಸು ಹ್ಯಾಗೆ ಧೈರ್ಯಮಾಡುದೋ ಎಂದು ಸಕಲರೂ ವಿಸ್ಮಯಂಬಡುವಂತೆ ಗುಡುಗಿನ ಧ್ವನಿಗಳಿಂದಲೂ ಬಳ್ಳಿಮಿಂಚುಗಳಿಂದಲೂ ಪ್ರಚಂಡವಾಯುಸಹಿತವಾದ ಜಡಿಮಳೆಗಳಲ್ಲಿ ಭಯಪಡದೆ ಬಯಲಲ್ಲಿದ್ದ ಅರೆಗಳ ಮೇಲೆ ಬಹುರಾತ್ರಿಗಳನ್ನು ಕಳೆದು ಗ್ರೀಷ್ಮಋತುಗಳಲ್ಲಿ ಪಂಚಾಗ್ನಿ ಮಧ್ಯದಲ್ಲಿ ಬಹು ತಾಪಪಟ್ಟವಳಾಗಿ ದರ್ಭೆಯ ಕೊನೆಯ ಉದಕಬಿಂದುವೆ ಆಹಾರವಾಗಿ ಛಳಿಯಿಂದ ನಡುಗುತ್ತ ಹಿಮಂತಕಾಲದಲ್ಲಿ ಶಿಶಿರಋತುಗಳಲ್ಲಿ ನೀರಲ್ಲಿ ನಿಂತು ಇದ್ದವಳಾಗಿ ಕೊಳದಲ್ಲಿ ಪುಟ್ಟಿದ ಪದ್ಮಕನ್ಯೆಯಂತೆ ಮಹಾ ತಪಸ್ಸು ಉಳ್ಳ ಮುನಿಗಳೇ ಮೊದಲಾಗಿ ಮನೋರಾಗವಂ ಪುಟ್ಟುವ ವಸಂತಕಾಲದಲ್ಲಿ ಆಕೆಯು ಭೀಷ್ಟರಾಗವು ಬಿಟ್ಟಿತು. ವಸುಧೆ ಸ್ಥಳದಲ್ಲಿ ವಾಸವಂ ಮಾಡಿ ಮನಸ್ಸಿನ ಚಂಚಲವಂ ಬಿಟ್ಟಳು, ವಾಸವಾಳದ ಪುಷ್ಪಂಗಳಲ್ಲಿ ತನ್ನ ಅಧರ ಕಾಂತಿಯುಂ ನಿಲ್ಲಿಸಿದಳು. ಕೋಗಿಲೆಗಳಲ್ಲಿ ತನ್ನ ಧ್ವನಿಯುಂ ಬಿಟ್ಟಳು, ಹಂಸೆಗಳಲ್ಲಿ ತನ್ನ ಗಮನವಂ ನಿಲ್ಲಿಸಿದಳು. ಈ ರೀತಿಯಲ್ಲಿ ಸಕಲ ಸಂಗಪರಿತ್ಯಾಗವಂ ಮಾಡಿ ಮನಸ್ಸಿನ ಚಂಚಲವಂ ಬಿಟ್ಟಳು ಯೋಗಿನಿಯಂತೆ ದೃಢಚಿತ್ತದಿಂದ ಉಗ್ರತಪಸ್ಸಂ ಮಾಡುತ್ತಾ ಇರಲು, ಬ್ರಹ್ಮನು ಪ್ರಸನ್ನನಾಗಿ ವರವಂ ಬೇಡು ಎನಲು ಕಣ್ದೆರದು ಮುಂದೆ ಹಂಸವಾಹನನಾದ ಚತುರ್ಮುಖನಂ ಕಂಡು ಇಂತೆಂದು ಬಿನ್ನೈಸಿದಳು ಎಲೈ ಲೋಕಪಿತಾಮಹಾ ! ನೀವು ಎನಗೆ ಕೊಡಬೇಕಾದರೆ ಸಕಲ ಪವಿತ್ರವಸ್ತುಗಳಿಗೂ ಅತ್ಯಂತ ಪವಿತ್ರವಾಗುವ ಹಾಗೆ ವರವನ್ನೀಯಬೇಕೆನಲು, ಬ್ರಹ್ಮನಿಂತೆಂದನು ಎಲೈ ಧೂತಪಾಪೆ! ಈ ಲೋಕದಲ್ಲಿ ಏನೇನು ಪವಿತ್ರವಸ್ತುಗಳುಂಟೋ ಅವಕ್ಕಿಂತಲೂ ವೆಗ್ಗಳವಾಗೂ ಸ್ವರ್ಗ ಮರ್ತ್ಯ ಪಾತಾಳದಲ್ಲಿರ್ದ ಮೂರು ಕೋಟಿಯು ಐವತ್ತು ಲಕ್ಷ ತೀರ್ಥಂಗಳು ನಿನ್ನ ಶರೀರದ ರೋಮಕೂಪಂಗಳಲ್ಲಿ ಉಳ್ಳವಾಗಿ ಪರಮಪಾವನೆಯಾಗು, ಈಗ ನೀನು ಮಾಡಿದ ತಪಸ್ಸಿನಿಂದ ಧರ್ಮಪುರುಷನು

ಪತಿಯಾದಾನು ಇಂತೆಂದು ವರವನಿತ್ತು ಬ್ರಹ್ಮನು ಅಂತರ್ಧಾನವಾಗಲು, ಧೂತಪಾಪೆಯು ತನ್ನ ತಂದೆಯಾಶ್ರಮಕ್ಕೆ ಪೋಗಿ ಈ ವೃತ್ತಾಂತವಂ ತಂದೆಗೆ ಪೇಳಲು, ಮುನೀಶ್ವರನು ಮಗಳು ವರವಪಡೆದ ವೃತ್ತಾಂತಮಂ ಕೇಳಿ ಮಹಾ ಸಂತೋಷದಿಂದ ಇರುತಿರಲು ; ಅನಂತರದಲ್ಲಿ ಒಂದಾನೊಂದು ದಿನ ಆ ಮುನಿಯು ಸಮಿತ್ತು ದರ್ಭೆಗಳಿಗೆ ಪೋಗಲು ಈ ಧೂತಪಾಪೆ ಪರ್ಣಶಾಲೆಯ ಮುಂದೆ ಆಡುತಿರಲು, ಆ ಧೂತಪಾಪೆಯನ್ನು ಆಕೆಯ ತಪಸ್ಸಿನಿಂದ ಕರುಣವಂ ಮಾಡಲ್ಪಟ್ಟ ಧರ್ಮಪುರುಷನು ಕಂಡು ಮನ್ಮಥನ ಬಾಣಂಗಳಿಂದ ಅತ್ಯಂತ ಪೀಡಿತನಾಗಿ ಮನದ ಧೈರ್ಯಮಂ ಬಿಟ್ಟು ಧೂತಪಾಪೆಯೊಡನಿಂತೆಂದನು, ಎಲೈ ಚಂದವಾದ ಪೊರವಾರುಳ್ಳಂಥಾ ಮುದ್ದು ಮುಖವುಳ್ಳ ಅತಿ ಸೌಂದರ್ಯವಾದ ಧೂತಪಾಪೇ ! ನಿನ್ನ ಸ್ವರೂಪದಿಂದ ತಾನು ನಿನ್ನಕ್ರಯಕ್ಕೆ ಕೊಂಡವನಾದೆನು ಎನಗೆ ಏಕಾಂತಕೇಳಿಯಂಕೊಡು ಎನ್ನನ್ನು ಮನ್ಮಥನು ಬಾಧೆಪಡಿಸುತ್ತಾ ಇದ್ದಾನು ಎಂದು ನುಡಿಯಲು ಆತನ ಕುಲಗೋತ್ರಂಗಳನ್ನರಿಯದೆ ಆ ಪುರುಷನಿಂದ ಪ್ರಾರ್ಥಿಸಲ್ಪಟ್ಟ ಧೂತಪಾಪೆ ಇಂತೆಂದಳು ಎಲೈ ಪುರುಷಾ ! ನೀನುಪೋಗಿ ನಮ್ಮ ತಂದೆಯಂ ಪ್ರಾರ್ಥಿಸಲು ತನ್ನನೂ ನಿನಗೆ ಕೊಟ್ಟಾನು ಲೋಕದಲ್ಲಿ ಕನ್ನಿಕೆಯನ್ನು ತಂದೆ ಕೊಡಬೇಕೆಂಬುದು ಶ್ರುತ್ಯಾಚಾರವೆಂದು ನುಡಿದ ಸ್ತ್ರೀಯ ವಾಕ್ಯವಂ ಕೇಳಿ ಧರ್ಮನು ಮನ್ಮಥನ ಬಾಣದಿಂದ ಬಹುನೊಂದು ಧೈರ್ಯವಂ ಬಿಟ್ಟು ದೃಢಚಿತ್ತವುಳ್ಳ ಕನ್ನಿಕೆಯೊಡನೆ ಇಂತೆಂದನು. ತಾನು ನಿಮ್ಮ ತಂದೆಯು ಕೇಳುವ ಪರಿಯಂತರವೂ ವಿರಹತಾಪವಂ ತಾಳಲಾರೆನು ಗಂಧರ್ವ ವಿವಾಹದಿಂದ ಎನ್ನ ಮನೋರಥವಂ ಸಲ್ಲಿಸು ಎಂದು ನಿರ್ಬಂಧಿಸಿ ಕೇಳುವ ಧರ್ಮಪುರುಷನಂ ನೋಡಿ, ತಂದೆಗೆ ಕನ್ಯಾದಾನ ಫಲವನ್ನು ಸಂಪಾದಿಸುವಳಾಗಿ ಇಂತೆಂದಳು, ಎಲೈ ಜಡಮತಿಯೇ ! ನನ್ನನ್ನು ಮತ್ತೂ ಮತ್ತೂ ನಿರ್ಬಂಧಿಸಿ ಕೇಳುತ್ತಾ ಇದ್ದೀಯಾಗಿ ನೀನು ಜಡರೂಪ ಪುರುಷನಾಗು ಎಂದು ಶಪಿಸಲು ಆ ಸ್ತ್ರೀಯಿಂದ ಶಾಪವನ್ನೈದಿ ಕೋಪಿಸಿಕೊಂಡು ನೀನು ಎನ್ನ ಮನೋಥರವಂ ಸಲ್ಲಿಸದೆ ಕಠಿನಹೃದಯವುಳ್ಳವಳಾದುದರಿಂದ ಕಠಿನವಾದ ಶಿಲೆಯಾಗಿ ಪುಟ್ಟು ಎಂದು ಶಪಿಸಿ, ಅವಿಮುಕ್ತ ಕ್ಷೇತ್ರದಲ್ಲಿ ಧರ್ಮಪುರು

ಷನು ನದವಾದನು ಅನಂತರದಲ್ಲಿ ಆ ಧೂತಪಾಪೆಯು ಧರ್ಮನ ಕೈಯ
ಶಾಪಹತೆಯಾಗಿ ತನ್ನ ತಂದೆಯ ಸಮೀಪಕ್ಕೆ ಬಂದು ತನಗೆ ಬಂದ ಶಾಪದ
ವೃತ್ತಾಂತವಂ ವಿಸ್ತರಿಸಲು, ಆ ಋಷೀಶ್ವರನು ಕ್ಷಣಮಾತ್ರ ಧ್ಯಾನಿಸಿ
ಇಂತೆಂದನು, ಎಲೈ ಮಗಳೇ! ಅಂಜದಿರು, ಆ ಶಾಪವಿತ್ತ ಪುರುಷನು ಧರ್ಮ
ಪುರುಷನು ನಿನ್ನ ಶಾಪದಿಂದ ನದನಾದನು, ನೀನು ಮುನ್ನ ತಪದಿಂದ ಪ್ರಾರ್ಥಿ
ಸಲ್ಪಟ್ಟ ಧರ್ಮಪುರುಷನು ಶಾಪವಿತ್ತ ಕಾರಣ ಆತನ ಶಾಪ ತಪ್ಪದು, ಮತ್ತೇ
ನೆಂದರೆ ನೀನು ಕಾಶಿಯಲ್ಲಿ ಆ ಧರ್ಮಪುರುಷ ನದನಾದನಲ್ಲಾ ಆ ತೀರದಲ್ಲಿ
ಚಂದ್ರಕಾಂತದ ಶಿಲೆಯಾಗಿ ಚಂದ್ರೋದಯ ಸಮಯದಲ್ಲಿ ದ್ರವಿಸಿ ಆ
ದ್ರವೋದಕದಿಂದ ಧೂತಪಾಪೆ ಎಂಬ ನದಿಯಾಗಿ ನಿನ್ನ ಪುರುಷ ನದರೂಪ
ನಾದ ಧರ್ಮನಿಗೆ ಸ್ತ್ರೀಯಾಗು, ಆತನು ನೀನು ಪ್ರಾರ್ಥಿಸಿದ ಗುಣಂಗಳು
ಳ್ಳವನು ತನ್ನ ತಪೋಬಲದ ತನ್ನ ಹರಿಕೆಯಿಂದ ನಿನ್ನ ಪುರುಷನಾದ ಧರ್ಮ
ನೂ ನದನಾದನಲ್ಲಾ ಆತನು ಪುರುಷರೂಪು ನದರೂಪು ಎರಡು ಸಂಭವಿಸಿ ನ
ದೀರೂಪು ನಿನಗೂ ದಿವ್ಯವಾದ ಸ್ತ್ರೀ ರೂಪವೂ ಎರಡೂ ಉಂಟಾಗಲಿ ಎಂದು
ಮಗಳಿಗೆ ವಿಶ್ವಾಸವಿತ್ತು ಸಂತೈಸಿದನು. ಅಂದಾರಭ್ಯ ಕಾಶಿಯಲ್ಲಿ ಮಹಾಪಾ
ತಕಂಗಳು ಪರಿಹರಿಪ ಸಕಲ ತೀರ್ಥಮಯವಾದ ಧೂತಪಾಪೆಯೆಂಬ ನದಿ
ಯಾಗಿ ತನ್ನ ಪತಿಯಾದ ನದನು ನದನಾದನಲ್ಲಾ, ಆ ನದನಲ್ಲಿ ಕೂಡಿ ತನ್ನ
ಲ್ಲಿ ಸ್ನಾನವಂ ಮಾಡಿದ ಜನರುಗಳ ಪಾಪಂಗಳಂ ಪರಿಹರಿಸುತ್ತಾ ಇಹಳು.
ಈ ಕಾಶೀಕ್ಷೇತ್ರಕ್ಕೆ ಗಂಗಾಭವಾನೀ ಬಾರದ ಮೊದಲೆ ಧೂತಪಾಪೆ ಧರ್ಮ
ನದ ಈ ಎರಡು ಸಂಗಮದಲ್ಲಿ ಸೂರ್ಯನು ಗಭಸ್ತೀಶ್ವರ ಮಂಗಳಗೌರಿ
ಯರಂ ಪೂಜಿಸುತ್ತಾ ಉಗ್ರತಪವಂ ಮಾಡುತ್ತಾ ಇರಲು, ಆ ಸೂರ್ಯನು
ತನ್ನ ಕಿರಣಗಳಿಂದ ತನಗೆ ಘನವಾದ ಬೆವರು ಪುಟ್ಟಿದ ಕಿರಣೆಯೆಂಬ ನದಿ
ಯಾಗಿ ಧೂತಪಾಪೆಯು ಕೂಡಿತು. ಅನಂತರದಲ್ಲಿ ಭಗೀರಥನಿಂದ ದೇವ
ಗಂಗೆ ಬ್ರಹ್ಮಾಂಡವ ಭೇದಿಸಿಕೊಂಡು ಬಂದು ತ್ರೈಲೋಕ್ಯ ಪಾವನವ
ಮಾಡುವಲ್ಲಿ ಈ ಕಾಶೀಕ್ಷೇತ್ರಕ್ಕೂ ಬಂದ ಭಗೀರಥ ಗಂಗೆಯೂ ಕೂಡಿ
ತು. ಅನಾದಿಯಲ್ಲಿ ಮಣಿಕರ್ಣಿಕೆ ಎಂಬ ತೀರ್ಥವುಂಟಷ್ಟೆ. ಅದರಿಂದ ಪಂಚ
ನದವೆಂಬ ಹೆಸರಾಯಿತು. ಕಾಶಿಯಲ್ಲಿದ್ದ ಸಕಲ ತೀರ್ಥಗಳೂ ಈ ಪಂಚ

ನದ ತೀರ್ಥದಲ್ಲಿ ಒಂದು ಸ್ನಾನದಿಂದಹುದು, ಇಲ್ಲಿ ಶ್ರಾದ್ಧ ತರ್ಪಣಂಗಳ. ಮಾಡಿ ಬಿಂದುಮಾಧವನಂ ಪೂಜಿಸಲು, ಪುನರ್ಜನ್ಮವಿಲ್ಲ, ಯಮಲೋಕ ದಲ್ಲಿರ್ದ ಸಕಲ ಪಿತೃಗಳಿಗೂ ತಮ್ಮ ವಂಶದಲ್ಲಿ ಪುಟ್ಟಿದವನು ಕಾಶೀ ಕ್ಷೇತ್ರಕ್ಕೆ ಬಂದು ಈ ತೀರ್ಥದಲ್ಲಿ ಸ್ನಾನ ತರ್ಪಣಂಗಳಂ ಮಾಡಿ ಶ್ರಾದ್ಧ ವಂ ಮಾಡಿ ನಮಗೆ ಮುಕ್ತಿಯು ಸಂಪಾದಿಸುವರೋ ಇಲ್ಲವೋ ಎಂದು ಬಯಸುತ್ತಿಹರು, ಅಲ್ಲಿ ಮಾಡಿದ ಸ್ನಾನ ದಾನದ ಫಲಾ ಬ್ರಹ್ಮಕಲ್ಪವಾದ ರೂ ಕೆಡದು. ಬಂಜೆಯಾದವಳು ಈ ತೀರ್ಥದಲ್ಲಿ ಪ್ರತಿದಿನವೂ ಸ್ನಾನವಂ ಮಾಡಿ ಮಂಗಳ ಗೌರಿಯಂ ಪೂಜಿಸಲು, ಸುಪುತ್ರನಹನು. ಈ ತೀರ್ಥೋದ ಕವಂ ಶೋಧಿಸಿ ತಮ್ಮ ಇಷ್ಟ ದೇವತೆಗಳಿಗೆ ಅಭಿಷೇಕವಂ ಮಾಡಲು ನೂ ರೆಂಟು ಕಲಶಗಳಿಂದ ಪಂಚಾಮೃತಾಭಿಷೇಕವಂ ಮಾಡಿದ ಫಲವುಂಟು, ಈ ತೀರ್ಥವಂ ಒಂದು ಬಿಂದುಮಾತ್ರ ಪಾನವಂ ಮಾಡಲು ಶಾಸ್ತ್ರೋಕ್ತ ಪ್ರಕಾರದಿಂದ ಪಂಚಗವ್ಯವಂ ಕೊಂಡ ಫಲವುಂಟು. ಈ ತೀರ್ಥಸ್ನಾನದಿಂದ ನೂರು ರಾಜಸೂಯ ಯಾಗದ ಫಲವುಂಟು. ಈ ತೀರ್ಥಸ್ನಾನದಿಂದ ರಾಜ ಸೂಯ ಯಾಗದ ಅವಭೃತಸ್ನಾನದ ಫಲವುಂಟು, ರಾಜಸೂಯ ಅಶ್ವಮೇಧ ಯಾಗಂಗಳಂ ಮಾಡಲು ಬ್ರಹ್ಮನ ಎರಡು ಘಳಿಗೆ ಸ್ವರ್ಗದ ಭೋಗವನೀ ವುದು, ಈ ತೀರ್ಥಸ್ನಾನವಂ ಮಾಡಲು ಬ್ರಹ್ಮಕಲ್ಪದ ಪರಿಯಂತರವೂ ಸ್ವರ್ಗಭೋಗ, ಮತ್ತೊಂದು ಸ್ಥಳದಲ್ಲಿ ಕೋಟಿಮಂದಿಗೆ ಕರ್ತನಾದ ಕೋಟಿ ದೊರೆಗಳ ಕೈಯ್ಯ ಪಾಲೈಸಿಕೊಂಬ ರಾಜನ ದೊರೆತನಕ್ಕಿಂತಲು ಈ ಕ್ಷೇತ್ರದಲ್ಲಿ ಒಬ್ಬರ ಭೃತ್ಯನಾಗಿರುವದು ಲೇಸು, ಇಲ್ಲಿ ಕಾರ್ತಿಕ ಮಾಸದಲ್ಲಿ ಸ್ನಾನವಂ ಮಾಡಿದವರು ಶಿವಸಾಯುಜ್ಯವನ್ನೈದುವರು, ಸ್ನಾನ ವಂ ಮಾಡಿದವರು ಹುಟ್ಟಿ ಹುಟ್ಟಿ ಅನೇಕ ಜನ್ಮಕ್ಕೆ ಮರಳುತ್ತಾ ಇಹರು, ಈ ತೀರ್ಥ ಕೃತಯುಗದಲ್ಲಿ ಧರ್ಮತೀರ್ಥವೆನಿಸಿಕೊಂಡು ಇಹುದು, ತ್ರೇತಾ ಯುಗದಲ್ಲಿ ಧೂತಪಾಪೆಯೆಂದೂ ದ್ವಾಪರದಲ್ಲಿ ಬಿಂದು ತೀರ್ಥವೆಂದೂ ಕಲಿ ಯುಗದಲ್ಲಿ ಪಂಚಗಂಗಾ ತೀರ್ಥವೆಂದೂ ಪ್ರಸಿದ್ಧವಾಗಿ ಇರುವದು, ಕೃತಯು ಗದಲ್ಲಿ ನೂರು ವರ್ಷ ಉಗ್ರತಪವಿದ್ದ ಫಲವು ಈ ತೀರ್ಥದಲ್ಲಿ ಕಾರ್ತಿಕ ಮಾಸದಲ್ಲಿ ಮಾಡಿದ ಒಂದು ಸ್ನಾನದಿಂದ ಬಹು ದೂರಸ್ಥಳಾಂತರದಲ್ಲಿ

ಯಾವಜ್ಜೀವವೂ ಮಾಡಿದ ಯಜ್ಞ ಕೆರೆ ಭಾವಿ ತೋಟ ಕೊಳಗಳು ಮೊದಲಾದ ಧರ್ಮಫಲವೂ ಇಲ್ಲಿ ಒಂದು ಸ್ನಾನದಿಂದ ದೊರಕೊಂಬುದು, ಒಂದು ಸ್ನಾನದಿಂದ ಮೂರು ಜನ್ಮದ ಪಾಪಂ ಪರಿಹರಿಪ ಈ ತೀರ್ಥಕ್ಕೆ ಸಮಾನವಾದ ತೀರ್ಥವು ಭೂಮಿಯೊಳಗಿಲ್ಲ, ಈ ತೀರ್ಥನಲ್ಲಿ ಗೋದಾನ ಭೂದಾನ ಹಿರಣ್ಯದಾನ ವಸ್ತ್ರದಾನ ಪುಷ್ಪದಾನ ಭೂಷಣದಾನ ಇವು ಮೊದಲಾದ ಷೋಡಶ ದಾನಂಗಳ ನೀಯಲು ಅಕ್ಷಯವಾದ ಫಲವುಂಟು, ಇಲ್ಲಿ ಮಾಡಿದ ಒಂದು ಆಹುತಿಯಿಂದ ಕೋಟಿ ಹೋಮ ಫಲ, ಈ ತೀರ್ಥದ ಮಹಿಮೆಯಂ ವರ್ಣಿಸಿ ಹೇಳಲು ಸಮರ್ಥನಾರು ? ಸಾಸಿರ ಮುಖವುಳ್ಳ ಮಹಾ ಶೇಷಂಗೆ ತೀರದು, ಅದು ಕಾರಣ ಸರ್ವವ್ಯಾಪಿಯಾದ ವಿಷ್ಣುವು ಇಲ್ಲಿ ನಿಂತನು. ಈ ಅಧ್ಯಾಯಮಂ ಭಕ್ತಿಯಿಂದ ಕೇಳುವವರು ಹೇಳುವವರು ಸಕಲ ಭೋಗಾನಂದದಲ್ಲಿ ವಿಷ್ಣುಲೋಕವನ್ನೈದುವರು ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನು, ಎಂದು ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಹೇಳಿದನೆಂಬಲ್ಲಿಗೆ ಅಧ್ಯಾಯಾರ್ಥ * * * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ಣಾಟಕ ಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀ ಮಹಿಮಾರ್ಥ ದರ್ಪಣದಲ್ಲಿ ಪಿಶಾಚ ವಿಮೋಚನ ತೀರ್ಥದ ಮಹಿಮೆಯೆಂಬ ಐವತ್ತೊಂಭತ್ತನೇ ಅಧ್ಯಾಯ ನಿರೂಪಣಕ್ಕಂ ಮಂಗಳಮಹಾ *

ಐವತ್ತೊಂಭತ್ತನೆಯ ಅಧ್ಯಾಯ ಸಂಪೂರ್ಣ.

*

ಅರವತ್ತನೇ ಅಧ್ಯಾಯಂ.

ಬಿಂದುಮಾಧವನ ಮಹಿಮೆ.

ಅನಂತರದಲ್ಲಿ ಕುಮಾರಸ್ವಾಮಿ ಇಂತೆಂದನೂ, ಕೇಳೈ ಅಗಸ್ತ್ಯನೆ! ಪಂಚಗಂಗಾತೀರ್ಥ ಮಹಿಮೆಯಂ ಪೇಳಿದೆನಲ್ಲಾ, ಬಿಂದುಮಾಧವನ ಮಹಿಮೆಯಂ ಪೇಳ್ವೆನೂ. ಕೇಳು, ಶ್ರೀಮಹಾವಿಷ್ಣುವು ಮಂದರಪರ್ವತದಿಂದಾ ಪರಮೇಶ್ವರನಿಂದ ಕಳುಹಿಸಿಕೊಂಡು ಮಹಾಲಕ್ಷ್ಮೀ ಸಮೇತನಾಗಿ ಗರುಡಾರೂಢನಾಗಿ ಕಾಶೀಕ್ಷೇತ್ರಕ್ಕೆ ಬಂದು ತನ್ನ ಮಾಯೆಯಿಂದಾ ದಿವೋದಾಸರಾಯನಂ ಪೊರಮಡಿಸಿ ಪಾದೋದಕ ತೀರ್ಥದಲ್ಲಿ ಆದಿಕೇಶವನ ರೂಪದಿಂ ನಿಂತು ಕಾಶೀಕ್ಷೇತ್ರದ ಮಹಿಮೆಯಂ ತನ್ನೊಳು ಆಲೋಚನೆಯಂ ಮಾಡಿ ದಿವೋದಾಸರಾಯನ ಪೊರಮಡಿಸಿದ ವೃತ್ತಾಂತಮಂ ಗರುತ್ಮಂತನ ಕೈಯ್ಯಲ್ಲಿ ಪರಮೇಶ್ವರಂಗೆ ಬಿನ್ನಹವಂ ಮಾಡಿ ಕಳುಹಿಸಿ, ಅನಂತರದಲ್ಲಿ ವಿಷ್ಣುವು ಪಂಚಗಂಗಾತೀರ್ಥಮಂ ಕಂಡು ಸಂತೋಷದಿಂದ ಈ ಪಂಚನದ ತೀರ್ಥದಲ್ಲಿರ್ದ ಗುಣಗಳಂ ವೈಕುಂಠದಲ್ಲಿಯೂ ಕ್ಷೀರಸಮುದ್ರದಲ್ಲಿಯೂ ಕಾಣೆನೂ, ಈ ಧೂತಪಾಪೆ ಎಂಥಾ ಪತಿವ್ರತೆ, ಮತ್ತೆಲ್ಲಿಯೂ ಇಲ್ಲ, ಈ ತೀರ್ಥಮಂ ಕಂಡ ಸಂತೋಷವು ಲಕ್ಷ್ಮೀದೇವಿಯ ಆಲಿಂಗನದಲ್ಲಿಯೂ. ಕಾಣೆನೂ, ಇಂತೆಂದು ಪಂಚಗಂಗಾ ತೀರ್ಥಮಂ ವರ್ಣಿಸುತ್ತಾ ಬರುತ್ತಿರಲು ಮುಂದೆ ತನ್ನಂ ಕುರಿತು ನಿಶ್ಚಲಚಿತ್ತದಿಂದ ಉಗ್ರತಪವಂ ಮಾಡುವ ಅಗ್ನಿಬಿಂದು ಋಷೀಶ್ವರನಂ ಕಂಡು ತನ್ನ ನಿಜರೂಪದಿಂದ ಪ್ರತ್ಯಕ್ಷವಾಗಿ ಇಂತೆಂದನೂ, ಎಲೈ ಅಗ್ನಿಬಿಂದುವೆ! ನಿನ್ನ ತಪವು ಸಾಕು ನಿನಗೆ ತಾನು ಪ್ರಸನ್ನನಾದೆನು, ನಿನಗೆ ಬೇಕಾದ ವರವಂ ಕೇಳಿಕೊ ಎಂಬ ವಾಕ್ಯವಂ ಕೇಳಿ ಆ ಋಷೀಶ್ವರನು ಕಣ್ದೆರದು ಮುಂದೆ ಪ್ರಸನ್ನನಾದ ಅಚ್ಯುತನಾದ ಪುಂಡರೀಕಾಕ್ಷನಾದ ಲಕ್ಷ್ಮೀಪತಿಯಾ

ದ ವನಮಾಲಾಧರನಾದ ಶಂಖಚಕ್ರ ಗದಾಪಾಣಿಯಾದ ಕೌಸ್ತುಭಮಣಿ ಕ್ಯದಿಂದೊಪ್ಪುವ ಉರಸ್ಥಳವುಳ್ಳ ಪೀತಾಂಬರಧರನಾದ ಕನ್ನೈದಿಲೆಯಿಂದ ಕಾಂತಿಯುಳ್ಳ ಮನೋಹರಮಪ್ಪ ಶರೀರಕಾಂತಿಯುಳ್ಳ ನಾಭಿಯಲ್ಲಿ ಪದ್ಮವುಳ್ಳ ಕೆಂಪಾದ ಅಧರಕಾಂತಿಯಿಂದೊಪ್ಪುವ ದಾಳಿಂಬದ ಹಣ್ಣಿನ ಬೀಜದಿಂದೊಪ್ಪುವ ದಂತಪಙ್ತಿಯುಳ್ಳ ಆಕಾಶವಂ ಪ್ರಕಾಶವಮಾಡುವ ಸೂರ್ಯನ ಸಹಸ್ರ ತೇಜಸ್ಸುಳ್ಳ ಇಂದ್ರಾದಿಗಳಿಂ ನಮಸ್ಕರಿಸಲ್ಪಡುವ ಪಾದ ಪದ್ಮಂಗಳುಳ್ಳ ಶೌನಕಾದಿಗಳಿಂದ ಸ್ತುತಿಸಲ್ಪಡುವ ನಾರದಾದಿಗಳಿಂದ ನಾದ ವ ಮಾಡಿಸಿಕೊಂಬ ಪ್ರಹ್ಲಾದಾದಿಗಳಿಂ ಧ್ಯಾನವ ಮಾಡಿಸಿಕೊಳ್ಳಲ್ಪಡುವ ಶಾರ್ಙಚಾಪಮಂ ಧರಿಸಿದ ಸಕಲ ದಾನವ ಸಂಹಾರಕನಾದ ಮಧುಕೈಟ ಭಾರಿಯಾದ ಕೈವಲ್ಯನಾಥನಾದ ಪರಬ್ರಹ್ಮನಾದ ನಿರಾಕಾರನಾದ ಅವಾ ಙ್ಮನಸಗೋಚರನಾದ ಭಕ್ತರ ಭಕ್ತಿಗೋಸ್ಕರ ಭಕ್ತರ ರಕ್ಷಿಪನಿಮಿತ್ತ ಮನೋಹರವಾದ ಆಕಾರವಂ ಧರಿಸಿ ಲಕ್ಷ್ಮೀಸಮೇತ ಪ್ರಸನ್ನನಾಗಿ, ಇಹ ವಿಷ್ಣುವಿನ ಮೂರ್ತಿಯನ್ನೂ ಅಗ್ನಿಬಿಂದು ಋಷೀಶ್ವರನು ಕಂಡು ಸಾಷ್ಟಾಂಗನಮಸ್ಕಾರವಂ ಮಾಡಿ ಎದ್ದು ಶಿರದಲ್ಲಿ ಮುಗಿದ ಕೈಗಳು ಳ್ಳವನಾಗಿ ಭಕ್ತಿಯಿಂದ ಸ್ತುತಿಸತೊಡಗಿದನು ; ಅದೆಂತೆನೆ :—

ಎಲೈ ದೇವ ದೇವ ! ಪುಂಡರೀಕಾಕ್ಷ ! ಬಾಹ್ಯಾಭ್ಯಂತರಗಳಲ್ಲಿ ಪವಿ ತ್ರವನೀವ ಸಾವಿರ ಶಿರಸ್ಸು ಸಾವಿರ ಕಣ್ಣು ಸಾವಿರ ಪಾದಂಗಳುಳ್ಳವನಾಗಿ ಪರಮ ಪುರುಷನಾದ ವಿಷ್ಣುವೇ ! ಶೀತೋಷ್ಣ ಮೊದಲಾದ ದ್ವಂದ್ವಸುಖ ದುಃಖಂಗಳಂ ಬಿಡಿಸುವ ನಿಮ್ಮ ಪಾದಾರವಿಂದಗಳಿಗೆ ನಮಸ್ಕಾರಾ, ನಿಮ್ಮ ಮಹಿ ಮೆಯನ್ನು ಬೃಹಸ್ಪತಿ ಮೊದಲಾಗಿ ಸ್ತುತಿಸಲರಿಯರೂ, ಅಂಥಾ ನಿಮ್ಮ ಸ್ತುತಿ ಸುವರೆ ಆರಿಗೆ ಶಕ್ಯವಾದೀತು, ಇನ್ನೂ ಭಕ್ತಿಯೂ ನಿಮ್ಮ ಸ್ತೋತ್ರವ ಮಾಡ ಹೇಳಿ ಪೀಡಿಸುತ್ತಾ ಇಧೆ, ವೇದಗಳಿಗೆ ಅಗೋಚರನಾದ ಸ್ವಾಮಿಾ ನಮ್ಮಂಥಾ ಅಲ್ಪ ಬುದ್ಧಿಯುಳ್ಳಂಥಾವರಿಂದಾ ಹ್ಯಾಗೆ ಸ್ತುತಿಸಿಕೊಳ್ಳಲ್ಪಟ್ಟಾನೂ, ಮನ ಸ್ಸಿಗೂ ವಾಕ್ಕುಗಳಿಗೂ ಅಗೋಚರನಾದ ಸ್ವಾಮಿಯನ್ನು ಸ್ತುತಿಸಲೂ ಶಕ್ತರಾರು, ಪದಕ್ರಮ ಷಡಂಗಗಳುಳ್ಳ ವೇದಂಗಳೂ ಆವನ ನಿಶ್ವಾಸದಿಂದ ಪುಟ್ಟದವ್ರೋ ? ಅಂಥಾಸ್ವಾಮಿಯ ಮಹಿಮೆಯನ್ನು ಆವಾತ ತಿಳದಾನೂ,

ನಿಶ್ಚಲಬುದ್ಧಿಯುಳ್ಳ ಸನಕಾದಿಯೋಗೀಂದ್ರರೂ ತಮ್ಮ ಹೃದಯದಲ್ಲಿ ಧ್ಯಾನ ವಮಾಡಿನೋಡಿ ಯಥಾರ್ಥವಾಗಿ ತಿಳಿಯಲರಿಯರೂ, ಬಾಲಬ್ರಹ್ಮಚಾರಿ ಗಳಾದ ನಾರದಾದಿಗಳಿಂದಾ ಗಾನವ ಮಾಡಿಸಿಕ್ಕೊಳ್ಳಲ್ಪಡುವ ಚಾರಿತ್ರ್ಯವುಳ್ಳ ವನಾಗಿಯೂ ಚನ್ನಾಗಿ ತಿಳಿಯತಕ್ಕವನಲ್ಲಾ, ಅಂಥಾ ಸೂಕ್ಷ್ಮರೂಪನಾದ ಉತ್ಪತ್ತಿ ಇಲ್ಲದ ಏಕನಾದರೂ ಬ್ರಹ್ಮಾದಿಗಳಿಗೆ ಅಗೋಚರನಾದ ಅನಂತ ಶಕ್ತಿಯುಳ್ಳ ನಿತ್ಯನಾದ ನಿರಾಶ್ರಯನಾದ ಅಮೂರ್ತಿಯಾದ ಅಚಿಂತ್ಯಮೂರ್ತಿಯಾದ ಚರಾಚರಕ್ಕೆ ಗುರುವಾದ ನಿನ್ನ ಮಹಿಮೆ ಯಂ ಬಲ್ಲವರಾರೂ, ಎಲೈ ಮುರಾರಿಯಾದ ಹರಿಯೇ! ನಿನ್ನ ನಾಮಸ್ಮ ರಣೆಯಂ ಮಾಡಲೂ ಜನ್ಮಾಂತರಗಳಲ್ಲಿ ಮಾಡಿದ ಮಹಾಪಾತಕಂ ಗಳಂ ಪರಿಹರಿಸಿ ನಿನ್ನ ಅಧಿಕ ಪದವಂ ಕೊಡುವದು, ಮುಕುಂದ ಮಧು ಸೂದನ ಮಾಧವ ನಾರಾಯಣ ನರಕಾರ್ಣವೋತ್ತರಣ ದಾಮೋದರ ಚತುರ್ಭುಜ ವಿಶ್ವಂಭರ ಪಕ್ಷಿರಥ ಜನಾರ್ದನ ಎಂಬ ದಿವ್ಯನಾಮಂ ಗಳಂ ಸ್ಮರಿಸಿದವರ್ಗೆ ಯಮನಭೀತಿ ಎತ್ತಣದು, ಎಲೈ ವಿಶ್ವಮನೇ! ಮೇಘ ಶ್ಯಾಮ ಬಳ್ಳಿ ಮಿಂಚುಗಳ ಪೋಲ್ವ ಪೀತಾಂಬರ ಉಡಿಗೆ ಯುಳ್ಳ ನಿಮ್ಮನ್ನು ಹೃದಯದಲ್ಲಿ ಆರು ಧ್ಯಾನವಮಾಡುವರೋ ಅವರು ಕೃತಾರ್ಥರು, ಎಲೈ ಶ್ರೀವತ್ಸಲಾಂಛನ ಅಚ್ಯುತ ಕೈಟಭಾರಿ ಗೋವಿಂದ ತಾರ್ಕ್ಷ್ಯರಥ ಕೇಶವ ಚಕ್ರಪಾಣಿ ಲಕ್ಷ್ಮೀಪತಿ ದನುಜಸೂದನ ಶಾರ್ಙ ಪಾಣಿ ಶೇಷಶಾಯಿ ಎಂಬ ದಿವ್ಯನಾಮಂಗಳುಳ್ಳ ನಿಮ್ಮ ಪಾದ ಪದ್ಮಂ ಗಳಲ್ಲಿ ಭಕ್ತಿಯುಳ್ಳ ಪುರುಷರಿಗೆ ಜನನ ಮರಣ ಭಯವೆತ್ತಣದು ಆರು ನಿಮ್ಮನ್ನು ದಿವ್ಯಗಂಧವಾದ ತುಳಸೀದಳದಿಂ ಪೂಜಿಸರೋ ಅವ ರನ್ನೂ ದೇವತೆಗಳು ಮಂದಾರ ಮಾಲೆಗಳಿಂದಾ ಪೂಜಿಸುವರೂ, ಆರು ನಿಮ್ಮನ್ನು ಸ್ತುತಿಸಿ ನಿಮ್ಮ ಕಥೆಗಳಂ ಕೇಳಿ ನಿಮ್ಮ ಧ್ಯಾನವಂ ಮಾಡು ವರೋ ಅವರಿಗೆ ಪುನರ್ಜನ್ಮವಿಲ್ಲಾ, ಎಲೈ ಶೇಷಶಾಯಿಯೆ! ಆರು ನಿಮ್ಮನ್ನು ಭಕ್ತಿಯಿಂದಾ ಪೂಜಿಸುವರೋ ಅವರನ್ನು ಇಂದ್ರ ಯಮ ವರುಣ ಕುಬೇರಾದಿಗಳು ಇಹಪರ ಸೌಖ್ಯಂಗಳಿಂದಾ ಭಜಿಸುವರು, ನಿಮ್ಮ ಸ್ತುತಿಸಿದವರನ್ನು ಸಕಲ ಅಪ್ಸರೆಯರು ಸ್ತುತಿಸು

ವದು, ಎಲೈ ಬ್ರಹ್ಮವಂದ್ಯನಾದ ಸ್ವಾಮಿಯೇ! ಈ ಜಗತ್ತಿನ ಸೃಷ್ಟಿ ಸ್ಥಿತಿ ಲಯಂಗಳನ್ನು ಮಾಡುತ್ತಾ ಇದ್ಧೀ, ಅಂಥಾ ಪ್ರಪಂಚಾತೀತನೂ ನೀನು, ಪ್ರಪಂಚವೂ ನೀನು, ಪ್ರಪಂಚಕ್ಕೆ ಪತಿಯೂ ನೀನು, ಪ್ರಪಂಚಕ್ಕೆ ಕಾರಣನೂ ನೀನು, ಹೀಗೆಂದು ನಮಸ್ಕರಿಸುತ್ತಾ ಇದ್ದೇನೆ, ಸ್ತೋತ್ರವ ಮಾಡುವನು ಮಾಡಿಸಿಕೊಂಬುವನೂ ನೀನೇ ಸರಿ, ನಿನ್ನಿಂದಾ ಭಿನ್ನವಾದ ವಸ್ತುವಂಕಾಣೆನು ನೀನೇ ಸರ್ವವ್ಯಾಪಕನು, ಇಂತೆಂದು ಸ್ತುತಿಯಂ ಮಾಡಿ ಅಗ್ನಿಬಿಂದುಋಷೀಶ್ವರನು ಸುಮ್ಮನೆ ಇರಲು, ವಿಷ್ಣುವಿಂತೆಂದನು, ಎಲೈ ತಪೋನಿಧಿಯಾದ ಪ್ರಾಜ್ಞನಾದ ಅಗ್ನಿಬಿಂದುವೇ! ನೀನು ಮಾಡಿದ ಸ್ತೋತ್ರದಿಂದಾ ನಾನು ಸುಪ್ರೀತನಾದೆನೂ ನಿನಿಗೆ ಬೇಕಾದವರಗಳಂ ಬೇಡಿಕೋ, ಎನೆ, ಅಗ್ನಿಬಿಂದುವಿಂತೆಂದು ಬಿನ್ನೈಸಿದನೂ, ಎಲೈ ಷಡ್ಗುಣೈಶ್ವರ್ಯ ಸಂಪನ್ನನಾದ ಜಗತ್ಪತಿಯೇ! ಎನಗೆ ವರವನೀವುದುಂಟಾದರೆ ಮುಮುಕ್ಷುಗಳಾದವರಿಗೂ ಸಕಲ ಪಂಚಭೂತದೇಹಿಗಳಿಗೂ ಹಿತವಾದ ಈ ಪಂಚನದ ತೀರ್ಥದಲ್ಲಿ ಸ್ಥಿರವಾಗಿ ನೀವು ನೆಲಸಿ ಇರಬೇಕು, ನಿಮ್ಮ ಪಾದಪದ್ಮಂಗಳಲ್ಲಿ ಚಲನೆ ಇಲ್ಲದ ಭಕ್ತಿಯಂ ತನಗೆ ಕೊಡಬೇಕು, ಇದೀಗ ತನಗೆ ವರವು, ಮತ್ತೊಂದು ವರಗಳನೊಲ್ಲೆನು, ಎಂದು ಬಿನ್ನೈಸಿದ ಅಗ್ನಿಬಿಂದುವಿನ ವಾಕ್ಯವಂ ಕೇಳಿ ಪರೋಪಕಾರಾರ್ಥವಾಗಿ ಕೇಳಿದೆನಲ್ಲಾ ಎಂದು ಮತ್ತು ಅತ್ಯಂತ ಸಂತುಷ್ಟನಾಗಿ ವಿಷ್ಣುವಿಂತೆಂದನು, ಎಲೈ ಅಗ್ನಿಬಿಂದುವೇ! ಹಾಗೇ ಆಗಲೀ ತಾನು ಈ ತೀರ್ಥದ ಸಮೀಪದಲ್ಲಿದ್ದು ಈ ಕಾಶೀಕ್ಷೇತ್ರದಲ್ಲಿ ಭಕ್ತಿಯುಳ್ಳವರಿಗೆ ಮುಕ್ತಿ ಮಾರ್ಗವಂ ಕೊಡಿಸಿ ರಕ್ಷಿಸುವೆನು, ನೀನು ನನಿಗೆ ಅತ್ಯಂತ ಪ್ರಿಯ ಭಕ್ತನೂ, ನಿನಗೆ ಎನ್ನಲ್ಲಿ ಭಕ್ತಿ ದೃಢವಾಗಲೀ, ತಾನು ಮೊದಲೇ ಈ ಪಂಚಗಂಗಾತೀರ್ಥದಲ್ಲಿ ಇರಬೇಕೆಂದು ಇದ್ದೆನೂ ಈಗ ನೀನು ಪ್ರಾರ್ಥಿಸಿದೆಯಾದಕಾರಣಾ ಅವಶ್ಯವಾಗಿ ಇದ್ದೇನೆ, ಆವಾತನೊಬ್ಬನು ಈ ಕಾಶೀಕ್ಷೇತ್ರಕ್ಕೆ ಬಂದು ಇಲ್ಲಿ ವಾಸವಾಗಿ ಇದ್ದರೆ ಅಜ್ಞಾನದಿಂ ಬಿಟ್ಟು ಪೋಪನು ಅವನ ಕೈಯಲ್ಲಿದ್ದ ಅನರ್ಘ್ಯವಾದ ಮಾಣಿಕ್ಯವಂ ಬಿಸುಟು ಗಾಜಿನಮಣಿಯಂ ಅಳಸಿದಂತಿಹನು, ಅವಶ್ಯವಾಗಿ ಹೋಗಲುಳ್ಳ ಶರೀರ, ಇದಂ

ನೆಚ್ಚದೆ ಮುಕ್ತಿಯು ಸಾಧಿಸಬೇಕಾದರೆ ಈ ಕಾಶೀಕ್ಷೇತ್ರದಲ್ಲಿ ಅಲ್ಲದೆ ಮತ್ತೊಂದು ಕ್ಷೇತ್ರಗಳಲ್ಲಿ ಇಲ್ಲ, ವೃದ್ಧಾಪ್ಯದಿಂ ಜೀರ್ಣವಾಗುವಂಥಾ ಪಂಚಭೂತ ಶರೀರಮಂ ಬಿಟ್ಟು ಮನುಜರು ಸ್ಥಿರವಾದ ದಿವ್ಯ ಶರೀರವನ್ನೇಕೆ ಧರಿಸಲೊಲ್ಲರೋ ? ಈ ಕಾಶಿಯಲ್ಲಿ ದೇಹತ್ಯಾಗದಿಂದಾ ಆಗುವ ಮೋಕ್ಷವು ಮತ್ತೊಂದು ಕಡೆಯಲ್ಲಿ ಯಜ್ಞ ದಾನ ತಪಸ್ಸುಗಳಿಂದಲೂ ಆಗದೂ, ಯೋಗಿಗಳಿಗೆ ಬಂದು ಜನ್ಮದಿಂ ಮುಕ್ತಿ ದೊರಕುವದು ದುರ್ಲಭವು, ಶರೀರವನ್ನಿತ್ತಿದವರಿಗೆ ತಪಸ್ಸು ಮಹಾ ದಾನ ವ್ರತಂಗಳು ಮಾಡಿದ ಫಲವಹುದು, ಕಾಶಿಗೆ ಹೊಕ್ಕು ಸ್ಥಳಾಂತರಕ್ಕೆ ಹೋಗದವನೇ ಬಲ್ಲವನು, ಅವನೇ ಜಿತೇಂದ್ರಿಯನೂ ಪುಣ್ಯವಂತನೂ ಧನ್ಯನೂ, ಅದುಕಾರಣ ಮಹಾಪ್ರಳಯದಲ್ಲಿ ಮೊದಲಾಗಿ ಪರಮೇಶ್ವರನು ತ್ರಿಶೂಲಾಗ್ರದಲ್ಲಿ ಎತ್ತಿಕೊಂಡು ಇದ್ದಂಥಾ ಕಾಶೀಕ್ಷೇತ್ರದಲ್ಲಿಯೇ ಇದ್ದೇನೆಂದು ವಿಷ್ಣುವು ನುಡಿಯಲೂ, ವಿಷ್ಣುವಿನ ವಾಕ್ಯಮಂ ಕೇಳಿ ಅಗ್ನಿಬಿಂದು ಮತ್ತೊಂದು ವರವಂ ಬೇಡಿದನು. ಎಲೈ ಲಕ್ಷ್ಮೀಪತಿಯೇ ! ನೀನು ನನ್ನ ಹೆಸರಿನಿಂದಾ ಕರೆಸಿಕೊಂಡು ಭಕ್ತರಿಗೂ ಅಭಕ್ತರಿಗೂ ಸರಿಯಾಗಿ ಮುಕ್ತಿಯಂ ಕೊಡು, ಈ ಪಂಚನದ ತೀರ್ಥದಲ್ಲಿ ಸ್ನಾನವಂ ಮಾಡಿ ದೇಶಾಂತರದಲ್ಲಿ ಮೃತರಾದರೂ ಅವರಿಗೆ ಮುಕ್ತಿಯಾಗಲಿ ಈ ತೀರ್ಥದಲ್ಲಿ ಸ್ನಾನವಂ ಮಾಡಿ ನಿನ್ನ ಪೂಜಿಸಲೂ ಅವರಲ್ಲಿ ಶ್ರೀ ಮಹಾಲಕ್ಷ್ಮೀ ಸ್ಥಿರವಾಗಿ ಇರಲೀ, ಇಂತೆಂದು ಬಿನ್ನಹವಂ ಮಾಡೆ ಅಗ್ನಿಬಿಂದುವಿನ ವಾಕ್ಯಮಂ ಕೇಳುತ್ತಾ ವಿಷ್ಣುವಿಂತೆಂದನೂ, ಎಲೈ ಅಗ್ನಿಬಿಂದುವೇ ! ನಿನ್ನ ಹೆಸರೊಳರ್ಥಮಂ ಕೂಡಿಕೊಂಡು ಬಿಂದುಮಾಧವನೆಂಬ ಹೆಸರು ತ್ರೈಲೋಕ್ಯದಲ್ಲಿ ಪ್ರಸಿದ್ಧವಾಗಲೀ, ಆರು ನಿತ್ಯವೂ ಇಲ್ಲಿ ಸ್ನಾನವಂ ಮಾಡಿ ತನ್ನ ಪೂಜೆಯಂ ಮಾಡುವರೋ ಅವರ್ಗೆ ಸಂಸಾರ ಭಯವೆತ್ತಣದು, ಈ ಸ್ವಸ್ವರೂಪಿಯಾದ ಮೋಕ್ಷ ಸ್ವರೂಪಿಯಾದ ಮಹಾ ಲಕ್ಷ್ಮಿಯು ಈ ಪಂಚನದಿಯಂ ಆವನು ಹೃದಯದಲ್ಲಿ ಧ್ಯಾನವಂ ಮಾಡುವನೋ ? ಅವನಿಗೆ ಇಷ್ಟಾರ್ಥ ಸಂಪದವಂ ಕೊಡಲೀ, ಅವನೇ ಕೃತಾರ್ಥನೂ, ಈ ಪಂಚನದ ತೀರದಲ್ಲಿ ಸುವರ್ಣಾದಿಗಳಂ ದಾನವನಿತ್ತವನೂ ಕೃತಕೃತ್ಯನಹನು, ಧನ್ಯನು, ಈ ತೀರ್ಥ ತನ್ನ

ಹೆಸರಿನಿಂ ಬಿಂದುತೀರ್ಥವೆನಿಸಿ ಇಲ್ಲಿ ಸ್ನಾನವಂ ಮಾಡಿದವರ ಪಾತಕಂಗಳಂ ಪರಿಹರಿಸಲೀ, ಕಾರ್ತಿಕಮಾಸದಲ್ಲಿ ಬ್ರಹ್ಮಚರ್ಯ ವ್ರತವಂ ಮಾಡಿಕೊಂಡು ಪ್ರತಿದಿನವೂ ಈ ಬಿಂದುತೀರ್ಥದಲ್ಲಿ ಸ್ನಾನವಂ ಮಾಡಿ ಎನ್ನ ಪೂಜಿಸಿ ರಾತ್ರಿ ನಕ್ತ ಭೋಜನವಂ ಮಾಡುವರೋ ಅವರ್ಗೆ ಯಮಬಾಧೆ ಎತ್ತಣದು? ಅಜ್ಞಾನಕೃತ್ಯದಿಂದಾ ಸಹಸ್ರ ಪಾಪಂಗಳನ್ನಾದರೂ ಕಾರ್ತಿಕ ಮಾಸದ ಒಂದು ಸ್ನಾನದಿಂ ಪರಿಹರವಾಡುವದು ಅಶುಚಿಭಾಜನವಾದ ಈ ಶರೀರವೂ ಸ್ವಸ್ಥದಲ್ಲಿ ಇದ್ದಾಗಲೇ ಕೃಛ್ರಚಾಂದ್ರಾಯಣಾದಿ ವ್ರತಗಳಂ ಮಾಡಬೇಕೂ ಈ ವ್ರತವ ಮಾಡಿದವರ ಶರೀರವು ಅಶುಚಿಯಾದರೂ ಶುಚಿಯಾಗಿ ಅಲ್ಲಿ ಧರ್ಮ ನೆಲಸುವದು, ಆ ಧರ್ಮದಿಂದಾ ಅರ್ಥ ಕಾಮ ಮೋಕ್ಷಂಗಳಹವು ಅದುಕಾರಣ ನಿತ್ಯವೂ ವ್ರತಾಚರಣೆಯಂ ಮಾಡಬೇಕು, ಮಾಡಲಾರದಿದ್ದರೆ ಚಾತುರ್ಮಾಸ್ಯ ನಾಲ್ಕು ತಿಂಗಳಾದರೂ ವ್ರತವ ಮಾಡಬೇಕು, ಆಚಾತುರ್ಮಾಸ್ಯದಲ್ಲಿ ಮಾಡುವ ವ್ರತಗಳಾವಾವೆಂದರೆ—ಭೂಮಿಯಲ್ಲಿ ಮಲಗುವದೂ ಬ್ರಹ್ಮಚರ್ಯ ಮಿತಾಹಾರ ಏಕಭುಕ್ತ ನಿತ್ಯದಾನ ಪುರಾಣಶ್ರವಣ ಪುಣ್ಯಕಥಾಪ್ರಸಂಗಾ ಎಳೆಯವೊಳಗಳೂ ಕಾಣಿಸಬಾರದೆ ಪ್ರಾಣಿಗಳು, ಇದ್ದ ದಾರಿಯನಡೆಯದೆ ಇಹುದೂ ನೀಚರೊಡನೆ ಸಂಭಾಷಣೆಯ ಮಾಡದೆ ಇಹುದೂ, ಇವು ಮೊದಲಾದ ವ್ರತಾದಿ ನಿಯಮಂಗಳಂ ಮಾಡಲೂ ಒಂದುವರುಷವೂ ವ್ರತವ ಮಾಡಿದಷ್ಟು ಫಲವುಂಟೂ; ಈ ನಾಲ್ಕು ತಿಂಗಳು ವ್ರತವ ಮಾಡಲಸಮರ್ಥನಾದರೆ ಕಾರ್ತಿಕಮಾಸ ಒಂದು ತಿಂಗಳು ನಡಿಸಲೂ ಸಂವತ್ಸರ ಪರಿಯಂತವೂ ವ್ರತವ ಮಾಡಿದ ಫಲವಹುದೂ, ಈ ಕಾರ್ತಿಕದಲ್ಲಾದರೂ ವ್ರತವ ಮಾಡದ ಮೂರ್ಖರಿಗೆ ಪುಣ್ಯವೆಲ್ಲಿಯದು? ಈ ಕಾರ್ತಿಕದಲ್ಲಿ ಮಾಡುವ ವ್ರತವಾವನೇ ಕೃಚ್ಛ್ರ ಚಾಂದ್ರಾಯಣ ಪ್ರಾಜಾಪತ್ಯಕೃಛ್ರ, ಧಾರಣೆ, ಮೂರುದಿನಕ್ಕೆ ಒಂದುವ್ಯಾಳೆ, ಐದುದಿನಕ್ಕೆ ಒಂದು ವ್ಯಾಳೆ, ಏಳುದಿನಕ್ಕೆ ಒಂದು ವ್ಯಾಳೆ, ಹದಿನೈದುದಿನಕ್ಕೆ ಒಂದುವ್ಯಾಳೆ, ತಿಂಗಳಿಗೆ ಒಂದು ವ್ಯಾಳೆ ಹೀಗೆ ಭೋಜನವಂ ಮಾಡುವದೂ; ಭೋಜನವಿಲ್ಲದದಿನ ಶಾಕಾಹಾರ ಕ್ಷೀರಾಹಾರ ಫಲಾಹಾರ ಇವಂ ಮಾಡಿಕೊಂಡು ನಿತ್ಯ ನೈಮಿತ್ತಿಕ ಕ್ರಿಯೆಗಳಂ ಮಾಡಿಕೊಂಡು ಬ್ರಹ್ಮ

ಚರ್ಯವ್ರತವಂ ನಡಿಸಲೂ ಸಂವತ್ಸರವೂ ವ್ರತವಮಾಡಿದ ಫಲಾ; ಈ ತಿಂಗಳು ಉಪವಾಸದಿಂದಾ ವರ್ಷೋಪವಾಸದ ಫಲಾ; ಈ ತಿಂಗಳಲ್ಲಿ ಶಾಕ ಮೊದಲಾದ ವ್ರತವ ನಡಿಸಲೂ ಒಂದುವರ್ಷ ಶಾಕವ್ರತವ ಮಾಡಿದಫಲಾ, ತಳಿಗೆಯಲ್ಲಿ ಊಟವಮಾಡದೆ ಎಲೆಯಲ್ಲಿ ಊಟವ್ರತವಮಾಡಿದವರೂ ತಿಂಗಳು ಆದಮೇಲೆ ಹೊಸ ತಳಿಗೆಯಲ್ಲಿ ತುಪ್ಪವತುಂಬಿ ದಾನವನೀಯಬೇಕು, ಈ ಕಾರ್ತೀಕಮಾಸದಲ್ಲಿ ಜೇನುತುಪ್ಪವ ಮುಟ್ಟಲೂ ಕ್ಷುದ್ರಗತಿಯಾದ ಹುಳುವಾಗಿ ಹುಟ್ಟುವನೂ, ಅದುಕಾರಣ ಜೇನುತುಪ್ಪವಬಿಟ್ಟು ತಿಂಗಳಮೇಲೆ ಪರಮಾನ್ನ ಘೃತ ಸಹಾ ದಾನವ ಕೊಡಬೇಕು, ಅಭ್ಯಂಗನ ಬಿಟ್ಟವರೂ ಒಂದು ಕೊಳಗ ಎಳ್ಳು ಹಿರಣ್ಯವ ಸಹಾ ದಾನವಕೊಡಬೇಕು, ಈ ತಿಂಗಳಲ್ಲಿ ಮತ್ಸ್ಯಗಳಂ ಮುಟ್ಟಲಾಗದು ಮತ್ಸ್ಯವಂ ಮುಟ್ಟಿದವರು ಮತ್ಸ್ಯಯೋನಿಯಲ್ಲಿ ಪುಟ್ಟುವರು, ಮಾಂಸವಂ ಭಕ್ಷಿಸಿದವನು ರಕ್ತಕ್ರಿಮಿಗಳಂ ಭಕ್ಷಿಸಿದವನಹನೂ, ಅದುಕಾರಣ ಮತ್ಸ್ಯಮಾಂಸಗಳಂ ಮುಟ್ಟುವವರು ಈ ತಿಂಗಳಲ್ಲಿ ಬಿಟ್ಟರೆ ವರ್ಷವೂ ಬಿಟ್ಟವರಹರು, ಹತ್ತು ಕೊಳಗ ಉದ್ದು ಬೂದಕುಂಬಳಕಾಯಿ ಮೂವತ್ತು ಸುವರ್ಣ ಸಹಾ ದಾನವಂ ಕೊಡಬೇಕು ಈ ಮಾಸದಲ್ಲಿ ಮೌನದಿಂದ ಊಟವಂ ಮಾಡಬೇಕು, ಮೌನದಿಂದೂಟವ ಮಾಡೂ ಅಮೃತಕ್ಕೆ ಸಮಾನ ಇದಕ್ಕೆ ಪಟ್ಟೆಯ ಹಚ್ಚಡವ ದಾನವನ್ನೀಯಬೇಕು, ಎಳ್ಳು ಹಿರಣ್ಯ ಸಹಾ ದಾನವ ಮಾಡುವದು, ಈ ತಿಂಗಳು ಲವಣವಂ ಬಿಡಲೂ ಸಕಲ ರಸಂಗಳಂ ಬಿಟ್ಟ ಫಲ, ಇದಕ್ಕೆ ಗೋದಾನವ ಮಾಡಬೇಕು ಭೂಮಿಯಲ್ಲಿ ಮಲಗುವ ವ್ರತವಂ ಮಾಡಲೂ ಅಂತ್ಯವಾದ ಮೇಲೆ ಭೂಮಿಯಲ್ಲಿ ಹುಟ್ಟಿದಂಥಾ ದೇವತ್ವವಹುದೂ ಇದಕ್ಕೆ ಪಟ್ಟೆಮಂಚ ಸುಪ್ಪತ್ತಿಗೆ ತಲೆದಿಂಬು ಸಹಾ ದಾನವನ್ನೀಯಬೇಕು, ಪ್ರತಿದಿನವೂ ಈ ಕಾರ್ತೀಕದಲ್ಲಿ ಬಳ್ಳೆಣ್ಣೆ ಘೃತದಲ್ಲಿ ನಂದಾದೀಪವ ಸಮರ್ಪಿಸಲೂ ಸಕಲ ದುರ್ಗತಿ ಸಕಲ ಪೀಡಾ ಪರಿಹಾರ ನರಕದರ್ಶನವಿಲ್ಲ ಜ್ಞಾನಪ್ರದವಹುದು ಪಂಚಾಮೃತಾಭಿಷೇಕವ ಮಾಡಿದವರು ಕ್ಷೀರಸಮುದ್ರ ತೀರದಲ್ಲಿ ಜರಾಮರಣವರ್ಜಿತರಾಗಿ ಒಂದು ಬ್ರಹ್ಮಕಲ್ಪ ಪರ್ಯಂತರವೂ ಸುಖದಲ್ಲಿ ಇಹರೂ, ಘೃತದೀಪ

ರಾಧನೆಯಂ ಮಾಡಿದವನು ತಿರುಗಿ ಗರ್ಭಾಂಧಕಾರದ ರೋಗನೂ ಅಂ ತ್ಯಕಾಲದಲ್ಲಿ ಜ್ಞಾನ ಭ್ರಂಶವಾಗದೂ ಬಿಂದುತೀರ್ಥದಲ್ಲಿ ಸ್ನಾನವಂಮಾಡಿ ಪಂಚಕ್ರೋಶ ಯಾತ್ರೆಯಂ ಮಾಡಲೂ ಮುಕ್ತನಹನು ಸುವರ್ಣ ರತ್ನ ಪುಷ್ಪ ಉದಕವಂ ಶಂಖದಲ್ಲಿ ತುಂಬಿ ಎಲೈ ದಾಮೋದರನೇ! ದನು ಜೇಂದ್ರಸೂದನ! ಲಕ್ಷ್ಮೀಸಮೇತನಾಗಿ ಅರ್ಘ್ಯವನ್ನು ತೆಗದುಕೋ, ಎಂದು ಅರ್ಘ್ಯವನ್ನೀಯಲೂ ಸಪ್ತದ್ವೀಪ ಸಹಿತವಾದ ಭೂಮಿಯಂ ದಾನವನ್ನಿತ್ತ ಫಲವುಂಟು, ಉತ್ಥಾನ ಏಕಾದಶಿಯಲ್ಲಿ ಉಪವಾಸವಂ ಮಾಡಿರ್ದು ಶಿವ ಪೂಜೆಯಂ ಮಾಡಿ ನೃತ್ಯಗೀತ ವಾದ್ಯಾದಿ ಮಹೋತ್ಸವಗಳಿಂ ರಾತ್ರಿಜಾಗ ರಣವಂ ಮಾಡಿ ದ್ವಾದಶಿಯಲ್ಲಿ ಬ್ರಾಹ್ಮಣ ಭೋಜನವಂ ಮಾಡಿಸಿದರೆ ಮಹಾಪಾತಕಹರ ಯಮದರ್ಶನವಿಲ್ಲ, ಬಿಂದುತೀರ್ಥದಲ್ಲಿ ಸ್ನಾನವಂ ಮಾಡಿ ತನ್ನಪೂಜೆಸಲೂ ಮೋಕ್ಷವಹುದು ಎನಗೆ ಕೃತಯುಗದಲ್ಲಿ ಆದಿ ಮಾಧವನೆಂದು ಹೆಸರು ತ್ರೇತಾಯುಗದಲ್ಲಿ ಅನಂತ ಮಾಧವನೆಂದು ಹೆಸರು ದ್ವಾಪರದಲ್ಲಿ ಶ್ರೀಶಮಾಧವನು ಕಲಿಯುಗಲ್ಲಿ ಬಿಂದುಮಾಧವನು ಎಂಬ ಈ ನಾಲ್ಕು ಹೆಸರೂ ಉಂಟು, ಕಲಿಯುಗದಲ್ಲಿ ಭೇದವಾದಿಗಳಾದ ಮೂಢರು ಎನ್ನಮಹಿಮೆಯನ್ನರಿಯರು ನನ್ನ ಭಕ್ತರಾಗಿ ವಿಶ್ವೇಶ್ವರನಲ್ಲಿ ದ್ವೇಷವಂಮಾ ಡುವರು, ಮೂಢರು ಕಾಲಭೈರವನ ಆಜ್ಞೆಯಿಂದಾ ದಿವ್ಯ ಮೂವತ್ತು ಸಾವಿರ ವರ್ಷ ಪರ್ಯಂತರವೂ ಪಿಶಾಚರಾಗಿ ನರಕಸಮುದ್ರದಲ್ಲಿ ಮುಳುಗಿ ಇಹದಲ್ಲಿ ದುಃಖಪಟ್ಟು ಪರದಲ್ಲಿ ಇಪ್ಪತ್ತೆಂಟು ಕೋಟಿನಾಯಕ ನರಕ ದಲ್ಲಿ ಪ್ರತ್ಯೇಕ ಒಂದೊಂದು ನರಕದಲ್ಲಿ ಬ್ರಹ್ಮಕಲ್ಪ ಪರ್ಯಂತರವೂ ನರಕ ದುಃಖವನ್ನನುಭವಿಸಿ. ಆ ಮೇಲೆ ವಿಶ್ವೇಶ್ವರನ ಕೃಪೆಯಿಂದಾ ಮೋಕ್ಷ ವಪಡೆವರೂ, ಅದುಕಾರಣಾ ಎನ್ನ ಭಕ್ತರಾದವರು ವಿಶ್ವೇಶ್ವರನ ಸೇವೆಯಂ ಮಾಡ ಬೇಕು, ಈ ಕಾಶೀ ಕ್ಷೇತ್ರವು ಪಶುಪತಿಯಾದ ವಿಶ್ವೇಶ್ವರನಸ್ಥಳ ಈ ಕ್ಷೇತ್ರದಲ್ಲಿ ಪಶುಪತಿಯೇ ಪೂಜ್ಯನು ಕಾರ್ತೀಕ ಮಾಸದಲ್ಲಿ ಈ ಪಂಚ ನದತೀರ್ಥದಲ್ಲಿ ಪರಮೇಶ್ವರನು ದೇವತೆಗಳು ಋಷಿಗಳು ತಮ್ಮ ಸ್ತ್ರೀ ಯರು ಪುತ್ರರು ಸಹಾ ಸ್ನಾನವಂ ಮಾಡುವರು, ಈ ಧೂತಪಾಪೆಯಲ್ಲಿ ಸರ ಸ್ವತಿ ಸಮೇತನಾದ ಬ್ರಹ್ಮನು ಸಪ್ತ ಸಮುದ್ರಗಳು ಸಕಲ ನದೀ ನದಂಗಳು

ಸಹಾ ಸ್ನಾನವಂಮಾಡುವರು ಪ್ರಾಣಧಾರಿಗಳಾರುಂಟೊ ಎಲ್ಲರೂ ಕಾರ್ತೀಕಮಾಸದಲ್ಲಿ ಈ ತೀರ್ಥದಲ್ಲಿ ಸ್ನಾನವಂಮಾಡಲು ಮೋಕ್ಷವನ್ನೈದುವರು. ಆ ತೀರ್ಥದಲ್ಲಿ ಸ್ನಾನವಂಮಾಡದವರು ಜಲಬುದ್ಬುದಂಗಳಂತೆ ವ್ಯರ್ಥಜೀವಿಗಳು, ಸಕಲಪುಣ್ಯಕ್ಷೇತ್ರಂಗಳೊಳಗೂ ಕಾಶೀಕ್ಷೇತ್ರವೇ ಪುಣ್ಯಸ್ಥಳ ಪವಿತ್ರಸ್ಥಳವು, ಅದರಮೇಲೆ ಪಂಚನದೀತೀರ್ಥವೆ ಪವಿತ್ರವಾದುದ್ದು ಅದರಿಂದ ತನ್ನ ಸನ್ನಿಧಾನವಾದ್ದರಿಂದಲೂ ಪವಿತ್ರವಾಯಿತು, ಈ ತೀರ್ಥದ ಹೆಸರಂ ಕೇಳಲು ಸರ್ವಪಾಪ ಹರವಾಯಿತೆಂದು ವಿಷ್ಣುವು ಹೇಳಲು ಅಗ್ನಿಬಿಂದುಋಷೀಶ್ವರನು ಕೇಳಿ ನಮಸ್ಕಾರವಂಮಾಡಿ ಇಂತೆಂದು ಬಿನ್ನಹವಂಮಾಡಿದನು. ಅದೆಂತೆಂದರೆ— ಎಲೈ ಷಡ್ಗುಣೈಶ್ವರ್ಯಸಂಪನ್ನನಾದ ಬಿಂದುಮಾಧವನೆ! ಈ ಕ್ಷೇತ್ರದಲ್ಲಿ ನಿಮ್ಮ ಮೂರ್ತಿಗಳು ಎಷ್ಟು ಇದ್ದಾವೊ? ಮುಂದೆ ಆಗಲುಳ್ಳ ಮೂರ್ತಿಗಳು ಎಷ್ಟುವುಂಟೊ ಇದಂ ಕೇಳಲಿಚ್ಛೈಸುತ್ತಾ ಇದ್ದೇನೆ, ನಿನ್ನ ಮೂರ್ತಿಗಳು ಅನಂತಮೂರ್ತಿಗಳು, ಅದರೊಳಗೆ ಆ ಮೂರ್ತಿಗಳ ಪೂಜೆಯಂಮಾಡಲು ಜನರು ಕೃತಕೃತ್ಯರಹರೋ ಅಂಥಾಮೂರ್ತಿಯನ್ನು ತನಗೆ ನಿರೂಪಿಸಬೇಕೆಂದು ಅಗ್ನಿಬಿಂದುವು ಬಿಂದುಮಾಧವನಿಗೆ ಬಿನ್ನೈಸಿದನು. ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನೆಂದು ವ್ಯಾಸರು ತನಗರುಹಿದ ಅರ್ಥವಂ ಸೂತಪುರಾಣಿಕನು ಶೌನಕಾದಿಋಷಿಗಳಿಗೆ ಪೇಳಿದನೆಂಬಲ್ಲಿಗೆ ಅಧ್ಯಾಯಾರ್ಥ * ಶ್ರೀ *

ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರಿಂದ ವಿರಚಿತವಾದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಬಿಂದುಮಾಧವನ ಮಹಿಮೆಯೆಂಬ ಅರವತ್ತನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * * * * * * *

ಅರವತ್ತೊಂದನೆ ಅಧ್ಯಾಯದಲ್ಲಿ ಬಿಂದುಮಾಧವ ಅಗ್ನಿಬಿಂದುಪ್ರಸಂಗ ವಿಷ್ಣುಶಿವಮೂರ್ತಿತೀರ್ಥಪ್ರಸಂಗ,

ಶ್ರೀ ವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ಅಗಸ್ತ್ಯನಿಂತೆಂದನು. ಎಲೈ ಕುಮಾರಸ್ವಾಮಿ? ಸಕಲಪಾಪಹರಮಪ್ಪ ಬಿಂದುಮಾಧವನಿಂ

ದ ಹೇಳಲ್ಪಟ್ಟ ಪಂಚನದೀ ಮಹಾತ್ಮ್ಯೆಯಂ ಕೇಳಿದ ಅಗ್ನಿಬಿಂದುಋಷಿಮಾಡಿದ ಪ್ರಶ್ನೆಗೆ ಆ ಬಿಂದುಮಾಧವನು ಏನೆಂದು ಬದ್ಧಿಗಳಿಸಿದನೋ ಆ ವೃತ್ತಾಂತವಂ ಎನಗೆನಿರೂಪಿಸಬೇಕೆಂದು ಬಿನ್ನೈಸಲು, ಕುಮಾರಸ್ವಾಮಿ ಇಂತೆಂದನು, ಕೇಳೈ ಅಗಸ್ತ್ಯ! ಅಗ್ನಿಬಿಂದುವಿಗೆ ಬಿಂದುಮಾಧವನು ವಿಷ್ಣುಮೂರ್ತಿ ಶಿವಲಿಂಗಮೂರ್ತಿ ತೀರ್ಥಂಗಳ ಮಹಿಮೆಯ ಹೇಳಿದನು ಅದನ್ನು ನೀನುಕೇಳೆಂದು ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು, ಕೇಳೈ ಅಗಸ್ತ್ಯ! ಅನಂತರದಲ್ಲಿ ಬಿಂದುಮಾಧವನು ಇಂತೆಂದನು, ಎಲೈ ವಿವೇಕಿಯಾದ ಅಗ್ನಿಬಿಂದುವೆ! ಕೇಳು ಮೊದಲು ಪಾದೋದಕತೀರ್ಥದ ಸಮೀಪದಲ್ಲಿರ್ದ ಎನ್ನಮೂರ್ತಿಯು ಭಕ್ತರಿಗೆ ಭುಕ್ತಿಮುಕ್ತಿಯನೀವ ಆದಿಕೇಶವನು ಎಂದುತಿಳಿ, ಯಾರು ಅವಿಮುಕ್ತಕ್ಷೇತ್ರದಲ್ಲಿರ್ದ ಆದಿಕೇಶವನಪೂಜೆಯಂಮಾಡುವರೋ ಅವರು ಸುಖದುಃಖವರ್ಜಿತವಾದ ಮೋಕ್ಷವನ್ನೈದುವರು. ಆದಿಕೇಶವನಿಂದ ಪ್ರತಿಷ್ಠಿತನಾದ ಸಂಗಮೇಶ್ವರನ ದರ್ಶನದಿಂದ ಸರ್ವಪಾಪಹರ, ಪಾದೋದಕತೀರ್ಥಕ್ಕೆ ದಕ್ಷಿಣದಲ್ಲಿ ಶ್ವೇತದ್ವೀಪತೀರ್ಥದಲ್ಲಿ ಸ್ನಾನವಮಾಡಿ ಆ ಸಮೀಪದಲ್ಲಿರ್ದ ಎನ್ನಪೂಜೆಯಂಮಾಡಲು ಅಜ್ಞಾನದೋಷಪರಿಹಾರ, ಆ ಸಮೀಪದ ತಾರ್ಕ್ಷ್ಯತೀರ್ಥದಲ್ಲಿ ಸ್ನಾನವಂಮಾಡಿ ತಾರ್ಕ್ಷ್ಯಕೇಶವನಂ ಪೂಜಿಸಲು ಗರುತ್ಮಂತನಂತೆ ನನ್ನಭಕ್ತನಹನು, ಆ ಸಮೀಪದ ನಾರದತೀರ್ಥದಲ್ಲಿ ಸ್ನಾನವಂಮಾಡಿ ನಾರದಕೇಶವನಂ ಪೂಜಿಸಲು ಅವರಿಗೆ ಅಂತ್ಯದಲ್ಲಿ ಬ್ರಹ್ಮೋಪದೇಶವಂ ಮಾಡುವೆನು, ಆ ಸಮೀಪದ ಪ್ರಹ್ಲಾದತೀರ್ಥದಲ್ಲಿ ಸ್ನಾನವಂಮಾಡಿ ಪ್ರಹ್ಲಾದಕೇಶವನಂ ಪೂಜಿಸಲು ಸಂಸಾರವ್ಯಾಧಿಪರಿಹಾರ, ಭಾರ್ಗವತೀರ್ಥದ ಸಮೀಪದಲ್ಲಿರ್ದ ಭೃಗುಕೇಶವನಂಪೂಜಿಸಲು ಸಕಲಮನೋರಥಸಿದ್ಧಿಯಹುದು, ವಾಮನತೀರ್ಥದ ಸಮೀಪದ ವಾಮನಕೇಶವನಂ ಪೂಜಿಸಲು ಸಕಲಶ್ರೇಯಸ್ಕರ, ಶುಭವಬಯಸುವರು ವಾಮನಕೇಶವನಂ ಪೂಜಿಸಬೇಕು. ನರನಾರಾಯಣತೀರ್ಥದ ಸಮೀಪದಲ್ಲಿಹ ನರನಾರಾಯಣಮೂರ್ತಿಗಳ ಪೂಜೆಯಂಮಾಡಲು ನರನಾರಾಯಣಸ್ವರೂಪರಹರು. ಯಜ್ಞವಾರಾಹತೀರ್ಥದಸಮೀಪದಲ್ಲಿ ಯಜ್ಞ

ವಾರಾಹಮೂರ್ತಿಯು ಪೂಜೆಯಂಮಾಡಲು ಸರ್ವಯಜ್ಞದಫಲವಹುದು. ವಿದಾರಣನೃಸಿಂಹತೀರ್ಥದ ಸಮೀಪದಲ್ಲಿಹ ವಿದಾರಣನೃಸಿಂಹನಂ ಪೂಜಿಸಲು ಸಕಲ ಉಪದ್ರವಗಳೂ ಪರಿಹರವಹುದು, ಗೋಪೀಗೋವಿಂದತೀರ್ಥದಲ್ಲಿ ಸ್ನಾನವಂಮಾಡಿ ಗೋಪೀಗೋವಿಂದರಂಪೂಜಿಸಲೂ ಎನ್ನಮಾಯೆಗೆ ಒಳಗಾಗರೂ. ಲಕ್ಷ್ಮೀನೃಸಿಂಹತೀರ್ಥದ ಸಮೀಪದಲ್ಲಿ ಲಕ್ಷ್ಮೀನೃಸಿಂಹನಂ ಪೂಜಿಸಲು ಇಹದಲ್ಲಿ ಸಕಲಸೌಭಾಗ್ಯವಂಕೊಟ್ಟು ಪರದಲ್ಲಿ ಮುಕ್ತಿಯಂಕೊಡುವೆನು. ಶೇಷತೀರ್ಥದಸಮೀಪದ ಶೇಷಮಾಧವನ ಆರಾಧನೆಯಂಮಾಡಲು ಸಕಲಮನೋರಥಗಳೂ ಸಿದ್ಧಿಯಹವು. ಆ ಸಮೀಪದ ಶಂಖತೀರ್ಥದಲ್ಲಿ ಶಂಖಮಾಧವನಾದ ಎನ್ನ ಪೂಜಿಸಲು ಶಂಖನಿಧಿಗೆ ಪತಿಯಹನು, ಹಯಗ್ರೀವತೀರ್ಥದಲ್ಲಿ ಸ್ನಾನವಂಮಾಡಿ ಆ ಸಮೀಪದಲ್ಲಿರ್ದ ಹಯಗ್ರೀವಕೇಶವನಂ ಪೂಜಿಸಲು ಎನ್ನಸಾನ್ನಿಧ್ಯಮುಕ್ತಿಯಹನು, ವೃದ್ಧಕಾಳೇಶ್ವರನ ಪಶ್ಚಿಮದಲ್ಲಿ ಗಂಗಾಪುತ್ರನಾದ ಭೀಷ್ಮನಿಂದಾ ಪ್ರತಿಷ್ಠಿತವಾದ ಭೀಷ್ಮಕೇಶವನಂ ಪೂಜಿಸಲೂ ಸಕಲ ಉಪದ್ರವಗಳಂ ಪರಿಹರಿಸುವೆನು. ಲೋಲಾರ್ಕಕೇಶವನ ಸಮೀಪದ ಉತ್ತರದಲ್ಲಿಹ ಗೀರ್ವಾಣಕೇಶವನಂ ಪೂಜಿಸಲೂ ಮನಸ್ಸಿನ ಚಂಚಲತ್ವ ಪರಿಹರವಹುದು. ಬಿಂದಿದೇವಿಯ ಪಶ್ಚಿಮದಲ್ಲಿಹ ತ್ರಿಭುವನಕೇಶವನಾದ ಎನ್ನಂ ಪೂಜಿಸಲೂ ಪುನರ್ಜನ್ಮವಿಲ್ಲ. ಜ್ಞಾನವಾಪೀತೀರ್ಥಕ್ಕೆ ಮೂಡಲಲ್ಲಿಹ ಜ್ಞಾನಮಾಧವನೆಂಬ ಎನ್ನಂಪೂಜಿಸಲೂ ತಾರಕಬ್ರಹ್ಮಜ್ಞಾನಸಿದ್ಧಿಯಂ ಕೊಡುವೆನು. ವಿಶಾಲಾಕ್ಷಿಯಸಮೀಪದಲ್ಲಿರ್ದ ಶ್ವೇತಮಾಧವನಂ ಪೂಜಿಸಲೂ ಶ್ವೇತದ್ವೀಪವಾಸವಹುದು. ದಶಾಶ್ವಮೇಧದ ಉತ್ತರದಲ್ಲಿಹ ಪ್ರಯಾಗತೀರ್ಥದಲ್ಲಿ ಸ್ನಾನವಂಮಾಡಿ ಪ್ರಯಾಗಮಾಧವನಂ ಪೂಜಿಸಲೂ ಹತ್ತುವೇಳೆ ಪ್ರಯಾಗಸ್ನಾನವಂ ಮಾಡಿದಫಲ, ಗಂಗಾ ಯಮುನಾ ಸಂಗಮದ ಪ್ರಯಾಗದಲ್ಲಿ ಪತನ ಸ್ನಾನ ತರ್ಪಣ ದಾನ ಪಿಂಡಪ್ರದಾನಾದಿಗಳಂ ಮಾಡಲೂ ಅನೇಕಫಲ, ಅನೇಕಪಿತೃಗಳಿಗೆ, ಬ್ರಹ್ಮಲೋಕವಹುದು ಆದಕ್ಕಿಂತಲೂ ಕಾಶಿಯಲ್ಲಿರ್ದ ಪ್ರಯಾಗತೀರ್ಥಸ್ನಾನದಿಂ ಅಸಂಖ್ಯಾತಫಲ, ಅಸಿತೀರ್ಥದ ಸಮೀಪದಲ್ಲಿ ಪ್ರಯಾಗೇಶ್ವರನಿಹುದರಿಂ

ಆತೀರ್ಥವು ಸಕಲಾಭೀಷ್ಟಸಿದ್ಧಿಗಳಂ ಕೊಡುವದಾಯಿತು, ಮಕರದಾ ಶಿಯಲ್ಲಿ ಸೂರ್ಯನಿರಲೂ ಮಾಘಮಾಸವಾಗಿರಲೂ ಅರುಣೋದಯಾಸ ಮಯದಲ್ಲಿ ಕಾಶೀಕ್ಷೇತ್ರದಲ್ಲಿರ್ದ ಪ್ರಯಾಗತೀರ್ಥದಲ್ಲಿ ಸ್ನಾನವಂ ಮಾಡಲೂ ತನಿಗೆ ಪ್ರೀತಿಯಾಗಿ ಅವರಿಗೆ ಮುಕ್ತಿಯಂಕೊಡುವೆನು, ಸ್ನಾ ನವಂಮಾಡದೇಇದ್ದ ಪಾಪಿಗಳಿಗೆ ಮುಕ್ತಿಯಿಲ್ಲ, ಮಕರಮಾಸದಲ್ಲಿ ಯಾರಾದರೂ ಸ್ವರ್ಗಮರ್ತ್ಯಪಾತಾಳ ಈ ಮೂರುಲೋಕದಲ್ಲಿರ್ದ ಸ ಕಲತೀರ್ಥಂಗಳೂ ದಶದಿಕ್ಕಿನ ಸಕಲತೀರ್ಥಂಗಳೆಲ್ಲವೂ ಕಾಶೀಕ್ಷೇತ್ರ ದಲ್ಲಿರ್ದ ಸಕಲತೀರ್ಥಂಗಳೂ ಕಾಶಿಯಲ್ಲಿರ್ದ ಮೂರುತೀರ್ಥಂಗಳಿಗೆ ಬಹವು. ಅಲ್ಲಿಹೊರತಾಗಿ ಮತ್ತೊಂದುತೀರ್ಥಕ್ಕೆ ಹೋಗುವದಿಲ್ಲ, ಆ ಮೂರುತೀರ್ಥಕ್ಕೆ ಆವಾಗ ಬರುವ ಆ ತೀರ್ಥಗಳು ಆವವೆಂದರೆ— ಕಾ ರ್ತೀಕಮಾಸದಲ್ಲಿ ಪ್ರತಿದಿವಸವೂ ಎನ್ನಸಮೀಪದಲ್ಲಿಹಂಥಾ ಪಂಚ ನದತೀರ್ಥಕ್ಕೆ ಪ್ರಾತಃಕಾಲದಲ್ಲಿ ಬಹವು, ಮಾಘಮಾಸದಲ್ಲಿ ಪ್ರ ಯಾಗತೀರ್ಥಕ್ಕೆ ಬಹವು, ಸರ್ವಕಾಲವೂ ಮಧ್ಯಾಹ್ನದಲ್ಲಿ ಮಣಿಕ ರ್ಣಿಕೆಗೆ ಬಹವು, ಎಲೈ ಅಗ್ನಿಬಿಂದು ಋಷಿಯೇ! ಈ ಕಾಶೀಕ್ಷೇತ್ರದಲ್ಲಿ ರ್ದ ಸಕಲ ತೀರ್ಥಂಗಳೂ ಈ ಪರಮರಹಸ್ಯವಾದ ಮೂರು ತೀರ್ಥಂಗಳ ಲ್ಲಿ ಇರುವವು, ಈ ಮೂರುತೀರ್ಥಂಗಳೂ ಪರಮರಹಸ್ಯವು, ಇನ್ನೊಂದು ರಹಸ್ಯವುಂಟು ಅದೇನೆಂದರೇ—ಅದನ್ನು ಭಕ್ತರಿಗಲ್ಲದೆ ಹೇಳಲಾಗದು, ಕಾಶಿ ಯಲ್ಲಿರ್ದ ಸಕಲತೀರ್ಥಂಗಳೂ ಒಂದಕ್ಕಿಂತಾ ಒಂದು ಹೆಚ್ಚು ಆ ಸಕಲ ತೀರ್ಥಂಗಳಲ್ಲಿಯೂ ಈ ಮೂರು ತೀರ್ಥಂಗಳೂ ಅಧಿಕವು, ಈ ಮೂರು ತೀರ್ಥಂಗಳಲ್ಲಿಯೂ ಮಣಿಕರ್ಣಿಕಾತೀರ್ಥವೇ ಅಧಿಕವೆಂದು ಬೆರಳೆತ್ತಿ ಹೇಳುತ್ತಾಇದ್ದೇನೆ. ಸಕಲತೀರ್ಥಂಗಳೂ ತಮ್ಮಲ್ಲಿ ಸ್ನಾನವಂಮಾಡಿದವ ರ ಪಾಪಂಗಳಂ ತೊಳಗೊಂಡು ಅವರ ಪಾಪಂಗಳಂ ಪರಿಹರಿಸಿ ತಮ್ಮ ಶರೀರ ಶುದ್ಧ್ಯರ್ಥವಾಗಿ ಮಣಿಕರ್ಣಿಕಾತೀರ್ಥದಲ್ಲಿ ಸ್ನಾನವಂಮಾಡಿ ತಮ್ಮ ಸಾ ಮರ್ಥ್ಯಂಗಳಂ ಸಂಪಾದಿಸಿ ಕೊಂಬವು, ಆ ಮಣಿಕರ್ಣಿಕಾತೀರ್ಥದಲ್ಲಿ ಸ್ನಾನ ವಂಮಾಡುವುದಕ್ಕೆ ಪರ್ವತಿಥಿ ಪುಣ್ಯಕಾಲಂಗಳೆಂಬ ಭೇದವಿಲ್ಲ, ನಿತ್ಯವೂ ಪು ಣ್ಯಕಾಲ, ಪಾರ್ವತೀಸಮೇತನಾದ ಈ ವಿಶ್ವನಾಥನು ಬಂದು ಸ್ನಾನಮಾ

ಷ್ಣುವೆನು, ಲಕ್ಷ್ಮೀಸಮೇತನಾಗಿ ತಾನೂ ವೈಕುಂಠದಿಂದ ಬಂದು ನಿತ್ಯವೂ ಸ್ನಾನವಂ ಮಾಡುವೆನು. ಸತ್ಯಲೋಕದಿಂದ ಸರಸ್ವತೀ ಸಮೇತನಾಗಿ ಬ್ರಹ್ಮನು ಹಂಸಾರೂಢನಾಗಿ ನಿತ್ಯವೂ ಮಧ್ಯಾಹ್ನ ಕಾಲಸ್ನಾನಕ್ಕೆ ಮಣಿಕರ್ಣಿಕೆಗೆ ಬಹನು, ಎನ್ನ ನಾಮಸ್ಮರಣೆಯಂ ಮಾಡುವ ಭಕ್ತರ ಪಾಪಂಗಳ ಪರಿಹಾರವಂ ಮಾಡುವ ತನ್ನ ಶಕ್ತಿಯು ಮಣಿಕರ್ಣಿಕಾಸ್ನಾನ ವಿಶೇಷದಿಂದಾಯಿತು, ಇಂದ್ರಾದಿ ಲೋಕಪಾಲಕರು ಮರೀಚಿ ಮೊದಲಾದ ನವಬ್ರಹ್ಮರೂ ಶೇಷ ಮೊದಲಾದ ಸರ್ಪಂಗಳೂ ಸಕಲ ಮರುದ್ಗಣಂಗಳೂ ಕಿನ್ನರ ಕಿಂಪುರುಷ ಗರುಡ ಗಂಧರ್ವ ಸಿದ್ಧ ವಿದ್ಯಾಧರ ಅಶ್ವಿನೀದೇವತೆಗಳೂ ವಿಶ್ವೇದೇವರು ಪಿತೃ ದಶರುದ್ರರು ದ್ವಾದಶಾದಿತ್ಯರು ವಸುಗಳು ಮುನಿಗಳೂ ಚರಾಚರಪ್ರಾಣಿಕೋಟಿಗಳೂ ಸಕಲರು ಮಧ್ಯಾಹ್ನಸ್ನಾನಕ್ಕೆ ಮಣಿಕರ್ಣಿಕಾ ತೀರ್ಥಕ್ಕೆ ನಿತ್ಯವೂ ಬಹರು, ಎನಗೆ ಮೊದಲಾಗಿ ಅಗಣ್ಯವಾದ ಮಣಿಕರ್ಣಿಕಾತೀರ್ಥದ ಮಹಿಮೆಯನ್ನು ವರ್ಣಿಸುವದಕ್ಕೆ ಅಸಾಧ್ಯವು, ಮಿಕ್ಕಾದವರು ಸಮರ್ಥರೇ? ಆವನಾನೊಬ್ಬಗೆ ಮಣಿಕರ್ಣಿಕಾತೀರ್ಥಸ್ನಾನ ದೊರೆಕೊಂಬುದೋ? ಅವರು ಪೂರ್ವದಲ್ಲಿ ಬಹುಪುಣ್ಯ ತಪಸ್ಸು ಮಾಡಿದವರು ಎಂದು ತಿಳಿ, ವೃದ್ಧಾಪ್ಯಕಾಲದಲ್ಲಿ ಮಣಿಕರ್ಣಿಕಾತೀರವ ಸೇರಿದರೆ ಅವರು ಷೋಡಶಮಹಾದಾನಂಗಳಂ ಮಾಡಿದವರಹರು, ಆ ತೀರದಲ್ಲಿ ಶಯನವಂ ಮಾಡಲು ಸಕಲವ್ರತಂಗಳಂ ಮಾಡಿದವರು ಐಶ್ವರ್ಯವಂತನಾಗಿ ಬುದ್ಧಿವಂತನಾದವನು ಈ ಮಣಿಕರ್ಣಿಕಾತೀರ್ಥದಲ್ಲಿ ಸ್ನಾನವಂ ಮಾಡಿ ಒಂದು ಪ್ರಾಣಾಯಾಮ ಒಂದು ಗಾಯತ್ರಿಯಂ ಮಾಡಲು ಷಡಂಗವೇದಾಗ ಭ್ಯಾಸದ ಅಜನ್ಮಾಂತವೂ ಮಾಡಿದಫಲವು, ಒಂದು ಗಾಯತ್ರಿಯಿಂದಾ ಹತ್ತುಸಾವಿರಗಾಯತ್ರೀ ಮಾಡಿದಫಲ, ಒಂದು ಆಹುತಿಯಿಂದ ತಾನು ಯಾವಜ್ಜೀವವು ಅಗ್ನಿಹೋತ್ರವ ಮಾಡಿದಫಲ, ಹೀಗೆಂದು ಬುದ್ಧಿಗಲಿಸಿದ ವಿಷ್ಣುವಿನ ವಾಕ್ಯವಂ ಕೇಳಿ ಅಗ್ನಿಬಿಂದು ಋಷೀಶ್ವರನು ಮತ್ತಂತೆಂದು ಬಿನ್ನೈಸಿದನು, ಎಲೈ ಸ್ವಾಮಿಯೇ! ನಿಮಗಿಂತಬಲ್ಲವರಿಲ್ಲ, ಈ ಮಣಿಕರ್ಣಿಕಾತೀರ್ಥದ ವಿಸ್ತಾರವೆಷ್ಟು ಎಂಬುದಂ ಬುದ್ಧಿಗಲಿಸಬೇಕೆನಲು, ವಿಷ್ಣುವಿಂತೆಂದನು, ಕೇಳೈ! ಅಗ್ನಿಬಿಂದುವೆ ಗಂಗಾಕೇಶವಮೊದಲಾಗಿ ಹರಿಶ್ಚಂ

ಪ್ರಮಾಣವನ ಪರ್ಯಂತರವು ಮಣಿಕರ್ಣಿಕೆಯೆನಿಸುವದು, ಈ ಮಣಿಕ ರ್ಣಿಕೆಗೆ ಉತ್ತರದಲ್ಲಿ ಹರಿಶ್ಚಂದ್ರತೀರ್ಥವುಂಟು, ಆ ತೀರ್ಥದಮುಂದೆ ಹರಿಶ್ಚಂದ್ರವಿನಾಯಕನಿಹನು, ಆ ತೀರ್ಥದಲ್ಲಿ ಸ್ನಾನವಂಮಾಡಿ ಆ ವಿನಾ ಯಕನಂಭಕ್ತಿಯಿಂದ ಮೋದಕಮೊದಲಾದ ಮಹಾ ಉಪಚಾರಂಗಳಿಂ ದ ಪೂಜೆಯಂಮಾಡಲು ಮಣಿಕರ್ಣಿಕಾದರ್ಶನಸ್ನಾನಪಾನದೊರಕೊಂ ಬುದು. ಈ ಹರಿಶ್ಚಂದ್ರತೀರ್ಥದಲ್ಲಿ ಶ್ರಾದ್ಧವಂಮಾಡಲು ಪಿತೃಗಳು ನೂರುವರ್ಷ ತೃಪ್ತರಾಗಿ ಸಕಲಾಭೀಷ್ಟಗಳಂಕೊಡುವರು, ಈ ತೀರ್ಥ ದಲ್ಲಿ ಸ್ನಾನವಂಮಾಡಿ ಹರಿಶ್ಚಂದ್ರೇಶ್ವರನಂ ಪೂಜಿಸಲು ಸತ್ಯವಂತನಹ ನು, ಮಹಾಮೇರುಪರ್ವತದಿಂ ಕಲ್ಪಿತವಾದ ಪರ್ವತತೀರ್ಥದಲ್ಲಿ ಸ್ನಾ ನವಂಮಾಡಿ ಪರ್ವತೇಶ್ವರನಪೂಜೆಯಂಮಾಡಿ ಪ್ರದಕ್ಷಿಣೆ ನಮಸ್ಕಾರ ಗಳಂಮಾಡಲು ಮೇರುಶಿಖರನಿವಾಸವಾಗಿ ಸಕಲಭೋಗಂಗಳನ್ನು ಅನು ಭವಿಸುವನು. ಆ ಪರ್ವತೇಶ್ವರನ ದಕ್ಷಿಣದಲ್ಲಿ ಪಂಚನದತೀರ್ಥಕ್ಕೆ ಪ ಶ್ಚಿಮದಲ್ಲಿ ಕಂಬಳಾಶ್ವತರತೀರ್ಥದಲ್ಲಿ ಸ್ನಾನವಂಮಾಡಿ ಕಂಬಳೇಶ್ವರ ನ ಪೂಜೆಯಂಮಾಡಲು ಅತಿಸುಕೃತನಂಮಾಡಿದುವನಹನು: ಅತನವಂಶದ ಲ್ಲಿ ಐಶ್ವರ್ಯವಂತರಾಗಿ ಗೀತವಾದ್ಯದಲ್ಲಿ ಪ್ರವೀಣರಾದವರುಪುಟ್ಟುವರು, ಆ ಸಮೀಪದ ಚಕ್ರಪುಷ್ಕರಣೀತೀರ್ಥದಲ್ಲಿ ಸ್ನಾನವಂಮಾಡಲು ಚಕ್ರ ದಂದದಲ್ಲಿ ಅನೇಕಬಾರಿತಿರುಗಿಪುಟ್ಟುವ ಸಂಸಾರಚಕ್ರವಂ ಪ್ರವೇಶ ವಾಗನು, ಈ ಚಕ್ರಪುಷ್ಕರಣೀತೀರ್ಥದಲ್ಲಿ ತಾನುಪರಮೇಶ್ವರನಕುರಿತು ಬ್ರಹ್ಮನ ಒಂದುಪರಾರ್ಧಪರ್ಯಂತರವೂ ಉಗ್ರತಪವಂಮಾಡಲು ವಿಶ್ವಪತಿ ಪ್ರಸನ್ನನಾಗಿ ಎನಗೆಮಹದೈಶ್ವರ್ಯವನಿತ್ತನು. ಚಕ್ರಪುಷ್ಕರಣೀಎನಲುಮಣಿ ಕರ್ಣಿಕೆಯುಹೆಸರು ಈ ಮಣಿಕರ್ಣಿಕೆಲುದಕದೊಳಗಣಿಂದ ಸ್ತ್ರೀರೂಪವಂ ಧರಿಸಿ ಎದ್ದುಬಂದು ಎನಗೆ ಪ್ರಸನ್ನವಾದಳು, ಹ್ಯಾಗೆಪ್ರಸನ್ನಳಾದಳೆಂದ ರೆ— ವಿಶಾಲವಾದನೇತ್ರಗಳುಳ್ಳ ಜ್ವಾಲೆಯಿಂದುರಿವ ಫಣೆಗಣ್ಣಿಂದ ಶಶ್ಚಿ ಹಮುಖವಾಗಿ ಎರಡುಕೈಗಳಂಮುಗಿದುಕೊಂಡು ಮತ್ತು ದಕ್ಷಿಣಹಸ್ತ ದಲ್ಲಿ ಕಸ್ತೈರಿಲೆಮಾಲೆಯುಂಧರಿಸಿ ಎಡದಹಸ್ತದಲ್ಲಿ ಮಾಪಳದಫಲವಂ ಧರಿಸಿ ಉರದಲ್ಲಿ ಬೆಳೆಸಿದ ಅತಸೀಪುಷ್ಪಮಾಲೆಯಂ ಹಾಕಿಕೊಂಡು ಹವ

ಳದಬಿಳ್ಳಿಯಂತೆ ಕೆಂಪಾದ ಅಧರಬಿಂಬವುಳ್ಳ ನೂತನವಾದ ಕೇತಕೀಗರಿಗ
ಳಿಂದ ಅಲಂಕೃತವಾದ ತುರುಬಿನಿಂದೊಪ್ಪುವ ಅವಯವಾದಿಗಳಲ್ಲಿ ಶ್ರೇಷ್ಠ
ಮೌಕ್ತಿಕದಾಭರಣವನಲಂಕರಿಸಿಕೊಂಡು ಚಂದ್ರಕಾಂತಿಯಂ ಪೋಲುವ
ದುಕೂಲವಸ್ತ್ರವಂಧರಿಸಿ ಹನ್ನೆರಡುವರ್ಷದ ಪ್ರಾಯವುಳ್ಳ ಸ್ಫಟಿಕದ
ಕಾಂತಿಯಂ ಪೋಲುವ ಶುಭ್ರವಾದ ದೇಹಕಾಂತಿಯುಳ್ಳವಳಾಗಿ ಪ್ರಸನ್ನ
ಳಾದಳು, ಅಂಥಾ ಮಣಿಕರ್ಣಿಕಾಮೂರ್ತಿಯನ್ನು ಮೋಕ್ಷಕಾಂಕ್ಷಿಗಳಾದ
ವರು ಆರುತಿಂಗಳು ಭಕ್ತಿಯಿಂದ ಧ್ಯಾನಿಸಲು ಈ ರೂಪಿನಲ್ಲಿ ಪ್ರಸನ್ನಳಹ
ಳು, ಪ್ರಸನ್ನೆಯಾಗುವಂಥಾ ಮಣಿಕರ್ಣಿಕಾ ಮಂತ್ರವನ್ನು ಮುಕ್ತಿಕಾಂಕ್ಷಿ
ಗಳಾದ ಸ್ತ್ರೀಯರೂ ಪುರುಷರೂ ತಮ್ಮ ಯಥಾಶಕ್ತಿ ಜಪಿಸಿ ದಶಾಂಶ ಬಿಳಿ
ದಾವರೆ ಪುಷ್ಪಗಳಂ ತಂದು ಗೋಘೃತದಿಂದ ನೆನಸಿ ಹೋಮವಂ ಮಾಡ
ಲು ಮಂತ್ರಸಿದ್ಧಿಯಹುದು, ಧಾರಣಾಶಕ್ತಿಯುಳ್ಳ ಬುದ್ಧಿವಂತನು ಜೇನುತು
ಪ್ಪದಿಂದ ನೆನಸಿ ಹೋಮವಂ ಮಾಡಲು ಶುಚಿಯಹನು, ಈ ಮಂತ್ರವಂ
ಮೂರುಲಕ್ಷವಂ ಜಪಿಸಿ ದೇಶಾಂತರದಲ್ಲಿ ಮೃತವಾದರೂ ಮುಕ್ತಿಯುಂಟು,
ಸುವರ್ಣದಲ್ಲಿ ಮಣಿಕರ್ಣಿಕಾ ಪ್ರತಿಮೆಯಂ ಮಾಡಿಸಿ ಪೂಜಿಸಲು ದೂರದೇ
ಶದಲ್ಲಿದ್ದರೂ ಮುಕ್ತಿಯಹುದು, ಮಣಿಕರ್ಣಿಕೆಯಲ್ಲಿ ಸ್ನಾನವಂ ಮಾಡಿ ಅಂ
ತರ್ಗೃಹದ ಮೂಡಣ ಬಾಗಿಲಲ್ಲಿ ತನ್ನಿಂದಾ ಪ್ರತಿಷ್ಠೆಯಾದ ಮಣಿಕರ್ಣಿ
ಕೇಶ್ವರನ ಪೂಜೆಯಂ ಮಾಡಿದವರು ಸಂಸಾರ ಪಾಶದಿಂದ ಕಟ್ಟಲ್ಪಡರು,
ಮಣಿಕರ್ಣಿಕೇಶ್ವರನ ತೆಂಕಲಲ್ಲಿರ್ದ ರುದ್ರಾವಾಸತೀರ್ಥದಲ್ಲಿ ಸ್ನಾನವಂ ಮಾ
ಡಿ ರುದ್ರಾವಾಸೇಶ್ವರನ ಪೂಜೆಯಂ ಮಾಡಲು ರುದ್ರಲೋಕವುಂಟು. ಆ ದ
ಕ್ಷಿಣದಲ್ಲಿ ಸಕಲತೀರ್ಥವಾಸವಾದ ವಿಶ್ವತೀರ್ಥದಲ್ಲಿ ಸ್ನಾನವಂ ಮಾಡಿ
ವಿಶ್ವಗೌರೀಸಮೇತನಾದ ವಿಶ್ವನಾಥನಂ ಪೂಜಿಸಲು ತಾನು ಸಕಲರಿಂದಲೂ ಪೂ
ಜೆಗೊಂಬನು, ವಿಶ್ವಮಯನಹನು, ಅವಿಮುಕ್ತೇಶ್ವರನ ದಕ್ಷಿಣದಲ್ಲಿರ್ದ
ಮೋಕ್ಷತೀರ್ಥದಲ್ಲಿ ಸ್ನಾನವಂ ಮಾಡಿ ಮೋಕ್ಷೇಶ್ವರನ ಪೂಜೆಯಂ ಮಾಡ
ಲು ಮೋಕ್ಷವಹುದು, ಇದಕ್ಕೆ ಪಡುವಲಲ್ಲಿ ಅವಿಮುಕ್ತತೀರ್ಥದಲ್ಲಿ
ಸ್ನಾನವಂ ಮಾಡಿ ಅವಿಮುಕ್ತೇಶ್ವರನ ಪೂಜಿಸಲು ಮುಕ್ತನಹನು, ಅದಕ್ಕೆ
ಮೂಡಲು ತಾರಕತೀರ್ಥದಲ್ಲಿ ಸ್ನಾನವಂ ಮಾಡಿ ತಾರಕೇಶ್ವರನ ಪೂಜೆಯಂ

ದಿನಾತ್ರಲು ಪಿತೃಗಳೂಸಹಾ ಮುಕ್ತರಹರು, ತಾರಕೇಶ್ವರನ ಮುಂದಿರುವಲ್ಲಿಹ ಸ್ಕಂದತೀರ್ಥದಲ್ಲಿ ಸ್ನಾನವಂಮಾಡಿ ಕುಮಾರಸ್ವಾಮಿಯುಂ ಪೂಜಿಸಲು ಪಂಚಕ್ರೋಶದಲ್ಲಿ ಶರೀರವಂ ತ್ಯಜಿಸಲು ಷಣ್ಮುಖರಾಗಿ ಷಣ್ಮುಖಲೋಕ ವೈದುವರು, ಆ ಸಮೀಪದ ಧುಂಢಿತೀರ್ಥದಲ್ಲಿ ಸ್ನಾನವಂಮಾಡಿ ಧುಂಢಿಗ ಣಪತಿಯುಂ ಪೂಜಿಸಲು ಸಕಲವಿಘ್ನಹರ, ಆ ಸಮೀಪದ ಭವಾನೀತೀರ್ಥದಲ್ಲಿ ಸ್ನಾನವಂಮಾಡಿ ಮಕೂಲವಸ್ತ್ರರತ್ನಭೂಷಣ ದಿವ್ಯಗಂಧ ಪರಿಮಳ ಪುಷ್ಪ ಧೂಪದೀಪ ನೈವೇದ್ಯಗಳಿಂದ ಭವಾನೀಶಂಕರರೀರ್ವರಂ ಪೂಜಿಸಲು ಮೂರು ಲೋಕದಲ್ಲಿರ್ದ ಸಕಲದೇವತೆಗಳನ್ನು ಪೂಜಿಸಿದವನಹನು, ಚೈತ್ರಶುದ್ಧ ಅಷ್ಟಮಿ ದಿವಸ ಮಹಾಯಾತ್ರೆಯಂ ಮಾಡಿ ನೂರೆಂಟು ಪ್ರದಕ್ಷಿಣೆಯಂ ಮಾಡಲು ಸಪ್ತದ್ವೀಪಸಹಿತವಾದ ಭೂಪ್ರದಕ್ಷಿಣೆಮಾಡಿದವನಹನು, ಭವಾನೀ ಶಂಕರರ್ಗೆ ಪ್ರತಿದಿನವೂ ಎಂಟು ಪ್ರದಕ್ಷಿಣವಂ ಮಾಡಲು ದೃಢಭಕ್ತಿಯಂಕೊಟ್ಟು ಕಾಶೀವಾಸವಂ ಕೊಡುವರು, ಕಾಶಿಯಲ್ಲಿರ್ದ ಸಕಲರೂ ಮುಖ್ಯವಾದ ಭವಾನೀ ದೇವಿಯಂ ಸೇವಿಸಿ ಮೋಕ್ಷಭಿಕ್ಷವಂ ಕೇಳಿಕೊಳ್ಳ ಬೇಕು ಕಾಶೀಕ್ಷೇತ್ರಕ್ಕೆ ವಿಶ್ವಪತಿಯೆ ಗೃಹಸ್ಥನು, ಭವಾನೀದೇವಿಯು ಆತನ ಧರ್ಮಪತ್ನಿಯಾದಕಾರಣ ಬೇಡಿದವರಿಗೆ ಮೋಕ್ಷಭಿಕ್ಷವ ನೀವಳೂ, ಭವಾನೀದೇವಿಯಂ ಪೂಜಿಸಲು ದುರ್ಲಭವಾದ ವಸ್ತುವಾದರೂ ಅತಿಸುಲಭವಹುದು, ಭಾದ್ರಪದಶುದ್ಧ ಅಷ್ಟಮೀದಿನ ಉಪವಾಸವಿದ್ದು ಪೂಜೆಜಾಗರಣವಂ ಮಾಡಲು ವಾಂಛಿತಾರ್ಥಸಿದ್ಧಿಯಹುದು, ನಿತ್ಯವೂ ಭವಾನೀದೇವಿಯ ದರ್ಶನವಂಮಾಡಲು ಸಕಲಮನೋರಥಸಿದ್ಧಿಯಹುದು, ಭವಾನೀತೀರ್ಥದ ಸಮೀಪದಲ್ಲಿರ್ದ ಈಶಾನತೀರ್ಥದಲ್ಲಿ ಸ್ನಾನವಂಮಾಡಿ ಈಶಾನೇಶ್ವರನಂಪೂಜಿಸಲು ಪುನರ್ಜನ್ಮವಿಲ್ಲ, ಜ್ಞಾನವಾಪೀತೀರ್ಥದ ಸಮೀಪದ ಜ್ಞಾನತೀರ್ಥದಲ್ಲಿ ಸ್ನಾನವಂಮಾಡಿ ಜ್ಞಾನೇಶ್ವರನಂಪೂಜಿಸಲು ಅಂತ್ಯದಲ್ಲಿ ಅಜ್ಞಾನವಿಲ್ಲದೆ ಸುಜ್ಞಾನದೊರಕೊಂಬುದು, ಜ್ಞಾನವಾಪಿಗೆ ಉತ್ತರದಲ್ಲಿಹ ಶೈಲತೀರ್ಥದಲ್ಲಿ ಸ್ನಾನವಂಮಾಡಿ ಶೈಲೇಶ್ವರನಂ ಪೂಜಿಸಲು ಗಣಾಧಿಪತ್ಯ ದೊರಕೊಂಬುದು, ವಿಶ್ವೇಶ್ವರನ ತೆಂಕಲಲ್ಲಿಹ ನಂದಿ

ತೀರ್ಥದಲ್ಲಿ ಸ್ನಾನವಂಮಾಡಿ ನಂದಿಕೇಶ್ವರನಂ ಪೂಜಿಸಲೂ, ವೃಷಭಲೋಕವಹುದು. ಆ ನಂದಿತೀರ್ಥದ ತೆಂಕಲದಲ್ಲಿ ವಿಷ್ಣುತೀರ್ಥವಿಹದು. ಅದರಲ್ಲಿ ಸ್ನಾನವಂಮಾಡಿ, ಆದಿ ವಿಷ್ಣುವಂ ಪೂಜಿಸಿ ಪಿತೃಗಳಿಗೆ ತಿಲೋದಕ ಪಿಂಡಪ್ರದಾನವಂಮಾಡಲು ಪಿತೃಋಣನಿವೃತ್ತಿಯಾಗಿ ಮುಕ್ತಿಯಂ ಪಡೆವನು, ಪ್ರಥಮೈಕಾದಶಿಯಲ್ಲಿ ಉಪವಾಸವಿದ್ದು ವಿಷ್ಣುತೀರ್ಥದಲ್ಲಿ ಸ್ನಾನವಂಮಾಡಿ, ಆದಿ ವಿಷ್ಣುವಂ ಪೂಜಿಸಿ ಜಾಗರಣವಂಮಾಡಿ ದ್ವಾದಶಿಯಲ್ಲಿ ಬ್ರಾಹ್ಮಣರಿಗೆ ಗೋ ಭೂ ತಿಲ ಹಿರಣ್ಯಾದಿದಾನಂಗಳಂ ಮಾಡಿ,ಬ್ರಾಹ್ಮಣ ಭೋಜನವಂ ಮಾಡಿಸಿ ಆಮೇಲೆ ತಾನು ಪಾರಣೆಯಂ ಮಾಡಲು ಪುನರ್ಜನ್ಮವಿಲ್ಲ. ವ್ರತ ಉದ್ಯಾಪನೆಯಂ ಮಾಡಲು, ಸಮಗ್ರಫಲವುಂಟು. ಈವಿಷ್ಣುತೀರ್ಥದಲ್ಲಿಸ್ನಾನವಂ ಮಾಡಿ, ಇದರ ತೆಂಕಲಲ್ಲಿಹ ಪಿತಾಮಹತೀರ್ಥದಲ್ಲಿ ಸ್ನಾನವಂಮಾಡಿ, ಪಿತಾಮಹೇಶ್ವರನಂ ಪೂಜಿಸಲು ಬ್ರಹ್ಮಲೋಕವುಂಟು. ಈ ತೀರ್ಥದಲ್ಲಿ ಮಾಡಿದ ಧರ್ಮವು ಪ್ರಳಯದಲ್ಲಿಯೂ ಕೆಡದು ಈ ತೀರ್ಥವು ಮಣಿಕರ್ಣಿಕೆ ನಾಭಿಯೆನಿಸುವುದು,ಆಸಮೀಪದ ಬ್ರಹ್ಮನಾಳತೀರ್ಥದಲ್ಲಿ ಸ್ನಾನಂ ಮಾಡಲು ಕೋಟಿಜನ್ಮದ ಪಾಪಹರ, ಈ ಬ್ರಹ್ಮನಾಳತೀರ್ಥದಲ್ಲಿ ಆರ ಅಸ್ಥಿಗಳು ಬಿದ್ದರೂ ಅವರು ಬ್ರಹ್ಮಾಂಡದೊಳಗಾಗಿ ಎಂದಿಗೂ ಜನ್ಮವನ್ನೆತ್ತರು. ಆ ತೀರ್ಥಸಮೀಪದ ಭಗೀರಥ ತೀರ್ಥದಲ್ಲಿ ಸ್ನಾನವಂ ಮಾಡಿ, ಭಗೀರಥೇಶ್ವರನಂ ಪೂಜಿಸಲು ಬ್ರಹ್ಮಹತ್ಯಾಪಾಪಹರ, ಅಲ್ಲಿ ಪಿತೃಗಳಿಗೆ ತಿಲೋದಕ ಪಿಂಡಪ್ರದಾನಗಳಂ ಮಾಡಲು, ಸಕಲ ಪಿತೃಗಳಿಗೂ ಬ್ರಹ್ಮಲೋಕಪ್ರಾಪ್ತಿಯಹುದು. ಅದಕ್ಕೆ ತೆಂಕಲಲ್ಲಿ ಗೋಲೋಕದಿಂದ ಗೋವುಗಳು ಮಣಿಕರ್ಣಿಕಾಸ್ನಾನಕ್ಕೆ ಬಂದಾಗ ಆ ಧೇನುಗಳ ಕೊಳಗಗಳಿಂದಾದ ಖುರಕರ್ತರೀತೀರ್ಥದಲ್ಲಿಸ್ನಾನವಂಮಾಡಿ, ಖುರಕರ್ತರೀಶ್ವರನಂ ಪೂಜಿಸಲು ಗೋಲೋಕನಿವಾಸ ಉಂಟು, ಆ ತೀರ್ಥಕ್ಕೆ ತೆಂಕಲಲ್ಲಿರ್ದ ಮಾರ್ಕಂಡೇಯತೀರ್ಥದಲ್ಲಿ ಸ್ನಾನವಂ ಮಾಡಿ, ಮಾರ್ಕಂಡೇಶ್ವರನಂ ಪೂಜಿಸಲೂ ಅಲ್ಲಿ ಶ್ರಾದ್ಧಾದಿಗಳಂ ಮಾಡಲು ಮಾರ್ಕಂಡೇಯನಂತೆ ದೀರ್ಘಾಯುವಾಗಿ ಬ್ರಹ್ಮತೇಜಸ್ಸು, ಕೀರ್ತಿಯೂ ದೊರಕಬಹುದು. ಆ ಸಮೀಪದಲ್ಲಿ ಮಹಾ

ಪಾತಕಹರವಪ್ಪ ವಶಿಷ್ಠತೀರ್ಥಸ್ನಾನವಂ ಮಾಡಿ, ವಶಿಷ್ಠೇಶ್ವರನಂ ಪೂಜಿಸಲು, ತಿಲೋದಕ ಪಿಂಡಪ್ರದಾನಗಳಂ ಮಾಡಲು ಮೂರುಜನ್ಮದ ಪಾಪಹರ, ಅವರ್ಗೆ ವಶಿಷ್ಠಲೋಕವುಂಟು. ಆ ಸಮೀಪದಲ್ಲಿ ಮುತ್ತೈದೆಯರಿಗೆ ಐಶ್ವರ್ಯಗಳಸಪ್ತ ಜನ್ಮಂಗಳಿಗೆ ಮುತ್ತೈದೆತನವ ಕೊಡುವ ಅರುಂಧತೀತೀರ್ಥದಲ್ಲಿ ಸ್ನಾನವಂಮಾಡಿ, ಅಲ್ಲಿಹ ಸಿಮರ್ಗದೇಶ್ವರನಂಪೂಜಿಸಲು ಐಶ್ವರ್ಯವಂತನಹನು, ಸ್ತ್ರೀಯರು ಐದೆತನದಿಂದ ಸೌಭಾಗ್ಯವಂತೆಯಹಳು. ಆ ಸಮೀಪದ ತ್ರಿಸಂಧ್ಯಾತೀರ್ಥದಲ್ಲಿ ಸ್ನಾನವಂಮಾಡಿ, ಸಂಧ್ಯಾವಂದನೆಯಂ ಮಾಡಲು ಅಕಾಲದಲ್ಲಿಮಾಡಿದ ಸಂಧ್ಯಾವಂದನೆಯ ಪಾಪ ಸಂಧ್ಯಾವಂದನೆಯ ನ್ಯೂನಪಾಪಹರ, ಅಲ್ಲಿಹ ತ್ರಿಸಂಧ್ಯೇಶ್ವರನ ಪೂಜಿಸಲು ಮೂರು ವೇದಗಳ ಪಾರಾಯಣವಂ ಮಾಡಿದಫಲ. ಆ ಸಮೀಪದ ಯೋಗಿನೀತೀರ್ಥದಲ್ಲಿ ಸ್ನಾನವಂ ಮಾಡಿ ಯೋಗಿನೀಪೀಠವಂ ದರ್ಶನೆಮಾಡಲು ಪಿತೃಗಳು ಸಹ ಶಿವಲೋಕವನೈದುವರು. ಆ ಸಮೀಪದ ಗಂಗಾಕೇಶವತೀರ್ಥದಲ್ಲಿ ಸ್ನಾನಂಮಾಡಿ ಗಂಗಾಕೇಶವರೆಂಬ ವಿಷ್ಣುಪೂಜೆಯಂಮಾಡಿ ಅಲ್ಲಿ ತಿಲೋದಕ ಪಿಂಡಪ್ರದಾನವಂ ಮಾಡಲು ಅವರ ಪಿತೃಗಳು ನೂರುವರುಷ ತೃಪ್ತರಾಗಿ ಆಮೇಲೆ ತಮ್ಮ ಲೋಕವನೈದುವರು, ಸ್ನಾನ ದಾನ ಪೂಜೆಯಂಮಾಡಿದವರು ತನ್ನ ಲೋಕವನೈದಿ, ತನ್ನ ರೂಪವಂ ಧರಿಸುವರು. ಶ್ರೀ ಮಹಾವಿನಾಯಕಗೆ ತೆಂಕಲಾಗಿ ವೈರೋಚನೇಶ್ವರಗೆ ಮೂಡಲಾಗಿಪ್ಪ ವೈಕುಂಠನಾಯಕನೆಂಬ ತನ್ನ ಆರಾಧನೆಯಂ ಮಾಡಲು ವೈಕುಂಠ ವಾಸವಹುದು. ವೀರೇಶ್ವರನ ಪಶ್ಚಿಮದಲ್ಲಿ ವೀರಮಾಧವನೆಂಬ ವಿಷ್ಣುಂ ಪೂಜಿಸಲು ಯಮಬಾಧೆಯಿಲ್ಲ. ಕಾಲಭೈರವನ ಸಮೀಪದಲ್ಲಿರ್ದ ಕಾಲಮಾಧವನೆಂಬ ವಿಷ್ಣುಂ ಪೂಜಿಸಲು ಸರ್ವಕಾರ್ಯ ಸಿದ್ಧಿಯಹುದು ಕಾಲಭಯವಿಲ್ಲ. ಮಾರ್ಗಶಿರಶುದ್ಧ ಏಕಾದಶಿಯಲ್ಲಿ ಉಪವಾಸವಿರ್ದು ಕಾಲಮಾಧವನ ಪೂಜೆ ಜಾಗರಣವಂಮಾಡಲು ಯಮದರ್ಶನವಿಲ್ಲ. ಪುಲಸ್ತ್ಯೇಶ್ವರನ ದಕ್ಷಿಣದಲ್ಲಿರ್ದ ಗೀರ್ವಾಣ ನೃಸಿಂಹನೆಂಬ ವಿಷ್ಣುಂ ಪೂಜಿಸಲು ಮುಕ್ತನಹನು. ಓಂಕಾರೇಶ್ವರನ ಪಶ್ಚಿಮದಲ್ಲಿದ್ದ ಮಹಾಬಲ ನೃಸಿಂಹನೆಂಬ ವಿಷ್ಣುಂ ಪೂಜಿಸಲು ಯಮದೂತರು ಮುಟ್ಟಲಂಜುವರು

ಪ್ರಚಂಡಭೈರವನ ಸಮೀಪದಲ್ಲಿರ್ದ ಪ್ರಚಂಡ ನೃಸಿಂಹನೆಂಬ ಎನ್ನಂ ಪೂಜಿಸಲು ಪ್ರಚಂಡ ಪಾಪಹರ. ದೆಹಳೀವಿನಾಯಕನ ಮೂಡಲಲ್ಲಿರ್ದ ಗಿರಿನೃಸಿಂಹನೆಂಬ ಎನ್ನಂ ಪೂಜಿಸಲು ಅವರ ಪಾಪವೆಂಬ ಗಿರಿಯೂ ಎನ್ನ ಕೃಪೆಯೆಂಬ ವಜ್ರದಿಂ ಛೇದಿಸಿ ಮುಕ್ತಿಯಂ ಕೊಡುವೆನು, ಪಿತಾಮಹೇಶ್ವರನ ಪಡುವಲಲ್ಲಿರ್ದ ಮಹಾಭಯಹರ ನೃಸಿಂಹನೆಂಬ ಎನ್ನಂ ಪೂಜಿಸಲು ಮಹಾಭಯನಿವಾರಣ. ಕಲಶೇಶ್ವರಗೆ ಪಶ್ಚಿಮದಲ್ಲಿರ್ದ ಅತ್ಯುಗ್ರ ನೃಸಿಂಹನೆಂಬ ಎನ್ನಂ ಪೂಜಿಸಲು, ಅತ್ಯುಗ್ರಪಾಪಹರ. ಜ್ವಾಲಾಮುಖಿಯ ಸಮೀಪದಲ್ಲಿರ್ದ ಜ್ವಾಲಾನೃಸಿಂಹನೆಂಬ ಎನ್ನಂ ಪೂಜಿಸಲು, ಮಹಾಪಾಪಹರ. ಕಂಕಾಳಭೈರವನ ಸಮೀಪದಲ್ಲಿರ್ದ ಕೋಲಾಹಲ ನೃಸಿಂಹನೆಂಬ ಎನ್ನಂ ಪೂಜಿಸಲು, ಸಕಲ ಕೋಲಾಹಲೋಪದ್ರವಂಗಳು ಪರಿಹರ. ಆತನ ಸ್ಮರಣೆಯಂ ಮಾಡಲು ಧನಧಾನ್ಯವನೀವನು, ದರಿದ್ರವಿಲ್ಲ. ತ್ರಿಲೋಚನೇಶ್ವರನ ಬಡಗಲಲ್ಲಿರ್ದ ತ್ರಿವಿಕ್ರಮನೆಂಬ ಎನ್ನಂ ಪೂಜಿಸಲು, ಸಕಲಪಾಪವಂ ಪರಿಹರಿಸಿ ಐಶ್ವರ್ಯವಂ ಕೊಡುವೆನು. ನೀಲಕಂಠೇಶ್ವರನೆಂಬ ಲಿಂಗದ ಸಮೀಪದಲ್ಲಿರ್ದ ವಿಟಂಕ ನೃಸಿಂಹನೆಂಬ ಎನ್ನಂ ಪೂಜಿಸಲು, ಸಕಲಭಯಹರ. ಅನಂತೇಶ್ವರನ ಸಮೀಪಲ್ಲಿರ್ದ ಅನಂತಮಾಧವನೆಂಬ ಎನ್ನನಾರಾಧಿಸಲು, ಸಕಲ ಪಾಪಹರ. ಆ ಸಮೀಪದಲ್ಲಿರ್ದ ದಧಿವಾಮನನೆಂಬ ಎನ್ನಂ ಪೂಜಿಸಲು, ಧನಧಾನ್ಯಸಮೃದ್ಧಿಯಾಗಿ ಯಾವಾಗಲೂ ಕ್ಷೀರವಂ ಕರೆಯುವ ಗೋವುಗಳು ಪೆಗ್ಗಳವಾಗಿ ಸುಖದಲ್ಲಿಹರು. ಬಲಭದ್ರೇಶ್ವರನ ಮೂಡಲಲ್ಲಿರ್ದ ಬಲಿಚಕ್ರವರ್ತಿ ಪ್ರತಿಷ್ಠೆಯಂ ಮಾಡಿದಬಲಿವಾಮನನೆಂಬ ಎನ್ನಂಪೂಜಿಸಲು ಬಲವರ್ಧನಮಹುದು, ಬಿಂದುತೀರ್ಥಕ್ಕೆ ದಕ್ಷಿಣದಲ್ಲಿಹ ತಾಮ್ರದ್ವೀಪದಿಂ ಬಂದ ತಾಮ್ರ ವರಾಹಮೂರ್ತಿಯಾದ ಎನ್ನಂ ಪೂಜಿಸಲು, ಪುನರ್ಜನ್ಮವಿಲ್ಲ. ಅಲ್ಲಿ ಅಲ್ಪವಾಗಿ ದಾನವಮಾಡಿದವರೂ ಮಹಾದಾನವನಿತ್ತಫಲ. ಎನ್ನ ಪಾದದಮೇಲಣ ಭಕ್ತಿ ಎಂಬ ಹಡಗನೇರಿ ಸಂಸಾರ ಸಮುದ್ರವಂ ದಾಂಟುವವರು, ಆತನು ಆ ಫಲದಿಂದ ಪ್ರಳಯದಲ್ಲಿಯೂ ಕೆಡನು. ಭೃಂಗೀಶ್ವರನ ಸಮೀಪದಲ್ಲಿ ಕೋಲವರಾಹಮೂರ್ತಿಯೆಂಬ ಎನ್ನಂ ಪೂಜಿ

ಸಲು ಸಕಲ ಮನೋರಥ ಸಿದ್ಧಿಯಹುದು. ಈ ಪ್ರಕಾರ ಹೇಳಿದೆನಷ್ಟೆ; ಸಾಂಗವಾಗಿ ಹೇಳುವದಕ್ಕೆ ತನಗೂ ತೀರದು. ಶಂಖ, ಚಕ್ರ, ಪದ್ಮ, ಗದೆಗಳಂ ಧರಿಸಿದ ವಿಷ್ಣು ಮೂರ್ತಿಗಳು ಈ ಕ್ಷೇತ್ರದಲ್ಲಿ ನಾನಾಬಗೆಯಾಗಿ ಹವು, ಅವೆಲ್ಲವಂ ಒಟ್ಟಾಗಿ ಹೇಳುತ್ತಿದ್ದೇನೆ ಕೇಳು- ನಾರಾಯಣಮೂರ್ತಿಗಳು ಐನೂರು ಇಹವು, ಜಲಶಾಯಿ ಮೂರ್ತಿಗಳು ನೂರು, ಕೂರ್ಮ ಮೂರ್ತಿಗಳು ನೂರು, ಮತ್ಸ್ಯಮೂರ್ತಿಗಳು ಮೂವತ್ತು, ಗೋಪಾಲ ಮೂರ್ತಿಗಳು ನೂರೆಂಟು, ಬೌದ್ಧಮೂರ್ತಿಗಳು ಸಾವಿರಸಂಖ್ಯೆ. ಪರಶುರಾಮ ಮೂರ್ತಿಗಳು ಮೂವತ್ತು. ರಾಮಮೂರ್ತಿಗಳು ನೂರೊಂದು. ಈಶ್ವರಾನುಗ್ರಹದಿಂ ಮುಕ್ತಾಮಂಟಪ ಮಧ್ಯದಲ್ಲಿಪ್ಪ ತನ್ನ ರೂಪಿನ ಆದಿ ವಿಷ್ಣುಮೂರ್ತಿ ಒಂದು. ಇದಲ್ಲದೆ ಯೆನ್ನರೂಪಿನಲ್ಲಿ ಶಂಖ, ಚಕ್ರ, ಪದ್ಮ, ಗದಾಪಾಣಿಗಳಾದ ಲಕ್ಷವೂ ಇಪ್ಪತ್ತು ಸಾವಿರ ನಾರಾಯಣ ಮೂರ್ತಿಗಳಾಗಿ ಈ ಕ್ಷೇತ್ರವಂ ರಕ್ಷಿಸಿಕೊಂಡಿಹೆನು, ಇದಲ್ಲದೆ ಭಕ್ತರಿಂದ ಪ್ರತಿಷ್ಠಿತವಾದ ವಿಷ್ಣುಮೂರ್ತಿಗಳು ಅಸಂಖ್ಯಾತವಾಗಿಪ್ಪವು. ಎಂದು ನಿರೂಪಿಸಿದ ಬಿಂದುಮಾಧವಮೂರ್ತಿಯ ವಚನವಂ ಕೇಳಿ, ಹರ್ಷಿತನಾಗಿ ಅಗ್ನಿಬಿಂದುವಿಂತೆಂದು ಬಿನ್ನೈಸಲು ತೊಡಗಿದನು.--ಎಲೈ, ಸ್ವಾಮಿಭಕ್ತಹಿತಾರ್ಥವಾಗಿ ಎನ್ನಸಂದೇಹ ನಿವೃತ್ತಿಗೋಸ್ಕರ ನಿಮ್ಮ ಇಪ್ಪತ್ತುನಾಲ್ಕು ಮೂರ್ತಿ ಭೇದವಂ ನಿರೂಪಿಸಬೇಕು ಎಂದುದಂ ಕೇಳಿ, ಷಡ್ಗುಣೈಶ್ವರ್ಯಸಂಪನ್ನನಾದ ವಿಷ್ಣುವು ಕೇಳಿದವರ ಪಾಪಂಪರಿಹರಿಪ ಕೇಶವಮೂರ್ತಿ ಮೊದಲಾದ ಇಪ್ಪತ್ತುನಾಲ್ಕು ಮೂರ್ತಿ ಭೇದವನಿರೂಪಿಸಿದನದೆಂತೆನೆ--ಬಲದ ದಿಕ್ಕಿನಲ್ಲಿ ಕೆಳಗಣಹಸ್ತ, ಮೊದಲಹಸ್ತ, ಆಮೇಲಣಹಸ್ತ ಯೆರಡನೆಯದು, ಎಡದಭಾಗದ ಮೇಲಣಹಸ್ತ ಮೂರನೇದು, ಆ ಕೆಳಗಣಹಸ್ತ ನಾಲ್ಕನೆಯದು, ಈ ಕ್ರಮದ ಹಸ್ತ ನಾಲ್ಕರಲ್ಲಿಯೂ ಹಿಂಚುಮುಂಚು ಆಗಿ ಶಂಖ, ಚಕ್ರ, ಗದೆ, ಪದ್ಮಗಳೆಂಬ ನಾಲ್ಕುಆಯುಧಗಳಂ ಧರಿಸಿಇರಲು ಇಂಥಾ ಮೂರ್ತಿಯೆಂದು ತಿಳಿದುಕೊಂಬುದು. ಅದೆಂತೆನೆ,- ಬಲದಭಾಗದ ಕೆಳಗಣ ಹಸ್ತದಲ್ಲಿ ಪದ್ಮ, ಆ ಮೇಲಣ ಹಸ್ತದಲ್ಲಿ ಶಂಖ, ಎಡದಭಾಗದ ಮೇಲಣ ಹಸ್ತದಲ್ಲಿ ಚಕ್ರ, ಆ ಕೆಳಗಣಹಸ್ತ

ದಲ್ಲಿ ಗದೆ, ಹೀಗಿರಲು ಕೇಶವಮೂರ್ತಿ ಎನಿಸಿಕೊಂಬುದು. ಶಂಖ, ಪದ್ಮ ಗದೆ, ಚಕ್ರಗಳಂ ಧರಿಸಿರಲು ನಾರಾಯಣನು. ಗದೆ, ಚಕ್ರ, ಶಂಖ, ಪದ್ಮ ಗಳಂ ಧರಿಸಿರಲು ಮಾಧವನು. ಚಕ್ರ, ಗದೆ, ಶಂಖಗಳಂ ಧರಿಸಿರಲು ಗೋವಿಂದನು. ಗದೆ, ಪದ್ಮ, ಶಂಖ, ಚಕ್ರಂಗಳಂ ಧರಿಸಿರಲು ವಿಷ್ಣುವು. ಶಂಖ ಚಕ್ರ ಗದಾಪದ್ಮಗಳಂ ಮಧುಸೂದನನು. ಪದ್ಮ, ಗದೆ, ಚಕ್ರ ಶಂಖಗಳಂ ತ್ರಿವಿಕ್ರಮನು. ಶಂಖ, ಚಕ್ರ, ಗದೆ, ಪದ್ಮಗಳಂ ವಾಮನನು ಪದ್ಮ, ಚಕ್ರ, ಗದೆ, ಶಂಖಗಳಂ ಶ್ರೀಧರನು. ಶಂಖ, ಗದೆ, ಚಕ್ರ, ಪದ್ಮ ಗಳಂ ಹೃಷೀಕೇಶನು. ಶಂಖ, ಚಕ್ರ, ಗದೆ, ಪದ್ಮಗಳಂ ಪದ್ಮನಾಭನು. ಪದ್ಮ, ಚಕ್ರ, ಗದೆ, ಶಂಖಗಳಂ ದಾಮೋದರನು. ಗದೆ, ಶಂಖ, ಪದ್ಮ, ಚ ಕ್ರಗಳಂ ಸಂಕರ್ಷಣನು. ಗದೆ, ಶಂಖ, ಚಕ್ರ, ಪದ್ಮಗಳಂ ವಾಸುದೇ ವನು. ಚಕ್ರ, ಶಂಖ, ಗದೆ, ಪದ್ಮಗಳಂ ಪ್ರದ್ಯುಮ್ನನು. ಚಕ್ರ, ಶಂಖ, ಗದೆ, ಪದ್ಮಗಳಂ ಅನಿರುದ್ಧನು. ಚಕ್ರ, ಪದ್ಮ, ಶಂಖ, ಗದೆಗಳಂ ಪುರು ಷೋತ್ತಮನು. ಪದ್ಮ, ಗದೆ, ಶಂಖ, ಚಕ್ರಗಳಂ ಅಧೋಕ್ಷಜನು. ಚಕ್ರ ಪದ್ಮ, ಗದೆ, ಶಂಖಗಳಂ ನಾರಸಿಂಹನು. ಗದೆ, ಪದ್ಮ, ಶಂಖ, ಚಕ್ರಗಳಂ ಅಚ್ಯುತನು. ಪದ್ಮ, ಚಕ್ರ, ಶಂಖ, ಗದೆಗಳಂ ಜನಾರ್ದನನು. ಗದೆ, ಚ ಕ್ರ, ಪದ್ಮ, ಶಂಖಗಳಂ ಉಪೇಂದ್ರನು. ಶಂಖ, ಚಕ್ರ, ಗದೆ, ಪದ್ಮಗಳಂ ಹರಿ. ಶಂಖ, ಗದೆ, ಪದ್ಮ, ಚಕ್ರಗಳಂ ಶ್ರೀಕೃಷ್ಣನು. ಈ ಮರ್ಯಾದೆ ಯಲ್ಲಿಪ್ಪಿಂ ಪೇಳಲ್ಪಟ್ಟ ಎನ್ನ ರೂಪವಾದ ಈ ಇಪ್ಪತ್ತುನಾಲ್ಕು ಮೂ ರ್ತಿ ಭೇದಂಗಳಂ ಭಕ್ತಿಯಿಂ ಕೇಳಲು ಭಕ್ತಿಮುಕ್ತಿಗಳುಂಟೆಂದು ಬಿಂ ದುಮಾಧವನು ಅಗ್ನಿಬಿಂದುಋಷಿಗೆ ನಿರೂಪಿಸುತ್ತಿರಲು, ಅನಿತರೊಳು ಮಂದರಪರ್ವತದಿಂ ಗರುಡನು ಬಂದು ವಿಷ್ಣುವಿಗೆ ನಮಸ್ಕರಿಸಿ ವಿಶ್ವೇ ಶ್ವರನು ಬಂದನುಯೆಂದು ಸಂತೋಷದಿಂ ಬಿನ್ನೈಸಲು, ವಿಷ್ಣುವು ಕೇಳಿ ಅತಿಸಂಭ್ರಮದಿಂ ಸ್ವಾಮಿಯಾ, ಎಲ್ಲಿಗೆ ಬಂದನೆಂದು ಕೇಳಲು, ಎಲೈ ಸ್ವಾಮಿ ನವರತ್ನಖಚಿತವಾದ ವೃಷಭಧ್ವಜ ಕಾಣಬರುತ್ತಿದ್ದೀತು ನೋಡಿ ಎನಲು, ಆ ಸಮಯದಲ್ಲಿ ಲೋಕದ ಜನರುಗಳ ಕಣ್ಣುಹಬ್ಬವ ಮಾಡು ವಂಥಾ ಕೋಟಿಸೂರ್ಯಪ್ರಕಾಶದಿಂ ದಿಕ್ಕುಗಳ ಬೆಳಗಿಸುತ್ತ ಆಕಾಶದಲ್ಲಿ

ದೇವತೆಗಳ ವಿಮಾನಗಳಿಂ ಸೇವಿಸಲ್ಪಡುವ ದೇವದುಂದುಭಿಗಳ ಧ್ವನಿಗಳಿಂ ಗುಹೆಗಳಲ್ಲಿ ಪ್ರತಿಧ್ವನಿಗಳಂ ಪುಟ್ಟಿಸುತ್ತ ವಿದ್ಯಾಧರಸ್ತ್ರೀಯರಿಂ ಸಮರ್ಪಿಸಲ್ಪಡುವ ದಿವ್ಯ ಪರಿಮಳ ಪುಷ್ಪವೃಷ್ಟಿಗಳುಳ್ಳ ವೃಷಭಧ್ವಜನಂ ವಿಷ್ಣುವು ಕಂಡು ದೂರದಲ್ಲಿ ನಮಸ್ಕರಿಸಿ, ಪುಳಕಿತಗಾತ್ರನಾಗಿ ಪರಮೇಶ್ವರನ ಎದಿರ್ಗೊಂಬುದಕ್ಕೆ ಪ್ರಯತ್ನಮಾಡಿ ತನ್ನ ಸಮೀಪದಲ್ಲಿರ್ದ ಅಗ್ನಿಬಿಂದು ಋಷಿಯಂ ಕರದು ನೀನು ಈ ಚಕ್ರವಂ ಮುಟ್ಟು ಎನಲಾ ಅಗ್ನಿಬಿಂದುವು ಚಕ್ರವಂ ಮುಟ್ಟಲಾಕ್ಷಣವೇ ತೇಜೋರೂಪವಾಗಿ ವಿಷ್ಣುವಿನ ವಕ್ಷಸ್ಥಳದಲ್ಲಿ ಒಪ್ಪುವ ಕೌಸ್ತುಭ ಮಾಣಿಕ್ಯದಲ್ಲಿ ಐಕ್ಯವಾದನು. ಕೇಳೈ, ಅಗಸ್ತ್ಯನೇ? ಆದಿಮೂರ್ತಿಯಾದ ವಿಷ್ಣುರೂಪದ ಬಿಂದುಮಾಧವನ ಸೇವೆಯಂಮಾಡಿ ಅಗ್ನಿಬಿಂದು ಋಷಿಯಂತೆ ಸಾಯುಜ್ಯಪಡೆದವರಾರು, ಅದರಿಂದ ಮನುಜನಾದವನು ಕಾಶೀಕ್ಷೇತ್ರದಲ್ಲೇ ಇರಬೇಕು. ಬಿಂದುಮಾಧವನ ಸೇವೆಯನ್ನೇ ಮಾಡಬೇಕು, ಈ ಬಿಂದುಮಾಧವ ಅಗ್ನಿಬಿಂದುಗಳ ಚರಿತ್ರೆಗಳನ್ನೇ ಕೇಳಬೇಕು, ಅದರಿಂದಲೇ ಸದ್ಗತಿ ಪಡೆಯಬೇಕು. ಈ ಕಥಾಶ್ರವಣವು ಬಿಂದುಮಾಧವನ ಸೇವೆಯೂ ಮುನ್ನ ಸುಕೃತವಮಾಡಿದ ಪುಣ್ಯವಂತರಿಗಲ್ಲದೆ ದೊರಕವು, ಅಗ್ನಿಬಿಂದು ಮಾಡಿದ ಬಿಂದುಮಾಧವನ ಸ್ತೋತ್ರವಂ ಪಠಿಸಲು ಇಹದಲ್ಲಿ ಸಕಲೈಶ್ವರ್ಯವನನುಭವಿಸಿ ಅಂತ್ಯದಲ್ಲಿ ಮುಕ್ತನಹನು. ಶ್ರಾದ್ಧಕಾಲದಲ್ಲಿ ಈ ಬಿಂದುಮಾಧವನ ಮಹಿಮೆಯಂ ಪಠಿಸಲು ಪಿತೃಗಳಿಗೆ ಗಯಾಶ್ರಾದ್ಧದಿಂದಾದ ತೃಪ್ತಿಯಹದು ಪೂರ್ಣತಿಥಿಗಳಲ್ಲಿ ಪಂಚನದೀ ತೀರ್ಥದಲ್ಲಿಸ್ನಾನಮಾಡಿ ಪಠಿಸಲು ಐಶ್ವರ್ಯವಂತನಹನು, ಏಕಾದಶಿಯಲ್ಲಿ ಉಪವಾಸವಿದ್ದು ವಿಷ್ಣುಪೂಜೆಯಂಮಾಡಿ,ಜಾಗರಣೆಯಂ ಮಾಡುವಾಗ ಈಬಿಂದುಮಾಧವನ ಕಥೆಯಂ ಕೇಳಲು,ವೈಕುಂಠವಾಸವಹುದು ಎಂದುಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನು ಎಂದುವ್ಯಾಸರು ಸೂತರಿಗೆ ಬುದ್ಧಿ ಗಲಿಸಿವರ್ಣ್ಣವಂ ಶೌನಕಾದಿಗಳಿಗೆ ನಿರೂಪಿಸಿದರೆಂಬಲ್ಲಿಗೆ ಅಧ್ಯಾಯ ೬೧

ಇಂತು ಶ್ರೀಮತ್ಸಮಸ್ತ ಭೂಮಂಡಲೀಖ್ಯಾತಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀಕೃಷ್ಣರಾಜವಡೆಯರವರು ಲೋ

ಕೋಪಕಾರಾರ್ಥವಾಗಿ ಕರ್ನಾಟಭಾಷೆಯಿಂ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಬಿಂದುಮಾಧವ ಅಗ್ನಿಬಿಂದು ಋಷಿಗಳ ಸಂವಾದಾನಂತರ ಅಗ್ನಿಬಿಂದುವಿಗೆ ವಿಷ್ಣುಕಥಾಶ್ರವಣದಿಂ ಸಾಯುಜ್ಯವಾಗಿ ವಿಶ್ವೇಶನು ಮಂದರಪರ್ವತದಿಂ ಕಾಶೀಕ್ಷೇತ್ರಕ್ಕೆ ಬಂದರೆಂದು ಹೇಳಿರುವಲ್ಲಿಗೆ ಅಧ್ಯಾಯಾರ್ಥ. ಅರವತ್ತೊಂದಕ್ಕಂ ಮಂಗಳ ಮಹಾ * * * * * *

ಅರವತ್ತೆರಡನೇ ಅಧ್ಯಾಯದಲ್ಲಿ

ವಿಶ್ವಪತಿ ಕಾಶೀಪ್ರವೇಶವಾದ ಕಥಾಪ್ರಸಂಗ.

ಶ್ರೀ ವಿಶ್ವನಾಥಾಯನಮಃ ॥ ॥ ಅನಂತರ ಕುಮಾರಸ್ವಾಮಿಗೆ ಅಗಸ್ತ್ಯನಿಂತೆಂದನು. ಎಲೈ ಕುಮಾರಸ್ವಾಮಿ? ನಿಮ್ಮ ಮುಖಕಮಲದಿಂ ಹೇಳಲ್ಪಟ್ಟ ಬಿಂದುಮಾಧವನ ಕಥಾವೃತ್ತಾಂತವಂ ಕೇಳಿ ತನಗೆ ತೃಪ್ತಿಯಾಗಲಿಲ್ಲ, ಕಾಶೀಪಟ್ಟಣಕ್ಕೆ ಪರಮೇಶ್ವರನು ಬಂದ ವೃತ್ತಾಂತವಂ ಬುದ್ಧಿಗಲಿಸಬೇಕು. ಗರುಡನೂ ವಿಷ್ಣುವಿನ ಕೈಯ್ಯ ಕಳುಹಿಸಿಕೊಂಡು ಪರಮೇಶ್ವರನ ಬಳಗೆಪೋಗಿ ದಿವೋದಾಸರಾಯು ಹೊರವಡಿಸಿದ ವೃತ್ತಾಂತವಂ ಹೇಳಲು ಕೇಳಿ ಪರಮೇಶ್ವರನು ಏನೆಂದನು. ಮಂದರಪರ್ವತದಿಂ ಬರುವ ಪರಮೇಶ್ವರನ ಸಂಗಡ ಆರಾರುಬಂದರು, ಈಶ್ವರನು ಕಾಶಿಗೆ ಬಂದಾಗ ಬ್ರಹ್ಮನು ನಾಚಿಕೊಳ್ಳದೆ ಯೇನೆಂದುಕೊಂಡನು. ಬ್ರಹ್ಮಂಗೆ ಶಿವನೇನೆಂದನು,--- ಸೂರ್ಯನು ಏನೆಂದು ತಿಳುಹಿಕೊಂಡನು, ಯೋಗಿನಿಯರು, ಗಣಂಗಳು ಏನೆಂದು ಬಿನ್ನಹವಂ ಮಾಡಿಕೊಂಡರು. ಇದನ್ನೆಲ್ಲಾ ವಿಸ್ತಾರವಾಗಿ ಬುದ್ಧಿಗಲಿಸಬೇಕೆಂದು ಅಗಸ್ತ್ಯನು ಬಿನ್ನವಿಸಲು, ಕುಮಾರಸ್ವಾಮಿ ಕೇಳಿ, ನಮಸ್ಕಾರಮಾತ್ರದಲ್ಲಿಯೇ ಸಕಲಸಿದ್ಧಿಗಳನ್ನೀವ ಪರಮೇಶ್ವರ ಪಾರ್ವತಿಯರಿಗೆ ನಮಸ್ಕರಿಸಿ ಇಂತೆಂದನು, ಕೇಳೈ ಅಗಸ್ತ್ಯನೇ? ಕೇಳಿದವರಿಗೆ ಸಕಲವಿಘ್ನಂಗಳಂ ಸಕಲ ಪಾತಕಗಳಂ ಪರಿಹರಿಸಿ, ಸಕಲಶ್ರೇಯಸ್ಸನ್ನೀವ ಈ ಕಥಾಪ್ರಸಂಗವಂ ಕೇಳು. ಮಂದರಪರ್ವತದಿಂದ ಗರುಡನು ಬಂದು ಪರಮೇಶ್ವರನು ಬರುತ್ತಾನೆಂದು ಹೇಳಿದ ಮಾ

ಕ್ಯವಂ ಕೇಳಿ, ರಾಕ್ಷಸರ ಸಂಹಾರಕನಾದ ವಿಷ್ಣುವು ಗರುತ್ಮಂತಂಗೆ ಉಡುಗೆರೆಯಂ ಕೊಟ್ಟು, ಇವರ್ಗೊಂಬನಿತರೊಳು ಪರಮೇಶ್ವರನು ಕಾಶೀಪಟ್ಟಣದ ಸಮೀಪಕ್ಕೆ ಬರಲು ವಿಷ್ಣು, ಬ್ರಹ್ಮ, ಸೂರ್ಯರೂ, ಯೋಗಿನಿಯರು, ಗಣಂಗಳು, ವಿಘ್ನೇಶ್ವರನು ಸಹಿತನಾಗಿ ಗರುಡಾರೂಢನಾಗಿ ಇದಿರುಬಂದು ಈಶ್ವರನ ಕಾಣುತ್ತಲೆ ಗರುಡನನ್ನಿಳಿದು ನಮಸ್ಕರಿಸಿದನು, ಬ್ರಹ್ಮನೂ ನಾಚಿಕೆಯಿಂದ ತಲೆಬಾಗಿ ನಮಸ್ಕಾರವಂ ಮಾಡುವದಕ್ಕೆ ಬರುತ್ತಿರಲು, ಪರಮೇಶ್ವರನು ಶಿರವಪಿಡಿದೆತ್ತಿ ನೀನು ಹಿರಿಯನು ನಮಸ್ಕಾರವಂ ಮಾಡಬೇಡ ಎನಲು, ಬ್ರಹ್ಮನು ರುದ್ರಸೂಕ್ತಗಳಿಂದ ಸ್ತುತಿಸಿ ದಿವ್ಯಫಲವನ್ನು ಕಾಣಿಕೆಯಂ ಕೊಟ್ಟು, ಅಕ್ಷತೆಯಂ ಕೊಟ್ಟನು ಅನಿತರೊಳು ಗಣಪತಿಯಾದ ವಿಘ್ನೇಶ್ವರನು ನಮಸ್ಕರಿಸಲು ಶಿರವಪಿಡಿದೆತ್ತಿ ಶಿರವನಾಘ್ರಾಣಿಸಿ ತನ್ನ ಸಮೀಪದಲ್ಲಿ ಸಾಷ್ಟಾಂಗವೆರಗಿರು. ಸೂರ್ಯನು ನಮಸ್ಕರಿಸಿದನು, ಅನಂತರದಲ್ಲಿ ಮುಗುಳುನಗೆಯಿಂ ವಿಷ್ಣುವಂ ನೋಡಿ, ತನ್ನ ಸಿಂಹಾಸನದ ಸಮಾನವಾದ ಸಿಂಹಾಸನದಲ್ಲಿ ತನ್ನ ಎಡಭಾಗದಲ್ಲಿ ವಿಷ್ಣುವಂ ಕುಳ್ಳಿರಿಸಿ, ತನ್ನ ಬಲಭಾಗದಲ್ಲಿ ಬ್ರಹ್ಮನಂ ಕುಳ್ಳಿರಿಸಿ, ಬಳಿಕ ತನ್ನ ಶುಭದೃಷ್ಟಿಯಿಂ ನೋಡಿ, ಗಣಂಗಳಿಗೆ ಸಂತೋಷವಂಮಾಡಿದನು, ಶಿರಃಕಂಪನದಿಂ ಯೋಗಿನಿಯರ ಮುಖದ ದುಗುಡವಂ ಬಿಡಿಸಿದನು. ಕೈ ಸನ್ನೆಯಿಂ ಸೂರ್ಯನ ಕುಳ್ಳಿರಿಸಿದನು, ಆ ಸಮಯದಲ್ಲಿ ಸಕಲರ ಮೇಲೆಯೂ ಕೃಪಾದೃಷ್ಟಿಯಿಂ ನೋಡಿ, ಸಂತೋಷಮಾಡಿದುದಂ ಕಂಡು ಬ್ರಹ್ಮನು ಎದ್ದು ಕೈಮುಗಿದುಕೊಂಡು ಪರಮೇಶ್ವರಗಿಂತೆಂದನು. ಎಲೈ ಷಡ್ಗುಣೈಶ್ವರ್ಯಸಂಪನ್ನನಾದ ಪಾರ್ವತೀಪ್ರಾಣಕಾಂತನಾದ ಪರಮೇಶ್ವರನೆ! ತಾನು ದಿವೋದಾಸರಾಯನ ಮೇಲೆ ಕಾರ್ಯವಂ ಸಾಧಿಸಿಕೊಟ್ಟೆನು ಎಂದು ನಿಮ್ಮಪ್ಪಣೆವಿಡಿದು ಕಾಶೀಕ್ಷೇತ್ರಕ್ಕೆ ಬಂದು ತಿರುಗಿ ನೀವು ಇದ್ದ ಮಂದರಪರ್ವತಕ್ಕೆ ಬಾರದೇಹೋದ ಅಪರಾಧವಂ ಕ್ಷಮಿಸಬೇಕು. ಎಲೈ ಚಂದ್ರಮೌಳಿಯೆ! ದೈವಾಧೀನದಿಂದ ಕಾಶೀಕ್ಷೇತ್ರಕ್ಕೆ ಬಂದು ಕಾರ್ಯವಂ ಸಾಧಿಸುವ ಸಾಮರ್ಥ್ಯವಿಲ್ಲದೆ ಇದ್ದರೂ ವೃದ್ಧನಾದ ಬಳಿಕ ಕಾಶಿಯಂ ಬಿಡಬಾರದಲ್ಲಾ ಎಂದು ಅದುಕಾರಣ ದಿವೋ

ದಾಸರಾಯನಲ್ಲಿ ಉಪದ್ರವವಮಾಡುವರೆ ಸಾಮರ್ಥ್ಯವಿಲ್ಲದೆ ಹೋಯಿತು, ಪುಣ್ಯವಿಶೇಷದಿಯಲ್ಲಿ ಸಮರ್ಥರಾದವರು. ಅಪಕಾರ ಮಾಡುವದಕ್ಕೆ ಶಕ್ಯವಲ್ಲಾ, ಧರ್ಮಿಷ್ಠರಿಗೆ ವಿಘ್ನವ ಮಾಡಬಾರದೆಂದು ದೇವರೇ ಬುದ್ಧಿಗಲಿಸಿದಿರಲ್ಲಾ, ಅದುಕಾರಣ ಪುಣ್ಯವಂತನಾದ ಎಚ್ಚರಿಕೆಯೊಳು ದಿವೋದಾಸರಾಯನಲ್ಲಿ ಸ್ವಲ್ಪವಾದರೂ ವಿಘ್ನಗಳಂ ಮಾಡುವದಕ್ಕೆ ಸಾಮರ್ಥ್ಯವಿಲ್ಲದೆ ಹೋಯಿತು, ಹೀಗೆಂದು ಬಿನ್ನೈಸಿದ ಬ್ರಹ್ಮನ ವಾಕ್ಯವಂ ಕೇಳಿ, ಪರಮೇಶ್ವರನು ಮುಗುಳುನಗೆಯಿಂದ ಬ್ರಹ್ಮನಿಗಿಂತೆಂದನು. ಎಲೈ ಬ್ರಹ್ಮನೇ? ನೀವು ವೃದ್ಧಬ್ರಾಹ್ಮಣರೂಪದಿಂ ಬಂದು ಆ ರಾಯನಲ್ಲಿ ದ್ರವ್ಯವಂತೆಗೆದುಕೊಂಡು ಹತ್ತು ಅಶ್ವಮೇಧಯಾಗವಂ ಮಾಡಿದೆಯಾಗಿ ನನಗೆ ಸಂತೋಷವಾಯಿತು. ನೀನು ತನಗೆ ಅತ್ಯಂತಹಿತನಾದೆ ಅದಲ್ಲದೆ ಬ್ರಾಹ್ಮಣನು ಸಾವಿರ ಅಪರಾಧಂಗಳು ಮಾಡಿದರೂ ದಂಡಿಸಬಾರದು, ಪ್ರಮಾದದಿಂದಂಡಿಸಿದರೆ ಸಕಲೈಶ್ವರ್ಯ ಹಾನಿಯಹುದು. ಹೀಗೆಂದು ಪರಮೇಶ್ವರನು ನುಡಿಯುತ್ತಿರಲು, ಗಣಂಗಳು ಸುಯಿದು ತಮ್ಮೊಳು ತಾವು ಮುಖಗಳಂ ನೋಡಿಕೊಂಡರು. ಸಕಲಲೋಕ ಸಂಚಾರವಂ ಬಲ್ಲ ಸೂರ್ಯನೂ, ಸಮಯವನೋಡಿ ಪ್ರಸನ್ನಮುಖನಾದ ಪಾರ್ವತೀಕಾಂತಂಗೆ ಬಿನ್ನೈಸಿದನು. ಎಲೈ ಸ್ವಾಮಿ ? ಪರಮದಯಾಳುವಾದ ಮಹಾಮಹಿಮನೇ ! ತಾನು ಮಂದರಪರ್ವತದಲ್ಲಿ ನಿಮ್ಮ ಕೈಯ್ಯಕಳುಹಿಸಿಕೊಂಡು ಕಾಶೀಪಟ್ಟಣಕ್ಕೆ ಬಂದು ಸಾವಿರಕರವುಳ್ಳವನಾದರೂ ದಿವೋದಾಸರಾಯನಲ್ಲಿ ಒಂದಿಷ್ಟಾದರೂ ಕಾರ್ಯವಮಾಡಲಾರದೆ ಹೋದೆನು. ದೇವರು ಕಾಶೀಪಟ್ಟಣಕ್ಕೆ ಬಂದರು ಎಂದು ನಿಶ್ಚೈಸಿ, ಇದಿರುನೋಡುತ್ತಾ ಇದ್ದೆನು. ಇಂದು ನಿಮ್ಮ ಪಾದದರ್ಶನದಿಂ ಎನ್ನ ಮನೋರಥಸಿದ್ಧಿಯಾಯಿತು ಎಂದು ಬಿನ್ನಹ ಮಾಡುವಸೂರ್ಯನಂ ಕೃಪಾದೃಷ್ಟಿಯಿಂದ ನೋಡಿ, ರವಿಲೋಚನನಾದ ಪರಮೇಶ್ವರನಿಂತೆಂದನು. ಎಲೈ ಸೂರ್ಯನೇ, ಕೇಳು ? ನೀನು ಅಪರಾಧಿಯಲ್ಲ, ಮುನ್ನ ದಿವೋದಾಸರಾಯನು ಆಳುವ ರಾಜ್ಯದೊಳಗಾಗಿ ದೇವತೆಗಳ ಪ್ರವೇಶಸಂಚಾರಗಳೇ ಇಲ್ಲ, ಹಾಗಾಗಿ ಇದ್ದು ಈ ಕಾಶೀಪಟ್ಟಣದಲ್ಲಿ ನೀನು ಇದ್ದದು ನಮ್ಮ ಕಾರ್ಯಕ್ಕೋ

ಸ್ವರವಲ್ಲದೆ ಮತ್ತೊಂದಲ್ಲ, ನಿನ್ನ ಮನಸ್ಸಿನಲ್ಲಿ ಚಿಂತೆಯಂ ಮಾಡಬೇಡ ಹೀಗೆಂದು ಸೂರ್ಯನೊಳುಸ್ಸುರಿಸಿ, ನಾಚಿಕೆಗಳಿಂದ ಶಿರವಬಾಗಿಸಿಕೊಂಡು ಭಯಸ್ಥರಾಗಿ ಇದ್ದ ಗಣಂಗಳಂ ಯೋಗಿನಿಯರು ನೋಡಿ, ಮೃದುವಾಕ್ಯದಿಂದ ಅವರ ಭಯವಂ ಬಿಡಿಸಿ, ಅಂಜಬೇಡ ಎಂದು ಅಭಯವಂ ಕೊಟ್ಟು, ಮನ್ನಿಸಿದನು. ಅನಂತರದಲ್ಲಿ ತನ್ನ ಎಡವಲ್ಲಿ ಕನಕಸಿಂಹಾಸನವಲ್ಲಿ ಕುಳಿತುಯಿರ್ದ ಶ್ರೀಮಹಾವಿಷ್ಣುವಂ ನೋಡಿ, ಮುಗುಳ್ನಗೆಯಿಂ ನೋಡಲು ಗಾಂಭೀರ್ಯವುಳ್ಳ ವಿಷ್ಣುವೂ ತಲೆಬಾಗಿ ಒಂದು ಮಾತು ಆಡಿದವನಲ್ಲವಾಗಿ ಸುಮ್ಮನಿರಲು. ಪರಮೇಶ್ವರನು ವಿನಾಯಕ ಮಾಡಿದ ವೃತ್ತಾಂತವಂ ವಿಷ್ಣು ಮಾಡಿದ ಕಾರ್ಯವಂ ಮೊದಲೇ ಗರುಡನಿಂ ತಿಳಿದವನಾದಕಾರಣ ಮನಸ್ಸಿನಲ್ಲಿ ಸಂತೋಷಪಟ್ಟು, ಪ್ರತ್ಯುತ್ತರಂಗಳಿಲ್ಲದೆ ಇರುತ್ತಿರಲು, ಸಕಲಲೋಕದವರೂ ಪರಮೇಶ್ವರನೂ ಕಾಶೀಪಟ್ಟಣಕ್ಕೆ ಬಂದುದಂ ಕೇಳಿ ಸಕಲರೂ ಬಂದು ಸೇವಿಸಿ ಸಂತೋಷದಿಂದಿರುತ್ತಿರಲು, ಆ ಸಮಯದಲ್ಲಿ ಪರಮೇಶ್ವರನ ದರ್ಶನನಿಮಿತ್ತವಾಗಿ ಗೋಲೋಕದಿಂದ ಸುನಂದೆ, ಸುಮನೆ, ಸುಶೀಲೆ, ಸುರಭಿ, ಕಪಿಲೆಗಳೆಂಬ ಪಂಚಧೇನುಗಳು ಬಂದು ಅತಿವಾತ್ಸಲ್ಯದಿಂದ ಪರಮೇಶ್ವರನ ಶಿರಸ್ಸಿನಲ್ಲಿ ಜಡಿಮಳೆಕರೆದಂತೆ ತಮ್ಮ ಕೆಚ್ಚಲುಗಳೆಂಬ ಮೇಘದಿಂದ ಕ್ಷೀರವರ್ಷವಂ ಕರೆಯಲು, ಎರಡನೇ ಕ್ಷೀರಸಮುದ್ರವೆಂಬಂತೆ ಅಲ್ಲಿ ಒಂದು ಹಾಲುಮಡುವಾಯಿತು, ಆಗ ಈಶ್ವರನು ಅದಕ್ಕೆ ಕಪಿಲತೀರ್ಥವೆಂದು ಪೆಸರಿಟ್ಟು ತಾನು ಸ್ನಾನಂಗಳಂ ಮಾಡಲು, ಆಗ ಪರಮೇಶ್ವರನ ಆಜ್ಞೆಯಿಂದ ಬ್ರಹ್ಮ, ವಿಷ್ಣು ಮೊದಲಾದ ದೇವರ್ಕಳು, ಸಕಲ ಋಷಿಗಳು, ನೆರದು ನಾನಾಲೋಕದ ಜನಂಗಳು ಎಲ್ಲರೂ ಸ್ನಾನವಂ ಮಾಡಿದರು. ಆ ಸಮಯದಲ್ಲಿ ಕಪಿಲಹ್ರದತೀರ್ಥದಿಂದ ಪಿತೃಗಳು ಹೊರಟುಬರಲು; ದೇವತೆಗಳು, ಋಷಿಗಳು, ನೆರದು ಸಕಲ ದೇವರ್ಷಿ ಪಿತೃತರ್ಪಣಂಗಳಂ ಕೊಟ್ಟರು. ಆ ಪಿತೃಗಳ ಹೆಸರೇನೆನೆ— ಅಗ್ನಿಷ್ವಾತ್ತರು, ಬರ್ಹಿಷದರು, ಆಜ್ಯಪರು, ಸೋಮಪರು. ಇವರು ಮೊದಲಾದ ಪಿತೃಗಳು, ದೇವರ್ಕಳು ಕೊಟ್ಟ ತರ್ಪಣಗಳಿಂ ತೃಪ್ತರಾಗಿ ಪರಮೇಶ್ವರಗೆ ಬಿನ್ನೈಸಿದರು. ಎಲೈ ದೇವದೇವ ಜಗ

ನ್ನಾಥ ಭಕ್ತವತ್ಸಲ! ಭಕ್ತರ ಸಂಸಾರದುಃಖವಂ ಪರಿಹರಿಸುವ ಪರಮೇ ಶ್ವರನೇ! ನಿನ್ನ ಸಮೀಪದಲ್ಲಿರ್ದ ಈ ತೀರ್ಥದಿಂ ನಮಗೆ ಅತ್ಯಂತ ತೃಪ್ತಿ ಯಾಯಿತ್ತು, ಆದರೂ ನಿಮ್ಮ ಪಾದಪದ್ಮದರ್ಶನವಾದಬಳಿಕ ನಮಗೆ ಇನ್ನೊಂ ದು ವರವಕೊಡಬೇಕೆಂದು ನುಡಿದ ಪಿತೃಗಳ ವಾಕ್ಯವಂ ಕೇಳಿ, ಅವರ ಅಭೀಷ್ಟವ ಮನೋಜ್ಞಾನರೂಪದಿಂ ತಿಳಿದು ಸಕಲರೂ ಕೇಳುತ್ತಿರಲು ಪರಮೇಶ್ವರನಿಂತೆಂದನು. ಕೇಳಿರೈ, ಬ್ರಹ್ಮ, ವಿಷ್ಣು ಮೊದಲಾದ ದೇವ ತೆಗಳಿರಾ! ಈ ಧೇನುಗಳ ಕ್ಷೀರದಿಂದಾದ ಕಪಿಲಾಹ್ರದ ತೀರ್ಥದಲ್ಲಿ ಆರು ಪಿಂಡಪ್ರದಾನವ ಮಾಡುವರೊ? ಅವರ ಪಿತೃಗಳಿಗೆ ಅತ್ಯಂತತೃಪ್ತಿಯಾ ಗಲೀ, ಇವರಲ್ಲಿ ಮತ್ತೊಂದು ವಿಶೇಷವುಂಟು; ಅದಾವುದೆನೆ- ಅಮಾವಾ ಸ್ಯೆಯು ಸೋಮವಾರ ಬಂದಾಗ ಈ ತೀರ್ಥದಲ್ಲಿ ಶ್ರಾದ್ಧವಂಮಾಡಲು, ಅಕ್ಷಯಫಲವುಂಟು. ಪ್ರಳಯದಲ್ಲಿ ಸಪ್ತಸಮುದ್ರಗಳ ಉದಕ ಬತ್ತಿ ಹೋದರೂ ಈ ತೀರ್ಥ ಕೆಡದು, ಈ ತೀರ್ಥದಲ್ಲಿ ಮಾಡಿದ ಶ್ರಾದ್ಧಫಲ ಕೆಡದು,ಈ ಕಪಿಲಾಹ್ರದ ತೀರ್ಥದಲ್ಲಿ ಅಮಾವಾಸ್ಯೆಯೂ ಸೋಮವಾರ ಪಿಂಡಪ್ರದಾನ ಮಾಡಲು ಗಯಾಶ್ರಾದ್ಧಫಲವುಂಟು.ಗದಾಧರನಾದ,ನೀನು ಪಿತಾಮಹನಾದ ಬ್ರಹ್ಮನೂ, ವೃಷಭಧ್ವಜನಾದ ನಾನು ಮಿಕ್ಕಾದ ದೇವ ತೆಗಳೂ, ಸಕಲ ಋಷಿಗಳೂ, ಸ್ನಾನವಂ ಮಾಡಿದ ಮೇಲೆ ಈ ತೀರ್ಥದ ಮಹಿಮೆ ಕೇಳುವದೇನು? ಅಮಾಸೋಮವಾರದಲ್ಲಿ ದಿವಿ ಭೂಮಿ ಅಂತ ರಿಕ್ಷದಲ್ಲಿರ್ದ ಮೂರುಕೋಟಿಯೂ ಐವತ್ತುಲಕ್ಷ ತೀರ್ಥಂಗಳು ಈ ಕಪಿ ಲಾಹ್ರದ ತೀರ್ಥದಲ್ಲಿ ಬಂದಿರಲಿ, ಅಮಾಸೋಮವಾರ ಈ ತೀರ್ಥದಲ್ಲಿ ಸ್ನಾನವಮಾಡಲು, ಸೂರ್ಯಗ್ರಹಣದಲ್ಲಿ ಕುರುಕ್ಷೇತ್ರ ನೈಮಿಷ ಗಂ ಗಾಸಾಗರ ಸಂಗಮ. ಇವರಲ್ಲಿ ಸ್ನಾನವಂ ಮಾಡಿದ ಫಲವಾಗಲಿ, ಕೇಳ್ವೈ ಪಿತೃಗಳಿರಾ? ನಿಮಗೆ ತೃಪ್ತಿಕರವಾದ ಈ ತೀರ್ಥವು ಹತ್ತು ಪೆಸರಿ ಸಿಂ ಪ್ರಸಿದ್ಧವಾಗಲಿ, ಆ ಹೆಸರುಗಳಾವಾವೆನೆ- ಕಪಿಲಹ್ರದ, ಮಧುಸ್ರ ವ, ಘೃತಕೂಲಿ, ಕ್ಷೀರಸಾಗರತೀರ್ಥ, ವೃಷಭಧ್ವಜತೀರ್ಥ, ಪಿತಾಮ ಹತೀರ್ಥ, ಪಿತೃತೀರ್ಥ, ಸುಧಾತೀರ್ಥ, ಶಿವನದತೀರ್ಥ. ಇಂತೆಂಬ ಹ ತ್ತುಪೆಸರುಗಳಿಂ ಪ್ರಸಿದ್ಧಿಯಾಗಲಿ, ಆರೊಬ್ಬರೂ ಈ ತೀರ್ಥದಲ್ಲಿ ಸ್ನಾ

ನವಂ ಮಾಡಿ, ಪಿಂಡಪ್ರದಾನವಂ ಮಾಡಲಾರದವರು ಈ ಹತ್ತು ನಾಮ ಸ್ಮರಿಸಲು, ಅವರು ಪಿತೃಗಳಿಗೆ ತಿಲೋದಕಪಿಂಡಪ್ರದಾನವಂ ಮಾಡಿದವರು ಅವರ ಪಿತೃಗಳು ತೃಪ್ತಿಬಡುವರು. ಈ ತೀರ್ಥದಲ್ಲಿ ಬ್ರಾಹ್ಮಣ ಭೋಜನವಂ ಮಾಡಿಸಲು ಅನಂತಫಲ. ಇಲ್ಲಿ ವೃಷೋತ್ಸರ್ಗವಂ ಮಾಡಲು ಅಶ್ವಮೇಧಯಾಗ ಫಲವುಂಟು. ಇವಲ್ಲದೆ ಉಪನಯನವಿಲ್ಲದೆ ಮೃತರಾದವರು, ವಿವಾಹವಿಲ್ಲದೆ ಸಂದವರು, ಅಗ್ನಿಸಂಸ್ಕಾರವಿಲ್ಲದವರು, ಷೋಡಶಶ್ರಾದ್ಧವಿಲ್ಲದವರು, ಪುತ್ರರಿಲ್ಲದವರು, ತಿಲೋದಕಪಿಂಡಪ್ರದಾನವಂ ಮಾಡುವವರಿಕ್ಕೆ ದಿಕ್ಕಿಲ್ಲದವರು, ಮಾರ್ಗದಲ್ಲಿ ಕಳ್ಳರಿಂದ ಹತರಾದವರು, ಉದಕದಲ್ಲಿ ದೇಹತ್ಯಾಗವಂ ಮಾಡಿದವರು, ಆತ್ಮಘಾತಕರಾದವರು, ಪಿತೃಗೋತ್ರದವರು, ಮಾತೃ ಸಂಬಂಧಿಗಳು, ಹೆಂಡತಿಯ ಕಡೆಯವರು, ಸ್ನೇಹಿತರು, ಬಗೆಯವರು, ತಮ್ಮ ಪಿತೃಗಳು, ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರು ಮೊದಲಾಗಿ ಅಂತ್ಯಜರು ಕಡೆಯಾದ ಜಾತಿಗಳಲ್ಲಿ ಜನಿಸಿದವರು, ಪಶ್ವಾದಿಗಳಾಗಿ ಪುಟ್ಟಿದವರು, ವೃಕ್ಷಂಗಳಾಗಿ ಶಿಲೆಗಳಾಗಿ ಕ್ರಿಮಿಕೀಟಂಗಳಾಗಿ ಪತಂಗ ಭುಜಂಗ ಮೊದಲಾದ ಜಂತುಗಳಾಗಿ ಪುಟ್ಟಿದವರು, ಪಿಶಾಚಗಣಂಗಳಾಗಿ ಇದ್ದವರು, ಕ್ಷುದ್ರಲೋಕಂಗಳಲ್ಲಿ ಕಷ್ಟಪಡುತ್ತಿದ್ದವರು, ನರಕಗಳಲ್ಲಿ ಇದ್ದರೂ ಅವರೆಲ್ಲರೂ ತಾವು ಮಾಡಿದ ತಿಲೋದಕಪಿಂಡಪ್ರದಾನದಿಂ ಮುಕ್ತರಾಗಲಿ ಎಂದು ಕ್ರಿಯೆಗಳಂ ಮಾಡಬೇಕು. ಆಮೇಲೆ ಮನುಷ್ಯರಾಗಿ ಇದ್ದವರೆಲ್ಲರೂ ದೇವತ್ವವನ್ನೈದಲಿ, ದೇವತ್ವವನ್ನೈದಿದವರು ಬ್ರಹ್ಮಲೋಕವನ್ನೈದಲಿ, ಎಂದು ತರ್ಪಣಾದಿಗಳಂ ಮಾಡಬೇಕು. ಈ ತೀರ್ಥವು ಕೃತಯುಗದಲ್ಲಿ ಕ್ಷೀರಮಯ, ತ್ರೇತಾಯುಗದಲ್ಲಿ ಜೇನುತುಪ್ಪ, ದ್ವಾಪರದಲ್ಲಿ ತುಪ್ಪ, ಕಲಿಯುಗದಲ್ಲಿ ಉದಕವಾಗಿ ತೋರಿ ಇದ್ದೀತು. ಈ ತೀರ್ಥವು ಕಾಶೀಕ್ಷೇತ್ರದ ಹೊರಗೆ ಇದ್ದರೂ ಎನ್ನ ಸನ್ನಿಧಿಯಿಂದ ಕ್ಷೇತ್ರದೊಳಗೆ ಇದ್ದುದು ಎಂದು ತಿಳಿಯುವದು. ಎಲೈ ಪಿತೃಗಳಿರಾ ? ಕಾಶಿಯಲ್ಲಿ ಇದ್ದವರೆಲ್ಲರೂ ಎನ್ನ ವೃಷಭಧ್ವಜವಕಂಡು ಸಂತೋಷದಿಂದೆನ್ನ ಬರುವದ ನಿರೀಕ್ಷಿಸಿದವರಾದಕಾರಣ, ವೃಷಭಧ್ವಜೇಶ್ವರನೆಂಬ ಪೆಸರಿನಿಂದ ಬ್ರಹ್ಮ ವಿಷ್ಣು ಗಣಂಗಳು ಸಹ

ನಿಮ್ಮ ಪ್ರೀತಿಗೋಸ್ಕರ ಇಲ್ಲಿ ಇದ್ದೆನು ಎಂದು ಪಿತೃಗಳಿಗೆ ವರವನಿತ್ತು ಇರುವನಿತರೊಳು ನಂದಿಕೇಶ್ವರನು ಬಂದು ನಮಸ್ಕರಿಸಿ, ಬಿನ್ನೈಸಿದನು. ಎಲೈ ಸ್ವಾಮಿ ! ರಥವನೊಳ್ಳೈಸಿ ತಂದೆನು, ಆ ರಥಕ್ಕೆ ಕಟ್ಟಿದ ಸಿಂಹವೆಂಟು, ವೃಷಭವೆಂಟು, ಗಜವೆಂಟು, ಅಶ್ವವೆಂಟು, ಮನೋವಿಗ್ರಹವೇ ಸಾರಥಿ ಗಂಗೆ ಯಮುನೆಗಳು ಅರಚು, ಸಾಯಂಕಾಲ ಪ್ರಾತಃಕಾಲಗಳೇ ಗಾಲಿಗಳು, ಆಕಾಶಮಂಡಲವೇ ಛತ್ರ, ನಕ್ಷತ್ರಮಂಡಲವೇ ಕೀಲುಗಳು, ಸರ್ಪಂಗಳೇ ಬಿಗಿನೇಣುಗಳು, ವೇದಗಳು ಕಟ್ಟಿಗೆಯವರು, ಸ್ಮೃತಿಗಳು ರಥರಕ್ಷಕರು, ದಕ್ಷಿಣಾಯನವೇ ನೊಗವು, ಯಜ್ಞಂಗಳು ಭಂಡಿಯ ಕೀಲುಗಳು, ಗಾಯತ್ರಿಯೇ ಸಿಂಹಪೀಠ, ಪ್ರಣವವೇ ಸುಪ್ಪತ್ತಿಗೆ, ವ್ಯಾಹೃತಿಗಳು ಸೋಪಾನಗಳು, ಚಂದ್ರಸೂರ್ಯರೆ ದ್ವಾರಪಾಲಕರು, ಅಗ್ನಿ ಯಮ ಕರಕಂಡ, ಬೆಳದಿಂಗಳು ರಥದಭೂಮಿ, ಮಹಾಮೇರು ಧ್ವಜಸ್ತಂಭ, ಸೂರ್ಯಪ್ರಭೆಯೇ ಧ್ವಜಪಟ, ಸರಸ್ವತಿ ವಿಂಜಾಮರ ಬೀಸುವವಳು. ಇಂತೆಂದು ನಂದಿಕೇಶ್ವರ ಬಿನ್ನಹವಂಮಾಡಲು, ಅಸಿತರೊಳು ಸಪ್ತಮಾತೃಕೆಯರುಗಳು ಆರತಿಯಂ ಎತ್ತುತ್ತಿರಲು, ವಿಷ್ಣುವು ಕೈಲಾಘವಕೊಡಲು, ಪರಮೇಶ್ವರನು ಎದ್ದು ರಥಾರೂಢನಾಗುವದಕ್ಕೆ ಬರುತ್ತಿರಲು: ಆಕಾಶದಿಂ ದೇವದುಂದುಭಿ ಧ್ವನಿಯು, ದಶದಿಕ್ಕುಗಳಂ ಕಿವಡುಗೊಳಿಸುತ್ತಿರಲು, ಆ ಧ್ವನಿಯಂ ಕೇಳಿ, ಕರೆಯೆ ಕಳುಹಿಸಬಂದವರಂತೆ ಚತುರ್ದಶಭುವನವವರೆಲ್ಲರೂ ಬಂದರು. ಅವರಾರೆಂದರೆ- ಮೂವತ್ತುಮೂರುಕೋಟಿ ದೇವರ್ಕಳು, ಇಪ್ಪತ್ತುಸಾವಿರ ಕೋಟಿ ಪ್ರಮಥಗಣಂಗಳು, ಒಂಭತ್ತುಕೋಟಿ ಚಾಮುಂಡಿಯರು, ಒಂದುಕೋಟಿ ಭೈರವರು, ಅತಿಪರಾಕ್ರಮಿಗಳಾದ ನವಿಲುವಾಹನರಾದ ಆರುಶಿರಸ್ಸುಗಳುಳ್ಳ ಎಂಟುಕೋಟಿ ಕುಮಾರಸ್ವಾಮಿಗಳು, ಗಂಡುಕೊಡಲಿಗಳಂ ಧರಿಸಿದ ದೊಡ್ಡಹೊಟ್ಟೆಯ ವಿನಾಯಕರು ಏಳುಕೋಟಿ, ತಾರಕಬ್ರಹ್ಮಜ್ಞಾನಿಗಳಾದ ಎಂಭತ್ತುಸಾವಿರ ಋಷಿಗಳು, ಎಂಭತ್ತಾರುಸಾವಿರ ಗೃಹಸ್ಥಾಶ್ರಮದ ಋಷಿಗಳು, ಎಂಭತ್ತಾರು ಸಾವಿರ ಸರ್ಪಗಳು, ಮೂರುಕೋಟಿ ದಾನವರು, ಎಂಟುಕೋಟಿ ನೈಋತ್ಯರು, ಎರಡುಕೋಟಿ ಗಂಧರ್ವರು,

ಎಂಟುಕೋಟಿ ಯಕ್ಷರು, ಐವತ್ತುಲಕ್ಷ ರಾಕ್ಷಸರು, ಐವತ್ತುಲಕ್ಷ ವಿದ್ಯಾಧರರು, ಎರಡುಲಕ್ಷವ್ರೂ ಹತ್ತುಸಾವಿರ ಅಪ್ಸರಸ್ತ್ರೀಯರು, ಅರವತ್ತುಸಾವಿರ ಕಾಮಧೇನುಗಳು, ಎಂಟುಲಕ್ಷ ಗರುಡರು, ಅರವತ್ತುಸಾವಿರ ಅನರ್ಘ್ಯವಾದ ರತ್ನಗಳಂ ಕೊಂಡು ಬಂದ ಸಪ್ತಸಮುದ್ರಂಗಳು, ಅರವತ್ತುನಾಲ್ಕು ದಿವ್ಯನದಿಗಳು, ಅರವತ್ತುಸಾವಿರ ಪರ್ವತಂಗಳು, ಎಂಟುಸಾವಿರ ಅಷ್ಟದಿಗ್ಗಜಗಳು. ಇವರೇ ಮೊದಲಾದ ಸಕಲರೂ ಬಂದು ಸ್ತೋತ್ರವಂ ಮಾಡಲು, ಪರಮೇಶ್ವರನು ಅವರೆಲ್ಲರನ್ನೂ ಕೃಪಾದೃಷ್ಟಿಯಿಂ ನೋಡಿ, ಪಾರ್ವತೀಸಮೇತನಾದ ಪರಮೇಶ್ವರನು ಛಂದೋಮಯವಾದ ರಥಾರೂಢನಾಗಿ ತ್ರೈಲೋಕ್ಯಕ್ಕಿಂತ ಅಧಿಕವಾಗಿ ಮನಸ್ಸಿಗೆ ಸಂತೋಷವಾದ ಕಾಶೀಪಟ್ಟಣವಂ ಶುಭಲಗ್ನದಲ್ಲಿ ಪ್ರವೇಶವಾದನು. ಕೇಳೈ ಅಗಸ್ತ್ಯನೆ? ಈ ಅಧ್ಯಾಯದ ಕಥೆಯನ್ನು ಶುಚಿತ್ವದಿಂ ಕೇಳುವವರ್ಗೆ ಕೋಟಿಜನ್ಮದ ಪಾಪಹರ. ಈ ಕಥೆಯಂ ಕೇಳುವವರು ಶಿವಸಾಯುಜ್ಯವಂ ಪೊಂದುವರು. ಈ ಅಧ್ಯಾಯವಂ ಶ್ರಾದ್ಧಕಾಲದಲ್ಲಿ ಪಠಿಸಲು ಪಿತೃಗಳಿಗೆ ಗಯಾಶ್ರಾದ್ಧದಿಂದಧಿಕತೃಪ್ತಿಕರ. ವೃಷಭಧ್ವಜಸ್ವಾಮಿಯುಮುಂದೆ ಈ ಕಥೆಯಂ ಭಕ್ತಿಯಿಂದ ಒಂದು ವರುಷ ಪಠಿಸಲು, ಪುತ್ರರಿಲ್ಲದವರಿಗೆ ಸುಪುತ್ರರಹರು. ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದರೆಂದು ವ್ಯಾಸರು ತನಗೆ ಪೇಳಿದರೆಂದು ಸೂತರು ಶೌನಕಾದಿಗಳಿಗೆ ವಿವರಿಸಿದಲ್ಲಿಗೆ ಅಧ್ಯಾಯ ೬೨ ॥ * * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಭಾಷೆಯಿಂ ವಿರಚಿಸಿದ ಕೃಷ್ಣರಾಜವಾಣೀವಿಲಾಸವೆಂಬ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ವಿಶ್ವೇಶ್ವರನು ಕಾಶೀಕ್ಷೇತ್ರ ಪ್ರವೇಶವಂಮಾಡಿ ಮೊದಲು ತನ್ನಿಂದ ಕಳುಹಿಸಿದ ಪರಿವಾರವೆಲ್ಲರಿಗೂ ಯಥಾಕ್ರಮವಾಗಿ ಮನ್ನಿಸಿದ ವಿವರಗಳಂ ಪೇಳರುವ ಅರವತ್ತೆರಡನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ. * * * *

ಅರವತ್ತ ಮೂರನೇ ಅಧ್ಯಾಯದಲ್ಲಿ ಪರಮೇಶ್ವರನು ಜೈಗೀಷವ್ಯ ಮುನಿಗೆ ಪ್ರಸನ್ನನಾದ ವೃತ್ತಾಂತ.

ಶ್ರೀಮಹಾಗಣಪತಯೇನಮಃ ॥ ॥ ಅನಂತರ ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು. ಎಲೈ ತಾರಕಸಂಹಾರಿಯಾದ ಕುಮಾರಸ್ವಾಮಿಯೇ, ತ್ರಿಪುರಹರನಾದ ಪರಮೇಶ್ವರನು ಸಕಲ ಸೃಷ್ಟಿಗೂ ಆನಂದ ವನ್ನೀವ ಅನೇಕ ಮನೋರಥಗಳಂ ಭಕ್ತಜನಂಗಳಿಗೆ ಕೊಡುವ ಕಾಶೀ ಪಟ್ಟಣವನ್ನು ಪರಮೇಶ್ವರನು ಪ್ರವೇಶವಾಗಿ ಮತ್ತೇನು ಮಾಡಿದನೆಂದು ಬಿನ್ನೈಸಲು, ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು. ಪರಮೇಶ್ವರನು ಕಾಶೀಪ್ರವೇಶ ಮಾಡುತ್ತಲೆ ಸರ್ವಜ್ಞನಾದ, ಭಕ್ತವತ್ಸಲನಾದ ಕಾರಣ ಗುಹೆಯೊಳಗೆ ತಪಸ್ಸಂ ಮಾಡುತ್ತಿದ್ದ ಋಷಿಶ್ರೇಷ್ಠನಾದ ಜೈಗೀಷವ್ಯ ನೆಂಬ ಮುನೀಶ್ವರನು ತಾನೇ ಹೋಗಿ ಕಂಡನು. ಆ ಮುನೀಶ್ವರನು ಆತ ನೇ ಪೂರ್ವದಲ್ಲಿ ಪರಮೇಶ್ವರನು, ಮಂದರಪರ್ವತಕ್ಕೆ ಪಾರ್ವತೀಸಮೇ ತನಾಗಿ ಹೋದನಲ್ಲಾ ಪರಮೇಶ್ವರನೂ ಕಾಶೀಪಟ್ಟಣವಂ ಬಿಟ್ಟು ಹೋ ಗಲಿ ಎಂದು ಜೈಗೀಷವ್ಯಮುನಿಯು ಆದಿನಾರಭ್ಯವಾಗಿ ದೃಢವಾದ ನೇಮ ದಿಂ ಪರಮೇಶ್ವರನು ಕಾಶೀಪಟ್ಟಣಕ್ಕೆಯಿಂದಿಗೆ ಬಂದಾನು, ಆ ಸ್ವಾಮಿಯ ಪಾದಾಗವಿಂದವನೆಂದಿಗೆ ಕಾಂಬೆನು ಅಂದುಪರಿಯಂತವೂ ಒಂದುತೊಟ್ಟು ಉದಕಬಿಂದು ಮೊದಲಾಗಿ ಏನನ್ನೂವಲ್ಲೆನೂ ಎಂದು ದೃಢವ್ರತವಮಾಡಿ ಕೊಂಡು ವಾಯುಧಾರಣದಿಂ ಅನ್ನೋದಕವಂ ಬಿಟ್ಟು, ನಿರಾಹಾರದಿಂ ಒಂದು ಗುಹೆಯೊಳಗೆ ಎಂಭತ್ತು ಸಾವಿರ ವರುಷಪರ್ಯಂತವೂ ತಪಸ್ಸಮಾ ಡಿಕೊಂಡು ಇದ್ದನು. ದೃಢವ್ರತಿಯಾದ ಆ ಋಷಿಯನ್ನು ಪರಮೇಶ್ವರ ನೊಬ್ಬನಲ್ಲದೆ ಮತ್ತಾರೂ ಅರಿಯರು. ಅದುಕಾರಣ ಪ್ರಮಥಾಧಿಪನಾದ ಪರಮೇಶ್ವರನು ಜ್ಯೇಷ್ಠಶುದ್ಧ ಚತುರ್ದಶಿ ಸೋಮವಾರ ಅನೂರಾಧಾನ ಕ್ಷತ್ರದಲ್ಲಿ ಆ ಗುಹೆಯಸಮೀಪಕ್ಕೆ ಹೋದನು. ಆಸ್ಥಳವು ಸಕಲಪುಣ್ಯ ಸ್ಥಳಗಳಿಗೆ ಜ್ಯೇಷ್ಠಸ್ಥಾನವೆನಿಸಿತು, ಆ ಜ್ಯೇಷ್ಠಸ್ಥಾನಕ್ಕೆ ಪರಮೇಶ್ವ ರನು ಜ್ಯೇಷ್ಠಶುದ್ಧ ಚತುರ್ದಶೀ ಸೋಮವಾರ ಹೋಗಿ ಅಲ್ಲಿ ಜ್ಯೇಷ್ಠೇ ಶ್ವರನೆಂಬ ಲಿಂಗವಾದನು. ಆ ಜ್ಯೇಷ್ಠಸ್ವಾಮಿಯು ಯಾತ್ರೆಯಂ ಮಾಡಿ,

ಆ ಲಿಂಗದರ್ಶನವಂ ಮಾಡಲು ಪುನರ್ಜನ್ಮವಿಲ್ಲ, ಆ ತೀರ್ಥದಲ್ಲಿ ತಿಲೋದಕಪಿಂಡಪ್ರದಾನವಂ ಮಾಡಲು ಸಕಲಪಿತೃಗಳೂ ಅನಂತ ತೃಪ್ತರಹರು ನೂರು ಜನ್ಮದಲ್ಲಿ ಮಾಡಿದ ಪಾಪಹರ. ಅಲ್ಲಿ ಜ್ಯೇಷ್ಠತೀರ್ಥವುಂಟು. ಆ ತೀರ್ಥದಲ್ಲಿ ಸ್ನಾನವಂ ಮಾಡಿ, ಜ್ಯೇಷ್ಠೇಶ್ವರನಂ ಪೂಜಿಸಲು, ಶಾಶ್ವತವಾದ ಶಿವಲೋಕವಾಸವುಂಟು. ಜ್ಯೇಷ್ಠಶುದ್ಧ ಅಷ್ಟಮಿ ಮೊದಲು ಉಪವಾಸವಿದ್ದು ಜ್ಯೇಷ್ಠಗೌರಿಯಂ ಮಹೋತ್ಸವದಿಂ ಪೂಜಿಸಿ, ಜಾಗರಣವಂ ಮಾಡಿದ ಸ್ತ್ರೀಯರು ಪುರುಷರು ಅನೇಕ ಸೌಭಾಗ್ಯದಿಂದ ಸುಖಪಟ್ಟು, ಪರದಲ್ಲಿ ಸಾಯುಜ್ಯವನ್ನೈದುವರು. ಅಲ್ಲಿ ಪರಮೇಶ್ವರನು ವಾಸವಾಗಿ ನಿಂತನಾಗಿ ನಿವಾಸೇಶ್ವರನೆಂಬ ಮತ್ತೊಂದು ಲಿಂಗವಾದನು. ಆತನಂ ಸೇವೆಯಂ ಮಾಡಲು, ಪಿತೃಗಳಿಗೆ ಅಧಿಕತೃಪ್ತಿಕರ. ಆ ತೀರ್ಥದಲ್ಲಿ ಸ್ನಾನವ ಮಾಡಲು ಇಹದಲ್ಲಿ ಸಕಲೈಶ್ವರ್ಯವನನುಭವಿಸಿ ಅಂತ್ಯದಲ್ಲಿ ಸ್ವರ್ಗಭೋಗವನನುಭವಿಸುವರು. ಆ ಮೇಲೆ ಸಾಯುಜ್ಯಪದವಿಯನ್ನೈದುವರು. ಅಂಥಾ ಜ್ಯೇಷ್ಠಸ್ಥಾನದಲ್ಲಿ ಗುಹೆಯೊಳಗೆ ತಪಸ್ಸುಮಾಡುವ ಜೈಗೀಷವ್ಯಮುನಿಯು ಅಸ್ಥಿಚರ್ಮ ಮಾತ್ರದಿಂ ತಪವಮಾಡುತ್ತಿರಲು, ಮಹಾದೇವನು ಮನೋಜ್ಞಾನದಿಂ ಕಂಡು ಕೃಪಾನಿಧಿಯಾದ ಪರಮೇಶ್ವರನು ಸಕಲ ದೇವತಾಸಮೂಹವು ಕೇಳುತ್ತಿರಲು, ನಂದೀಶ್ವರನ ಕರೆದಿಂತೆಂದನು. ಎಲೈ ನಂದೀಶ್ವರನೆ? ಮನೋಹರವಾದ ಗುಹೆಯೊಳಗೆ ಎನ್ನ ನಿಜಭಕ್ತನಾದ ಜೈಗೀಷವ್ಯನೆಂಬ ಋಷಿ ತಪಸ್ವಿ ಇಹನು, ಆತನು ಅನೇಕ ನಿಯಮವುಳ್ಳವನು, ಅಸ್ಥಿ ಚರ್ಮ ಮಾತ್ರವಲ್ಲಿಹನು. ನೀನು ಶೀಘ್ರವಾಗಿ ಪೋಗಿ ದೃಢಭಕ್ತನಾದ ಎನ್ನ ಪ್ರಾಣಪ್ರದಕವಾದ ಆ ಮುನಿಯಂ ಕರದುಕೊಂಡುಬಾ ಸಕಲ ಸೌಖ್ಯವುಳ್ಳ ಮಂದರಪರ್ವತಕ್ಕೆ ತಾನು ಪೋದ ಮೊದಲಾಗಿಯೂ ನಿರಾಹಾರದಲ್ಲಿ ತಪವಂ ಮಾಡುತ್ತಿರ್ದನು. ದರ್ಶನಮಾತ್ರದಲ್ಲೀ ಅಮೃತಪಾನ ಮಾಡಿದ ಸುಖವನೀವ ಈ ಲೀಲಾಕಮಲವಂ ಕೊಂಡುಪೋಗಿ ಆತನ ಶರೀರವಂ ಮುಟ್ಟಿಸು. ಶರೀರ ಗಟ್ಟಿಯಾದೀತೆನಲು, ಆ ಕಮಲವಂ ತೆಗದುಕೊಂಡು ಪರಮೇಶ್ವರಗೆ ನಮಸ್ಕರಿಸಿ ನಂದೀಶ್ವರನು ಗಹ್ವರವಾದ ಗುಹೆಯಂ ಪೊಕ್ಕು ಅಲ್ಲಿ ಮಹಾಯೋಗದಿಂ ತಪವಂಮಾಡುವ ಮು

ಸಿಡುಂಕಂಡು ತಪವೆಂಬ ಅಗ್ನಿಯಿಂ ಕೃಶವಾದ ಶರೀರವಂ ಲೀಲಾಕಮಲ
ದಿಂ ಪುಟ್ಟಿಸಲು, ಗ್ರೀಷ್ಮಋತುವಿನ ಅಂತ್ಯದಲ್ಲಿ ಮಳೆಯು ಬರಲು,
ಮರದ ಪೊಟ್ಟರೆಯಲ್ಲಿದ್ದ ಒಣಗಿದ ಗೆಣಸು ಚಿಗುರಿತಂತೆ, ಆ ಲೀಲಾಕಮಲ
ಸೋಂಕಲು ಶರೀರಪುಷ್ಟಿಯಾಗಿಅಮೃತಪಾನಮಾಡಿದಂತೆಆಪ್ಯಾಯನವಂ
ಪಡೆದು ಆ ಯೋಗೀಂದ್ರನಾದ ಜೈಗೀಷವ್ಯನು ಅತಿಹರುಷವಂತಾಳಿ ಕಣ್ದೆ
ರದು ನಂದೀಶ್ವರನಂ ನೋಡಲು, ಆ ಮುನಿಗೆ ನಂದೀಶ್ವರನಿಂತೆಂದನು:
ಎಲೈ ಯೋಗೀಶ್ವರನೆ ಏಳು? ಪರಮೇಶ್ವರನು ಕರದುತರಹೇಳಿದನು ಎಂದು
ಆ ಋಷಿಯುಂ ಎತ್ತಿಕೊಂಡು ಪರಮೇಶ್ವರನ ಮುಂದಿರಿಸಿ ನಮಸ್ಕರಿಸಲು,
ಜೈಗೀಷವ್ಯನು ಮುಂದಿರ್ದ ಪರಮೇಶ್ವರನಂ ನೋಡಿ ಕಕ್ಕುನಿಕ್ಕಾಗಿ ಗೌ
ರೀಸಮೇತನಾದ ಶಿವಗೆ ಸಾಷ್ಟಾಂಗನಮಸ್ಕರಿಸಿ, ಪಾದದಮೇಲೆ ಬಿದ್ದು
ಹೊರಳಿ ಎದ್ದುನಿಂತು ಕೈಗಳಮುಗಿದು ಚಂದ್ರಶೇಖರನಾದ ಪರಮೇಶ್ವ
ರನಂ ನೋಡಿ, ಆಗ ಪರಮೇಶ್ವರನಂ ವೇದಮಂತ್ರಗಳಿಂ ಪೊಗಳಿ ಗದ್ಗದ
ಸ್ವರದಿಂ ಸ್ವಾಮಿಯುಂ ಸ್ತೋತ್ರವಂ ಮಾಡತೊಡಗಿದನದೆಂತೆನೆ— ಎಲೈ
ಪಾರ್ವತೀಪ್ರಿಯ, ಶಿವ, ಶಾಂತಸರ್ವಜ್ಞ ಶುಭಾತ್ಮಕ ಅಚಿಂತ್ಯ ಜಗತ್ತಿನ
ಆನಂದಗುಣಶರೀರಪರಮಾನಂದಕ್ಕೆ ಕಾರಣನಾದ ನಿನಗೋಸ್ಕರನಮಸ್ಕಾ
ರನೀನುಅರೂಪನು ರೂಪವಂತನು,ನಾನಾರೂಪನು,ಅಂಧಕಹಾರಿ,ಅಂತ್ಯರ
ಹಿತಭೂಮಿಗೆ ಆಧಾರನು, ಸಮರ್ಥನು, ಬ್ರಹ್ಮವಿಷ್ಣುಇಂದ್ರಾದಿಗಳಕ್ರಿ
ಯಿಂದ ಕೊಂಡಾಡಿಸಿಕೊಳ್ಳತಕ್ಕವನು, ಉಮಾರಮಣನು, ಉಗ್ರನು, ಊ
ರ್ಧ್ವರೇತಸ್ಕನು, ಏಕರೂಪನು, ಅದ್ವಿತೀಯನು, ಮಹದೈಶ್ವರ್ಯರೂಪವಾದ
ನಿನಗೆ ನಮಸ್ಕಾರ. ಪರಮಾತ್ಮಸ್ವರೂಪವಾಗಿ ಸರ್ವಸ್ವರೂಪವಾದ ಈ ಮೂ
ರುಲೋಕವಕಾಮಿಸಲ್ಪಡುವ ಮನ್ಮಥನಂ ಸಂಹಾರಮಾಡಿದ ನಿನಗೆ ನಮ
ಸ್ಕಾರ. ಸಮಸ್ತವಸ್ತುಗಳೊಳಗೂ ವಿಶೇಷವಾದಶೇಷನೇ ಭೂಷಣವಾಗಿ
ಯುಳ್ಳ ಶ್ರೀಕಂಠನೆಂಬ ಪೆಸರುಳ್ಳ ವಿಷಕಂಠನಾದ ವೈಕುಂಠಪತಿಯಿಂ ಪ
ವಂದಿಸಿಕೊಳ್ಳತಕ್ಕ ಪಾದಪದ್ಮಗಳುಳ್ಳ ಅಕುಂಠಿತ ಸಾಮರ್ಥ್ಯವುಳ್ಳಂಥಾ
ನಿನಗೆ ನಮಸ್ಕಾರ. ಶಕ್ತಿರೂಪವಾದ ದೇಹಾರ್ಥವುಳ್ಳ ದೇಹರಹಿತನಾದ ಸು
ದೇಹವುಳ್ಳ ನಿನಗೆ ನಮಸ್ಕಾರ. ಒಂದು ನಮಸ್ಕಾರವಂ ಮಾಡಿದ ಭಕ್ತ

ರಿಗೆ ದೋಷನಿವೃತ್ತಿಯಂ ಮಾಡುವ ನಿನಗೆ ನಮಸ್ಕಾರ. ಕಾಲನಿಗೆ ಕಾಳನಾದ ಕಾಲಸ್ವರೂಪನಾದ ಕಾಳಕೂಟಸಂಹಾರಕನಾದ ಸರ್ಪಯಜ್ಞೋಪವೀತನಾದ ಸರ್ಪಭೂಷಣನಾದ ಸಕಲದುಃಖವಂ ಖಂಡಿಸುವ ಖಡ್ಗವುಳ್ಳ ನಿನಗೆ ನಮಸ್ಕಾರ. ಗಂಡುಗೊಡಲಿಯುಂ ಧರಿಸಿದ ಖಂಡಚಂದ್ರನಂ ಧರಿಸಿದ ಗಾಂಧರ್ವರಿಂ ಗಾನವಮಾಡಿಸಿಕೊಳ್ಳಲ್ಪಡುವ ಧೊರೆತನವುಳ್ಳ ಗಂಗೆಯು ಹೆದ್ದೆರೆ ಎಂಬ ಮಾಲೆಗಳುಳ್ಳ ಗೌರೀಪತಿಯಾದ ಕೈಲಾಸವಾಸಿಯಾದ ಸಂಸಾರ ನಿವಾರಕನಾದ ಚಂದ್ರಮೌಳಿಯಾದ ಸೋಮಸೂರ್ಯಾಗ್ನಿನೇತ್ರನಾದ ದಿಗಂಬರನಾದ ಗಜಚರ್ಮಾಂಬರಧಾರಿಯಾದ ಜಗದೀಶನಾದ ಸ್ತೋತ್ರರೂಪನಾದ ಜನ್ಮಜರೆಗಳಂ ಪರಿಹರಿಸುವ ಜೀವನಸ್ವರೂಪನಾದ ಡಮುರುಗವಂ ಧರಿಸಿದ ಪಿನಾಕವೆಂಬ ಬಿಲ್ಲಂ ಧರಿಸಿದ ತ್ರಿನೇತ್ರನಾದ, ಜಗತ್ತಿಗೆ ಕರ್ತನಾದ, ತ್ರಿಶೂಲಹಸ್ತನಾದ, ಮೂರುಲೋಕಕ್ಕೆ ಒಡೆಯನಾದ, ಮೂರುವೇದಂಗಳಂ ಸ್ತೋತ್ರವ ಮಾಡಿಸಿಕೊಳ್ಳಲ್ಪಟ್ಟಂಥಾ ತ್ರಿವೇದಸ್ವರೂಪನಾದ ಸಂತತೈಶ್ವರ್ಯವುಳ್ಳಂಥಾ ಸತ್ಯಸಂತುಷ್ಟನಾದ ಭಕ್ತರಿಗೆ ಸಂತೋಷವನೀವ ಲೋಕರಕ್ಷಣ ಕ್ಷಣಕ್ಕೆ ದೀಕ್ಷಿತನಾದ ದೇವದೇವನಾದ ಅಶೇಷಪಾಪಸಂಹಾರಕನಾದ ದೂರದೃಷ್ಟಿಯುಳ್ಳ ನಿನಗೆ ನಮಸ್ಕಾರ, ದೂರಸ್ಥನಾದ ದುರ್ಲಭನಾದ ದೋಷಂಗಳಂ ನಿರ್ಮೂಲಮಾಡುವ ಗಂಗೆಯಂ ಶಿರದಲ್ಲಿ ಧರಿಸಿದ ಉನ್ಮತ್ತವೃಷಭದ ಪ್ರೀತಿಯುಳ್ಳವನಾದ ಲೋಕರಕ್ಷಣೆಗೆ ದೀಕ್ಷಿತನಾದ ಧರ್ಮಸ್ವರೂಪನಾದ ನೀಲಕಂಠನಾದ ಕಪ್ಪುಗೊರಳುಳ್ಳ ಕೆಂಚುಕೂದಲುಳ್ಳ ಸ್ಮರಿಸಿದವರಿಗೆ ತ್ರಿಲೋಕಾಧಿಪತ್ಯವಂ ಕೊಡುವ ಪ್ರಮಥನಾಥನಾದ ಪಿನಾಕಹಸ್ತನಾದ ಬ್ರಹ್ಮಾದಿಪಶುಗಳ ಸಂಸಾರಪಾಶವಂ ಪರಿಹರಿಪ ಪಶುಪತಿಯಾದ ನಿನ್ನ ನಾಮೋಚ್ಚಾರಣೆಯಿಂ ಮಹಾಪಾತಕಂಗಳ ಪರಿಹರಿಪುವನಾದ ಪರಕ್ಕೆ ಪರನಾದ ಹೆಚ್ಚುಕುಂದುಗಳಾದ ನಾನಾವಸ್ತುಗಳಲ್ಲಿಯೂ ಸರ್ವೋತ್ಕೃಷ್ಟನಾದ ಅಪಾರಚರಿತ್ರೆಯುಳ್ಳ ವಿವಿಧಕಥೆಗಳುಳ್ಳ ಪ್ರಿಯವುಳ್ಳವನಾದ ವೃಷಭವಾಹನನಾದ ವಾಮಭಾಗದಲ್ಲಿ ಶಕ್ತಿಯಂ ಧರಿಸಿದ ಪಾಪಭಂಜಕನಾದ ಭಯಂಕರನಾದ ಭಯಹರನಾದ ಸಕಲಲೋಕಂಗಳ ಉತ್ಪತ್ತಿಸ್ಥಾನನಾದ ಸ್ಥಿತಿಕರ್ತನಾದ ಸಂಹಾರಕನಾ

ಶೋಕನಾದ ಭೂತನಾಥನಾದ ನಿನಗೆ ನಮಸ್ಕಾರ, ಸಕಲ ದೇವತೆಗಳಲ್ಲಿ
ಯೂ ಮಹಾದೇವನೆನಿಸಿದ ಮಹೇಶ್ವರನಾದ ಸಕಲ ತೇಜಸ್ಸುಗಳಲ್ಲಿಯೂ
ತೇಜಸ್ಸುಳ್ಳವನಾದ, ಪಾರ್ವತೀರಮಣನಾದ, ಮೃತ್ಯುಂಜಯನಾದ, ಯ
ಜ್ಞಭೋಕ್ತೃವಾದ, ಯಜ್ಞರಾಜಂಗೆ ಪ್ರಿಯನಾದ, ಯಜ್ಞಂಗಳಂ
ಮಾಡುವ ಸ್ವಭಾವವುಳ್ಳ ಯಜ್ಞಸ್ವರೂಪನಾದ, ಯಜ್ಞಫಲದಾಯಕ
ನಾದ, ಮಹಾರುದ್ರನಾದ, ರುದ್ರನಿಗೆ ನಾಥನಾದ, ನಾನಾರುದ್ರಸ್ವರೂಪ
ನಾದ, ಶಾಶ್ವತನಾದ, ಶ್ಮಶಾನವಾಸಿಯಾದ, ಶಿವಾರಮಣನಾದ, ಸರ್ವಸಂಹಾ
ರಕನಾದ, ಸರ್ವಜ್ಞನಾದ, ಸಕಲವಂ ಪರಿಹರಿಸುವನಾದ, ಸಕಲಕ್ಷಮಾ
ರೂಪನಾದ, ಜೀವಸ್ವರೂಪನಾದ, ಕ್ಷಮೆಗೆ ಆಸ್ಪದವಾದ, ಕ್ಷಮಾಸ್ವರೂಪ
ನಾದ, ಕ್ಷಿತಿಧರನಾದ, ಗೋಕ್ಷೀರದಂತೆ ಶುಭ್ರವುಳ್ಳ ನಿನಗೆ ನಮಸ್ಕಾರ.
ದೃಶ್ಯಾದೃಶ್ಯವಾದ ಸಕಲವಸ್ತುವೆಲ್ಲವೂ ನೀನೆ, ತಾನು ನಿನ್ನ ಸ್ತೋತ್ರವ
ಮಾಡಲರಿಯೆನು, ಸ್ತೋತ್ರವಮಾಡುವವನು ನೀನೆ, ಮಾಡಿಸಿಕೊಂಬವ
ನೂ ನೀನೆ, ಸ್ತುತಿಯೂ ನೀನೆ, ಸ್ತುತಿ ಮಾಡಿಸಿಕೊಂಬವನೂ ನೀನೆ,
ಸಕಲ ಶಬ್ದಗಳೂ ನೀನೆ, ಸಕಲ ಶಬ್ದಗಳ ಮಾಡಿಸುವನೂ ನೀನೆ. ಅಂಥಾ
ನಿನಗೆ ನಮಸ್ಕಾರವಂ ಮಾಡುತ್ತಿದ್ದೇನೆ, ನೀನು ಹೊರತಾಗಿ ಮತ್ತೊ
ಬ್ಬರ ಸ್ತುತಿಮಾಡೆನು, ಅನ್ಯರ್ಗೆ ನಮಸ್ಕರಿಸುವನಲ್ಲ, ನಿಮ್ಮ ನಾಮಾ
ಮೃತ ಪಾನವಲ್ಲದೆ ಮತ್ತೊಬ್ಬರ ನಾಮಂಗಳ ನೆನೆಯೆನು, ಮತ್ತೊ
ಬ್ಬರ ಹೆಸರುಗೊಂಬಲ್ಲಿ ತಾನು ಮೂಗನು, ಅನ್ಯಕಥಾಶ್ರವಣದಲ್ಲಿ ಕಿವ
ಡನು, ಅನ್ಯಕ್ಷೇತ್ರಗಮನದಲ್ಲಿ ಕುಂಟನು, ಅನ್ಯರ ನೋಡುವಲ್ಲಿ ಅಂಧ
ಕನು. ಎಲೈ ಭವಾನೀರಮಣನಾದ ಪರಮೇಶ್ವರನೆ; ಸಕಲಕರ್ತನೂ,
ಸಕಲ ರಕ್ಷಕನೂ, ಸಕಲ ಸಂಹಾರಕನೂ ನೀನೊಬ್ಬನಲ್ಲದೆ ಅನ್ಯರಿಲ್ಲ.
ಈ ತೋರ್ಪ ಸಕಲರೂಪವೂ ನೀನು ಅಲ್ಲವೆಂಬುದು ಮೂರ್ಖತ್ವ. ಅದು
ಕಾರಣ ಮತ್ತೆ ಮತ್ತೂ ನೀನೇಗತಿ. ಸಂಸಾರ ಸಾಗರದಲ್ಲಿ ಮುಳುಗಿ
ತೇಲುತ್ತ ಇಹ ಎನ್ನನ್ನು ಉದ್ಧರಿಸು. ಮಹಾದೇವಯೆಂಬ ಜೈಗೀಷ
ವ್ಯನ ಸ್ತುತಿಯಂ ಕೇಳಿ, ಚಂದ್ರಶೇಖರನಾದ ಈಶ್ವರನು, ಎಲೈ ಮುನೀ
ಶ್ವರ! ನಿನಗೆ ಬೇಕಾದವರವ ಬೇಡಿಕೋ ಎನಲು, ಜೈಗೀಷವ್ಯಮುನಿ

ಇಂತೆಂದನು ಎಲೈ ಭವಾನೀರಮಣ! ಎನಗೆ ಪ್ರಸನ್ನನಾಗಿ ವರವಕೊಡುವದುಂಟಾದರೆ ತನಗೆ ಎರಡು ವರವ ಕೃಪೆ ಮಾಡಬೇಕು, ಅದಾವದೆನೆ ತಾನು ನಿಮ್ಮ ಪಾದಾರವಿಂದಗಳಲ್ಲಿ ಎಡೆಬಿಡದೆ ಇಹದೊಂದು, ಇಲ್ಲಿ ನಾನು ಪ್ರತಿಷ್ಠೆಯಮಾಡಿದ ಲಿಂಗದಲ್ಲಿ ಸಾನ್ನಿಧ್ಯವಾಗಿಹದೊಂದು, ಈ ಎರಡು ವರವಕೊಡಬೇಕೆನಲು, ಪರಮೇಶ್ವರನಿಂತೆಂದನು. ಎಲೈ ಜೈಗೀಷವ್ಯನೆ! ನೀನು ಕೇಳಿಕೊಂಡ ವರಗಳನಿತ್ತೆನು, ಮತ್ತೊ ನಿನಗೆ ಮುಕ್ತಿಸಾಧನವಾದ ಯೋಗಶಾಸ್ತ್ರವಂ ಕೊಡುತ್ತಾಯಿದ್ದೇನೆ. ಸಕಲವಾದ ಯೋಗೀಶ್ವರರಿಗೂ ನೀನು ಆಚಾರ್ಯನಾಗು, ಯೋಗರಹಸ್ಯವಂ ಚೆನ್ನಾಗಿ ತಿಳಿ. ನಂದಿ, ಭೃಂಗಿ, ಸೋಮನಂದಿ, ನೈಗಮನು. ಮೊದಲಾದವರಿಗಿಂತಲೂ ನೀನು ಎನಗೆ ಪ್ರಿಯಭಕ್ತನಾಗು. ವ್ರತ, ದಾನ, ತಪಸ್ಸು, ಮೊದಲಾದ ಶ್ರೇಯಸ್ಸುಗಳಿಗೆ ಸಾಧನಂಗಳಾದ ಧರ್ಮಂಗಳುಂಟಾದರೂ ನೀನು ಎನ್ನಂ ನೋಡಿದಲ್ಲದೆ ಪತ್ರಪುಷ್ಪ, ಫಲೋದಕವತೆಕೊಳ್ಳಲೊಲ್ಲೆನೆಂದು ವ್ರತವಮಾಡಿಕೊಂಡು ಇದ್ದೆಯಲ್ಲಾ ಅದು ಮಹಾದುಸ್ತರವಾದ ನಿಯಮ, ಆವನಾನೊಬ್ಬನು ತನ್ನ ಇಷ್ಟದೇವತೆಯ ಪೂಜಿಸದೆ ಆ ದೇವರಿಗೆ ಸಮರ್ಪಿಸಿದ ನೈವೇದ್ಯ, ಪತ್ರ, ಪುಷ್ಪ, ಫಲೋದಕವಾದರೂ ತೆಕ್ಕೊಂಬನೋ, ಅವನು ಶುಕ್ಲವಭಕ್ಷಿಸಿದವನಹನು,ಎಪ್ಪತ್ತೊಂದುಜನ್ಮ ಮೂಢನಾಗಿ ಪುಟ್ಟುವನು, ಈ ನಿರಾಹಾರವ್ರತಕ್ಕೆ ಮಿಕ್ಕಾದ ನಿಯಮಂಗಳು ಹದಿನಾರರಲ್ಲಿ ಒಂದು ಭಾಗಕ್ಕೆ ಸರಿಬಾರದು, ನೀನು ಎನ್ನಸಮೀಪದಲ್ಲಿಯೇ ಇರು, ಮೋಕ್ಷವಹುದು ಸಂದೇಹಬೇಡ. ಈ ನಿನ್ನಿಂದ ಪ್ರತಿಷ್ಠಿತವಾದ ಲಿಂಗವನ್ನು ಮೂರುವರುಷ ಭಕ್ತಿಯಿಂಪೂಜಿಸಲು ಯೋಗಸಿದ್ಧಿಯಹುದು. ಈಗ ನೀತಪವಿದ್ದ ಗುಹೆಯಲ್ಲಿ ತಪವಿದ್ದವರು ಶೀಘ್ರದಿಂ ಯೋಗಸಿದ್ಧಿಯಾಗಿ ಮೋಕ್ಷವಪಡೆವರು. ನಿನಗೆ ಮತ್ತೊಂದು ವರವಕೊಡುವೆನು ಅದು ಯಾವುದೆಂದರೆ- ಮಹಾಪಾತಕಂಗಳಂ ಪರಿಹರವಮಾಡಿ ಯೋಗಸಿದ್ಧಿಯನು ಮಹಾಭಕ್ತಿಯ ನೀವ ನೀ ಮಾಡಿದ ಸ್ತೋತ್ರವ ನಿರಂತರ ಜಪಿಸುವರಿಗೆ ಪುನರ್ಜನನವಿಲ್ಲ. ಈ ಸ್ತೋತ್ರವಂ ಭಕ್ತರಲ್ಲದವರಿಗೆ ಹೇಳಲಾಗದು. ಶುಚಿಯಾಗಿ ಈ ಸ್ತೋತ್ರವ ಜಪಿಸುವರಿಗೆ [illegible]

ಧ್ಯವಾವುದೆಂದು ನುಡಿದು ಮತ್ತಿಂತೆಂದನು.—ಧರ್ಮಾರ್ಥಕಾಮಂಗಳಂ ಜಯಿಸಿದವನು ಈ ಲಿಂಗವಂ ಪೂಜಿಸಿ, ಈ ಸ್ತೋತ್ರವಂ ಜಪಿಸಬೇಕು ದೂರದೇಶದಲ್ಲಿರ್ದರೂ ಈ ಜೈಗೀಷವ್ಯಲಿಂಗವಂ ಸ್ಮರಿಸಲೂ, ಈ ಸ್ತೋತ್ರವಂ ಭಕ್ತಿಯಿಂ ಪಠಿಸಲು ಮೋಕ್ಷ ಉಂಟೆಂದು ಈ ರೀತಿಯಲ್ಲಿ ಜೈಗೀಷವ್ಯಮುನಿಗೆ ಪರಮೇಶ್ವರ ವರವನಿತ್ತು ಕಾಶೀಕ್ಷೇತ್ರದಲ್ಲಿದ್ದ ಬ್ರಾಹ್ಮಣರಂ ಕೃಪೆಯಿಂದ ನೋಡಿದನೂ ಎಂದು ಕುಮಾರಸ್ವಾಮಿಯು ಅಗಸ್ತ್ಯಂಗೆ ಹೇಳಿದರ್ಥವನ್ನೇ ವ್ಯಾಸರು ಸೂತರಿಗೆ ನಿರೂಪಿಸಿದರೆಂದು ಸೂತರು ಶೌನಕಾದಿಗಳಿಗೆ ಬುದ್ಧಿಗಲಿಸಿದರೆನ್ನುವಲ್ಲಿಗೆ ಅಧ್ಯಾಯ ೬೩ * *

ಇಂತು ಶ್ರೀಮತ್ಸಮಸ್ತಭೂಮಂಡಲ ಮುಂಡನಾಯಮಾನೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂ ವಿರಚಿಸಿದ ಶ್ರೀಕೃಷ್ಣರಾಜವಾಣೀವಿಲಾಸವೆಂಬ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥವರ್ಣನದಲ್ಲಿ ಪರಮೇಶ್ವರನು ಜೈಗೀಷವ್ಯಮುನಿಗೆ ಪ್ರಸನ್ನನಾಗಿ ವರವನ್ನಿತ್ತನೆಂಬಲ್ಲಿಗೆ ಅಧ್ಯಾಯ ಅರವತ್ತಮೂರಕ್ಕಂ ಮಂಗಳಮಹಾ.

ಅರವತ್ತನಾಲ್ಕನೆ ಅಧ್ಯಾಯದಲ್ಲಿ ಕಾಶೀಕ್ಷೇತ್ರಮಹಿಮೆ

ಶ್ರೀ ಮಹಾಗಣಪತಯೇನಮಃ॥ ॥ ಅನಂತರ ಕುಮಾರಸ್ವಾಮಿಗೆ ಅಗಸ್ತ್ಯನಿಂತೆಂದನು.- ಎಲೈ ಕುಮಾರಸ್ವಾಮಿಯೆ? ಪರಮೇಶ್ವರನು ಕಾಶೀ ವಾಸಿಗಳಾದ ಬ್ರಾಹ್ಮಣರಂ ನೋಡಿದನೆಂದು ಬುದ್ಧಿಗಲಿಸಿದನು. ಆ ಜೈಗೀಷವ್ಯಮುನಿ ಇದ್ದಸ್ಥಳದಲ್ಲಿ ಆವಾವಲಿಂಗಗಳಿದ್ದವು, ಮತ್ತೇನಾಶ್ಚರ್ಯವುಂಟು, ಬ್ರಾಹ್ಮಣರು ಆವತೀರ್ಥಗಳಿಂದ ಬಂದರು. ಇವೆಲ್ಲವಂ ಸವಿಸ್ತಾರವಾಗಿ ಬುದ್ಧಿಗಲಿಸಬೇಕೆಂದು ಬಿನ್ನೈಸಿದ ಅಗಸ್ತ್ಯವಾಕ್ಯವಂ ಕೇಳಿ, ಕುಮಾರಸ್ವಾಮಿ ಇಂತೆಂದನು.- ಕೇಳೈ ಅಗಸ್ತ್ಯನೆ ? ಪರಮೇಶ್ವರನು ಮಂದರಾದ್ರಿಗೆ ಹೋದದ್ದು ಮೊದಲಾಗಿ ಕಾಶೀಯಲ್ಲಿ ವಾಸವಾಗಿದ್ದ ಬ್ರಾಹ್ಮಣರೆಲ್ಲಾ ನಿರಾಲಂಬವಾಗಿ ಪ್ರತಿಗ್ರಹಂಗಳಂ ಬಿಟ್ಟು, ತಮ್ಮ ತಮ್ಮ ದಂಡಕೋಲುಗಳಿಂದ ಭೂಮಿಯಂ ಅಗೆದು ಅಗೆದು ಕಂದಮೂಲಫಲವನ್ನಾಹಾರ ಮಾಡಿಕೊಂಡಿರಲು, ಆ ಅಗೆದಸ್ಥಳದಲ್ಲಿ ದಂಡಘಾತ

ವೆಂಬ ತೀರ್ಥವಾಯಿತು, ಆ ತೀರ್ಥದ ಬಳಸಿನಲ್ಲಿ ಲಿಂಗಗಳ ಪ್ರತಿಷ್ಠೆಯಂ ಮಾಡಿಕೊಂಡು ಪರಮೇಶ್ವರನು ಯಾವಾಗ ಬಂದಾನೊ ಎಂದು ಇದಿರುನೋಡುತ್ತಾ ಈಶ್ವರಾರಾಧನೆಯಂ ಮಾಡಿಕೊಂಡು ಪರಮೇಶ್ವರನ ಪಾದಪದ್ಮಧ್ಯಾನದಲ್ಲಿ ತಾತ್ಪರ್ಯವುಳ್ಳವರಾಗಿ ವಿಭೂತಿ ರುದ್ರಾಕ್ಷಿಗಳಂ ಧರಿಸಿ ನಿತ್ಯವೂ ತ್ರಿಕಾಲದಲ್ಲಿಯೂ ಲಿಂಗಪೂಜೆ, ಶತರುದ್ರೀಯ ಜಪನಿಷ್ಠರಾಗಿ ತಪವಂ ಮಾಡಿಕೊಂಡು ಇದ್ದ ಮಂದರಾದ್ರಿಯಿಂ ಪರಮೇಶ್ವರನು ಬಂದನೆಂಬುದಂ ಕೇಳಿ, ಆಸಂದದಿಂ ಬಹುಕಾಲ ತಪವಮಾಡಿದ ಬಳಲಿಕೆಯಂ ಬಿಟ್ಟು ಪರಮೇಶ್ವರನ ದರ್ಶನತಾತ್ಪರ್ಯದಿಂದ ಸಕಲ ತೀರ್ಥವಾಸಿಗಳು ಬಂದರು. ಅವರಾರೆನೆ- ದಂಡಖಾತತೀರ್ಥದಲ್ಲಿ ಉಗ್ರತಪನಿರ್ದ ಬ್ರಾಹ್ಮಣರುಐದುಸಾವಿರ, ಮಂದಾಕಿನೀತೀರ್ಥದಿಂದ ಈಶ್ವರಾರಾಧನೆಯೇ ಮುಖ್ಯವಾಗಿವುಳ್ಳ ಪಾಶುಪತವ್ರತಿಗಳು ಹತ್ತುಸಾವಿರ, ಸಕಲ ತೀರ್ಥದಿಂದ ಹತ್ತುಸಾವಿರದ ಐನೂರು, ದೂರ್ವಾಸತೀರ್ಥವಾಸಿಗಳು ಸಾವಿರದ ನೂರು, ಘುತ್ತೋದ್ಭೇದಕದಿಂದ ಆರುಸಾವಿರ, ಕಪಿಲಾವಿಮೋಚನ ತೀರ್ಥದಿಂದ ಏಳ್ನೂರು, ಋಣವಿಮೋಚನತೀರ್ಥದಿಂ ಸಾವಿರದ ಇನ್ನೂರು, ವೈತರಣೀ ಪಾಪಹರತೀರ್ಥದಿಂದ ಐದುಸಾವಿರ, ಪಿತೃತೀರ್ಥದಿಂ ಸಾವಿರದ ಇನ್ನೂರು, ಮೋಚಕಾತೀರ್ಥದಿಂದ ಇನ್ನೂರು, ಊರ್ವಶೀತೀರ್ಥದಿಂ ಸಾವಿರದ ಮುನ್ನೂರು, ಐರಾವತತೀರ್ಥದಿಂದ ಮುನ್ನೂರು, ಗಂಧರ್ವತೀರ್ಥದಿಂ ಏಳನೂರು, ವಿಶೇಷತೀರ್ಥದಿಂದ ಮುನ್ನೂರತೊಂಭತ್ತು, ಯಕ್ಷಿಣೀತೀರ್ಥದಿಂದ ಸಾವಿರದ ಮುನ್ನೂರು, ಲಕ್ಷ್ಮೀತೀರ್ಥದಿಂದ ಸಾವಿರದ ಆರುನೂರು, ಪಿಶಾಚ ವಿಮೋಚನತೀರ್ಥದಿಂದ ಏಳುಸಾವಿರ, ಧ್ರುವತೀರ್ಥದಿಂದ ಐನೂರು, ಮಾನಸತೀರ್ಥದಿಂ ಸಾವಿರದ ಮುನ್ನೂರು, ವಾಸುಕೀತೀರ್ಥದಿಂ ಹತ್ತುಸಾವಿರ, ಜಾನಕೀತೀರ್ಥದಿಂ ಏಳನೂರು, ಗೌತಮೀತೀರ್ಥದಿಂ ಒಂಭೈನೂರು, ದುರ್ಗತಿ ಸಂಹಾರತೀರ್ಥದಿಂ ಸಾವಿರದ ಐನೂರು, ಅಸಿಗಂಗಾಸಂಗಮ ಆರಭ್ಯವಾಗಿ ಸಂಗಮೇಶ್ವರರ ಬಳಿಗಾಗಿ ಇದ್ದ ಗಂಗಾತೀರನಿವಾಸಿಗಳಾದ, ಜಟಾಧಾರಿಗಳಾದ, ಮುನಿಗಳು ಹದಿನಾರು ಸಾವಿರದ ಐನೂರ ನಿವತ್ತೈದು. ಅಂತು ಎಂಭತ್ತೈದುಸಾವಿರದ ಒಂಭೈನೂರರ ಸ

ಉಪಸ್ತ್ರೀಯರು ಮುಂತಿ ಬ್ರಾಹ್ಮಣರು, ನೆನೆದ ಅಕ್ಷತೆ, ದೂರ್ವೆ, ಸುಗಂಧ ಪುಷ್ಪಮಾಲಿಗಳಂ ಕೊಂಡು ಮಾಂಗಲ್ಯಸೂಕ್ತಗಳಿಂ ಪುರುಷಸೂಕ್ತ ಜಯ ಜಯ ಶಬ್ದಂಗಳಂ ನುಡಿಯುತ್ತಾ ಬಂದು ಕಾಣಿಕೆಗಳನಿತ್ತು ಸಾಷ್ಟಾಂಗ ದಂಡಪ್ರಣಾಮವಂ ಮಾಡಿ, ಎರಡು ಕೈಗಳಂ ಮುಗಿದುಕೊಂಡು ಸ್ತುತಿ ಮಾಡುತ್ತಿರಲು, ಕರುಣಾಳುವಾದ ಪರಮೇಶ್ವರನು ಆ ಬ್ರಾಹ್ಮಣರಿಗೆ ಅಭಯವಂ ಕೊಟ್ಟು ಸಂತೋಷದಿಂ ಕುಶಲಂಗಳಂ ಕೇಳಲು, ಆ ಬ್ರಾಹ್ಮಣರಿಂತೆಂದು ಬಿನ್ನೈಸಿದರು. ಎಲೈ ಸ್ವಾಮಿಯೆ? ನಿಮ್ಮ ಕ್ಷೇತ್ರದಲ್ಲಿ ಇದ್ದ ನಮಗೆ ನಿತ್ಯವೂ ಕುಶಲವೇ ಸರಿ, ವೇದವು ಮೊದಲಾಗಿ ಕಾಣದಂಥಾ ನಿಮ್ಮನ್ನು ಪ್ರತ್ಯಕ್ಷವಾಗಿ ಕಂಡೆವಾದಕಾರಣ ನಮಗೆ ಮತ್ತೂ ಕುಶಲವಾಯಿತು ಮತ್ತೂ ಕಾಶೀಕ್ಷೇತ್ರಕ್ಕೆ ಪರಾಙ್ಮುಖರಾದರೂ ಅವರಿಗೆ ಮೂರುಲೋಕವೂ ಪರಾಙ್ಮುಖವಹುದು, ಆವನಾನೊಬ್ಬನ ಹೃದಯದಲ್ಲಿ ಕಾಶೀಪಟ್ಟಣದ ಸ್ಮರಣೆಯುಹುದೋ; ಅವರ್ಗೆ ಸಂಸಾರವೆಂಬ ಸರ್ಪಭಯವಿಲ್ಲ, ಗರ್ಭವಾಸ ಬಾಧೆಯಿಲ್ಲದೆ ರಕ್ಷಿಸುವದು, ಎರಡಕ್ಷರವುಳ್ಳ «ಕಾಶೀ" ಎಂಬ ಮಂತ್ರವು ಆರ ಕಂಠದಲ್ಲಿ ಇಹುದೋ ಅವರ್ಗೆ ಅಕುಶಲವಿಲ್ಲದುದು, ಅವರು ಅಮೃತಪಾನವಂ ಮಾಡಿದವರು, ದೇವತ್ವವನೈದುವರು, ಕಾಶೀಯೆಂಬ ಎರಡಕ್ಷರವ ಕೇಳಿದವರು ಮಗುಳೆ ಗರ್ಭವಾಸವಂ ಪೊಗರು. ಕಾಶಿ ಕ್ಷೇತ್ರದಲ್ಲಿ ಇಪ್ಪ ಧೂಳು ವಾಯುವಶದಿಂ ಬಂದು ಶಿರಸ್ಸಿನಮೇಲೆ ಬೀಳಲು ಅವರು ಅಂತ್ಯದಲ್ಲಿ ಚಂದ್ರಕಳೆಯಂ ಧರಿಸುವರು. ಪ್ರಸಂಗದಿಂದ ಬಂದವರೂ ಆನಂದಕಾನನಕ್ಕೆ ಅಭಿಮುಖವಾಗಿ ನಡೆಯಲು ಪಿತೃಪತಿಯನಗರವಂ ನೋಡರು. ನಡೆವಾಗ, ನಿಂತಾಗ, ಎಚ್ಚತ್ತಾಗ, ನಿದ್ರೈವಾಗ, ಇದು ಮೊದಲಾದ ಯಾವಾಗಲೂ ಕಾಶೀ ಎಂಬ ಅಕ್ಷರದ್ವಯವಂ ಜಪಿಸಲು ಪುನರ್ಜನ್ಮವಿಲ್ಲ. ಕಾಶೀ ಎಂಬ ಬೀಜಾಕ್ಷರ ದ್ವಯವಂ ಹೃದಯದಲ್ಲಿ ಧರಿಸಿ ಜಪಿಸಲು, ಕರ್ಮಬೀಜಂಗಳು ಮೊಳೆದೋರವು, ಕಾಶಿ ಕಾಶಿ ಕಾಶೀ ಎಂದು ನಿರಂತರವೂ ಜಪಿಸುವರ್ಗೆ ಎಲ್ಲಿರ್ದರೂ ಮುಕ್ತಿ ಕೈವಶವಾಗುವದು, ನಿಂಪ್ರು ಕಾಶೀಯೆಂಬ ಮಂತ್ರವೂ, ಈ ಕ್ಷೇತ್ರವೂ, ಈ ಗಂಗೆಯೂ ನಾಲ್ಕು ಮುಕ್ತಿಸಾಧನವಾದವಸ್ತುವೂ, ಈ ನಾಲ್ಕುವಸ್ತುವೂ ಪೊಂದತಾ

ಗಿ ಕ್ಷೇಮಂಕರವಸ್ತು ಈ ಮೂರುಲೋಕದಲ್ಲಿಯೂ ಇಲ್ಲವೆಂದು ಈ ರೀತಿಯಲ್ಲಿ ಕಾಶೀಕ್ಷೇತ್ರದ ಮಹಿಮೆಯಂ ಕೊಂಡಾಡುವ ಬ್ರಾಹ್ಮಣರ ವಚನವಂ ಕೇಳಿ, ಪರಮೇಶ್ವರನು ಸಂತೋಷದಿಂ ಇಂತೆಂದನು - ಕೇಳಿರೈ, ಬ್ರಾಹ್ಮಣರಾ! ಈ ಪವಿತ್ರವಾದ ಕಾಶೀಕ್ಷೇತ್ರದಲ್ಲಿ ನಿಮಗೆ ಭಕ್ತಿ ಸಿದ್ಧಿಸಿತಾಗಿ ನೀವು ಧನ್ಯರು, ಈ ಕ್ಷೇತ್ರನಿವಾಸಫಲದಿಂದ ರಜೋಗುಣ ತಮೋಗುಣವಂ ಪರಿಹರಿಸಿಬಿಟ್ಟು ಸತ್ವಗುಣಪ್ರಧಾನರಾಗಿ ಸಂಸಾರಸಾಗರವಂ ದಾಟೀರಿ, ಈ ಕಾಶಿಯಲ್ಲಿ ಉಳ್ಳವರೇ ಎನ್ನ ನಿಜಭಕ್ತರು, ಅವರು ಜೀವನ್ಮುಕ್ತರು, ಮೋಕ್ಷಲಕ್ಷ್ಮೀಕಟಾಕ್ಷವುಳ್ಳವರು, ಈ ಕಾಶಿಯಲ್ಲಿರ್ದ ಅಲ್ಪನೊಡನೆ ವಿರೋಧವಂಮಾಡಿದವನು ತಾಸಹಿತ ಈ ಮೂರುಲೋಕದೊಡನೆ ಮತ್ಸರಿಸಿದವನಹನು, ಈ ಕಾಶಿಯಲ್ಲಿದ್ದ ಒಬ್ಬನ ಸಂತೋಷಪಡಿಸಿದವನು ತಾಸಹಿತ ಈ ಬ್ರಹ್ಮಾಂಡವೆಲ್ಲವನ್ನೂ ಸಂತೋಷಪಡಿಸಿದವನಹನು, ಕಾಶೀಕ್ಷೇತ್ರದಲ್ಲಿ ವಾಸವಾಗಿದ್ದವರು ಎನ್ನ ಅಂತಃಕರಣದಲ್ಲಿಹರು, ಆರ ಮನಸ್ಸಿನಲ್ಲಿ ಕಾಶೀಪ್ರವೇಶವಾಗಿಹುದೋ ಅವರೂ ಮೋಕ್ಷಕ್ಕೋಸ್ಕರ ಎನ್ನ ಮುಂದೆ ಪ್ರಕಾಶಿಸುವರು, ಆರಿಗೆ ಈ ಕಾಶೀಸೊಗಸದೊ ಅವರು ಮೋಕ್ಷವನೊಲ್ಲದ ಪತಿತರು, ಈ ಕಾಶೀಪತಿಯಾದ ತನ್ನಂ ಬಯಸುವರಿಗೆ ಚತುರ್ವಿಧಪುರುಷಾರ್ಥಂಗಳು ಎನ್ನ ಆಜ್ಞೆಯಿಂ ಸೇವಕರಂತೆ ಅವರು ಪೇಳದಂತೆ ಮಾಡುವವು, ಈ ಕಾಶೀಕ್ಷೇತ್ರದಲ್ಲಿರ್ದ ಪ್ರಾಣಿಗಳ ಕರ್ಮಬೀಜವ ತನ್ನ ಕೃಪೆಯೆಂಬ ಕಾಡ್ಗಿಚ್ಚು ಪ್ರಜ್ವಲವಾಗಿ ದಹಿಸಿ ಮಗುಳೆ ಪುಟ್ಟಲೀಸದು, ಅದುಕಾರಣ ಈ ಕಾಶಿಯಲ್ಲಿಯೇ ಇರಬೇಕು, ಎನ್ನನ್ನೆ ಪೂಜಿಸಬೇಕು, ಈ ಗಂಗೆಯಲ್ಲಿಯೇ ಸ್ನಾನವಂಮಾಡಬೇಕು, ಅದರಿಂದ ಕಲಿಕಾಲವಂಗೆದ್ದು ಮುಕ್ತರಹರು. ಈ ಕಾಶೀಗೆ ಬಂದು ಈ ಗಂಗೆಯಲ್ಲಿ ಮಿಂದು ಎನ್ನಂ ಪೂಜಿಸಿದವರ್ಗೆ ಹಸ್ತಗತವಾದ ಮೋಕ್ಷ, ಎನ್ನ ಭಕ್ತರಾಗಿ ಈ ಕಾಶಿಯಲ್ಲಿ ವಾಸಮಾಡಿದವರು ಧನ್ಯರು. ಕೇಳಿರೈ, ಬ್ರಾಹ್ಮಣರಿರಾ! ನಿಮಗಾನುದೂರವಲ್ಲ, ಈ ಕಾಶಿಯೂ ದೂರವಲ್ಲ, ಅದುಕಾರಣ ನಿಮಗೇನು ವರವುಬೇಕೋ ಆ ವರವಬೇಡಿಕೊಳ್ಳಿ, ನೀವು ಕ್ಷೇತ್ರಸನ್ಯಾಸವಮಾಡಿದಿರಾದಕಾರಣ ನೀವು ನಿಜಭಕ್ತರೂ ಎಂದು ಹೀ

ಗೆ ನಿರೂಪಿಸಿದ ಪರಮೇಶ್ವರನ ಮುಖವೆಂಬ ಕ್ಷೀರಸಮುದ್ರದಿಂಪುಟ್ಟಿದ ಅಮೃತೋಪಮವಾದ ವಾಕ್ಯವಂ ಕೇಳಿ, ಬ್ರಾಹ್ಮಣರು ಇಂತೆಂದು ಬಿನ್ನೈಸಿದರು. ಎಲೈ ಉಮಾಪತಿಯೆ ? ಮಹೇಶ್ವರ! ಸರ್ಪಭೂಷಣ! ಸರ್ವಜ್ಞ! ಸಚ್ಚಿದಾನಂದಮೂರ್ತಿಯೆ! ಭವತಾಪವಂ ಪರಿಹರಿಪ ಈ ಕಾಶೀಕ್ಷೇತ್ರವಂ ಎಂದಿಗೂ ಬಿಡದೆ ವಾಸವಾಗಿರಿ ಎಂದು ವರವನೀವುದು ನಮಗೆ ದಿವ್ಯವರವು. ಆವನಾನೊಬ್ಬನು ನಮಗೆ ಅಕೃತ್ಯವಮಾಡಿದರೂ ಅವರಿಗೆ ಶಾಪವನೀಯುವ ಮನವಕೊಡು, ದೇವರ ಶಾಪವನಿತ್ತರ್ವರ್ಗೆ ಅವರಪುಣ್ಯಕ್ಷಯವಾಗಿ ಪೋಪುದಾಗಿ, ಇಲ್ಲಿ ವಾಸವಾಗಿರುವ ಬ್ರಾಹ್ಮಣರಿಗೆ ಶಾಪವನೀವ ಸಾಮರ್ಥ್ಯವಿಲ್ಲದೆ ಪೋಗಲಿ. ನಿರಂತರವೂ ನಿಮ್ಮಪಾದಪದ್ಮಂಗಳಲ್ಲಿ ಎಡೆಬಿಡದೆ ಭಕ್ತಿಯುಂಟಾಗಲಿ, ಈ ಶರೀರ ಪತನಪರಿಯಂತವೂ ನಮಗೆ ಕಾಶಿಯಲ್ಲಿವಾಸವಾಗಲಿ, ಇವಲ್ಲದೆ ಮಿಕ್ಕಾದವರಗಳಿಂದ ನಮಗೇನೂಪ್ರಯೋಜನವಾರ್ಥೀತು, ಆದರೆ ಇನ್ನೊಂದುವರವ ಬೇಡುತ್ತಾಯಿರ್ಧೇನೆ, ಅದಾವುದೆನೆ,- ಈ ಸ್ಥಳದಲ್ಲಿ ನಿಮ್ಮ ಪ್ರತಿರೂಪವಾಗಿ ನಾವು ಒಂದೊಂದುಲಿಂಗಗಳ ಪ್ರತಿಷ್ಠೆ ಮಾಡಿದೆವಾಗಿ ಆ ಲಿಂಗಗಳಲ್ಲಿ ನೀವು ನಿತ್ಯವೂ ಸನ್ನಿಹಿತರಾಗಿರಬೇಕೆಂದು ಹೀಗೆ ಬಿನ್ನಹವಂ ಮಾಡಿದ ಬ್ರಾಹ್ಮಣರ ಬಿನ್ನಹವಕೇಳಿ, ಹಾಗಾಗಲಿ ಎಂದು ಅವರು ಬೇಡಿದ ವರಗಳನಿತ್ತು ನಿಮಗೆ ಶುದ್ಧವಾದ ಜ್ಞಾನವಾಗಲಿ ಎಂದು ಪರಮೇಶ್ವರನಿಂತೆಂದನು. ಕೇಳಿರೈ ಬ್ರಾಹ್ಮಣರಿರಾ? ಭೂಮಿಯಲ್ಲಿಮುಕ್ತಿಯನಪೇಕ್ಷಿಸುವರು ಗಂಗಾಸ್ನಾನ, ವಿಶ್ವಪತಿಯಾದ ತನ್ನಪೂಜೆ, ಇಂದ್ರಿಯನಿಗ್ರಹ, ದಾನ, ದಯ, ದಾಕ್ಷಿಣ್ಯ, ಪರೋಪಕಾರಂಗಳಿರಬೇಕು. ಪೆಗವಟ್ಟು ಮಾತನಾಡಲಾಗದು, ಸ್ಥಳಾಂತರದಲ್ಲಿ ಮಾಡಿದ ಪಾಪವು ಈ ಕಾಶಿಯಲ್ಲಿ ಪರಿಹರ. ಈ ಕಾಶಿಯಲ್ಲಿ ಮಾಡಿದ ಪಾಪ ಅಂತರ್ಗೃಹಯಾತ್ರೆಯಲ್ಲಿ ಪರಿಹರ. ಅಂತರ್ಗೃಹದಲ್ಲಿ ಮಾಡಿ, ಸ್ಥಳಾಂತರಕ್ಕೆ ಪೋಗಲು ಕೋಟಿ ಬ್ರಹ್ಮಕಲ್ಪಪರಿಯಂತವೂ ಆ ಪಾಪವನನುಭವಿಸಬೇಕು, ಹೋಗದೆ ಕಾಶೀಸ್ಥಳದಲ್ಲಿ ಇರಲು ರುದ್ರಪಿಶಾಚರಾಗಿ ಮೂವತ್ತುಸಾವಿರ ವರುಷವಿದ್ದು ಆ ಮೇಲೆ ಈಶ್ವರಾನುಗ್ರಹದಿಂ ಜ್ಞಾನವಪಡದು ಅದರಿಂದ ಮುಕ್ತರಹರು. ಕೇಳಿರೈ ಬ್ರಾಹ್ಮಣರಿರಾ?

ಈಕ್ಷೇತ್ರದಲ್ಲಿ ಪಾಪವಮಾಡಿದವರ ಮರಣದಕಾಲಕ್ಕೆ ಅವರಂ ಪಂಚಕ್ರೋಶದ ಹೊರಕ್ಕೆ ಪೊರಡಿಸುವೆನು, ಆ ಪಂಚಕ್ರೋಶದ ಹೊರಗೆ ದೇಹತ್ಯಾಗವಮಾಡಿದವರ ಗತಿ ಏನೆಂದರೆ— ಆ ಕ್ಷೇತ್ರದ ಹೊರವಳಯದಲ್ಲಿ ಯಮನೆಂಬ ಗಣಂಗಳಿಹರು, ಆ ಗಣಂಗಳು ಈ ಪಾಪಿಗಳಂ ಮೂಸೆಗಳಲ್ಲಿರಿಸಿ ಕಾಸುವರು. ವರ್ಷಾಕಾಲದಲ್ಲಿ, ಜಲದಲ್ಲಿ ಪೋಗಿ ಶಿತಿ ಗುಹೆಗಳಿಂದಲೂ ಪಳ್ಳ ಹಾವುಗಳಿಂದಲು ಕಚ್ಚಿಸಿ ತೆಗದು ಹೊರಗೆ ಸೊಳ್ಳೆಗಳಿಂದ ಕಚ್ಚಿಸಿ ಬಿಡದೆ ಬಾಧೆಪಡಿಸುವರು, ಆಮೇಲೆ ಒಂದು ಮರ್ಗದಲ್ಲಿ ಹಾಕಿ ಅನ್ನವಸ್ತ್ರಗಳಂ ಕೊಡದೆ ಕೊಲ್ಲುವರು, ಬೇಸಿಗೆಯಲ್ಲಿ ಜಲತೃಣ ವೃಕ್ಷವಿಲ್ಲದ ಕಡೆಯಲ್ಲಿ ಸೂರ್ಯನ ಪ್ರಚಂಡ ಕಿರಣಗಳಿಂದಲೂ ಒಣಗಿಸುವರು, ಹೀಗೆ ಅನೇಕಕಾಲ ಬಾಧೆಪಡಿಸಿ,ಆಮೇಲೆ ಕಾಲಭೈರವನ ವಶಕ್ಕೆ ಒಪ್ಪಿಸಲು, ಆ ಭೈರವನು ಅವರನ್ನು ಅನ್ನ ಉದಕ ವಸ್ತ್ರಹೀನರಂಮಾಡಿ, ಹೊಟ್ಟೆ ಬೆನ್ನುಚರ್ಮವಂ ಹತ್ತುವಂತೆ ಮಾಡಿ, ರುದ್ರಪಿಶಾಚರೊಳಗೆ ಕೂಡಿಸಲು, ಅವರು ಹಸಿವು ಬಾಯಾರಿಕೆಗಳಿಂನೊಂದು, ವಸ್ತ್ರಹೀನರಾಗಿ ಸತ್ತಂತೆ ಮೃತದೇಹಿಗಳಾಗಿ ಪಿಶಾಚಗಳೊಳಗೆ ಬಹುಕಾಲತಿರುಗಿಸಿ ಆಮೇಲೆ ರಕ್ತಮಾಂಸ ಉಳ್ಳವರಂಮಾಡಿ ಅವರಕೊರಳಿಗೆ ಹಗ್ಗಗಳುಹಾಕಿ, ಶೂಲಸ್ತಂಭದಸುತ್ತ ವಳಯದಲ್ಲಿ ಕಟ್ಟಿ ಬಾಧಿಸುವನು. ಹೀಗೆ ದಿವ್ಯ ಮೂವತ್ತು ವರುಷ ಬಾಧಿಸಿದಬಳಿಕ ಮತ್ತೆ ತನ್ನ ಅನುಗ್ರಹದಿಂದ ದೇಹಗಳನೆತ್ತಿ ಈ ಕಾಶೀ ವಾಸವಾಗಿ ಮುಕ್ತರಹರು. ಅದುಕಾರಣ ಮನೋವಾಕ್ಕಾಯ ಕರ್ಮಗಳಲ್ಲಿಯೂ, ಪಾಪಮಾಡಲಾಗದು, ಶುಚಿಯಾಗಿರಬೇಕು. ಈ ಕ್ಷೇತ್ರದಲ್ಲಿ ಅನಶನವ್ರತದಲ್ಲಿ ಇದ್ದವರಿಗೆ ಪುನರಾವೃತ್ತಿ ಇಲ್ಲದೆ ಹಧನಧಾನ್ಯ ಪುತ್ರ ಮಿತ್ರ ಕಳತ್ರಾದಿಗಳೆಲ್ಲರು ಅನಿತ್ಯವೆಂದು ತಿಳಿದು ಸಂಸಾರ ಮೋಚನವ ಮಾಡುವ ಮುಕ್ತಿಪ್ರದವಾದ ಕಾಶೀಕ್ಷೇತ್ರವನೇ ಆಶ್ರಯಿಸಬೇಕು. ಕಲಿಯುಗದಲ್ಲಿ ಪಾಪಗಳಿಗೆ ಕಾಶೀಕ್ಷೇತ್ರ ಹೊರತಾಗಿ ಮತ್ತೊಂದು ಪ್ರಾಯಶ್ಚಿತ್ತವಂ ಕಾಣೆನು. ಜನ್ಮಸಹಸ್ರಂಗಳಲ್ಲಿಯೂ, ಪಾಪಮಾಡಿದವರು ಆ ಪಾಪಗಳೆಲ್ಲವೂ ಈ ಕಾಶೀಕ್ಷೇತ್ರದ ಪ್ರವೇಶವಂ ಮಾಡಿದಕ್ಷಣ ಮಾತ್ರದಲ್ಲಿಯೆ ಕ್ಷಯವಹವು. ಅನೇಕಜನ್ಮದಲ್ಲಿ ಯೋಗಾಭ್ಯಾಸವಂ ಮಾಡಿದವ

ರಿಗೆ ಆಗುವಗತಿ ಈ ಕ್ಷೇತ್ರದಲ್ಲಿ ದೇಹತ್ಯಾಗವ ಮಾಡಿದವಂಗೆ ಆಹುದು. ಪಶ್ವಾದಿಗಳಿಗೆ ಮೊದಲಾಗಿ ಉತ್ತಮಗತಿಯುಂಟು. ಕಾಶೀಕ್ಷೇತ್ರವಂ ಸೇವಿಸಲರಿಯದವರು ಮಲಮೂತ್ರರೇತಸ್ಸುಗಳಲ್ಲಿ ನಿವಾಸಿಗಳಾಗುವರು. ಇಲ್ಲಿ ಒಂದು ಲಿಂಗವಂಪ್ರತಿಷ್ಠೆಯ ಮಾಡಿದವರಿಗೆ ಕಲ್ಪಕೋಟಿಗಳಲ್ಲಿಯೂ ಪುನರ್ಜನನವಿಲ್ಲ. ಗ್ರಹನಕ್ಷತ್ರಾದಿಗಳಿಗೆ ಪತನವುಂಟು, ಕಾಶಿವಾಸಿಗಳಿಗೆ ಪತನವಿಲ್ಲ. ಬ್ರಹ್ಮಹತ್ಯಾ ಪಾಪವಂಮಾಡಿ ಪಶ್ಚಾತ್ತಾಪದಿಂ ಕಾಶಿಗೆ ಬಂದು ದೇಹತ್ಯಾಗವಮಾಡಲೂ ಮುಕ್ತರಹರು. ಎನ್ನ ಭಕ್ತರಾಗಿಯಿದ್ದ ಪುಣ್ಯಪುರುಷರು ಪತಿವ್ರತಾಸ್ತ್ರೀಯರು ಇಲ್ಲಿ ದೇಹತ್ಯಾಗವಮಾಡಲು ಮುಕ್ತರಹರು. ಎನ್ನಿಂ ಉಪದೇಶವಾದ ತಾರಕಮಂತ್ರದಿಂ ಪ್ರಾಣಿಗಳು ಬ್ರಹ್ಮರೂಪರಹರು. ಅಂಥಾತಾರಕ ಬ್ರಹ್ಮೋಪದೇಶವನ್ನು ಪ್ರಾಣವಿಯೋಗ ಸಮಯದಲ್ಲಿ ಮಾಡುವೆನು, ಎನ್ನ ಭಕ್ತರಾಗಿ ಎನ್ನನ್ನೇ ಧ್ಯಾನಿಸುತ್ತಾ ಸಕಲ ಕ್ರಿಯೆಗಳನು ಎನಗೆ ಸಮರ್ಪಣೆಯ ಮಾಡುವವಗೆ ಆಗದಂಥಾ ಮುಕ್ತಿಯಿಲ್ಲ. ಸಕಲಮುಕ್ತಿಯೂ, ನಿರಾಯಾಸದಲ್ಲಿಯೇ ಆಹುದು, ಆದಾಗಿ ಆಯುಸ್ಸು ಚಂಚಲ,ಮರಣನಿಶ್ಚಯವೆಂದು ತಿಳಿದು ಕಾಶೀಯಲ್ಲಿ ವಾಸವಾಗಿ ಇರಲೂ ಒಂದೇಜನ್ಮದಲ್ಲಿ ಮುಕ್ತನಹನು. ಸಂಸಾರಭಯಂಕರ, ಮೋಕ್ಷ ದುರ್ಲಭವೆಂದು ತಿಳಿದು ಕಾಶೀಕ್ಷೇತ್ರಕ್ಕೆಬಂದು ಕಲ್ಲತೆಕ್ಕೊಂಡು ತನ್ನ ಎರಡುಕಾಲನ್ನು ಮುರಿದು ತಡಕಿಕೊಂಡು ಕಾಲವನ್ನಿದಿರುನೋಡುತ್ತಾ ಇರಬೇಕು, ಈ ಕ್ಷೇತ್ರಕ್ಕೆ ಬಂದು ತಿರುಗಿ ಪೋಪರನೊಡಿ ಭೂತಗಣಂಗಳು ಕೈಹೊಯಿದು ಹೋಗುತ್ತಿಹವು, ಸ್ಥಲಾಂತರದಲ್ಲಿ ಮಾಡಿದ ಮಹಾದಾನವು ಈ ಕ್ಷೇತ್ರದಲ್ಲಿ ಮಾಡಿದ ಒಂದುಕಾಣಿಗೆ ಸರಿಬರದು. ಸ್ಥಳಾಂತರದಲ್ಲಿ ಮಾಡಿದ ಮಹಾತಪಸ್ಸು ಇಲ್ಲಿ ಒಂದುವೇಳೆ ಮಾಡಿದ ಶಿವಪೂಜೆಗೆ ಸರಿಬಾರದು, ಪುಣ್ಯತೀರ್ಥತೀರದಲ್ಲಿ ಅನೇಕಕಾಲ ವಾಸವಮಾಡಿದ ಫಲವು ಈ ಕ್ಷೇತ್ರದಲ್ಲಿ ಒಂದು ದಿನವಿದ್ದದ್ದಕ್ಕೆ ಸರಿಬಾರದು, ಮತ್ತೊಂದು ಕಡೆಯಲ್ಲಿ ಕೋಟಿ ಬ್ರಾಹ್ಮಣಭೋಜನವಂ ಮಾಡಿಸಿದ ಫಲ ಇಲ್ಲಿ ಒಬ್ಬಬ್ರಾಹ್ಮಣನಿಗೆ ಅನ್ನವನಿಕ್ಕಿದುದಕ್ಕೆ ಸರಿಬಾರದು. ಕುರುಕ್ಷೇತ್ರದಲ್ಲಿ ಸನ್ನಿಹತ್ಯಾತೀರ್ಥದಲ್ಲಿ, ಸೂರ್ಯಗ್ರಹಣದಲ್ಲಿ ತುಲಾ ಪುರು

ಪದಾನವಮಾಡಿದವರು ಇಲ್ಲಿ ಒಬ್ಬ ಯತಿಗೆ ಅನ್ನವಿಕ್ಕಿದುದಕ್ಕೆ ಸರಿಬಾರದು ಇಲ್ಲಿ ಎನ್ನದರ್ಶನ ಸ್ಪರ್ಶನದಿಂದಲೂ ಮರಣಕಾಲದಲ್ಲಿ ಜ್ಞಾನ ಪುಟ್ಟಿ ಮೋಕ್ಷವನ್ನೈದುವರು, ಇಲ್ಲಿ ಎನ್ನ ಪೂಜೆಯಂಮಾಡಿ ಸ್ಥಲಾಂತರಕ್ಕೆ ಪೋಗಿ ದೇಹವಬಿಟ್ಟರೂ ಮತ್ತೊಂದು ಜನ್ಮದಲ್ಲಿ ಪುಟ್ಟಿ ಈ ಕ್ಷೇತ್ರ ವಾಸವಮಾಡಿ ಅಂತ್ಯದಲ್ಲಿ ತನ್ನಿಂದ ತಾರಕಬ್ರಹ್ಮೋಪದೇಶ ಪಡೆದು ಮೋಕ್ಷವನ್ನೈದುವರು. ಈ ಮರ್ಯಾದೆಯಲ್ಲಿ ಬ್ರಾಹ್ಮಣರಿಗೆ ಕ್ಷೇತ್ರಮಹಾತ್ಮೆಯಂ ನಿರೂಪಿಸಿ ಪರಮೇಶ್ವರನು ಪಟ್ಟಣಪ್ರವೇಶವಂ ಮಾಡಲುದ್ಯೋಗಿಸಲು? ಆ ಬ್ರಾಹ್ಮರು ಪ್ರತ್ಯಕ್ಷವಾಗಿ ಪರಮೇಶ್ವರನ ಪಾದಾರವಿಂದವು ಕರಂವವಾಗಿ ಈಶ್ವರನ ವಾಕ್ಯಾಮೃತಪಾನ ಸಂತೋಷದಿಂದ ಸಾಷ್ಟಾಂಗನಮಸ್ಕಾರನಂಮಾಡಿ, ಕಳುಹಿಸಿಕೊಂಡು ತಮ್ಮತಮ್ಮ ಆಶ್ರಮಗಳಿಗೆ ಪೋಗಿ ಪರಮೇಶ್ವರಾನುಗ್ರಹದಿಂ ಸಕಲ ಕ್ರಿಯೆಗಳಂ ಬಿಟ್ಟು ಎಲ್ಲಾ ಪ್ರತ್ಯೇಕ ಒಂದೊಂದು ಲಿಂಗಪ್ರತಿಷ್ಠೆಯಂ ಮಾಡಿಕೊಂಡು ಪೂಜಿಸುತ್ತ ಪರಮೇಶ್ವರನ ಪಾದಾರವಿಂದದಲ್ಲಿ ಭಕ್ತಿಯುಳ್ಳವರಾಗಿ ಇರುತಿರ್ದರು ಎಂದು ಕುಮಾರಸ್ವಾಮಿ ಇಂತೆಂನನು. ಈ ಅಧ್ಯಾಯವಂ ಭಕ್ತಿಯಿಂದ ಓದಿದರೂ ಕೇಳಿದರೂ ಬರೆದರೂ ಸಕಲ ಪಾಪ ಪರಿಹರವಾಗಿ ಶಿವಲೋಕ ವನ್ನೈದುವರು ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನೆಂದು ವ್ಯಾಸರು ಸೂತರಿಗೆ ಬುದ್ಧಿಗಲಿಸಿದರೆಂದು ಸೂತರು ಶೌನಕಾದಿಗಳಿಗೆ ಪೇಳಿದಲ್ಲಿಗೆ ಅಧ್ಯಾಯ ‖ ೬೪ ‖ * * *

ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂ ವಿರಚಿಸಿದ ಕೃಷ್ಣರಾಜವಾಣೀವಿಲಾಸವೆಂಬ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಪರಮೇಶ್ವರನು ಈ ಕ್ಷೇತ್ರವಾಸಿಗಳಾದ ಬ್ರಾಹ್ಮಣರಿಗೆ ಕಾಶೀಕ್ಷೇತ್ರ ಮಹಿಮಾರ್ಥ ಪೇಳಿರುವ ೬೪ ನೆ ಅಧ್ಯಾಯಕ್ಕಂ ಮಂಗಳಮಹಾ.

ಅರವತ್ತೈದನೆ ಅಧ್ಯಾಯದಲ್ಲಿ

ಜ್ಯೇಷ್ಠೇಶ್ವರ ಕಂತುಕೇಶ್ವರ ವ್ಯಾಘ್ರೇಶ್ವರರ ಪ್ರಸಂಗನಿರೂಪಣ.

ಶ್ರೀ ರಾಮಾಯನಮಃ ‖ ‖ ಅನಂತರ ಮತ್ತೂ ಅಗಸ್ತ್ಯಂಗೆ ಕುಮಾರಸ್ವಾಮಿ ಇಂತೆಂದನು. ಕೇಳೈ ಅಗಸ್ತ್ಯನೆ! ಜ್ಯೇಷ್ಠೇಶ್ವರನೆ ಬಳಸಿಯು ಮುನಿಗಳು ಪ್ರತಿಷ್ಠೆಯಂಮಾಡಿದ ಸಕಲರನ್ನು ಪವಿತ್ರವಂ ಮಾಳ್ಪ ಲಿಂಗಗಳು ಅರ್ಬುದ ಸಾವಿರವಿಹ್ವುವು. ಅವಾವುದೆನೆ- ಜ್ಯೇಷ್ಠ ಸ್ಥಾನದಲ್ಲಿ ಭೃಗು ನಾರಾಯಣನ ಪೂಜಿಸಲು ಸಕಲಸಿದ್ಧಿಯಹುದು. ಆ ಸಮಿಾಪದ ಜಾಬಾಲೀಶ್ವರನ ಪೂಜೆಯಿಂ ದುರ್ಗತಿಯಿಲ್ಲ, ಸುಮಂತನೆಂಬ ಋಷಿಯಿಂದ ಪ್ರತಿಷ್ಠಿತವಾದ ಸೂರ್ಯಸಂಪೂಜಿಸಲು ಕುಷ್ಠವ್ಯಾಧಿ ಪರಿಹರ. ಆ ಸಮಿಾಪದ ಭೀಷಣಾದೇವಿಯಂ ಪೂಜಿಸಲು ಸಕಲಭಯ ನಿವಾರಣ. ಆ ಸಮಿಾಪದ ಉಪಲಿಂಗವಂ ಪೂಜಿಸಲು ಕರ್ಮಬಂಧಹರ. ಭಾರದ್ವಾಜೇಶ್ವರ ಮಾಂಡವೇಶ್ವರರೆಂದು ಒಂದುಕಡೆಯಲ್ಲಿ ಇದ್ದಎರಡು ಲಿಂಗವಪೂಜಿಸಲು ಕೃತಕೃತ್ಯನಹನು. ಆ ಸಮಿಾಪದ ಲಿಂಗಪೂಜೆಯಿಂದ ಸರ್ವಸಿದ್ಧಿಯಹುದು. ಆ ಸಮಿಾಪದ ವಾಸವಲಿಂಗದ ಪೂಜೆಯಿಂದ ವಾಜಿಮೇಧಫಲ. ಕಯೇಶ್ವರ, ಕಾತ್ಯಾಯನೇಶ್ವರ, ಔಚಥೇಶ್ವರ, ಹಾರಿಕೇಶ್ವರ, ಪಾಳವೇಶ್ವರ, ಕುತ್ಸೇಶ್ವರ, ಕಾಂಶುಮೇಶ್ವರ, ಅಗ್ನಿಕರ್ಕೇಶ್ವರ, ಶಿವನರ್ತೀಶ್ವರ, ಚ್ಯವನೇಶ್ವರ, ಶಾಲಂಕಾಯನೇಶ್ವರ, ಕಳಂಗೇಶ್ವರ, ಅಕ್ರೋಧನೇಶ್ವರ, ಕಪೋತವೃತ್ತೀಶ್ವರ, ಕಂಕೇಶ್ವರ, ಕುಂತಲೇಶ್ವರ, ಕಂಠೇಶ್ವರ, ಕಕೋಲೀಶ್ವರ, ಮತಂಗೇಶ್ವರ, ಮಾಗಧೇಶ್ವರ, ಕಲಶೇಶ್ವರ, ಜಾತೂಕರ್ಣೇಶ್ವರ,ಜಂಬುಕೇಶ್ವರ,ಮಾತೃಕೇಶ್ವರ,ಜನ್ಮೇಶ್ವರ,ಜೀವಕೇಶ್ವರ ಇವು ಮೊದಲಾದ ಐದುಸಾವಿರ ಲಿಂಗಗಳು ಇದ್ದಾವು. ಈ ಲಿಂಗಗಳ ಸ್ಮರಣೆ, ಅರ್ಚನ, ಸ್ಪರ್ಶನ, ದರ್ಶನ, ಕೀರ್ತನೆ ಸ್ತುತಿಗಳಿಂದಲೂ ಸಕಲ ಪಾಪಂಗಳೂ ಪರಿಹರವಾಗಿ ಭಕ್ತಿ ಮುಕ್ತಿಯನೈದುವರು. ಈ ಜ್ಯೇಷ್ಠಸ್ಥಾನದಲ್ಲಿ ಒಂದು ವೃತ್ತಾಂತವುಂಟು. ಆ ವೃತ್ತಾಂತವಂ ಕೇಳಿದವರಿಗೆ ಸಕಲ ಪಾಪಹರ. ಸಕಲ ಶ್ರೇಯಸ್ಸುಗಳಹವು, ಆ ಕಥೆಯಂ ಕೇಳೆಂದು ಅಗಸ್ತ್ಯಂಗೆ ಕುಮಾರಸ್ವಾಮಿ ನಿರೂಪಿಸಿದನು. ಅದೆಂ

ತೆನೆ- ಒಂದಾನೊಂದುದಿನ ಪಾರ್ವತೀಸಮೇತನಾದ ಪರಮೇಶ್ವರನು ಆ ಜ್ಯೇಷ್ಠಸ್ಥಾನವಲ್ಲಿ ಸುಖದಿಂದ ಸಂಚಾರವಂ ಮಾಡುತ್ತಾ ಒಂದುವೇಳೆ ಪಾರ್ವತೀದೇವಿಯು ಚೆಂಡನಾಡಬೇಕೆಂಬ ಇಚ್ಛೆಯಿಂದ ತನ್ನ ಪತಿಯ ಅಪ್ಪಣೆ ಪಡೆದು ಸಂತೋಷದಿಂ ಚೆಂಡಪಿಡಿದು ಅತಿರಭಸದಿಂದ ಉಬ್ಬುತ್ತಾ ತಗ್ಗುತ್ತಾ ಎಡಬಲಕ್ಕೆ ಒಲದುತ್ತಾ ಕಟ್ಟಿದತುರುಬು ಸಡಲಿ ಝಲ್ಲನೆ ಪುಷ್ಪಂಗಳು ಉದುರುತ್ತಿರಲು, ಕಿರುಬೆವರಿಂದಾಗಂಡಸ್ಥಳದ ಮಕರಿಕಾಪತ್ರ ಕರಗಲು ಪದ್ಮಗಂಧವುಳ್ಳ ಶ್ವಾಸವನುಂಟಬಂದ ತುಂಬಿವಿಂಡ ನೋಡುತ್ತಾ ಕುಪ್ಪಸದಿಂ ಪೊರಮಟ್ಟು ಬಂದವೆಂಬಂತೆ ತೋರ್ಪ ಚಂಚಲಕುಚಗಳಿಂದೊಪ್ಪುವ ಹಲವುವ್ಯಾಳೆ ಚೆಂಡಬಡಿಯಲೂ, ಕೆಂಪಾದ ಅಂಗೈಗಳಿಂದ ಚೆಂಡು ಪೋದ ಸ್ಥಳಂಗಳಂನೋಳ್ಪ ದೃಷ್ಟಿಗಳಿಂದ ಕುಣಿವ ಪುಬ್ಬುಗಳಿಂದಲೂ ಅತ್ಯಂತಹರ್ಷದಿಂನೋಳ್ಪ ಪರಮೇಶ್ವರನ ಮುಂದೆ ಚೆಂಡನಾಡುತ್ತಿರ್ದ ಲೋಕಮಾತೆಯಾದ ಪಾರ್ವತೀದೇವಿಯನ್ನು ಆಕಾಶಮಾರ್ಗದಲ್ಲಿ ಪೋಪ ವಿದಳ, ಉತ್ಪಲರೆಂಬ ರಾಕ್ಷಸರು ತಮ್ಮ ಭುಜಬಲದಿಂದ ಮೂರುಲೋಕವಂ ತೃಣೀಕರಿಸಿದವರಾಗಿ ಪೋಗುತ್ತಿರ್ದು ಚೆಂಡನಾಡುವ ಪಾರ್ವತೀದೇವಿಯಂಕಂಡು ಮದನಬಾಣಕ್ಕೆ ಶಿಲುಕಿ ಕಾಲತ್ರುಂಬಿದವರಾಗಿ ಅಂತರಿಕ್ಷದಿಂ ಭೂಮಿಗೆ ಬಂದು ಮಾಯದಿಂ ತಮ್ಮ ರೂಪಗಳಂ ಮಾಚಿ ಶಿವಗಣಂಗಳ ರೂಪವಂ ಧರಿಸಿ ಅಮ್ಮನವರ ಸಮೀಪಕ್ಕೆ ಬರುತ್ತಿರಲು, ಸರ್ವಜ್ಞನಾದ ಈಶ್ವರನು ಅವರ ಭಾವಮಂಕಂಡು ದೇವಿಯರಿಗೆ ಕಣ್ಣುಸನ್ನೆಯಿಂದ ತೋರಲು, ಸರ್ವಜ್ಞನಾದ ಪರಮೇಶ್ವರನ ಅರ್ಧಶರೀರೆಯಾದ ದೇವಿಯರು ಆ ಸನ್ನೆಯನರಿತು ಆ ರಾಕ್ಷಸರಿಬ್ಬರೂ ಒಂದೇವ್ಯಾಳೆ ಬೀಳ್ವಂತೆ ಎದೆಯಮೇಲೆ ತಾಕುವಂತೆ ಚೆಂಡನಿಡಲಾಗಿ ಮಹಾಬಲಿಷ್ಠರಾದ ದಾನವರೀರ್ವರೂ ಮಹಾದೇವಿ ಇಟ್ಟ ಹಸ್ತದ ಚೆಂಡಿನ ಪೆಟ್ಟಿನಿಂದ ಸುತ್ತಿಸುತ್ತಿ ಪಕ್ವವಾದ ಹಣ್ಣುಗಳು ಘಾಳಿಗೆ ಬೀಳ್ವಂತೆ ಒಂದೇ ಘಾಯದಿಂ ಇಬ್ಬರು ರಾಕ್ಷಸರೂ ಹತರಾಗಲು, ಆ ಕ್ಷಣವೇ ಆ ಚೆಂಡು ಲಿಂಗವಾಯಿತು, ಆ ಲಿಂಗದ ಹೆಸರು ಕಂತುಕೇಶ್ವರನು, ಆ ಲಿಂಗದ ಪೂಜೆಯಿಂದ ಸಕಲ ದುಃಖನಿವಾರಣವು, ಈ ಕಂತುಕೇಶ್ವರನ ಪೂಜೆ

ಸಿ ಈ ಕಥೆಯಂ ಕೇಳಲು ಭೋಗಾಂತ್ಯದಲ್ಲಿ ಮುಕ್ತಿಯನ್ನೈದುವನು. ಕೇಳೈ ಅಗಸ್ತ್ಯನೆ ? ಈ ಜ್ಯೇಷ್ಠೇಶ್ವರನ ಸಮೀಪದಲ್ಲಿ ಮತ್ತು ಒಂದು ಆಶ್ಚರ್ಯವಾಯಿತು. ಅದಾವುದೆನೆ- ದೇವಋಷಿ ಪಿತೃಗಳಿಗೆ ತೃಪ್ತಿಕರ ವಾದ? ದಂಡಖಾತತೀರ್ಥದಲ್ಲಿ ನಿಷ್ಕಮದಿಂ ಬ್ರಾಹ್ಮಣರು ಉಗ್ರತಪ ವಂ ಮಾಡುತ್ತಿರಲು, ಪ್ರಹ್ಲಾದಂಗೆ ಸೋದರಮಾವನಾದ ದುಂದುಭಿ ನಿರ್ಹ್ರಾದನೆಂಬ ರಾಕ್ಷಸನು ಪಾತಾಳ ಭೂಲೋಕಂಗಳಂಜಯಿಸಿ ಸ್ವರ್ಗ ದ ದೇವತೆಗಳಂ ಜಯಿಸುವವಕ್ಕೆ ಉಪಾಯವಾವದೂ ಎಂದು ಯೋಚನೆ ಯಂಮಾಡಿ, ತನ್ನೊಳು ಇಂತೆಂದನು. ದೇವತೆಗಳಿಗೆ ಬಲವಾವುದು, ಆಹಾ ರವೇನು ಎಂದು ಬಹಳವಾಗಿ ವಿಚಾರಿಸಿ ತನ್ನೊಳು ಇಂತೆಂದನು. ದೇವತೆ ಗಳಿಗೆ ಸಕಲಕ್ಕೂ ಕಾರಣವಾದವರು ಬ್ರಾಹ್ಮಣರೇ ಸರಿ, ಬ್ರಾಹ್ಮಣರು ವೇದಮಂತ್ರಗಳಿಂದ ಯಜ್ಞಗಳಂ ಮಾಡಲು,ದೇವರ್ಕಳು ಆ ಹವಿಸ್ಸನ್ನು ಭುಂಜಿಸಿ ಬಲವಹರು. ಆ ವೇದಂಗಳಿಂದ ಯಜ್ಞಂಗಳು ಪ್ರತಿಪಾದಿಸಲ್ಪ ಡುವವು, ಆ ವೇದಗಳು ಬ್ರಾಹ್ಮಣರ ಅಧೀನಗಳು, ಅದುಕಾರಣ ದೇವತೆ ಗಳಿಗೆ ಬ್ರಾಹ್ಮಣರೇ ಬಲ, ಬ್ರಾಹ್ಮಣರು ಖಿಲವಾದರೆ ವೇದಗಳು ತಾವೆ ನಷ್ಟವಹವು,ಆ ವೇದಗಳು ನಷ್ಟವಾದಾಗಲೆ ಯಜ್ಞಂಗಳುಕೆಟ್ಟುಹೋ ಗುವವು, ಆ ಯಜ್ಞಂಗಳು ಕೆಟ್ಟಾಗಲೇ ದೇವತೆಗಳು ಆಹಾರವಿಲ್ಲದೆ ಬಲ ಕ್ಷೀಣರಾಗುವರು, ಅವರು ಬಲಹೀನರಾಗಲುಆ ದೇವತೆಗಳನ್ನು ಜಯಿಸಿ, ಸುಖದಿಂ ತ್ರಿಲೋಕಕ್ಕೂ ಅಧಿಪತಿಯಾಗಿ ದೇವತೆಗಳ ಐಶ್ವರ್ಯಮಂ ತನ್ನ ವಶವಂ ಮಾಡಿಕೊಂಡೇನು, ರಾಜ್ಯವನ್ನು ನಿಷ್ಕಂಟಕವಾಗಿ ಆಳಿ ಸಕಲ ಭೋಗಗಳನ್ನೂ ಅನುಭವಿಸೇನು ಎಂದು ದುರ್ಬುದ್ಧಿಯಾದ ದೈತ್ಯನೂ ಆ ಲೋಚಿಸಿ, ಮತ್ತು ತನ್ನ ಮನದಲ್ಲಿಂತೆಂದು ಚಿಂತಿಸುವನು. ಈ ಭೂಮಿ ಯಲ್ಲಿ ವೇದಶಾಸ್ತ್ರಸಂಪನ್ನರಾದ ಬ್ರಹ್ಮತೇಜಸ್ಸು ತಪೋಬಲವುಳ್ಳ ಬಹು ಮಂದಿ ಬ್ರಾಹ್ಮಣರು ಇದ್ದರೂ ಎಂದು ವಿಚಾರಿಸಿ ಕಾಶೀಪಟ್ಟಣವಲ್ಲಿಅಲ್ಲ ದೆ ಎಲ್ಲಿಯೂ ಇಲ್ಲ, ಅಲ್ಲಿಗೆ ಹೋಗಿ ಆ ಕ್ಷೇತ್ರದಲ್ಲೇ ಬ್ರಾಹ್ಮಣರಂ ಸಂಹರಿಸಿ, ಆ ಮೇಲೆ ಎಲ್ಲಿಪುಣ್ಯತೀರ್ಥಂಗಳು ಪುಣ್ಯಾಶ್ರಮಂಗಳುಂ ಟೋ ಅಲ್ಲಿಗೆ ಪೋಗಿ ಅಲ್ಲಿರ್ಪ ಬ್ರಾಹ್ಮಣರಂ ಕೊಲ್ಲುವೆನು ಎಂದು ತನ್ನ

ಜಾತಿಗೆ ತಕ್ಕ ಬುದ್ಧಿಯು ಯೋಚನೆಯುಂ ಮಾಡಿ ಕಾಶೀಪಟ್ಟಣಕ್ಕೆ ಬಂದು ಇಲ್ಲಿ ಇದ್ದ ಬ್ರಾಹ್ಮಣರಂ ಕೊಲ್ಲುವದಕ್ಕೆ ಯತ್ನವಂ ಮಾಡಿದ ನೆದೆಂತೆನೆ- ಸಮಿತ್ತು ದರ್ಭೆ ಪುಷ್ಪ ಕಂದಮೂಲಫಳಂಗಳಂ ತಹದಕ್ಕೆ ಅರಣ್ಯಕ್ಕೆ ಹೋದವರಂ ಅಲ್ಲಿಯೇ ಭಕ್ಷಿಸುವನು. ವನದಲ್ಲಿ ಇದ್ದ ಪ್ರಾಣಿಗಳ ವನಚರನಾಗಿಯೂ, ಜಲದಲ್ಲಿ ಇದ್ದ ಪ್ರಾಣಿಗಳ ಜಲಚರನಾಗಿಯೂ ದೇವತೆಗಳಿಗೆ ಮೊದಲಾಗಿ ಕಾಣಿಸಿಕೊಳ್ಳದೆ ಮಾಯಾವಿಯಾಗಿ ದಿವದಲ್ಲಿ ಮುನೀಶ್ವರರ ಮಧ್ಯದಲ್ಲಿ ಮುನಿಯಂತೆ ಕುಳಿತು ತರ್ಪಣಶಾಲೆಯು ಹೋಗುವದನ್ನೂ ಹೊರಡುವದನ್ನೂ ನೋಡಿಕೊಂಡು ಇದ್ದು ರಾತ್ರಿಯಲ್ಲಿ ವ್ಯಾಘ್ರರೂಪದಿಂ ಬಂದು ಅನೇಕಮಂದಿ ಬ್ರಾಹ್ಮಣರಂ ಎಲುವು ಮೊದಲಾಗಿ ಮಿಗದಂತೆ ಭಕ್ಷಿಸಿ ಸದ್ದಾಗದಂತೆ ಪೊರಮಟ್ಟು ಪೋಪನು. ಈ ರೀತಿಯಲ್ಲಿ ನಾನಾ ಮಾಯೆಗಳಿಂದ ಅನೇಕಮಂದಿ ಬ್ರಾಹ್ಮಣರನ್ನು ಭಕ್ಷಿಸಲು, ಒಬ್ಬ ಶಿವ ಭಕ್ತನು ಒಂಟಿಗನಾಗಿ ರಾತ್ರಿಯಲ್ಲಿ ತನ್ನ ಪರ್ಣಶಾಲೆಯಿಂ ಪೊರಮಟ್ಟು ಬಂದು ಈಶ್ವರಾರಾಧನೆಯಂ ಮಾಡುತ್ತಾ ಧ್ಯಾನಪರನಾಗಿ ಇರಲು, ಆ ರಾಕ್ಷಸನು ತನ್ನ ಬಲಗರ್ವದಿಂದ ವ್ಯಾಘ್ರರೂಪವಂ ತಾಳಿ, ಆ ಬ್ರಾಹ್ಮಣನಂ ಸಂಹರಿಸಬೇಕೆಂದು ಸಮೀಪಕ್ಕೆ ಬರಲು, ಆ ಸಮಯದಲ್ಲಿ ಬ್ರಾಹ್ಮಣನು ಧ್ಯಾನಪರನಾಗಿ ದೃಢಚಿತ್ತದಿಂದ ಸಕಲಮಂತ್ರಂಗಳಿಂದ ಶರೀರ ಸಂರಕ್ಷಣೆಯಂ ಮಾಡಿಕೊಂಡು ಧ್ಯಾನ ಯೋಗದಿಂದಿರುತ್ತಿರಲು, ಆ ರಾಕ್ಷಸನು ಆತನಂ ಮುಟ್ಟುವದಕ್ಕೆ ಸಾಮರ್ಥ್ಯವಿಲ್ಲದೆ ಸರ್ವಗತನಾದ ಪರಮೇಶ್ವರನು ಆ ಬ್ರಾಹ್ಮಣನಂ ಹಿಡಿದೆನು ಎಂದು ಲಂಘಿಸುವವ್ಯಾಘ್ರರೂಪವ ದುಷ್ಟರಾಕ್ಷಸನಂ ನೋಡಿ, ಜಗದ್ರಕ್ಷಕನಾದ ಭಕ್ತಸಂರಕ್ಷಕನಾದ ತ್ರಿಲೋಚನನಾದ ಪರಮೇಶ್ವರನು ಆ ಬ್ರಾಹ್ಮಣನು ಪೂಜಿಸುವ ಲಿಂಗದಿಂ ಪೊರಮಟ್ಟು ಕೋಪದಿಂ ಮುಂದೆ ನಿಂತಿರಲು, ಆ ವ್ಯಾಘ್ರಾಸುರನು ಆ ದೇಹದಿಂದಲೇ ಪರ್ವತಾಕಾರವಾಗಿ ಬೆಳೆದು ಘರ್ಜಿಸುತ್ತಾ ಇದಿರಾಗಿ ನಡೆತರಲು, ಪರಮೇಶ್ವರನು ವ್ಯಾಘ್ರವುಂ ಹಿಡಿದು ಕಂಕುಳಲ್ಲಿ ಇರುಕಿಕೊಂಡು ನುಗ್ಗುನುಶಿಯಂ ಮಾಡಿ ಪಂಚಮುಖನಾದ ಶಿವನು ಹಸ್ತವನೆತ್ತಿ ಆ ರಾಕ್ಷಸನ ತಲೆಯಂ ಕುಟ್ಟಲು, ಆ ರಾಕ್ಷಸನು ಪ್ರಳಯ

ಕಲ್ಪದ ಅಂತ್ಯದ ಸಿಡಿಲಿನಂದದಿ ಭೂಮಿ ಆಕಾಶವೂ ತುಂಬುವಂತೆ ಘೋ
ರಧ್ವನಿಯಿಂದಾ ಮೊರೆಯಿಡಲು, ಆ ಮಹಾಧ್ವನಿಯಂ ಕೇಳಿ ರಾತ್ರಿಯಲ್ಲಿ
ಭಯಪಟ್ಟು ಋಷಿಗಳೆಲ್ಲರೂ ಆ ಧ್ವನಿಯು ಬಳಿವಿಡಿದು ಬಂದು ವ್ಯಾಘ್ರಾ
ಸುರನ ಕಕ್ಷ್ವದಲ್ಲಿ ಇರುಕಿಕೊಂಡು ಇರುವ ಮಹಾದೇವನಂ ಕಂಡು ಜ
ಯಜಯವೆಂದು ಋಷಿಗಳೆಲ್ಲರೂ ಸಾಷ್ಟಾಂಗನಮಸ್ಕಾರವಂಮಾಡಿ ಅ
ನೇಕ ಸ್ತುತಿಗಳಿಂದ ಬಿನ್ನೈಸಿದರು. ಎಲೈ ಜಗದ್ರಕ್ಷಕನೆ! ಸಕಲವುಪದ್ರ
ವಂಗಳಂ ಪರಿಹರಿಸಿ ಲೋಕವ ಸಲಹಲೋಸ್ಕರ ಅನುಗ್ರಹಿಸಿ ಇದ್ಧೀರಾ
ದಕಾರಣ ಈ ಆಕಾರದಿಂದ ವ್ಯಾಘ್ರೇಶ್ವರನೆಂಬ ಹೆಸರಿನಿಂದ ಈ ಜ್ಯೇಷ್ಠ
ಸ್ಥಾನದಲ್ಲಿ ನಿಂತು ನಮ್ಮರಕ್ಷಿಸಬೇಕೂ ಎಂದು ಬಿನ್ನೈಸಲು, ಚಂದ್ರಶೇ
ಖರನಾದ ಪರಮೇಶ್ವರನು ಆ ಬ್ರಾಹ್ಮಣರಬಿನ್ನಹವಕೇಳಿ ಹಾಗೇ ಆಗ
ಲೆಂದು ನುಡಿದು ಬ್ರಾಹ್ಮಣರಿಗೆ ಮತ್ತಿಂತೆಂದನು. ಎಲೈ ಬ್ರಾಹ್ಮಣರಿರಾ!
ಈರೂಪದಲ್ಲಿರ್ದ ಎನ್ನನೋಡಿದವನ ವಿಘ್ನಂಗಳೆಲ್ಲವನ್ನೂ ಪರಿಹಾರವಂಮಾ
ಡುವೆನು, ಎನ್ನಪೂಜಿಸಿ ಪಯಣವಂ ಪೋಗಲು ಚೋರಭಯ ವ್ಯಾಘ್ರಾ
ದಿಭಯವಿಲ್ಲ, ಹೃದಯದಲ್ಲಿ ಎನ್ನಂಸ್ಮರಿಸಿ ಎನ್ನ ಚರಿತ್ರವಂ ಕೇಳಿ ಯುದ್ಧಕ್ಕೆ
ಪೋಗಲೂ ಜಯವಹುದು. ಹೀಗೆಂದು ಆ ಬ್ರಾಹ್ಮಣರಿಗೆ ಲೋಕಹಿತವಾಗಿ
ವರವನಿತ್ತು ಪರಮೇಶ್ವರನು ಅಂತರ್ಧಾನವಾಗಲೂ ಋಷಿಗಳು ವಿಸ್ಮ
ಯಂ ಬಟ್ಟು ಪ್ರಾತಃಕಾಲದಲ್ಲಿ ಋಷಿಗಳೆಲ್ಲರೂ ತಮ್ಮತಮ್ಮ ಆಶ್ರಮಂಗ
ಳಿಗೆ ಪೋದರು. ಕೇಳೈ ಅಗಸ್ತ್ಯನೆ! ಅಂದುಮೊದಲಾಗಿ ಆ ಸ್ವಾಮಿಯು
ವ್ಯಾಘ್ರೇಶ್ವರನೆಂದು ಪ್ರಸಿದ್ಧವಾದನು, ಜ್ಯೇಷ್ಠೇಶ್ವರನ ಉತ್ತರದಲ್ಲಿ ವ್ಯಾ
ಘ್ರೇಶ್ವರ ದರ್ಶನಸ್ಪರ್ಶನ ಪೂಜೆಗಳಿಂದ ಸಕಲಭಯಹರ, ವ್ಯಾಘ್ರೇಶ್ವರ
ನ ಭಕ್ತರಕಂಡರೆ ಯಮದೂತರು ಭಯಪಡುತ್ತಿಹರು, ಪರಾಶರೇಶ್ವರ
ಮೊದಲಾದ ಲಿಂಗಗಳ ಮಹಿಮೆಯಂ ಕೇಳಲು ಪಾಪ ಪಂಕಲೇಪವಿಲ್ಲ, ಕಂ
ತುಕೇಶ್ವರನ ವ್ಯಾಘ್ರೇಶ್ವರನ ಉತ್ಪತ್ತಿಯಂ ಕೇಳಲು ಸಕಲವುಪದ್ರಪ
ರಿಹಾರವಹುದು, ವ್ಯಾಘ್ರೇಶ್ವರನಪಶ್ಚಿಮದಲ್ಲಿ ಉಟಜೇಶ್ವರನ ಪೂಜೆ ನಮ
ಸ್ಕಾರಂಗಳಿಂದ ಸಂಸಾರಭಯವಿಲ್ಲವೆಂದು ಕುಮಾರಸ್ವಾಮಿ ಅಗಸ್ತ್ಯಂಗೆ
ನಿರೂಪಿಸಿದ ಅರ್ಥವಂ ವ್ಯಾಸರು ತನಗೆ ಬುದ್ಧಿಗಲಿಸಿದರೆಂದು ಸೂತಪು

ರೋಮಹರ್ಷಣನು ಶೌನಕಾದಿ ಋಷಿಗಳಿಗೆ ವಿಸ್ತರಿಸಿ ಹೇಳಿದನೆಂಬಲ್ಲಿಗೆ ಅಧ್ಯಾಯಾರ್ಥ * * * *

ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಾಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಕಂತುಕೇಶ್ವರ ವ್ಯಾಘ್ರೇಶ್ವರನ ಮಹಿಮೆಯಂ ಪೇಳ್ದ ಅರವತ್ತೈದನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * * * *

ಅರವತ್ತಾರನೇ ಅಧ್ಯಾಯ ಶೈಲೇಶ್ವರನಪ್ರಸಂಗ

ಶ್ರೀವಿಶ್ವೇಶ್ವರಾಯನಮಃ॥ ॥ ಅನಂತರದಲ್ಲಿ ಕುಮಾರಸ್ವಾಮಿಯು ಅಗಸ್ತ್ಯಂಗಿಂತೆಂದನು ಕೇಳೈ ಅಗಸ್ತ್ಯನೆ! ಜ್ಯೇಷ್ಠೇಶ್ವರನ ದಕ್ಷಿಣದಲ್ಲಿ ಅಪ್ಸರೇಶ್ವರನೆಂಬ ಒಂದುಲಿಂಗವಿದ್ಧೀತು ಆ ಸಮೀಪದಲ್ಲಿ ಸೌಭಾಗ್ಯೋದಕವೆಂಬ ತೀರ್ಥವಿದ್ಧೀತು ಅಲ್ಲಿ ಸ್ನಾನವಮಾಡಿದವರ್ಗೆ ಅಪ್ಸರೇಶ್ವರನ ಪೂಜಿಸಿದ ಸ್ತ್ರೀಯರಿಗೂ ಪುರುಷರುಗಳಿಗೂ ಸೌಭಾಗ್ಯವಹುದು, ಆ ಸಮೀಪದಲ್ಲಿರ್ಪ ಕುಕ್ಕುಟೇಶ್ವರನ ಪೂಜಿಸಲು ಕುಟುಂಬವೃದ್ಧಿಯಹುದು, ಜ್ಯೇಷ್ಠೇಶ್ವರನ ಸಮೀಪದಲ್ಲಿ ಪಿತಾಮಹತೀರ್ಥದಲ್ಲಿ ಸ್ನಾನದಾನ ಶ್ರಾದ್ಧಾದಿಗಳಂ ಮಾಡಲೂ ಪಿತೃಗಳಿಗೆ ಅತ್ಯಂತತೃಪ್ತಿಯಹುದು, ಆತೀರ್ಥದ ನೈಋತ್ಯದಲ್ಲಿ ಪಿತಾಮಹೇಶ್ವರನ ಪೂಜಿಸಲೂ ಪಿತೃಗಳಿಗೆಮುಕ್ತಿಯುಂಟು. ಜ್ಯೇಷ್ಠೇಶ್ವರನ ನೈಋತ್ಯದಲ್ಲಿರುವ ವಾಸುಕೇಶ್ವರನ ಪೂಜಿಸಿವಾಸುಕಿತೀರ್ಥದಲ್ಲಿ ನಾಗರಪಂಚಮಿಯಲ್ಲಿ ಸ್ನಾನವಂಮಾಡಿ ವಾಸುಕೀಶ್ವರನಪೂಜಿಸಲು ಅವರವಂಶದಲ್ಲಿ ಆರಿಗೂ ಸರ್ಪಬಾಧೆಯಿಲ್ಲ, ಆ ತೀರ್ಥಕ್ಕೆ ಪಡುವಲಲ್ಲಿರ್ಪ ಕರ್ಕೋಟಕೇಶ್ವರನಪೂಜಿಸಲು ಸರ್ವಸಿದ್ಧಿಯಹುದು, ಆ ಉತ್ತರದಲ್ಲಿಹ ಕಾಲಭೈರವನ ಸಾನ್ನಿಧ್ಯದಲ್ಲಿ ಆವಮಂತ್ರವಜಪಿಸಿದರೂ ಆ ರುಶಿಂಗಳಿಗೆ ಸಿದ್ಧಿಯಹುದು, ಆಸಮೀಪದ ಮಹಾತುಂಡಿಯೆಂಬ ಶಕ್ತಿಯಂ ಪೂಜಿಸಲು ಪುತ್ರ ಮಿತ್ರ ಕಳತ್ರವಂತನಾಗಿ ಸುಖದಲ್ಲಿ ಇಹನು, ಆ ಶಕ್ತಿಗೆ ಪಡುವಲಲ್ಲಿ ಚತುಸ್ಸಾಗರತೀರ್ಥವಿಹುದು, ಅದರಲ್ಲಿ ಸ್ನಾನವಂ

ಮಾಡಿದರೆ ಚತುಸ್ಸಮುದ್ರದಲ್ಲಿಸ್ನಾನವಂಮಾಡಿದ ಫಲ, ಆ ತೀರ್ಥದ ಪಶ್ಚಿಮದಲ್ಲಿ ಗಂಧರ್ವತೀರ್ಥವಿಹುದು, ಅದರಲ್ಲಿಸ್ನಾನವಂ ಮಾಡಿ ಗಂಧರ್ವೇಶ್ವರನ ಪೂಜಿಸಲು ಗಂಧರ್ವಲೋಕವುಂಟು. ಆ ಗಂಧರ್ವೇಶ್ವರನ ಮೂಡಲಲ್ಲಿಹ ಕರ್ಕೋಟಕವಾಪಿಯಲ್ಲಿ ಮಿಂದು ಕರ್ಕೋಟಕೇಶ್ವರನ ಪೂಜಿಸಲು ಸರ್ಪಭಯವಿಲ್ಲ, ನಾಗಲೋಕವಾಸವಹುದು. ಅದಕ್ಕೆ ಪಶ್ಚಿಮದಲ್ಲಿ ದುಂಧುಮಾರೇಶ್ವರನ ಪೂಜೆಯಿಂದ ಶತ್ರುಭಯವಿಲ್ಲ. ಅದಕ್ಕೆ ಉತ್ತರದಲ್ಲಿಹ ಪುರೂರವೇಶ್ವರನ ಪೂಜಿಸಲು ಚತುರ್ವಿಧಪುರುಷಾರ್ಥವಹುದು, ಆ ಸ್ವಾಮಿಯ ಮೂಡಲಲ್ಲಿಹ ಸುಪ್ರತೀಕೇಶ್ವರನ ಪೂಜಿಸಲು ಕೀರ್ತಿ ಬಲತುಷ್ಟಿಗಳಹವು, ಅಲ್ಲಿಯ ಸುಪ್ರತೀಕತೀರ್ಥದಲ್ಲಿಸ್ನಾನವಂ ಮಾಡಲು ಸುಪ್ರತೀಕಗಜಕ್ಕೆ ಅಧಿಪತಿಯಹನು, ಆ ಮೂಡಲಲ್ಲಿಹ ಮಹಾಭೈರವೀಯೆಂಬ ಶಕ್ತಿಯಂ ಪೂಜಿಸಲು ಇಷ್ಟಸಿದ್ಧಿಯಹುದು, ವರಣಾನದೀತೀರದಲ್ಲಿ ಹುಂಡಮುಂಡರೆಂಬ ಶಿವಗಣಂಗಳಿಹರು,ಅವರಪೂಜಿಸಲು ಅತಿಸುಖವಹುದು. ಎಲೈ ವಾತಾಪೀಲ್ವಲ ಶತ್ರುವಾದ ಅಗಸ್ತ್ಯನೆ! ಈ ವರಣಾನದೀತೀರ್ಥದಲ್ಲಿ ಇನ್ನೊಂದು ವೃತ್ತಾಂತವುಂಟು, ಆ ವೃತ್ತಾಂತವಂ ಹೇಳುವೆನು ಕೇಳೂ,ಎಂದು ಕುಮಾರಸ್ವಾಮಿ ಹೇಳುತ್ತಿದ್ದನು.

ಕೇಳೈ ಅಗಸ್ತ್ಯನೆ! ಒಂದಾನೊಂದು ದಿನದಲ್ಲಿ ಗಿರಿರಾಜನ ರಾಣಿಯಾದ ಮೇನಕಾದೇವಿಯು ತನ್ನ ಪ್ರಾಣನಾಯಕನಾದ ಗಿರಿರಾಜನನ್ನೋಡಿ, ಸಂತೋಷದಿಂದ ತನ್ನ ಮಗಳಾದ ಪಾರ್ವತೀದೇವಿಯಂನೆನೆದು ಬಿಸುಸುಯ್ದು ಇಂತೆಂದಳು. ಎಲೈ ಸ್ವಾಮಿ! ನಿಮ್ಮ ಕುಮಾರತಿಯಾದ ಪಾರ್ವತೀದೇವಿಯ ವಿವಾಹವಾದುದು ಮೊದಲಾಗಿ ಆಕೆಯ ಕ್ಷೇಮವಾರ್ತೆಯಂ ಕೇಳದುದಿಲ್ಲ ನಿಮ್ಮ ಅಳಿಯನು ವೃಷಭವನ್ನೇರಿಕೊಂಡು ವಿಭೂತಿಧೂಳನವಂ ಮಾಡಿಕೊಂಡು ಆಪಾದಮಸ್ತಕಪರ್ಯಂತವೂ ಪಾವುಳಗಳನ್ನಲಂಕರಿಸಿಕೊಂಡು ದಿಗಂಬರನಾಗಿ ಶ್ಮಶಾನದಲ್ಲಿ ತಿರುಗಾಡುವ ದೇವರು ಈಗ ಎಲ್ಲಿ ಇದ್ದಾನೆಯೊ ತಿಳಿಯಬಾರದು, ಬ್ರಾಹ್ಮೀ ಮೊದಲಾದ ಅಷ್ಟಮಾತೃಕೆಗಳು ಅತ್ತೆಗಳಾಗಿ ನಿತ್ಯವೂ ಬಾಧೆಪಡಿಸುತ್ತಾ ಇದ್ದಾರೂ, ಆ ಅಳಿಯನೂ ಒಂಟಿಗನು, ಆತಗೆ ಮತ್ಯಾರೂಯಿಲ್ಲ, ಆತನ ಯೋಗಕ್ಷೇಮವೂ ತಿಳಿಯ

ಮ್ಮ ಅಲ್ಲಿಗೆ ಹೋಗಿ ಅಳಿಯನ ಯೋಗಕ್ಷೇಮವನ್ನು ತಿಳಿಯುವದಕ್ಕೆ ಯತ್ನ ವಮಾಡಬೇಕೆಂದು ಬಿನ್ನವಿಸಲು, ಗಿರಿರಾಜನು ಸತಿಯ ವಾಕ್ಯವಂ ಕೇಳಿ ತನ್ನ ಮಗಳಾದ ಪಾರ್ವತೀದೇವಿಯರ ಮೇಲಣ ವಾತ್ಸಲ್ಯದಿಂದ ಕಣ್ಣೀರ ತಂದುಕೊಂಡು ಗದ್ಗದಸ್ವರದಿಂದ ಇಂತೆಂದನು. ತಾನೇಹೋಗಿ ಮಗಳಂ ನೋಡಿ ಬಂದೇನೆಂದರೆ ನಿನ್ನಂ ಬಿಟ್ಟು ಹೋಗಲಾರದೆ ಇದ್ದೇನೆ, ಆವಾಗ ಪಾರ್ವತೀದೇವಿ ತನ್ನ ಮನೆಯ ಬಿಟ್ಟು ಹೋದಳೋ ಅಂದು ಮೊದಲಾಗಿ ತನ್ನ ಮನೆಯ ಮಹಾಲಕ್ಷ್ಮಿಯು ಬಿಟ್ಟು ಹೋದಳು ಎಂಬ ಹಾಗೆ ತೋ ರುತಲಿದ್ದೆ,ಎಂದು ಎನ್ನ ಕಿವಿಗಳು ಪಾರ್ವತೀಯೆಂಬ ಅಮೃತಮಯವಾದ ಮೃದುನುಡಿಗಳಂ ಕೇಳಿದವೊ ಅಂದಾರಭ್ಯವಾಗಿ ಮತ್ತೊಂದು ಪ್ರಸಂಗ ವಂ ಕೇಳಲಿಲ್ಲಾ, ಎನ್ನ ಪ್ರಾಣಪದಕವಾದ ಮಗಳಂ ನೋಡದಿರಲು ಅತ್ಯಂ ತ ಶೈತ್ಯಕರನಾದ ಚಂದ್ರಮನು ದಿವದಲ್ಲಿ ಇದ್ದ ಸೂರ್ಯನಂತೆ ತಾಪಬಡಿ ಸುತ್ತಾ ಇದ್ದಾನು. ಇಂತೆಂದು ನುಡಿದು ಗಿರಿರಾಜನು ದಿವ್ಯರತ್ನಾಭರಣವ ಸ್ತ್ರಗಳಂಕೊಂಡು ಶುಭದಿನ ಶುಭಲಗ್ನದಲ್ಲಿ ಮಗಳಂ ನೋಡುವದಕ್ಕೋ ಸ್ಕರ ಹೊರಟು ಕಾಶೀಪಟ್ಟಣಕ್ಕೆ ಬಂದನು ಎಂದು ಕುಮಾರಸ್ವಾಮಿ ಹೇಳಲಾಗಿ, ಅಗಸ್ತ್ಯನಿಂತೆಂದನು. ಎಲೈ ಕುಮಾರಸ್ವಾಮಿ! ಹಿಮವಂ ತಕನು ಮಗಳಿಗೆ ಏನಕೊಂಡುಹೋದನು ಎನಲು ಕುಮಾರಸ್ವಾಮಿ ಇಂತೆಂದನು. ಕೇಳೈ ಅಗಸ್ತ್ಯನೆ ಸಕಲವಾದ ಮುತ್ತು, ನವರತ್ನಸರ್ವಾ ಭರಣ ದಿವ್ಯವಸ್ತ್ರ, ಗಂಧ,ಕಸ್ತೂರಿ ಮೊದಲಾದ ದಿವ್ಯ ವಸ್ತುವಂ ಕೊಂ ಡುಹೋದನು ಎನಲು, ಎಲೈ ಕುಮಾರಸ್ವಾಮಿ ! ಕೊಂಡುಹೋದ ಬಗೆ ಆವಾವು ಬಗೆಗೆ ಎಷ್ಟು ರತ್ನಂಗಳು ಮಿಕ್ಕಾದ ವಸ್ತುಗಳೇನು ಎಂಬ ಇವಂ ತನಗೆ ಬುದ್ಧಿಗಲಿಸಬೇಕೆನಲು ಕುಮಾರಸ್ವಾಮಿಯಾದ ಷಣ್ಮುಖ ನಿಂತೆಂದನು. ಕೇಳೈ ಅಗಸ್ತ್ಯನೆ, ರತ್ನಂಗಳಾವವು ಅವು ಎಷ್ಟೆಷ್ಟು ಎಂದು ಕೇಳಿದೆಯಲ್ಲಾ ಅದರ ವಿವರವನ್ನೂ ಹೇಳುವೆನು ಕೇಳು, ಒಂದು ತೊಲೆ ಎನಲು ನೂರುಹಲ ಲೆಖ್ಖದಲ್ಲಿ ಮುತ್ತಿನ ಮಣಿ ನೂರುತೊಲೆ, ಆರು ಅಂಚುಗಳುಳ್ಳ ವಜ್ರದ ಮಣಿಗಳು ಒಂಭತ್ತು ಲಕ್ಷವು, ಎಂಟನೂ ರುತೊಲೆ ವೈಡೂರ್ಯಗಳು, ಎರಡು ಲಕ್ಷ ತೊಲೆ ಪದ್ಮರಾಗ, ಐನೂರು

ಕೋಟಿ ತೊಲಿ ಪುಷ್ಯರಾಗ, ಒಂಭತ್ತು ಲಕ್ಷ ತೊಲಿ ಗರುಡಪಚ್ಚೆ ಮಣಿ,
ಮೂವತ್ತು ಸಾವಿರ ತೊಲಿ ಹವಳವು. ಎಂಭತ್ತು ಕೋಟಿ ತೊಲಿ ಶಿರಸ್ಸು
ಕರ್ಣ ನಾಸಿಕ ಭುಜ ಕಂಠ ಹಸ್ತ. ಈ ನಡುವು ಪಾದಂಗಳೆಂಬ
ಎಂಟು ಸ್ಥಾನಂಗಳಲ್ಲಿ ಧರಿಸುವ ಆಭರಣಂಗಳು ಸಂಖ್ಯೆಯಿಲ್ಲ, ಮತ್ತು
ವಿಚಿತ್ರವಾದ ನಾನಾವಸ್ತುಗಳೂ, ವಸ್ತ್ರಂಗಳೂ, ಬಿಳಿಯಚುಳ್ಳರಿ, ಚವು
ರಿ, ಕರ್ಪೂರ, ಕಸ್ತೂರಿ, ಜವಾಜಿ, ಪುಣುಗು ಭಾವನ್ನ ಮುಖ್ಯ ಕರ್ಪೂ
ಮೊದಲಾದ ಪರಿಮಳದ್ರವ್ಯಂಗಳು, ಸುವರ್ಣ ರಜತ ಮೊದಲಾದ ವಸ್ತು
ವ್ವೂ, ಭೃತ್ಯರೂ, ದಾಸಿಯರೂ ಮೊದಲಾದ ಅನಂತಾನಂತಸಂಖ್ಯೆಗಳನ್ನು
ಹೊರಿಸಿಕೊಂಡು ಕಾಶೀಪಟ್ಟಣಕ್ಕೆ ಹೋಗಿ, ಆ ಪಟ್ಟಣದ ಸಮೀಪದ
ವರುಣಾನದೀತೀರದಲ್ಲಿ ನಿಂತು ದೂರದಿಂದಲೇ ಕಾಶೀಪಟ್ಟಣದ ವಿಸ್ತಾರ
ವೈಭವವಂ ನೋಡಲು, ಗಿರಿರಾಜನಕಣ್ಣಿಗೆ ಪಟ್ಟಣವೆಂತೆಸೆದುದೆನೆ? ಅಪರಿ
ಮಿತ ರತ್ನಸೌಧಂಗಳಿಂರಚಿಸಲ್ಪಟ್ಟ ರೂಪುವಕ್ಷಣವಂ ಮಾಳ್ಪ ಸೂ
ರ್ಯಕಿರಣಂಗಳನ್ನತಿಕ್ರಮಿಸಿದ ಉಪ್ಪರಿಗೆಯ ಸಾಲ್ಗಳಿಂ, ಆ ಉಪ್ಪರಿಗೆಗಳ
ಲ್ಲಿ ಸ್ಥಾಪಿಸಿದ ನಾನಾರತ್ನಕಾಂತಿಗಳಿಂ ದಿಕ್ಕುಗಳಲ್ಲಿ ಪ್ರಕಾಶವಾಗುತ್ತಾ
ಇದ್ದಂಥಾ ಅರಮನೆಗಳ ಶಿಖರಂಗಳಲ್ಲಿ ಅಲಂಕರಿಸಿದ ಸುವರ್ಣ ಕಲಶಗಳ
ಪ್ರಭೆಗಳಿಂ ದಿಗಂತಳಲ್ಲಿ ಪ್ರಕಾಶವಾಗುತ್ತಾ ಇದ್ದಂಥಾ ಅನೇಕ ವಿಚಿತ್ರ
ಧ್ವಜಪಟಂಗಳಿಂದ ಸ್ವರ್ಗವಂ ಜರಿವುತ್ತಿದ್ದಂಥಾ ಅಷ್ಟಮಹಾಸಿದ್ಧಿಗಳಿಗೆ
ಕ್ರೀಡಾಸ್ಥಾನವಾದ ಕಲ್ಪವೃಕ್ಷಂಗಳಂ ತಿರಸ್ಕರಿಸುವ ಫಲವೃಕ್ಷಂಗಳಿಂ
ಚೆತುವ ಶಿಭುವನದವರಿಗೂ ಬಳಲಿಕೆಯಂ ಪರಿಹರಿಸುವ ಮುಕ್ತಿಯುಳ್ಳೀ
ವಂಥಾ ಕಾಶೀಪಟ್ಟಣದ ಸೌಭಾಗ್ಯವಂ ನೋಡಿ, ಗಿರಿರಾಜನು ತನ್ನಮನ
ದಲ್ಲಿನಾಚಿ ತನ್ನೊಳಂತೆಂದನು-ಈ ಪಟ್ಟಣದಲ್ಲಿಹ ಉಪ್ಪರಿಗೆಗಳಲ್ಲಿ, ರಾಜ
ಬೀದಿಗಳಲ್ಲಿ, ಕೋಟೆಗಳಲ್ಲಿ, ಮನೆಗಳಲ್ಲಿ, ಪುರದ್ವಾರ, ಕವಾಟ, ಧಾರುಬಂ
ಧವಸ್ತು ದೇವತಾಮಂದಿರಗಳಲ್ಲಿ, ಗೋಪುರಗಳಲ್ಲಿ, ಸ್ಥಾಪಿಸಿದ ನಾನಾವಿಧ
ರತ್ನಂಗಳ ಕಾಂತಿಗಳಿಂದ ಈ ಭೂಮಿ ಆಕಾಶಗಳೆಂಬ ಭೇದವಂ ಕಾಣೆನು.
ಇಂಥಾ ಐಶ್ವರ್ಯವು ಕುಬೇರನಲ್ಲಿಯೂ ಇಲ್ಲ, ಈ ಪಟ್ಟಣವಂಥ ವೈಭ
ವವು ವೈಕುಂಠದಲ್ಲಿಯೂ ಇಲ್ಲ, ಇಂಥಾ ಐಶ್ವರ್ಯ ಮಿಕ್ಕಾದವರಿಗೆ ಎಲ್ಲಿ

ಯದು ! ಇಂತೆಂದು ಗಿರಿರಾಜನು ತನ್ನ ಮನಸಿನಲ್ಲಿ ಆಲೋಚನೆಯಂ ಮಾಡಲು, ಅನಿತರೊಳು ಒಬ್ಬ ಶಿವಭಕ್ತನು ಜಟಾಧಾರಿಯಾಗಿ ಬರಲು, ಆತನಂ ಕಂಡು, ಬಹುಮಾನದಿಂದ ಆ ಶಿವಭಕ್ತನೊಡನೆ ಇಂತೆಂದನು. ಎಲೈ ಶಿವಭಕ್ತ ? ನೀವು ಬನ್ನಿ ಕುಳ್ಳಿರಿ, ಎಲ್ಲಿಂದ ಬಂದಿರಿ. ಈ ಪಟ್ಟಣದ ವೃತ್ತಾಂತವೇನು ? ಈ ಪಟ್ಟಣಕ್ಕೆ ಧೊರೆಯಾರು ; ಆ ಧೊರೆಯ ಚರಿತ್ರೆಯೇನು ? ನೀವು ಬಲ್ಲದುಂಟಾದರೆ ಹೇಳಿ ಎನಲು, ಆ ಶಿವಭಕ್ತನು ಗಿರಿರಾಜನಿಂತೆಂದನು. ಎಲೈ ಗಿರಿರಾಜೇಂದ್ರನೆ ಕೇಳು ? ದಿವೋದಾಸರಾಯನು ದಿವ್ಯವಿಮಾನದಿಂದ ಸಾಂಬಲೋಕವನೈದಲು, ಮಂದರಾದ್ರಿಯಿಂದ ಪರಮೇಶ್ವರನು ಬಂದು ಈ ಪಟ್ಟಣಪ್ರವೇಶವಾಗಿ ಐದಾರು ದಿವಸವಾಯಿತು; ಸಕಲ ಲೋಕಾಧಾರನಾದ, ಸಕಲ ಸಾಕ್ಷಿಯಾದ, ಸಕಲವಸ್ತುಪ್ರಕಾಶಕನಾದ, ಸಮಸ್ತಜೀವಸ್ವರೂಪನಾದ, ಪರಮೇಶ್ವರನು ಈ ಪಟ್ಟಣಕ್ಕೆ ಧೊರೆಯಾಗಿ ಇದ್ದಾನೆ. ಈ ವೃತ್ತಾಂತವಂ ನೀನು ತಿಳಿಯದಿಲ್ಲವೆ ? ನೀನು ಪಾಷಾಣರೂಪವಾಗಿ ಕಠಿನಹೃದಯನಾದಕಾರಣ ಈ ಪಟ್ಟಣಕ್ಕೆ ಗಿರಿಜಾರಮಣನಾದ ಪರಮೇಶ್ವರನು ವಿಲಾಸದಿಂದಿರುವವಂ ನಾನುಬಲ್ಲೆನು ಅದಂತಿರೆ—ಈ ಜಗತ್ತೆಲ್ಲವೂ ಪರಮೇಶ್ವರನವಿಲಾಸವು, ಪರಮೇಶ್ವರನೇ ಈ ಪಟ್ಟಣಕ್ಕೊಡೆಯನು, ಈಗ ಏನಾದರೂ ಅಪೂರ್ವವುಂಟೆ ಎಂದು ಪೇಳಿದೆಯಲ್ಲಾ ಆದರೆ ಹೇಳೇನು—ಎಂದು ಶಿವಭಕ್ತನಿಂತೆಂದನು. ಕೇಳೈ ಗಿರಿರಾಜನೆ ? ಈಗ ಪರಮಪವಿತ್ರವಾದ ಜ್ಯೇಷ್ಠಸ್ಥಾನದಲ್ಲಿ ಗಿರಿಜಾರಮಣನಾದ ಪರಮೇಶ್ವರನು ಆನಂದದಿಂದ ಇದ್ದನು ಎಂದು ನುಡಿಯಲು, ಗಿರಿರಾಜನು ಆವಾಗ ಶಿವಭಕ್ತನು ಗಿರಿಜೆ ಎಂದು ನುಡಿದ ಅಮೃತಮಯವಾದ ಅಕ್ಷರಗಳುಳ್ಳ ವಾಕ್ಯವಂ ಕೇಳಿ, ಪುಳಕಿತದೇಹದಿಂ ಸಂತೋಷಪಟ್ಟನು ಕೇಳೈ ಅಗಸ್ತ್ಯನೆ, ಲೋಕದಲ್ಲಿ ಆರು ಉಮೆಯೆಂಬ ನಾಮಾಮೃತಪಾನವ ಮಾಡಿದವರು ಮರಳಿ ತಾಯಿಮೊಲೆಹಾಲನುಣ್ಣರು, ಚಿತ್ರಗುಪ್ತಾದಿಗಳು ಅವರ ಪಾಪಮಂ ಸ್ಮರಿಸಲರಿಯರೂ ಎಂದು ಕುಮಾರಸ್ವಾಮಿ ಮತ್ತಿಂತೆಂದನು. ಕೇಳೈ ಅಗಸ್ತ್ಯನೆ, ಹಿಮವಂತನು ತನ್ನ ಕುಮಾರ್ತಿಯಾದ ಪಾರ್ವತೀದೇವಿಯು ಪ್ರೇಮದಿಂದಲೂ, ಪರಮೇಶ್ವರನ ಯೋಗಕ್ಷೇ

ಮುವನ್ನು ಮತ್ತೆಮತ್ತೆ ಶಿವಭಕ್ತನಿಂದ ಕೇಳಿ ಸಂತೋಷಪಡುತ್ತಿರಲು, ಆ ಶಿವಭಕ್ತನಿಂತೆಂದನು. ಕೇಳೈ ಗಿರಿರಾಜನೆ! ಈಗ ವಿಶ್ವನಾಥನಿಗೋಸ್ಕರ ವಿಶ್ವಕರ್ಮನಿಂದ ಒಂದು ಉಪ್ಪರಿಗೆಯು ನಿರ್ಮಿಸಲ್ಪಟ್ಟಿತು. ಅದೆಂತೆನೆ— ಚಂದ್ರಕಾಂತಶಿಲೆಗಳ ಜಗತಿ, ಅನೇಕಕೋಟಿ ವಿಚಿತ್ರಮಯವಾದ ರತ್ನಸ್ತಂಭಗಳು, ಪದ್ಮರಾಗ ಇಂದ್ರನೀಲಮಣಿಮಯವಾದ ಜಾಲರಂಧ್ರಗಳ ಅಹೋರಾತ್ರವೂ ರತ್ನದೀಪ್ತಿಗಳಿಂ ಪ್ರಕಾಶಮಾನವಾಗಿ ಸ್ಫಟಿಕದ ಬತ್ತಿಗಳಲ್ಲಿ ನಾನಾವಿಧ ಬಣ್ಣಗಳಿಂ ರಚಿಸಲ್ಪಟ್ಟ ಚಿತ್ರಮ್ತರಂಗಳಿಂ ನವರತ್ನಮಯವಾದಂಥಾ ಅವಿಮುಕ್ತಕ್ಷೇತ್ರಲಕ್ಷ್ಮಿ ಅಂಕುರಗಳಂತೆಸೆವ ಕಂಭಗಳ ಸಾಲುಗಳಿಂ ಒಪ್ಪುತ್ತಿಹ ಉಪ್ಪರಿಗೆಗೆ ಗಣಂಗಳು ನಾನಾಸಮುದ್ರಂಗಳಿಂದಲೂ ಪರ್ವತಾಕಾರವಾದ ನವರತ್ನರಾಶಿಗಳಿಂ ತಂದರು, ಪಾತಾಳದಿಂ ನಾಗಗಳು ದಿವ್ಯರತ್ನಂಗಳಿಂ ತಂದು ಸಮರ್ಪಿಸಿದರು, ಶಿವಭಕ್ತನಾದ ರಾವಣೇಶ್ವರನು ತನ್ನ ಪಟ್ಟಣವಾದ ಲಂಕಾಪುರಿಯಿಂದ ಚಿತ್ರಕೂಟಾದ್ರಿಯಿಂದಲೂ ಅಪರಿಮಿತವಾದ ಚಿನ್ನದ ಶಿಖರಗಳಿಂ ತರಿಸಿ ಕಳುಹಿಸಿದನು. ಉಪ್ಪರಿಗೆಯಂ ಕಟ್ಟುವವಂ ಕೇಳಿ ಸಪ್ತದ್ವೀಪಾಂತರದವರೂ ತಂದ ರತ್ನಂಗಳಿಗೆ ಮಿತಿಯಿಲ್ಲ, ಇವಲ್ಲದೆ ಈ ಉಪ್ಪರಿಗೆಯಂ ನಿರ್ಮಿಸುವ ವಿಶ್ವಕರ್ಮಂಗೆ ಚಿಂತಾಮಣಿಯು ತಾನೆ ನಾನಾರತ್ನಮಣಿಗಳಿಂ ಒದಗಿಸಿಕೊಡುತ್ತಿಹುದು, ಕಲ್ಪವೃಕ್ಷವೂ ನಾನಾರತ್ನ ಧ್ವಜಪಟಂಗಳ ನೀವುದು, ಆ ಉಪ್ಪರಿಗೆಯಲ್ಲಿ ಸಮುದ್ರಗಳು ಪ್ರತಿದಿನವೂ ಪಂಚಾಮೃತಾಭಿಷೇಕವ ಮಾಡುತ್ತಿಹವು. ಮಲಯಾಚಲವು ತನ್ನಲ್ಲಿ ಇದ್ದ ಶ್ರೀಗಂಧವಂ ಸಮರ್ಪಿಸುತ್ತಿಹವು, ಕರ್ಪೂರವಾಳಿಗಳು ಕರ್ಪೂರವಂ ತಂದು ಕೊಡುತ್ತಿಹವು. ಇವು ಮೊದಲಾದ ಅಪೂರ್ವಗಳು ಪರಮೇಶ್ವರಗೆ ಸಮರ್ಪಿಸಿದ ಉಪ್ಪರಿಗೆಯಲ್ಲಿ ಇಹವು. ಅಂಥಾ ಮಹದೈಶ್ವರ್ಯವುಳ್ಳ ಉಮಾಕಾಂತನಾದ ಪರಮೇಶ್ವರನ ಅರಿತುದಿಲ್ಲವಲ್ಲಾ ಎಂದು ನುಡಿದ ಶಿವಭಕ್ತನ ವಾಕ್ಯವಂ ಕೇಳಿ, ಗಿರಿರಾಜನು ಮನದಲ್ಲಿ ನಾಚಿ ಆ ಶಿವಭಕ್ತಗೆ ಉಡುಗೊರೆಯಂ ಕೊಟ್ಟು ಕಳುಹಿ ಆ ಶಿವಭಕ್ತ ಹೇಳಿದ ಕಾಶೀಪಟ್ಟಣದ ವೈಭವವಂ ನೋಡಿ, ತನ್ನಮನದಲ್ಲಿ ಚಿಂತೆಗೊಳುತ ತನ್ನೊಳಗಿಂತೆಂದನು. ಈಗ ತಾನು ಬಂದ ಪ್ರಯೋಜನ

ಮಗಳ ನೋಡುವವಕ್ಕಾಗಿಯಷ್ಟೆ? ಪಾರ್ವತೀದೇವಿಯು ಸುಖದಲ್ಲಿಇದ್ದಾಳು ಎಂಬ ಶುಭವಾರ್ತೆಯಂ ಕೇಳಿದೆನು. ಅಳಿಯಗೆ ಮಹದೈಶ್ವರ್ಯವುಂಟೆಂಬುದ ಕೇಳಿದೆನು, ಕಂಡೆನು ಎನ್ನ ಅಳಿಯನ ಐಶ್ವರ್ಯವಮುಂದೆ ಎನ್ನ ಐಶ್ವರ್ಯವೇನು ಇದ್ದೀತು. ಪೂರ್ವದಲ್ಲಿ ಈತಂಗೆ ಒಂದು ಮುದಿಯೆತ್ತಿನ ಮಾತ್ರವೆ ಸಂಪತ್ತು. ಸರ್ವ ಕಾಮ ಹಿತನೂ, ಈತನ ಅರಿತವನೊಬ್ಬನೂ ಇಲ್ಲಾ, ಮತ್ತೊಬ್ಬರ ಹಿತವೂ ಇಲ್ಲಾ, ಆವನೇಕವೆಂದು ಅರಿಯೆವು, ಆಚಾರವೆಂಥಾದ್ದೆಂಬುದು ಅರಿಯೆವು, ಹೆಸರು ಮಾತ್ರ ಈಶ್ವರನಲ್ಲದೆ ಐಶ್ವರ್ಯಸೂಚಕವೇನೂ ಇಲ್ಲವಂಥಾ ಆತನು ಈಗ ಎಲ್ಲರಿಗೂ ಮೋಕ್ಷವ ಕೊಡುತ್ತಿದ್ದಾನು, ಇದು ಮಹದೈಶ್ವರ್ಯ. ಸುಖವಾಗಿ ಸಕಲ ಕರ್ಮಫಲಂಗಳಂ ಕೊಡುತ್ತಿದ್ದಾನು. ವೇದವೇದ್ಯನು, ಸರ್ವಜ್ಞನೂ, ಈ ಸಕಲ ಲೋಕವೂ ತನ್ನ ಸಂತಾನ, ಸಕಲ ದೇವರ್ಗಳೂ ಈತನವು, ಸಕಲ ಪ್ರಾಣಿಗಳನ್ನು ರಕ್ಷಿಸಿಕೊಂಡು ಸಕಲ ದೇಶಕ್ಕೂ ಒಡೆಯನಾದವನೂ ಎಂದು ಆತನ ಶರೀರವೇ ಹೇಳುತ್ತಿದ್ದೀತು, ಈತನೇ ಪರಮೇಶ್ವರನಷ್ಟೆ, ಸಕಲರಿಗೂ ತಾನೇ ಕೊಡುವನು, ಸರ್ವೋತ್ತಮಗುಣಗಳಿಗೆ ಆಧಾರವಾದವನು, ಗುಣಾತೀತನು, ಪರಾತ್ಪರನು, ತಾನು ಬೆಟ್ಟಗಳಿಗೆ ಮಾತ್ರ ನಾಥನು, ಈ ಉಮಾಪತಿಯು ವಿಶ್ವನಾಥನು, ತಾನು ಅಲ್ಪವಾದ ಐಶ್ವರ್ಯವುಳ್ಳವನು, ಈತನ ಐಶ್ವರ್ಯಕ್ಕೆ ಗಣನೆಯಿಲ್ಲ, ಆದುಕಾರಣ ತಾನು ಆ ಮಹಾತ್ಮನಂ ನೋಡತಕ್ಕಶಕ್ತನಲ್ಲ, ನೋಡಿದರೂ ಪ್ರಸಿದ್ಧಿಗೆಬಾರೆನು. ಹೀಗೆಂದು ವಿಚಾರಿಸಿಕೊಂಡು ತನ್ನ ಸಂಗಡ ಬಂದ ಪರ್ವತಂಗಳೆಲ್ಲವನ್ನೂ ಕರೆದು ನೀವೆಲ್ಲರೂ ಸೂರ್ಯೋದಯವಾಗುವವಕ್ಕೆ ಮೊದಲೇ ಒಂದು ಘನವಾದ ಗುಡಿಯಂ ವಿಶ್ವಕರ್ಮನಂ ಕರದುತಂದು ಕಟ್ಟವರೆ ತಾನು ಕೃತಾರ್ಥನಾದೇನು ಎಂದು ನುಡಿದು ಇಂತೆಂದನು.— ಎಲೈ ಪರ್ವತಗಳಿರಾ ? ಈ ಕಾಶಿಯಲ್ಲಿ ಒಂದು ಶಿವಾಲಯವಂ ಕಟ್ಟಿಸಿದವರು ಈ ಮೂರುಲೋಕವಂ ತನ್ನ ಮನೆಯಾಗಿ ಕಟ್ಟಿದವರಹರು, ಶಾಸ್ತ್ರೋಕ್ತದಿಂದ ಷೋಡಶಮಹಾದಾನವಂ ಮಾಡಿದವರಹರು, ಸುಕ್ಷೇತ್ರದಲ್ಲಿ ಪುರುಷ ನೆರವಂತೆ ವಿಶ್ವಾಸಪೂರ್ವಕವಾಗಿ ಧರ್ಮವಿತ್ತದಿಂ ಒಂದು ಶಿವಾಲಯವಂ ಕಟ್ಟಿಸಿದವರು ಈ ಮೂರು

ಲೋಕವುಂ ತನ್ನ ಮನೆಯಾಗಿ ಕಟ್ಟಿದವರಹರು, ಶಾಸ್ತ್ರಕ್ರಮದಿಂದ ಷೋಡಶಮಹಾದಾನವಂ ಮಾಡಿದವರಹರು, ಸುಕ್ಷೇತ್ರದಲ್ಲಿ ಪುರನಮನೆಯಲ್ಲಿ ಶ್ರೀ ಮಹಾಲಕ್ಷ್ಮಿ ನಿತ್ಯವಾಗಿ ಇಹಳು, ತರಗೆಲೆಯ ಆಹಾರವಂ ಮಾಡಿಕೊಂಡು ಉಗ್ರತಪವಂ ಮಾಡಿದವನಹನು, ಸಕಲ ಮಹಾಯಜ್ಞಂಗಳ ಮಾಡಿದವನಹನು. ಹೀಗೆಂದು ಪೇಳಿದ ಗಿರಿರಾಜನ ವಾಕ್ಯವಂ ಕೇಳಿ, ಪರ್ವತಗಳೆಲ್ಲರೂ ಸೂರ್ಯವುದಯಕ್ಕೆ ಮೊದಲೇ ಮಹಾ ಶಿವಾಲಯವ ನಿರ್ಮಿಸಲು, ಮೇನಕಾರಮಣನಾದ ಗಿರಿರಾಜನು ಆ ಶಿವಾಲಯದಲ್ಲಿ ಶೈಲೇಶ್ವರನೆಂಬ ಈಶ್ವರನ ಪ್ರತಿಷ್ಠೆಯಂ ಮಾಡಿ, ಚಂದ್ರಕಾಂತದ ಶಿಲಾಮಂಟಪದಲ್ಲಿ ತನ್ನ ಹೆಸರ ವಿಳಾಸವಂ ಬರಯಿಸಿ ಅರುಣೋದಯದಲ್ಲಿ ಎದ್ದು ಪಂಚನದೀತೀರ್ಥದಲ್ಲಿ ಸ್ನಾನವಂ ಮಾಡಿ, ಆ ಶೈಲೇಶ್ವರನಂ ಪೂಜಿಸಿ ನಮಸ್ಕಾರವಂ ಮಾಡಿ, ತಾನು ತಂದ ಸಕಲ ರತ್ನಗಳನ್ನು ಆ ಲಿಂಗದ ಮುಂದೆ ರಾಶಿಯಂ ಸುರಿದು ಸೂರ್ಯ್ಯೋದಯಕ್ಕೆ ಮೊದಲೇ ಗಿರಿರಾಜನು ತನ್ನ ನಿವಾಸಕ್ಕೆ ಪೋದನು. ಸೂರ್ಯ್ಯವುದಯವಾದ ಬಳಿಕ ಹುಂಡಮುಂಡರೆಂಬ ಗಣಂಗಳು ಬಂದು ಚಂದ್ರಕಾಂತ ಶಿಲಾಮಯವಾದ ಶಿವಾಲಯವಂ ನವರತ್ನಖಚಿತವಾದ ಉಪ್ಪರಿಗೆಯನ್ನು ಕಂಡು, ಆಶ್ಚರ್ಯ್ಯಪಟ್ಟು ಪರಮೇಶ್ವರಗೆ ಬಿನ್ನಹವ ಮಾಡಬೇಕೆಂದು ಬಂದು ಅಂತಃಪುರಕ್ಕೆ ಪೋಗಿ ಅಲ್ಲಿ ಪಾರ್ವತೀದೇವಿಯರು ಪಿಡಿದಿದ್ದ ಕನ್ನಡಿಯಂ ನೋಡಿಕೊಂಬ ಪರಮೇಶ್ವರನಂ ಕಂಡು ಸಾಷ್ಟಾಂಗನಮಸ್ಕಾರವಂ ಮಾಡಿ ಕೈಮುಗಿದು, ಇಂತೆಂದು ಬಿನ್ನೈಸಿದನು. ಎಲೈ ಸ್ವಾಮಿಯೆ! ವರುಣಾತೀರದಲ್ಲಿ ಚಂದ್ರಕಾಂತಶಿಲೆಯಲ್ಲಿ ನಿರ್ಮಿಸಿದ ಶಿವಾಲಯ ಉಪ್ಪರಿಗೆಯುಂ ನಿನ್ನೆ ಸಾಯಂಕಾಲದೊಳಗಾಗಿ ಕಂಡುದಿಲ್ಲ, ಇಂದು ಪ್ರಾತಃಕಾಲದಲ್ಲಿಯೇ ಕಂಡೆವೆಂದು ಬಿನ್ನೈಸಿದ ಗಣಂಗಳ ವಾಕ್ಯವಂ ಕೇಳಿ, ಸಕಲವೃತ್ತಾಂತವುಂ ಬಲ್ಲ ಸರ್ವಜ್ಞನಾದ ಪರಮೇಶ್ವರನು ಗಿರಿರಾಜ ಮಾಡಿದ ವೃತ್ತಾಂತವುಂ ತಿಳಿದೂ ತಿಳಿಯದವನಂತೆ ಪಾರ್ವತೀದೇವಿಯರಿಗಿಂತೆಂದನು—ಎಲೈ ದೇವಿ, ನಾವಿಬ್ಬರೂ ಆ ಉಪ್ಪರಿಗೆಯಂ ನೋಡಿ ಬರಬೇಕೆಂದು ರಥಾರೂಢರಾಗಿ ಗಣಂಗಳು ಸಹಾ ವರುಣಾನದೀತೀರಕ್ಕೆ ಬಂದು ರಮ್ಯವಾದ ಉಪ್ಪರಿಗೆ

ಯನ್ನೂ ಶಿವಾಲಯವಂ ನೋಡಿ, ಈ ಉಪ್ಪರಿಗೆಯೂ, ಈ ಗುಡಿಯೂ ಒಂದು ರಾತ್ರಿಯಲ್ಲಿಯೇ ನಿರ್ಮಿಸಲ್ಪಟ್ಟದ್ದು ಮಹಾಚಿತ್ರವಾಯಿತು ಎಂದು ದೇವಿಯರಿಗೆ ತೋರಿಸುತ್ತಾ ರಥದಿಂದಿಳಿದು ಗರ್ಭಾಗಾರವಂ ಪ್ರೊಕ್ಕು, ಅಲ್ಲಿ ಚಂದ್ರಕಾಂತ ಶಿಲಾಮಯಲಿಂಗವಂ ನೋಡಿ, ಈ ಅಪೂರ್ವವಾದ ಗುಡಿಯಂ ಕಟ್ಟಿಸಿದವರಾರು ಎಂದು ನುಡಿಯುತ್ತಾ ನೋಡುವನಿತರೊಳು ಚಂದ್ರಕಾಂತದ ಶಿಲೆಯ ಗೋಡೆಯಲ್ಲಿ ಬರದುಯಿರ್ದ ವಿಲಾಸವಂ ಕಂಡು ಓದಿಕೊಂಡು ಪಾರ್ವತಿಯೊಡನೆ ಇಂತೆಂದನು—ಎಲೈ ದೇವಿ! ಇದು ನಿಮ್ಮ ತಂದೆ ಗಿರಿರಾಜ ಕಟ್ಟಿಸಿದ ಗುಡಿಯು ಇದನೋಡೆನಲು, ಪಾರ್ವತೀ ದೇವಿ ನೋಡಿ ಸಂತೋಷದಿಂ ಪುಳುಕಿತದೇಹಿಯಾಗಿ ಪರಮೇಶ್ವರಗೆ ನಮಸ್ಕರಿಸಿ, ಇಂತೆಂದು ಬಿನ್ನೈಸಿದಳು.— ಎಲೈ ಸ್ವಾಮಿ! ಈ ಲಿಂಗದಲ್ಲಿ ನಿತ್ಯವೂ ವಾಸವಾಗಿ ನೀವು ಇರಬೇಕು. ಈ ಲಿಂಗವ ಪೂಜಿಸಿದವರ್ಗೆ ಮಹದೈಶ್ವರ್ಯವಂ ಕೊಡಬೇಕೆನಲು, ಪರಮೇಶ್ವರನು ಹಾಗೇ ಆಗಲಿಯೆಂದು ಬುದ್ಧಿಗಲಿಸಿ ಮತ್ತಿಂತೆಂದನು. ಆವನಾನೊಬ್ಬನು ವರುಣಾನದಿಯಲ್ಲಿ ಸ್ನಾನವಂ ಮಾಡಿ, ಈ ಶೈಲೇಶ್ವರನಂ ಪೂಜಿಸಲು, ಪುನರ್ಜನ್ಮವಿಲ್ಲ. ಈ ಲಿಂಗದಲ್ಲಿ ತಾನು ನಿತ್ಯವಾಸವಾಗಿರ್ದು ಪೂಜಿಸಿದವರ್ಗೆ ಇಷ್ಟಾರ್ಥವಂ ಕೊಡುವೆನು, ಈ ಲಿಂಗವಂ ನೋಡಿದವರ್ಗೆ ಆಧ್ಯಾತ್ಮಿಕ ಮೊದಲಾದ ದುಃಖವಿಲ್ಲವೆಂದು ಪರಮೇಶ್ವರನು ಪೇಳಲು, ಪಾರ್ವತೀದೇವಿಯು ಆರು ಈ ಲಿಂಗವಂ ಪೂಜಿಪರೋ ಅವರು ಎನ್ನ ಮಕ್ಕಳಿಗಿಂತಾ ವಿಶೇಷವೆಂದು ಹೇಳಿದಳು ಎಂದು ಕುಮಾರಸ್ವಾಮಿ ಇಂತೆಂದನು.— ಕೇಳೈ ಅಗಸ್ತ್ಯನೆ? ವಿಶ್ವೇಶ್ವರನ ಮಾಹಾತ್ಮೆಯನು ಕೇಳಿದವರು ಪಾಪವೆಂಬ ಕಡಲದಾಂಟಿ ಶಿವಲೋಕವನೈದುವರು. ಇನ್ನು ರತ್ನೇಶ್ವರನ ಉತ್ಪತ್ತಿಯಂ ಪೇಳೇನು ಕೇಳು ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವನ್ನು ವ್ಯಾಸರು ತನಗರುಹಿದರೆಂದು ಸೂತಪುರಾಣೀಕನು ಶೌನಕಾದಿಯಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ. * *

ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀ ಕೃಷ್ಣರಾಜವಡೆಯರವರು ಲೋಕೋ

ಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಶೈಲೇಶ್ವರನ ಪ್ರಸಂಗವೆಂಬ ಅರವತ್ತಾರನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ. * *

ಅರವತ್ತೇಳನೆ ಅಧ್ಯಾಯ ರತ್ನೇಶ್ವರನ ಪ್ರಸಂಗ.

ಶ್ರೀ ವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ಅಗಸ್ತ್ಯನಿಂತೆಂದನು.— ಎಲೈ ಕುಮಾರಸ್ವಾಮಿ? ಈ ಕಾಶೀಸ್ಥಳದಲ್ಲಿ ರತ್ನೇಶ್ವರನಂ ಪ್ರತಿಷ್ಠೆಯಂ ಮಾಡಿದವರ್ಯಾರು, ರತ್ನೇಶ್ವರನ ಉತ್ಪತ್ತಿಯೇನು? ಈ ವೃತ್ತಾಂತಮಂ ವಿವರಿಸಬೇಕೆಂದು ಅಗಸ್ತ್ಯನು ಬಿನ್ನವಿಸಲು, ಕೇಳಿ ಕುಮಾರಸ್ವಾಮಿ ಇಂತೆಂದನು.— ಕೇಳೈ ಅಗಸ್ತ್ಯಋಷಿಯೆ! ಜನ್ಮತ್ರಯದ ಪಾಪವಂ ಪರಿಹರಿಪ ರತ್ನೇಶ್ವರನ ಉತ್ಪತ್ತಿಯಂ ಹೇಳುತ್ತಾ ಇದ್ದೇನೆ. ಗಿರಿರಾಜನು ತಂದು ಗುಡ್ಡೆಯಾಗಿ ಇರಿಸಿದ ರತ್ನರಾಸಿ ಲಿಂಗರೂಪಾಗಿ ಕಾಲಭೈರವನ ಉತ್ತರದಲ್ಲಿ ಇಂದ್ರಚಾಪದಂತೆ ಪ್ರಕಾಶವಾಗಿರುವಂಥಾ ರತ್ನೇಶ್ವರನ ಸಂದರ್ಶನಮಾತ್ರದಿಂದ ಜ್ಞಾನವೆಂಬ ರತ್ನದೊರಕೊಂಬದೋ ಅಂಥಾ ರತ್ನೇಶ್ವರನ ಉತ್ಪತ್ತಿಯಂ ಪೇಳೇನು ಕೇಳು.- ಅನಂತರದಲ್ಲಿ ಪಾರ್ವತೀದೇವಿಯು ಪರಮೇಶ್ವರನಿಂದ ಶೈಲೇಶ್ವರನ ಮಹಿಮೆಯಂ ಕೇಳಿ, ಮುಂದೆ ರತ್ನಮಯವಾಗಿ ಸ್ವಯಂ ವ್ಯಕ್ತವಾಗಿ ರತ್ನಗಳ ಪ್ರಕಾರದಿಂ ಆಕಾರವಪಡೆದ ಲಿಂಗವಂ ಕಂಡು ಪರಮೇಶ್ವರನಿಗೆ ಪಾರ್ವತೀದೇವಿ ಇಂತೆಂದು ಬಿನ್ನೈಸಿದಳು.— ಎಲೈ ದೇವದೇವನೆ, ಜಗನ್ನಾಥ, ಭಕ್ತಭಯಹರ. ಎಲೈ ಸ್ವಾಮಿ! ಸಪ್ತಪಾತಾಳಗಳಿಗೂ ಬೇರುವರಿದು ಇಹ ಈ ಲಿಂಗವೆಲ್ಲಿದು? ಕಾಂತಿಗಳಿಂದ ಆಕಾಶದಲ್ಲಿ ಸಂದಣಿಸಿ ದಿಗಂತಂಗಳ ಪ್ರಕಾಶವಮಾಡುತ್ತಾ ಇದ್ದೀತು, ಈ ಲಿಂಗವ ಹೆಸರು ಏನು ಸ್ವರೂಪವೇನು, ಪ್ರಭಾವವೇನು. ಈ ಲಿಂಗವನೋಡಿದಾಗಿನಿಂದಲೂ ಎನ್ನ ಮನಸ್ಸು ಮಹಾಸಂತೋಷವಾಗುತ್ತಾ ಇದ್ದೀತು, ಈ ಲಿಂಗದ ಮಹಿಮೆಯು ನಿರೂಪಿಸಬೇಕೆನಲು, ಪರಮೇಶ್ವರನಿಂತೆಂದನು.— ಎಲೈ ದೇವಿ, ಈ ಲಿಂಗವೆಲ್ಲಿದೆಂದು ಕೇಳದೆಯಲ್ಲಾ ಇದು ನಿನ್ನ ತಂದೆಯಾದ ಗಿರಿರಾ

ಜನು ನಿನಗೆ ಬಹು ರತ್ನಂಗಳಂ ತಂದು ಕೊಟ್ಟೆನು ಎಂದುಕೊಂಡು ಬಂದು ಕೊಡುವರೆ ಈ ದಿವ್ಯಕಾಂತಿಯಿಂದೊಪ್ಪುವ ಕಾಶೀಪಟ್ಟಣವಂ ಕಂಡು ನಾಚಿಕೊಂಡು ಇಲ್ಲಿ ರಾಶಿಯುಸುರಿಯಲಾಗಿ, ಅದು ರತ್ನಮಯ ಲಿಂಗವಾಯಿತು, ಅದರಿಂದ ರತ್ನೇಶ್ವರನೆಂಬ ಹೆಸರಾಯಿತು. ಆವನಾನೊಬ್ಬನು ಸ್ವಾರ್ಜಿತವಾಗಿ ಘಳಿಸಿದ ದ್ರವ್ಯವಂ ತಂದು ಭಕ್ತಿಯಿಂದ ಕಾಶಿಯಲ್ಲಿ ಧರ್ಮವಮಾಡಲು, ಈರೀತಿಯಲ್ಲಿ ಅಭಿವೃದ್ಧಿಯಹುದು. ಈ ಲಿಂಗವು ಸಾಕ್ಷಾತ್ತಾಗಿ ಎನ್ನಸ್ವರೂಪವು. ಈ ಕಾಶಿಯಲ್ಲಿರ್ದ ಲಿಂಗಗಳಿಗೆಲ್ಲಕ್ಕೂ ಇದು ಶಿರೋರತ್ನಮಯವಾದುದು. ಈ ಲಿಂಗವನ್ನು ಈ ಉಪ್ಪರಿಗೆ, ಈ ಗುಡಿ, ಈ ಶೈಲೇಶ್ವರ. ಇವೆಲ್ಲವನ್ನೂ ನಿನ್ನ ತಂದೆ ಹಿಮವಂತನು ನಿರ್ಮಿಸಿದನು. ಈ ಲಿಂಗವನೋಡಲು ಈ ಕಾಶಿಯಲ್ಲಿ ಲಿಂಗಪ್ರತಿಷ್ಠೆ, ಗುಡಿ, ಗೋಪುರಗಳ ಜೀರ್ಣೋದ್ಧಾರವ ಮಾಡಿದ ಫಲವುಂಟು. ಸಕಲ ಪ್ರಮಥಗಣಂಗಳನ್ನು ಪೂಜಿಸಿದ ಫಲವುಂಟು ಎಂದು ಪರಮೇಶ್ವರನು ನಿರೂಪಿಸಲು ಪಾರ್ವತೀದೇವಿ ಮತ್ತೂ ಪರಮೇಶ್ವರಗೆ ನಮಸ್ಕರಿಸಿ ಈ ರತ್ನೇಶ್ವರನಮಹಿಮೆಯಂ ನಿರೂಪಿಸಬೇಕೆನಲು, ಮಹಾದೇವನಿಂತೆಂದನು— ಎಲೈ ದೇವಿಯೆ ? ಈ ಅವಿಮುಕ್ತಕ್ಷೇತ್ರವೆಂಬ ಸ್ಥಾನದಲ್ಲಿ ಈ ಲಿಂಗವು ರತ್ನಮಯವಾಗಿ ಅನಾದಿ ಸಿದ್ಧವಾದವು, ನಿನ್ನ ತಂದೆ ಮಾಡಿದ ಪುಣ್ಯದಿಂದ ಪ್ರಕಟವಾಯಿತು. ಗೋಪ್ಯದಲ್ಲೂ ಗೋಪ್ಯವು, ಅತಿಗೋಪ್ಯವಾದ ರತ್ನವಂ ಮನುಷ್ಯನು ತನ್ನ ಮನೆಯಲ್ಲಿ ಬಚ್ಚಿಟ್ಟುಕೊಂಬಂತೆ ಕಲಿಯುಗದಲ್ಲಿ ಈ ಲಿಂಗವಂ ಪ್ರಕಟನ ಮಾಡಲಾಗದು. ಈ ರತ್ನೇಶ್ವರನ ಪೂಜಿಸಲು ಬ್ರಹ್ಮಾಂಡದಲ್ಲಿ ಸಕಲ ಲಿಂಗಗಳಂ ಪೂಜಿಸಿದ ಫಲವುಂಟು, ಪ್ರಸಂಗದಿಂದಲಾದರೂ ಈ ರತ್ನೇಶ್ವರನ ಮಹಿಮೆಯಂ ಕೇಳಿದವರು ಈ ಸಪ್ತದ್ವೀಪಕ್ಕೂ ಪತಿಗಳಹರು, ದರ್ಶನದಿಂದ ಭೂಲೋಕ, ಸ್ವರ್ಗಲೋಕಗಳ ಆಧಿಪತ್ಯವಹುದು, ಒಂದುಭಾರಿ ಪೂಜಿಸಲೂ ತ್ರೈಲೋಕ್ಯದಲ್ಲಿವುಳ್ಳ ಸಕಲವಸ್ತುಗಳು ಸುಲಭವಾಗಿ ಇಹವು, ನಿಷ್ಕಾಮನೆಯಿಂದ ಪೂಜಿಸಲು ಕೋಟಿ ರುದ್ರಜಪಫಲವಹುದು, ಅಂತ್ಯದಲ್ಲಿ ತನ್ನ ಸಾರೂಪ್ಯವುಂಟು, ಆ ವೃತ್ತಾಂತವಂ ಹೇಳೆನು ಕೇಳು ಅದೆಂತೆನೆ—

ಈ ಕಾಶೀಪಟ್ಟಣದಲ್ಲಿ ಕಳಾವತಿ ಎಂಬವಳೊಬ್ಬಳು ವಾರಾಂಗನೆ ಒಂದು ಶಿವರಾತ್ರಿಯಲ್ಲಿ ಈ ರತ್ನೇಶ್ವರನಪ್ಪೂಜಿಸಿ, ಉಪವಾಸದಿಂ ನೃತ್ತಗೀತವಾದ್ಯಗಳಂ ಕೇಳಿಸಿ, ಜಾಗರಣವಂ ಮಾಡಿ, ಕಾಲಧರ್ಮವನ್ನೈದಿ, ಆ ಪುಣ್ಯದಿಂದ ವಸುಭೂತಿ ಎಂಬ ಗಂಧರ್ವರಾಯಂಗೆ ರೂಪಲಾವಣ್ಯವುಳ್ಳ ರತ್ನಾವಳಿ ಎಂಬ ಮಗಳಾದಳು. ಆ ರತ್ನಾವಳಿಗೆ ಮೂವರುಸಖಿಯರುಂಟು, ಅವರಪೆಸರ್ಗಳಾವಾವೆನೆ. ಶಶಿಲೇಖೆ, ಅನಂಗಲೇಖೆ, ಚಿತ್ರಲೇಖೆ. ಎಂಬ ಮೂವರುಸಖಿಯರು, ಅವರು ವಾಗ್ದೇವಿಯಂಭಜಿಸಿ, ಸಕಲಪ್ರವೀಣತ್ವವಪಡೆದರು. ಆ ರತ್ನಾವಳೀಯೆಂಬವಳು ಹತ್ತುವರ್ಷದವಳಾಗಿದ್ದದ್ದರಿಂದಲಾಗಿ ಈ ಮೂವರು ಸಖಿಯರು ಸಹಾ ಜನ್ಮಾಂತರವಾಸನೆಯಿಂದ ಪ್ರತಿದಿನವ್ಪೂ ತಾವು ನಾಲ್ವರೂ ಈ ರತ್ನೇಶ್ವರನ ಸೇವೆಯಂ ಮಾಡಿದಲ್ಲದೆ ಅನ್ನೋದಕವಂ ತೆಕ್ಕೊಳ್ಳೆವೆಂದು ಒಂದುನೇಮವಂಮಾಡಿಕೊಂಡು ಪೂಜಿಸುತ್ತಿರಲು, ಒಂದಾನೊಂದುದಿನ ರಾತ್ರಿಯಲ್ಲಿ ರತ್ನೇಶ್ವರನ ಪೂಜಿಸುತ್ತಿರಲು, ಈ ಸಮೀಪದಲ್ಲಿದ್ದಸಖಿಯರು ಪ್ರದಕ್ಷಿಣಕ್ಕೆಪೋಗಲು, ಆ ಸಮಯದಲ್ಲಿ ಈ ರತ್ನಾವಳಿಯು ಗೀತಮಾಲೆಯಿಂದ ರತ್ನೇಶ್ವರನ ಸ್ತುತಿಸಲು, ಆ ರತ್ನಮಯವಾದಲಿಂಗದಿಂದ ತಾನು ಪ್ರಸನ್ನನಾಗಿ ಎಲೈ ರತ್ನಾವಳಿ! ಇಂದುರಾತ್ರಿಯಲ್ಲಿ ನಿನ್ನಸ್ವಪ್ನದಲ್ಲಿ ಬಾಹಂಥಾ ನಿನ್ನಪೆಸರಿಗೆಸಮಾನವಾದ ಪುರುಷನು ನಿನಗೆ ಪತಿಯಾಹಾನೂ ಎಂದು ಪರಮೇಶ್ವರ ನುಡಿಯಲು, ಆ ಪರಮೇಶ್ವರನ ವಾಕ್ಯವಂಕೇಳಿ, ಆನಂದದಿಂದ ಸಖಿಯರನೊಡಗೊಂಡು ಆಕಾಶಮಾರ್ಗದಲ್ಲಿ ಪೋಗುವಾಗ ಆ ರತ್ನಾವಳಿಯು ತನ್ನ ಸಖಿಯರೊಡನೆ ತನ್ನವೃತ್ತಾಂತವಂ ಪೇಳಲು ಕೇಳಿ, ಸಂತೋಷಪಟ್ಟು ಇಂದು ರಾತ್ರಿ ನಿನ್ನಸ್ವಪ್ನದಲ್ಲಿ ಬಂದ ಪುರುಷನಂ ನಿನ್ನಬಾಹುಲತೆಗಳಿಂದ ಕಟ್ಟಿ ನಮಗೆ ತೋರಬೇಕು, ನೀನು ಪುಣ್ಯವಂತೆ, ಈಶ್ವರನಂ ಪ್ರಸನ್ನನಂ ಮಾಡಿಕೊಂಡೆ ಆದರೂ ನಾವು ಒಂದೇ ವ್ಯಾಳೆಯಲ್ಲಿ ಒಂದೇ ನಿಯಮದಲ್ಲಿ ಒಂದೇ ಸ್ಥಳದಲ್ಲಿದ್ದರೂ ಅವರವರ ಪುಣ್ಯಫಲ ಬೇರೆಬೇರೆಯೆಂದು ನಿಶ್ಚಯವಾಯಿತು, ನಾವು ಎಷ್ಟುಸೇವೆಯಲ್ಲಿ ಇದ್ದರೂ ನಮಗೆ ಪರಮೇಶ್ವರನ ಮೂರ್ತಿದರ್ಶನವಾಗಲಿಲ್ಲ, ಆದರೂ ನಿನಗೆ ಪ್ರಸನ್ನವಾದದೆ

ನವಿಗೆ ಪ್ರಸನ್ನವಾದುದಾಯಿತು. ಹೀಗೆಂದು ಪ್ರಸಂಗಗಳಂಮಾಡಿಕೊಂ ಡು ಪೋಗಲು, ಅನಗತವಾದ ಆಕಾಶವಾಗನ್ನು ಅತಿ ಸ್ವಲ್ಪವಾಯಿತು. ಈ ರೀತಿಯಲ್ಲಿ ಸಂತೋಷದಿಂದ ತಮ್ಮತಮ್ಮ ಮನೆಗಳಿಗೆ ಪೋಗಿ ಮರು ದಿನ ಪ್ರಾತಃಕಾಲದಲ್ಲಿ ಎದ್ದು ಮೌನದಿಂದ ಸಖಿಯರು ಸಹಾ ಕಾಶೀಪಟ್ಟ ಣಕ್ಕೆ ಬಂದು ಗಂಗೆಯಲ್ಲಿ ಮಿಂದು ರತ್ನೇಶ್ವರನಂ ಪೂಜಿಸಿ, ತಮ್ಮನೇಮ ವಂ ಮುಗಿಸಿ ತಿರುಗಿ ಪೋಪಾಗ ತಾವು ವಿನೋದದಿಂದ ನಿನಗೆ ಯೇನುಸ್ವ ಪ್ನವಾಯಿತು ಎಂದು ಮಾತನಾಡಿಕೊಳ್ಳುತ್ತಾ ಆ ರತ್ನಾವಳಿಯು ನೋಡಿ, ಸಖಿಯರಿಂತೆಂದರು— ಎಲೈ ರತ್ನಾವಳಿ! ಈ ರಾತ್ರಿಯಲ್ಲಿ ರತ್ನೇಶ್ವರ ನ ಅನುಗ್ರಹದಿಂದ ನಿನಗೆ ಯೇನುಸ್ವಪ್ನವಾಯಿತು ಎಂದು ನಿರ್ಬಂಧಿಸಿ ಕೇಳಲು, ಆ ರತ್ನಾವಳಿ ಇಂತೆಂದಳು— ಎಲೈ ಸಖಿಯರಿರಾ! ತಾನು ತನ್ನ ಕೇಳೀಗೃಹಕ್ಕೆ ಪೋಗಿ ಆ ರತ್ನೇಶ್ವರನು ನಿರೂಪಿಸಿದ ವಾಕ್ಯವಂಧ್ಯಾ ನಿಸುತ್ತಾ ನಿದ್ರೆಗೈಯ್ಯಲು, ಬಹಳ ಸೊತ್ತಿನಮೇಲೆ ಚೆಲುವನಾದಂಥಾ ಒಬ್ಬಪುರುಷನು ಬಂದು ಎನ್ನ ಶರೀರವಂ ಮುಟ್ಟಲು, ತನಗೆ ಪರವಶವಾ ಯಿತು. ಆಮೇಲಣ ವೃತ್ತಾಂತವಂ ತಾನು ಅರಿತವಳಲ್ಲ, ಆಮೇಲೆ ಆ ಪುರುಷನು ಪೋಗದಂತೆ ಯನ್ನಭುಜಪಾಶದಿಂದ ಕಟ್ಟಿಹಾಕೇನು ಎಂದು ಮನೋವಿವೇಕದಿಂ ಕೈಯ್ಯನೀಡಲು, ಕೈಯ್ಯಲ್ಲಿಟ್ಟಿರ್ದ ರತ್ನಕಂಕಣ ಝೇಂಕಾರಧ್ವನಿಗೈಯ್ಯಲು, ಕೇಳಿ ಎಚ್ಚರಿತ್ತೆನು. ಆ ವಿರಹಾಗ್ನಿಯಿಂ ಮನವು ನೊಂದಿತು, ಆ ಪುರುಷನ ಕುಲ, ಗೋತ್ರ ನಾಮಧೇಯಂಗಳಂ ನಾನು ಅರಿಯೆನು, ಆ ವಿರಹಾಗ್ನಿಯಿಂದ ತನ್ನ ಪ್ರಾಣಗಳು ವಿಯೋಗವ ನ್ನೈದಲಿಚ್ಛೈಸುವವು, ಅದೂ ಒಂದು ಔಷಧದಿಂದಲ್ಲದೆ ನಿಲ್ಲದು, ಅದಾವುದೆಂ ದರೆ—ಆ ಪುರುಷದರ್ಶನವಂ ಮಾಡಿದರೆ ಪ್ರಾಣಗಳು ನಿಲ್ಲುವವು, ಅಲ್ಲದೆ ಪ್ರಾಣವಿಯೋಗವಾಗುವದೆಂದು ವಿರಹಾಗ್ನಿಯಿಂದ ರತ್ನಾವಳಿನುಡಿಯಲು, ಮಹಾಪ್ರವೀಣೆಯರಾದ ಸಖಿಯರಿಂತೆಂದರು— ಎಲೈ ರತ್ನಾವಳಿ! ನಿನ್ನ ಸ್ವಪ್ನದಲ್ಲಿ ಬಂದು ಇದ್ದ ಪುರುಷನ ದೇಶ ನಾಮರೂಪಗಳನ್ನರಿಯದೆ ನಿನ್ನ ಪ್ರಿಯನ ತೋರುವದಕ್ಕೆ ಉಪಾಯವೇನು ಹೇಳು ಎನಲು, ರತ್ನಾ ವಳಿ ಇಂತೆಂದಳು— ನೀವು ತನ್ನ ಮನೋರಥವ ಸಾಧಿಸುವಲ್ಲಿ ಕುಂಠಿತಶಕ್ತಿ

ಗಳೂ ಯೆಂದು ನುಡಿವವಾಕ್ಯವನ್ನು ಕುಂಠೀಸೊಂದು ಅರ್ಧವಾಕ್ಯವಂ ನುಡಿದು ಮೂರ್ಛಿತೆಯಾಗಲು, ಆ ಸಖಿಯರು ಅನೇಕ ಶೈತ್ಯೋಪಚಾರಂಗಳಂ ಮಾಡಿದರೂ ಮೂರ್ಛೆತಿಳಿಯದಿರಲು, ಅವರೊಳೊಬ್ಬ ಸಖಿಯು ರತ್ನೇಶ್ವರನ ಸ್ನಾನೋದಕವಂ ತಂದು ಅವಳ ಮೇಲೆ ಪ್ರೋಕ್ಷಿಸಲು, ಮೂರ್ಛೆತಿಳಿದು ಶಿವಶಿವಾ ಎನುತ ಎದ್ದಳು. ಕೇಳೈ ಅಗಸ್ತ್ಯನೆ! ಶಿವಭಕ್ತರ ತಾಪ ವ್ಯಾಧಿ ಮೊದಲಾದ ಉಪದ್ರವಂಗಳು ಪರಿಹರವಾಗುವದಕ್ಕೆ ಪರಮೇಶ್ವರನ ಪಾದೋದಕ ಹೊರತು ಮತ್ತೊಂದರಲ್ಲಿ ಆಗದು. ಅದಾಗಿ ಆ ರತ್ನಾವಳಿಯು ಮೂರ್ಛೆತಿಳಿದು ತನ್ನ ಪ್ರಾಣಸಖಿಯುಂ ಕರೆದು ಇಂತೆಂದಳು— ಎಲೈ ಸಖಿಯರಿರಾ? ನೀವು ಎನ್ನ ಮನೋರಥಪ್ರಾಪ್ತಿಗೆ ಉಪಾಯವನರಿತುದಿಲ್ಲವಲ್ಲಾ, ರತ್ನೇಶ್ವರನ ಅನುಗ್ರಹದಿಂದ ಎನ್ನ ಮನಸ್ಸಿಗೆ ಒಂದು ಉಪಾಯವು ತೋರುತಲಿಧೆ, ಅದಾವುದೆನೆ— ಎಲೈ ಶಶಿಲೇಖೆ? ನೀವು ವಾಗ್ದೇವಿಯ ವರದಿಂದ ಸ್ವರ್ಗವಾಸಿಗಳಾದಂಥಾ ಯಕ್ಷ, ಕಿನ್ನರ, ಗಂಧರ್ವ, ಸಿದ್ಧವಿದ್ಯಾಧರರಲ್ಲಿ ಕುಲಗೋತ್ರ ನಾಮಗಳುಳ್ಳಂಥಾ ರೂಪಲಾವಣ್ಯವಿಲಾಸವಿಭ್ರಮಂಗಳುಳ್ಳ ಪ್ರಾಯದ ಪುರುಷರನ್ನು ಚಿತ್ರಪಟದಲ್ಲಿ ಬರದು ತಾ.- ಎಲೈ ಅಸಂಗಲೇಖೆ? ನೀನು ಒಂದು ಚಿತ್ರಪಟದಲ್ಲಿ ಭೂಮಂಡಲದಲ್ಲಿರ್ದ ಐವತ್ತಾರುದೇಶದ ರಾಜಪುತ್ರರು, ಮುನಿಪುತ್ರರು, ಸಹಾ ರೂಪಲಾವಣ್ಯವುಂಟಾದ ಪ್ರಾಯದ ಪುರುಷರ ಬರದು ತಾ. ಎಲೈ ಚಿತ್ರಲೇಖೆ? ನೀನೊಂದು ಚಿತ್ರಪಟದಲ್ಲಿ ಪಾತಾಳವಾಸಿಗಳಾದವರ ಬರೆದು ತಾರೆಂದು ಪೇಳಲು, ಆ ಸಖಿಯರು ಈ ರತ್ನಾವಳಿಯ ವಿರಹತಾಪವಂ ನೋಡಿ, ಶೀಘ್ರದಲ್ಲಿ ತಮ್ಮ ತಮ್ಮ ಚಾತುರ್ಯಗಳಿಂದ ತ್ರೈಲೋಕ್ಯದಲ್ಲಿರ್ದ ಪ್ರಾಯದ ಚಂದವುಳ್ಳ ಪುರುಷರಂ ಬರದು ತಂದುತೋರಲು, ಆ ರತ್ನಾವಳಿಯು ಸ್ವರ್ಗವಾಸಿಗಳಾದ ಜರಾಮರಣವಿಲ್ಲದಂಥಾ ಲಾವಣ್ಯರೂಪಗಳುಳ್ಳ ದೇವತಾಸಮೂಹದ ಕುಲ ಗೋತ್ರ ನಾಮಂಗಳಂ ವಿವರಿಸಿ ಕೇಳಿ ನೋಡಿಯೂ ಅವರಲ್ಲಿ ಮನಸಿಟ್ಟವಳಾಗಲಿಲ್ಲ, ಭೂಲೋಕದ ರಾಯರಾದ ಮಾಳವ, ಕೊಂಕಣ, ದ್ರವಿಡ, ಮತ್ಸ್ಯ, ಕುಳಿಂದ, ಭೋಜ, ನೇಪಾಳ, ವಿದೇಹ, ಪಾಂಡ್ಯ, ಕುರು, ಬರ್ಬರ, ಸಿಂಧು, ಸೌವೀರ, ಆಂಧ್ರ

ಬಂಗಾಳ, ಕರೂಶ, ಕೊಂಕಣ, ತ್ರಿಗರ್ತ, ಸುದೇಶ, ವರಾಟ, ಲಾಟ, ಪಾಂಚಾಲ, ನಿಷಧ, ಘೂರ್ಜರ, ಸಾಳ್ವ. ಇವರು ಮೊದಲಾದ ಐವತ್ತಾರು ದೇಶದ ರಾಜಪುತ್ರರಂ. ಕಶ್ಯಪ, ಅತ್ರಿ, ಭರದ್ವಾಜ, ವಿಶ್ವಾಮಿತ್ರ, ಗೌತಮ ಜಮದಗ್ನಿ, ವಸಿಷ್ಠ, ಕಣ್ವ, ಜಾಬಾಲಿ, ಮತಂಗ, ವಾಲ್ಮೀಕಿ, ಶಕ್ತಿ, ಗಾರ್ಗ್ಯ, ಭೃಗು, ಸೌಭರಿ. ಇವರು ಮೊದಲಾದ ಋಷಿಕುಮಾರರಂ ನೋಡಿ ಅವರಲ್ಲಿಯೂ ಚಿತ್ತವಿಟ್ಟವಳಲ್ಲ, ಪಾತಾಳದ ದೈತ್ಯ, ದಾನವ, ತಕ್ಷಕ ವಾಸುಕಿ, ಶೇಷ, ಕುಳಿಕ, ಅನಂತ, ಕರ್ಕೋಟಕ, ಭದ್ರ ಮೊದಲಾದವರಂ ನೋಡಿ, ಅವರಲ್ಲಿಯೂ ತನ್ನ ಪ್ರಿಯನಂ ಕಾಣದೆ ಅವರ ವಂಶದಲ್ಲಿ ಪುಟ್ಟದ ನಾಗಕುಮಾರನಂ ನೋಡಿ,- ಎಲೈ ಚಿತ್ರಲೇಖೆಯೆ ! ಈತನಾರು ಎನಲು; ಈತ ನಾಗಕುಮಾರನು, ಅತಿ ಬಲಪರಾಕ್ರಮಿಯು, ಅತ್ಯಂತಸೌಂದರ್ಯವುಳ್ಳವನು, ಅನಂತಗುಣಗಳುಳ್ಳವನು, ಈತನ ಪೆಸರು ರತ್ನಚೂಡನೆಂದು ಪೇಳುವರೂ ಎಂದು ಪೇಳಲು, ರತ್ನಾವಳಿಯು ನೋಡಿ, ಎನ್ನಸ್ವಪ್ನದಲ್ಲಿ ಬಂದಪುರುಷನು ಈತತಾನೆ ಎಂದು ನಿಶ್ಚೈಸಿ, ಹರ್ಷದಿಂದ ತಾನು ಪುಳುಕಿತಳಾಗಿ ಕಿರುಬೆಮರು ತೋರಿ, ಮತ್ತು ಮತ್ತು ಪ್ರೀತಿಯಿಂದ ನೋಡುತ್ತಿರಲು, ಈ ಚಿತ್ರಲೇಖೆ ವಿನೋದದಿಂ ಚಿತ್ರಪಟವಂ ಮುಚ್ಚಲು, ಆ ಚಿತ್ರಲೇಖೆಯುಂ ರತ್ನಾವಳಿ ಕೋಪದಿಂ ನೋಡುತ್ತಿರಲು ಸಖಿಯರು ತಾವು ಮುಖಮನೋಡಿಕೊಂಡು ಈ ರತ್ನಾವಳಿ ಈ ರತ್ನಚೂಡನಂ ನೋಡಿ, ಪುಳುಕಿತಳಾಗಿ ಕಿರುಬೆಮರು ತೋರಿತಾಗಿ ಈ ರತ್ನಾವಳಿಯು ಸ್ವಪ್ನದಲ್ಲಿ ಬಂದು ಇದ್ದವನು ಈ ರತ್ನಚೂಡನಹುದು ಎಂದು ನಿಶ್ಚೈಸಿ, ತಮ್ಮ ಸಖಿಗಿಂತೆಂದರು.— ಎಲೈ ರತ್ನಾವಳಿ? ನಿನಿಗೆ ರತ್ನೇಶ್ವರನು ಕೃಪೆ ಮಾಡಿದ ಪುರುಷನ ಕುಲ, ಗೋತ್ರ, ನಾಮಂಗಳಂ ತಿಳಿದೆವು, ನಿನ್ನ ಮನೋರಥ ಸಿದ್ಧಿಯಾಗುವ ಹಾಗೆ ನಾಳೆ ಬಂದು ಯತ್ನವಂ ಕಂಡೇವು: ಇಂದಿಗೆ ನಮ್ಮ ಮನೆಗೆ ಹೋಗುವ ಬಾರೆಂದು ಸಂತೈಸಿ ಕರದುಕೊಂಡು ಆಕಾಶಮಾರ್ಗದಲ್ಲಿ ಪೋಗುತ್ತಿರಲು, ಸುಬಾಹು ಎಂಬ ದಾನವನು ಬರುತ್ತಿರಲು, ಆತನ ಕ್ರೂರತರವಾದ ಆಕಾರವಂ ನೋಡಿ, ನಡನಡುಗುವಂಥಾ ಈ ನಾಲ್ವರು ಸ್ತ್ರೀಯರನ್ನೂ ಹಿಡಿಯ

ಕೊಂಡು ಪಾತಾಳಲೋಕಕ್ಕೆ ಪೋಗಲು, ಆ ಕುಮಾರತಿಯರು ಭಯದಿಂದ ಎಲೈ ತಾಯೆ, ಎಲೈ ತಂದೆಯೆ! ನಾವು ಯೇನು ಕಷ್ಟವಮಾಡಿದೆವ್ವೊ ಚಿಕ್ಕಂದು ಮೊದಲಾಗಿ ರತ್ನೇಶ್ವರನ ಸೇವೆ ಹೊರತಾಗಿ ಮತ್ತೊಂದು ವ್ಯಾಪಾರವನರಿತವರಲ್ಲಾ, ಅಂಥಾ ನಮಗೆ ಯೇನು ಕಂಟಕಬಂತು, ಎಲೈ ದೈವವೆ! ರತ್ನೇಶ್ವರ! ರತ್ನೇಶ್ವರ! ರತ್ನೇಶ್ವರ! ರಕ್ಷಿಸು ರಕ್ಷಿಸು ರಕ್ಷಿಸೆಂದು ಮೊರೆಯಿಡುತ್ತಿರಲು, ಪಾತಾಳದಲ್ಲಿರ್ದ ರತ್ನಚೂಡನು ಕೇಳಿ, ನನ್ನ ಸ್ವಾಮಿಯಾದ ರತ್ನೇಶ್ವರನ ಪೆಸರ್ಗೊಳ್ಳಲು ಬಾಧಿಸುವರಾರೋ ಎಂದು ಬರುತ್ತಿರಲು, ಮತ್ತು ಮತ್ತೂ ರತ್ನೇಶ್ವರ ರತ್ನೇಶ್ವರ, ರಕ್ಷರಕ್ಷೆ ಎಂಬ ಸ್ತ್ರೀಯರ ಮೊರೆಯಂ ಕೇಳಲು, ಕೋಪಾಟೋಪದಿಂದ ಅರುಣಾಯತವಾದ ಕಂಗಳಲ್ಲಿ ಕಿಡಿಗಳುದುರಲು, ಬಿಲ್ಲನೇರಿಸಿಕೊಂಡು ದಿವ್ಯಾಸ್ತ್ರಮಂ ಪಿಡಿದು ಪೊರಮಟ್ಟು ಬಂದು ಬಹಳವಾಗಿ ಮಾಂಸಕೊಬ್ಬುಗಳಂ ಭಕ್ಷಿಸಿ ರಕ್ತಪಾನವಂಮಾಡಿದ ಮದೋನ್ಮತ್ತನಾದ ದಾನವನಂ ಕಂಡು,ಅತ್ಯಂತಮತ್ತನಾದರಾಕ್ಷಸನೊಡನೆ ರತ್ನಚೂಡನಿಂತೆಂದನು,—ಎಲೈ ದುಷ್ಟನೆ! ನೀನು ಬಲವಿಲ್ಲದ ಅಬಲೆಯರಂ ಅಪಹರಿಸಿಕೊಂಡು ಎನ್ನದೃಷ್ಟಿಗೆಸಿಕ್ಕದೆ ಎಲ್ಲಿಗೆ ಪೋಗಲುಳ್ಳವನು, ಈಗ ಎನ್ನ ಬಾಣಾಗ್ನಿಯಿಂದ ನಿನಗೆ ಪ್ರಾಣತ್ಯಾಗವಾಗದೆ ಇಲ್ಲ, ಆರ್ತತ್ರಾಣಪರಾಯಣನಾದ ರತ್ನೇಶ್ವರನ ಸ್ಮರಣೆಯಂ ಮಾಡಿದ ಈ ಸ್ತ್ರೀಯರಿಗೆ ನಿನ್ನಿಂದ ಭಯವೆಲ್ಲೀದೆಂದು ರತ್ನೇಶ್ವರನೆಂಬ ಬಾಣಪ್ರಯೋಗವುಳ್ಳವರಿಗೆ ಜನ್ಮಮೃತ್ಯು ಜರಾವ್ಯಾಧಿಗಳೆಲ್ಲಿಯವು. ಹೀಗೆಂದು ನುಡಿದ ವ್ಯಾಘ್ರದಿಂ ಪಿಡಿಯಲ್ಪಟ್ಟಯರಳೆಯ ಮರಿಗಳಂತೆ ಮಹಾಭಯದಿಂದ ತನ್ನಮುಖವಂ ನೋಡುತಿರ್ಪ ಆ ಸ್ತ್ರೀಯರಂ ನೋಡಿ, ಅಂಜಬೇಡೀ ಎಂದು ಅಭಯವಂಕೊಟ್ಟು, ರತ್ನಚೂಡನು ತನ್ನ ಕೈಯಲ್ಲಿ ಬಿಲ್ಲಂ ಝೇವಡೆದು ದಿವ್ಯಬಾಣವಂ ತೊಟ್ಟು ಆಕರ್ಣಪೂರಿತವಾಗಿ ತೆಗದು ದಿವ್ಯಬಾಣವಂ ಪ್ರಯೋಗಿಸಲು, ಆ ರಾಕ್ಷಸನು ಆ ಬಾಣದಿಂ ನೊಂದು, ಪಾದಹತವಾದ ಸಿಂಹದಂತೆ ದಂತವುಡಿದ ಕಾಳಸರ್ಪನಂತೆ ಮೊರೆದೆದ್ದು ಹೂಂಕರಿಸಿ ಕಾಲದಂಡಕ್ಕೆ ಸಮಾನವಾದ ಗದೆಯಿಂ ಥಿಡಲು, ರತ್ನಚೂಡನ ಸಮೀಪಕ್ಕೆ ಬರುತ್ತಿರಲು; ರತ್ನೇಶ್ವರನ ಭಕ್ತ

ಕಾದವರ್ಗೆ ಕಾಲದಂಡವಾದರೂ ಸೋರೆಯಾಲೆಯ ಕೊಳವಿಯಂತೆ ಆಹುದಾದಕಾರಣ ಆ ರತ್ನಚೂಡನು ಆ ದುರಾಚಾರಿಯಾದ ರಾಕ್ಷಸನ ಆಯುಷ್ಯವಂ ಕತ್ತರಿಸುವಂತೆ ಬಂದು ದಿವ್ಯಾಸ್ತ್ರವಾದ ಬಾಣದಿಂದ ಆ ಗದೆಯಂ ಕತ್ತರಿಸಿ, ಆ ರಾಕ್ಷಸನ ಎದೆಯಂ ನಾಟುವಂತೆ ಇಡಲು, ಆ ರಾಕ್ಷಸನು ಆ ಕ್ಷಣವೆ ಪ್ರಾಣವಿಯೋಗವಾಗಿ ಭೂಮಿಯಮೇಲೆ ಬೀಳುತ್ತಿರಲು, ಅತಿ ಚಿತ್ರದಿಂದ ಮತ್ತೊಂದು ವಾಯುವಾಸ್ತ್ರವಂ ಬಿಟ್ಟು ಇಡಲು, ಆ ಸ್ತ್ರೀಯರು ನೆಲಕ್ಕೆ ಬಿದ್ದು ನೋಯದ ಹಾಗೆ ನೆಲಕ್ಕೆ ಇಳುಹಿತೆಂದು ಈ ರತ್ನಚೂಡನೆ ಮುಂದೆ ನಿಲ್ಲಿಸಿತು. ರಾಕ್ಷಸನು ಭೂಮಿಗೆ ಬಿದ್ದು ಮೃತನಾದನು, ಆವನಾನೊಬ್ಬನು ಅನ್ಯಾಯಾರ್ಜಿತದಿಂ ಪರದ್ರವ್ಯವನನುಭವಿಸಿ ಬದುಕಬೇಕೆಂಬನೋ ಆ ದ್ರವ್ಯವಂ ಸಹ ಅವನ ಪ್ರಾಣವಂ ಪೋಗಲಾಡಿಕೊಂಬನು, ಅದುಕಾರಣ ಆರಾಗಲೀ ಪರದ್ರವ್ಯ, ಪರಸ್ತ್ರೀ, ಪರಭೂಮಿಗೆ ಮನವನಿಕ್ಕಲಾಗದು. ಆ ರತ್ನಚೂಡನು ಆ ರಾಕ್ಷಸನಂ ಸಂಹರಿಸಿ ಆ ಸ್ತ್ರೀಯರಂ ನೋಡಿ, ಅವರೊಡನೆ ಈ ರತ್ನಚೂಡನು ಇಂತೆಂದನು,- ಎಲೈ ಸ್ತ್ರೀಯರಿರಾ! ನೀವಾರಮಕ್ಕಳು, ನಿಮ್ಮ ಪೆಸರೇನು, ಈ ರಾಕ್ಷಸನು ನಿಮ್ಮನೆಂತು ಅಪಹರಿಸಿ ತಂದನು, ತನ್ನ ನಾಮಸ್ಮರಣೆ ಮಾತ್ರದಿಂದ ಸಕಲಉಪದ್ರಗಳಂ ಪರಿಹರಿಸುವಂಥಾ ರತ್ನೇಶ್ವರನ ನೀವೇನು ಬಲ್ಲಿರಿ, ನೀವು ಸತ್ಯವಾಗಿ ಎನಗೆ ಹೇಳಬೇಕೆನಲು; ಆ ಸ್ತ್ರೀಯರು ತಮ್ಮೊಳು ತಾವು ಮುಖವನೋಡಿಕೊಂಡು ಈತ ಯಾವನೋ ಕುರುಹಂಕಂಡಹಾಗೆ ಇದೆ, ಅಕಾರಣವಾಗಿ ಎಲ್ಲಿಂದ ಬಂದನೋ ತನ್ನ ಪ್ರಾಣಗಳ ಮಾರಿಕೊಂಡು ನಮ್ಮ ರಕ್ಷಿಸಿದನು. ಸ್ವಭಾವದಿಂ ಚಂಚಲಗಳಾದ ಇಂದ್ರಿಯಂಗಳು ಈತನ ನೋಡಿ ಅಮೃತಪಾನವಮಾಡಿದಂತೆ ತೃಪ್ತಿಪಟ್ಟವು, ನೇತ್ರಗಳು ಈತನ ಬಿಟ್ಟು ಮತ್ತೊಂದು ವಸ್ತುವ ನೋಡಲಿಲ್ಲವು, ಅಮೃತದಂತೆ ಅತಿಮಧುರವಾದ ಈತನ ವಚನವಂ ಕೇಳಿ, ತಮ್ಮ ಕಿವಿಗಳು ಮತ್ತೊಂದು ಶಬ್ದಂಗಳಂ ಕೇಳಲಿಚ್ಛೈಸಲೊಲ್ಲವು, ನಮ್ಮ ಮನಸವೆಂಬ ಮಾಣಿಯನ್ನು ಅಪಹರಿಸಿದನು. ಈ ಪ್ರಾಯದ ಪುರುಷನ ನೋಡಿ, ನಮ್ಮ ಪಾದಗಳು ಮುಂದಕ್ಕೆ ಹೆಜ್ಜೆಯನಿಡವು, ಎಂದು ಈ ಪ್ರಕಾರದಿಂದ

ತಮ್ಮೊಳು ತಾವು ಮಾತನಾಡುತ್ತಿರಲು, ಆತನ ಮೇಲೆ ದೃಷ್ಟಿಯನ್ನಿಕ್ಕಿ ಚಿತ್ತಾರದ ಪ್ರತಿಮೆಗಳಂತೆ ನಿಶ್ಚಲಿತರಾಗಿ ಇದ್ದು ಕ್ಷಣಮಾತ್ರದಮೇಲೆ ತಮ್ಮ ಪ್ರಾಣಸಂರಕ್ಷಕನಾದ ಆತಂಗೆ ಎಲೈ ಸ್ವಾಮಿ! ಪ್ರೀತಿಪೂರ್ವಕವಾಗಿ ನೀನು ನಮ್ಮ ಕೇಳಿದೆಯಾಗಿ ನಮ್ಮ ವೃತ್ತಾಂತವಂ ಹೇಳುವೆವು, ಪರಾಕಿಲ್ಲದೆ ಕೇಳು! ನಮ್ಮರಕ್ಷಿಸೂಯೆಂದು ಆ ಸಖಿಯರೊಳು ಶಶಿಲೇಖೆ ಇಂತೆಂದಳು, ಅಂದೆಂತೆಂದರೆ— ಈಕೆ ವಸುಭೂತಿಯೆಂಬ ಗಂಧರ್ವರಾಯನ ಮಗಳು ಸಕಲಗುಣರತ್ನಂಗಳಿಗೂ ಕಣಿಯಾದಂಥಾವಳು ರತ್ನಾವಳಿಯೆಂಬ ಪೆಸರುಳ್ಳವಳು, ನಾವು ಮೂವರೂ ಈಕೆಯ ಸಖಿಯರು, ಈ ರತ್ನಾವಳಿಯು ಚಿಕ್ಕಂದು ಮೊದಲಾಗಿಯೂ ತಾಯಿತಂದೆಯ ಅಪ್ಪಣೆವಿಡಿದು ರತ್ನೇಶ್ವರನ ಸೇವೆಯಂಮಾಡುತ್ತಿರಲು, ರತ್ನೇಶ್ವರನು ಪ್ರಸನ್ನನಾಗಿ ಎಲೈ ರತ್ನಾವಳಿ! ನಿನ್ನ ಸ್ವಪ್ನದಲ್ಲಿ ನಿನ್ನ ಹೆಸರಿಗೆ ಸಮಾನವಾದ ಹೆಸರುಳ್ಳಪುರುಷ ಬಂದು ಅನುಭವಿಸಿ ಆತನೇ ನಿನಗೆ ಪತಿಯಾದಾನೂ ಎಂದು ನಿರೂಪಿಸಲು, ಆ ರೀತಿಯಲ್ಲಿ ರತ್ನಾವಳಿ ತನ್ನಸ್ವಪ್ನದಲ್ಲಿ ಬಂದಾತನಂ ಕಂಡು ವಿರಹತಾಪದಿಂದ ಇದ್ದಾಕೆಗೆ ನಾವು ಶೈತ್ಯೋಪಚಾರಂಗಳಂ ಮಾಡಿ, ನಮ್ಮ ಪ್ರವೀಣತೆಯಿಂದ ಈ ರತ್ನಾವಳಿಯು ಅಪ್ಪಣೆವಿಡಿದು ಸ್ವರ್ಗ, ಮರ್ತ್ಯ, ಪಾತಾಳವಾಸಿಗಳಾದವರನ್ನು ಚಿತ್ರಪಟದಲ್ಲಿ ಬರೆದು ತೋರಿಸಲು, ಈ ರತ್ನಾವಳಿಯು ತನ್ನ ಸ್ವಪ್ನದಲ್ಲಿಬಂದಾತನಂ ಕಂಡು ಮೂರ್ಛಿತೆಯಾಗಿ ಎದ್ದು, ರತ್ನೇಶ್ವರನ ಸೇವಿಸಿ ತಮ್ಮ ಮನೆಗೆ ಪೋಗುತ್ತಿರಲು, ಆಕಸ್ಮಿಕದಲ್ಲಿ ಈ ರಾಕ್ಷಸನು ಬಂದು ನಮ್ಮನಾಲ್ವರನ್ನೂ ಅಪಹರಿಸಿಕೊಂಡು ಪಾತಾಳವಂ ಪೊಕ್ಕನು, ಅನಿತರೊಳು ಅಕಾರಣಬಂಧುವಾಗಿ ಬಂದು ನೀನು ನಮ್ಮ ರಕ್ಷಿಸಿದೆ ಇದೀಗ ನಮ್ಮವೃತ್ತಾಂತವು, ನಾವು ಕಾಶೀಪಟ್ಟಣಕ್ಕೆ ಪೋಪಂತೆ ಕೃಪೆಯಮಾಡಬೇಕೆನಲು, ಕೇಳಿ ನಾಗಕುಮಾರಕನಾದ ರತ್ನಚೂಡನು ಭಯಪಟ್ಟು ಇದ್ದಂತಾ ಆ ಸ್ತ್ರೀಯರಿಗೆ ಇಂತೆಂದನು,— ಎಲೈ ಸ್ತ್ರೀಯರಿರಾ! ನೀವು ಅಂಜದೆ ನನ್ನ ಸಂಗಡ ಬನ್ನಿರಿ, ನಿಮಗೆ ರತ್ನೇಶ್ವರನತೋರಿಸೇನು ಎಂದು ಅವರನ್ನು ಒಡಗೊಂಡು ಬಂದು ಕಾಶೀಪಟ್ಟಣದಲ್ಲಿರ್ಪ ಶುಭೋದಕವೆಂಬ ಕೊಳವಂ ತೋರಿಸಲು

ಆ ಕುವರಿಯರು ಸಂತೋಷದಿಂ ಸಚೇಲಸ್ನಾನವಂ ಮಾಡಿ, ಅಲ್ಲಿ ಸರ್ವೇ ಶ್ವರನಾದ ರತ್ನೇಶ್ವರನಂ ಕಂಡು ಆಶ್ಚರ್ಯಪಟ್ಟು ತಮ್ಮೊಳು ತಾವು ಇಂತೆಂದರು,—ಇದೇನುಸ್ವಪ್ನವೋ? ರತ್ನೇಶ್ವರನ ಲೀಲೆಯೋ? ಆಶ್ಚರ್ಯ ಪಟ್ಟು ನಾವು ಭ್ರಾಂತರಾದೆವೋ? ನಾವು ಗಂಧರ್ವಕನ್ಯಕೆಗಳಲ್ಲವೋ? ಇದು ಇಂದ್ರಜಾಲವೋ? ಅರಿಯಬಾರದು, ನೋಡಿದರೆ ನಿಶ್ಚಯವಾಗಿ ಇದೆ. ಇದು ಉತ್ತರವಾಹಿನಿಯಾದ ಗಂಗೆ, ಶಂಖಚೂಡನ ಭಾವಿ, ಇದು ಶಂಖ ಚೂಡನ ಮನೆ, ಇದು ಪಂಚಗಂಗಾ ನದೀತೀರ್ಥ, ಇದು ವಾಗೀಶ್ವರನ ಗುಡಿ, ಇದು ಶಂಖಚೂಡನಿಂ ಪ್ರತಿಷ್ಟೆಯಾದ ಲಿಂಗ, ಇದು ಮಂದಾಕಿನಿ ಯ ಭಾವಿ, ಈ ತೀರ್ಥದಲ್ಲಿ ಸ್ನಾನವಂ ಮಾಡಿದವರು ಮರ್ತ್ಯಲೋಕವಾ ಸವಂಮಾಡರು, ಈ ತೀರ್ಥದಲ್ಲಿ ತ್ರಿಪುರವಿಜಯದ ಸಮಯದಲ್ಲಿ ಪು ಟ್ಟಿದ ತ್ರಿಪುರಾದೇವಿ, ಈ ಮಂದಾಕಿನೀತೀರದಲ್ಲಿ ಇದ್ದು ಈ ಗಂಗೆಯಲ್ಲಿ ಸ್ನಾನವಂ ಮಾಡಿ ತ್ರಿಪುರಾದೇವಿಯಂ ಪೂಜಿಸಲು ಇಷ್ಟಾರ್ಥಗಳನೀವ ಳು, ಮಂದಾಕಿನೀ ಪಶ್ಚಿಮದಲ್ಲಿಹ ಅಷ್ಟಸಿದ್ಧೇಶ್ವರನೀತನು, ಈತನ ಆರಾಧಿಸಲು ಅಷ್ಟಮಹಾಸಿದ್ಧಿಗಳು ಕೂಡಾ ವಶ್ಯವಹವು, ಇದು ಅಷ್ಟ ಸಿದ್ಧತೀರ್ಥ, ಇದು ಅಷ್ಟಮಹಾಸಿದ್ಧಿಗಳ ಮೂರ್ತಿಗಳು, ಈತ ಗಜವಿನಾ ಯಕನು, ಈತಗೆ ನಮಸ್ಕರಿಸಲು ಸಕಲಗಣಪತಿಗಳೂ ಪ್ರಸನ್ನರಹರು, ಇದು ಆದಿಸಿದ್ಧೇಶ್ವರನ ಉಪ್ಪರಿಗೆ, ಸುವರ್ಣಮಯವಾದ ಉಪ್ಪರಿಗೆಯಂ ನೋಡಲು, ಪುನರ್ಜನ್ಮವಿಲ್ಲ, ಈತನಂ ಷೋಡಶೋಪಚಾರಂಗಳಿಂದ ಪೂಜಿಸಲು, ಭೂಲೋಕಕ್ಕೆ ಅರಸಾಗಿ ಸಕಲಭೋಗಂಗಳನನುಭವಿಸಿ ಅಂತ್ಯದಲ್ಲಿ ಮುಕ್ತನಹನು, ಇದಕ್ಕೆ ಮೂಡಲಲ್ಲಿ ಐರಾವತಧ್ವಜ ಕುರು ಹಾದ ಐರಾವತೇಶ್ವರನು, ಈತ ವೃದ್ಧಕಾಳೇಶ್ವರನು, ಇದು ವೃದ್ಧಕಾ ಳೇಶ್ವರನ ಉಪ್ಪರಿಗೆ. ಇಂತೆಂದು ತಮ್ಮೊಳು ತಾವು ಇಷ್ಟಗೋಷ್ಟಿಯಲ್ಲಿ ಇರುತ್ತಿರಲು, ನಾರದಋಷೀಶ್ವರನು ಈ ರತ್ನಾವಳಿಯ ತಂದೆಯಾದ ವ ಸುಭೂತಿಯೆಂಬ ಗಂಧರ್ವನ ಬಳಿಗೆ ಹೋಗಿ ಇಂತೆಂದನು,—ಎಲೈ ವಸು ಭೂತಿಯೆ! ನಿನ್ನ ಕುಮಾರತಿಯಾದ ರತ್ನಾವಳಿ ತನ್ನ ಸಖಿಯರು ಸಹಾ ರತ್ನೇಶ್ವರನ ಸೇವೆಯಂ ಮಾಡಿ ಬರುತ್ತಿರಲೂ ಸುಬಾಹು ಎಂಬ ರಾಕ್ಷ

ಸನೂ ಸಖಿಯರೂ ಸಹ ರತ್ನಾವಳಿಯನ್ನು ಎತ್ತಿಕೊಂಡು ಹೋಗಿ ಪಾತಾಳವಂ ಪೋಗಲು, ಅಲ್ಲಿ ರತ್ನಚೂಡನೆಂಬ ನಾಗಕುಮಾರನು ಕಂಡು ಆ ರಾಕ್ಷಸನನ್ನು ಯುದ್ಧದಲ್ಲಿ ಸಂಹರಿಸಿ ಆ ರತ್ನಾವಳಿಯನ್ನೂ ಸಖಿಯರನ್ನೂ ಮುನ್ನಿನಂತೆ ಕಾಶೀಪಟ್ಟಣಕ್ಕೆ ತಂದು ಬಿಟ್ಟನೆಂದು ಹೇಳಿ, ನಾರದನು ಪೋಗಲು, ಆ ವಸುಭೂತಿಯೆಂಬ ಗಂಧರ್ವನು ಈ ವೃತ್ತಾಂತವಂ ಕೇಳಿ, ಆಶ್ಚರ್ಯಪಟ್ಟು ಆಕ್ಷಣವೆ ಕಾಶೀಪಟ್ಟಣಕ್ಕೆ ಬಂದು ಅಲ್ಲಿ ತನ್ನ ಸಖಿಯರು ಸಹಿತ ವಿನೋದದಿಂದ ತನ್ನ ಮಗಳಂ ಕಂಡು ತಕ್ಕೈಸಿ ಈ ವೃತ್ತಾಂತವಂ ವಿವರಿಸಿ ಕೇಳಲು, ಆ ರತ್ನಾವಳಿಯು ತನ್ನ ಸ್ವಪ್ನ ಹೊರತಾಗಿ ಆದ ವೃತ್ತಾಂತವಂ ವಿವರಿಸಿ ಹೇಳಲು, ಆ ರತ್ನಾವಳಿಯ ವಾಕ್ಯವಂ ಕೇಳಿ, ಮಗಳು ಮರುಪುಟ್ಟು ಪುಟ್ಟಿದಳೆಂದು ತಿಳಿದು ಆ ರಾಕ್ಷಸನಂ ಕೊಂದು ಬಿಡಿಸಿದವನಾರೊ ಎಂದು ಕೇಳುತ್ತಿದ್ದನು ಎಂದು ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು,—ಕೇಳೈ ಅಗಸ್ತ್ಯನೆ! ನಾಗಕುಮಾರನಾದ ರತ್ನಚೂಡನು ರತ್ನಚೂಡತೀರ್ಥವೆಂಬ ಭಾವಿಯಲ್ಲಿಂದ ಪಾತಾಳದಿಂ ಪೊರಮಟ್ಟು ಕಾಶೀಪಟ್ಟಣಕ್ಕೆ ಬಂದು ಮಂದಾಕಿನೀತೀರ್ಥದಲ್ಲಿ ಸ್ನಾನವಂ ಮಾಡಿ, ಎಂಟು ಬಗೆಯ ಮುತ್ತು ರತ್ನಗಳಂ ತಂದು ರತ್ನೇಶ್ವರಗೆ ಸಮರ್ಪಿಸಿ ಪೂಜಿಸಿ, ರತ್ನಚೂಡತೀರ್ಥವೆಂಬ ಭಾವಿಯೊಳಗಿಳಿದು ಪಾತಾಳಕ್ಕೆ ಪೋಗುವನು, ಈ ರೀತಿಯಲ್ಲಿ ನಿತ್ಯವೂ ಬಂದು ರತ್ನೇಶ್ವರನ ಪೂಜಿಸಿ ಪೋಗುತ್ತಿರಲು; ಒಂದು ದಿನ ರಾತ್ರಿಯಲ್ಲಿ ರತ್ನಚೂಡನ ಸ್ವಪ್ನದಲ್ಲಿ ರತ್ನೇಶ್ವರನು ಪ್ರಸನ್ನನಾಗಿ ಇಂತೆಂದನು—ಎಲೈ, ರತ್ನಚೂಡನೆ? ಒಬ್ಬಳು ಗಂಧರ್ವಕನ್ಯಕೆಯನ್ನು ಅಪಹರಿಸಿಕೊಂಡು ಬಂದು ಪಾತಾಳವಂ ಪೊಗಲು, ಆ ರಾಕ್ಷಸನಂ ಸಂಹರಿಸಿ, ಆ ಸ್ತ್ರೀಯನ್ನು ಬಿಡಿಸಲು, ಆ ಗಂಧರ್ವಕನ್ಯಕೆ ಸಖಿಯರೂ ಸಹ ನಿನಗೆ ಪತ್ನಿಯಾದಾಳು ಎಂದು ನಿರೂಪಿಸಲು, ಆ ರಾತ್ರಿಯಲ್ಲಿಯೆ ಆ ರಾಕ್ಷಸನಂ ಕೊಂದು ಆ ಸ್ತ್ರೀಯರನ್ನು ಬಿಡಿಸಿ ರತ್ನಚೂಡತೀರ್ಥದಿಂದ ಅವರನ್ನು ಕಾಶೀಪಟ್ಟಣಕ್ಕೆ ಕಳುಹಿ ಆ ರತ್ನಚೂಡಭಾವಿಯಿಂ ಪೋಗಿ ತಿರಿಗಿ ಬಂದು ಎಂದಿನ ಹಾಗೆ ರತ್ನೇಶ್ವರನ ಪೂಜೆಯಂ ಮಾಡಿ ಪೋರಮಡುವನಾತನೊ

ಳು ರತ್ನಾವಳಿ ಮೊದಲಾದಸ್ತ್ರೀಯರು ವಸುಭೂತಿಯೊಡನೆ ಇಂತೆಂದರು, ಈತನೀಗ ರಾಕ್ಷಸಸಂಹಾರವಂ ಮಾಡಿ ನಮ್ಮಂ ರಕ್ಷಿಸಿದವನು ಎಂದು ಬೆರಳಕೊನೆಯಿಂದ ತೋರಿಸಲು, ಆ ಗಂಧರ್ವನು ರತ್ನಚೂಡನಂ ನೋಡಿ, ಪುಳಕಿತನಾಗಿ ತನ್ನ ಮನದಲ್ಲಿ ಆತನ ಸುರೂಪವನ್ನು ವರ್ಣಿಸುತ್ತಾ ರತ್ನೇಶ್ವರನ ಅನುಗ್ರಹದಿಂದ ಇಂದು ತಾಂ ಧನ್ಯನಾದೆನು, ತನ್ನ ಮಗಳಿಗೆ ಅನುಕೂಲವಾದ ಪತಿ ದೊರಕಿದನು, ತನ್ನ ಮಗಳು ಮಹಾಪುಣ್ಯವಂತೆ ಎಂದು ನಿಶ್ಚೈಸಿ, ಆ ರತ್ನಚೂಡನಂ ಕರದು ನಾಮಗೋತ್ರಂಗಳು ಕೇಳಿ, ಬಲಾಬಲಿಕೆಗಳಂ ವಿಚಾರವಂಮಾಡಿ, ರತ್ನೇಶ್ವರನ ಸನ್ನಿಧಿಯಲ್ಲಿ ಕನ್ಯಾ ದಾನವಂ ಮಾಡಿ, ಕಂಕಣಗಳಂ ಕಟ್ಟಿ, ತನ್ನ ಗಂಧರ್ವಲೋಕಕ್ಕೆ ಕರ ದೊಯಿದು ಆ ರತ್ನಚೂಡನ ಕಾಲತೊಳದು ಮಧುಪರ್ಕವಿತ್ತು ಮಗಳಂ ಧಾರೆಯರದು ಅಳಿಯಗೂ ಮಗಳಿಗೂ ವಿಶೇಷವಸ್ತುಗಳಿತ್ತು ಶಶಿಲೇಖೆ, ಅನಂಗಲೇಖೆ, ಚಿತ್ರಲೇಖೆಯುಂಬ ಸ್ತ್ರೀಯರಂ ಅವರವರ ತಾಯಿತಂದೆಗ ಳು ಬಂದು ಧಾರೆಯಲು ಆ ರತ್ನಚೂಡನು ನಾಲ್ಕುವೇದ ಕೂಡಿದ ಪ್ರಣವ ವ್ರೂ ಪರಬ್ರಹ್ಮವಾದ ಈಶ್ವರನಕಂಡಂತೆ ನಾಲ್ವರೂ ಸ್ತ್ರೀಯರು ಸಹಾ ಬಂದು ತಮ್ಮ ತಂದೆಯಕಂಡು ನಮಸ್ಕರಿಸಿ ರತ್ನೇಶ್ವರನ ಅನುಗ್ರಹದಿಂ ದ ವೃತ್ತಾಂತವಂ ತಿಳುಹಿ ನಾಲ್ವರು ಸ್ತ್ರೀಯರು ಸಹ ರತ್ನಚೂಡನು ಸುಖದಲ್ಲಿ ಇದ್ದನು ಎಂದು ಪರಮೇಶ್ವರನು ಮತ್ತಿಂತೆಂದನು— ಎಲೈ ಪಾರ್ವತಿ! ಈ ಸ್ಥಾವರರೂಪವಾದ ರತ್ನೇಶ್ವರನೆಂಬ ಎನ್ನ ಮಹಿಮೆ ಅಗಮ್ಯವಾದದ್ದೂ ಎಂದು ಇಂದು ಪರಿಯಂತರವ್ರೂ ಗೋಪ್ಯವಾದ ಈ ಲಿಂಗವನ್ನು ನಿಮ್ಮ ತಂದೆ ಹಿಮವಂತನು ನ್ಯಾಯಾರ್ಜಿತವಾದ ಅನೇಕ ದಿವ್ಯರತ್ನಗಳಿಂದ ಪ್ರಕಟವಂ ಮಾಡಿದನು, ಈ ಲಿಂಗವಂ ಪೂಜಿಸಲು ಸ್ತ್ರೀ ಪುತ್ರಪೌತ್ರ ಮೊದಲಾದ ನಾನಾರತ್ನಲಾಭವು ದೊರಕೊಂಬುದು ಅಂತ್ಯದಲ್ಲಿ ಸ್ವರ್ಗಮೋಕ್ಷಂಗಳಹವು, ಈ ರತ್ನೇಶ್ವರನ ಪೂಜಿಸಿ ದೇಶಾಂ ತರದಲ್ಲಿ ಶರೀರವಂ ಬಿಟ್ಟವರ್ಗೆ ಸ್ವರ್ಗದಿಂ ಪುನರಾವೃತ್ತಿಯಿಲ್ಲ, ಕೃಷ್ಣ ಚತುರ್ದಶಿಯಲ್ಲಿ ಉಪವಾಸವಿದ್ದು ಈ ರತ್ನೇಶ್ವರನ ಪೂಜೆ, ಜಾಗರಣ ವಂ ಮಾಡಲು, ಎನ್ನ ಸನ್ನಿಧಾನವುಂಟು. ಈ ಲಿಂಗಕ್ಕೆ ಮೂಡಲು

ನೀನು ಹಿಂದಕ್ಕೆ ದಕ್ಷನ ಮಗಳಾಗಿದ್ದಾಗ ಪ್ರತಿಷ್ಠೆಯಂ ಮಾಡಿದ ಈಶ್ವರನು ಇದ್ದಾನು, ಆತನು ಸತ್ಯೇಶ್ವರನೆಂಬ ಲಿಂಗವು, ಆ ಈಶ್ವರನ ದರ್ಶನದಿಂದ ದುರ್ಗತಿಯಿಲ್ಲ, ಆ ಸಮೀಪದಲ್ಲಿಹ ನಿನ್ನನ್ನು ಕುಮಾರಸ್ವಾಮಿಯನ್ನು ಪೂಜಿಸಲು ಪುನರ್ಜನ್ಮವಿಲ್ಲ, ಈ ರತ್ನೇಶ್ವರನಮಹಿಮೆಯನ್ನು ಕಲಿಯುಗವ ಮನುಷ್ಯರಿಗೆ ಹೇಳಲಾಗದು. ಈ ಅಧ್ಯಾಯವಂ ಭಕ್ತಿಯಿಂದ ಕೇಳಿದರೆ ಪುತ್ರಪೌತ್ರಧನಧಾನ್ಯ ಪಶುಸಮೃದ್ಧಿಯಹುದು ಬ್ರಹ್ಮಚಾರಿ ಕೇಳಲು ಅನುಕೂಲವಾದಸ್ತ್ರೀ ದೊರಕುವಳು, ತೊಡಗೂಸು ಕೇಳಲು ಒಳ್ಳೇ ಪತಿದೊರಕುವನು, ಮುತ್ತಾರು ಕೇಳಿದರೂ ಇಷ್ಟವಿಯೋಗವಿಲ್ಲದೆ ಸುಖದಲ್ಲಿ ಇಹರು ಎಂದು ಪರಮೇಶ್ವರನು ಪಾರ್ವತೀದೇವಿಗೆ ನಿರೂಪಿಸಿದನು ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನು ಎಂದು ವ್ಯಾಸರು ತನಗೆ ಬುದ್ಧಿಗಲಿಸಿದ ಅರ್ಥವನ್ನು ಸೂತಪುರಾಣಿಕನು ಶೌನಕಾದಿಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ. *

ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀಕೃಷ್ಣರಾಜವಡೆಯರವರುಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದವಿರಚಿಸಿದ ಸ್ಕಂದಪುರಾಣೋಕ್ತಕಾಶೀಮಹಿಮಾರ್ಥದರ್ಪಣದಲ್ಲಿ ರತ್ನೇಶ್ವರನ ಪ್ರಭಾವ, ರತ್ನಾವಳೀ ರತ್ನಚೂಡನ ವೃತ್ತಾಂತವೆಂಬ ಅರವತ್ತೇಳನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * * * * *

ಅರವತ್ತೆಂಟನೇ ಅಧ್ಯಾಯ

ಗಜಾಸುರನ ಸಂಹಾರ, ಕೃತ್ತಿವಾಸೇಶ್ವರನ ಉತ್ಪತ್ತಿ.

ಶ್ರೀ ವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ಕುಮಾರಸ್ವಾಮಿ ಇಂತೆಂದನು— ಕೇಳೈ ಅಗಸ್ತ್ಯನೆ! ಮತ್ತೂ ಕಾಶೀಕ್ಷೇತ್ರದಲ್ಲಿ ಒಂದು ವೃತ್ತಾಂತವುಂಟು, ಆ ವೃತ್ತಾಂತವಂ ಕೇಳಲು ಮಹಾಪಾತಕಪರಿಹರ, ಸಕಲ ಐಶ್ವರ್ಯಕರವಾದುದು, ಆ ವೃತ್ತಾಂತಮಂ ಪೇಳುವೆನು ಕೇಳು, ಪರಮೇಶ್ವರನು ಪಾರ್ವತೀದೇವಿಗೆ ರತ್ನೇಶ್ವರನ ಮಹಿಮೆಯಂ ಪೇಳುತ್ತಿರಲು, ನಾನಾದಿಕ್ಕಿನಲ್ಲೂ ನಮ್ಮ ರಕ್ಷಿಸು ರಕ್ಷಿಸು, ಎಲೈ ಮಹಾದೇವಾ!

ಎಂಬ ಕೋಲಾಹಲಧ್ವನಿಯು ಕೇಳಲು, ಪರಮೇಶ್ವರನು ಆ ಧ್ವನಿಯಂ ಕೇಳಿ, ಇದೇನು ? ಮಹಾರಭಸವೆಂದು ನುಡಿಯುತ್ತಿರಲು, ಅನಿತರೊಳು ಮಹಿಷಾಸುರನ ಕುಮಾರನಾದ ಗಜಾಸುರನು ಸಕಲ ದೇವತೆಗಳನ್ನೂ, ಸಕಲ ಪ್ರಮಥರನ್ನೂ ಸಂಹಾರ ಮಾಡುತ್ತಾ ಎಲ್ಲೆಲ್ಲಿ ಹೆಜ್ಜೆಯನಿಡುವನೋ ಅವನ ಭಾರಕ್ಕೆ ಭೂಮಿ ಕುಸಿದು ಬೆಟ್ಟಗಳು ಅಲ್ಲಾಡುತ್ತಿರಲು, ನಡೆವವೇಗದಿಂ ಪುಟ್ಟಿದ ವಾಯುವಿನಿಂದ ಮಹಾಮರಂಗಳಂ ಬೇರುವರಸೆ ಕಿತ್ತು ಬೀಳುತ್ತಿರಲು, ಭುಜಸೋಂಕಿನಿಂದ ಬೆಟ್ಟಗಳು ಚೂರ್ಣವಾಗುತ್ತಿರಲು, ಆಕಾಶವೆಲ್ಲವೂ ಕಪ್ಪಾಗುವಂತೆ ತೋರ್ಪ ಮಂಡೆ ಕೂದಲುಗಳಿಂದ ನಿಶ್ವಾಸ ಉಶ್ವಾಸಗಳಿಂದ ಸಮುದ್ರಂಗಳು ಉಲ್ಲೋಲಕಲ್ಲೋಲವಾಗುತ್ತಿರಲು, ನದಿಗಳು ಹೆದ್ದೆರೆಗಳಾಗಲು, ಅವನ ನೇತ್ರಕಾಂತಿಭರದಿಂದ ಮಿಂಚು ಚಂಚಲತ್ವವನ್ನೈದಲು, ಒಂಭತ್ತು ಸಾವಿರ ಯೋಜನದ ಉನ್ನತ, ಅನಿತು ವಿಸ್ತಾರದಿಂದ ಮಹಾಭಯಂಕರವಾದ ಮಹಾದೇಹವುಳ್ಳ ಗಜಾಸುರನು ಬ್ರಹ್ಮನಿರ್ಮಿತವಾದ ಸ್ತ್ರೀಪುರುಷ ಸಕಲಪ್ರಾಣಿಗಳಿಂದಲೂ ತನಗೆ ಮರಣವಿಲ್ಲದಂತೆ ಬ್ರಹ್ಮನಿಂದ ವರವಪಡೆದವನಾಗಿ ಸಕಲ ಲೋಕವನ್ನೂ ತೃಣೀಕರಿಸಿ, ಶೂಲವಂ ಪಿಡಿದು ಅತ್ಯಂತವೇಗವುಳ್ಳವನಾಗಿ ಭಯಂಕರಾಕಾರದಿಂದ ಬಹ ರಾಕ್ಷಸನಂ ಕಂಡು ಪರಮೇಶ್ವರನು ತನ್ನ ಮನದಲ್ಲಿ ಇಂತೆಂದನು,— ಈ ರಾಕ್ಷಸನು ಮಿಕ್ಕಾದ ಜೀವಜಾತದಿಂ ಮರಣವಾಗದಂತೆ ಬ್ರಹ್ಮನಿಂದ ವರವಪಡೆದಿದ್ದಾನು, ಅವರಿಂದ ಮಿಕ್ಕಾದವರ ಕೈಯಲ್ಲಿ ಹತನಾಗನು ಎಂದು ಚಿಂತಿಸಿ, ಪರಮೇಶ್ವರನು ಆ ರಾಕ್ಷಸನ ಕೂಡೆ ಘೋರಯುದ್ಧವಂ ಮಾಡಿ, ತನ್ನ ಹಸ್ತದ ಶೂಲದಿಂದ ಆ ಗಜಾಸುರನ ಇರಿದು ಮೇಲಕ್ಕೆ ಎತ್ತಿ ತನಗೆ ಛತ್ರವಮಾಡಿಕೊಳ್ಳಲು, ಆ ತ್ರಿಶೂಲದ ಮೇಲಣಿಂದಲೇ ಗಜಾಸುರನು ಪರಮೇಶ್ವರನ ಸ್ತುತಿಸಿದನದೆಂತೆನೆ— ಎಲೈ ಶೂಲಪಾಣಿ! ದೇವೇಶ, ನಿಮ್ಮನು ಸ್ಮರಸಂಹಾರಕನೆಂದು ಬಲ್ಲೆನು, ಎಲೈ ತ್ರಿಪುರಾಂತಕ! ನಿಮ್ಮಿಂದ ತನಗೆ ಮರಣವಾಗುವುದು ಮಹಾಪುಣ್ಯವಾದುದು, ನಿಮ್ಮ ಪಾದಾರವಿಂದವು ಸಕಲವಾದ [illegible] ಮಾಡಿಸಿಕೊಳ್ಳತಕ್ಕದ್ದು, ನೀನು ಪ್ರಪಂಚಾ

ತೀತನು, ಲೋಕದ ಜೀವರಿಗೆ ತಮ್ಮ ತಮ್ಮ ಕಾಲದಲ್ಲಿ ಮಾಡಿದ ಪಾಪ ಪುಣ್ಯದಿಂ ಮರಣವಹುದು ಸಿದ್ಧವು, ನಿಮ್ಮ ಕೈಯ್ಯ ತ್ರಿಶೂಲದ ಮೊನೆ ಯಲ್ಲಿ ಮರಣವಾಹಂಥಾ ನಾನು ಮಹಾಧನ್ಯನು, ಇಂತೆಂದು ಗಜಾಸು ರನು ನುಡಿದ ವಾಕ್ಯವಂ ಕೇಳಿ, ಕೃಪಾಳುವಾದ ಪರಮೇಶ್ವರನು ಮುಗು ಳುನೆಗೆಯಿಂದಿಂತೆಂದನು,—ಎಲೈ ಗಜಾಸುರನೆ! ನೀನು ಪ ರುಷವುಳ್ಳವ ನಾದಕಾರಣ ನಿನಿಗೆ ತಾನು ಪ್ರಸನ್ನನಾದೆನು, ನಿನಿಗೆ ಬೇಕಾದ ವರವಬೇ ಡಿಕೊಳ್ಳೆನಲು, ಪರಮೇಶ್ವರನ ವಾಕ್ಯವಂ ಕೇಳಿ, ಮಹೇಶ್ವರಂಗೆ ಅಸು ರನಿಂತೆಂದನು— ಎಲೈ ದಿಗಂಬರನಾದ ಸ್ವಾಮಿ! ನೀವು ನನಿಗೆ ಪ್ರಸನ್ನ ನಾದುದುಂಟಾದರೆ ನಿಮ್ಮ ತ್ರಿಶೂಲಾಗ್ನಿಯಿಂದ ಪವಿತ್ರವು ಮಾಡಲ್ಪಟ್ಟ ವಿಶಾಲವಾದ ಮೃದುವಾದ ರಣವೆಂಬ ಮೌಲ್ಯದಿಂ ಕ್ರಯಕ್ಕೆ ಕೊಂಡ ತನ್ನ ತೇಪ್ತೋಜ್ವಾಲೆಯಿಂದದಗ್ಧವಾಗದೆ ಇದ್ದಂಥಾ ಈ ತನ್ನ ಚರ್ಮವು ನೀವು ಅತಿಪ್ರೀತಿಯಿಂ ನಿತ್ಯವೂ ಧರಿಸಬೇಕು, ಈ ಚರ್ಮವು ನಿಮಗೆ ಇಷ್ಟಗಂ ಧವುಳ್ಳದ್ದಾಗಿ ಅತಿಶೋಭನವಾಗಿ ಎಂದಿಗೂ ನಾಶವಿಲ್ಲದೆ ಅಲಂಕಾರವಾಗಿ ಇರಲಿ, ಈ ಚರ್ಮ ಪವಿತ್ರವಲ್ಲದೆ ಇದ್ದರೆ ನಿಮ್ಮ ಅಂಗಸಂಗ ಇದಕ್ಕೆ ದೊ ರಕುವದು ಹ್ಯಾಗೆ; ಎಲೈ ಪಾರ್ವತೀರಮಣನೆ! ಎನಗೆ ಇನ್ನೊಂದು ವರವ ನೀಯಬೇಕು ಎಂಬ ಆ ದೈತ್ಯನ ವಾಕ್ಯವಂ ಕೇಳಿ, ಪರಮೇಶ್ವರ ನಿಂತೆಂದನು,— ಎಲೈ ಪುಣ್ಯಾತ್ಮನಾದ ಗಜಾಸುರನೆ! ಮುಕ್ತಿಸಾಧನ ವಾದ ಈ ಅವಿಮುಕ್ತಕ್ಷೇತ್ರದಲ್ಲಿ ಪರಮಪವಿತ್ರವಾದ ನಿನ್ನ ಶರೀರವು ಸಕ ಲರಿಗೂ ಮುಕ್ತಿಯನೀವ ಎನ್ನ ಸ್ವರೂಪವಾಗಲಿ, ಈ ನಿನ್ನ ಚರ್ಮವಧರಿಸಿದ ಲಿಂಗದ ಪೆಸರು ಕೃತ್ತಿವಾಸೇಶ್ವರನೆಂದು ಪ್ರಸಿದ್ಧವಾಗಲಿ, ಈ ಕ್ಷೇತ್ರದಲ್ಲಿ ರ್ದ ಸಕಲ ಲಿಂಗಗಳಿಗೂ ಶಿರೋಭೂಷಣವಾಗಲಿ, ಮನುಷ್ಯರಿಗೆ ಹಿತ ವಾಗಲಿ, ಈ ಲಿಂಗದಲ್ಲಿ ನಿತ್ಯವೂ ಸಾನ್ನಿಧ್ಯವಾಗಿ ಇದ್ದೇನೆ, ಈ ಕೃತ್ತಿ ವಾಸೇಶ್ವರನ ದರ್ಶನ, ಪೂಜೆ ನಮಸ್ಕಾರಗಳಿಂದ ನನ್ನ ಶರೀರದಲ್ಲಿ ಪ್ರವೇ ಶವಹರು, ಅದುಕಾರಣ ಮನುಷ್ಯಜನ್ಮವನೆತ್ತಿದ ಬಳಿಕ ಅವಿಮುಕ್ತ ಕ್ಷೇತ್ರದಲ್ಲಿಯೆ ಇರಬೇಕು, ಶತರುದ್ರೀಯ ಜಪವನೆ ಮಾಡಬೇಕು, ಕೃ ತ್ತಿವಾಸೇಶ್ವರನ ಸೇವೆಯನ್ನೆ ಮಾಡಬೇಕು, ಈ ಕಾಶೀಕ್ಷೇತ್ರದಲ್ಲಿ ಸಪ್ತ

ಕೋಟಿ ಮಹಾಮಂತ್ರಂಗಳ ಜಪಿಸಿದ ಫಲವು ಈ ಕೃತ್ತಿವಾಸೇಶ್ವರನ ಸೇವೆಯಿಂದ ದೊರಕುವದು, ಶಿವರಾತ್ರಿಯಲ್ಲಿ ಕೃತ್ತಿವಾಸೇಶ್ವರನ ಪೂಜಿಸಿ ರಾತ್ರಿ ಜಾಗರಣವಂ ಮಾಡಲು ಮೋಕ್ಷವಹುದು, ಚೈತ್ರಶುದ್ಧಪೌರ್ಣಮಿಯಲ್ಲಿ ಕೃತ್ತಿವಾಸೇಶ್ವರನ ಪೂಜೆಯಂ ಮಾಡಲು ಪುನರ್ಗರ್ಭವಾಸವಿಲ್ಲ. ಇಂತೆಂದು ಪರಮೇಶ್ವರನು ಗಜಾಸುರಗೆ ವರವನಿತ್ತು ತ್ರಿಶೂಲದಲ್ಲಿ ಅವನ ಚರ್ಮವಂ ಸುಲಿದು ಧರಿಸಿದನು, ಆ ಗಜಚರ್ಮವ ಧರಿಸಿದ ದಿನದಲ್ಲಿ ಮಹೋತ್ಸವವಾಯಿತು ಎಂದು ಈ ರೀತಿಯಲ್ಲಿ ಕುಮಾರಸ್ವಾಮಿ ಗಜಾಸುರನ ವೃತ್ತಾಂತವಂ ಪೇಳಿ ಅಗಸ್ತ್ಯಂಗೆ ಮತ್ತಿಂತೆಂದನು- ಕೇಳ್ಳೈ ಅಗಸ್ತ್ಯನೆ! ಪರಮೇಶ್ವರನು ಗಜಾಸುರನಂ ಬಾಲದಿಂದೆತ್ತಿ ಚರ್ಮವಂಧರಿಸಿ ತ್ರಿಶೂಲವ ಆ ಸ್ಥಳದಲ್ಲಿ ನೆಡಿಸಿ, ಆ ತ್ರಿಶೂಲವ ಕೀಳಲು ಅಲ್ಲಿ ಘನವಾದ ತ್ರಿಶೂಲತೀರ್ಥವೆಂಬ ಸರಸ್ಸು ಪುಟ್ಟಿತು, ಅಲ್ಲಿ ಸ್ನಾನ, ತರ್ಪಣಾದಿ ಕ್ರಿಯೆಗಳಂ ಮಾಡಿ, ಕೃತ್ತಿವಾಸೇಶ್ವರನ ದರ್ಶನ ಪೂಜೆಯಂಮಾಡಿದವನು ಕೃತಕೃತ್ಯನಹನು, ಎಂದು ಕುಮಾರಸ್ವಾಮಿ ಕೃತ್ತಿವಾಸೇಶ್ವರನ ಮಹಿಮೆಯಂ ಪೇಳಿ ಮತ್ತಿಂತೆಂದನು— ಕೇಳ್ಳೈ ಅಗಸ್ತ್ಯನೆ! ಈ ತ್ರಿಶೂಲತೀರ್ಥದಲ್ಲಿ ಮತ್ತೊಂದು ವೃತ್ತಾಂತವುಂಟು, ಅದಾವುದೆನೆ— ಪೂರ್ವದಲ್ಲಿ ಒಂದಾನೊಂದು ಚೈತ್ರಶುದ್ಧ ಪೌರ್ಣಮಿಯಲ್ಲಿ ಕೃತ್ತಿವಾಸೇಶ್ವರನ ಮುಂದೆ ಬಲಿಪೀಠದಲ್ಲಿ ನೈವೇದ್ಯಾರ್ಥವಾಗಿ ಅನ್ನದ ರಾಶಿಯ ಸುರಿದಿರಲು ಆ ಅನ್ನವಂ ನೋಡಿ, ಬಹುಪಕ್ಷಿಗಳು ಮುಸುಕಿ ಅನ್ನವಕಚ್ಚಿಕೊಂಡು ಆಕಾಶಮಾರ್ಗದಲ್ಲಿ ಪೋಗುತ್ತಾ ತಮ್ಮೊಳು ತಾವು ಕಾದಿಹೋರಾಡಿ ಬಲವಂತವಾದ ಪಕ್ಷಿಗಳು ತಮ್ಮ ಮೂಗುಗಳಿಂದ ಕಾಗೆಗಳಂ ಹೊಯ್ಯಲು, ಆ ಪಕ್ಷಿಗಳ ತುಂಡನಖದಿಂದ ನೊಂದು ಕಾಗೆಗಳು ತ್ರಿಶೂಲತೀರ್ಥದ ಕೊಳದೊಳಗೆ ಬಿದ್ದು ಆಯುಷ್ಯದಿಂ ಬದುಕಿ ಹಂಸಗಳಾದವು, ಆ ವೃತ್ತಾಂತವಂ ಪರುಷೆಯವರು ನೋಡಿ, ಆಶ್ಚರ್ಯಪಟ್ಟು ಬೆರಳು ತೋರಿ, ತಮ್ಮೊಳು ತಾವು ಇಂತೆಂದರು: ಇದೊಂದು ಆಶ್ಚರ್ಯವಂ ನೋಡಿ ನಾವೆಲ್ಲರೂ ನೋಡುತ್ತಿರಲು, ಈ ಕೊಳದೊಳಗೆ ಬಿದ್ದ ಕಾಗೆಗಳು ಈ ತೀರ್ಥಪ್ರಭಾವದಿಂ ಹಂಸೆಗಳು ಆದವು ಎಂದು ಆಶ್ಚ

ರ್ಯಪಟ್ಟರು, ಅಂದು ಮೊದಲಾಗ ತ್ರಿಶೂಲತೀರ್ಥ ಹಂಸತೀರ್ಥವೆಂದು ಪ್ರಸಿದ್ಧವಾಯಿತು, ಈ ಹಂಸತೀರ್ಥದಲ್ಲಿ ನಿತ್ಯವೂ ಸ್ನಾನವಂ ಮಾಡಿ, ಕೃತ್ತಿವಾಸೇಶ್ವರನಂ ಪೂಜಿಸಲು ಪರಮಪದವು ಅತಿ ಸುಲಭವಾಗಿ ಇಹದು. ಕೇಳೈ ಅಗಸ್ತ್ಯನೆ! ಕಾಶಿಯಲ್ಲಿ ಹೆಜ್ಜೆ ಹೆಜ್ಜೆಗೆ ಅನಂತ ಲಿಂಗಗಳುಂಟು, ಅದರೊಳು ಕೃತ್ತಿವಾಸೇಶ್ವರ ಶ್ರೇಷ್ಠ, ಅನಂತತೀರ್ಥಗಳು ಕಾಶಿಯಲ್ಲಿವುಂಟು, ಅದರಲ್ಲಿ ಹಂಸತೀರ್ಥವೆ ಶ್ರೇಷ್ಠವು, ಈ ಹಂಸತೀರ್ಥದಲ್ಲಿ ಸ್ನಾನವಂ ಮಾಡಿ, ಕೃತ್ತಿವಾಸೇಶ್ವರನಂ ಪೂಜಿಸಲು ಸಕಲ ಲಿಂಗಗಳನ್ನೂ ಆರಾಧಿಸಿದ ಫಲವುಂಟು, ಹಂಸತೀರ್ಥದಲ್ಲಿ ಸ್ನಾನವಂ ಮಾಡಲು ಸಕಲ ತೀರ್ಥಸ್ನಾನ ಫಲವುಂಟು. ಈ ಕೃತ್ತಿವಾಸೇಶ್ವರನ ಸಮೀಪದಲ್ಲಿ ಮಾಡಿದ ತಪಸ್ಸು, ದಾನ, ಜಪ, ಹೋಮ, ದೇವತಾರ್ಚನೆ ಮೊದಲಾದವೆಲ್ಲವೂ ಅನಂತಫಲ, ಈ ತೀರ್ಥವೂ ಲಿಂಗವೂ ಅನಾದಿಸಿದ್ಧವಾದುದು ಈಗ ಪರಮೇಶ್ವರನ ಸಾನ್ನಿಧ್ಯದಿಂದ ಪ್ರಕಟವಾಯಿತು, ಇಲ್ಲಿ ಸಮಸ್ತಲಿಂಗಗಳೂ ಗೂಢವಾಗಿಯಿಹವು, ಆ ಲಿಂಗಗಳು ಕಾತ್ಯಾಯನೀಶ್ವರ ಮೊದಲಾಗಿ ಚ್ಯವನೇಶ್ವರ ಕಡೆಯಾಗಿ ಇಹವು, ಕೃತ್ತಿವಾಸೇಶ್ವರನ ಪಶ್ಚಿಮದಲ್ಲಿಹ ಲೋಮಶಮುನಿಯಿಂದ ಪ್ರತಿಷ್ಠಿತವಾದ ಲೋಮಶೇಶ್ವರನ ಪೂಜಿಸಲು ಯಮಬಾಧೆಯಿಲ್ಲ, ಆ ಉತ್ತರದಲ್ಲಿ ಮಾಲತೀಶ್ವರನ ಪೂಜಿಸಲು ಗಜಪತಿಯಹನು, ಆ ಈಶಾನ್ಯದಲ್ಲಿ ಅನಂತೇಶ್ವರನಂ ಪೂಜಿಸಲು ಸಕಲಪಾಪಹರ, ಆ ಸಮೀಪದಲ್ಲಿಹ ಜನಕೇಶ್ವರನ ಪೂಜಿಸಲು ಬ್ರಹ್ಮಜ್ಞಾನವಹುದು, ಆ ಉತ್ತರದಲ್ಲಿಹ ಅಸಿತಾಂಗಭೈರವನ ಪೂಜಿಸಲು ಯಮದರ್ಶನವಿಲ್ಲ, ಆ ಉತ್ತರದಲ್ಲಿ ಶುಷ್ಕೋದರಿಯಂಬ ಶಕ್ತಿಯಂ ಸೇವಿಸಲು ಸಕಲಸಿದ್ಧಿಯಹುದು, ಆ ನೈಋತ್ಯದಲ್ಲಿಹ ಅಗ್ನಿಜಿಹ್ವನೆಂಬ ಭೇತಾಳನಂ ಪೂಜಿಸಲು ಮನೋರಥ ಸಿದ್ಧಿಯಹುದು, ಅಲ್ಲಿಹ ಭೇತಾಳತೀರ್ಥದಲ್ಲಿ ಸ್ನಾನವಂ ಮಾಡಲು ವ್ರಣ, ತುರಿ, ದದ್ರು, ಮಚ್ಚೆ ಮೊದಲಾದ ಪಾಪವ್ಯಾಧಿ ಪರಿಹರವಾಗಿ ಇಷ್ಟಸಿದ್ಧಿಯಹುದು, ಆ ಸಮೀಪದಲ್ಲಿಹ ಎರಡುಹಸ್ತ, ನಾಲ್ಕು ಪಾದ, ಐದು ಶಿರಸ್ಸುವುಳ್ಳ ಶಿವಗಣರೂಪಾದ ಲಿಂಗವಪೂಜಿಸಲು ಮನೋರಥಸಿದ್ಧಿಯಹುದು, ಆ

ಸಮೀಪದಲ್ಲಿಹ ವೃಷಭಾಕಾರವಾದ ಮೂರು ಪಾದ, ಎರಡು ಶಿರಸ್ಸು, ನಾಲ್ಕು ಕೊಂಬು, ಯೇಳು ಹಸ್ತ ಶ್ರೀ ಮೇಖಲೆಯುಳ್ಳ ವೃಷಭರುದ್ರನಂ ಪೂಜಿಸಲು ಸಕಲ ವಿಘ್ನಹರವು, ಆ ಉತ್ತರದಲ್ಲಿಹ ಮಣಿತೀರ್ಥದಲ್ಲಿ ಸ್ನಾನವಂ ಮಾಡಿ ಮಣಿಪ್ರದೀಪನೆಂಬ ನಾಗಮೂರ್ತಿಯಂ ಪೂಜಿಸಲು ಮಣಿಮಾಣಿಕ್ಯ ಗಜ ತುರಗ ಪುತ್ರಮಿತ್ರಸಮೃದ್ಧಿವುಳ್ಳವರಾಗಿ ರಾಜ್ಯಾಧಿಪತಿಯಹರು, ಎಲೈ ಅಗಸ್ತ್ಯನೆ! ಈ ಅಧ್ಯಾಯವಂ ಭಕ್ತಿಯಿಂದ ಕೇಳಿದವರಿಗೆ ಸಕಲ ಶ್ರೇಯಸ್ಸುವುಂಟು ಎಂದು ಕುಮಾರಸ್ವಾಮಿ ಹೇಳಿದ ಅರ್ಥವಂ ವ್ಯಾಸರು ತನಗೆ ಬುದ್ಧಿಗಲಿಸಿದರೆಂದು ಸೂತಪುರಾಣಿಕನು ಶೌನಕಾದಿಋಷಿಗಳಿಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ * * *

ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಗಜಾಸುರನ ಸಂಹಾರ ಕೃತ್ತಿವಾಸೇಶ್ವರನ ಉತ್ಪತ್ತಿಯೆಂಬ ಅರವತ್ತೆಂಟನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * * * * *

ಅರವತ್ತೊಂಭತ್ತನೇ ಅಧ್ಯಾಯ

ಅರವತ್ತೆಂಟು ದಿವ್ಯಸ್ಥಾನದಿಂ ಲಿಂಗತೀರ್ಥಗಳಂ ತಂದದ್ದು.

ಶ್ರೀ ವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ಅಗಸ್ತ್ಯಂಗೆ ಕುಮಾರಸ್ವಾಮಿ ಇಂತೆಂದನು— ಕೇಳೈ ಅಗಸ್ತ್ಯನೇ? ಕಾಶಿಯಲ್ಲಿ ಮುಮುಕ್ಷುಗಳಿಂದ ಸೇವಿಸಲ್ಪಟ್ಟ ಲಿಂಗಗಳ ಹೇಳುವೆನು ಕೇಳು, ಪರಮೇಶ್ವರನು ಗಜಚರ್ಮವಂ ಧರಿಸಿದ ಸ್ಥಳವು ರುದ್ರವಾಸವೆನಿಸುವದು, ಆ ರುದ್ರವಾಸಸ್ಥಳದಲ್ಲಿ ಪರಮೇಶ್ವರನು ಪಾರ್ವತೀಸಮೇತನಾಗಿ ಸುಖದಲ್ಲಿ ಇರುತ್ತಿರಲು, ನಂದಿಕೇಶ್ವರನು ಬಂದು ಸಾಷ್ಟಾಂಗನಮಸ್ಕಾರವಂ ಮಾಡಿ, ಎದ್ದು ಕೈಗಳಮುಗಿದು ಬಿನ್ನೈಸಿದನು ಅದೆಂತೆನೆ— ಎಲೈ ದೇವದೇವನೆ! ದೇವೇಶ್ವರನಾದ ವಿಶ್ವನಾಥನೆ! ಭೂಲೋಕ ಭುವರ್ಲೋಕಗಳಲ್ಲಿ ವಿಶೇಷವಾದ ದೇವಸ್ಥಾನಗಳೆಷ್ಟುವುಂಟೋ ಅವೆಲ್ಲವನ್ನು ಅಲ್ಲ

ಲ್ಲಿ ಅಂಶಮಾತ್ರವನಿಲ್ಲಿಸಿ ಮಿಕ್ಕಾದವೆಲ್ಲವನ್ನೂ ಲಿಂಗಗಳು ತೀರ್ಥಗಳು ಉಪ್ಪರಿಗೆಗಳು ಸಹ ಕೊಂಡುಬಂದೆನು, ಈ ಕಾಳಿಯಲ್ಲಿ ದಿವ್ಯ ರತ್ನಖಚಿತವಾದ ಉಪ್ಪರಿಗೆಗಳು ಅರವತ್ತೆಂಟು ಮೊದಲೆ ಇದ್ದಾವು, ತಾನು ಈಗ ಆವಾವಸ್ಥಳಗಳಿಂದ ತಂದ ಲಿಂಗತೀರ್ಥ, ಉಪ್ಪರಿಗೆಗಳು ಎಷ್ಟುವುಂಟೋ ಅವೆಲ್ಲವಂ ಬಿನ್ನಹವಂ ಮಾಡೇನು ಕೇಳು, ಚಿತ್ತೈಸಿ ಎಂದು ಬಿನ್ನವಿಸಿದನದೆಂತೆನೆ— ಎಲೈ ಸ್ವಾಮಿ! ಕುರುಕ್ಷೇತ್ರದಿಂದ ಸನ್ನಿಹತ್ಯಾತೀರ್ಥ ಸಹಿತವಾಗಿ ಸ್ಥಾಣೂಯೆಂಬ ಲಿಂಗವಂ ತಂದು ಲೋಲಾರ್ಕಲಿಂಗದ ಸಮೀಪದಲ್ಲಿ ಪ್ರತಿಷ್ಠೆಯಂ ಮಾಡಿದೆನು, ಅಲ್ಲಿ ಸ್ನಾನ, ಜಪ, ಹೋಮ, ಪೂಜೆ ದಾನಂಗಳಂ ಮಾಡಲು ಕುರುಕ್ಷೇತ್ರದಲ್ಲಿ ಮಾಡಿದ ಪುಣ್ಯಕ್ಕೆ ಕೋಟಿಗುಣಿತ ಫಲವಹುದು, ನೈಮಿಶಾರಣ್ಯದಿಂದ ಬ್ರಹ್ಮಾವರ್ತ ತೀರ್ಥ ಸಹ ದೇವದೇವನೆಂಬ ಲಿಂಗವಂ ತಂದು ಢುಂಢಿಗಣಪತಿಯ ಉತ್ತರದಲ್ಲಿ ಪ್ರತಿಷ್ಠೆಯಂ ಮಾಡಿದೆನು, ಅಲ್ಲಿ ಸ್ನಾನ ಪೂಜೆಯ ಫಲವು ನೈಮಿಶಾರಣ್ಯದ ಕೋಟಿಫಲವುಂಟು, ಗೋಕರ್ಣದಿಂದ ಕೋಟಿತೀರ್ಥ ಸಹಿತ ಮಹಾಬಲೇಶ್ವರನೆಂಬ ಲಿಂಗವಂ ತಂದು ಸಾಂಬಾದಿತ್ಯನ ಸಮೀಪದಲ್ಲಿಹ ಕಪಾಲಮೋಕ್ಷ ತೀರ್ಥದ ಮೂಡಲುಬಳಿಯಲ್ಲಿ ಇರಿಸಿದೆನು, ಅಲ್ಲಿಯ ಸ್ನಾನಾದಿಗಳಿಂದ ಮೋಕ್ಷವಹುದು, ಪ್ರಭಾಸಕ್ಷೇತ್ರದಿಂದ ಪ್ರಭಾಸತೀರ್ಥ ಸಹ ಶಶಿಭೂಷಣನೆಂಬ ಲಿಂಗವಂ ತಂದು ಋಣವಿಮೋಚನತೀರ್ಥದ ಮೂಡಲಲ್ಲಿ ಇರಿಸಿದೆನು, ಅಲ್ಲಿ ಸ್ನಾನ ಪೂಜೆಗಳಿಂದ ಶಿವಸಾರೂಪ್ಯವಹದು, ಉಜ್ಜಯಿನಿಯಿಂದ ಮಹಾಕಾಳೇಶ್ವರನಂ ತಂದು ಓಂಕಾರೇಶ್ವರನ ಮೂಡಲಲ್ಲಿ ಇರಿಸಿದೆನು, ಆ ತೀರ್ಥದರ್ಶನದಿಂ ಮೋಕ್ಷವಹುದು, ಪುಷ್ಕರತೀರ್ಥ ಸಹಿತ ಗಂಧರ್ವೇಶ್ವರನೆಂಬ ಲಿಂಗವಂ ತಂದು ಮತ್ಸ್ಯೋದರೀತೀರ್ಥದ ಉತ್ತರದಲ್ಲಿ ಪ್ರತಿಷ್ಠೆಯಂ ಮಾಡಿದೆನು, ಅಲ್ಲಿ ಸ್ನಾನಾದಿಗಳಂ ಮಾಡಲು ಮುಕ್ತಿಯಹುದು, ಮಹೇಂದ್ರಕ್ಷೇತ್ರದಿಂದ ಮಹಾವ್ರತೇಶ್ವರನಂ ತಂದು ಸ್ಕಂದೇಶ್ವರನ ಸಮೀಪದಲ್ಲಿ ಇರಿಸಿದೆನು, ಆ ಲಿಂಗದರ್ಶನದಿಂದ ಅಶ್ವಮೇಧಯಾಗಫಲ, ಕೃತಯುಗದಲ್ಲಿ ದೇವರ್ಕಳು ಋಷಿಗಳು ಸ್ತೋತ್ರವಂ ಮಾಡಲು? ಭೂಮಿಯಿಂದವಡೆದು ಮೂಡಿ ಕಾಶಿಯಂ ಮುಕ್ತಿಕ್ಷೇತ್ರವಂ

ಪ್ಥಾಪಿಸಿದ ಮಹಾ ದೇವೇಶ್ವರನ ದರ್ಶನದಿಂದ ಮಹೋತ್ಕಟೇಶ್ವರನ ಉತ್ತರದಲ್ಲಿ ಇರಿಸಿದೆನು, ಆ ಲಿಂಗದರ್ಶನದಿಂದ ಜ್ಞಾನಸಿದ್ಧಿಯುಹುದು, ವಿಶ್ವಸ್ಥಾನದಿಂದ ವಿಮಲೇಶ್ವರನೆಂಬ ಲಿಂಗವಂ ತಂದು ಸ್ವರ್ಗೇಶ್ವರನ ಪಶ್ಚಿಮದಲ್ಲಿ ಇರಿಸಿದೆನು, ಆ ಸ್ವಾಮಿಯ ದರ್ಶನದಿಂದ ಅಶ್ವಮೇಧ ಯಾಗಫಲವು ಚಿತ್ತಶುದ್ಧಿಯುಹುದು, ಆದರಿಂದಮೋಕ್ಷವಹುದು, ಆ ಸಮೀಪದಲ್ಲಿಸಕಲ ರತ್ನಮಯವಾದ ಮಹಾದೇವನ ಉಪ್ಪರಿಗೆ ಇದ್ಧೀತು, ಆ ಉಪ್ಪರಿಗೆಯಂ ನೋಡಲು ತ್ರೈಲೋಕ್ಯದರ್ಶನವಂ ಮಾಡಿದ ಫಲವು, ಆ ಸ್ವಾಮಿಗೆ ಶ್ರಾವಣಮಾಸದಲ್ಲಿ ನೂಲಪೂಜೆಯಂ ಮಾಡಲು ಪುನರ್ಜನ್ಮವಿಲ್ಲ, ಗಯಾಕ್ಷೇತ್ರದಿಂದ ಫಲ್ಗುನೀ ಮೊದಲಾದ ಎಂಟುಕೋಟಿ ತೀರ್ಥ ಸಹ ಪಿತಾಮಹೇಶ್ವರನ ತಂದು ಧರ್ಮೇಶ್ವರನ ಸಮೀಪದಲ್ಲಿ ಇರಿಸಿದೆನು, ಆ ಸ್ವಾಮಿಯ ಪೂಜೆಯಿಂದ ಎರಡು ವಂಶದ ಪಿತೃಗಳಿಗೂ ಮುಕ್ತಿಯುಹುದು, ಪ್ರಯಾಗಕ್ಷೇತ್ರದಿಂದ ಪ್ರಯಾಗತೀರ್ಥ ಸಹ ಶೂಲಟಂಕೇಶ್ವರನ ಪೂಜೆಯಂ ಮಾಡಲೋಸ್ಕರ ಅಲ್ಲಿಂದ ಕನಕಮಯವಾದ ಉಪ್ಪರಿಗೆಯಂ ತಂದು ಗೀರ್ವಾಣಮಂಟಪದ ತೆಂಕಲಲ್ಲಿ ಇರಿಸಿದೆನು, ಆ ಪ್ರಯಾಗತೀರ್ಥದಲ್ಲಿ ಸ್ನಾನವಂ ಮಾಡಿ ಶೂಲಟಂಕೇಶ್ವರನ ಪೂಜಿಸಿದರೆ ಪ್ರಯಾಗದಲ್ಲಿಮಕರಸ್ನಾನವಂ ಮಾಡಿದ ಫಲವಹುದು, ಶಂಕು ಕರ್ಣಸ್ಥಾನದಿಂ ಮಹಾತೇಜೇಶ್ವರನೆಂಬ ಲಿಂಗವಂ ಮಹಾತೇಜೋನಿಧಿಯೆಂಬ ಉಪ್ಪರಿಗೆಯಂ ತಂದು ವಿನಾಯಕೇಶ್ವರನ ಪೂರ್ವಭಾಗದಲ್ಲಿ ಇರಿಸಿದೆನು, ಆ ಈಶ್ವರನದರ್ಶನ ಪೂಜೆಯಿಂದ ಪುನರುತ್ಪತ್ತಿಯಿಲ್ಲ, ರುದ್ರಕೋಟ ಕ್ಷೇತ್ರದಿಂ ಮಹಾಯೋಗೀಶ್ವರನೆಂಬ ಲಿಂಗವಂ ತಂದು ಪಾರ್ವತೀಶ್ವರನ ಸಮೀಪದಲ್ಲಿ ಇರಿಸಿದೆನು, ಆ ಲಿಂಗದರ್ಶನ ಪೂಜೆಯಿಂದ ಕೋಟಿಲಿಂಗಗಳ ಪ್ರತಿಷ್ಠೆಯಂ ಮಾಡಿದ ಫಲವಹುದು, ಆ ಲಿಂಗದ ಉಪ್ಪರಿಗೆಯಂ ಬಳಸಿ ರುದ್ರಮೂರ್ತಿಗಳು ನಿರ್ಮಿಸಲ್ಪಟ್ಟವು, ಕಾಶಿಯಲ್ಲಿ ಆ ಸ್ಥಾನವು ರುದ್ರಸ್ಥಾನವೆಂದು ತತ್ವಜ್ಞರಾದವರು ಹೇಳುವರು, ಆ ರುದ್ರಸ್ಥಳದಲ್ಲಿ ಮೃತವಾದ ಪಶು ಪಕ್ಷಿ ಮೃಗ ಕೀಟ ಪತಂಗ ದೀಕ್ಷಿತರಾಗಲಿ ಆರಾಗಲಿ ಅವರೆಲ್ಲರೂ ಮುಕ್ತರಹರು ಸಂದೇಹವಿಲ್ಲ, ಏಕಾಮ್ರಕ್ಷೇತ್ರದಿಂದ ಕೃತ್ತಿವಾಸೇಶ್ವರನ

ತಂದು ಕೃತ್ತಿವಾಸೇಶ್ವರನ ಸಮೀಪದಲ್ಲಿ ಇರಿಸಿದೆನು, ಆ ಲಿಂಗದರ್ಶನದಿಂದಲೂ ಆ ಸ್ಥಳದಲ್ಲಿ ಮೃತವಾದವರಿಗೂ ಸಾಂಬಸದಾಶಿವನು ತಾರಕಬ್ರಹ್ಮೋಪದೇಶವಂ ಮಾಡುವನು, ಮನೋಗಜಕ್ಷೇತ್ರದಿಂದ ಚಂಡೇಶ್ವರನ ತಂದು ಕಂಟಗಣಪತಿಯ ಸಮೀಪದ ವಾಯುವ್ಯದಲ್ಲಿ ಇರಿಸಿದೆನು, ಚಂಡಿಕೇಶ್ವರನ ದರ್ಶನ ಪೂಜೆಯಿಂದ ಪರಮಗತಿಯುಂಟು, ಕಾಲಂಜರಕ್ಷೇತ್ರದಿಂದ ನೀಲಕಂಠೇಶ್ವರನ ಮೂಡಲಲ್ಲಿ ನಿಜವೆಂಬ ಲಿಂಗವು ಉದ್ಭವವಾದಲ್ಲಿ ಪ್ರತಿಷ್ಠೆಯಂ ಮಾಡಿದೆನು, ಆ ಲಿಂಗದ ಪೂಜೆಯಿಂದ ನೀಲಕಂಠರೂಪವಂ ಧರಿಸುವನು. ಈ ಕಾಶೀಕ್ಷೇತ್ರದಲ್ಲಿಹ ನೀಲಕಂಠವಿನಾಯಕನ ಮೂಡಲಲ್ಲಿ ನಿಜವೆಂಬ ಲಿಂಗವು ಉದ್ಭವವಾಯಿತು, ಆ ಲಿಂಗವಂ ಪೂಜಿಸಲು ರಣದಲ್ಲಿ, ರಾಜಸಭೆಯಲ್ಲಿ, ಜಲದಲ್ಲಿ, ವಿವಾದದಲ್ಲಿ ಜಯವುಂಟು. ತ್ರಿವಂಡಸ್ಥಾನದಿಂದ ಊರ್ಧ್ವರೇತನೆಂಬ ಲಿಂಗವಂ ತಂದು ಕೂಶ್ಮಾಂಡಗಣಪತಿಯ ಪಶ್ಚಿಮದಲ್ಲಿ ಸ್ಥಾಪಿಸಿದೆನು, ಆ ಲಿಂಗ ದರ್ಶನದಿಂದ ಊರ್ಧ್ವಲೋಕವಹುದು, ಮಂಡಲೇಶ್ವರಕ್ಷೇತ್ರದಿಂದ ಶ್ರೀಕಂಠೇಶ್ವರನ ತಂದು ಮುಂಡವಿನಾಯಕನ ಉತ್ತರದಲ್ಲಿ ಪ್ರತಿಷ್ಠೆಯಂ ಮಾಡಿದೆನು, ಆ ಸ್ವಾಮಿಯ ಪೂಜೆಯಿಂದ ಇಹದಲ್ಲಿ ಸಕಲೈಶ್ವರ್ಯವನನುಭವಿಸಿ ಅಂತ್ಯದಲ್ಲಿ ಶಿವಸಾರೂಪ್ಯವಹುದು, ಛಾಗಲಾಂಡತೀರ್ಥದಿಂದ ಕಪರ್ದೀಶ್ವರನ ತಂದು ಪಿಶಾಚವಿಮೋಚನತೀರ್ಥದ ಸಮೀಪದಲ್ಲಿ ಇರಿಸಿದೆನು, ಆ ಸ್ವಾಮಿಯ ಪೂಜೆಯಿಂದ ನರಕಭಯವಿಲ್ಲ, ಅಮೃತೇಶ್ವರ ಕ್ಷೇತ್ರದಿಂದ ಸೂಕ್ಷ್ಮೇಶ್ವರ ಲಿಂಗವ ತಂದು ವಿಕಟಗಣಪತಿಯ ಸಮೀಪದಲ್ಲಿ ಪ್ರತಿಷ್ಠೆಯಂ ಮಾಡಿದೆನು, ಆ ಲಿಂಗದರ್ಶನದಿಂದ ಸಾಯುಜ್ಯವಹುದು, ಮನುಕೇಶ್ವರಕ್ಷೇತ್ರದಿಂದ ಜಯಂತೇಶ್ವರನೆಂಬ ಲಿಂಗವ ತಂದು ಲಂಬೋದರಗಣಪತಿಯ ಮೂಡಲಲ್ಲಿ ಪ್ರತಿಷ್ಠೆಯಂ ಮಾಡಿದೆನು, ಆ ಲಿಂಗದರ್ಶನದಿಂದ ಸಕಲ ಮನೋರಥ ಸಿದ್ಧಿಯಹುದು, ಶ್ರೀಶೈಲದಿಂದ ತ್ರಿಪುರಾಂತಕೇಶ್ವರನ ತಂದು ವಿಶ್ವನಾಥನ ಸಮೀಪದ ಪಡುವಲಲ್ಲಿ ಪ್ರತಿಷ್ಠೆಯಂ ಮಾಡಿದೆನು, ಆ ಸ್ವಾಮಿದರ್ಶನದಿಂದ ಶ್ರೀಶೈಲಶಿಖರ ದರ್ಶನವಂ ಮಾಡಿದ ಫಲವಹುದು, ಪುನರ್ಜನ್ಮವಿಲ್ಲ, ಸೌಮ್ಯಸ್ಥಾನದಿಂದ ಕುಕ್ಕುಟೇಶ್ವರನೆಂಬ ಲಿಂಗವ ತಂದು

ವಕ್ರತುಂಡಗಣಪತಿಯು ಸಮೀಪದಲ್ಲಿ ಇರಿಸಿದೆನು, ಆ ಸ್ವಾಮಿಯು ದರ್ಶನ
ಸ್ಪರ್ಶನ ಪೂಜಾ ಜಾಗರಣದಿಂದ ಸಕಲ ಸಿದ್ಧಿಯಹುದು, ಜ್ವಾಲೇಶ್ವರ
ಕ್ಷೇತ್ರದಿಂದ ತ್ರಿಶೂಲನೇತ್ರನ ತಂದು ಕೂಟದಂತಗಣಪತಿಯು ಮೂಡಲ
ಲ್ಲಿ ಇರಿಸಿದೆನು, ಆ ಲಿಂಗದರ್ಶನದಿಂದ ಸಕಲ ಸಿದ್ಧಿಯಹುದು, ಪರಮೇ
ಶ್ವರಕ್ಷೇತ್ರದಿಂದ ಜಟೇಶ್ವರನೆಂಬ ಲಿಂಗವಂ ತಂದು ಏಕದಂತಗಣಪತಿಯು
ಉತ್ತರಭಾಗದಲ್ಲಿ ಇರಿಸಿದೆನು ಆ ಸ್ವಾಮಿಯು ದರ್ಶನದಿಂದ ಚತುರ್ವಿಧ
ಪುರುಷಾರ್ಥ ಸಿದ್ಧಿಗಳಹವು, ತ್ರಿಸಂಧ್ಯಾಕ್ಷೇತ್ರದಿಂದ ತ್ರ್ಯಂಬಕೇಶ್ವ
ರನ ತಂದು ತ್ರಿಮುಖ ಗಣಪತಿಯು ಮೂಡಲಲ್ಲಿ ಇರಿಸಿದೆನು ಆ ಸ್ವಾಮಿ
ಯು ಒಂದುಭಾರಿ ಆರಾಧಿಸಲು ತ್ರ್ಯಂಬಕ ರೂಪವಹನು, ಹರಿಶ್ಚಂದ್ರ
ಕ್ಷೇತ್ರದಿಂದ ಮಹೇಶ್ವರನೆಂಬ ಲಿಂಗವಂತಂದು ಹರಿಶ್ಚಂದ್ರೇಶ್ವರನ ಮೂ
ಡಲಲ್ಲಿ ಇರಿಸಿದೆನು ಆ ಸ್ವಾಮಿಯು ಪೂಜೆ ದರ್ಶನ ನಮಸ್ಕಾರಗಳಿಂದ
ಎಲ್ಲೆಲ್ಲಿಯೂ ಜಯವಾಗುವುದು, ಆವನಾನೊಬ್ಬನು ಈ ರುದ್ರವಾಸವಂ
ಪ್ರವೇಶವಂ ಮಾಡುವನೋ ಅವನಿಗೆ ಸಹಸ್ರಜನ್ಮದೊಳಗಾಗಿ ಅಜ್ಞಾನ
ದಿಂಬಂದ ಪಾಪಕ್ಷಯವಹುದು, ಮಧ್ಯಮೇಶ್ವರಕ್ಷೇತ್ರದಿಂದ ಸರ್ವೇಶ್ವರ
ನೆಂಬ ಲಿಂಗವಂತಂದು ಚತುರ್ವದನೇಶ್ವರನ ಪಡುವಲಲ್ಲಿ ಪ್ರತಿಷ್ಠೆಯಂ
ಮಾಡಿದೆನು ಆ ಸ್ವಾಮಿಯು ಪೂಜೆಯಿಂದ ಜ್ಞಾನಸಿದ್ಧಿಯಹುದು ಪುನ
ರ್ಜನ್ಮವಿಲ್ಲ, ಸಾರ್ವೇಶ್ವರಕ್ಷೇತ್ರದಿಂದ ಮಹೇಶ್ವರನೆಂಬ ಲಿಂಗವಂತಂದು
ಯಜ್ಞೇಶ್ವರನ ಸಮೀಪದಲ್ಲಿ ಇರಿಸಿದೆನು ಆ ಸ್ವಾಮಿಯು ಪೂಜೆಯಿಂದ
ಸಕಲ ಯಜ್ಞವ ಮಾಡಿದಫಲ, ಸುವರ್ಣಸ್ಥಾನದಿಂದ ಜಯಂತೇಶ್ವರನ
ತಂದು ಲಂಬೋದರ ಗಣಪತಿಯು ಮೂಡಲಲ್ಲಿ ಇರಿಸಿದೆನು ಆ ಸ್ವಾಮಿಯು
ಪೂಜೆಯಿಂದ ಸಕಲ ಸಿದ್ಧಿಯು, ರಜಸ್ಥಾನಕ್ಷೇತ್ರದಿಂದ ಸಹಸ್ರಾಕ್ಷೇಶ್ವ
ರನ ತಂದು ಶೈಲೇಶ್ವರನ ಉತ್ತರಭಾಗದಲ್ಲಿ ಪ್ರತಿಷ್ಠೆಯಂ ಮಾಡಿದೆನು
ಆ ಸ್ವಾಮಿಯು ದರ್ಶನ ಪೂಜೆ ನಮಸ್ಕಾರಗಳಿಂದ ಸಹಸ್ರಜನ್ಮಗಳ
ಪಾಪ ಪರಿಹಾರ, ಹರ್ಷಕಕ್ಷೇತ್ರದಿಂದ ಹರ್ಷಕೇಶ್ವರನೆಂಬ ಲಿಂಗವಂ
ತಂದು ಪಿಂಗಳೇಶ್ವರನ ಸಮೀಪದಲ್ಲಿ ಇರಿಸಿದೆನು ಆ ಸ್ವಾಮಿಯು ಪೂಜೆ
ಯಿಂದ ಶಿವಸಾಲೋಕ್ಯವುಂಟು, ಆ ಕ್ಷೇತ್ರದಿಂದ ನವರತ್ನಮಯವಾದ ಶಿ

ಧವತಂದು ಆ ಸ್ವಾಮಿಯು ಗುಡಿಯ ಮೇಲೆ ಇರಿಸಿದೆನು, ಆ ಶಿಖರದರ್ಶನದಿಂದ ನಿತ್ಯ ಸಂತೋಷವುಂಟಾದ ಐಶ್ವರ್ಯವಹುದು; ಮಹಾಲಕ್ಷ್ಮೀಕ್ಷೇತ್ರದಿಂದ ರುದ್ರೇಶ್ವರನೆಂಬ ಲಿಂಗವತಂದು ತ್ರಿಪುರೇಶ್ವರನ ಸಮೀಪದಲ್ಲಿ ಇರಿಸಿದೆನು, ಆ ಸ್ವಾಮಿಯ ಪೂಜೆ ನಮಸ್ಕಾರಗಳಿಂದ ಶಿವಸಾರೂಪ್ಯವಾಗಿ ಈಶಾನಲೋಕವುಂಟಹುದು; ವೃಷಭಧ್ವಜ ಕ್ಷೇತ್ರದಿಂದ ಮಹೇಶ್ವರನೆಂಬ ಲಿಂಗವತಂದು ಬಾಣೇಶ್ವರನ ಸಮೀಪದಲ್ಲಿ ಇರಿಸಿದೆನು, ಆ ಲಿಂಗದರ್ಶನ ಪೂಜೆಯಿಂದ ಇಹಪರದಲ್ಲಿ ಸುಖವುಂಟು; ಹಿಮವತ್ಕೇತಾರದಿಂದ ಈಶಾನೇಶ್ವರನ ತಂದು ಪ್ರಹ್ಲಾದಕೇಶವನ ಸಮೀಪದಲ್ಲಿ ಇರಿಸಿದೆನು, ಆ ಸ್ವಾಮಿಯ ಪೂಜೆ ನಮಸ್ಕಾರಗಳಿಂದ ಶಿವಲೋಕವಹುದು; ಭೈರವಕ್ಷೇತ್ರದಿಂದ ಸಂಹಾರದನ ತಂದು ಖರ್ವವಿನಾಯಕನ ಮೂಡಣದಿಕ್ಕಿನಲ್ಲಿ ಇರಿಸಿದೆನು, ಆ ಸ್ವಾಮಿಯ ಪೂಜೆಯಿಂದ ಅತ್ಯುಗ್ರವಾದ ಉಪದ್ರವಂಗಳು ಪರಿಹರ; ಕನಕತೀರ್ಥದಿಂದ ಉಗ್ರಲಿಂಗವತಂದು ಅರ್ಕವಿನಾಯಕನ ಮೂಡಲಲ್ಲಿ ಇರಿಸಿದೆನು, ಆತನ ಪೂಜೆಯಿಂದ ಸಕಲ ಪಾಪಹರ; ವಿಷ್ಣುಪದಸ್ಥಾನದಿಂದ ಭವನೆಂಬ ಈಶ್ವರನ ತಂದು ಭೀಮಚಂಡಿಯ ಸಮೀಪದಲ್ಲಿ ಇರಿಸಿದೆನು, ಆ ಸ್ವಾಮಿಯ ಆರಾಧಿಸಲು ಪುನರ್ಜನ್ಮವಿಲ್ಲ; ದೇವದಾರು ವನದಿಂದ ದಂಡೀಶ್ವರನ ತಂದು ದೇಹಳೀವಿನಾಯಕನ ಮೂಡಲಲ್ಲಿ ಇರಿಸಿದೆನು, ಆ ಲಿಂಗದರ್ಶನದಿಂದ ಪುನರುತ್ಪತ್ತಿಯಿಲ್ಲ; ಭದ್ರಕರ್ಣಕ್ಷೇತ್ರದಿಂದ ಭದ್ರಹ್ರದತೀರ್ಥ ಸಹ ಶಿವನೆಂಬ ಲಿಂಗವಂ ತಂದು ಉದ್ದಂಡಗಣಪತಿಯ ಮೂಡಲಲ್ಲಿ ಇರಿಸಿದೆನು, ಆ ತೀರ್ಥದಲ್ಲಿ ಸ್ನಾನವಂ ಮಾಡಿ ಆ ಶಿವಲಿಂಗವಂ ಪೂಜಿಸಲು ಸಕಲೈಶ್ವರ್ಯವಹುದು ; ಹರಿಶ್ಚಂದ್ರಕ್ಷೇತ್ರದಿಂದ ಶಂಕರನೆಂಬ ಲಿಂಗವಂತಂದು ಶಿವಲಿಂಗದ ಮೂಡಲಲ್ಲಿ ಇರಿಸಿದೆನು, ಆ ಸ್ವಾಮಿಯ ಪೂಜೆಯಿಂದ ಸಾಯುಜ್ಯವುಂಟಹುದು ; ಯಮತೀರ್ಥದಿಂದ ಕಾಲೇಶ್ವರನೆಂಬ ಲಿಂಗವಂತಂದು ಚಂದ್ರೇಶ್ವರನ ಪಡುವಲಲ್ಲಿ ಇರಿಸಿದೆನು, ಆ ಸ್ವಾಮಿಯ ಪೂಜೆ ನಮಸ್ಕಾರಗಳಿಂದ ಕಲಿಕಾಲಭಯವಿಲ್ಲ; ಕೃಷ್ಣಾಂಗಾರಕವಾರ ಚತುರ್ದಶೀದಿವಸ ಯಮತೀರ್ಥದಲ್ಲಿ ಸ್ನಾನವಂ ಮಾಡಿ ಕಾಲೇಶ್ವರನಂ ಪೂಜಿಸಲು ಮಹಾಪಾತಕಂಗಳು ಪರಿಹರ; ನೇ

ಪಾಲಕ್ಷೇತ್ರದಿಂದ ಪಶುಪತೀಶ್ವರನ ತಂದು ಕಾಲೇಶ್ವರನ ಸಮೀಪದಲ್ಲಿ ಪ್ರತಿಷ್ಠೆಯಂ ಮಾಡಿದೆನು, ಆ ಸ್ವಾಮಿಯ ದರ್ಶನಮಾತ್ರದಿಂದ ಸಂಸಾರ ಪಾಶಹರ; ಕರವೀರತೀರ್ಥದಿಂದ ವಾಲೀಶ್ವರನ ತಂದು ಕಪಾಲಮೋಕ್ಷ ತೀರ್ಥದ ಸಮೀಪದಲ್ಲಿ ಇರಿಸಿದೆನು, ಆ ಸ್ವಾಮಿಯ ದರ್ಶನದಿಂದ ಬ್ರಹ್ಮ ಹತ್ಯಾದಿ ಸರ್ವಪಾಪಹರ; ದೇವಿಕಾತೀರ್ಥದಿಂದ ಉಮಾಪತೀಶ್ವರನ ತಂದು ಪಶುಪತಿಯ ಮೂಡಲಲ್ಲಿ ಇರಿಸಿದೆನು, ಆ ಸ್ವಾಮಿಯ ದರ್ಶನದಿಂದ ಸಕಲ ಪಾಪಹರ; ಮಹೇಶ್ವರಕ್ಷೇತ್ರದಿಂದ ದೀಪತೀಶ್ವರನ ತಂದು ಉಮಾ ಪತೀಶ್ವರನ ಮೂಡಲಲ್ಲಿ ಇರಿಸಿದೆನು, ಆ ಸ್ವಾಮಿಯ ಪೂಜೆ ನಮಸ್ಕಾರ ಗಳಿಂದ ಭಕ್ತಿಮುಕ್ತಿಯುಂಟು; ರೋಹಣಕ್ಷೇತ್ರದಿಂದ ನಕುಲೇಶ್ವರನ ತಂದು ಪಶುಪತೀಶ್ವರನ ಮೂಡಲಲ್ಲಿ ಇರಿಸಿದೆನು, ಆ ಸ್ವಾಮಿಯ ಪಾಶು ಪತದೀಕ್ಷೆಯುಳ್ಳವರು ನಿತ್ಯವೂ ಪೂಜಿಸಲು ಪುನರ್ಜನ್ಮವಿಲ್ಲ; ಗಂಗಾಸಾ ಗರದಿಂದ ಅಮರೇಶ್ವರನ ತಂದು ಪಶುಪತಿಯ ಮೂಡಲಲ್ಲಿ ಇರಿಸಿದೆನು, ಆ ಸ್ವಾಮಿಯ ಪೂಜೆಯಿಂದ ದೇವತ್ವವನೈದುವನು; ಸಪ್ತಗೋದಾವರಿ ಕೂಡಿದ ದ್ರಾಕ್ಷಾರಾಮಕ್ಷೇತ್ರದಿಂದ ಭೂಮೀಶ್ವರನ ತಂದು ನಕುಲೇಶ್ವರ ನ ಮೂಡಲಲ್ಲಿ ಇರಿಸಿದೆನು, ಆ ಸ್ವಾಮಿಯ ಪೂಜೆಯಿಂದ ಭಯಂಕರ ವಾದ ಪಾಪಹರ; ಭೂತೇಶ್ವರಕ್ಷೇತ್ರದಿಂದ ಭಸ್ಮಗಾತ್ರೇಶ್ವರನ ತಂದು ಭೀಮೇಶ್ವರನ ದಕ್ಷಿಣದಲ್ಲಿ ಇರಿಸಿದೆನು, ಆ ಸ್ವಾಮಿಯ ದರ್ಶನ ಪೂಜೆ ಯಿಂದ ಪಾಶುಪತಯೋಗಫಲವುಂಟು; ನಕುಲೇಶ್ವರನ ಸಮೀಪದಲ್ಲಿವಡ ಮ ಮಾಡಿದ ಸ್ವಯಂಭುಲಿಂಗವಂ ಪೂಜಿಸಲು ಪುನರ್ಜನ್ಮವಿಲ್ಲ; ಮಹಾ ಲಕ್ಷ್ಮೀಶ್ವರನ ಮೂಡಲಲ್ಲಿಹ ಸಿದ್ಧತೀರ್ಥದಲ್ಲಿ ಮಿಂದು ಮಂದರಪರ್ವತ ದಿಂದ ಸಮಸ್ತ ದೇವರ್ಷಿಗಳು ಗಣಂಗಳು ಸಹಿತ ಪರಮೇಶ್ವರನು ಕಾಶೀ ಪಟ್ಟಣಕ್ಕೆ ಬಂದನೆಂದು ಕೇಳಿ ಪ್ರಯಾಗತೀರ್ಥದ ಸಮೀಪದಲ್ಲಿಹ ಧವ ಳದ ಉಪ್ಪರಿಗೆ ಸಹಾ ಆದಿ ವರಹನು ತಾನೇ ಬಂದನು, ಆ ಸ್ವಾಮಿಯ ದರ್ಶನದಿಂದ ಸಕಲ ದುಃಖನಿವೃತ್ತಿ; ಆ ಪಡುವಲಲ್ಲಿಹ ಕರ್ಣಿಕಾಕ್ಷೇತ್ರ ದಿಂದ ಬಂದು ಕೈಯ್ಯಲ್ಲಿ ಗದೆಯಂ ಪಿಡಿದು ಚಿಟ್ಟದಾವರೆಯ ಪುಷ್ಪದ ಕಾಂತಿಯುಳ್ಳ ಕರ್ಣಿಕಾರಗಣಪತಿಯ ಪೂಜಿಸಲು ಗಣತ್ವವುಂಟು, ಹೇ

ಮುಕೂಟದಿಂದ ವಿರೂಪಾಕ್ಷಲಿಂಗವತೆಂದು ಮಹೇಶ್ವರನ ಟಂಕಲಲ್ಲಿ ಇರಿಸಿದೆನು. ಆ ಸ್ವಾಮಿಯು ನೋಡಲು ಸಂಸಾರ ಸಮುದ್ರವಪಾಂಟುವನು, ಗಂಗಾದ್ವಾರದಿಂದ ಹಿಮಾದ್ರಿಲಿಂಗವತೆಂದು ಬ್ರಹ್ಮನಾಳತೀರ್ಥದ ಸಮೀಪದಲ್ಲಿ ಇರಿಸಿದೆನು, ಆ ಸ್ವಾಮಿಯು ಪೂಜೆಯಿಂದ ಸಕಲ ಮನೋರಥ ಸಿದ್ಧಿಯುಂಟು; ಕೈಲಾಸದಿಂದ ಏಳುಕೋಟಿ ಗಣಂಗಳು ಸಹ ಕೈಲಾಸಗಣಪತಿಯು ಬಂದು ಕಾಶೀಪಟ್ಟಣದಲ್ಲಿ ಸುತ್ತಲೂ ಪ್ರತ್ಯೇಕ ಒಂದೊಂದು ದುರ್ಗ, ಕೋಟೆ, ಕೊತ್ತಲು, ಅಗಳು, ಅಳ್ವೇರಿ, ಬಾಗಿಲುಬಂಕೆ ಸಹ ಮಾರ್ಗಂಗಳ ನಿರ್ಮಿಸಿಕೊಂಡು ಕಾವಲಾಗಿ ಇದ್ದರು, ಆ ಅಗಳು ಮತ್ಸ್ಯೋದಕತೀರ್ಥದಿಂದ ಪರಿಪೂರ್ಣವಾಗಿ ಇದ್ದಂಥಾದ್ದು, ಮತ್ಸ್ಯೋದರೀ ಎನಲು, ಏರಡುಪ್ರಕಾರ ಅದೆಂತೆಂದರೆ,— ಉತ್ತರವಾಹಿನಿಯಾಗಿ ಹರಿಸುವ ಗಂಗೆ ಮೂಡಲಲ್ಲಿ ಪ್ರವಹಿಸಲು, ಪಡುವಣ ಅಂಚಿನಲ್ಲಿ ಪ್ರವಹಿಸಲು ಮತ್ಸ್ಯೋದರೀ ಎನಿಸುವದು; ಇದು ಒಂದು ಪ್ರಕಾರ. ಆ ಗಂಗೆಯೇ ಎರಡೆರಡು ತಡಿಯುಮುಟ್ಟಿ ಎಂದಿನ ಮೇರೆಗಿಂತ ಅಧಿಕವಾಗಿ ಉಬ್ಬಿ ಸುತ್ತಲೂ ಇದ್ದ ಗಣಂಗಳ ದುರ್ಗಂಗಳ ಬಳಸಿದಂಥಾ ಆ ಅಗಳುಗಳೂ ತುಂಬಿ ಹರಿಯಲು, ಅದು ಮತ್ಸ್ಯೋದರೀ ಎನಿಸುವದು; ಆ ಉಬ್ಬಿ ಹರಿಯುವ ಸಮಯದಲ್ಲಿ ಮತ್ಸ್ಯೋದರಿಯುಲ್ಲಿ ಸ್ನಾನವಂ ಮಾಡಲು, ಒಂದು ಕೋಟಿ ಸೂರ್ಯಗ್ರಹಣ ಚಂದ್ರಗ್ರಹಣ ಕಾಲದಲ್ಲಿ ಮಾಡಿದ ಗಂಗಾಸ್ನಾನದ ಫಲವುಂಟು; ಗಂಗೆ ಮತ್ಸ್ಯೋದರೀ ಎನಿಸಿದ ಸ್ಥಳದಲ್ಲಿ ಸಕಲ ತೀರ್ಥ ಸಮಸ್ತಲಿಂಗಗಳೂ ಇಹವು, ಅಲ್ಲಿ ಸ್ನಾನವಂ ಮಾಡಿದ ಮನುಷ್ಯರ್ಗೆ ಯಮದರ್ಶನವಿಲ್ಲ ದೇವತ್ವವುಂಟು, ಆ ತೀರ್ಥದಲ್ಲಿ ಸ್ನಾನವಂ ಮಾಡಿದ ಮನುಷ್ಯರ್ಗೆ ಮಿಕ್ಕಾದ ತೀರ್ಥಸ್ನಾನದಿಂದೇನು ಫಲ; ಭೂಲೋಕ, ಭುವರ್ಲೋಕ, ಸುವರ್ಲೋಕ ಮೊದಲಾದ ಲೋಕಂಗಳಲ್ಲಿ ಬಹಳವಾಗಿದ್ದ ನಾನಾ ತೀರ್ಥಂಗಳು ಈ ಮತ್ಸ್ಯೋದರೀ ತೀರ್ಥದ ಕೋಟಿ ಅಂಶದೊಳು ಆ ಒಂದು ಅಂಶಕ್ಕೆ ಸರಿಬಾರವು, ಈ ರೀತಿಯಲ್ಲಿ ಕೈಲಾಸಗಣಪತಿಯಿಂದ ಮತ್ಸ್ಯೋದರಿ ನಿರ್ಮಿಸಲ್ಪಟ್ಟಿತು, ಗಂಧಮಾದನಗಿರಿಯಿಂದ ಭೂರ್ಭುವನೆಂಬ ಲಿಂಗವು ಕೈಲಾಸಗಣಪತಿಯು ಮೂ

ಧಲ್ಲಿ ತನ್ನಿಂ ತಾನೇ ಪ್ರಕಟವಾಯಿತು, ಆ ಈಶ್ವರನನ್ನು ಭಕ್ತಿಯಿಂದ ಸೇವಿಸಿದ ಜನರು ಇಹದಲ್ಲಿ ಸುಖವನ್ನನುಭವಿಸಿ ಅಂತ್ಯದಲ್ಲಿ ದಿವ್ಯವಿಮಾನಾರೂಢರಾಗಿ ಸಾಂಬಶಿವಲೋಕವನ್ನೈದುವರು, ಅಲ್ಲಿ ದೇವಸ್ತ್ರೀಯರ ಸಮ್ಮೇಳದಲ್ಲಿ ಭೂರ್ಭುವ ಸ್ವರ್ಲೋಕ ತಪೋಲೋಕಾದಿಗಳಲ್ಲಿ ಸ್ವೇಚ್ಛೆಯಿಂದ ಸಂಚರಿಸುವರು, ಪಾತಕೇಶ್ವರನೆಂಬ ಮಹಾಲಿಂಗವು ಸಪ್ತಪಾತಾಳದಿಂದ ಭೋಗವತಿಯೆಂಬ ನದಿಯೊಡಗೂಡಿ ಬಂದು, ಈ ಕಾಶೀಕ್ಷೇತ್ರದಲ್ಲಿ ಒಡೆದು ಮೂಡಿದು; ಆ ಸ್ವಾಮಿಯು ಮುಂದೆ ಪಾತಾಳದಿಂದ ಬಂದು, ಶೇಷವಾಸುಕಿ ಮೊದಲಾದ ಸರ್ಪಗಳು ದಿವ್ಯ ಮಣಿ ಮಾಣಿಕ್ಯ ಮೊದಲಾದ ಅನರ್ಘ್ಯವಾದ ರತ್ನಗಳಿಂದ ಒಂದು ಉಪ್ಪರಿಗೆಯಂ ನಿರ್ಮಿಸಿದರು, ಆ ಪಾಟಕೇಶ್ವರನೆಂಬ ಲಿಂಗವು ಕನಕಮಯವಾದುದು ರತ್ನಮಾಲೆಗಳಿಂ ಅಲಂಕೃತವಾದುದು; ಈಶಾನೇಶ್ವರಗೆ ಮೂಡಲಲ್ಲಿರ್ದ ಈ ಲಿಂಗವಂ ಆರೊಬ್ಬರು ಭಕ್ತಿಯಿಂದ ಅರ್ಚಿಸುವರೊ ಅವರಿಗೆ ಸಕಲೈಶ್ವರ್ಯ ಸಮೃದ್ಧಿ, ಇಹದಲ್ಲಿ ದಿವ್ಯಭೋಗ ಅಂತ್ಯದಲ್ಲಿ ಮೋಕ್ಷವಹುದು, ಆಕಾಶದಿಂದ ತಾರಕೇಶ್ವರನೆಂಬ ಲಿಂಗ ಬಂದು ಜ್ಞಾನವಾಪೀ ತೀರ್ಥವಮುಂದೆ ನೆಲಸಿತು, ಜ್ಞಾನವಾಪೀಯಲ್ಲಿ ಸ್ನಾನವಂ ಮಾಡಿ, ಮೌನವ್ರತದಿಂದ ಆ ತಾರಕೇಶ್ವರನ ಪೂಜಿಸಲು ಸಕಲ ಪಾಪಹರ, ಶಾಶ್ವತವಾದಪುಣ್ಯ; ತಾರಕಬ್ರಹ್ಮೋಪದೇಶದಿಂ ಮೋಕ್ಷವುಂಟು. ಪೂರ್ವದಲ್ಲಿ ಮಹಾದೇವನು ಕಿರಾತರೂಪದಿಂದ ಆ ಸ್ಥಳದಲ್ಲಿ ಚಾರುಚೂಡೇಶ್ವರನ ಸಮೀಪದಲ್ಲಿ ಕಿರಾತೇಶ್ವರನಾಗಿ ನೆಲಸಿದನು, ಆ ಸ್ವಾಮಿಯ ಪೂಜೆಯಿಂದ ಪುನರ್ಜನ್ಮವಿಲ್ಲ; ಲಂಕಾಪಟ್ಟಣದಿಂದ ಮರುತೇಶ್ವರನೆಂಬ ಲಿಂಗವು ಕಾಶಿಯ ನೈಋತ್ಯದಲ್ಲಿ ನೈಋತ್ಯೇಶ್ವರನೆಂದು ಪ್ರಸಿದ್ಧವಾಯಿತು, ಆ ಲಿಂಗದ ಪೂಜೆಯಿಂದ ಪಿಶಾಚ ರಾಕ್ಷಸರ ಭಯವಿಲ್ಲ, ಆ ಲಿಂಗವು ಲಂಕಾಪಟ್ಟಣದಲ್ಲಿ ರಾವಣ ವಿಭೀಷಣರಿಂ ರಘುಪತಿಯ ಕೃಪೆಯಿಂದ ಪೂಜೆಗೊಂಡಿತು, ಜಲಲಿಂಗಸ್ಥಳದಿಂದ ಜಲಲಿಂಗೇಶ್ವರನು ಗಂಗಾಜಾಲ ಮಧ್ಯದಲ್ಲಿ ಪುಣ್ಯಾತ್ಮರ ಕಣ್ಣಿಗೆ ಕಾಣಿಸುವನು, ಆ ಜಲಲಿಂಗೇಶ್ವರನಂ ಸ್ಮರಿಸಲು ಸಕಲ ಪಾಪಹರ; ಕೋಟೀಶ್ವರಸ್ಥಾನದಿಂದ ಜ್ಯೇಷ್ಠೇಶ್ವರನ ತಂದು ಈ ಜ್ಯೇ

ಷ್ಯೇಶ್ವರನ ಸಮೀಪದಲ್ಲಿ ಇರಿಸಿದೆನು, ಆ ಸ್ವಾಮಿಯ ದರ್ಶನದಿಂದ
ಕೋಟಿ ಲಿಂಗದರ್ಶನವಂ ಮಾಡಿದ ಫಲವುಂಟು; ಬಡಬೆಯ ಮುಖದಿಂ
ದ ಪುಟ್ಟಿದ ಅಗ್ನೀಶ್ವರನ ತಂದು ನಾಳೇಶ್ವರನ ಸಮೀಪದಲ್ಲಿ ಇರಿಸಿದೆನು,
ಆ ಸ್ವಾಮಿಯಂ ಪೂಜಿಸಲು ಇಷ್ಟಸಿದ್ಧಿಯಹುದು ಅಗ್ನಿಭಯವಿಲ್ಲ;
ಅಗಸ್ತ್ಯವಿಜಯವೆಂಬ ತೀರ್ಥದಿಂದ ತ್ರಿಲೋಚನೇಶ್ವರನ ತಂದು ತ್ರಿವಿ
ಷ್ಟಪೇಶ್ವರನ ಸಮೀಪದಲ್ಲಿ ಇರಿಸಿದೆನು, ಆ ಸ್ವಾಮಿಯ ಪೂಜೆಯಿಂದ
ಮನೋರಥಸಿದ್ಧಿಯಹುದು ಅಮರಕಟಕವೆಂಬ ಕ್ಷೇತ್ರದಿಂದ ಓಂಕಾ
ರೇಶ್ವರನು ಬಂದು ಪಿಪ್ಪಲತೀರ್ಥದ ಸಮೀಪದಲ್ಲಿ ಪ್ರಸನ್ನನಾದನು, ಈ
ಕಾಶಿಗೆ ಗಂಗೆ ಬಾರದ ಮುನ್ನ ಸಕಲಲೋಕ ಜೀವರಿಗೆಯೂ ಮುಕ್ತಿ
ಯನಿತ್ತು ರಕ್ಷಿಸುವದಕ್ಕೋಸ್ಕರ ಓಂಕಾರೇಶ್ವರನು ಪ್ರಸನ್ನನಾದನು,
ಆ ಸ್ವಾಮಿಯ ಮಹಿಮೆಯನ್ನು ಸ್ವಾಮಿಯವರಲ್ಲದೆ ಮಿಕ್ಕಾದವರರಿಯ
ರು; ಎಲೈ ಪಾರ್ವತೀಪ್ರಾಣನಾಯಕನಾದ ಪರಮೇಶ್ವರನೆ! ಈಗ ನಾನು
ಹೇಳಿದ ಸಕಲ ಲಿಂಗಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಒಂದು ಅಂಶವನ್ನು
ಇರಿಸಿ ಇಲ್ಲಿಗೆ ಬಂದವು, ಈ ಸ್ವಾಮಿಗಳ ಶಿಖರ ಕಲಶಂಗಳ ದರ್ಶನ ಮಾ
ತ್ರದಲ್ಲಿಯೇ ಮುಕ್ತಿಯನೀವ ನಾನಾರತ್ನಮಯವಾದ ಘನವಾದ ಉಪ್ಪರಿ
ಗೆಗಳು ಈ ಲಿಂಗಗಳ ನಾಮಮಾತ್ರವ ಕೀರ್ತಿಸಲು ಸಹಸ್ರಜನ್ಮಪಾಪ
ಹರ; ಎಲೈ ಸ್ವಾಮಿ! ಇನ್ನು ಈ ಸ್ಥಳದಲ್ಲಿ ಆರಾರಕರತಂದು ವಾಸ
ವ ಮಾಡಿಸಬೇಕು, ಅದು ಬುದ್ಧಿಗಲಿಸಿ ಆ ಕಾರ್ಯವು ಆಗಲೇ ಆಯಿತೆಂದು
ಚಿತ್ತದಲ್ಲಿ ಇರಲಿ, ಹೀಗೆಂದು ಬಿನ್ನಹವಮಾಡಿದ ನಂದಿಕೇಶ್ವರನ ವಾಕ್ಯ
ವಂ ಕೇಳಿ ಪರಮೇಶ್ವರನು ಸಂತೋಷಪಟ್ಟು ಇಂತೆಂದನು—ಎಲೈ ನಂದಿ
ಕೇಶ್ವರ? ಎನಗೆ ಆನಂದಕರವಪ್ಪ ನೀಮಾಡಿದ ಪ್ರಯೋಜನವು ಮಹಾ
ಚೆನ್ನಾಯಿತು, ಇನ್ನೊಂದು ಪ್ರಯೋಜನ ಬೇಕು ಅದಾವುದೆನೆ— ಸಮ
ಸ್ತಶಕ್ತಿ ದೇವತೆಗಳಂ ಕರತಂದು ಅವರ ವಾಹನ ಪರಿವಾರ ಆಯುಧಂಗಳು
ಸಹಾ ಪ್ರತಿ ಕೋಟೆ ಕೊತ್ತಲುಗಳಲ್ಲಿಯೂ ನಿವಾಸವ ಮಾಡಿಸೂ ಎಂದು
ನಂದಿಕೇಶ್ವರಗೆ ನಿರೂಪಿಸಿ, ಪರಮೇಶ್ವರನು ಪಾರ್ವತೀಸಮೇತನಾಗಿ ತ್ರಿ
ವಿಷ್ಟಪಕ್ಷೇತ್ರಕ್ಕೆ ಚಿತ್ತೈಸಲು, ನಂದಿಕೇಶ್ವರನು ಪರಮೇಶ್ವರನ ಆಜ್ಞಾ

ಯಂ ಶಿರಸಾವಹಿಸಿ ಸಕಲ ದಿಕ್ಕುಗಳಿಂದಲೂ ಸಮಸ್ತ ದುರ್ಗಾಶಕ್ತಿಗಳ ತಂದು ಪ್ರತಿ ಕೋಟಿ ಕೊತ್ತಲಗಳಲ್ಲಿಯೂ ನಿವಾಸವಂ ಮಾಡಿಸಿದನು ಎಂದು ಪರಮೇಶ್ವರನ ಕುಮಾರನಾದ ಕುಮಾರಸ್ವಾಮಿಯು ಅಗಸ್ತ್ಯಂಗೆ ನಿರೂಪಿಸಿದನು. ಈ ಅಧ್ಯಾಯವನ್ನು ಭಕ್ತಿಯಿಂದ ಹೇಳುವವರೂ ಕೇಳುವವರೂ ಇಹದಲ್ಲಿ ಸಕಲಭೋಗವನನುಭವಿಸಿ ಪರದಲ್ಲಿ ಶಿವಸಾಯುಜ್ಯವನೈದುವರು ಎಂದು ವ್ಯಾಸರು ತಸಗೆ ನಿರೂಪಿಸಿದರೆಂದು ಸೂತನು ಶೌನಕಾದಿ ಋಷಿಗಳಿಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ದಿವ್ಯಸ್ಥಳಗಳಿಂದ ಲಿಂಗತೀರ್ಥಗಳ ತಂದ ವೃತ್ತಾಂತವಂ ಪೇಳ್ದ ಅರವತ್ತೊಂಭತ್ತನೇ ಅಧ್ಯಾಯಾರ್ಥನಿರೂಪಣಕ್ಕಂ ಮಂಗಳಮಹಾ * * * *

ಎಪ್ಪತ್ತನೇ ಅಧ್ಯಾಯ ಶಕ್ತಿದೇವತೆಗಳ ಮಹಿಮೆ

ವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ಅಗಸ್ತ್ಯನಿಂತೆಂದನು. ಎಲೈ ಕುಮಾರಸ್ವಾಮಿ ! ನಂದಿಕೇಶ್ವರನು ಪರಮೇಶ್ವರನ ಆಜ್ಞೆವಿಡಿದು ನಾನಾಶಕ್ತಿಯರನ್ನು ಕರತಂದು ನಾನಾದಿಕ್ಕಿನಲ್ಲಿ ಪ್ರತಿಷ್ಠೆಯಂ ಮಾಡಿದನೆಂದು ಬುದ್ಧಿಗಲಿಸಿದರಲ್ಲಾ ಆವಾವ ಶಕ್ತಿಗಳ ಆವಸ್ಥಳಗಳಿಂ ತಂದು ಆವಲ್ಲಿ ವಾಸವಂ ಮಾಡಿಸಿದನು, ಆ ವಿವರವನ್ನು ಬುದ್ಧಿಗಲಿಸಬೇಕೆನಲು ಕೇಳು ಎಂದು ಕುಮಾರಸ್ವಾಮಿ ಇಂತೆಂದನು— ಕೇಳೈ ಅಗಸ್ತ್ಯನೆ ? ಕಾಶಿಯಲ್ಲಿ ಸಮಸ್ತರಿಗೂ ಇಷ್ಟಾರ್ಥವನೀವ ವಿಶಾಲಾಕ್ಷಿಯು ವಿಶಾಲವೆಂಬ ತೀರ್ಥವು ಗಂಗೆಯ ಬೆನ್ನಮಾಡಿಕೊಂಡು ಇದ್ದಾವು, ಆ ತೀರ್ಥದಲ್ಲಿ ಸ್ನಾನವಂ ಮಾಡಿ ವಿಶಾಲಾಕ್ಷಿಯಂ ಪೂಜಿಸಲು, ವಿಶಾಲವಾದ ಇಹಪರ ಸುಕೃತವುಂಟು; ಭಾದ್ರಪದ ಶುದ್ಧ ತದಿಗೆಯಲ್ಲಿ ಉಪವಾಸವಮಾಡಿ ಪೂಜಿಸಿ ರಾತ್ರೆ ಜಾಗರಣವಂ ಮಾಡಿ ಮರುದಿನ ಹದಿನಾರುಮಂದಿ ಕನ್ಯೆಯರಂ ಯಥಾಶಕ್ತಿಯಿಂ ಗಂಧಪುಷ್ಪ ವಸ್ತ್ರಾಭರಣಗಳಿಂ ಪೂಜಿಸಿ,

ಆ ಬಂಕ ಪುತ್ರಮಿತ್ರರು ಸಹ ಪಾರಣೆಯಂ ಮಾಡಲು ಜನಾಗಿ ಕಾಶೀವಾಸವ ಮಾಡಿದ ಫಲವುಂಟು, ಈ ಕಾಶೀವಾಸವಮಾಡಿದವರು ವಿಶಾಲವೆಂಬ ತೀರ್ಥದಲ್ಲಿ ಸ್ನಾನವಂ ಮಾಡಿ, ವಿಶಾಲಾಕ್ಷಿಗೆ ನೂತನವಾದ ದುಕೂಲವಸ್ತ್ರಗಳಿಂದ ನಾನಾವಿಧ ಮುತ್ತು ಮಾಣಿಕ್ಯಮಯವಾದ ಆಭರಣಂಗಳಂ ದಿವ್ಯ ಗಂಧಮಾಲ್ಯ ಧೂಪದೀಪ ನೈವೇದ್ಯಗಳಂ ಪೂಜೆಯಂ ಮಾಡಲು ನಿರ್ವಿಘ್ನದಿಂ ಕ್ಷೇತ್ರವಾಸವುಂಟಾಗಿ ಅಂತ್ಯದಲ್ಲಿ ಮೋಕ್ಷಪ್ರಾಪ್ತಿಯಹುದು. ಈ ರೀತಿಯಲ್ಲಿ ವಿಶಾಲಾಕ್ಷಿಯಂ ಪೂಜಿಸಲು ಎಲ್ಲಿದ್ದರೂ ಕಾಶಿಯಲ್ಲಿ ಮರಣವಾದಂತೆ ಮುಕ್ತಿಯಹುದು; ವಿಶಾಲಾಕ್ಷಿಯರ ಸಮೀಪದಲ್ಲಿ ಮಾಡಿದ ಜಪ, ಹೋಮ, ದಾನ ಮೊದಲಾದವೆಲ್ಲವೂ ಮೋಕ್ಷಕ್ಕೆ ಕಾರಣ, ಕನ್ಯೆಯರು ಪೂಜಿಸಲು ಕುಲ, ಶೀಲ, ರೂಪ ಐಶ್ವರ್ಯವುಳ್ಳಂಥಾವ ಪತಿ ದೊರಕೊಂಬರು, ಗರ್ಭಿಣಿ ಪೂಜಿಸಲು ಸುಪುತ್ರನಹನು, ಬಂಜೆ ಪೂಜಿಸಲು ಸಂತಾನವಂತೆಯಹಳು, ದರಿದ್ರರು ಪೂಜಿಸಲು ಭಾಗ್ಯವಂತರಹರು; ವಿಧವೆ ಪೂಜಿಸಲು ಜನ್ಮಾಂತರದಲ್ಲಿ ವಿಧವಾತ್ವವಿಲ್ಲದೆ ಪೂರ್ಣ ಮುತ್ತೈದೆಯಾಗುವಳು; ಸ್ತ್ರೀಯಾಗಲಿ ಪುರುಷನಾಗಲಿ ಆರೊಬ್ಬರು ಪೂಜಿಸಲೂ ಭಾಗ್ಯವಂತರಹರು, ಮೋಕ್ಷ ಮೊದಲಾದ ಇಷ್ಟಸಿದ್ಧಿಯನೀವಳು; ಗಂಗಾ ಕೇಶವನ ಸಮೀಪದಲ್ಲಿಹ ಲಲಿತಾತೀರ್ಥದಲ್ಲಿ ಮಿಂದು ಲಲಿತಾಗೌರಿಯಂ ಪೂಜಿಸಲು ನಿರ್ವಿಘ್ನದಿಂ ಸಕಲೈಶ್ವರ್ಯಸಿದ್ಧಿಯಹುದು; ಆಶ್ವೀಜಬಹುಳ ತದಿಗೆಯ ದಿನದಲ್ಲಿ ಸ್ತ್ರೀಯಾಗಲಿ ಪುರುಷನಾಗಲಿ ಈ ಲಲಿತಾಗೌರಿಯಂ ಪೂಜಿಸಲು ಮನೋರಥಸಿದ್ಧಿಯಹುದು; ವಿಶಾಲಾಕ್ಷಿಯ ಮುಂದಿರ್ದ ವಿಶ್ವಭುಜಾಗೌರಿಯಂ ಪೂಜಿಸಲು ಸಕಲ ವಿಘ್ನಹರ; ಮಹಾನವಮಿ ನವರಾತ್ರಿಯಲ್ಲಿ ವಿಶ್ವಭುಜಾಗೌರಿಯಂ ಪೂಜಿಸಲು ಸಕಲ ಉಪದ್ರವಪರಿಹಾರ; ಆದಿ ವರಾಹಮೂರ್ತಿಯ ಸಮೀಪದಲ್ಲಿ ಇರ್ದ ಮಹಾ ವಾರಾಹಿಯಂ ಪೂಜಿಸಲು, ಸಕಲ ಆಪತ್ತುಗಳು ಪರಿಹರವು; ಆ ಸಮೀಪದಲ್ಲಿ ಇರ್ದ ರುರುಹಸ್ತೆಯಾದ ಶಿವದೂತಿಯೆಂಬ ಶಕ್ತಿಯಂ ಪೂಜಿಸಲು, ಸಕಲ ಕಾರ್ಯಸಿದ್ಧಿ; ಇಂದ್ರೇಶ್ವರನ ದಕ್ಷಿಣಭಾಗದಲ್ಲಿ ಇರ್ದ ಗಜಾರೂಢೆಯಾಗಿ ವಜ್ರವಂ ಪಿಡಿದಿಹ ಇಂದ್ರಿಯಂ ಪೂಜಿ

ಸಲು, ಅಷ್ಟೈಶ್ವರ್ಯಸಿದ್ಧಿ; ಸ್ಕಂದೇಶ್ವರನ ಸಮೀಪದಲ್ಲಿರ್ದ ನವಿಲುವಾಹನೆಯಾದ ಕೌಮಾರಿಯು ದರ್ಶನವಂ ಮಾಡಲು ಮಹಾಫಲ, ಸಂತಾನವಂತೆಯಹಳು, ದರಿದ್ರರು ಪೂಜಿಸಲು ಭಾಗ್ಯವಂತರಹರು, ವಿಧವೆಯರು ಪೂಜಿಸಲು ಜನ್ಮಾಂತರದಲ್ಲಿ ವಿಧವತ್ವವಿಲ್ಲ; ಮಹೇಶ್ವರನ ದಕ್ಷಿಣದಲ್ಲಿಹ ವೃಷಭಾರೂಢೆಯಾದ ಮಹೇಶ್ವರಿಯುಂ ಪೂಜಿಸಲು, ಸಕಲಸುಖಪ್ರಾಪ್ತಿಯಹುದು; ಗೀರ್ವಾಣ ನರಸಿಂಹನ ಸಮೀಪದಲ್ಲಿಹ ನಾರಸಿಂಹಿಯುಂ ಪೂಜಿಸಲು, ಇಷ್ಟಾರ್ಥಸಿದ್ಧಿಯಹುದು; ಬ್ರಹ್ಮೇಶ್ವರನ ಸಮೀಪದಲ್ಲಿರ್ದ ಹಂಸವಾಹನೆಯಾದ ತನ್ನ ಕಮಂಡುಲೋದಕದಿಂದ ಸಮಸ್ತವಿಘ್ನ ದುರಿತನಿವಾರಣೆಯಂ ಮಾಡುವ ಬ್ರಾಹ್ಮಿಯುಂ ಪೂಜಿಸಲು, ಬ್ರಹ್ಮಜ್ಞಾನ ಸಿದ್ಧಿಯಹುದು; ಗೋಪೀಗೋವಿಂದರ ಸಮೀಪದಲ್ಲಿರ್ದ ತನ್ನ ಹಸ್ತದಲ್ಲಿ ಪಿಡಿದ ಶಿಂಗಾಡಿ ಬಿಲ್ಲಿನಿಂದ ಬಿಡಲ್ಪಟ್ಟ ದಿವ್ಯಾಸ್ತ್ರಗಳಿಂ ಕಾಶೀವಾಸಿಗಳಿಗೆ ವಿಘ್ನವೆಂಬ ಕ್ರೂರಮೃಗ ಸಂಹಾರಗಳಂ ಮಾಡುವ ನಾರಾಯಣಿಯು ಪೂಜಿಸಲು, ನಿರ್ವಿಘ್ನದಿಂ ಕಾಶಿವಾಸಫಲವುಂಟು ಜ್ಞಾನವಾಪೀತೀರ್ಥದ ಉತ್ತರಭಾಗದಲ್ಲಿಹ ವಿರೂಪಾಕ್ಷಿಯು ದರ್ಶನವಂ ಮಾಡಲು, ಸಕಲ ಕಾರ್ಯಸಿದ್ಧಿ; ಶೈಲೇಶ್ವರನ ಸಮೀಪದಲ್ಲಿ ತರ್ಜನಿಯಂ ಬೆರಳನೆತ್ತಿ ವಿಘ್ನಂಗಳಂ ಕಾಶೀಪಟ್ಟಣಕ್ಕೆ ಬರಬೇಡವೆಂದು ಹಾಗೆ ಸಾರುತ್ತಾ ಇರ್ದಂಥಾ ಶೈಲೇಶ್ವರಿಯುಂ ನೋಡಲು, ಸಕಲವಿಘ್ನಹರ; ಆ ಸಮೀಪದಲ್ಲಿಹ ಚಿತ್ರಕೂಟದಲ್ಲಿ ಸ್ನಾನವಂ ಮಾಡಿ, ಚಿತ್ರಗುಪ್ತೇಶ್ವರನೆಂಬ ಲಿಂಗವಂ ಪೂಜಿಸಿ ಅಲ್ಲಿಹ ಚಿತ್ರಕಂಠೆಯೆಂಬಶಕ್ತಿಯಂ ಪೂಜಿಸಲು ಯೆಂಥಾ ಪಾಪಗಳ ಮಾಡಿದವನಾದರೂ ಚಿತ್ರಗುಪ್ತರ ಎಣಿಕೆಗೆ ಬಾರನು ಸಮಸ್ತ ವಿಘ್ನಹರ, ನರಕಭಯವಿಲ್ಲ; ಚೈತ್ರಶುದ್ಧ ತದಿಗೆಯ ದಿನ ರಾತ್ರಿಯಲ್ಲಿ ಚಿತ್ರಕಂಠೆಯ ಪೂಜೆಯಂ ಮಾಡಲು, ಯಮದರ್ಶನವಿಲ್ಲ ಚಿತ್ರಾಂಗದೇಶ್ವರನ ಮೂಡಲಲ್ಲಿರ್ದ ಚಿತ್ರಗ್ರೀವೆಯುಂ ಪೂಜಿಸಲು, ವಿಚಿತ್ರವಾದ ಯಮಯಾತನೆಯಿಲ್ಲ; ಆ ಸಮೀಪದಲ್ಲಿಹ ಭದ್ರಕಾಳಿಯು ದರ್ಶನವಂ ಮಾಡಲು, ಸಮಸ್ತ ಪಾಪಹರ; ಆ ಸಮೀಪದಲ್ಲಿಹ ಹರಸಿದ್ಧೀ ಎಂಬ ಶಕ್ತಿಯಂ ಪೂಜಿಸಲು, ಮನೋರಥಸಿದ್ಧಿಯಹುದು; ವೃದ್ಧೇಶ್ವ

ರಸ ಸಮೀಪದಲ್ಲಿಹ ಸಿದ್ಧಿವಿನಾಯಕನಂ ಪೂಜಿಸಿ, ಆ ಸಮೀಪದ ವೃದ್ಧೇಶ್ವರೀಯೆಂಬ ಶಕ್ತಿಯ ದರ್ಶನವಂ ಮಾಡಲು, ಐಶ್ವರ್ಯಸಿದ್ಧಿಯಹುದು ; ಆ ಸಮೀಪದ ಪ್ರಯಾಗತೀರ್ಥದಲ್ಲಿ ಸ್ನಾನವಂಮಾಡಿ ಹಸ್ತಗಳಲ್ಲಿ ಇಕ್ಕುಳ, ಚಬುಕು, ಘಂಟೆ, ಅಭಯಮುದ್ರೆಯಂ ಧರಿಸಿದ ನಿಬಂಧನೀಯೆಂಬ ಶಕ್ತಿಯಂ ಪೂಜಿಸಲು, ಶರೆ ಸಂಕೋಲೆ ಮೊದಲಾದ ಉಪದ್ರವಗಳು ಪರಿಹರವಹವು; ಅಂಗಾರಕವಾರದಲ್ಲಿ ರಾತ್ರಿಕಾಲ ನಿಯಮದಿಂದ ಪೂಜಿಸಿ ಏಕಭುಕ್ತವಂ ಮಾಡಲು, ಸಂಸಾರಬಂಧನ ನಿವೃತ್ತಿ; ದೂರದೇಶದಲ್ಲಿದ್ದವರೂ ಈ ಶಕ್ತಿಯಂ ಕುರಿತು ಪೂಜಿಸಲು, ಸಕಲಬಂಧನ ನಿವೃತ್ತಿ ಇಷ್ಟಸಿದ್ಧಿಯಹುದು ; ಪಶುಪತೀಶ್ವರನ ಸಮೀಪದಲ್ಲಿಹ ಅಮೃತಕೂಪದಲ್ಲಿ ಸ್ನಾನವಂ ಮಾಡಿ ಬಲದಹಸ್ತದಲ್ಲಿ ಅಮೃತಕಲಶಮಂ ಎಡದ ಹಸ್ತದಲ್ಲಿ ಗದೆಯಂ ಧರಿಸಿದ ಅಮೃತೇಶ್ವರಿಯ ಸೇವಿಸಲು, ಅಮೃತವಂ ಸೇವಿಸುವ ದೇವತೆಗಳಹರು, ಆ ಅಮೃತೇಶ್ವರಿಯ ಪಡುವಲಲ್ಲಿಹ ಪಿತಾಮಹೇಶ್ವರನ ಮುಂದಿರ್ದ ಸಿದ್ಧಲಕ್ಷ್ಮಿಯಂ ಪೂಜಿಸಲು, ಮಹಾಸಿದ್ಧಿಯಹುದು; ಆ ಸಿದ್ಧಲಕ್ಷ್ಮಿಯ ಮುಂದೆ ಪದ್ಮಾಕಾರವಾದ ಉಪ್ಪರಿಗೆಯಂ ನೋಡಲು, ಆತನ ಗೃಹದಲ್ಲಿ ಮಹಾಲಕ್ಷ್ಮಿ ಸ್ಥಿರವೂ ವಾಸವಾಗಿ ಇಹಳು ; ಪಿತಾಮಹೇಶ್ವರನ ಪಡುವಲಾಗಿಹ ನಳಕೂಬರೇಶ್ವರರ ಮೂಡಲಲ್ಲಿರ್ದ ಗುಹ್ಯಕಾದೇವಿಯಂ ಪೂಜಿಸಲು, ಸಕಲ ಉಪದ್ರವಪರಿಹರ; ಆ ನಳಕೂಬರೇಶ್ವರನ ಸಮೀಪದಲ್ಲಿ ತ್ರಿಲೋಚನ ಸುಂದರಿಯಂ ಪೂಜಿಸಲು, ತ್ರೈಲೋಕ್ಯಸೌಂದರ್ಯವುಂಟಾಗುವದು, ಸ್ತ್ರೀಯರು ಪೂಜಿಸಲು, ವೈಧವ್ಯವಿಲ್ಲ ; ಆ ಸಮೀಪದಲ್ಲಿರ್ದ ಮಹಾಲಕ್ಷ್ಮೀ ತೀರ್ಥದಲ್ಲಿ ಸ್ನಾನವಂಮಾಡಿ ಮಹಾಲಕ್ಷ್ಮಿಯಂ ಪೂಜಿಸಲು, ಸಕಲೈಶ್ವರ್ಯವಹುದು, ಆ ತೀರ್ಥದಲ್ಲಿ ದೇವಋಷಿ ಪಿತೃತರ್ಪಣವಂ ಮಾಡಿ, ಯಥಾಶಕ್ತಿ ದಾನವಂ ಮಾಡಲು ಪಿತೃಗಳಿಗೆ ಪುಣ್ಯಲೋಕವಹುದು ; ಆ ಮಹಾಲಕ್ಷ್ಮೀಪೀಠವು ಸರ್ವ ಮಂತ್ರಸಿದ್ಧಿಗೆ ಕಾರಣವು, ಸಕಲತೀರ್ಥಂಗಳು ಈ ಲಕ್ಷ್ಮೀತೀರ್ಥಕ್ಕೆ ಪರಿಚಾರವು; ಶ್ರಾವಣ ಬಹುಳ ಅಷ್ಟಮಿಯಲ್ಲಿ ಯಾತ್ರೆಯಂ ಮಾಡಲು, ಆ ಮಹಾಲಕ್ಷ್ಮಿ ಅವರ ಮನೆಯಲ್ಲಿ ಸ್ಥಿರವೂ

ವಾಸವಾಗಿ ಇಹಳು, ಆ ಉತ್ತರದಲ್ಲಿ ಗಂಡುಗೊಡಲಿಯುಂ ಧರಿಸಿದ ಹಯಕಂಠಿಯುಂ ಪೂಜಿಸಲು, ಸಕಲ ವಿಘ್ನಹರ; ಆ ಮಹಾಲಕ್ಷ್ಮಿಗೆ ದಕ್ಷಿಣದಲ್ಲಿಹ ಕಾಮೇಶ್ವರಿಯುಂ ಪೂಜಿಸಲು, ಸಕಲ ಕಾರ್ಯವಹುದು: ಆ ವಾಯುವ್ಯದಲ್ಲಿಹ ಶಿವಾಚಂಡಿಯುಂ ಪೂಜಿಸಲು, ಸಕಲ ವಿಘ್ನಹರ; ಕಾಶೀಕ್ಷೇತ್ರದ ಉತ್ತರದ್ವಾರದಲ್ಲಿಹ ಭೀಮೇಶ್ವರನ ಮುಂದಿರ್ದ ಭೀಮರಥಿಯಲ್ಲಿ ಸ್ನಾನವಂ ಮಾಡಿ ಹಸ್ತದಲ್ಲಿ ಪಾದಪದ್ಮಂಗಳಂ ಧರಿಸಿದ ಭೀಮಚಂಡಿಯುಂ ಪೂಜಿಸಲು, ಯಮಬಾಧೆಯಿಲ್ಲ; ವೃಷಭಧ್ವಜೇಶ್ವರಿಯ ಉತ್ತರದಲ್ಲಿಹ ಭಾಗವಚಿತ್ರೇಶ್ವರಿಯುಂ ಪೂಜಿಸಲು, ಕಾಶೀವಾಸಸಿದ್ಧಿಯಹುದು; ಸಂಗಮೇಶ್ವರನ ದಕ್ಷಿಣದಲ್ಲಿ ತಾಳೇಮರವಂ ಧರಿಸಿ, ತೆರದ ವಕ್ತ್ರದಿಂದೊಪ್ಪುವ ತಾಳಜಂಘೇಶ್ವರಿಯುಂ ಪೂಜಿಸಲು, ಸಕಲ ವಿಪತ್ತು ಪರಿಹರ; ಉದ್ದಾಲಕೇಶ್ವರನ ಸಮೀಪದಲ್ಲಿಹ ಉದ್ದಾಲಕತೀರ್ಥದಲ್ಲಿ ಸ್ನಾನವಂ ಮಾಡಿ ಆ ಸಮೀಪದಲ್ಲಿಹ ಯಮದಂಷ್ಟ್ರೆಯುಂ ಪೂಜಿಸಲು, ಯಮಭಯವಿಲ್ಲ; ದಾರುಕೇಶ್ವರನ ಸಮೀಪದಲ್ಲಿಹ ದಾರುತೀರ್ಥದಲ್ಲಿ ಸ್ನಾನವಂ ಮಾಡಿ ಕೆಳಗಣತುಟಿಯುಂ ಪಾತಾಳದಲ್ಲಿ ಹಾಸಿ, ಮೇಲಣ ತುಟಿಯು ಆಕಾಶದಲ್ಲಿ ನೀಡಿ, ಬ್ರಹ್ಮಾಂಡವನು ನುಂಗಬೇಕೆಂದು ಕಪಾಲವಂ ಧರಿಸಿ ಬೆನ್ನಹತ್ತಿದ ಹೊಟ್ಟೆಯಿಂದ ಅಸ್ಥಿ ಚರ್ಮಮಾತ್ರ ಶರೀರವುಳ್ಳ ಸಾವಿರತೋಳುಗಳಲ್ಲಿಯೂ, ಸಾವಿಧ ಆಯುಧಂಗಳಂ ಧರಿಸಿವಂಥಾ ಅತಿಜ್ವಾಲೆಯಿಂದೊಪ್ಪುವ ದೃಷ್ಟಿಗಳುಳ್ಳಂಥಾ ಹಸ್ತದಲ್ಲಿ ದೈತ್ಯರೆಂಬ ಮೋದಕಗಳಂ ಪಿಡಿದು ಗಜಚರ್ಮಧಾರಿಯಾಗಿ ಗಹಗಹಿಸಿ ನಗುವಂಥಾ ಕಾಶೀಕ್ಷೇತ್ರಕ್ಕೆ ದ್ರೋಹಿಗಳಾದವರ ಅಸ್ಥಿಗಳನ್ನು ತಾವರೆಬಳ್ಳಿಗಳಂತೆ ಭಕ್ಷಿಸುವ ಕ್ಷೇತ್ರದ್ರೋಹಿಗಳಾದವರಂ ತನ್ನ ತ್ರಿಶೂಲಾಗ್ರದಿಂ ಇರಿದು ಎತ್ತಿಕೊಂಡು ನರಕಪಾಲಮಾಲೆಗಳ ಭೂಷಣಂಗಳಂ ಧರಿಸಿ, ಭಯಂಕರವಾದ ಶರೀರದಿಂದೊಪ್ಪುವ ಚರ್ಮಮುಂಡಾಯೆಂಬ ಶಕ್ತಿಯುನ್ನು, ಚಾಮುಂಡಿಯನ್ನು, ಚರ್ಚಿಕಾಯೆಂಬ ಈ ಮೂವರನ್ನೂ ಅವಶ್ಯವಾಗಿ ಸೇವಿಸಬೇಕು, ಆ ವನಾನೊಬ್ಬನು ದರ್ಶನ, ಸ್ಪರ್ಶನ, ನಮಸ್ಕಾರ, ಪೂಜೆ, ಹೋಮ, ಬಲಿಗಳು, ಮಹಾನೈವೇದ್ಯ ಇವು ಮೊದಲಾ

ದ ಆರಾಧನೆಯಂ ಮಾಡಲು, ಅವರಿಗೆ ಧನಧಾನ್ಯ ಪುತ್ರಪೌತ್ರಸಂಪತ್ತು ಉಂಟಾಗಿ ದೀರ್ಘಾಯುಷ್ಮಂತರಾಗಿ ನಿರ್ವಿಘ್ನದಿಂದ ಕಾಶೀಯಲ್ಲಿ ವಾಸವಮಾಡಿ, ಅಂತ್ಯದಲ್ಲಿ ಈಶ್ವರಪ್ರಸಾದದಿಂ ಮೋಕ್ಷವನ್ನೈದುವರು ; ಅಸಿಗಂಗಾಸಂಗಮದಲ್ಲಿ ಸ್ನಾನವಂ ಮಾಡಿ, ಮಾಹಾತುಂಡಗೆ ಪಡುವಲಲ್ಲಿರ್ದ ಸ್ವಪ್ನೇಶ್ವರನೆಂಬ ಲಿಂಗವಂ ಸ್ವಪ್ನೇಶ್ವರೀ ಎಂಬ ಶಕ್ತಿಯನ್ನು ಪೂಜಿಸಲು, ಸ್ವಪ್ನದಲ್ಲಿ ಅವರು ದುಃಖವ ಅನುಭವಿಸರು, ಭೂತಭವಿಷ್ಯದ್ವರ್ತಮಾನಗಳಲ್ಲಿ ಆಹಂಥಾ ಶುಭಾಶುಭಗಳಂತಿಳವ ಜ್ಞಾನ ದೊರಕುವದು ; ಅಷ್ಟಮಿ, ನವಮಿ, ಚತುರ್ದಶಿಯ ರಾತ್ರಿಯಲ್ಲಾಗಲಿ ದಿವದಲ್ಲಿ ಆಗಲಿ ಪೂಜಿಸಲು, ಕಾಶೀವಾಸ ಸಿದ್ಧಿಯಹುದು, ಅಂತ್ಯದಲ್ಲಿ ಜ್ಞಾನವಂತರಾಗಿಯೂ ಮುಕ್ತರಹರು; ಆ ಸ್ವಪ್ನೇಶ್ವರನ ಸಮೀಪದಲ್ಲಿ ಕಾಶೀಕ್ಷೇತ್ರದ ದಕ್ಷಿಣಭಾಗವಂ ರಕ್ಷಿಸುತ್ತಾ ಮಹಾದುರ್ಗಿ ಇಪ್ಪಳು, ಆ ದುರ್ಗಿಯ ಮಾಹಾತ್ಮ್ಯೆಯ ಕೇಳೆಂದು ಕುಮಾರಸ್ವಾಮಿ ಅಗಸ್ತ್ಯಂಗೆ ಹೇಳ್ದ ಅರ್ಥವನ್ನು ವ್ಯಾಸರು ತನಗೆ ನಿರೂಪಿಸಿದರೆಂದು ಸೂತನು ಶೌನಕಾದಿ ಋಷಿಗಳಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ * * *

ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀ ಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ಣಾಟಭಾಷೆಯಿಂದ ನಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಶಕ್ತಿದೇವತೆಗಳ ವಿವರಮಂ ಹೇಳ್ದ ಎಪ್ಪತ್ತನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * * *

ಎಪ್ಪತ್ತೊಂದನೆ ಅಧ್ಯಾಯ ದೇವಿಯೊಡನೆ ದುರ್ಗಾಸುರನ ಯುದ್ಧ.

ವಿಶ್ವೇಶ್ವರಾಯನಮಃ ॥ ಅನಂತರದಲ್ಲಿ ಕುಮಾರಸ್ವಾಮಿಗೆ ಅಗಸ್ತ್ಯನು ಬಿನ್ನೈಸಿದನು, ಎಲೈ ಉಮಾಪ್ರಿಯನಾದ ಕುಮಾರಸ್ವಾಮಿ ! ಈ ನೀನು ಕಾಶೀಕ್ಷೇತ್ರದ ದಕ್ಷಿಣಭಾಗವಂ ರಕ್ಷಿಸುವ ಮಹಾದೇವಿ ಇದ್ದಾಳು ಎಂದು ಬುದ್ಧಿಗಲಿಸಿದರಲ್ಲಾ ಆ ಮಹಾದೇವಿಗೆ ದುರ್ಗೆಯೆಂದು ನಾಮಕರಣವೇನು ಕಾರಣವುಂಟಾಯಿತು, ಆ ಮಹಾದೇವಿಯ ಪೂಜಿಸುವ ವಿಧಾನವೇನು, ಪೂಜಾಕಾಲವಾವುದು, ಪೂಜಿಸಿದರ ಫಲವೇನು, ಈ

ವೃತ್ತಾಂತವನ್ನು ವಿವರವಾಗಿ ಬುದ್ಧಿಗಳಿಸಬೇಕೆಂದು ಅಗಸ್ತ್ಯನು ಬೇಸಗೊಳ್ಳಲು, ಕುಮಾರಸ್ವಾಮಿ ಇಂತೆಂದನು— ಕೇಳೈ ಅಗಸ್ತ್ಯನೆ! ಪೂರ್ವಯುಗದಲ್ಲಿ ರುರು ಎನಿಸಿಕೊಂಬ ರಾಕ್ಷಸನುಂಟು, ಆತನ ಸಹೋದರನಾದ ದುರ್ಗಾಸುರನೆಂಬ ರಾಕ್ಷಸನು ಬ್ರಹ್ಮನ ಕುರಿತು ಉಗ್ರತಪವಂ ಮಾಡಿ, ಬ್ರಹ್ಮನ ಮೆಚ್ಚಿಸಿಕೊಂಡು ತನಗೆ ಪುರುಷರೆಂಬ ಜೀವರಿಂದ ಮರಣವಿಲ್ಲದ ಹಾಗೆ ವರವಂ ಪಡೆಲು ಬ್ರಹ್ಮನ ವರದಿಂದ ತನ್ನ ಸತ್ವಭುಜಪರಾಕ್ರಮವೆಂಬ ಗರ್ವದಿಂದ ಚತುರ್ದಶಭುವನದವರನ್ನು ಜಯಿಸಿ, ಸಕಲಲೋಕಂಗಳನ್ನೂ ತನ್ನ ಅಧೀನವಂ ಮಾಡಿಕೊಂಡು ತಾನೇ ವಿಷ್ಣು, ಇಂದ್ರನು, ಅಗ್ನಿ, ಯಮ, ನೈಋತ್ಯ, ವರುಣ, ವಾಯುವ್ಯ, ಕುಬೇರ, ಈಶಾನ್ಯ; ಸೂರ್ಯಚಂದ್ರರು, ಅಷ್ಟವಸುಗಳು ಇವರು ಆದಿಯಾದ ಸಕಲ ದೇವತೆಗಳೂ ತಾನೇ ಸರಿ ಎಂದು ಲೋಕಂಗಳ ಸುತ್ತುತ್ತಿರಲು, ಆ ದುರ್ಗಾಸುರನ ಭಯದಿಂದ ತಪಸ್ವಿಗಳು ತಪವಬಿಟ್ಟರು, ಬ್ರಾಹ್ಮಣರು ಯಜ್ಞಾದಿ ಸತ್ಕರ್ಮಂಗಳಂ ಬಿಟ್ಟರು, ರಾಕ್ಷಸನ ಪರಿವಾರದವರು ದುರ್ಮಾರ್ಗಿಗಳಾಗಿ ಕ್ರೂರಕರ್ಮಿಗಳಾಗಿ ಪರಸ್ತ್ರೀ ಪರಧನಂಗಳಪಹರಿಸಿ ತೊಡಗಿದರು, ನದಿಗಳು ಮಾರ್ಗವಬಿಟ್ಟು ಹರಿಯುತ್ತೊಡಗಿದವು, ಅಗ್ನಿ ಪ್ರಜ್ವಲಿಸಲಿಲ್ಲ, ನಕ್ಷತ್ರಗಳು ಪ್ರಕಾಶವಿಲ್ಲ, ದಿಕ್ಕುಗಳು ಅವರ ಗಮನದಿಂದ ಧೂಳಿದ್ದು ಮುಸುಕಿದವು, ಉತ್ತಮಜಾತಿಗಳು ನಷ್ಟವಾದವು, ಕೀಳುಜಾತಿಗಳು ಬಲವಂತವಾದವು, ಆ ದುರ್ಗಾಸುರನೇ ಮೇಘವಾಗಿ ವರ್ಷಿಸಿದನು, ಆವನ ಭಯದಿಂದ ಭೂಮಿ ನಾನಾಧಾನ್ಯವಸ್ತುಗಳ ಕೊಡುವದು, ಗೊಡ್ಡು ಹಯನು ಆಹವು, ಒಣಗಿದ ಮರಗಳು ಮೊದಲಾಗಿ ಚಿಗುರುತ್ತಾ ನಿತ್ಯವೂ ಫಲಪುಷ್ಪಂಗಳಾದವು, ದೇವಪತ್ನಿಯರು ಋಷಿಪತ್ನಿಯರ ಎಲ್ಲರನ್ನೂ ಶೆರೆಹಿಡಿದು ಸ್ವರ್ಗವಾಸಿಗಳ ವನವಾಸಿಗಳನ್ನು ಮಾಡಿದನು, ಸಕಲರೂ ಭಯದಿಂದ ತನ್ನ ಮನೆಗೆ ಬಂದ ದೇವಮನುಷ್ಯಾದಿಗಳ ನೋಡಿ, ನೀವು ಬಂದಿರೆ ಎಂದು ಮಾತನಾಡಿಸನು, ಅದೆಂತೆನೆ— ಬ್ರಹ್ಮರುದ್ರಾದಿಗಳಾದರೂ ಸ್ಥಳ ತಪ್ಪಿದ ಬಳಿಕ ಕುಲ ಶೀಲ ಮೊದಲಾದವು ಒಂದೂ ಪ್ರಯೋಜನಕ್ಕೆ ಬಾರವು, ಆಪತ್ತಿನಲ್ಲಿ ಧೈರ್ಯವುಳ್ಳವನೇ ಧನ್ಯ

ರು, ಧನಾಂಧರಾದವರಲ್ಲಿ ದುರ್ಗುಣಂಗಳು ಸೇರುವವು, ಲೋಕದಲ್ಲಿ ದೈನ್ಯಪಡುವವಕ್ಕಿಂತಲೂ ಮರಣವೇಲೇಸು, ದೈನ್ಯಪಡುವಂಥಾ ದೇವತ್ವವೂ ಶ್ರೇಷ್ಠವಲ್ಲಾ, ಆಪತ್ತು ಅಡಗಿಸಿದಾಗ ಗಂಭೀರದಲ್ಲಿ ಇದ್ದವರೇ ಪುಣ್ಯವಂತರು, ಅವರೇ ಜೀವವಂತರು, ಎಂಥಾವರಿಗಾದರೂ ಒಂದು ವ್ಯಾಳೆ ಐಶ್ವರ್ಯಬರುವದು, ಒಂದುವ್ಯಾಳೆ ವಿಪತ್ತು ಬರುವದು, ಈ ಎರಡರಲ್ಲಿಯೂ ಏಕಪ್ರಕಾರವಾಗಿ ಇದ್ದವರೇ ಧೀರರು, ಸೂರ್ಯಚಂದ್ರರು ಉದಯ ಅಸ್ತಮಯಗಳಲ್ಲಿ ಏಕಪ್ರಕಾರವಾಗಿ ಇಹುದಂ ನೋಡಿ ಬಲ್ಲಂಥಾ ಪುಣ್ಯಾತ್ಮರು ಆಪತ್ತು ಸಂಪತ್ತುಗಳಲ್ಲಿ ಏಕಚಿತ್ತದಲ್ಲಿ ಇರಬೇಕು, ವಿಪತ್ತು ಬಂದಾಗ ದೈನ್ಯಪಡುವವನಿಗೆ ಇಹಪರಂಗಳೆರಡೂ ಕೆಡುವವು, ಆಪತ್ತಿನಲ್ಲಿ ಧೈರ್ಯಗುಂದದೆ ಇದ್ದವನುನೋಡಿ, ಆಪತ್ತುಗಳು ತಾವೇ ಪರಿಹರಗಳಾಗುವವು; ಅದುಕಾರಣ ದೈನ್ಯಪಡಬಾರದು ಎಂಬ ನೀತಿವುಂಟಾಗಿ ದೇವತೆಗಳು ದುರ್ಗಾಸುರನ ಕೈಯ್ಯಿಂನೊಂದು, ಅರಣ್ಯದಲ್ಲಿ ಕಂದಮೂಲಫಲಾದಿಗಳ ಭಕ್ಷಿಸಿಕೊಂಡು ಇದ್ದು ಬಂದಾನೊಂದು ದಿನ ದೇವತೆಗಳೆಲ್ಲರೂ ಒಂದುಗೂಡಿ, ಆಲೋಚನೆಯಂಮಾಡಿ ತಮಿಗೆ ರಕ್ಷಕರ್ಯಾರು? ಬ್ರಹ್ಮನಿಗೆ ಹೇಳೇವು ಎಂದೇವೆ? ಆರಾಕ್ಷಸನಿಗೆ ವರವನಿತ್ತಾತನೂ ಆತನೇ, ಆದರೂ ತಮಿಗೆ ಬ್ರಹ್ಮನೇ ಗತಿಯೆಂದು ಆಲೋಚನೆಯಂ ಮಾಡಿಕೊಂಡು ದೇವತೆಗಳೂ ಸಕಲ ಋಷಿಗಳೆಲ್ಲರೂ ಸತ್ಯಲೋಕಕ್ಕೆ ಹೋಗಿ, ಬ್ರಹ್ಮನಂಕಂಡು ಸಾಷ್ಟಾಂಗನಮಸ್ಕಾರವಂ ಮಾಡಿ, ದುರ್ಗಾಸುರನ ಉಪದ್ರವಮಂ ಬಿನ್ನೈಸಲು, ಆ ಬ್ರಹ್ಮನು ಬಹಳ ನೊಂದು ಬಂದ ದೇವತೆಗಳಂ ನೋಡಿ, ಆ ರಾಕ್ಷಸನು ಪುರುಷರಿಂದ ಮರಣವಾಗದಂತೆ ತನ್ನ ಕೃಪೆಯಿಂದ ವರವಂ ಪಡೆದು ಇದ್ದಾನಾಗಿ ಇದು ತನ್ನ ಕೈಯ್ಯಿಂ ಹರಿವಕಾರ್ಯವಲ್ಲ, ಪರಮೇಶ್ವರಂಗೆ ಬಿನ್ನೈಸುವಾ ಎಂದು ಬ್ರಹ್ಮನು ಹಂಸವಾಹನನಾಗಿ ದೇವತೆಗಳನ್ನೂ ಋಷಿಗಳನ್ನೂ ಒಡಗೊಂಡು ಕೈಲಾಸಾದ್ರಿಗೆ ಬಂದು ಪರಮೇಶ್ವರನ ಕಂಡು ಸಾಷ್ಟಾಂಗನಮಸ್ಕಾರವಂ ಮಾಡಿ, ಎದ್ದು ಕೈಮುಗಿದು ಜಯಜಯವೆಂದು ಸ್ತುತಿಸಿ, ಬ್ರಹ್ಮನೂ, ಈ ದೇವತೆಗಳೂ, ಋಷಿಗಳೂ, ಬಂದ ವೃತ್ತಾಂತವಂ ಪೇಳಲು; ಪರಮೇಶ್ವರನು ಬ್ರಹ್ಮ

ನಂ ನೋಡಿ, ಮುಗುಳ್ನಗೆಯಿಂ ನಕ್ಕು, ರಾಜ್ಯಭ್ರಷ್ಟರಾಗಿ ಬಂದು ತನ್ನ ಶರಣು ಹೊಕ್ಕಂಥಾ ದೇವತೆಗಳಿಗೂ ಋಷಿಗಳಿಗೂ ಅಭಯಹಸ್ತವಂ ಕೊಟ್ಟು, ಪರಮೇಶ್ವರನು ತನ್ನ ಅರ್ಧಾಂಗಿಯಾದ ಮಹಾದೇವಿಯಂ ನೋಡಿ ಇಂತೆಂದನು— ಎಲೈ ದೇವಿಯೆ! ನೀನು ಹೋಗಿ ಆ ದುರ್ಗಾಸುರನಂ ಸಂಹರಿಸಿ, ಈ ದೇವರ್ಕಳಂ ಸಂರಕ್ಷಿಸು ಎನ್ನಲು; ದೇವಿಯು ಮಹಾಪ್ರಸಾದವೆಂದು ಪರಮೇಶ್ವರನ ಆಜ್ಞೆಯಂ ಶಿರಸಾವಹಿಸಿ ಸಂತೋಷದಿಂದ ದೇವತೆಗಳಿಗೆ ಅಭಯವನಿತ್ತು ಸಮರಸನ್ನಾಹವಾಗಿ ಮಹಾದೇವಿಯು ಕಾಳರಾತ್ರಿಯೆಂಬ ಶಕ್ತಿಯಂ ಕರೆದು, ನೀನು ಶೀಘ್ರದಲ್ಲಿ ಹೋಗಿ, ಆ ದುರ್ಗಾಸುರನ ಯುದ್ಧಕ್ಕೆ ಕರೆದುತಾರೆಂದು ನೇಮಿಸಲು, ಮಹಾಪ್ರಸಾದವೆಂದು ದೇವಿಯ ಆಜ್ಞೆಯಂ ಶಿರಸಾವಹಿಸಿ ಕಾಳರಾತ್ರಿ ಹೋಗಿ, ದುಷ್ಟನಾದ ದುರ್ಗಾಸುರನಿಗೆ ಇಂತೆಂದಳು- ಎಲೈ ದೈತ್ಯೇಶ್ವರನೆ! ನೀನು ದೇವತೆಗಳ ಲೋಕವನ್ನು ಬಿಡು, ದೇವೇಂದ್ರನು ಅಮರಾವತಿಯಲ್ಲಿ ನಿಂತು ಮೂರು ಲೋಕವನ್ನೂ ಆಳಲಿ, ನೀನು ಪಾತಾಳಲೋಕಕ್ಕೆ ಹೋಗು, ವೇದೋಕ್ತವಾದ ಯಜ್ಞಾದಿ ಕರ್ಮಗಳು ಮುನ್ನಿನಂತೆ ನಡಿಯಲಿ, ಹಾಗಲ್ಲದೆ ಯುದ್ಧವಂ ಮಾಡೇನು ಎಂಬ ಭುಜಬಲವುಂಟಾದರೆ ಅದಕ್ಕೆ ಅನುವಾಗು, ಬದುಕಬೇಕಾದರೆ ದೇವೇಂದ್ರನ ಮರೆ ಹೋಗು, ಈ ವರ್ತಮಾನವಂ ಹೇಳಲೋಸ್ಕರ ಮೃತ್ಯುವಿನಿಂದ ಕೊಂಡಾಡಿಸಿಕೊಂಬಂಥಾ ಮಹಾದೇವನ ಅರ್ಧಾಂಗಿಯಾದಂಥಾ ಮಹಾದೇವಿಯರು ಎನ್ನನು ನಿನ್ನ ಬಳಿಗೆ ಕಳುಹಿಸಿದರು, ಇದರೊಳು ನಿನಗೆ ಆವದುಚಿತವಾಗಿ ಇಹುದೋ ಅದಂ ನೋಡಿಕೋ, ಈ ಎನ್ನ ಹಿತವಚನವ ಕೇಳದೇ ಇದ್ದರೆ ಜೀವಮಾತ್ರದಿಂದ ಪರಲೋಕಯಾತ್ರೆಯಂ ಮಾಡು, ಎಂದು ನುಡಿದ ಕಾಳರಾತ್ರಿಯ ವಾಕ್ಯವಂ ಕೇಳಿ, ದುರ್ಗಾಸುರನು ಉರಿದೆದ್ದು ಮಹಾಕೋಪದಿಂದಿಂತೆಂದನು- ಎಲೋ ಪಟುಭಟರಾದ ದೈತ್ಯರಿರಾ! ಇವಳ ಹಿಡಿಯಿರಿ, ಹಿಡಿಯಿರಿ, ಇವಳು ತ್ರೈಲೋಕ್ಯಮೋಹಿನಿ, ತಾನು ಮಾಡಿದ ಪುಣ್ಯದಿಂದ ತಾನೇ ಬಂದಳು, ಅವಳು ರಾಜ್ಯಲಕ್ಷ್ಮಿಯೆಂಬ ಕಲ್ಪವೃಕ್ಷದ ಬಳ್ಳಿಯ ಫಲವಾದವಳು, ಇವಳಿಗೋಸ್ಕರ ನಾನೇ ದೇವಯು

ಷಿ ಮನುಷ್ಯರ ಕರೆಯಿಂಪಿಡಿದೆನು, ಪ್ರಯಾಸವಿಲ್ಲದೆ ಹಾಗೆ ತಾನೇಮನೆಗೆ ಬಂದಳು, ಆರಿಗೆ ತಕ್ಕ ವಸ್ತುವು ಅವರಿಗೆ ಅರಣ್ಯದಲ್ಲೇ ಇರಲಿ ಶೀಘ್ರದಿಂದ ಸೇರುವದು, ಅವಳನ್ನು ಅರಮನೆಗೆ ಕರಕೊಂಡು ಹೋಗಿ ಇವಳಿಂದ ಎನ್ನ ಅರಮನೆ ಅಲಂಕರಿಸಲ್ಪಡಲೀ, ಇಂದಿನ ಮಹೋತ್ಸವ ತನಗೊಬ್ಬನಿಗಾದುದಲ್ಲ, ತಮ್ಮ ದೈತ್ಯವಂಶದವರಿಗೆಲ್ಲರಿಗೂ ಆದುದು, ತನ್ನ ಪಿತೃಗಳು ಆನಂದದಿಂ ಕುಣಿದಾಡಲಿ, ತನ್ನ ಬಂಧುಗಳು ಸಂತೋಷದಿಂದಿರಲಿ; ಮೃತ್ಯು ಮೊದಲಾದ ದೇವತೆಗಳು ತನ್ನಿಂದ ಭಯವಂ ಬಿಡಲಿ; ಇಂತೆಂದು ನುಡಿದ ದೈತ್ಯೇಂದ್ರನ ಆಜ್ಞೆಯಿಂದ ಅರಮನೆಯ ಅಂತಃಪುರ ಸಂರಕ್ಷಕರಾದ ಅಣ್ಣಗಳು ಬಂದು ಅಂತಃಪುರಕ್ಕೆ ಕರದುಕೊಂಡು ಹೋಗಲು ಆ ಕಾಳರಾತ್ರಿ ಆ ದುರ್ಗಾಸುರನಂ ನೋಡಿ, ಇಂತೆಂದಳು— ಎಲೈ ದೈತ್ಯರಾಜನೆ! ನೀನು ಮಹಾಪ್ರಾಜ್ಞನು, ನಿನ್ನಂಥಾ ಪರಾಕ್ರಮಿಗಳಿಗೆ ಇಂಥಾ ನೀತಿ ಉಚಿತವಲ್ಲ; ನಾವು ದೂತಿಯರು, ನೀನು ರಾಜನು, ರಾಜನೀತಿಯುಳ್ಳವನು, ಉತ್ತಮನು ಅಲ್ಪನಾದರೂ ದೂತರ ಬಾಧೆಪಡಿಸನು; ಬುದ್ಧಿವಂತನಾದ ನಿನ್ನಂಥಾವರಿಗೆ ಹೇಳುವದೇನು? ನನ್ನಂಥಾ ದೂತಿಯರ ಬಯಸಿದ್ದರಿಂದ ಮಹಾರಾಯನಾದ ನಿನಗೇನು ಇದ್ದೀತು? ಯುದ್ಧದಲ್ಲಿ ಎಮ್ಮ ಒಡತಿಯಂ ಜಯಿಸಿದರೆ ತನ್ನಂಥಾವರು ಸಾವಿರಮಂದಿ ಆಕೆಯ ಸಂಗಡಲೇ ಬಂದಾರು, ಆಗ ನಿನ್ನ ಮನಸ್ಸು ಬಂದ ಹಾಗೆ ಅನುಭವಿಸುವೆಯಂತೆ, ಎಮ್ಮ ಒಡತಿಯ ನೋಡಲು ಇಂದೇ ನಿನಗೆ ಮಹೋತ್ಸವವಾದೀತು, ನಿನ್ನ ಬಯಕೆ ಕೈಗೂಡೀತು, ನಿನ್ನ ಪಿತೃಗಳಿಗೂ ನಿನ್ನ ಬಂಧುಗಳಿಗೂ ಸುಖವಾದೀತು; ಆಕೆ ಅಬಲೆ, ಮುಗ್ಧೆ, ಆಕೆಗೆ ದಿಕ್ಕಿಯಿಲ್ಲ, ಸಕಲ ಸೌಂದರ್ಯವೂ ಏಕರೂಪವಾಗಿ ಆ ಸ್ತ್ರೀಯಲ್ಲೇ ಇದ್ದಾವು, ಆ ಸ್ತ್ರೀಯನ್ನು ನೀನು ನೋಡಬೇಕು, ನಮ್ಮ ಒಡತಿ ಇದ್ದ ಸ್ಥಳವನ್ನು ತೋರಿಸುವೆನು, ಎನ್ನ ಒಬ್ಬಳ ನಿಲ್ಲಿಸಿದುದರಿಂದ ನಿನಗಾಗುವ ಲೇಸೇನು, ನಿನ್ನ ಕಾರ್ಯ ಸಿದ್ಧಿಯಾಗುವ ಪರ್ಯಂತರವೂ ನಿನ್ನ ಸಮ್ಮುಖದಲ್ಲೇ ಇದ್ದೇನು, ನನ್ನ ತಡೆಯಬೇಡವೆಂದು ಗಣಂಗಳಿಗೆ ಕಟ್ಟುಮಾಡೂ ಎಂದು ನುಡಿದ ಕಾಳರಾತ್ರಿಯ ವಾಕ್ಯವಂ ಕೇಳಿ, ಕಾಮಬಾಧೆಯಿಂ ಮೈಮರೆದ ಅಸುರನು ಮೃತ್ಯುವಿನ

ದೂತಿಯಾದಂಥಾ ಕಾಳರಾತ್ರಿಯು ಅನುಗ್ರಹಿಸುವನಾಗಿ ಅಂತಃಪುರ ರಕ್ಷಕರಾದ ಅಣ್ಣಗಳಂ ಕರೆದು, ಈ ದೂತಿಯು ಅಂತಃಪುರಕ್ಕೆ ಒಡಗೊಂಡು ಹೋಗಿ ಎಂದು ನುಡಿಯಲು, ಆ ಅಣ್ಣಗಳು ಬಲಾತ್ಕಾರದಿಂದ ಹಿಡಿಯಲುದ್ಯೋಗಿಸಲು, ಆ ಕಾಳರಾತ್ರಿಯು ಅತ್ಯಂತ ಕೋಪದಿಂದ ಹುಂಕರಿಸಲು ಹಿಡಿಯಬಂದ ದೈತ್ಯರಾದ ಅಣ್ಣಗಳು ಹುಂಕಾರಾಗ್ನಿಯಿಂದ ಭಸ್ಮವಾದರು, ಅದಂ ಕಂಡು ದುರ್ಗಾಸುರನು ಕೋಪಾಟೋಪದಿಂದ ಆ ಕಾಳರಾತ್ರಿಯಂ ಹಿಡಿಯಲೋಸ್ಕರ ದುರ್ಧರ, ದುರ್ಮುಖ, ಸೀರಪಾಣಿ, ಪಾಶಪಾಣಿ, ಸುರೇಂದ್ರಮರ್ದರೆಂಬ ಯಜ್ಞಾರಿ, ಖಡ್ಗರೋಮ, ದುರ್ಗ, ದೇವಕಂಪನ, ಇವರು ಮೊದಲಾದ ಕಾಮರೂಪಿಗಳು ಹತ್ತುಸಾವಿರವಂದಿ ದೈತ್ಯರಂ ಕರೆದು, ಇವಳನ್ನು ಪಾಶದಿಂದ ಕಟ್ಟಿ ಸೀರೆಯಂ ಸುಲಿದು, ಕಣ್ಣುಗೆಡಿಸಿ ನಾಚಿಕೆಯಂ ಕೊಳ್ಳಿರೆಂದು ಕಣ್ಣಸಂಜ್ಞೆಯಂ ಮಾಡಲು, ಆ ರಾಕ್ಷಸರು ನಾನಾ ಆಯುಧಂಗಳಂ ಧರಿಸಿ, ಆ ಕಾಳರಾತ್ರಿಯಂ ಹಿಡಿಯೆವೆಂದು ಸಮೀಪಕ್ಕೆ ಬರಲು, ಆ ಕಾಳರಾತ್ರಿಯು ಉಛ್ವಾಸ ಮಾರುತದಿಂದ ಹತ್ತುಸಾವಿರ ಮಂದಿ ರಾಕ್ಷಸರೂ ದಿಕ್ಕು ದಿಕ್ಕಿಗೆ ಹಾರಿ ತರಗೆಲೆಯಂತೆ ಹಾರಿ ಹೋಗುತ್ತಿರಲು, ಆ ಕಾಳರಾತ್ರಿಯು ಪೊರಮಟ್ಟು ಆಕಾಶಮಾರ್ಗದಿಂ ಪೋಗುತ್ತಿರಲು, ಅವಳಂ ಹಿಡಿಯುವ ನಿಮಿತ್ತವಾಗಿ ಮತ್ತು ಕೋಟಿಸಂಖ್ಯೆ ದೈತ್ಯರಂ ಕಳುಹಲು, ಅವರು ಭೂಮಿ, ಆಕಾಶವಂತುಂಬಿ ಬಳಿವಿಡಿದು ಪೋದರು, ಅವರಿಗೂ ಒಳಗಾಗದೆ ಆ ಕಾಳರಾತ್ರಿ ಪೋಗುತ್ತಿರಲು, ಆ ದುರ್ಗಾಸುರನು ನೂರುಲಕ್ಷ ರಥಂಗಳನ್ನು ಇನ್ನೂರು ಅರ್ಬುದ ಆನೆಗಳು, ಕೋಟಿ ಅರ್ಬುದ ಕುದುರೆಗಳು, ಹದಿನೆಂಟು ಶಂಖ ರಾಕ್ಷಸಪತಿಗಳು, ಕಾಲಾಳು ಲೆಕ್ಕವಿಲ್ಲದೆ ಪಟ್ಟಣಮಂ ಪೊರಮಟ್ಟು ಬರುತ್ತಿರಲು, ಇತ್ತಲಾ ಕಾಳರಾತ್ರಿಯು ವಿಂಧ್ಯಪರ್ವತಕ್ಕೆ ಬಂದು ಈ ವೃತ್ತಾಂತವೆಲ್ಲವನ್ನೂ ಮಹಾದೇವಿಗೆ ಹೇಳಲು, ಕೇಳ ದೇವಿಯುತು ಸಾವಿರ ತೋಳುಗಳಲ್ಲಿಯೂ ಸಾವಿರ ಬಗೆ ಆಯುಧಂಗಳ ಧರಿಸಿ ಮಹಾತೇಜದಿಂ ಯುದ್ಧಮಂ ಅಪೇಕ್ಷಿಸುತ್ತಾ ಪೂರ್ಣಚಂದ್ರನಂ ಪಳಿವ ಮುಖಮಂ ರೂಪಲಾವಣ್ಯವೆಂಬ ಸಮುದ್ರದಿಂ ಪೊರಮಡುವ

ಚಂದ್ರಮನಂತೆ ದಿವ್ಯಮಾಣಿಕ್ಯಖಚಿತವಾದ ಭೂಷಣಂಗಳ ಕಾಂತಿಯಿಂ ರಂಜಿಸುವಂಥಾ ತನ್ನ ಸೌಂದರ್ಯವೆಂಬ ವಶೀಕರಣವಾದ ಔಷಧಿಯಿಂದ ಲೋಕ ಪರವಶವಂ ಮಾಡುವಂಥಾ ಮಹಾದೇವಿಯುಂ ಕಂಡು ದುರ್ಗಾಸುರನು ಮದನಾಸ್ತ್ರದಿಂ ನೊಂದು ತನ್ನ ಸಮೀಪದಲ್ಲಿರ್ದ ಉಲೂಕನೇತ್ರ, ಕಂಕಾಸ್ಯ, ಕಾಕತುಂಡ, ಕರಾಳವದನ, ಅತ್ಯುಗ್ರ, ಕ್ರೂರಾಸ್ಯ, ಕ್ರೋಧನ, ಆಕ್ರಂದನ, ಸಂಕ್ರಂದನ, ಮಹಾಭಯ, ವಿಜಿತಾಂಗ, ಮಹೋದರ, ಮಹೋಪಾಸ್ತ್ರ, ಮಹೀಧರ, ಡುಂಡುಭ, ಡಂಡುಭೀಷಕ, ಮಹಾಡುಂಡುಭಾನನ, ಉಗ್ರಾಸ್ಯ, ಕ್ಷುದ್ರಮಾನಸ, ದೀರ್ಘದರ್ಶನ, ಮೇಘಕೇಶ, ವೃಕಾಸನ, ದೀರ್ಘಗ್ರೀವ, ಮಹಾಜಂಘ ಕ್ರಮೇಳಕ, ಶಿರೋಧರ, ರಕ್ತಬಿಂದು, ಜವಾನೇತ್ರ, ವಿದ್ಯುಜ್ಜಿಹ್ವ, ಅಗ್ನಿತಾಪನೆ, ಮಹಾಭೀಷಣ ಇವರು ಮೊದಲಾದ ಮಂಡಲೀಕರಂ ನೋಡಿ, ಇಂತೆಂದನು— ನೀವೆಲ್ಲರೂ ಎನ್ನ ಆಜ್ಞೆಯಿಂದ ಹೋಗಿ, ವಿಂಧ್ಯವಾಸಿನಿಯಾದ ಶಿವನ ಸ್ತ್ರೀಯನ್ನು ನಿಮ್ಮ ಬುದ್ಧಿಯಿಂದಾಗಲಿ, ಬಲದಿಂದ ಲಾಗಲಿ, ಛಲದಿಂದಲಾಗಲಿ, ಆವಪ್ರಕಾರದಿಂದಲಾದರೂ ಕರತಂದವಗೆ ಇಂದ್ರಪದವ ನೀವೆನು ಸಂದೇಹವಿಲ್ಲ, ಅತ್ಯಂತಸೌಂದರ್ಯವುಳ್ಳ ಇವಳ ನೋಡಿ, ಎನ್ನ ಮನಸ್ಸು ವ್ಯಾಕುಲಬಡುತ್ತಿದ್ದೀತು, ಇವಳನ್ನು ಶೀಘ್ರದಿಂದ ಕರತರದೆ ಇದ್ದರೆ ತಾನು ಮದನಾಸ್ತ್ರಗಳಂ ತಾಳಲಾರೆನು ಎಂದು ನುಡಿದ ದುರ್ಗಾಸುರನ ವಾಕ್ಯಮಂ ಕೇಳಿ, ದೈತ್ಯರೆಲ್ಲರೂ ಕರಗಳಂ ಮುಗಿದು ಇಂತೆಂದರು— ಎಲೈ ದೈತ್ಯೇಂದ್ರನೆ! ಅನಾಥೆಯಾದ, ಅಬಲೆಯಾದ, ಇವಳ ಕರತಹುದಕ್ಕೆ ಇಷ್ಟು ಪ್ರಯತ್ನವೇಕೆ, ಸಕಲ ಲೋಕಾಧಿಪತ್ಯವನ್ನು ನಿನ್ನಿಂದ ಪಡೆದು ಪ್ರಚಂಡರಾಗಿ ಪ್ರಳಯಕಾಲಾಗ್ನಿಗೆ ಸಮಾನವಾದಂಥಾ ನಮಗೆ ಇದಿರಾರು, ಅಸಾಧ್ಯವಾವುದು, ವೈಕುಂಠಪತಿಯಾದ ವಿಷ್ಣುವು ನಿಮ್ಮ ಆಜ್ಞೆಯೊಳು ನಡೆಯುತ್ತಿದ್ದಾನು, ಕೈಲಾಸಪತಿಯಾದವನನ್ನೂ ನಾವೇ ಜೈಸಿದೆವು, ಅಲ್ಲವಾದರೂ ಆತನು ಉನ್ಮಾದಿ, ವಿಷಭಕ್ಷಕನು, ಬೂದಿಬಡಕನು, ಗಜಚರ್ಮಧಾರಿಯು, ವಿಷಸರ್ಪಭೂಷಣನು ನಮ್ಮ ಭಯದಿಂದ ತನ್ನ ಸ್ತ್ರೀಯ ಅರ್ಧಶರೀರದಲ್ಲಿ ಬಚ್ಚಿಟ್ಟುಕೊಂಡು ಇದ್ದಾ

ನು; ಆತನ ಗ್ರಾಮದಲ್ಲಿ ಏನು ವಸ್ತುವೂ ಇಲ್ಲ, ಆರಿಗೂ ಕೆಲಸಕ್ಕೆ ಬಾ
ರದ ಮುದಿ ಎತ್ತು ಒಂದು, ನೋಡೋಂದರೆ ನಾಲ್ಕು ಕಾಲು ಜೀವದನ ವು
ತ್ತೊಂದೂ ಇಲ್ಲಾ, ಅವನ ಪರಿವಾರವೆಲ್ಲವೂ ಶ್ಮಶಾನವಾಸಿಗಳು ಕವಚಧಾರಿ
ಗಳು, ತಲೆಗೆ ಒಂದೊಂದು ಪರಿಯ ಟೊಪ್ಪಿಗೆಗಳುಳ್ಳವರು ಅವನ ಪಟ್ಟಣ
ದವರೆಲ್ಲರೂ ಇಂಥಾವರಲ್ಲದೆ ಪ್ರವೀಣರಲ್ಲ, ಇಂಥಾ ಹುಟ್ಟು ದರಿದ್ರನಾದವನು
ನಾವು ಲೆಕ್ಕಿಸುವರಲ್ಲ, ನಿನ್ನ ಕೃಪೆಯಿಂದ ನಮ್ಮ ಮನೆಗಳಲ್ಲಿ ಮಹಾಶೇ
ಷಾದಿ ಸರ್ಪಗಳ ಹೆಡೆಗಳಲ್ಲಿರ್ದ ದಿವ್ಯಮಾಣಿಕ್ಯಗಳೆಂಬ ದೀವಿಗೆಗಳಾಗಿ
ಇದ್ದಾವು; ಕಲ್ಪವೃಕ್ಷ, ಕಾಮಧೇನು, ಚಿಂತಾಮಣಿ, ಸಹಾ ಇದ್ದಾವು;
ನಿಮ್ಮನ್ನ ವಾಯುವು ಬೀಸಣಿಗೆಯಂ ಹಿಡಿದು ಓಲಗಿಸುತ್ತಿದ್ದಾನು, ಚಂ
ದ್ರನು ಛತ್ರವಂ ಧರಿಸುತ್ತಿದ್ದಾನು, ನಿಮ್ಮ ಉದ್ಯಾನವನದಲ್ಲಿದ್ದ ಕೊಳಗ
ಳಲ್ಲಿ ಇದ್ದ ಕಮಲಂಗಳನ್ನು ವಿಕಾಸವ ಮಾಡುತ್ತಾ ಇದ್ದಾನು, ಸುರನರ
ಉರಗತಲ್ಲಿ ನಿಮ್ಮ ಅನುಗ್ರಹವ ಬಯಸವವರಾರು? ಸುರಾಸುರ ಯಕ್ಷ
ರಾಕ್ಷಸರು ನೋಡುತ್ತಿರಲಿ, ಇವಳನ್ನು ಬಲುಹಿಂದಾ ಯಳತಂದೇವು
ಎಂದು ಎಲ್ಲರೂ ಪ್ರಳಯಕಾಲವಲ್ಲಿ ಭೂಮಿಯ ಕರಗಿಸುವಂಥಾ ಮೇಘ
ಗಳಂತೆ ಸಿಂಹನಾದವಂ ಮಾಡಿದರು, ರಣವಾದ್ಯಧ್ವನಿ ದಿಕ್ಕುಗಳ ಭೀತಿ
ಗೊಳಿಸಿತು, ಆ ಧ್ವನಿಯ ಕೇಳಿ ಶೂರರಲ್ಲದವರಿಗೂ ಶೂರತ್ವ ಹುಟ್ಟುವ
ದು, ಆಗ ದೇವತೆಗಳು ಭಯಪಟ್ಟರು, ಭೂಮಿಯು ನಡುಗಿತು, ಸಮು
ದ್ರಗಳು ಕಲಕಿವವು, ನಕ್ಷತ್ರಂಗಳು ಉದುರಿದವು, ಭಟರ ಸಿಂಹನಾದ
ವಾದ್ಯಧ್ವನಿಯಾಕಾಶವಂ ತುಂಬಿತು, ಆ ಸಮಯದಲ್ಲಿ ಮಹಾದೇವಿಯ
ರು ಅಂತ್ಯಕಾಲದಲ್ಲಿ ಸಮುದ್ರಂಗಳು ಮೀರೆದಪ್ಪಿವ ಮರ್ಯಾದೆಯಲ್ಲಿ ಬಹ
ರಾಕ್ಷಸರ ಸೇನೆಯನ್ನು ಕಂಡು, ಶರೀರವ ಬಿದಿರಿಸುವತನಕ ಅನೇಕ ಶಕ್ತಿ
ದೇವಿಯವರು ಪುಟ್ಟಿದರು, ಆ ಮಹಾದೇವಿಯ ಶರೀರದಿಂದ ಪುಟ್ಟದಶಕ್ತಿ
ಯರೊಡನೆ ಆಗ ದೈತ್ಯರು ಯುದ್ಧಕ್ಕೆ ಮಾರಾಂತು ನಿಲ್ಲಲು, ಬಲಸಮು
ದ್ರವು ಪೋರೆಯಂ ಮೀರೆ, ಒಬ್ಬ ದೈತ್ಯನು ಬಿಟ್ಟ ಶಸ್ತ್ರಾಸ್ತ್ರಂಗಳಂ ಈ
ಶಕ್ತಿಯರು ತಮ್ಮ ಹುಂಕಾರಾಗ್ನಿಯಿಂದ ಭಸ್ಮವಂ ಮಾಡಿದರು, ಆಗ
ಜಂಭ ಮೊದಲಾದ ದೈತ್ಯರು ತಮ್ಮ ದಿವ್ಯಾಸ್ತ್ರಂಗಳ ಭಂಗವಂ ನೋಡಿ,

ಅತ್ಯಂತ ಕೋಪಾಗ್ನಿಯಿಂದ ಚಕ್ರ, ಖಡ್ಗ, ಗದೆ, ಕೀಲಗುದಿಗೆ, ಯಿಾಡಿಗ ಟ್ಟಿಗೆ, ಬಾಗದಾರಿ, ಭಿಂಡಿವಾಲ, ಪರಿಘ, ಕುಂತ, ಭಲ್ಲೀಹಶಕ್ತಿ, ಅರ್ಧಚಂದ್ರ ಶರನಾರಾಚ, ಶಿಖೀಮುಖ, ಮಹಾಭಲ್ಲೀಹಪರಶು, ವಜ್ರವೃಕ್ಷಪಾಷಾಣ, ಇವು ಮೊದಲಾದ ಆಯುಧಗಳಂ ಮೇಘದಂತೆ ಆಯುಧದಮಳೆಯಂ ಕರೆಯುಕೊಂಡು ಬರಲು ಅನಂತರದಲ್ಲಿ ವಿಂಧ್ಯವಾಸಿನಿಯೆಂಬಮಹಾದೇವಿಯು ಕೋಪದಿಂದ ಉರಿದೆದ್ದು ಬಿಲ್ಲನೇರಿಸಿಕೊಂಡು ಐನೂರುಹಸ್ತಗಳಿಂದ ವಾಯುವ್ಯಾಸ್ತ್ರವಂ ಕೊಟ್ಟುಎಸೆಯಲೂ ಪ್ರಳಯವಾಯುವಿನಿಂದ ಮೇಘಗಳು ಹೋಗುವಂತೆ ತಮ್ಮ ಆಯುಧಗಳಿಂದ ಸಹಾ ಎತ್ತಿಕೊಂಡುಹೋಗಿ ದೂರದಲ್ಲಿ ಬಿಸಾಡಲು ಆ ದುರ್ಗಾಸುರನು ತಮ್ಮಸೇನೆ ನಿರಾಯುಧರಾಗಿ ಭಯಪಡದುವುದಂ ಕಂಡು ಕೋಪಾರೂಢನಾಗಿ ಪ್ರಜ್ವಲಿಪ ಶಕ್ತಿಯಂತಿರುಹಿ ದೇವಿಯೊಸಿಡಲು, ಆಮಹಾದೇವಿಯರು ಆಕಾಶಮಾರ್ಗದಿಂದತಿವೇಗದಿಂ ಬರ್ಪ ಶಕ್ತಿಯಂ ಕಂಡು ಅದನ್ನು ದಿವ್ಯಾಸ್ತ್ರದಿಂದ ಚೂರ್ಣವಮಾಡಿದಳು, ಅನಂತರದಲ್ಲಿ ಚೂರ್ಣವಾದ ಶಕ್ತಿಯಂ ಕಂಡು ದುರ್ಗಾಸುರನು ದೈತ್ಯರ್ಗೆ ಹರ್ಷವಸೀವ ವಜ್ರಮಂ ಪ್ರಯೋಗಿಸಲು, ಮಹಾಭಯಂಕರದಿಂ ಬರ್ಪ ವಜ್ರವ ನಗ್ಗುನುರಿಯಂ ಮಾಡಲು, ಅದಂ ಸಹಸ್ರ ಚೂರ್ಣವಮಾಡಿದಳು, ಆ ಮೇಲೆ ಆ ಅಸುರನು ಇಂದ್ರಧನುವಂ ಪೋಲುವ ಶಿಂಗಾಡೀ ಬಿಲ್ಲಂ ಹಿಡಿದು ದಿವ್ಯಾಸ್ತ್ರಂಗಳಂ ತೊಟ್ಟು, ದೇವಿಯ ಹೃದಯವನೆಸೆಯಲು ದೇವಿಯು ತನ್ನ ಬಾಣದಿಂದ ಆ ಬಾಣವಂ ಪರಿಹರಿಸಲು, ಆ ಅಸುರನು ಪ್ರಳಯಕಾಲಾಗ್ನಿಯಂತೆ ಪ್ರಜ್ವಲಿಸುವ ಗದೆಯಂ ಇಡಲು, ದೇವಿಯರು ಆ ಗದೆಯಂ ಚೂರ್ಣವಮಾಡಲು, ಆ ಅಸುರನು ತ್ರಿಶೂಲವಂ ಪ್ರಯೋಗಿಸಲು ದೇವಿಯರು ತನ್ನ ಹಸ್ತದಲ್ಲಿರ್ದ ತ್ರಿಶೂಲದಿಂದ ಇಡಲು, ಆ ಅಸುರನ ತ್ರಿಶೂಲವಂ ನುಂಗಿತು, ಅದಂ ಕಂಡು ಆ ಅಸುರನು ಮತ್ತೊಂದು ಗದೆಯಂ ಧರಿಸಿ, ದೇವಿಯ ಭುಜಮೂಲವನೆಪ್ಪಳಿಸಲು, ಪರ್ವತಶಿಖರಕ್ಕೆ ಸಮಾನವಾದ ಭುಜಮೂಲವತಾಕಿ ಆ ಅಸುರನಗದೆ ಸಹಸ್ರಭಾಗವಾಗಲು, ಅದಂಕಂಡು ಹಿಮ್ಮೆಟ್ಟುವ ರಾಕ್ಷಸನಂ ನೋಡಿ, ದೇವಿಯು

ರು ಪ್ರಳಯಕಾಲಾಗ್ನಿಯ ತೆರದಿಂದ ಹಲ್ಲುಕಡಿದು ಎಡಪಾದವನೆತ್ತಿ ದೈತ್ಯನ ಎದೆಯನೊದೆಯಲು, ಅಂತ್ಯಕಾಲದಲ್ಲಿ ಸಿಡಿಲುತಾಕಿದ ಕುಲಪರ್ವತವಂತೆ ಅಸುರನು ದೇವಿಯರ ಪಾದಹತದಿಂದ ಗಿರ‍್ರನೆ ತಿರಿಗಿ ಭೂಮಿಯಲ್ಲಿ ಬಿದ್ದು ಮೂರ್ಛಿತನಾಗಿ ಕ್ಷಣಮಾತ್ರದಲ್ಲಿ ತಿಳಿದೆದ್ದು ವಾಯುವಿನಿಂದ ನಂದಿದದೀಪವಂದದಿ ಅದೃಶ್ಯನಾಗಲು, ಆ ದೈತ್ಯನ ಕಾಣದೆ ಶಕ್ತಿಯರು ಕುಣಿದಾಡಿ, ಆ ದೈತ್ಯನ ಸೇನೆಯಲ್ಲಿ ಮೃತ್ಯುವಿನಂತೆ ಸಿಂಹಧ್ವನಿಯಂ ಮಾಡಿದರೂ ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನೆಂದು ವ್ಯಾಸರು ತನಗೆ ಬುದ್ಧಿಗಲಿಸಿದರ್ಥವಂ ಸೂತಪುರಾಣೀಕನು ಶೌನಕಾದಿಋಷಿಗಳಿಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ * *

ಇಂತು ಶ್ರೀಮತ್ಸಮಸ್ತಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ದೇವಿಯರು ದುರ್ಗಾಸುರನ ಪರಾಜಯ ಮಾಡಿದರೆಂಬ ಎಪ್ಪತ್ತೊಂದನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * * * * *

ಎಪ್ಪತ್ತೆರಡನೇ ಅಧ್ಯಾಯಃ

ದುರ್ಗಾವಿಜಯ ನವಶಕ್ತಿ ಅಷ್ಟಭೈರವ ಚತುಃಷಷ್ಟಿ ಭೇತಾಳರ ಮಹಿಮೆ.

ವಿಶ್ವೇಶ್ವರಾಯನಮಃ ॥ ಅನಂತರದಲ್ಲಿ ಅಗಸ್ತ್ಯನಿಂತೆದನು. ಎಲೈ ಪಾರ್ವತೀಪ್ರಿಯನಾದ ಸರ್ವಜ್ಞನಾದ ಶಿವನ ಹೃದಯಕ್ಕೆ ಆನಂದವನೀವ ಕುಮಾರಸ್ವಾಮಿಯೆ! ಮಹಾದೇವಿಯರ ಅಂಗಗಳಲ್ಲಿ ಅನೇಕಮಂದಿ ಶಕ್ತಿಯರು ಉದ್ಭವಿಸಿದರೂ ಎಂದು ನಿರೂಪಿಸಿದರಲ್ಲಾ ಆ ಶಕ್ತಿದೇವತೆಗಳ ನಾಮಂಗಳಂ ನಿರೂಪಿಸಬೇಕೆಂದು ಬಿನ್ನಹವಂ ಮಾಡಲು, ಕುಮಾರಸ್ವಾಮಿ ಇಂತೆಂದನು— ಎಲೈ ಅಗಸ್ತ್ಯನೆ! ಅವರ ಪೆಸರ್ಗಳ ಪೇಳುವೆನು ಕೇಳು ಎಂದು ಹೇಳುತ್ತಿದ್ದನು, ಅದಂತೆನೆ—ತ್ರಿಲೋ

ಕವಿಜಯೆ, ತಾರೆ, ಅಂಜನೆ, ತ್ರೈಲೋಕ್ಯಸುಂದರಿ, ತ್ರಿಪುರೆ, ತ್ರಿಜಗನ್ಮಾತೆ, ಭೀಮೆ, ತ್ರಿಪುರಭೈರವಿ, ಕಾಮೆ, ಕಮಲಾಕ್ಷಿ, ಧೃತಿ, ತ್ರಿಪುರತಾಪಿನಿ, ಜಯೆ, ಜಯಂತೆ, ವಿಜಯೆ, ಜಯೆಶಿ, ಪರಾಜಿತೆ, ಶಂಖಿನಿ, ಗಜವಕ್ತ್ರೆ, ಮಹಿಷಘ್ನಿ, ರಣಪ್ರಿಯೆ, ಶುಭೆ, ಆನಂದೆ, ಕೋಟರಾಕ್ಷಿ, ವಿದ್ಯುಚ್ಚಂಡೆ, ಅಶುಭಾರವೆ, ತ್ರಿಣೇತ್ರೆ, ಚಿತ್ರವಕ್ತ್ರೆ, ತ್ರಿಪದೆ, ಸರ್ವಮಂಗಳೆ, ಹೂಕಾರನೇತ್ರಿ, ಶೀಲೆ, ಈಶ, ಸರ್ವಾರ್ಗಸ್ಯೆ, ಸರ್ವಸುಂದರೀ ಸಿದ್ಧಿ, ಬುದ್ಧಿಸ್ವರೂಪೆ, ಸತ್ವಜೆ, ಸ್ವಧೆ, ಮಹಾಸಿದ್ಧೆ, ಶವಾನನೆ, ಪಾಶಪಾಣಿ,ಶರಮುಖಿ,ವಜ್ರೆ, ತಾರೆ, ಷಡಾನನೆ, ಮಯೂಖವದನೆ, ತಾರ್ಕ್ಷಿ,ಶುಷ್ಕೆ, ಭಾಸೀ, ಗರುತ್ಮತೀ, ಪದ್ಮಾವತೀ, ಪದ್ಮಕೇಶೀ, ಪದ್ಮಹಸ್ತೆ, ಪದ್ಮವಾಸಿನೀ. ಕಕಾರಮೊದಲಾಗಿ ಕ್ಷಕಾರಾಂತ್ಯವಾದ ಅಕ್ಷರನೆಸರ ಶಕ್ತಿಗಳೂ ಅವರ್ಗ,ವರ್ಗರಹಿತೆ,ಅಜಪೇ,ಜಪಹಾರಿಣಿ,ಜಪಸಿದ್ಧಿ,ತಪಸಿದ್ಧಿ,ಯೋಗಸಿದ್ಧಿ,ತಪೆ, ಅಮೃತೆ,ಮೈತ್ರಕೃತ್, ಮಿತ್ರನೇತ್ರೆ,ರಕ್ಷೋಕ್ಷೆ,ವೃಕ್ಷಕೋಪಿನೀ,ಸ್ವಭಿನ್ನೆ, ಮೋಹಿನಿ,ಮಾಯೇ,ಬಲೋತ್ಕಟೆ,ಉಚ್ಚಾಟನೀ, ಮಹೋಲ್ಕಾಸ್ಯೆ, ಕ್ಷೇಮಂಕರೀ, ಸಿದ್ಧಿಕರಿ, ದನುಜೇಂದ್ರಭಯಂಕರಿ, ಛಿನ್ನಾಗ್ನಿ, ಶುಭಾನನೆ, ಶಾಕಂಭರಿ, ಮೋಕ್ಷಲಕ್ಷ್ಮಿ, ತ್ರಿವರ್ಗಫಲದಾಯಿನಿ, ವಾತಾರಿ, ಕ್ಲೀಂನೆ, ಅಶ್ವಾರೂಢೆ, ಸುರೇಶ್ವರಿ, ಜ್ವಾಲಾಮುಖಿ, ಗೃಧ್ರಮುಖಿ, ಉಲೂಕಾನನೆ, ಸಿಂಹಮುಖಿ, ಶರಭಾನನೆ, ಇವರುಮೊದಲಾದ ಒಂಭತ್ತು ಕೋಟಿ ಶಕ್ತಿಗಳುಬಲವಂತರಾದವರುದೈತ್ಯಬಲವನ್ನು ತಮ್ಮತಮ್ಮ ದಿವ್ಯಾಸ್ತ್ರಂಗಳಿಂದ ಸಂಹಾರವಂ ಮಾಡಿದರು, ಅನ್ನೆಗಂದೇವಿಯುರಪಾದಹತದಿಂದಾ ಅದೃಶ್ಯನಾದ ದುರ್ಗಾಸುರನು ಮೇಘಗಳ ಮರೆಯಿಂದ ಸುಳಿವುಳ್ಳವನಾಗಿ ಅನೇಕ ಕಲ್ಲುಮಳೆಯಂ ಕರೆಯಲು ದೇವಿಯುರುಕಂಡು ವಜ್ರನಿರ್ಮಿತವಾದ ಶೋಷಣಾಸ್ತ್ರದಿಂದಾ ನಪುಂಸಕನ ಬಯಸಿದವಳ ಮನೋರಥದಂತೆ ಆ ಪಾಷಾಣ ಶಿಲಾವರ್ಷವ ಪರಿಹರಿಸಲೂ, ಅನಂತರದಲ್ಲಿ ದುರ್ಗಾಸುರನುಕೋಪದಿಂದಾಮತ್ತೆ ಗಿರಿಶಿಖರಂಗಳಂತಂದುಮೇಲೆಹಾಕಲು ದೇವಿಯರು ವಜ್ರಾಸ್ತ್ರದಿಂದಾ ಕೋಟಿಭಾಗವಂಮಾಡಲೂ, ಅದಂಕಂಡು ದುರ್ಗಾಸುರನುಮಣಿಕುಂಡಲಗಳಿಂದಾ ಅಲಂಕೃತವಾದ ತನ್ನಶಿರವಂತೂ

ಗಿ ಆನೆಯಾಗಿ ದೇವಿಯರ ಇದಿರಲ್ಲಿ ಬರಲೂ, ಆಗ ಮಹಾದೇವಿ ಪರ್ವತಾ
ಕಾರದಿಂದಾ ಏರ್ದ ಗಜವಂ ನೋಡಿ ಸಕಲಲೋಕವನ್ನು ಕಟ್ಟುವಂಥಾ ತ
ನ್ನ ಕೈಯ್ಯ ಪಾಶದಿಂ ಕಟ್ಟಿ ಖಡ್ಗದಿಂದಾ ಅದರ ಸೊಂಡಿಲವಂ ಛೇದಿಸಲೂ, ಆ
ದೈತ್ಯನು ಬ್ರಂಹಾಂಡವೆಲ್ಲವೂ ಉಲ್ಲೋಲ ಕಲ್ಲೋಲವಹ ಮರ್ಯಾದೆ
ಯಲ್ಲಿ ಘೋಳಿಟ್ಟು ಅದೃಶ್ಯನಾಗಿ ಅವನ್ನು ಲಕ್ಷಿಸದೆ ಮಹಿಷರೂಪವಂತಾಳಿ
ತನ್ನ ಖುರಾಗ್ರದಿಂದಾ ಭೂಮಿಯನೆಲ್ಲವನ್ನೂ ಕದಲಿಸುತ್ತಾ, ತನ್ನ ಕೊಂ
ಬುಗಳಿಂದಾ ಬೆಟ್ಟಂಗಳ ಚಿಮ್ಮಲೂ, ಅಲ್ಲಿರ್ದ ವೃಕ್ಷಂಗಳುಸಹಿತ ಭೂಮಿ
ಯಲ್ಲಿ ಒರಗಿದವು; ಆ ಮಹಿಷನು ನಡೆವಭಾರಕ್ಕೆ ಸಪ್ತ ಸಾಗರಂಗಳೂ
ಮೇರೆದಪ್ಪಿ ಉಕ್ಕಿದವು, ಅದರ ಉಛ್ವಾಸವೆಂಬಯ ಪಲತವಾಯುಗಳಿಂದಾ
ಬ್ರಂಹಾಂಡವೆಲ್ಲವೂ ಪ್ರಳಯ ಕಾಲದ ವಾಯುಗಳಿಂದಾ ಹ್ಯಾಗೋ ಹಾ
ಗೆ ಆಗುತ್ತಿದ್ದುದೂ, ಹಾಗೆ ಅಂತರಿಕ್ಷದಲ್ಲಿ ವಿಮಾನಾರೂಢರಾಗಿ ನೋಡುವ
ದೇವರ್ಕಳು ದಿಕ್ಕುದಿಕ್ಕಿಗೆ ಚಲ್ಲವರಿದು ಹೋದರು. ಅದಂ ಕಂಡು ಮ
ಹಾದೇವಿ ಕೋಪದಿಂದಾ ಆ ಮಹಿಷರೂಪವಂತಾಳಿದ ಅಸುರನು ತನ್ನ ತ್ರಿ
ಶೂಲದಿಂದಾ ಇರಿಯುವರಾಗಲೂ, ಆಘಾತದಿಂ ಮೂರ್ಛಿತನಾಗಿ ಎ
ಚ್ಚು ಆರೂಪವಂಬಿಟ್ಟು ಸಾವಿರತೋಳುಗಳಂ ಧರಿಸಿ ಐನೂರು ಕೋದಂಡ
ಗಳಂ ಪಿಡಿದು ಐನೂರು ದಿವ್ಯಾಸ್ತ್ರಗಳಂ ಪಿಡಿದು ರಣರಂಗದಲ್ಲಿ ಕಾಲಯಮ
ನಂತೆ ದೇವಿಯರ ಮುಂದೆ ಹೂಂಕರಿಸಿ ಕ್ಷಣಮಾತ್ರ ದಿವ್ಯಾಸ್ತ್ರ ವರ್ಷ
ವಂ ಕರೆಯಲೂ, ಆಗ ದೇವಿಯರು ಗಗನಮಾರ್ಗಕ್ಕೆ ಹೋಗಿ ವರ್ಷಧಾರೆಯ
ಮಧ್ಯದಲ್ಲಿರ್ಪ ಮಿಂಚಿನಂತೆ ಬಾಣವರ್ಷವಂ ಧ್ವಂಸಿದರ್ ತನ್ನ ಬಾಣಜಾಲದಿಂ
ಮಹಾರಾಕ್ಷಸನ ಬಾಣಜಾಲವಂ ಬಯಲುಮಾಡಿ, ಸಕ್ರೋಧದಿ ದಿವ್ಯಶರಮಂತೆ
ಗರುಡಮಾರ್ಗಾಸುರನ ಸುದೇಹಂ ಕೀಲಿಸಲು ಸಮುದ್ರದಲ್ಲಿ ತಿರುಗುವ ಮಂದ
ರದಂತೆ ಬಿರಬಿರನೆ ಚಕ್ರಾಕೃತಿ ತಿರುಗಿ ಭೂಮಿಯ ಮೇಲೆ ಬಿದ್ದು ಬಿರಬಿರನೆ ಕಣ್ಣುತ್ತಿ
ರುಹಿ ಪ್ರಾಣಗಳಂ ಬಿಡಲು, ಪಕ್ಷಿಗಳು ಪರಿಪರಿವಿಧವಾಗಿ ಹಾರಿದವು, ಆಗ ದೇವ
ದುಂದುಭಿ ಮೊಳಗಿದವು ಸಕಲಲೋಕಂಗಳು ಸಂತೋಷಪಟ್ಟವೂ ಸಕಲ
ಋಷಿಗಳು ಜಯಜಯವೆನುತ ಸಾಷ್ಟಾಂಗ ನಮಸ್ಕಾರವಂ ಮಾಡಿದರು ಪು
ಷ್ಪವೃಷ್ಟಿಯಂ ಕರೆಯುತ್ತಾ ಕೈಗಳಂ ಮುಗಿದುಕೊಂಡು ದೇವಿಯರಂ ಸ್ತು

ತ್ರಿಪವರವೆಂತೆನೆ- ಸಾವಿತ್ರಿ,ಗಾಯಿತ್ರಿ,ಸರಸ್ವತೀ,ಪ್ರಕೃತಿ,ಮತಿ,ರತಿ,ಅಹಂಕಾರಚಿತ್ತ ಸರ್ವೇಂದ್ರಿಯಂಗಳೂ,ಪಂಚತನ್ಮಾತ್ರೆ, ಪಂಚಮಹಾಭೂತ,ಶಬ್ದಾದಿರೂಪೆ, ಬ್ರಂಹಾಂಡವಂ ನಿರ್ಮಿಸುವಂಥಾವಳು, ನೀನು ಬ್ರಂಹಾಂಡದ ಒಳಗೂ ಹೊರಗೂ ಯಿಹಂಥಾವಳೂ ನೀನೆ ಪರಮಾತ್ಮಸ್ವರೂಪಿಣಿ, ನೀನೇ ಸರ್ವರೂಪೆ, ರೂಪಿಲ್ಲದವಳು ನೀನೇ, ಇಚ್ಛಾಶಕ್ತಿ ನೀನೇ, ಮಹಾಮಾಯೆ,ಸ್ವಾಹೆ,ಸ್ವಧೆ,ಅಮೃತರೂಪಿಣಿ,ದೇವರ್ಕಗಳಿಗೆ ಆಹುತಿಯು ನೀವ ಮಂತ್ರರೂಪೆ,ಪ್ರಣವಸ್ವರೂಪೆ, ಬ್ರಂಹಾದಿಗಳು ನಿನ್ನಿಂದಾವುಟ್ಟಿದರೂ ಧರ್ಮಾರ್ಥ ಕಾಮಮೋಕ್ಷಂಗಳು ನೀನೆ, ಅದರಫಲಂಗಳೂ ನೀನೆ, ಈಪ್ರಪಂಚವೆಲ್ಲವೂ ನಿನ್ನಿಂದಾ ಆಯಿತು. ನಿನ್ನಿಂದಲೇ ಸ್ಥೂಲ, ಸೂಕ್ಷ್ಮವಸ್ತುಗಳು, ಕಾಣಬರ್ಪ ವಸ್ತುಗಳೂ, ಕಾಣಬಾರದ ವಸ್ತುಗಳೂ ನೀನೆ, ನೀನು ಹೊರತಾಗಿ ಏನು ಇದ್ದೀತು, ಎಲೈತಾಯೆ! ಈಗಬಲವಂತನಾದ ದುರ್ಗಾಸುರನಂ ಬಲಸಹಿತವಾಗಿ ಸಂಹರಿಸಿ ನಮ್ಮಂ ರಕ್ಷಿಸಿದೆ ನಮಗೆ ನೀನಲ್ಲದೆ ಗತಿಯಾರು ; ಆದಕಾರಣ ನಿನ್ನನ್ನೇ ಶರಣುಹೊಕ್ಕೇವು. ಎಲೈ ವಿಶ್ವ. ಅಂಬಿಕೆ, ದೇವಿ! ನಿನ್ನಶುಭವಾದಂಥಾ ಕೃಪಾದೃಷ್ಟಿಯುಳ್ಳವರೇ ಧನ್ಯರು ಪುತ್ರಮಿತ್ರಕಳತ್ರಸಹಾ ಬಹುಕೀರ್ತಿಯುಳ್ಳವರು ನಿನ್ನ ಭಕ್ತಿಗೆವಿಪತ್ತು ಎತ್ತಣದು, ಎಲೇ ತ್ರಿಪುರಾರಿಪತ್ನಿ! ನಿನ್ನ ನಾಮಸ್ಮರಣೆಯುಳ್ಳವರು ಇಹದಲ್ಲಿ ಸಕಲಸೌಭಾಗ್ಯವನನುಭವಿಸಿ ದೀರ್ಘಾಯುಷ್ಮಂತರಾಗಿ ಕಡೆಯಲ್ಲಿ ಅವರು ಪುನರ್ಜನ್ಮವಿಲ್ಲದೆ ಶಿವಸಾಯುಜ್ಯವ ನೈದುವರೂ. ಈ ದುರ್ಗಾಸುರನು ರಣದಲ್ಲಿ ನಿನ್ನ ಅಮೃತಸ್ವರೂಪವಾದ ದೃಷ್ಟಿಯಿಂದ ನೋಡಿದಮಾತ್ರದಲ್ಲಿಯೇ ಅಮೃತದೇಹಿಯಾದನು,ಕ್ರೂರದೃಷ್ಟಿಯಿಂದ ನೋಡಿದ ನಿನ್ನದೃಷ್ಟಿಯೆಂಬ ಅಗ್ನಿಯಿಂದ ಹತರಾದ ದೈತ್ಯರು ವಿಡಿತ್ತೆಗಳಾಗಿ ಪತಂಗಕಾಂತಿಯುಳ್ಳವರಾಗಿ ಸ್ವರ್ಗವನ್ನೈದಿದರು, ಹಾಗೆಯಹುದಲ್ಲದೆ ದುರ್ಜನರಲ್ಲಿ ಸತ್ಪುರುಷರು ದುಷ್ಟದೃಷ್ಟಿಯಿಲ್ಲದವರಾಗಿಹರೆ, ಆ ದುರ್ಜನರಿಗೂ ಸತ್ಪುರುಷರಪ್ರೊಲು ಸದ್ಗತಿಯನೀವುದು ಎಂಬ ಈ ರೀತಿಯಲ್ಲಿ ದೇವರ್ಕಳು ದೇವಿಯಂ ಸ್ತುತಿಸಿ ಆತ್ಮಸಂರಕ್ಷಣೆಯಂ ಪ್ರಾರ್ಥಿಸಿದರೂ ಅದೆಂತೆನೆ,—

ಎಲೇ ಮೃಡಾನಿ,ಭವಾನಿ ತ್ರಿಪುರಹರನಪತ್ನಿ, ಮಹೇಶ್ವರಿ, ಈ ನಾಲ್ಕು

ಹೆಸರುಳ್ಳ ನೀನು ಭಕ್ತರನ್ನು ನಾಲ್ಕುದಿಕ್ಕಿನಲ್ಲೂ ರಕ್ಷಿಸು, ವೈಷ್ಣವಿಯೆಂಬ ನೀನು ಊರ್ಧ್ವ ಅಧೋಭಾಗಂಗಳಂ ರಕ್ಷಿಸು; ಮೃತ್ಯುಂಜಯೆ, ತ್ರಿಣಾಯನಿ, ತ್ರಿಪುರಾರಾತಿಶಕ್ತಿಗಳೆಂಬ ನೀನು ವಿದಿಕ್ಕುಗಳಲ್ಲಿ ರಕ್ಷಿಸು, ನಿನ್ನ ಸ್ಥೂಲರೂಪವು ನಮ್ಮ ಶರೀರಗಳಲ್ಲಿ ಇರ್ದು ಮಂಗಳದಿಂ ರಕ್ಷಿಸಲೀ, ನಿಮ್ಮ ಚಂದ್ರಕಳೆ ನಮ್ಮ ಲಲಾಟವನ್ನು ಕಣ್ಣು ಹುಬ್ಬುಗಳಂ ಸಲಹಲೀ, ತ್ರಿಲೋಚನನರಾಣಿ ನಮ್ಮ ಲೋಚನಗಳಂ ರಕ್ಷಿಸಲಿ, ಜಯೆ, ವಿಜಯೆ, ಎಂಬ ನೀನು ನಮ್ಮ ಓಷ್ಠಗಳಂ ರಕ್ಷಿಸು, ಶ್ರುತಿರೂಪವಾದ ನೀನು ಕಿವಿಗಳಂ ಸಲಹು, ಶ್ರುತಿಗಮ್ಯನಾದ ನೀನು ದಂತಪಙ್ಕ್ತಿಗಳಂ ಸಲಹು, ಸ್ತ್ರೀರೂಪವಾದಂಥ ಚಂಡಿಕೆಯೆಂಬ ನೀನು ಕದಪುಗಳಂ ರಕ್ಷಿಸು ವಾಣೀಸ್ವರೂಪಳಾದ ನೀನು ಜಿಹ್ವೆಯಂ ರಕ್ಷಿಸು, ಜಯಮಂಗಳ ನಾಮವುಳ್ಳ ನೀನು ಗಂಡಸ್ಥಲವಂ ರಕ್ಷಿಸು, ಕಾತ್ಯಾಯನಿ ಎನಿಸುವ ನೀನು ಮುಖವಂ ರಕ್ಷಿಸು, ನೀಲಕಂಠೆಯಾದ ನೀನು ಕೊರಳ ಹಿಂಭಾಗ ಮುಂಭಾಗವಂ ರಕ್ಷಿಸು, ಕೌಮಾರಿಯೆಂಬ ನೀನು ಭುಜಶಿರಗಳಂ ರಕ್ಷಿಸು, ಪದ್ಮೆಯೆಂಬ ನೀನು ಕರಗಳಂ ರಕ್ಷಿಸು, ವಿರಜೆಯೆಂಬ ನೀನು ನಖಗಳಂ ರಕ್ಷಿಸು, ತರಣಿಮಂಡಲವಲ್ಲಿ ಇಹ ನೀನು ಉದರವಂ ರಕ್ಷಿಸು, ಆಕಾಶಜಾತೆಯಾದ ನೀನು ವಕ್ಷಸ್ಥಲವಂ ರಕ್ಷಿಸು, ಅಜೆಯೆಂಬ ನೀನು ಹೃದಯವಂ ರಕ್ಷಿಸು, ರಣದಾಚಾರಿಯಾದ ನೀನು ಕಂಕಳಂ ರಕ್ಷಿಸು, ಜಗದೀಶ್ವರಿಯಾದ ನೀನು ಕಿಬ್ಬೊಟ್ಟೆಯಂ ರಕ್ಷಿಸು, ಪಾತಾಳವಾಸಿಯಾದ ನೀನು ನಾಭಿಯಂ ರಕ್ಷಿಸು, ಅಜೆಯೆಂಬ ನೀನು ಬೆನ್ನ ರಕ್ಷಿಸು, ವಿಕಟೆಯೆಂಬ ನೀನು ಪೊರವಾರವಂ ರಕ್ಷಿಸು, ಗುಹಮಾತೆಯಾದ ನೀನು ಗುಹ್ಯವಂ ರಕ್ಷಿಸು, ಅಪಾಯಹಾರಿಯಾದ ನೀನು ಅಪಾನವಂ ರಕ್ಷಿಸು, ವಿಪುಲಾಯೆಂಬ ನೀನು ತೊಡೆಗಳಂ ರಕ್ಷಿಸು, ಅಪಾರಿತೆಯೆಂಬ ನೀನು ಮೊಣಕಾಲುಗಳಂ ರಕ್ಷಿಸು, ಕಠೋರರವೆಯೆಂಬ ನೀನು ಹರಡುಗಳಂ ರಕ್ಷಿಸು, ರಸಾತಲವಲ್ಲಿ ಪಾದಗಳುಳ್ಳ ನೀನು ಪಾದಗಳಂ ರಕ್ಷಿಸು, ಉಗ್ರೆಯೆಂಬ ನೀನು ಪಾದದ ಬೆರಳುಗಳಂ ರಕ್ಷಿಸು, ಚಂಡಿಯೆಂಬ ನೀನು ಪಾದನಖವಂ ರಕ್ಷಿಸು, ತಳವಾಸಿಯಾದ ನೀನು ಅಂಗಾಲ್ಗಳಂ ರಕ್ಷಿಸು, ಲಕ್ಷ್ಮೀರೂಪವಾದ ನೀನು ಗೃಹವಂ ರಕ್ಷಿಸು, ಕ್ಷೇಮಂಕರಿಯಾದ ನೀನು ಕ್ಷೇತ್ರವಂ ರಕ್ಷಿಸು, ಪ್ರಿ

ಯಂಕರಿಯಾದ ಪುತ್ರರಂ ಸಲಹು, ಸನಾಥೆಯಾದವಳೇನು ಆಯುಷ್ಯವರಿ ಕೊಟ್ಟು ರಕ್ಷಿಸು, ಮಹಾದೇವಿಯಾದವಳೀನು ಕೀರ್ತಿಯಂ ಕೊಟ್ಟು ರಕ್ಷಿಸು, ಧನುರ್ಧಾರಿಯಾದವಳೀನು ಧರ್ಮವಂ ರಕ್ಷಿಸು, ಸಕಲದೇವತೆಯಾದವಳೀನು ಕುಲವಂ ರಕ್ಷಿಸು, ಸದ್ಗತಿಯಾದವಳೀನು ನಮ್ಮ ಗಮನವಂ ರಕ್ಷಿಸು, ಶರ್ವಾಣಿಯಾದವಳೀನು ರಣದಲ್ಲಿ ರಕ್ಷಿಸು, ರಾಜಸಭೆಯಲ್ಲಿಯೂ ರಕ್ಷಿಸು, ಶತ್ರುಸಂಕಟವಲ್ಲಿ, ಗೃಹವಲ್ಲಿ, ಜಲದಲ್ಲಿ, ಅರಣ್ಯವಲ್ಲಿ, ದುರ್ಗಸ್ಥಳದಲ್ಲಿ, ಇವು ಮೊದಲಾದ, ಉಪದ್ರವಂಗಳಲ್ಲಿ ನಮ್ಮ ಸಲಹಬೇಕೆಂದು ದೇವೇಂದ್ರ ಮೊದಲಾದ ದೇವತೆಗಳು, ಋಷಿಗಳು, ಸಿದ್ಧ, ಗಂಧರ್ವ, ಯಕ್ಷ, ಮೊದಲಾದವರು ಜಗನ್ಮಾತೆಯಾದ ಮಹಾದೇವಿಯನ್ನು ಸ್ತುತಿಸಿ ಮತ್ತೂ ಮತ್ತೂ ಸ್ತುತಿಸಿ ನಮಸ್ಕಾರಂಗಳಂ ಮಾಡುವ ದೇವತೆಗಳಂ ನೋಡಿ ಪ್ರಸನ್ನೆಯಾಗಿ ಮಹಾದೇವಿ ಇಂತೆಂದಳು, ಎಲೆ ದೇವತೆಗಳಿರಾ! ನೀವು ನಿಮ್ಮ ಅಧಿಕಾರಂಗಳಂ ಮುನ್ನಿನಂತೆ ಪರಿಪಾಲಿಸಿ, ಈಗ ನೀವು ಮಾಡಿದ ಯಥಾರ್ಥವಾದ ಸ್ತುತಿಯಿಂದ ಪ್ರಸನ್ನೆಯಾದ ತಾನು ಇನ್ನೊಂದು ವರವನಿತ್ತೇನು ಆವನಾನೊಬ್ಬನು ಈ ಸ್ತೋತ್ರದಿಂ ಶುಚಿಯಾಗಿ ಭಕ್ತಿಯಿಂದ ಎನ್ನ ಸ್ತುತಿಸಲು ಆತನ ಆಪತ್ತುಗಳು ಆ ಕ್ಷಣವೇ ಪರಿಹರವಾಗುವವು, ಈ ಸ್ತೋತ್ರವನ್ನು ಶರೀರದಲ್ಲಿ ತತ್ತತ್ಸ್ಥಾನಂಗಳಲ್ಲಿ ನ್ಯಾಸವ ಮಾಡಿಕೊಳ್ಳಲು ವಜ್ರಪಂಜರದಲ್ಲಿ ಇದ್ದಂತೆ ಲೇಶಮಾತ್ರವು ಭಯವಿಲ್ಲ, ದುರ್ಗನೆಂಬ ರಾಕ್ಷಸನ ಸಂಹರಿಸಿದ ಕಾರಣ ಇಂದು ಮೊದಲು ಎನಗೆ ದುರ್ಗೆ ಎಂಬ ನಾಮ ಪ್ರಸಿದ್ಧವಾಯಿತು ಎನ್ನ ಮರೆಹೊಕ್ಕವರ್ಗೆ ದುರ್ಗತಿಯಿಲ್ಲ, ಈ ಸ್ತುತಿ ವಜ್ರಪಂಜರವೆಂಬ ಹೆಸರುಳ್ಳದ್ದು, ಈ ಸ್ತೋತ್ರದಿಂದ ಶರೀರ ಸಂರಕ್ಷಣೆಯಂ ಮಾಡಿಕೊಳ್ಳಲು ಯಮನಿಂದ ಮೊದಲಾಗಿ ಭಯವಿಲ್ಲ ಈ ಸ್ತೋತ್ರವಂ ಪಠಿಸಲು ಸತಾಯುಸ್ಸು ಕೀರ್ತಿಯುಂಟು, ಕೇಳಿದ ಮಾತ್ರದಲ್ಲಿಯೆ ಭೂತ ಪ್ರೇತ ಪಿಶಾಚ, ಶಾಕಿನಿ, ಢಾಕಿನಿ, ಕೂಷ್ಮಾಂಡ ರಾಕ್ಷಸ, ಕ್ರೂರ, ವಿಷಸರ್ಪ, ಅಗ್ನಿ ತಸ್ಕರ, ಭೇತಾಳ ಕಂಕಾಳ, ಗ್ರಹ, ಬಾಲಗ್ರಹ, ವಾತಪಿತ್ತ ಶ್ಲೇಷ್ಮದಿಂ ಪುಟ್ಟಿದ ವಿಷಮಜ್ವರಗಳು, ಮೊದಲಾಗಿ ಪಲಾಯನವಹವು, ಈ ವಜ್ರಪಂಜರಸ್ತೋತ್ರದಿಂ ಸ್ತುತಿಸೈಯಲು ವಜ್ರದಿಂ ಮೊದಲಾಗಿ ಭಯವಿಲ್ಲ, ಈ

ಸ್ತೋತ್ರದಿಂದ ಎಂಟುಭಾರಿ ಜಲವನು ಅಭಿಮಂತ್ರಿಸಿ ಪಾನವಂ ಮಾಡಲು ಜ್ವರವ್ಯಾಧಿ ಮೊದಲಾದ ಸಕಲವ್ಯಾಧಿಗಳೂ ಪೋಗುವವು ಬಾಲಕರ್ಗೆ ಪರಮರಕ್ಷೆಯಿಂ, ಭಕ್ತಾದಿಗಳಂ, ತಾನು ತನ್ನ ದೇಹದಲ್ಲಿ ಉತ್ಪನ್ನರಾದ ಶಕ್ತಿಯರಂ ಸಹಾ ಸಂರಕ್ಷಣೆಯಂ ಮಾಡುವೆನು, ಎಂದು ಈ ರೀತಿಯಲ್ಲಿ ದೇವತೆಗಳಿಗೆ ವರವಿತ್ತು ಮಹಾದೇವಿ ಅಂತರ್ಧಾನವಾಗಲು, ದೇವತೆಗಳು ತಮ್ಮ ತಮ್ಮ ಲೋಕಂಗಳಿಗೆ ಹೋಗಿ ಸಂತೋಷದಿಂ ತಮ್ಮ ಪದವಿಗಳ ನಾಳುತ್ತಿರ್ದರು; ಎಲೈ ಅಗಸ್ತ್ಯನೇ! ದೇವಿಯು ಹೀಗೆ ದುರ್ಗಾಸುರನ ಜಯಿಸಿದುದರಿಂದ ದುರ್ಗಾ ಎಂಬ ಹೆಸರಾಯಿತು ಆ ದುರ್ಗಾದೇವಿಯು ಅಷ್ಟಮಿ ಚತುರ್ದಶಿ ಅಂಗಾರಕವಾರ ಮಹಾನವಮಿ ನವರಾತ್ರಿ ಈ ದಿನಗಳಲ್ಲಿ ಭಕ್ತಿಯಿಂದ ಪೂಜೆ ನಮಸ್ಕಾರ ಸ್ತೋತ್ರಂಗಳಿಂದ ಸೇವಿಸಲು ಸಕಲ ವಿಘ್ನಹರ, ಸುಬುದ್ಧಿಯಂ ಕೊಡುವಳು, ಕಾಶಿಯಲ್ಲಿರ್ಪ ಈ ಮಹಾದುರ್ಗೆಯಂ ಪೂಜೆಬಲಿಗಳಿಂದಾರಾಧಿಸಲು ಅಷ್ಟ ಮಹಾಸಿದ್ಧಿಗಳಹವು, ಯಾತ್ರೆಯಂ ಮಾಡಿದವರ್ಗೆ ಹೆಜ್ಜೆ ಹೆಜ್ಜೆಗು ಬಹು ವಿಘ್ನಂಗಳಂ ಪರಿಹರಿಸುವಳು, ದುರ್ಗಾತೀರ್ಥದಲ್ಲಿ ಸ್ನಾನವಂ ಮಾಡಿ ದುರ್ಗೆಯಂ ಪೂಜಿಸಲು ಸಮಸ್ತಪಾಪಹರ, ಆ ದುರ್ಗೆಯೂ ಸಕಲ ಶಕ್ತಿಯಂ ಕೂಡಿಕೊಂಡು ಕಾಶಿಯಂ ರಕ್ಷಿಸುತ್ತಿಹಳು, ಅದು ಕಾರಣ ಕಾಳರಾತ್ರಿ ಮೊದಲಾದ ಶಕ್ತಿಗಳನ್ನು ಕಾಶಿವಾಸಿಗಳಾದವರು ಅವಶ್ಯವಾಗಿ ಪೂಜಿಸಬೇಕು ಮತ್ತೂ ಶಕ್ತಿಯರಿದ್ದಾರು, ಅವರ ಹೆಸರೇನೆಂದರೆ—ಶತನೇತ್ರೆ, ಸಹಸ್ರಮುಖಿ, ಅಯುತಭುಜೆ, ಅಶ್ವಾರೂಢೆ, ಗಜಾರೂಢೆ, ತ್ವರಿತೆ, ಶವವಾಹನೆ, ವಿಶ್ವೆ, ಸೌಭಾಗ್ಯಗೌರಿ, ಈ ಶಕ್ತಿಗಳನ್ನು ಯತ್ನದಿಂದಲಾದರು ಪೂಜಿಸಬೇಕು; ರುರುಚಂಡ, ಅಸಿತಾಂಗ, ಕಪಾಲಿ, ಕ್ರೋಧನ, ಉನ್ಮತ್ತಭೈರವ, ಸಂಹಾರಭೈರವ, ಭೀಷಣಭೈರವರೆಂಬ ಅಷ್ಟ ಭೈರವರು ಮುಂಡಮಾಲಿಗಳು ಕೃತ್ತಿರಿಯಂ ಕರ್ಪರವ ಧರಿಸಿ ಶುನಕವಾಹನರಾಗಿ ರಕ್ತಮುಖರಾದ ಮಹಾದಂಷ್ಟ್ರ ಮಹಾಭುಜರಾದ ನಗ್ನರಾಗಿ ತಲೆಗಳಂ ಕೆದರಿಕೊಂಡು ಇರ್ಪ ನಾನಾರೂಪಿಗಳಾದ ನಾನಾಶಸ್ತ್ರಾಸ್ತ್ರಧಾರಿಗಳಾದಂಥ ವಿದ್ಯುಜ್ಜಿಹ್ವ, ಉಲ್ಲಸಜ್ಜಿಹ್ವ, ಕ್ರೂರಾಸ್ಯ, ತಾರಲೋಚನ, ಉಗ್ರ, ಉತ್ಕಟದಂಷ್ಟ್ರ

ವಕ್ರಾಸ್ಯ, ವಕ್ರನಾಸಿಕ, ಜಂಭಕ, ಜೃಂಭಮುಖ, ಜ್ವಾಲಾನೇತ್ರ, ವೃಕೋದರ, ಗರ್ತನೇತ್ರ, ಘೂಕನೇತ್ರ, ತೀಕ್ಷ್ಣನೇತ್ರ, ಮುಂಡನ, ಜ್ವಾಲಕೇಶ, ಕಂಬುಶಿರಾಃ, ಸರ್ಪಗ್ರೀವ, ಮಹಾಹನು, ಮಹಾಮುಖ, ಲಂಬಕರ್ಣ, ಪ್ರಾವರಣ, ಅಸಶನಿ, ಇವರುಮೊದಲಾದ ಅರುವತ್ತು ನಾಲ್ಕು ಭೇತಾಳರು ಕಾಶೀಕ್ಷೇತ್ರಮಂ ರಕ್ಷಿಸಿಕೊಂಡು ಆ ಕ್ಷೇತ್ರಕ್ಕೆ ವಿಘ್ನವನಾಳ್ವವರ ರಕ್ತಪಾನವಂ ಮಾಡುತ್ತಿಹರು, ತ್ರೈಲೋಕ್ಯವಿಜಯೆ ಮೊದಲು ಜ್ವಾಲಾಮುಖಿ ಕಡೆಯಾಗಿ ಇಹ ಶಕ್ತಿಗಳು ಎತ್ತಿದ ಆಯುಧವುಳ್ಳವರಾಗಿಯು ಕ್ಷೇತ್ರಮಂ ರಕ್ಷಿಸುತ್ತಿಹರು, ಈ ಶಕ್ತಿಗಳು ಎಂಟುಮಂ ವಿಘ್ನರಪವರನ್ನು ಅರುವತ್ತುನಾಲ್ಕುಮಂದಿ ಭೇತಾಳರನ್ನು ಇವರು ಮೊದಲಾದ ಕ್ಷೇತ್ರರಕ್ಷಕರನ್ನು ಪ್ರತಿದಿನವು ಪೂಜಾಜಾಗರಣದಿಂ ಆರಾಧನೆಯಂ ಗೈದವರು ನಿರ್ವಿಘ್ನದಿಂ ಮೋಕ್ಷವಹುದು; ಈ ದುರ್ಗಾದೇವಿಯ ವಿಜಯಮಂ ಪೇಳ್ವ ಅಧ್ಯಾಯಮಂ ಪಠಿಸಲು ಬರೆದು ಮನೆಯೊಳಗಿರಿಸಿಕೊಂಡಿದ್ದರೂ ಅವರ್ಗೆ ಸಹಸ್ರ ಆಪತ್ತುಗಳುಬಂದರೂ ಪಲಾಯನವಹವು, ಕಾಶೀಕ್ಷೇತ್ರದಲ್ಲಿ ಪ್ರೇಮವುಳ್ಳ ಪುಣ್ಯಾತ್ಮರು ಈ ಅಧ್ಯಾಯಮಂ ಬಹುಮಾನದಿಂ ಕೇಳಬೇಕು, ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥಮಂ ವ್ಯಾಸರು ತನಗೆ ಬುದ್ಧಿಗಲಿಸಿದರು, ಎಂದು ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ

ಇಂತು ಶ್ರೀಮತ್ಸಮಸ್ತ ಭೂಮಂಡಲೀತ್ಯಾದಿ ಬಿರುದಾಂಕಿತರಾದ, ಮಹೀಶೂರಪುರವರಾಧೀಶ ಶ್ರೀಕೃಷ್ಣರಾಜಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ದುರ್ಗಾದೇವಿಯು ದುರ್ಗಾಸುರನಂ ಸಂಹರಿಸಿ ದೇವತೆಗಳಿಗೆ ವರವ ಕೊಟ್ಟ ವೃತ್ತಾಂತಮಂ ಪೇಳ್ದ ಎಪ್ಪತ್ತೆರಡನೆ ಅಧ್ಯಾಯಾರ್ಥ ನಿರೂಪಣಕ್ಕೆ ಮಂಗಳಮಹಾ * * *

ಎಪ್ಪತ್ತಮೂರನೇಅಧ್ಯಾಯ— ಓಂಕಾರೇಶ್ವರನಮಹಿಮೆ.

ವಿಶ್ವೇಶ್ವರಾಯನಮಃ॥ ॥ಅನಂತರದಲ್ಲಿ ಅಗಸ್ತ್ಯರನು ಇಂತೆಂದನು ಎಲೈ ಕುಮಾರಸ್ವಾಮಿಯೆ! ದೇವಿಯರು ಸಹಿತ ಪರಮೇಶ್ವರನು ತ್ರಿಲೋ

ಜಾನಸ್ಥಾನಕ್ಕೆ ಹೋಗಿ ಅಲ್ಲಿಯೇನು ಮಾಡಿದನೋ ಅದನ್ನು ಎನಗೆ ನಿರೂಪಿಸಬೇಕೆಂದು ಕೇಳಲು ಕುಮಾರಸ್ವಾಮಿ ಇಂತೆಂದನು, ಕೇಳೈ ಅಗಸ್ತ್ಯನೇ! ಆ ತ್ರಿಲೋಚನಸ್ಥಾನದಲ್ಲಿ ವಿರಜೆ ಎಂಬ ಹೆಸರುಳ್ಳ ನದಿಯು ಸಂದರ್ಶನವ ಮಾಡಲು ರಜೋಗುಣನಿವೃತ್ತಿಯಹುದೂ, ಕಾಶಿಯಲ್ಲಿರ್ದ ಸಕಲತೀರ್ಥಂಗಳಲ್ಲಿಯೂ ಪಿಲಪಿಲಾತೀರ್ಥ ಗಂಗೆಯಲ್ಲಿ ಪ್ರಸಿದ್ಧವಾಗಿ ಇಹುದು ಆ ತೀರ್ಥದಲ್ಲಿ ತ್ರೈಲೋಕ್ಯದಲ್ಲಿ ಇದ್ದಂಥಾ ದೇವಋಷಿ, ಬ್ರಹ್ಮಋಷಿ, ಮನುಜ, ಉರಗ, ಪರ್ವತ, ನದಿ, ಅರಣ್ಯ, ಮೊದಲಾದವು ಎಲ್ಲವು ನಿತ್ಯವೂ ಸ್ನಾನಮಂ ಮಾಡುತ್ತಿಹವು, ಅಂದು ಮೊದಲಾಗಿ ತ್ರಿವಿಷ್ಟಪತೀರ್ಥವೆನಿಸಿತು, ಆ ತ್ರಿವಿಷ್ಟಪತೀರ್ಥದ ಬಳಿಯಲ್ಲಿ ತ್ರಿಲೋಚನೇಶ್ವರನುಂಟು ಆ ಈಶ್ವರನ ಮಹಿಮೆಯನ್ನು ಪಾರ್ವತೀದೇವಿಗೆ ಪರಮೇಶ್ವರನು ನಿರೂಪಿಸಿದನು, ಆ ವೃತ್ತಾಂತಮಂ ನಿನಗೆ ಪೇಳೇನು ಎಂದು ಕುಮಾರಸ್ವಾಮಿ ಹೇಳುವನು, ಕೇಳೈ ಅಗಸ್ತ್ಯನೇ! ಪರಮೇಶ್ವರನ ಅರ್ಧಾಂಗಿಯಾದ ಪಾರ್ವತೀದೇವಿಯು ತನ್ನ ಪ್ರಾಣನಾಯಕನಾದ ಪರಮೇಶ್ವರಂಗಿಂತೆಂದಳು, ಎಲೈ ಪ್ರಾಣನಾಯಕನಾದ ದೇವದೇವನೆ, ಜಗನ್ನಾಥನೆ! ಸಕಲರಿಗೂ ತಂದೆ ತಾಯಾದ ಸ್ವಾಮಿಯೆ ನಾನು ನಿಮ್ಮನ್ನೊಂದು ವೃತ್ತಾಂತವಂ ಕೇಳುತ್ತಾ ಇರ್ದೇನೆ ಅದನ್ನು ನನಗೆ ಬುದ್ಧಿಗಲಿಸಬೇಕು ಅದೇನೆಂದರೆ ಈ ಕ್ಷೇತ್ರವು ಎನಗಿಂತಾ ಪ್ರಿಯವಾದುದು, ಮೋಕ್ಷಲಕ್ಷ್ಮಿಗೆ ತೌರುಮನೆಯು, ಅಂಥಾದ್ದು ಕರ್ಮಬೀಜಕ್ಕೆ ಚೌಳುಭೂಮಿ, ಈ ಕ್ಷೇತ್ರದ ಒಂದು ಹಿಡಿ ಭೂಮಿಗೆ ಮೂರು ಲೋಕವು ಸರಿಬಾರದು, ಸಕಲ ಕ್ಷೇತ್ರವು ತೃಣಕ್ಕೆ ಸಮಾನವು, ಈ ಕ್ಷೇತ್ರದ ಮಹಿಮೆ ತಿಳಿಯಲಾರರಿಗೂ ಶಕ್ಯವಲ್ಲ, ಇಲ್ಲಿ ಇದ್ದಂಥ ಸಕಲ ಲಿಂಗಗಳು ಮೋಕ್ಷಕ್ಕೆ ಕಾರಣವಾದವು, ಆದರೂ ತ್ರಿಲೋಚನಸ್ಥಾನವು ಏನು ಕಾರಣ ಪ್ರಸಿದ್ಧವಾಯಿತು ಪ್ರಳಯದಲ್ಲಿ ಹೊರತಾಗಿ ನಿಮ್ಮ ನಿತ್ಯಸನ್ನಿಧಾನವುಳ್ಳ ಈ ಕಾಶೀಕ್ಷೇತ್ರವು ಮುಕ್ತಿಸಾಧನವೆಂದು ಪ್ರಸಿದ್ಧವಾದ ಕಾರಣ ಸ್ಮರಣೆಯಿಂದಲೆ ಸಕಲ ಪಾಪಕ್ಷಯವಂ ಮಾಡುವದು, ದರ್ಶನಸ್ಪರ್ಶನದಿಂದ ಸ್ವರ್ಗಮೋಕ್ಷವಂ ಕೊಡುವಂಥ ಈ ಲಿಂಗಗಳ ಮಹಿಮೆಯನ್ನು ಎನ್ನ ಮೇಲಣ ಕೃಪೆಯಿಂದ ಯಥಾರ್ಥವಾಗಿ ಪೇಳಿ ಬುದ್ಧಿಗಲಿಸಬೇಕು,

ನಿಮ್ಮ ಪಾದಪದ್ಮಂಗಳಿಗೆ ನಮಸ್ಕಾರವಂ ಮಾಡುತ್ತಾ ಇಧೇನೆ ಇಂತೆಂದು ದೇವಿ ಬಿನ್ನೈಸಲು ಪರಮೇಶ್ವರನಿಂತೆಂದನು, ಎಲೇದೇವಿ! ಈ ಕಾಶೀ ಕ್ಷೇತ್ರವು ಮುಕ್ತಿಸ್ಥಾನವೆಂದು ಬ್ರಹ್ಮ, ವಿಷ್ಣು, ದೇವೇಂದ್ರಾದಿ, ದೇವತೆಗಳು ಬಲ್ಲರಲ್ಲದೆ ಮಿಕ್ಕಾದವರು ಅರಿಯರು,ಆನಂದಕಾನನದಲ್ಲಿ ಸ್ಥೂಲವಾಗಿ ಸೂಕ್ಷ್ಮವಾಗಿ ನಾನಾರತ್ನರೂಪವಾಗಿ ನಾನಾಧಾತುಸ್ವರೂಪವಾಗಿ ಪಾಷಾಣರೂಪವಾಗಿ ಇಪ್ಪ ಲಿಂಗಗಳು ಅಸಂಖ್ಯಾತಸ್ವಯಂಭುಲಿಂಗಗಳಿಗೆ ಲೆಕ್ಕವೆ ಇಲ್ಲ;ದೇವತೆಗಳು, ಋಷಿಗಳು, ಪ್ರತಿಷ್ಠೆಯಂ ಮಾಡಿದಲಿಂಗಗಳು ಲೆಕ್ಕವಿಲ್ಲದೆ ಇಪ್ಪಾವು; ಗಂಧರ್ವ, ಯಕ್ಷ, ಕಿನ್ನರ, ರಾಕ್ಷಸ, ಅಸುರ, ಉರಗ, ದಾನವ, ಮನುಷ್ಯ, ಅಪ್ಸರೋಗಣ, ಗಣಂಗಳು, ದಿಗ್ಗಜಗಿರಿತೀರ್ಥ, ಕಾಡಿವಾಸರ, ಪಶುಪಕ್ಷಿ, ಇವರು ಮುಂತಾದವರು ಪ್ರತಿಷ್ಠೆಯಂ ಮಾಡಿದ ನಿಮ್ಮಹೆಸರಿನಲ್ಲಿ ಅಂಕಿತವಾದ ಮುಕ್ತಿಗೆ ಕಾರಣವಾದಂಥಾ ಲಿಂಗಗಳು ಈಗಕಾಣಪಡವು, ಕಾಲಾಂತರದಲ್ಲಿ ಕಾಣಬಹವು ಗಂಗೆಯಲ್ಲಿ ಮುಳುಗಿಹ ಲಿಂಗಗಳಿಗೆಮಿತಿಯಿಲ್ಲ, ಅರುವತ್ತುಕೋಟಿದಿವ್ಯಲಿಂಗಗಳು ಗಂಗೆಯಲ್ಲಿ ಮುಳುಗಿ ಇದ್ದಾವು ಆ ಲಿಂಗಗಳು ಕಲಿಯುಗದಲ್ಲಿ ಕಾಣಿಸಿಕೊಳ್ಳವು ಇವಲ್ಲದೆ ಗಣಂಗಳು ಪ್ರತಿಷ್ಠೆಯಂ ಮಾಡಿದಲಿಂಗಗಳಿಗೆ ಗಣನೆಯಿಲ್ಲ, ಈಗನೀನು ಮುಕ್ತಿಗೆ ಕಾರಣವಾದ ಲಿಂಗಗಳು ಆವಾವು ಎಂದು ಬೆಸಗೊಂಡೆಯಲ್ಲ ಅವುಕಲಿಯುಗದಲ್ಲಿ ಅತಿಗೋಪ್ಯವಾಗಿ ಇಹವು,ಮತ್ತೇನೆಂದರೆ ತಮ್ಮ ತಮ್ಮ ಸ್ಥಾನಂಗಳಂ ಬಿಡದಿಹವು ಪ್ರಭಾವಕೆಡಲಿಲ್ಲ ಈ ಕಲಿಯುಗದಲ್ಲಿಯೆ ಪಾಪಿಷ್ಠರಾದವರುವು ಈ ಲಿಂಗಗಳ ನಾಮಂಗಳಂ ಅರಿಯರು.ಈಲಿಂಗಗಳ ನಾಮಸ್ಮರಣೆಯಿಂದಸಕಲ ಪಾಪಹರ, ಪುಣ್ಯವೆಚ್ಚುವದು, ಅಂಥಾಲಿಂಗಗಳಾವಾವೆನೆ-ಓಂಕಾರೇಶ್ವರ, ತ್ರಿಲೋಚನೇಶ್ವರ, ಮಹಾದೇವೇಶ್ವರ, ಕೃತ್ತಿವಾಸೇಶ್ವರ, ಚಂದ್ರೇಶ್ವರ, ಶೈಲೇಶ್ವರ, ರತ್ನೇಶ್ವರ, ಕೇತಾರೇಶ್ವರ, ಧರ್ಮೇಶ್ವರ, ವೀರೇಶ್ವರ, ಕಾಮೇಶ್ವರ, ವಿಶ್ವಕರ್ಮೇಶ್ವರ, ಅರ್ಕೇಶ್ವರ, ಅವಿಮುಕ್ತೇಶ್ವರ, ವಿಶ್ವೇಶ್ವರನೆಂಬ ಈ ಹದಿನಾಲ್ಕು ಲಿಂಗಗಳಿಂದ ಈ ಕ್ಷೇತ್ರವು ಮುಕ್ತಿಸ್ಥಾನವಾಯಿತು,ಈ ಲಿಂಗಗಳಲ್ಲಿ ನಾನು ಪ್ರತ್ಯಕ್ಷವಾಗಿ ಇಹೆನು ಈ ಲಿಂಗಗಳಿಗೂ

ಪ್ರತಿಮಾಸವಲ್ಲಿಯೂ ಪಾಡ್ಯಮೊದಲಾಗಿ ಯಾತ್ರೆಯಂ ಮಾಡಬೇಕು
ಈ ಲಿಂಗಗಳ ದರ್ಶನಪೂಜೆಯಂ ಮಾಡಿದವರ್ಗೆ ಮೋಕ್ಷವೆತ್ತಣದು ಇಂ
ತೆಂದು ಪರಮೇಶ್ವರನು ನಿರೂಪಿಸಿದನು, ಎಂದು ಕುಮಾರಸ್ವಾಮಿ ಹೇಳಲು
ಅಗಸ್ತ್ಯನಿಂತೆಂದನು ಎಲೈ ಷಣ್ಮುಖನಾದ ಕುಮಾರಸ್ವಾಮಿಯೆ! ಈ ಕಾ
ಶೀಕ್ಷೇತ್ರದಲ್ಲಿ ಮುಕ್ತಿಪ್ರಧಾನವಾದ ಲಿಂಗಗಳು ಇವೆ ಸರಿಯೆ ಇನ್ನೂ
ಉಂಟೋ? ಅವರ ಸ್ವರೂಪವ ನಿರೂಪಿಸಬೇಕು ಎನಲು, ಕುಮಾರಸ್ವಾಮಿ
ಇಂತೆಂದನು- ಕಲಿಯುಗದಲ್ಲಿ ಗೋಪ್ಯವಾಗಿ ಕಾಲಾಂತರದಲ್ಲಿ ಕಾಣಿಸಿ
ಕೊಂಬುವವಕ್ಕೆ ಕೆಲವು ಲಿಂಗಗಳುಂಟು, ಆ ವಿಶ್ವಪತಿಯಲ್ಲಿ ಭಕ್ತಿಯು
ಪ್ರಸಗಲ್ಲದೆ ಕಾಣಪಡವು ಅಂಥಾಲಿಂಗಗಳ ನಾಮಗ್ರಹಣ ಮಾತ್ರದಿಂದ
ಕಲಿಕಲ್ಮಷಂಗಳು ಹರ, ಅವು ಆವಾವೆಂದರೆ-ಅಮೃತೇಶ್ವರ, ತಾರಕೇಶ್ವ
ರ, ಮೋಕ್ಷಜ್ಞಾನೇಶ್ವರ, ಕರುಣೇಶ್ವರ, ಸ್ವರ್ಗದ್ವಾರೇಶ್ವರ, ವೃದ್ಧ
ಕಾಲೇಶ್ವರ, ವಿಶ್ವೇಶ್ವರ, ಜ್ಯೋತಿರೂಪೇಶ್ವರ, ನಂದಿಕೇಶ್ವರ, ಜ್ಞಾನೇ
ಶ್ವರ, ಬ್ರಹ್ಮೇಶ್ವರ, ಜಾಂಗಲೇಶ್ವರ, ವೃಷೇಶ್ವರ, ಮಹೇಶ್ವರ, ಈ ಹ
ದಿನಾಲ್ಕು ಲಿಂಗಗಳು ಮುಕ್ತಿಪ್ರದಗಳೆಂದು ಪ್ರಸಿದ್ಧವಾದವು ಈ ಲಿಂಗಗ
ಳ ಪೂಜೆಯಿಂದ ಪುನರಾವೃತ್ತಿಯಿಲ್ಲ ಈ ಲಿಂಗಗಳು ಹೆಸರ್ಗೊಳ್ಳಲು ಆ
ಪತ್ತುಗಳ ಪರಿಹಾರವು ಪೂಜೆಯಿಂದ ಎನ್ನ ಸನ್ನಿಧಾನವುಂಟು ಹದಿನಾಲ್ಕು
ಲೋಕದ ಸಾರದಂತೆಗದು ಭಕ್ತರಹಿತಾರ್ಥವಾಗಿ ಈ ಹದಿನಾಲ್ಕು ಲಿಂಗ
ಗಳ ನಿರ್ಮಿಸಿದನು, ಇವೆ ಮುಕ್ತಿಗೆ ಕಾರಣ ಈ ಹದಿನಾಲ್ಕು ಲಿಂಗಗಳ ಧ್ಯಾ
ನಿಸಿದರೆ ವ್ರತಿಗಳು, ತಪಸ್ವಿಗಳು, ಮಹಾದಾನವಮಾಡಿದವರು, ಸಕಲಯ
ಜ್ಞಂಗಳಂ ಮಾಡಿದವರು, ಕೆರೆ, ಕುಂಟೆ, ಮೊದಲಾದ ಧರ್ಮಂಗಳಂ ಮಾ
ಡಿದವರು, ಈ ಲಿಂಗಗಳ ಒಮ್ಮೆ ಪೂಜಿಸಿದವನು, ಮುಕ್ತನಹನು, ಇನ್ನು ಹ
ದಿನಾಲ್ಕು ಲಿಂಗಗಳುಂಟು, ಅವನ್ನು ಹೇಳೇನು-ಆವಾವೆಂದರೆ ಶೈಲೇಶ್ವರ,
ಸಂಗಮೇಶ್ವರ, ಸ್ವರ್ಲೀನೇಶ್ವರ, ಮಧ್ಯಮೇಶ್ವರ, ಹಿರಣ್ಯಗರ್ಭೇಶ್ವರ
ಈಶಾನೇಶ್ವರ, ಗೋಪ್ರೇಕ್ಷೇಶ್ವರ, ವೃಷಧ್ವಜೇಶ್ವರ, ಉಪಶಾಂತೇಶ್ವರ
ಜ್ಯೇಷ್ಠೇಶ್ವರ, ನಿವಾಸೇಶ್ವರ, ಶುಕ್ರೇಶ್ವರ, ವ್ಯಾಘ್ರೇಶ್ವರ, ಜಂಬುಕೇ
ಶ್ವರ, ಈ ಹದಿನಾಲ್ಕು ಲಿಂಗಗಳ ಸೇವೆಯಿಂದ ಮುಕ್ತಿಯುಂಟು ಪ್ರತಿದಿ

ವಸದಲ್ಲಿಯೂ ಚೈತ್ರಶುದ್ಧ ಪಾಡ್ಯಮೊದಲಾಗಿ ಈ ಲಿಂಗಗಳಿಗೆ ಮಹೋತ್ಸವದಿಂದ ಯಾತ್ರೆಯಮಾಡಬೇಕು,ಇದು ಕ್ಷೇತ್ರರಹಸ್ಯ ಸಂಸಾರವೆಂಬ ರೋಗಕ್ಕೆ ಔಷಧ, ಮುಕ್ತಿಗೆ ಬೀಜ, ಕರ್ಮಾರಣ್ಯಕ್ಕೆ ಕಾಡುಕಿಚ್ಚು ಈ ಲಿಂಗಗಳಮಹಿಮೆಗೆ ಮಿತಿಯೇ ಇಲ್ಲ, ಇವರಲ್ಲಿ ಒಂದು ಲಿಂಗದಮಹಿಮೆಯಂ ತಾನುಪೂರತಾಗಿ ಮಿಕ್ಕಾದವರು ಅರಿಯರು, ಹೀಗೆಂದುನುಡಿದ ಪರಮೇಶ್ವರನ ವಾಕ್ಯಮಂ ಕೇಳಿ ಪಾರ್ವತೀದೇವಿಯರು ಸರ್ವಜ್ಞನಾದ ಪರಮೇಶ್ವರನಿಗೆ ನಮಸ್ಕರಿಸಿ ಮತ್ತೂ ಇಂತೆಂದು ಬಿನ್ನೈಸಿದಳು, ಎಲೈ ಸ್ವಾಮಿ! ಈ ಕ್ಷೇತ್ರದ ಮಹಿಮೆಯಂ ಕೇಳಿದೆನು,ಈಗ ನೀವು ನಿರೂಪಿಸಿದ ಲಿಂಗಗಳ ಒಂದೊಂದರ ಮಹಿಮೆಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ಬುದ್ಧಿಗಲಿಸಬೇಕು, ಅಮರ ಕಟಕದಿಂದಾ ಓಂಕಾರೇಶ್ವರನು ಈ ಕಾಶೀಪಟ್ಟಣಕ್ಕೆ ಏನುನಿಮಿತ್ತ ಬಂದನು, ಆತನ ಸ್ವರೂಪವೆಂಥಾದ್ದು? ಆತನಮಹಿಮೆಯೇನು? ಪೂರ್ವದಲ್ಲಿ ಈತನಪೂಜೆಯಂ ಮಾಡಿದವರಾರು? ಪೂಜೆಯಂಮಾಡಲು ಏನು ಫಲವನೀವನು? ಇಂತೆಂದು ಬಿನ್ನೈಸಿದ ಪಾರ್ವತೀದೇವಿಯವಾಕ್ಯಮಂ ಕೇಳಿಪರಮೇಶ್ವರನಿಂತೆಂದು ನಿರೂಪಿಸಿದನು, ಎಲೈ ದೇವಿ! ಲೋಕಹಿತಾರ್ಥವಾಗಿನೀನುಕೇಳಿದ ಪ್ರಶ್ನೆ ಮಹಾಚನ್ನಾಯಿತು ಆದರೆಯೇನುಕೇಳು ಎಂದು ನಿರೂಪಿಸುತ್ತಿದ್ದಾರು, ಪೂರ್ವದಲ್ಲಿ ಈ ಕಾಶೀಕ್ಷೇತ್ರದಲ್ಲಿ ಬ್ರಹ್ಮನು ಸಾವಿರಯುಗ ಪರ್ಯಂತವು ಉಗ್ರತಪವಂಮಾಡುತ್ತಿರಲು ಸಪ್ತಪಾತಾಳಂಗಳಂ ಭೇದಿಸಿಕೊಂಡು ಸಕಲ ದಿಕ್ಕುಗಳಂ ಬೆಳಗುತ್ತ ದಿವ್ಯಜ್ಯೋತಿಯು ಛಟಛಟಾ ಎಂಬ ಶಬ್ದಗಳಿಂದ ಭೂಮಿಯು ಹಿಂಭಾಗವಂ ಮಾಡಿಕೊಂಡು ಬ್ರಹ್ಮನಮುಂದೆ ಪ್ರಸನ್ನವಾಗಲು,ಪ್ರಳಯಕಾಲದ ಮೇಘಗರ್ಜನೆಯಂತೆ ಮೊಳಗುವ ಧ್ವನಿಯಂಕೇಳಿ ಬ್ರಹ್ಮನು ಸಮಾಧಿಯಂಬಿಟ್ಟು ಕಣ್ದೆರದುನೋಡುತ್ತಿರಲು,ಮೊದಲುಸತ್ವಗುಣದಿಂದ ಋಗ್ವೇದಸ್ವರೂಪವಾದ ಸ್ಥಿತಿಕಾರಣನಾದ ನಾರಾಯಣಸ್ವರೂಪನಾದ ತಪಸ್ಸಹಿತವಾದ ಅಕಾರವಂಕಂಡನು, ಆಮೇಲೆ ರಜೋಗುಣವುಳ್ಳ ಯಜುರ್ವೇದಸ್ವರೂಪವಾದ ಬ್ರಹ್ಮದೇವತೆವುಳ್ಳಉಕಾರವಂಕಂಡನು ಆಮೇಲೆ ವಿಶ್ವರೂಪವಾಗಿ ತಮೋಗುಣವುಳ್ಳ ಸಾಮವೇದಸ್ವರೂಪವಾದ ರುದ್ರರೂ

ಪಾವ ಮಕಾರವಂ ಕಂಡನು, ಆಮೇಲೆ ವಿಶ್ವರೂಪವಾಗಿ ಅನಾಕಾರವಾಗಿ ಗುಣನಿರ್ಗುಣರೂಪವಾಗಿ ನಾಮರೂಪವಿಲ್ಲದೆ ನಾದಕ್ಕೆ ಕಾರಣವಾದ ಪರಮಾನಂದಸ್ವರೂಪವುಳ್ಳ ಸಕಲವಾಗ್ಜಾಲಕ್ಕೆ ಕಾರಣವಾದ ಶಬ್ದಬ್ರಹ್ಮವೆನಿಸುವನಾದ ನಾದಸ್ವರೂಪವಂ ಕಂಡನು, ಆ ನಾದದಮೇಲೆ ಪರಕ್ಕಿಂತಲು ಪರವಾದ ಕಾರಣಕ್ಕೆ ಕಾರಣವಾದ ಜಗತ್ತಿಗೆ ಆದಿಯಾದ ತಾನಿಲ್ಲದೆ ಮತ್ತೊಂದು ವಸ್ತುವಿಲ್ಲದಂಥ ಬಿಂದುರೂಪವಂ ಕಂಡನು, ಆ ಬಿಂದುವು ಸಕಲವು ರಕ್ಷಿಸುವದಾದ ಕಾರಣ ಓಂ ಎಂದೆನಿಸಿತು, ತನ್ನ ಸ್ವರೂಪವನ್ನು ತಿಳಿದವರನ್ನು ಊರ್ಧ್ವಗತಿಯನ್ನೈದಿಸುವದಾದ ಕಾರಣ ಓಂ ಎಂದೆನಿಸಿತು, ತನ್ನ ಜಪಿಸಿದವರ ಸಂಸಾರಸಾಗರವಂ ದಾಂಟಿಸುವದಾದ ಕಾರಣ ತಾರಕವೆನಿಸಿತು, ಮುಮುಕ್ಷುಗಳಿಂದ ಪ್ರೀತವಾಗಿ ಸ್ತುತಿಸುವದಾದ ಕಾರಣ ಪ್ರಣವನೆನಿಸಿತು, ಅಂಥಾ ಪ್ರಣವದಿಂ ಬ್ರಹ್ಮನು ಪರಬ್ರಹ್ಮವನ್ನು ಸಾಕ್ಷಾತ್ಕಾರವಾಗಿ ಕಂಡನು. ದೇವರೂಪವಾಗಿ ನಾದಬಿಂದುಸ್ವರೂಪವಾಗಿರ್ಪ ಪರಬ್ರಹ್ಮವನ್ನು ಬ್ರಹ್ಮದೇವರು ಪ್ರತ್ಯಕ್ಷವಂ ಮಾಡಿಕೊಂಡುದು ಸಕಲಕಾರಣವಾದ ಸಾಂಗವಾದ ಸಕಲವೇದಗಳು ಆ ಪ್ರಣವಸ್ವರೂಪವಾದ ಬ್ರಹ್ಮದೇವರಿಂದಲು ಪ್ರವರ್ತಿಸುತ್ತಿಹವೊ ಅಂಥಾ ವೇದಾಧ್ಯನಾದ ಪರಬ್ರಹ್ಮನು ಕಂಡನು' ಭೂತಭವಿಷ್ಯದ್ವರ್ತಮಾನಕಾಲಸ್ವರೂಪವಾಗಿ ತೇಜೋರೂಪವಾದ ಭಕ್ತರ್ಗೆ ಅಭೀಷ್ಟಂಗಳಂ ಕೊಡುವಂಥಾ ನಾಲಕ್ಕು ವೇದವು ಬ್ರಹ್ಮಗೆ ಪ್ರಸನ್ನವಾದವು, ಭೂತಭವಿಷ್ಯದ್ವರ್ತಮಾನ ಪ್ರಪಂಚಕ್ಕೆ ಬೀಜವಾದ ಬೀಜರಹಿತವಸ್ತುವಂ ಕಂಡನು, ಬ್ರಹ್ಮಾದಿಸ್ತಂಭಪರಿಯಂತರವು ಆವವಸ್ತುವಿನಲ್ಲಿಹುದೊ ಅಂಥಾ ಲಿಂಗರೂಪವಂ ಕಂಡನು, ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶವೆಂಬ, ಪಂಚಮಹಾಭೂತಂಗಳನ್ನು ಈಶಾನಾದಿ ಪಂಚಬ್ರಹ್ಮರೂಪಾದ ಅವರಿಂದ ಪುಟ್ಟಿದ ಸದಾಶಿವ, ಈಶ್ವರ, ರುದ್ರ, ವಿಷ್ಣು, ಬ್ರಹ್ಮಸ್ವರೂಪವಾಗಿ ಪಂಚಾಕ್ಷರಕ್ಕೆ ಸ್ವರೂಪವಾದ ಪ್ರಪಂಚಕ್ಕೆ ಭಿನ್ನವಾದ ಲಿಂಗರೂಪವಾದಂಥಾ ಪರಬ್ರಹ್ಮಮೂರ್ತಿಯಂ ಕಂಡು ಬ್ರಹ್ಮನು ಎದ್ದು ಸಾಷ್ಟಾಂಗವಂದನ ಪ್ರಣಾಮವಂ ಮಾಡಿ ಕೈಮುಗಿದು ಪುಳುಕಿತದೇಹನಾಗಿ ಸ್ತುತಿಸಿದನೆಂತೆನೆ- ಜಕಾರರೂಪವಾದ ನಾಶರಹಿತವಾದ ಶರೀರವುಳ್ಳವಂ

ಕಾರವೊದಲಾದ ವರ್ಣಗಳಿಗೆ ಉತ್ಪತ್ತಿಸ್ಥಾನವಾಗಿ ಬಿಂದುಸ್ವರೂಪವಾದ ತೇಜೋನಿಧಿಯಾದ ಜನನಮರಣಾದಿಗಳಿಲ್ಲದ ಭವವೆಂಬ ಹೆಸರಿಂ ಜಗತ್ತಿನ ಉತ್ಪತ್ತಿಗೆ ಕಾರಣವಾದ ರುದ್ರನಾಮದಿಂ ಸಂಸಾರನಿವೃತ್ತಿಕಾರಣವಾದ ಶರ್ವನೆಂಬಹೆಸರಿಂ ಸಂಹಾರಕನಾದ ಉಗ್ರ, ಭೀಮ, ಪಶುಪತಿಎಂಬ ಅನ್ವರ್ಥವಾದ ನಾಮಂಗಳಿಂದ ತಾರಕಸ್ವರೂಪವಾದ ಮಾಯೆಗಾರ ಹಿತನಾದ ಅತಿಶುಭರೂಪವುಳ್ಳ ಶಿರವಲ್ಲಿಕವರ್ಣವೆಂಬ ತಪ್ಪಿಗೆಉಳ್ಳನೀಲಕಂ ತನಾದ ವಿಷಾಧ್ಯುಷ್ಟಮ, ಶಿಪಿವಿಷ್ಟ, ಈಶಶರ್ವ ಎಂಬ ನಾಮಂಗಳಿಂದುಳ್ಳ ಊರ್ಧ್ವರೂಪವಾದ ನಿತ್ಯವೂ ಕುಮಾರವಯಸ್ಸುಳ್ಳ ಕುಮಾರಸ್ವಾಮಿಗೆ ತಂದೆಯಾದ ಕರೀದು, ಬಿಳಿದು, ಹಸುರು, ಕೆಂಪು ಕಪಿಲವರ್ಣವಾದ ಪಿಂಗಳ ವರ್ಣನೆಂಬ ನಾನಾವರ್ಣರೂಪವಾದ ಶ, ಷ, ಸ, ಹ. ಎಂಬವರ್ಣ ಯ, ರ ಲ, ವ, ಎಂಬ ಅಂತಸ್ಥ ಙ, ಮ, ಜ, ಣ, ನ, ಎಂಬ ವರ್ಣವ ಐದನೆ ಈ ವರ್ಣರೂಪವಾದ ಪಿನಾಕಹಸ್ತನಾದ ನಿಷಾದ, ಋಷಭ, ಗಾಂಧಾರ, ಷಡ್ಜ, ಮಧ್ಯಮ, ಧೈವತ, ಪಂಚಮಗಳೆಂಬ ಸಪ್ತಸ್ವರರೂಪವಾದ ಮಂದರಮಧ್ಯೆ ಮಕಾರ ಘೋಷ ಅಘೋಷ ತಾರಮೂರ್ಧನೆ ಆದಿಸ್ವರ ಅಧಿದೇವತೆಸ್ಥಾಯಿಭಾವಸಂಚಾರಿ ಭಾವಜ್ಞಾನ ಭಾವವೊದಲಾದ ಭಾವಸ್ವರೂಪವಾದ, ತಾಳಪ್ರಿಯನಾದ, ತಾಂಡವಾಕಾರನಾದ, ನೃತ್ತಗೀತವಾದ್ಯಂಗಳಿಂದ ಸೇವಿ ಸುವರಿಗೆಮೋಕ್ಷಪ್ರದನಾದ ಸ್ಥೂಲಸೂಕ್ಷ್ಮ ದೃಶ್ಯಾದೃಶ್ಯ ರೂಪವಾದಸಕಲವಸ್ತುಗಳ ಇಚ್ಛೆ ಅನಿಚ್ಛೆಎಂಬವ್ಯವಹಾರಸ್ವರೂಪವಾದ ವಾಕ್ಯಾಪ್ರಪಂಚರೂಪವಾದ ಪ್ರಪಂಚಕ್ಕೆ ಅತೀತನಾದ ಶಬ್ದಬ್ರಹ್ಮಸ್ವರೂಪವಾದ, ಒಬ್ಬನಾದರೂ ಅನೇಕ ಕಾರ್ಯಕಾರಣರೂಪನಾದ ವೇದಾಂತವೇದ್ಯನಾದ, ವೇದಸ್ವರೂಪನಾದ ಜ್ಞಾನಗಮ್ಯನಾದ ಪಾರ್ವತೀ ರಮಣನಾದ ಜಗದೀಶ್ವರನಾದ ವೇದವೇದ್ಯನಾದ, ದೇವದೇವನಾದ, ದೇವತೆಗಳಿಗೆ ದಿವ್ಯಪದವನೀವ ಮಹೇಶ್ವರನಾದ ಶಂಕರನಾದ ಜಗತ್ತಿಗೆ ಆನಂದವನೀವ ಶಶಿಭೂಷಣನಾದ, ಮೃತ್ಯುಂಜಯನಾದ, ತ್ರ್ಯಂಬಕನಾದ, ಪಿನಾಕಪಾಣಿಯಾದ, ತ್ರಿಪುರಸಂಹಾರಿಯಾದ, ಅಂಧಕವೈರಿಯಾದ ಜಲಂಧರವೈರಿಯಾದ, ಕಾಲಸ್ವರೂಪಿಯಾದ, ಕಾಲನಿಗೆಕಾಲನಾದ, ಕಾಲಕೂಟವಿಷಧರನಾದ, ಭಕ್ತದುಃ

ಖಾಪಹಾರಿಯಾದ, ಆ ಭಕ್ತರಿಗೆ ಮುಕ್ತಿಯನೀವ ಸಾಮಾನ್ಯ ಜ್ಞಾನ ಶಾಸ್ತ್ರಜ್ಞಾನರೂಪನಾದ, ಸಮಜ್ಞಾನರೂಪನಾದಂಥ ನಿನಗೆ ನಮಸ್ಕಾರ; ಯೋಗಿಗಳಿಗೆ ಯೋಗಸಿದ್ಧಿಯ ನೀವಂಥಾ ಪರಮವಸ್ತು ನೀನು, ಮಹಾಯೋಗಿಯು ನೀನು, ತಪಸ್ವಿಗಳಿಗೆ ತಪಃಫಲವನೀವ ಮಂತ್ರಸ್ವರೂಪಿಯು ನೀನು, ಮಂತ್ರಫಲವು ನೀನೆ, ಮಹಾಪಾಪಸ್ವರೂಪವು ನೀನೆ, ಮಹಾಪಾಪಿಯು ನೀನು, ಮಹಾಯಜ್ಞವು ನೀನು, ಯಜ್ಞಫಲದಾಯಕನೂ ಸರ್ವಜ್ಞ ನೀನು, ಸರ್ವವ್ಯಾಪಿಯಾಗಿ ಸಮಸ್ತವನ್ನು ಕೊಡುವನು ನೀನು, ಸರ್ವರಂ ಕೃಪೆಯಿಂದ ನೋಡುವನು ನೀನು, ನೀನೇ ಸರ್ವಭೋಕ್ತೃವು, ಸರ್ವಕರ್ತೃವು, ಸರ್ವಸಂಹಾರಕನು, ಯೋಗಿಗಳ ಹೃದಯದಲ್ಲಿಹ ವಸ್ತುವು ನೀನು, ನೀನು ಹೊರತಾವುದು ಲೇಶಮಾತ್ರವು ಇಲ್ಲ, ಸತ್ವಗುಣದಿಂ ವಿಷ್ಣುವಾಗಿ ರಕ್ಷಿಸುವೆ, ರಜೋಗುಣದಿಂ ಬ್ರಹ್ಮನಾಗಿ ಸೃಜಿಸುವೆ, ತಮೋಗುಣಸ್ವರೂಪವಾಗಿ ಲಯಕರ್ತನಾದ ಮಹಾರುದ್ರನು ನೀನು, ವೃಷಭವಾಹನನಾದ ಪರಶಿವನು ನೀನೆ, ಉಗ್ರನು, ಭುಜಂಗಭೂಷಣನು, ಮಹಾಭೀಮನು, ಯಮನಿಗೆ ಯಮನು, ಕಾಲಾಗ್ನಿರುದ್ರನಾಗಿ ಅಂತ್ಯದಲ್ಲಿ ಸಂಹಾರವಮಾಡುವನು ನೀನೆ, ಪ್ರಕೃತಿಪುರುಷರೂಪನಾಗಿ ಮಹತ್ತತ್ವ ಮೊದಲಾದ ಸಕಲ ಪ್ರಪಂಚವನ್ನು ಕಣ್ಣುಮುಚ್ಚಿ ತೆಗೆಯುವಷ್ಟರೊಳು ಸೃಷ್ಟಿಸುವೆ, ಸ್ವತಂತ್ರನಾದ ಕಪಾಲಧಾರಿಯಾದ ವಿನೋದಮೂರ್ತಿಯು ನೀನೆ, ಎಲೆ ಗಂಗಾಧರನೆ! ನಿನ್ನ ಕಂಠದಲ್ಲಿರ್ಪ ರುಂಡಮಾಲೆಯು ನೀನು ಪ್ರಳಯದಲ್ಲಿ ದಹಿಸಲ್ಪಟ್ಟ ಬ್ರಹ್ಮಾದಿಗಳ ಎಣಿಸುವಜಪಮಾಲಿಕೆ, ಎಲೈ ಶಂಭುವೆ! ನಿನ್ನಿಂದ ಈ ಪ್ರಪಂಚವು ಆದು ಕಾರಣ ಸಕಲಪ್ರಪಂಚವು ನೀನೆ, ವೇದಗಳಿಂ ಸ್ತುತಿಸಲು ಶಕ್ಯವಲ್ಲದಂಥಾ ನಿನ್ನ ಸ್ತುತಿಸಲು ಆರಿಗೆ ಶಕ್ಯವಾದೀತು? ಸ್ತೋತ್ರವ ಮಾಡಿಸಿ ಕೊಂಬುವನು ನೀನೆ, ಸ್ತುತಿಸುವನು ನೀನೆ, ಸ್ತೋತ್ರವು ನೀನೆ, ತಾನು ‘ಓಂ ನಮಃ ಶಿವಾಯ’ ಎಂಬ ಅಷ್ಟಮಾತ್ರಮಂ ಬಲ್ಲೆನಲ್ಲದೆ ಮತ್ತೇನೂ ಅರಿಯೆನು, ನಿನ್ನ ಮರೆಹೊಕ್ಕೆನು, ಮತ್ತು ಮತ್ತು ನಿನಗೆ ನಮಸ್ಕಾರ, ಹೀಗೆಂದು ಬ್ರಹ್ಮನು ಸ್ತುತಿಸಿ ಸಾಷ್ಟಾಂಗನಮಸ್ಕಾರವಂ ಮಾಡಲು ಬ್ರಹ್ಮನ ಸ್ತುತಿಗೆ ಸಂತೋಷಿಸಿ ಪರಮೇಶ್ವರನಿಂತೆಂದನು, ಎಲೆ ಗಿರಿಜೆ! ಈ ಬ್ರಹ್ಮನು

ಮಾಡಿದ ಸ್ತುತಿಯಂ ಕೇಳಿದೆಯಾ? ಈ ಸ್ತೋತ್ರಕ್ಕೆ ಮೆಚ್ಚಿ ಮೂರ್ತಿಸ್ವರೂಪವಿಲ್ಲದನಾನು ಲಿಂಗಸ್ವರೂಪದಿಂದ ಬ್ರಹ್ಮನಿಗೆ ಪ್ರಸನ್ನನಾದೆನು, ಎಂದು ಪಾರ್ವತಿಗೆ ಬುದ್ಧಿಗಲಿಸಿ ಬ್ರಹ್ಮನನೋಡಿವರವಂಕೇಳಿಕೊಎನಲು, ಬ್ರಹ್ಮನು ಜಯಜಯವೆಂದು ನಮಸ್ಕರಿಸಿ ಕೈಮುಗಿದು ಆನಂದಬಾಷ್ಪಗಳಿಂಪೂರಿತವಾದ ನೇತ್ರಂಗಳಂತೊಡೆಕೊಂಡು ಗದ್ಗದಧ್ವನಿಯಿಂದ ಬಿನ್ನೈಸಿದನು, ಎಲೈ ಶಂಕರನೆ! ನಾನು ನಮ್ಮವರಕ್ಕೆ ತಕ್ಕವನಾದರೆ, ಈಲಿಂಗದಲ್ಲಿ ನಿತ್ಯವೂ ಸಾನ್ನಿಧ್ಯವಾಗಿ ಇರಬೇಕು, ಇದೇ ವರವಲ್ಲದೆ ಮತ್ತೊಂದು ವರವನೊಲ್ಲೆನು, ಈ ಲಿಂಗಕ್ಕೆ ಓಂಕಾರೇಶ್ವರನೆಂಬಹೆಸರು ಪ್ರಸಿದ್ಧಿಯಾಗಲೆಂದು ಬಿನ್ನೈಸಿದ ಬ್ರಹ್ಮನವಚನವಂಕೇಳಿ ಪರಮೇಶ್ವರನು ಹಾಗೇ ಆಗಲೆಂದು ಮತ್ತಿಂತೆಂದನು, ಎಲೈ ಸುರಜ್ಯೇಷ್ಠನೇ! ನೀನುಸಕಲದೇವತೆಗಳಿಗೂ ನಿಧಾನವಾಗು, ಎನ್ನ ಅನುಗ್ರಹದಿಂಸೃಷ್ಟಿಗೆ ಸಾಮರ್ಥ್ಯವುಂಟಾಗಲಿ, ನೀನು ಸಕಲದೇವತಾಸಮೂಹಕ್ಕೆಲ್ಲಾ ಪಿತಾಮಹನಾಗಿ ಪೂಜ್ಯನಾಗು, ನೀಮಾಡಿದತಪಸ್ಸಿಗೆ ಸಂತೋಷಿಸಿ ಫಲವನೀವುದಕ್ಕೋಸ್ಕರ ಪ್ರಸನ್ನನಾದೆನು, ಎನ್ನಓಂಕಾರಸ್ವರೂಪವಾದ ಈಲಿಂಗವಪ್ಪೂಜಿಸಲು ಅವರಿಗೆ ಎನ್ನಸ್ವರೂಪವನೀವೆನು, ಈಲಿಂಗವು ಅಕಾರ ಉಕಾರ ಮಕಾರನಾದಬಿಂದುಗಳೆಂಬ ಪಂಚಸ್ಥಾನವಾಗಿ, ಈಶ್ವರ ಸ್ವರೂಪವಾಗಿ, ಸಕಲಪ್ರಾಣಿಗಳಿಗೂ ಮುಕ್ತಿಯನೀವುದಾಗಿ, ಈಕಾಶೀಕ್ಷೇತ್ರ ಈ ಮತ್ಸ್ಯೋದರೀತೀರ್ಥದಲ್ಲಿಯೂ, ಈ ಓಂಕಾರೇಶ್ವರನಲ್ಲಿಯೂ ಪ್ರಸಿದ್ಧಿಯಾಗಿ ಇಹೆನು, ಈ ತೀರ್ಥದಲ್ಲಿ ಸ್ನಾನವಂಮಾಡಿ ಈಓಂಕಾರೇಶ್ವರನಾದ ಎನ್ನನೋಡಲು ಪುನರ್ಜನ್ಮವಿಲ್ಲ, ಪೂಜಿಸಲು ತನ್ನಸ್ವರೂಪವಹರು, ಈ ಲಿಂಗದಸನ್ನಿಧಿಯಲ್ಲಿಹ ನಾದೇಶ್ವರನ ಮತ್ಸ್ಯೋದರಿ ಕಪಿಲೇಶ್ವರನ ಭವನಸನ್ನಿಧಿಗೆ ಗಂಗೆ ಬಂದಾಗ ಅಲ್ಲಿಸ್ನಾನವಂ ಮಾಡಲು ಅಶ್ವಯೋಗಫಲ, ಮತ್ಸ್ಯೋದರೀ ತೀರ್ಥದಲ್ಲಿ ಸ್ನಾನವಂಮಾಡಿ ಕಪಿಲೇಶ್ವರನಪೂಜಿಸಲು ಅಲ್ಲಿದೇವರ್ಷಿಪಿತೃತರ್ಪಣವಂಮಾಡಲು ಪಿತೃಋಣ ವಿಮೋಚನವು, ಓಂಕಾರನ ದರ್ಶನಮಾತ್ರದಿಂದ ಯಮಯಾತನೆಇಲ್ಲ, ಓಂಕಾರೇಶ್ವರನ ಸೇವೆಗೆಪೋಪ ತನ್ನವಂಶದವರಂಕಂಡು ಪಿತೃಗಳೆಲ್ಲರೂ ಕುಣಿದಾಡುವರು, ಆದಾರಣೆಸ

ಹುಗೊಂಡು ಓಂಕಾರೇಶ್ವರನಿಗೆನಮಸ್ಕರಿಸುವರೋ ಅವರಿಗೆ ಅವರಪಿತೃ
ಗಳಿಗೆ ಬ್ರಹ್ಮಲೋಕವಹುದು, ಓಂಕಾರೇಶ್ವರನ ದರ್ಶನದಿಂ ಹತ್ತುಸಾವಿ
ರಭಾರಿ ಮಹಾರುದ್ರಜಪವಂ ಜಪಿಸಿದ ಫಲವಹುದು, ಓಂಕಾರೇಶ್ವರನ ದ
ರ್ಶನವಂ ಮಾಡದವರು ಭೂಭಾರಕರು, ಈ ಓಂಕಾರೇಶ್ವರನಂನೋಡಲು
ಭೂಮಂಡಲದಲ್ಲಿರ್ದ ಲಿಂಗಗಳೆಲ್ಲವನ್ನು ದರ್ಶನಮಾಡಿದ ಫಲವಹುದು. ಈ
ಸಮೀಪದ ಪ್ರಣವೇಶ್ವರನಂನೋಡಿ ಅಲ್ಲಿ ಮೃತರಾದವರು ಸ್ವರ್ಗಭೋ
ಗವನನುಭವಿಸಿ ಅಂತ್ಯಕಾಲಕ್ಕೆ ಕಾಶೀಕ್ಷೇತ್ರದಲ್ಲಿ ಮುಕ್ತರಹರು, ಈ
ಲಿಂಗವಂ ಪೂಜಿಸಿದವರ್ಗೆ ಮುಕ್ತಿಯಂಕೊಡುವನು,ಅವನು ಕೃತಕೃ
ತ್ಯನಹನು, ಅದುಕಾರಣ ಅವಶ್ಯವಾಗಿ ಓಂಕಾರೇಶ್ವರ, ಪ್ರಣವೇಶ್ವರ
ರಂನೋಡಬೇಕು,ಅವಕ್ಕೆಪಶ್ಚಿಮದಲ್ಲಿಹ ತಾರಕತೀರ್ಥದಲ್ಲಿ ಸ್ನಾನಮಾ
ಡಿ ಪಿತೃತರ್ಪಣವಂಮಾಡಲು ದುರ್ಗತಿಯಿಲ್ಲ, ಸುಗತಿಯಹುದು, ಓಂಕಾ
ರೇಶ್ವರನ ಭಕ್ತರಾದವರು ಮನುಷ್ಯಜನ್ಮದ ರುದ್ರರೆನಿಸುವರೆಂದಿರುವು
ದು, ಈಓಂಕಾರೇಶ್ವರನ ಲಿಂಗದಮಹಿಮೆಯನ್ನು ನಾನೂ ನೀನೂ ವಿಷ್ಣು
ವೂ, ಈ ಮೂವರ್ಗೆ ತಿಳಿಯುವದಲ್ಲದೆ ಮಿಕ್ಕಾದವರ್ಗೆ ತಿಳಿಯದು, ನೀನು
ಮಾಡಿದ ತಪದಿಂದಾ ಪ್ರಸನ್ನನಾದೆನು, ಈಲಿಂಗವನ್ನೀನು ಆರಾಧನೆಯಂ
ಮಾಡಿದಕಾರಣ ಸಕಲವೂತಿಳಿದೀತು,ನೀನುಸಕಲಪ್ರಪಂಚವನ್ನುಸೃಷ್ಟಿ
ಸೂಎಂದು ಬ್ರಹ್ಮನಿಗೆವರವನಿತ್ತು ಪರಮೇಶ್ವರನುದೇವಿಸಹಾ ಓಂಕಾರೇ
ಶ್ವರನಲ್ಲಿಯೇ ಐಕ್ಯವಾದರು, ಬ್ರಹ್ಮನು ಆಗಮೊದಲಾಗಿಯು ಓಂಕಾರೇ
ಶ್ವರನಂ ಸ್ತುತಿಸುತ್ತಿದ್ದಾನು, ಓಂಕಾರೇಶ್ವರನಂ ಬ್ರಹ್ಮನು ಸ್ತುತಿಸಿದ
ಸ್ತೋತ್ರವಂಆವನಾನೊಬ್ಬನು ಭಕ್ತಿಯಿಂದ ಸ್ತುತಿಸಲು ಸರ್ವಪಾಪಹರ
ದಿವ್ಯಜ್ಞಾನಪ್ರಾಪ್ತಿಯಾಗುವದು, ಈ ಸ್ತೋತ್ರವನ್ನು ಒಂದುವರ್ಷ ತ್ರಿ
ಕಾಲಪೂರಿಸಲು ಮೋಕ್ಷಸಾಧನವಾದಜ್ಞಾನದೊರಕೊಂಬುವುದುಎಂದು
ಕುಮಾರಸ್ವಾಮಿ ಅಗಸ್ತ್ಯಂಗೆನಿರೂಪಿಸಿದ ಅರ್ಥವನ್ನುವ್ಯಾಸರು ತನಗೆ
ಬುದ್ಧಿಗಲಿಸಿದರೆಂದು ಸೂತಪುರಾಣೀಕನು ಶೌನಕಾದಿ ಋಷಿಗಳಿಗೆಹೇಳಿದ
ನೆಂಬಲ್ಲಿಗೆ ಅಧ್ಯಾಯಾರ್ಥ. * * * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹಿಶೂರ ಪುರವರಾಧೀಶಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥ ದರ್ಪಣದಲ್ಲಿ ಓಂಕಾರೇಶ್ವರನ ಮಹಿಮೆಯೆಂಬ ಎಪ್ಪತ್ತಮೂರನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ

ಎಪ್ಪತ್ತನಾಲ್ಕನೇ ಅಧ್ಯಾಯ

ಓಂಕಾರೇಶ್ವರನ ಮಹಿಮೆ ದಮನೆಂಬ ಬ್ರಾಹ್ಮಣನಪ್ರಸಂಗಃ—

ಶ್ರೀವಿಶ್ವೇಶ್ವರಾಯನಮಃ ॥ ಅನಂತರದಲ್ಲಿ ಅಗಸ್ತ್ಯನಿಂತೆಂದನು. ಕೇಳೈ ಕುಮಾರಸ್ವಾಮಿಯೆ! ನಿಮ್ಮಕೃಪೆಯಿಂ ಕೇಳಲ್ಪಟ್ಟ ಓಂಕಾರೇಶ್ವರನಮಹಿಮೆಯುಕೇಳಿ ಅಮೃತಪಾನವಂ ಮಾಡಿದಂತೆ ಆನಂದವಾಗುತ್ತಿದ್ದೀತು ಇನ್ನು ಮುಂದಣಕಥಾವೃತ್ತಾಂತವಂ ಹೇಳಬೇಕೆಂದು ಬಿನ್ನೈಸಲು, ಕುಮಾರಸ್ವಾಮಿ ಇಂತೆಂದನು. ಎಲೇ ವಾತಾಪೀಲ್ವಲಶತ್ರುವಾದ ಅಗಸ್ತ್ಯನೆ! ಈ ಓಂಕಾರೇಶ್ವರನಮಹಿಮೆಯಲ್ಲಿ ಒಂದು ಇತಿಹಾಸವುಂಟು, ಅದನ್ನು ಹೇಳೇನು ಕೇಳು, ಪೂರ್ವಕ್ಕೆ ಪದ್ಮಕಲ್ಪದಲ್ಲಿ ಭರದ್ವಾಜ ಗೋತ್ರಜನಾದಂಥ ದಮನೆಂಬ ಬ್ರಾಹ್ಮಣನುಂಟು, ಆ ದಮನೆಂಬಬ್ರಾಹ್ಮಣನು ಉಪನಯನವಾದಮೇಲೆ ನಾನಾವಿದ್ಯಾಭ್ಯಾಸವಂಮಾಡಿ ಸಂಸಾರದುಃಖಕರವಾದ ಈ ಜೀವನುಸ್ಥಿರವಲ್ಲವೆಂದು ತಿಳದು ವಿರಕ್ತನಾಗಿ ಗೃಹದಿಂ ಹೊರಟು ಒಂದಾನೊಂದು ಕಡೆಗೆಹೋಗಿ ದಾರಿಯನಡೆದು ಕಂಗೆಟ್ಟು ಪ್ರತ್ಯಾಶ್ರಮ ಪ್ರತಿಪರ್ವತ ಪ್ರತಿಸಮುದ್ರ ಪ್ರತಿತೀರ್ಥಗಳಲ್ಲಿ ಪ್ರತಿನದಿಗಳಲ್ಲಿಯೂತಪಸ್ಸುಮಾಡುತ್ತಾ, ಭೂಮಿಯಲ್ಲಿದ್ದ ದೇವಸ್ಥಾನಗಳಸೇವಿಸಿಯೂ ಚಿತ್ತಸ್ವಸ್ಥತೆಯನೈದಿದವನಲ್ಲ,ತನ್ನಮನೋರಥವನರಿದು ಉಪದೇಶಿಸುವನಂ ಕಂಡುದಿಲ್ಲ, ಹಾಗಾಗಿಯೂ ಒಂದಾನೊಂದು ದಿವಸದಲ್ಲಿ ಆದಮನು ದೇವನದೀತೀರದಲ್ಲಿ ಅಮರಕಂಟವೆಂಬ ಓಂಕಾರೇಶ್ವರನ ಸ್ಥಾನವಂ ಕಂಡು ಸಂತೋಷಪಟ್ಟು ಆಸ್ಥಳದಲ್ಲಿ ತಪಸ್ಸಂಮಾಡುವಂಥಾ ಶಿವಭಕ್ತರಾದ ವಿಭೂತಿರುದ್ರಾಕ್ಷಿಯಿಂದ ಭೂಷಿತವಾದ ದೇಹಗಳುಳ್ಳ ಲಿಂಗಾರ್ಚನಪರರಾದ ಪ್ರಾಣಾಯಾಮನಿಷ್ಠರಾಗಿ ಆಗಮಶಾಸ್ತ್ರಗಳಂ ವಿಚಾರಿಸುವ

ರಾಗಿ ಗುರುವಿನಮುಂದೆ ಕುಳಿತಿರ್ದ ಮುನಿಗಳಂ ಕಂಡು ನಮಸ್ಕರಿಸಿ, ಬಂದು ಆಚಾರ್ಯರಸಮೀಪದಲ್ಲಿ ನಿಂದು ಕರಗಳೆರಡನ್ನು ಮುಗಿದುಕೊಂಡು ವಿನಯದಿಂ ನಿಂತಿರಲು; ಅನಂತರದಲ್ಲಿ ಮಹಾಧ್ಯಾನಪರನಾದ ತಪೋಜ್ವಾಲೆಯಿಂದ ಅತಿಬಡವಾದ ದೇಹವುಳ್ಳ ಶಿವಪೂಜಕನಾದ ಸಕಲ ತಪಸ್ವಿಗಳೊಳಗೂ ಶ್ರೇಷ್ಠನಾದಂಥಾ ಗಾರ್ಗ್ಯಾಚಾರ್ಯನೆಂಬ ಮುನೀಶ್ವರನು ಈ ದಮನಂ ನೋಡಿ ಇಂತೆಂದನು-ಎಲೆ ಬಾಲಕನೆ! ನೀನಾರು? ಎಲ್ಲಿಂದ ಬಂದೆ? ಬಾಲಕನಾಗಿಯೂ ವಿರಕ್ತನಾಗಿಯೂ ಇದ್ದೀಯೆ ? ಅದೇನು ಹೇಳೆನಲು, ದಮನಿಂತೆಂದನು-ಎಲೈ ಶೈವಾಚಾರ್ಯನಾದ ಗಾರ್ಗ್ಯಮುನಿಯೆ! ನೀವು ಪರಮೇಶ್ವರನ ಆರಾಧಿಸುವಲ್ಲಿ ಪ್ರಿಯವುಳ್ಳವರು ಎನ್ನ ವೃತ್ತಾಂತವಂ ಯಥಾರ್ಥವಾಗಿ ಬಿನ್ನಹವಂ ಮಾಡುವೆನು ಕೇಳಿ, ಚಿತ್ರಕ್ರಶಿತಾನು ಬ್ರಾಹ್ಮಣಬಾಲಕನು ವೇದಶಾಸ್ತ್ರಪುರಾಣಂಗಳ ಅಭ್ಯಾಸವಂ ಮಾಡಿದೆನು, ಅದರಿಂದ ಸಂಸಾರವು ಅಸಾರವೆಂದು ತಿಳಿದು ಈ ಶರೀರದಿಂದಲೆ ಮಹಾಸಿದ್ಧಿಯನ್ನೈದಬೇಕೆಂಬ ವಾತ್ಸಲ್ಯದಿಂದ ವನವಾಸಿಯಾಗಿ ಸಮಸ್ತತೀರ್ಥಂಗಳಲ್ಲಿಯು ಸ್ನಾನವಂ ಮಾಡಿ ಸಕಲಮಂತ್ರಂಗಳಂ ಜಪಿಸಿದೆನು, ಸಕಲದೇವತೆಗಳಂ ಸೇವಿಸಿ ನಾನಾಹೋಮಂಗಳಂ ಮಾಡಿದೆನು, ಶ್ಮಶಾನಗಳಲ್ಲಿ ಅನೇಕರಾತ್ರಿಗಳಂ ಕಳೆದೆನು, ಉನ್ನತಶೈಲಶಿಖರಂಗಳಲ್ಲಿ ತಪವಮಾಡಿದೆನು, ದಿವ್ಯೌಷಧರಸಾಯನಂಗಳಂ ಸಾಧಿಸಿದೆನು, ಮೃತ್ಯುವಿನಮುಖಗಳಂತೆ ಭಯಂಕರಗಳಾದಬಿದ್ಧರಗುಹೆಗಳಂ ಸಾಹಸದಿಂ ಪ್ರೊಕ್ಕೆನು, ನಾನಾನಿಯಮವುಳ್ಳವನಾಗಿ ಬಹುತಪವಂ ಮಾಡಿದಾಗ್ಯೂ ಎಲ್ಲಿಯೂ ಕಿಂಚಿತ್ಸಿದ್ಧಿಯು ಮೊಳೆದೋರಲಿಲ್ಲ, ಅದರಿಂದ ಭೂಮಿಯನೆಲ್ಲವನ್ನು ತಿರುಗಿಬರುತ್ತಿದ್ದ ಎನಗೆ ನಿಮ್ಮ ದರ್ಶನವಾಗಿ ಮಹಾ ಆಶ್ಚರ್ಯವಾಯಿತು, ಅವಶ್ಯವಾಗಿ ನಿಮ್ಮಿಂದ ಎನ್ನ ಮನೋರಥವಾದೀತು ಎಂಬಹಾಗೆ ತೋರುತ್ತಿದೆ, ಅದುಕಾರಣ ಈಶರೀರದಿಂದಲೆ ಕಾರ್ಯಸಿದ್ಧಿಯನೀವ ಮಂತ್ರೋಪದೇಶವಂ ಮಾಡಬೇಕೆಂದು ಬಿನ್ನೈಸಿದದಮನವಾಕ್ಯಮಂ ಕೇಳಿ, ಗಾರ್ಗ್ಯಾಚಾರ್ಯನು ಪ್ರತ್ಯಕ್ಷವಾಗಿ, ಸಕಲರಿಗೂ ಆಚಾರ್ಯನಾದ ಮುನಿಯು ಬಂದಾತನೊಂದು ವೃತ್ತಾಂತವಂ ಸ್ಥಿರಚಿತ್ತರಾಗಿ ಕೇಳುತ್ತಿದ್ದಂಥ ಪಾಶುಪತವ್ರತಿಗಳಾದ ಮೋಕ್ಷಕಾಂಕ್ಷಿಗಳಾದ ಶಿಷ್ಯರ

ಮುಂದೆ ಇಂತೆಂದವನು, ಕೇಳೈ ದಮನೆ! ನೀನು ಈ ಶರೀರದಿಂದಲೆ ಸಿದ್ಧಿಯಂ ಬಯಸುವೆಯಾದರೆ ಧರ್ಮಾರ್ಥ, ಕಾಮ, ಮೋಕ್ಷಗಳೆಂಬ, ಚತುರ್ವಿಧ ಪುರುಷಾರ್ಥಗಳೆಂಬ ರತ್ನಕ್ಕೆ ಆಕಾರವಾದ ಪಾತಕಂಗಳೆಂಬ ಪತಂಗದ ಹುಳುಗಳಿಗೆ ದೀಪಿಗೆಬೆಳಕಾದ, ಕರ್ಮಾರಣ್ಯಕ್ಕೆ ಕಾಡ್ಗಿಚ್ಚಾದ, ಸಂಸಾರಸಾಗರವಂ ಬಿಡಿಸುವಮೋಕ್ಷಲಕ್ಷ್ಮಿಗೆ ಕ್ಷೀರಸಮುದ್ರದಂತಿರ್ಪ,ಪರಮಸುಖಕ್ಕೆ ಕೇಳೀಗೃಹವಾದ, ದೀರ್ಘನಿದ್ರೆಯಂ ಮಾಡುವರ್ಗೆ ಪರಮಚ್ಚರಿಕೆಯಂ ಮಾಳ್ಪ, ಸಂಸಾರವೆಂಬ ಬೇಸಿಗೆಯ ಬಿಸಿಲಿನಲ್ಲಿ ತೊಳಲಿಬಳಲಿ ಬಂದವರ್ಗೆ ನೆಳಲಾಗಲುಳ್ಳ ವೃಕ್ಷವಾದ ಅನೇಕಜನ್ಮಂಗಳಂ ಮಾಡುವಪಾಪಂಗಳೆಂಬ ಪರ್ವತಸಮೂಹಕ್ಕೆ ವಜ್ರಾಯುಧವಾದ, ತನ್ನ ಪೆಸರ್ಗೊಂಡಮಾತ್ರದಲ್ಲಿಯೆ ಮಹಾಶ್ರೇಯಸ್ಸನೀವ, ಸ್ವರ್ಗಮೋಕ್ಷಂಗಳನೀವುದಾದ ವಿಶ್ವೇಶ್ವರಸ್ಥಾನವಾದ, ಗಂಗೆಯ ತೆರೆಗಳಂ ತೊಳೆಯಲ್ಪಟ್ಟ ಭೂಪ್ರದೇಶವುಳ್ಳ ಪ್ರದಕ್ಷಿಣವಾದ ಅವಿಮುಕ್ತವೆಂಬ ಕಾಶೀ ಮಹಾಕ್ಷೇತ್ರದಲ್ಲಿ ತಾನುಅನುಭವಿಸಿದ ವೃತ್ತಾಂತವನ್ನು ಹೇಳೆನು ಕೇಳು, ಆ ಕ್ಷೇತ್ರದಲ್ಲಿ ಕಾಲಭಯಪಾಶಂಗಳಿಲ್ಲ, ಆ ಕ್ಷೇತ್ರದಮಹಿಮೆಯನೆಲ್ಲವನ್ನು ಪೇಳಲುಸಮರ್ಥರಾರು, ಲೋಕದಲ್ಲಿ ಪ್ರಾಣಿಗಳ ಪಾಪಗಳಂ ಪರಿಹರಿಪ ತೀರ್ಥಂಗಳೆಲ್ಲವು ತಮ್ಮಶುದ್ಧಿಗೋಸ್ಕರ ಕಾಶೀಕ್ಷೇತ್ರಕ್ಕೆ ಬಹವು,ಆ ಕಾಶಿಯಲ್ಲಿರ್ದು ಸಕಲವನ್ನು ಭಕ್ಷಿಸಿ ಸಮಸ್ತವನ್ನು ವಿಕ್ರಯಮಾಡಿದವನಿಗಾಗುವ ಸಂಗತಿ ಮಿಕ್ಕಾದಸ್ಥಳದಲ್ಲಿ ಸಾಂಗವಾಗಿ ಸಕಲಯಜ್ಞಗಳ ಮಾಡಿದರುಇಲ್ಲ, ವಿಷಯಲಂಪಟವೆಂಬ ಬೀಜದಿಂ ಪುಟ್ಟಿದ ಸಂಸಾರವೆಂಬ ಮಹಾವೃಕ್ಷವನ್ನು ಕಾಶಿಯಲ್ಲಿ ದೀರ್ಘನಿದ್ರೆಯೆಂಬ ಕೊಡಲಿಯಿಂದಮೊದಲು ಮುಟ್ಟಛೇದಿಸಲು ಮತ್ತೆ ಬೆಳೆಯದು. ಚವುಳುಭೂಮಿಯೊಳು ಕಾಶೀಮಹಾಚೌಳುಭೂಮಿ, ಅದೆಂತೆಂದಡೆ- ಅಲ್ಲಿ ಬಿಟ್ಟ ಶರೀರವೆಂಬ ಬೀಜವು ಮೊಳೆದೋರಲಿಲ್ಲ ಕಾಶಿ ಕಾಶಿ ಎಂದು ಆರು ಸ್ಮರಣೆಯಂ ಮಾಡುವರೊ ಅವರು ಪಾಪರಹಿತರಾಗಿ ಅಂತ್ಯದಲ್ಲಿ ಶಿವಸಾರೂಪ್ಯವಂ ಪಡೆವರು,ಸತ್ಯಲೋಕಾದಿ ಲೋಕಗಳ ಐಶ್ವರ್ಯಕ್ಕೆ ಅಳಿವುಂಟು, ಅವಿಮುಕ್ತಕ್ಷೇತ್ರದ ಐಶ್ವರ್ಯಕ್ಕೆ ಕೇಡಿಲ್ಲ, ಆ ಐಶ್ವರ್ಯ ಈಶ್ವರಾನುಗ್ರಹದಿಂ ದೊರಕು

ವಷ್ಟು ಕಾಶೀಕ್ಷೇತ್ರದಲ್ಲಿ ಮೃತರಾದ ಕ್ರಿಮಿಕೀಟಾದಿ ಜಂತುಗಳಿಗೆ ಅಂಥಾ ಸದ್ಗತಿಯು ಬ್ರಹ್ಮಾಂಡದೊಳಗಾವಿಗೂ ಇಲ್ಲ, ದೈವಕೃತದಿಂದ ಕಾಶೀವಾಸ ದೊರಕಿದರೆ ಅಲ್ಲಿ ಬಿಟ್ಟು ಬರಬಾರದು, ಆ ಕ್ಷೇತ್ರವ ಬಿಟ್ಟು ಹೊರಟು ಬಾರದ ಉದಯವು ಕಾಣಬೇಕು ಮೂಡಲಲ್ಲಿ ಮಣಿಕರ್ಣಿಕೇಶ್ವರನು, ತೆಂಕಲ ಬ್ರಹ್ಮೇಶ್ವರನು, ಪಡುವಲು ಗೋಕರ್ಣೇಶ್ವರನು, ಉತ್ತರದಲ್ಲಿ ಭಾರಭೂತೇಶ್ವರನು, ಈ ಪ್ರಕಾರದಲ್ಲಿಹ ಈ ಕ್ಷೇತ್ರಕ್ಕೆ ಸರಿಯಾವುದಿದ್ದೀತು ಮಣಿಕರ್ಣಿಕೆಯಲ್ಲಿ ಸ್ನಾನವಂ ಮಾಡಿ ಈ ಕ್ಷೇತ್ರದ ಪ್ರದಕ್ಷಿಣವಂ ಮಾಡಿ ಒಂದು ರಾತ್ರಿ ವಾಸವಂ ಮಾಡಲು ರಾಜಸೂಯ ಯಾಗವ ಮಾಡಿದ ಫಲ, ಆ ಕ್ಷೇತ್ರದಲ್ಲಿ ಶ್ರಾದ್ಧಾದಿ ಕ್ರಿಯೆಗಳಂ ಮಾಡಲು ಪಿತೃಗಳು ಅತ್ಯಂತ ತೃಪ್ತರಹರು, ಅವಿಮುಕ್ತಕ್ಷೇತ್ರಕ್ಕೆ ಸರಿಯಾವ ಕ್ಷೇತ್ರವನ್ನು ಬ್ರಹ್ಮಾಂಡದೊಳಗಾಗಿ ಕಾಣೆನು, ಪ್ರಮಥರು ನಾನಾಯುಧಪಾಣಿಗಳಾದ ಕೋಟಿಸಂಖ್ಯೆ ಪರಿವಾರಸಹ ಕಾಶೀಕ್ಷೇತ್ರದ ಮೂಡಣ ದ್ವಾರವಂ ರಕ್ಷಿಸುತ್ತಿಹರು, ದಕ್ಷಿಣ ದ್ವಾರವನ್ನು ಅನೇಕ ಶಕ್ತಿಗಳೊಡಗೂಡಿ ಭೂತಧಾತ್ರೀಶ್ವರನು ರಕ್ಷಿಸುತ್ತಿಹನು, ಪಶ್ಚಿಮದಿಕ್ಕಿನ ದ್ವಾರವನ್ನು ಕೋಟಿಸಂಖ್ಯೆಗಣಂಗಳೊಡಗೂಡಿ ಗೋಕರ್ಣೇಶ್ವರನು ರಕ್ಷಿಸುತ್ತಿಹನು, ಉತ್ತರದ್ವಾರವನ್ನು ಘಂಟಾಕರ್ಣನು ರಕ್ಷಿಸುತ್ತಿಹನು. ಈಶಾನ್ಯದಿಕ್ಕನ್ನು ಛಾಗವಕ್ತ್ರ ರಕ್ಷಿಸುತ್ತಿಹನು, ಅಗ್ನಿದಿಕ್ಕನ್ನು ಭೀಷಣ ರಕ್ಷಿಸುತ್ತಿಹನು ನೈರುತ್ಯದಿಕ್ಕನ್ನು ಶಂಕುಕರ್ಣ ರಕ್ಷಿಸುತ್ತಿಹನು, ವಾಯುವ್ಯದಿಕ್ಕನ್ನು ಕಾಲಾಕ್ಷನು ರಕ್ಷಿಸುತ್ತಿಹನು, ಮತ್ತು ಗಣಭದ್ರನು ಕಾಳಿಯನು ಕಾಲಕಂಪನನು, ಈ ಗಣಂಗಳು ಈ ಗಂಗಾತೀರದ ಮೂಡಣ ದ್ವಾರವ ರಕ್ಷಿಸುತ್ತಿಹರು, ವೀರಭದ್ರನು ನಾಭಾಗನು ಕರ್ದಮವಿಗ್ರಹನು ಸ್ಥೂಲಕರ್ಣ ಮಹಾಬಾಹು ಈ ಗಣಂಗಳು ಅಸಿತೀರದಲ್ಲಿ ಇದ್ದು ತೀರ್ಥವ ರಕ್ಷಿಸುವರು, ವಿಶಾಲನು ಮಹಾಭೀಮನು, ಕುಂಡೋದರನು ಮಹೋದರನು ಇವರು ಪಶ್ಚಿಮದಿಕ್ಕಿನ ದ್ವಾರದ ಹೊಸ್ತಿಲಿನಲ್ಲಿ ಇದ್ದು ರಕ್ಷಿಸುವರು. ನಂದಿಸೇನ ಪಾಂಚಾಲನು ಶಿರ [illegible] ಕ್ರೋಧನನು ಆನಂದನನು ಯೋಗಕನು ಬಭ್ರು ಈ ಗಣಂಗಳು ವರಣಾತೀರದಲ್ಲಿ ಇದ್ದು ರಕ್ಷಿಸುವರು ಆ ಮಹಾಕ್ಷೇತ್ರದಲ್ಲಿ

ಓಂಕಾರೇಶ್ವರನೆಪ್ಪೂಜೆಯುಂ ಮಾಡಿ ಬಹುಮಂದಿ ಸಿದ್ಧಿಯನ್ನೈದಿದರು. ಕಪಿ
ಲ, ಸಾವರ್ಣಿ, ಶ್ರೀಕರಣ, ಪಿಂಗಳ, ಅಂಶುಮಂತ, ಈ ಐದುಮಂದಿ
ಯೂ ಒಂದುದಿನ ಓಂಕಾರೇಶ್ವರನಮುಂದೆ ಹೂಂ ಹೂಂ ಎಂದು ನಾಟ್ಯ
ವನಾಡಿ ಲಿಂಗದಲ್ಲಿ ಐಕ್ಯವಾದರು, ಕೇಳೈಮುನೆ? ಓಂಕಾರೇಶ್ವರನಮಹಿ
ಮೆಯಲ್ಲಿ ಮತ್ತೊಂದು ವೃತ್ತಾಂತವುಂಟು, ಅದನ್ನು ಹೇಳೇನು, ಅದೆಂತೆಂ
ದರೆ ಒಂದುಕಪ್ಪೆಯೂ ಓಂಕಾರೇಶ್ವರನ ಸನ್ನಿಧಿಯಲ್ಲಿಇರ್ದು ಈಶ್ವರನನಿ
ರ್ಮಾಲ್ಯಮಂ ಭಕ್ಷಿಸುತ್ತಿರಲು ಲಿಂಗಕ್ಕೆ ಪ್ರದಕ್ಷಿಣವಾಗಿ ತಿರುಗುತ್ತ ಹೀ
ಗೆಕೆಲವುಕಾಲ ಇರಲು ಆಮೇಲೆ ಆಸ್ಥಳದಲ್ಲಿ ಮೃತವಾಗದೆ ಶಿವನಿರ್ಮಾಲ್ಯ
ವಂ ಭಕ್ಷಿಸಿದ ಪಾಪದಿಂದ ಮತ್ತೊಂದು ಕಡೆಗೆಹೋಗಿ ಮೃತವಾಯಿತು
ವಿಷವನಾದರು ಭಕ್ಷಿಸಬಹುದಲ್ಲದೆ ಶಿವನಿರ್ಮಾಲ್ಯವಂ ಭಕ್ಷಿಸಲಾಗದು, ವಿ
ಷವಭಕ್ಷಿಸಲು ಒಬ್ಬನನ್ನೆ ಕೊಲ್ಲುವದು, ಶಿವನಿರ್ಮಾಲ್ಯವಭಕ್ಷಿಸಲು ಪುತ್ರ
ಪೌತ್ರ ಮಿತ್ರ ಕಳತ್ರಾದಿಗಳಂ ಕೊಲ್ಲುವದು, ಅದರಿಂದ ಪೋಷಣೆಯಂಮಾಡಿ
ಬೆಳಸಿದಶರೀರಗಳಿಗೆ ಅನಂತಯುಗ ತಾರಕ ಮೊದಲಾದ ನರಕದೊಳಗಾಳು
ವರು, ಅದಾಗಿ ಒಂದುದಿನ ಒಂದುಕಾಗೆ ಆ ಕಪ್ಪೆಯಕಚ್ಚಿಕೊಂಡುಹೋಗಿ
ಕಾಶೀಕ್ಷೇತ್ರದಹೊರಗೆ ಹಾಕಲು ಆ ಮಂಡೂಕವು ಕೆಲವುಕಾಲಕ್ಕೆ ಮೃ
ತವಾಗಿ ಕಾಶೀಕ್ಷೇತ್ರದಲ್ಲಿ ತಾನು ಓಂಕಾರೇಶ್ವರಗೆಮಾಡಿದ ಪ್ರದಕ್ಷಿಣಸ್ಪ
ರ್ಶನಫಲದಿಂದ ಪುಷ್ಪದಂತನೆಂಬ ರಾಯಗೆ ಮಾಧವೀಎಂಬ ಹೆಸರುಳ್ಳಮ
ಗಳಾಗಿಹುಟ್ಟಿ ಸೌಂದರ್ಯವುಳ್ಳವಳಾಗಿ ಶಿವನಿರ್ಮಾಲ್ಯವಂ ಭಕ್ಷಿಸಿದ ಪಾಪ
ದಿಂದ ಹಂದಿಯಮುಖ ಉಳ್ಳವಳಾಗಿ ಮುಖವಸ್ತ್ರಶ್ವೇತಕುವ್ರೋರಿ ಗಾ
ನಶಾಸ್ತ್ರ ರಹಸ್ಯವಂತಿಳಿದು ಮಧುರಧ್ವನಿಯಿಂದ ಸಪ್ತಸ್ವರ ಗ್ರಾಮ
ಮೂರು, ಮೂರ್ಛನೆ ಎಪ್ಪತ್ತೊಂದು, ತಾನ ನಲವತ್ತೊಂಭತ್ತು, ತಾಳ
ನೂರೊಂದು, ಪುರುಷರಾಗ ಆರು, ಒಂದುಪುರುಷರಾಗಕ್ಕೆ ಐದು, ಸ್ತ್ರೀ
ರಾಗದಲೆಕ್ಕದಲ್ಲಿ ಸ್ತ್ರೀರಾಗಮೂವತ್ತು, ದೇಶವಿಕಾರಧ್ವನಿಗಳಂ ಪು
ಟ್ಟಿದ ಮಿಶ್ರರಾಗ ಅರುವತ್ತುನಾಲ್ಕು, ಅಂತೂರಾಗ ನೂರೊಂದು, ಇಂ
ತೊಪ್ಪುವ ಸಂಗೀತರಹಸ್ಯವಂಬಲ್ಲ ಆ ಕನ್ಯೆಯು ಮಾಳವರಾಗದಿಂ ಮ
ಧುರವಾಗಿ ಆಲಾಪನೆಯಂಮಾಡಿ ಓಂಕಾರೇಶ್ವರನಂ ಪೂಜಿಸುತ್ತಿರಲು,

ಅವಳಿಗೆಜಾತಿಸ್ಮರತ್ವವುಂಟಾಗಿ ಎಸಗಿದ್ದಪುಣ್ಯವುವನ್ನು ಓಂಕಾರೇಶ್ವರನ ಪ್ರದಕ್ಷಿಣಮಹಿಮೆಯಿಂದ ಆಯಿತು ಎಂದು ನೆನದು ಓಂಕಾರೇಶ್ವರನಪೂಜೆಯಂ ಮಾಡುತ್ತಿರಲು, ಆ ಸ್ವಾಮಿಯಮೇಲಣ ಭಕ್ತಿಯಿಂದ ಚಂಚಲವಾಗಿದ್ದ ಚಿತ್ತ ಸ್ಥಿರವಾಯಿತು, ಈ ರೀತಿಯಲ್ಲಿ ಅಹೋರಾತ್ರಿಯು ಎಡೆಬಿಡದೆ ಆ ಸ್ವಾಮಿಯಂ ಸೇವಿಸುತ್ತಿರಲು, ಆ ಸ್ತ್ರೀಯಳಿಗೆ ಈಶ್ವರಾರಾಧನೆಯ ಲೋಲುಪ್ತಿಯಿಂದ ಹಸಿವು ತೃಷೆಗಳು ಬಾಧಿಸಲಿಲ್ಲ, ಹಗಲಿರುಳು ಕಣ್ಣು ಮುಚ್ಚಿ ತೆರವುತ್ತಿರ್ದುದೆ ಆ ಸ್ವಾಮಿಯು ಅರ್ಚನೆಗೆ ಅವಲೋಕನವಿಘ್ನವೆಂದು ನೆನದು ಆ ಕಣ್ಣರೆಪ್ಪೆಯಂ ಹಾಕಿದಷ್ಟು ಹೊತ್ತು ಸ್ವಾಮಿಯನ್ನೋಡದೆ ಇದ್ದುದಕ್ಕೆ ಪ್ರಾಯಶ್ಚಿತ್ತವೇನು ಎಂದು ಚಿಂತಿಸುವಳು, ಆ ಸ್ವಾಮಿಯನ್ನ ನವವಿಧಭಕ್ತಿಯಿಂದ ಪೂಜೆಯಂ ಮಾಡಿ ಬಳಲಿದಾಗ ಓಂಕಾರೇಶ್ವರನ ನಾಮಾಮೃತವಂ ಸವಿವಳು, ನೇತ್ರಂಗಳು ಆ ಸ್ವಾಮಿಯನಲ್ಲದೆ ಮತ್ತೊಂದುವಸ್ತುವನ್ನೋಡಲಿಲ್ಲ, ಕಿವಿಗಳು ಮತ್ತೊಂದು ಕಥೆಯಂ ಕೇಳಲಿಲ್ಲ ಮನಸ್ಸುಮತ್ತೊಂದುಮೂರ್ತಿಯು ಧ್ಯಾನಿಸಲಿಲ್ಲ, ಹಸ್ತಗಳು ಆಸ್ವಾಮಿಯನ್ನು ಪೂಜೆಗೋಸ್ಕರ ಹಾರೈಸುತ್ತಿಹವು, ಪಾದಗಳು ಮತ್ತೊಂದು ದಿಕ್ಕಿಗೆ ಹೋಗಲಿಲ್ಲ, ಓಂಕಾರಪ್ರಣವತಾರಸಂಜ್ಞೆವುಳ್ಳ ಪಂಚಬ್ರಹ್ಮಪ್ರಕಾಶವಾದ ಶಬ್ದಬ್ರಹ್ಮರೂಪಾದ ಸಕಲವೇದಸ್ವರೂಪವಾದ ನಾದಬಿಂದುಕಳಾಸ್ವರೂಪನಾದ ರೂಪಿಲ್ಲದವಿಶ್ವರೂಪನಾದ ಪರಕ್ಕಿಂತಲುಪರನಾದ ಪರಸ್ವರೂಪನಾದ ಪರಿಸಲುತಕ್ಕಂಥಾವರವನೀವ ನಿತ್ಯನಾದ ಶಾಂತನಾದ ಸಮರ್ಥನಾದ ಸಕಲಲೋಕವಸೃಷ್ಟಿಕರ್ತನಾಗಿಸಂರಕ್ಷಕನಾದ ಸಕಲಲೋಕಸಂಹಾರಕನಾದ ಸಕಲಲೋಕದಿಂನಮಸ್ಕೃತಪಾದವುಳ್ಳ ಅದ್ಯಂತವಿಲ್ಲದಶಿವಶಂಕರನಾಮಕನಾದ ನಾಶರಹಿತನಾದ ತ್ರಿಗುಣಾತೀತನಾದ ಭಕ್ತರಹೃದಯನಿವಾಸಿಯಾದ ಒಂದುವಸ್ತುವಿನಿಂದಲು ಆದನ್ನು ಎಣಿಸದೆ ನಿರ್ವಿಕಾರನಾದ, ನಿರ್ಗುಣ, ನಿರ್ಲೇಪ, ನಿರಹಂಕಾರ, ನಿಷ್ಪ್ರಪಂಚನಾದ, ತನ್ನಿಂತಾನೆ ಉದಯಿಸುವ ಆತ್ಮಾರಾಮನಾದ ದೇಶಕಾಲದಲ್ಲಿ ಕಡೆಯಿಲ್ಲದ ಸರ್ವಮಂಗಳಪ್ರದನಾದ ಸಕಲವಸ್ತುಗಳನೀವ ಸಕಲವಸ್ತುಗಳ ನನುಭವಿಸುವ ಸಮಸ್ತರಿಗು ಸಮಸ್ತಸುಖಾಸ್ಪದನಾದ ಇಂಥಾ ಓಂಕಾರೇಶ್ವರನ ದರ್ಶ

ಸಧ್ಯಾನವಂಮಾಡಿ ವಾಕ್ಯದಿಂದ ಉಪಚರಿಸುವಳಲ್ಲದೆ ಮತ್ತೊಂದು ವ
ಸ್ತುವಗ್ರಹಿಸುವಳಲ್ಲ, ಅವಳಜಿಹ್ವೆ ಸ್ವಾಮಿಯನಾಮಾಮೃತವಸಲ್ಲದೆ ಮ
ತ್ತೊಂದು ಬಯಸಲಿಲ್ಲ, ನಿತ್ಯವೂ ತ್ರಿಕಾಲದಲ್ಲಿಯೂ ಓಂಕಾರೇಶ್ವರನಗು
ಡಿಯನ್ನು ಅಲಂಕರಿಸಿ ಉಪ್ಪರಿಗೆಯನುತ್ತಾ ರಂಗವಲ್ಲಿಯನಿಕ್ಕುವಳು
ಓಂಕಾರೇಶ್ವರನಪೂಜಿಸುವ ಭಕ್ತರಂಕರದು ತನ್ನ ಪಿತೃಗಳೆಂದು ಭಾವಿ
ಸಿ ಗೀತವಂಕೇಳಿಸುವಳೂ ಈ ಮರ್ಯಾದೆಯಲ್ಲಿ ಇರುತ್ತಾ ಒಂದಾನೊಂ
ದುದಿನ ವೈಶಾಖಶುದ್ಧ ಚತುರ್ದಶಿಯಲ್ಲಿ ಉಪವಾಸವಿರ್ದು ರಾತ್ರಿಜಾಗರ
ಣವಂಮಾಡಿ ಸ್ವಾಮಿಸೇವೆಗೆ ಬಂದಭಕ್ತರು ಪ್ರಾತಃಕಾಲದಲ್ಲಿ ನಾನಾದಿ
ಕ್ಕುಗೆಹೋಗಲು ಆ ಸ್ವಾಮಿಯ ಉಪ್ಪರಿಗೆಯನ್ನು ಚನ್ನಾಗಿ ಸಂಪೂರ್ಣ
ಉಪಲೇಪನರಂಗವಲ್ಲಿ ಕಾರಣಗಳಿಂದ ಅಲಂಕರಿಸಿ ಸಚೇಲಸ್ನಾನವಂಮಾ
ಡಿಬಂದು ಆ ಸ್ವಾಮಿಯಂಪೂಜಿಸಿ ನಮ್ಮ ಆಚಾರ್ಯರುಮೊದಲಾದ ಋಷಿ
ಗಳು ನೋಡುತ್ತಿರಲು ಗಾನವಂಮಾಡುತ್ತಾ ಧ್ಯಾನಿಸುತ್ತಲು ಜ್ಯೋತಿ
ರ್ಮಯವಾದ ಓಂಕಾರೇಶ್ವರನಲ್ಲಿ ತನ್ನನಿಜಶರೀರದಿಂದ ಒಂದು ವೈಶಾಖ
ಶುದ್ಧ ಚತುರ್ದಶಿಯಲ್ಲಿ ಐಕ್ಯವಾದಳು, ಈಗಮೊದಲಾಗಿಯೂ ಅತಿಭಕ್ತಿ
ಯಿಂದ ಸಕಲರು ಆ ದಿವಸ ಯಾತ್ರೆಯಂ ಮಾಡಬೇಕು ಆ ದಿವಸ ಉ
ಪವಾಸವಿರ್ದು ಪೂಜೆ ಜಾಗರಣವಂಮಾಡಿ ಅಲ್ಲಿಮೃತವಾದರು ದಿವ್ಯಜ್ಞಾ
ನವನ್ನೈದುವರು ವೈಶಾಖಶುದ್ಧ ಚತುರ್ದಶೀದಿನ ಬ್ರಹ್ಮಾಂಡದಲ್ಲಿರ್ದ ಸಕ
ಲ ತೀರ್ಥಂಗಳು ಓಂಕಾರೇಶ್ವರನ ದರ್ಶನಕ್ಕೆ ಬಹವು ಆಸ್ವಾಮಿಯಗು
ಡಿಯಮುಂದೆ ಶ್ರೀಮುಖವೆಂಬ ಗುಹೆಇದ್ದೀತು, ಅಲ್ಲಿಸಿದ್ಧರು ವಾಸವಮಾ
ಡಿಕೊಂಡು ತಪವಮಾಡುವರು, ಅವರು ಸ್ವಾಮಿಸೇವೆಗೆಬಹರು, ಆಗುಹೆ
ಯಬಾಗಿಲಲ್ಲಿ ಐದುದಿನ ಆವವಸಿವ್ಹಾನೊ ಅವನಿಗೆ ದೇವಕನ್ಯೆಯರು ಕ
ಣ್ಣಿಗೆ ಕಾಣಿಸುವರು, ಆವರುಕಾಲಜ್ಞಾನಿಗಳಹರು, ಆ ಗುಹೆಯ ಉತ್ತರ
ಬಾಗಿಲಲ್ಲಿ ರಸಕೂಪವೆಂಬ ರಸತುಂಬಿದ ಕೂಪದರ್ಶನವಂ ಮಾಡಲು ಹೃ
ದಯದ ಸಕಲಶಬ್ದಂಗಳು ಕೇಳಬಹವು, ನಾದಸ್ವರೂಪಿಯಹನು, ಅಲ್ಲಿಮ
ತ್ತೊಬ್ಬೇವರಿಯಾದ ಗಂಗೆಯಲ್ಲಿ ಸ್ನಾನವಂಮಾಡಿ ಓಂಕಾರೇಶ್ವರನ ಪೂ
ಜಿಸಲು ಪುನರ್ಜನ್ಮವಿಲ್ಲ, ಮುಕ್ತಿಯಂ ಪಡೆವರು, ಬ್ರಹ್ಮಾಂಡದೊಳಗಣ

ಲಿಂಗಗಳಲ್ಲಿ ಕಾಶೀಕ್ಷೇತ್ರದೊಳಗೆ ಮಣಿಕರ್ಣಿಕಾತೀರದಲ್ಲಿರುವ ಓಂಕಾರೇಶ್ವರನು ಶ್ರೇಷ್ಠನು, ಆ ಸ್ವಾಮಿಯ ದರ್ಶನವಂ ಮಾಡದವನು ತಾಯಿಯ ಯೌವನವಂ ಕೆಡಿಸಿ ಯಾತಕ್ಕೆ ಹುಟ್ಟಬೇಕು. ಪರಮೇಶ್ವರನು ಮಂದರಾದ್ರಿಯಿಂದ ಕಾಶೀಕ್ಷೇತ್ರಕ್ಕೆ ಬರುವಾಗ ಬ್ರಹ್ಮಾಂಡದಲ್ಲಿರ್ಪ ಸಮಸ್ತ ಪುಣ್ಯಕ್ಷೇತ್ರ, ಸಪ್ತಸಮುದ್ರ, ಸಪ್ತದ್ವೀಪ, ಗಿರಿ ವನ ತೀರ್ಥ ನದಿಗಳು, ಸಹಾ ತಮ್ಮ ತಮ್ಮ ಸ್ಥಳಗಳಿಂದ ಬಂದು ಈ ಕಾಶಿಯಲ್ಲಿ ಒಂದೊಂದು ಅಂಶದಿಂದ ಇದ್ದಾವು, ಈಗ ತಾವು ಮಾಡಿದ ಪುಣ್ಯದಿಂ ನೀನು ನೆನಸಿಕೊಟ್ಟೆ ಎನ್ನ ಶಿಷ್ಯಾದಿಗಳು ಕಾಶೀಕ್ಷೇತ್ರಕ್ಕೆ ಬರಬೇಕೆಂದು ಪ್ರಾರ್ಥಿಸಿ ಇದ್ದಾರಾಗಿ ನಾವು ಬಂದೆವು ವೃದ್ಧಾಪ್ಯಬಂದಾಗಲಾದರು ಕಾಶೀಕ್ಷೇತ್ರವಾಸಕ್ಕೆ ಪೋಗದಿರೆ ಸುಖವಿಲ್ಲ, ಕೈಕಾಲುಘಟ್ಟಿಯಾಗಿ ಆಯುಷ್ಯವಿದ್ದಾಗಲೆ ವಿಶ್ವೇಶ್ವರನಸೇವಿಸಬೇಕು, ಆನಂದಕಾನನದಲ್ಲಿ ಇರಲು ಮೋಕ್ಷಲಕ್ಷ್ಮಿಯೊರಗೊಂಬುವಳೆಂದು ಈ ಪ್ರಕಾರದಿಂದ ಕಾಶೀಮಹಾತ್ಮ್ಯೆ ಓಂಕಾರೇಶ್ವರನ ಮಹಿಮೆಯಂ ನಿರೂಪಿಸಿ ಗಾರ್ಗ್ಯಾಚಾರ್ಯರು ತನ್ನ ಶಿಷ್ಯರುಸಹಿತ ಆದಮನಸ್ಸು ಕಾಶೀಕ್ಷೇತ್ರಕ್ಕೆ ಕರಕೊಂಡು ಹೋಗಿ ಸಕಲ ತೀರ್ಥಸ್ನಾನವಂ ಮಾಡಿ ಓಂಕಾರೇಶ್ವರನಂ ಪೂಜಿಸಿ ಗಾರ್ಗ್ಯಾಚಾರ್ಯರೂ ದಮನುಸಹಾ ಓಂಕಾರೇಶ್ವರನಲ್ಲಿಯೆ ಐಕ್ಯವಾದರು, ಕೇಳ್ಮೆ ಇಲ್ವಲಾರಿಯಾದ ಅಗಸ್ತ್ಯನೆ! ಈ ಮರ್ಯಾದೆಯಲ್ಲಿ ಓಂಕಾರೇಶ್ವರನಪೂಜಿಸಿ ಸಿದ್ಧಿಯೆಯ್ದಿದವರು, ಹೀಗೆ ಸಿದ್ಧಿಯನ್ನೈದಿದವರು ಬಹಳ ಮಂದಿಯುಂಟು ಅದರಿಂದ ಈ ಕಾಶೀಕ್ಷೇತ್ರವನ್ನು ವಿಶ್ವಪತಿಯನ್ನು ಈ ಪುರಾಣವನ್ನು ಈ ಓಂಕಾರೇಶ್ವರನ ಮಹಿಮೆಯನ್ನು ನಿಂದಿಸುವರಾರುಂಟೋ ಅವರು ಕೋಟಿಬ್ರಹ್ಮಕಲ್ಪಪರಿಯಂತರವು ವಿಷ್ಟಾಕುವೆಂಬ ನರಕದಲ್ಲಿ ಇಹರು, ಅಂಥಾವರ ಮುಂದೆ ಈ ಅಧ್ಯಾಯವಂ ಹೇಳಲಾಗದು, ಭೂಲೋಕದಲ್ಲಿ ಓಂಕಾರೇಶ್ವರಗೆ ಸಮಾನವಾದ ಲಿಂಗವಿಲ್ಲವೆಂದು ಈ ಅಧ್ಯಾಯವಂ ಪರಾಕಿಲ್ಲದೆ ಕೇಳಿದವರು ಸಕಲಪಾಪವಂ ಪರಿಹರಿಸಿ ಶಿವಲೋಕವನ್ನೈದುವರೆಂದು ಪರಮೇಶ್ವರನು ಪಾರ್ವತಿಗೆ ನಿರೂಪಿಸಿದನೆಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವಂ ವ್ಯಾಸರು ತನಗರುಹಿದರೆಂದು ಸೂತಪುರಾಣಿಕನು ಶೌನಕಾ

ದಿ ಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀ ಮಹಿಮಾರ್ಥವರ್ಣದಲ್ಲಿ ಓಂಕಾರೇಶ್ವರನಮಹಿಮೆ ದಮನಪ್ರಸಂಗವೆಂಬ ಎಪ್ಪತ್ತನಾಲ್ಕನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * * * * * * *

ಎಪ್ಪತ್ತೈದನೆಅಧ್ಯಾಯ ತ್ರಿವಿಷ್ಟಪೇಶ್ವರ
ತ್ರಿಲೋಚನೇಶ್ವರರಮಹಿಮೆ

ಶ್ರೀವಿಶ್ವೇಶ್ವರಾಯನಮಃ॥ ಅನಂತರವಲ್ಲಿ ಅಗಸ್ತ್ಯನಿಂತೆಂದನು, ಎಲೈ ಕುಮಾರಸ್ವಾಮಿ! ಈಗ ಓಂಕಾರೇಶ್ವರನ ಮಹಿಮೆಯಂ ಕೇಳಿದುೂ ಎನ್ನಮನಸ್ಸಿಗೆ ತೃಪ್ತಿಯಾಗದು ಈಗಪರಮೇಶ್ವರನು ದೇವಿಯರಿಗೆ ತ್ರಿವಿಷ್ಟಪೇಶ್ವರನ ಕಥೆಯಂ ನಿರೂಪಿಸಿದನು ಎಂದೆಯಲ್ಲ ಆತ್ರಿವಿಷ್ಟಪೇಶ್ವರನ ಮಹಾತ್ಮೆಯಂ ಎನಗೆ ಬುದ್ಧಿಗಲಿಸಬೇಕೆನಲು ಕುಮಾರಸ್ವಾಮಿ ಇಂತೆಂದನು, ಕೇಳೈ ಅಗಸ್ತ್ಯ! ವಿರಜೆಎಂಬ ಸಿದ್ಧಪೀಠವನ್ನುತ್ರಿವಿಷ್ಟಪೇಶ್ವರನನ್ನು ನೋಡಿದವನು ರಜೋಗುಣವಿರಹಿತನಹನು; ಸರಸ್ವತಿ, ಕಾಳಿಂದಿ, ನರ್ಮದೆ, ಈ ಮೂರುನದಿಗಳು ಆಕಾರವಂ ಧರಿಶಿ ಕನಕಕಲಶಂಗಳಿಂದ ಗಂಗೋದಕವಂ ತುಂಬಿತಂದು ತ್ರಿವಿಷ್ಟಪಲಿಂಗಕ್ಕೆ ಅಭಿಷೇಕವಂಮಾಡಿ ಆ ಸ್ವಾಮಿಯಬಳಿಸುತ್ತಲು ತಮ್ಮ ಹೆಸರುಲಿಂಗಂಗಳಂ ಸ್ಥಾಪನೆಯಂಮಾಡಿದವರಹರು ಆಲಿಂಗಗಳನೋಡಲು ಆದಿನಗಳಲ್ಲಿ ಸೂರ್ಯಗ್ರಹಣ ಚಂದ್ರಗ್ರಹಣಗಳಲ್ಲಿ ಸ್ನಾನವಮಾಡಿದಫಲವುಂಟು,ಅವುಆವಾವೆಂದರೆ- ತ್ರಿವಿಷ್ಟಪೇಶ್ವರನ ದಕ್ಷಿಣಭಾಗದಲ್ಲಿ ಇಹ ಸರಸ್ವತೀಶ್ವರನ ದರ್ಶನವಂ ಮಾಡಲು ಸರಸ್ವತೀಲೋಕವಹುದು, ಪಶ್ಚಿಮದಲ್ಲಿ ಯಮುನೇಶ್ವರನಂನೋಡಲು ಯಮಯಾತನೆಯಿಲ್ಲ ಆ ಮೂಡಲಲ್ಲಿ ನರ್ಮದೇಶ್ವರನ ಪೂಜಿಸಲು ಪುನರ್ಜನ್ಮವಿಲ್ಲ, ಪಿಲಪಿಲಾತೀರ್ಥದಲ್ಲಿ ಸ್ನಾನವಂಮಾಡಿ ಆ ಸಮೀಪದಲ್ಲಿಇಹ ತ್ರಿವಿಷ್ಟಪೇಶ್ವರನಪೂಜಿಸಲು ಸ್ವರ್ಗಕ್ಕೆ ಅಧಿಪತಿಯ

ಹನು, ಆಸ್ವಾಮಿಗೆ ತ್ರಿವಿಧಯಾತ್ರೆಯಂ ಮಾಡಿದವನು ಸೃಷ್ಟಿಗೆಕರ್ತ
ನಹನು, ಆಸ್ವಾಮಿಗೆನಮಸ್ಕಾರವು ಮಾಡಿದೆನರು ಗೊಂಡ ಮಾತ್ರದಲ್ಲಿ
ಯೇ ಏಳುಜನ್ಮದ ಪಾಪಹರ, ದರ್ಶನವು ಭೂಮಿಯುಳ್ಳಿರ್ದ ಸಮಸ್ತಲಿಂಗ
ದರ್ಶನಫಲ, ಉತ್ತರ ವಾಹಿನಿಯಾದಗಂಗೆಯುಳ್ಳಿಯೂ ಈ ಪಿಲ ಪಿಲಾ
ತೀರ್ಥದಲ್ಲಿ ಸ್ನಾನವಂ ಮಾಡಲು ಶತಕ್ರತುವಮಾಡಿ ಅವಭೃತಸ್ನಾನವ
ಮಾಡಿದಫಲ, ಸರಸ್ವತಿ, ನರ್ಮದೆ, ಕಾಳಿಂದೀ ಈಮೂರುನದಿಗಳು ಮಹಾ
ಪವಿತ್ರವಾದಂಥಾವು ಕಾಶೀಕ್ಷೇತ್ರವು ಲೋಕಕ್ಕೆ ಅಧಿಕವಾ[illegible] ಅಲ್ಲಿ ಓಂ
ಕಾರೇಶ್ವರನು ಶ್ರೇಷ್ಠನು ಸಕಲತೇಜಸ್ಸುಗಳೊಳು ಸೂರ್ಯಚಂದ್ರರು
ಶ್ರೇಷ್ಠವಾದಂತೆ ಸಮಸ್ತಲಿಂಗಗಳೊಳಗೆ ತ್ರಿಲೋಚನೇಶ್ವರನು ಅಧಿಕ ಈ
ಲಿಂಗವನ್ನು ಒಂದುಭಾರಿ ಪೂಜೆಯಂಮಾಡಲು ಶತಜನ್ಮಪಾಪಹರ; ಸು
ರಾಪಾನ, ಸ್ವರ್ಣಸ್ತೇಯ, ಗುರುತಲ್ಪ,ಗಮನ, ಬ್ರಹ್ಮಹತ್ಯಾ, ಈ ನಾ
ಲ್ವರ ಕೂಡಿದ್ದವನು, ಈ ಐವರು ಮಹಾಪಾತಕಿಗಳು, ಇವಲ್ಲದೆ ಮತ್ತೆ ಪ
ರಸ್ತ್ರೀಗಮನ,ಪರಹಿಂಸಕರು,ಪರನಿಂದಕರು,ಪುಣ್ಯಕ್ಷೇತ್ರನಿಂದಕರು ಶಿ
ವದೂಷಕರು, ದೇವನಿಂದಕರು,ವಿಪ್ರನಿಂದಕರು,ಇವರ ಸಂಗಡ ಸಂಭಾಷ
ಣೆಯಂ ಮಾಡಿದವರು,ಆಸಂಭಾಷಣೆಯಂ ಮಾಡಿದವರೊಡನೆ ಸಹವಾಸಿ
ಗಳು ಪ್ರಾಯಶ್ಚಿತ್ತವಿಲ್ಲದಂಥ ಪಾತಕಂಗಳಿಗೆ ಪ್ರಾಯಶ್ಚಿತ್ತವ ನಿರ್ಣೈ
ಸುವ ವಿದ್ವಾಂಸರುಗಳು, ಇವರೊಡನೆ ಮಾತನಾಡಲಾಗದು ಪ್ರಾಯಶ್ಚಿ
ತ್ತವಿಲ್ಲವ ಪಾತಕಂಗಳಿಗೆ ಪ್ರಾಯಶ್ಚಿತ್ತವ ನಿರ್ಣೈಸಬೇಕಾದರೆ ಹ್ಯಾಗಂ
ದರೆ- ಎಲ್ಲೈ ಪ್ರಾಯಶ್ಚಿತ್ತವ ಮಾಡಿಸಿಕೊಂಬುವರಿರಾ! ಶಾಸ್ತ್ರಪ್ರಕಾರ
ವನನುಗ್ರಹಿಸಬೇಕಾದರೆ ಮಿಕ್ಕಾದನಿಯಮಂಗಳಂಬಿಟ್ಟು ಕಾಶೀಕ್ಷೇತ್ರ
ಕ್ಕೆ ಹೋಗಿ ಗಂಗೆ, ಯಮುನೆ, ಮಣಿಕರ್ಣಿಕೆ, ಸರಸ್ವತಿ, ಮೊದಲಾದ
ಪುಣ್ಯನದಿಗಳಲ್ಲಿ ಸ್ನಾನಂಮಾಡಿ ಅಲ್ಲಿ ವಿಶ್ವನಾಥನದರ್ಶನವಂಮಾಡಿ ಅ
ಲ್ಲಿ ಒಪ್ಪುವ ತ್ರಿಲೋಚನೇಶ್ವರನ ದೃಷ್ಟಿಯಿಂದ ಪವಿತ್ರವಾದ ಸಕಲಶಕ್ತಿ
ಯುರ ಸೇವಿಸಿ ವೇದೋಕ್ತಪ್ರಕಾರದಿಂ ತರ್ಪಣಾದಿಕ್ರಿಯೆಗಳಂ ಮಾಡಿ
ಕೊಂಡು ಒಂದುವರ್ಷ ಕಾಶಿಯಲ್ಲಿ ವಾಸವಾಗಿರ್ದು ಆಮೇಲೆ ವಿಶ್ವನಾ
ಥಗೆ ಪಂಚಾಮೃತ ಸ್ನಾನ, ದಿವ್ಯ ಗಂಧವಿದ್ಯ ಪುಷ್ಪಧೂಪ ದೀಪ ನೈ,

ವೇದ್ಯ, ಸ್ವಾಮಿಗೆ ಪೂಜೋಪಕರಣ, ಘಂಟೆ, ಕನ್ನಡಿ, ವಿಂಜಾಮರಧ್ವ
ಜ, ನೃತ್ತಗೀತವಾದ್ಯ, ಜಪ, ಪ್ರದಕ್ಷಿಣೆ, ನಮಸ್ಕಾರ, ಬ್ರಾಹ್ಮಣಪೂ
ಜ, ಪಂಚಗವ್ಯಪ್ರಾಶನ, ದಾನ, ದೇವತಾಸೇವಕರಿಗೆ ಸಂಬಳ, ಇವು
ಮೊದಲಾದವಂ ಮಾಡಿ ನಾವು ನಿಷ್ಪಾಪರಾಗುವಹಾಗೆ ಕೃಪೆಯಿಂದ ಅ
ನುಗ್ರಹಿಸಿ ಎಂದು ಬ್ರಾಹ್ಮಣಸಭೆಗೆ ಬಿನ್ನೈಸಿ ಆ ಬ್ರಾಹ್ಮರ ಕೈಯು ನಿ
ಷ್ಪಾಪಿಗಳಾದಿರಿ ಎಂದೆನಿಸಿಕೊಂಡು ಅವರಿಗೆ ನಮಸ್ಕರಿಸಿ ಆ ಬಳಿಕ ಶು
ದ್ಧಾತ್ಮಕರಹರು; ಪಂಚನದೀತೀರ್ಥದಲ್ಲಿಯು ವಿಶ್ವಕರ್ಮತೀರ್ಥದಲ್ಲಿಯು
ಸ್ನಾನವಂ ಮಾಡಿ ವಿಶ್ವಪತಿಯ ದರ್ಶನವಂ ಮಾಡಲು ಕೃತಾರ್ಥರಹರು, ಈ
ಮಹಾಪಾಪ ಪರಿಹರವುಳ್ಳ ಸರ್ವಪ್ರಾಯಶ್ಚಿತ್ತವಂ ಕಾಶಿಯುಪಾಸಕ
ಗೆ ಹೇಳಲಾಗದು, ಹೇಳಿದವರು ನರಕವನೈದುವರು ಸಂಜೆಯಲ್ಲಿ ತ್ರಿವಿಷ್ಟ
ಪೇಶ್ವರಗೆ ಏಳು ಪ್ರದಕ್ಷಿಣೆ ನಮಸ್ಕಾರವಂ ಮಾಡಲು ಭೂಪ್ರದಕ್ಷಿಣಫಲ
ವುಂಟು, ನಾಗಕಂಕಣವಂ ಧರಿಸಿದ ತ್ರಿಲೋಚನೇಶ್ವರನನೋಡಿ ಅಲ್ಲಿಮೃತ
ರಾದವರು ಜನ್ಮಾಂತರದಲ್ಲಿ ಮುಕ್ತಿಯುಂಟು, ಮಿಕ್ಕಾದ ತೀರ್ಥಲಿಂಗಗಳ
ಸೇವೆಗೆ ಪುಣ್ಯಕಾಲಬೇಕು ಈ ತ್ರಿಲೋಚನೇಶ್ವರನ ಸೇವೆಗೆ ನಿತ್ಯವೂ ಪು
ಣ್ಯಕಾಲವು, ಓಂಕಾರೇಶ್ವರಮೊದಲಾದವೆಲ್ಲವು ಪಾಪಗಳ ಪರಿಹರಿಸುವದ
ಕ್ಕೆ ಸಮರ್ಥವಾದವು, ಅದರೊಳು ತ್ರಿಲೋಚನೇಶ್ವರನಮಹಿಮೆ ಅಪೂ
ರ್ವವಾದುದು ಈ ತ್ರಿಲೋಚನೇಶ್ವರನು ಎಂತು ಪ್ರಸಿದ್ಧನಾದನೆಂದರೆ ಹೇ
ಳೇನು ಕೇಳು, ಎಲೆ ಪಾರ್ವತಿ! ಪೂರ್ವದಲ್ಲಿ ತಾನು ಯೋಗದಲ್ಲಿ ಇರಲು ಸ
ಪ್ತಪಾತಾಳದಿಂದ ಭೂತಳವಭೇದಿಸಿಕೊಂಡು ಎನ್ನಮುಂದೆ ಪ್ರಕಟವಾಗ
ಲು ಈ ಲಿಂಗವು ಎನ್ನನೋಡುವದಕ್ಕೆ ನಿಮಿತ್ತವಾಗಿಯು ಲಿಂಗದೊಳು ತಾ
ನು ಪ್ರತ್ಯಕ್ಷವಾಗಿಯು ಈ ಲಿಂಗಕ್ಕೆ ಮೂರುನೇತ್ರವನಿತ್ತೆನು ಅಂದು
ಮೊದಲಾಗಿ ಈ ಲಿಂಗವು ತ್ರಿಲೋಚನೇಶ್ವರನೆಂದು ಪ್ರಸಿದ್ಧವಾಯಿತು ಈ
ಲಿಂಗವ ಭಕ್ತಿಯಿಂದ ಪೂಜಿಸಿದಭಕ್ತರು ತ್ರಿಲೋಚನವಧರಿಸಿ ಜೀವನ್ಮು
ಕ್ತರಹರು ಎನ್ನಸಾರೂಪ್ಯವನೈದಿದ ಪರಿವಾರರಹರು, ಈ ಮಹಿಮೆಯ
ನ್ನು ತಾನಲ್ಲದೆ ಮಿಕ್ಕಾದವರು ಅರಿಯರು, ವೈಶಾಖಶುದ್ಧತದಿಗೆಯಲ್ಲಿ ಉ
ಪವಾಸನಿರ್ದು ರಾತ್ರಿಜಾಗರಣವಂ ಮಾಡಿ ಮರುದಿನ ತ್ರಿಲೋಚನೇಶ್ವರನ

ಪೂಜೆಯಂಮಾಡಿ ನಾನಾಧರ್ಮಗಳಂ ಮಾಡಲು ಪಿತೃಗಳಿಗೆ ತರ್ಪಣವಂ ಕೊಟ್ಟು ಶಿವಭಕ್ತರ ಪಜ್ತಿಯಲ್ಲಿ ಇಟ್ಟುಕೊಂಡು ಪಾರಣೆಯಂಮಾಡ ಲು ಪಂಚಭೂತಮಯಶರೀರವಂ ಬಿಟ್ಟು ಎನ್ನಪರಿವಾರಕ್ಕೆ ಅಧಿಪತಿಗಳಾದ ಗಣಂಗಳಹರು, ತ್ರಿಲೋಚನೇಶ್ವರನ ದರ್ಶನವಾಗುವ ಪರ್ಯಂತರವು ಸಂಸಾರಪಾಶಬದ್ಧರಾಗಿ ಇಹರು, ಈ ತ್ರಿಲೋಚನೇಶ್ವರನ ದರ್ಶನವಾದ ಮೇಲೆ ಸಂಸಾರಪಾಶವಂ ಛೇದಿಸಿ ಮುಕ್ತರಾಗುರು,ಪುನರ್ಜನ್ಮವಿಲ್ಲ ಪ್ರತಿಮಾಸದಲ್ಲಿಯೂ ಸಪ್ತಮಿಯಲ್ಲಿ ಅಷ್ಟಮಿಯಲ್ಲಿಯೂ ಸಮಸ್ತತೀರ್ಥಗಳೂ ತ್ರಿಲೋಚನೇಶ್ವರನ ನೋಡುವವಕ್ಕೆ ಬಹವು ತ್ರಿವಿಷ್ಟಪೇಶ್ವರನ ದಕ್ಷಿಣದಲ್ಲಿಹ ಪಿಲಿಪಿಲಾತೀರ್ಥದಲ್ಲಿ ಸ್ನಾನ ತರ್ಪಣ ಸಂಧ್ಯಾವಂದನಾದಿ ಕ್ರಿಯಾದಿಗಳಂ ಮಾಡಲು ರಾಜಸೂಯಯಾಗವಮಾಡಿದಫಲ, ಅವರಪಿತೃಗಳಿಗೆ ಬ್ರಹ್ಮಲೋಕವಹುದು, ಅಲ್ಲಿಹ ಪಾದೋದಕತೀರ್ಥದಲ್ಲಿ ಉದಕದಾನವಂಮಾಡಲು ದೇವತ್ವವಹುದು ಆಸಮೀಪದಲ್ಲಿ ಅನೇಕಲಿಂಗಗಳುಂಟು, ಅವರದರ್ಶನಸ್ಪರ್ಶನದಿಂದ ಕೈವಲ್ಯವಹುದು ಅವರಲ್ಲಿ ಗಂಗಾತೀರದಲ್ಲಿ ಶಾಂತನವವೆಂಬದೊಂದು ಲಿಂಗವನೋಡಲು ಸಂಸಾರಶಾಂತಿಯಹುದು ಆ ದಕ್ಷಿಣದಲ್ಲಿ ಗಂಗಾಪುತ್ರನಾದ ಭೀಷ್ಮನಿಂದ ಪ್ರತಿಷ್ಠೆಯಾದ ಭೀಷ್ಮೇಶ್ವರನಂ ನೋಡಲು ಕಲಿಕಾಲಭಯವಿಲ್ಲ ಆ ಪಡುವಲಲ್ಲಿ ದ್ರೋಣಾಚಾರ್ಯನಿಂ ಪ್ರತಿಷ್ಠೆಯಾದ ದ್ರೋಣೇಶ್ವರನಂ ನೋಡಲು ಆ ದ್ರೋಣಾಚಾರ್ಯನಿಗೆ ಜ್ಯೋತಿಸ್ಸ್ವರೂಪದೊರಕಿದಂತೆ ದಿವ್ಯಜ್ಯೋತಿರ್ಮಯರೂಪವಂ ಧರಿಸುವನು, ಆ ಲಿಂಗದಮುಂದಿರ್ದ ಅಶ್ವತ್ಥಾಮನಿಂ ಪ್ರತಿಷ್ಠಿತವಾದ ಅಶ್ವತ್ಥಾಮೇಶ್ವರನಂ ಪೂಜಿಸಲು ಚಿರಂಜೀವಿಯಹನು, ದ್ರೋಣೇಶ್ವರನಗುಡಿಯುಪ್ಪಾರದಲ್ಲಿರ್ದ ವಾಲಖಿಲ್ಯೇಶ್ವರನಂ ನೋಡಲು ಸರ್ವಯಾಗಫಲ, ಆ ಲಿಂಗದತೆಂಕಲಲ್ಲಿಹ ವಾಲ್ಮೀಕಿಋಷಿಯಿಂದ ಪ್ರತಿಷ್ಠಿತವಾದ ವಾಲ್ಮೀಕೇಶ್ವರನಂ ನೋಡಲು ಸಮಸ್ತದುಃಖಹರವೆಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವಂ ವ್ಯಾಸರು ತನಗರುಹಿದರೆಂದು ಸೂತಪುರಾಣಿಕನು ಶೌನಕಾದಿಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ತ್ರಿವಿಷ್ಟಪೇಶ್ವರ ತ್ರಿಲೋಚನೇಶ್ವರರ ಪ್ರಸಂಗವೆಂಬ ಎಪ್ಪತ್ತೊಂದನೇ ಅಧ್ಯಾಯಾರ್ಥನಿರೂಪಣಕ್ಕಂ ಮಂಗಳಮಹಾ * * * * * * *

ಎಪ್ಪತ್ತೆರಡನೆಅಧ್ಯಾಯ, ಮತ್ತು ತ್ರಿಲೋಚನೇಶ್ವರನಮಹಿಮೆ,

ಶ್ರೀವಿಶ್ವೇಶ್ವರಾಯನಮಃ ‖ ‖ ಅನಂತರದಲ್ಲಿ ಪರಮೇಶ್ವರನು ದೇವಿಯರಿಗೆ ನಿರೂಪಿಸಿದ ವೃತ್ತಾಂತಮಂ ಪೇಳುವೆನುಕೇಳು ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನು, ಕೇಳೈ ಅಗಸ್ತ್ಯ! ಈ ತ್ರಿಲೋಚನೇಶ್ವರನಮಹಿಮೆಯಲ್ಲಿ ಪೂರ್ವಕಲ್ಪದಲ್ಲಿ ಒಂದುಇತಿಹಾಸವುಂಟು ಅದನ್ನುಕೇಳು, ಅದಾವುದೆಂದರೆ-ವಿರಿಂಚಾಪುರ ಮಣಿಮಯಪೀಠವಾದ ನಾನಾವಿಚಿತ್ರವಾದ ರತ್ನಸ್ತಂಭಗಳಿಂದ ಎರಡನೆಯ ಮೇರುವಿನಂತೊಪ್ಪುವ ಪ್ರಳಯದಲ್ಲಿ ಸ್ವರ್ಗಲೋಕವು ನೀರೊಳುಮುಳುಗದಂತೆ ನಿರ್ಮಿಸಿದ ಆಧಾರಸ್ತಂಭದಂತೆ ಇದ್ದಂಥ ವಾಯುವಿನಿಂಚಲಿಸುವ ಅನೇಕಪತಾಕೆಗಳುಳ್ಳ ಥಳಥಳಿಸುವ ಸ್ವರ್ಣಕಲಶಗಳಿಂ ಅಲಂಕೃತವಾದ ಪೂರ್ಣಿಮೆಯ ಚಂದ್ರನು ಬಳಲಿಬಂದು ನಿಲ್ಲುವದಕ್ಕೆ ನಿವಾಸದಂತೊಪ್ಪುವ ತ್ರಿಲೋಚನೇಶ್ವರನ ಉಪ್ಪರಿಗೆಯಲ್ಲಿ ಸ್ತ್ರೀಪುರುಷ ಎರಡುಸಹಿತವಾದ ಎರಡು ಪಾರಿವಾಳದ ಪಕ್ಷಿಗಳನಿವಾಸವಂ ಮಾಡಿಕೊಂಡು ಪ್ರತಿದಿವಸವು ಪ್ರಾತಃಕಾಲ ಮಧ್ಯಾಹ್ನಕಾಲ ಸಾಯಂಕಾಲಗಳಲ್ಲಿಯು ಎರಡುಪಕ್ಷಿಗಳು ನೆಗದುಹೋಗೆ ಪ್ರದಕ್ಷಿಣವಾಗಿ ತಮ್ಮಗರಿಯಘಾಳಿಯಿಂದ ಉಪ್ಪರಿಗೆಯಲ್ಲಿದ್ದಧೂಳಂಕೊಡುಹುತ್ತಿರಲು, ಭಕ್ತಾದಿಗಳಾದವರು ತ್ರಿವಿಷ್ಟಪತ್ರಿಲೋಚನನೆಂದು ಪಠಿಸುವನಾಮಂಗಳಂ ಕೇಳುತ್ತಿರಲು,ನಾನಾವಾದ್ಯಧ್ವನಿಗಳಿಂ ಕಾಲತ್ರಯಂಗಳಲ್ಲಿಯು ವಿರಚಿಸಲು ಪಟ್ಟಮಂಗಳಾರತಿಯಂ ಭಕ್ತರು ತಮ್ಮಕಣ್ಣಿಗೊತ್ತಿಕೊಂಬಂತೆ ತಮ್ಮನೇತ್ರಂಗಳಿಂ ನೋಡುತ್ತಲು ಜಾತ್ಯಾಹಾರವಂ ಬಯಸದೆ ಸ್ಥಿರಮನಸ್ಸಿನಿಂದ ಸ್ವಾಮಿಯಉತ್ಸಾಹಮಂ

ನೋಡಿದಬಳಿಕ ಭಕ್ತಾದಿಗಳು ಉಪ್ಪರಿಗೆಸುತ್ತಲು ಚೆಲ್ಲಿದಧಾನ್ಯಗಳಂ ಭಕ್ಷಿಸುತ್ತ ಪ್ರದಕ್ಷಿಣವಾಗಿ ತಿರುಗುತ್ತ ಆ ತೆಂಕಲಲ್ಲಿರ್ದ ಸರಸ್ವತಿಮೊದಲಾದ ನಾಲ್ಕು ತೀರ್ಥಗಳಲ್ಲಿಯೂ ಸ್ನಾನವಂ ಮಾಡಿಕೊಂಡು ಇರುವವು, ಒಂದುದಿನವು ಸ್ನಾನಹೊರತಾಗಿ ಉದಕಪಾನವ ಮಾಡಲೊಲ್ಲವು ಈ ರೀತಿಯಲ್ಲಿ ಆ ಪಕ್ಷಿಗಳೆರಡು ಉಪ್ಪರಿಗೆಅಂತಸ್ತಿನ ಗವಾಕ್ಷದಲ್ಲಿ ಬಹುಕಾಲ ಸುಖದಿಂದಇರಲು; ಒಂದಾನೊಂದುದಿನ ಒಂದುಗಿಡುಗನು ಆಕಾಶಮಾರ್ಗದಿಂ ಈ ಪಕ್ಷಿಗಳಂ ಕಂಡು ಕ್ರೂರದೃಷ್ಟಿಯಿಂ ನೋಡಿ ಆಕಾಶದಿಂ ಇಳಿದು ಬಂದು ಸಮೀಪದಗುಡಿಯಲ್ಲಿನಿಂತು ಆ ಪಕ್ಷಿಗಳು ಉಪ್ಪರಿಗೆಯಿಂದ ಹೊರಟುಹೋಗುವದನ್ನು ಆ ಪಕ್ಷಿಗಳು ಮಾಡುವಕೃತ್ಯಗಳನ್ನು ನೋಡಿ ಈ ಎರಡುಪಕ್ಷಿಗಳು ಎನಗೆ ಒಂದೇವ್ಯಾಳೆ ಶಿಕ್ಕುವ ಉಪಾಯ ಹ್ಯಾಗೆಂದು ಆ ಗಿಡುಗನು ತನ್ನೊಳಂತೆಂದುದು ಈ ಉಪ್ಪರಿಗೆ ದುರ್ಗದಂತೆಯಿದ್ದೀತು ಹೊಗಶಕ್ಯವಲ್ಲ ಸಾವಿರಆನೆ ಲಕ್ಷಕುದುರೆ ಎರಡುಲಕ್ಷರಥ ಹತ್ತುಲಕ್ಷ ಕಾಲಾಳುವುಳ್ಳವರ್ಗೆಯೂ ಎಂಥಾಕಾರ್ಯಸಾಧ್ಯವಹುದೊ ಅಂಥಾಕಾರ್ಯವು ಒಂದುದುರ್ಗವುಳ್ಳವನ ಸಾಧ್ಯವಮಾಡಲಶಕ್ಯವು, ಬಲಹೀನನಾದರು ಒಂದುದುರ್ಗದಲ್ಲಿಇರಲು ಅರಿಗೂಸಾಧ್ಯವಲ್ಲ ಅದುಕಾರಣ ಸ್ವತಂತ್ರವಾಗಿ ಆಪ್ತಜನವುಳ್ಳದ್ದಾಗಿ ಸಪ್ತಾರಣವುಂಟಾಗಿ ಒಳಗುಕೊಡುವರಿಲ್ಲದೆ ಇದ್ದಂಥ ದುರ್ಗವನ್ನು ಅರಿಗುಸಾಧ್ಯವಲ್ಲವೆಂದು ದುರ್ಗಸಮಾನವಾದ ಉಪ್ಪರಿಗೆಯಂ ಕೊಂಡಾಡಿ ಆ ಪಕ್ಷಿಗಳಮೇಲೆ ರೋಷದಿಂದ ಕೆಂಗಣ್ಣಿನಿಂ ನೋಡುತ್ತಿರಲು, ಆ ಪಕ್ಷಿಗಳೆರಡು ನಿರ್ಭಯದಿಂದ ಮಧುರವಾದ ಧ್ವನಿಯನುಡಿಯುತ್ತಲು, ಒಂದುದಿನ ಆಕಾಶಕ್ಕೆ ನೆಗದು ಹೋಹಸಮಯದಲ್ಲಿ ಈ ಕ್ರೂರದೃಷ್ಟಿಯಿಂ ನೋಡುವಗಿಡುಗನಂ ಕಂಡು ಸ್ತ್ರೀ ಪತಿತನ್ನ ಪತಿಯೊಡನೆ ಇಂತೆಂದುದು, ಈ ಗಿಡುಗನು ನಮಗೆ ಶತ್ರುವು ಬಲವಂತನು ನಮಗೆ ಉಪ್ಪರಿಗೆಯ ಆಶೆವಂದೇಅಲ್ಲದೆ ಮತ್ತೊಬ್ಬರೆಬಲವಿಲ್ಲವೆಂದು ನುಡಿದ ಪ್ರಿಯಳವಾಕ್ಯವಂ ಕೇಳಿ ಲಕ್ಷಿಸದೆ ಇಂತೆಂದುದು ಎಲೆಪ್ರಿಯಳೆ! ನಿನಗೇನುಚಿಂತೆ ನಮ್ಮಂತೆ ಆಕಾಶದಲ್ಲಿ ತಿರುಗುವ ಪಕ್ಷಿಗಳೆಷ್ಟಿಲ್ಲ ನಾವು ಸುಖದಲ್ಲಿ ಇರಲು ನೋಡದವರ್ಯಾರು ನಾವು ಅಂಜೇವು ನಮಗೆ ಸುಖವೆಲ್ಲಿಹದು ಈ ಕ್ಷು

ವ್ಯಸನಾವ ಗಿಡುಗನ ನಾನುಲೆಕ್ಕಿಸುವನಲ್ಲ ನೀನು ಈ ಚಿಂತೆಯಂಬಿಟ್ಟು ಸುಖದಲ್ಲಿ ಇರುಎಂದು ಹೇಳ್ದಪತಿಯವಾಕ್ಯವಂ ಕೇಳಿ ಪತಿಯಪಾದಗಳಲ್ಲಿ ದೃಷ್ಟಿಯುಳ್ಳವಳಾಗಿ ಸುಮ್ಮನೆ ಇದ್ದಳು ಪತಿವ್ರತೆಯಾದವಳು ಒಂದುಸಮಯದಲ್ಲಿ ಹಿತವಚನವಂ ಪತಿಗೆಬಿನ್ನೈಸಿ ಆ ಪತಿಹೇಳಿದಹಾಗೆ ಸುಮ್ಮನೆಇರಬೇಕು ಅದುಕಾರಣ ಸುಮ್ಮನಾದಳು, ಮರುದಿವಸವು ಎಂದಿನಂತೆ ಪೋಪಪಕ್ಷಿಗಳಂನೋಡಿ ಕ್ರೂರದೃಷ್ಟಿಯುಳ್ಳಗಿಡುಗನು ಆಯುಷ್ಯವಿಲ್ಲದವರಂ ಮೃತ್ಯುನೋಡುವಂತೆ ಆಉಪ್ಪರಿಗೆಯಂಬಳಿಸಿನೋಡಿ ಆ ಪಕ್ಷಿಗಳಆಗಮನ ನಿರ್ಗಮನಗಳಂನೋಡಿ ಗಗನಮಾರ್ಗದಿಂ ಪೋಗುವಂಥಾಗಿಡುಗನನ್ನು ಕಂಡು ಸ್ತ್ರೀಪಕ್ಷಿಯು ತನ್ನ ಪತಿಯೊಡನಿಂತೆಂದಳು ದುಷ್ಟನಾದನಮ್ಮ ಅಹಿತನಂ ಕಂಡೆಯಾ ಎಂದುನುಡಿದ ಸ್ತ್ರೀಪತಿಯವಾಕ್ಯವಂ ಕೇಳಿ ಪುರುಷಪಕ್ಷಿ ಇಂತೆಂದುದು ಎಲೆಪ್ರಿಯಳೆ! ಸ್ವರ್ಗಸಮಾನವಾದ ಈ ಉಪ್ಪರಿಗೆಯಲ್ಲಿದ್ದ ನಮ್ಮನ್ನು ಈ ಗಿಡುಗನು ಏನಮಾಡಬಲ್ಲನು ನಾವು ಆಕಾಶದಲ್ಲಿ ಸಂಚಾರಮಾಡಬಲ್ಲಂತೆ ಈ ಗಿಡುಗಬಲ್ಲದೆ ಪಕ್ಷಿಗಳಿಗೆ ಎಂಟುಬಗೆಶಕ್ತಿಯುಂಟು ಅವಾವೆಂದರೆ-ಮೇಲಕ್ಕೆಹಾರುವದು ಅಡ್ಡಲಾಗಿ ನೆಟ್ಟನಾಗಿ ಸಮಗತಿಯಾಗಿ ತೆಳಇಂತೆ ಇಳಿಯುವದು ಅಂಬಿನಂತೆಶೀಘ್ರನೆಪೋಗುವದು ಸರ್ಪನಂತೆವಾರೆಯಾಗುವದು ಭೂಮಿಯಲ್ಲಿ ಕುಪ್ಪಳಿಸಿ ಕುಪ್ಪಳಿಸಿ ನಡೆಯುವದು ಅಡಿಮೇಲಾಗಿ ಸಂಚರಿಸುವದು ಎಡಬಲದಲ್ಲಿ ಮಂಡಲಾಕಾರವಾಗಿ ಸುಳಿಯುವದು ಈ ಎಂಟುಗತಿಗಳಂವ ನಾವುಬಲ್ಲಂತೆ ಇದುಬಲ್ಲದೆ ನಾನು ಇಹಷ್ಟು ಕಾಲವು ನಿನಗೆ ಏನುಚಿಂತೆಎಂದು ನುಡಿದ ಪತಿಯವಾಕ್ಯವಂಕೇಳಿ ಮೂಗಿಯಂತೆ ಸುಮ್ಮನೆ ಇದ್ದಳು ಮತ್ತೂ ಮರುದಿನ ಆ ಗಿಡುಗನು ಒಂದುಗುಂಡಿನಮೇಲೆ ಕುಳಿತುಕೊಂಡು ನೋಡುತ್ತಾ ರಘುಪಪರಿಯಂತ್ರವು ನೋಡಿಹೋಗಲು ಆ ಸ್ತ್ರೀಪಕ್ಷಿಕಂಡು ಕಂಗೆಟ್ಟು ಮತ್ತೂ ಇಂತೆಂದುದು ಎಲೇಪ್ರಿಯನೆ! ಈ ಸ್ಥಳವು ಈ ಗಿಡುಗನಕ್ರೂರದೃಷ್ಟಿಯಿಂ ನಮಗೆ ದೂಷಿತವಾಯಿತು ಈಗಿಡುಗನು ಅತಿಕ್ರೂರನು ದಿನದಿನಕ್ಕೆ ಅತಿಸಮೀಪವಾಗಿ ಬರುತ್ತಾಇದ್ದನು ಎನಲು ಕೇಳಿ ಈ ಗಿಡುಗನು ನಮ್ಮಏನುಮಾಡಿಯಾನು ಸ್ತ್ರೀಯರಸ್ವಭಾ

ಪವಿಮ ಸುಮ್ಮನೆ ಇರು ಎನಲು ಸುಮ್ಮನಾಗಲು, ಆ ಮರುದಿವಸವು ಆಗಿಡ್ಡುಗ ಅವರಿಗಿದಿರಾಗಿಬಂದು ಕುಳಿತು ಎರಡುಝಾವಪರಿಯಂತರವು ಇದ್ದು ಆ ಮಾರ್ಗವನ್ನೋಡಿಕೊಂಡು ಹೋಗಲು ಆ ಸ್ತ್ರೀಪಕ್ಷಿ ಎಲೆ ಪ್ರಾಣನಾಥನೇ! ನಾವು ಮತ್ತೊಂದು ಸ್ಥಳಕ್ಕೆ ಹೋಗುವ ಇಲ್ಲಿ ಇರ್ದರೆ ಮೃತ್ಯುವು ಹತ್ತಿರವಾಗುತ್ತಿದೆ ತನ್ನ ಶತ್ರುವು ಪ್ರಬಲವಾದ ಬಳಿಕ ಆ ಠಾವ ಬಿಡುವುದೇಬುದ್ಧಿ ತಾನುಇದ್ದದೇಶಕ್ಕೆ ಉಪದ್ರತೋರಲು ಆದೇಶವಬಿಡದೆ ಇದ್ದರೆ ನದೀತೀರದಲ್ಲಿದ್ದ ಮರದಂತೆ ಕೆಡುವನು ಸಂದೇಹವಿಲ್ಲವೆಂದುಹೇಳಿದ ಪ್ರಿಯಳವಾಕ್ಯವುಂ ಕೇಳಿ ವಿಧಿಬಲದಿಂದ ಕೇಳದೆ ತನ್ನಸ್ತ್ರೀಯು ಅಂಜಬೇಡವೆಂದು ನುಡಿದು ಇರುತ್ತಿರಲು, ಆ ಮರುದಿನ ಪ್ರಾತಃಕಾಲದಲ್ಲಿಯೆ ಆ ಗಿಡುಗ ಇರುತ್ತಿರಲು ಈ ಪಕ್ಷಿಗಳುಕಂಡು ಒಳಗಿರಲು ಆ ಉಪ್ಪರಿಗೆಯ ಬಾಗಿಲಲ್ಲಿನಿಂತು ಹಗಲೆಲ್ಲಇದ್ದು ಸಾಯಂಕಾಲಸಮಯದಲ್ಲಿ ಹೋಗಲು ಆ ಸ್ತ್ರೀಪಕ್ಷಿಪುರುಷಗಿಂತೆಂದುದು ಎಲೇ ಪ್ರಿಯನೇ! ನಾವುಪ್ರಾರಮುಟ್ಟು ಮತ್ತೊಂದುಕಡೆಗೆ ಹೋಗುವದಕ್ಕೆ ಇದೇವ್ಯಾಳೆ ಮೃತ್ಯುರೂಪಾದಹಗೆಯು ದೂರದಲ್ಲಿ ಇಪ್ಪಾಗಲೆ ಹೋಗಬೇಕು ಈ ವ್ಯಾಳೆಯಲ್ಲಿ ಕೈವಿಡಿದ ತನ್ನನ್ನು ಕರದುಕೊಂಡು ಹೋಗುವದುಚಿತ ಇಲ್ಲದೆ ಕೂಡದಪಕ್ಷಕ್ಕೆ ತನ್ನಬಿಟ್ಟುಹೋಗಲು ನಿನಗೆದೋಷವಿಲ್ಲ ನೀನುಕಡೆಗೆ ತೊಲಗಿ ಹೋಗಿ ಚನ್ನಾಗಿದ್ದರೆ ಅಸಾಧ್ಯವಲ್ಲ ಆಪತ್ಕಾಲಕ್ಕೆ ಸ್ತ್ರೀಯು ಧನದಿಂತನ್ನರಕ್ಷಿಸಿಕೊಳ್ಳಬೇಕು, ಮಹಾಆಪತ್ತುಬಂದು ಸ್ತ್ರೀಯಿಂದ ಧನದಿಂದಲು ಆಗದಪಕ್ಷವಾದರೆ ಆಸ್ತ್ರೀ ಎನ್ನಧನವನ್ನುಬಿಟ್ಟು ಹೋಗಬೇಕು ಅದುಕಾರಣ ತನ್ನಬಿಟ್ಟಾದರುಹೋಗಿ ನಿನ್ನದೇಹವರಕ್ಷಿಸಿಕೊಳ್ಳಲು ಸ್ತ್ರೀಯು ಧನವು ಪುತ್ರರು ಮನೆಯು ಇವೆಲ್ಲವುಬಹು ಹರಿಶ್ಚಂದ್ರರಾಯನು ಆಪತ್ತುಬಂದಾಗ ರಾಜ್ಯ ಧನ ಸ್ತ್ರೀಯು ಪುತ್ರ ಇವೆಲ್ಲವಂಬಿಟ್ಟು ತನ್ನದೇಹವಂ ರಕ್ಷಿಶಿಕೊಂಡು ಇರಲು ಸ್ತ್ರೀಪುತ್ರ ಮೊದಲಾದ ಸಕಲವೂ ತಿರುಗಿಬರಲಿಲ್ಲವೆ ಪುಣ್ಯವಿದ್ದರೆ ತನಗೆತಾನೆ ಪ್ರಿಯನು ನೆಂಟನು ಧರ್ಮ ಅರ್ಥ ಕಾಮಮೋಕ್ಷಂಗಳಂ ಸಂಪಾದಿಸುವನು ತಾನು ಚನ್ನಾಗಿ ಇದ್ದಷ್ಟುಕಾಲವು ಮೂರುಲೋಕವು ಚನ್ನಾಗಿ ಇದ್ದಹಾಗೆಸರಿ ಕೀರ್ತಿ

ಜಂಪತ್ಯವಂ ಸಂಪಾದಿಸಬೇಕು. ಅಪಕೀರ್ತಿಯಿಂ ಪಡುವ ಸುಖಕ್ಕಿಂತ ತಲೂ ಮರಣವೇಲೇಸು. ಆ ಕೀರ್ತಿಯೂ ನೀತಿಮಾರ್ಗದಿಂದಲ್ಲದೆ ಬಾರದು; ಅದುಕಾರಣ ನೀನು ಇಲ್ಲಿಯಿರಬ್ಯಾಡ ತೆರಳಿಹೋಗದೆಇದ್ದರೆ ನಾಳಿನುದಯಕ್ಕೆ ತನ್ನ ಮಾತು ನೆನಪಾಧೀತು ಇಂತೆಂದು ಪ್ರಿಯಳು ಹೇಳಲು, ದೈವವಶದಿಂದ ಕೇಳದೆಇರಲು ಆಮರುದಿನ ಉದಯದಲ್ಲಿ ಆಗಿಡುಗನುಬಂದು ಉಪ್ಪರಿಗೆಯಬಾಗಿಲಲ್ಲಿ ಕುಳಿತು ಅಸ್ತ್ರಮಯ ಪರ್ಯಾಂತರವು ತನಗೆ ಆಹಾರವಂ ತಂದುಕೊಂಡು ಮಾರ್ಗವಂ ಕಟ್ಟಿಕೊಂಡು ಮಹಾಕ್ರೂರದೃಷ್ಟಿಯಿಂದ ಆ ಪಕ್ಷಿಗಳಿಗಿಂತೆಂದುದು—ಎಲೆ ಪೌರುಷಹೀನನೆ! ಅಧಮನೆ! ಎನ್ನೊಡನೆ ಯುದ್ಧವಂ ಮಾಡಿ ಎನ್ನ ಹೊರಡಿಸು, ಅಲ್ಲದೆ ನೀನಾದರು ಎನ್ನ ಜಯಿಸಿಹೊರಟುಹೋಗು, ವೃಥಾ ಉಪವಾಸವಿಂ ನೊಂದು ಕಾಳಗಕ್ಕೆ ಬಾರದೆ ನರಕಕ್ಕೆ ಹೋಗಬ್ಯಾಡ, ನೀವಿಬ್ಬರು ನಾನೊಬ್ಬನೆ ಜಯಾಪಜಯಂಗಳು ಆರಿಗೋ ಕಾಣೆನವು, ತಾವು ಸ್ವಮಾರ್ಗಕ್ಕೋಸ್ಕರ ಯುದ್ಧವಂ ಮಾಡಲು ಮಾರ್ಗಸಾಧನವಾಧೀತು ಇಲ್ಲವೆಪೋಧೀತು, ಒಂದುಪ್ರಯೋಜನವಂ ಕುರಿತು ಯುದ್ಧವಂ ಮಾಡಿದರೆ ಅವರು ಮಾಡಿದ ಕರ್ಮಫಲಕ್ಕೆ ತಕ್ಕಹಾಗೆ ದೈವಸಹಾಯವಹುದು, ಹೀಗೆಂದು ನುಡಿದ ಗಿಡುಗನ ವಾಕ್ಯವಂ ಕೇಳಿ ಆ ಪಾರಿವಾಳವು ದುರ್ಗದಬಾಗಿಲಲ್ಲಿನಿಂತು ಯುದ್ಧವಂ ಮಾಡಿ ಹಸಿವು ಬಾಯಾರಿಕೆಇಂದ ಬಳಲಿಇರಲು, ಆ ಗಿಡುಗನು ಮೇಲುವಾಯ್ದು ತನ್ನ ಕಾಲಲ್ಲಿ ಪುರುಷಪಕ್ಷಿಯಂ ಬಾಯಲ್ಲಿ ಸ್ತ್ರೀಪಕ್ಷಿಯಂ ಪಿಡಿದುಕೊಂಡು ಆಕಾಶಮಾರ್ಗಕ್ಕೆ ಅಡರಿ ತಾನಿಲ್ಲುವವಕ್ಕೆ ಇತರಪಕ್ಷಿಯ ಭಯವಿಲ್ಲದ ಸಂಬಾಧಸ್ಥಳವಂ ಚಿಂತಿಸುತ್ತಿರಲು! ಆಗಲು ಆ ಸ್ತ್ರೀಪಕ್ಷಿ ತನ್ನ ಪುರುಷಗೆ ಇಂತೆಂದುದು ಎಲೆ ಪ್ರಾಣನಾಥನೆ ! ತಾನು ಸ್ತ್ರೀಬಾಲಿಶ್ಯಳೆಂದು ಎನ್ನ ಮಾತು ಪರಾಕುಮಾಡಿದಿರಿ ಅದುಕಾರಣ ನಿಮಗೆ ಇಂಥಾ ಅವಸ್ಥೆ ಬಂತು ತಾವುಮಾಡುವದೇನು ಇನ್ನಾದರು ಎನ್ನ ಮಾತು ಕೇಳಿದರೆ ಮೂಢತೆಯ ಮಾತುಕೇಳಿದನು ಎಂಬ ಅಪಕೀರ್ತಿ ಬಾರದು, ಈ ಗಿಡುಗನು ಭೂಮಿಯತ್ತ ಮೇಲೆ ಕುಳಿತಾಗಲೆ ಎನ್ನ ಬಿಟ್ಟುಬಿಡುವನು ಕೊಂಡವನು ಭೂಮಿಯನ್ನು ಕುಳ್ಳಿರುವದಕ್ಕೆ ಮೊದಲೇ ನೀನು ಇವನ ಕಾಲಂ ಬಾಯಿಂ ಕಚ್ಚು ಎಂದು

ತಪಸ್ಸಂಜ್ಞಾಮಾತಿನಿಂದ ಸಂಜ್ಞೆಯಂ ಮಾಡಲು, ಆ ಮಾತಂ ಕೇಳಿ ಆ ಪಾರಿವಾಳದ ಪುರುಷಪಕ್ಷಿ ಆ ಗಿಡುಗನ ಕಾಲಂ ಘಟ್ಟಿಯಾಗಿ ಘಾಯವಾಗುವಹಾಗೆ ಕಚ್ಚಲು ಆ ನೋವಿಗೆ ಕಾಲಂ ಸಡಲಿಸಿಕೂಗಿಬಾಯಿಬಿಡಲು ಎರಡುಪಕ್ಷಿಗಳುಂ ಬಿಡಿಸಿಕೊಂಡು ಅತಿಶೀಘ್ರದಿಂದಹಾರಿಹೋದವು, ಅದು ಕಾರಣ ಆಪತ್ತುಬಂದಾಗ ಸ್ತ್ರೀಯಾದರು ಚಿಂತೆಯಿಲ್ಲ ವಿವೇಕಿಗಳಮಾತಕೇಳಬೇಕು, ತನ್ನ ಧೈರ್ಯದಿಂ ಆಗುವ ಯತ್ನಗಳಂ ಬಿಡಲಾಗದು, ಸತ್ಯವಾಗಿ ಕಚ್ಚಿರುವ ಗಿಡುಗನಮೂತಿಯತ್ತ ಇರುಕಿಕೊಂಡ ಪಾದಗಳೆತ್ತ ಅದುಬಿಡಿಸಿಕೊಂಬುವ ಪಾರಿವಾಳದ ಪಕ್ಷಿಗಳೆತ್ತ ಇದಕೆ ಮಹಾಶ್ಚರ್ಯವೆ? ಲೋಕದಲ್ಲಿ ಆವನಾನೊಬ್ಬನು ತಾನುಬಲಹೀನನಾದರೂ ಧೈರ್ಯದಿಂದ ಉದ್ಯೋಗವಂಮಾಡಲು ಕಡೆಯಲ್ಲಿ ದೈವವೆಬಲಪಡುವುದು, ಅದುಕಾರಣ ದೈವಯೋಗದಿಂ ಉದ್ಯೋಗವು ಫಲಿಸುವದು, ಅನಂತರದಲ್ಲಿ ಪಾರಿವಾಳದ ಪಕ್ಷಿಗಳು ತನ್ನಪ್ರಾಣವಂರಕ್ಷಿಸಿಕೊಂಡು ಅಯೋಧ್ಯಾಪಟ್ಟಣದ ಬಳಿಯಲ್ಲಿಹ ಸರಯೂನದೀತೀರದಲ್ಲಿ ಸೇರಿಕೊಂಡು ಇದು ಮುಕ್ತಿಕ್ಷೇತ್ರವಾದ ಅಯೋಧ್ಯಾಪಟ್ಟಣದಲ್ಲಿ ಮೃತವಾಗಿ ಆ ಪುರುಷಪಕ್ಷಿ ಮಂದಾರದಾಮನೆಂಬ ವಿದ್ಯಾಧರನ ಕುಮಾರನಾಗಿ ಪರಿಮಳಾಲಯನೆಂಬ ಹೆಸರಿನಿಂ ಪುಟ್ಟಿ ಸಕಲಕಳಾಪ್ರವೀಣನಾಗಿ ಬಾಲ್ಯದಲ್ಲಿಯೆ ಶಿವಭಕ್ತನಾಗಿ ಏಕಪತ್ನೀವ್ರತನೆಂದು ನೇಮವಂಮಾಡಿಕೊಂಡನು, ಹಾಗೆ ಆಹುದಲ್ಲ, ಲೋಕದಲ್ಲಿ ಪರಸ್ತ್ರೀಸಂಪರ್ಕವು ಆಯುಷ್ಯ ಕೀರ್ತಿ ಬಲ ಸುಖ ಸ್ವರ್ಗ ಮೋಕ್ಷಂಗಳಂ ಕೆಡಿಸುವದಾದಕಾರಣ ಪ್ರಾಜ್ಞನಾದ ಪುರುಷನು ಪರಸ್ತ್ರೀಯರನ್ನು ಕಣ್ಣಿಲ್ಲಿನೋಡನು, ಅದುಕಾರಣದೆ ಪರಿಮಳಾಲಯನೆಂಬ ವಿದ್ಯಾಧರನು ಮತ್ತು ಆತನಜನ್ಮಾಂತರದ ಪುಣ್ಯದಿಂದ ಜಾತಿಸ್ಮರತ್ವಹುಟ್ಟಿ ಜನ್ಮಾಂತರದಲ್ಲಿ ತನಗೆ ತ್ರಿಲೋಚನೇಶ್ವರನ ಪೂಜೆಯಿಂಬಂದ ಪುಣ್ಯದಿಂದಲೆ ಸಕಲಧರ್ಮಕ್ಕೆ ಆಸ್ಪದವಾದ ಶರೀರಉಂಟಾಯಿತು ಅದುಕಾರಣ ವ್ಯಾಧಿಜ್ವರಗಳಿಲ್ಲದೆ ಶರೀರಘಟ್ಟಿಯಾಗಿರುವತನಕ ಇನ್ನು ಕಾಶಿಯಲ್ಲಿಹ ತ್ರಿಲೋಚನೇಶ್ವರನ ಪೂಜೆಯಂಮಾಡದೆ ಅನ್ನೋದಕವಂ ಕೊಳ್ಳೆನೆಂದು ನಿಯಮವಂ ಮಾಡಿಕೊಂಡು ನಿತ್ಯವು ಮಾ

ಯುವೇಗದಿಂ ಕಾಶೀಕ್ಷೇತ್ರಕ್ಕೆ ಬಂದು ತ್ರಿಲೋಚನೇಶ್ವರನಂ ಪೂಜಿಸಿಹೋಗುತ್ತಿಹನು. ಆ ಸ್ತ್ರೀಪಕ್ಷಿಯು ಪಾತಾಳದಲ್ಲಿ ರತ್ನದೀಪನೆಂಬ ನಾಗರಾಜಂಗೆ ರತ್ನಾವಳಿಯೆಂಬ ಹೆಸರಿನ ಕುಮಾರಿಯಾಗಿ ಸಕಲ ನಾಗಕನ್ಯೆಯರು ಕುಲಶೀಲರೂಪಲಾವಣ್ಯಾದಿಂದ ಅಧಿಕವಾಗಿ ಹುಟ್ಟಿದಳು, ಆಕೆಗೆ ಪ್ರಭಾವತಿ ಕಳಾವತಿ ಎಂಬಿಬ್ಬರು ಸಖಿಯರುಂಟು, ಆ ರತ್ನಾವಳಿಯು ಪ್ರತಿದಿನವು ತ್ರಿಲೋಚನೇಶ್ವರನ ಕೃಪೆಯಿಂ ಜಾತಿಸ್ಮರಣೆವೃತ್ತಿ ತ್ರಿಲೋಚನೇಶ್ವರನ ಪೂಜೆಯಂ ಮಾಡದೆ ಮಾತನಾಡುವದಿಲ್ಲವೆಂದು ಮೌನವ್ರತವ ಮಾಡಿಕೊಂಡು ನಿಯಮದಿಂದ ಯೌವನಸ್ಥೆ ಆ ಸಖಿಯರು ಸಹ ಪ್ರತಿದಿನವು ಪಾತಾಳದಿಂ ಕಾಶಿಗೆ ಬಂದು ತ್ರಿಲೋಚನೇಶ್ವರನಿಗೆ ಪರಿಮಳ ಪುಷ್ಪಮಾಲಿಗಳಂ ಸಮರ್ಪಣೆಯಂ ಮಾಡಿ ಪೂಜಿಸಿ ತಾವು ಮೂವ್ವರೂ ಗಾಂಧಾರಸ್ವರದಿಂ ಗಾನವಂ ಮಾಡುತ್ತ ಮಂಡಲಾಕಾರದಿಂ ನೃತ್ಯವಂ ಮಾಡುತ್ತ ವೀಣೆ ಕೊಳಲು ಮದ್ದಲೆಗಳಂ ಲಯತಾಳಭೇದವನರಿತು ನುಡಿಸುತ್ತ ತ್ರಿಲೋಚನೇಶ್ವರನ ರಂಗಮಂಟಪದಲ್ಲಿ ನಾರಣೆ ಕಾರಣೆ ರಂಗವಲ್ಲಿಗಳ ರಚಿಸಿ ತಮ್ಮ ಮನೆಗೆ ಹೋಗುತ್ತಿಹರು, ಈ ರೀತಿಯಲ್ಲಿ ಇರುತ್ತಿರಲು, ಒಂದಾನೊಂದು ದಿನ ವೈಶಾಖಶುದ್ಧ ತದಿಗೆಯಲ್ಲಿ ಉಪವಾಸವಿದ್ದು ರಾತ್ರಿ ನೃತ್ಯಗೀತವಾದ್ಯವೆಂಬ ತೌರ್ಯತ್ರಯದಿಂ ಜಾಗರಣೆಯಂ ಮಾಡಿ ಮರುದಿನ ಉದಯದಲ್ಲಿ ಅಸಿನದೀತೀರದಲ್ಲಿಹ ಪಿಲಿಪಿಲಾತೀರ್ಥದಲ್ಲಿ ಸ್ನಾನವಂ ಮಾಡಿ ತ್ರಿಲೋಚನೇಶ್ವರನ ಪೂಜಿಸಿ ಬಳಿಕ ರಂಗಮಂಟಪದಲ್ಲಿ ಮಲಗಿರಲು, ಚಂದ್ರಭೂಷಣನಾದ ಕರ್ಪೂರದಂತೆ ಶುಭ್ರವಾದ ದೇಹವುಳ್ಳ ಜಡೆಗಳಂ ಧರಿಸುವ ನೀಲಕಂಠನಾದ ನಾಗಭೂಷಣನಾದ ವಾಮಾಂಗದಲ್ಲಿ ಮಹಾದೇವಿಯುಳ್ಳ ಸರ್ಪಯಜ್ಞೋಪವೀತನಾದ ಮಹಾದೇವನು ತ್ರಿಲೋಚನೇಶ್ವರನ ಲಿಂಗದಿಂ ಹೊರಮಟ್ಟು ಬಂದು ಮಲಗಿದ್ದ ಬಾಲಕಿಯರನ್ನು ಏಳಿ ಎಂದು ನುಡಿಯಲು ಅವರೆದ್ದು ಕಣ್ಗಳಂ ಒರಸಿಕೊಂಡು ಮೈಮುರಿದು ಆಕಳಿಸಿ ಬೆಚ್ಚಿದಂತೆ ನೋಡುವ ಸಮಯದೊಳು ಮುಂದಿರ್ದ ತ್ರಿಲೋಚನನಾದ ಮಹಾದೇವನಂ ಕಂಡು ಸಾಷ್ಟಾಂಗನಮಸ್ಕಾರವಂ ಮಾಡಿ ಕೈಮುಗಿದುಕೊಂಡು ಸಂತೋಷದಿಂ ಗದ್ಗದ

ಸ್ವಾಮಿಯ ಸ್ತುತಿಸಿದನದೆಂತೆನೆ—ಜಯಶಂಭೋ! ಜಯಶರ್ವ! ಜಯಸರ್ವಗತ ಜಯಸರ್ವಪ್ರದ ಜಯತ್ರಿಪುರಸಂಹಾರಿ ಜಯಯಾಂಧಕಾರಿ ಜಯಜಾಲಂಧರಸಂಹಾರ ಜಯಕಂದರ್ಪಗರ್ವಾಪಹಾರ ಜಯತ್ರೈಲೋಕ್ಯಜನಕ ಜಯತ್ರೈಲೋಕ್ಯವರ್ಧನ ಜಯತ್ರೈಲೋಕ್ಯವಂದಿತ ಜಯಭೂತಾಧೀಶ ಜಯಪ್ರಮಥನಾಯಕ ಜಯತ್ರಿಪಥನಾಯಕ ಜಯತ್ರಿಪಥಗಾಪ್ರಕ್ಷಾಳಿತ ಜಟಾಪಟಲ ಜಯಚಂದ್ರಕಳಾಜ್ಯೋತಿರ್ವಿದ್ಯೋತಿತ ಜಗತ್ತ್ರಯ ಜಯಸರ್ಪಶಿರೋರತ್ನ ಪ್ರಭಾಭೂಷಿತವಿಗ್ರಹ ಜಯಅತಿತ್ರನಯ ಪ್ರಣಯ ಕ್ರೀಡಾರ್ಥದೇಹಕೃತ ಜಯಮಹಾಶ್ಮಶಾನನಿಲಯ ಜಯವಾರಣಾಸೀಪ್ರಿಯ ಜಯಆನಂದವನಾಧ್ಯಾಸಿ ಜಯಗೀರ್ವಾಣಪ್ರಾಣನಾಯಕ ಜಯವಿಶ್ವೇಶ ಜಯಶರ್ವಸರ್ವಪರಿವರ್ಜಿತ ಜಯನೃತ್ಯಪ್ರಿಯ ಜಯಈಶ ಜಯಉಗ್ರ ಜಯಭೀಮ ಜಯನೀತಿವಿಶಾರದ ಜಯಪ್ರಾಣಸುಧಾಮ ಜಯಧಾಮ ಜಯಮಹಾನಿಧೆ ಜಯಶೂಲಿ ಜಯವಿರೂಪಾಕ್ಷ ಪ್ರಣತಸರ್ವಾರ್ತ್ತ ಎಲೈಸ್ವಾಮಿ ಬ್ರಹ್ಮನುಸರ್ವರನ್ನು ಬಲ್ಲವನಾದರೂ ನಿಮ್ಮಸ್ತುತಿಸಲರಿಯನು, ಬೃಹಸ್ಪತಿಯೂ ನಿಮ್ಮ ಸ್ತುತಿಸಲು ಸಮರ್ಥನಲ್ಲ, ದೇವತೆಗಳು ಸ್ತುತಿಸಲರಿಯರು, ವೇದಗಳು ನಿಮ್ಮಸ್ವರೂಪವನರಿಯವು, ಮನಸ್ಸು ಜನನಮರಣವಿಲ್ಲದ ನಿಮ್ಮನ್ನೆನೆಯಲರಿಯದು, ಅಂಥ ಮಹಾಮಹಿಮನಾದ ನಿಮಗೆ ಮತ್ತೆ ಪುತ್ತುನಮಸ್ಕಾರ, ತ್ರಿಲೋಚನ ತ್ರಿವಿಷ್ಟಪ ಮಹೇಂದ್ರವಂದ್ಯ ತ್ರಾಹಿತ್ರಾಹಿ ಎಂದು ಸ್ತುತಿಸಿ ನಮಸ್ಕರಿಸಲು, ಪರಮೇಶ್ವರನು ಅವರ ಮೂವರನ್ನು ಕುರಿದೆತ್ತಿ ಪ್ರೀತನಾಗಿ ಇಂತೆಂದನು ಎಲೆಬಾಲಕಿಯರ ಮಂದಾರದಾಮನಕಾವರನಾದ ಹರಿವಾಹನನೆಂಬ ವಿದ್ಯಾಧರನು ನಿಮಗೆಪತಿಯಾದನು. ನೀವು ವಿದ್ಯಾಧರಲೋಕದಲ್ಲಿ ಬಹು ಭೋಗಗಳನನುಭವಿಸಿ ಅಂತ್ಯದಲ್ಲಿ ವಿರಕ್ತರಾಗಿ ಕಾಶಿಯಲ್ಲಿಯೆ ಮೋಕ್ಷವನ್ನೈದಿರಿ ನೀವು ಮೂವರು ಆ ವಿದ್ಯಾಧರನು ಎನ್ನ ಭಕ್ತನಾದಕಾರಣ ಶೀಘ್ರದಲ್ಲಿಯೆ ಮುಕ್ತಾರಾಧೀಶ ನೀವು ಜನ್ಮಾಂತರದಲ್ಲಿಯೂ ಎನ್ನನೇ ಪೂಜಿಸಿದಕಾರಣ ನಿರ್ಮಲಚಿತ್ತರಾಗಿ ಭಜಿಸಿದ ಈ ಶರೀರದೊಳಗಿತ್ತು; ಅಲ್ಲದೆ ಈ ಸ್ತೋತ್ರವನ್ನು

ನಿತ್ಯವು ಪಠಿಸುವರ್ಗೆ ನಿಮಗೆಕೊಟ್ಟಂತೆ ಇಷ್ಟಾರ್ಥಗಳನೀವೆನು ತಪ್ಪದು ಪ್ರಾತಃಕಾಲದಲ್ಲಿ ಈಸ್ತೋತ್ರವಪಠಿಸಲು ರಾತ್ರಿಮಾಡಿದ ಪಾಪಹರ, ಸಾಯಂಕಾಲದಲ್ಲಿ ಪಠಿಸಲುದಿವಸದಲ್ಲಿ ಮಾಡಿದಪಾಪಹರ ಎಂದು ಈರೀತಿಯಲ್ಲಿ ಪರಮೇಶ್ವರನಿರೂಪಿಸಲು; ಆ ರತ್ನಾವಳಿ ಪ್ರಭಾವತಿ ಕಳಾವತಿ ಮೂವರು ಸಂತೋಷದಿಂ ಕೈಮುಗಿದು ಇಂತೆಂದುಬಿನ್ನೈಸಿದರು, ಎಲೆ ಕರುಣಾಕರನಾದ ಸ್ವಾಮಿಯೆ! ನಾವು ಜನ್ಮಾಂತರದಲ್ಲಿ ನಿಮ್ಮಸೇವೆಯಂ ಮಾಡಿದ್ದೆವು ನಮಗೆಪತಿಯಾದ ವಿದ್ಯಾಧರನು ಮಾಡಿದಪುಣ್ಯವೇನು ? ಎನ್ನಸಖಿಯರಾದ ಈ ಪ್ರಭಾವತಿ ಕಳಾವತಿಯರು ಮಾಡಿದಸುಕೃತವೇನು! ಈ ವೃತ್ತಾಂತವಂ ನಮಗೆ ಬುದ್ಧಿಗಲಿಸಬೇಕೆಂದು ರತ್ನಾವಳಿ ಬಿನ್ನೈಸಲು, ಪರಮೇಶ್ವರನು ನಿರೂಪಿಸುವನು ಎಲೆ ನಾಗಕನ್ಯೆಯರ ! ಈರತ್ನಾವಳಿಯು ಪೂರ್ವದಲ್ಲಿ ಪಾರಿವಾಳದಸ್ತ್ರೀಪಕ್ಷಿ ಆ ವಿದ್ಯಾಧರನು ಪುರುಷಪಕ್ಷಿ ಇವರಿಬ್ಬರು ಈ ಉಪ್ಪರಿಗೆಯಲ್ಲಿ ವಾಸವಂಮಾಡಿಕೊಂಡು ತಮ್ಮಗರಿಯ ಘಾಳಿಯಿಂದ ಈ ಉಪ್ಪರಿಗೆಯ ಧೂಳಕೊಡಹುತ್ತಲು ಭಕ್ತರುಮಾಡಿದ ಪೂಜೆ ಮಂಗಳಾರತಿಗಳಂ ನೋಡುತ್ತಲು ಈ ಉಪ್ಪರಿಗೆಯಮ್ಯಾಲೆ ಕೆಳಗೆ ಪ್ರದಕ್ಷಿಣವಂ ಮಾಡುತ್ತಲು ಎನ್ನದಿವ್ಯನಾಮಂಗಳಂ ಕೇಳುತ್ತಲು ಸರಸ್ವತೀಮೊದಲಾದ ನಾಲ್ಕು ತೀರ್ಥಸ್ನಾನಂಗಳಂ ಮಾಡುತ್ತಲು ಮಧುರಧ್ವನಿಯಿಂದೆನ್ನಮನಸ್ಸಿಗೆ ಸಂತೋಷವ ಮಾಡುತ್ತಲು ತಿರ್ಯಗ್ಜಂತುಗಳಾದಕಾರಣ ಎನ್ನಸನ್ನಿಧಿಯಲ್ಲಿ ಮರಣವಿಲ್ಲದೆ ಕಾಶಿಯನ್ನೈದಿಸುವಂಥ ಮೋಕ್ಷರೂಪವಾದ ಅಯೋಧ್ಯೆಯಲ್ಲಿ ಮೃತವಾಗಿ ಆ ಸ್ತ್ರೀಪಕ್ಷಿಯುಪಾತಾಳದಲ್ಲಿ ರತ್ನದೀಪನೆಂಬ ನಾಗರಾಜಗೆ ಪುತ್ರಿಯಾಗಿ ರತ್ನಾವಳೀಎಂಬ ಹೆಸರಿನಿಂಪುಟ್ಟಿದಳು, ಆಪುರುಷಪಕ್ಷಿಯು ಮಂದಾರದಾಮನೆಂಬ ವಿದ್ಯಾಧರನಕುಮಾರನಾಗಿ ಪರಿಮಳಾಲಯನೆಂಬ ಹೆಸರಿನಲ್ಲಿ ಪುಟ್ಟಿದನು, ಪ್ರಭಾವತಿ! ಕಳಾವತಿ! ನೀಪೂರ್ವದಲ್ಲಿ ನಾರಾಯಣನೆಂಬ ಋಷಿಗೆ ಭವಾನಿ ಗೌತಮಿ ಎಂಬ ಕುಮಾರತಿಯರಾಗಿ ಪುಟ್ಟಿದಿರಿ, ಮಹಾಸ್ನೇಹವುಳ್ಳವರು ಶೀಲವಂತರು ನಿಮ್ಮತಂದೆ ನಾರಾಯಣಋಷಿ ಯೌವನಸ್ಥೆಯರಾದ ತನ್ನಮಕ್ಕಳಾದ ನಿಮ್ಮನು ನಾರಾಯಣನೆಂ

ಬ್ಬ ಹೆಸರುಳ್ಳ ಋಷಿಗೆ ವಿವಾಹವಾದಳು, ಆತನು ಹಿಂದಾನೊಂದು ದಿನ
ಹೋಮಕ್ಕೆ ಸಮಿದ್ದರ್ಭೆ ಕಂದ ಮೂಲ ಫಲ ಪತ್ರ ಹವಕ್ಕೆ ಹೋಗಿ ಅರಣ್ಯ
ದಲ್ಲಿ ಸರ್ಪದಷ್ಟನಾಗಿ ಮೃತನಾಗಲು ಆತನ ಸ್ತ್ರೀಯರಾದ ಭವಾಸಿ
ಗೌತಮಿ ಎಂಬ ಇಬ್ಬರೂ ವೈಧವ್ಯವನೈದಿ ಪಿಶಾಚಗ್ರಸ್ತರಾದರು, ಅದು
ಕಾರಣ ದೇವತೆಗಳ ನದಿಗಳ ಪರ್ವತಗಳ ವೃಕ್ಷಗಳ ನಾಮವುಳ್ಳ ಕನ್ಯಕೆ
ಗಳನ್ನು ವಿವಾಹವಾಗಬಾರದು, ಅನಂತರದಲ್ಲಿ ಆ ವಿಧವೆಯರಿಬ್ಬರು ಒಬ್ಬ
ಋಷಿಯ ಆಶ್ರಮದಲ್ಲಿ ಬಾಳೇಹಣ್ಣು ಕದ್ದರು, ತಾವು ಮಾಸೋಪವಾಸಿಗ
ಳಾಗಿ ವ್ರತಗಳ ಮಾಡಿದ್ದರೂ ಫಲಪತಸ್ಕರದೋಷದಿಂದ ಮರ್ಕಟಗಳಾಗಿ
ಪುಟ್ಟಿ ತಮ್ಮ ವಿಲಾಸಾರ್ಥವಾಗಿ ಸರಸ್ವತಿ ಮೊದಲಾದ ನಾಲ್ಕು ತೀರ್ಥಗಳ
ಲ್ಲಿಯೂ ಮುಳುಗಿ ಆ ತೀರ್ಥೋದಕಪಾನಮಂ ಮಾಡುತ್ತ ತನ್ನ ಜಾತಿಸ್ವ
ಭಾವ ಚಂಚಲದಿಂದ ಈ ತ್ರಿಲೋಚನೇಶ್ವರಸ್ವಾಮಿಗೆ ಪ್ರದಕ್ಷಿಣವಾಗಿ ತಿ
ರುಗುತ್ತ ಆ ಸಮೀಪದ ಆಲದ ಮರದಲ್ಲಿ ವಾಸವಾಗಿರಲು, ಒಬ್ಬ ಜೋಗಿ
ಆ ಮರ್ಕಟಂಗಳಂ ಹಿಡಿದು ಹಗ್ಗದಿಂ ಕಟ್ಟಿಕೊಂಡು ಕುಣಿದಾಡಿಸಿ ಹೊ
ಟ್ಟೆಯಂ ಹೊರೆವುತ್ತಿರಲು, ಕೆಲವು ಕಾಲದ ಮೇಲೆ ಮತ್ತೊಂದು ದೇಶಾಂ
ತರದಲ್ಲಿ ಆ ಮರ್ಕಟಂಗಳು ಮೃತವಾಗಿ ಮುನ್ನ ಮಾಡಿದ ಕಾಶೀವಾಸಫ
ಲದಿಂದಲು ತ್ರಿಲೋಚನೇಶ್ವರಗೆ ಮಾಡಿದ ಪ್ರದಕ್ಷಿಣಪುಣ್ಯದಿಂದಲು ಅತ್ಯಂ
ತ ಸೌಂದರ್ಯವುಳ್ಳವರಾದ ನಾಗಕನ್ಯೆಯರಾಗಿ ಪುಟ್ಟಿ ನಿನ್ನ ಸಖಿಯರಾಗಿ ಇ
ವರಿಬ್ಬರು ಸಹಾ ನೀನು ಮೂವರು ಆ ವಿದ್ಯಾಧರನ ಮದುವೆಯಾಗಿ ದಿ
ವ್ಯಭೋಗಂಗಳ ನನುಭವಿಸಿ ಈ ಕಾಶಿಯಲ್ಲಿ ಮುಕ್ತರಾಗಿ ಎನ್ನೆನ್ನೈದೀ
ರಿ, ಈ ಕಾಶೀಕ್ಷೇತ್ರದಲ್ಲಿ ಅಲ್ಪವಾಗಿ ಪುಣ್ಯಗಳ ಮಾಡಿದರು ಮೋಕ್ಷವುಂ
ಟು, ಸ್ವರ್ಗ ಮರ್ತ್ಯ ಪಾತಾಳ ಇವು ಮೂರು ಲೋಕಗಳಲ್ಲಿಯು ಕಾಶೀ
ಕ್ಷೇತ್ರವೆ ಅಧಿಕವು, ಅದರೊಳು ಓಂಕಾರೇಶ್ವರನು ಅಧಿಕ, ಅದಕ್ಕಿಂತಲು
ಈ ತ್ರಿಲೋಚನೇಶ್ವರನೆ ಅಧಿಕ, ಈ ತ್ರಿಲೋಚನೇಶ್ವರನಲ್ಲಿ ತಾನೇ ಇದ್ದು
ಭಕ್ತರ್ಗೆ ಮುಕ್ತಿಯನೀವೆನು, ಅದರಿಂದ ಅವಶ್ಯವಾಗಿ ತ್ರಿಲೋಚನೇಶ್ವ
ರನ ಪೂಜೆಯಂ ಮಾಡಬೇಕು ಎಂದು ಪರಮೇಶ್ವರನು ಬುದ್ಧಿಗಲಿಸಿ ಆ
ಲಿಂಗದಲ್ಲಿಯೆ ಐಕ್ಯನಾದನು, ಆ ಕನ್ಯೆಯರು ತಮ್ಮ ಮನೆಗಳಿಗೆ ಹೋಗಿ

ತಮ್ಮತಾಯಿತಂದೆಗಳಕೂಡೆ ಈ ವೃತ್ತಾಂತವಂ ಪೇಳಿ ಈರೀತಿಯಲ್ಲಿ ಪ್ರತಿದಿವಸವು ಕಾಶಿಗೆಬಂದು ತ್ರಿಲೋಚನೇಶ್ವರನಸೇವೆಯಂಮಾಡಿ ಪೋಗುತ್ತಿರಲು; ಒಂದು ವೈಶಾಖಮಾಸದಲ್ಲಿ ಜಾತ್ರೆಗೆಬಂದ ವಿದ್ಯಾಧರರುಪಾತಾಳವಾಸಿಗಳೆಲ್ಲರುಕೂಡಿ ತಮ್ಮೊಳುತಾವು ಪ್ರಸಂಗವಂಮಾಡಿ ಕುಲಗೋತ್ರಂಗಳಂ ತಿಳಿದು ಸ್ವಾಮಿಕೊಟ್ಟ ವರದಿಂದ ಮಂದಾರದಾಮನೆಂಬ ವಿದ್ಯಾಧರನ ಕುಮಾರನಾದ ಪರಿಮಳಾಲಯನೆಂಬ ವಿದ್ಯಾಧರಗೆ ಈ ನಾಗಕನ್ಯೆಯರಾದ ರತ್ನಾವಳೀ ಪ್ರಭಾವತಿ ಕಳಾವತಿಯರೆಂಬ ಮೂವರು ಕನ್ಯೆಯರನ್ನು ವಿವಾಹವಂಮಾಡಲು, ಮಂದಾರದಾಮನು ತನಗೆಮೂವರು ಸೊಸೆಯರಾದರೆಂದು ಸಂತೋಷಪಟ್ಟನು, ರತ್ನಾವಳಿಯತಂದೆರತ್ನದೀಪನು, ಪ್ರಭಾವತೀತಂದೆ ಪದ್ಮೀಎಂಬವನು, ಕಳಾವತೀತಂದೆ ತ್ರಿಶಿಖನೆಂಬವನು, ಈ ಮೂವರು ಸಂತೋಷಪಟ್ಟರು. ಮಹಾಪುರುಷನಾದ ಪರಿಮಳಾಲಯನೆಂಬ ಅಳಿಯನಿಗೆ ಮಹಾಉತ್ಸಹವಂಮಾಡಿ ತಮ್ಮ ಮಕ್ಕಳಿಗೆ ಅನೇಕವಾದ ಅನರ್ಘ್ಯರತ್ನಗಳಂ ಬಳುವಳಿಯಂಕೊಟ್ಟು ಅವರು ತಮ್ಮತಮ್ಮ ನಿಜಸ್ಥಾನಗಳಿಗೆ ಹೋದರು. ಪರಿಮಳಾಲಯನೆಂಬ ವಿದ್ಯಾಧರನು ತ್ರಿಲೋಚನೇಶ್ವರನ ಪೂಜೆಯಂ ಮಾಡಿದಫಲದಿಂದ ತನಗೆ ಇಂಥಾಫಲವಾಯಿತೆಂದು ಆತನು ತನ್ನ ಮೂವರು ಸ್ತ್ರೀಯರೊಡನೆ ಬಹುಕಾಲ ಸುಖದಲ್ಲಿರ್ದು ಆಮೇಲೆಕಾಶಿಗೆಬಂದು ಅಲ್ಲಿಯೆವಾಸವಾಗಿ ತ್ರಿಲೋಚನೇಶ್ವರನ ಪೂಜೆಯಂಮಾಡಿಕೊಂಡು ನಿತ್ಯವು ದಿವ್ಯಗಾನವಂ ಮಾಡಿಕೊಂಡಿದ್ದು ಆಮೇಲೆ ತನ್ನಮೂವರು ಸ್ತ್ರೀಯರೂ ಸಹಾ ತ್ರಿಲೋಚನೇಶ್ವರನಲ್ಲಿಯೆ ಐಕ್ಯವಾದರು, ಕೇಳೈ ಅಗಸ್ತ್ಯ ! ತ್ರಿಲೋಚನೇಶ್ವರನ ಮಹಿಮೆಯನ್ನು ಪರಮೇಶ್ವರನು ಕಲಿಯುಗದಲ್ಲಿ ಗೋಪ್ಯವಮಾಡಿದಕಾರಣ ಮನುಷ್ಯರು ಅರಿಯರು, ಈ ಮಹಿಮೆಯಂ ಕೇಳಿದಜನರು ಪಾಪಿಗಳಾದರೂ ಪಾಪವಂಪರಿಹರಿಸಿಕೊಂಡು ಉತ್ತಮಗತಿಯನೈದುವರು ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವನ್ನು ವ್ಯಾಸರು ತನಗರುಹಿದರು ಎಂದು ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಪೇಳ್ದನೆಂಬಲ್ಲಿಗೆ ಎಪ್ಪತ್ತಾರನೆ ಅಧ್ಯಾಯಾರ್ಥ

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಾಂದಪುರಾಣೋಕ್ತ ಕಾಶೀ ಮಹಿಮಾರ್ಥದರ್ಪಣದಲ್ಲಿ ಪಾರಿವಾಳದ ಪಕ್ಷಿಗಳಿಗೆ ಕಳಾವತಿ ಪರಿಮಳಾಲಯನೆಂಬ ಜನ್ಮಬಂದ ವೃತ್ತಾಂತವಂ ಪೇಳ್ದ ಎಪ್ಪತ್ತಾರನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ

ಎಪ್ಪತ್ತೇಳನೇಅಧ್ಯಾಯ ಕೇತಾರೇಶ್ವರನಮಹಿಮೆ.

ಶ್ರೀವಿಶ್ವೇಶ್ವರಾಯನಮಃ ॥ ॥ಅನಂತರದಲ್ಲಿ ಪರಮೇಶ್ವರಂಗೆ ಪಾರ್ವತೀದೇವಿಯರಿಂತೆಂದು ಬಿನ್ನೈಸಿದರು, ಎಲೈ ಕರುಣಾಳುವಾದಸ್ವಾಮಿಯೆ ! ತ್ರಿಲೋಚನೇಶ್ವರನ ಮಹಿಮೆಯಂ ಕೇಳಿ ಮಹಾಸಂತೋಷವಾಯಿತು, ಇನ್ನು ಕೇತಾರೇಶ್ವರನ ಮಹಿಮೆಯಂ ನಿರೂಪಿಸಬೇಕೆಂದನಲು, ಪರಮೇಶ್ವರನಿಂತೆಂದನು, ಎಲೆ ದೇವಿಯೆ ಕೇಳು, ಮೃಡಾನೀ ಕೇತಾರೇಶ್ವರನಮಹಿಮೆಯಂ ಕೇಳಿದಮಾತ್ರದಲ್ಲಿಯೆ ಪಾಪಿಷ್ಠರಾದರೂ ಪುಣ್ಯಾತ್ಮರಹರು, ಕೇತಾರಕ್ಕೆ ಹೋದೇನೆಂದು ನುಡಿದಮಾತ್ರದಲ್ಲಿಯೆ ಜನ್ಮದೊಳಗಾಗಿ ಮಾಡಿದಪಾಪಹರ, ಕೆಲವುಮಾರ್ಗವಂ ನಡೆಯಲು ಮೂರುಜನ್ಮದಪಾಪಹರ, ಸಾಯಂಕಾಲಸಮಯದಲ್ಲಿ ನಿತ್ಯವು ಕೇತಾರೇಶ್ವರವೆಂದು ಹೆಸರುಗೊಳ್ಳಲು ಕೇತಾರಕ್ಕೆ ಹೋದಫಲವುಂಟು, ಕೇತಾರಕ್ಕೆ ಹೋಗಿ ಶಿಖರದರ್ಶನವಂ ಮಾಡಲು ಏಳುಜನ್ಮದಪಾಪಹರ, ಅಲ್ಲಿಹ ಶೀತೋದಕಕೊಳದೊಳಗೆ ಉದಕಪಾನವಂ ಮಾಡಲು ಅನೇಕಜನ್ಮದ ಪಾಪಹರವಾಗಿ ಶಿವಸಾಯುಜ್ಯವನೈದುವರು, ಪುನರ್ಜನ್ಮವಿಲ್ಲ, ಅಲ್ಲಿ ಪಾಪಹರತೀರ್ಥವಿದ್ದೀತು ಆ ತೀರ್ಥದಲ್ಲಿ ಸ್ನಾನವಂ ಮಾಡಿ ಕೇತಾರೇಶ್ವರದರ್ಶನವಂ ಮಾಡಲು ಕೋಟಿಜನ್ಮಪಾಪಹರ, ಒಮ್ಮೆ ಆ ತೀರ್ಥದಲ್ಲಿ ನಿತ್ಯಕರ್ಮಗಳಂ ಮಾಡಿ ಕೇತಾರೇಶ್ವರಗೆ ನಮಸ್ಕಾರವಂ ಮಾಡಲು ಹೃದಯದಲ್ಲಿಹ ಲಿಂಗರೂಪವಂ ತಾಳ್ದು ಮುಕ್ತನಹನು, ಆ ತೀರ್ಥದಲ್ಲಿ ಶ್ರಾದ್ಧಾದಿಗಳಂ ಮಾಡಲು ಏಳುತರದ ಉಭಯತರದ ಪಿತೃಗಳು ತೃಪ್ತರಾಗಿ ಆ ಪುಣ್ಯದಿಂ ಎನ್ನಲೋಕವನೈದುವರು, ಭಂಡಾನೆಗೊಂದುಕಲ್ಪದಲ್ಲಿ

ಆ ಕೇತಾರದಲ್ಲಿ ಆವ ಇತಿಹಾಸ ವೃತ್ತಾಂತವಂ ಪೇಳೇನು ಕೇಳು, ವಸಿಷ್ಠನೆಂಬ ಒಬ್ಬಬ್ರಾಹ್ಮಣನು ಹಿರಣ್ಯಗರ್ಭನೆಂಬ ಆಚಾರ್ಯನಿಂದ ಪಾಶುಪತವ್ರತವಂ ಮಾಡಿಕೊಂಡು ಜಟಾಧಾರಿಯಾಗಿ ಲಿಂಗಾರ್ಚನೆಯುಂ ಮಾಡುತ್ತ ವಿಭೂತಿರುದ್ರಾಕ್ಷಿಧಾರಿಗಳಾದ ಭಿಕ್ಷಾನ್ನದಿಂ ಸಂತುಷ್ಟರಾದ ರುದ್ರಾಭಿಷೇಕೋದಕವೆಂಬ ಅಮೃತದಿಂ ತೃಪ್ತರಾದಂಥ ಪಾಶುಪತ ವ್ರತಿಗಳೊಡನೆ ಸಮಾಗಮವಂ ಮಾಡಿಕೊಂಡು, ಅವರೊಳು ಮುಖ್ಯನಾಗಿ ಪ್ರತಿದಿನವು ಪ್ರಾತಃಕಾಲದಲ್ಲಿ ಹರಂಪಾಪಹರತೀರ್ಥದಲ್ಲಿ ಸ್ನಾನವಂ ಮಾಡಿಸರ್ವಾಂಗಕ್ಕೆ ವಿಭೂತಿಧಾರಣವಂ ಮಾಡಿಕೊಂಡು ತ್ರಿಕಾಲದಲ್ಲಿಯು ಈ ಲಿಂಗಾರ್ಚನೆಯುಂ ಮಾಡುತ್ತಾ ಗುರುಲಿಂಗಗಳಲ್ಲಿ ಸಮಬುದ್ಧಿಯುಂ ನೋಡುತ್ತ ಹನ್ನೆರಡುವರ್ಷದವನಾಗಿ ಈ ತನ್ನ ಆಚಾರ್ಯನುಂ ಮುಂದಿಟ್ಟುಕೊಂಡು ಕೇತಾರೇಶ್ವರನ ಯಾತ್ರೋತ್ಸವಾರ್ಥವಾಗಿ ಹಿಮವತ್ಪರ್ವತಕ್ಕೆ ಪೋದನು, ಆ ಹಿಮವಂತದಲ್ಲಿ ಸಂಸಾರದುಃಖವಿಲ್ಲ, ಆಗಿರಿಯಲ್ಲಿ ಒಂದುಬಿಂದು ಉದಕಪಾನವಂ ಮಾಡಿದ ಮಾತ್ರದಲ್ಲಿಯೆ ಲಿಂಗರೂಪರಹರು, ಅಲ್ಲಿ ವಸಿಷ್ಠನೆನಿಸುವ ಬ್ರಾಹ್ಮಣನಗುರುವು ಹಿರಣ್ಯಗರ್ಭನು ವ್ಯಾಧಿಪೀಡಿತನಾಗಿ ಪಂಚತ್ವವನೈದಲು; ಅಲ್ಲಿಇದ್ದ ತಪಸ್ವಿಗಳು ನೋಡುತ್ತಿರಲು ದಿವ್ಯವಿಮಾನದಲ್ಲಿ ಕುಳ್ಳಿರಿಸಿಕೊಂಡು ಶಿವದೂತರು ಕೈಲಾಸಕ್ಕೆ ಕರದೊಯ್ದರು, ಆವನಾನೊಬ್ಬನು ಕೇತಾರಕ್ಕೆ ಪೋಪಮಾರ್ಗದಲ್ಲಿ ಭಯಪಡದೆ ಸ್ವಾಮಿಯ ಧ್ಯಾನದಲ್ಲಿ ಪ್ರಾಣವಂತ್ಯಜಿಸಲು ಅವರು ಕೈಲಾಸದಲ್ಲಿ ಬಹುಕಾಲವಿಹರು, ಆ ವಸಿಷ್ಠನು ತಮ್ಮ ಆಚಾರ್ಯನು ಪಂಚತ್ವವನೈದಲು ಅದಂ ಕಂಡು ಮಹಾ ಆಶ್ಚರ್ಯಪಟ್ಟು ಸಮಸ್ತಲಿಂಗಗಳೊಳಗು ಕೇತಾರೇಶ್ವರನು ಶ್ರೇಷ್ಠನೆಂದು ತಿಳಿದು ನಿಶ್ಚೈಸಿ ಕೇತಾರಯಾತ್ರೆಯುಂ ಮಾಡಿ ಕಾಶೀಪಟ್ಟಣಕ್ಕೆ ಬಂದು ಇಂದುಮೊದಲು ಪ್ರತಿವರ್ಷವು ಚೈತ್ರಶುದ್ಧ ಪೌರ್ಣಮಿಯಲ್ಲಿ ಯಾವಜ್ಜೀವವು ಕೇತಾರಯಾತ್ರೆಯಂ ಮಾಡೇನು ಎಂದು ನಿಯಮವಂ ಮಾಡಿಕೊಂಡು ಅನೇಕಯಾತ್ರೆಗಳಂ ಮಾಡಿ ತಾನು ವೃದ್ಧನಾಗಿಯು ಒಂದಾನೊಂದು ಚೈತ್ರಶುದ್ಧ ಪೌರ್ಣಮಿಯಲ್ಲಿ ಕೇತಾರಯಾತ್ರಾರ್ಥವಾಗಿ ಪೋಪವರಸಂಗ

ಸ್ತೈ ಬ್ರಹ್ಮಚರ್ಯವನ್ನುಳ್ಳ ಆ ಪಾಶುಪತವ್ರತಿಗಳಿಂತೆಂದರು, ನೀನು ಪೃಥ್ವಿಯನು
ಪೂರ್ವಯಾತ್ರೆಯುಂ ಬರಲಾರದೆ, ನಡುದಾರಿಯಲ್ಲಿ ಪ್ರಮಾದವಾದರೆ ಶಕ್ಯವ
ಲ್ಲ, ನೀನು ಬರಬಾರದೆಂದು ನುಡಿಯಲು, ದೃಢಚಿತ್ತದಿಂದ ವಸಿಷ್ಠನಿಂ
ತೆಂತೆಂದನು, ನಡುದಾರಿಯಲ್ಲಿ ಮೃತನಾದರೆ ನಮ್ಮ ಗುರು ಹಿರಣ್ಯಗರ್ಭರಿ
ಗಾದ ಗತಿಯಾಗುತ್ತೆ. ದೈವವಶದಿಂದ ಕೇತಾರೇಶ್ವರನ ದರ್ಶನವಾಗಿ ಮೃ
ತನಾದರೆ ಮೋಕ್ಷವಾಗುತ್ತೆ ಎಂದು ನುಡಿದು ನಿಶ್ಚಲಚಿತ್ತವುಳ್ಳ ವಸಿಷ್ಠ
ನು ಯಾತ್ರೆಯಲ್ಲಿ ನಿದ್ರೆಗೈಯಲು, ಅವನಿಗೆ ಸ್ವಪ್ನದಲ್ಲಿ ಪರಮೇಶ್ವರನು
ಪ್ರಸನ್ನನಾಗಿ ಇಂತೆಂದನು, ಎಲೈ ವಸಿಷ್ಠನೆ! ಈ ನಾನು ಕೇತಾರೇಶ್ವರನು
ಸ್ವಪ್ನವು ಮಿಥ್ಯವಹುದು, ತಮ್ಮ ನಾಮಧೇಯಕ್ಕೆ ತಕ್ಕಹಾಗೆ ನಡೆವ
ನಿಮ್ಮಂಥಾವರ ಸ್ವಪ್ನ ಮಿಥ್ಯವಲ್ಲ, ಸ್ವಪ್ನನೆಂಬ ಚಿಂತೆಯಂ ಬಿಟ್ಟು ವಿಚಾ
ರಪಡದೆ ವರವ ಕೇಳಿಕೊ ಸತ್ಯವ್ರತಿಯಾದ ನಿನಗೆ ಕೊಡಬಾರದಂಥ ವ
ರವಿಲ್ಲ, ಹೀಗೆಂದು ನುಡಿದ ಎನ್ನವಾಕ್ಯವಂ ಕೇಳಿ ವಸಿಷ್ಠನಿಂತೆಂದನು, ಎ
ಲೈ ದೇವ! ನೀವು ವರವನೀವುದುಂಟಾದರೆ ಈಗ ನನ್ನ ಸಂಗಡ ಬಂದವರೆಲ್ಲ
ರನ್ನು ಕೃಪೆಯಿಂದ ಅನುಗ್ರಹಿಸುವದೇ ಎನಗೆ ಸಾಕ್ಷುವಾದವರ ಇಂ
ತೆಂದು ಪರೋಪಕಾರಿಯಾದ ಅವನವಾಕ್ಯವಂ ಕೇಳಿ ಸಂತೋಷದಿಂ ಎಲೈ
ವಸಿಷ್ಠನೆ! ಈ ಪರೋಪಕಾರದಿಂದ ನಿನಗೆ ಇನ್ನೊಂದು ವರವ ನೀವೆನೆ
ನಲು, ಆ ಋಷಿಯು ತನ್ನ ತಪಃಪ್ರಭಾವದಿಂದ ಇಂತೆಂದನು, ಎಲೈ ದೇವ
ನೆ! ಈ ಹಿಮಗಿರಿಯಲ್ಲಿ ಒಂದು ಕಳಾಮಾತ್ರವನಿರಿಸಿ ನಿಮ್ಮ ಸಾಕಾರರೂ
ಪಿನಿಂದ ಬಂದು ಕಾಶೀಪಟ್ಟಣದಲ್ಲಿ ಇರಬೇಕೆಂದು ವರವಂ ಬೇಡಿಕೊಂಡ
ನೆಂದು ಅದಕ್ಕೆ ಮಹಾದೇವನು ಹಾಗೆ ಆಗಲಿಯೆಂದು ವರವನಿತ್ತು ಆಮರು
ದಿವಸದಲ್ಲಿ ಹಿಮಗಿರಿಯಲ್ಲಿ ಒಂದು ಅಂಶಮಾತ್ರವನಿರಿಸಿ ಉದಯಕಾಲದ
ಲ್ಲಿ ಸಕಲ ಋಷಿಗಳು ಸ್ತೋತ್ರವಂ ಮಾಡುತ್ತಿರಲು ಆ ವಸಿಷ್ಠನ ಮೇ
ಲಣ ಕೃಪೆಯಿಂದ ಹರಂಪಾಪಹರತೀರ್ಥಸಹಾ ಬಂದು ಈ ಕಾಶಿಯಲ್ಲಿ ಇ
ದ್ದೇನೆ, ಆ ತೀರ್ಥದಲ್ಲಿ ಸ್ನಾನವಂ ಮಾಡಿ ಅಲ್ಲಿಹ ಕೇತಾರೇಶ್ವರನೆಂಬ ಎನ್ನ
ನಾರಾಧಿಸಲು ಮುಕ್ತಿಯಂ ಪಡೆವರು, ಅಂದು ಮೊದಲಾಗಿ ಈ ಲಿಂಗದಲ್ಲಿನಾ
ನು ನಿತ್ಯವಾಸವಾಗಿದ್ದೇನೆ, ಕಲಿಯುಗದಲ್ಲಿ ಹರಂಪಾಪಹರತೀರ್ಥದಲ್ಲಿ ಸ್ನಾ

ನವಂಮಾಡಿ ಆನವಿಮಾಪದಲ್ಲಿರ್ದ ಸನ್ನಸ್ವರೂಪವಾದ ಕೇತಾರೇಶ್ವರನನ್ನಾರಾಧಿಸಲು ಹಿಮವಂತಪರ್ವತದಲ್ಲಿರ್ದ ಕೇತಾರೇಶ್ವರನ ಆರಾಧಿಸಿದ ಫಲಕ್ಕಿಂತಲು ಏಳುಮಡಿಫಲವುಂಟು, ಆ ಕೇತ್ರಾರದಲ್ಲಿ ಗೌರೀತೀರ್ಥ ಮಧುಸ್ರವಯೆಂಬ ಗಂಗೆ ಮುಖ್ಯವಾಗಿ ಇಹುದು, ಆ ರೀತಿಯಲ್ಲಿ ಹರಂಪಾಪಹರತೀರ್ಥವು ಈ ಕಾಶಿಯಲ್ಲಿ ಮಹಾಶ್ರೇಷ್ಠವಾಗಿ ಇಹುದು ಅಲ್ಲಿಸ್ನಾನವಂಮಾಡಲು ಏಳುಜನ್ಮದಪಾಪಹರ, ಗಂಗೆಕೂಡಿದಸ್ಥಳದಲ್ಲಿ ಸ್ನಾನವಂಮಾಡಲು ಕೋಟಿಜನ್ಮದಪಾಪಹರ, ಪೂರ್ವದಲ್ಲಿ ಏರಡುಕಾಗೆ ತಮ್ಮೊಳಗಿತಾವು ಕಾದಿನಾಡಿ ಈ ಹರಂಪಾಪಹರತೀರ್ಥದಲ್ಲಿ ಎಲ್ಲರೂ ನೋಡುತ್ತಿರಲು ಬಿದ್ದುಹಂಸಗಳಾಗಿ ಹೊರಟುಹೋದವು, ಎಲೆಗೌರಿ! ಪೂರ್ವದಲ್ಲಿ ನೀನು ಸ್ನಾನವಮಾಡಲು, ಗೌರೀತೀರ್ಥವೆನಿಸಿತು, ಅನೇಕಜನ್ಮದಪಾಪವಂಪರಿಹರಿಸಿ ಮೋಹಾಂಧಕಾರವಂ ಪರಿಹರಿಪ ಮಧುಸ್ರವೆಂಬನದೀ ಗಂಗೆಯಲ್ಲಿ ಕೂಡಿಹರಿವುತ್ತಿಹಳು, ಈ ಸ್ಥಳದಲ್ಲಿ ಮಾನಸಸರೋವರದಲ್ಲಿ ಉಗ್ರತಪವಿರಲು ಮಾನಸತೀರ್ಥವೆನಿಸಿತು, ಅಲ್ಲಿ ಸ್ನಾನವಮಾಡಿದಮಾತ್ರದಲ್ಲಿಯೆ ಜನರು ಮುಕ್ತರಾಗುವರು, ಎಲೆದೇವಿ! ದೇವರ್ಕಳು ಎನ್ನ ಪ್ರಾರ್ಥಿಸಿದರು, ಅದೆಂತೆನೆ- ಎಲೆದೇವನೆ! ಈ ಕೇತಾರತೀರ್ಥದಲ್ಲಿ ಸ್ನಾನವಮಾಡಿದ ಜನರುಗಳೆಲ್ಲಾ ಮುಕ್ತರಾಗುತ್ತಿದ್ದಾರು, ಹೀಗಾದರೆ ಲೋಕಸ್ಥಿತಿನಡೆಯದು, ನೀವು ಸಕಲ ವರ್ಣಾಶ್ರಮಧರ್ಮಂಗಳ ತಾರತಮ್ಯದಿಂ ಮುಕ್ತಿಯನೀವರಲ್ಲದೆ ಸಕಲರಿಗು ಸಮಾನಮೋಕ್ಷವಂ ಕೊಡತಕ್ಕವರಲ್ಲ, ಅದುಕಾರಣ ಈ ತೀರ್ಥವನ್ನೆ ಗೋಪ್ಯವಮಾಡಬೇಕೆಂಬ ದೇವರ್ಕಳವಾಕ್ಯವಂ ಕೇಳಿ ಅಂದುಮೊದಲಾಗಿ ಆ ತೀರ್ಥವಂ ಗೋಪ್ಯವಮಾಡಿದೆನು, ಅದುಕಾರಣ ಗೌರೀತೀರ್ಥದಲ್ಲಿ ಸ್ನಾನವಂಮಾಡಿ ಕೇತಾರೇಶ್ವರನಾದ ಎನ್ನ ಪೂಜೆಯಂಮಾಡಿ ಸ್ಮರಣೆ ಜಪವಂಮಾಡಿ ಎಲ್ಲಿಯಾದರು ದೇಶಾಂತರದಲ್ಲಿ ದೇಹವಂತ್ಯಜಿಸಲು ಮುಕ್ತಿಯನೀವೆನು, ಈ ತೀರ್ಥದಲ್ಲಿ ಸ್ನಾನವಂಮಾಡಿದವರ ನೂರೊಂದುಕುಲದವರು ಸಂಸಾರಸಾಗರವಂ ದಾಂಟುವರು ಅಮಾವಾಸ್ಯೆ ಅಂಗಾರಕವಾರ ಈ ಕೇತಾರತೀರ್ಥದಲ್ಲಿ ಸ್ನಾನಾದಿಕ್ರಿಯೆಗಳನ್ನು ತೀರಿಸಿಕೊಂಡು ಶ್ರಾದ್ಧಕರ್ಮವಂಮಾಡಿ ಶುದ್ಧಭವಾನಿಸಮ್ಮ

ಪಡಾಳೀಯೆಂದು ಹಿರಿಯರು ಹೇಳಲು ಕೇಳಿ ಆ ಪ್ರಕಾರವಾಡಲು ಅವರು
ಕೃತಕೃತ್ಯರಹರು, ಅಲ್ಲಿ ಅವರಿಗೆ ಮಹಾಫಲವಕೊಡುವೆನು, ಚೈತ್ರಬಹು
ಳ ಚತುರ್ದಶಿಯಲ್ಲಿ ಉಪವಾಸವಿದ್ದು ಮರುದಿನ ಈ ಕೇತಾರತೀರ್ಥದ
ಲ್ಲಿ ಮೂರುಗುಟುಕು ಉದಕಪಾನವಂ ಮಾಡಿದ ಸ್ತ್ರೀಯರಿಗಾಗಲಿ ಪು
ರುಷರಿಗಾಗಲಿ ಕೇತಾರಯಾತ್ರೆಯುಂ ಮಾಡಿದವರ್ಗೆ ಅನ್ನಪಾನದಿಂ ಸತ್ಕ
ರಿಸಲು ಒಂದು ಜನ್ಮದಪಾಪಹರವಾಗಿ ಪುಣ್ಯಲೋಕವನೈದುವರು, ಆರು
ತಿಂಗಳುತ್ರಿಕಾಲದಲ್ಲಿ ಈಕೇತಾರೇಶ್ವರಗೆ ನಮಸ್ಕರಿಸಲು ಅವರಿಗೆ ದಿಕ್ಪಾ
ಲಕರು ನಿತ್ಯವು ನಮಸ್ಕರಿಸುವರು, ಕಲಿಯುಗದಲ್ಲಿ ಒಬ್ಬರು ಕೇತಾರೇ
ಶ್ವರನ ಮಹಿಮೆಯನರಿಯರು, ಬಲ್ಲದುಂಟಾದರೆ ಅವರೆಪುಣ್ಯಾತ್ಮರು, ಎಲೆ
ದೇವಿ! ಒಮ್ಮೆ ಕೇತಾರೇಶ್ವರನ ನೋಡಿದವನವನು ತನ್ನ ಭೃತ್ಯನಹನು, ಅದು
ಕಾರಣ ಕಾಶಿಯಲ್ಲಿ ಇದ್ದವರು ನಿತ್ಯವು ಕೇತಾರೇಶ್ವರನ ದರ್ಶನವಂ ಮಾ
ಡಬೇಕು, ಆ ಈಶ್ವರನ ಬಡಗಲಲ್ಲಿರ್ದ ಚಿತ್ರಾಂಗದೇಶ್ವರನ ಪೂಜಿಸಲು
ಸ್ವರ್ಗಭೋಗವಹುದು, ಆ ಕೇತಾರೇಶ್ವರನ ತೆಂಕಲಲ್ಲಿರ್ದ ನೀಲಕಂಠೇ
ಶ್ವರನ ದರ್ಶನದಿಂದ ಸಂಸಾರವೆಂಬ ವಿಷದ ಭಯವಿಲ್ಲ, ಆಕೇತಾರೇಶ್ವ
ರನ ವಾಯುವ್ಯದಲ್ಲಿರ್ದ ಅಂಬರೀಷೇಶ್ವರನ ನೋಡಲು ಗರ್ಭವಾಸವಿಲ್ಲ, ಆ
ಸಮೀಪದ ಇಂದ್ರದ್ಯುಮ್ನೇಶ್ವರನ ಪೂಜೆಯಿಂದ ತೇಜೋಮಯವಾದವಿ
ಮಾನದಿಂ ಸ್ವರ್ಗವನೈದುವರು, ಆತೆಂಕಲಲ್ಲಿರ್ದ ಕಾಲಹರೇಶ್ವರನಂನೋ
ಡಿ ಜರಾಮೃತ್ಯುಗಳಂಗೆದ್ದು ಚಿರಕಾಲ ನಮ್ಮ ಲೋಕದಲ್ಲಿಇಹರು, ಚಿ
ತ್ರಾಂಗದೇಶ್ವರನ ಮೂಡಲಲ್ಲಿರ್ದ ಕ್ಷೇಮೇಶ್ವರನಂ ನೋಡಲು ಇಹಪರ
ದಲ್ಲಿ ಕ್ಷೇಮವುಂಟು, ಕೇಳೈ ವಿಂಧ್ಯಾರಿ! ಈ ಪ್ರಕಾರದಿಂ ಪರಮೇಶ್ವರ
ನು ಕೇತಾರೇಶ್ವರನ ಮಹಿಮೆಯುಂ ಬುದ್ಧಿಗಲಿಸಿದ ವೃತ್ತಾಂತವಂ
ನಾನು ನಿನಗೆ ಹೇಳಿದೆನು ಈ ಕೇತಾರೇಶ್ವರನ ಉತ್ಪತ್ತಿಯಂ ಕೇಳಿದವರು
ಕೃತಕೃತ್ಯರಾಗಿ ಶಿವಲೋಕವನೈದುವರೂ ಎಂದು ಕುಮಾರಸ್ವಾಮಿ
ಅಗಸ್ತ್ಯಂಗೆ ನಿರೂಪಿಸಿದ ಅರ್ಥವಂ ವ್ಯಾಸರು ತನಗೆ ಬುದ್ಧಿಗಲಿಸಿದರೆಂದು
ಸೂತಪುರಾಣಿಕನು ಶೌನಕಾದಿಋಷಿಗಳಿಗೆ ಪೇಳಿದನೆಂಬಲ್ಲಿಗೆ ಅಧ್ಯಾ
ಯಾರ್ಥ ॥ * * * * * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರಪುರವರಾಧೀಶ ಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥ ದರ್ಪಣದಲ್ಲಿ ಕೇತಾರೇಶ್ವರನ ಮಹಿಮೆಯಂ ಪೇಳ್ವ ಎಪ್ಪತ್ತೇಳನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ.

ಎಪ್ಪತ್ತೆಂಟನೆ ಅಧ್ಯಾಯವು, ಧರ್ಮೇಶ್ವರನ ಮಹಿಮೆ.

ಶ್ರೀವಿಶ್ವೇಶ್ವರಾಯನಮಃ ॥ ಅನಂತರದಲ್ಲಿ ಪಾರ್ವತೀದೇವಿಯು ಬಿನ್ನವಿಸಿದಳು, ಎಲೈ ಪರಮೇಶ್ವರನೆ ! ಈ ಕಾಶಿಯಲ್ಲಿ ಪುಣ್ಯವನಭಿವೃದ್ಧಿಯಂ ಮಾಡುವ ಲಿಂಗವ್ಯಾವದು, ಸ್ಮರಣೆಯಿಂದಲೆ ಪಾಪವಂ ಪರಿಹರಿಸಿ ಸಾಧಕರ್ಗೆ ಆವಲಿಂಗದಲ್ಲಿ ಪ್ರಿಯವುಂಟೊ, ಎಲ್ಲಿಮಾಡಿದ ಜಪಹೋಮದಾನಧ್ಯಾನಾದಿಗಳು ಅನಂತಫಲವನೀವವೊ? ಆಲಿಂಗದರ್ಶನ ಸ್ಪರ್ಶನ ಪಂಚಾಮೃತ ಸ್ನಾನ ಮೊದಲಾದ ಪೂಜೆಗಳಿಂದ ಅಧಿಕಫಲವಹುದೊ? ಅಂಥಾಲಿಂಗವಂ ನಿರೂಪಿಸಬೇಕೆನೆ, ಪರಮೇಶ್ವರನು ನಿರೂಪಿಸಿದ ಪ್ರಕಾರವಂ ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನು, ಅದೆಂತೆಂದರೆ- ಎಲೆಪಾರ್ವತಿ! ನೀನು ಕೇಳಿದ ಪ್ರಶ್ನೆಯನ್ನು ಹೇಳೇನು, ಏಕಚಿತ್ತದಲ್ಲಿ ಕೇಳು, ಈ ಕ್ಷೇತ್ರದ ಪರಮರಹಸ್ಯವನ್ನು ತಾನು ಒಬ್ಬರಿಗು ಹೇಳಿದವನಲ್ಲ, ಎಲೆಪ್ರಿಯಳೆ! ಈ ಆನಂದಕಾನನದಲ್ಲಿರುವ ಲಿಂಗಗಳಿಗೆ ಲೆಖ್ಖವಿಲ್ಲ, ಈ ಸ್ಥಳದಲ್ಲಿಯೆ ಮುಕ್ತಿಸ್ವರೂಪವಾದ ನೀನು ಇರುತ್ತಿದ್ದೆ, ತ್ರಿಪುರವಿಜಯದಲ್ಲಿ ಬಹು ಮೋದಕಮೊದಲಾದ ಪೂಜೆ ಸ್ತುತಿಗಳಿಂದ ಎನ್ನ ಅಭಿಲಾಷೆಯಂ ಸಲಿಸಿದ ಕ್ಷೇತ್ರ ವಿಘ್ನಹರನಾದ ನಿನ್ನ ಕುಮಾರನಾದ ಢುಂಢಿಗಣಪತಿ ಇದ್ದಾನು, ದೇವೇಂದ್ರನು ವೃತ್ರಾಸುರನ ವಧೆಯಿಂದ ಬಂದ ಬ್ರಹ್ಮಹತ್ಯಾಪಾಪವಂ ಆ ತೀರ್ಥಸ್ನಾನದಿಂ ಪರಿಹರವಂ ಮಾಡಿಕೊಂಡನೊ ಆ ತೀರ್ಥದಲ್ಲಿ ಪಿತೃಗಳು ತೃಪ್ತರಹರೊ ಎಲ್ಲಿ ಯಮನು ಉಗ್ರತಪವಂ ಮಾಡಿ ಧರ್ಮಾಧರ್ಮದ ಪಾರಪತ್ಯವಂ ಪಡೆದನೊ? ಆವ ತೀರ್ಥದಲ್ಲಿ ಪಕ್ಷಿಗಳು ಮೊದಲಾಗಿ ದಿವ್ಯಜ್ಞಾನವಂ ಪಡೆದವೊ, ಆವಸ್ಥಳದಲ್ಲಿ ಕನಕಮಯವಾದ ಆಲದಮರವಿಹುದೊ? ಆವಲಿಂಗದರ್ಶನದಿಂದ ದುರ್ದಮನೆಂಬ ರಾಯನು ಜನ

ಕಂಟಕನಾಗಿಯೂ ಧರ್ಮಬುದ್ಧಿಯುಳ್ಳವನಾದನೋ? ಅಂಥಾಜ್ಯೋತಿರ್ಮ
ಯವಾದ ಲಿಂಗದ ಉತ್ಪತ್ತಿಯಂ ಮಾಹಾತ್ಮ್ಯೆಯಂ ಹೇಳುತ್ತಾ ಇದ್ದೇನೆ
ಕೇಳು, ಈ ಕಾಶಿಯಲ್ಲಿ ಈ ಲಿಂಗಗಳಿದ್ದ ಸ್ಥಳವೇ ಧರ್ಮಪೀಠವೆನಿಸುವದು,
ಆ ಧರ್ಮಪೀಠದರ್ಶನಮಾತ್ರದಿಂದಲೆ ಸರ್ವಪಾಪಹರ, ಎಲೆ ವಿಶಾಲಾಕ್ಷಿ
ಯೆ! ಪೂರ್ವದಲ್ಲಿ ನಿನ್ನ ಮುಂದೆ ಸೂರ್ಯಪುತ್ರನಾದ ಯಮನು ಉಗ್ರ
ತಪವಂ ಮಾಡಿದನು, ಅದೆಂತೆನೆ, ಶಿಶಿರಋತುವಿನಲ್ಲಿ ಜಲಮಧ್ಯದಲ್ಲಿ, ವ
ರ್ಷಾಕಾಲದಲ್ಲಿ ಬಯಲಲ್ಲಿ ಗ್ರೀಷ್ಮಕಾಲದಲ್ಲಿ ಪಂಚಾಗ್ನಿಮಧ್ಯದಲ್ಲಿ ಕೆ
ಲವುಕಾಲ ನಿರಾಹಾರದಲ್ಲಿ, ಕೆಲವುಕಾಲ ದರ್ಭೆಯ ಕೊನೆಯಲ್ಲಿ ಅದ್ದಿದ
ಉದಕಬಿಂದುಪಾನವಂ ಮಾಡಿಯು, ಕೆಲವುದಿವಸ ಏಕಪಾದದಲ್ಲಿಯು, ಕೆ
ಲವುದಿವಸ ಪಾದಾಂಗುಷ್ಠವನೂರಿ ಎರಡುತೋಳುಗಳನೆತ್ತಿ ಮಾರ್ತಾಂ
ಡಮಂಡಲದಲ್ಲಿ ದೃಷ್ಟಿಯನಿಲ್ಲಿಸಿಯು, ಈ ಪರ್ಯಾಯದಿಂ ಹದಿನಾರು
ದಿವ್ಯಯುಗಪರ್ಯಂತರವು ಪರಮಸಮಾಧಿಯಿಂ ಉಗ್ರತಪವಿರಲು, ತಾ
ನು ಪ್ರಸನ್ನನಾಗಿ ಯಮನಿಗೆ ದಿವ್ಯಜ್ಞಾನವನಿತ್ತೆನು, ಅದೆಂತೆನೆ—ಕ
ನಕಮಯವಾಗಿ ದಟ್ಟವಾದ ನೆಳಲುಳ್ಳಂಥ ಬಹುಪಕ್ಷಿಗಳಿಗಾಶ್ರಯವಾ
ದ ವಾಯುವಿನಿಂದ ಮಂದವಾಗಿ ಚಲಿಸುವ ಪಲ್ಲವಂಗಳೆಂಬ ಕರಗಳಿಂ
ಪಥಿಕರನು ಇಲ್ಲಿ ಬನ್ನಿ ಎಂದು ಕರೆವವೋಲು ಇದ್ದಂಥ ಪಕ್ವವಾಗಿ ಪ
ರಿಮಳವಾಗಿ ಸ್ವಾದುವಾಗಿದ್ದ ತನ್ನ ಫಲಂಗಳಿಂದ ಬಂದವರ ತೃಪ್ತಿಬಡಿಸಿದ
ಸುವರ್ಣದ ಆಲದಮರದಕೆಳಗೆ ಮೋಟುಮರದಂತೆ ನಿಶ್ಚಲಚಿತ್ತನಾಗಿ
ನಾಸಾಗ್ರದಲ್ಲಿ ದೃಷ್ಟಿಯನಿರಿಸಿ ತನ್ನ ಶರೀರದಿಂ ಹೊರಡುವ ತಪೋಗ್ನಿ
ಜ್ವಾಲೆಯಿಂದಾವಳಿಸಿ ಪರಿವೇಷವಾಗಿತೋರಲು, ನೀಲವರ್ಣವಾದ ಆಕಾ
ಶದಲ್ಲಿತೋರ್ಪ ಸೂರ್ಯನಂತೆ ಇಹ ತನ್ನನಾಮಾಂಕಿತವಾಗಿ ಸ್ವಚ್ಛವಾದ
ತೇಜಃಪುಂಜಗಳಿಂದ ಅಲಂಕೃತವಾದಂತೊಪ್ಪುವ ಸೂರ್ಯಕಾಂತಲಿಂಗ
ಪ್ರತಿಷ್ಠೆಯಂ ಮಾಡಿಕೊಂಡು ಆ ಸ್ವಾಮಿಯನ್ನು ಸಾಕ್ಷಿಯಮಾಡಿ
ಕೊಂಡಿದ್ದವನಂತೆ ಉಗ್ರತಪವಿರ್ದ ಯಮಂಗೆ ನಾನು ಪ್ರಸನ್ನನಾಗಿ ಇಂ
ತೆಂದೆನು, ಎಲೈ ಸೂರ್ಯಪುತ್ರನೆ! ತಪಸ್ಸುಸಾಕು, ನಿನಗೆ ನಾನು ಪ್ರಸ
ನ್ನನಾದೆನು, ನಿನಗೆ ಬೇಕಾದವರವಂ ಬೇಡೆನಲು, ಆ ಯಮನು ಸಮಾಧಿ

ಯೆಂಬಿಟ್ಟು ಸಾಷ್ಟಾಂಗಪ್ರಣಾಮವಂ ಮಾಡಿ ಸಕಲೇಂದ್ರಿಯಾತೃಪ್ತಿ ಯುಳ್ಳವನಾಗಿ ಸ್ತುತಿಗೈದನದೆಂತೆನೆ—ಎಲೈ ಸ್ವಾಮಿ! ಕಾರಣಕ್ಕೆ ಕಾರಣ ವಾದ ನಿಮ್ಮ ಪಾದಾರವಿಂದಗಳಿಗೆ ನಮಸ್ಕಾರ, ಕಾರಣರಹಿತನಾದ ಕಾರ್‍ಯ ರೂಪವಾದ ರೂಪವಂತನಾದ ಅರೂಪವಾದ ಸಮಸ್ತರೂಪನಾದ ಪರಸ್ವರೂ ಪಾದ ಪರಾತ್ಪರನಾದ, ತಡೆಯಿಲ್ಲದರೂಪವುಳ್ಳ ಸಂಸಾರಸಾಗರವಂ ಧಾಂ ಟಿಸುವ ಚಂದ್ರಶೇಖರನಾದ ನಿನಗೆ ಮಾತ್ರೊಬ್ಬ ಈಶ್ವರನಿಲ್ಲವಾದ ನಿಮ ಗೆ ನಮಸ್ಕಾರ, ಎಲೈ ಜಗದೀಶ್ವರನೆ! ಗುಣಾತ್ಮಕಗುಣವರ್ಜಿತ ಕಾಲಾ ತ್ಮಕ ಪ್ರಕೃತಿಪುರುಷರೂಪ-ಕಾಲಸ್ವರೂಪ ಕಾಲಾಂತಕನಾದ ನಿನಗೆ ನಮಸ್ಕಾರ, ಮೋಕ್ಷಪ್ರದ ಮೋಕ್ಷಸ್ವರೂಪ ಅನಂತಶಕ್ತಿಯುತ ಜೀವಾ ತ್ಮ ಪರಮಾತ್ಮ ಜಗತ್ಸಾಕ್ಷಿ ಜಗತ್ಕರ್ತನೆ ಲೋಕಬಂಧುವೆ! ಸಕಲತಾಪ ಹರನೆ ನಿಮಗೆ ನಮಸ್ಕಾರ, ಬ್ರಹ್ಮ ವಿಷ್ಣು ರುದ್ರ ತ್ರಿಮೂರ್ತಿಸ್ವರ ಸ್ವರೂಪನು ವೇದಮಾರ್ಗದಿಂ ತೋರಲ್ಪಡುವನು ಭಕ್ತರ್ಗೆ ಸುಖಕರ ನು ಅಭಕ್ತರ್ಗೆ ಕಾಲಸ್ವರೂಪನು ನಿನ್ನ ಪಾದಾರವಿಂದಗಳಂ ಸೇವಿಸುವ ರ್ಗೆ ಶ್ರೀಕಂಠನು ದುರಾತ್ಮರಾದವರ್ಗೆ ವಿಷಕಂಠನು, ಎಲೈ ಶಂಕರ! ನಿ ನಗೆ ನಮಸ್ಕಾರ, ಎಲೈ ಶಾಂತಶಂಭು ಚಂದ್ರಕಳಾವತಂಸ, ಫಣಿಭೂಷ ಣ, ಪಿನಾಕಧರ, ಅಂಧಕವೈರಿ, ತಾರಕಾರಿ, ಜಲಂಧರಸಂಹರ, ನಿನ ಗೆ ನಮಸ್ಕಾರ, ನಿನ್ನ ಭಕ್ತರಾದವರು ಧನ್ಯರು, ನಿನ್ನ ಪೂಜಿಸಿದವರು ಕೃತಾರ್ಥರು, ನಿನ್ನ ಸ್ತುತಿಸಿದವರು ಇಂದ್ರಾದಿಗಳಿಂ ಸ್ತೋತ್ರವ ಮಾಡಿಸಿ ಕೊಂಬರು, ಶ್ರುತಿಗಳಿಗೆ ಅಗೋಚರನಾದ ನಿನ್ನನು ತಾನು ಸ್ತೋತ್ರ ವಂ ಮಾಡಲರಿಯೆನು, ನಮಃಶಿವಾಯ ಎಂದು ಸಂತೋಷದಿಂ ಸಾವಿರಭಾ ರಿ ನಮಸ್ಕಾರನಮಾಡಿಯಿರಲು, ಪರಮೇಶ್ವರನು ತನ್ನ ಕರಗಳಿಂ ತೆಗದೆತ್ತಿ ತಪದಿಂದತ್ಯಂತ ಬಳಲಿದೆ ಸಾಕೆಂದು ಮೈದಡವಿ ಇಂತೆಂದನು, ನೀನು ಧರ್ಮರಾಜನೆಂಬ ಹೆಸರುಳ್ಳವನಾಗು, ಚರಾಚರರೂಪವಾದ ಪ್ರಾಣಿಗಳಿ ಗೆ ಧರ್ಮನು, ಧರ್ಮಕ್ಕೆ ಅಧಿಕಾರಿಯಾಗಿ ಇಂದುಮೊದಲಾಗಿ ಸಕಲ ಪ್ರಾಣಿಗಳನ್ನು ನ್ಯಾಯದಿಂ ರಕ್ಷಿಸು, ದಕ್ಷಿಣದಿಕ್ಕಿಗೆ ಅರಸಾಗು, ಸಕಲ ಪ್ರಾಣಿಗಳ ಶುಭಾಶುಭಕರ್ಮಗಳಿಗೆ ಸಾಕ್ಷಿಯಾಗು, ಉತ್ತಮರೆಲ್ಲರು

ನೀತೋರಿದ ಮಾರ್ಗದಿಂ ತಮ್ಮ ತಮ್ಮ ಗತಿಯನೈದಲಿ, ಈಗನೀಪೂಜಿಸಿದಂಥ ಲಿಂಗವನ್ನು ದರ್ಶನಸ್ಪರ್ಶನಪೂಜೆಗಳಿಂದ ಭಜಿಸಿದವರ್ಗೆ ಇಷ್ಟಸಿದ್ಧಿಯಾಗಲಿ, ಈ ಧರ್ಮಕೂಪವೆಂಬ ತೀರ್ಥದಲ್ಲಿ ಸ್ನಾನವಂಮಾಡಿ ಒಮ್ಮೆ ಧರ್ಮೇಶ್ವರನಂ ನೋಡಲು ಸಕಲಪುರುಷಾರ್ಥ ಸಿದ್ಧಿಯಾಗಲಿ, ಸಹಸ್ರಾಪರಾಧಿಯಾದರು ದೈವಯೋಗದಿಂದ ಒಮ್ಮೆ ಧರ್ಮೇಶ್ವರನನೋಡಲು ಯಮಬಾಧೆಯಿಲ್ಲ, ಈ ಕಾಶಿಯಲ್ಲಿರ್ದ ಧರ್ಮಪೀಠದಲ್ಲಿ ಧರ್ಮವಮಾಡಿದವನು ಸಮರ್ಥನಾಗಿ ಮಾಡುವದೇನು, ಅವನು ನಿನ್ನ ಶಿಕ್ಷೆಗೆ ಹೊಳಗು, ನೀನು ಉಗ್ರತಪವಂ ಮಾಡಿ ದ್ಯಾಗೆ ಇಷ್ಟಾರ್ಥವಂ ಪಡೆದೆಯೋ ಧರ್ಮೇಶ್ವರನ ಭಕ್ತರಿಗು ಅನಂತಸಿದ್ಧಿಯಾಗಲಿ, ಅನೇಕಪಾಪಗಳಮಾಡಿದವನು ಈ ಲಿಂಗಪೂಜೆಯಂಮಾಡಲು ನಿನಗು ಅಂಜರು, ಪತ್ರಪುಷ್ಪಫಲ ಉದಕ ದೂರ್ವೆಗಳಿಂದ ಈ ಲಿಂಗವಂ ಪೂಜಿಸಿದವನ ದೇವತೆಗಳು ಪಾರಿಜಾತಪುಷ್ಪಗಳಂ ಪೂಜಿಸುವರು, ಈ ಲಿಂಗವಪೂಜಿಸಿದವರು, ಪೂಜೆಯಂಮಾಡಿಸಿದವರು, ಪಾಪಿಗಳಾದ ಅವರಿಗೆ ನಮಸ್ಕಾರ, ಈ ಗಂಗೆಯಲ್ಲಿ ಸ್ನಾನವಂಮಾಡಿ ಧರ್ಮೇಶ್ವರನ ದರ್ಶನವಂಮಾಡಿ ನಾನಾಧರ್ಮಂಗಳಂ ಮಾಡಲು ಆ ಧರ್ಮಕ್ಕೆ ಯುಗಾಂತದಲ್ಲಿಯೂ ಕೇಡಿಲ್ಲ, ಕಾರ್ತೀಕಶುದ್ಧ ಅಷ್ಟಮಿದಿವಸ ಉಪವಾಸವಿದ್ದು ಧರ್ಮೇಶ್ವರನ ಸಮೀಪದಲ್ಲಿ ಜಾಗರಣವಂಮಾಡಲು ಮರುಹುಟ್ಟಿಲ್ಲ. ಈಗನೀನು ಮಾಡಿದಸ್ತೋತ್ರವಂ ಎನ್ನಮುಂದೆ ಪಠಿಸಲು ಪಾಪರಹಿತನಾಗಿ ಎನ್ನಲೋಕವನೈದುವರು, ನಿನಗೆ ಸ್ನೇಹಿತರಹರು, ಎಲೈಧರ್ಮರಾಜ! ನಿನಗೆ ಇನ್ನೊಂದುವರವಬೇಡು ನಿನಗೆ ವಚನಮಾತ್ರವಲ್ಲದೆ ಪ್ರಯಾಸವಿಲ್ಲ, ವರವಕೊಡುವನು, ತಾನು ಬೇಡಿಕೋ ಎಂದು ನುಡಿದಪರಮೇಶ್ವರನ ವಾಕ್ಯವಂಕೇಳಿ ಕ್ಷಣಮಾತ್ರ ಧ್ಯಾನಿಸಿ ಪರಮೇಶ್ವರಗೆ ಧರ್ಮರಾಜನಿಂತೆಂದು ಬಿನ್ನವಿಸಿದನು ಎಂದುಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನು ಎಂದು ವ್ಯಾಸರು ತನಗೆ ಬುದ್ಧಿಗಲಿಸಿದರು, ಎಂದು ಸೂತಪುರಾಣೀಕನು ಶೌನಕಾದಿಋಷಿಗಳಿಗೆ ಹೇಳ್ದನೆಂಬಲ್ಲಿಗೆ ಎಪ್ಪತ್ತೆಂಟನೆ ಅಧ್ಯಾಯದರ್ಥ * * * * * * * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥ ದರ್ಪಣದಲ್ಲಿ ಧರ್ಮೇಶ್ವರನ ಪ್ರಸಂಗವೆಂಬ ಎಪ್ಪತ್ತೆಂಟನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * * * * * *

ಎಪ್ಪತ್ತೊಂಭತ್ತನೇಅಧ್ಯಾಯ ಧರ್ಮೇಶ್ವರನಮಹಿಮೆ

ಶ್ರೀವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ಕುಮಾರಸ್ವಾಮಿಯಿಂತೆಂದನು, ಕೇಳೈಅಗಸ್ತ್ಯನೆ! ಆನಂದಬಾಷ್ಪಗಳಿಂ ತಡೆಯಲ್ಪಟ್ಟ ಕಂಠವುಳ್ಳ ಯಮನಂ ಪರಮೇಶ್ವರನು ಅಮೃತಮಯವಾದ ತನ್ನಹಸ್ತದಿಂ ತಡಹಲು, ತಪೋಜ್ವಾಲೆಗಳಿಂ ತಪ್ತವಾದ ಶರೀರದ ತಾಪಮಂ ಬಿಟ್ಟು ಮುಂದೆಪ್ರಸನ್ನನಾದ ಪರಮಶಾಂತನಾದ ಸುಶಾಂತರಾದ ಪ್ರಮಥರಿಂದ ವಾಲೈಸಲ್ಪಡುವ ಉಮಾಪತಿಗೆ ಬಿನ್ನೈಸಿದನು, ಎಲೈಸ್ವಾಮಿ! ನೀವು ಪ್ರಸನ್ನವಾದುದೆ ಎನಗೆವರ ಮಿಕ್ಕಾದವರಂಗಳಿಂದೇನುಪ್ರಯೋಜನ, ವೇದಗಳು ಮೊದಲಾಗಿ ಅರಿಯದ ಜೀವಪರಮರು ಅರಿವುದಂಥ ನಿಮ್ಮಪ್ರಾರ್ಥಿಸುತ್ತಾ ಇದ್ದೇನೆ, ಎಲೆ ಶ್ರೀಕಂಠನೆ! ನೀವು ಎನಗೆ ಇನ್ನೊಂದುವರವ ಪಾಲಿಸುವದುಂಟಾದರೆ ? ಎನ್ನತಪಸ್ಸಿಗೆ ಸಾಕ್ಷಿಗಳಾದ ಎನ್ನಮುಂದೆ ಪುಟ್ಟಿದಂಥ ತಾಯಿತಂದೆಗಳಿಲ್ಲದ ಇತಿಹಾಸ ಕಥೆಗಳಬಲ್ಲಂಥ ಆಹಾರವಿಹಾರಗಳಬಿಟ್ಟಂಥ ಈಗಿಳಿಮರಿಗಳಿಗೆ ವರವಕೊಡಬೇಕು, ಈ ಮರಿಗಳತಾಯಿ ಪ್ರಸವವೇದನೆಯಿಂದ ಮೃತವಾಯಿತು, ಇವರತಂದೆಯನ್ನು ಗಿಡುಗಭಕ್ಷಿಸಿತು, ಈ ಮರಿಗಳಿಗೆ ದಿಕ್ಕಿಲ್ಲದಿರೆ ತಾನುಕಂಡು ಸಾಕಿದೆನು, ಆಯುಸ್ವರೂಪವಾದ ನಿಮ್ಮಿಂದ ಬದುಕಿದ ಎನ್ನಮುಖವನೋಡುತ್ತ ಇದ್ದಂಥ ಈ ಗಿಳಿಯಮರಿಗಳಿಗೆ ಕೃಪೆಯಮಾಡಬೇಕು ಎಂದು ಬಿನ್ನವಿಸಿದ ಪರೋಪಕಾರಿಯಾದ ಧರ್ಮನವಾಕ್ಯವಂ ಕೇಳಿ ವಿನಯವುಳ್ಳ ಗಿಳಿಮರಿಗಳಿಗೆ ಪರಮೇಶ್ವರನಿಂತೆಂದನು, ಎಲೈ ಪಕ್ಷಿಗಳಿರಾ! ನೀವು ತಿರ್ಯಗ್ಜಾತಿಗಳು, ಧರ್ಮಬುದ್ಧಿಯುಳ್ಳವರು, ಧರ್ಮೋ

ಶ್ವರನುಪಚಾರಕರು, ಸತ್ಸಂಗಂದಿವ ಜನ್ಮಾಂತರಪಾಪಗಳ ಪರಿಹರವ
ಮಾಡಿಕೊಂಡನಿಮಗೆ ನಾನುಕೊಡುವ ವರವೇನು ಕೇಳಿಕೊಳ್ಳಿಎಂದು
ನುಡಿದ ಶಿವನವಾಕ್ಯವಂಕೇಳಿ ಪಕ್ಷಿಗಳು ನಮಸ್ಕರಿಸಿ ಇಂತೆಂದುಬಿನ್ನ
ಹವಂ ಮಾಡಿದವು, ಎಲೈಭವಹರ! ಅನಾಥನಾಥನೆ! ತಿರ್ಯಗ್ಜಾತಿಗಳಾದ
ನಮಗೆ ನೀವು ಸಾಕ್ಷಾತ್ಕಾರವಾಗಿ ಪ್ರಸನ್ನವಾದುವಕ್ಕಿಂತಲು ವರವಾ
ವುದು, ಉದ್ಯೋಗವುಳ್ಳವರ್ಗೆ ಸಾವಿರಸಂಖ್ಯೆ ಲಾಭಗಳುಂಟಾಗಲಿ ನ
ಮಗೆ ನೀವು ಪ್ರಸನ್ನವಾದುದೇಲಾಭ, ಈ ತೋರುವಸಕಲವು ಕ್ಷಣಭಂ
ಗವಾದ ಈ ತಪಸ್ಸಂಮಾಡಿದ್ದರಿಂದ ನೀನೊಬ್ಬನೇನಿತ್ಯನು,ನಿನ್ನಪೂಜೆಯೆ
ನಿತ್ಯವಾದುದು, ಈತಪಸ್ಸಿನಿಂದಲೂ ಲಿಂಗಾರ್ಚನೆಯಿಂದಲೂ ನಿಮ್ಮದರ್ಶ
ನದಿಂದಲೂ ನಮಗೆ ಜಾತಿಸ್ಮರತ್ವವುಟ್ಟಿ ಕೋಟಿಜನ್ಮದ ಅರಿವುವುಂಟಾ
ಯಿತು, ಅದೆಂದರೆ—ನಾವು ಪೂರ್ವದಲ್ಲಿ ದೇವತೆಗಳಾಗಿವುಟ್ಟಿ ದಿವ್ಯಭೋ
ಗವನನುಭವಿಸಿದೆವು, ಅಸುರ, ದಾನವ, ರಾಕ್ಷಸ, ಯಕ್ಷ, ಕಿನ್ನರ, ಗಂಧ
ರ್ವ, ಗರುಡ, ಉರಗ, ಕಿಂಪುರುಷರಾಗಿವುಟ್ಟಿದೆವು, ಆಮೇಲೆ ಮನು
ಷ್ಯರಾಗಿವುಟ್ಟಿದೆವು, ಅವರೊಳಗೆ ಅರಸುಗಳಾದೆವು, ಜಲಚರರಾಗಿ ವ
ನವಾಸಿಗಳಾಗಿ ಕೊಡುವರಾಗಿ ಬೇಡುವರಾಗಿ ಕಾವರರಾಗಿ ಕೊಲ್ಲುವರಾ
ಗಿ ಸುಖಿಗಳಾಗಿ ದುಃಖಿಗಳಾಗಿ ಅಜ್ಞಾನಿಗಳಾಗಿ ಜಯವಂತರಾಗಿ ಅಪ
ಜಯವಂತರಾಗಿ ವನವಾಸಿಗಳಾಗಿ ವ್ರೋದಿದವರಾಗಿ ಮುಗ್ಧರಾಗಿ ಘೋರ
ಗಳಾಗಿ ಭಂಟರಾಗಿ ಅಂಡಜರಾಗಿ ಜರಾಯುಜ ಸ್ವೇದಜ ಉದ್ಭಿಜಗಳೆಂ
ಬ ಚತುರ್ವಿಧ ಪ್ರಾಣಿಗಳಾಗಿ ಉತ್ತಮ ಮಧ್ಯಮ ಅಧಮರಾಗಿ ಈ
ಯೋನಿಯಿಂದಾ ಆಯೋನಿಗೆ ಆಯೋನಿಯಿಂದ ಈಯೋನಿಗೆ ಹೀಗೆತೊಳ
ಲಿಬಳಲಿಯಲ್ಲಿಯೂ ಅಣುಮಾತ್ರವಾದರೂಸುಖವಕಾಣದೆ. ಈ ತಿರ್ಯಗ್ಜಾತಿ
ಗಳಾಗಿವುಟ್ಟಿಪೂರ್ವಜನ್ಮದ ಪುಣ್ಯದಿಂದಾ ಧರ್ಮೇಶ್ವರನ ನೋಡಿದೆವು,
ಈಧರ್ಮರಾಜನ ತಪಸ್ಸಿನಜ್ವಾಲೆಯಿಂದಾ ನಮ್ಮಪಾಪಗಳು ಭಸ್ಮವಾದ
ವು, ಎಲೆ ಶ್ರೀಕಂಠ! ನಿಮ್ಮನು ಸಾಕ್ಷಾತ್ಕಾರವಾಗಿ ಕಂಡೆವಾದಕಾರಣ
ಕೃತಾರ್ಥರಾದೆವು, ನಿಮ್ಮಪಾದದರ್ಶನವಾದುದೇ ನಮಗೆವರವು, ಮತ್ತೆ
ವರವಬೇಡಬೇಕಾದರೆ ಸಂಸಾರ ಬಂಧನವಂ ಬಿಡಿಸುವಜ್ಞಾನ ದಾನವಂ

ಮಾಡಿದರೆ ಭವಪಾಶಬದ್ಧರಾದ ನಾವು ಮುಕ್ತರಾದೇವು, ಇಂದ್ರಪದವನೂ
ಬಯಸಲೊಲ್ಲೆವು, ಮತ್ತೇನನೂಬಲ್ಲೆವು, ತಮಗೆ ಕಾಶಿಯಲ್ಲಿ ಮರಣ
ಮತ್ತೇನನೂವಲ್ಲೆವು—ತಮಗೆ ಕಾಶಿಯಲ್ಲಿ ಮರಣವಾಗಲೀ ಶ್ರೀಗಂಧವೃ
ಕ್ಷವಸಂಸರ್ಗದಿಂದಾ ಸಕಲವೃಕ್ಷಂಗಳೂ ಪರಿಮಳಿಸುವಂತೆ ನಿಮ್ಮ ಸನ್ನಿ
ಧಾನದಿಂದಾ ನಮಗೆಯಿಂಥಾ ಜ್ಞಾನವುಂಟಾಯಿತು— ಕಾಶಿಯಲ್ಲಿ ಶರೀರ
ತ್ಯಾಗವ ಮಾಡದೆ ಮುಕ್ತಿಯಿಲ್ಲವೆಂದು ಉತ್ತಮರಿಗೆ ಅಂದೆ, ಬ್ರಹ್ಮದೇವ
ನಿರೂಪಿಸಿದನಾದ್ದರಿಂದಾ—ಕಾಶೀವಾಸವೆ ಮುಕ್ತಿಕಾರಣವೆಂದು ಮಹಾಲ
ಕ್ಷ್ಮೀದೇವಿಗೆ ವಿಷ್ಣುವು ಪೇಳ್ದನು, ಮುನಿಶ್ರೇಷ್ಠನಾದ ಯಾಜ್ಞವಲ್ಕ್ಯನು
ಕಾಶೀಮರಣವೆ ಮುಕ್ತಿಯೆಂದನು, ನೀವು ಮಂದರಪರ್ವತದಲ್ಲಿ ಕಾಶೀಕ್ಷೇತ್ರ
ವೆ ಮುಕ್ತಿಸ್ಥಾನವೆಂದು ದೇವಿಯರಿಗೆ ನಿರೂಪಿಸಿದಿರಿ, ವೇದವ್ಯಾಸರು ವಿಶ್ವೇ
ಶ್ವರಸಿದ್ಧ ಕಾಶೀಕ್ಷೇತ್ರದಲ್ಲಿ ಮರಣದಿಂದ ಮುಕ್ತಿವುಂಟೆಂದು ಪೇಳಿಯಿ
ದ್ದಾರೆ, ಮತ್ತು ಕ್ಷೇತ್ರಸನ್ಯಾಸವ ಮಾಡಿದ ಪುರಾತನರಾದ. ಲೋಮಶ
ಮಾರ್ಕಂಡೇಯ ಮೊದಲಾದ ಮುನಿಗಳು ಕಾಶಿಯೇ ಮುಕ್ತಿಸ್ಥಾನವೆಂ
ದು ಹೇಳಿಯಿದ್ದಾರು, ಈ ಗಂಗಾವಿಶ್ವೇಶ್ವರರಿರ್ದ ಕಾಶಿಯಲ್ಲಿದ್ದು ಮರಣ
ವಾದರೆ ಮೋಕ್ಷವುಂಟೆಂದು ಪುಣ್ಯಪುರುಷರು ಹೇಳುವದನಾವು ಬಲ್ಲೆವು,
ಎಲೈ ಸ್ವಾಮಿ! ನಿಮ್ಮ ಅನುಗ್ರಹದಿಂದ ಸ್ವರ್ಗ ಮರ್ತ್ಯ ಪಾತಾಳಗಳಲ್ಲಿ, ಅ
ಂಥಾ ಭೂತಭವಿಷ್ಯದ್ವರ್ತಮಾನಗಳನ್ನು ಬಲ್ಲೆವು, ಬ್ರಹ್ಮನು, ವಿಷ್ಣು
ವು ಮುನಿಗಳು ನೀವು ಹೇಳಿದ ಸಕಲಬ್ರಹ್ಮಾಂಡವನು ಕರತಳಾಮಳಕ
ವಾಗಿ ಬಲ್ಲೆವು, ಕಃಪರಮೇಶ್ವರನ ಸೇವೆ ಧರ್ಮರಾಜನ ವಿಧಾನದಿಂದಲೂ ನಾ
ವು ತಿರ್ಯಗ್ಜಾತಿಗಳಾದರು ಸಕಲವನ್ನು ಬಲ್ಲೆವು, ಮಧುರವಾಗಿ ಹಿತ
ಸತ್ಯವಾಗಿ ವ್ಯವಳವಾಗಿ ಪ್ರಮಾಣದಿಂ ಶಬ್ದಸ್ಮೃತಿಯಾಗಿ ದೃಷ್ಟಾಂ
ತಗಳುಳ್ಳ ವಾಕ್ಯಗಳಿಂ ಬಿನ್ನವಿಸಿದೆವು, ನಮಗೆ ಈ ಕ್ಷೇತ್ರದ ಮಹಿಮೆ
ಯಂ ಬುದ್ಧಿಗಲಿಸಬೇಕೆನಲು, ಆ ಗಿಣಿಯ ಮರಿಗಳಿಗೆ ಪರಮೇಶ್ವರನಿಂ
ತೆಂದನು, ಎಲೆಪಕ್ಷಿಗಳಿರಾ! ಈ ಧರ್ಮಪೀಠದ ಮಹಿಮೆ ಮಹಾತ್ಮ್ಯವಾ
ದುದು, ಮೂರುಲೋಕಂಗಳೆಂಬ ಪಟ್ಟಣಂಗಳಲ್ಲಿ ಈ ಕಾಶಿಯೇ ಶಿರ
ಮನೆ, ಇಲ್ಲಿ ಇಹ ಮನುಷ್ಯರ್ಗೆ ಮೋಕ್ಷಲಕ್ಷ್ಮೀವಿಲಾಸವೆಂಬುದುಂಟು

ಪ, ಈಮಂಡಪದಕಲಶವುಂ ನೋಡಿದವರ್ಗೆ ಹೆಜ್ಜೆಹೆಜ್ಜೆಗು ಮೋಕ್ಷ ವುಂಟು, ಎನ್ನಕೊಳ್ವದ ಮುಂದಣಉಪ್ಪರಿಗೆಯ ಧ್ವಜವುಂಕಂಡವರು ಎನಗೆ ಅತಿಪ್ರಿಯರು, ಉಪ್ಪರಿಗೆಭೂಮಿಯಂ ಭೇದಿಸಿಕೊಂಡು ಆನಂದ ಕಂದದ ಅಂಕುರದಂತೆ ವಪ್ಪಿಇದ್ದೀತು, ಈ ಬ್ರಹ್ಮಾದಿ ಪಿಪೀಲಿಕಾಂತ ಮಯಾದ ಸ್ಥಾವರಜಂಗಮವಾದ ಪ್ರಾಣಿಗಳು ಎನ್ನನೇಪಿಸುತ್ತ ಇದ್ದಾರು, ಸಕಲಲೋಕಗಳಲ್ಲಿಯು ಪರಮಸ್ಥಾನವಾದ ಎನ್ನ ಕೇಳೀಗೃಹ ಸಾಮ ಸರ್ವವ್ಯಾಪಿಯಾದರು ಈ ಉಪ್ಪರಿಗೆಯನಗೆ ಆಸ್ಪದವು, ಸಕಲ ಉಪನಿಷತ್ತುಗಳು ಆವುದಾದೊಂದು ವಸ್ತುವನ್ನು ಪರಬ್ರಹ್ಮವೆಂದು ಹೇಳಿದವೊ? ಅಂಥಾಪರಬ್ರಹ್ಮವಾದ ನಾನುಭಕ್ತಾದಿಗಳ ಮೇಲಣ ಕೃಪೆಯಿಂದ ಸಾಕಾರವಾದೆನು, ಆ ಉಪ್ಪರಿಗೆಯದಕ್ಷಿಣದಲ್ಲಿ ಮೋಕ್ಷಲಕ್ಷ್ಮಿಸ್ಥಾನದ ಮಂಟಪವಿದ್ದೀತು, ಅಲ್ಲಿನಾನು ನಿತ್ಯವು ಸನ್ನಿಧಾನವಾಗಿ ಇಹೆನು, ಅದುಎನ್ನಆಚಾರ, ಅಲ್ಲಿನಿಮಿಷಮಾತ್ರ ಮನಶ್ಶುದ್ಧಿಯಾಗಿಇದ್ದದೇತವಸ್ಸು,ನೂರುವರ್ಷದ ಯೋಗಾಭ್ಯಾಸದಫಲ,ಅಲ್ಲಿಒಂದು ವೇದಮಂತ್ರಮಂ ಜಪಿಸಲು ಸಕಲವೇದಪಾರಾಯಣವ ಮಾಡಿದಫಲ,ಅಲ್ಲಿಮಾಡಿದವಂದು ಪ್ರಾಣಾಯಾಮದಿಂ ಸಾವಿರವರ್ಷದ ಯೋಗಾಭ್ಯಾಸದ ಫಲವು, ಒಂದುಷಡಕ್ಷರಿಯ ಜಪದಿಂ ಕೋಟಿರುದ್ರ ಜಪಫಲ, ಗಂಗೆಯಲ್ಲಿ ಸ್ನಾನವಂಮಾಡಿ ಈಮಂಟಪದಲ್ಲಿ ಕುಳಿತು ಶತರುದ್ರ ಸೂಕ್ತ ಜಪವಂಮಾಡಲು ಬ್ರಾಹ್ಮಣವೇಷವಂಧರಿಸಿದ ರುದ್ರಮೂರ್ತಿಎಂದು ಅರಿವುದು, ಈ ಮುಕ್ತಿಮಂಟಪದಲ್ಲಿ ಬ್ರಹ್ಮಯಜ್ಞವಂಮಾಡಲು ಬ್ರಹ್ಮಲೋಕವಹುದು, ಅಲ್ಲಿಧರ್ಮಶಾಸ್ತ್ರ ಇತಿಹಾಸ ಪುರಾಣಗಳಂ ಸಿಪಾಖ್ಯಮನೆಯಿಂಪಠಿಸಲು ಕೈಲಾಸಪ್ರಾಪ್ತಿಯಹುದು, ಇಲ್ಲಿಇಂದ್ರಿಯಚಲವಂಬಿಟ್ಟುಯಿರೆ ಉಗ್ರತಪವಂಮಾಡಿದಫಲವುಂಟು, ಈ ಮಂಟಪದಲ್ಲಿ ಕ್ಷಣಮಾತ್ರ ಮೌನದಲ್ಲಿ ಪ್ರಣವವಂ ಜಪಿಸುತ್ತಿರೆ ಮೂರುವರ್ಷ ವಾಯುವಾಹಾರವಮಾಡಿದಫಲ, ಉಪವಾಸವಿರ್ದು ರಾತ್ರಿಆಮಂಟಪದಲ್ಲಿ ಲಿಂಗಾರ್ಚನೆಯುಂಮಾಡಲು ಸಕಲಲಿಂಗಗಳ ಪೂಜೆಯಂ ಮಾಡಿದಫಲ, ಇಲ್ಲಿಯಥಾಶಕ್ತಿದಾನವನಿತ್ತರು, ವ್ರತಉದ್ಯಾಪನೆಯಂ

ಮಾಡಿದಫಲವು, ವೇದವನೋದಿದರು ನಿತ್ಯವಾಗಿಸ್ವರ್ಗವಾಸವಹುದು,
ಇಲ್ಲಿ ಎನ್ನ ಕುರಿತು ನಮಸ್ಕಾರವಂಮಾಡೆ ಎನ್ನ ಸಾರೂಪ್ಯವಹುದು, ತಾ
ನು, ಪಾರ್ವತೀದೇವಿಯುಂ ಸಹಾ, ಜ್ಞಾನವಾಪಿಯಲ್ಲಿ ಜಲಕ್ರೀಡೆಯಾ
ಡುವೆವು, ಆ ಉದಕಪಾನವಂಮಾಡಲು ನಿರ್ಮಲಜ್ಞಾನವಹುದು, ಮ
ಹಾಪ್ರಳಯದಲ್ಲಿ ಕಾಶೀಕ್ಷೇತ್ರ ಹೊರತಾಗಿ ಸಕಲಲೋಕವು ಜಲದಲ್ಲಿ ತೇ
ಲಿಯಾಡುವಾಗ ಎನಗೆ ಜ್ಞಾನವಾಪಿಯು ಉದಕದಲ್ಲಿ ಜಲಕ್ರೀಡೆ ಮಹಾ
ಸಂತೋಷವಾಗಿ ಇಹುದು, ಆ ಉಪ್ಪರಿಗೆಯ ಪಶ್ಚಿಮದಲ್ಲಿ ಶೃಂಗಾರಮಂ
ಟಪವಿದ್ದೀತು, ಅದು ತ್ರಿಸ್ಥಲವೆನಿಸುವದು, ಲಕ್ಷ್ಮೀಪ್ರಸಾದವಾದುದು, ಅ
ಲ್ಲಿ ದುಕೂಲ, ವಸ್ತ್ರ, ಶ್ರೀಗಂಧ, ಪರಿಮಳ, ಪುಷ್ಪ, ಪೂಜೋಪಕರ
ಣ, ಮೊದಲಾದವ ದಾನವನೀಯಲು ಎಲ್ಲಿ ಇದ್ದರು ಐಶ್ವರ್ಯವಂತರಾಗಿ, ದೆ
ಶಾಂತರದಲ್ಲಿ ಮೃತವಾದರು, ಕಾಶಿಯ ಮರಣದಿಂದಲಾಗುವ ಮುಕ್ತಿಯುಂ
ಟು, ಈ ಉಪ್ಪರಿಗೆಯ ಬಡಗಲು ಐಶ್ವರ್ಯಮಂಟಪವಿದ್ದೀತು, ಅಲ್ಲಿ ಭಕ್ತ
ರು ಕುಳಿತು ತಪವಂಮಾಡಲು, ಐಶ್ವರ್ಯವನೀವೆನು, ಆ ಉಪ್ಪರಿಗೆ ಮೂಡ
ಲ್ಲಿ ಜ್ಞಾನಮಂಟಪವಿದ್ದೀತು, ಅಲ್ಲಿ ಕುಳಿತು ಎನ್ನ ಧ್ಯಾನಿಸಿದವರ್ಗೆ ಜ್ಞಾ
ನದಾನವಂಮಾಡುವೆನು, ಈ ಕಾಶೀನಗರಮಧ್ಯದಲ್ಲಿರ್ದ ದಿವ್ಯಸಿಂಹಾಸನ
ದಲ್ಲಿ ಕುಳಿತು, ಭಕ್ತರು ಮಾಡಿದ ಧ್ಯಾನಸಮರ್ಪಣೆಯುಂ ಕೈಕೊಂಡು ಅ
ವರು ಬೇಡಿದವರಗಳಂ ಕೊಡುವೆನು, ವಿಶಾಲಾಕ್ಷಿಯೊಡಗೂಡಿದ ಎನಗೆ
ವಿಶಾಲಸ್ಥಾನವಾದ ಉಪ್ಪರಿಗೆಯಲ್ಲಿ ಕುಳಿತು ಧ್ಯಾನವಂಮಾಡಿದ ಪ್ರಾಣಿಗ
ಳ ಸಂಸಾರಬಳಲಿಕೆಗಳಂ ಪರಿಹರಿಸುವೆನು, ಮಣಿಕರ್ಣಿಕೆಯಲ್ಲಿ ಸ್ನಾ
ನವಂಮಾಡಿದವರ್ಗೆ ತನುನಿರ್ಮಲತ್ವಮಂ ಕೊಡುವೆನು, ಪರತತ್ವವಾಗಿ
ಪರಬ್ರಹ್ಮವಾದ, ಪರವಸ್ತುರೂಪಾದ, ತಾರಕಬ್ರಹ್ಮೋಪದೇಶಮಂ ಉ
ಪದೇಶವಂಮಾಡುವೆನು, ಆ ಮಣಿಕರ್ಣಿಕಾತೀರ್ಥದಲ್ಲಿ ಸ್ನಾನವಂಮಾಡಿ
ದ ಪ್ರಾಣಿಗಳ ಅಪಾತ್ರರಮಾಡದೆ ಮೋಕ್ಷದಾನವನಿತ್ತು ಪವಿತ್ರರಮಾ
ಡುವೆನು, ಆಳವಾದ ಸಂಸಾರಸಾಗರದಲ್ಲಿ ಮುಳುಗಿದಂಥ ಪ್ರಾಣಿಗಳು
ಈ ಕಾಶಿಯಲ್ಲಿ ವಾಸವಮಾಡಲು, ತಾನು ತನ್ನ ಕೃಪೆಯೆಂಬ ಹಡಗಿನಿಂದ
ದಾಂಟಿಸುವೆನು, ಈ ಮಣಿಕರ್ಣಿಕಾತೀರ್ಥದಲ್ಲಿ ಸ್ನಾನವಂಮಾಡಿದ ಪ್ರಾ

ಣಿ

ಹ್ಮಣನಿಗು ಅಂತ್ಯಜನಿಗು ಸರಿಯಾಗಿ ಗತಿಯನೀವೆನು, ಇಲ್ಲಿಸ್ನಾನವಂ ಮಾಡಿದ ಮೂಢರಿಗು, ಯೋಗೀಶ್ವರರಿಗು, ವೇದಾಂತಿಗಳಿಗು, ಮೊದಲಾಗಿ ದುರ್ಲಭವಾದ ಮೋಕ್ಷಗಳನುಕೊಡುವೆನು, ಎನ್ನ ಕೈಯ್ಯಾಪೇಕ್ಷೆವಮಾಡಿಕೊಂಬುದಕ್ಕೆ ಬಲ್ಲವನು, ಚಾಂಡಾಲ ಮೊದಲಾದವನು ಈಮಣಿಕರ್ಣಿಕೆಯಲ್ಲಿ ಸ್ನಾನವಂಮಾಡಲು ವಿಚಾರಿಸಿ ಮೋಕ್ಷವನೀವೆನು, ತಾನು ಮೊದಲಾಗಿ ಸ್ನಾನವಂಮಾಡುವ ಮಣಿಕರ್ಣಿಕಾತೀರ್ಥದ ಒಂದುಕುಡಿತೇಧೊಳಗೆ ಈ ಮೂರುಲೋಕವೂಸರಿಬಾರದು, ಅವಿಮುಕ್ತೇಶ್ವರನು ಎನ್ನಪ್ರಾಣಲಿಂಗವು, ಆ ಲಿಂಗವನ್ನು ಒಮ್ಮೆಪೂಜಿಸಲು ಕೃತಕೃತ್ಯನಹನು, ಸಾಯಂಕಾಲದಲ್ಲಿ ಪಶುಪತೀಶ್ವರನ ಸಮೀಪದಲ್ಲಿ ಸಂಧ್ಯಾವಂದನೆಯಂಮಾಡಲು, ಸಂಸಾರಪಾಶಹರ, ಪ್ರತಿತಿಂಗಳು ಕೃಷ್ಣಚತುರ್ದಶಿಯಲ್ಲಿ ತಾನು ಕೃತ್ತಿವಾಸೇಶ್ವರನಲ್ಲಿ ಐಕ್ಯವಾಗಿಇಹೆನು, ಆ ಲಿಂಗವಪೂಜೆ ಉಪವಾಸ ಜಾಗರಣವಂಮಾಡಲು ಪುನರ್ಜನ್ಮವಿಲ್ಲ, ರತ್ನೇಶ್ವರನಪೂಜೆಯಿಂದಾ ರತ್ನಂಗಳನ್ನು ಮೂರುಲೋಕದಲ್ಲಿ ಇದ್ದವಸ್ತುವನ್ನು ಕೊಡುವೆನು, ಈ ತ್ರಿವಿಷ್ಟಪೇಶ್ವರನಲ್ಲಿ ನಿರಂತರವು, ಭಕ್ತಿಇದ್ದಭಕ್ತರ್ಗೆ ಬೇಡಿದಅಭೀಷ್ಟವನೀವೆನು, ಇಲ್ಲಿಇರ್ದವಿಚಾರಪೀಠವನೋಡಿಸಲು ಮಹಾಪಾತಕಹರ, ವೃಷಭಧ್ವಜಪೀಠದಲ್ಲಿ ಪಿತೃತರ್ಪಣವಂಮಾಡಲು ಪಿತೃಋಣವಿಮೋಚನ, ಆದಿಕೇಶವೇಶ್ವರನ ಪೀಠದಲ್ಲಿತಾನುಇರ್ದು ಭಕ್ತರಾದವರು ಆಪೀಠವಭಜಿಸಲು ಕ್ಷೇತ್ರಸ್ಥಿಪವನ್ನೈದಿಸುವೆನು, ಪಂಚನದೀತೀರ್ಥದಲ್ಲಿರ್ದ ಎತ್ಕರಾಜಾದ ವಿಶ್ವೇಶ್ವರನ ಪೀಠದಬಳಿಯಲ್ಲಿಹ ಚಂದ್ರೇಶ್ವರನ ಪೂಜಿಸಿದವರ್ಗೆ ಸಕಲಸಿದ್ಧಿಯಹುದು, ಈ ಕಾಶಿಯಲ್ಲಿ ಅನೇಕಪೀಠಗಳುಂಟು, ಅವರೊಳಗೆ ಈ ಧರ್ಮೇಶ್ವರನ ಪೀಠದಸಾಮರ್ಥ್ಯಕ್ಕೆ ಮಿತಿ ಇಲ್ಲ, ಅದೆಂತೆನೆ—ಆಗಿಣಿಯಮರಿಗಳು ತಾಯಿತಂದೆಗಳ ಉಪದೇಶವಿಲ್ಲದೆ ದಿವ್ಯಜ್ಞಾನವಪಡೆದವು, ಅದೆಂತೆಂದರೆ—ಆಗಿಣಿಗಳಿಗೆ ತಾನುಇಂತೆಂದೆನು ಎಲೆಪಕ್ಷಿಗಳಿರಾ ! ನೀವು ದಿವ್ಯದೇಹವನುಳ್ಳವರಾಗಿ ದಿವ್ಯವಿಮಾನವನೇರಿಕೊಂಡು ಕೈಲಾಸಕ್ಕೆಹೋಗಿ, ಅಲ್ಲಿಬಹುಕಾಲ ದಿವ್ಯಭೋಗಗಳನನುಭವಿಸಿ ಆಮೇಲೆ ದಿವ್ಯಜ್ಞಾನವಂ ಪಡೆದು ಈ ಕಾಶಿಯಲ್ಲಿಯೆ ಮುಕ್ತ

ರಾಗಿ ಎನ್ನಸಾಯುಜ್ಯವಂ ಪಡೆದೀರೆಂದು ಪರಮೇಶ್ವರನು ಬುದ್ಧಿಗಲಿಸುವಸಿತರೊಳು ಕೈಲಾಸದಿಂ ದಿವ್ಯವಿಮಾನಸಬರಲು, ಆಗಿಣಿಗಳು ದೇದೀಪ್ಯಮಾನವಾದ ದೇಹಗಳಂಧರಿಸಿ ದಿವ್ಯವಿಮಾನಾರೂಢರಾಗಿ ಕೈಲಾಸಕ್ಕೆಹೋದವು, ಧರ್ಮರಾಜನು ಮಹಾ ಆಶ್ಚರ್ಯಪಟ್ಟು ಪರಮೇಶ್ವರಗೆ ನಮಸ್ಕಾರವಂಮಾಡಿ ಪ್ರದಕ್ಷಿಣವಬಂದು ತನ್ನಲೋಕಕ್ಕೆಹೋದನು, ಎಂದುಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವಂ ವ್ಯಾಸರು ತನಗೆ ಬುದ್ಧಿಗಲಿಸಿದರೆಂದು ಸೂತಪುರಾಣೀಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿಋಷಿಗಳಿಗೆ ಪೇಳಿದನೆಂಬಲ್ಲಿಗೆ ಅಧ್ಯಾಯಾರ್ಥ

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜವಡೆಯರವರು ಲೋಕೋಪಕಾರಾರ್ಥವಾಗಿ ಕನ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಧರ್ಮೇಶ್ವರನಮಹಿಮೆ ಗಿಣಿಮರಿಗಳಿಗೆ ಮುಕ್ತಿಯಿತ್ತ ವೃತ್ತಾಂತವೆಂಬ ಎಪ್ಪತ್ತೊಂಭತ್ತನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * * *

ಎಂಬತ್ತನೆಅಧ್ಯಾಯ ಮನೋರಥ ತದಿಗೆ ವ್ರತಪ್ರಸಂಗ

ಶ್ರೀವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ಕುಮಾರಸ್ವಾಮಿ ಇಂತೆಂದನು, ಎಲೆಅಗಸ್ತ್ಯನೆ ? ಆಪಕ್ಷಿಗಳು ಜ್ಞಾನದಿಂದ ಪರಮೇಶ್ವರನಿಗೆ ಬಿನ್ನವಿಸಿದ ವಿವರಮಂಕಂಡು ಪಾರ್ವತೀದೇವಿಯರು ಆಶ್ಚರ್ಯಪಟ್ಟು ಪರಮೇಶ್ವರಂಗೆ ಇಂತೆಂದು ಬಿನ್ನೈಶಿದರು, ಎಲೈಮಹಾದೇವನೆ! ಈ ಧರ್ಮಪೀಠದಮಹಿಮೆಯಂ ಬುದ್ಧಿಗಲಿಸಬೇಕು. ಆ ಪಕ್ಷಿಗಳಿಗೆ ಮೊದಲಾಗಿ ನಾನು ಈ ಧರ್ಮೇಶ್ವರನ ಸಮೀಪದಲ್ಲಿಯೆ ಇದ್ದೆನು, ಇಲ್ಲಿ ಸ್ತ್ರೀಯರಾಗಲಿ ಪುರುಷರಾಗಲಿ ಆರು ಧರ್ಮೇಶ್ವರನಪೂಜಿಪರೊ ಅವರಿಗೆ ನಮ್ಮಕೈಯಿಂದ ಇಷ್ಟಾರ್ಥವಂಕೊಡಿಶೇನು ಎಂದು ಬಿನ್ನವಿಸಲು, ಪರಮೇಶ್ವರನಿಂತೆಂದನು, ಎಲೆದೇವಿ ! ನೀನು ನನದಯತ್ನ ಮಹಾಚನ್ನಾಯಿತು ಧರ್ಮೇಶ್ವರನ ಭಕ್ತರೇಧನ್ಯರು, ನಿನ್ನಸ್ವರೂಪಳಾದವಿಶ್ವಭುಜಾದೇವಿಯು ಭಕ್ತರಕೃತಕೃತ್ಯರು, ಎಲೆವಿಶ್ವಭುಜೆ, ವಿಶ್ವರೂಪಳೆ

ಉತ್ಪತ್ತಿ, ಸ್ಥಿತಿಲಯಕಾರಣೆ, ಮಹಾದೇವಿಯು, ನಿನ್ನಪೂಜಿಸಿದವರ್ಗ್ಳನಿ ರ್ಮಲಸ್ವರೂಪಿಗಳು, ಮನೋರಥ ತದಿಗೆಯಲ್ಲಿ ನಿನ್ನಪೂಜಿಸಿದವರು ಎನ್ನಅನುಗ್ರಹದಿಂದ ಮನೋರಥಗಳಂಪಡೆದು ಅತ್ಯಂತವಿಶ್ವಾಸಜ್ಞಾನಿಗ ಳಹರು, ಇಂತೆಂಬ ಪರಮೇಶ್ವರನ ವಾಕ್ಯಮಂಕೇಳಿ ದೇವಿಇಂತೆಂದಳು, ಎಲೈದೇವ! ಮನೋರಥತದಿಗೆ ವ್ರತವೆಂದರೇನು, ಆವ್ರತವ ಆವಾಗ ಮಾಡಬೇಕೊ? ಮಾಡಿಸುವರಾರೊ? ಆವ್ರತವಮಾಡುವ ಕ್ರಮವೆಂ ತೊ? ಅದರಿಂದ ಫಲವೇನು, ಎಂದುಬಿನ್ನವಿಸಲು ಪರಮೇಶ್ವರನಿಂತೆಂದನು ಎಲೇದೇವಿ! ವ್ರತವು ಪರಮರಹಸ್ಯವಾದುದು, ಈವ್ರತಾಚರಣೆಯಿಂದ ಮಸ್ತಪಾಪಗಳು ಪರಿಹರವಾಗಿ ಸಕಲಸಂಪತ್ತುಗಳು ಉಂಟಾಗುವವು ಅಂಥಾ ವ್ರತವಂಪೇಳುವೆನುಕೇಳು, ಪೂರ್ವದಲ್ಲಿ ಇಂದ್ರನರಾಣಿಯಾದ ಶಚೀದೇವಿಯು ತನ್ನಮನೋರಥಸಿದ್ಧಿಗೋಸ್ಕರ ಲಿಂಗಪ್ರತಿಷ್ಠೆಯಂಮಾ ಡಿಕೊಂಡು ಉಗ್ರತಪದಿಂ ಎನ್ನಪೂಜಿಸಿದಳು, ಮಧುವಾದಗಾನದಿಂ ಎ ನ್ನಸಂತೋಷಪಡಿಸಲು ತಾನುಪ್ರಸನ್ನನಾಗಿ ವರವಬೇಡಿಕೊ ಎನಲು, ಶ ಚೀದೇವಿ ಇಂತೆಂದಳು, ಎಲೈ ಮಹಾದೇವನೆ ನೀವು ಎನಗೆ ಪ್ರಸನ್ನನಾಗಿ ವರವನೀವುದುಂಟಾದರೆ ಸಕಲರೊಳು ಶ್ರೇಷ್ಠನಾಗಿ ರೂಪವಂತನಾಗಿ ಪೂಜ್ಯನಾಗಿ ಯಜ್ಞವಮಾಡಿದವರೊಳು ಅಧಿಕನಾಗಿ ಮೂರುಲೋಕ ವನ್ನುಆಳುವ ಭಾಗ್ಯಾಧಿಕನು,ಎನಗೆ ಪತಿಯಾಗಬೇಕು ಎನ್ನಮನದಲ್ಲಿ ಇ ಷ್ಟಂತೆ ಆಯುಷ್ಯ ರೂಪು ಸುಖಗಳ ಕೊಡಬೇಕು. ಆವವೇಳೆಯಲ್ಲಿ ಆ ವರೂಪಿನಿಂದ ಎನ್ನಪತಿಯೊಡನೆ ಕ್ರೀಡಿಸಬೇಕಾದಾಗ ನೆನೆದರೂಪಸಾಮ ರ್ಥ್ಯವಂಕೊಡಬೇಕು. ಜರಾಮರಣಗಳಿಲ್ಲದಂತೆ ವರವನೀಯಬೇಕು. ಲಿಂಗರೂಪಾದ ನಿಮ್ಮಪೂಜೆಯಲ್ಲಿ ದೃಢಭಕ್ತಿಯಂ ಕೃಪೆಮಾಡಬೇಕು ಪತಿವಿಯೋಗವಾದರು ಮುತ್ತೈದೆತನವು ಪತಿವ್ರತತನವು ಕೆಡದಿರಬೇಕು ಕೇಳೈಅಗಸ್ತ್ಯನೆ? ಈ ಪ್ರಕಾರದಿಂ ಶಚೀದೇವಿ ತನ್ನಮನೋರಥಗಳಂ ಬೇಡಿಕೊಳ್ಳಲು, ಈಶ್ವರನುಕೇಳಿ ಆಶ್ಚರ್ಯಪಟ್ಟು ಮುಗುಳುನಗೆಯಿಂದ ಇಂತೆಂದನು, ಎಲೆಪುಲೋಮಜೆ! ನಿನ್ನಮನೋರಥವಾಗಬೇಕಾದರೆ ಮ ನೋರಥತದಿಗೆಯ ವ್ರತವಂ ಮಾಡಬೇಕೆನಲು, ಶಚೀದೇವಿಇಂತೆಂದಳು,

ಎಲೆಸ್ವಾಮಿ! ನೀವುಬುದ್ಧಿಗಳಿಸಿದ ವ್ರತವಂಮಾಡುವಪ್ರಕಾರವನ್ನು ಬುದ್ಧಿಗಳಿಸಬೇಕೆನಲು, ಪರಮೇಶ್ವರನಿಂತೆಂದನು,ಎಲೆಶಚೀದೇವಿಯೆ! ಮನೋರಥತದಿಗೆಯೆ ವ್ರತವಮಾಡಬೇಕಾದರೆ ಇಪ್ಪತ್ತು ಭುಜವುಳ್ಳ ವಿಶ್ವಭುಜಾದೇವಿಯನ್ನು ವಿಧಾನದಿಂ ಪೂಜಿಸಬೇಕು. ಹ್ಯಾಗೆಂದರೆ-ಆ ದೇವಿಯುಮುಂದೆ ಇಹ ವರದಾಭಯ ಮೋದಕ ಅಕ್ಷಮಾಲೆಯಂಧರಿಸಿದ ಆಶಾ ವಿನಾಯಕನನ್ನು ಷೋಡಶೋಪಚಾರದಿಂ ಪೂಜಿಸಿ ಅನಂತರ ವಿಶ್ವಭುಜಾದೇವಿಯಂ ಪೂಜಿಸಬೇಕು. ಆ ವ್ರತದ ನಿಯಮವೆಂತೆಂದರೆ, ಚೈತ್ರಶುದ್ಧತದಿಗೆಯದಿವಸ ಪ್ರಾತಃಕಾಲದಲ್ಲಿ ಎದ್ದು ದಂತಧಾವನವಂಮಾಡಿಕೊಂಡು ಸ್ನಾನವಂಮಾಡಿ ಮರುದಿನ ಅರುಣೋದಯದಲ್ಲಿ ಎದ್ದು ಅಶೋಕಕಾಷ್ಠದಿಂದ ದಂತಧಾವನವಂ ಮಾಡಿಕೊಂಡು ಸುಶೀಲಸ್ನಾನವಂಮಾಡಿ ಶುಭ್ರವಸ್ತ್ರವಂಧರಿಸಿ ಮೊದಲು ಆಶಾವಿನಾಯಕನಂ ಪೂಜಿಸಿ ತುಪ್ಪದಿಅಡಿಗೆಯಮಾಡಿದ ಕಜ್ಜಾಯವನ್ನೈವೇದ್ಯವಂಮಾಡಿ ಅನಂತರ ವಿಶ್ವಭುಜಾದೇವಿಯಂ ಪೂಜಿಸಬೇಕು ಈ ಪ್ರಕಾರದಲ್ಲಿ ಚೈತ್ರಶುದ್ಧತದಿಗೆಆರಭ್ಯ ಫಾಲ್ಗುಣಶುದ್ಧತದಿಗೆ ಪರಿಯಂತರ ಈ ವ್ರತವಂಮಾಡಿ ಹನ್ನೆರಡುತದಿಗೆಯಲ್ಲಿ ಹೇಳಿದಕ್ರಮದಲ್ಲಿ ಹನ್ನೆರಡುದಂತಕಾಷ್ಠಂಗಳು ಗಂಧ, ಪುಷ್ಪ, ಧೂಪ, ದೀಪಂಗಳಿಂ ಗೌರೀವಿನಾಯಕರಂ ಪೂಜಿಸಿ ನೈವೇದ್ಯವಂಮಾಡಿ ವ್ರತವಮಾಡುವರು, ಆ ನೈವೇದ್ಯದಿಂದ ಏಕಭಕ್ತವಂ ಮಾಡಿ ಈವ್ರತಕ್ರಮದಿಂ ಮಾಡುವದು, ಆಕ್ರಮವೆಂತೆಂದರೆ, ಅಶೋಕೆ, ನೇರಿಲು, ಉತ್ತರಣೆ, ಕಗ್ಗಲಿ, ಜಾಜಿ, ಮಾವು, ಕಡವಿ, ಬಸುರಿ, ಅತ್ತಿ, ಖರ್ಜೂರ, ಮಾದಲ, ದಾಳಿಂಬ, ಈ ಹನ್ನೆರಡು ದಂತಕಾಷ್ಠಂಗಳು, ಚಂದ್ರ, ಕರಿಅಗಿಲು, ಬಿಳೀಅಗಿಲು, ಕಸ್ತೂರಿ, ಶ್ರೀಗಂಧ, ಚಂದನ, ಗೋರೋಚನ, ತಾವರೇಮಣಿಯಗಂಧ, ಅರಿಶಿನ, ಮರದರಿಶಿನ, ಯಕ್ಷಕರ್ದಮ, ಮುತ್ತಕ ಈಹನ್ನೆರಡು ಗಂಧಂಗಳೂ ದೊರೆಕದಿದ್ದರೆ,ಯಕ್ಷಕರ್ದಮವನೊಂದನೆ,ಸಮರ್ಪಿಸುವದು ಯಕ್ಷಕದಮವ್ಯಾವುದೆಂದರೆ, ಕಸ್ತೂರಿಎರಡುಭಾಗ, ಕುಂಕುಮಕೆಸರಮೂರುಭಾಗ, ಶ್ರಿಗಂಧಎರಡುಭಾಗ, ಕರ್ಪೂರ ಮೂರುಭಾಗ, ಇವಂದಂದುಗೂಡಿ ಕಲ

ಸಲು, ಯಕ್ಷಕರ್ದಮ ವೆನಿಸುವದು, ಪಾದರೀಪುಷ್ಪ, ಮಲ್ಲಿಗೆ, ತಾವರೆ, ಕೇತಕಿ, ಕಣಿಗಲು, ನೈದಿಲು, ಸಂಪಿಗೆ, ಸಂಪವರ್ಧನ, ಜಾಜಿ ತೆರಣ, ಬಿಟ್ಟದಾವರೆ, ಕೆಂಪಿನತೇರಣ, ಇವು ಹನ್ನೆರಡು ಪುಷ್ಪಂಗಳು ಇವುದೊರಕದಿದ್ದರೆ ಪರಿಮಳದ ಪುಷ್ಪದಿಪೂಜಿಸುವದು, ಕರೀಅಗಿಲು ಬಿಳಿಅಗಿಲು, ಗುಗ್ಗಳ, ಸಜ್ಜರಸ, ಮುಸುರ, ಶಿಖಿತುಪ್ಪ, ದೇವದಾರು ಶ್ರೀಗಂಧ ಚೆಕ್ಕಿ, ವತ್ತದಹಣ್ಣು, ಜಟಾಮಾಂಸಿ, ಅರಗು, ಕಪಿಲೆಹಸುವಿನಘೃತ, ಇವು ಹನ್ನೆರಡು ಧೂಪಂಗಳು, ಇವುದೊರಕದಿದ್ದರೆ ಸಾಂಬ್ರಾಣಿ ಧೂಪವಂ ಸಮರ್ಪಿಸುವದು. ಪಟ್ಟೆಯನೂಲು, ತಾವರೆದಂಟಿನನೂಲು, ಎಕ್ಕದ ಬೂರುಗದ ಹತ್ತಿಯಗಿಡದ ಅರಳೆಗಳು, ಕರ್ಪೂರದ ಈಬಗೆ ಬತ್ತಿ ಇಲ್ಲದಿದ್ದರೆ ಅರಳೆಬತ್ತಿ, ಕಪಿಲೆಘೃತ, ಇಲ್ಲದಿರೆ ತೈಲ, ಒಬ್ಬಟ್ಟಸ ಹೋಳಿಗೆ, ಎಣ್ಣೆಹೋಳಿಗೆ, ಪುದ್ದಿನವಡೆ ಪುಳ್ಳಿಮುಂಡಿಗೆ, ಸಕ್ಕರೆಬುರುಡೆ ಒಡ್ಡಲಿಗೆ ಲಡ್ಡಿಗೆ, ಶಾವಿಗೆ, ಮುಟ್ಟಿಗೆ, ಕರಜೀಕಾಯಿ, ಅತಿರಸ, ಎಳ್ಳ ಸೋನಲಕಡಬು, ಇವು ಹನ್ನೆರಡು ನೈವೇದ್ಯವು, ದೊರಕದಿದ್ದರೆ ಹೂರಣಕಡಬು, ನೈವೇದ್ಯ, ಕರ್ಪೂರದವಡಿಕೆ, ಯೇಳುಬಿಳಿಎಲೆ, ಶೋಧಿಸಿದ ಬಳ್ಳಿಕೆನೆಸುಣ್ಣ, ಇವುವೀಳ್ಯ, ಈ ಹೇಳಿದಪ್ರಕಾರದಲ್ಲಿ ಆಶಾವಿನಾಯಕನಿಗೆ ವಿಶ್ವಭುಜಾದೇವಿಗೆ ಪೂಜೆಯಂಮಾಡಿ ನೈವೇದ್ಯವನೆ ನಕ್ತವ್ರವಾಗಿ ಒಪ್ಪತ್ತು ರಾತ್ರಿಯಲ್ಲಿ ಭೋಜನವಂಮಾಡುವದು ಮತ್ತೊಂದು ಅನ್ನವು ವ್ರತಭಂಗವಹುದು, ಈ ರೀತಿಯಲ್ಲಿ ಚೈತ್ರಶುದ್ಧತದಿಗೆ ಆರಭ್ಯ ಫಾಲ್ಗುಣಶುದ್ಧತದಿಗೆ ಪರಿಯಂತರವು ಒಂದುವರುಷತನಕ ವ್ರತವಮಾಡಿ ವ್ರತಪೂರ್ಣಕ್ಕೋಸ್ಕರ ಅಗ್ನಿಪ್ರತಿಷ್ಟೆಯಂಮಾಡಿಕೊಂಡು ರಾತ್ರಿಯಲ್ಲಿ ತಿಲಾಜ್ಯಮಂಸೂರಿಸಿಟು ಆಹುತಿಯಂಮಾಡುವದು. ಪೂಜೆಯ ದಬಳಿಕ ಎದ್ದು ಕೈಮುಗಿದು ಎಲೆವಿಶ್ವಭುಜೆ, ಜಗನ್ನಾಥೆ, ತಾನುಭಕ್ತಿಯಿಂದ ಮಾಡಿದ ಪೂಜೆಯನ್ನು ಆಶಾವಿನಾಯಕಸಹಿತವಾಗಿ ಪರಿಗ್ರಹಿಸಿ ಎನ್ನಮನೋರಥಗಳಂ ಕೊಟ್ಟು ಸಮಸ್ತವಿಘ್ನಗಳಂ ಪರಿಹರಿಸು ಎಲೈ ಆಶಾವಿನಾಯಕನೆ! ಭಕ್ತಿಯಿಂದ ನಾನುಮಾಡಿದಪೂಜೆಯನ್ನು ವಿಶ್ವಭುಜಾಗೌರಿಸಹಿತ ಪರಿಗ್ರಹಿಸಿ ಎನ್ನ ಮನೋರಥಂಗಳಂ ಕೃಪೆಮಾಡೋ

ಈ ಪ್ರಕಾರವಾಗಿ ಪ್ರತಿಪೂಜೆಯಲ್ಲಿಯೂ ಗೌರಿವಿಘ್ನೇಶ್ವರರ ಪ್ರಾರ್ಥಿಸಿ ಒಂದುವರ್ಷವಾದಬಳಿಕ ಉದ್ಯಾಪನೆಯಂ ಮಾಡಬೇಕು. ಉದ್ಯಾಪನೆಯಲ್ಲಿ ಪಟ್ಟೆಮಂಚ, ಸುಪ್ಪತ್ತಿಗೆ, ತಲದಿಂಬು, ದೀವಿಗೆಕಂಬ, ಕನ್ನಡಿ, ಮೊದಲಾದ ದಾನವನಿತ್ತು ಆಮಂಚದಮೇಲೆ ಆಚಾರ್ಯನಂ ಆತನ ಸ್ತ್ರೀಸಹಿತ ಕುಳ್ಳಿರಿಸಿ ವಸ್ತ್ರ, ಗಂಧ, ಪುಷ್ಪ, ಭೂಷಣ, ದಕ್ಷಿಣೆಯನಿತ್ತು, ಪೂಜಿಸಿ ಹಾಲುಕರೆಯುವ ಕಪಿಲೆಯ ಹಸುವು ಕರುವು ಸಹಿತವಾಗಿ ದಾನವನಿತ್ತು ಮತ್ತು ಭೋಗಯೋಗ್ಯವಾದ ಸತ್ತಿಗೆ ಪಾವುಗೆ ಕಮಂಡಲುಮೊದಲಾದ ವಸ್ತುಗಳನಿತ್ತು ತಾನುಮಾಡಿದ ಮನೋರಥತದಿಗೆಯ ವ್ರತವು ನ್ಯೂನಾತಿರಿಕ್ತವಿಲ್ಲದೆ ಸಂಪೂರ್ಣವಾಗುವಂತೆ ಕರುಣಿಸುವದು, ಎಂದು ಪ್ರಾರ್ಥಿಸಿ ಸಂತೋಷಪಡಿಸಿ ಆದಂಪತಿಗಳ ಕೈಯ್ಯ ಆಶೀರ್ವಾದವಂತೆಕೊಂಡು ಆಚಾರ್ಯನಂ ಸ್ತ್ರೀಸಹಿತ ಮನೆಗೆಕಳುಹಿ ಮಿಕ್ಕಾದಬ್ರಾಹ್ಮಣರನ್ನು ಅನ್ನಪಾನದಕ್ಷಿಣೆ ತಾಂಬೂಲಗಳಿಂಸತ್ಕರಿಸಿ ಆಮೇಲೆತಮ್ಮ ನಂಟರಿಷ್ಟರು ಸಹಿತ ರಾತ್ರಿಭೋಜನವಂಮಾಡಿ ಮರುದಿನ ನಾಲ್ವರು ಬ್ರಹ್ಮಚಾರಿಗಳು ಹನ್ನೆರಡುಮಂದಿ ಕನ್ಯಕೆಗಳಿಗೂ ಭೋಜನವಮಾಡಿಸಿ ಅವರನ್ನು ವಸ್ತ್ರಭೂಷಣ ದಕ್ಷಿಣೆಗಳಿಂ ಸಂತುಷ್ಟಪಡಿಸಲು ವ್ರತಪೂರ್ತಿಯಹುದು. ಈ ವ್ರತಮಂಸ್ತ್ರೀಪುರುಷರೆಲ್ಲರು ಮಾಡಬಹುದು, ಈ ವ್ರತವಂ ಪುರುಷರು ಮಾಡಲು ಮನೋಹರಳಾದ ಭಾಗ್ಯವಂತೆಯಾಗಿ ಪತಿವ್ರತೆಯಾದ ತನ್ನವಶವರ್ತಿನಿಯಾದ ಇಹಪರಕ್ಕೆ ಸಾಧನಳಾದ ಸ್ತ್ರೀಲಾಭವಹುದು, ಕೊಡಗೂಸುಮಾಡಲು ಸರ್ವಗುಣಸಂಪನ್ನನಾದ ಪತಿದೊರಕುವನು, ಮುತ್ತೈದೆ ಆಚರಿಸಲು ಸುಪುತ್ರರಹರು, ದರಿದ್ರರುಮಾಡಲು ಐಶ್ವರ್ಯವಂತರಹರು, ಜನ್ಮಾಂತರದಲ್ಲಿ ವಿಧವಾತ್ವವಿಲ್ಲದೆ ಸುಲಕ್ಷಣೆಯಹಳು, ಗರ್ಭಿಣಿ ಆಚರಿಸಲು, ಸರ್ವಗುಣಸಂಪನ್ನನಾದ ಸುಪುತ್ರನಂ ಪಡೆವಳು. ಬ್ರಾಹ್ಮಣಮಾಡಲು, ಚತುರ್ವೇದಪಂಡಿತನಹನು, ರಾಜ್ಯಹೀನನಾದ ಕ್ಷತ್ರಿಯಮಾಡಲು ರಾಜ್ಯವಂ ಪಡೆವನು, ವೈಶ್ಯಮಾಡಲು ಧನವಂತನಹನು, ಶೂದ್ರಮಾಡಲು ಇಷ್ಟಾರ್ಥಸಿದ್ಧಿಯಹುದು, ಧರ್ಮಾರ್ಥಗಳಿಗೆಧ

ರ್ಮವು ಕಾಮ್ಯಾರ್ಥಿಗಳಿಗೆಕಾಮ್ಯವು ಅರ್ಥಾರ್ಥಿಗಳಿಗೆಅರ್ಥವು ಮೋಕ್ಷಾರ್ಥಿಗಳಿಗೆಮೋಕ್ಷವು ಆರಾರು ಏನಬಯಸುವರೋ ಆ ಮನೋರಥಗಳೆಲ್ಲವು ಕೈಗೂಡುವವು, ಇಂತೆಂದು ಪರಮೇಶ್ವರನಿರೂಪಿಸಲು, ದೇವಿಯುರು ಕೇಳ್ದು ಮಹಾಸಂತೋಷಪಟ್ಟು ಕೈಮುಗಿದು ಇಂತೆಂದುಬಿನ್ನೈಸಿದಳು, ಎಲೈಮಹಾದೇವನೆ! ನೀವುಬುದ್ಧಿಗಲಿಶಿದ ಈ ವ್ರತಕ್ಕೆ ಈ ದಿನಗಳಲ್ಲದೆ ಮಿಕ್ಕಾದಕಾಲಗಳಲ್ಲಿ ಈ ಪ್ರಕಾರ ವ್ರತವಮಾಡುವ ಕಾಲವಾವುದು. ಎನಲು, ಎಲೆದೇವಿ ಕಾಶೀಕ್ಷೇತ್ರದಲ್ಲಿ ನಿನ್ನನ್ನು ಆಶಾವಿನಾಯಕನನ್ನು ಯಾವಾಗಪೂಜಿಸಲು ಸರ್ವಕಾರ್ಯಸಿದ್ಧಿ,ನಿಮ್ಮಪೂಜಿಸಿ,ದೇಶಾಂತರಕ್ಕೆ ಪೋಗಲು, ಕಾರ್ಯಕೈಗೂಡಿ ಶೀಘ್ರದಿಂ ಮನೆಗೆಬಹನು, ಈ ವ್ರತವಮಾಡಿದವರು ಒಂದುಹಲತೂಕ ಸುವರ್ಣದಿಂದ ನಿನ್ನವಿನಾಯಕನ ಪ್ರತಿಮೆಗಳಂ ಮಾಡಿಸಿ ಈ ಪೂರ್ವೋಕ್ತ ಪ್ರಕಾರದಲ್ಲಿ ಪೂಜಿಸಿ ವ್ರತಾಂತ್ಯದಲ್ಲಿ ಎರಡುಪ್ರತಿಮೆಗಳನ್ನು ಆಚಾರ್ಯನಿಗೆ ದಾನವಂಕೊಟ್ಟು ಇಂಥಾವ್ರತವನ್ನು ಜನ್ಮದೊಳಗಾಗಿ ಒಂದುಭಾರಿ ಮಾಡಿದರುಕೃತಕೃತ್ಯರಹರು, ಎಂದುಪರಮೇಶ್ವರನು ಪೇಳ್ದವ್ರತವಂ ಶಚೀದೇವಿಕೇಳಿ ಸಂತೋಷಬಟ್ಟು ಈ ವ್ರತವಂಮಾಡಿ ತನ್ನ ಅಭಿಲಾಷೆಯಂ ಪಡದಳು, ಅರುಂಧತಿಮಾಡಲು, ವಸಿಷ್ಠನು ಪತಿಯಾದನು, ಸುನೀತಿಮಾಡಲು ಉತ್ತಾನಪಾದರಾಯನಿಂದ ಧ್ರುವನೆಂಬ ಕುಮಾರನಾದನು, ಆವಳ ನಿರ್ಭಾಗ್ಯತ್ವಬಿಟ್ಟಿತು, ಲಕ್ಷ್ಮೀದೇವಿಮಾಡಲು, ವಿಷ್ಣುಪತಿಯಾದನು, ಈ ವ್ರತವನೊಂದವಮಾಡಲು, ಸಕಲವ್ರತಗಳಮಾಡಿದ ಫಲಪಹುದು, ಈ ವ್ರತದಅಧ್ಯಾಯಮಂ ಭಕ್ತಿಯಿಂದ ಕೇಳಿದವರು ಪಾಪರಹಿತರಾಗಿ ಸಕಲಐಶ್ವರ್ಯಮಂ ಪಡೆದರೆಂದು ಕುಮಾರಸ್ವಾಮಿ ಅಗಸ್ತ್ಯಂಗೆ ಬುದ್ಧಿಗಲಿಸಿದರೆಂದು ವ್ಯಾಸರು ತನಗರುಹಿದರೆಂದು ಸೂತಪುರಾಣೀಕನು ಶೌನಕಾದಿಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯರ್ಥ * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ವಡಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾ

ಣೋಕ್ತ ಕಾಶೀಪುಹಿಮಾರ್ಥದರ್ಪಣದಲ್ಲಿ ಮನೋರಥತದಿಗೆವ್ರತದವಿಧಾ ನವಂಪೇಳ್ದ ಎಂಭತ್ತನೆಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ.

ಎಂಭತ್ತೊಂದನೇ ಅಧ್ಯಾಯಂ.

ಧರ್ಮೇಶ್ವರನಮಹಾತ್ಮೆ ತೀರ್ಥಮಹಾತ್ಮೆ.

ಶ್ರೀ ವಿಶ್ವೇಶ್ವರಾಯನಮಃ ॥ ಅನಂತರದಲ್ಲಿ ಅಗಸ್ತ್ಯನಿಂತೆಂದನು, ಎಲೈ ಕುಮಾರಸ್ವಾಮಿಯೆ! ಪರಮೇಶ್ವರನು ಪಾರ್ವತೀದೇವಿಯರ್ಗೆ ನಿರೂಪಿಸಿದ ಧರ್ಮತೀರ್ಥದ ಮಹಿಮೆಯನ್ನು ಎನಗೆ ನಿರೂಪಿಸಬೇಕೆನಲು ಕುಮಾರಸ್ವಾಮಿ ಇಂತೆಂದನು, ಕೇಳೈ ಅಗಸ್ತ್ಯ! ಪರಮೇಶ್ವರನು ದೇವಿಯರಿಗೆ ಬುದ್ಧಿಗಲಿಸಿದಂಥಾ ಧರ್ಮತೀರ್ಥದ ಮಹಿಮೆಯನ್ನು ನಿರೂಪಿಸಬೇಕೂ ಎಂದೆಯಲ್ಲಾ ಆದರೆಕೇಳು, ಪೂರ್ವದಲ್ಲಿ ದೇವೇಂದ್ರನು ವೃತ್ರಾಸುರನೆಂಬರಾಕ್ಷಸನ ಸಂಹಾರವಂಮಾಡಿ ಬ್ರಹ್ಮಹತ್ಯವನ್ನೈದಿ ಪಶ್ಚಾತ್ತಾಪಬಟ್ಟು ತಮ್ಮ ಪುರೋಹಿತನಾದಬೃಹಸ್ಪತಿಯನ್ನು ಇದಕ್ಕೆ ಪ್ರಾಯಶ್ಚಿತ್ತವೇನೆಂದು ಕೇಳಲು ದೇವೇಂದ್ರಂಗೆ ಬೃಹಸ್ಪತಿ ಇಂತೆಂದನು— ಎಲೈದೇವೇಂದ್ರನೆ! ನಿನಗೆ ಈ ಬ್ರಹ್ಮಹತ್ಯವ ಪರಿಹರಿಸುವಡೆಶಕ್ಯವಲ್ಲ, ಬ್ರಹ್ಮಹತ್ಯ ಪಾಪಪರಿಹಾರವ ಮಾಡಿಕೊಳ್ಳಬೇಕಾದರೆ ವಿಶ್ವಪತಿ ಆಳುವ ಕಾಶೀಪಟ್ಟಣಕ್ಕೆ ಹೋಗು ಎಲ್ಲಿಯೂ ಬ್ರಹ್ಮಹತ್ಯವೆಂಬ ರೋಗವಂಪರಿಹರಿಸುವಡೆ ಔಷಧವನೊಂದನೂ ಕಾಣೆನು, ಆ ಕಾಶೀಕ್ಷೇತ್ರದಲ್ಲಿ ಭೈರವನಹಸ್ತವಂಪಿಡಿದ ಬ್ರಹ್ಮನ ಕಪಾಲಮೋಕ್ಷವಾಯಿತು ಕಾಶೀಕ್ಷೇತ್ರಕ್ಕೆ ಹೋದಮಾತ್ರದಲ್ಲಿಯೇ ಬ್ರಹ್ಮಹತ್ಯ ಮೊದಲಾದ ಪಾಪಗಳು ಭಯಪಟ್ಟು ಇನ್ನು ಬಂದೂ ಆಶ್ರಯವಿಲ್ಲವೆಂದು ಪೋಡುವವು, ವಿಶ್ವೇಶ್ವರಂಗೆ ನಿವಾಸವಾದಕಾಶೀಕ್ಷೇತ್ರವು ಮಹಾಪಾತಕಂಗಳಂ ಪರಿಹರವಮಾಡುವದು, ಮಹಾಪಾತಕಗಳಿಗೂ ಮಹಾಸಂಸಾರಪಾಶಕ್ಕೂ ಕಾಶೀಕ್ಷೇತ್ರದಲ್ಲಿಯಲ್ಲದೆ ಬಿಡುಗಡೆಯಾಗದು, ಕಾಶಿಯೇಮೋಕ್ಷನಗರ, ಪಾಪಹಾರಿ, ಕಾಶಿಯೇ ವಿಶ್ವನಾಥಂಗೆ ಪ್ರಿಯವಾದುದು ಕಾಶಿಗೆಸಮಾನವಾದಕ್ಷೇತ್ರವಿಲ್ಲ, ವಿಶ್ವನಾಥಗೆ ಸಮಾನವಾದಲಿಂಗವಿಲ್ಲ ಬ್ರಹ್ಮಹತ್ಯ ಮೊದಲಾದ ಪಾತಕಂಗಳಿಗೂ ಸಂಸಾರಪಾಶಕ್ಕೂ ಹೆದರುವರು ಒಂದುನಿಮಿಷವಾದರೂ ಕಾಶಿಯಂಬಿಡ

ಹಾಗವು, ಕಾಶಿಯಲ್ಲಿ ಶರೀರತ್ಯಾಗವಂಮಾಡೆ ನಾನಾಕರ್ಮಬೀಜಂಗಳು ಪರಮೇಶ್ವರನ ನಯನಾಗ್ನಿಯಿಂದ ಭಸ್ಮವಹವು. ಎಂದಿಗೂ ಮೋಕ್ಷದೋರವು. ಅಂಥಾಕಾಶೀಪಟ್ಟಣಕ್ಕೆಹೋಗಿ ವಿಶ್ವನಾಥನ ಆರಾಧನೆಯಂಮಾಡಲು ಬ್ರಹ್ಮಹತ್ಯಾಪರಿಹಾರವೆಂದು ಬೃಹಸ್ಪತಿನಿರೂಪಿಸಲು, ಇಂದ್ರನು ಶೀಘ್ರದಿಂದ ಮಹಾಪಾತಕಸಂಹಾರಿಯಾದ ಕಾಶೀಪಟ್ಟಣಕ್ಕೆಹೋಗಿ ಉತ್ತರವಾಹಿನಿಯಾದ ಗಂಗೆಯಲ್ಲಿ ಸಚೇಲಸ್ನಾನವಂಮಾಡಿ ಧರ್ಮೇಶ್ವರನಸಮೀಪದಲ್ಲಿ ಕುಳಿತು ಮಹಾರುದ್ರಜಪವಂಮಾಡುತ್ತಿರಲು ತನ್ನಕಾಂತಿಯಿಂದ ಬೆಳಗುತ್ತಿದ್ದಂಥ ಧರ್ಮೇಶ್ವರಲಿಂಗಮಧ್ಯದಿಂ ಹೊರಪಟ್ಟು ಬಂದು ಪ್ರಸನ್ನನಾದ ಮಹಾದೇವನಂನೋಡಿ ಸಾಷ್ಟಾಂಗನಮಸ್ಕಾರವಂಮಾಡಿ ವೇದೋಕ್ತಗಳಾದ ರುದ್ರಸೂಕ್ತಗಳಿಂದ ಸ್ತುತಿಯಂಮಾಡಲು ಮಹಾದೇವನಿಂತೆಂದನು, ಎಲೈಶಚೀರಮಣನೆ ! ನಿನಗೆ ನಾನುಪ್ರಸನ್ನನಾದೆನು, ಬೇಕಾದವರವ ಬೇಡಿಕೋ ಧರ್ಮಪೀಠದಲಾರಾಧನೆಯಂ ಮಾಡಿದ ನಿನಗೆ ಅಸಾಧ್ಯವೇನಿದ್ದೀತು, ನಿನ್ನ ಭಕ್ತಿಗೆಸಂತುಷ್ಟನಾದೆನು, ವರವ ಕೇಳಿಕೋ ಎಂದು ಪ್ರೀತಿಯಿಂದನುಡಿದ ಈಶ್ವರನವಾಕ್ಯಾಮೃತದಿಂದ ಆಪ್ಯಾಯನಂಬಟ್ಟ ದೇವೇಂದ್ರನಿಂತೆಂದನು—ಎಲೈಸರ್ವಜ್ಞನಾದ ಸ್ವಾಮಿಯೆ ! ನೀವು ಅರಿಯದ ಪ್ರಪಂಚವೇನುಯಿದ್ದೀತು, ಎನಲು, ಇಂದ್ರನವಾಕ್ಯವಂಕೇಳಿ ಕೃಪೆಯಿಂದ ಎಲೆಇಂದ್ರನೆ! ನೀನು ಈ ನಿಷ್ಪಾಪನೆಂಬ ತೀರ್ಥದಲ್ಲಿ ಸ್ನಾನವಂಮಾಡು ಇಲ್ಲಿ ಸ್ನಾನವಂಮಾಡಿದಮಾತ್ರದಿಂದಲೆ ನಿನ್ನ ಬ್ರಹ್ಮಹತ್ಯಾ ಪಾಪಪರಿಹಾರವಾದೀತು ಎಂದು ಮಹಾದೇವನು ಬುದ್ಧಿಗಲಿಸಲು ಇಂದ್ರನು ಈ ತೀರ್ಥದಲ್ಲಿ ಸ್ನಾನವಂಮಾಡಿದ ಮಾತ್ರದಲ್ಲಿಯೆ ಮಹಾಪಾತಕವಾದ ಬ್ರಹ್ಮಹತ್ಯಾ ಪರಿಹಾರವಾಗಿ ದಿವ್ಯಾಗಂಧವುಳ್ಳ ದೇಹವುಳ್ಳವನಾಗಿ ಮುನ್ನಿನಂತೆ ದೇಹಕಾಂತಿಯಂಪಡೆದನು, ಈ ಆಶ್ಚರ್ಯವಂ ನಾರದಾದಿ ಮುನಿಗಳು ಕಂಡು ಮಹಾಸಂತೋಷದಿಂ ನಿಷ್ಪಾಪತೀರ್ಥದಲ್ಲಿ ಸ್ನಾನವಂಮಾಡಿ ಅಲ್ಲಿಶ್ರಾದ್ಧಾದಿಕ್ರಿಯೆಗಳಂಮಾಡಿ ಅನೇಕಸುವರ್ಣದ ಘಟಗಳಿಂದ ಆ ಉದಕವಂ ತುಂಬಿತಂದು ಧರ್ಮೇಶ್ವರಗೆ ಅಭಿಷೇಕವಂಮಾಡಿ ದರ್ಶನಪೂಜೆಯಂಮಾಡಿತಮ್ಮಲೋ

ಕಕ್ಕೆ ಹೋದರು, ಅಂದುಮೊದಲಾಗಿ ನಿಷ್ಪಾಪವೆಂಬ ತೀರ್ಥವು ಧರ್ಮ ತೀರ್ಥವೆಂದು ಹೆಸರಾಯಿತು, ಪ್ರಯಾಗದಲ್ಲಿ ಮಕರಸ್ನಾನವಂ ಮಾಡಿದರೆ ಬ್ರಹ್ಮಹತ್ಯಾಪಾತಕವೆಂಬ ಪಂಕವಂ ಪ್ರಯಾಸವಿಲ್ಲದೆ ತೊಳೆವುದೇನಲ ಅದಕ್ಕಿಂತಲು ಸಹಸ್ರಮಡಿಫಲವು ಈ ಧರ್ಮತೀರ್ಥಸ್ನಾನದಿಂದಲಹುದು. ಗಂಗಾದ್ವಾರ, ಕುರುಕ್ಷೇತ್ರ, ಗಂಗಾಸಾಗರ, ಸಂಗಮ, ಇವರಲ್ಲಿ ಸ್ನಾನವಂ ಮಾಡಿದಫಲವು ಈ ಧರ್ಮತೀರ್ಥದ ದರ್ಶನದಿಂದಲಹುದು, ನರ್ಮದೆ, ಸರಸ್ವತಿ, ಗೋದಾವರಿ, ಇವರಲ್ಲಿ ಬೃಹಸ್ಪತಿ ಸಿಂಹ್ಮದಲ್ಲಿದ್ದಾಗ ಸ್ನಾನವಮಾಡಿದಫಲ ಈ ಧರ್ಮತೀರ್ಥದಲ್ಲಿ ಸ್ನಾನವಮಾಡಲು ವಿಶೇಷವು, ಅಧಿಕಫಲವುಂಟು, ಮಾನಸಸರೋವರ, ಪುಷ್ಕರಕ್ಷೇತ್ರ, ದೇವಕಾತೀರ್ಥ, ಸಮುದ್ರದಲ್ಲಿ ಸ್ನಾನವಮಾಡಿದಫಲವು ಈಧರ್ಮತೀರ್ಥದಲ್ಲಿ ಸ್ನಾನವಂ ಮಾಡಲು ವಿಶೇಷ ಕಾರ್ತೀಕಶುದ್ಧ ಪೌರ್ಣಮಿಯಲ್ಲಿ ಕುರುಕ್ಷೇತ್ರದಲ್ಲಿಯೂ ಚೈತ್ರಶುದ್ಧ ಪೌರ್ಣಮಿಯಲ್ಲಿಗೌರೀತೀರ್ಥದಲ್ಲಿಯು ಮೊದಲುಏಕಾದಶಿಯಲ್ಲಿ ಶಂಭೋದಕತೀರ್ಥದಲ್ಲಿಯು ಸ್ನಾನಮೊದಲಾದ ಕರ್ಮಗಳಮಾಡಿದಫಲವು ಈಧರ್ಮತೀರ್ಥದಲ್ಲಿವುಂಟು. ಆತೀರ್ಥಗಳಲ್ಲಿ ಇಂಥಾಪುಣ್ಯದಿನ ಸ್ನಾನವಿಶೇಷ ಈ ಧರ್ಮತೀರ್ಥದಲ್ಲಿ ಸ್ನಾನಪ್ರತಿದಿನದಲ್ಲೂಉಂಟು, ಪಿತೃಗಳು, ನಮ್ಮವಂಶದವರುಬಂದು ಗಂಗೆಯಲ್ಲಿ ಧರ್ಮಕೂಪದಲ್ಲಿ ಸ್ನಾನತರ್ಪಣಗಳಂ ಮಾಡಿ ಪಿತಾಮಹೇಶ್ವರನ, ಧರ್ಮೇಶ್ವರನ ಸಮೀಪದಲ್ಲಿ ಶ್ರಾದ್ಧಗಳಮಾಡರೆ ಎಂದು ಇದಿರುನೋಡುತ್ತಿಹರು, ಕಲಿಯುಗದಲ್ಲಿ ಈ ಧರ್ಮತೀರ್ಥದಲ್ಲಿ ಸ್ನಾನತರ್ಪಣಾದಿಗಳ ಮಾಡಿದವರೆ ಧನ್ಯರು. ಅವರು ಪಿತೃಋಣವ ತಿದ್ದಿದವರು ಈಪ್ರಕಾರದಿಂದ ಧರ್ಮೇಶ್ವರನಮಹಿಮೆಯುಂ ಧರ್ಮತೀರ್ಥದಮಹಿಮೆಯನ್ನು ಪರಮೇಶ್ವರನಿರೂಪಿಸಲು. ದೇವೇಂದ್ರನುಕೇಳಿ ಸಂತೋಷಪಟ್ಟು ಪರಮೇಶ್ವರಗೆ ಪ್ರದಕ್ಷಿಣನಮಸ್ಕಾರವಂ ಮಾಡಿ ದಿವ್ಯವಿಮಾನಾರೂಢನಾಗಿ ಅಮರಾವತಿಗೆ ಪೋದನು, ಪರಮೇಶ್ವರನು ಆ ಧರ್ಮೇಶ್ವರಲಿಂಗದಲ್ಲಿ ಐಕ್ಯವಾದನು, ಎಲೈಅಗಸ್ತ್ಯನೆ ! ಈ ಧರ್ಮಕೂಪತೀರ್ಥದಲ್ಲಿ ಮತ್ತೊಂದು ವಿಶೇಷವುಂಟು. ಧರ್ಮಕೂಪವನೋಡಿದಮಾತ್ರನ

ಲ್ಲಿಯೇ ಶ್ರಾದ್ಧಾದಿಗಳಮಾಡಿದ ಫಲವು, ಆ ತೀರ್ಥದಲ್ಲಿ ಒಂದುಕಾಸನಾ
ದರು ಪಿತೃಗಳನುದ್ದೇಶಿಸಿ ದಾನವಮಾಡಲು ಅನಂತಫಲವಹುದು. ಅಲ್ಲಿ
ಯ ಬ್ರಾಹ್ಮಣರನ್ನು ಯೋಗಿಗಳನ್ನು ತಪಸ್ವಿಗಳನ್ನು ಕರೆದು ಭೋಜ
ನವಮಾಡಿಸಲು, ಒಂಭತ್ತುಅಗುಳಿಗೆ ರಾಜಸೂಯಯಾಗವಮಾಡಿದ
ಫಲ, ದೇವೇಂದ್ರನು ಕಾಶಿಯಿಂದ ತನ್ನ ಅಮರಾವತೀಪಟ್ಟಣಕ್ಕೆ ಹೋ
ಗಿ ಸಭೆಯಲ್ಲಿ ಕುಳ್ಳಿರ್ದು ಧರ್ಮತೀರ್ಥದ ಮಹಿಮೆಯಂ ವರ್ಣಿಸಿದೇ
ವಮುನಿ ಸಮೂಹಗಳೊಡಗೊಂಡು ಕಾಶೀಕ್ಷೇತ್ರಕ್ಕೆಬಂದು ತಾರಕೇ
ಶ್ವರನ ಪಶ್ಚಿಮದಲ್ಲಿ ತನ್ನ ಹೆಸರಲಿಂಗಪ್ರತಿಷ್ಠೆಯಂಮಾಡಿದನು, ಆಸ್ವಾ
ಮಿಯ ಹೆಸರು ಇಂದ್ರೇಶ್ವರನು ಇಂದ್ರೇಶ್ವರನ ದರ್ಶನದಿಂದ ಇಂದ್ರ
ಲೋಕವಾಸವಹುದು. ಆದಕ್ಷಿಣದಲ್ಲಿಹ ಶಚೀದೇವಿಯಿಂ ಪ್ರತಿಷ್ಠೆಯಾ
ದ ಶಚೀಶ್ವರನೆಂಬ ಲಿಂಗವನೋಡಿದಸ್ತ್ರೀಯರ್ಗೆ ಸೌಭಾಗ್ಯವಧಿಕವ
ಹುದು. ಆಸಮೀಪದಲ್ಲಿಹ ದಂತೀಶ್ವರನ ಪೂಜಿಸಲು, ಸೌಖ್ಯಾಭಿವೃ
ದ್ಧಿಯಹುದು. ಆ ಇಂದ್ರೇಶ್ವರನ ಬಳಿಶಿ ಲೋಕಪಾಲಕರೆಲ್ಲರು ತಮ್ಮ
ತಮ್ಮ ಹೆಸರುಗಳಲ್ಲಿ ಲಿಂಗಪ್ರತಿಷ್ಠೆಯಂಮಾಡಿರುವರು, ಆ ಲಿಂಗಗಳ
ಪೂಜಿಸಲು ಲೋಕಪಾಲಕರು ತಮ್ಮತಮ್ಮ ಲೋಕಗಳಲ್ಲಿ ಇರಿಸಿಕೊಂ
ಡು ಸೌಖ್ಯವನೀವರು, ಧರ್ಮೇಶ್ವರನ ಪಶ್ಚಿಮದಲ್ಲಿಹ ಧರಣೀಶ್ವರನ
ಪೂಜೆಯಂಮಾಡಲು ತತ್ಕ್ಷಣದಲ್ಲಿಯೆ ರಾಜಸಭೆಯಲ್ಲಿ ಧೈರ್ಯವಂತನಹನು
ಧರ್ಮೇಶ್ವರನ ತೆಂಕಲಲ್ಲಿಹ ತತ್ವೇಶ್ವರನನೋಡಲು ತತ್ವಜ್ಞಾನಿಯಹನು
ಈ ಧರ್ಮೇಶ್ವರನ ಮೂಡಲಲ್ಲಿರ್ದ ವೈರಾಗ್ಯೇಶ್ವರನನೋಡಲು ಪರಮ
ಸುಖಪ್ರಾಪ್ತಿಯಹುದು. ಆ ಈಶಾನ್ಯದಲ್ಲಿಹ ಜ್ಞಾನೇಶ್ವರನನೋಡಲು
ಜ್ಞಾನಸಿದ್ಧಿ ಆಧರ್ಮೇಶ್ವರನ ಉತ್ತರದಲ್ಲಿಹ ಐಶ್ವರ್ಯೇಶ್ವರನಪೂಜಿಸ
ಲು ಮನದೊಳು ಬಯಸಿದ ಐಶ್ವರ್ಯವಹುದು. ಈಗಹೇಳಿದಲಿಂಗಗಳೆ
ಲ್ಲವು ಪಂಚಮುಖನಾದ ಶಿವನಸ್ವರೂಪವು ಈ ಲಿಂಗಗಳ ಸೇವೆಯಿಂ
ದ ಶಾಶ್ವತವಾದ ಪದವಿಯುಂಟು ಮತ್ತು ಆಧರ್ಮತೀರ್ಥದಲ್ಲಿ ಆದವೃ
ತ್ತಾಂತವಂ ಹೇಳೇನುಕೇಳು, ಎಲೈ ಅಗಸ್ತ್ಯ ಆ ಮಹಾತ್ಮೆಯಂಕೇಳ
ಲು ಸಂಸಾರಪಾಶದಲ್ಲಿ ಸಿಲುಕನು, ಅವನ್ನುಕೇಳೆಂದು ಕುಮಾರಸ್ವಾಮಿ

ಇಂತೆಂದನು, ಕೇಳೈ ಅಗಸ್ತ್ಯನೆ! ವಿಂಧ್ಯಪರ್ವತದ ಸಮೀಪದಲ್ಲಿ ಕದಂಬ ಶಿಖರವೆಂಬ ಗಿರಿಯುಂಟು. ಅಲ್ಲಿ ದಮನೆಂಬರಾಯಗೆ ದುರ್ದಮನೆಂಬ ಕುಮಾರನುಂಟು, ಆ ಕುಮಾರನು ತಮ್ಮತಂದೆ ಪರಲೋಕಯಾತ್ರೆಯಂ ಮಾಡಲು? ದುರ್ದಮನು ರಾಜ್ಯಾಧಿಪತ್ಯವಂಧರಿಸಿ ಕಾಮಿಯಾಗಿ ಪಟ್ಟಣದಲ್ಲಿರ್ದ ಪರಸ್ತ್ರೀಯರನ್ನು ಬಲುಹಿಂಸೆಪಡಿಸಿ ಅನುಭವಿಸುತ್ತಿಹನು, ಮತ್ತು ಅದಲ್ಲದೆ ದುರ್ಜನರಕೂಡೆಸ್ನೇಹ ಸಜ್ಜನರಕೂಡೆ ಸ್ನೇಹವಿಲ್ಲ ಅಪರಾಧಿಗಳಬಿಟ್ಟು ನಿರಪರಾಧಿಗಳಾದವರಂ ದಂಡಿಸುತ್ತಿಹನು, ಬೇಟೆಗಾರರಕೂಡಿಕೊಂಡು ಆವಾಗಲು ಬೇಟೆಯಾಡುವನು, ಸುಬುದ್ಧಿಯ ಹೇಳಬಂದ ಹಿರಿಯರಸೀಮೆಯಿಂಬಿಟ್ಟು ಹೊರಡಿಸುವನು, ಧರ್ಮದ ಪಾರುಪತ್ಯವ ಅಧರ್ಮರಾದ ಶೂದ್ರರಿಗೀವನು, ಬ್ರಾಹ್ಮರಕೈಯ್ಯ ಕಪ್ಪವತೆಕ್ಕೊಂಬನು, ಸ್ವಸ್ತ್ರೀಯಬಿಟ್ಟು ಪರಸ್ತ್ರೀಪರನಾಗಿಇಹನು, ಒಂದುದಿನವು ಹರಿಹರರಂ ಪೂಜಿಸಿದವನಲ್ಲ, ಗುರುಹಿರಿಯ ಬ್ರಾಹ್ಮರಲ್ಲಿ ಅವಿಶ್ವಾಸವಾಗಿ ಇಹನು, ರಾಯರುಗಳೆಡೆಯಲ್ಲಿ ಎರಡನೆಧೂಮಕೇತುವಾಗಿ ಇಹನು, ಅಂಥಾದುರ್ದಮನು ಯೌವ್ವನದಲ್ಲಿಯೆ ಕ್ಷಯರೋಗಿಯಾದನು, ಅವನು ಒಂದಾನೊಂದುದಿನ ಕುವರೆಯನೇರಿಕೊಂಡು ಬೇಡೆಯನಾಡುವರೆ ಅರಣ್ಯಕ್ಕೆಹೋಗಿ ಹಂದಿಯಹಿಂಡುತಗುಲಿಹಿಂದುಗೊಂಡು ಒಬ್ಬನೆಪ್ರೋಡುತ್ತಾ ಕಾಶಿಯಪಟ್ಟಣವಂಕಂಡು ಗಂಗಾನದೀತೀರದಲ್ಲಿ ಫಲಪುಷ್ಪಯುಕ್ತವಾದ ನೆಳಲುವೃಕ್ಷಂಗಳಂನೋಡಿ ಶೈತ್ಯ ಸೌರಭ್ಯ ಮಾಂದ್ಯವೆಂಬ ವಾಯುವಿನಿಂದ ಮೃದುವಾದ ಫಲಂಗಳಂನೋಡಿ ದುರ್ದಮನು ಬಿಸಲಿನಲ್ಲಿ ಬೇಟೆಯಾಡಿದ ಬಳಲಿಕೆಯನ್ನು ಜನ್ಮದೊಳಗಾಗಿ ಬಂದ ಬಳಲಿಕೆಯನ್ನು ಆಕ್ಷಣದಲ್ಲಿಯೆ ಬಿಟ್ಟನು, ಅನಂತರ ಅಲ್ಲಿಯ ಶೃಂಗಾರವನಮಧ್ಯದಲಿ ರಮ್ಯವಾದ ಉಪ್ಪರಿಗೆಯಂಕಂಡು ಆಶ್ಚರ್ಯಪಟ್ಟು ಕುದುರೆಯನಿಳಿದು ಧರ್ಮೇಶ್ವರನಮಂದಿರಕ್ಕೆಬಂದು ಸ್ವಾಮಿಯಂಕಂಡಮಾತ್ರದಲ್ಲಿಯೆ ದರ್ಶನದಿಂದ ಅವನಪಾಪಹೋಯಿತು. ಸುಜ್ಞಾನಿಯಾಗಿ ಇಂದು ನಾನು ಈ ಸ್ವಾಮಿಯದರ್ಶನದಿಂದ ಧನ್ಯನಾದೆನೆಂದು ತನ್ನತಾನೆಕೊಂಡಾಡಿಕೊಂಡು ಇಂತೆಂದನು—ಅದೇ

ನೆಂದರೆ, ತಾನು ನಿತ್ಯವು ಮೂರ್ಖನರಸಂಸರ್ಗವಮಾಡಿದೆನು,ಸಜ್ಜನರಸಂಗವಂಬಿಟ್ಟೆನು, ಮದಾಂಧನಾದನು, ಪ್ರಜೆಗಳಂಬಾಧೆಪಡಿಸಿದೆನು, ಪರಸ್ತ್ರೀ ಪರಧನಗಳನಪಹರಿಸಿದೆನು,ತನ್ನ ಜನ್ಮ ವ್ಯರ್ಥವಾಯಿತು, ಇಂಥಾ ಪುಣ್ಯಕ್ಷೇತ್ರಗಳನೆಂದೂ ನೋಡಿದವನಲ್ಲ ಹೀಗೆಂದು ತನ್ನತಾನೆ ನಾನಾಬಗೆಯಲ್ಲಿ ನಿಂದಿಸಿಕೊಂಡು ಧರ್ಮೇಶ್ವರಗೆ ನಮಸ್ಕಾರವಂಮಾಡಿ ತನ್ನ ಕುಮಾರನ ನೇರಿಸಿಕೊಂಡು ತನ್ನ ಪಟ್ಟಣಕ್ಕೆ ಹೋಗಿ ತನ್ನ ಪಾರಂಪರೆಯು ನೀತಿಯುಳ್ಳ ಪ್ರಧಾನರಂ ಕರಸಿ ಹೊಸಬರಾದ ದುಷ್ಟಪ್ರಧಾನರಂ ಹೊರಡಿಸಿಬಿಟ್ಟು ಹೋದಬ್ರಾಹ್ಮಣರು ಮುಂತಾದವರಂ ಕರಸಿ ಅವರವರ ಕ್ಷೇತ್ರನಿರ್ವಾಹಂಗಳಂಕೊಟ್ಟು ಮತ್ತೂ ದಾನಧರ್ಮಂಗಳಂಮಾಡಿ ಸುಧರ್ಮಂಗಳಂಮಾಡಿ ಸುಧರ್ಮದಿಂ ಕೆಲವುದಿನ ರಾಜ್ಯವಾಳಿ ಸತ್ಪುರುಷರ ಸಂತೋಷಬಡಿಸಿ ತನ್ನ ಕುಮಾರಗೆ ಪಟ್ಟಪಂಗಟ್ಟಿ ಧರ್ಮದಿಂರಾಜ್ಯವಾಳಿ ಪ್ರಜೆಗಳಂ ರಕ್ಷಿಸಹೇಳಿ ತಾನು ಸಂಗಪರಿತ್ಯಾಗವಂಮಾಡಿ ಏಕಾಂತವಾಗಿ ಕಾಶೀಕ್ಷೇತ್ರಕ್ಕೆಹೋಗಿ ಗಂಗಾಸ್ನಾನವಂಮಾಡಿ ಸುಚಿತ್ತದಿಂದ ದುರ್ವಾಸನು ಧರ್ಮೇಶ್ವರನಪೂಜೆಯಂಮಾಡಿಕೊಂಡು ಕೆಲವುಕಾಲವಿರ್ದು ಮರಣಕಾಲದಲ್ಲಿ ವಿಶ್ವೇಶ್ವರನಿಂ ತಾರಕೋಪದೇಶವಂಪಡೆದುಮೋಕ್ಷವನೈದಿದನು, ಎಲೈಅಗಸ್ತ್ಯನೆ ! ಧರ್ಮೇಶ್ವರನದರುಶನದಿಂದ ಮಹಾಪಾಪಾತ್ಮನಾದರೂ, ದುರ್ವಾಸನು ಶಮೆದಮೆಯುಳ್ಳವರೊಳು ಅತಿಶ್ರೇಷ್ಠನಾಗಿ ಮೋಕ್ಷವಂಪಡೆದನು, ಈ ಧರ್ಮೇಶ್ವರನಮಾಹಾತ್ಮ್ಯೆಯನ್ನು ಹೇಳಬಲ್ಲವರಾರು ತಾನುಸ್ವಲ್ಪವಾಗಿ ಕಂಡಷ್ಟು ಹೇಳಿದೆನು, ಈಧರ್ಮೇಶ್ವರನಮಾಹಾತ್ಮ್ಯೆಯನ್ನು ಕೇಳಿದವರು ಅನೇಕಜನ್ಮದೊಳಗಾಗಿ ಮಾಡಿದ ಪಾಪವಂಪರಿಹರಿಸಿ ಮುಕ್ತರಹರು, ಧರ್ಮೇಶ್ವರನ ಮಾಹಾತ್ಮ್ಯೆಯಾದ ಈ ಅಧ್ಯಾಯವನ್ನು ಶ್ರಾದ್ಧಕಾಲದಲ್ಲಿ ಪಠಿಸಲು ಪಿತೃಗಳಿಗೆ ತೃಪ್ತಿಯಾಗಿ ಬ್ರಹ್ಮಲೋಕವನ್ನೈದುವರು, ಈ ಅಧ್ಯಾಯಮಂ ಕೇಳಿದವರು ಇಹದಲ್ಲಿ ಸಕಲಸೌಖ್ಯವನನುಭವಿಸಿ ಅಂತ್ಯದಲ್ಲಿ ದಿವ್ಯವಿಮಾನಾರೂಢನಾಗಿ ಶಿವಲೋಕವನ್ನೈದುವರು, ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನು, ಎಂದು ವ್ಯಾಸರು ತನಗೆ ಬುದ್ಧಿಗಲಿಸಿದರೆಂದು ಸೂ

ತಪುರಾಣೀಕನು ಶೌನಕಾದಿಋಷಿಗಳಿಗೆ ಹೇಳ್ದನೆಂಬಲ್ಲಿಗೆಅಧ್ಯಾಯಾರ್ಥ

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ಣಾಟಕಭಾಷೆಯಿಂದ ವಿರಚಿಸಿದ ಸ್ಕಾಂದಪುರಾಣೋಕ್ತ ಕಾಶೀಮಹಿಮಾರ್ಥ ದರ್ಪಣದಲ್ಲಿ ಧರ್ಮತೀರ್ಥದ ಮಹಾತ್ಮ್ಯೆ ಎಂಬ ಎಂಭತ್ತೊಂದನೆ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ

ಎಂಭತ್ತೆರಡನೇ ಅಧ್ಯಾಯ.

ಅಮಿತ್ರಜಿತುರಾಯ ಮಲಯಗಂಧಿಪ್ರಸಂಗ.

ಶ್ರೀ ವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ಪರಮೇಶ್ವರಂಗೆ ಪಾರ್ವತೀದೇವಿ ಯಿಂತೆಂದು ಬಿನ್ನವಿಸಿದಳು, ಎಲೈಸ್ವಾಮಿ! ವಿಶ್ವೇಶ್ವರನಲ್ಲಿ ಬಹುಮಂದಿ ಭಕ್ತರು, ಸಿದ್ಧಿಯನೈದಿದರು ಎಂದುಬುದ್ಧಿಗಲಿಸಿದರಲ್ಲ, ಆ ವಿಶ್ವೇಶ್ವರನಉತ್ಪತ್ತಿಯಂತಾಯಿತು, ಆತನ ಮಹಾತ್ಮೆಯನ್ನು ಬುದ್ಧಿಗಲಿಸಬೇಕೆನಲು, ಪರಮೇಶ್ವರನು ಯೆಲೆದೇವಿ, ವಿಶ್ವೇಶ್ವರನ ಉತ್ಪತ್ತಿಯಂ ಕೇಳಲು, ಮಹಾಶ್ರೇಯಸ್ಸಂ ಪಡೆವರು, ಪೂರ್ವದಲ್ಲಿ ಬಹುಧಾರ್ಮಿಕನಾದ ಸತ್ವಗುಣಸಂಪನ್ನನಾದ ಪ್ರಜಾಪಾಲನಪರನಾದ ಸಕಲವಿದ್ಯಾ ಪಾರಂಗತನಾದ ಯಶೋಧನನಾದ, ಬ್ರಾಹ್ಮಣ್ಯಕ್ಕೆ ಹಿತನಾದ ನಿಖಿಳಯಜ್ಞಂಗಳಂಮಾಡಿ ಅವಭೃತಸ್ನಾನದಿಂ ನೆನೆದಶರೀರವುಳ್ಳವನಾದನೀತಿಸಂಪನ್ನನಾದ, ಶೂರನಾದ, ಅಮಿತ್ರಜಿತುವೆಂಶಿಕೊಂಬ ಒಬ್ಬ ರಾಯನಿದ್ದನು, ಆತನುಗುಣವಂತರಲ್ಲಿ, ವಾತ್ಸಲ್ಯವುಳ್ಳ ವಸುಪದವಾಕ್ಯ ಪ್ರಮಾಣಜ್ಞನು, ಪಾಪಕರ್ಮವನು ಲೇಶವಂ ಮಾಡದೆಇರುವನು, ಸತ್ಯವಾದಿ ಮಿತಭಾಷಿ ಜಿತೇಂದ್ರಿಯನು ಯುದ್ಧದಲ್ಲಿ ಯಮಗೆ ಸಮಾನವಾದವನು, ಸಭೆಯಲ್ಲಿ ದೇವೇಂದ್ರಗೆ ಸಮಾನನು ಸೌಂದರ್ಯದಲ್ಲಿ ಮನ್ಮಥನಿಗೆಸಮಾನವಾದವನು, ಕಾಮಶಾಸ್ತ್ರವಂಬಲ್ಲವನು, ಪ್ರಾಯದವನಾದರು ವೃದ್ಧರಲ್ಲಿ ಪ್ರೀತಿಯುಳ್ಳವನು, ಧರ್ಮಾರ್ಜಿತವಾದ ಭಂಡಾರವುಳ್ಳವನು, ಲೆಖ್ಖವಿಲ್ಲದ ಬಲವಾಹನವುಳ್ಳವನು, ಸೌಭಾಗ್ಯಚೆಲುವಿಕೆ ಬುದ್ಧಿಸಂತಾಪ ಶೌರ್ಯ ಧೈರ್ಯವಂತ ದೇಶಕಾಲಂಗಳಂ ಬಲ್ಲವನಾಗಿ ಮಾತ್ಸರ್ಯಂಮನ್ನಿಸುವನು, ಪರಾಪವಾದ

ವಂಮಾಡುವನು, ವಿಷ್ಣುಭಕ್ತನು, ಈತಿಬಾಧೆಯಿಲ್ಲದಂತೆ ರಾಜ್ಯವಾಳುತ್ತಾ ಶ್ರೀಜ್ಞಾನಶಕ್ತಿಯುಳ್ಳವನಾಗಿ ಸಕಲಕ್ರಿಯೆಗಳನ್ನು ವಿಷ್ಣುವಿನಲ್ಲಿ ಸಮರ್ಪಿಸಿ ವಿಷ್ಣುವಿಗೆ ಹೆಜ್ಜೆಹೆಜ್ಜೆಗೆ ಉಪ್ಪರಿಗೆಗಳಂ ಕಟ್ಟಿಸುತ್ತಾ ಹೀಗಿರಲಾಗಿ ಸಕಲಪ್ರಜೆಗಳೂ ವಿಷ್ಣುಪೂಜಕರಾಗಿ ಗೋವಿಂದಗೋಪಾಲ, ಗೋಪೀಜನಮನೋಹರ, ಗದಾಧರ, ಗುಣಾತೀತ, ಗುಣಾಢ್ಯಗರುಡಧ್ವಜ, ಕೇಶಿಘ್ನ, ಕೈಟಭಾರಿ, ಕಂಸಾರಿ, ಕಮಲಾಪತಿ, ಕೃಷ್ಣಕೇಶವ ಕಂಜಾಕ್ಷ, ನಾಕೇಶಭಯನಾಶನ, ಪುರುಷೋತ್ತಮ, ಪಾಪಾರಿ, ಪುಂಡರೀಕಲೋಚನ, ಪೀತಾಂಬರಧರ, ಪದ್ಮನಾಭ, ಪರಾತ್ಪರ, ಜನಾರ್ದನ ಚಾಣೂರಮರ್ದನ, ಗೋಪೀಜನಪ್ರಿಯ, ಜನ್ಮಹರ, ಅಘಾರಿ, ಶ್ರೀವತ್ಸವಕ್ಷ, ಶ್ರೀಕಾಂತ, ಶ್ರೀಕರ, ಶ್ರೀನಿಧಿ, ಶ್ರೀರಂಗ, ಶಾರ್ಙ್ಗಪಾಣಿ, ಶೌರಿ, ಚಂದ್ರಲೋಚನ, ದೈತ್ಯಾರಿ ದಾನವಾರಿ, ಮೋಕ್ಷಕರ, ದಾಮೋದರ, ಮುರಾಂತಕ, ದೇವಕೀಹೃದಯಾನಂದ, ಶೇಷಶಾಯಿ, ವಿಷ್ಣು, ವೈಕುಂಠನಿಲಯ, ವತ್ಸಾರಿ, ವಿಷ್ಟರಶ್ರವ, ವಿಶ್ವೇಶ, ವಿಷ್ವಕ್ಸೇನ, ವಿಧು, ವೀರ, ವನಮಾಲಿ, ಬಲಿಧ್ವಂಸಿ, ಅಧೋಕ್ಷಜ, ಅವನೀಪ್ರಿಯ, ತ್ರಿವಿಕ್ರಮ, ತ್ರಿಲೋಕೇಶ್ವರ, ಚಕ್ರಪಾಣಿ ಚತುರ್ಭುಜ, ಹೀಗೆಂದು ಇವು ಮೊದಲಾದ ವಿಷ್ಣುನಾಮಂಗಳಂ ಸ್ತ್ರೀಯರು ಬಾಲಕರು ವೃದ್ಧರು ಗೋಪಾಲಕರು ಮೊದಲಾಗಿ ಮನೆ ಮನೆಗಳಲ್ಲಿ ನುಡಿವುತ್ತಿಹರು, ಮನೆ ಮನೆಗೆ ತಪ್ಪದೆ ಬೃಂದಾವನಗಳಿಹವು, ಆವ ಉಪ್ಪರಿಗೆಗಳಲ್ಲಿ ಗೋಡೆಗಳಲ್ಲಿ ನೋಡಿದರೂ ವಿಷ್ಣುಮೂರ್ತಿಗಳು ಚಿತ್ರದಲ್ಲಿ ಬರದಿಹವು, ವಿಷ್ಣುಕಥೆ ಹೊರತಾಗಿ ಮತ್ತಾವ ವಾಕ್ಯವನ್ನು ಕಿವಿಗಳು ಕೇಳುವಡವು, ಹರಿಶಬ್ದವುಂಟಾಗಿ ಹರಿಣಗಳನ್ನೂ ಹಿಡಿಯಲಿಲ್ಲ, ಮತ್ಸ್ಯ ಕೂರ್ಮ ವರಾಹಂಗಳನ್ನು ಬೇಟಗಾರು ಕೊಲ್ಲವಿಲ್ಲ, ವಿಷ್ಣುಭಕ್ತರಲ್ಲದೆ ವಿಷ್ಣುಪೂಜಕರಲ್ಲದೆ ಅನ್ಯರಿಲ್ಲ, ಆತನರಾಜ್ಯದಲ್ಲಿ ಅಂತ್ಯಜಾತಿಯವರು ಮೊದಲಾಗಿ ಭಯದಲ್ಲಿ ಶಂಖಚಕ್ರಂಗಳನ್ನು ಧರಿಸಿಯಿಹರು, ತಾವುಮಾಡಿದ ವಿಷ್ಣುಪೂಜೆ ಸತ್ಕರ್ಮಗಳಂ ಫಲವನಪೇಕ್ಷಿಸದೆ ವಿಷ್ಣುವಿಗೆ ಸಮರ್ಪಣೆಯಂ ಮಾಡುವರು ವಿಷ್ಣುಮಂತ್ರ ಹೊರತಾಗಿ ಮತ್ತೊಂದುಮಂತ್ರ ಜಪಿಸಲಿಲ್ಲ. ವಿಷ್ಣು ಹೊರತಾಗಿ ಮ

ತ್ತೊಂದು ದೇವರನ್ನು ಪೂಜಿಸಲಿಲ್ಲ, ಆ ರಾಯಂಗೆ ದೇವರಾಗಿ ಗತಿಮತಿಯಾಗಿಯು ಬಂಧುವಾಗಿಯು, ಸಕಲವು ವಿಷ್ಣುವಲ್ಲದೆ ಅನ್ಯತ್ರಯಿಲ್ಲ ಈ ಮರ್ಯಾದೆಯಲ್ಲಿ ಸುಧರ್ಮದಿಂದ ರಾಜ್ಯವಾಳುತ್ತಿರಲು; ಒಂದಾನೊಂದು ದಿನ ನಾರದಮಹರ್ಷೀಶ್ವರನು ಈ ರಾಯನನೋಡುವನಿಮಿತ್ತವಾಗಿ ಹಂಸವಾಹನನಿಂ ನೂರುಸೂರ್ಯರಕಾಂತಿಯಿಂದ ಪವಿತ್ರವಾದ ದೇಹವುಳ್ಳ ನಾರದಮಹರ್ಷೀಶ್ವರ ಬರುತ್ತಿರಲು, ಕಂಡು ಸಭೆಸಹಿತ ಇದಿರೆದ್ದು ನಡೆದು ನಮಸ್ಕಾರವಂ ಮಾಡಿ ಕರವಿಡಿದು ಆ ಸ್ಥಾನದೊಳು ರತ್ನ ಸಿಂಹಾಸನದಲ್ಲಿ ಕುಳ್ಳಿರಿಸಿ ಮಧುಪರ್ಕಾದಿಗಳಿಂ ಪೂಜಿಸಲು ಸಂತುಷ್ಟಚಿತ್ತನಾಗಿ ರಾಯಂಗೆ ನಾರದನಿಂತೆಂದನು—ಎಲೆ ರಾಯ! ನೀನು ಧನ್ಯನು, ಕೃತಕೃತ್ಯನು, ದೇವತೆಗಳಿಗು ಮಾನ್ಯನು, ಸಕಲಭೂತಗಳಲ್ಲಿಯು ವಿಷ್ಣುಭಾವನೆಯುಳ್ಳವನು, ವೇದಪುರುಷನಾಗಿ, ವೇದಪಾರನಾಗಿ ಅಂತರಾತ್ಮನಾದ ಸೃಷ್ಟಿಸ್ಥಿತಿಸಂಹಾರಗಳಿಗೆ ಕರ್ತನಾದ, ಸರ್ವವ್ಯಾಪಕನಾದ ಶ್ರೀಮಹಾವಿಷ್ಣುವಿನ ಭಕ್ತನುವಾಗಿ ಜಗತ್ತನ್ನು ನೋಡುತ್ತಿಪ್ಪೆಯಾಗಿ ನಿನ್ನ ದರ್ಶನದಿಂದ ನಾನು ಪವಿತ್ರನಾದೆನೆಂದು ಬಂದೆನು, ಈ ನಿಸ್ಸಾರವಾದ ಸಂಸಾರದಲ್ಲಿ ಶ್ರೀಮಹಾವಿಷ್ಣುವಿನ ಭಜನೆಯೊಂದೆ ಸಾರವುಳ್ಳದ್ದು. ಸಕಲಮಂಬಿಟ್ಟು ಶ್ರೀಮಹಾಪುರುಷನಾದ ವಿಷ್ಣುವಂ ಸೇವಿಸುವದು ಸಕಲಪದಾರ್ಥಂಗಳು ಕದಂಬವು, ಚಂಚಲವಾದ ಬ್ರಹ್ಮಾಂಡಗಳು ಹೃಷೀಕೇಶನರೋಮಂಗಳಲ್ಲಿ ಸ್ಥಾಪಿತವಾಗಿ ಇರುವು, ಅಂಥಾ ಮಹಾವಿಷ್ಣುವು ಚಲಿಸದಾಗ ಇಂದ್ರಿಯಂಗಳಲ್ಲಿ ನಿಶ್ಚಲವಾಗಿ ಇರಲು ಸ್ಥಿರವಾದವನಹುದು, ಆಯುಷ್ಯ, ಯೌವ್ವನ, ಧನ, ಇವು ತಾವರೆಎಲೆಯೊಳಗಣ ಉದಕದಂತೆ ಚಂಚಲವೆಂದು ತಿಳಿದು ವಿಷ್ಣುವನ್ನೇ ಭಜಿಸಬೇಕು. ವಾಕ್ಯದಲ್ಲಿ, ಶರೀರದಲ್ಲಿ, ಮನದಲ್ಲಿ, ಈ ಮೂರರಲ್ಲಿ ಈ ವಿಷ್ಣುಭಕ್ತಿ ಸೇವೆಯುಳ್ಳವನೆ ಲೋಕದಲ್ಲಿ ಮಾನ್ಯನು, ನಿರುಪಾಧಿಕದಿಂ ಹರಿಸಂಧ್ಯಾನಿಸಲು ತಾನೆ ಪುರುಷೋತ್ತಮನಹನು, ಎಲೆ ರಾಯ! ನಿನ್ನ ವಿಷ್ಣುಭಕ್ತಿಯಂ ಕೇಳಿ ಸಂತೋಷಚಿತ್ತನಾಗಿ ನಿನ್ನ ದರ್ಶನವಂ ಮಾಡಿ ನಿನಗೊಂದು ಉಪಕಾರವಮಾಡಬೇಕೆಂದು ಇಲ್ಲಿಗೆ ಬಂದೆನು, ಆ ವರ್ತಮಾನವಂ ಪರಿಕಿಸಲ್ಲದ ಕೇಳು, ಒಬ್ಬನಿ

ದ್ಯಾಧರನುಂಟು ಆತನಕುಮಾರತಿಯಾದ ಮಲಯಗಂಧಿನೀ ಎನಿಸಿಕೊಂಬ ಸ್ತ್ರೀಯು ತನ್ನಮನೆಯಮುಂದೆ ಆಡುತ್ತಿರಲಾಗಿ ಕಪಾಲಕೇತು ವಿನಮಗನಾದ ಕಂಕಾಳಕೇತುವೆಂಬ ರಾಕ್ಷಸನು ಮಹಾಬಲವಂತನು ಆ ಮಲಯಗಂಧಿನೀಎಂಬ ಸ್ತ್ರೀಯನ್ನು ಅಪಹರಿಸಿಕೊಂಡುಹೋಗಿಅವನು ಪಾತಾಳಲೋಕದಲ್ಲಿ ಚಂಪಕಾವತಿಯೆಂಬ ಪಟ್ಟಣದಲ್ಲಿ ಇಹನು, ಇಂದಿಗೆ ಮೂರುದಿವಸಕ್ಕೆ ಆಕನ್ಯೆಯಂ ಮದುವೆಯಾಗುತ್ತಿಪ್ಪನು. ತಾನು ಆಪಟ್ಟಣಕ್ಕೆ ಸ್ವೇಛೆಯಿಂದ ಹೋಗಲು, ಆ ವಿದ್ಯಾಧರಸ್ತ್ರೀಯಾದ ಮಲಯಗಂಧಿನಿಯು ಪಾಟಕೇಶ್ವರನ ಸನ್ನಿಧಿಯಲ್ಲಿ ಕುಳಿತಿದ್ದವಳಾಗಿ ತನ್ನಕಂಡು ಕಣ್ಣಲ್ಲಿನೀರುತುಂಬಿ ತನ್ನನ್ನು ರಾಕ್ಷಸತಂದವೃತ್ತಾಂತವಂ ಎನ್ನೊಡನೆ ಪೇಳ್ದಳು, ಅದೆಂತೆನೆ—ಎಲೈ ಬ್ರಹ್ಮಚಾರಿಯಾದ ದೇವಋಷಿಯೆ! ಎನ್ನವೃತ್ತಾಂತವಂಕೇಳು, ಗಂಧಮಾದನಪರ್ವತದಲ್ಲಿ ತಮ್ಮಮನೆಯಮುಂದೆ ಆಡುವತನ್ನನು ಈ ಕಂಕಾಳಕೇತುವೆಂಬ ದುರಾಚಾರಿಯಾದ ರಾಕ್ಷಸನು ಕೊಂಡುಬಂದನು, ಅವನು ಮತ್ತೊಬ್ಬರಕೈಯ್ಯ ಆಯುಧದಿಂದ ಮರಣವಾಗದಂತೆ ಬ್ರಹ್ಮನಕೈಯ್ಯವರವಂಪಡೆದವನು ಅವನಕೈಯ್ಯ ತ್ರಿಶೂಲದಿಂದ ಅವನಿಗೆ ಮರಣ, ಅವನುಪಡೆದವರಗರ್ವದಿಂ ಮೂರುಲೋಕವಂ ಬಾಧಿಸಿ ಈ ಪಾತಾಳದಲ್ಲಿ ಸುಖದಿಂ ನಿದ್ರೆಯಂ ಮಾಡುತ್ತ ಇದ್ದಾನು, ನೀನುಒಬ್ಬರ ಕಳುಹಿದರೆ ಅವಗೆ ಆ ಶೂಲವಕೆಗೆದುಕೊಟ್ಟೇನು, ಆ ಶೂಲದಿಂ ಆ ರಾಕ್ಷಸನ ಹತಪಮಾಡಿ ತನ್ನಪರಿಗ್ರಹಿಸಲಿ, ಈ ಉಪಕಾರವ ನೀವುಮಾಡಿ ಅದಲ್ಲದೆ ಮುನ್ನೆ ಎನಗೊಂದುವರವುಂಟು, ಅದಾವುದೆನೆ--ತಾನು ಪಾರ್ವತೀದೇವಿಯ ಆರಾಧಿಸಲು ದೇವಿಯು ಪ್ರಸನ್ನೆಯಾಗಿ ಎನ್ನೊಡನೆ ಇಂತೆಂದಳು—ಎಲೆಮಗಳೆ ನಿನ್ನನ್ನು ಒಬ್ಬವಿಷ್ಣುಭಕ್ತನಾದ ಯೌವನವಂತನಾಗಿ ಪರಾಕ್ರಮಶಾಲಿಯಾದ ರಾಯನು ಮದುವೆಯಾದಾನು ಎಂದು ಬುದ್ಧಿಗಲಿಸಿದಳು, ಆದುಕಾರಣ ಈ ರಾಕ್ಷಸಗೆ ತಾನು ದಕ್ಕಲಿಲ್ಲ ಎಲೈ ನಾರದಋಷಿಯೆ! ನೀನು ವಿಷ್ಣುರೂಪನಲ್ಲದೆ ಮತ್ತೊಂದಲ್ಲ, ಹೀಗೆಂದು ಮಲಯಗಂಧಿನಿ ಹೇಳಲು, ಕೇಳಿ ನಾನು ವಿಷ್ಣುಭಕ್ತನಾಗಿ ಯೌ

ಧನವಂತನಾಗಿ ಬುದ್ಧಿವಂತನಾಗಿ ಬಲವಂತನಾಗಿ ಪರಾಕ್ರಮಿಯಾದ ನಿನ್ನಬಳಿಗೆಬಂದೆನು, ಎಲೈರಾಯ! ಈಗನೀನು ಆಕಾರ್ಯಾರ್ಥವಾಗಿ ಹೋಗಿ ಆ ಕಂಕಾಳಕೇತುವೆಂಬ ರಾಕ್ಷಸನ ಸಂಹಾರವಂಮಾಡಿ ಆಮಲಯಗಂಧಿನಿಯನ್ನು ಕೊಂಡುಬಾರೆಂದು ನುಡಿದ ನಾರದನ ವಾಕ್ಯವಂಕೇಳಿ ಶರೀರವುಳ್ಳುಕಿತನಾಗಿ ಆರಾಯನು ನಾರದಮುನಿಗಿಂತೆಂದನು, ಎಲೆದೇವಋಷಿಯೆ? ಆಪಾತಾಳಲೋಕದಲ್ಲಿದ್ದ ಚಂಪಕಾವತಿಯಪಟ್ಟಣಕ್ಕೆ ಹೋಹ ಉಪಾಯವಂ ಪೇಳೆನಲು ನಾರದನಿಂತೆಂದನು—ಎಲೆ ರಾಯ! ಪೌರ್ಣಮೆಯದಿನ ಸಮುದ್ರಕ್ಕೆಪೋಗಲು, ಅಲ್ಲಿ ಒಂದು ಕಲ್ಪವೃಕ್ಷದಕೆಳಗೆ ದಿವ್ಯವಾದ ಮಂಚದಮೇಲೆಕುಳಿತು ಕೈಯಲ್ಲಿ ವೀಣೆಯಂಪಿಡಿದು ಗಾನವಂಮಾಡುವ ದೇವತೆಯಂಕಂಡು ನಮಸ್ಕಾರವಂಮಾಡಿ ಆ ರೊಬ್ಬರು ಆವಕಾರ್ಯವಂ ತಮ್ಮ ಮನಸ್ಸಿನಲ್ಲಿ ಅನುಭವಿಸತಕ್ಕ ಕಾರ್ಯವಂಪೇಳಲು, ಅವರನ್ನು ಆಸ್ತ್ರೀಯು ತಾನುಮುಳುಗಿ ಹಗ್ಗದಿಂದಾಯಳ್ಳಕೊಂಡುಹೋಹಳು, ನೀನು ಆ ಗಾನವಂಮಾಡುವ ಸ್ತ್ರೀಯಂಕಾಣಲು,ಆ ಸ್ತ್ರೀಯು ನಿನ್ನಕಾಣುತ್ತಾಳೆ, ಕಲ್ಪವೃಕ್ಷ ಮಂಚಸಹವಾಗಿ ಸಮುದ್ರದಲ್ಲಿಮುಳುಗಿಯಾಳು ನೀನುಶಂಕೆಇಲ್ಲದೆ ಆದಿವರಾಹಮೂರ್ತಿಯಂತೆ ಆ ಸ್ತ್ರೀಮುಳುಗಿದ ಮಾರ್ಗದಲ್ಲಿಯೆ ಸಮುದ್ರದಲ್ಲಿಮುಳುಗಲು,ಪಾತಾಳಲೋಕದಲ್ಲಿ ಇಹ ಚಂಪಕಾವತಿಯಪಟ್ಟಣದಲ್ಲಿಇಹ ಆಸ್ತ್ರೀಯಂಕಂಡೀಯೆ ಅಲ್ಲಿ ನಿನ್ನಮನಬಂದಂತೆ ಮಾಡುವದೆಂದುಪೇಳಿ ನಾರದನು ಸ್ವಭವನಸೇರಿದನು, ಅನಂತರ ರಾಯನು ಪೌರ್ಣಮಿಯಲ್ಲಿ ಸಮುದ್ರತೀರಕ್ಕೆಹೋಗಿ ಆ ಸ್ತ್ರೀಯಂಕಂಡು ಆ ಸ್ತ್ರೀಮುಳುಗಿದ ಮಾರ್ಗದಲ್ಲಿಯೇಹೋಗಿ ಆ ಚಂಪಕಾವತಿಯ ಪಟ್ಟಣವಂಕಂಡು ಅಲ್ಲಿಹ ವಿದ್ಯಾಧರ ಸ್ತ್ರೀಯಾದ ಮಲಯಗಂಧಿನಿಯಂಕಂಡು ರಾಯನು ತನ್ನ ಮನದೊಳಿಂತೆಂದನು, ಈಸ್ತ್ರೀಯು ಪಾತಾಳಲೋಕದ ಅಧಿದೇವತೆಯೋ? ಬ್ರಹ್ಮನಸೃಷ್ಟಿಯೊಳಗಣವಳಲ್ಲ, ರಾಹುವಿನಭಯದಿಂ ಬಂದಚಂದ್ರಕಳೆಯು ಸ್ತ್ರೀ ರೂಪವಂಧರಿಸಿ ಇದ್ದೀತೋ ಎಂಬಂತೆಇಹ ಸ್ತ್ರೀಯವರ್ಣಿಸುತ ಆಸ್ತ್ರೀಯಸಮೀಪಕ್ಕೆ ಹೋಗಲು ಆರಾಯನು ಆಸ್ತ್ರೀಯುಕಣ್ಣಿಯಂತೆಸದನೆಂದರೇ ಉನ್ನತವಾದ

ಆಕಾರ ವಿಶಾಲವಾದ ಉರಸ್ಥಳ ಆ ಉರಸ್ಥಳದಲ್ಲಿ ಧರಿಸಿದ ತುಳಸೀಮಾಲಿ ಯೆರಡುಭುಜದಲ್ಲಿಯಲ್ಲಿಯೂ ಧರಿಸಿತ ಶಂಖ ಚಕ್ರಾಂಕಿತಹರಿನಾಮ ವೆಂಬ ಅಮೃತಪಾನದಿಂ ಶುಭ್ರವಾದ ದಂತಪಙ್ಕ್ತಿಯಿಂದೊಪ್ಪುವ ಗೌರಿ ದೇವಿಯುರಲ್ಲಿ ಭಕ್ತಿಯೆಂಬಬೀಜದಿಂ ಪುಟ್ಟಿದ ಪುರುಷಾಕಾರವೋ! ಎಂಬಂ ತೆ ಅತ್ಯಂತಸೌಭಾಗ್ಯದಿಂದೊಪ್ಪುವ ರಾಯನಂ ಕಂಡು ಇಂತೆಂದಳು, ಎಲೈ ಚೆಲುವನಾದರಾಯನೆ! ಭಾಗ್ಯಹೀನೆಯಾದ ಎನಗೆ ನೀನು ಬಂದು ಸೇರಿದೆ, ಅತ್ಯಂತಕಠಿಣವಾದ ಆಕಾರವುಳ್ಳವನಾಗಿ ಮೂರುಲೋಕವನ್ನು ಬಾಧಿಸು ವಂಥಾ ದುರಾಚಾರಿಯಾದ ಕಂಕಾಳಕೇತುವೆಂಬರಾಕ್ಷಸನು ತನ್ನತಂದೆನು ಅವನು ಮತ್ತೊಬ್ಬರ ಆಯುಧದಿಂದಾ ಹತನಾಗನು, ಅವನು ಈಗ ದಿಕ್ಪಾಲ ಕರಜಯಿಸುವದಕ್ಕೆ ಹೋದನು, ಅವನುಬಾರದೆಲೆ ಅವನ ಆಯುಧದ ಮನೆ ಯಲ್ಲಿಯಿರು, ನಿನಗೆ ಅವನಿಂದಭಯಬೇಡ ನೀನುಬಂದಕಾರ್ಯವಾಯಿತು ಎಂ ದು ಆವಿದ್ಯಾಧರಿಯೂ ಆ ರಾಯನಂ ಆಯುಧದಮನೆಯೊಳಗಿರಿಸಲು, ಪರಾ ಕ್ರಮಿಯಾದ ರಾಯನು ಆದಾನವ ಆವಾಗ ಬಂದಾನೋಯೆಂದು ಇದಿರು ನೋಡುತ್ತಿರಲು, ಸಾಯಂಕಾಲಸಮಯದಲ್ಲಿ ಆದಾನವನು ಭಯಂಕರ ವಾದ ಮೃತ್ಯುವನ್ನು ಭಯಪಡಿಸುವ ಶೂಲವಂ ಹಸ್ತದಿಂ ತಿರುಹುತಾ ಪ್ರಳಯಕಾಲದ ಮೇಘಗರ್ಜನೆಯಂತೆ ಘೋರವೃತ್ತ ಕಣ್ಣುಗಳಂ ತಿರು ಹುತ್ತಾ ತನ್ನ ಅರಮನೆಗೆಬಂದು ಆಸ್ತ್ರೀಯ ಮುಂದೆ ನಿಂತು ಇಂತೆಂದ ನು, ಎಲೆವಿದ್ಯಾಧರೀ! ನಾಡಿದ್ದು ನಿನ್ನ ಮದುವೆ ಈಗ ನೃಪಾಲರಕನ್ಯಾ ನಾನು ಕಪ್ಪವಕೊಂಡು ಬಂದವಿಪ್ರರತ್ನಂಗಳಂ ತೆಗದುಕೊ, ನಿನಗೆ ಹತ್ತುಸಾವಿರಮಂದಿ ಊಳಿಗದ ಸ್ತ್ರೀಯರಂ ತಂದುಕೊಟ್ಟೇನು, ಅದು ಅಲ್ಲದೆ ವಿವಾಹವಾದದಿನ ಘೋತಾರೆಹೋಗಿ ಸಕಲ ದೇವಸಮೂಹವಂ ಗೆದ್ದು ಅಸುರ, ದಾನವ, ಕಿನ್ನರಸ್ತ್ರೀಯರು, ಗಂಧರ್ವಮನುಷ್ಯರು, ಇವರಂ ಬಗೆಬಗೆ ನೂರುಸ್ತ್ರೀಯರ ತಂದುಕೊಟ್ಟೇನು, ಇದಲ್ಲದೆ ವಿ ದ್ಯಾಧರ, ಅಪ್ಸರಸ್ತ್ರೀಯರು ಐನೂರು, ಐನೂರುಮಂದಿಸ್ತ್ರೀಯರಂ ತಂದುಕೊಟ್ಟೇನು, ಇದಲ್ಲದೆ ರಾಕ್ಷಸರಸ್ತ್ರೀಯರು ನೂರುಮಂದಿ ಇವ ರು ಇಷ್ಟುಮಂದಿಯೂ ನಿನ್ನ ಊಳಿಗವಮಾಡುವರಾದು, ನನ್ನ ವಿವಾಹವಾ

ಗುತ್ತಲಿ ದಿಕ್ಪಾಲಕರ ಮನೆಯೊಡವೆಯೆಲ್ಲಕ್ಕು ನಿನ್ನನ್ನೇ ಒಡತಿಯುಮಾಡೇನು, ಎನ್ನಒಡಗೂಡಿ ಸಕಲಭೋಗಂಗಳಂ ಅನುಭವಿಸು ನಾಳೆಬಂದು ದಿನ ಹೋಗಲು ನಾವಿಪ್ಪುದಿವಸ ಎಂದಿಗೆಬಂದೀತೊ ಶೀಘ್ರದಲ್ಲಿ ಬಂದರೆ ಪರಮಸೌಖ್ಯವುಳ್ಳವನಾದೆನು, ನಾಡಿದ್ದು ನಿನ್ನಸಂಸರ್ಗದಿಂದ ಎನ್ನ ಮನಸ್ಸಿನಲ್ಲಿ ಇದ್ದ ಮನೋರಥಗಳೆಲ್ಲವು ಸಿದ್ಧಿಸೀತು, ಎಲೆಮೃಗಲೋಚನೆ ! ಇಂದ್ರಾದಿಗಳಂ ಗೆಲ್ದು ಸಕಲ ಅಷ್ಟದಿಕ್ಪಾಲಕರ ಐಶ್ವರ್ಯಕ್ಕು ನಿನ್ನನ್ನೇ ವಶಮಾಡೇನು, ಇಂತೆಂದು ಕಾಮಾತುರನಾದ ರಾಕ್ಷಸನುಮಉಗಲು, ಆ ವಿದ್ಯಾಧರಿಯು ತನಗೆ ಪರಮಾಪ್ತ ಗೌರಿದೇವಿಯು ಸ್ಮರಣೆ ಮಾಡಿಕೊಂಡು ಮರಹಿನಿಂದ ನಿದ್ರೆಗೈವ ರಾಕ್ಷಸನಂಕಂಡು ಆಸಮಯದಲ್ಲಿ ವಿಷ್ಣುಭಕ್ತಿಯೆಂಬ ವಜ್ರಾಂಗಿಯ ಜೋಡುತ್ತೊಟ್ಟಂಥ ಚಲುವನಾದ ಆರಾಯನಂ ತನ್ನಮನಸ್ಸಿನಲ್ಲಿ ತನ್ನಪತಿಎಂದು ಸಂಕಲ್ಪಿಸಿ ಕೊಂಡು ಆಯುಧಶಾಲೆಯೊಳಗಿದ್ದ ರಾಯನಂ ಕರೆದು ಆ ರಾಕ್ಷಸನ ಸಮೀಪದಲ್ಲಿ ಇದ್ದ ಶೂಲಮಂತೆಗೆದು ರಾಯಂಗೆಕೊಟ್ಟು ಅವನಜೀವಮಂ ಪರಿಹರಿಸುಎನಲು, ಉದಯದಸೂರ್ಯನಂತೆ ಪ್ರಕಾಶವುಳ್ಳ ತ್ರಿಶೂಲವಂ ಭುಜಬಲಪರಾಕ್ರಮಿಯಾದ ಆ ಅಮಿತ್ರಜಿತುರಾಯನು ಪರಿಗ್ರಹಿಸಿ ಹರ್ಷಿತನಾಗಿ ವಿದ್ಯಾಧರಿಯನ್ನೋಡಿ ಅಂಜದಿರೆಂದು ಅಭಯವನಿತ್ತು ನಿರ್ಭಯದಿಂದ ಜಗದ್ರಕ್ಷಕನಾದ ಚಕ್ರಪಾಣಿಯಾದ ಗರುಡಧ್ವಜನಾದ ವಿಷ್ಣುವಂಸ್ಮರಿಸಿ ಪರಾಕ್ರಮಿಯಾದವನು ನಿದ್ರೆಗೈವನಂ ಕೊಲ್ಲಬಾರದೆಂದು ತನ್ನಎಡೆಪಾದದಿಂದ ಆ ದೈತ್ಯನಒದ್ದು ಎಲೊ ಕನ್ಯಾಪಹರಣವಂ ಮಾಡಿದದುಷ್ಟಾತ್ಮನೆ! ಎದ್ದುಬಾ ಎನ್ನಕೂಡೆಯುದ್ಧವಮಾಡು ನಿದ್ರೆಯಂಮಾಡುವವನ ಕೊಲ್ಲಬಾರದು, ಯುದ್ಧಕ್ಕೆಬಾ ಎಂಬ ರಾಯನ ವಾಕ್ಯವಂಕೇಳಿ ಕಣ್ಣಬಿಟ್ಟು ಎಲೆಕಾಂತೆಯೆ ! ತ್ರಿಶೂಲವಂಕೊಂಡು ಬಾರೆಂದು ಮತ್ತೂಮತ್ತೂ ಆ ಸ್ತ್ರೀಯನ್ನುಕೇಳುತ್ತ ಮೃತ್ಯುವಿನ ಮನೆಗೆ ಬಂದವನಾರು, ಯಮನು ಅರಮೋಲೆಮುನಿದನೊ ಅವನು ಆಯುಷ್ಯ ಕೊಂಚವಾದಲ್ಲದೆ ಎನ್ನಮನೆಗೆಬಾರನೂ ಎಲೆ ಬಾಲೆಬಾಲೆ ! ಪ್ರಚಂಡವಾದ ಎನ್ನ ಭುಜದತಿವೀರವು ಹೋಯಿತು, ಇವನುಮನುಷ್ಯ

ನು ಇವನಿಗೆ ಶೂಲವ್ಯಾತಕ್ಕೆ ನೀನು ಅಂಜದಿರು ಎನ್ನ ವಿಚಿತ್ರವಂ ನೋಡು ಇವನು ಎನಗೆ ಭಕ್ಷಣವಾದನು ಎಂದು ನುಡಿದು ಕಲ್ಲಿಗಿಂತಲೂ ಕಠಿಣವಾದ ಎನ್ನ ಮುಷ್ಟಿಯಿಂದ ಆ ರಾಯನ ಎದೆಯ ಮೇಲೆ ತಿವಿದುದಲು ಆ ಮುಷ್ಟಿಪ್ರಹಾರದಿಂ ಬೀಳದೆ ವಿಷ್ಣುವಿನಿಂದ ರಕ್ಷಿಸಲ್ಪಟ್ಟವನಾಗಿ ಆ ರಾಕ್ಷಸನ ಎದೆಯ ಮೇಲೆ ಗುದ್ದಲು, ಆ ದೈತ್ಯನು ಛಿನ್ನನೇತ್ರನಾಗಿ ಭೂಮಿಯಲ್ಲಿ ಬಿದ್ದು ಬಲವಂತನಾದಕಾರಣ ಧೈರ್ಯದಿಂದೆದ್ದು ನೋಡಲು; ಆ ರಾಯನು ವಿಷ್ಣುರೂಪವಂ ಧರಿಸಿರಲು. ನೋಡಿ ಆ ರಾಕ್ಷಸನು ರಾಯಂಗಿಂತೆಂದನು—ಎಲೈ ಚತುರ್ಭುಜನೇ! ನೀನು ಮನುಷ್ಯರೂಪವಂ ಧರಿಸಿ ಬಂದೆ ನಿನ್ನ ನಾನು ತಿಳಿದೆನು, ನೀನು ಮನುಷ್ಯಮಾತ್ರದ ರಾಯನಲ್ಲ ಎಲೈ ದಾನವಾಂತಕನೆ! ನಿನ್ನ ಮೇಳೆಯ ನೋಡಿದುದು, ನೀನು ಬಲವಂತನಹುದು, ಆ ಶೂಲವ ಕಡೆಯಲ್ಲಿರಿಸಿ ತನ್ನೊಡನೆ ಯುದ್ಧವ ಮಾಡು. ನೀನು ಮುನ್ನ ಮಧು ಕೈಟಭರು ಮೊದಲಾದ ರಾಕ್ಷಸರನ್ನು ಕಪಟದಿಂ ಗೆದ್ದುದಲ್ಲದೆ, ಬಲುಮೆಯಿಂ ಗೆದ್ದವನಲ್ಲ, ಮತ್ತೂ ವಾಮನನಾಗಿ ಬಲಿಚಕ್ರವರ್ತಿಯಂ ಪಾತಾಳಕ್ಕೆ ಮೆಟ್ಟಿದೆ ವರಾಹನಾಗಿ ಹಿರಣ್ಯಾಕ್ಷನಂ ಮರ್ದಿಸಿದೆ ನರಮೃಗವೇಷವಂ ಹಿರಣ್ಯಕಶಿಪುವಂ ಸೀಳಿದೆ, ತಪಸ್ವಿಯಾಗಿ ಜಟಾವಲ್ಕಲಗಳಂಧರಿಸಿ ರಾವಣ, ಕುಂಭಕರ್ಣಾದಿಗಳಂಗೆದ್ದು ಗೋಪಾಲವೇಷವಂಧರಿಸಿ ಜರಾಸಂಧ, ಶಿಶುಪಾಲ, ದಂತವಕ್ರ, ಕಂಸಾದಿಗಳಂ ಸಾಧಿಸಿದೆ, ಸಮುದ್ರಮಥನದಲ್ಲಿ ಸ್ತ್ರೀಯಾಗಿ ದೇವತೆಗಳಿಗೆ ಅಮೃತವಂ, ದೈತ್ಯದಾನವರಿಗೆ ಸುರೆಯನಿತ್ತು, ಜಲಚರರೂಪದಿಂ ಸೋಮುಕ ಮೊದಲಾದ ದಾನವರ ಸಂಹರಿಸಿದೆ, ನೀನು ಮಾಯಾವಿಗಳೊಳಗೆ ಅಗ್ರಗಣ್ಯನು, ಸಕಲವಾದ ಜೀವರನುಮರ್ದಿಸಿ ಬಲ್ಲಂಥವನು, ನಿನಗೆ ನಾನಂಜುವವನಲ್ಲ, ಶರೀರವಧರಿಸಿದಮೇಲೆ ಅವಶ್ಯವು ಮರಣವಾಗುವುದು. ಈ ಶೂಲವ ಕಡೆಯಲ್ಲಿ ಇರಿಸದೆ ಇದ್ದೆಯಾದರೆ ನಾನು ನಿನ್ನಗೆಲ್ಲಲಾರೆನು, ಶರೀರಧಾರಿಗಳಿಗೆ ಇಂದಾಗಲಿ, ನಾಳೆಯಾಗಲಿ, ಮರಣವುಂಟಲ್ಲ ಅದು ಕಾರಣ ಬಲದಿಂದಲಾಗಲಿ, ಛಲದಿಂದಲಾಗಲಿ, ನಿನ್ನ ಕೂಡೆ ಯುದ್ಧವಮಾಡಿ ಮರಣವಹುದು ಉತ್ತಮವು, ಈ ವಿದ್ಯಾಧರಕನ್ಯೆ ಎನ್ನಿಂದದೂಷಿತ

ವಾಜಪಳಲ್ಲ, ಈ ಸ್ತ್ರೀಯು ಮಹಾಲಕ್ಷ್ಮಿಯೆಂದು ತಿಳಿದು ನಿನಗೋಸ್ಕರ ರಕ್ಷಿಸಿಕೊಂಡು ಇದ್ದೆನು, ಇಂತೆಂದುನುಡಿದು ಆ ರಾಕ್ಷಸನು ಪರ್ವತವಂ ನಡುಗಿಸುತ್ತಾ ಎಡವಕ್ಕೆಯಲ್ಲಿ ರಾಯನಹೊಡೆಯಲು, ರಾಯನು ಆ ಪೆಟ್ಟಿಗೆ ನೊಂದು ಅಂಜದೆ ಧೈರ್ಯದಿಂದ ತ್ರಿಶೂಲದಿಂದ ಇಡುವೆನೆಂದು ತ್ರಿಶೂಲವಂ ತಿರುಹಿ ಹಿಡಿದು ಆರಾಕ್ಷಸನ ಎದೆಯುಗುಂಡಿಗೆಯುಂ ನೋಡಿ ತನ್ನಸರ್ವಶಕ್ತಿಯುಂ ವಿಡಲು, ಆ ಶೂಲವು ಎದೆಯುತಾಕಲು, ಆಕ್ಷಣವೆ ಕಂಕಾಳಕೇತುವೆಂಬ ರಾಕ್ಷಸನು ಪ್ರಾಣವಂಬಿಟ್ಟನು, ಆ ಮಾರ್ಗ್ಯದೊಳಲ್ಲಿ ದೇವತೆಗಳಂ ಭಯಪಡಿಸುವ ಕಂಕಾಳಕೇತುವಂ ಸಂಹಾರವಮಾಡಿ ಸಂತೋಷಚಿತ್ತದಿಂ ತನ್ನಮೊಗವನೀಕ್ಷಿಸುತ್ತಾ ಇದ್ದಂಥಾ ಮಲಯಗಂಧಿನಿಯೆಂಬ ವಿದ್ಯಾಧರಸ್ತ್ರೀಯಂನೋಡಿ ರಾಯನಿಂತೆಂದನು, ಎಲೆ ವಿದ್ಯಾಧರಿ! ನಾರದಮುನಿಯವಾಕ್ಯವಂಕೇಳಿ ಎನ್ನಿಂದ ಈಕಾರ್ಯವು ಮಾಡಲ್ಪಟ್ಟಿತಲ್ಲ, ನೀನು ನಾಮಾಡಿದ ಉಪಕಾರವಂ ಬಲ್ಲವಳಹುದಲ್ಲ, ಇನ್ನು ನಾನುಮಾಡತಕ್ಕ ಪ್ರಯೋಜನವೇನು ಎನಲು ಆ ರಾಯನೊಡನೆ ಮಲಯಗಂಧಿನಿ ಇಂತೆಂದಳು, ಎಲೆ ಉದಾರಮತಿಯುಳ್ಳ, ಪರಾಕ್ರಮಶಾಲಿಯಾದ, ರಾಯನೆ! ನಿನ್ನಪ್ರಾಣಂಗಳು ಎನಗೆ ಕೊಡಲ್ಪಟ್ಟಿತು, ಸತ್ಕುಲಜಳಾದ ವಿಮಲಳೆಂಬ ಕನ್ಯಕೆಯಾದ ಎನ್ನನ್ನು ಕೈಕೊಳುವದೇನು, ಎಂದು ನುಡಿವನಿತರೊಳು ದೇವಲೋಕದಿಂದ ನಾರದಮುನಿಬರಲು, ಅವರೀರ್ವರು ನಾರದರಿಗೆ ನಮಸ್ಕಾರವಂಮಾಡೆ, ಆ ಮುನಿ ಅವರಿಗೆ ಗಾಂಧರ್ವವಿವಾಹವಂಮಾಡಿ ನಾರದನು ಅಂತರ್ಧಾನವಾದನು, ಅನಂತರದಲ್ಲಿ ಆ ರಾಯನು ಮಲಯಗಂಧಿನಿಸಹಾ ನಾರದಮುನಿ ತೋರಿದಮಾರ್ಗದಲ್ಲಿಯೆ ಪಾತಾಳಬಿಲಂಪೂರಮುಟ್ಟಿ ಸಂತೋಷದಿಂಬಂದು ಅಲಂಕೃತವಾದ ಕಾಶೀಪಟ್ಟಣವಂಪೊಕ್ಕರು, ಆಪಟ್ಟಣದರ್ಶನಮಾತ್ರದಲ್ಲಿಯೆ ನರಕಬಾಧೆಯಂ ಪರಿಹರಿಸಿ ಉತ್ತಮಗತಿಯಂ ಕೊಡುವ ಕಾಶೀಪಟ್ಟಣವಂ ಪ್ರವೇಶವಾಗಿ ಆ ಮಲಯಗಂಧಿ ಕಾಶೀಪಟ್ಟಣದ ಸೌಭಾಗ್ಯವಂನೋಡಿ, ಸ್ವರ್ಗವನಿಂದಿಸಿ, ಅಮಿತ್ರಜಿತುರಾಯನ ವಿವಾಹವಾದ ಸಂತೋಷಕ್ಕಿಂತ ಅಧಿಕವಾಗಿ ಸಂ

ತೋಷಪಟ್ಟು ತನ್ನ ಪತಿಯೊಡಗೂಡಿ ಅತ್ಯಂತಹರ್ಷದೊಳಿದ್ದಳು, ಆಗಾಯನು ಆ ಸ್ತ್ರೀಯೊಡಗೂಡಿ ಸಕಲಭೋಗ ಮನೋರಥಗಳಂ ಪಡೆದನು, ಈ ಮರ್ಯಾದೆಯಲ್ಲಿ ಕೆಲವುಕಾಲ ಸುಖವಲ್ಲಿದ್ದರು, ಹೀಗಿರಲು ಆ ರಾಯನ ರಾಣಿಯಾದ ಮಲಯಗಂಧಿನಿ ವಿಷ್ಣುಭಕ್ತನಾದ ತನ್ನ ಪತಿಯಲ್ಲಿ ಸಂತಾನವಬಯಸಿದವಳಾಗಿ ರಹಸ್ಯದಲ್ಲಿ ತನ್ನ ಪತಿಯೊಡನೆ ಇಂತೆಂದಳು ಎಲೆ ಪ್ರಾಣನಾಥನೆ! ನಿನ್ನಿಂದ ಎನಗೆ ಸಂತಾನವಾಗಬೇಕೆಂಬ ಇಚ್ಛೆಯಾಯಿತು, ಅದಕ್ಕೆ ಅಭೀಷ್ಟತೃತೀಯ ವ್ರತವಂ ಮಾಡಬೇಕು, ಆ ವ್ರತವೆಂಥಾದ್ದೊ ಆವ್ರತಕ್ಕೆ ದಾನವೇನೊ ಆವ್ರತವಮಾಡಿದ ಫಲವಾವುದೊ ಅದುಮಾಡುವಕ್ರಮ ಹ್ಯಾಗೆ ಸ್ತ್ರೀಯರು ತನ್ನ ಪತಿಯ ಅನುಜ್ಞೆಹೊರತಾಗಿ ವ್ರತಾದಿಗಳಮಾಡಲು, ಇಹದಲ್ಲಿ ಸುಖವಿಲ್ಲದೆ ದುಃಖವನನುಭವಿಸಿ ಪರದಲ್ಲಿ ನರಕವಸ್ಸೈದುವರು, ಆದಕಾರಣ ನಿಮ್ಮ ಅನುಮತಿಯಾಗಬೇಕೆಂದ ತನ್ನಸತಿಯ ವಾಕ್ಯವಂ ಕೇಳಿ ರಾಯನು ಹರ್ಷಿತನಾಗಿ ಆ ವ್ರತದ ಕ್ರಮವಂ ಪೇಳಲುದ್ಯೋಗಿಸಿದನು, ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವಂ ವ್ಯಾಸರು ತನಗರುಹಿದರೆಂದು ಸೂತಪುರಾಣಿಕನು ಶೌನಕಾದಿಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ * * * * * * * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂಧಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಅಮಿತ್ರಜಿತುವಿಗೆ ಮಲಯಗಂಧಿನೀ ವಿವಾಹವಾದ ವೃತ್ತಾಂತವಂಪೇಳ್ದ ಎಂಭತ್ತೆರಡನೇ ಅಧ್ಯಾಯಾರ್ಥನಿರೂಪಣಕ್ಕಂ ಮಂಗಳಮಹಾ * * * * *

ಎಂಭತ್ತಮೂರನೇ ಅಧ್ಯಾಯ ವೀರೇಶ್ವರನಪ್ರಸಂಗ,

ಶ್ರೀವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ಆ ಅಮಿತ್ರಜಿತುರಾಯನು ತನ್ನ ಸತಿಗಿಂತೆಂದನು, ಎಲೆ ಮಲಯಗಂಧಿನಿ ಅಭೀಷ್ಟಪ್ರವತೃತೀಯ ವ್ರತದಮಹಿಮೆಯನ್ನು ಆವ್ರತದದೇವತೆಯನ್ನು ದಾನವನ್ನು ಫಲ

ವನ್ನು, ಹೇಳೇನು ಕೇಳು, ಪೂರ್ವದಲ್ಲಿ ಕುಬೇರನಹೆಂಡತಿ ಸಂತಾನವಂ ಬಯಸಿ ನಾರದನಂ ಬೆಸಗೊಳ್ಳಲು ನಾರದನಿರೂಪಿಸಿದನು, ಆ ಋಷಿಪೇಳ್ದ ಮರ್ಯಾದೆಯಲ್ಲಿ ಅಭೀಷ್ಟಪ್ರದ ತೃತೀಯಾವ್ರತವಂಮಾಡಿ ಕುಬೇರನ ಸ್ತ್ರೀಯು ನಳಕೂಬರನೆಂಬ ಸಂತಾನವಂ ಪಡೆದಳು, ಮತ್ತು ಅನೇಕಮಂದಿ ಸ್ತ್ರೀಯರು ಈ ವ್ರತವಂಮಾಡಿ ಸಂತಾನಂಗಳಂ ಪಡೆದರು, ನೀನು ಆ ವ್ರತವಂ ಮಾಡಲು ಮನೋರಥಸಿದ್ಧಿಯಾದೀತು, ಆ ವ್ರತವಂ ಮಾಡುವಕ್ರಮವೆಂತೆಂದರೆ- ತಾಯಿಮುಖವಂ ನೋಡುತ್ತಾ ಸ್ತನ್ಯಪಾನವಂ ಮಾಡುವ ಕುಮಾರನೊಡಗೂಡಿದ ಗೌರೀದೇವಿಯರ ಪೂಜಿಸಬೇಕು. ಆ ಪೂಜಾಕಾಲ ಆವಾಗಲೆನೆ, ಮಾರ್ಗಶಿರಶುದ್ಧ ತದಿಗೆಯದಿನ ತೀರ್ಥಪೂರಿತವಾದ ಕಲಶವಮೇಲೆ ತಂಡುಲಪೂರಿತವಾದ ತಾಮ್ರಪಾತ್ರೆಯನಿರಿಸಿ ನೂತನವಾದ ಅರಿಶಿನದ ವಸ್ತ್ರವಂ ಹಾಸಿ ಆ ವಸ್ತ್ರದಮೇಲೆ ಅಷ್ಟದಳದಪದ್ಮವಂ ಬರೆದು ಆ ಪದ್ಮಕರ್ಣಿಕಾಮಧ್ಯದಲ್ಲಿ ನಾಲ್ಕುವರಹಾತೂಕ ಸುವರ್ಣದಲ್ಲಿ ವಿರಚಿಸಿದ ವಿಶ್ವವಿಧಾಯಿನೀ ಎಂಬ ಗೌರೀದೇವಿಯನಿರಿಸಿ ರಮ್ಯವಾದ ಮಂಟಪದಲ್ಲಿ ಷೋಡಶೋಪಚಾರಪೂಜೆಯಂ ಮಾಡಿ ಭಕ್ಷ್ಯ ಭೋಜ್ಯ ನೈವೇದ್ಯಂಗಳಂ ದೇವಿಯಂ ತೃಪ್ತಿಪಡಿಸಿ ರಾತ್ರಿಜಾಗರಣೆಯಂ ಮಾಡಿ ಮರುದಿವಸ ಹಸ್ತಪ್ರಮಾಣವಾದ ಹೋಮಕುಂಡದಲ್ಲಿ ತಮ್ಮ ಅಗ್ನಿಹೋತ್ರಪ್ರಕಾರದಿಂದ ಅಗ್ನಿಪ್ರತಿಷ್ಠಾಪನೆಯಂ ಮಾಡಿ ತನ್ನಿಂದತಾನೆ ಅರಳಿದ ಸಾವಿರಪುಷ್ಪವಂ ಹಸುವಿನತುಪ್ಪ ಜೇನುತುಪ್ಪದಲ್ಲಿ ನೆನಸಿ ತ್ರೈಷ್ಟುಪ್ದುರ್ಗಾಮಂತ್ರದಿಂ ಹೋಮವಂ ಮಾಡಿ ಎಳೆಗಂದಿಯಾದ ಸಾಧುವಾಗಿರುವ ಎಳೆಯ ಕಪಿಲೆ ಹಸುವನ್ನು ಅಲಂಕಾರದಕ್ಷಿಣೆಸಹಿತವಾಗಿ ಆಚಾರ್ಯನಿಗೆ ಗೋದಾನವನೀವುದು. ಆ ಗೋದಾನವಂ ಮಾಡುವಕ್ರಮವೆಂತೆಂದರೆ- ತದಿಗೆಯದಿನ ದಂಪತಿಗಳಿಬ್ಬರು ಉಪವಾಸವಿದ್ದು ಪೂಜೆ ಜಾಗರಣೆಯಂ ಮಾಡಿ ಪ್ರಾತಃಕಾಲದಲ್ಲಿ ಎದ್ದು ಸ್ನಾನವಂ ಮಾಡಿ ಚೌತ್ರಿಯುವಿಸ ಮಡಿಯನುಟ್ಟು ಗಂಧಪುಷ್ಪವಸ್ತ್ರಾಭರಣಂಗಳಿಂದ ಆಚಾರ್ಯದಂಪತಿಗಳಂ ಪೂಜೆಯಂ ಮಾಡಿ ಸಂತೋಷಚಿತ್ತರಾಗಿ ಕಲಶಪ್ರತಿಮೆ ಸೋಪಸ್ಕರವಂ ದಕ್ಷಿಣೆಸಹಿತ ದಾನವೀಯ್ಯಬೇಕು. ಆ ದಾನವೀವ ಮಂ

ತ್ರವಾವುದೆನೆ— ಮಂತ್ರ, ಓಂ॥ ನಮೋವಿಶ್ವವಿಧಾನಜ್ಞೇ ವಿಶ್ವೇಷಿಶ್ವವಿಧಾಯಿನಿ। ಸುತಂವಂಶಕರಂ ದೇಹಿತುಷ್ಟಾ ಮಹ್ಯಾಮ್ಮವ್ರತಾಘುಭಾತ್॥ ಎಂಬಮಂತ್ರವಿಂದ ಆಚಾರ್ಯಂಗೆ ಧಾರೆಯನೆರದು ಅನಂತರದಲ್ಲಿ ಸಹಸ್ರ ಬ್ರಾಹ್ಮಣಭೋಜನವಂ ಮಾಡಿಶಿ ಅವರ್ಗೆ ಬಡಿಶಿದ ಅನ್ನಸೋಪಸ್ಕರಾದಿಗಳನ್ನು ಪಾರಣೆಯಂಮಾಡುವದು, ಹೀಗೆಂದು ಅಮಿತ್ರಜಿತುರಾಯನು ಹೇಳಿದ ವ್ರತವಂಕೇಳಿ ಮಲಯಗಂಧಿನಿಯು ಸಂತೋಷದಿಂದ ನಾವುಇಬ್ಬರು ಈ ಪ್ರಕಾರದಲ್ಲಿಯೆ ನಮ್ಮ ಅಭೀಷ್ಟಫಲಕ್ಕೋಸ್ಕರ ವ್ರತವಮಾಡುವಾವೆಂದು ರಾಯಂಗೆಬಿನ್ನಹವಂಮಾಡಿದಳು, ಕೇಳೈಅಗಸ್ತ್ಯನೆ! ಮತ್ತಾ ಮಲಯಗಂಧಿನಿಯು ಪತಿಸಹಾವ್ರತವಂಮಾಡಿ ಸಂತೋಷದಿಂದ ಗರ್ಭಿಣಿಯಾಗಿ ಗೌರಿಯಂ ಸ್ತುತಿಶಿ ಬೇಡಿಕೊಂಡಳು, ಎಲೆತಾಯೆ! ಎನಗೆ ವಿಷ್ಣುವಿನ ಅಂಶನಾದ ಕುಮಾರನಂಕೊಡು ಆಕುಮಾರನು ಜನಿಶಿದಾಕ್ಷಣವೆ ಸ್ವರ್ಗಕ್ಕೆ ಹೋಗಿಬರಲಿ ಶಿವಭಕ್ತನಾಗಲಿ, ಲೋಕಕ್ಕೆಪ್ರಸಿದ್ಧನಾಗಲಿ, ಜನಿಸುತ್ತಲೆ ಸ್ತನ್ಯಪಾನಹೊರತಾಗಿ ಹದಿನಾರುವರ್ಷದ ಪ್ರಾಯದವನಾಗಲಿ, ಎಂದು ಗೌರಿಯಂಪ್ರಾರ್ಥಿಸಲು ದೇವಿಯರು ಹಾಗೇಆಗಲಿ ಎಂದು ವರವನಿತ್ತರು, ಅನಂತರದಲ್ಲಿ ಮಲಯಗಂಧಿನಿಯು ನವಮಾಸತುಂಬಿ ಮೂಲಾನಕ್ಷತ್ರದಲ್ಲಿ ಕುಮಾರನಂಪಡೆದಳು, ಆ ಸಮಯದಲ್ಲಿ ಹಿತವಿಶ್ವಾಸವುಳ್ಳ ಪ್ರಧಾನಿಗಳುಬಂದು ತಮ್ಮ ಒಡತಿಗೆ ಇಂತೆಂದು ಬಿನ್ನಹವಂಮಾಡಿದರು, ಎಲೆತಾಯೆ! ನೀನು ರಾಯನಪ್ರಾಣವಂ ಉಳುಹಿದೆಯಾದರೆ ದುಷ್ಟನಕ್ಷತ್ರದಲ್ಲಿ ಪುಟ್ಟಿದ ಈಕುಮಾರನಂಬಿಟ್ಟು ಕಳುವುದೆಂದು ಬಿನ್ನವಿಸಿದ ಪ್ರಧಾನಿಗಳವಾಕ್ಯವಂ ಕೇಳಿ ಪತಿವ್ರತೆಯಾದ ಮಲಯಗಂಧಿನಿಯು ನಯವಿನಯಸಂಪತ್ತಿಯುಳ್ಳ ಕುಮಾರನಂನೋಡಿ ಮನದಲ್ಲಿಚಿಂತಿಸಿ ದಾದಿಯರಂಕರೆದು ಇಂತೆಂದಳು—ಎಲೆದಾದಿಯರಿರಾ! ಈಕುಮಾರನಂಕೊಂಡುಹೋಗಿ ಪಂಚಮುದ್ರಾಪೀಠದಲ್ಲಿಇಹ ವಿಕಟಾದೇವಿಯಮುಂದೆ ಪತಿವ್ರತೆಯಾದ ಮಲಯಗಂಧಿನಿಯು ಮಂತ್ರಿಗಳಬಿನ್ನಹವಂಕೇಳಿ ದುಷ್ಟನಕ್ಷತ್ರದಲ್ಲಿ ಪುಟ್ಟಲಾಗಿ ಈಶಿಶುವನ್ನು ಇಲ್ಲಿಇರಿಸಿ ನಿಮ್ಮಕೂಡೆಇಂತೆಂದು ಬಿನ್ನವಿಸಿ ಬರ

ಹೇಳಿದಳು, ಎಂದು ಕುಮಾರನಂ ಪೋಷಿಯರಪುಂದಿರಿಸಿ ದಾದಿಯರು ತಿರಿಗಿ ಮನೆಗೆಹೋಗಲು, ವಿಕಟಾದೇವಿಯು ಯೋಗಿನಿಯರಂ ಕರೆದು ಇಂತೆಂದಳು—ಎಲೆ ಯೋಗಿನಿಯರಿರಾ ! ಈ ಕ್ಷಣದಲ್ಲಿಯೆ ಈ ಶಿಶುವಮಾತೃಕೆಗಳಬಳಿಗೆ ಕರದೊಯ್ದು ಅವರಅನುಮತಿಯಿಂದ ಈ ಕುಮಾರನನಂ ರಕ್ಷಣೆಯಂಮಾಡಿ ರಕ್ಷಿಸೆಂದು ವಿಕಟಿಹೇಳಿದಳು, ಆ ವಿಕಟಾದೇವಿಯುಮಾತಿನಿಂದ ಯೋಗಿನಿಯರು ಆ ಶಿಶುವಂಕೊಂಡು ಆಗ ಬ್ರಾಹ್ಮಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಮಾಹೇಂದ್ರಿ, ಚಾಮುಂಡಿ, ನಾರಸಿಹ್ಮಿ, ಚಂಡಿಕಾದ್ರಿಎಂಬ ಮಾತೃಕೆಯರಬಳಿಗೆ ಯೋಗಿನಿಯರುಹೋಗಿ ಎಲೆ ಮಾತೃಕೆಗಳರಾ ! ನಿಮ್ಮಬಳಿಯಇರಿಸಿಬನ್ನೀಎಂದು ಈ ಶಿಶುವ ವಿಕಟಾದೇವಿಕಳುಹಿದಳು, ಎಂದುಹೇಳಿಇರಿಸಲು ಆಮಾತೃಕೆಯರು ಅತಿರಮ್ಯವಾದ ಶಿಶುವಂನೋಡಿ ನಿಮ್ಮತಾಯಿಯಾರು? ತಂದೆಯಾರು? ಎಂದು ಎಲ್ಲರೂ ಒಂದೇಬಾರಿಕೇಳಲು, ಆ ಬಾಲಕಸುಮ್ಮನಿರಲು ಆ ಮಾತೃಕೆಯರು ಯೋಗಿನಿಯರಂಕರದು ಮಹಾಲಕ್ಷಣವುಳ್ಳರಾಯನ ಕುಮಾರನನ್ನು ಆಲಸ್ಯವಮಾಡದೆ ಪಂಚಮುದ್ರಾ ಮಹಾದೇವಿಯರಿಪ್ಪಸ್ಥಳಕ್ಕೆ ಕೊಂಡುಹೋಗಿ ಆ ಪೀಠದಸೇವೆಯಂ ಮಾಡಿಸಲು, ವಿಶ್ವಪತಿಯ ಅನುಗ್ರಹವಾಗುವದು, ಆ ಪೀಠದಸೇವೆಯಿಂದ ಮುಕ್ತಿಯುಹುದು, ಕಾಶಿಯಲ್ಲಿ ಪುಣ್ಯವಮಾಡಿದವರಿಗೆ ಅಡಿಗಡಿಗೆ ಮುಕ್ತಿಯುಂಟು, ಮತ್ತು ಆ ಪಂಚಮುದ್ರಾಪೀಠವು ಅತಿಶೀಘ್ರದಿಂದ ಸಿದ್ಧಿಪ್ರದವಾದುದು, ಆ ಪೀಠದಸೇವೆಯಂಮಾಡಿ ಸಿವರೆವಿಶ್ವಪತಿಯ ಅನುಗ್ರಹದಿಂದ ಈ ಶಿಶುವು ಹದಿನಾರುವರ್ಷದ ಬಾಲಕನಾದಾನುಎಂದು ಹೇಳಿದಮಾತೃಕೆಯರ ವಚನದಿಂದ ಯೋಗಿನಿಯರು ಆ ಶಿಶುವಂತಂದು ಪಂಚಮುದ್ರಾಪೀಠದಲ್ಲಿ ಇರಿಸಲು, ಆ ಕ್ಷಣವೆ ಆ ಶಿಶುವು ಹದಿನಾರುವರ್ಷದಕುಮಾರನಾಗಿ ಅನಂತರದಲ್ಲಿ ಆ ಕ್ಷೇತ್ರದಮಹಿಮೆಯಂತಿಳಿದು ಆ ಕುಮಾರನು ಉಗ್ರತಪವಿರಲು ಆ ರಾಜಕುಮಾರಂಗೆ ಬಿಂದುಮಾಧವನು ಲಿಂಗರೂಪಿನಿಂದ ಪ್ರಸನ್ನನಾಗಿ ಎಲೈರಾಜಕುಮಾರನೆ! ವರವಕೇಳಿಕೊ ಎನಲು, ಆ ಕುಮಾರನು ಜ್ಯೋತಿರೂಪಾದ ಸಪ್ತಪಾತಾಳಂಗಳಂ ಭೇ

ಡಿಸಿ ಲೋಕಾನುಗ್ರಹವಾಗಿ ಪ್ರಸನ್ನವಾದ ಲಿಂಗವಂನೋಡಿ ಜನ್ಮಾಂತ ರದಲ್ಲಿ ಅಭ್ಯಾಸವಂಮಾಡಿದ ರುದ್ರಸೂಕ್ತಂಗಳಿಂ ಸ್ತುತಿಮಾಡಿ ಇಂ ತೆಂದುಬಿನ್ನಹವಮಾಡಿದನು, ಎಲೈ ದೇವದೇವ! ಎನಗೆನೀವು ವರವನೀವು ದುಂಟಾದರೆ ಈ ಲಿಂಗದಲ್ಲಿ ನಿತ್ಯವಾಸವಾಸವಾಗಿರ್ದು ಮುದ್ರೆಇಲ್ಲದೆ ಮಂತ್ರವಿಲ್ಲದೆ ದರ್ಶನಸ್ಪರ್ಶನಮಾತ್ರದಲ್ಲಿಯೆ ಭಕ್ತರಇಷ್ಟಾರ್ಥವನೀ ಯಬೇಕು. ಇದೀಗ ಎನಗೆವರ ಈರೀತಿಯಲ್ಲಿ ಕೇಳಿಕೊಂಡವರವಂಕೇ ಳಿ ಲಿಂಗರೂಪವಾದ ಬಿಂದುಮಾಧವಸ್ವಾಮಿಯು ಇಂತೆಂದನು, ಎಲೈ ವೀರ! ಅಮಿತ್ರಜಿತುವೆಂಬ ನಿಮ್ಮತಂದೆ ಮಹಾವೀರ ವೈಷ್ಣವನುನೀ ನುವಿಷ್ಣುವಿನ ಅಂಶೆಯಿಂದ ಜನಿಶಿದವನು ನಿನ್ನಹೆಸರು ವೀರನೆಂದುಪ್ರ ಸಿದ್ಧವಾಗಲಿ ನೀನುಎನ್ನಭಕ್ತನು ಅದುಕಾರಣ ನೀನು ಪ್ರತಿಷ್ಠೆಯಂ ಮಾಡಿದಲಿಂಗವು ವೀರೇಶ್ವರನೆಂದು ಪ್ರಸಿದ್ಧವಾಧೀತು, ಇಂದುಮೊದಲಾ ಗಿ ಈ ಲಿಂಗದಲ್ಲಿ ನಿರಂತರವಾಗಿ ತಾನು ಇಧೇನೆ ! ಕಲಿಯುಗದಲ್ಲಿ ಎನ್ನ ಮಹಿಮೆಯನ್ನು ಒಬ್ಬರುಅರಿಯರು ಬಲ್ಲಮಂಟಾದರೆ ಪರಮಸಿದ್ಧಿ ಕೈ ವಶವಹುದು, ಇಲ್ಲಿ ದಾನ, ಜಪ, ಹೋಮ, ಪೂಜೆ, ಜೀರ್ಣೋದ್ಧಾರ, ಮೊದಲಾದ ಕ್ರಿಯೆಗಳಂಮಾಡಲು ಅನಂತಫಲ ನೀನುರಾಯನಾಗಿ ಸಕಲ ಭೋಗಗಳನ್ನು ಅನುಭವಿಶಿ ಅಂತ್ಯದಲ್ಲಿ ಸಿದ್ಧಿಯನ್ನೈದಿ ಕಾಶಿಯಲ್ಲಿಇಹಹಯ ಗ್ರೀವತೀರ್ಥ ಮಹಾಪವಿತ್ರವಾದುದು, ಅದಕ್ಕಿಂತಗಜತೀರ್ಥವಧಿಕ, ಇದರ ಲ್ಲಿ ಸ್ನಾನದಿಂ ಹಯಗಜದಾನವಿತ್ತಫಲ, ಅದರಿಂ ಕೋಕವರಾಹತೀರ್ಥಬ ಹುಪುಣ್ಯಪ್ರದವಾದುದುಇಲ್ಲಿಸ್ನಾನವಮಾಡಿಕೋಕವರಾಹಮೂರ್ತಿಯಂ ಪೂಜಿಸಲುಪುನರ್ಜನ್ಮವಿಲ್ಲ, ಅಧರಿಂದಾಲಿಪೀಶ್ವರನ ಸನ್ನಿಧಿಯಲ್ಲಿ ಇರ್ದ ಲಿಪಿತೀರ್ಥದಲ್ಲಿ ಸ್ನಾನವಂಮಾಡೆ ಸರ್ವಪಾಪಹರ, ಆ ಸಮೀಪದಸಗರತೀ ರ್ಥದಲ್ಲಿ ಸ್ನಾನವಂಮಾಡಿ ಸಗರೇಶ್ವರನಪೂಜಿಸಲು ಸಂಸಾರಸಾಗರದಲ್ಲಿ ಮುಳುಗರ್ರು, ಆ ಸಮೀಪದ ಸಪ್ತಸಾಗರತೀರ್ಥದಲ್ಲಿ ಸ್ನಾನವಂಮಾಡಲು ಸಪ್ತಸಮುದ್ರದಲ್ಲಿ ಸ್ನಾನವಂಮಾಡಿದಫಲವುಂಟು,ಆ ಸಮೀಪದಲ್ಲಿಹವು ಹೋದಧಿತೀರ್ಥದಲ್ಲಿಸ್ನಾನವಂಮಾಡಲು ಸಂಸಾರಸಾಗರವಂ ದಾಂಟುವ ರ್ರು, ಕಪಾಲೇಶ್ವರನಸನ್ನಿಧಿಯಲ್ಲಿಹ ಚೋರಹರತೀರ್ಥದಲ್ಲಿ ಸ್ನಾನವಂ

ಮಾಡಲುಸ್ವರ್ಣಸ್ತೇಯಮೊದಲಾದಪಾಪಹರ, ಕೇತಾರೇಶ್ವರನಸಮೀಪದಲ್ಲಿಹಹಂಸತೀರ್ಥದಲ್ಲಿಸ್ನಾನವಂಮಾಡಲು ಹಂಸರೂಪಿಯಾದನಾನುಆದೇಹಿಗಳ ಹಂಸವಾಹನನಾದ ಬ್ರಹ್ಮನನ್ನೈದಿದೆನು, ಆಸಮೀಪದಲ್ಲಿಹ ತ್ರಿಭುವನತೀರ್ಥದಲ್ಲಿ ಸ್ನಾನವಮಾಡಲು ತ್ರಿಭುವನಕ್ಕೆ ಕರ್ತನಹನು,ಗೋವ್ಯಾಘ್ರಗಳಿಗೆ ಒಂದೇವ್ಯಾಳೆ ಮುಕ್ತಿಯನೀವ ಗೋವ್ಯಾಘ್ರತೀರ್ಥದಲ್ಲಿ ಸ್ನಾನವಮಾಡೆ ಸ್ವಭಾವವೈರವಂಬಿಟ್ಟು ಜ್ಞಾನಿಯಹನು,ಮಾಂಧಾತರಾಯನು ಚಕ್ರವರ್ತಿಯಾದಾಗ ಮಾಂಧಾತತೀರ್ಥವಂ ನಿರ್ಮಿಸಿ ತಪಸ್ಸಮಾಡಿದನು, ಆ ತೀರ್ಥದಲ್ಲಿಸ್ನಾನವಂಮಾಡಲು ಚಕ್ರವರ್ತಿಯಾಹಾನು, ಆ ಸಮೀಪದ ಪೃಥುತೀರ್ಥದಲ್ಲಿ ಸ್ನಾನವಂಮಾಡಲು ಪೃಥುಚಕ್ರೇಶ್ವರನಪೂಜಿಸಲು ಪೃಥಿವಿಗೆಲ್ಲಾ ಪತಿಯಹನು, ಪರಶುರಾಮನು ಸಕಲ ಕ್ಷತ್ರಿಯರವಧೆಯಿಂ ಬಂದಪಾಪವಂ ಪರಿಹರಿಸಿಕೊಂಡಪರಶುರಾಮತೀರ್ಥದಲ್ಲಿ ಸ್ನಾನವಂಮಾಡಲು ಸಕಲಪಾಪಹರ, ಬಲಭದ್ರನುಸೂತನವಧೆಯಿಂ ಬಂದಪಾಪ ಪರಿಹರಿಸಿಕೊಂಡ ಬಲಭದ್ರತೀರ್ಥದಲ್ಲಿ ಸ್ನಾನವಮಾಡೆ ಬ್ರಹ್ಮಹತ್ಯಾ ಪಾಪಹರ, ದಿವೋದಾಸತೀರ್ಥದಲ್ಲಿ ಸ್ನಾನವಮಾಡೆ ಜ್ಞಾನವಂತನಹನು, ಆಸಮೀಪದಭಗೀರಥತೀರ್ಥದಲ್ಲಿ ಸ್ನಾನವಂಮಾಡಿ ಶ್ರಾದ್ಧಾದಿಗಳಮಾಡಲು ಸಮಸ್ತಪಿತೃಗಳು ಪುಣ್ಯಲೋಕವನ್ನೈದುವರು, ಪುನರ್ಜನ್ಮವಿಲ್ಲ, ಆ ತೀರ್ಥದಲ್ಲಿಹ ಹರಂಪಾಪಹರತೀರ್ಥದಲ್ಲಿ ಸ್ನಾನವಮಾಡಲು ದಶಾಶ್ವಮೇಧವಮಾಡಿದಫಲ, ಆ ಸಮೀಪದ ನಿಷ್ಪಾಪೇಶ್ವರನಸೇವೆಯಿಂ ನಿಷ್ಪಾಪನಹನು, ಆ ಸಮೀಪದ ದಶಾಶ್ವಮೇಧತೀರ್ಥದಲ್ಲಿ ಸ್ನಾನವಮಾಡೆ ಮಹಾಪಾತಕಹರ, ದಶಾಶ್ವಮೇಧವಮಾಡಿ ಹತ್ತುವೇಳೆ ಅವಭೃತಸ್ನಾನವಮಾಡಿದ ಫಲವುಂಟು, ಆಸಮೀಪದ ಬಂಧಿನೀತೀರ್ಥದಲ್ಲಿ ಸ್ನಾನವಂಮಾಡಲು ಸಂಸಾರಬಂಧಪರಿಹರ, ಅದೆಂತೆನೆ—ಪೂರ್ವದಲ್ಲಿ ಸಕಲದೇವತೆಗಳನ್ನು ಹಿರಣ್ಯಾಕ್ಷನು ಶರೆಹಾಕಿಕೊಳ್ಳಲು ಆ ದೇವತೆಗಳು ಆದಿಶಕ್ತಿಯಿಂ ಸ್ತುತಿಸಲು, ಆಗ ಬಂದು ಶರೆಯಂಬಿಡಿಸಿದ ಶಕ್ತಿಯು ಬಂಧಿನೀಎನಿಸುವಳು, ಆದೇವಿಯ ಸಮೀಪದಲ್ಲಿರ್ದ ಬಂಧಿನೀತೀರ್ಥದಲ್ಲಿ ಸ್ನಾನವಂಮಾಡಲು ಶರೆ ಸಂ

ಕೋಟಿ ಮೊದಲಾದ ಬಂಧಕಪರಿಹಾರವಹುದು, ಆ ಸಮೀಪದ ಪ್ರಯಾಗತೀರ್ಥದಲ್ಲಿ ಸ್ನಾನವಂಮಾಡಲು ಸಮಸ್ತಯಾಗಫಲವು, ಆ ಸಮೀಪದ ಕಾಲತೀರ್ಥದಲ್ಲಿ ಸ್ನಾನವಂಮಾಡಲು ಕಾಲಭಯವಿಲ್ಲ, ಆ ಸಮೀಪದ ಅಶೋಕತೀರ್ಥದಲ್ಲಿ ಸ್ನಾನವಂಮಾಡಲು ಸಕಲಶೋಕಹರ, ಶುಕ್ಲತೀರ್ಥದಲ್ಲಿ ಸ್ನಾನವಂಮಾಡಲು ಶುಕ್ಲದ್ವಾರದಿಂದ ಜನಿಸನು, ಆ ಸಮೀಪದ ಭವಾನೀತೀರ್ಥದಲ್ಲಿ ಸ್ನಾನವಂಮಾಡಲು ಪುನರ್ಜನ್ಮವಿಲ್ಲ, ಅಲ್ಲಿಹ ಭವಾನೀಶ್ವರನ ಪೂಜಿಸಲು ಬವವಿಮೋಚನವಹುದು, ಆಸಮೀಪದ ಸೋಮೇಶ್ವರನ ಮುಂದಿಹ ಪ್ರಭಾಸತೀರ್ಥದಲ್ಲಿ ಸ್ನಾನವಂಮಾಡಲು ಮರುಹುಟ್ಟು ಇಲ್ಲ, ಅಲ್ಲಿಹ ಗರುಡತೀರ್ಥದಲ್ಲಿ ಸ್ನಾನವಂಮಾಡಲು ಬ್ರಹ್ಮವಿದ್ಯಾಪ್ರಾಪ್ತಿಯಹುದು, ಆಸಮೀಪದ ವೃದ್ಧಕಾಳತೀರ್ಥದಲ್ಲಿ ಸ್ನಾನದಿಂ ಸೂರ್ಯಲೋಕನಿವಾಸವಹುದು, ಆಸಮೀಪದ ನೃಸಿಹ್ಮತೀರ್ಥದಲ್ಲಿ ಸ್ನಾನದಿಂ ಯಮಭಯವಿಲ್ಲ, ಚಿತ್ರಗುಪ್ತತೀರ್ಥದಲ್ಲಿ ಸ್ನಾನವಂಮಾಡಲು ಚಿತ್ರಗುಪ್ತರಲೆಖ್ಖಕ್ಕೆಬಾರನು, ಆ ಸಮೀಪದ ಧರ್ಮತೀರ್ಥದಲ್ಲಿ ಸ್ನಾನದಿಂ ಪಿತೃಋಣವಿಮೋಚನ, ವಿಶಾಲತೀರ್ಥದಲ್ಲಿ ಸ್ನಾನವಂಮಾಡಲು ವಿಶಾಲವಾದಫಲ, ಅಗಸ್ತ್ಯತೀರ್ಥದಲ್ಲಿ ಸ್ನಾನವಂಮಾಡೆ ಅತಿಪುಣ್ಯಫಲ, ಅಲ್ಲಿಹ ಯೋಗಿನೀತೀರ್ಥ, ಸಪರ್ಣಾತೀರ್ಥ, ಅರುಂಧತೀತೀರ್ಥ, ವಸಿಷ್ಠತೀರ್ಥ, ಮಾರ್ಕಂಡೇಯತೀರ್ಥ, ಇವೆಲ್ಲವೂ ಅತಿಪುಣ್ಯವನೀವವೂ, ಖುರತೀರ್ಥದಲ್ಲಿ ಸ್ನಾನವಂಮಾಡಿ ಶ್ರಾದ್ಧಕ್ರಿಯೆಗಳಂಮಾಡಲು ಸಕಲಪಾಪಹರ, ಆ ತರುವಾಯಭವಾನೀತೀರ್ಥದಲ್ಲಿ ಸ್ನಾನವಂಮಾಡಲು ಆಪುಣ್ಯಕ್ಕೆ ಕಲ್ಪಾಂತರದಲ್ಲಿಯು ಕೇಡಿಲ್ಲ, ಈಗಹೇಳಿದಅನೇಕತೀರ್ಥದಿಂದಲು ಮೂರುಕೋಟಿ ದಿವ್ಯಲಿಂಗಗಳಿಹವು ಈ ಲಿಂಗಗಳಿಂದಲು ವೀರೇಶ್ವರ ಅತ್ಯಂತಅಧಿಕನು, ಎಲೆವೀರನೆ! ನಿನ್ನಹೆಸರತೀರ್ಥದಲ್ಲಿ ಸ್ನಾನವಂಮಾಡಿ ಈ ವೀರೇಶ್ವರನ ಪೂಜೆಯಂಮಾಡಲು ಮೂರುಕೋಟಿಲಿಂಗಗಳ ಪೂಜಿಸಿದವನಹನು, ಆವನಾನೊಬ್ಬನು ರಾತ್ರಿಯಲ್ಲಿ ಈ ವೀರೇಶ್ವರನಪೂಜಿಸಲು ಮೂರುಕೋಟಿಲಿಂಗಗಳ ಪೂಜೆಸಿದವನಹನು, ಅಂತ್ಯದಲ್ಲಿ ಪಂಚಭೂತಮಯವಾದ ಶರೀರವನೆತ್ತೂ

ನು, ಈ ಲಿಂಗಕ್ಕೆ ಪಂಚಾಮೃತಾಭಿಷೇಕವಮಾಡಲು ಮೂರುಕೋಟಿಲಿಂಗಗಳಿಗೂ ಅಭಿಷೇಕವಮಾಡಿದಫಲ, ಈ ಲಿಂಗಕ್ಕೆ ಒಂದುಪುಷ್ಪವ ಸಮರ್ಪಿಸಲು ಕೋಟಿಪುಷ್ಪಗಳಂ ಪೂಜಿಸಿದಫಲವುಂಟು, ಇಲ್ಲಿಒಂದಾಹುತಿಯುಂಮಾಡಲು ಕೋಟಿಹೋಮದಫಲವು, ಈ ಸ್ವಾಮಿಗೆನೈವೇದ್ಯವಮಾಡಲು ಒಂದಾಗುಳಿಗೆ ಕೋಟಿನೈವೇದ್ಯಫಲವು, ಇಲ್ಲಿಒಂದುವ್ಯಾಳೆ ಮಹಾರುದ್ರವಂಜಪಿಸಲು ಕೋಟಿಭಾರಿ ಮಹಾರುದ್ರವಜಪಿಸಿದಫಲ, ವ್ರತಉದ್ಯಾಪನೆಯುಂಮಾಡಲು ಅಸಂಖ್ಯಾತಫಲವು, ಇಲ್ಲಿಎಂಟುನಮಸ್ಕಾರವಮಾಡಲು ಎಂಟುಕೋಟಿ ನಮಸ್ಕಾರದಫಲ, ಸಕಲೈಶ್ವರ್ಯಮಂಕೊಡುವದಕ್ಕು ಈ ಲಿಂಗವೆ ಕಾರಣವಾಗುವದು. ಎಲೆವೀರ! ಎನ್ನಅನುಗ್ರಹದಿಂ ತಾರಕೋಪದೇಶಕ್ಕು ಕಾರಣವಾಯಿತು, ಅದುಕಾರಣ ಸಕಲಪಾಪಗಳಮಾಡಿದವರು ಈ ವೀರೇಶ್ವರನ ಆರಾಧಿಸಲು ಸಕಲಪಾಪಹರವಾಗಿ ಸಕಲೈಶ್ವರ್ಯವಹುದು, ಇಂತೆಂದು ಪರಮೇಶ್ವರನೆರೂಪಿಸ ಬಿಂದುಮಾಧವ ಹೇಳಿದವಾಕ್ಯಮಂಕೇಳಿ ಸಂತೋಷದಿಂ ಅಮಿತ್ರಜಿತುರಾಜನ ಕುಮಾರನಾದ ವೀರನು ನಮಸ್ಕರಿಸಿ ಕೈಮುಗಿದು ಇಂತೆಂದುಬಿನ್ನವಿಸಿದನು, ಎಲೆಸ್ವಾಮಿ! ನೀವುಬುದ್ಧಿಗಲಿಸಿದ ತೀರ್ಥಂಗಳಂ ಕೇಳಿದೆನು, ಎನ್ನಮೇಲಣಕೃಪೆಯುಂಟಾದರೆ ಕಾಶಿಯಲ್ಲಿರ್ದ ಸಕಲ ತೀರ್ಥಂಗಳಲ್ಲವನ್ನು ಬುದ್ಧಿಗಲಿಸಬೇಕೆಂದು ಬಿನ್ನಹವಂಮಾಡಲು ಪರಮೇಶ್ವರನಿಂತೆಂದನು—ಎಲೈವೀರನೆ! ಆದಿಕೇಶವತೀರ್ಥಮೊದಲಾದ ತೀರ್ಥಂಗಳಕೇಳಿದೆಯಲ್ಲ ಕೇಳಿದಮಾತ್ರದಲ್ಲಿಯೆ ಸಕಲಪಾಪಹರವಾದವು ಇನ್ನು ಮನುತೀರ್ಥಮೊದಲಾದ ತೀರ್ಥಾಧ್ಯಾಯಮಂ ಹೇಳೇನುಕೇಳೂ, ಎಂದು ನಿರೂಪಿಸತೊಡಗಿದನು ಎಂಬಪಾಗಿ ಕುಮಾರಸ್ವಾಮಿ ಅಗಸ್ತ್ಯಂಗೆಹೇಳ್ದನು ಎಂದು ವ್ಯಾಸರು ತನಗೆ ಬುದ್ಧಿಗಲಿಸಿದರು ಎಂದುಸೂತಪುರಾಣೀಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿಋಷಿಗಳಿಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ * * * * * * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶರಾದ ಶ್ರೀಕೃಷ್ಣರಾಜಒಡೆಯರವರು

ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದ ಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಅಮಿತ್ರಜಿತುರಾಯ ಮಲಯಗಂಧಿನಿಯರಿಗೆ ಪುತ್ರನಾದವೀರನಿಗೆ ವೀರೇಶ್ವರ ಪ್ರಸನ್ನನಾಗಿ ವರವಂಕೊಟ್ಟ ವೃತ್ತಾಂತವೆಂಬ ಎಂಭತ್ಮೂರನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * * * * * * * *

ಎಂಭತ್ತನಾಲ್ಕನೇಅಧ್ಯಾಯ—ಪರಮೇಶ್ವರನು ವೀರನಿಗೆನಿ
ರೂಪಿಸಿದ ತೀರ್ಥಾಧ್ಯಾಯಮಹಿಮೆ ಲಿಂಗಗಳಮಹಿಮೆ

ಶ್ರೀವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ಕುಮಾರಸ್ವಾಮಿ ಇಂತೆಂದನು—ಕೇಳೈ ಅಗಸ್ತ್ಯನೆ ! ಅಮಿತ್ರಜಿತುವಿನ ಕುಮಾರನಾದ ವೀರನಿಗೆ ಪರಮೇಶ್ವರನು ತೀರ್ಥಾಧ್ಯಾಯಮಂ ನಿರೂಪಿಸಿದನು ಅವನ್ನು ನಿನಗೆ ಹೇಳೇನುಕೇಳು ಅದೆಂತೆಂದರೆ—ಗಂಗಾ, ವರುಣಾ, ಸಂಗಮ, ಮೊದಲಾಗಿರ್ದ ತೀರ್ಥದಲ್ಲಿ ಸ್ನಾನವಂಮಾಡಿ ಅಲ್ಲಿಹ ಸಂಗಮೇಶ್ವರನ ಪೂಜಿಸಲು ಪುನರ್ಜನ್ಮವಿಲ್ಲ, ಮಂದರಪರ್ವತದಿಂದಾವಿಷ್ಣುಬಂದು ಪಾದಪ್ರಕ್ಷಾಳನವಂ ಮಾಡಿಕೊಂಡವು ಪಾದೋದಕತೀರ್ಥವೆನಿಸುವವು, ಅಲ್ಲಿಸ್ನಾನದಾನಾದಿಗಳ ಮಾಡಲು ಶ್ವೇತದ್ವೀಪಕ್ಕೆ ಅಧಿಪತಿಯಹನು, ಆ ಸ್ಥಳ ಶ್ವೇತದ್ವೀಪವೆನಿಸಿಕೊಂಬುದು, ಆಸಮೀಪದಕ್ಷೀರಾಬ್ಧಿತೀರ್ಥದ ಸ್ನಾನದಿಂ ಕ್ಷೀರಸಮುದ್ರದಲ್ಲಿ ಸ್ನಾನವಂಮಾಡಿದ ಫಲವಹುದು, ಆತೆಂಕಲಲ್ಲಿಹ ಶಂಖತೀರ್ಥ ಸ್ನಾನದಿಂ ಮಹಾಪಾಪಕ್ಷಯ ಆಸಮೀಪದ ಮಹಾಲಕ್ಷ್ಮೀತೀರ್ಥದಲ್ಲಿ ಸ್ನಾನವಂಮಾಡಿ ಮಹಾಲಕ್ಷ್ಮಿಯಂ ಪೂಜಿಸಲು ಮೋಕ್ಷವಹುದು,ಆ ಸಮೀಪದ ಸಂಸಾರವಿಷವಂ ಪರಿಹರಿಪ ಗರುಡತೀರ್ಥದಲ್ಲಿ ಸ್ನಾನದಿಂ ವೈಕುಂಠವಾಸವಹುದು, ಆ ಸಮೀಪದ ಬ್ರಹ್ಮಜ್ಞಾನಕ್ಕೆ ಕಾರಣವಾದ ನಾರದತೀರ್ಥದಲ್ಲಿ ಸ್ನಾನನಾರದೇಶ್ವರನ ಪೂಜೆಯಿಂಮುಕ್ತಿಯಹುದು, ಆ ತೆಂಕಲಲ್ಲಿಹ ಪ್ರಹ್ಲಾದತೀರ್ಥಸ್ನಾನದಿಂ ವಿಷ್ಣುವಿಗೆ ಪ್ರಿಯನಹನು, ಆ ಸಮೀಪದ ಅಂಬರೀಷ ತೀರ್ಥದಲ್ಲಿ ಸ್ನಾನದಿಂ ಮಹಾಪಾಪಹರ ಪುನರ್ಜನ್ಮವಿಲ್ಲ, ಆ ಮುಂದಿಹ ಆದಿಕೇಶವತೀರ್ಥಸ್ನಾನದಿಂ ಸ್ವರ್ಗಾಧಿಪತ್ಯವಹುದು, ಆಮುಂದಿಹ ದತ್ತಾತ್ರೇ

ಯುತೀರ್ಥಸ್ನಾನದಿಂದ ಯೋಗಸಿದ್ಧಿಯಹುದು, ಅದುಮುಂದಿಹ ಭೃಗುತೀ
ರ್ಥಸ್ನಾನದಿಂದ ಭಾರ್ಗವಲೋಕವಹುದು, ಆಸಮೀಪದ ವಾಮನತೀರ್ಥ
ಸ್ನಾನದಿಂ ಪಿತೃಋಣವಿಮೋಚನ, ಆಸಮೀಪದ ನರನಾರಾಯಣ ತೀರ್ಥ
ದಲ್ಲಿಸ್ನಾನದಿಂ ಪುನರ್ಜನ್ಮವಿಲ್ಲ, ಅತೆಂಕಲಲ್ಲಿಹ ಯಜ್ಞವರಾಹತೀ
ರ್ಥಸ್ನಾನದಿಂ ರಾಜಸೂಯಯಾಗಫಲ, ಆಸಮೀಪದ ವಿದಾರಣನೃಸಿಂ
ಹತೀರ್ಥದಲ್ಲಿ ಸ್ನಾನವಂಮಾಡಿ ಆಸ್ವಾಮಿಯಂಸೇವಿಸಲೂ ನೂರುಜನ್ಮ
ದಪಾಪಹರ, ಆಸಮೀಪದ ಗೋಪೀಗೋವಿಂದ ತೀರ್ಥಸ್ನಾನದಿಂ ಪುನ
ರ್ಜನ್ಮವಿಲ್ಲ, ಆ ತೆಂಕಲಲ್ಲಿಹ ಲಕ್ಷ್ಮೀನೃಸಿಂಹ ತೀರ್ಥಸ್ನಾನದಿಂ
ಮೋಕ್ಷವಹುದು, ಅದಕ್ಕೆ ದಕ್ಷಿಣದಲ್ಲಿಹ ಶಂಖಮಾಧವತೀರ್ಥಸ್ನಾನದಿಂ
ಸಕಲಪಾಪಹರ, ಆಸಮೀಪದ ನೀಲಗ್ರೀವತೀರ್ಥಸ್ನಾನದಿಂ ಸಕಲೈಶ್ವ
ರ್ಯ, ಅ ಸಮೀಪದ ಸಾಂಖ್ಯತೀರ್ಥಸ್ನಾನದಿಂ ಸಾಂಖ್ಯಯೋಗಸಿದ್ಧಿಯ
ಹುದು, ಆ ಸಮೀಪದ ಸರ್ವೇಶ್ವರತೀರ್ಥದಲ್ಲಿ ಸ್ನಾನ, ದಾನ, ಶ್ರಾದ್ಧ
ಬ್ರಾಹ್ಮಣಭೋಜನ, ಜಪ, ಯಜ್ಞ, ಹೋಮ, ಅರ್ಚನೆಗಳಿಂ ಅಕ್ಷ
ಯಫಲ, ಆಸಮೀಪದ ಮಹಿಷಾಸುರತೀರ್ಥಸ್ನಾನದಿಂ ಜಯವಹುದು
ಪಾಪಹರ, ಆ ಸಮೀಪದಲ್ಲಿಹ ಬಾಣಾಸುರನು ಸಹಸ್ರತೋಳುಗಳಿಂ
ಪಡೆದ ಬಾಣಾಸುರತೀರ್ಥಸ್ನಾನದಿಂ ಸ್ಥಿರವಾದ ಶಿವಭಕ್ತಿಯಹುದು,ಆ
ಸಮೀಪದ ಗೋಪ್ರದೇಶ್ವರತೀರ್ಥಸ್ನಾನದಿಂ ಸಂತಾಪವಿಲ್ಲದವನಾದರು
ವೈತರಣಿಯದಾಂಟುವನು, ಆಸಮೀಪದ ಹಿರಣ್ಯಗರ್ಭತೀರ್ಥಸ್ನಾನದಿಂ
ಐಶ್ವರ್ಯವಂತನಹನು, ಆ ಸಮೀಪದಲ್ಲಿ ಎನಗೆ ನಿವಾಸವಾದ ಪಿಶಂಗಿಲಾ
ತೀರ್ಥಸ್ನಾನವಂಮಾಡಿ ಎನ್ನಪೂಜಿಸಲು ಕಾಂತಿಯುಳ್ಳವನಹನು, ಅಲ್ಲಿ
ಯ. ಪಿಲಪ್ಪಿಲಾತೀರ್ಥಸ್ನಾನ, ಶ್ರಾದ್ಧ, ಸುವರ್ಣದಾನ, ಭೂದಾನಗಳಿಂ
ಐಶ್ವರ್ಯವಹುದು, ಆ ಸಮೀಪದ ಯೋಗೇಶ್ವರತೀರ್ಥಸ್ನಾನದಿಂದ ಸಕ
ಲಪಾಪಹರ, ಆ ತೆಂಕಲಲ್ಲಿಹ ಮೃಕಂಡುತೀರ್ಥಸ್ನಾನದಿಂದ ಅಪಾಯ
ಮರಣವಿಲ್ಲ, ಆಸಮೀಪದಲ್ಲಿ ಸಕಲತೀರ್ಥಗಳಿಂ ಸೇವಿಸಲ್ಪಡುವ ಪಂಚ
ನದ ತೀರ್ಥಸ್ನಾನದಿಂ ಪುನರ್ಜನ್ಮವಿಲ್ಲ, ತೇಜಸ್ಸು, ಕಾಂತಿಗಳು, ದೊ
ರಕೊಂಬುದು, ಸರ್ವಕಾಲವು ದಶಮಿ, ಏಕಾದಶಿ, ದ್ವಾದಶಿಗಳಲ್ಲಿ, ಬ್ರ

ಹ್ಮಾಂಡದಲ್ಲಿರ್ದ ತೀರ್ಥಗಳೆಲ್ಲವು ತನ್ನಿಮಿತ್ತ ಕೋಟಿನಸ್ಕಾರದಿಂದ
ಈ ತೀರ್ಥವನ್ನೇವಿಸುತ್ತಿಹವು, ಈ ಕಾಶಿಯಲ್ಲಿ ಹೆಜ್ಜೆಹೆಜ್ಜೆಗು ಬಹ
ಳತೀರ್ಥಂಗಳುಂಟು, ಅವೆಲ್ಲವು ಪಂಚಗಂಗಾತೀರ್ಥಕ್ಕೆ ಸರಿಬಾರವು,
ಕಾರ್ತೀಕಮಾಸದಲ್ಲಿ ಒಂದುದಿನವಾದರು ಜಪ, ಹೋಮ, ದಾನಂಗಳಂ,
ಮಾಡಿದವರು ಕೃತಕೃತ್ಯರಹರು, ಸಕಲತೀರ್ಥಗಳನ್ನು ಒಂದುಭಾಗವಂ
ಮಾಡಿ ಈ ಪಂಚನದತೀರ್ಥವನ್ನೊಂದನ್ನೆ ಒಂದುಭಾಗವಂಮಾಡಿ ಪೂ
ರ್ವದಲ್ಲಿ ಬ್ರಹ್ಮತೂಗಲು, ಈ ಪಂಚನದತೀರ್ಥದ ಹದಿನಾರರಲ್ಲಿ ಒಂದು
ಅಂಶಕ್ಕೆ ಸರಿಬಾರದೆಹೋದವು, ಅಂಥಾ ಪಂಚನದತೀರ್ಥಸ್ನಾನ ಬಿಂದು
ಮಾಧವನಸೇವೆಯಿಂದ ಪುನರ್ಜನ್ಮವಿಲ್ಲ, ಆ ಸಮೀಪದ ಅಜ್ಞಾನಹರ
ತೀರ್ಥಸ್ನಾನದಿಂ ಸಕಲಶುಭಪ್ರಾಪ್ತಿ ಜ್ಞಾನಪ್ರದವು. ಆಮುಂದಿನ
ಮಯೂಖಾದಿತ್ಯತೀರ್ಥಸ್ನಾನ ಗಭಸ್ತೀಶ್ವರನದರ್ಶನದಿಂದ ನಿರ್ಮಲನ
ಹನು, ಅಲ್ಲಿಯುಮುಖತೀರ್ಥಸ್ನಾನ, ಮುಖೇಶ್ವರನದರ್ಶನದಿಂ ಸಕಲಯ
ಜ್ಞಫಲ, ಆ ಸಮೀಪದ ಬಿಂದುತೀರ್ಥ ಸ್ನಾನ, ದಾನ, ಜಪ, ಹೋ
ಮ, ತರ್ಪಣ, ಶ್ರಾದ್ಧಾದಿಗಳಿಂ ಬಹುಪುಣ್ಯವುಂಟು, ಆ ತೆಂಕಲಲ್ಲಿಹ
ಕಪಿಲತೀರ್ಥದಲ್ಲಿ ಶನಿವಾರದ್ದಿನ ಸ್ನಾನ ಕಪಿಲೇಶ್ವರನ ದರ್ಶನದಿಂ ಶನಿ
ಪೀಡೆ ದುಸ್ಸ್ವಪ್ನಪರಿಹರ, ಅಲ್ಲಿಯ ತಾಮ್ರವಾರಾಹ ತೀರ್ಥಸ್ನಾನದಿಂ
ಸಂಸಾರಸಾಗರದಲ್ಲಿ ಮುಳುಗನು, ಆಸಮೀಪದ ಕಾಲಗಂಗಾತೀರ್ಥ
ಸ್ನಾನದಿಂ ಸಮಸ್ತಪಾಪಹರ, ಗಜರಾಜನಾದ ಇಂದ್ರದ್ಯುಮ್ನಗೆಮೋ
ಕ್ಷವಾದ ಇಂದ್ರದ್ಯುಮ್ನತೀರ್ಥಸ್ನಾನ ಮರುತ್ತೇಶ್ವರನದರ್ಶನದಿಂ ಮ
ಹದೈಶ್ವರ್ಯಪ್ರಾಪ್ತಿ, ರಾಮೇಶ್ವರನಮುಂದಿರ್ದ ಕಾಲತೀರ್ಥಸ್ನಾನದಿಂ
ಮಹದೈಶ್ವರ್ಯ, ಕಲಿಕಾಲೇಶ್ವರನ ಸಮೀಪದ ಮಿತ್ರಾವರುಣತೀರ್ಥಸ್ನಾ
ನ ಮಿತ್ರಾವರುಣೇಶ್ವರನಪೂಜೆಯಿಂ ಕಲಿಭಯವಿಲ್ಲ, ಅಲ್ಲಿಚಂದ್ರತೀ
ರ್ಥಸ್ನಾನದಿಂ ಚಂದ್ರಲೋಕವಹುದು, ಆ ಸಮೀಪದ ವೀರತೀರ್ಥಸ್ನಾ
ನದಿಂ ವೀರೇಶ್ವರನಪೂಜೆಯಿಂ ಸಕಲತೀರ್ಥಸ್ನಾನಫಲ, ಆ ಸಮೀಪದ
ವಿಘ್ನೇಶ್ವರತೀರ್ಥಸ್ನಾನ ವಿಘ್ನೇಶ್ವರನದರ್ಶನದಿಂ ಸಮಸ್ತವಿಘ್ನನಿವಾ
ರಣ, ಅಲ್ಲಿರುವಹರಿಶ್ಚಂದ್ರತೀರ್ಥಸ್ನಾನ ಹರಿಶ್ಚಂದ್ರೇಶ್ವರನಪೂಜೆಯಿಂ

ಸತ್ಯವಂತನಹನು, ಆಸಮಿಾಪದ ಪರ್ವತತೀರ್ಥಸ್ನಾನ ಪರ್ವತೇಶ್ವರನದ
ರ್ಶನದಿಂ ಸಕಲಪುಣ್ಯ, ಪರ್ವತಂಗಳಲ್ಲಿ ಮಾಡಿದಸತ್ಕರ್ಮಫಲವಹುದು,
ಅಲ್ಲಿಹ ಕಂಬಳಾಶ್ವತರತೀರ್ಥಸ್ನಾನದಿಂ ಗೀತವಾದ್ಯದಲ್ಲಿ ಪರಿಣತನಹನು,
ಆ ಸಮಿಾಪದ ಸರಸ್ವತೀತೀರ್ಥಸ್ನಾನದಿಂ ಸಕಲವಿದ್ಯಾಪಾರಂಗತನಹನು,
ಅಲ್ಲಿಹ ಉಮಾಪತಿತೀರ್ಥಸ್ನಾನದಿಂ ಉಮಾಲೋಕಮಹುದು, ಅಲ್ಲಿಹ
ಮೂರುಲೋಕದಲ್ಲಿ ಪ್ರಸಿದ್ಧವಾಗಿ ಸಕಲಲೋಕಗಳನ್ನು ಧರಿಸುವದಕ್ಕೆ
ಸಾಮರ್ಥ್ಯವುಂಟಾದ ಪೂರ್ವದಲ್ಲಿ ಶ್ರೀಮಹಾವಿಷ್ಣುವಿನಕೈಯುಚಕ್ರ
ದಿಂ ನಿರ್ಮಿತವಾದ ಚಕ್ರತೀರ್ಥವೆಂಬ ಮಣಿಕರ್ಣಿಕಾತೀರ್ಥವುಂಟು,
ಮಣಿಕರ್ಣಿಕೆಎಂಬ ಶಬ್ದವಕೇಳಿದಮಾತ್ರಕ್ಕೆ ಸಮಸ್ತಪಾಪಹರ, ದೇವ
ತೆಗಳು ಮಣಿಕರ್ಣಿಕಾಎಂಬಮಂತ್ರವ ಸದಾಜಪಿಸುತ್ತಿಹರು, ಆವುದಾ
ನೊಂದುಮಣಿಕರ್ಣಿಕಾಎಂಬನಾಮವಂ ಸ್ಮರಿಸಿ ಜಿಹ್ವಾಗ್ರಹದಲ್ಲಿ ನು
ಡಿದವರು ಕೇಳಿದವರೂಕೂಡಾ ಕೃತಾರ್ಥರಹರು, ಅವರೇಪ್ರವೀಣರು,
ಮಹಾಯಜ್ಞಗಳಂಮಾಡಿದವರು ಅವರಿಗೆ ಪಂಚಾಕ್ಷರಿಯಜಪಿಸಿದಫಲ,
ಮಹಾದಾನದನಿತ್ತಫಲವಹುದು, ಆಮಣಿಕರ್ಣಿಕಾಜಲದಿಂದ ಪಿತೃಗಳಿ
ಗು ತರ್ಪಣವಂಕೊಡಲು ಜೇನುತುಪ್ಪದನ್ನದಿಂ ಶ್ರಾದ್ಧವಮಾ
ಡಿದಫಲ, ಈಮಣಿಕರ್ಣಿಕಾಮಹಿಮೆಯನ್ನು ನಾನುಮೊದಲಾಗಿ ಅರಿಯೆ
ನು, ಅನಂತರದಲ್ಲಿ ಪಾಶುಪತತೀರ್ಥ, ರುದ್ರಾವಾಸತೀರ್ಥ, ವಿಶ್ವತೀರ್ಥ
ಮುಕ್ತಿತೀರ್ಥ, ಭವಾನೀತೀರ್ಥ, ಈಶಾನತೀರ್ಥ, ಜ್ಞಾನತೀರ್ಥ, ನಂ
ದೀತೀರ್ಥ, ವಿಷ್ಣುತೀರ್ಥ, ಪಿತಾಮಹತೀರ್ಥ, ನಾಗತೀರ್ಥ, ಬ್ರಹ್ಮ
ನಾಳತೀರ್ಥ, ಭಗೀರಥತೀರ್ಥ, ಇಷ್ಟುತೀರ್ಥಂಗಳು ಪರಮಪವಿತ್ರವಾ
ದಂಥಾವು ಅವರೊಳು ಅಸೀತೀರ್ಥ, ದಶಾಶ್ವಮೇಧತೀರ್ಥ, ಪಾದೋದ
ಕತೀರ್ಥ, ಪಂಚನದತೀರ್ಥ, ಮಣಿಕರ್ಣಿಕಾತೀರ್ಥ, ಇವು ಐದುತೀರ್ಥ
ವು ಉತ್ತಮೋತ್ತಮ, ಈ ಐದುತೀರ್ಥಂಗಳಲ್ಲಿ ಪಾರ್ವತೀಸಮೇತನಾ
ದನಾನು ಬ್ರಹ್ಮ, ವಿಷ್ಣು, ಇಂದ್ರಾದಿದೇವತೆಗಳು, ದೇವಋಷಿ, ಬ್ರ
ಹ್ಮಋಷಿಗಳುಸಹಾ ಸ್ನಾನವಮಾಡುವೆವು, ಈ ಮೂರುಲೋಕದಲ್ಲಿ
ಮಣಿಕರ್ಣಿಕಾತೀರ್ಥಕ್ಕೆ ಸಮಾನವಾದ ತೀರ್ಥವಿಲ್ಲ, ಪಂಚಗಂಗಾತೀ

ರ್ಥಸ್ನಾನವಂ ಮಾಡಿದವನು ಪಂಚಭೂತಮಯವಾದ ಶರೀರವಂಧರಿಸನು, ಇಂತೆಂದು ಪರಮೇಶ್ವರನು ಅಮಿತ್ರಜಿತುರಾಜನ ಕುಮಾರನಾದ ವೀರನಿಗೆ ತೀರ್ಥಗಳಮಹಿಮೆಯುಂ ಲಿಂಗಗಳಮಹಿಮೆಯುಂ ನಿರೂಪಿಸಿ ಅಂತರ್ಧಾನವಾಗಲು, ಅನಂತರದಲ್ಲಿ ಆವೀರನುಸಂತೋಷದಿಂ ವೀರೇಶ್ವರನ ಆರಾಧನೆಯಂಮಾಡಿ ಸಕಲಮನೋರಥಗಳಂಪಡೆದನು, ಕೇಳ್ಳೆಲಗಸ್ತ್ಯ! ಈ ತೀರ್ಥಾಧ್ಯಾಯಮಂ ಕೇಳಲು ಮೂರುಜನ್ಮದಪಾಪಹರ, ಪ್ರಸಂಗದಿಂ ವೀರೇಶ್ವರನಮಹಿಮೆಯುಂ ಪೇಳ್ದೆನಲ್ಲಾ ಇನ್ನು ಪರಮೇಶ್ವರನಮಹಿಮೆಯುಂ ಪೇಳೇನುಕೇಳು ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ! ನಿರೂಪಿಸಿದನೆಂದು ವ್ಯಾಸರು ತನಗೆ ಬುದ್ಧಿಗಲಿಸಿದರೆಂದು ಸೂತಪುರಾಣೀಕನು ಶೌನಕಾದಿಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ. * * * * * * * * * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಪರಮೇಶ್ವರನುವೀರನಿಗೆ ಪೇಳ್ದ ತೀರ್ಥಾಧ್ಯಾಯ ವೃತ್ತಾಂತವೆಂಬ ಎಂಭತ್ತನಾಲ್ಕನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * * * *

ಎಂಭತ್ತೈದನೇ ಅಧ್ಯಾಯ. ಕಾಮೇಶ್ವರನ ಮಹಿಮೆ.

ಶ್ರೀ ವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ಅಗಸ್ತ್ಯನಿಂತೆಂದನು.

ಎಲೈ ಕುಮಾರಸ್ವಾಮಿ? ವೀರೇಶ್ವರನ ಮಹಿಮೆಯಂಕೇಳಿ ಮಹಾ ಆಶ್ಚರ್ಯವಾಯಿತು, ಇನ್ನು ಕಾಮೇಶ್ವರನ ಮಹಿಮೆಯಂ ಹೇಳೇವೂ ಎಂದಿರಲ್ಲಾ ಈಗ ಕಾಮೇಶ್ವರನ ಮಹಿಮೆಯುಂ ಎನಗೆ ನಿರೂಪಿಸಬೇಕೆನಲು, ಅಗಸ್ತ್ಯಂಗೆ ಕುಮಾರಸ್ವಾಮಿ! ಇಂತೆಂದನು— ಕೇಳ್ಳೈಅಗಸ್ತ್ಯ! ತ್ರಿಪುರಸಂಹಾರನಾದ ಪರಮೇಶ್ವರನು ಜಗನ್ಮಾತೆಯಾದ ಪಾರ್ವತೀದೇವಿಯರಿಗೆ ಕಾಮೇಶ್ವರನಮಹಿಮೆಯಂ ಪೇಳಿದನು, ಆಕಥೆಯನಿನಗೆ ಹೇಳೇನುಕೇಳು, ಪೂರ್ವದಲ್ಲಿ ಅತಿಕೋಪಿಯಾದ ದುರ್ವಾ

ಸಹುನಿಯು ನಾನಾರತ್ನಮಯಮಾದ ಉಪ್ಪರಿಗೆಯಸಾಲುಗಳನ್ನು ಅನೇಕತೀರ್ಥಗಳನ್ನು ಅನೇಕದೇವಾಲಯಗಳನ್ನು ಬಹುಕೆರೆಗಳಂನೋಡಿ ಸಂತೋಷಪಟ್ಟು ಬರುತ್ತಾ ಮುಂದೆ ಕಾಶೀಪಟ್ಟಣವಂ ಕಂಡನು, ಕಾಷೀಂಸವಾತ್ರವಂಧರಿಶಿ ಈಶ್ವರಧ್ಯಾನವಂಮಾಡುವ ಅಕ್ಷಮಾಲೆಯಂಧರಿಸಿ ಹೂಂಕಾರದಿಂ ಮೋಘಧ್ವನಿಯಂ ಜೈಸಿದಂಥ ದಂಡಕಮಂಡುಲವಂ ಧರಿಶಿದಂಥ ಯತಿಗಳಂ ಕಂಡನು, ಮತ್ತೊಂದುಕಡೆಯಲ್ಲಿ ನಿಸ್ಸಂಗವಾಗಿ ನಿಸ್ಪೃಹರಾದ ತ್ರಿದಂಡಿಗಳಾದ ಯತಿಗಳಂ ಕಂಡನು, ಒಂದುಕಡೆಯಲ್ಲಿ ವೇದಶಾಸ್ತ್ರಪುರಾಣ ಉಪನಿಷತ್ತುಗಳ ಓದುವ ಬ್ರಹ್ಮಚಾರಿಗಳಂ ನಿತ್ಯವು ತ್ರಿಕಾಲಗಂಗಾಸ್ನಾನದಿಂ ಕೆಂಪಾದಜಡೆಗಳುಳ್ಳ ವ್ರತಿಗಳನ್ನು ದುರ್ವಾಸಮುನೀಶ್ವರನುಕಂಡು ಅತ್ಯಂತಹರ್ಷವತಾಳ್ದು ತನ್ನೊಳಗಿಂತೆಂದನು—ಈಕಾಶೀಕ್ಷೇತ್ರದಲ್ಲಿದ್ದ ಪಶುಗಳಿಗುಳ್ಳಂಥಾ ತೃಪ್ತಿಯು ಭೂಧರಿಗುಳ್ಳಂಥಾತೇಜಸ್ಸು ತಿರ್ಯಗ್ಜಾತಿಗಳಿಗುಳ್ಳ ದೃಷ್ಟಿಯು ಮತ್ತೊಂದು ಸ್ಥಳದೇಸಿಳಗಿದ್ದವರಿಗಿಲ್ಲ, ಆನಂದವನದಲ್ಲಿ ಸಂಚಾರವಂಮಾಡುವ ಪಶುಪಕ್ಷಿಗಳೇ ಶ್ರೇಷ್ಠವಾದವು, ಇಲ್ಲಿದ್ದ ಮ್ಲೇಚ್ಛಾದಿಗಳಿಗೆಮೊದಲಾಗಿಯೂ ಗತಿಯುಂಟು, ಈ ಕ್ಷೇತ್ರಹೊರತಾಗಿ ಮತ್ತೊಂದುಕಡೆಯಲ್ಲಿರ್ದ ದೀಕ್ಷಿತನಾದರು ಮೋಕ್ಷಾಧಿಕಾರಿಯಲ್ಲ, ವಿಶ್ವೇಶ್ವರನಕ್ಷೇತ್ರವು ಎನ್ನಮನಸ್ಸಿಗೆ ಸಂತೋಷಪಡಿಶಿದಂತೆ ಸ್ವರ್ಗಮರ್ತ್ಯಲೋಕ ನಾಗಲೋಕದಲ್ಲಿಯೂ ಸಂತೋಷವಿಲ್ಲ, ಸಕಲಲೋಕಂಗಳನ್ನು ತಿರುಗಿದಂಥ ಎನ್ನಮನಸ್ಸು ಎಲ್ಲಿಯೂ ನಿಲುಕಡೆಯಾದುದಿಲ್ಲ, ಬ್ರಹ್ಮಾಂಡದೊಳಗೆ ಈ ಕಾಶಿಯೇ ಬ್ರಹ್ಮಪುರಿ, ವಿಷ್ಣುಪುರಿ, ಶಿವಪುರಿ, ಎಂದು ಸ್ತುತಿಮಾಡಿಚಿತ್ತಸ್ಥೈರ್ಯಮಂ ಪಡೆದು ಬಹುಕಾಲ ಉಗ್ರತಪಸ್ಸಂಮಾಡಿ ಫಲವನ್ನೈದಿದವನಲ್ಲದೆ ಕೋಪಾರೂಢನಾಗಿ ಇಂತೆಂದನು—ತಪಸ್ವಿಯಾದತನ್ನನ್ನು ಈಗ ನಾನುಮಾಡಿದತಪಸ್ಸನ್ನು ಇಲ್ಲಿಇದ್ದ ಸಕಲವಾದವರನ್ನು ಮೋಸಗೊಳಿಸುವ ಈ ಕ್ಷೇತ್ರವನ್ನುಸುಡಬೇಕು, ಈಕ್ಷೇತ್ರದಲ್ಲಿ ಆರಿಗೂ ಮುಕ್ತಿಇಲ್ಲದಹಾಗೆ ಶಪಿಸುವೆನು ಎಂದು ಶಾಪವಕೊಡುವುದಕ್ಕೆ ಉದ್ಯೋಗಿಸುವ ದೂರ್ವಾಸನಕೋಪಮಂನೋಡಿ ಪರಮೇಶ್ವರನು ಮುಗುಳುನಗೆ

ಯಂನಕ್ಕು ಲಿಂಗರೂಪಾಗಿ ಪ್ರಮಥಕೇಶ್ವರನೆಂಬ ಹೆಸರಿನಿಂ ಪ್ರಸನ್ನನಾಗಿ ತೋರಪಟ್ಟನು,ಆ ಲಿಂಗದರ್ಶನವಮಾಡಿದವರ್ಗೆ ಹೆಜ್ಜೆಹೆಜ್ಜೆಗೆ ಆನಂದವಹುದು, ಮತ್ತಾ ಲಿಂಗರೂಪವಾದ ಪರಮೇಶ್ವರನು ಅತಿಕೋಪಿಯಾಗಿರ್ದ ದುರ್ವಾಸನನೆನೋಡಿ ತನ್ನಮನಸ್ಸಿನಲ್ಲಿ ಇಂತೆಂದನು-ಇಂಥಾ ತಪಸ್ವಿಗಳಿಗೆ ನಮಸ್ಕಾರ ಇಲ್ಲಿ ತಪಸ್ಸಮಾಡಿಕೊಂಡು ವಿಹಿತವಾದ ಆಶ್ರಮದಲ್ಲಿರ್ದು ದೋಷಿಗಳಾಗಿ ಇಹರು, ಇಂಥಾಕೋಪದಿಂದ ತಪಸ್ಸುಕೆಡುವದು, ಹಾಗಾದರು ಮೋಕ್ಷಕಾಂಕ್ಷಿಗಳಾದವರು ಮಾನ್ಯರು, ಅವರುಕೋಪಿಗಳಾಗಲಿ ಶಾಂತರಾಗಲಿ ಆ ಚಿಂತೆನಮಗ್ಯಾಕೆ ಎಂದು ಪರಮೇಶ್ವರನು ಮನಸ್ಸಿನಲ್ಲಿ ಚಿಂತಿಸುವಸಿತರೊಳು ದೂರ್ವಾಸನಕೋಪಾಗ್ನಿಯು ಆಕಾಶಮಂಡಲವಂತುಂಬಿ ಅವರಧೂಮದಿಂ ಆಕಾಶಕಪ್ಪುದೋರಿ ಮಹದದ್ಭುತವಾಗಲು, ರುದ್ರಗಣಂಗಳುಕಂಡು ಪ್ರಳಯಕಾಲದ ಸಮುದ್ರದಂತೆ ಮೊರೆಯುತ್ತಾ ಆಕಾಶಮಂಡಲವಂ ತುಂಬಿ ಇದೇನು ಆಶ್ಚರ್ಯವೆಂದು ತಮ್ಮೊಳುತಾವು ಮಾತನಾಡುತ್ತಾ ಸಿಹ್ಮಧ್ವನಿಯಂಮಾಡುತ್ತಾ ಆದ್ದಲಿಸುತ್ತಾ ಎತ್ತಿದಆಯುಧಗಳುಳ್ಳವರಾಗಿ ಪ್ರಮಥರು ಕಾಶೀಪಟ್ಟಣವಂಬಳಶಿತುಂಬಿ ಅತಿಕೋಪಾರೂಢರಾಗಿ ಇಂತೆಂದರು—ಯಮನಾದರು ಕಾಲನಾದರು ಮೃತ್ಯುವಾದರು ಬ್ರಹ್ಮನಾದರು ಇಂದ್ರನಾದರು ನಾವುಕೋಪಿಸಲು ನಮ್ಮೊಳು ನಿಲುವನಾರು? ನಾವು ಅಗ್ನಿಯನ್ನು ಉದಕದಂತೆ ಪಾನವಂಮಾಡುವೆವು, ಸಪ್ತಸಮುದ್ರಗಳನ್ನು ಇಂಗಿಶಿಬಿಡುವೆವು, ಪಾತಾಳಲೋಕವತಂದು ಊರ್ಧ್ವಲೋಕದಲ್ಲಿ ಇರಿಶಿ ಊರ್ಧ್ವಲೋಕವ ಪಾತಾಳಲೋಕದಲ್ಲಿ ಇರಿಸುವೆವು, ಆಕಾಶವನೊಂದು ತುತ್ತುಮಾಡುವೆವು, ಬ್ರಹ್ಮಾಂಡಘಟವನೊಡದುಹಾಕುವೆವು, ಕಾಲನನ್ನು ಮೃತ್ಯುವನ್ನು ಇಬ್ಬರನ್ನು ಎರಡುಕೈಯ್ಯಲ್ಲಿ ಹಿಡಿದು ತಾಳವಬಡಿವಂತೆ ತಲೆಗಳನ್ನು ಅಪ್ಪಳಿಸುವೆವು, ಸಕಲಮುಕ್ತಿಯನೀವ ಕಾಶೀಪಟ್ಟಣಹೊರತಾಗಿ ಈ ಭುವನವನ್ನು ನುಂಗುವೆವು, ಈ ಭುವನವೆತ್ತಣದು ಈ ಜ್ವಾಲೆಗಳೆಲ್ಲಿಂದಬಂದವು, ಮೃತ್ಯುಂಜಯನಾದ ರುದ್ರನಮಹಿಮೆಯನರಿಯದೆ ಮದಮೋಹಿತರಾದವರಾದರು,

ಎಂದು ಪ್ರಮಥರು ಮಹಾಭಯುಕ್ಕ್ಕ ಭಯವನೀವರಾಗಿ ಭೂಮಿ ಆಕಾಶವಂ ತುಂಬಿದರು, ಅವರಾರಾರೆನೆ—ನಂದಿ, ನಂದಿಸೇನ, ಸೋಮನಂದಿ, ಮಹೋದರ, ಮಹಾಹನು, ಮಹಾಗ್ರೀವ, ಮಹಾಕಾಲ, ಚಿಂತಾತ್ಮಕ, ಮೃತ್ಯುಕಂಪನ, ಭೀಮ, ಘಂಟಾಕರ್ಣ, ಮಹಾಬಲ, ಕ್ಷೋಭಣ, ದ್ರಾವಣ, ಜೃಂಭಿ, ಪಂಚಾಸ್ಯ, ಪಂಚಲೋಚನ, ವಿಶಿರ, ಅಶಿರ, ಸೋಮಪಂಚಹಸ್ತ, ದಶಾನನ, ಚಂಡಿ, ಭೃಂಗಿ, ನಟಿ, ಚಂಡ, ಪ್ರಚಂಡ, ತಾಂಡವಪ್ರಿಯ, ಪಿಚಂಡಿಲ, ಸ್ಥೂಲಶಿರ, ಗಭಸ್ತಿಮಾಕ್ಷೇಮಕ, ಕ್ಷೇಮಧನ್ವಾ, ವೀರಭದ್ರ, ರಣಪ್ರಿಯ, ದಂಡಪಾಣಿ, ಶೂಲಪಾಣಿ, ಪಾಶಪಾಣಿ, ಕೃಶೋದರ, ದೀರ್ಘಗ್ರೀವ, ಪಿಂಗಾಕ್ಷ, ಪೈಂಗ್ವ, ದುರ್ಜಯ, ಪಿಚಂಡಿಲ, ಬಹುನೇತ್ರ, ಲಂಬಕರ್ಣ, ಖರ್ವತ, ವಿಗ್ರಹ, ಗೋಕರ್ಣ, ಕೋಕಿಲಾಕ್ಷ, ಗಜಾನನ, ಸಹಾ, ನೈಗಮೇಯ, ವಿಕಟಾಕ್ಷ, ಅಟ್ಟಹಾಸ, ಸೀರಪಾಣಿ, ಶಿವಾರಾಮ, ವೈಕುಂಠವೇಣುವದನಾ, ಪುರಾದರ್ಪಮುಸ್ಸಹ, ರಿಪುಗರ್ಜನ ಇವರುಮೊದಲಾದ ನೂರುಕೋಟಿ ಪ್ರಮಥರು, ಕಾಶೀಪಟ್ಟಣದಸುತ್ತಲುಮುತ್ತಿ ವಾಯುವಿನಗತಿಯುಸಿಲಿಶಿದರು, ಈ ಪ್ರಮಥರ ಕೋಪಕೋಲಾಹಲವು ಮೂರುಲೋಕವ ಉಲ್ಲೋಲಕಲ್ಲೋಲವಂ ಮಾಡಲು ದುರ್ವಾಸನ ಕೋಪಾಗ್ನಿಜ್ವಾಲೆ ಗಗನವಂ ವ್ಯಾಪಿಸಲು ಚಂದ್ರಸೂರ್ಯರು ತಮ್ಮಕಾಂತಿಕುಂದಿಇದ್ದರು, ಈ ಮರ್ಯಾದೆಯುಲ್ಲಿ ಸಮುದ್ರದಮೇರೆದಪ್ಪಿದಂತಿರ್ದ ಗಣಂಗಳಸಮೂಹವಂ ಕಂಡು ಪರಮೇಶ್ವರನಿಂತೆಂದನು—ಎಲೆಗಣಂಗಳಿರಾ! ಅನಸೂಯಾದೇವಿಯ ಪುತ್ರನಾದ ದುರ್ವಾಸನು ನನ್ನಅಂಶದವನು, ಈತನು ಮತ್ತೊಬ್ಬನಲ್ಲ, ಎಂದು ಆದುರ್ವಾಸನು ಪೂಜಿಶಿದಲಿಂಗದಲ್ಲಿಯೇ ಅತ್ಯಂತಪ್ರಕಾಶವುಳ್ಳವನಾಗಿ ಪರಮೇಶ್ವರನು ಪ್ರಸನ್ನನಾಗಿ ಕಾಶೀಪಟ್ಟಣಕ್ಕೆ ಮುನಿಯುಶಾಪಬಾರವಂತೆ ರಕ್ಷಿಸುತ್ತಿರಲು, ಈ ಪಟ್ಟಣಕ್ಕೆ ಮೋಕ್ಷಪ್ರತಿಬಂಧಕವಾದ ಮುನಿಯ ಶಾಪವಾಗಬೇಡವೆಂದು ಹಿತದಿಂ ಪ್ರತ್ಯಕ್ಷವಾಗಿ ಎಲೆ ದುರ್ವಾಸನೆ ! ಅತ್ಯಂತಕೋಪಿಯಾದ ತಪಸ್ವಿಯಾದ ನಿನಗೆನಾನು ಪ್ರಸನ್ನನಾದೆನು,ನಿನಗೆ ಶಂಕೆಬೇಡ ಬೇಕಾದವರ

ವನ್ನು ಬೇಡಿಕೊ. ಎನಲು, ಪ್ರಸನ್ನನಾದ ಪರಮೇಶ್ವರನಂ ಕಂಡು ಕಾಶಿ
ಯ ಪಟ್ಟಣಕ್ಕೆ ಶಾಪವನೀಯಲುದ್ಯುಕ್ತನಾದ ದುರ್ವಾಸನು ಲಜ್ಜಿತನಾ
ಗಿ ಪರಮೇಶ್ವರನಿಗಿಂತೆಂದನು—ಎಲೈ ಪರಮೇಶ್ವರನೆ ! ಕ್ರೋಧದಿಂದ ದುರ್ಬು
ದ್ಧಿಯಾದ ತನ್ನಿಂದ ಅನೇಕ ಅಪರಾಧವು ಮಾಡಲ್ಪಟ್ಟಿತು, ಇಂಥಾ ಕ್ರೋ
ಧಿಯಾದ ತನ್ನನ್ನು ಸುಡಬೇಕು, ಮೂರು ಲೋಕಕ್ಕೂ ಅಭಯವನೀವ
ಕಾಶೀಪಟ್ಟಣವ ಶಪಿಸಲುದ್ಯೋಗವಂ ಮಾಡಿದ ತನ್ನ ದಹಿಸಬೇಕು, ದುಃಖ
ವೆಂಬ ಸಮುದ್ರದಲ್ಲಿ ಮುಳುಗಿ ಹುಟ್ಟು ಮುಳುಗುವ ಬಾಧೆಗಳುಳ್ಳ ಕ
ರ್ಮಪಾಶಂಗಳಂ ಕಟ್ಟುವಡೆದ ಕಟ್ಟುಗಳುಳ್ಳ ಜನರಿಗೆ ಸುಖಸಾಧನ
ವಾದಂಥಾ ಸಕಲರಿಗು ತಾಯಾದಂಥ ಮೋಕ್ಷಫಲವನೀವ ತಾಯಿ ಗರ್ಭ
ದಲ್ಲಿ ಧರಿಸುವಳು, ಈ ಕಾಶಿಯು ! ಗರ್ಭದಲ್ಲಿ ಇದ್ದುದ ಹೊರಕ್ಕೆ ಹಾ
ಕುವಳು, ಅದು ಕಾರಣ ತಾಯಿಗಿಂತ ವಿಶೇಷವಾದ ಈ ಕಾಶಿಯನ್ನು ಶ
ಪಿಸುವರಾರು? ಅವರ ಶಾಪ ಅವರಿಗೆ ಆಗಲೀ ಇಂದು ಮೊದಲಾಗಿ ಈ ಕಾ
ಶೀಕ್ಷೇತ್ರಕ್ಕೆ ಆರ ಶಾಪವೂ ಆಗದೇ ಹೋಗಲಿ ಹೀಗೆಂದು ನುಡಿವುತಿರ್ದ ದು
ರ್ವಾಸನ ವಾಕ್ಯಮಂ ಕೇಳಿ ಪರಮೇಶ್ವರನು ಅತ್ಯಂತ ಹರ್ಷಿತನಾದನು,
ಆವನಾನೊಬ್ಬನು ಕಾಶಿಯಂ ಸ್ತುತಿಮಾಡುವನೋ, ಧ್ಯಾನವ ಮಾಡುವ
ನೋ, ಆತನು ನೂರು ಯಜ್ಞವ ಮಾಡಿದವನಹನು, ಮತ್ತು ಆರಿಗೆ ಕಾಶಿಯೆಂ
ಬ ಎರಡು ಅಕ್ಷರ ಆರ ಜಿಹ್ವಾಗ್ರದಲ್ಲಿಹುದೋ ಅವರಿಗೆ ಪುನರ್ಜನ್ಮ
ವಿಲ್ಲ, ಕಾಶೀ ಕಾಶೀ ಎಂದು ಎರಡಕ್ಷರ ಮಂತ್ರವಂ ಜಪಿಸಲು ಲೋಕತ್ರ
ಯವಗೆದ್ದು ಲೋಕಾತೀತವಾದ ಪರಬ್ರಹ್ಮಪದವ ಪಡೆವರು, ಇಂತೆಂದು
ಪರಮೇಶ್ವರನು ಎಲೆ ದುರ್ವಾಸಮುನಿಯೆ ! ಕಾಶಿಯ ಸ್ತುತಿಯ ಮಾಡಿದ
ಪುಣ್ಯದಿಂದ ನಿನಗೆ ಜ್ಞಾನವಾಗಲಿ, ಈಗ ನಿನಗೆ ಆದಂಥಾ ಜ್ಞಾನಸ್ವ
ರೂಪವು ನಿನ್ನ ತಪಸ್ಸಿನಿಂದ ಆದುದಲ್ಲ, ಎಲೇ ಮುನಿಯೆ ! ಆವನಾದರು
ಕಾಶಿಯ ಸ್ತುತಿಮಾಡಲು ಎನಗೆ ಸಹಸ್ರ ರುದ್ರಸೂಕ್ತಗಳಿಂದ ಸ್ತುತಿ
ಯ ಮಾಡಿದಂತೆ ಸಂತೋಷವಹುದು, ಅದರಿಂ ನಿನ್ನ ಮನೋರಥಗಳು
ಸಿದ್ಧಿಯಾಗಲಿ, ಅಜ್ಞಾನವಂ ಪರಿಹರಿಪ ಶುದ್ಧಜ್ಞಾನಸ್ವರೂಪವಾಗಲೀ,
ನಿನಗೆ ಏನು ವರವು ಬೇಕೋ ಆ ವರವ ಕೇಳಿಕೊ, ಆ ಮುನಿಗಳು ಹೀಗೆ

ಕೊಂಡಾಡಿಸಿಕೊಂಬರೊ ಅವರಸಾಮರ್ಥ್ಯವು ಅಂಥಾದ್ದು, ಲೋಕದಲ್ಲಿ ಕೋಪವುಳ್ಳವನಾಗಿಯೂ ಸಮರ್ಥನಾಗಿಯೂ ಕ್ಷೀಣವೃತ್ತಿಯಾದವನು ಏನುಮಾಡುವನೊ ಅವನಲ್ಲಿದೋಷವಿಲ್ಲ, ಹೀಗೆಂದ ಪರಮೇಶ್ವರನವಾಕ್ಯವಂಕೇಳಿ ದುರ್ವಾಸನು ಪರಮೇಶ್ವರನನ್ನು ರುದ್ರಸೂಕ್ತಂಗಳಿಂ ಸ್ತುತಿಸಿ ಪರಮಸಂತೋಷದಿಂ ವರವಬೇಡಿಕೊಂಡನು, ಅದೆಂತೆನೆ—ಎಲೈದೇವ, ಜಗನ್ನಾಥ, ಕರುಣಾಕರ, ಶಂಕರ ! ನಾನುಮಾಡಿದ ಮಹಾಅಪರಾಧವಂ ಪರಿಹರಿಸಮಾಡು, ಎಲೆಸ್ವಾಮಿ ! ಅಂಧಕಾರಿ, ಸ್ಮರಾಂತಕ, ಮೃತ್ಯುಂಜಯ, ಉಗ್ರ, ಭೂತೇಶ, ಮೃಡಾನೀಶ, ತ್ರಿಲೋಚನನೆ, ಎಲೈಸ್ವಾಮಿ ! ನೀವು ನನಗೆ ಪ್ರಸನ್ನನಾದುದುಂಟಾದರೆ ಈಗ ನಾನು ಪೂಜಿಸಿದಲಿಂಗವು ಸಕಲವಾದ ಕಾಮ್ಯಂಗಳಂ ಕೊಡುವದಾಗಲೀ, ಈಸ್ವಾಮಿಯಹೆಸರು ಕಾಮೇಶ್ವರನೆಂದು ಪ್ರಸಿದ್ಧಿಯಾಗಲಿ, ಈ ತೀರ್ಥವು ಕಾಮ್ಯತೀರ್ಥವೆಂಬ ಹೆಸರಾಗಲೆಂದು ದುರ್ವಾಸಮುನಿಬೇಡಿದವರಗಳಂಕೇಳಿ ಪರಮೇಶ್ವರನಿಂತೆಂದನು—ಎಲೈಮುನಿಯೆ ! ನೀನು ಪ್ರತಿಷ್ಠೆಯಂಮಾಡಿದ ಲಿಂಗವು ದುರ್ವಾಸೇಶ್ವರನೆಂದು ಹೆಸರಾಗಲಿ, ಸಕಲಕಾಮ್ಯವ ಕೊಡುವದಾಗಿ ಕಾಮೇಶ್ವರನೆಂಬ ಹೆಸರಿನಿಂ ಪ್ರಸಿದ್ಧಿಯಾಗಲಿ, ತ್ರಯೋದಶಿಯು ಶನಿವಾರ ಕಾಮ್ಯತೀರ್ಥಸ್ನಾನವಂಮಾಡಿ ಕಾಮೇಶ್ವರನಪೂಜಿಸಲು ಕಾಮ ಕೃತಮಪ್ಪದೋಷಂಗಳು ಪರಿಹರವಾಗಲಿ, ಯಮಯಾತನೆಯಲ್ಲಿ ಬಹುಜನ್ಮಗಳಲ್ಲಿ ಮಾಡಿದಪಾಪಗಳೆಲ್ಲವು ಕಾಮ್ಯತೀರ್ಥಸ್ನಾನದಿಂದ ಪರಿಹರವಾಗುವವು, ಈ ಕಾಮೇಶ್ವರನ ಪೂಜೆಯಿಂದ ಸಕಲಕಾಮ್ಯಗಳು ಸಮೃದ್ಧಿಯಾಗಲೆಂದು ವರವನಿತ್ತು ಪರಮೇಶ್ವರನು ಆ ಕಾಮೇಶ್ವರನೆಂಬ ಲಿಂಗದಲ್ಲಿ ಐಕ್ಯವಾದನು, ಆ ಕಾಮೇಶ್ವರನನರ್ಚಿಸಿ ದುರ್ವಾಸನು ಅನೇಕಕಾಮ್ಯಗಳಂ ಪಡೆದನು, ಅದರಿಂ ಬಯಕೆಯುಳ್ಳವರು ಕಾಶಿಯಲ್ಲಿಹ ಕಾಮ್ಯಲಿಂಗವನ್ನುಪೂಜಿಸಬೇಕು, ಮಹಾಪಾತಕ ಪರಿಹರವಾಗಬೇಕಾದರೆ ಕಾಮ್ಯತೀರ್ಥದಲ್ಲಿಯೇ ಸ್ನಾನವಂಮಾಡಬೇಕು, ಈ ಕಾಮ್ಯೇಶ್ವರನಮಹಿಮೆಯನ್ನು ಆರುಕೇಳುವರೊ ಹೇಳುವರೊ ಅವರಿಗೆ ಸಕಲಪಾಪಹರವಾಗಿ ಸಕಲಮನೋ

ರಥ ಕೈಗೂಡುವದೆಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಶಿದ ಅರ್ಥವಂ ವ್ಯಾಸರುತನಗೆ ಬುದ್ಧಿಗಲಿಶಿದರೆಂದು ಸೂತಪುರಾಣೀಕನು ಶೌನಕಾದಿಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಶಿದ ಸ್ಕಂಧಪುರಾಣೋಕ್ತ ಕಾಶೀಮಹಿಮಾರ್ಥವರ್ಣದಲ್ಲಿ ಕಾಮೇಶ್ವರನ ಪ್ರಸಂಗವೆಂಬಎಂಭತ್ತೈದನೇ ಅಧ್ಯಾಯಾರ್ಥನಿರೂಪಣಕ್ಕಂ ಮಂಗಳಮಹಾ॥

ಎಂಭತ್ತಾರನೇಅಧ್ಯಾಯ—ವಿಶ್ವಕರ್ಮೇಶ್ವರನಮಹಿಮೆ,
ವಿಶ್ವಕರ್ಮನ ಉತ್ಪತ್ತಿ.

ಶ್ರೀವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ಪಾರ್ವತೀದೇವಿಯರು ಪರಮೇಶ್ವರಂಗಿಂತೆಂದು ಬಿನ್ನವಿಶಿದರು, ಎಲೈದೇವದೇವ! ಈ ಕಾಶೀಕ್ಷೇತ್ರದಲ್ಲಿ ವಿಶ್ವಕರ್ಮೇಶ್ವರನು ಪ್ರಸಿದ್ಧನಾಗಿ ಇದ್ದಾನಲ್ಲ, ಆ ವೃತ್ತಾಂತಮಂ ಬುದ್ಧಿಗಲಿಸಬೇಕೆನಲು, ಪರಮೇಶ್ವರನಿಂತೆಂದನು—ಎಲೆದೇವಿ ! ಸ್ಮರಿಸಿದಾಕ್ಷಣವೆ ಸಕಲಪಾಪಹರವಾದ ವಿಶ್ವಕರ್ಮೇಶ್ವರನ ಉತ್ಪತ್ತಿಯಂ ಆ ಸ್ವಾಮಿಯ ಮಹಿಮೆಯೆಂ ಕೇಳು, ಅದೆಂತೆಂದರೆ—ಪೂರ್ವದಲ್ಲಿ ಬ್ರಹ್ಮನ ಎರಡನೆಯ ಶರೀರವಾದಂಥ ವಿಶ್ವಕರ್ಮನೆಂಬುವನುಂಟು, ಅವನಾರೆನೆ! ತ್ವಷ್ಟೃಬ್ರಹ್ಮನಕುಮಾರನು, ಸಕಲಉದ್ಯೋಗದಲ್ಲಿಯೂನಿಪುಣನು, ಆತನುಬಾಲ್ಯದಲ್ಲಿ ಉಪನಯನವಾಗುತ್ತಲೆ ವಿದ್ಯಾಭ್ಯಾಸವಮಾಡುತ್ತಾ ಭಿಕ್ಷಾನ್ನವಭುಂಜಿಸುತ್ತಾ ಗುರುಸೇವೆಯಲ್ಲಿ ಇರಲು; ಒಂದುದಿನ ಗುರುವು ಈ ಬ್ರಹ್ಮಚಾರಿಯಂ ಕರೆದು ಇಂತೆಂದನು—ಎಲೈಬ್ರಹ್ಮಚಾರಿ ಮಳೆಗಾಲದಲ್ಲಿಯೂ ಬಾಧೆಇಲ್ಲದಂಥ ಒಂದುಬಾರಿಯೂ ಮುರಿಯದಂಥ ಎಂದಿಗು ಅಳಿವಾಗದಂಥ ಪಂಚುಪರ್ಣಶಾಲೆಯಂನಿರ್ಮಿಸೆಂದು ನುಡಿದನು, ಆ ಗುರುಪತ್ನಿಬಂದು ಎಲೋ ತ್ವಷ್ಟೃನಂದನನೆ ! ನೀನು ಎನ್ನಶರೀರಕ್ಕೆ ತಕ್ಕಹಾಗೆ ಕಠಿನವಿಲ್ಲದೆ ಬಿಚ್ಚಹೋಗದೆ ವಸ್ತ್ರವಿಲ್ಲದೆಇದ್ದ ನಾರುಕುಪ್ಪಸ ನಾರುಶೀರೆಯಂ ಮಾ

ಡಿಕೊಡುಎಂದು ಕೇಳಿದಳು, ಗುರುವಿನಕುಮಾರನು ಬರೆನುಕಾ ವುಗೆಯಂ ಮೆಟ್ಟಿಇರಲು ಎನ್ನಪಾದಕ್ಕೆ ಸರಾಗವಾಗಿರುವಂಥಾ ಚ ರ್ಮಪುಟ್ಟದೆ ಪಾದಕ್ಕೆಹಗುರವಾಗಿಇರುವಂಥಾ ಉದಕದಮೇಲೆ ನಡೆದ ರೂ ಭೂಮಿಯಮೇಲೆ ನಡೆದಂತಿರುವ ಖೇಚರಗಮನವುಂಟಾದ ಹಾ ವುಗೆಯಂ ಮಾಡಿಕೊಡೂ ಎಂದನು, ಗುರುವಿನಕುಮಾರತಿಯು ಎಲೊ ತ್ವಷ್ಟೃವಿನಕುಮಾರನೆ ! ಎನ್ನಕಿವಿಗೆ ಚಂದವಾಗಿ ಸುವರ್ಣದಿಂ ವಾಲೆ ಯಂ ಮಾಡಿಕೊಡು, ಜೊಂಬೆಯಾಟಕ್ಕೋಸ್ಕರ ಆನೆಯದಂತದಿಂದ ಗೃಹೋಪಕರಣಗಳು ಒರಳು ಒನಕೆ ಮುಂತಾದವನ್ನು ಎಂದಿಗೂ ಸವೆ ಯದಂತೆ ತೊಳೆಯದಿದ್ದರೂ ಮಿಂಚಾಗಿರುವ ಪೀಠಗಳನ್ನು ಪಾತ್ರೆಗ ಳನ್ನು ಮಾಡಿಕೊಡು, ಅಡಿಗೆಯಮಾಡುವದನ್ನು ಕಲಿಸು, ಎನ್ನಬೆರಳುಗ ಳಿಗೆ ಬಿಸಿತಾಕದಂತೆಯೂ ಅದರಪಕ್ವತೆಳಿವಂತೆಯೂ ಉಪಾಯವಕಾ ಣುವಂತೆಮಾಡು, ಒಂದೇಮನಸ್ಸಿನಲ್ಲಿ ನಿರ್ಮಿತವಾದ ಒಂದೇಕಂಭವುಳ್ಳ ಒಂದುಮನೆಯಂನಿರ್ಮಿಸು ಎಂದು ಗುರುಪುತ್ರಿಹೇಳಿದಳು ; ಅನಂತರ ದಲ್ಲಿ ತ್ವಷ್ಟೃಪುತ್ರನಾದ ಬ್ರಹ್ಮಚಾರಿಯು ಗುರು,ಗುರುಪತ್ನಿ, ಗುರು ಪುತ್ರ, ಗುರುಕುಮಾರತಿ, ಈ ನಾಲ್ವರು ನುಡಿದವಾಕ್ಯವಂಕೇಳಿ ಹಾ ಗೇಆಗಲಿಎಂದು ಇವೆಲ್ಲವನ್ನು ಮಾಡುವದಕ್ಕೆ ಸಾಮರ್ಥ್ಯವಿಲ್ಲದೆ ಘೋ ರಾರಣ್ಯಕ್ಕೆಹೋಗಿ ಅತಿಚಿಂತೆಯಿಂದ ತನ್ನೊಳುತಾನಿಂತೆಂದನು, ಗುರು ಮೊದಲಾದವರು ನುಡಿದುದ ಮಾಡುವದಕ್ಕೆ ಒಂದಿಷ್ಟಾದರೂ ಸಾಮರ್ಥ್ಯ ವಿಲ್ಲ, ಅವರಮುಂದೆ ಹಾಗೇಆಗಲಿ ಮಾಡಿಕೊಟ್ಟೇನು ಎಂದು ಪ್ರತಿಜ್ಞೆ ಯಂಮಾಡಿದೆನು, ಇನ್ನೇನುಮಾಡಲಿ ಎಲ್ಲಿಗೆಹೋಗಲಿ? ಎನಗೆ ಸಹಾಯವಾ ಗುವರಾರು, ನಾನು ಇನ್ನು ಆರಶರಣುಹೊಗಲಿ, ಗುರುಮೊದಲಾದವರು ಬೇಡಿದಅಭೀಷ್ಟವನ್ನು ಮಾಡೇನು ಎಂದು ಆವಾತನುಮಾಡದೆಹೋಹನೋ ಅಂಥಾ ಮೂಢಾತ್ಮನು ನರಕವನ್ನೈದುವನು, ಬ್ರಹ್ಮಚಾರಿಯಾದವಗೆ ಗು ರುಸೇವೆಯೇಧರ್ಮ, ಅದುಕಾರಣ ಅತಿಪ್ರಯಾಸದಿಂದಲಾದರೂ ಮಾಡಬೇ ಕು, ಮಾಡದೆ ಅವರವಾತಮೀರಿದವನಿಗೆ ಪ್ರಾಯಶ್ಚಿತ್ತವಾವುದು? ಗು ರುಗಳಕರುಣದಿಂದಲೆ ಸಕಲಮನೋರಥಗಳು ಸಿದ್ಧಿಯಹುದು, ಅವರ

ಕಾರುಣ್ಯವಿಲ್ಲದಿರೆ ಆಗದು, ಅದುಕಾರಣಾ ಅವರುಹೇಳಿದಹಾಗೆ ಮಾಡಬೇಕು, ಬುದ್ಧಿಇಲ್ಲದವನಿಗೆ ಆರುಸಹಾಯವಾದಾರು? ಗುರುಗಳವಾಕ್ಯವಲ್ಲದೆ ಮತ್ತೊಬ್ಬರಿಗಾದರು ನಿಮ್ಮಕಾರ್ಯವಮಾಡಿಕೊಟ್ಟೇನು ಎಂದು ಆಶೆಯತೋರಿ ಮಾಡದೆಹೋದರೆ ನರಕಕ್ಕೆಬೀಳುವರು, ಇನ್ನು ಗುರುಗಳ ಕಾರ್ಯವ ಮಾಡದೆಹೋದರೆ ಆ ಪಾತಕವಹೇಳುವದೇನು, ಅರಿಯದಂಥಾ ತನು ತನಿಗೆ ಸಹಾಯವಿಲ್ಲದಂಥಾ ಕಾರ್ಯವನ್ನು ಹ್ಯಾಗೆಮಾಡ್ಯಾನು, ಅವರು ಏನೆಂಬರೋ ಎಂಬಭೀತಿಯಿಂದ ಆ ವ್ಯಾಳೆಗೆ ಹಾಗೇಆಗಲಿಎಂದೆನು, ಎಲೆವಿಧಿಯೆ! ನಿನಿಗೆನಮಸ್ಕಾರ, ಇಂತೆಂದು ಅರಣ್ಯಮಧ್ಯದಲ್ಲಿ ಚಿಂತಿಸುವನಿತರೊಳು ಒಬ್ಬತಪಸ್ವಿಯುಕಂಡುನಮಸ್ಕರಿಸಿಇಂತೆಂದನು— ನೀನಾರೈಯ್ಯಾ ಎನ್ನಮನಸ್ಸನ್ನು ಸಂತೋಷಪಡಿಸುತಿದ್ದೀಯೆ, ಚಿಂತೆಎಂಬ ಸಂತಾಪದಿಂದ ತಪ್ತವಾಗುವ ಎನ್ನಶರೀರವು ಅತಿಶೀತೋದಕದಲ್ಲಿ ಸ್ನಾನವಮಾಡಿದಂತೆ ತಣ್ಣಗಾಗುತಿದ್ದೀತು,ಇಲ್ಲವೆ ನಾನುಪೂರ್ವದಲ್ಲಿಮಾಡಿದ ಸುಕೃತವು ಈ ತಪಸ್ವಿಯಾಗಿ ಬಂದಿತೋ, ಇಲ್ಲವೆ ಕಾರುಣ್ಯಸಮುದ್ರನಾದ ಪರಮೇಶ್ವರನು ಆದರೂಆಗಲಿ ನಿಮ್ಮಪಾದಕ್ಕೆ ನಮಸ್ಕಾರ, ಎಲೆ ಮುನಿನಾಥ! ನೀವುಎನಗೆ ಉಪದೇಶವಮಾಡಿ ಎನ್ನಗುರು, ಗುರುಪತ್ನಿ ಗುರುಪುತ್ರ, ಗುರುಪುತ್ರಿ ಇವರುಕೇಳಿದ ಅಭೀಷ್ಟವಮಾಡುವರೆ ಸಾಮರ್ಥ್ಯವಿಲ್ಲ, ಈಗ ಜನವಿರಹಿತವಾದ ಅರಣ್ಯದಲ್ಲಿ ಅಕಾರಣಬಂಧುವಾಗಿ ಬಂದ ನೀನು ಎನ್ನಬುದ್ಧಿಗೆ ಸಹಾಯಮಾಡೆನಲು, ಆತಪಸ್ವಿಯು ತನ್ನೊಳಿಂತೆಂದನು— ಲೋಕದಲ್ಲಿ ನಂಬಿದವನಿಗೆ ದುರ್ಬುದ್ಧಿಯಹೇಳಿದವರು ಭೂಮಿಚಂದ್ರರುಳ್ಳ ಪರ್ಯಂತರವೂ ನರಕದಲ್ಲಿಹರೂ,ಅದುಕಾರಣ ನಂಬಿದವರಿಗೆ ಹಿತೋಪದೇಶವ ಮಾಡಬೇಕೆಂದು ವಿಚಾರಿಶಿಕೊಂಡು ಆತಪಸ್ವಿಯು ಬ್ರಹ್ಮಚಾರಿಗಿಂತೆಂದನು— ಎಲೆಬಾಲಕ! ನೀನುಹೇಳಿದ ಕಾರ್ಯವಿದೇನದ್ಭುತವಿದ್ದೀತು, ವಿಶ್ವೇಶ್ವರನ ಅನುಗ್ರಹದಿಂದ ಬ್ರಹ್ಮನು ಸೃಷ್ಟಿಕರ್ತನಾದನು, ಈಗ ನೀನು ಕಾಶೀಕ್ಷೇತ್ರಕ್ಕೆಹೋಗಿ ಸರ್ವಜ್ಞನಾದ ಪರಮೇಶ್ವರನ ಆರಾಧಿಸಿದರೆ ನಿನಿಗೆ ವಿಶ್ವಕರ್ಮನೆಂಬ ಹೆಸರು ಪ್ರಸಿದ್ಧವಾದೀತು, ಈ ಕಾಶೀಯಲ್ಲಿ ವಿಶ್ವೇಶ್ವರನ ಅರ್ಚಿಸಿದವರಿಗೆ ಅಭಿಲಾಷೆ ದ

ದುರ್ಲಭವಲ್ಲ,ಅಲ್ಲಿ ಶರೀರವಬಿಟ್ಟವರಿಗೆ ಮೋಕ್ಷ ಮೊದಲಾದ್ದುಸುಲಭ,ಸೃಷ್ಟಿಸ್ಥಿತಿ ಸಂಹಾರಸಾಮರ್ಥ್ಯಗಳು ವಿಶ್ವೇಶ್ವರನ ಅನುಗ್ರಹದಿಂದಲೇ ಆಗುವವು, ಎಲೆ ಬಾಲಕ! ನಿನ್ನಮನೋಭೀಷ್ಟಗಳಾಗಬೇಕಾದರೆ ಮೋಕ್ಷಲಕ್ಷ್ಮಿಗೆ ನಿವಾಸವಾದ ಕಾಶೀಪಟ್ಟಣಕ್ಕೆ ಹೋಗು, ಆ ಪರಮೇಶ್ವರನು ಸಕಲವನ್ನು ಕೊಟ್ಟಾನು, ಪೂರ್ವದಲ್ಲಿ ಉಪಮನ್ಯು ಒಂದುಶಾರೆ ಹಾಲುಕೇಳಲು ಕ್ಷೀರಸಮುದ್ರವನ್ನೇಕೊಟ್ಟನು, ಅಂಥಾಪರಮೇಶ್ವರನಆರಾಧಿಸಿ ಏನೇನವಡೆಯಬಾರದು, ಅಲ್ಲಿವಾಸವಮಾಡಿದವರಿಗೆ ಹೆಜ್ಜೆಹೆಜ್ಜೆಗಳಿಗು ಧರ್ಮದಾಶೆಗಳುಂಟು, ಕಾಶಿಯು ಗಂಗೋದಕಸ್ಪರ್ಶದಿಂದ ಮಹಾಪಾತಕಹರವಹುದು, ಕಾಶಿಯಬೀದಿಯಲ್ಲಿ ಸಂಚರಿಸಲುಹೆಜ್ಜೆಹೆಜ್ಜೆಗೆ ನೂರುಯಜ್ಞಫಲ, ಧರ್ಮಅರ್ಥಕಾಮಮೋಕ್ಷಗಳು ಮೊದಲಾದ ಮನೋರಥಗಳಂ ಪಡೆಯಬೇಕಾದರೆ ತ್ರೈಲೋಕ್ಯದಲ್ಲೂ ಪವಿತ್ರವಾದ ಕಾಶೀಕ್ಷೇತ್ರಕ್ಕೆಹೋಗು, ಅಲ್ಲಿವಿಶ್ವೇಶ್ವರನಿದ್ದಕಾರಣ ನಿತ್ಯವು ಮನುಷ್ಯರ್ಗೆ ಸಕಲಫಲಂಗಳಹವು, ಹೀಗೆಹೇಳಿದ ತಪಸ್ವಿಯವಾಕ್ಯಮಂ ಕೇಳಿ ತ್ವಷ್ಟೃಕುಮಾರನು ಸಂತೋಷಪಟ್ಟು ಕಾಶಿಗೆಹೋಗಲು ಉಪಾಯವಾವುದೆಂದು, ಎಲೈ ತಪೋಧನನೆ! ಸಕಲರಾದ ಸಾಧಕರಿಗು ದುರ್ಲಭವಲ್ಲವೆಂದುಪೇಳ್ದ ಕಾಶೀಪಟ್ಟಣವೆಲ್ಲಿದ್ಧೀತು,ಆಪಟ್ಟಣಸ್ವರ್ಗದಲ್ಲಿಯೊ? ಭೂಮಿಯಲ್ಲಿಯೋ? ಪಾತಾಳದಲ್ಲಿಯೋ? ಆ ಕ್ಷೇತ್ರದಲ್ಲಿ ವಿಶ್ವೇಶ್ವರನು ತಾರಕೋಪದೇಶದಿಂ ತನ್ಮಯವಾದಂಥ ಕ್ಷೇತ್ರವಾದರೂ ಆನಂದವನಚಾರಿಗಳಾದ ಮನುಷ್ಯರಿಗೆ ಮೋಕ್ಷಲಕ್ಷ್ಮಿಮೊದಲಾಗಿ ಸುಲಭವಾಗಲಿಲ್ಲವಾಗಿ ಮಿಕ್ಕಾದಮನೋರಥಂಗಳಿಂದೇನು? ಅಂಥಾಕ್ಷೇತ್ರಕ್ಕೆ ಎನ್ನ ಕರೆದುಕೊಂಡುಹೋಗುವರಾರು? ನಾನುಹ್ಯಾಗೆಹೋಗಲಿ? ಉಪಾಯವೇನು? ಹೇಳಎನಲು, ಆತಪಸ್ವಿಕೇಳಿ ವಿಶ್ವಾಸವುಳ್ಳ ಬ್ರಹ್ಮಚಾರಿಗಿಂತೆಂದನು—ಎಲೆಬ್ರಹ್ಮಚಾರಿ! ನಾನು ಕಾಶೀಪಟ್ಟಣಕ್ಕೆ ಹೋಗುತ್ತಿದ್ಧೇನೆ, ನಿನ್ನನ್ನುಕರೆದುಕೊಂಡು ಹೋಗುತ್ತಾಇಧೇನೆ, ಧುರ್ಲಭವಾದ ಮನುಷ್ಯದೇಹವನೆತ್ತಿ ಆರು ಕಾಶೀಯಾತ್ರೆಯ ಮಾಡದಿರುವರೋ ಅವರಿಗೆ ಶ್ರೇಯಸ್ಸು ಎತ್ತಣದು, ಮನುಷ್ಯದೇಹ ವ್ಯರ್ಥವಾಗಿಹೋಗುವದು

ಆಯುಷ್ಯಕೊಂಚವಾಗುತ್ತಿದೆ, ಅದುಕಾರಣ ಈ ಚಂಚಲವಾದ ಮನುಷ್ಯದೇಹವನ್ನು ಸಫಲವಮಾಡಿಕೊಂಬುವಕ್ಕೋಸ್ಕರ ನಾನು ಕಾಶೀಪಟ್ಟಣಕ್ಕೆಹೋಗುತ್ತಾ ಇದ್ದೇನೆ, ನೀನೂಬಾರೆಂದು ಅತಿಕೃಪಾಳುವಾದ ಮುನಿನುಡಿಯಲು, ಕೇಳಿ ತ್ವಷ್ಟ್ರಜನು ಸಂತೋಷದಿಂದ ಆ ಮುನಿಯುಸಂಗಡ ಕಾಶಿಯುನ್ನೈದಿ ಚಿತ್ತಸ್ವಸ್ಥವಂ ಪಡೆದನು ; ಆಬ್ರಹ್ಮಚಾರಿಯುನ್ನು ಕಾಶೀಪಟ್ಟಣವಹಾಯಿಸಿ ಆತಪಸ್ವಿಹೋಗಲು ಆಬ್ರಹ್ಮಚಾರಿ ಇಂತೆಂದುಕೊಂಡನು—ಆ ತಪಸ್ವಿಯ ರೂಪಧರಿಸಿ ಬಂದವನೀಗಲೆ ಸಕಲಮನೋರಥಗಳನೀವ ವಿಶ್ವೇಶ್ವರನು, ಸದಾಚಾರಿಗಳಾಗಿ ಸ್ಥಿರಬುದ್ಧಿಯುಳ್ಳವರಿಗೆ ದೂರದಲ್ಲಿಇದ್ದರೂ ಸಮೀಪದಲ್ಲಿಇದ್ದವನೆಹನು,ಆಸ್ವಾಮಿಪ್ರಸನ್ನನಾಗಲು ಸಕಲವು ಕಾಣಪಡುವುದು, ಆ ಸ್ವಾಮಿದಾರಿಯುತೋರಲು, ಈ ಕಾಶೀಸ್ಥಳವಂಕಂಡೆನು, ವನಮಧ್ಯದಲ್ಲಿದ್ದು ಚಿಂತೆಪಡುವಬಾಲಕನಾದ ತಾನೆತ್ತ ? ಎನಗೆ ಉಪದೇಶವಂಮಾಡಿ ಈ ಸ್ಥಳಕ್ಕೆ ಕರತಂದ ತಪಸ್ವಿಎತ್ತ ? ಇದೆಲ್ಲವು ತ್ರಿಲೋಚನನಾದಪರಮೇಶ್ವರನ ಲೀಲೆಎಂದು ತಿಳಿಯಬೇಕು, ಪರಮೇಶ್ವರನು ಪ್ರಸನ್ನನಾಗಲು, ಒಂದಿಷ್ಟೂ ದುರ್ಲಭವಿಲ್ಲ, ಆದೆಂತೆನೆ—ನಾನೆತ್ತ?ಈಕಾಶೀಪಟ್ಟಣವೆತ್ತ?ಪೂರ್ವಜನ್ಮಾಂತರದಲ್ಲಿ ಈಶ್ವರನು ಎನ್ನಿಂದಪೂಜೆಗೊಂಡಿರಬೇಕು, ನಾನುಬಾಲಕನಾದ ಕಾರಣ ಈ ಜನ್ಮದಲ್ಲಿ ಎನ್ನಿಂದ ಪೂಜೆಗೊಂಡವನಲ್ಲ, ಈಗ ಎನ್ನಮೇಲೆ ಕೃಪೆಮಾಡುವದಕ್ಕೆ ಕಾರಣವೇನು ಎಂದರೆ ಎನ್ನಗುರುಭಕ್ತಿಯೇ ಕಾರಣ ಕೃಪಾಳುವಾದ ವಿಶ್ವೇಶ್ವರನಿಂದಾ ಅನುಗ್ರಹಿಸಲ್ಪಟ್ಟನು, ಅಲ್ಲವೆ ತ್ರಿಲೋಚನನಾದ ಪರಮೇಶ್ವರನು ಇತರದೈವವಂತೆ ಕಾರಣಾಪೇಕ್ಷಿತನುಅಲ್ಲ, ಕೇವಲಕೃಪೆಯುಕಾರಣವೆಂತೆನೆ—ಎನ್ನಮೇಲೆ ಕೃಪೆಯಾಗುವದಕ್ಕೆ ಕಾರಣವೇನು, ಈ ತಪಸ್ವಿಯು ಸಮಾಗಮವೆಂತಾಯಿತು, ಅವಶ್ಯವು ಈಗ ಎನ್ನಕರತಂದ ತಪಸ್ವಿಯು ಪರಮೇಶ್ವರನುಆಹುದು, ಈಶ್ವರನಕೃಪೆಗೆ ಯಜ್ಞ ದಾನ ತಪಸ್ಸುಗಳೊಂದು ಕಾರಣವಲ್ಲ,ಮತ್ತೇನೆಂದರೆ—ಆಸ್ವಾಮಿಯುಕೃಪೆಯೇಕಾರಣ ಆಕೃಪೆಯು ಕುತ್ಸಿತ್ಯಕ್ತವಾದ ವೃದ್ಧರು ನಡೆವಮಾರ್ಗದಿಂದ ನಡೆವಾಗ ದೊರಕುವದು, ಈ ರೀತಿಯಿಂದ

ಬ್ರಹ್ಮಚಾರಿ ತನ್ನ ಮನದಲ್ಲಿ ಚಿಂತಿಸಿ ಪರಮೇಶ್ವರನಕೃಪೆಯೆ ಸಕಲಕ್ಕೂ ಕಾರಣವೆಂದು ನಿಶ್ಚೈಸಿ ಶುಚಿರ್ಭೂತನಾಗಿ ಒಂದುಲಿಂಗವಂ ಪ್ರತಿಷ್ಠೆಯಂಮಾಡಿ ತ್ರಿಕಾಲದಲ್ಲಿಯು ಇಲ್ಲದ ನಾನಾಪುಷ್ಪಗಳ ಆರಿಶಿತಂದು ಈಶ್ವರನಪೂಜೆಯಂಮಾಡಿ ಕಂದಮೂಲಫಲಾದಿಗಳ ನೈವೇದ್ಯವಂಮಾಡಿ ತಾನು ಆಕಂದಮೂಲವಂಮುಟ್ಟದೆ ನಿರಾಹಾರವ್ರತವಂ ಮಾಡುತ್ತಿರಲು, ಪರಮೇಶ್ವರನು ಪ್ರಸನ್ನನಾಗಿ ವರವನಿತ್ತನು, ಅದೆಂತೆನೆ—ಎಲೈಬಾಲಕ! ನೀನುಗುರು, ಗುರುಪತ್ನಿ, ಗುರುಪುತ್ರ, ಗುರುಪುತ್ರಿ, ಇವರು ಏನುಪ್ರಾರ್ಥಿಶಿದರೋ ಅವಂ ಸಂಪಾದಿಸಿಕೊಡುವದಕ್ಕೆ ಸಾಮರ್ಥ್ಯವುಂಟಾಧೀತು, ನೀಮಾಡಿದ ತಪದಿಂದೆನ್ನ ಮನಸ್ಸು ಸಂತುಷ್ಟವಾಯಿತು,ಇನ್ನು ಮಿಕ್ಕಾದವರಗಳಕೊಟ್ಟೆನು ಯಾವ್ಯಾವೆಂದರೆ—ಎಲೈಬಾಲಕ! ನೀನು ಸುವರ್ಣಮೊದಲಾದ ಪಂಚಲೋಹಗಳನ್ನು ನಾನಾವಿಧವಾದ ಧನಗಳನ್ನು ನೂತನವಾಗಿ ಸಂಪಾದಿಸುವದಕ್ಕೆ ಸಾಮರ್ಥ್ಯವುಂಟಾಗಲಿ, ಸ್ವರ್ಗಮರ್ತ್ಯಪಾತಾಳಗಳಲ್ಲಿ ಆವಾವನು ಏನೇನುಬಯಸಿ ನಿನ್ನ ಕೇಳ್ವರೋ ಆವಸ್ತುಗಳನೆಲ್ಲವನ್ನು ನಿರ್ಮಾಣವಂಮಾಡುವದ್ದರಿಂದಮು ರಡನೆಯ ಬ್ರಹ್ಮನಾಗು, ನಾನಾವಿಧವಾದ ಮುಗಿಲಟ್ಟಣೆ, ರಾಟಾಳ, ಉಯ್ಯಾಲೆ,ಗಾಣ,ಮೊದಲಾದ ಎಂತ್ರಗಳನ್ನು ಕೋಟೆ, ಕೊತ್ತಲ,ಅಗಳು, ಅಳುವೇರಿ,ಬಾಗಿಲುಬಂದಿಡ್ಡಿಕವ, ದಾರಬಂಧನ ಇವು ಮೊದಲಾದ ದುರ್ಗಸಾರಣೆಯನ್ನು ನಡೆಭಾವಿ, ಸೇದೋಭಾವಿ, ಖಿಡಾ, ಕುಳಿ, ಕೆರೆ, ಕುಂಟೆ, ಮೊದಲಾದ ಜಲಸ್ಥಾನರಚನೆಯಂ ಸಕಲಕಟ್ಟೆಗಳನ್ನು ಇಂದ್ರಜಾಲ, ಮಹೇಂದ್ರಜಾಲವನ್ನು ಸಮಸ್ತಉದ್ಯೋಗಗಳಲ್ಲಿಯೂ ಕುಶಲತ್ವವನ್ನು ಸಕಲಬುದ್ಧಿಯಿಂದ ವಿಶೇಷಬುದ್ಧಿಯನ್ನು ಸಕಲಜೀವರ ಮನದಲ್ಲಿರ್ದ ಇಂಗಿತ ತಿಳಿವುದನ್ನು ಸ್ವರ್ಗಭೂಮಿ ಪಾತಾಳಲೋಕಗಳಲ್ಲಿ ಕಾಣಲ್ಪಟ್ಟ ವಸ್ತುಗಳೆಲ್ಲವು ಕಾಣಪಡದ ವಸ್ತುಗಳೆಲ್ಲವು ನಿನಗೆ ಕಾಣಪಡುತಿರಲಿ, ಸಕಲಭುವನಂಗಳಲ್ಲಿಯು ಇರುವ ಕರ್ಮಗಳ ತಿಳಿಯುವನಾದಕಾರಣ ನಿನಗೆ ವಿಶ್ವಕರ್ಮನೆಂಬ ಹೆಸರು ಪ್ರಸಿದ್ಧವಾಗಲಿ, ನಿನಗೆ ಕೊಡಬಾರದವರವಿಲ್ಲ,ಇನ್ನು ನಿನಗೆ ಬೇಕಾದವರಗಳಕೇಳಿಕೊ,ಕಾಶೀ

ಕ್ಷೇತ್ರ ವ್ಯತಿರಿಕ್ತವಾದ ಸ್ಥಳಗಳಲ್ಲಿಯು ಶಿವಪೂಜೆಯ ಮಾಡಿದವರ್ಗೆ
ಸಕಲಾಭೀಷ್ಟಗಳಕೊಡುವೆನು, ಈ ಕಾಶಿಯಲ್ಲಿ ಶಿವಪೂಜೆಯಮಾಡಿದವ
ರ್ಗೆ ಹೇಳತಕ್ಕದ್ದೇನು, ಈ ಕಾಶೀಕ್ಷೇತ್ರದಲ್ಲಿ ಶಿವಲಿಂಗಪ್ರತಿಷ್ಠಪೂಜೆ
ಸ್ತುತಿಗಳಿಂದ ಆರಾಧಿಸುವರಾರೋ ಅವರು ಎನಗೆದರ್ಪಣಗಳು, ಅವರಿಂದ
ಎನ್ನ ತ್ರಿಲೋಚನಗಳಿಗೆ ನೀನು ದರ್ಪಣವಾದವನು, ಈ ಕ್ಷೇತ್ರದಲ್ಲಿ ಎನ್ನ
ಹೊರತು ಮತ್ತೊಬ್ಬರಪೂಜೆಸಿದವನು ಅಲ್ಪಬುದ್ಧಿಯಾಗಿ ಮೋಕ್ಷವ
ನೊಲ್ಲನು, ಅದುಕಾರಣ ಬ್ರಹ್ಮ, ವಿಷ್ಣು, ಇಂದ್ರಾದಿ ದಿಕ್ಪಾಲಕರೆಲ್ಲ
ರು ಎನ್ನನ್ನೆ ಈ ಕ್ಷೇತ್ರದಲ್ಲಿ ಪೂಜೆಸಿದವರಾದಕಾರಣ ನೀನು ಕಳವಳಮಾ
ಡದೆ ವರವಬೇಡಿಕೋ ಎನಲು, ಪರಮೇಶ್ವರನವಾಕ್ಯಮಂ ಕೇಳಿ ವಿಶ್ವ
ಕರ್ಮನಿಂತೆಂದು ಬಿನ್ನೈಸುವನು, ಎಲೈಸ್ವಾಮಿ! ಈಗ ಎನ್ನಿಂದ ಪ್ರತಿ
ಷ್ಠೆಯಾದಲಿಂಗದಲ್ಲಿ ನಿತ್ಯವು ಸಾನ್ನಿಧ್ಯವಾಗಿ ನೀವು ಇರಬೇಕು, ಈ
ಲಿಂಗವಪೂಜೆಸಿದವರು ಬುದ್ಧಿವಂತರಾಗಿ ನಿಮ್ಮಸಾಯುಜ್ಯವನ್ನೈದಲೀ,
ನಿಮಗೆಎನ್ನಿಂದ ಒಂದು ಉಪ್ಪರಿಗೆಯಂನೀವೆ ಆಗುಮಾಡಿಸಿ ಎನ್ನರಕ್ಷಿಸ
ಬೇಕೆನಲು, ಇಂತೆಂಬ ವಿಶ್ವಕರ್ಮನವಾಕ್ಯಮಂ ಕೇಳಿ ಪರಮೇಶ್ವರನು
ಎಲೆಮಗನೆ? ನೀನು ಕೇಳಿದವರಗಳಕೊಟ್ಟೆನು ಮುಂದೆ ದಿವೋದಾಸರಾ
ಯನೆಂಬುವನು ಬ್ರಹ್ಮನವರದಿಂ ರಾಜ್ಯವನಾಳಿ ಆ ರಾಯನು ಗಣಪತಿ
ವಿಷ್ಣುವಿನ ಉಪದೇಶದಿಂದ ಎನ್ನಶರಣುಹೊಕ್ಕು ಮೋಕ್ಷವನ್ನೈದುವಾಗ
ಒಂದುಉಪ್ಪರಿಗೆಯಂ ಕಟ್ಟಿಸುವನು, ಅದಂನೀನು ಕಟ್ಟುವನಾದೀಯೆ,
ಆ ರಾಯನು ಮೋಕ್ಷವನ್ನೈದಿದಬಳಿಕ ಕಾಶೀಪಟ್ಟಣವನ್ನು ನೂತನವಾ
ಗಿ ಅಲಂಕರಿಸು, ನಿಮ್ಮಗುರುಗಳಬಳಿಗೆಹೋಗಿ ಅವರು ಹೇಳಿದಕಾರ್ಯ
ವ ಆಗುಮಾಡು, ಗುರುಗಳ ಅವಮನ್ನಣೆಯಮಾಡದವರೆ ಎನಗೆಮಾನ್ಯ
ರು, ಅದುಕಾರಣ ನೀನು ಗುರುಸೇವೆಯಂಮಾಡಿ ದೇವರ್ಕಳಿಗೆ ಹಿತನಾ
ಗಿ ಮೋಕ್ಷಪರ್ಯಂತರವು ಎನ್ನಸಮೀಪದಲ್ಲಿಯೆಇದ್ದು ಎನ್ನಸಾಯುಜ್ಯ
ವನ್ನೈದು, ಈಗನೀನು ಪೂಜೆಸಿದ ಲಿಂಗದಲ್ಲಿ ತಾನಿರ್ದು ಭಕ್ತರಅಭೀ
ಷ್ಟವಂ ಸಲ್ಲಿಸೇನು, ಅಂಗಾರಕೇಶ್ವರನ ಉತ್ತರದಲ್ಲಿರ್ದ ನಿನ್ನಹೆಸರ
ವಿಶ್ವಕರ್ಮೇಶ್ವರನ ಪೂಜೆಸಿದವರ್ಗೆ ಹೆಜ್ಜೆಹೆಜ್ಜೆಗೆ ಮನೋರಥಗಳು

ಸಿದ್ಧಿಯಾಗಲಿಎಂದು ವರವನಿತ್ತು ಪರಮೇಶ್ವರನು ಅಂತರ್ಧಾನನಾಗಲು, ವಿಶ್ವಕರ್ಮನು ತಮ್ಮಗುರುಗಳಬಳಿಗೆಬಂದು ಅವರಮನೋರಥಂಗಳ ಆಗುಮಾಡಿ ಅವರಕೈಯ್ಯ ಆಶೀರ್ವಾದವಂ ತೆಕೊಂಡು ತಮ್ಮಮನೆಗೆಹೋಗಿ ತಾಯಿ ತಂದೆಗಳಿಗೆ ಈ ವೃತ್ತಾಂತವಂಪೇಳಿ ಸಂತೋಷಪಡಿಸಿ ಅವರಅನುಜ್ಞೆಯಿಂದ ದೇವರ್ಕಳಿಗೆ ಹಿತವಾಗಿ ಮತ್ತೂ ಕಾಶೀಪಟ್ಟಣಕ್ಕೆಬಂದು ಗಂಗಾಸ್ನಾನವಂಮಾಡಿ ವಿಶ್ವಕರ್ಮೇಶ್ವರನ ಪೂಜಿಸುತ್ತಾ ಕಾಶಿಯಲ್ಲಿಯೆಇದ್ದನು, ಎಂದು ಪರಮೇಶ್ವರನು ದೇವಿಯುರಿಗೆ ನಿರೂಪಿಸಿ ಮತ್ತಿಂತೆಂದನು—ಎಲೆಪಾರ್ವತೀದೇವಿಯೆ! ಈ ಕಾಶಿಯಲ್ಲಿ ಮುಕ್ತಿಸಾಧನಗಳಾದ ನೀನು ಕೇಳಿದ ಹದಿನಾಲ್ಕುಲಿಂಗಗಳ ಮಹಿಮೆಯಂ ಪೇಳಿದೆನಲ್ಲ, ಆ ಹದಿನಾಲ್ಕುಲಿಂಗಗಳ ಇನ್ನೊಂದುಮಾಳ್ಯೆ ಹೇಳೇನುಕೇಳು, ಓಂಕಾರೇಶ್ವರ, ಕೃತ್ತಿವಾಸೇಶ್ವರ, ತ್ರಿವಿಷ್ಟಪೇಶ್ವರ,ಮಹದೇವೇಶ್ವರ, ತ್ರಿಲೋಚನೇಶ್ವರ, ರತ್ನೇಶ್ವರ, ಚಂದ್ರೇಶ್ವರ, ತಾರಕೇಶ್ವರ, ಧರ್ಮೇಶ್ವರ, ಕಾಮ್ಯೇಶ್ವರ, ವಿಶ್ವಕರ್ಮೇಶ್ವರ, ಮಣಿಕರ್ಣಿಕೇಶ್ವರ, ಅವಿಮುಕ್ತೇಶ್ವರ, ವಿಶ್ವನಾಥೇಶ್ವರ, ಈ ಹದಿನಾಲ್ಕು ಲಿಂಗಗಳನ್ನು ಈ ಕಾಶಿಯಲ್ಲಿ ವಾಸವಾಗಿ ವಿಶ್ವೇಶ್ವರನಪೂಜೆಸಿದವರ್ಗೆ ಕೋಟಿಬ್ರಹ್ಮಕಲ್ಪಗಳಗು ಪುನರಾವೃತ್ತಿ ಇಲ್ಲ, ಲೋಕದೊಳಗಣ ಸಂಚಾರಿಗಳು ಎಂಟುತಿಂಗಳು ಸಂಚಾರವಂಮಾಡಿ ನಾಲ್ಕುತಿಂಗಳು ಒಂದುಕಡೆಯಲ್ಲಿ ಇರಬೇಕು, ಎಂಬ ನಿಯಮವುಂಟು, ಕಾಶೀಪಟ್ಟಣದಲ್ಲಿ ಆನಿಯಮವಿಲ್ಲ, ಸದಾಇರಬಹುದು, ಅಲ್ಲಿರ್ದವರ್ಗೆ ಮೋಕ್ಷವುಂಟು, ಸಂದೇಹವಿಲ್ಲ, ಈ ಕಾಶೀವಾಸವಾಗಿಇರಲು ಯೋಗಕ್ಷೇಮಗಳೆರಡು ಉಂಟಹುದು, ಅದುಕಾರಣ ಇಲ್ಲಿಬಿಟ್ಟು ಮತ್ತೊಂದುಕಡೆಗೆ ಹೋಗಲಾಗದು,ಇಲ್ಲಿಇರಲು ಸಕಲಸಿದ್ಧಿಗಳಹವು, ಭೂತಭವಿಷ್ಯದ್ವರ್ತಮಾನಗಳಲ್ಲಿ ಜ್ಞಾನಾಜ್ಞಾನದಿಂದ ಮಾಡಿದಪಾಪಗಳು ಈ ಕಾಶಿಯದರ್ಶನದಿಂ ಲಯವಹವು ಸ್ಥಳಾಂತರಗಳಲ್ಲಿ ಮಾಡಿದ ಉಗ್ರತಪಸ್ಸುಗಳಿಂದ ಮಹಾವ್ರತ ಮಹಾದಾನ ನಿಯಮಗಳಿಂದ ಮಹಾಯೋಗದಿಂದ ಮಹಾಯಜ್ಞದಿಂದ ವೇದಾಂತಾಭ್ಯಾಸ ಉಪನಿಷತ್ತುಗಳ ಪಠನದಿಂದ ಆ ಹಂಥಾಮುಕ್ತಿಯೂ

ಈ ಕ್ಷೇತ್ರದಲ್ಲಿ ಸುಲಭದಿಂದಲಹುದು, ಇಲ್ಲಿ ದೇಹತ್ಯಾಗವ ಮಾಡುವತನಕಲಿ ಕರ್ಮಬಂಧನವಲ್ಲದೆ ದೇಹಾಂತ್ಯದಲ್ಲಿ ತಿರ್ಯಗ್ಜಾತಿಮೊದಲಾದ ಅಂಡಜ, ಜರಾಯುಜ, ಸ್ವೇದಜ, ಉದ್ಭಿಜಗಳೆಂಬ ಚತುರ್ವಿಧ ಪ್ರಾಣಿಗಳಿಗು ಮುಕ್ತಿಯುಂಟು, ಈ ಕ್ಷೇತ್ರದ ತೀರ್ಥಸ್ನಾನಪ್ರಯಾಗದ ಮಾಘಸ್ನಾನಕ್ಕಿಂತ ಕೋಟಿಗುಣಿತ ಅಧಿಕಫಲವು ಕ್ಷಣಕ್ಕೆ ಸಿದ್ಧಿಸುವದು, ಇಂತೆಂದು ಪರಮೇಶ್ವರನು ಪಾರ್ವತೀದೇವಿಯರಿಗೆ ಪೇಳಿದನು ಎಂದು ಅಗಸ್ತ್ಯನಿಗೆ ಮತ್ತಿಂತೆಂದನು—ಕೇಳೈಅಗಸ್ತ್ಯನೆ ? ಈ ಕ್ಷೇತ್ರದಮಹಿಮೆಯುಂ ಪೇಳಲು, ಬ್ರಹ್ಮನಿಗು ಶಕ್ಯವಲ್ಲ, ನಿನ್ನ ಮೇಲಣ ಪ್ರೀತಿಯಿಂದ ಕಂಡಷ್ಟು ಸ್ವಲ್ಪಮಾತ್ರಪೇಳಿದೆನು, ಈ ಓಂಕಾರೇಶ್ವರಮೊದಲಾದ ಹದಿನಾಲ್ಕುಲಿಂಗಗಳ ಮಹಿಮೆಯುಂ ಸುಚಿತ್ತದಿಂ ಕೇಳಲು, ಹದಿನಾಲ್ಕುಲೋಕಗಳಲ್ಲಿಯು ಪೂಜ್ಯರಾಗಿ ಇಹರೆಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದರೆಂದು ಸೂತಪುರಾಣಿಕನು ಶೌನಕಾದಿಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಾಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ವಿಶ್ವಕರ್ಮೇಶ್ವರನ ಪ್ರಸಂಗವೆಂಬ ಎಂಭತ್ತಾರನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * * * * * * * * * * * *

ಎಂಭತ್ತೇಳನೇಅಧ್ಯಾಯ ದಕ್ಷಯಜ್ಞಪ್ರಾರಂಭ.

ಶ್ರೀವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ಅಗಸ್ತ್ಯನಿಂತೆಂದನು—ಎಲೈ ಸರ್ವಜ್ಞನಾದ ಪರಮೇಶ್ವರನ ಕುಮಾರನಾದ ಷಣ್ಮುಖನೆ! ಈ ಕಾಶೀಕ್ಷೇತ್ರದಲ್ಲಿ ಮುಕ್ತಿಪ್ರದವಾದ ಚತುರ್ದಶಲಿಂಗಗಳ ಉತ್ಪತ್ತಿಯುಂ ಕೇಳಿದಮಾತ್ರದಲ್ಲಿಯೆ ಅಮೃತಪಾನಮಾಡಿದ ದೇವತೆಗಳಂತೆ ಅತ್ಯಂತ ತೃಪ್ತನಾದೆನು, ಓಂಕಾರೇಶ್ವರ ಮೊದಲಾದ ಲಿಂಗಗಳು ಆನಂದಕಾನನದಲ್ಲಿರ್ದ ಪಾಪಿಗಳಿಗೆ ಮೊದಲಾಗಿ ಆನಂದವಕೊಡುತ್ತಿಹ

ವು, ಅಂಥಾಲಿಂಗಗಳಕೀರ್ತನೆಯುಂ ಕೇಳಿ ನಾನು ಪರಮಾನಂದಭರಿತನಾದೆನು, ಇನ್ನು ದಕ್ಷೇಶ್ವರಮೊದಲಾದ ಹದಿನಾಲ್ಕುಲಿಂಗಗಳ ಮಹಿಮೆಯುಂ ನಿರೂಪಿಸಬೇಕು, ಆವನಾನೊಬ್ಬ ದಕ್ಷನು ದೇವಸಭಾಮಧ್ಯದಲ್ಲಿ ಸಮರ್ಥನಾದ ಪರಶಿವನನ್ನಿಂದಿಶಿದನೊ? ಅಂಥಾದಕ್ಷನು ಈಶ್ವರಪ್ರೀತಿಕರವಾಗಿ ಲಿಂಗಪ್ರತಿಷ್ಠೆಯುಂ ಮಾಡಿದ್ದುದು ಮಹಾಶ್ಚರ್ಯ, ಅದನ್ನು ವಿವರವಾಗಿ ಬುದ್ಧಿಗಲಿಸಬೇಕೆಂದು ಬಿನ್ನವಿಸಲು, ಶಿಖಿವಾಹನನಾದ ಕುಮಾರಸ್ವಾಮಿ ಇಂತೆಂದನು—ಕೇಳೈಅಗಸ್ತ್ಯ! ದಕ್ಷೇಶ್ವರನ ಉತ್ಪತ್ತಿಯುಂ ಪೇಳುವೆನು, ದಕ್ಷನು ಟಗರುತಲೆಯುಳ್ಳವನಾಗಿ ವಿಕಾರರೂಪಿನಿಂದ ದುಃಖಪಟ್ಟು ಈಶ್ವರನನಿಂದಿಶಿದ ಪಾಪಪರಿಹರಕ್ಕೋಸ್ಕರ ಬ್ರಹ್ಮನಉಪದೇಶದಿಂದ ಪ್ರಾಯಶ್ಚಿತ್ತವಂ ಮಾಡಿಕೊಂಬವನಾಗಿ ಕಾಶೀಕ್ಷೇತ್ರಕ್ಕೆಹೋಗಿ ಲಿಂಗಪ್ರತಿಷ್ಠೆಯುಂಮಾಡಿ ಮನೋರಥಗಳಂ ಪಡೆವನು, ಇಂತೆಂದು ಪೇಳಲು, ಅಗಸ್ತ್ಯನಿಂತೆಂದನು—ಎಲೈ ಕುಮಾರಸ್ವಾಮಿಯೆ! ದಕ್ಷಂಗೆ ಟಗರತಲೆಯು ಬಂದಕಾರಣವ ಬುದ್ಧಿಗಲಿಸಬೇಕೆನಲು, ಕುಮಾರಸ್ವಾಮಿ ಇಂತೆಂದನು—ಕೇಳೈಅಗಸ್ತ್ಯನೆ! ಒಂದಾನೊಂದುದಿನದಲ್ಲಿ ಶಶಿಭೂಷಣನಾದ ಪರಮೇಶ್ವರನ ಸೇವೆಗೆ ಬ್ರಹ್ಮನು, ವಿಷ್ಣುವ ಮುಂದಿಟ್ಟುಕೊಂಡು ಕೈಲಾಸಕ್ಕೆಬರಲು, ಇಂದ್ರಾದಿಲೋಕಪಾಲಕರು ವಿಶ್ವೆದೇವರುಗಳು ಮರುದ್ಗಣಂಗಳು ದ್ವಾದಶಾದಿತ್ಯರು ಅಷ್ಟವಸುಗಳು ರುದ್ರಗಳೂ, ಋಷಿಗಗಳೂ, ಅಪ್ಸರರೂ, ಯಕ್ಷರೂ, ಗಂಧರ್ವರೂ, ಸಿದ್ಧರೂ, ಚಾರಣರೂ, ಗರುಡರು, ತುಂಬುರನಾರದಾದಿಗಳು, ಸಹಾಬಂದು ಪರಮೇಶ್ವರನಕಂಡು ಸಾಷ್ಟಾಂಗವೆರಗಿ ರೋಮಾಂಚನವುಳ್ಳವರಾಗಿ ಸ್ತೋತ್ರವಂಮಾಡಿ ನಿಂದಿರಲು, ಪರಮೇಶ್ವರನು ಅತ್ಯಾದರಣೆಯುಂ ಮಾಡಿ ಸ್ತುತಿಪಾಠಕರು ಸಕಲಸೇವಕರೆಲ್ಲರಂಕಂಡು ಕುಳ್ಳಿರಹೇಳನೇಮಿಸಿ ಬ್ರಹ್ಮ, ವಿಷ್ಣು, ಇಬ್ಬರನ್ನು ತನ್ನ ಎಡಬಲದಲ್ಲಿಕುಳ್ಳಿರಿಶಿಕೊಂಡು ವಿಷ್ಣುವಂ ಕೈವಿಡಿದು ಪರಮೇಶ್ವರನು ಮುಗುಳುನಗೆಯಿಂದ ಯೋಗಕ್ಷೇಮವಂ ಕೇಳಿದ ನದೆಂತೆನೆ—ಎಲೆ ಪುಂಡರೀಕಾಕ್ಷ! ಶ್ರೀವಸ್ಸಲಾಂಛನ ದೈತ್ಯವಂಶ ವನದ ದಾವಾನಲ ಹರಿಯೆ ನಿನಗೆ ಮೂರುಲೋಕವನ್ನುದ

ರಿಪಾಲಿಸುವ ಸಾಮರ್ಥ್ಯವು ಪ್ರಬಲವಾಗಿಇದ್ದೀತೆ ರಣದಲ್ಲಿ ನಿನಗೆ ಇದಿರಾದ ದೈತ್ಯರು ದಾನವರನ್ನು ಜೈಸುತ್ತಾ ಇದ್ದೀಯಲ್ಲ ಬ್ರಾಹ್ಮಣರಾದವರು ನಿನ್ನಮೇಲೆ ಕೋಪಿಸಿಕೊಂಡರೆ ಅವರು ಎನ್ನನ್ನು ನೋಡಿದಂತೆ ನೋಡುತಿದ್ದೆಯಲ್ಲ ಗೋವುಗಳು ಸುಖದಲ್ಲಿಇದ್ದಾವೆ, ಸ್ತ್ರೀಯರು ಪತಿವ್ರತೆಯರಾಗಿದ್ದಾರೆಯೆ, ಯಜ್ಞಗಳು ಸಾಂಗವಾಗಿ ಇದ್ದಾವೆ, ಬ್ರಾಹ್ಮರು ನಿರ್ವಿಘ್ನದಿಂ ವೇದವಪಠಿಸುವರೆ ? ಅರಸುಗಳು ನಿನ್ನಂತೆ ಸುಧರ್ಮದಿಂ ರಾಜ್ಯವನಾಳುವರೆ ? ವರ್ಣಾಶ್ರಮಧರ್ಮಂಗಳು ಚೆನ್ನಾಗಿ ಇರುವವೆ, ಇಂತೆಂದು ವೈಕುಂಠಪತಿಯಾದ ವಿಷ್ಣುವನ್ನು ಯೋಗಕ್ಷೇಮವಂ ಕೇಳಿ ಬ್ರಹ್ಮಗಿಂತೆಂದನು—ಎಲೈ ಬ್ರಹ್ಮನೆ ನಿನ್ನತೇಜಸ್ಸು ಅಭಿವೃದ್ಧಿಯಾಗಿ ಇದ್ಧೀತೆ, ಬ್ರಹ್ಮಾಂಡದೊಳಗೆ ಸತ್ಯವುಂಟಾಗಿರುವದೆ ? ತೀರ್ಥಂಗಳಲ್ಲಿ ನಿರ್ಬಂಧವಿಲ್ಲವಲ್ಲ, ಎಲೆ ಇಂದ್ರಾದಿಗಳಿರಾ ! ನಿಮ್ಮ ಪದವಿಗಳನ್ನು ವಿಷ್ಣುವಿನಬಲದಿಂದ ಪರಿಪಾಲಿಸುತ್ತಿದ್ದೀರೆ, ಇಂತೆಂದು ಪ್ರತ್ಯೇಕಪ್ರತ್ಯೇಕವಾಗಿ ಎಲ್ಲರನ್ನು ಆದರಣೆಯಿಂದಕೇಳಿ ನೀವುಬಂದ ಪ್ರಯೋಜನವೇನು, ಎಂದು ವಿಚಾರವಂಮಾಡಿ ಅವರವರಮನೋರಥಂಗಳನಿತ್ತು ಅವರನಿಜಸ್ಥಾನುಗಳಿಗೆ ಕಳುಹಿಸಿ ಪರಮೇಶ್ವರನು ಉಪ್ಪರಿಗೆಯಂ ಪ್ರವೇಶಿಸಲು, ದೇವತೆಗಳು ಹೋಹಮಾರ್ಗದಲ್ಲಿ ಸತೀದೇವಿಗೆ ತಂದೆಯಾದ ದಕ್ಷನು ತನ್ನಮನಸ್ಸಿನಲ್ಲಿ ಚಿಂತಿಸಿ ಆದೇವಸಭಾಮಧ್ಯದಲ್ಲಿ ಇಂತೆಂದನು—ಅದೆಂತೆಂದರೆ—ಪರಮೇಶ್ವರನು ತನ್ನನ್ನು ಸರ್ವಸಮಾನವಾಗಿ ನೋಡಿದವನಲ್ಲ, ಬಹುಮಾನದಿಂದ ಆದರಣೆಯಂಮಾಡಿದವನಲ್ಲ, ತನ್ನ ಉದಾಸೀನವಂಮಾಡಿದನೆಂದು ಚಿಂತಿಸಿ ಮಂದರಪರ್ವತದಿಂ ಕಲಗದಸಮುದ್ರದಂತೆ ಮನಸ್ಸು ಕಲಕಿ ಕೋಪದಿಂ ದಿಂತೆಂದನು–ಅದೆಂತೆಂದರೆ—ಈ ಪರಮೇಶ್ವರನು ತನ್ನಮಗಳಾದ ಸತೀದೇವಿಯ ಮದುವೆಯಾಗಿ ಪೂಜ್ಯನಾದವನಲ್ಲದೆ ಒಬ್ಬರಿಗೂಪ್ರಿಯವಾದವನಲ್ಲ. ಇವನವಂಶವೇನೋ, ಗೋತ್ರವೇನೋ, ಆಚಾರವೇನೋ, ವಿಷಭಕ್ಷಕನು ಎತ್ತನೇರಿಕೊಂಡುತಿರುಗುವನು, ಇವನು ತಪಸ್ವಿಯಲ್ಲ ತಪಸ್ವಿಯಾದರೆ ತಪಸ್ಸುಯತ್ತ, ಶಸ್ತ್ರಧಾರಣೆಯತ್ತ ಇವನಿಗೆ ಶ್ಮಶಾನವೆ ಮನೆಯಾದಕಾರಣ

ಗೃಹಸ್ಥರಲ್ಲಿ ಯೆಣಿಸತಕ್ಕವನಲ್ಲ, ಬ್ರಹ್ಮಚಾರಿಯೂಅಲ್ಲ, ವಾನಪ್ರಸ್ಥ ನಲ್ಲ, ಚರ್ಮವಧರಿಸಿದವನಾದರೂ ಯತಿಯುಲ್ಲ, ವೇದವಬಲ್ಲವನಾದರೂ ಬ್ರಾಹ್ಮಣನಲ್ಲ, ಶಸ್ತ್ರಾಸ್ತ್ರ ಧಾರಕನಾದ್ದರಿಂದ ಕ್ಷತ್ರಿಯ ನೆಂದನೇ ಸಂಹಾರಕನಾದಕಾರಣಾ ಕ್ಷತ್ರಿಯನು, ಅಲ್ಪದರಿದ್ರನಾದ ಕಾರಣಾ ವೈಶ್ಯ ನಲ್ಲ, ನಾಗಯಜ್ಞೋಪವೀತಂಗಳಂ ಧರಿಸಿರುವ ನಾದ್ದರಿಂಶೂದ್ರನಲ್ಲ, ಅ ದುಕಾರಣಾ ಅವನು ಆರೆಂದು ಕಾಣಬಾರದು, ಲೋಕದಲ್ಲಿ ಅವರವರ ಪ್ರಕೃತಿಗಳಿಂದಲೇ ಉತ್ತಮ, ಮಧ್ಯಮ, ಅಧಮ ಭಾವಂಗಳಂ ತಿಳಿ ಯಬೇಕು, ಅರ್ಧನಾರಿಯಂ ಧರಿಸಿದವನಾಗಿ ಪುರುಷನಲ್ಲ, ಮೀಸೆಗಳುಳ್ಳ ವನಾಗಿಸ್ತ್ರೀಯುಲ್ಲ, ನಪುಂಸಕನೆಂದೆನೆ ಇವನಲಿಂಗ ಸಕಲರೂ ಪೂಜಿ ಸುವರು, ಇವನು ಬಹುಕಾಲದವನಾದ್ದರಿಂದ ಬಾಲಕನಲ್ಲ, ಎಲ್ಲರು ಅ ನಾದಿ ವೃದ್ಧನೆಂದು ಹೇಳುವರಾಗಿ ಪ್ರಾಯುದವನಲ್ಲ, ಜರಾಮರಣವಿಲ್ಲದ ವನಾಗಿ ವೃದ್ಧನಲ್ಲ, ಪ್ರಳಯಂಗಳಲ್ಲಿ ಬ್ರಹ್ಮಾದಿಗಳ ಸಂಹಾರಮಾಡಿ ಯೂ ಪಾಪಿಯುಲ್ಲ, ಕೋಪದಿಂ ಬ್ರಹ್ಮನ ಶಿರವಛೇದಿಶಿದವನಾದಕಾರಣ ಪುಣ್ಯಾತ್ಮನಲ್ಲ, ದಿಗಂಬರನಾಗಿ ಅಸ್ಥಿಮಾಲೆಯಂಧರಿಸಿದವನಾಗಿ ಶುದ್ಧನ ಲ್ಲ, ಹಲವು ಬಗೆಯುಲ್ಲಿ ಹಲಬುಗಳೇನುಯಿದ್ದೀತು, ಇವನ ಚೇಷ್ಟೆ ಆ ರಿಗೂ ಕಾಣಬಾರದು, ಈ ಜಟಾಧಾರಿಯಾದ ಇವನ ಧಿಟ್ಟತನವೆಂಥಾದ್ದೋ ಅತ್ಯಾಶ್ಚರ್ಯವೂ ಜಗತಿನಲ್ಲಿ ಮಾವನೂ, ತಂದೆಯೂ, ಸುರಭ್ರೂ, ಸಿರಿ ಅಂಥಾ ತನ್ನಂ ನೋಡಿಯೇಸಿಂಹಾಸನವ ನಿಳಿಸಿದವನಲ್ಲ, ಲೋಕದಲ್ಲಿ ತಂ ದೆತಾಯಿಗಳಿಲ್ಲದೆ ನಿರ್ಗುಣನಾಗಿ ಕರ್ಮಭ್ರಷ್ಟನಾಗಿ ತಪಸ್ವಿ ಮಾನುಷಂ ದಂತೆ ಸ್ವಚ್ಛಾರವಮಾಡುತ್ತಾ ಒಬ್ಬರೂ ವಹೆಯುರಿಲ್ಲದೆ ತಾವೆ ಹೊರಗ ಳೆಂದು ಹೇಳಿಕೊಳ್ಳುತ್ತಾ ಬಂದಾ ಕಂಡರು ಕಾಸು ಪಡೆಯುವವನರಾಗಿ ನಂ ದನ್ನ ರೆಸಿಸಿ ಕೊಂಬಂಥಾ ಅಳಿಯುಂದಿರೆನಿಸಿಕೊಳ್ಳುವರು ಮಹಾಶರ್ವಿಗ ಳು ಅಂಥಾ ಭ್ರಷ್ಟರ ಕೊಂಡೂನದುಗೇಸ್ತು ಎಲೆ ದೇವಕನೂಳರಾ ? ನಾನು ಯಜ್ಞವ ಪ್ರಸಾದಭೋಕ್ತ, ಯಜ್ಞಸಂಭಾರಗಳ ಕೊಂಡು, ಬನ್ನಿರೆಂದು ದುಂದೇವನಮ್ರಹಕ್ಕೆ ನಿಯೋಗಿಸಿಕೊಳ್ಳುತ್ತಾನು ಕ್ಷೇತ್ರದ್ವೇಷಕ್ಕೆ ಹೋಗಿ ಅಲ್ಲಿ ಕ್ಷೀರಾಬ್ಧಿಶಯನನಾದ ಚಕ್ರಪಾಣಿಯಾದ ಪರಮಪುರುಷನಾದ

ಶ್ರೀಮಹಾವಿಷ್ಣುವಂ ಪ್ರಾರ್ಥನೆಯಂಮಾಡಿ, ಯಜ್ಞಾವದಕ್ಷಿಣೆ ವ್ಯಾಲೆ ಪಾರುಪತ್ಯವಂ ವಿಚಾರವಂ ಮಾಡುವ ಹಾಗೆ ಅಪ್ಪಣೆಯಂ ತೆಕ್ಕೊಂಡು ಋಷಿಗಳನ್ನು ಋತ್ವಿಕ್ಕುಗಳಂ ಕೂಡಿಕೊಂಡು ಮಹಾ ಯಜ್ಞವ ಉಪಕ್ರಮಿಸಿದನು, ಆ ಸಮಯದಲ್ಲಿ ಬ್ರಹ್ಮನು ಯಜ್ಞಕ್ಕೆ ಪರಮೇಶ್ವರನು ಬಾರದಿರೆ ನೋಡಿ ಒಂದು ನೆವದಿಂ ತನ್ನ ಲೋಕಕ್ಕೆ ಹೋದನು, ಸ್ವರ್ಗಮರ್ತ್ಯಪಾತಾಳ ಮೊದಲಾದ ಸಕಲ ಲೋಕದವರೂ, ಉಡುಗೆರೆ ಉಲುಪೆಗಳಂಕೊಂಡು ದಕ್ಷನಯಜ್ಞಕ್ಕೆ ಬರಲುನೋಡಿ ಅವರೊಳಗೆ ಈಶ್ವರಬಾರದಿರಲು ದಕ್ಷನಮನದ ಪರೀಕ್ಷೆಯಂ ನೋಡಬೇಕಾಗಿ ದಧೀಚಿಮುನಿಇಂತೆಂದನು—ಎಲೆದಕ್ಷ! ನಿನ್ನಂಥಾಸಮರ್ಥನಕಾಣೆನು, ಯಜ್ಞಸಂಭಾರಗಳ ಬಹಳವಾಗಿ ಸಂಪಾದಿಸಿದೆ, ಇಂಥಾಶಕ್ತಿಯುಳ್ಳಬಂತು, ಯಜ್ಞವನ್ನು ದರಿದ್ರನಾದವಮಾಡಬಾರದು ನಿನ್ನಂತೆ ಐಶ್ವರ್ಯವಂತನೆಮಾಡಬೇಕು, ಅದೆಂತೆನೆ — ಅಗ್ನಿಯುತನ್ನಿಂತಾನೆಬಂದು ಕುಂಡದಲ್ಲಿ ಪ್ರಜ್ವಲಿಸುತ್ತಾಇದ್ದಾನು, ಇಂದ್ರಾದಿದೇವತೆಗಳುಬಂದು ಪ್ರತ್ಯಕ್ಷವಾಗಿ ಹವಿರ್ಭಾಗ ಆಹುತಿಯಂ ಕೊಳ್ಳುತ್ತಾಇದ್ದಾರು, ಸಕಲಮಂತ್ರಗಳು ಸಾಕ್ಷಾತ್ಕಾರವಾಗಿಬಂದುಇದ್ದಾವು, ಪರಮಪುರುಷನಾಗಿ ಯಜ್ಞಪುರುಷನಾದ ವಿಷ್ಣುವೆಪ್ರತ್ಯಕ್ಷವಾಗಿಬಂದು ಇದ್ದಾನು, ದೇವಾಚಾರ್ಯನೆ ಆಚಾರ್ಯನು, ಅತಿಶ್ರೇಷ್ಠನಾದ ಭೃಗುಮುನೀಶ್ವರನೆ ಬ್ರಹ್ಮತ್ವವನ್ನುವಹಿಸಿ ಇದ್ದಾನು, ಈತನು ಪೂಷನು, ಭಗನು, ಈಕೆ ಶಾರದಾದೇವಿ, ಇವರೇಳುಮಂದಿಯೂ ದಿಕ್ಪಾಲಕರು, ಶತರೂಪೆಎಂಬ ನಿನ್ನಸ್ತ್ರೀಯು ಈಕೆಸಹಿತ ದೀಕ್ಷಿತನಾಗಿದ್ದೀಯೆ! ನಿನ್ನಅಳಿಯನಾದ ಧರ್ಮನು ತನ್ನಹತ್ತುಮಂದಿ ಸ್ತ್ರೀಯರುಸಹಾ ಯಜ್ಞಪ್ರಯೋಜನವಂ ಮಾಡುತ್ತಾಇದ್ದಾರು, ನಿನ್ನಅಳಿಯಂದಿರೊಳು ಅತಿಪಾಷ್ಟೀಕನಾದ ಚಂದ್ರನು ತನ್ನ ಇಪ್ಪತ್ತೇಳುಮಂದಿ ಸ್ತ್ರೀಯರುಸಹಾ ಸಮಿತ್ತು ದರ್ಭೆ ಮೊದಲಾದ ಮಹಾದ್ರವ್ಯಮಂಜೋಡಿಸುತ್ತಾ ಇದ್ದಾರು, ಆಚಂದ್ರನು ಪೂರ್ವದಲ್ಲಿ ರಾಜಸೂಯಯಾಗವಂಮಾಡಿ ದಕ್ಷಿಣೆಗಾಗಿ ಬ್ರಾಹ್ಮಣರಿಗೆ ಮೂರುಲೋಕವಂ ದಾನವನಿತ್ತು ಮರೀಚಿಪುತ್ರನಾದ ನಿನ್ನಅಳಿಯ ಕಶ್ಯಪ

ನು ತನ್ನಹದಿಮೂರುಮಂದಿ ಸ್ತ್ರೀಯರುಸಹಾ ಸಹಾಯಮಂಮಾಡು ತ್ತಿದ್ದಾನು, ಕಾಮಧೇನುವು ಪಂಚಾಮೃತಮೊದಲಾದ ದ್ರವ್ಯಗಳಕೊ ಡುತ್ತಿದ್ದೀತು, ವಿಶ್ವಕರ್ಮನು ಯಜ್ಞಶಾಲೆಪಾತ್ರೆಗಳ ನಿರ್ಮಿಸಿಕೊ ಡುತ್ತಿದ್ದಾನು, ಅಷ್ಟವಸುಗಳು ವಸ್ತ್ರಾಭರಣಗಳ ನೀವುತ್ತಿದ್ದಾರು ಲಕ್ಷ್ಮೀದೇವಿಯು ಬಂದಮುತ್ತೈದೆಯರಿಗೆ ಅಲಂಕಾರವಮಾಡುತ್ತಿದ್ದಳು ಎಲೆದಕ್ಷನೆ! ಇವೆಲ್ಲವು ಶುಭಕರವಾಗಿಇದ್ದೀತು, ಈಶ್ವರನೊಬ್ಬನು ಬಾರ ದೆ ಇರಲಾಗಿ ನೀನುಮಾಡಿದ ಯಜ್ಞವು ಅಲಂಕೃತವಾಗಿ ಜೀವನವಿಲ್ಲದ ಶರೀರದಂತೆಯೂ ಶ್ಮಶಾನದಂತೆಯು ತೋರುತ್ತಿದ್ದೀತು, ಎಂದು ನುಡಿದ ದಧೀಚಿಯವಾಕ್ಯಮಂ ಕೇಳಿ ದಕ್ಷನು ಆಜ್ಯಾಹುತಿಯಂ ಕೊಂಡ ಅಗ್ನಿಯಂ ತೆ ಕೋಪದಿಂ ದುರಿದೆದ್ದನು, ಮೊದಲು ದಧೀಚಿಯ ಸ್ತುತಿಯಿಂದ ಸಂ ತೋಷಪಟ್ಟು ಮತ್ತಾತನವಾಕ್ಯಮಂ ಕೇಳಿ ಕೋಪದಿಂ ಶರೀರಮಂ ಕಂಪಿಸಿ ದಧೀಚಿಮುನಿಯ ವದನವಂ ನೋಡಿ ಇಂತೆಂದನು, ಅದೆಂತೆನೆ— ನೀನು ಬ್ರಾಹ್ಮಣನಾಗಿ ಇದ್ದವನ ನಾನುಮಾಡುವದೇನು, ಅದಲ್ಲದೆ ಯ ಜ್ಞದೀಕ್ಷೆಯಂ ತೆಕ್ಕೊಂಡುಇದ್ದೇನೆ, ನಿನ್ನ ಶಿಕ್ಷಿಸುವದಕ್ಕೆ ಮತ್ತೊಬ್ಬ ನಿಲ್ಲ, ಅಹಿತನಾದ ನಿನ್ನ ಇಲ್ಲಿಗೆ ಕರದವರಾರು, ಸರ್ವಮಂಗಳಸ್ವರೂಪ ನಾಗಿ ಲಕ್ಷ್ಮೀರಮಣನಾದ ಶ್ರೀಹರಿಬಂದು ಇರಲು ಈ ಯಜ್ಞವು ಎಂತು ಶ್ಮಶಾನವಾಯಿತು, ಮೂವತ್ತುಮೂರುಕೋಟಿ ದೇವತೆಗಳಿಗೆ ಅ ರಸಾದ ಶತಯಜ್ಞವಂ ಮಾಡಿದಂಥ ವಜ್ರಧರನಾದ ದೇವೇಂದ್ರನುಬಂ ದುಇರಲು, ನೀನು ಯಜ್ಞವಂ ಶ್ಮಶಾನಕ್ಕೆ ಸರಿಮಾಡಿದೆ, ಧರ್ಮಾರ್ಥ ಮರ್ಮಂಗಳಂ ಬಲ್ಲಂಥಾ ಯಮನು ಬಂದಿರಲು ವಿಷ್ಣುಸ್ವರೂಪನಾದ ಅ ಗ್ನಿಬಂದು ಪ್ರತ್ಯಕ್ಷವಾಗಿಇರಲು ಅಮಂಗಳವೆಂತಾದೀತು, ಬೃಹಸ್ಪತಿ ಯೆ ಆಚಾರ್ಯನು,ವಸಿಷ್ಠ ಮೊದಲಾದ ಋಷಿಗಳೆ ಋತ್ವಿಕ್ಕುಗಳು ಆಗಿಯಿ ರಲು, ಈಯಜ್ಞವೂಯೆಂತು ಅಶುಭವಾಯಿತು ಎಂದು ನುಡಿದ ದಕ್ಷನ ವಾಕ್ಯಮಂ ಕೇಳಿ ಜ್ಞಾನಿಯಾದಂಥಾ ದಧೀಚಿಇಂತೆಂದನು,ಎಲೆದಕ್ಷನೆ! ಈ ಸಾಕ್ಷಾತ್ಕಾರವಾದ ವಿಷ್ಣುವು ಪರಮೇಶ್ವರನ ಎಡದಭಾಗದಲ್ಲಿ ಆದನು, ಬ್ರಹ್ಮನು ಬಲದಭಾಗದಲ್ಲಿ ಆದನು, ಎಂದು ವೇದಂಗಳು ಹೇಳುತ್ತಿದ್ದಾವು

ದೇವೇಂದ್ರನು ನೂರುಯಜ್ಞವ ಮಾಡಿದ್ದರೂ ವಜ್ರಪಾಣಿಯಾದರೂ ದೂ
ರ್ವಾಸನಶಾಪದಿಂದ ಐಶ್ವರ್ಯವ ಹೋಗಲಾಡಿಸಿಕೊಂಡು ಆಮೇಲೆ ಪರಮೇ
ಶ್ವರನ ಪೂಜಿಸಿ ಮೆಚ್ಚಿಸಿ ಅಮರಾವತಿಯಂ ಪಡೆದನು, ನಿನ್ನಯಜ್ಞವ
ರಕ್ಷಿಸುವ ಯಮನ ಸಾಹಸವ ಎಲ್ಲರೂಬಲ್ಲರು. ಕುಬೇರನು ಈಶ್ವರಂಗೆ
ಮಿತ್ರನು, ಅಗ್ನಿ ಆತನ ನೇತ್ರ,ಚಂದ್ರನು,ಈಬೃಹಸ್ಪತಿಯ ಸ್ತ್ರೀಯ ಅಪ
ಹರಿಸಲು ಆಸ್ತ್ರೀಯುತಿರುಗಿ ಬೃಹಸ್ಪತಿಗೆ ಬಿಡಿಸಿದವರಾರು?ಪರಮೇಶ್ವರ
ನೇ!ಪರಬ್ರಹ್ಮನೆಂದುಭಜಿಸುವ ವಶಿಷ್ಠಮೊದಲಾದ ಮುನಿಗಳೇ ಋತ್ವಿಕ್ಕು
ಗಳು, ಬ್ರಾಹ್ಮಣನಾದ ಎನ್ನಮಾತಂ ಕೇಳಿದರೆ ಸಕಲರಿಗೂ ಪಡೆಯನಾ
ಗಿ ಕ್ರತುಗಳಫಲವನೀವ ಪರಮೇಶ್ವರನ ಬಿಜಯಂಗೈಸಿ ತಾ ಆತನ ಪೂ
ರತಾಗಿ ಮಾಡಿದ ಯಜ್ಞವೂ ಮಾಡಿದುದಲ್ಲ,ಸಕಲ ಕರ್ಮಗಳಿಗೂ ಸಾಕ್ಷಿ
ಯಾದ ಮಹಾದೇವನು ಬಂದುಇರಲು ನಿನಗೆ ಸಕಲ ಮನೋರಥಂಗಳು
ಸಿದ್ಧಿಯಾದೀತು, ಆಪರಮೇಶ್ವರನು ಬಾರದಿರಲು ಅರ್ಥಹೀನವಾದ ವಾಕ್ಯ
ದಂತೆ ಪತಿಇಲ್ಲದಸತಿಯಂತೆ ಗಂಗೆಇಲ್ಲದದೇಶದಂತೆ ಧರ್ಮವಿಲ್ಲದಶರೀ
ರದಂತೆ, ಮಕ್ಕಳಿಲ್ಲದ ದಾನವಿಲ್ಲದಂತೆ ಸುಮಂತ್ರಿಇಲ್ಲದ ಅರಸಿನಂತೆ
ವೇದವಿಲ್ಲದ ಬ್ರಾಹ್ಮಣನಂತೆ, ಸ್ತ್ರೀಯಿಲ್ಲದ ಭೋಗದಂತೆ, ದರ್ಭೆಯ
ಪವಿತ್ರವಿಲ್ಲದ ಸಂಧ್ಯಾವಂದನೆಯಂತೆ, ಎಳ್ಳುಇಲ್ಲದ ತರ್ಪಣದಂತೆ, ಆಜ್ಯ
ವಿಲ್ಲದ ಹೋಮದಂತೆ, ಪರಮೇಶ್ವರನಿಲ್ಲದ ಕ್ರಿಯೆಗಳುವ್ಯರ್ಥ, ಹೀಗೆಂ
ದು ನುಡಿದ ದಧೀಚಿ ಋಷಿಯ ವಾಕ್ಯಮಂ ಕೇಳಿ ಪರಮೇಶ್ವರನ ಮಾ
ಯೆಯಿಂ ಮೋಹಿತನಾದ ದಕ್ಷನು ಕೋಪದಿಂ ಎಲೆ ದಧೀಚಿ! ಎನ್ನ ಯಜ್ಞ
ದಲ್ಲಿ ನಿನಗೇನು ಚಿಂತೆ, ಯಜ್ಞಾದಿಕರ್ಮಗಳು ಚನ್ನಾಗಿ ಮಾಡಲು ತಾ
ನೇ ಫಲಿಸುವವು, ಅದು ಆಶ್ಚರ್ಯವಲ್ಲ,ಲೋಕಂಗಳಲ್ಲಿ ಸಕಲ ಬೀಜಂಗಳು ತ
ಮ್ಮತಮ್ಮ ಕಾಲಂಗಳಲ್ಲಿ ಬಿತ್ತಲು ಮೊಳೆದೋರಿ ಸಕಲ ಫಲಪುಷ್ಪಂಗ
ಳಂ ಕೊಡುತ್ತಿಹವಾಗಿ ಅಕಾಲದಲ್ಲಿ ಫಲವ ನೀವುದು, ಅದು ಕಾರಣಅಮಂ
ಗಳನಾದ ಈಶ್ವರನಿಂದ ಇಲ್ಲಿ ಆವಪ್ರಯೋಜನವೇನು, ಇದ್ದೀತು ಹೀಗೆಂ
ದು ದಕ್ಷನು ನುಡಿಯಲು ದಧೀಚಿಇಂತೆಂದನು—ಎಲೆ ದಕ್ಷನೆ ಕರ್ಮಫಲ
ದಿಂ ಆವಕಾರ್ಯವು ಆಗುವದೋ ಹೋಗುವದು ಎಂದೆಲ್ಲಾ ಹಾಗ್ಯೆಹುದ

ಲ್ಲಾ ಕರ್ಮಗಳು ಸಾಂಗವಾಗಲೂ ಈಶ್ವರನು ಪ್ರತಿಕೂಲವಾಗೆ ಕೆಡವು
ದು, ಈಶ್ವರಾನುಕೂಲದಿಂ ಕರ್ಮಸಾಂಗವಿಲ್ಲದಿದ್ದರು ಫಲಿತವಹುದು, ಅದು
ಕಾರಣ ಈಶ್ವರನೋರ್ವನೇ ಸ್ವತಂತ್ರನಲ್ಲದೆ ಮಿಕ್ಕಾದವರು ಸ್ವತಂತ್ರರಲ್ಲ,
ಈಶ್ವರನು ಸಾಮಾನ್ಯವಾದ ಸಾಕ್ಷಿಪುರುಷನಂತೆ ಸಾಕ್ಷಿಯಾಗಿಫಲವನ್ನು
ಭೂಮಿ ಉದಕರೂಪದಿಂ ಬೀಜಗಳನನುವರ್ತಿಸಿ ಅಯಾಕಾಲಂಗಳಲ್ಲಿ
ಅಂಕುರವಾದ ಫಲವಕೊಡುವನು, ಈಶ್ವರನೆಸರಿ, ಮಹಾಮಂಗಳಸ್ವರೂ
ಪಿಯಾದ ಪರಮೇಶ್ವರಗೆ ಇಲ್ಲಿ ಏನುಪ್ರಯೋಜನವೆಂದೆಯಲ್ಲ ಅದುಸತ್ಯ,
ಶಿವನಿಗೂ ಶಿವಭಕ್ತರಾದ ಮಹಾತ್ಮರಿಗೂ ನಿನ್ನ ಯಜ್ಞದಲ್ಲಿ ಏನುಪ್ರಯೋ
ಜನವೆಂದುನುಡಿದ ದಧೀಚಿಯವಾಕ್ಯವಂಕೇಳಿ ದಕ್ಷನು ಪ್ರಳಯಕಾಲದ
ಯಮನಂತೆ ಕೋಪಿಸಿಕೊಂಡು ಇಂತೆಂದನು, ಇಲ್ಲಿಶಿವಭಕ್ತರಾರುಂಟೋ
ಅವರು ತನ್ನಸಮೀಪದಲ್ಲಿ ಇರಬ್ಯಾಡ, ಅವರಮುಖವಂ ನೋಡಲಾಗದು, ಅ
ವರಿಂದ ಎನ್ನಯಜ್ಞವು ಕೆಡುವುದು ಎಂದುನುಡಿಯಲು, ಆ ವಾಕ್ಯವಂಕೇ
ಳಿ ದಧೀಚಿಕೋಪಾರೂಢನಾಗಿ ಇಂತೆಂದನು—ಕೇಳೈದಕ್ಷನೆ ? ಎನ್ನಪ್ಪೊ
ರಡಿಸಿದರೆ ನೀನೂ ಇವರೆಲ್ಲರೂ ಸಕಲಮಂಗಳಗಳಿಗು ದೂರವಾದೀರಿ, ಎ
ಲೇದಕ್ಷನೆ ! ಸಕಲಲೋಕ ಶಿಕ್ಷಕನಾದ ಮಹೇಶ್ವರನ ಕೋಪದಿಂ ಪುಟ್ಟಿ
ದಶಿಡಿಲು ನಿನ್ನತಲೆಯಮ್ಮೆಲೆಬೀಳುವದೆಂದು ಶಪಿಸಿ ದಧೀಚಿ, ದೂರ್ವಾಸ, ಉ
ದಂಕ, ಚ್ಯವನ, ಉಪಮನ್ಯು, ಮರೀಚಿ, ಉದ್ದಾಲಕ, ಮಾಂಡವ್ಯ
ವಾಮದೇವ, ಗಾಲವ, ಗಾರ್ಗ್ಯ, ಗೌತಮ, ಇವರುಮೊದಲಾದ ಶಿವತ
ತ್ವಜ್ಞರು ಆ ಯಜ್ಞಶಾಲೆಯಿಂ ಪೊರಮಟ್ಟು ದಿವ್ಯಜ್ಞಾನವಂ ಬ
ಲ್ಲವರಾದ್ದರಿಂದ ಮುಂದೆಬಾಹಂಥ ಶುಭಾಶುಭಂಗಳಂ ಅರಿದು ತಮ್ಮ
ತಮ್ಮನೆಲೆಗಳಿಗೆ ಹೋದರು, ಅನಂತರದಲ್ಲಿ ದಕ್ಷನು ಆನಂದದಿಂಯಜ್ಞ
ವಸಾಧಿಶಿದನು, ಅವರಸಂಗಡಹೋಗದೆ ನಿಂತವರ್ಗೆ ಇಮ್ಮಡಿ ಮುಂದ
ಡಿ ಧನವನಿತ್ತನು, ಅಳಿಯಂದಿರಿಗೆ ಬಹಳವುಡುಗೆರೆ ಉತ್ಸಹಂಗಳನಿ
ತ್ತು ತನ್ನಹೆಣ್ಣುಮಕ್ಕಳಿಗು ಋಷಿಪತ್ನಿಯರಿಗು ಮೊದಲಾಗಿ ಪಟ್ಟ
ಣದಲ್ಲಿರ್ದ ಬ್ರಾಹ್ಮಣಮುತ್ತೈದೆಯರಿಗೆ ಇವರೆಲ್ಲರಿಗು ಅನೇಕಭೂಷ
ಣವಸ್ತ್ರಂಗಳಿಂದ ತೃಪ್ತಿಪಡಿಶಿ, ಬ್ರಾಹ್ಮಣರು ಆಶೀರ್ವಾದಂಗಳಿಂದ

ಮುಂತಾಗ್ಯಕ್ಷತೆಯಂ ಕೊಡಲು, ಆವ್ಯಾನಿಯಿಂದ ಆಕಾಶವು ಶಬ್ದಮಯವಾಯಿತು, ಆಹುತಿಗಳಿಂದ ಅಗ್ನಿಗೆ ಅಜೀರ್ಣವಾಯಿತು, ಹವಿಸ್ಸುಗಳಿಂದ ವಿಕ್ಕುಗಳಿಂದ ಸಿಸ್ತ್ರೀಯರು ತೃಪ್ತರಾದರು, ದೇವತೆಗಳ ಹೊಟ್ಟೆ ಬೆಳೆದವು, ಸಾವಿರಸಂಖ್ಯೆ ಅನ್ನದರಾಶಿಗಳು, ಹಾಲು, ಮೊಸರು, ಕಾಲುವೆಗಳಾಗಿ ಹರಿದವು, ನಾನಾವಿಧ ವಸ್ತ್ರಗಳ ರಾಶಿಗಳು, ಸುವರ್ಣ, ರಜತ, ನವರತ್ನ, ಮೊದಲಾದರಾಶಿಗಳು ಈ ವಸ್ತುಗಳಿಂದ ಯಜ್ಞಭೂಮಿಯು ಕನಕಮಯವಾಯಿತು, ಆಯಜ್ಞದಲ್ಲಿ ಪ್ರಾರ್ಥಿಕವರೂ ದಾನವ ಬೇಡುವರಿಲ್ಲ, ಸಕಲವಾದದೇವತೆಗಳ ಬ್ರಾಹ್ಮರಧ್ವನಿಗಳು ಗಗನವಂ ಮುಟ್ಟಿದವು, ಗಂಧರ್ವರು, ವಿದ್ಯಾಧರರು, ಮೊದಲಾದವರು ಪರಮಾನಂದವನ್ನೈದಿದರು, ಈರೀತಿಯಲ್ಲಿ ದಕ್ಷನು ಯಜ್ಞವಮಾಡುತ್ತಿರಲು ನೋಡಿ ನಾರದರು ಕೈಲಾಸಕ್ಕೆಹೋದರು ಎಂಬ ವೃತ್ತಾಂತವಂ ಕುಮಾರಸ್ವಾಮಿ ಅಗಸ್ತ್ಯಋಷಿಗೆ ನಿರೂಪಿಸಿದರೆಂದು ವ್ಯಾಸರು ತನಗೆ ಬುದ್ಧಿಗಲಿಸಿದರೆಂಬದಾಗಿ ಸೂತಪುರಾಣೀಕನು ಶೌನಕಾದಿಋಷಿಗಳಿಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ. * * * * * * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಾಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ದಕ್ಷಯಜ್ಞದ ಪ್ರಾರಂಭದ ವೃತ್ತಾಂತವುಂ ಪೇಳ್ದ ಎಂಭತ್ತೇಳನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * * * * * * * * *

ಎಂಭತ್ತೆಂಟನೇ ಅಧ್ಯಾಯದಲ್ಲಿ—ಸತೀದೇವಿಯು ದೇಹತ್ಯಾಗವಾದ ವೃತ್ತಾಂತ.

ಶ್ರೀವಿಶ್ವೇಶ್ವರಾಯನಮಃ ‖ ‖ ಅನಂತರದಲ್ಲಿ ಅಗಸ್ತ್ಯನಿಂತೆಂದನು—ಎಲೆಕುಮಾರಸ್ವಾಮಿ ! ನಾರದನು ಕೈಲಾಸಕ್ಕೆಹೋಗಿ ಏನಮಾಡಿದನೋ ಆ ವೃತ್ತಾಂತವಂ ನಿರೂಪಿಸಬೇಕೆನಲು, ಕುಮಾರಸ್ವಾಮಿ ಇಂತೆಂದನು—ಕೇಳೈ ಅಗಸ್ತ್ಯನೆ ! ನಾರದನು ಗಗನಮಾರ್ಗದಿಂದ ಕೈ

ಳಾಸಕ್ಕೆ ಹೋಗಿ ಪಾರ್ವತೀಪರಮೇಶ್ವರರಿಗೆ ಸಮಸ್ಕಾರವಂ ಮಾಡಿ ಅವರುನೇಮಿಸಿದಪೀಠದಲ್ಲಿ ಕುಳ್ಳಿರ್ದು ಸ್ತೋತ್ರವನಾಡುತ್ತಿರಲಾಕಾಳಿ ತಾವು ಬಂದ ಪ್ರಯೋಜನವಂ ವಿಚಾರಿಸದೆ ಇರಲು ನಾರದನು ಶೀಘ್ರದಿಂ ಪಕ್ಷ್ಯವಾಗ ವೃತ್ತಾಂತವಂ ತಿಳುಹಿಕೊಂಬುವನಾಗಿ ಇಂತೆಂದನು— ಎಲೆಸ್ವಾಮಿ ! ಹನ್ನೆರಡುಮಾಸಂಗಳು ಹಾಸಂಗಿ ಶುಕ್ಲಪಕ್ಷ, ಕೃಷ್ಣಪಕ್ಷಗಳ ತಿಥಿಗಳು, ಕರಿಮಬಿಳಿದಾದ ಪಗಡೆಕಾಯಿಗಳು, ಪಕ್ಷ ಇಪ್ಪತ್ತುನಾಲ್ಕು, ಭಾಗಗಳು ಉತ್ತರಾಯಣ ದಕ್ಷಿಣಾಯನವೆರಡು ಅದ್ವಂತಗಳು, ದೇವಿಯರ ಗೆಲವೆಸೃಷ್ಟಿ, ನಿಮ್ಮ ಗೆಲವೆಸಂಹಾರ, ನಿಮ್ಮಿಬ್ಬರ ಕ್ರೀಡೆಯೆಸಂಸ್ಥಿತಿ, ಎಲೆದೇವಿ ! ನೀನು ಈಶ್ವರನ ಗೆಲುವದಕ್ಕಾಗದು, ಪರಮೇಶ್ವರನು ನಿನ್ನ ಜಯಿಸಬಲ್ಲನು, ಈಗನಾನು ಒಂದುಪ್ರಯೋಜನವಕುರಿತುಬಂದೆನು, ಅದಂ ಬಿನ್ನಹವಂಮಾಡುತ್ತಾ ಇದ್ದೇನೆ ! ಕೇಳಚಿತ್ತೈಸಿ, ಈಶ್ವರನು ಸರ್ವಜ್ಞನಾಗಿಯು ಬಲ್ಲವನಲ್ಲ, ಅತಗೆ ಮಾನಾಪಮಾನಗಳು ಸಮಾನ, ಲೀಲೆಯಿಂ ಗುಣಮೂರ್ತಿಯಲ್ಲದೆ ವಿಚಾರಮಾಡಲು ನಿರ್ಗುಣನು, ತಾನುಕರ್ಮಗಳ ಮಾಡಿದರು ಕರ್ಮಬಂಧಕನಲ್ಲ, ತಾನು ಮಧ್ಯಸ್ಥನಾಗಿಯು ಅವಕ್ಕೆ ಒಳಗಾಗುವನಲ್ಲ, ಶತ್ರುಮಿತ್ರರುಗಳಲ್ಲಿ ಸಮದೃಷ್ಟಿಯುಳ್ಳವನು, ಈಶ್ವರಂಗೆ ನೀನೀಗಬಲ, ಈತ ನಿನ್ನಿಂದ ಪೂಜ್ಯನು, ಸಕಲ ಲೋಕಂಗಳಿಗು ತಾಯಿತಂದೆಗಳಾಗಿ ಇದ್ದ ನಿಮ್ಮಿಬ್ಬರೊಳು ನೀನೇ ಅಧಿಕವಾದವಳು, ನಿನ್ನಿಂದ ಬ್ರಹ್ಮ, ವಿಷ್ಣು, ಮೊದಲಾದವರು ಪುಟ್ಟಿದರು, ನಿನ್ನಿಂದಮೋಹಿತನಾಗಿ ತನ್ನ ನಿಜಸ್ವರೂಪವ ಸರಿಯನು, ಲೋಕದಲ್ಲಿ ಪತಿವ್ರತೆಯರಾದ ಸ್ತ್ರೀಯರು ಪತಿಯ ಅಧೀನರಾಗಿ ಇಹರು, ಈ ಪರಮೇಶ್ವರನು ನಿನ್ನ ಅಧೀನವಾಗಿ ಇದ್ದಾನು, ಅದು ಆಶ್ಚರ್ಯ, ಈ ವಿಚಾರ ನನಗೇಕೆ ? ಅದಂತಿರಲಿ, ನಾನು ಬಂದಪ್ರಯೋಜನವ ಬಿನ್ನಹವಂಮಾಡುತ್ತಾ ಇದ್ದೇನೆ ! ಅದಾವುದೆನೆ—ಹರಿದ್ವಾರದಲ್ಲಿಹ ನೀಲಗಿರಿಯ ಸಮೀಪದಲ್ಲಿ ಒಂದು ಅಪೂರ್ವವಕಂಡು ನೀವು ಇದ್ದೆಡೆಗೆ ಬಂದೆನು, ಅದು ನನಗೆ ಆಶ್ಚರ್ಯವಾಗಿ ಮನಸ್ಸಿಗೆ ಚಿಬ್ಬ[illegible]ನಾಗಿಯು ತೋರುತ್ತಿದ್ದೆ ಲೋಕಂಗಳಲ್ಲಿ ನೀನೇನು ಆಶ್ಚರ್ಯವಾದ ಪ್ರಯೋಜನವುಂಟೋ ? ಅದೆಲ್ಲವನ್ನು

ದಕ್ಷನಯಜ್ಞಶಾಲೆಯಲ್ಲಿ ಕಂಡೆನು, ಸಕಲಲೋಕದವರು ಸರ್ವಾಲಂಕಾರ ಭೂಷಿತರಾಗಿ ಆನಂದಯುಕ್ತರಾಗಿ ತಮ್ಮ ತಮ್ಮ ಗೃಹಕೃತ್ಯಂಗಳಂ ಮರೆದು ತಮ್ಮ ಸ್ತ್ರೀಯರು ಪುತ್ರ ಮಿತ್ರಕಳತ್ರಾದಿಗಳುಸಹಾ ಬಂದು ಸಂತೋಷದಲ್ಲಿ ಇದ್ದಾರು, ಆ ಯಜ್ಞಶಾಲೆಯಲ್ಲಿ ಈಜಗತ್ತಿನ ಉತ್ಪತ್ತಿ ಸ್ಥಿತಿ ಲಯಂಗಳಿಗೆ ಕಾರಣರಾದ ನಿಮ್ಮಿಬ್ಬರನ್ನೇ ಕಾಣದೆ ಎನ್ನ ಮನಸ್ಸಿಗೆ ಮಹಾವ್ಯಥೆಯಾಯಿತು, ಅಲ್ಲಿ ಆದ ವೃತ್ತಾಂತವಂ ವಿಷ್ಣು ಬ್ರಹ್ಮ ಮೊದಲಾದವರು ಕೇಳಲಾರದೆ ತಮ್ಮ ತಮ್ಮ ಲೋಕಗಳಿಗೆಹೋದರು, ಸಪ್ತಋಷಿಗಳು ನೋಡುತ್ತಿರಲು, ದಧೀಚಿಯು ದಕ್ಷನ ಜರಿದು ಅಲ್ಲಿ ಇರದೆ ಹೋದನು, ನಾನು ಆ ದಕ್ಷನಾಡುವ ನಿಂದ್ಯವಂ ಕೇಳಲಾರದೆ ಕಿವಿಯಂ ಮುಚ್ಚಿಕೊಂಡೆನು, ದೂರ್ವಾಸ ಮೊದಲಾದ ಕೆಲವುಋಷಿಗಳು ನಿಮ್ಮ ದೂಷಣೆಯಂ ಕೇಳಲಾರದೆ ದಧೀಚಿಯ ಸಂಗಡಲೆ ಹೊರಟುಹೋದರು, ಮಿಕ್ಕಾದ ಭೃಗು ಮೊದಲಾದವರು ಸಂತೋಷದಿಂ ಯಜ್ಞವ ಪ್ರವರ್ತಿಸುತ್ತಾ ಇದ್ದಾರು, ತಾನು ಅದಂನೋಡಲಾರದೆ ಇಲ್ಲಿಗೆಬಂದೆನು, ಎಲೆದೇವಿ! ನಿಮ್ಮ ಒಡಹುಟ್ಟಿದವರೆಲ್ಲರು ಸರ್ವಾಲಂಕಾರಯುಕ್ತೆಯರಾಗಿ ತಮ್ಮ ಪತಿಗಳುಸಹಾ ಬಂದು ಯಜ್ಞಮಂಟಪದಲ್ಲಿ ಇದ್ದಾರು ಎಂದು ಹೇಳಲು, ಅವರ ನುಡಿಗಳವಂಕೇಳಿ ಸತೀದೇವಿ ಕೈಯ್ಯ ಧಾಳವಂ ಬಿಟ್ಟು ಕ್ಷಣಮಾತ್ರಧ್ಯಾನಿಸಿ ವಿಚಾರಿಸಿಕೊಂಡೆದ್ದು ಶೀಘ್ರದಿಂ ಪರಮೇಶ್ವರಗೆ ನಮಸ್ಕಾರವಂಮಾಡಿ ಬಿನ್ನೈಸುವಳು, ಎಲೈ ಅಂಧಕಾರಿಯೆ ! ತ್ರಯಂಬಕ, ತ್ರಿಪುರಾಂತಕ, ನಿಮ್ಮ ಚರಣಂಗಳಿಗೆಶರಣು, ತಾನುತಮ್ಮತಂದೆಮಾಡುವ ಯಜ್ಞವನೋಡಲು ಹೋದೇನು, ಎಂದು ಬಿನ್ನೈಸಿ ಪತಿಯಾದ ಈಶ್ವರನಪಾದಕ್ಕೆರಗಲು, ಆಗ ಪರಮೇಶ್ವರನಿಂತೆಂದನು—ಎಲೆದೇವಿ! ನಿಮ್ಮತಂದೆಯ ಯಜ್ಞದಲ್ಲಿ ಅಪೂರ್ವವಾದ್ದೇನು ಇದ್ದೀತು, ನಿನಗೆ ಲಕ್ಷ್ಮಿಗಿಂತಲು ವ್ಯಗ್ಗಳವಾದ ಭಾಗ್ಯವು ಸರಸ್ವತಿಗಿಂತಲು ಕಾಂತಿಯೂಇದ್ದೀತು, ನೀನು ಶಚೀದೇವಿಗಿಂತ ನಿತ್ಯಯೌವನವಂತೆ ನಿನ್ನಿಂದ ನಾನು ಶಕ್ತಿವಂತನಾದೆನು, ಧೈರ್ಯಶೌರ್ಯವಂತನಾದೆನು, ನಿನ್ನಸಾಮರ್ಥ್ಯವಿಡಿದು ಮೂರ್ತಿತ್ರಯಂಗಳರೂಪವಂಧರಿಸಿ

ಸೃಷ್ಟಿಸ್ಥಿತಿಲಯಂಗಳಂ ಮಾಡುತ್ತ ಇರುವೆ, ತನ್ನ ಅರ್ಧಾಂಗಿಯಾದ ನೀನು ತನ್ನನ್ನು ಬಿಟ್ಟು ಹೋದೀಯೆ ? ಎಂದು ನುಡಿದ ಈಶ್ವರನ ವಾಕ್ಯವಂ ಕೇಳಿ, ಮತ್ತೆ ದೇವಿಯು ಇಂತೆಂದಳು—ಎಲೈ ಪ್ರಾಣನಾಯಕ! ನಿಮ್ಮ ಬಿಟ್ಟು ಎಲ್ಲಿಗೂ ಹೋಗುವಳಲ್ಲ, ಎನ್ನ ಮನಸ್ಸು ನಿಮ್ಮ ಪಾದಾರವಿಂದದಲ್ಲಿ ಸ್ಥಿರವಾಗಿ ಇದ್ದೀತು, ಮತ್ತೇನೆಂದರೆ, ತಾನು ಇಂಥಾ ಯಜ್ಞವನ್ನೆಂದೂ ನೋಡಿದವಳಲ್ಲ, ಅದು ಕಾರಣ ಹೋಗಿ ಬಂದೇನು ಎಂದು ಕೇಳಿದ ದೇವಿಯು ವಾಕ್ಯವಂ ಕೇಳಿ ಪರಮೇಶ್ವರನಿಂತೆಂದನು—ನೀನು ಯಜ್ಞವ ನೋಡಬೇಕಾದರೆ ತಾನು ಯಜ್ಞವ ಮಾಡುವೆನು, ನಿನ್ನ ಶಕ್ತಿರೂಪವಾದ ಮತ್ತೊಂದು ಯಜ್ಞಕ್ರಿಯೆಯನ್ನು ಸೃಷ್ಟಿಸಿ ಮತ್ತೊಬ್ಬ ಯಜ್ಞಪುರುಷನನ್ನು ಮತ್ತು ಲೋಕಪಾಲಾದಿಗಳನ್ನು ಋಷಿಗಳನ್ನು ಋತ್ವಿಕ್ಕುಗಳನ್ನು ಸಕಲ ಯಜ್ಞಸಾಧನವನ್ನು ಸೃಜಿಸೇನು ಎಂದು ನುಡಿದ ಈಶ್ವರನ ವಾಕ್ಯವಂ ಕೇಳಿ ದೇವಿ ಇಂತೆಂದಳು—ಈಗ ಎನ್ನ ತಂದೆ ಮಾಡುವ ಯಜ್ಞವಂ ನೋಡಬೇಕಾಗಿ ಇದ್ದೀತು, ಎನ್ನ ಬಿನ್ನಹವ ಪರಾಕುವಾಗಿ ಅಪ್ಪಣೆಯಂ ಕೊಡಬೇಕು, ಹ್ಯಾಗಂದರೆ—ಹಳ್ಳಕ್ಕೆ ಹರಿವ ನೀರನ್ನೂ ಸ್ತ್ರೀಯರ ಮನಸ್ಸನ್ನೂ ನಿಲ್ಲಿಸಲು ಶಕ್ಯವಲ್ಲ, ಅದು ಕಾರಣ ತನ್ನ ಮನಸ್ಸಂ ನಿಲ್ಲಿಸಲಾರೆನು, ತನಗೆ ಅಪ್ಪಣೆಯ ಕೊಟ್ಟು ಕಳುಹೆಂದು ನುಡಿದ ದೇವಿಯ ವಾಕ್ಯವಂ ಕೇಳಿ ಸರ್ವಜ್ಞನಾದ ಪರಮೇಶ್ವರನು ಎಲೇ ದೇವಿ! ನೀನು ನನ್ನ ಬಿಟ್ಟು ಹೋದಾಗಲೆ ತಿರುಗಿ ಬರಲಿಲ್ಲ, ನೀನು ಇಂದು ಮೂಡಣ ದಿಕ್ಕಿಗೆ ಹೋಗುವದು ಶನಿವಾರ ವಾರಶೂಲೆ, ಜ್ಯೇಷ್ಠಾ ನಕ್ಷತ್ರ ನವಮಿ ವ್ಯತೀಪಾತ ಯೋಗ, ನಿನ್ನ ಜನ್ಮ ನಕ್ಷತ್ರಕ್ಕೆ ಐದನೇ ತಾರೆ ಇಷ್ಟರಲ್ಲಿ ನೀನು ಪ್ರಯಾಣವ ಹೋದರೆ? ತಿರುಗಿ ಬಂದು ಸರ್ವಥಾ ಎನ್ನಂ ನೋಡಲರಿಯೆ, ಅದು ಕಾರಣ ಹೋಗಬ್ಯಾಡವೆಂದು ನುಡಿಯಲು, ದೇವಿ ಇಂತೆಂದಳು—ಎಲೈ ಸ್ವಾಮಿಯೆ! ಸತಿ ಎಂಬ ಹೆಸರಿಂ ಬಂದು ನಿಮ್ಮ ಪಾದವ ಸಾರಿಕೊಂಡಿದ್ದ ತ ಜನ್ಮ ಶರೀರವ ಬಿಟ್ಟಾದರೂ ನಿಮ್ಮ ದಾಸಿಯಾದೇನು ಎನಲು, ಪರಮೇಶ್ವರನು ಎಲೇ ದೇವಿ! ಎನ್ನ ಅರ್ಧಾಂಗನೆ ನೀನು ಮರಳಿ ಮನೋವ್ಯಾಪಾರವನ್ನು ಸ್ತ್ರೀಯರುಗಳ್ನು ಪ್ರಯಾಣ ಮಾಡುವರು ನಿಲ್ಲಿಸುವವನಲ್ಲ, ನೀನು ಹೋದರೆ ತಿರುಗಿ

ನಮ್ಮ ನೋಡುವದಕ್ಕೆ ಬರಲಿಲ್ಲ; ಇದು ಸತ್ಯ, ಅಲ್ಲದೆ ಬಹುಮಾನವುಂಟಾದರೂ ತಾಯಿತಂದೆಗಳ ಮನೆಗೆ ಕರೆಯದೆ ಹೋಗರು, ಅದು ಕಾರಣಾ ನಿಮ್ಮ ತಂದೆ ಕರೆಯಲಿಲ್ಲ, ನೀನು ಹೋಗಲೂ ಸಮಯವಲ್ಲದಲ್ಲಿ ಹೊಕ್ಕ ನದಿಯಂತೆ ತಿರುಗಿ ಬರಲಿಲ್ಲ; ಎನಲು ದೇವಿ ಇಂತೆಂದಳು; ಎಲೈ ಸ್ವಾಮಿ! ನಾನು ನಿಶ್ಚಯದಿಂ ನಿಮ್ಮ ಪಾದಸೇವೆಯಂ ಮಾಡುವವಳಾದರೆ ಜನ್ಮಾಂತರದಲ್ಲಿಯೂ ನೀವೆ ಪತಿಯಾಗಿರಿ ಎಂದು ಹೇಳಿ ಅಪ್ಪಣೆಯಂ ಕೊಡದ ಕೋಪದಿಂ ಮುಂದುಗಾಣದೆ ಈಶ್ವರಂಗೆ ಪ್ರದಕ್ಷಿಣ ನಮಸ್ಕಾರವಂ ಮಾಡದೆ ಕಾಲುನಡಿಗೆಯಲ್ಲಿ ಹೊರಟು ಹೋಗುತ್ತಿರಲು, ಮೃದುವಾದ ಪಾದಗಳಿಂ ಕಠಿನ ಮಾರ್ಗವನು ಸುಲಭವಾಗಿ ನಡೆದು ಹೋಗುತ್ತಿರಲು, ಅನಂತರದಲ್ಲಿ ಮಹಾದೇವನು ಪೋಪದೇವಿಯಂ ನೋಡಿ ತನ್ನ ಸ್ತ್ರೀಯಾದ ಸತಿಗೆ ವಿನಾಶ ತಪ್ಪದೆಂದು ಮನದಲ್ಲಿ ಚಿಂತಿಸಿ, ಗಣಂಗಳ ಕರೆದು ವಾಯುವೇಗ ಮನೋವೇಗವುಳ್ಳ ಹತ್ತುಸಾವಿರ ಸಿಂಹಗಳಂ ಕಟ್ಟಿದ ಕನಕಗಿರಿಯೆ ಧ್ವಜಸ್ತಂಭವಾದ ನರ್ಮದ ಅಳಕನಂದೆಯೆ ಅರಭಂಗಳಾದ ಚಂದ್ರಸೂರ್ಯರೆ ಉಭಯ ಚಕ್ರವಾದ ಆದಿವರಾಹ ಶಕ್ತಿಯೇ ಮಕರಮುಖ, ಗಾಯತ್ರಿಯೇ ರಥದ ಮುಂಭಾಗವಾಗಿ ತಕ್ಷಕ, ಕರ್ಕೋಟಕ, ಕುಳಿಕ, ಶಂಖ, ಚೂಡ ಮೊದಲಾದ ಸರ್ಪಗಳೆ ಹೊರಜೆ ಹಗ್ಗಗಳಾಗಿ ಪ್ರಣವವೆ ಸಾರಥಿಯಾದ, ಓಂಕಾರವೆ ಧ್ವನಿಯಾದ ವೇದಾಂಗಗಳೆ ಕೀಲ್ಗಳಾದ ಛಂದಸ್ಸುಗಳೇ ಪೀಠವಾದಂಥ ಈ ರಥವ ಕೊಂಡು ಹೋಗಿಯೆಂದು ನೇಮಿಸಲು ಗಣಂಗಳು ಆ ದಿವ್ಯರಥವ ಕೊಂಡು ಹೋಗಿ ದಿವ್ಯತೇಜೋಮಯವಾದ ದೇವಿಯರ ರಥದ ಮೇಲೆ ಕುಳ್ಳಿರಿಸಿಕೊಂಡು ಪಾರೈಸಿಕೊಂಡು ಹೋಗುತ್ತಿರಲು, ದೇವಿಯು ದಕ್ಷನ ಯಜ್ಞಶಾಲೆಯ ಸಭೆಗೆ ಹೋಗಿ ಅಲ್ಲಿ ರಥವನಿಳಿದು ಯಜ್ಞದ ಒಳಶಾಲೆಯಂ ಪೊಕ್ಕು ದೀಕ್ಷೆಯಂ ಕೈಕೊಂಡು ಕುಳಿತಿರ್ದ ತಂದೆಯಾದ ದಕ್ಷನನ್ನು ತಂದೆಯ ಕೆಲದಲ್ಲಿ ಸರ್ವಾಭರಣ ಭೂಷಿತೆಯಾಗಿ ಕಿರೀಟಧಾರಿಯಾದ ತಾಯಿಯನ್ನು ಅಲಂಕೃತರಾದ ಒಡಹುಟ್ಟಿದವರನ್ನು ಭಾವಮೈದುನಂದಿರನ್ನು ಕಂಡು ಇವರೆಲ್ಲರನ್ನು ಅತ್ಯುತ್ಸಾಹದಿಂ ಕಂಡೆನೆಂದು ಸಂತೋಷಪಟ್ಟು ಮುಗುಳಂ ನೋಡಿ

ದಕ್ಷನಿಂತೆಂದನು—ಎಲೆ ಮಗಳೆ! ಸುಮುಖಾದೇವಿ, ಮಂಗಳ ಸ್ವರೂಪಿ ಯಾಗಿ ಇದ್ದ ನಿನ್ನನ್ನು ಅನಾಥನಾದ ದರಿದ್ರನಿಗೆ ಕೊಟ್ಟುಹೋದ ನನ್ನ ದಲ್ಲದೆ ನಿನ್ನದಲ್ಲ,ನಿನ್ನ ಕೊಡುವಾಗ ಈತನು ಸ್ವತಂತ್ರ ಸಮರ್ಥನೆಂದು ಇ ದ್ದನಲ್ಲದೆ ಅಶಿವನೆಂದು ಅರಿಯೆನು, ಶಿವನೆಂಬ ಹೆಸರಿಂದಾ ಮೋಸಹೋ ದೆನು, ಬ್ರಹ್ಮದೇವರು ಹೇಳಿದರು, ಈತನು ಪೂಜ್ಯನು, ಸರ್ವಜ್ಞನು, ವೃಷಭಧ್ವಜನು, ಈಮಹಾದೇವಂಗೆ ಮಗಳ ಕೊಡೆಂದುದನಲ್ಲಾ? ಬ್ರಹ್ಮ ನವಾಕ್ಯಮಂ ಕೇಳಿ ವಿಶ್ವಾಸಪಟ್ಟು ನಿನ್ನನಿತ್ತೆನು, ಆತನು ವಿಕಟನೇತ್ರನು, ವಿಷಭಕ್ಷಕನಾಗಿ ಎತ್ತನೇರಿ ತಿರುಗುವನು, ಎರಡು ನಾಲಿಗೆಯುಳ್ಳವನ ಅಂ ಗದಿಂ ತಾಳ್ದಿಪ್ಪವನು, ಜಡೆದಲೆಯವನು,ಕಳಂಕಿಯಾದ ಚಂದ್ರನಂ ಶಿರಸ್ಸಿನಲ್ಲಿ ಧರಿಸಿದವನು, ಬೂದಿಬುಕ್ಕನು, ಒಂದು ವ್ಯಾಳೆ ಕೌಪೀನಧಾರಿ, ಒಂದು ವ್ಯಾಳೆ ದಿಗಂಬರನು, ಒಂದುವ್ಯಾಳೆ ತೊಗಲನುಡುವ ಭಿಕ್ಷುಕನು; ಸುಳಿಗಾಳಿಯಂತೆ ತಿರುಗುವನು ಭೂತಪ್ರೇತ ಪಿಶಾಚಗಳೇ ಪರಿವಾರ, ಮೋ ಟುಮರದಂತೆ ತಿರುಗುವನು, ಮಹಾ ಉಗ್ರನು, ಗುಣಹೀನನು,ರುದ್ರ ಭೂಮಿ ನಿವಾಸನು, ರೌದ್ರವಾದ ಪರಿವಾರವುಳ್ಳವನು, ನರಕಪಾಲಮಾಲೆ ಯಂ ಧರಿಸಿದವನು, ಕಪಾಲಿಯೂ, ಪ್ರಳಯಕಾಲರೂಪನು, ಜಾತಿಗೋತ್ರ ಗಳಿಲ್ಲದವನು,ಅವನ ಸ್ವರೂಪವನ್ನು ಚನ್ನಾಗಿ ಬಲ್ಲವರಿಲ್ಲ,ತಾನುವಿವೇಕಿಯಾ ದರು ಬ್ರಹ್ಮಮೋಸಗೊಳಿಸಿದನು. ಎಲೈ ಮಗಳೆ! ಇನ್ನು ಬಹಳವಾಗಿ ಹ ಲಬಿ ಕಾರ್ಯವೇನು,ಆತನಲ್ಲಿ ಸಕಲವೂ ಅಮಂಗಲವೂ, ವಂದುವ್ಯಾಳೆ ಶಂ ಖದ ಮಣಿಮಾಲೆಗಳಂ ಧರಿಸಿ ಧೂಳಿಚೆಲ್ಲಿಕೊಂಡು ಹಾವುಗಳಸುತ್ತಿ ಕೊಂಡು ಜಡೆಗಳ ಕೆದರಿ ಢಕ್ಕೆಯಂ ಬಾರಿಸುತ್ತಾ ಶಿರದಲ್ಲಿ ಚಂದ್ರನಂ ಧರಿಸಿ ಸರ್ವ ಅಮಂಗಳ ಜ್ಯೇಷ್ಠೆಯುಳ್ಳವನಾಗಿ ಕುಣಿದಾಡುವನು. ಈ ಮಂಗಳವಾದ ಯಜ್ಞಶಾಲೆಯತ್ತ, ಅಮಂಗಳವಾದವನೆತ್ತ, ಆದುಕಾರಣ ಮಂಗಳಸ್ವರೂಪಿಯಾದ ನಿನ್ನ ಕರದರೆ ಅವನನ್ನು ಕರೆಯಬೇಕೆಂದು ನಿ ನ್ನ ಸಹಿತ ಕರೆಯಲಿಲ್ಲ. ನಿನಗೆ ಮೊದಲೇ ಚೀನಚೀನಾಂಬರಗಳು ತೆಗೆದು ಇಪ್ಪವು, ನೀನುತೆಗೆದುಕೊಂಡು ಅಲಂಕಾರವಮಾಡಿಕೊ, ಈಮಂಗಳಸ್ವ ರೂಪಿಗಳಾದ ಇಂದ್ರಾದಿಗಳ ಮಧ್ಯದಲ್ಲಿ ಶೂಲಧರನಾಗಿ ಅಸ್ತವ್ಯಸ್ತಕಂ

ಯಜ್ಞಗಳಲ್ಲಿ ನಿನ್ನ ಪತಿಯು ಯಜ್ಞದಲ್ಲಿವಪ್ಪಿರನು, ಅದುಕಾರಣ ನಾನು ಅವನ ಕರೆಯಲಿಲ್ಲವೆಂದುನುಡಿದ ತಂದೆಯ ವಾಕ್ಯವಂ ಕೇಳಿ ಸತೀದೇವಿ ಮನನೊಂದು ಇಂತೆಂದಳು— ಎಲೈ ಸಮರ್ಥನಾದ ದಕ್ಷನೆ! ಈಗ ನೀನು ಆಡಿದಮಾತುಗಳಂ ನಾನು ಕೇಳಲಿಲ್ಲ, ಎನ್ನಪತಿಯ ಪಾದಾರವಿಂದಗಳ ಧ್ಯಾನಿಸುತ್ತಾ ಇದ್ದೆನು, ನೀನು ಆತನಬಲ್ಲವನಲ್ಲ, ತಾನು ಬಲ್ಲವನಾಗಿ ಮೋಸಗಾರನಾದೆನು ಎಂದು ಆಡಿದಮಾತು ಚೆನ್ನಾಗಿಕೇಳದೆನು, ಆತನಂಚೆನ್ನಾಗಿಬಲ್ಲವರ್ಯಾರು, ನೀನು ಬ್ರಹ್ಮನವಾಕ್ಯದಿಂ ಮೋಸಹೋದೆನೆಂದೆಯಲ್ಲ, ಮೊದಲು ಮೋಸಹೋದವನೆಸರಿ ಈಗ ಪರಮಪುರುಷನಾದ ಮಹಾದೇವನಕೂಡೆ ದ್ವೇಷವಮಾಡಿ ಈಗಲೂಮೋಸಹೋದವನಾದೆ, ಪರಮೇಶ್ವರಂಗೆ ನೀನು ಯನ್ನಕೊಟ್ಟದ್ದು ನಾನುಮಾಡಿದ ಪುಣ್ಯವಲ್ಲದೆ ನಿನ್ನಬುದ್ಧಿಪುಣ್ಯದಿಂದಾಕೊಟ್ಟವನಲ್ಲ, ಈಗ ನೀನಾಡಿದ ಈಶ್ವರದೂಷಣೆಯನ್ನು ಪತಿದೂಷಣೆಯನ್ನು ನಿನ್ನಿಂದಾದ ಈ ಶರೀರದಿಂ ಕೇಳದೆನಾಗಿ ಅದಕ್ಕೆ ಈದೇಹವ ಬಿಡುವದೆ ಪ್ರಾಯಶ್ಚಿತ್ತ ಇಂತೆಂದು ಸತೀದೇವಿಯು ಮಹೇಶ್ವರಸ್ವರೂಪವಾದ ಕ್ರೋಧಾಗ್ನಿಯು ನೆಬ್ಬಿಶಿ ಹೊಗೆಮಾರ್ಗದಿಂ ಪ್ರಾಣಗಳನಿರೋಧಿಸಲು ಆ ಜಠರಾಗ್ನಿಯಿಂದ ದೇಹವು ಭಸ್ಮವಾಯಿತು. ಅನಂತರದಲ್ಲಿ ದೇವೇಂದ್ರಮೊದಲಾದ ಸಕಲದೇವತೆಗಳು ಮುಖಂಗಳಂ ಚಿಕ್ಕಮಮಾಡಿಕೊಂಡು ಮಹಾಚಿಂತೆಪಟ್ಟರು. ಅಗ್ನಿಯು ಹೋಮಕುಂಡದಲ್ಲಿ ಪ್ರಜ್ವಲಿಸಲಿಲ್ಲ, ಮಂತ್ರಗಳಸಾಮರ್ಥ್ಯವು ತಪ್ಪಿತು, ಕೆಲವರು ವಿವೇಕಿಗಳಾದವರು ಇದೇನು ಅರಿಷ್ಟಬಂತೋಯೆಂದರು, ಭಟ್ಟಗಳನೆತ್ತಿಕೊಂಡುಪೋಪ ಸುಳಿಘಾಳಿಬೀಸಿತು, ಯಜ್ಞಮಂಟಪದ ನೆಲಕುಸಿತು, ಅಕಾಲದ ಗುಡುಗು ಮಿಂಚು ಸಿಡಿಲು ತೋರಿದವು, ಭೂಕಂಪವಾಯಿತು, ದಿವದಲ್ಲಿ ನರಿಗಳು ಕೂಗಿದವು, ರಕ್ತದಮಳೆ ಸುರಿತು, ಭೂಮಿಯು ಗುಡುಗಿತು, ದಿವ್ಯಾಯುಧಂಗಳು ತಂಮೊಳು ತಾವು ಯುದ್ಧವಮಾಡಿದವು ಹೋಮದ್ರವ್ಯಂಗಳನ್ನು ನಾಯಿಗಳುಬಂದು ಮುಟ್ಟದವು, ಹದ್ದುಕಾಗೆಗಳು ಯಜ್ಞಶಾಲೆಯಂಪೊಕ್ಕವು ಆಗಲೆಯಜ್ಞಶಾಲೆ ಶ್ಮಶಾನವಂತಾಯಿತ್ತು, ಎಲ್ಲಿದ್ದವರು ಅಲ್ಲಿಯೆ ಚಿತ್ರಾರ್ಧ ಪ್ರತಿಮೆಯಂತಾದರು ಆಗದಕ್ಷನು

ಪುನಗುಂದಿ ಬಹುಪ್ರಯಾಸದಿಂ ಚಿಂತಿಸಿ ಮುನ್ನಿನಂತೆ ಯಜ್ಞವಂ ಪ್ರವರ್ತಿಸಿದನು, ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವಂ ವ್ಯಾಸರು ತನಗೆ ಬುದ್ಧಿಗಲಿಸಿದರೆಂದು ಸೂತಪುರಾಣಿಕನು ಶೌನಕಾದಿಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ದಕ್ಷಯಜ್ಞಪ್ರಾರಂಭ ಸತೀದೇವಿಯು ದೇಹತ್ಯಾಗವೃತ್ತಾಂತವಂ ಪೇಳ್ದ ಎಂಭತ್ತೆಂಟನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * * * *

ಎಂಭತ್ತೊಂಭತ್ತನೇ ಅಧ್ಯಾಯ—ವೀರಭದ್ರನಹುಟ್ಟಿ ಆತನವಿಜಯ.

ಶ್ರೀವಿಶ್ವೇಶ್ವರಾಯನಮಃ ‖ ‖ ಅನಂತರದಲ್ಲಿ ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು—ಕೇಳೈಅಗಸ್ತ್ಯನೆ ! ನಾರದನು ಈವೃತ್ತಾಂತಮಂ ಪರಮೇಶ್ವರಗೆ ಅರುಹಲೋಸ್ಕರ ಕೈಲಾಸಕ್ಕೆಬಂದು ಜ್ಞಾನವೆಂಬ ವೃಕ್ಷದಕೆಳಗೆ ವೃಷಭೇಶ್ವರಗೆ ಜ್ಞಾನಮುದ್ರೆಯನ್ನು ಕೆಲವು ಪುಣ್ಯಕಥೆಗಳನ್ನು ನಿರೂಪಿಸುವ ಸದಾಶಿವನಂಕಂಡು ನಮಸ್ಕರಿಸಿ ನಂದೀಶ್ವರನುಕೊಟ್ಟ ಪೀಠದಲ್ಲಿ ಕುಳಿರ್ದು ಮುಖಕಾಂತಿಯಿಂದ ವಿಪರೀತಮಂ ಸೂಚಿಸುತ್ತಾ ಸುಮ್ಮನೆಯಿದ್ದ ನಾರದನಂನೋಡಿ ಸರ್ವಜ್ಞನಾದ ಪರಮೇಶ್ವರನು ಸಕಲ ವೃತ್ತಾಂತಮಂತಿಳಿದು ಅರಿಯದವನಂತೆ ನಾರದಗಿಂತೆಂದನು— ಎಲೈ ನಾರದ ! ನೀನು ಮೌನದಲ್ಲಿ ಇಹುದಕ್ಕೆ ಕಾರಣವೇನು, ಶರೀರಗಳಿಗೆ ಉತ್ಪತ್ತಿಸ್ಥಿತಿ ಲಯಂಗಳು ಸಹಜವೆಸರಿ, ದೇವತೆಗಳಿಗೆ ಮೊದಲಾಗಿ ಕಲ್ಪಾಂತದಲ್ಲಿ ನಾಶವುಂಟು, ದೃಶ್ಯವಾದುದೆಲ್ಲವೂ ನಾಶವಾಗಲುಳ್ಳದೂ, ಆದರಿಂದ ಯೇನಾಶ್ಚರ್ಯಮಂಕಂಡು ವಿಚಿತ್ರಬಡುತ್ತೀಯೆ?ಕಾಲಂಗೆ ವಳಗಾಗದವರ್ಯಾರು, ಹುಟ್ಟಾದ ವಸ್ತುವಿಗೆ ಅಭಾವವಿಲ್ಲ, ಅಭಾವವಾದ ವಸ್ತುವಿಗೆ ಸ್ಥಿರವಿಲ್ಲವೆಂದು ಜ್ಞಾನಿಗಳಾದವ

ರು ಭ್ರಮಿಸರೂಯೆಂದು ನುಡಿದ ಪರಮೇಶ್ವರನ ವಾಕ್ಯವಂ ಕೇಳಿ ನಾರದನಿಂತೆಂದನು— ಎಲೈ ಸ್ವಾಮಿ! ನೀವು ಬುದ್ಧಿಗಲಿಸಿದಹಾಗೆ ಆಗಲಿ ಳದು, ಪೂರ್ಣವಾದವಸ್ತುವಿಗೆ ವೃದ್ಧಿಕ್ಷಯಂಗಳಿಲ್ಲ, ಇಂದು ಮೊದಲಾಗಿ ಅಜ್ಞಾನಿಗಳು ಸಂಸಾರ ಸಾಗರವಲ್ಲಿ ಮುಳುಗುದರೇನೊ ಕಾಣೆ, ಅದಂತೆಂದರೆ, ಅಜ್ಞಾನಿಯಾದ ದಕ್ಷನು ಯಜ್ಞಕ್ಕೆ ನಿಮ್ಮನು ಕರೆದುದಿಲ್ಲ, ಕರೆಯುದಿರೆ ಏನಾಯಿತೆಂದರೆ,— ಒಬ್ಬ ಸಮರ್ಥನಾದವನು, ಅವ ಮಾನ್ನಣೆಮಾಡಲು ಮಿಕ್ಕಾದಋಷಿಗಳು ನಿಮ್ಮ ನಿಂದೆಯನಾಡಿ ದೂರುತಿರಲಿ ಎಂದರೆ ಅವ ಮನ್ನಣೆ ಬಿಟ್ಟಬಳಿಕ ಆ ಐಶ್ವರ್ಯದಿಂದೇನು ಪ್ರಯೋಜನ, ಕಾಲವ ಗೆದ್ದವರಾರು, ಪೂಜ್ಯರು ನಿಂದಿಸಲು ನರಕಭಾಜನವಹುದು, ಅಭಿಮಾನವೆ ಧನವಾದವರ್ಗೆ ಅವಮನ್ನಣೆಬರಲು, ಅವರ ದೀರ್ಘಾಯುಷ್ಯವೂ ಬಹುಧನವಿದ್ದೇನು ಪ್ರಯೋಜನ, ಆವನನೊಬ್ಬನು ಅವನ ಮನ್ನಣೆಬಿಟ್ಟು ಬದುಕುವವನಿಗಿಂತ ಅಚೇತನವೇಲೇಸು, ಅಭಿಮಾನಿಗಳಾದ ಸ್ತ್ರೀಯರೊಳು ಸತಿದೇವಿಯೆ ಅಭಿಮಾನವಂತೆ, ಅದೆಂತೆಂದರೆ—ದಕ್ಷನಕೈಯ್ಯಲ್ಲಿ ನಿಮ್ಮ ನಿಂದೆಯಂ ಕೇಳಿ ತನ್ನ ಶರೀರವಂ ತೃಣೀಕರಿಸಿದಳು ಎಂದ ನಾರದ ವಾಕ್ಯವಂ ಕೇಳಿ ಸತೀದೇವಿ ದೇಹವಂ ಬಿಟ್ಟಳೂಯೆಂದು ತಿಳಿದುಕೊಂಡು ಮತ್ತು ಧಿಟವಾಗಿ ಸತೀದೇವಿ ದೇಹವಂ ತೃಣೀಕರಿಸಿದಳೇ ಎಂದು ಆನಾರದನಂ ಕೇಳಲು, ದೇವ ಮುನಿ ಮೌನವಲ್ಲಿ ಇರಲು, ರುದ್ರನು ಕೋಪಾಗ್ನಿಯಿಂ ಮರಿದೆದ್ದು ಹೂಂಕರಿಸಲು ಆತನ ಕೋಪಾಗ್ನಿಯಿಂದ ಕಾಲಮೃತ್ಯುವಿಗೆ ಮೊದಲಾಗಿ ಭಯಂಕರನಾದ ಮಹಾಕಾಂತಿಯುಳ್ಳ ಮಹಾಪುರುಷನುದಯಿಸಿ ಮುಸಂಡಿಯೆಂಬ ಆಯುಧವಂಧರಿಸಿ, ಪರಮೇಶ್ವರಂಗೆ ನಮಸ್ಕರಿಸಿ ಮುಂದೆನಿಂತು ಎಲೈ ಸ್ವಾಮಿ! ನಾನು ನಿಮಗೆ ಮಾಡತಕ್ಕ ಕಾರ್ಯವೇನು, ನಿಮ್ಮ ನಿರೂಪದಿಂದ ಈ ಬ್ರಹ್ಮಾಂಡವೆಲ್ಲವನ್ನು ಒಂದ್ಯ ಕಬಳವಾಗಿನುಂಗಲೊ ? ಸಪ್ತಸಮುದ್ರದ ಉದಕವನೊಂದು ಕುಡಿಕೆಯಾಗಿ ಕುಡಿಯಲೊ? ರಸಾತಲವ ಧ್ರುವಲೋಕವಂ ಮಾಡಲೊ ಧ್ರುವಲೋಕವಂ ರಸಾತಲವಂ ಮಾಡಲೊ? ವಿಷ್ಣುವು ವಹಿಸಿಕೊಂಡರು ಲೆಕ್ಕಿಸದೆ ಇಂದ್ರನ ಮುಂದಲೆ ಹಿಡಿದು ಎಳತರಲೊ ? ದನುಜಮನುಜರಲ್ಲಿ

ಎದಿರಾರು? ರಣದಲ್ಲಿ ಕಾಲಯಮನ್ನಾವರು, ಕಸಿದು ಹಾಕೇನು? ಮೃತ್ಯು
ವಿಗೂ ಮೃತ್ಯುವಾಗಿ ನಿಮ್ಮ ಬಲದಿಂದಾಯಿಹ ಎನಗೆ ಸ್ಥಾವರಜಂಗ
ಮಸಲ್ಲಿ ಇದಿರಾರು? ಎನ್ನ ಕಾಲಿನಘಾತಕ್ಕೆ ಪಾತಾಳ ಭೂಮಂಡಲವೆಲ್ಲ
ತಾಳೆಯು ಕಂಭವಂತೆ ನಡುಗುತ್ತಿದ್ದೀತು, ಎನ್ನ ಮುಂಗೈ ಸತ್ವದಿಂದ ಕು
ಲಪರ್ವತಗಳನ್ನು ಚೂರ್ಣವ ಮಾಡೇನು ? ಎಲೈ ಸ್ವಾಮಿ ! ಬಹು ಭಾಷೆ
ಳಿಂದೇನು ಪ್ರಯೋಜನ, ನಿಮ್ಮ ಆಜ್ಞೆಯಿಂದೆನಗೆ ಅಸಾಧ್ಯವೇನಿದ್ದೀ
ತು, ನಿಮ್ಮ ಮನಸ್ಸಿನಲ್ಲಿ ನೆನೆಸುವ ಕಾರ್ಯವಾಯಿತೆಂದು ನಿಮ್ಮ ಚಿತ್ತದಲ್ಲಿ
ರಲಿ, ಹೇಗೆಂದು ಆ ಪುರುಷ ನುಡಿದ ವಾಕ್ಯವಂ ಕೇಳಿ, ಪರಮೇಶ್ವರನು
ಕೃತಕೃತ್ಯನಾದೆನು ಎಂದು ನೆನೆದು ಇಂತೆಂದನು—ಎಲೈ ವೀರಾ! ವೀರತ್ವದಲ್ಲಿ
ಭದ್ರನಾದ ಕಾರಣ ವೀರಭದ್ರನೆಂಬ ಹೆಸರಿಂ ಪ್ರಸಿದ್ಧನಾಗಿ ನೀನು ಶೀಘ್ರ
ದಿಂ ಹೋಗಿ ದಕ್ಷನ ಕೊಂದು ಯಜ್ಞವ ಕೆಡಿಸೆಂದು ನೇಮಿಸಲು; ವೀರಭ
ದ್ರನು ಪ್ರಸಾದವೆಂದು ಈಶ್ವರಾಜ್ಞೆಯಂ ಶಿರಸಾವಹಿಸಿ ಸ್ವಾಮಿಗೆ ಪ್ರದ
ಕ್ಷಿಣ ನಮಸ್ಕಾರಗಳಂ ಮಾಡಿ ಈಶ್ವರನ ಕೋಪ ಉಚ್ಛ್ವಾಸದಿಂ ಪುಟ್ಟಿದ
ಶತಕೋಟಿ ರುದ್ರರುಗಳು ಹಿಂದೆ ಮುಂದೆ ಇಕ್ಕೆಲದಲ್ಲಿ ಆಕಾಶದಲ್ಲಿ ಬೆ
ಟ್ಟಂಗಳಂ ಮರಗಳಂ ಪಿಡಿದು ಮನೋವೇಗದಿಂ ಯಜ್ಞಶಾಲೆಗೆ ಬಂದ
ಮುಂಚೂಣಿಯಲ್ಲಿ ಕೆಲವು ಗಣಂಗಳು ಯೂಪಕಂಭಗಳಂ ಕಿತ್ತರು, ಕೆ
ಲಬರು ಹೋಮ ಕುಂಡಗಳಂ ಹೂಳಿದರು, ಕೆಲಬರು ಯಜ್ಞಮಂಟಪ
ವಂ ಮುರಿದರು, ಕೆಲಬರು ಶೂಲಿಗಳಿಂದ ಉತ್ತರವೇದಿ ಬಹಿರ್ವೇದಿ ಮೊದ
ಲಾದ ಜಗಲಿಗಳಂ ಅಗೆದರು, ಕೆಲಬರು ಪುರೋಡಾಶ ಮೊದಲಾದ ಹವಿಸ್ಸು
ಗಳಂ ಭಕ್ಷಿಸಿದರು, ಕೆಲಬರು ಪೃಷದಾಜ್ಯವೆನಿಸುವ ತುಪ್ಪ ಬೆರಸಿದ ಮೊಸ
ರಂ ಕುಡಿದರು, ಕೆಲಬರು ರತ್ನಶಾಸೆಗಳಂ ಕಾಲ್ಗಳಿಂದ ಕೆರದರು, ಕೆಲಬ
ರು ಆಹುತಿ ಇದ್ದವರ ಮಾನ್ನವ ಸುರಿದರು ಕೆಲಬರು ಹಾಲುಕ್ಕುಡಿದರು,
ಕೆಲಬರು ಮೃಷ್ಟಾನ್ನದಿಂ ತೃಪ್ತರಾದರು, ಕೆಲಬರು ಯಜ್ಞಪಾತ್ರೆಗಳ
ಒಡೆದು ಪುಡಿಮಾಡಿದರು, ಕೆಲಬರು ಸ್ರುಕ್ಸ್ರುವಂಗಳ ಒಡೆದರು, ಕೆಲ
ಬರು ರತ್ನಾಭರಣಂಗಳನ್ನಪಹರಿಸಿದರು, ಒಬ್ಬ ರುದ್ರನು ಭಗನೆಂಬ ದೇವ
ತೆಯ ಕಣ್ಣ ಕಿತ್ತನು, ಮತ್ತೊರ್ವನು ಪೂಷನ ಹಲ್ಲ ಉದುರಹೊಯ್ದನು,

ಮತ್ತೊರ್ವನು ಮೃಗರೂಪವಂಧರಿಸಿಓಡುವ ಯಜ್ಞಪುರುಷನ ಶಿರವಂ ಚಕ್ರದಿಂಕತ್ತರಿಸಿದನು, ಮತ್ತೊಬ್ಬನು ಆದಿತ್ಯನತುಟಿಗಳಂಕೊಯಿದನು, ಮತ್ತೊಬ್ಬನು ಅರ್ಯಮನತೋಳ್ಗಳಂ ಕಿತ್ತನು, ಮತ್ತೊಬ್ಬನು ಅಗ್ನಿಯನಾಲಿಗೆಯಂ ಕಿತ್ತನು, ಮತ್ತೊಬ್ಬನು ವಾಯುವಿನವೃಷಣಗಳಂ ಛೇದಿಸಿದನು, ಮತ್ತೊರ್ವರುದ್ರನು ಯಮನ ಹೆಗ್ಗಟ್ಟುಮುರಿಯಕಟ್ಟಿದನು, ಮತ್ತೊಬ್ಬನು ನಿಋತಿಯಹಿಡಿದು ಈಶ್ವರಹೊರತಾಗಿ ಹವಿರ್ಭಾಗವಂಕೊಂಡೆಯಾ ಎಂದುಒದ್ದನು, ಮತ್ತೊಬ್ಬರುದ್ರನು ಕುಬೇರನಎರಡುಕಾಲನ್ನುಹಿಡಿದು ಗರಗರನೆತಿರುಗಿಸಿ ನೆಲಕ್ಕೆಒಡೆದನು, ಏಕಾದಶರುದ್ರರು ಆದಿಯಾದ ದಿಕ್ಪಾಲಕರು ನೀವುಶಿವಭಕ್ತರಾಗಿಯೂ ಶಿವನು ಹೊರತಾಗಿ ಯಜ್ಞಕ್ಕೆ ಬರಬಹುದೇ ಎಂದು ಬೈದುಪ್ರಾಣವಹಿಡಿಸಿದರು, ಮತ್ತೊರ್ವನು ವರುಣನಹೊಟ್ಟೆಯನ್ನುತುಳಿದು ಈಶ್ವರಹೊರತಾಗಿ ಕೊಂಡ ಹವಿರ್ಭಾಗವಂ ಕಾರಿಸಿದನು, ಈಪರಿಯ ಕೋಲಾಹಲವಾಗೆ ಇಂದ್ರನು ನವಿಲರೂಪವಂಧರಿಸಿ ಬೆಟ್ಟವನೇರಿನೋಡುತ್ತಿರ್ದನು; ಯಜ್ಞಕ್ಕೆ ಬಂದಬ್ರಾಹ್ಮಣರನ್ನು ನಮಸ್ಕರಿಸಿ ಸುಖದಿಂದ ಹೋಗಿ ಎಂದುಗಣಂಗಳು ಕಳುಹಿಸಿದರು, ಈ ರೀತಿಯಲ್ಲಿ ಮುಂಚೂಣಿಯಲ್ಲಿ ಬಂದಪ್ರಮಥರುಗಳಿಂದ ಮಾಡಲ್ಪಟ್ಟ ಶ್ಮಶಾನಸಮಾನವಾದ ಯಜ್ಞಶಾಲೆಯನ್ನು ಪ್ರಮಥಗಣಂಗಳೊಡಗೂಡಿಬಂದ ವೀರಭದ್ರನು ಇಂತೆಂದನು—ಎಲೇ ಗಣಂಗಳಿರಾ ! ಈ ದುರಾಚಾರಿಗಳಾದವರು ಮಾಡಿದಕೃತ್ಯವಂ ನೋಡೀಎಂದುನುಡಿದು ಶೀಘ್ರದಿಂ ಗಣಂಗಳುಸಹಾ ಯಜ್ಞಶಾಲೆಯಂಪೋಗಲು, ಅಲ್ಲಿ ಗದಾಧರನಾದ ವಿಷ್ಣುವು ಕೋಪದಿಂ ಗಣಂಗಳೆಲ್ಲರನ್ನು ಸುಳಿಗಾಳಿತರಗೆಲೆಯನೆಂಬಂತೆ ಹಾರಿಸಲು, ಗಣಂಗಳು ವಿಷ್ಣುವಿನಿಂದಪರಾಜಿತರಾಗಿ ವೀರಭದ್ರನಪೊರೆಹೋಗಲು, ಪ್ರಳಯಕಾಲಾಗ್ನಿಯಂತೆ ಕೋಪವುಳ್ಳ ವೀರಭದ್ರನು ಶಂಖ, ಚಕ್ರ, ಗದೆ, ಶಾರ್ಙ್ಗ, ಮೊದಲಾದ ಆಯುಧಂಗಳಂ ಹಿಡಿದು ಪರಿವಾರಸಮೇತನಾಗಿ ಒಪ್ಪುವ ಮಹಾವಿಷ್ಣುವಂನೋಡಿಇಂತೆಂದನು—ಎಲೆವಿಷ್ಣುವೇ! ನೀನು ಯಜ್ಞಪುರುಷನು ಯಜ್ಞಸಂರಕ್ಷಕನು, ಶಿವದ್ರೋಹಿಯಾದ ದಕ್ಷನವಪ್ಪಿಸಿಯೋ ಎನ್ನೊಡನೆ

ಯುದ್ಧವಮಾಡೆಯೋ? ದಕ್ಷನವಪ್ಪಿಸದೆ ಇದ್ದರೆ ನೀನುಕಾಮುಕೋ? ಪೂರ್ವ
ದಲ್ಲಿ ನೀನು ಸಾವಿರ ಕಮಲಗಳಿಂದ ಶಿವನ ಪಾದಾರವಿಂದವಂ ಪೂಜಿಸು
ವಾಗ ಒಂದುಕಮಲ ಕಡಮೆಯಾಗಲು ನಿನ್ನನೇತ್ರಕಮಲವಂತೆಗೆದು ಪೂ
ಜಿಸಿದೆ, ಪೂಜಿಸಲು; ಆಗ ಶಿವನುಮೆಚ್ಚಿ ನಿನಗೆ ಜಲಂಧರನವಧೆಗೆ ನಿರ್ಮಿ
ಶಿದ ಚಕ್ರವನಿತ್ತನು, ಅದುಕಾರಣ ನೀನು ಶಿವಭಕ್ತರೊಳು ಅಗ್ರಗಣ್ಯ
ನು, ಅಂದು ಶಿವನಿತ್ತಚಕ್ರದಿಂ ಎನ್ನಗೆದ್ದುದುಂಟಾದರೆ ನೀನು ರಾಕ್ಷ
ಸರ ಜೈಸಬಲ್ಲೆ, ಎಂದ ವೀರಭದ್ರನವಾಕ್ಯವಂ ಕೇಳಿ ವಿಷ್ಣುವಿಂತೆಂದನು-
ಎಲೈವೀರಭದ್ರ! ನೀನುಪರಮೇಶ್ವರನಕುಮಾರನು ಗಣಾಗ್ರಗಣ್ಯನು, ಪ
ರಮೇಶ್ವರನ ಅಪ್ಪಣೆವಿಡಿದು ಈ ದಕ್ಷನಂಸಂಹಾರವಮಾಡಿ ಯಜ್ಞವಕೆ
ಡಿಸಬಂದೆಯಲ್ಲ, ತಾನು ಈ ದಕ್ಷನಂರಕ್ಷಿಸುತ್ತಾಇರ್ದೆನೆ, ನೀನುಶಕ್ತನಾದ
ರೆ ಈ ಯಜ್ಞವಂ ಸಂಹರಿಸುಎಂದು ನುಡಿದು ವಿಷ್ಣುವು ಗರುಡಾರೂ
ಢನಾಗಿ ಒಬ್ಬೊಬ್ಬಗಣಂಗಳಮೇಲೆ ಸಾವಿರ ಸಾವಿರಬಾಣಂಗಳಂ ಪ್ರ
ಯೋಗಿಸಲು, ಗಣಂಗಳು ರಕ್ತಪ್ರವಾಹದಿಂ ಪುಷ್ಪಗಳುಳ್ಳ ಮುತ್ತುಗ
ದಮರಗಳಂತೆ? ವಜ್ರಗಳಿಂಪರಿದ ಗಿರಿಗಳಂತೆ? ಮದಸುರಿವ ಆನೆಗಳಂತೆ
ಇದ್ದ ಪ್ರಮಥರಂನೋಡಿ ವೀರಭದ್ರನು ಗಹಗಹಿಸಿನಕ್ಕು ವಿಷ್ಣುವಿಗಿಂ
ತೆಂದನು—ಎಲೈ ಶಾರ್ಙ್ಗಧನ್ವ! ನೀನುರಣದೀಕ್ಷಿತನಹುದು, ದೈತ್ಯದಾನವ
ರಗೆದ್ದಂತೆ ಪ್ರಮಥರಂಗೆಲ್ಲಶಕ್ಯವಲ್ಲ, ಎಂದುನುಡಿದು ಕೋಪಾರೂಢನಾ
ಗಿ ಭೃಶುಂಡಿಎಂಬ ಆಯುಧವಂವಿಷ್ಣುವಿನಮೇಲೆ ಪ್ರಯೋಗಿಸಲು ಆ
ಆಯುಧವು ವಿಷ್ಣುವಿನವಕ್ಷಸ್ಥಳವತಾಕಿ ಸಾವಿರಭಾಗವಾಗಿ ಪೊಡಮುಹೋ
ಯಿತು, ವೀರಭದ್ರನಮೇಲೆ ವಿಷ್ಣುವು ಕೌಮೋದಕೀಎಂಬ ಗದೆಯಂಪ್ರ
ಯೋಗಿಸಲುಎತ್ತಿದಗದೆಯಂ ವೀರಭದ್ರನು ಖಟ್ವಾಂಗದಿಂದ ವಿಷ್ಣುವಿ
ನ ಎಡದಹಸ್ತದಲ್ಲಿದ್ದ ಗದೆಯಂ ಭೂಮಿಯಮೇಲೆ ಬೀಳಕೆಡಹಿದನು, ಅ
ನಂತರದಲ್ಲಿ ವಿಷ್ಣುವು ರೌದ್ರಾಕಾರನಾಗಿ ಬ್ರಹ್ಮಾಂಡ ಉಲ್ಲೋಲಕ
ಲ್ಲೋಲವಾಗಲು, ವೀರಭದ್ರನಮೇಲೆ ಚಕ್ರವಂಪ್ರಯೋಗಿಸಲು ಕೋ
ಟಿಸೂರ್ಯಪ್ರಕಾಶವಾಗಿ ಬಹಚಕ್ರವಂನೋಡಿ ಪರಮೇಶ್ವರನ ಪಾದಾರ
ವಿಂದವಂ ಸ್ಮರಿಸಲು, ಆ ಚಕ್ರವುಬಂದು ವೀರಭದ್ರನಕೊರಳಲ್ಲಿ ವೀರ

ಲಕ್ಷ್ಮೀಪ್ರಕಾಶಿದ ವ್ಯೋಮಯಾನದಂತೊಪ್ಪಿತ್ತು, ಅನಂತರದಲ್ಲಿ ಮಧ್ಯಸ್ಥಾನದ
ಸುಪ್ರತಿಷ್ಠಿತಪಟ್ಟಸಾಲದಲ್ಲಿ ಕಂಠಾಭರಣವಾದ ಚಕ್ರದಿಂ ಶೋಭಿಸಿ ನಂದ
ಕನೆಂಬ ಖಡ್ಗವಂ ಧರಿಸಿ ಮುಂಬರಿಯುತ್ತ ಬರುವ ವಿಷ್ಣುವಂ ಕಂಡು ವೀ
ರಭದ್ರನು ಸಮಸ್ತವಿದ್ಯಾಧರಾದಿಗಳು ನೋಡುತ್ತಿರಲು, ಹುಂಕಾರ
ದಿಂ ತನ್ನ ಶೂಲವಂ ಪಿಡಿದು ಎದುರಾಗಿನಡೆದು ವಿಷ್ಣುವಿನವಕ್ಷವಂ ಬ
ಡಿದೇನು ಎಂಬನಿತರೊಳು ಎಲೆ ವೀರಭದ್ರ! ಸಾಹಸವಮಾಡಬೇಡ ಎಂಬ
ಆಕಾಶವಾಣಿಯ ವಾಕ್ಯವಂ ಕೇಳಿ ವಿಷ್ಣುವಂ ಬಿಟ್ಟು ದಕ್ಷನಿದ್ದ ತಾಣಕ್ಕೆ
ಲಂಘಿಸಿ ಈಶ್ವರನಿಂದಕನಾದ ನಿನ್ನ ಮುಖವಂ ನೋಡಬೇಕು, ಈ ಯಜ್ಞ
ಸಂಪತ್ತು ಪರಮೇಶ್ವರನದು. ಇಲ್ಲಿ ಈಶ್ವರನಸಂಬಂಧಿಗಳಾದವರು ಸ
ಹಾಯವಂ ಮಾಡುವರು, ಅಂಥಾ ಯಜ್ಞವನ್ನು ಈಶ್ವರನು ಹೊರತಾ
ಗಿ ಮಾಡಲು ಆ ಕರ್ಮಾಚಾರವು ವಿಕರ್ಮವಾಗಿ ಕೊಲ್ಲದೆಬಿಡುವದೆ?
ಅಪವಿತ್ರನಾದ ನಿನ್ನಮುಖದಿಂದ ಪರಮೇಶ್ವರನ ನಿಂದಿಸಿದರೆ ಆ ಮುಖ
ವಂ ಹುಡಿಯಾಗುವಂತೆ ಕೆನ್ನೆಕೆನ್ನೆಯಲ್ಲಿ ಹೊಯಿದೇನೂ ಎಂದು ಅತಿರೋ
ಷದಿಂ ದಕ್ಷನಶಿರವಂ ಪಿಡಿದು ಕೆನ್ನೆಯಮೇಲೆ ಬಡಿದು ಬೀಳಕೆಡಹಿ, ಆ ಯ
ಜ್ಞಉತ್ಸವಕ್ಕೆ ಬಂದ ಅದಿತಿಮೊದಲಾದ ಸ್ತ್ರೀಯರ ಕಿವಿಮೂಗುಗಳಂ
ಕೊಯಿದು ಅವರ ಆವಾವ ಅಂಗದಲ್ಲಿ ಶಿವನನಿಂದಿಸಿದರೋ ಆ ಅಂಗಗಳ
ಛೇದಿಸಿ ನಾನಾಬಾಧೆಪಡಿಸಿದರು, ಕೆಲಬರನಾಲಗೆಗಳಂ ಕೊಯಿದು, ಕೆಲ
ಬರಂ ಯೂಪಕಂಬಗಳಿಗೆ ತಲೆಕೆಳಗಾಗಿಕಟ್ಟಿ ಅವರುಕೊಂಡಆಹುತಿಯ
ಹವಿರ್ಭಾಗಗಳಂ ಕಾರಿಸಿದರು, ಧರ್ಮನು, ಚಂದ್ರನು, ಕಶ್ಯಪನು, ಮೊ
ದಲಾದವರು ತಮ್ಮತಮ್ಮಸ್ತ್ರೀಯರುಸಹಾ ಅತ್ಯಂತಅಪಮಾನಬಟ್ಟ
ರು, ಆ ಯಜ್ಞಹೋಮಕುಂಡ, ಯೂಪಸ್ತಂಭ, ಯಜ್ಞಶಾಲೆ, ಹೋ
ಮವೇದಿಗಳು, ಯಜ್ಞಪಾತ್ರಗಳು, ಹವಿಸ್ಸುಗಳು, ಋತ್ವಿಕ್ಕುಗಳು,
ದರ್ಭೆ, ಸಮಿಧೆಯಕಟ್ಟುಗಳು, ಮಂತ್ರಗಳು, ಇವೆಲ್ಲವು ಈಶ್ವರನೊ
ರತ್ರಾವತಾರದ ಕ್ಷಣಮಾತ್ರದಲ್ಲಿಯೆ ನಷ್ಟವಾದವು, ಅದುಕಾರಣ ಈಶ್ವರ
ವಿರಹಿತವಾದಕರ್ಮಗಳು ಈ ದಕ್ಷನಸಂಪತ್ತಿನಂತೆ ನಷ್ಟಫಲವು, ಈ
ರೀತಿಯಲ್ಲಿ ಯಜ್ಞಘಾತವಂ ಕೇಳಿ ಬ್ರಹ್ಮನು ಕೈಲಾಸಕ್ಕೆ ಹೋಗಿ

ಪರಮೇಶ್ವರನಂ ಪ್ರಾರ್ಥಿಸಿ ಯಜ್ಞಭಾಗವಿಗೆ ಕಾತರನಾದ ವೀರಭದ್ರನು ಈಶ್ವರನು ಕೊಡಲು ಅಜ್ಞಪ್ತನಾಗಿ ಸುಮ್ಮನಿರಲು, ಶಿವನು ಸರ್ವಜ್ಞನಾದ ಕಾರಣ ತಾನೇ ತಿಳಿದುಕೊಂಡನು, ಅನಂತರದಲ್ಲಿ ಬ್ರಹ್ಮನು ಪರಮೇಶ್ವರನು ಪ್ರಾರ್ಥಿಸಿದನು, ಅದೆಂತೆನೆ — ಸ್ವಾಮಿ! ಈ ದಕ್ಷನ ಅಪರಾಧವಂ ಕ್ಷಮಿಸಬೇಕು, ಈ ಯಜ್ಞವು ಸಮಾಪ್ತಿಯಾಗುವ ಹಾಗೆ ಅಪ್ಪಣೆಯಂ ಕೊಡಬೇಕು, ನೀವು ಹೊರತಾಗಿ ಮಾಡಿದ ಕರ್ಮಂಗಳಿಗೆ ವಿಘ್ನಂಗಳು ಬಹವು, ನಿಮಗೆ ಪರಮಾತ್ಮನಾದ ಈ ದಕ್ಷನು ನಿಮಗೆ ದ್ರೋಹವ ಮಾಡಬಾರದು ಎಂಬಲ್ಲಿ ನಿವರ್ತನವಾದನು, ಆ ಕಾರಣ ನಿಮ್ಮ ಹೊರತಾಗಿ ಒಂದು ಕ್ರಿಯೆಗಳನ್ನು ಮಾಡಲಾಗದು, ಮಾಡಿದರು ಈ ದಕ್ಷನು ಪಟ್ಟ ಪಾಡು ಪಡುವರು, ಇಂತೆಂದು ಬ್ರಹ್ಮನು ಹೇಳಿಕೊಳ್ಳಲು, ಮಹಾದೇವನು ನಕ್ಕು ವೀರಭದ್ರನಂ ಕರೆದು ಮುನ್ನಿನಂತೆ ಯಜ್ಞವ ಮಾಡಿಸೆ? ವೀರಭದ್ರ ಪ್ರಸಾದವೆಂದು ಈಶ್ವರನ ನಿರೂಪವಂ ಶಿರಸಾವಹಿಸಿ ದಕ್ಷನ ಶಿರಸ್ಸು ಹೋಮಕುಂಡದಲ್ಲಿ ಭಸ್ಮವಾಗಿ ಹೋಗಲು, ಆ ದಕ್ಷಂಗೆ ಟಗರ ತಲೆಯಂ ಹತ್ತಿಸಿ ಮುನ್ನಿನಂತೆ ಯಜ್ಞವ ಪ್ರವರ್ತಿಸುವ ಹಾಗೆ ಮಾಡಿದನು, ಈಶ್ವರನಿಂದಕರು ಮೂಗರಾಗಿ ಪಶುಗಳಾಗಿ ಹುಟ್ಟುವರು, ಆ ಕಾರಣ ವೀರಭದ್ರನು ದಕ್ಷಂಗೆ ಟಗರ ತಲೆಯಂ ಹತ್ತಿಸಿದನು, ಅನಂತರದಲ್ಲಿ ಪರಮೇಶ್ವರನು ಸತೀದೇವಿಯ ವಿಯೋಗದಿಂದ ಮದನ ಬಾಣ ಬಾಧಿತನಾಗಿ ಮನಸೊಂದು ಗೃಹಸ್ಥಾಶ್ರಮವಿಲ್ಲದೆ ಹಿಮವತ್ಪರ್ವತಕ್ಕೆ ಹೋಗಿ ತಪವಿದ್ದನು, ಹಾಗೆಯು ಹೇಳುವಲ್ಲಿ, ಬ್ರಹ್ಮಚಾರಿ ಮೊದಲಾದ ನಾಲ್ಕು ಆಶ್ರಮದೊಳಗೆ ಒಂದಾಶ್ರಮವನಾದರು ಆಶ್ರಯಿಸದೆ ಇದ್ದರೆ ನಡೆದ ಕಾಲ ವ್ಯರ್ಥ, ಆ ಕಾರಣ ಸಕಲ ತಪಸ್ಸುಗಳಿಗು ಫಲವನೀವ ಪರಮೇಶ್ವರನು ಪ್ರಮಥರೊಡಗೂಡಿ ತಪವಿರ್ದನು, ಅನಂತರದಲ್ಲಿ ದಕ್ಷನು ಯಾಗಸಮಾಪ್ತಿಯಂ ಮಾಡಿ ಮಂಗಳಸ್ನಾನವಾದ ಬಳಿಕ ಬ್ರಹ್ಮನು ದಕ್ಷನಂ ಜರಿದನು ಶಿಕ್ಷಿಸಿದನು, ಅದೆಂತೆನೆ — ಎಲೆ ದಕ್ಷ! ನೀನು ಶಿವನಂ ನಿಂದಿಸಿದ ಪಾಪವು ಪರಿಹರವಾಗಬೇಕಾದರೆ ಈ ಕ್ಷಣವೇ ಕಾಶೀಕ್ಷೇತ್ರಕ್ಕೆ ಹೋಗಿ ಲಿಂಗಪ್ರತಿಷ್ಠೆಯಂ ಮಾಡಿಕೊಂಡು ಪೂಜಿಸಲು ಶಿವನು ಪ್ರಸನ್ನನಾದಾನು, ಆ ಶಿವನು ಪ್ರಸನ್ನನಾಗಲು ಸಕಲ ಲೋಕಂಗಳು ಸಂತೋಷವಪಡುವವು, ಈಗ ನೀವು

ಕೇಳ್ಳೆ ಅಗಸ್ತ್ಯನೆ ! ಪೂರ್ವದಲ್ಲಿ ಮೇನಕಾದೇವಿ ತನ್ನ ಮಗಳಾದ ಪಾರ್ವತಿಯುಂ ಕರೆದು ಎಲೆಮಗಳೆ! ನಿನ್ನ ಗಂಡನಾದ ಪರಮೇಶ್ವರನು ನಿನ್ನ ವಿವಾಹವಾದುದು ಮೊದಲಾಗಿ ಇಲ್ಲಿಯೇ ಇದ್ದಾನು, ಈತನ ಸ್ವರೂಪ ಸ್ಥಾನವಾವುದೊ ಮನೆಯಾವುದೊ ಬಂಧುಗಳಾರೊ ನೀಬಲ್ಲೆಯಾ? ವಿಚಾರವಮಾಡಿನೋಡಲು ಎಲ್ಲಿಯು ಒಂದುಪ್ರಯೋಜನವ ಮಾಡುವವನಲ್ಲ, ಎಂಬ ತಾಯಿಯವಾಕ್ಯವಂ ಕೇಳಿ ಪಾರ್ವತೀದೇವಿಯು ಪರಮೇಶ್ವರನೊಡನಿಂತೆಂದಳು—ಎಲೈಸ್ವಾಮಿ ! ನಿಮಗೆ ಮಾವನಮನೆಯಲ್ಲಿ ಇಹುದು ರಮ್ಯವಾಗಿಯಿದ್ದೀತೆ? ಇನ್ನು ಇಹುದು ಉಚಿತವಲ್ಲ, ಇಂದೆಮ್ಮ ನಿಜಾವಾಸಕ್ಕೆ ಹೋಗಬೇಕು, ಎಂದ ಸ್ತ್ರೀಯಳವಾಕ್ಯವಂ ಕೇಳಿ ಪರಮೇಶ್ವರನು ಇಲ್ಲಿಇಹುದು ಮಹಾತುಚ್ಛವೆಂದು ಆ ಹಿಮವಂತನ ಮನೆಯಂ ಬಿಟ್ಟು ಆನಂದಕಾನನವೆಂಬ ತನ್ನ ನಿಜಾವಾಸಕ್ಕೆ ಬಂದುಇರಲು, ಪಾರ್ವತೀದೇವಿ ಪರಮಾನಂದದಿಂ ತೌರುಮನೆಯಂ ಮರೆದು ಸುಖದಲ್ಲಿಇರಲು ಒಂದಾನೊಂದು ದಿನ ಪರಮೇಶ್ವರನೊಡನೆ ದೇವಿ ಇಂತೆಂದಳು—ಎಲೈಸ್ವಾಮಿಯೆ ! ಈಕ್ಷೇತ್ರವು ಪರಮಾನಂದವಾದಕಾರಣವೇನೆನಲು, ಪರಮೇಶ್ವರನು ಎಲೆದೇವಿ ! ಈ ಪಂಚಕ್ರೋಶಪರಿಮಿತವಾದ ಮುಕ್ತಿಕ್ಷೇತ್ರದಲ್ಲಿ ಎಳ್ಳು ಎಡತೆಯಾದರು ಲಿಂಗವಿಲ್ಲದಸ್ಥಳವಿಲ್ಲ, ಆನಂದಮಯವಾದ ಲಿಂಗಗಳು ಅನೇಕವಿದ್ದಾವು, ಹದಿನಾಲ್ಕುಲೋಕದಲ್ಲಿಇದ್ದ ಪುಣ್ಯಾತ್ಮರು ಇಲ್ಲಿ ತಮ್ಮತಮ್ಮ ಹೆಸರಲಿಂಗಪ್ರತಿಷ್ಠೆಯಂಮಾಡಿ ಕೃತಕೃತ್ಯರಾದರು. ಈ ಲಿಂಗಗಳಪ್ರತಿಷ್ಠೆಯಂ ಮಾಡಿದ ಪುಣ್ಯಕ್ಕೆ ಮಿತಿಯಿಲ್ಲವೆಂಬ ಶಿವನವಾಕ್ಯವಂ ಕೇಳಿ ಪಾರ್ವತೀದೇವಿ ಪತಿಗೆ ನಮಸ್ಕರಿಸಿ ಎಲೈಸ್ವಾಮಿಯೆ ! ಪತಿವ್ರತೆಯರಾದವರು ಪತಿಯಆಜ್ಞೆಯಲ್ಲಿ ಮಾಡಿದಧರ್ಮಂಗಳಿಗೆ ಪ್ರಳಯದಲ್ಲಿಯು ಕೇಡಿಲ್ಲವಾಗಿ ಎನಗೆ ಲಿಂಗಪ್ರತಿಷ್ಠೆಯಂ ಮಾಡುವದಕ್ಕೆ ಅಪ್ಪಣೆಯಂ ಕೊಡಬೇಕೆಂದು ಬಿನ್ನಹವಂಮಾಡಿ ಸ್ವಾಮಿಯಅಪ್ಪಣೆಪಡೆದು ಪಾರ್ವತೀದೇವಿಯು ಅಲ್ಲಿಹ ಮಹಾದೇವೇಶ್ವರನ ಸಮೀಪದಲ್ಲಿ ಲಿಂಗಪ್ರತಿಷ್ಠೆಯಂಮಾಡಿ ಪರಮೇಶ್ವರಂಗೆ ಇಂತೆಂದಳು—ಎಲೈಸ್ವಾಮಿ ! ಈಲಿಂಗದಲ್ಲಿ ನೀವು ನಿತ್ಯಸಾನ್ನಿಧ್ಯವಾಗಿಇದ್ದು ಈ ಲಿಂಗವಪೂಜಿಸುವ ಭಕ್ತರಿಗೆ ಅಭೀಷ್ಟವಂ ಕೊಡಬೇಕು ಎನಲು,

ಹಾಗೇ ಆಗಲೀ ಎಂದು ವರವನಿತ್ತು ಮತ್ತಂತೆಂದನು—ಎಲೇ ದೇವಿ! ಈ ಲಿಂಗದ ದರ್ಶನಮಾತ್ರದಿಂದಲೇ ಬ್ರಹ್ಮಹತ್ಯಾದಿಪಾಪಹರ, ಪುನರ್ಜನ್ಮವಿಲ್ಲ ಈ ಲಿಂಗದಲ್ಲಿ ನಿತ್ಯಸಾನ್ನಿಧ್ಯವಾಗಿ ಇದ್ದೇನು, ಈ ಲಿಂಗವು ನಿನ್ನ ಹೆಸರಿನಿಂದ ಪಾರ್ವತೀಶ್ವರನೆಂದು ಪ್ರಸಿದ್ಧವಾಗಲಿ, ಈ ಪಾರ್ವತೀಶ್ವರನ ಪೂಜೆಯಂ ಮಾಡಲು, ಕಾಶಿಯಲ್ಲಿ ಮೋಕ್ಷವನ್ನೈದಿ ಕಡೆಯಲ್ಲಿ ಸಾಯುಜ್ಯವನ್ನೈದುವರು, ಚೈತ್ರಶುದ್ಧ ತದಿಗೆಯಲ್ಲಿ ಈ ಲಿಂಗವನ್ನು ಪುರುಷನಾಗಲಿ ಸ್ತ್ರೀಯಾಗಲಿ ಪೂಜಿಸಲು ಸೌಖ್ಯವಂ ಪಡೆದು ಅಂತ್ಯದಲ್ಲಿ ಮೋಕ್ಷವಪಡೆವರು, ಈ ಲಿಂಗದ ಪೆಸರ್ಗೊಳ್ಳಲು ಸಾವಿರಜನ್ಮದ ಪಾಪಹರ, ಈ ಪಾರ್ವತೀಶ್ವರನ ಮಹಿಮೆಯಂ ಕೇಳಿದವರ್ಗೆ ಇಹದಲ್ಲಿ ಸಕಲಸೌಭಾಗ್ಯವುಂಟಾಗಿ ಪರದಲ್ಲಿ ಮೋಕ್ಷವನ್ನೈದುವರು, ಎಂದು ಪರಮೇಶ್ವರನು ದೇವಿಯರಿಗೆ ವರವನಿತ್ತು ಸಂತೋಷದಲ್ಲಿದ್ದನು, ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವನ್ನು ವ್ಯಾಸರು ತನಗೆ ಬುದ್ಧಿಗಲಿಸಿದರೆಂದು ಸೂತಪುರಾಣಿಕನು ಶೌನಕಾದಿಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ * * *

ಇಂತು ಶ್ರೀಮತ್ಸಮಸ್ತ ಭೂಮಂಡಲೀತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದಸ್ಕಂಧಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಪಾರ್ವತೀಶ್ವರನ ವೃತ್ತಾಂತವೆಂಬ ತೊಂಭತ್ತನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * * *

ತೊಂಭತ್ತೊಂದನೇ ಅಧ್ಯಾಯ—ಗಂಗೇಶ್ವರನಮಹಿಮೆ.

ಶ್ರೀವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ಕುಮಾರಸ್ವಾಮಿ ಇಂತೆಂದನು—ಕೇಳೈ ಅಗಸ್ತ್ಯನೆ! ಈಗ ಪಾರ್ವತೀಶ್ವರನ ಉತ್ಪತ್ತಿಯಂ ಪೇಳ್ದೆನಲ್ಲ ಇನ್ನು ಗಂಗೇಶ್ವರನ ಮಹಿಮೆಯಂ ಕೇಳು, ಆವಾಗ ಭಗೀರಥಾನುಗ್ರಹಾರ್ಥವಾಗಿ ಗಂಗೆಯು ಮಣಿಕರ್ಣಿಕೆಗೆ ಬಂದಳೋ ಆಗ ಕಾಶೀಕ್ಷೇತ್ರದ ಮಹಾತ್ಮೆಯಂ ತಿಳಿದು ವಿಶ್ವೇಶ್ವರಗೆ ಮೂಡಲಲ್ಲಿ ಲಿಂಗವ ಪ್ರತಿಷ್ಠೆಯಂ ಮಾಡಿದಳು, ಆ ಗಂಗೆ ಪ್ರತಿಷ್ಠೆಯಮಾಡಿದಕಾರಣ ಗಂಗೇಶ್ವರನೆಂಬ ಹೆ

ಸರು ಪ್ರಸಿದ್ಧವಾಯಿತು, ಆ ಗಂಗೇಶ್ವರನ ಪುಣ್ಯತಿಥಿಗಳಲ್ಲಿ ಪೂಜೆಯುವಾ ತಲು ಸಹಸ್ರಜನ್ಮಪಾಪಹರ, ಕಲಿಯುಗದಲ್ಲಿ ಗಂಗೇಶ್ವರನು ಗೋಪ್ಯವಾ ದನು, ಆ ಲಿಂಗದರ್ಶನದಿಂದ ಪ್ರತ್ಯಕ್ಷವಾಗಿ ಗಂಗಾಭವಾನಿಯು ಕಂಡಫಲ ವು, ಕಲಿಯುಗದಲ್ಲಿ ಕಾಶೀಕ್ಷೇತ್ರ ದೊರಕೊಂಬುದು ಅತಿದುರ್ಲಭ, ಅದ ರೊಳು ಗಂಗೇಶ್ವರನ ದರ್ಶನವತಿದುರ್ಲಭವು, ಗಂಗೇಶ್ವರನದರ್ಶನದಿಂ ಸ ಕಲಪಾಪಹರ, ಗಂಗೇಶ್ವರನಮಹಿಮೆಯಂ ಕೇಳದವರ್ಗೆ ನರಕಭಯವಿ ಲ್ಲ, ನರಕದರ್ಶನವಿಲ್ಲ, ಸಕಲಮನೋರಗಳು ಸಿದ್ಧಿಯಹುದು, ಎಂದು ಕುಮಾ ರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದರೆಂದು ವ್ಯಾಸರು ತನಗೆ ಬುದ್ಧಿಗಲಿಸಿ ದರೆಂದು ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ. * * * * * * * * * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾ ದ ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರವರು ಲೊ ಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದವಿರಚಿಸಿದ ಸ್ಕಂದಪುರಾ ಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಗಂಗೇಶ್ವರನ ಮಹಿಮೆಯಂ ಪೇಳ್ದ ತೊಂಭತ್ತೊಂದನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂ ಗಳಮಹಾ * * * * * * * * * * * *

ತೊಂಭತ್ತೆರಡನೇಅಧ್ಯಾಯ—ನರ್ಮದೇಶ್ವರನಮಹಿಮೆ.

ಶ್ರೀವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ಅಗಸ್ತ್ಯನಿಂತೆಂ ದನು—ಎಲೈ ಕುಮಾರಸ್ವಾಮೀ! ಈ ನರ್ಮದೇಶ್ವರನಮಹಿಮೆಯಂ ಕೇ ಳಬೇಕು ಎನಲು, ಕುಮಾರಸ್ವಾಮಿ ಇಂತೆಂದನು—ಕೇಳೈ ಅಗಸ್ತ್ಯನೇ! ಕೇಳಿದಮಾತ್ರದಲ್ಲಿಯೆ ಸಕಲಪಾಪಹರವು ಪವಿತ್ರವಾದ ನರ್ಮದೇಶ್ವರ ನ ಉತ್ಪತ್ತಿಯಂ ಕೇಳು, ಬ್ರಹ್ಮದೇವರ ಶ್ವೇತವರಾಹಕಲ್ಪದ ಆದಿಯಲ್ಲಿ ಮುನಿಗಳೆಲ್ಲರು ಕೂಡಿ ಪುಂದುರವ್ಯವಾದ ಸ್ಥಳದಲ್ಲಿ ಕುಳಿತು ಅದರೊಳು ಮಾರ್ಕಂಡೇಯಮುನಿಯನೋಡಿ ಇಂತೆಂದನು—ಎಲೈ ಮಾರ್ಕಂಡೇ ಯಮುನಿಯೆ! ನದಿಗಳೊಳಗೆ ಉತ್ತಮವ್ಯಾವದು, ಎಂದು ಕೇಳುವ ಮು

ಸಿಗಳಸಮೂಹಕ್ಕೆ ಮಾರ್ಕಂಡೇಯುನಿಂತೆಂದನು—ಲೋಕದಲ್ಲಿ ಸರ್ವಸ್ವಪಾಪಹರವೆಪ್ಪ ಪುಣ್ಯಪ್ರದಗಳಾದ ಅಸಂಖ್ಯಾತನದಿಗಳುಂಟು; ಅವರೊಳು ಪ್ರತ್ಯೇಕವಾಗಿ ಸಮುದ್ರಗಾಮಿನಿಯಾದ ನದಿಗಳು ವಿಶೇಷ, ಅವರೊಳು ಗಂಗೆ, ಯಮುನೆ, ಸರಸ್ವತಿ, ನರ್ಮದೆ ಎಂಬ ನಾಲ್ಕು ಉತ್ತಮವಾದವು, ಗಂಗೆಯು ಋಗ್ವೇದಸ್ವರೂಪ, ಯಮುನೆಯು ಯಜುರ್ವೇದಸ್ವರೂಪ, ಸರಸ್ವತಿಯು ಸಾಮವೇದಸ್ವರೂಪ, ನರ್ಮದೆಯುಅಥರ್ವಣವೇದಸ್ವರೂಪ, ಅದಾಗಿ- ಸಕಲಸಮುದ್ರಗಳಿಗೂನದಿಗಳಿಗೂಗಂಗೆಯೇಅಧಿಕ, ಈಬ್ರಹ್ಮಾಂಡದೊಳಗಾಗಿ ಗಂಗೆಗೆಸಮಾನವಿಲ್ಲ, ಅದೆಂತೆನೆ—ಪೂರ್ವದಲ್ಲಿನರ್ಮದೆಯು ಗಂಗೆಗೆಸಮಾನವಾಗಬೇಕೆಂದು ಬ್ರಹ್ಮನಕುರಿತು ಬಹುಕಾಲತಪವಿರಲು ಬ್ರಹ್ಮನು ಪ್ರಸನ್ನನಾಗಿ ನರ್ಮದೆಯುಂನೋಡಿ ವರವಕೇಳಿಕೊ ಎನಲು, ನರ್ಮದಾಇಂತೆಂದಳು-ಎಲೈ ಸುರಜ್ಯೇಷ್ಠನೆ! ನನಗೆ ಗಂಗಾಸಮಾನವಂಕೊಡು ಎನಲು, ಬ್ರಹ್ಮನು ಕೇಳಿ ಮುಗುಳುನಗೆಯಿಂನಕ್ಕು ನರ್ಮದೆಗಿಂತೆಂದನು, ಎಲೆನರ್ಮದೆಯೆ ! ಲೋಕದಲ್ಲಿ ಪರಮೇಶ್ವರಗೆ ಸಮಾನವಾದವರುಂಟಾದರೆ? ವಿಷ್ಣುವಿಗೆ ಸಮಾನವಾದಪುರುಷನುಂಟಾದರೆ? ಗೌರೀಲಕ್ಷ್ಮೀದೇವಿಯರಿಗೆ ಸಮಾನವಾದ ಸ್ತ್ರೀಯುರುಂಟಾದರೆ? ಕಾಶೀಕ್ಷೇತ್ರಕ್ಕೆ ಸಮಾನವಾದ ಕ್ಷೇತ್ರವುಂಟಾದರೆ ? ಈ ಗಂಗೆಗೆ ಸಮಾನವಾದನದಿಯುಂಅಹುದು, ಅಂದುಪರ್ಯಂತರವು ಗಂಗೆಗೆಸಮಾನವಿಲ್ಲವೆಂದು ನುಡಿದ ಬ್ರಹ್ಮನವಾಕ್ಯವಂ ಕೇಳಿ ನರ್ಮದೆಯುಬ್ರಹ್ಮನಿಂದವರವಿಲ್ಲದೆತನ್ನ ಮನೋರಥ ವ್ಯರ್ಥವಾಯಿತೆಂದು ಚಿಂತಿಸಿ ಕಾಶೀಪಟ್ಟಣಕ್ಕೆ ಹೋಗಿ ತ್ರಿವಿಷ್ಟಪೇಶ್ವರನಸಮೀಪದ ಪಿಲಪಿಲಾತೀರ್ಥದಸಮೀಪದಲ್ಲಿ ಲಿಂಗಪ್ರತಿಷ್ಠೆಯುಂಮಾಡಿಕೊಂಡು ಇರಲು, ಪರಮೇಶ್ವರನು ಪ್ರಸನ್ನನಾಗಿ ಎಲೆ ನರ್ಮದೆ ನಿನ್ನ ತಪಸ್ಸಿಗೆ ಮೆಚ್ಚಿದೆನು,ನಿನ್ನಮನಬಂದಂತೆ ವರವಬೇಡಿಕೊಎನಲು, ನರ್ಮದೆಇಂತೆಂದಳು—ಎಲೆ ಪರಮೇಶ್ವರನೆ ! ತುಚ್ಛವಾದಮಿಕ್ಕಾದವರಗಳಿಂದೇನುಪ್ರಯೋಜನ, ನಿನ್ನ ಪಾದಾರವಿಂದದಲ್ಲಿ ನಿಶ್ಚಲಭಕ್ತಿಯುಂ ಕೃಪೆಮಾಡು, ನಾನು ಗಂಗಾದೇವಿಗೆ ಸರಿಯಾದನದಿಯಾದೇನು, ಎನಗೆ ಆ ವರವನ್ನು ಕೃಪೆಮಾಡು-ಎನಲು, ಪರಮೇಶ್ವರನು ಹಾಗೇಆಗಲೀಎಂದು ವರವನಿತ್ತು

ಮತ್ತಿಂತೆಂದನು–ಎಲೆ ನರ್ಮದೆಯೆ! ಪುಣ್ಯಸ್ವರೂಪವಾದ ನಿನ್ನಲ್ಲಿ ಇದ್ದಂಥ ಪಾಷಾಣಗಳೆಲ್ಲವು ಲಿಂಗಸ್ವರೂಪವಾದಾವು, ಬಹುತಪಸ್ಸುಗಳಿಂದಾಸಾಧ್ಯಮಪ್ಪ ಇನ್ನೊಂದುವರವನಿತ್ತೇನು,ಅದಾವುದೆಂಬೆಯಾ?ಲೋಕದಲ್ಲಿಜನರುಗಳು ಗಂಗೆಯಲ್ಲಿ ಒಂದುದಿನಸ್ನಾನವಂಮಾಡಲು ಸಕಲ ಬ್ರಹ್ಮಹತ್ಯಾದಿಪಾಪಹರ, ಯಮುನೆಯಲ್ಲಿ ಏಳುದಿನ ಸ್ನಾನವಂಮಾಡಲು ಸಕಲಪಾಪಹರ, ಸರಸ್ವತೀಯಲ್ಲಿ ಮೂರುಸ್ನಾನವಂಮಾಡಲು ಸರ್ವಪಾಪಹರ, ನಿನ್ನದರ್ಶನಮಾದಮಾತ್ರದಲ್ಲಿಯೆ ಪಂಚಮಹಾಪಾತಕಪರಿಹರವಾಗಲಿ, ಈಗ ನೀನುಪೂಜಿಸಿದಲಿಂಗವುನಿನ್ನಹೆಸರಿನಿಂದನರ್ಮದೇಶ್ವರನೆಂದುಪ್ರಸಿದ್ಧಿಯಾಗಲಿ, ಈ ಲಿಂಗವಪೂಜಿಸಲು ಮುಕ್ತಿಯಾಗಲಿ, ಈ ಲಿಂಗವಪೂಜಿಸಿದಭಕ್ತರನ್ನು ಯಮನುನಮಸ್ಕರಿಸಿ ದಿವ್ಯವಿಮಾನದಿಂದ ಶಿವಲೋಕಕ್ಕೆ ಕಳುಹಿಯಾನು, ಈ ಕಾಶೀಕ್ಷೇತ್ರದಲ್ಲಿ ಹೆಜ್ಜೆಹೆಜ್ಜೆಗೆ ಅಸಂಖ್ಯಾತಲಿಂಗಗಳುಂಟು, ಆದರೂ ಈ ನರ್ಮದೇಶ್ವರನಮಹಿಮೆಯು ಅತ್ಯಾಶ್ಚರ್ಯವಾಗಲೆಂದು ಪರಮೇಶ್ವರನು ವರವನಿತ್ತು ಆ ಲಿಂಗದಲ್ಲಿಯೆ ಐಕ್ಯವಾದನು, ಆ ನರ್ಮದೆಯು ಅಪೂರ್ವವಾದ ಪವಿತ್ರತೆಯಂಪಡೆದು ತನ್ನದೇಶಕ್ಕೆಬಂದು ತನ್ನ ನೋಡಿದಮಾತ್ರದಿಂದ ಸಕಲಪಾತಕಂಗಳ ಪರಿಹರಿಸುತ್ತಾಇದ್ದಾಳು ಎಂದು ಮಾರ್ಕಂಡೇಯಮುನಿಯು ಸಕಲಋಷಿಗಳಿಗುಪೇಳಲು, ಸಕಲಋಷಿಗಳು ಸಂತೋಷಚಿತ್ತರಾಗಿ ಆ ನರ್ಮದೆಯಲ್ಲಿ ಸ್ನಾನತರ್ಪಣಾದಿಗಳಂ ಮಾಡಿ ತಮ್ಮತಮ್ಮ ಅಭಿಲಾಷೆಯಂಪಡೆದರು, ಈ ನರ್ಮದೇಶ್ವರನಮಹಿಮೆಯನ್ನು ಹೇಳಿದರೂಕೇಳಿದರೂಪಾಪವೆಂಬ ತೊಡಿಗೆಯಂಬಿಟ್ಟು ಉತ್ತಮಜ್ಞಾನಿಗಳಹರು, ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವಂ ವ್ಯಾಸರು ತನಗೆ ಬುದ್ಧಿಗಲಿಸಿದರೆಂದು ಸೂತಪುರಾಣಿಕನು ಶೌನಕಾದಿಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ. * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರುಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ನರ್ಮದೇಶ್ವರನ ಮಹಿಮೆಯೆಂಬ

ತೊಂಭತ್ತೆರಡನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ *

ತೊಂಭತ್ತಮೂರನೇ ಅಧ್ಯಾಯ, ಸ್ವತೀಶ್ವರನಮಹಿಮೆ.

ಶ್ರೀಗಂಗಾವಿಶ್ವೇಶ್ವರಾಭ್ಯಾಂನಮಃ ॥ ॥ ಅನಂತರದಲ್ಲಿ ಕುಮಾರಸ್ವಾಮಿ ಅಗಸ್ತ್ಯಂಗಿಂತೆಂದನು—ಎಲೈ ಅಗಸ್ತ್ಯನೆ! ಇನ್ನು ನಿನಗೆ ಬೇಕಾದಪ್ರಸಂಗವಂ ಕೇಳು ಎನಲು, ಅಗಸ್ತ್ಯನಿಂತೆಂದನು—ಎಲೆ ಕುಮಾರಸ್ವಾಮಿ ಪಾಪಗಳ ಪರಿಹರಿಸುವಂಥ ಸರ್ವದೇಶ್ವರನ ಉತ್ಪತ್ತಿಯಂ ಕೇಳಿದೆನು, ಈಗ ಸರಸ್ವತೀಶ್ವರನ ಮಹಿಮೆಯಂ ಬುದ್ಧಿಗಲಿಸಬೇಕೆನಲು, ಕುಮಾರಸ್ವಾಮಿ ಇಂತೆಂದನು— ಕೇಳೈ ಅಗಸ್ತ್ಯನೆ ! ಪೂರ್ವದಲ್ಲಿ ಬ್ರಹ್ಮನು ಪರಮೇಶ್ವರನ ಕುರಿತು ಉಗ್ರತಪವಂ ಮಾಡಲು, ಪರಮೇಶ್ವರನು ಪ್ರಸನ್ನನಾಗಿ ಎಲೆ ಬ್ರಹ್ಮನೆ! ನಿನ್ನ ತಪಸ್ಸಿಗೆ ಮೆಚ್ಚಿದೆನು, ವರವ ಬೇಡಿಕೋ ಎನಲು, ಬ್ರಹ್ಮನು ಇಂತೆಂದನು—ಎಲೈ ಸ್ವಾಮಿ! ನೀವು ವರವ ಕೊಡಬೇಕಾದರೆ ನೀವು ತನ್ನ ಕುಮಾರನಾಗಿಯು ನಿಮ್ಮ ಸ್ತ್ರೀಯಾದ ದೇವಿಯರು ದಕ್ಷಗೆ ಮಗಳಾಗಿಯು ಹುಟ್ಟಬೇಕು ಎಂದು ನುಡಿಯಲು, ಮಹಾದೇವನು ಮುಗುಳುನಗೆಯಿಂ ನಕ್ಕು ಇಂತೆಂದನು—ಎಲೆ ಬ್ರಹ್ಮನೆ! ಹಾಗೇ ಆಗಲಿ, ನಿನಗೆ ಕೊಡಬಾರದ ವರವೇನು ಇದ್ದೀತು ಎಂದು ವರವನಿತ್ತು ಅಂತರ್ಧಾನವಾಗಲು, ಅನಂತರದಲ್ಲಿ ಪರಮೇಶ್ವರನು ಬ್ರಹ್ಮನ ಲಲಾಟದಿಂದುದ್ಭವಿಸಿದನಾಗಿ ಬ್ರಹ್ಮನ ಮುಖವನೋಡುತ್ತಾ ರೋದನವಂ ಮಾಡುತ್ತಿರಲು, ಬ್ರಹ್ಮನು ಇಂತೆಂದನು—ಎಲೆ ಬಾಲಕನೆ! ನಾನು ತಂದೆಯಾಗಿಯು ನೀನು ಅಳುವದಕ್ಕೆ ಕಾರಣವೇನು ಎಂದು ನುಡಿಯಲು, ಆ ಬಾಲಕನು ರೋದನವ ಬಿಟ್ಟು ನನಗೆ ನಾಮಕರಣವಂ ಮಾಡಬೇಕೆನಲು, ಬ್ರಹ್ಮನಿಂತೆಂದನು—ಎಲೆ ಬಾಲಕ! ನೀನು ಹುಟ್ಟುತ್ತಲೆ ರೋದನವಂ ಮಾಡಿದೆಯಾಗಿ ರುದ್ರನು ಎಂಬ ನಾಮಧೇಯವುಳ್ಳವನಾಗು ಎಂದನು, ಎಂದು ಕುಮಾರಸ್ವಾಮಿ ಹೇಳಲು, ಅಗಸ್ತ್ಯನಿಂತೆಂದನು—ಎಲೈ ಕುಮಾರಸ್ವಾಮಿ ಪರಮೇಶ್ವರನು ಬ್ರಹ್ಮನಿಗೆ ಮಗನಾದ ಕಾರಣವೇನು, ಆದರು ಹುಟ್ಟುತ್ತಲೆ ರೋದನವಂ ಮಾಡುವದಕ್ಕೆ ಕಾರಣವೇನು, ಇವನ್ನು ಬುದ್ಧಿಗಲಿಸಬೇಕೆನಲು, ಕುಮಾರಸ್ವಾಮಿ ಇಂತೆಂದನು—ಕೇಳೈ ಅಗಸ್ತ್ಯ ತಾನು ಸರ್ವಜ್ಞನಾದ ಪರಮೇಶ್ವರನ ಕುಮಾರ

ನಾದಕಾರಣ ಕಿಂಚಿತ್ ಬಲ್ಲೆನು, ಬ್ರಹ್ಮನತಪಸ್ಸಿಗೆಮೆಚ್ಚಿ ಮಹಾದೇವನು ಮಗನಾದನು, ಪರಮೇಶ್ವರನು ರೋದನವಂ ಮಾಡಿದಕಾರಣವ ಬುದ್ಧಿಗಲಿ ಕೀಯೆಂದೆಮುಲ್ಲ ಆದರೆಕೇಳು, ಸತ್ಯಲೋಕಾಧಿಪತಿಯಾದ ಚತುರ್ಮುಖ ಬ್ರಹ್ಮನ ಬುದ್ಧಿಯನೋಡಬೇಕಾಗಿ ಪರಮಾತ್ಮನಾದ ಪರಮೇಶ್ವರನಮ ನವಲ್ಲಿ ವಿಚಾರವಾಗಿ ಆನಂದಬಾಷ್ಪಗಳು ಸುರಿದವುಎನಲು, ಅಗಸ್ತ್ಯನಿಂ ತೆಂದನು—ಎಲೈಕುಮಾರಸ್ವಾಮಿ ! ಪರಮೇಶ್ವರಂಗೆ ಆನಂದಬಾಷ್ಪಗ ಳುಬಾಹಂಥ ಬ್ರಹ್ಮನಬುದ್ಧಿಏನೆನಲು, ಕುಮಾರಸ್ವಾಮಿ ಇಂತೆಂದನು— ಕೇಳೈ ಅಗಸ್ತ್ಯನೆ ! ಪರಮೇಶ್ವರನಮನದಲ್ಲಿ ಹೀಗೆಂದು ಅನುದತೋರಿ ತು, ಅದೆಂತೆಂದರೆ—ಬ್ರಹ್ಮನು ಮನದಲ್ಲಿ ಇಂತೆಂದನು—ಲೋಕದಲ್ಲಿ ಸಂತಾನಹೊರತಾಗಿ ಮಿಕ್ಕಾದವರು ತಾಯಿತಂದೆಗಳನುದ್ಧರಿಸಲು ಸಮ ರ್ಥರಲ್ಲ, ತನ್ನಸ್ಮರಿಸಿದಮಾತ್ರದಿಂದಲೆ ಪುನರ್ಜನ್ಮವಿಲ್ಲದಂತೆ ಮಾಳ್ಪ ಪರ ಮೇಶ್ವರನೆ ಎನಗೆ ಮಗನಾದಕಾರಣ ಈ ಬಾಲಕನನೋಟದಿಂದ ಅಂಗಸಂ ಗದಿಂದ ಅತಿಸೌಖ್ಯವಂಪಡೆದೇನು. ಈತನಜನ್ಮ ನೆನೆದರೂ ನೋಡಿದರೂ, ಮುಟ್ಟಿದರೂ ಆನಂದರೂಪರಹರಲ್ಲದೆ ಪುನರ್ಜನ್ಮವಿಲ್ಲ, ಅಂಥಾ ಅವಾ ಙ್ಮನಸಗೋಚರನಾದ ಪರಮೇಶ್ವರನೆ ತನಗೆಮಗನಾದನು, ಈ ಬಾಲಕನು ತನ್ನಮನೆಯಲ್ಲಿ ಆಡುತ್ತಿರಲುನೋಡಿದರೆ ನಾನು ಆನಂದಪುಳ್ಕೆವನಾದೇನು ಎಂದು ತನ್ನಮನದಲ್ಲಿ ಸಂತೋಷಬಡುವನಾಗಿ ಬ್ರಹ್ಮನಮನೋರಥವಂ ಪರಮೇಶ್ವರನುತಿಳಿದು ಪುಳುಕಿತನಾಗಿ ಆನಂದಬಾಷ್ಪಗಳು ತೋರಿದವು ಎನಲು, ಅಗಸ್ತ್ಯನುಸಂತೋಷದಿಂ ನಮಸ್ಕರಿಸಿ ಎಲೆ ಸರ್ವಜ್ಞನಾದಕು ಮಾರಸ್ವಾಮಿ! ಬ್ರಹ್ಮನಮನದಲ್ಲಿದ್ದ ಅರ್ಥವನ್ನು ಈಶ್ವರತಿಳಿದಬಗೆಯೊ ನ್ನು ನೀವುಚನ್ನಾಗಿತಿಳಿದಿರಿ, ಅಂಥ ನಿಮಗೆನಮಸ್ಕಾರವೆನಲು, ಕುಮಾರ ಸ್ವಾಮಿ ಆಗಸ್ತ್ಯನಂನೋಡಿ ಸಂತೋಷದಿಂ ಮತ್ತೂ ಇಂತೆಂದನು— ಕೇಳೈಅಗಸ್ತ್ಯನೆ ! ಮಹಾದೇವನು ಬ್ರಹ್ಮನಿಗೆ ರುದ್ರನೆಂಬ ಮಗನಾಗ ಲುಃದೇವಿಯರು ದಕ್ಷನಿಗೆ ಸತೀದೇವಿಯೆಂಬ ಮಗಳಾದಳು, ಆನಂತರದಲ್ಲಿ ಸತೀದೇವಿಯು ಕಾಶೀಕ್ಷೇತ್ರಕ್ಕೆ ಬಂದು ಒಂದುಲಿಂಗಪ್ರತಿಷ್ಠೆಯಂಮಾಡಿ ಕೊಂಡು ಉಗ್ರತಪವಂಮಾಡಲು, ಈಶ್ವರನು ಆಲಿಂಗದಿಂದ ಪ್ರಸನ್ನನಾಗಿ

ಎಲೆದೇವಿ! ನಿಮಗೆ ತಪವುಸಾಕು, ವರವಬೇಡಿಕೋ ಎಂದು ಹೇಳುವಪರಮೇಶ್ವರನಂನೋಡಿ ಎಲೈಸ್ವಾಮಿಯೆ! ನೀವು ಎನಗೆಪತಿಯಾಗಬೇಕು, ಎಂದು ತನಗೆ ಇಷ್ಟಾರ್ಥವಾದ ವರವಬೇಡಿಕೊಳ್ಳಲು, ಪರಮೇಶ್ವರನು ಹಾಗೇ ಆಗಲಿ ಎಂದು ವರವನಿತ್ತು ಇಂತೆಂದನು—ಎಲೆಸತಿ! ಈಗ ನೀನುಪೂಜಿಸಿದಲಿಂಗವು ನಿನ್ನಹೆಸರಿನಿಂದ ಪ್ರಸಿದ್ಧವಾಗಲಿ, ಈ ಲಿಂಗವಪೂಜಿಸಿದವರ್ಗೆ ಮನೋರಥಸಿದ್ಧಿಯಾದೀತು, ಕನ್ಯಕೆಪೂಜಿಸಲು ಒಳ್ಳೆಪತಿದೊರಕುವನು, ಬಯಕೆಯುಂಬಯಸಿ ಪೂಜಿಸಲು ಅವರು ನೆನೆವಮನೋರಥಂಗಳು ಆಗುವವೆಂದು ಸತೀದೇವಿಗೆ ನಿರೂಪಿಸಿ ಶಿವನು ಆ ಲಿಂಗದಲ್ಲಿ ಐಕ್ಯವಾದನು, ಅತ್ತ ಸತೀದೇವಿ ತನ್ನಮನೆಗೆಬಂದು ಈ ಪ್ರಸಂಗವಂ ತಂದೆಗೆಪೇಳಲು, ದಕ್ಷನು ಬ್ರಹ್ಮನಮಾತಿನಿಂದ ರುದ್ರಂಗೆಸತೀದೇವಿಯ ವಿವಾಹವಂಮಾಡಿದನು, ಈರೀತಿಯಲ್ಲಿ ಸತೀಶ್ವರನು ಪ್ರಸಿದ್ಧವಾದನು, ಆ ಸ್ವಾಮಿಯನೋಡಲು ಸಕಲಪಾಪಹರವಾಗಿ ದಿವ್ಯಜ್ಞಾನಪ್ರಾಪ್ತಿಯಹುದು,ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನೂ ಎಂದು ವ್ಯಾಸರುತನಗೆ ಬುದ್ಧಿಗಲಿಸಿದರೆಂದು ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ. * * * * * * * * * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ಸರಸ್ವತೀಶ್ವರನ ಮಹಿಮೆಯೆಂಬ ತೊಂಭತ್ತ್ಮೂರನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ.

ತೊಂಭತ್ತ್ನಾಲ್ಕನೇ ಅಧ್ಯಾಯ—ಅಮೃತೇಶ್ವರನಮಹಿಮೆ.

ಶ್ರೀವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ಅಗಸ್ತ್ಯನಿಂತೆಂದನು—ಎಲೈಷಣ್ಮುಖನೆ! ನಿನಗೆ ಅಮೃತೇಶ್ವರನಮಹಿಮೆಯಂ ಪೇಳಬೇಕೆನಲು,ಕುಮಾರಸ್ವಾಮಿ ಇಂತೆಂದನು—ಕೇಳೈಅಗಸ್ತ್ಯ! ಪೂರ್ವದಲ್ಲಿ ಸನಾರೂಯೆಂಬ ಮುನಿಯಿದ್ದನು, ಆತನಿಗೆ ಒಜವಗಂಧಿಯೆಂಬ ಕುಮಾರನುಂಟು, ಆ ಬಾಲಕನು ಒಂದಾನೊಂದುದಿವಸ ಸಮಿತ್ತು ದರ್ಭೆಗಳ ತರು

ಮರಣಕ್ಕಾಗಿ ಅರಣ್ಯಕ್ಕೆ ಹೋಗಿ ಅಲ್ಲಿ ಸರ್ಪದಷ್ಟನಾಗಿ ಮೃತನಾಗಲು, ಅವ
ನ ಸಂಗಡ ಹೋಗಿದ್ದ ಬಾಲಕರು ಮನೆಗೆ ಬಂದು ಹೇಳಲು ಅತಿಖೇದದಿಂದ
ಹೊತ್ತುಕೊಂಡು ಬಂದು ಸ್ವರ್ಗದ್ವಾರದ ಸಮೀಪದ ಶ್ಮಶಾನಕ್ಕೆ ಕೊಂಡು
ಹೋಗಿ ನಿಕ್ಷೇಪಿಸಿ ಮನೆಗೆ ಬಂದು ಆ ಸನಾತನ ಮುನಿಯು ಶಾಸ್ತ್ರವಿಚಾರ
ವಂ ಮಾಡಿದವನಾಗಿ ಸರ್ಪದಷ್ಟನಾದ ಮಗಂಗೆ ಅಗ್ನಿಸಂಸ್ಕಾರವಂ ಮಾಡ
ಬೇಕಾಗಿ ಬಂದು ಭೂಮಿಯು ಬಗೆದು ನೋಡಲು ಆ ಶವದ ಕೆಳಗೆ ಅಪೂರ್ವ
ವಾದ ಬಿಲ್ವಪತ್ರದ ಹಣ್ಣಿನಂತೆ ಅಮೃತಮಯವಾದ ಲಿಂಗವಿದ್ದ ಕಾರಣ ಆ
ಬಾಲಕಗೆ ಪ್ರಾಣಬಂದು ಅವನು ನಿದ್ರೆಯ ಮಾಡಿ ಎದ್ದವನಂತೆ ಏಳ
ಲು, ಆ ಬಾಲಕನ ತಂದೆಯಾದ ಸನಾತನ ಮುನಿಯು ಈ ಮೃತನಾದ ಬಾಲ
ಕನು ಬದುಕುವದೆಂತೋ? ಎಂದು ಆಶ್ಚರ್ಯಪಡುತ್ತಿರಲು; ಅಷ್ಟರೊಳು
ವಂದು ಇರುವೆ ಆ ಲಿಂಗದ ಸಮೀಪದಿಂದ ಅಮೃತವ ತಂದು ಮೃತನಾದ
ಬಾಲಕನಂ ಮುಟ್ಟಿಸಿ ಎಡೆಮಾಡುತ್ತಯಿದ್ದ ಯಿರುವೆಯಂ ಕಂಡು ಆ ಮು
ನಿಯು ಈ ಯಿರುವೆ ಎನ್ನ ಮಗನಂ ಬದುಕಿಸಿತು, ಇಲ್ಲಿ ಏನು ವಸ್ತುವಿ
ದ್ದೀತೋ ಎಂದು ತನ್ನ ಮೃದುವಾದ ಹಸ್ತದಿಂದ ಮೃತ್ತಿಗೆಯಂ ತೆಗೆದುನೂ
ಕಿ ನೋಡಲು ಅಲ್ಲಿ ಬಿಲ್ವಪತ್ರದ ಹಣ್ಣಿನ ಆಕಾರದ ಲಿಂಗವು ಕಾಣಬರಲು,
ಆ ಮುನಿಯು ಬಹಳಕಾಲದ ಲಿಂಗಕ್ಕೆ ತಕ್ಕ ಅಮೃತೇಶ್ವರನೆಂಬ ನಾಮ
ಕರಣವಂ ಮಾಡಿದನು. ಅದು ಕಾರಣ ಆ ಲಿಂಗದ ಸ್ಪರ್ಶನದಿಂದ ಮುನಿಕು
ಮಾರನು ಪ್ರಾಣವ ಪಡೆದನು, ಅಂದು ಮೊದಲಾಗಿ ಆ ಲಿಂಗದ ಹೆಸರು
ಅಮೃತೇಶ್ವರನೆಂದು ಪ್ರಸಿದ್ಧಿಯಾಯಿತು, ಆ ಲಿಂಗವು ಕಲಿಯುಗದಲ್ಲಿ
ಗೋಪ್ಯವಾಗಿ ಇರುವದು, ಆ ಅಮೃತೇಶ್ವರನ ದರ್ಶನ ಸ್ಪರ್ಶನಮಾತ್ರ
ದಿಂದ ಅಮೃತಸ್ವರೂಪಿಗಳಹರು, ಅಮೃತೇಶ್ವರಯೆಂದು ಪೆಸರ್ಗೊಂ
ಡವರ್ಗೆ ಜರಾಮರಣಾದಿ ಭಯವಿಲ್ಲ, ಕೇಳು ಅಗಸ್ತ್ಯ! ಇನ್ನೊಂದು
ಲಿಂಗವುಂಟು, ಅದಾವುದೆಂದರೆ-ಮೋಕ್ಷದ್ವಾರದ ಸಮೀಪದಲ್ಲಿಹ ಮೋಕ್ಷೇ
ಶ್ವರನೆಂಬ ಲಿಂಗದ ಮುಂದೆಯಿಹ ಕರುಣೇಶ್ವರನೆಂಬ ಲಿಂಗವಿದ್ದೀತು, ಆ
ಸ್ಥಾನದ ದರ್ಶನದಿಂದ ಅನೇಕ ಫಲವುಂಟು, ಗಂಗಾಸ್ನಾನವಂ ಮಾಡಿ ಕ
ರುಣೇಶ್ವರನ ಪೂಜಿಸಲು ಕಾಶಿಯ ಸ್ಥಳವಂ ಬಿಟ್ಟು ಕಡೆಗೆ ಹೋಗನುಷ್ಟೇ,

ತ್ರವಿಸ್ತೃತವ, ಸೋಮವಾರದಿನ ಕರುಣೇಶ್ವರನ ತೊರದುತ್ತಿವಪತ್ರ ದಿಂದಪೂಜಿಸಲು ಕಾಶಿಯಕ್ಷೇತ್ರವಬಿಡದಿರನು, ಕಾಶಿಯಲ್ಲಿ ಮೋಕ್ಷದ್ವಾರೇಶ್ವರ, ಸ್ವರ್ಗದ್ವಾರೇಶ್ವರನ ನೋಡಲು ಮೋಕ್ಷವುಹಸ್ತಗತವಹುದು, ಜ್ಯೋತಿರೂಪೇಶ್ವರನನೋಡಲು ಜ್ಯೋತಿಸ್ವರೂಪಿಗಳಹರು, ಭಗೀರಥಾನುಗ್ರಹವಾಗಿಬಂದ ಗಂಗೆ ಅಂದುಮೊದಲಾಗಿ ಜ್ಯೋತಿರೂಪೇಶ್ವರನ ಪೂಜಿಸುತ್ತಿಹಳು, ಪೂರ್ವದಲ್ಲಿ ಶ್ರೀಮಹಾವಿಷ್ಣುವು ತಪವಮಾಡಿದಾಗ ಸ್ವಯಂಪ್ರಕಾಶವಾದ ಲಿಂಗವಿದು, ಈ ಲಿಂಗದಿಂದ ಈ ಕ್ಷೇತ್ರಶುಭವಾಯಿತು, ದೇಶಾಂತರದಲ್ಲಿ ಇದ್ದಾದರು ಈ ಕ್ಷೇತ್ರದಲ್ಲಿಹ ಮಣಿಕರ್ಣಿಕಾತೀರದಲ್ಲಿ ಇದ್ದ ಈಜ್ಯೋತಿರೂಪೇಶ್ವರನಂಧ್ಯಾನಿಸಲು ಶೀಘ್ರದಿಂ ಸಕಲಕಾರ್ಯಸಿದ್ಧಿಯಹುದು, ಈ ಹದಿನಾಲ್ಕುಲಿಂಗಗಳೊಳಗು ಎಂಟುಲಿಂಗ ಮಹಾಲಿಂಗಗಳು, ಓಂಕಾರೇಶ್ವರಮೊದಲಾದ ಹದಿನಾಲ್ಕುಲಿಂಗವು ದಕ್ಷೇಶ್ವರಮೊದಲಾದ ಎಂಟುಲಿಂಗವು ಶೈಲೇಶ್ವರಮೊದಲಾದಹದಿನಾಲ್ಕುಲಿಂಗವು ಅಂತೂ ಮೂಪ್ಪತ್ತಾರುಲಿಂಗಗಳು ಈ ಕಾಶೀಕ್ಷೇತ್ರಕ್ಕೆ ಮುಕ್ತಿಗೆಕಾರಣವಾದವು, ವಿಶ್ವನಾಥನು ಈ ಮೂಪ್ಪತ್ತಾರುಲಿಂಗದರೂಪಿನಲ್ಲಿ ಈ ಕ್ಷೇತ್ರದಲ್ಲಿ ಮೃತವಾದಪ್ರಾಣಿಗಳಿಗೆ ತಾರಕಬ್ರಹ್ಮೋಪದೇಶವಮಾಡುವನು ಎಂದು ಕ್ಷೇತ್ರರಹಸ್ಯ, ಈ ಮೂಪ್ಪತ್ತಾರುಲಿಂಗಗಳು ಯುಗಯುಗಂಗಳಲ್ಲಿ ಪ್ರಕಟವಾಗುತ್ತಿಹವು, ಅನಾದಿಯಾದ ಈ ಕಾಶೀಕ್ಷೇತ್ರದಲ್ಲಿ ಇದ್ದವರೆಲ್ಲಾಮುಕ್ತರು, ಯೋಗಸಿದ್ಧಿ ತಪಸ್ಸಿದ್ಧಿ ವ್ರತಸಿದ್ಧಿ ಮಂತ್ರಸಿದ್ಧಿ ತೀರ್ಥಸಿದ್ಧಿ ಇವು ಮೊದಲಾದ ಅಷ್ಟಮಹಾಸಿದ್ಧಿಗಳು, ಪುಟ್ಟಿದಜನ್ಮಭೂಮಿ ಮೋಕ್ಷಲಕ್ಷ್ಮಿಗೆ ತೌರುಮನೆ, ಇಂಥಾಕಾಶೀವಾಸವುಪುಣ್ಯದಿಂ ದೊರಕಿದಬಳಿಕ ಬಿಡಲಾಗದು, ಬಿಡದಿದ್ದರೆ ಪರಮತಪ, ಪರಮಪುಣ್ಯ, ಜನ್ಮಗಳನೆತ್ತಿದಬಳಿಕ ಮರಣಸಿದ್ಧವು, ಮರಣವಾದಬಳಿಕ ಆಹಂಥ ಪುಣ್ಯಾಪಾಪಗತಿಯುಕೆಡಿಸಿ ಮೋಕ್ಷವನೀವ ಕಾಶಿಯಂಬಿಡಲಾಗದು, ಎಂಭತ್ತನಾಲ್ಕುಲಕ್ಷ ಜೀವರಾಶಿ ಸ್ಥಾವರಜಂಗಮಗಳಲ್ಲಿ ಮನುಷ್ಯಜನ್ಮವೇದುರ್ಲಭ, ಅದರೊಳು ಕಾಶೀಕ್ಷೇತ್ರವಾಸ ಅತ್ಯಂತದುರ್ಲಭ, ಇದೆರಡು ದೊರಕಲುಮುಕ್ತಿಸಿದ್ಧ, ಯೋಗಗಳಿಗು ತಪಸ್ಸುಗಳಿಗು ಅಸಾಧ್ಯವಾದಮೋಕ್ಷವೂ ಅಲ್ಪಪ್ರಯಾಸದಿಂದ

ಲೆ ಕಾಶಿಯಲ್ಲಿ ದೊರಕುವವು, ಭೂಲೋಕದಲ್ಲಿ ಮುಕ್ತಿಯನೀವುದಕ್ಕೆ ಈ ಕಾಶೀಕ್ಷೇತ್ರಕ್ಕೆ ಸಮಾನವಾದ ಕ್ಷೇತ್ರವೇ ಇಲ್ಲ, ಇದು ತ್ರಿವಾಚಕವಾಗಿಯು ಸತ್ಯ, ಈ ಕಾಶೀಕ್ಷೇತ್ರಕ್ಕೆ ಸಮಾನವೆಂದು ಮತ್ತೊಂದು ಕ್ಷೇತ್ರವ ಪೇಳಲು ನರಕವನನುಭವಿಸುವನು, ಇಹದಲ್ಲಿಯೆ ಪಂಚಮಹಾಪಾತಕ ತಪ್ಪುವು, ಕಾಶಿಯಲ್ಲಿ ವಿಶ್ವೇಶ್ವರನು ಉತ್ತರವಾಹಿನಿಯಾದ ಗಂಗೆಯು ಇವರಿಬ್ಬರು ಮುಕ್ತಿಯನೀವರಲ್ಲದೆ ಮತ್ತೊಂದು ಸ್ಥಳ ಮುಕ್ತಿಯನೀವುದಕ್ಕೆ ಸಾಮರ್ಥ್ಯವಿಲ್ಲ, ಸಾರೂಪ್ಯಾದಿಮುಕ್ತಿಗಳು ಎಲ್ಲಿ ಬೇಕಾದರು ದೊರಕುವವು, ಈ ಕಾಶಿಯಲ್ಲಿ ಸಾಯುಜ್ಯವತಿಸುಲಭವು, ಸಾಯುಜ್ಯಮುಕ್ತಿಯುಂಟು, ಎಂದುಪೇಳಿ ಕುಮಾರಸ್ವಾಮಿ ಮತ್ತಿಂತೆಂದನು—ಈಗಮೂವತ್ತಾರು ಲಿಂಗಗಳ ಕ್ಷೇತ್ರಮಾಹಾತ್ಮ್ಯೆಯಂ ಪೇಳ್ದೆಸಲಾ, ಇನ್ನು ಮುಂದೆ ಆಗಲುಳ್ಳ ವೃತ್ತಾಂತಮಂ ಪೇಳುತಿದ್ದೇನೆ ಕೇಳು, ಅದೆಂತೆನೆ—ವೇದವ್ಯಾಸಮುಷೀಶ್ವರನು ತತ್ವನಿಶ್ಚಯವಮಾಡುವನಾಗಿ ಒಂದು ಕೃತ್ಯವಂ ಮಾಡಿದಷ್ಟು, ಅದನ್ನು ಚನ್ನಾಗಿ ಕೇಳು ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಶಿದನು ಎಂದು ವ್ಯಾಸರು ತನಗೆ ಬುದ್ಧಿಗಲಿಶಿದರೂ ಎಂದು ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ.

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಾಂದಪುರಾಣೋಕ್ತ ಕಾಶೀಮಹಿಮಾರ್ಥ ದರ್ಪಣದಲ್ಲಿ ಅಮೃತೇಶ್ವರನ ಮಹಿಮೆಯುಂಬ ತೊಂಭತ್ತನಾಲ್ಕನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ.

ತೊಂಭತ್ತೈದನೇ ಅಧ್ಯಾಯ — ವ್ಯಾಸರಭುಜಸ್ತಂಭ ಪ್ರಸಂಗ

ಶ್ರೀವಿಶ್ವೇಶ್ವರಾಯನಮಃ ॥ ಅನಂತರದಲ್ಲಿ ವ್ಯಾಸರು ಸೂತಮುನಿಗಿಂತೆಂದರು ಕೇಳೈ ಸೂತ! ಎನ್ನ ಮುಂದಣ ಭವಿಷ್ಯವೃತ್ತಾಂತವಂ ಕುಮಾರಸ್ವಾಮಿ ಸರ್ವಜ್ಞನಾದಕಾರಣ ಅಗಸ್ತ್ಯಂಗೆ ಭವಿಷ್ಯದ್ವೃತ್ತಾಂತವಂ ಕೇಳೆಂದು ಹೇಳುತ್ತಿದ್ದಾನು, ಅಮೃತೇಶ್ವರನಮಹಿಮೆಯಂ

ಪೇಳ್ವ ಕುಮಾರಸ್ವಾಮಿಗೆ ಅಗಸ್ತ್ಯನಿಂತೆಂದನು—ಎಲೈ ಕುಮಾರಸ್ವಾಮಿ! ವ್ಯಾಸರು ಒಂದು ಕೃತ್ಯವಂ ಮಾಡಿದರು ಎಂದು ಬುದ್ಧಿಗಲಿಸಿದರಲ್ಲ; ಅದೇನು ಕೃತ್ಯವ ಮಾಡಿದರು. ಅಷ್ಟಾದಶಪುರಾಣ ಕರ್ತೃವಾದ ವ್ಯಾಸನು ಎಂತು ವೇದನಸ್ಫೋಗಿ ದೇವತ್ವವನರಿಯುವಿದ್ದನು, ಆ ವೃತ್ತಾಂತವಂ ಪೇಳಬೇಕೆಂದು ಬೆಸಗೊಳ್ಳಲು, ಕುಮಾರಸ್ವಾಮಿ ಇಂತೆಂದನು—ಕೇಳೈ ಅಗಸ್ತ್ಯನೆ? ಸಕಲವೇದಗಳಂ ನಾನಾಭಾಷ್ಯಗಳಂ ವಿಂಗಡಿಸಿ ಅಷ್ಟಾದಶಪುರಾಣ, ಸೂತ್ರ, ಸ್ಮೃತಿ, ಬ್ರಹ್ಮರಹಸ್ಯ, ಮೊದಲಾದವನ್ನು ಸಕಲಪಾಪಗಳಪರಿಹರಿಪ ಭಾರತವಂ ಶಿಷ್ಯರಿಗೆ ಪಾಠವ ಮಾಡಿಸಿ ಪ್ರಸಿದ್ಧನಾಗಿ ಒಂದು ವ್ಯಾಳೆಯಲ್ಲಿ ಭೂಪ್ರದಕ್ಷಿಣವ ಮಾಡಿಕೊಂಡು ನೈಮಿಶಾರಣ್ಯಕ್ಕೆ ಬಂದು ಅಲ್ಲಿ ತಪೋಧನರಾದ ತ್ರಿಪುಂಡ್ರ ಭಸ್ಮೋದ್ಧೂಳನ ರುದ್ರಾಕ್ಷಗಳಂ ಧರಿಸಿ ರುದ್ರಸೂಕ್ತಗಳ ಜಪಿಸುತ್ತಾ ಲಿಂಗಾರ್ಚನೆಯಂ ಮಾಡುತ್ತಾ ಮುಕ್ತಿಪ್ರದನು ಶಿವನೊಬ್ಬನಲ್ಲದೆ ಅನ್ಯವಿಲ್ಲವೆಂದು ತತ್ವನಿಶ್ಚಯವುಳ್ಳ ಶೌನಕ ಮೊದಲಾದ ಎಂಭತ್ತೆಂಟು ಸಾವಿರ ಬ್ರಹ್ಮಋಷಿಗಳಂ ನೋಡಿ ವ್ಯಾಸರು ತನ್ನ ತರ್ಜನಿಯು ಬೆರಳೆತ್ತಿ ಇಂತೆಂದನು—ಕೇಳಿರೈ ಋಷಿಗಳಿರಾ! ನಾನು ಸಕಲವೇದಶಾಸ್ತ್ರಜಾಲವನ್ನು ಶೋಧಿಸಿ ನೋಡಿ ನಿಶ್ಚೈಸಿ ಅರ್ಥವನ್ನು ಹೇಳೇನು, ವೇದದಲ್ಲಿ ಶಾಸ್ತ್ರದಲ್ಲಿ ಪುರಾಣದಲ್ಲಿ ರಾಮಾಯಣ, ಭಾರತ, ಭಾಗವತ ಮೊದಲಾದ ಇತಿಹಾಸಗಳಲ್ಲಿ ಅವರ ಆದಿಮಧ್ಯ ಅಂತ್ಯಂಗಳಲ್ಲಿಯು ಶ್ರೀಪತಿಯೊಬ್ಬನೇ ಸೇವಿಸತಕ್ಕವನಲ್ಲದೆ ಮತ್ತೊಬ್ಬರಿಲ್ಲ, ಇದು ಮೂರುಭಾರಿಗೂ ಸತ್ಯ, ವೇದಾಂತಕ್ಕಿಂತಲು ವಿಶೇಷವಾದ ಶಾಸ್ತ್ರವಿಲ್ಲ, ಲಕ್ಷ್ಮೀರಮಣನು ಸ್ವರ್ಗಪ್ರದನು, ಲಕ್ಷ್ಮೀಪತಿಯೆ ಮೋಕ್ಷಪ್ರದನಲ್ಲದೆ ಅನ್ಯರಿಲ್ಲ, ಅದುಕಾರಣ ಶ್ರೀಪತಿಯನೆ ಧ್ಯಾನವ ಮಾಡಬೇಕು, ನಾರಾಯಣ ಹೊರತಾಗಿ ಮಿಕ್ಕಾದ ದೇವತೆಗಳ ಭಜಿಸಿದವರು ಸಂಸಾರಚಕ್ರದಲ್ಲಿ ತೊಳಲುತ್ತಿಹರು, ವಿಷ್ಣುವ ಸೇವಿಸಿದವರು ಮೂರುಲೋಕದವರಿಗು ಸೇವ್ಯರಹರು, ಶ್ರೀಮಹಾವಿಷ್ಣುವೊಬ್ಬನೇ ಧರ್ಮಾರ್ಥಕಾಮ ಮೋಕ್ಷಗಳ ಕೊಡುವನು, ಆತನಲ್ಲದೆ ಮಿಕ್ಕಾದವರು ಕೊಡಲರಿಯರು, ವಿಷ್ಣುವಂ ಭಜಿಸಿದವನು ವೇದವನೋದಿದ ಬ್ರಾಹ್ಮಣನಂತೆ ಬಹಿಷ್ಕಾರಿಯಹನು, ಎಂದು ನುಡಿದ ವ್ಯಾ

ಸರವಚನವಂ ಕೇಳಿ ನೈಮಿಶಾರಣ್ಯವಾಸಿಗಳಾದ ಮುನಿಗಳು ಎದೆನಡುಗಿ ವ್ಯಾಸಮುನಿಗೆ ಇಂತೆಂದರು—ಎಲೈವ್ಯಾಸಮುನಿಯೆ ! ನೀನು ನಮಗೆಲ್ಲರಿಗೂಪೂಜ್ಯನು, ಸಕಲವೇದಂಗಳವಿಸ್ತರಿಸಿದೆ, ಸಕಲಪುರಾಣಂಗಳಬಲ್ಲೆ, ಮಹಾಭಾರತವಪೇಳಿದೆ, ಅಂಥಾನಿನಗಿಂತಲು ತತ್ವಜ್ಞಾನಿಗಳಾದವರು ವಿಶೇಷವಾಗಿ ವಿಶ್ವಪತಿಯ ನಿವಾಸಸ್ಥಾನದಲ್ಲಿ ಇದ್ದಾರೂ, ಯುಗಧರ್ಮಂಗಳಿಲ್ಲದಂಥ ತಾನು ಭೂಮಿಯುವ್ಯಾಲಿಇದ್ದರೂ ಭೂಮಿಯಲ್ಲದಂಥಾ ಕಾಶಿಯ ಪಟ್ಟಣಕ್ಕೆಹೋಗಿ ಪರಮೇಶ್ವರನಮುಂದೆ ಈಗ ನೀನಾಡಿದ ತತ್ವಸಿದ್ಧಿಯ ವಾಕ್ಯವಂ ನಿರ್ವಹಿಸಿಕೊಂಡು ಬಂದಲ್ಲದೆ ನಮ್ಮ ಒಬ್ಬರಿಗು ವಿಶ್ವಾಸ ಪುಟ್ಟದುಎನಲು, ವ್ಯಾಸಮುನಿಕೇಳಿ ಕೋಪವಂತಾಳಿ ಅಸಂಖ್ಯವಾದ ತನ್ನ ಶಿಷ್ಯರುಸಹಿತವಾಗಿ ಕಾಶೀಕ್ಷೇತ್ರವಪೊಕ್ಕು ಪಂಚನದತೀರ್ಥ, ಪಾದೋದಕತೀರ್ಥದಲ್ಲಿ ಸ್ನಾನವಂಮಾಡಿ ಬಿಂದುಮಾಧವನಂಸೇವಿಸಿ,ಆದಿಕೇಶವನಂ ಸೇವಿಸಿ,ಅಲ್ಲಿಪಂಚರಾತ್ರಿಇದ್ದು, ವಿಷ್ಣುಭಕ್ತರು ಹಿಂದೆಮುಂದೆ ತಾಳಶಂಖಧ್ವನಿಗಳಂಗೈಯುಲು, ಸಂತೋಷಚಿತ್ತನಾಗಿ ಜಯಜಯವಿಷ್ಣು,ಹೃಷೀಕೇಶ, ಗೋವಿಂದ, ಮಧುಸೂದನ, ಅಚ್ಯುತ, ಅನಂತ, ವೈಕುಂಠ, ಮಾಧವ, ಉಪೇಂದ್ರ, ಕೇಶವ, ತ್ರಿವಿಕ್ರಮ, ಗದಾಪಾಣಿ, ಶಾರ್ಙಪಾಣಿ, ಜನಾರ್ದನ, ಶ್ರೀವತ್ಸವಕ್ಷ. ಶ್ರೀಕಾಂತ, ಪೀತಾಂಬರಧರ, ಮುರಾಂತಕ, ಕೈಟಭಾರಿ, ಬಲಿಧ್ವಂಸಿ, ಕಂಸಾರಿ, ಕೇಶಿಸೂದನ, ನಾರಾಯಣ, ಅಸುರರಿಪು, ಕೃಷ್ಣ, ಶೌರಿ, ಚತುರ್ಭುಜ, ದೇವಕೀಹೃದಯಾನಂದನ, ಯಶೋದಾನಂದನ, ಪುಂಡರೀಕಾಕ್ಷ, ದೈತ್ಯಾರಿ, ದಾಮೋದರ, ಬಲಿಪ್ರಿಯ, ಬಲಾರಾತಿಸ್ತುತ, ವಾಸುದೇವ, ವಸುಪ್ರದ, ವಿಶ್ವಕರ್ತ, ತಾರ್ಕ್ಷ್ಯರಥ, ವನಮಾಲಿ, ಸುರೋತ್ತಮ, ಅಧೋಕ್ಷಜ, ಮಂದರಧರ, ಪದ್ಮನಾಭ, ಜಲಧಿಶಯನ, ನೃಸಿಂಹ, ಯಜ್ಞವರಾಹ, ಗೋಪ, ಗೋಪಾಲವಲ್ಲಭ, ಗೋಪೀಪತಿ, ಗುಣಾತೀತ, ಗರುಡಧ್ವಜ, ಗೋತ್ರಭೃತೀ, ಚಾಣೂರಮರ್ದನ, ತ್ರೈಲೋಕ್ಯರಕ್ಷಣ, ಸಕಲಜನನಾಥ, ಜನಾನಂದ,ನೀಲೋತ್ಪಲದ್ಯುತಿಕಾಯ, ಕೌಸ್ತುಭಶೋಭಿತೋರಸ್ಕ,ಪೂತನಾಧಾತುಶೋಷಣ,ಜಗದ್ರಕ್ಷಾಮಣಿ, ನರಕಾಪಹಾರಿ, ಸಹಸ್ರಶೀರ್ಷಪುರುಷ, ಪುರುಹೂತ, ಸುಖಪ್ರದ,

ಭೂತಭವಿಷ್ಯದ್ವರ್ತಮಾನವೆಲ್ಲವೂ ನೀನೆ, ದೇವದೇವ ಜಯ ಜಯ ಇಂಥಾ ನಾಮಾವಳಿಯಿಂದ ಮಹಾವಿಷ್ಣುವಂ ಸ್ತುತಿಸುತ್ತಿಲು, ತನ್ನ ಮನಬಂದಂತೆ ಪರವಶನಾಗಿ ಕುಣಿದಾಡುತ್ತಾ ವಿಶ್ವೇಶ್ವರನ ಹಜಾರದ ಮುಂದೆ ಜ್ಞಾನವಾಪೀತೀರ್ಥದ ಮೂಡಲಲ್ಲಿ ತುಲಸೀವನಮಾಲೆಗಳಂ ಧರಿಸಿದ ಭಾಗವತರೊಳು ತಾನು ತಾಳವಬಾರಿಸುತ್ತಾ ಕೋಳಲಂ ಪಿಡಿಯುತ್ತಾ ಶ್ರುತಿಯಂ ಹಿಡಿಯುತ್ತಾ ವ್ಯಾಸಮುನಿಯು ತನ್ನ ಶಿಷ್ಯರ ಮಧ್ಯದಲ್ಲಿ ನಿಂತು ದಕ್ಷಿಣಭುಜವನೆತ್ತಿ ನೈಮಿಶಾರಣ್ಯದಲ್ಲಿ ಮುನಿಗಳ ಮುಂದೆ ಪಠಿಸಿದ ವಿಷ್ಣುತತ್ವ ನಿರ್ಣಯವಂ ನುಡಿದನದೆಂತೆನೆ-ಸಕಲವೇದಶಾಸ್ತ್ರಂಗಳಂ ಮಥಿಸಿ ನಿಶ್ಚಯವಮಾಡಿದ ತತ್ವವಿದು, ಅದಾವುದೆನೆ—ಸರ್ವೇಶ್ವರನಾದ ಶ್ರೀಹರಿಯನೆ ಸೇವಿಸಬೇಕೂ ಎಂಬ ಗ್ರಂಥವಂ ಪಠಿಸುತ್ತಿಹ ಅಸಿತರೊಳು ನಂದಿಕೇಶ್ವರನು ಲೀಲೆಯಿಂದ ವ್ಯಾಸನೆ ಭುಜಸ್ತಂಭವಮಾಡಲೂ, ಆಗ ವಿಷ್ಣುವು ಗೂಢವಲ್ಲಿ ಬಂದು ವ್ಯಾಸಮುನಿಗಿಂತೆಂದನು— ಎಲೈ ವ್ಯಾಸಮುನಿಯೇ ! ನೀನು ಮಹಾ ಅಪರಾಧವಂ ಮಾಡಿದೆ ಅದರಿಂದ ಎನಗೆ ಮೊದಲಾಗಿಯೂ ಮಹಾಭಯವಾಗುತ್ತಿದ್ದೀತೂ, ವಿಶ್ವಪತಿ ಒಬ್ಬನಲ್ಲದೆ ಲೋಕದಲ್ಲಿ ಸಮರ್ಥರುಂಟೆ? ಆ ಪರಮೇಶ್ವರನ ಅನುಗ್ರಹದಿಂದ ತಾನು ಚಕ್ರಪಾಣಿಯಾದೆನು, ಲಕ್ಷ್ಮೀಪತಿಯಾದೆನು, ತ್ರೈಲೋಕ್ಯವನ್ನು ಸಲಹುವ ಸಾಮರ್ಥ್ಯವನ್ನು ಎನಗೆ ಆ ಸ್ವಾಮಿಯೇ ಕೊಟ್ಟನು, ಆತನ ಭಕ್ತಿಯಿಂದಲೆ ಸಕಲ ಐಶ್ವರ್ಯವುಂ ಪಡೆದೆನು ನಿನಗೆ ಎನ್ನ ಮ್ಯಾಲಣ ಭಕ್ತಿಯುಂಟಾದರೆ ಆ ವಿಶ್ವಪತಿಯ ಸ್ತುತಿಸು, ಇಂಥಾ ಬುದ್ಧಿ ಎಂದಿಗೂ ಬ್ಯಾಡವೆಂದು ನುಡಿದ ವಿಷ್ಣುವಿನ ವಾಕ್ಯವಂ ಕೇಳಿ ವ್ಯಾಸರು ಕೈಸನ್ನೆಯಂ ಮಾಡಿ ಎಲೈ ಸ್ವಾಮಿ ! ಈ ನಂದಿಕೇಶ್ವರನು ತನ್ನ ದೃಷ್ಟಿಯಿಂದಲೆ ನನ್ನ ಭುಜವಂ ಸ್ತಂಭಿಸಿದನು, ಆ ಭಯದಿಂದ ಜಿಹ್ವಾಸ್ತಂಭವಾಗಿಯಿದ್ದೀತು, ಅದರಿಂದ ಈಗ ಭವಾನೀಪತಿಯಾದ ಭವಹರನಾದ ಪರಮೇಶ್ವರನ ಸ್ತುತಿಯು ಮಾಡುವಹಾಗೆ ಕಂಠನಾಳವ ತಡೆಹಬೇಕೆನಲು, ವಿಷ್ಣುವು ವ್ಯಾಸನ ಕಂಠವಸ್ಪರ್ಶನವಮಾಡಿ ಅಂತರ್ಧಾನವಾಗಲು, ಸತ್ಯವತಿಯ ಕುಮಾರನಾದ ವ್ಯಾಸನು ಆಕಾಶದಲ್ಲಿ ಸ್ತಂಭಿತವಾದ ಭುಜವುಳ್ಳವನಾಗಿ ವಿಶಾಲಬುದ್ಧಿಯಿಂದ ಮಹೇಶ್ವರನಂ ಸ್ತುತಿಸಿದನು, ಅದೆಂತನೆ—ಪರ

ಬ್ರಹ್ಮವು ಒಂದೆ ಅಲ್ಲದೆ ನಾನಾಪ್ರಕಾರವಿಲ್ಲ. ಆ ಬ್ರಹ್ಮವು ಮಹಾಶಕ್ತಿಯುಳ್ಳ ಮಹಾದೇವನಲ್ಲದೆ ಮತ್ತೊಬ್ಬರಿಲ್ಲ, ಮತ್ತೊಬ್ಬನಿದ್ದರೆ ಆತನೆಲ್ಲಿಹನು, ಹೆಸರೇನು, ಕ್ಷೀರಸಮುದ್ರವ ಮಥಿಸುವಾಗ ಹುಟ್ಟಿದ ಸಕಲಲೋಕ ಭಯಂಕರವಾದ ತನ್ನ ಜ್ವಾಲೆಗಳಿಂ ವಿಷ್ಣು ಮೊದಲಾಗಿಯು ಕೃಷ್ಣವರ್ಣವನ್ನು ಮಾಡಿದ ಕಾಲಕೂಟವಿಷವನ್ನು ಮಹೇಶ್ವರಹೊರತಾಗಿ ಮತ್ತೊಬ್ಬ ಧರಿಸಿದವನ್ಯಾರು, ಆ ಮಹೇಶ್ವರಂಗೆ ಶ್ರೀಪತಿಯಾದ ವಿಷ್ಣುವೂ ಬಾಣವಾದನು, ಬ್ರಹ್ಮನು ಸಾರಥಿಯಾದನು, ಭೂಮಿ ರಥವಾಯಿತು, ವೇದಂಗಳು ಕುದುರೆಯಾದವು, ಅಂಥಾ ರಥದಲ್ಲಿ ಕುಳಿತು ಅಸಾಧ್ಯವಾದ ತ್ರಿಪುರವನ್ನು ಒಂದು ಅಂಬಿನಿಂದ ಎಚ್ಚಂಥಾ ಸರ್ವೇಶ್ವರಗೆ ಸರಿಯೆಂಬವರುಂಟೆ, ಪುಷ್ಪಬಾಣಂಗಳಿಂದ ಸಕಲಲೋಕಂಗಳ ಗೆದ್ದ ಮನ್ಮಥನು ಮಹಾದೇವನು ಸಾಧಾರಣದೇವತೆ ಎಂದು ನೋಡಿ ಭಸ್ಮವಾದನು, ಅಂಥಾ ಮದನಾರಿಗಿಂತಲು ಸ್ತೋತ್ರಾರ್ಹರ್ಯಾರು, ವೇದಗಳು, ವಿಷ್ಣುವು, ಬ್ರಹ್ಮನು, ಮನೋವಾಕ್ಯಗಳು, ಆ ಸ್ವಾಮಿಯ ಸರಿಯವು, ಎನ್ನಂಥಾ ಅಲ್ಪಮತಿಗಳು ಇಂಥಾ ವಿಶ್ವಪತಿಯ ಸ್ತುತಿಸಬಲ್ಲರೆ, ಆ ವಿಶ್ವನಾಥನು ಸಕಲರಲ್ಲಿಯೂ ಇಹನು, ಆತನಲ್ಲಿ ಸಕಲಪ್ರಪಂಚವೆಲ್ಲವೂ ಇದ್ದೀತು, ಆತನು ಸಕಲವು ತಾನಾಗಿ ಇದ್ದನು, ಅವನು ಸಕಲವನ್ನು ಸೃಜಿಸಿ ಸಲಹಿ ಸಂಹಾರವ ಮಾಡುತ್ತಿಹನು, ಆ ಸ್ವಾಮಿಗೆ ಆದಿ ಇಲ್ಲ, ಸಕಲಕ್ಕೂ ತಾನೆ ಆದಿಯಾಗಿ ಇಹನು, ಸಕಲಕ್ಕೂ ಅಂತಕನಾಗಿ ಇಹನು, ತನಗೆ ಅಂತಕನಿಲ್ಲ, ಅಂತ್ಯವಿಲ್ಲ, ಅಂಥಾ ಸ್ವಾಮಿಗೆ ನಮಸ್ಕಾರವ ಮಾಡುತ್ತಾ ಇದ್ದೇನೆ ? ಅವನ ಒಂದು ನಾಮಸ್ಮರಣೆ ಅಶ್ವಮೇಧಯಾಗಫಲಕ್ಕೆ ಸಮಾನ, ಅವನಿಗೆ ಮಾಡಿದ ಒಂದು ನಮಸ್ಕಾರದಿಂದ ಇಂದ್ರಪದವಹುದು, ಆರು ಸ್ತುತಿಮಾಡಲು ಸತ್ಯಲೋಕವಾಸವಹುದೊ? ಆರಕ್ಷೇತ್ರದಲ್ಲಿ ದೇಹತ್ಯಾಗವ ಮಾಡಿದರೆ ಮೋಕ್ಷವುಂಟೋ ? ಅಂಥಾ ಸ್ವಾಮಿಗೆ ನಮಸ್ಕರಿಸುತ್ತಾ ಇದ್ದೇನೆ ? ತಾನು ಮಹೇಶ್ವರನಲ್ಲದೆ ಅನ್ಯದೇವತೆಯನ್ನು ಧ್ಯಾನಿಸೆನು, ಶಂಭು ಹೊರತಾಗಿ ಮತ್ತೊಬ್ಬರ ಸ್ತುತಿಸೆನು, ತ್ರಿನೇತ್ರನಂ ಬಿಟ್ಟು ಇತರ ದೈವಕ್ಕೆ ನಮಿಸೆನು, ಇದು ಮೂರು ಭಾರಿಗು ಸತ್ಯ, ಇಂತೆಂದು ಸ್ತೋತ್ರವ ಮಾಡುವನಿತರೊಳು ನಂದಿಕೇಶ್ವರನು ಪರಮೇಶ್ವರನ

ಕೃಪಾವೃಷ್ಟಿಸಂಜ್ಞೆಯರಿತು ಭುಜಸ್ತಂಭವಂ ಬಿಡಿಸಲು, ವ್ಯಾಸಮುನಿ
ಆಶ್ಚರ್ಯಬಟ್ಟು ನೈಮಿಶಾರಣ್ಯವಾಸಿಗಳಾದ ಬ್ರಾಹ್ಮಣರಿಗೆ ನಮಸ್ಕಾರ
ವಂ ಮಾಡಿದನು, ಅನಂತರದಲ್ಲಿ ನಂದಿಕೇಶ್ವರನಿಂತೆಂದನು—ಎಲೈವ್ಯಾಸ
ಮುನಿಯೆ! ಈಗ ನೀಮಾಡಿದಸ್ತುತಿಯುಂ ಜಪಿಸಲು ಈಶ್ವರನು ಪ್ರಸನ್ನನಹ
ನು,ಈ ವ್ಯಾಸಾಷ್ಟಕವನ್ನು ಪ್ರಾತಃಕಾಲದಲ್ಲಿಪಠಿಸಲುದುಸ್ಸ್ವಪ್ನ ಪಾಪ
ಶಮನ,ಶಿವನಸಾನ್ನಿಧ್ಯಕ್ಕೆಕಾರಣ, ಮಾತಾಪಿತೃವಧೆ ಗೋಹತ್ಯಾ ಸ್ತ್ರೀ
ಹತ್ಯಾ, ಶಿಶುಹತ್ಯಾ, ಸುರಾಪಾನ, ಸುವರ್ಣಸ್ತೇಯ ಮೊದಲಾದ ಪಾಪ
ಹರ, ಇಂತೆಂದು ನಂದಿಕೇಶ್ವರಪೇಳಲು, ವ್ಯಾಸನುಮತ್ತೂಸ್ತುತಿಸಿ,ಅಂ
ದುಮೊದಲಾಗಿ ಶಿವನಲ್ಲಿಭಕ್ತಿಯುಳ್ಳವನಾಗಿ ಕಾಶೀಕ್ಷೇತ್ರದಲ್ಲಿ ಘಂಟಾಕರ್ಣ
ತೀರ್ಥದಮುಂದೆ ಲಿಂಗಪ್ರತಿಷ್ಠೆಯುಂ ಮಾಡಿ ವಿಭೂತಿರುದ್ರಾಕ್ಷಿಗಳಂಧರಿಸಿ
ಲಿಂಗಾರ್ಚನಪರನಾಗಿ ಕ್ಷೇತ್ರಸನ್ಯಾಸವಮಾಡಿಕೊಂಡು ಅದುಮೊದಲಾ
ಗಿಕಾಶೀಕ್ಷೇತ್ರದಲ್ಲಿಇದ್ದನು,ಘಂಟಾಕರ್ಣತೀರ್ಥದಲ್ಲಿ ಸ್ನಾನವಮಾಡಿ ವ್ಯಾ
ಸೇಶ್ವರನನೋಡಿ ಸ್ಥಲಾಂತರಕ್ಕೆ ಹೋಗಿ ಮೃತನಾದವರೂ, ಕಾಶಿಯಲ್ಲಿಮೋ
ಕ್ಷವಪಡವರು, ಜ್ಞಾನಭ್ರಂಶಹರ, ಸಕಲಪಾಪಹರ, ವ್ಯಾಸೇಶ್ವರನಭಕ್ತ
ಗೆ ಕಲಿಕಾಲಭಯವಿಲ್ಲ, ಕ್ಷೇತ್ರವಿಘ್ನಹರ, ಪಾಪಭಯವಿಲ್ಲವೆಂದು ಕುಮಾ
ರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನೂ ಎಂದು ವ್ಯಾಸರುತನಗರುಹಿದರೆಂ
ದು ಸೂತಪುರಾಣೀಕನು ಶೌನಕಾದಿಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅ
ಧ್ಯಾಯಾರ್ಥ. * * * * * * * * * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ
ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋ
ಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂಧಪುರಾಣೋ
ಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ವ್ಯಾಸರಭುಜಸ್ತಂಭಪ್ರಸಂಗವೆಂಬ
ತೊಂಭತ್ತೈದನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ. *

ತೊಂಭತ್ತಾರನೇಅಧ್ಯಾಯ—ವ್ಯಾಸರಶಾಪಮೋಕ್ಷ,

ಶ್ರೀವಿಶ್ವೇಶ್ವರಾಯನಮಃ॥ ॥ಅನಂತರದಲ್ಲಿಅಗಸ್ತ್ಯನಿಂತೆಂದನು,
ಎಲೈ ಕುಮಾರಸ್ವಾಮಿ! ವ್ಯಾಸನುಶಿವಭಕ್ತನಾಗಿದ್ದು ಕಾಶೀಕ್ಷೇತ್ರದಮಹಿ

ಮೆಚ್ಚುಂಬಲ್ಲವನಾಗಿ ಕ್ಷೇತ್ರಸನ್ಯಾಸವಂಮಾಡಿಇದ್ದು ಪರಮೇಶ್ವರನಪ್ರಭಾವವಂತಿಳಿಯುಇದ್ದ ಜ್ಞಾನಿಗಳೊಳುಶ್ರೇಷ್ಠನಾಗಿಇದ್ದ ಇಂಥಾ ಮುಕ್ತಿಕ್ಷೇತ್ರವಾದ ಕಾಶಿಯನ್ನು ಏನುಕಾರಣ ಶಪಿಸುವನಾದನು, ಆ ವೃತ್ತಾಂತವಂ ಹೇಳಬೇಕೆನಲು, ಅಗಸ್ತ್ಯಂಗೆ ಕುಮಾರಸ್ವಾಮಿ ಇಂತೆಂದನು-ಎಲೈಅಗಸ್ತ್ಯನೆ ! ಮುಂದೆಆಗುವ ವ್ಯಾಸರಚರಿತ್ರೆಯಂ ಕೇಳದೆಯಲ್ಲ ಅವನ್ನುವಿಸ್ತಾರವಾಗಿ ಹೇಳೇನುಕೇಳು, ಎಲೈಅಗಸ್ತ್ಯನೆ ! ವ್ಯಾಸಮುನಿಯು ನಂದಿಕೇಶ್ವರನಿಂದ ತನ್ನಭುಜಸ್ತಂಭವಾದುದು ಮೊದಲಾಗಿ ಭಕ್ತಿಯಿಂದ ಪರಮೇಶ್ವರನಸ್ತುತಿಯಂ ಮಾಡುತ್ತಿಹನು, ಕಾಶಿಯಲ್ಲಿ ಅನೇಕ ಲಿಂಗಗಳೊಳಗೆ ವಿಶ್ವನಾಥನೆ ಸೇವಿಸತಕ್ಕವನು, ತೀರ್ಥಂಗಳೊಳಗೆ ಮಣಿಕರ್ಣಿಕೆ ಶ್ರೇಷ್ಠವಾದುದು. ಅಂಥಾಮಣಿಕರ್ಣಿಕೆಯಲ್ಲಿ ಸ್ನಾನವಮಾಡಿ ವಿಶ್ವೇಶ್ವರನಂಸೇವಿಸಿ ಮುಕ್ತಿಮಂಟಪದಲ್ಲಿ ಕುಳ್ಳಿರ್ದುಮಹೇಶ್ವರನಮಹಿಮೆಯಂ ಶಿಷ್ಯರಮುಂದೆ ವ್ಯಾಖ್ಯಾನವಮಾಡುತ್ತಿಹನು, ಅದೆಂತೆನೆ—ಈ ಕಾಶಿಯಲ್ಲಿ ಪುಣ್ಯ ಪಾಪವ ಮಾಡಿದರೂ ಅವಕ್ಕೆ ಪ್ರಳಯ ಕಾಲದಲ್ಲಿಯೂ ನಾಶವಿಲ್ಲ,ಅದುಕಾರಣ ಶ್ರೇಯಸ್ಕರವಾದ ಕೃತ್ಯವಂ ಮಾಡಬೇಕು, ಈಕಾಶೀಕ್ಷೇತ್ರದಲ್ಲಿ ಸಿದ್ಧಿಯನಪೇಕ್ಷಿಸಿದವರೂ ಯಾವಜ್ಜೀವವುಮಣಿಕರ್ಣಿಕಾತೀರ್ಥದಲ್ಲಿ ಸ್ನಾನವಂಮಾಡಿ ಪತ್ರಪುಷ್ಪಫಲೋದಕಗಳಿಂದ ವಿಶ್ವೇಶ್ವರನಪೂಜಿಸಿ ತಮ್ಮ ವರ್ಣಾಶ್ರಮಧರ್ಮಂಗಳಂ ಬಿಡದೆ ನಿತ್ಯವು ಕ್ಷೇತ್ರಮಹಾತ್ಮೆ ಲಿಂಗಮಹಾತ್ಮೆ ತೀರ್ಥಮಹಾತ್ಮೆಯಂ ಕೇಳುತ್ತಾ ಯಥಾಶಕ್ತಿ ನಾನಾವಸ್ತುಗಳ ದಾನವನೀಯಲು ನಿರ್ವಿಘ್ನದಿಂ ಕಾಶೀಕ್ಷೇತ್ರವಾಸ ದೊರಕಿ ಮುಕ್ತಿಯನೈದುವರು, ಆದರಿಂದ ಪರೋಪಕಾರವನೆಮಾಡಬೇಕು,ಪರ್ವತಿಥಿಗಳಲ್ಲಿ ವಿಶೇಷವಾಗಿ ಸ್ನಾನದಾನ ಜಪ ಹೋಮಂಗಳಂಮಾಡಬೇಕು, ನಿತ್ಯವು ಪಂಚಕ್ರೋಶಯಾತ್ರೆ, ಅಂತರ್ಗೃಹಯಾತ್ರೆಯಂಮಾಡಿ ಕ್ಷೇತ್ರಾಧಿದೇವತೆಗಳಪೂಜಿಸಬೇಕು, ಪಾತಕವು ಪ್ರಕಟವಂಮಾಡದೆ ಪರಸ್ತ್ರೀ ಪರದ್ರವ್ಯಾಪಹಾರ, ಪರಾಪಕಾರ, ಪರನಿಂದೆ, ಆತ್ಮಸ್ತುತಿ, ಅಸತ್ಯಗಳಂ ನುಡಿಯಲಾಗದು,ಇಲ್ಲಿರ್ದಪ್ರಾಣಿಗಳಿಗೆ ಹಿತವಾಗಿ ಸತ್ಯವನೆ ನುಡಿಯಬೇಕು, ನಾನಾಉಪಾಯಂಗಳಿಂದಲು ಇಲ್ಲಿಇದ್ದಪ್ರಾಣಿಗಳಂ ರಕ್ಷಿಸ

ಬೇಕು, ಈಕ್ಷೇತ್ರದಲ್ಲಿ ಒಂದುಪ್ರಾಣಿಯುಸಲಹಲು ಮೂರುಲೋಕವಸಲಹಿದ ಪುಣ್ಯವಹುದು, ಕ್ಷೇತ್ರಸನ್ಯಾಸವಮಾಡಿ ವಾಸವಾಗಿಇದ್ದರೂ ಜೀವನ್ಮುಕ್ತರು,ರುದ್ರಸ್ವರೂಪಿಗಳು, ಅವರಪೂಜಾ ಸಮಸ್ಕಾರಂಗಳಿಂದ ಸಂತೋಷಪಡಿಸಲು ವಿಶ್ವಪತಿಯೂ ಸಂತುಷ್ಟನಹನು, ದೂರದೇಶದಲ್ಲಿ ಇದ್ದವಾಂವರೂ ಈಕಾಶೀವಾಸಿಗಳ ಸಂತೋಷಬಡಿಸಲು ವಿಶ್ವನಾಥನು ಸಂತೋಷಪಡುವನು., ಇಲ್ಲಿ ಇದ್ದವರು ಇಂದ್ರಿಯನಿಗ್ರಹವಮಾಡಬೇಕು, ಮರಣಮೋಕ್ಷಗಳಬಯಸಬೇಕು, ವ್ರತಸ್ನಾನಾದಿಗಳ ಮಾಡುವದಕ್ಕೋಸ್ಕರ ಶರೀರವ ರಕ್ಷಿಸಬೇಕಲ್ಲದೆ ವ್ಯರ್ಥವಾಗಿ ಶರೀರಪೋಷಣವಂಮಾಡಲಾಗದು,ತಪಸ್ಸಿಗೋಸ್ಕರ ಅಧಿಕ ಆಯುಷ್ಯವಬಯಸಬೇಕು, ಮನದಲ್ಲಿ ಪಾಪವಿಚಾರವಂ ನೆನೆಯಲಾಗದು, ಇಲ್ಲಿ ಒಂದುದಿನಮಾಡಿದ ಪುಣ್ಯವು ಸ್ಥಳಾಂತರದಲ್ಲಿ ನೂರುವರ್ಷ ಮಾಡಲು ಶಕ್ಯವಲ್ಲ. ಸ್ಥಳಾಂತರದಲ್ಲಿ ಯಾವಜ್ಜೀವವೂಮಾಡಿದ ಯೋಗಾಭ್ಯಾಸಫಲವೂ ಇಲ್ಲಿ ಒಂದುಪ್ರಾಣಾಯಾಮದಿಂ ದೊರಕುವದು, ಮಿಕ್ಕಾದ ಸ್ಥಳಾಂತರ ತೀರ್ಥದಲ್ಲಿ ಜನ್ಮಪ್ರಭೃತಿ ಮಾಡಿದಸ್ನಾನಫಲವು ಮಣಿಕರ್ಣಿಕಾತೀರ್ಥದಲ್ಲಿ ಮಾಡಿದ ಒಂದು ಸ್ನಾನದಿಂದ ದೊರಕುವದು, ಒಮ್ಮೆ ವಿಶ್ವೇಶ್ವರನ ಪೂಜಿಸಿದಫಲಕ್ಕೆ ಯಾವಜ್ಜೀವವೂ ಮಾಡಿದ ಶಿವಪೂಜೆಯೂ ಸರಿಬಾರದು, ಸಾವಿರಜನ್ಮದಿಂ ಆರ್ಜಿಸಿದ ಪುಣ್ಯದಿಂ ವಿಶ್ವೇಶ್ವರನ ದರ್ಶನದೊರಕುವದು, ಒಮ್ಮೆ ವಿಶ್ವೇಶ್ವರನ ನೋಡೆ ಕೋಟಿ ಅಲಂಕಾರಗೋಪ್ರದಾನಫಲ, ಒಂದುಭಾರಿಪೂಜಿಸಲು ಷೋಡಶ ಮಹಾದಾನವನಿತ್ತಫಲ, ಒಂದುವೇಳೆ ಪಂಚಾಮೃತ ಸ್ನಾನಮಾಡಿಸಲು ಅಶ್ವಮೇಧ ಮೊದಲಾದ ಸಕಲಯಜ್ಞಂಗಳಂ ಮಾಡಿದಫಲ, ನೈವೇದ್ಯ ಸಮರ್ಪಣೆಯಿಂ ಸಾವಿರವಾಜಪೇಯವಮಾಡಿದಫಲ, ಛತ್ರ ಚಾಮರ ಧ್ವಜ ಮೊದಲಾದ ಉಪಚಾರಂಗಳಂ ಸಮರ್ಪಿಸೆ ಭೂಮಿಯನೆಲ್ಲವನೂ ಏಕಛತ್ರವಾಗಿ ಆಳುವನೂ, ಮಹಾಪೂಜೆಗೆ ತಕ್ಕ ಉಪಕರಣಂಗಳ ನೀಯಲೂ ಚತುರಂಗಬಲ ಮೊದಲಾದ ಮಹದೈಶ್ವರ್ಯವೂ ಸಿದ್ಧವಾಗಿರುವುದು, ಇಲ್ಲಿ ಪೂದೋಟವಂ ಮಾಡಿಸಿದವನು ಕಲ್ಪವೃಕ್ಷದ ನೆಳಲಲ್ಲಿಯಿರುವನು, ಕ್ಷೀರಾಭಿಷೇಕಕ್ಕೆ ಹಸುವನಿತ್ತವನು ಕ್ಷೀರಸಮುದ್ರದ

ಲ್ಲಿ ಸುಖದಿಂದಿಹನು, ದೇವಸ್ಥಾನಗಳಿಗೆ ಸುಣ್ಣ ಗಾರೆಯುಂಮಾಡಿಸಿ ಚಿತ್ರಗಳಂ ಬರಸಿದವರು ಕೈಲಾಸದಲ್ಲಿ ವಿಚಿತ್ರವಾದಭವನಂಗಳಲ್ಲಿ ನಿವಾಸವಾಗಿ ಸುಖದಲ್ಲಿ ಇಹರು, ಇಲ್ಲಿ ಬ್ರಾಹ್ಮಣರನ್ನು, ಯತಿಗಳನು, ಶಿವಯೋಗಿಗಳನ್ನು, ಮೃಷ್ಟಾನ್ನದಿಂ ಭೋಜನವಮಾಡಿಸಲು ಒಂದೊಂದು ಅಗುಳಿಗೆ ಕೋಟಿಪುಣ್ಯಫಲ, ಅದುಕಾರಣ ದಾನವಂಮಾಡಬೇಕು, ಮಾಡಿಸಬೇಕು, ಸರ್ವಪ್ರಯತ್ನದಿಂ ವಿಶ್ವಪತಿಯನ್ನೇ ಸಂತೋಷಪಡಿಸಬೇಕು. ಇಲ್ಲಿ ನೂರೆಂಟು ಜಪವಂಮಾಡಲು ಕೋಟಿಜಪದಫಲ, ನೂರೆಂಟುಹೋಮದಿಂ ಕೋಟಿಹೋಮಫಲ, ಇಲ್ಲಿ ಗಂಗಾಸ್ನಾನವಂಮಾಡಿ ರುದ್ರಸೂಕ್ತವಂ ಜಪಿಸುತ್ತ ಪರಮೇಶ್ವರನಾದ ವಿಶ್ವಪತಿಯಂ ಪೂಜಿಸಲು ಸಕಲ ಉಪದ್ರಪರಿಹರ, ಆಪತ್ತುಯಡೆಗೊಂಡರು ಈ ಕಾಶಿಯಂ ಬಿಡಲಾಗದು, ಇಲ್ಲಿಮಾಡಿದಧರ್ಮದಿಂ ಮಹಾಫಲವುಂಟಾದಕಾರಣ ದಿನವಂಬಂಜೆಯಂ ಮಾಡಲಾಗದು, ಇಂದ್ರಿಯಂಗಳಂ ಹರಿಯಬಿಡದೆ ಕೃಚ್ಛ್ರಚಾಂದ್ರಾಯಣಾದಿಗಳಂ ಮಾಡಬೇಕು, ಚಂಚಲೇಂದ್ರಿಯರಿಗೆ ಇಲ್ಲಿಯ ನಿವಾಸದೊರಕದು, ಇಂತೆಂದುನುಡಿದ ಕುಮಾರಸ್ವಾಮಿಯ ವಾಕ್ಯಮಂ ಕೇಳಿ ಅಗಸ್ತ್ಯ ನಿಂತೆಂದನು— ಎಲೈಸ್ವಾಮಿಯೆ ! ಮುಂದೆ ವ್ಯಾಸಮುನಿ ಶಿಷ್ಯರಿಗೆ ನಿರೂಪಿಸುವಂಥ ಇಂದ್ರಿಯ ಉಪರತಿಯುಳ್ಳ ಕೃಚ್ಛ್ರ ಚಾಂದ್ರಾಯಣಾದಿಗಳ ಲಕ್ಷಣವಂ ನಿರೂಪಿಸಬೇಕೆನಲು, ಸ್ಕಂದನಿಂತೆಂದನು—ಕೇಳೈ ಅಗಸ್ತ್ಯನೆ ! ದಿವದಲ್ಲಿ ಹನ್ನೆರಡುಕವಳವಂ ಭುಂಜಿಸಿ ಇರಲು, ಏಕಭುಕ್ತವೆನಿಸುವದು, ರಾತ್ರಿಯಲ್ಲಿ ಹನ್ನೆರಡುಕವಳವಂ ಭುಂಜಿಸಲು, ನಕ್ತವೆನಿಸುವದು, ಅಯಾಚಿತದಿಂಬಂದ ಅನ್ನವ ಇಪ್ಪತ್ತುನಾಲ್ಕುಕವಳವಂಭುಂಜಿಸೆ ಅಯಾಚಿತವೆನಿಸುವದು, ಒಂದುದಿನ ಉಪವಾಸವಂಮಾಡಬೇಕು, ಈ ನಾಲ್ಕುದಿನ ವ್ರತವು ಪಾದಕೃಚ್ಛ್ರವೆನಿಸುವದು, ಆಲದೆಲೆಯಹಾಕಿಕಾಶಿದ ಉದಕ ಒಂದುದಿನ ಅತ್ತಿಯಎಲೆಯಹಾಕಿ ಕಾಶಿದಉದಕ ಒಂದುದಿನ ತಾವರೆಎಲೆಯಹಾಕಿ ಕಾಶಿದಉದಕ ಒಂದುದಿನ ಬಿಲ್ಲಪತ್ರದ ಎಲೆಯಹಾಕಿ ಕಾಶಿದಉದಕ ಒಂದುದಿನ ಕುಶದರ್ಭೆಯಹಾಕಿ ಉದಕ ಒಂದುದಿನ ಹೀಗೆ ಐದುದಿನಮಾಡಲು ಘನಕೃಚ್ಛ್ರವೆನಿಸುವದು, ಒಂದುದಿನ ಚಿಗುಳಿಯಆಹಾರ

ಬೆಳಗಾಗಿ ಗಂಜಿ ಒಂದುಪಾಲು ಒಂದುಪಾಲುಉದಕ ಮೂರುಪಾಲುಮೊಸ
ರು ಇವುಮೂರುಕೂಡಾ ಉತಕ್ರವೆನಿಸುವದು, ಈ ಉತಕ್ರ ಒಂದುದಿನ
ಶುದ್ಧೋದಕ ಒಂದುದಿನ ಸತ್ಪದಹಿಟ್ಟು ಒಂದುದಿನ ಉಪವಾಸ ಒಂದುದಿ
ನ ಈ ಆರುದಿನವು ಮಾಡಿದವ್ರತವು ಸೌಮ್ಯಕೃಛ್ರವೆನಿಸುವದು, ಮೂ
ರುದಿನ ದಿವಸದಲ್ಲಿ ದಿನಒಂದಕ್ಕೆ ಒಂದೇತುತ್ತು ಭುಂಜಿಸುವದು ಮೂರುದಿನ
ರಾತ್ರಿಯಲ್ಲಿ ಒಂದೇತುತ್ತು ಭುಂಜಿಸಲು ಮೂರುದಿನ ಆಯಾಚಿತಾನ್ನ ಒಂ
ದುತುತ್ತು ಮೂರುದಿನ ಉಪವಾಸ ಈ ರೀತಿಯಲ್ಲಿ ಹನ್ನೆರಡುದಿನ ವ್ರತವಿ
ರೆ ಅತಿಕೃಛ್ರವೆನಿಸುವದು, ಇಪ್ಪತ್ತೊಂದುದಿನ ಒಂದುದಿನಕ್ಕೆ ಮೂರುಹ
ಲುಉದಕಪಾನಪಂಮಾಡಲು ಕೃಛ್ರಾತಿಕೃಛ್ರವೆನಿಸುವದು, ಹನ್ನೆರಡುದಿ
ನ ನಿರ್ಜಲ ಉಪವಾಸವಿರಲು ಪರಾಕಕೃಛ್ರವೆನಿಸುವದು, ಮೂರುದಿ
ನದಿವಸದಲ್ಲಿ ಒಂದೊಂದುತುತ್ತು ಹವಿಸ್ಸು ಆಹಾರ ಮೂರುದಿನ ರಾತ್ರಿ
ಯಲ್ಲಿ ಒಂದೊಂದು ತುತ್ತು ಹವಿಷ್ಯಾಹಾರ ಮೂರುದಿನ ಅಹೋರಾ
ತ್ರಿಯೊಳಗಾಗಿ ಆವಾಗಲಾದರು ಒಂದುತುತ್ತು ಅಯಾಚಿತಾನ್ನ ಮೂ
ರುದಿನ ಉಪವಾಸ ಹೀಗೆ ಹನ್ನೆರಡುದಿನ ನಡೆಸಲು ಪ್ರಾಜಾಪತ್ಯಕೃ
ಛ್ರವೆನಿಸುವದು; ಗೋಮೂತ್ರ, ಗೋಮಯ, ಗೋಕ್ಷೀರ, ಗೋದಧಿ,ಗೊ
ಘೃತ, ಸಭೋದಕವಂ ಬೆರಸಿ ಒಂದುದಿನ ಪಾನಪಂಮಾಡೆ ಮರುದಿನ
ಉಪವಾಸವಿರಲು ಸಾಂತಪನಕೃಛ್ರವೆನಿಸುವದು, ಗೋಮಯಮೊದಲಾದ
ಆರುದ್ರವ್ಯಂಗಳನ್ನು ದಿನಒಂದಕ್ಕೆ ಒಂದೊಂದುಹೀಗೆ ಆರುದಿನ ಅಂಗು
ಷ್ಠಪ್ರಮಾಣಪಾನಪಮಾಡಿ ಆ ಏಳನೇದಿನ ಉಪವಾಸವಿರೆ ಮಹಾಸಾಂ
ತಪನಕೃಛ್ರವೆನಿಸುವದು, ಮೂರುದಿನ ಒಂದುಹಲ ಉಷ್ಣೋದಕಪಾನ
ಮೂರುದಿನಒಂದುಹಲ ಉಷ್ಣಕ್ಷೀರಪಾನ ಮೂರುದಿನ ಒಂದುಹಲ ಉ
ಷ್ಣಘೃತಪಾನ ಮೂರುದಿನವಾಯುಆಹಾರ ಈ ಹನ್ನೆರಡುದಿನವವ್ರತ
ವು ತಪ್ತಕೃಛ್ರವೆನಿಸುವದು. ಗೋಮೂತ್ರದಿಂ ಪಕ್ವಮಾದುವಯಅನ್ನ
ವಂತೊಂದು ದಿನವು ಭುಂಜಿಸಲು ಏಕಹಿತಕೃಛ್ರವೆನಿಸುವದು, ಅಹೋರಾ
ತ್ರಿಯು ವಾಯು ಆಹಾರದಿಂ ರಾತ್ರಿಯಲ್ಲಿ ನೀರೊಳಗೆನಿಂತು ನಿದ್ರೆಯಿಂ
ಗೈಯ್ಯದಿರಲು ಪ್ರಾಜಾಪತ್ಯಕೃಛ್ರಕ್ಕೆ ಸಮಾನ, ಶುದ್ಧಪಾಠ್ಯಮೊದಲಾಗಿ

ಪೌರ್ಣಮಿಪರ್ಯಂತರವು ಪಾಡ್ಯದಲ್ಲಿ ಹದಿನೈದುಕಬಳ, ಬಿದಿಗೆಯಲ್ಲಿ ಹದಿನಾಲ್ಕು, ತದಿಗೆಯಲ್ಲಿ ಹದಿಮೂರು, ಈ ಕ್ರಮವಲ್ಲಿ ಕಬಳಂಗಳಂ ಕಡಮೆಮಾಡಿ ಕೃಷ್ಣಪಾಡ್ಯಮೊದಲಾಗಿ ಒಂದೊಂದು ಕಬಳಂಗಳಂ ತಿರುಗಿ ಹೆಚ್ಚಿಸಿ ಅಮಾವಾಸ್ಯೆಪರ್ಯಂತರ ಆಹಾರವಂ ಕೊಳ್ಳಲು ಪಿಪೀಲಿಕಾಮಧ್ಯಚಾಂದ್ರಾಯಣವೆನಿಸುವದು, ಶುಕ್ಲಪಕ್ಷದಪಾಡ್ಯಾರಭ್ಯ ಪಾಡ್ಯದಲ್ಲಿಒಂದುತುತ್ತು, ಬಿದಿಗೆಯಲ್ಲಿ ಎರಡುತುತ್ತು, ಹೀಗೆ ಪೌರ್ಣಮಿ ಪರ್ಯಂತರ ಹೆಚ್ಚಿಸಿ ಕೃಷ್ಣಪಾಡ್ಯಾರಭ್ಯ ಒಂದೊಂದು ತುತ್ತು ಕಡಮೆಮಾಡಿ ಅಮಾವಾಸ್ಯೆದಿನ ಉಪವಾಸವಿರಲು ಇದು ಯವಮಧ್ಯಚಾಂದ್ರಾಯಣವೆನಿಸುವದು, ಪ್ರಾತಃಕಾಲದಲ್ಲಿ ನಾಲ್ಕುತುತ್ತು, ಸಾಯಂಕಾಲದಮೇಲೆ ನಾಲ್ಕುತುತ್ತು ತೆಗದುಕೊಂಡು ಒಂದುಮಾಸಪರ್ಯಂತರ ಹೀಗೆನಡಸಲು ಶಿಶು ಚಾಂದ್ರಾಯಣವೆನಿಸುವದು, ಪಿಪೀಲಿಕಾಮಧ್ಯ ಚಾಂದ್ರಾಯಣ ಯವಮಧ್ಯ ಚಾಂದ್ರಾಯಣ ಶಿಶುಚಾಂದ್ರಾಯಣ ಈಮೂರುಬಗೆಯ ಚಾಂದ್ರಾಯಣವಂ ಮೂರುತಿಂಗಳು ನಡಸಿದರೆ ತಿಂಗಳು ಒಂದಕ್ಕೆ ಇನ್ನೂರನಾಲ್ವತ್ತು ತುತ್ತಾಯಿತು, ಹೀಗೆಮೂರು ಚಾಂದ್ರಾಯಣವ್ರತವನಡಸಿದರೆ ಚಂದ್ರಲೋಕವಹುದು, ಉದಕದಿಂ ಸ್ನಾನವ ಮಾಡಲು ಶರೀರಶುದ್ಧಿ, ಸತ್ಯದಿಂ ನಡೆಯಲು ಮನಶ್ಶುದ್ಧಿ, ದಿವ್ಯತಪಂಗಳಂ ಆತ್ಮಶುದ್ಧಿ, ಜ್ಞಾನದಿಂ ಬುದ್ಧಿಶುದ್ಧಿ, ಅಂಥಾಜ್ಞಾನವು ಕಾಶೀವಾಸದಿಂದೊರಕುವದು, ಆವಾಸದಿಂವಿಶ್ವಪತಿಗೆ ದಯಹುಟ್ಟುವದು, ಆವಿಶ್ವಪತಿಯ ಕೃಪೆಯಿಂದ ಕರ್ಮಹರವಪ್ಪ ಮೋಕ್ಷರೂಪವಾದ ಶ್ರೇಯಸ್ಸುದೊರಕೊಂಬುದು, ಅದುಕಾರಣ ಕಾಶೀಯಲ್ಲಿ ಸ್ನಾನ, ದಾನ, ಜಪ, ಹೋಮ, ವ್ರತ ಪುರಾಣ ಶ್ರವಣ, ಶಿವಧ್ಯಾನ, ಸದಾಚಾರ, ತ್ರಿಕಾಲಪೂಜೆ, ಪ್ರದಕ್ಷಿಣ, ಸತ್ಪುರುಷರಗೋಷ್ಠಿ, ಶಿವಶಿವಎಂಬನುಡಿ, ಅತಿಥಿಸತ್ಕಾರ, ತೀರ್ಥವಾಸಿಗಳಸ್ನೇಹ, ದೇವತಾವಿಶ್ವಾಸ, ವಿನಯ, ನಿಂದಾಸ್ತುತಿಗಳಲ್ಲಿ ಸಮತ್ವ ದಂಭವಿಲ್ಲದ್ದು, ಸ್ರಕ್ಚಂದನವನಿತಾದಿಗಳಲ್ಲಿ ಅಪೇಕ್ಷಿಸದೆ ಇಹುದು, ಅಹಿಂಸೆ, ಪ್ರತಿಗ್ರಹವಂ ತೆಗೆಯದೆಇಹುದು, ಪರಾನುಗ್ರಹದಲ್ಲಿಪ್ರೀತಿ, ಬೂಟಕ ಕರು[illegible]ಗಳಲ್ಲಿ[illegible]ಹುದು, ಅಯಾಚಿತವ್ರತ, ಅಲೋಭ, ಅನಾಲಸ್ಯ, ಅಕಟು

ತ್ವ, ಅದೀನತ್ವ, ಇವು ಮೊದಲಾದಧರ್ಮಂಗಳುಂಟಾಗಿ ಕಾಶೀವಾಸವಮಾಡಬೇಕೆಂದು ಹೀಗೆಪ್ರತಿದಿನವು ಶಿಷ್ಯರಿಗೆ ಉಪದೇಶವಂಮಾಡುತ್ತಾ ನಿತ್ಯವು ಗಂಗಾಸ್ನಾನ, ಲಿಂಗಪೂಜೆ, ಭಿಕ್ಷಾಟನವಂಮಾಡಿಕೊಂಡು ಇರಹಂಥಾ ವ್ಯಾಸಮುನಿಯಂಪರೀಕ್ಷಿಸಬೇಕಾಗಿ ಒಂದಾನೊಂದುದಿನ ಮಹಾದೇವನು ದೇವಿಯಂಗಿಂತೆಂದನು—ಎಲೆದೇವಿ! ಇಂದುವ್ಯಾಸನು ಭಿಕ್ಷಕ್ಕೆಬಂದರೆ ಎಲ್ಲಿಯೂ ಭಿಕ್ಷಹುಟ್ಟದಂತೆ ಮಾಡೆನಲು, ಮಹಾಪ್ರಸಾದವೆಂದು ಪರಮೇಶ್ವರಗೆ ನಮಸ್ಕರಿಸಿ ಪ್ರತಿಮನೆಯಲ್ಲಿಯೂ ವ್ಯಾಸಗೆ ಭಿಕ್ಷಹುಟ್ಟದಂತೆ ಬುದ್ಧಿಯಹುಟ್ಟಿಸಿದಳು, ವ್ಯಾಸನು ಶಿಷ್ಯರಿಂದಸಹಿತ ಭಿಕ್ಷಕ್ಕೆಹೋಗಿ ಭಿಕ್ಷವೆಲ್ಲಿಯೂ ದೊರಕದೆ ಮತ್ತೂಮತ್ತೂ ಪಟ್ಟಣದಲ್ಲಿ ತಿರುಗಿ ಮನೆಮನೆಗಳಲ್ಲಿಯೂ ಭಿಕ್ಷಾನ್ನವಂ ಕೊಂಡುಪೋಪ ಭಿಕ್ಷುಕರಂನೋಡುತ್ತಾ ತನಗೆಭಿಕ್ಷದೊರಕದಿರೆ ಸಾಯಂಕಾಲಕೃತ್ಯವಂ ಮುಗಿಸಿ ಶಿಷ್ಯರುಸಹಿತ ಉಪವಾಸವಿರ್ದು ಮರುದಿನ ಮಾಧ್ಯಾಹ್ನಿಕವಂಮಾಡಿ ಶಿಷ್ಯರುಸಹಾ ಭಿಕ್ಷಕ್ಕೆಹೋಗೆ ಭಾಗ್ಯಹೀನಂಗೆ ಪ್ರಯಾಸಪಟ್ಟರೂ ಫಲವಿಲ್ಲದಂತೆ ಆಹೊತ್ತು ಭಿಕ್ಷದೊರಕದಿರಲು, ಬೇಸತ್ತು ಭಿಕ್ಷವೊದಲುದೊರಕಿ ಈಗ ದೊರಕದಿಹ ಕಾರಣವೇನೆಂದು ಚಿಂತಿಸಿ ಶಿಷ್ಯರಿಗಿಂತೆಂದನು—ಇಂದುನಿಮಗೂಭಿಕ್ಷದೊರೆವುದಿಲ್ಲ ಎಂಬಹಾಗೆ ತೋರುತ್ತಿದೆ, ಈ ಪಟ್ಟಣದಜನರು ಏನಮಾಡುತ್ತಿದ್ದಾರೊ ವಿಚಾರವಮಾಡಿಬನ್ನಿ, ಈ ಪಟ್ಟಣದವರೆಲ್ಲರಿಗೂ ತಾಯಿ, ತಂದೆ, ಗುರು, ಪುತ್ರ, ಮಿತ್ರಾದಿಗಳೆಲ್ಲರು ಮೃತರಾದರೋಅನ್ನನಷ್ಟವಾಯಿತೋ ಈ ಪಟ್ಟಣದವರೆಲ್ಲರನ್ನು ಅರಸುಗಳು ದಂಡವಕೊಂಡರೊ ಹಾಗಲ್ಲದಿರೆ ನಮಗೆ ಭಿಕ್ಷವನಿಕ್ಕಬ್ಯಾಡವೆಂದು ಆರಾದರೂ ವಿಘ್ನವಮಾಡಿದರೊ ಈ ಪಟ್ಟಣದವರಿಗೆ ಏನುಉಪದ್ರವಬಂದು ಇದ್ದೀತೊ ಇದೆಲ್ಲವಂ ವಿಚಾರವಂಮಾಡಿ ಶೀಘ್ರದಿಂ ಬನ್ನಿಎನಲು, ಆಜ್ಞಾಧರಾಗಿ ಪವಿತ್ರರಾದ ಗುಣವಂತರಾದ ಇಬ್ಬರು ಮೂವರು ಶಿಷ್ಯರುಹೋಗಿ ವಿಚಾರವಮಾಡಿಬಂದು ಪಟ್ಟಣದವರ ಸಂಪತ್ತುಗಳನ್ನು ಗುರುವಿನಮುಂದೆ ಬಿನ್ನೈಸಿದರು, ಅದೆಂತೆಂದರೆ—ಎಲೈ ಪೂಜ್ಯಪಾದಂಗಳಿರಾ! ಇಲ್ಲಿಯಿಂದು ಉಪದ್ರವಂಗಳುಇಲ್ಲ, ಅನ್ನನಷ್ಟವಾಗಲೂಇಲ್ಲ, ವಿಶ್ವಪತಿಯೂ ಗಂಗೆಯೂ ನಿವಾಸಂಥ

ಮುನೀಶ್ವರರು ಇದ್ದಬಳಿಕ ಈ ಪಟ್ಟಣದ ಐಶ್ವರ್ಯ ವೈಕುಂಠದಲ್ಲಿಯೂ ಇಲ್ಲ, ಇಲ್ಲಿಯ ಐಶ್ವರ್ಯಕ್ಕೆ ಕಲ್ಪವೃಕ್ಷವು ಸರಿಬಾರದು, ಇಲ್ಲಿವಿಶ್ವಪತಿಯ ಸೇವಕರ ಮನೆಗಳಲ್ಲಿಇಹಂಥಾ ರತ್ನಗಳು ಸಮುದ್ರಗಳಲ್ಲಿಯೂಇಲ್ಲ, ಇಲ್ಲಿಯಮನೆಗಳಲ್ಲಿ ಇಹ ಧಾನ್ಯರಾಶಿಗಳಿದ್ದಂತೆ ಅಮರಾವತಿಯಲ್ಲಿದ್ದ ಕಲ್ಪವೃಕ್ಷಗಳು ಕೊಡಲರಿಯವು, ಅಪ್ರಯಾಸದಿಂ ಸಕಲವಸ್ತುಗಳನೀವ ವಿಶಾಲಾಕ್ಷಿಇರಲು, ಇಲ್ಲಿಪುರುಷಾರ್ಥಮರೆಇಲ್ಲ, ಮೋಕ್ಷಲಕ್ಷ್ಮೀನಿವಾಸವಾದ ಆನಂದಕಾನನದಲ್ಲಿ ಮುಕ್ತಿಮೊದಲಾಗಿಯೂ ಸುಲಭ, ಮಿಕ್ಕವಸ್ತುಗಳ ಹೇಳುವದೇನು, ಇಲ್ಲಿಯಸ್ತ್ರೀಯರೆಲ್ಲರು ಮುತ್ತೈದೆಯರು, ಪತಿವ್ರತೆಯರು, ಪಾರ್ವತೀಸ್ವರೂಪಿಗಳು, ವಿಶ್ವಪತಿಯಲ್ಲಿ ಭಕ್ತಿಯುಳ್ಳವರು, ಇಲ್ಲಿಯಪುರುಷರು ಎಲ್ಲರುಗುಣಾಧೀಶ್ವರರು, ಕುಮಾರರೆಲ್ಲರೂ ಷಣ್ಮುಖಸಮಾನರು, ಎಲ್ಲರೂ ತ್ರಿಪುಂಡ್ರರುದ್ರಾಕ್ಷಧಾರಿಗಳು, ಚಾಂದ್ರಮಾಳಿಗಳು, ಅನೇಕವಿಘ್ನದಿಂದಲು ಕ್ಷೇತ್ರವಂಬಿಡದೆಇದ್ದವರು, ಸರ್ವಜ್ಞರು ಮನೆಮನೆಗಳಲ್ಲಿಯೂ ಗಂಗಾಸ್ನಾನದಿಂದ ನಿಷ್ಕಂಚನರಾದ, ಬ್ರಹ್ಮವಾದಿಗಳಾದ, ಚತುರರಾದ, ಬ್ರಹ್ಮಚಾರಿಗಳಿದ್ದರು ಕ್ಷೇತ್ರಸನ್ಯಾಸವಂಮಾಡಿಕೊಂಡು ಮೋಕ್ಷಲಕ್ಷ್ಮೀರಮಣರಾಗಿವಿಷ್ಣುಸ್ವರೂಪಿಗಳಾಗಿ ಇದ್ದಾರು ಸ್ತ್ರೀಪುರುಷರೆಲ್ಲರೂ ತ್ರಿಣೇತ್ರ, ಚತುರ್ಭುಜ, ಶ್ರೀಕಂಠ, ಮೃತ್ಯುಂಜಯರು, ಅರ್ಧನಾರೀಶ್ವರರು, ಇಲ್ಲಿ ಧರ್ಮರಾಶಿ, ತಪೋರಾಶಿ, ಧನರಾಶಿಗಳಿದ್ದಾವು, ಇಲ್ಲಿಯ ಕಾಮಗಳೆಲ್ಲವು ಕೈವಲ್ಯವನೀವವು, ಇಲ್ಲಿದ್ದವರಿಗೆ ಪುನಹಾ ಗರ್ಭವಾಸವಿಲ್ಲ, ಕಲಿಗಾಲಬಾಧೆಗಳಿಲ್ಲ, ವಿಶ್ವಪತಿಯ ಮರೆಹೊಕ್ಕವರನ್ನು ಪಾಪಗಳುಬಾಧಿಸವು, ಇಲ್ಲಿನಾದಬಿಂದು ಕಳಾತ್ಮಕನಾದ ಧ್ವನಿರೂಪನಾದ, ಪ್ರಣವರೂಪನಾದ, ವಿಶ್ವಪತಿಇರಲು, ಇಲ್ಲಿದ್ದವರೆಲ್ಲರು ವಿಶ್ವೇಶ್ವರಸ್ವರೂಪಿಗಳು, ಸರಸ್ವತೀದೇವಿಯು ನದೀರೂಪದಿಂದಾದಕಾರಣ ಈಪಟ್ಟಣವೇದಶಾಸ್ತ್ರಕ್ಕೆ ಸ್ಥಾನವಾಯಿತು, ಸ್ವರ್ಗಗಳಲ್ಲಿ ಇದ್ದದೇವತೆಗಳೆಲ್ಲರು ಇಲ್ಲಿಯೇಇದ್ದಾರು, ಸರ್ಪಂಗಳು ತಮ್ಮ ಶಿರೋಮಾಣಿಕ್ಯದೀಪಂಗಳಿಂದ ನೀರಾಜನವಂಮಾಡುತ್ತಾ ಇದ್ದಾವೆ, ಸಪ್ತಸಮುದ್ರಗಳು ಕಾಮಧೇನುಗಳೊಳಗೂಡಿ, ಪಂಚಾಮೃತ ಅಭಿಷೇಕವಂಮಾಡುತ್ತಾ ಇದ್ದಾವು,

ಮಂದಾರ, ಪಾರಿಜಾತ, ಸಂತಾನ, ಹರಿಚಂದನ, ಕಲ್ಪವೃಕ್ಷವೊದಲಾದ ಪಂಚತರು ಷಡೃತುಗಳೊಡಗೂಡಿ ವಿಶ್ವನಾಥನಂ ಪೂಜಿಸುತ್ತಿದ್ದಾವು, ದೇವತೆಗಳು, ಋಷಿಗಳು, ಯೋಗಿಗಳೆಲ್ಲರು ಉಪಾಸನೆಯಂ ಮಾಡುತ್ತಾ ಇದ್ದಾರು, ಕಾಶಿಯು ಬೀದಿಗಳೆ ಲಕ್ಷ್ಮೀನಿವಾಸಸ್ಥಾನ, ಮುಕ್ತಿಕ್ಷೇತ್ರ, ದೇವಮಯವಾಗಿ ಇದ್ದಿತು, ಹೀಗೆಂಬ ಶಿಷ್ಯರ ವಾಕ್ಯವಂ ಕೇಳಿ ತಪಸ್ವಿಯಾದ ವ್ಯಾಸಮುನಿಯು ಈ ಗ್ರಂಥವನ್ನು ಇನ್ನೊಮ್ಮೆ ಪಠಿಸೆನಲು, ಶಿಷ್ಯರಿಂತೆಂದರು—ಈ ಕಾಶೀಕ್ಷೇತ್ರವು ಸಕಲವಿದ್ಯಾವಾಸ ಮೋಕ್ಷಲಕ್ಷ್ಮೀಸ್ಥಾನದೇವನುಯುನೆಸಲು, ಮುನಿಪ ಕೇಳಿ ಕೋಪಾರೂಢನಾಗಿ ಕಣ್ಣುಕಾಣದೆ ಹಶುವೆಂಬ ಅಗ್ನಿಯಿಂದ ಉರಿವದೇಹವುಳ್ಳವನಾಗಿ ಕಾಶೀಪಟ್ಟಣವಂ ಶಪಿಸಿದನು, ಅದೆಂತೆಂದರೆ—ತ್ರಿಪುರುಷೋದ್ವೇಶವಾದ ವಿದ್ಯವಿಲ್ಲದೆಹೋಗಲಿ ಮೂರುತರ ಧನವಂತರಿಲ್ಲದಿರಲಿ, ಮೂರುತರಕ್ಕಲ್ಲದೆ ಮುಕ್ತಿ ಇಲ್ಲದೆಹೋಗಲಿ, ಇಲ್ಲಿಯ ಜನರು ವಿದ್ಯಾಗರ್ವ, ಧನಗರ್ವ, ಮುಕ್ತಿಗರ್ವದಲ್ಲಿ ಬಿಕ್ಷವನಿಕ್ಕದೆ ಹೋದರೆಂದು ಶಪಿಸಿ ಕೋಪಿಸಿಕೊಂಡು ಮತ್ತೂ ಭಿಕ್ಷಕ್ಕೆ ಪೊರಮಟ್ಟು ಪ್ರತಿಗೃಹದಲ್ಲಿಯು ಶೀಘ್ರದಿಂದ ತಿರುಗಿ ಎಲ್ಲಿಯೂ ಭಿಕ್ಷವಪಡೆದವನಲ್ಲದೆ ಪಟ್ಟಣವೆಲ್ಲವನ್ನು ತಿರುಗಿ ಆಕಾಶವನೋಡುತ್ತಾ ಬದಿಸ್ಸುಕೆಂಪಾಗಿ ಅಸ್ತಾದ್ರಿಯ ಸೇರುವ ಸೂರ್ಯಮಂಡಲವಂ ನೋಡುತ್ತಾ ಭಿಕ್ಷಾಪಾತ್ರೆಯ ಅಲ್ಲಿಯೇ ಹಾಕಿ ತನ್ನ ಆಶ್ರಮಕ್ಕಾಗಿ ಪೋಗುತ್ತಿರಲು, ಆಗ ಮಹಾದೇವಿಯರು ಲೌಕಿಕಸ್ತ್ರೀರೂಪವಂ ಧರಿಸಿ ತನ್ನ ಗೃಹದಬಾಗಿಲಲ್ಲಿ ನಿಂತು ಅತಿಘನವಾದ ವ್ಯಾಸಮುನಿಯು ಪ್ರಾರ್ಥಿಸಿದಳು, ಅದೆಂತೆನೆ—ಎಲೈ ಸ್ವಾಮಿಯೆ! ಇಂದು ಅತಿಥಿಗಳಂ ಕಂಡುದಿಲ್ಲ, ತನ್ನ ಪತಿಯು ಅತಿಥಿಪೂಜೆಯ ಮಾಡಿವಲ್ಲದೆ ಎಂದೂ ಊಟವ ಮಾಡಿದವನಲ್ಲ, ಈಗ ವೈಶ್ವದೇವವೊದಲಾದ ಕೃತ್ಯವಂ ಮಾಡಿ ಅತಿಥಿಗಳ ಇದಿರುನೋಡುತ್ತಾ ಇದ್ದಾನು, ನೀವು ಬರಬೇಕು, ಗೃಹಸ್ಥನಾದವನು ವೈಶ್ವದೇವವೊದಲಾದ ಕೃತ್ಯವಂ ಮಾಡದೆ ತಾನೊಬ್ಬನೆ ಅನ್ನವಂ ಕೊಳ್ಳಲು ತನ್ನ ಪಿತೃಪಿತಾಮಹರು ಸಹಾ ಶುಕ್ಲವ ಭಕ್ಷಿಸಿದ ಮರ್‍ಯಾದೆಯಲ್ಲಿ ಮಹಾಪಾಪವನನುಭವಿಸಿ ನರಕಕ್ಕೆ ಬೀಳುವರು, ಅವನ ಮನೆಯ ಅನ್ನವ ಕೊಳ್ಳಲಾಗದು, ಅದುಕಾರಣ ನೀವು ಶೀಘ್ರದಿಂ ಬಂದು

ನ್ನೆ ಪತಿಯು ಮನಸ್ಸೋತಧವಂ ಧೈರ್ಯಸಹಿತನ್ನಾಗಿ ಮತ್ತು ಪ್ರೋಜೆಯಿಂದ ಗಾರ್ಹಸ್ಥ್ಯವನ್ನು ಸಫಲವಂ ಮಾಡಿಕೊಳ್ಳಬೇಕೆಂದು ಎನ್ನ ಪತಿ ಇಚ್ಛೈಸುತ್ತಾ ಇದ್ದಾನೆ, ಇಂತೆಂದು ನುಡಿದ ವಾಕ್ಯವಂ ಕೇಳಿ ವ್ಯಾಸಮುನಿ ಕೋಪವಂ ಬಿಟ್ಟು ವಿಸ್ಮಿತನಾಗಿ ಇಂತೆಂದನು—ಎಲೈ ತಾಯೆ! ಮಂಗಳಸ್ವರೂಪಿಯಾದ ನೀನಾರೆಂಬುವುದೊಂದು ನಿನ್ನ ನೆಲೆಯು ಕಂಡುಬಿಲ್ಲ, ನಿನ್ನ ದರ್ಶನದಿಂದ ಎನ್ನ ಮನಸ್ಸು ಸಂತೋಷವಾಯಿತು, ನೀನು ಕ್ಷೀರಸಮುದ್ರದಲ್ಲಿ ಮಂದರಪರ್ವತವ ಕಡೆಯಲಿಕ್ಕಾಗಿ ಬಂದ ಅಮೃತವಂತೆ ಇದ್ದಿ. ರಾಹುವಿನ ಭಯದಿಂದಮೃತವು ಸ್ತ್ರೀರೂಪವಂ ಧರಿಸಿ ನಿರ್ಭಯದಿಂದ ಕುಳಿತ ಕುಹೂ ಎಂಬ ತಿಥಿಯೋ? ಮುಕುಳಿತವಾದ ಕಮಲವೆಂಬ ಗೃಹವಂ ಬಿಟ್ಟು ವಿಕಾಸವಾದ ಈ ಕಾಶಿಯಲ್ಲಿದ್ದ ಮಹಾಲಕ್ಷ್ಮಿಯೋ? ಈ ಕ್ಷೇತ್ರದಲ್ಲಿ ಇದ್ದವರ ಸಕಲ ದುಃಖಂಗಳಂ ಪರಿಹರಿಪ ಪರಮಾನಂದಪ್ರದೆಯಾದ ಮೂರ್ತಿವಡೆದ ಕಾಶೀಪಟ್ಟಣವೋ? ಈ ಕ್ಷೇತ್ರದಲ್ಲಿದ್ದ ಅಂತ್ಯಜರಿಗು ಯಜ್ಞಕರ್ಮನಿಷ್ಠರಿಗು ಅಂತ್ಯದಲ್ಲಿ ಸರಿಯಾಗಿ ಶಿವಲೋಕವನೀವ ಮೋಕ್ಷಲಕ್ಷ್ಮಿಯೋ? ಸ್ತ್ರೀರೂಪಿನಿಂ ಬಂದ ಎನ್ನ ಭಾಗ್ಯವಂತೆಯೋ? ಎಂದು ತಾನು ಮನಸ್ಸಿಗೆ ತಿಳಿವುತ್ತಲಿದ್ದೇನೆ; ಈ ಕ್ಷೇತ್ರದಲ್ಲಿ ಭಕ್ತರಿಗೆ ಸಂತೋಷವನೀವ ಪರಮೇಶ್ವರನ ರಾಣಿಯಲ್ಲದೆ ಬೇರೆ ಇಲ್ಲವೆಂದು ಮನದಲ್ಲಿ ಇಂತೆಂದು ಮತ್ತು ಆಕೆಯೊಡನೆ ಇಂತೆಂದನು—ನೀನು ಸುರಸುತೆ, ಕಿನ್ನರ, ವಿದ್ಯಾಧರ, ಉರಗ, ಗಂಧರ್ವ, ಯಕ್ಷ, ಸ್ತ್ರೀಯಲ್ಲ ಮತ್ತು ನೀನೇ—ಅಜ್ಞಾನವಂ ಪರಿಹರಿಪ ಎನ್ನ ಭಾಗ್ಯದ ಇಷ್ಟದೇವತೆಯಂತೆ ತೋರುತ್ತಿದ್ದೀಯೆ? ನೀನು ಆರಾದರೂ ಆಗು, ಎನಗೆ ಅಚಿಂತೆಯಾತಕ್ಕೆ, ನಿನ್ನ ದರ್ಶನದಿಂದ ನಾನು ಪುಣ್ಯವಂತನಾದೆನು, ಎನ್ನ ತಪಸ್ಸಿಗೆ ವಿಘ್ನವಾಗದಂತೆ ನೀನು ಹೇಳದ ಹಾಗೆ ಮಾಡೇನು, ನಿನ್ನಂಥ ಮಹಾತ್ಮರು ಮಹಾತ್ಮರ ಮಹತ್ವವ ಕೆಡಿಸುವರಲ್ಲ, ನೀನಾರು ಎಂಬುದಂ ಸತ್ಯವಾಗಿ ಹೇಳು, ನಿನ್ನ ದೇಹದಲ್ಲಿ ಅಸತ್ಯ ತೋರದು, ಇಂತೆಂದು ವ್ಯಾಸಮುನಿ ಕೇಳಲು, ವಿಶಾಲಾಕ್ಷಿ ಇಂತೆಂದಳು—ಕಾಶೀಪಟ್ಟಣದಲ್ಲಿ ಇದ್ದ ಒಬ್ಬ ಬಡವನಾದ ಗೃಹಸ್ಥನ ಸ್ತ್ರೀ! ತಾನು ದಿನದಿನದಲ್ಲಿ ನಿತ್ಯ ಶಿಷ್ಯರೊಡಗೂಡಿ ಭಿಕ್ಷಕ್ಕೆ ಬರಹದನು ನಾನು ನೋಡುತ್ತಾ ಇದೆನು, ನೀವು ಅರಿತವರಲ್ಲವೇನೊ?

ಎಲೈತಪಸ್ವಿಯೇ! ಹಲವುಪ್ರಸಂಗಗಳಿಂದೇನುಫಲ ಸೂರ್ಯಾಸ್ತಮಯವಾಗವಮುನ್ನಅತಿಥಿಸತ್ಕಾರವಮಾಡಬೇಕು, ಆಸತ್ಕಾರವಂಸಫಲವಂಮಾಡು ಎಂದುಆಸ್ತ್ರೀಯುನುಡಿಯಲುಮುನಿಯಿನಯದಿಂದಿಂತೆಂದನು,ಎಲೈತಾಯೆ! ಶಿಷ್ಯರು ಸಹಾ ತಾನು ಏಕಭಿಕ್ಷವಮಾಡುವೆನು,ಆ ಅನ್ನ ನಿಯಮವ ನೀನು ಸಲಿಸುವದುಂಟಾದರೆ ಬಂದೇನು ಇಂತೆಂದ ಮುನಿಯವಾಕ್ಯವಂ ಕೇಳಿ ದೇವಿ ಇಂತೆಂದಳು—ಎಲೈ ಮುನೀಶ್ವರನೇ! ನಿನ್ನ ನಿಯಮವಾದೀತು, ಶಂಕಬ್ಬ್ಯಾದ ಎನ್ನಪತಿಯಿಂದನಗೆ ಈಗ ಏನುಕಡಿಮೆಯಿಲ್ಲ, ಬನ್ನೀ, ಎಂದ ಆಸ್ತ್ರೀಯವಾಕ್ಯವಂ ಕೇಳಿ ಆ ಮುನಿಸಂತೋಷದಿಂದಿಂತೆಂದನು—ಎಲೈ ತಾಯೆ! ನಾನುಹತ್ತುಸಾವಿರಮಂದಿ ಶಿಷ್ಯರಂಪಜ್ತಿಯಲ್ಲಿ ಇಟ್ಟುಕೊಂಡು ಸೂರ್ಯಾಸ್ತಮಯಕ್ಕೆ ಮೊದಲೇ ಭಿಕ್ಷವಮಾಡಬೇಕು, ಅಸ್ತಮಯವಾಗೆ ಅನ್ನವಕೊಳ್ಳೆನು, ಇಂತೆಂದಮುನಿಯವಾಕ್ಯವಂ ಕೇಳಿ ಸಂತೋಷದಿಂ ದೇವಿಇಂತೆಂದಳು—ಎಲೈಮುನಿಯೇ! ಆಲಸ್ಯವಮಾಡದೆ ಶಿಷ್ಯರುಸಹಾ ಭಿಕ್ಷಕ್ಕೆಬನ್ನೀ ಎನ್ನಲು, ಮುನಿಇಂತೆಂದನು— ಈ ಬಹುಮಂದಿಗೆ ಸಾಮಗ್ರಿಯು ಒದಗೀತೇಎನಲು, ದೇವಿ ಮುಗುಳುನಗೆಯಿಂದಿಂತೆಂದಳು- ಎಲೈಮುನಿಯೆ! ಎನ್ನಪತಿಯಕೃಪೆಯಿಂದೆನ್ನಮನೆಯಲ್ಲಿ ಸಕಲಪದಾರ್ಥವೂ ಪರಿಪೂರ್ಣವಾಗಿಇದ್ದೀತು, ತಾನು ಪತಿಸೇವಕಿಯಾದ ಸ್ತ್ರೀಯಲ್ಲದೆ ಬಾಯಿಬಡಕಿಯಲ್ಲ, ಎನ್ನಮನೆಯಲ್ಲಿ ಅತಿಥಿಗಳು ಬರೆ ಸತ್ಕಾರಗಳು ಸಿದ್ಧವಾಗಿಇಹವು, ಸಕಲಮನೋರಥಂಗಳು ಸಿದ್ಧಿಯುಂಟಾಗಿಇಹುದು, ನೀವು ಅನ್ನಾರ್ಥಿಗಳಾದವರು ಅವರನ್ನೂ ಕರದುಕೊಂಡುಬನ್ನೀ ಎನ್ನಪತಿ ವೃದ್ಧಾಪ್ಯದವರು ಉಪವಾಸವಿರಲಾರರು, ಸೂರ್ಯಾಸ್ತಮಯಕ್ಕೆಮೊದಲೆ ತನ್ನಗೃಹಕ್ಕೆ ಬನ್ನೀಎಂದುನುಡಿದು ತನ್ನಗೃಹಕ್ಕೆಹೋಗಿ ಸಕಲಪದಾರ್ಥಗಳನ್ನು ನಿಮಿಷಮಾತ್ರದಲ್ಲಿ ಮೇಳೈಸಿ ವಿಶಾಲಾಕ್ಷಿತಿರುಗೀಬಂದು ಬಾಗಿಲೊಳುನಿಂತು ಅತಿಥಿಗಳ ಇವರುನೋಡುತ್ತಾ ಇರಲು, ದೇವಿಯುಢಕೂಡೆ ವ್ಯಾಸಮುನಿ ಇಂತೆಂದನು—ಎಲೈತಾಯೆ! ನಾವೆಲ್ಲರೂಬಂದೆವು, ಶೀಘ್ರದಿಂ ಭೋಜನವಮಾಡಿಸು, ಸೂರ್ಯ ಅಸ್ತಮಿಸುತ್ತಿದ್ದಾನು, ಎಂದು ನುಡಿದು ವ್ಯಾಸಮುನಿಯು ತನ್ನಶಿಷ್ಯರುಸಹಾ ಗೃಹಪ್ರವೇಶವಾದನು, ಸೂ

ರ್ಯನಿಗಿಂತಲೂ ಅತಿಕಾಂತಿಯುಳ್ಳ ತಪೋಧನನು ಶಿಷ್ಯನುಸಹಾ ಗೃಹಪ್ರವೇಶವಾಗುವ ಅನಿತರೊಳ್ ಆ ಗೃಹವು ಘನವಾದ ಮಣಿಮಯ ಉಪ್ಪರಿಗೆಯಿಂ ಅತಿರಮ್ಯವಾಗಿ ಕಾಣಿಸಿತು, ಆ ಮನೆಗೆ ಬರಲು ಅಲ್ಲಿದ್ದವರು ಈ ತಪಸ್ವಿಗಳಿಗೆ ಕೆಲಬರು ಪಾದಗಳಂ ತೊಳೆದರು, ಕೆಲಬರು ಗಂಧಪುಷ್ಪಾಕ್ಷತೆಯನಿತ್ತರು, ಕೆಲಬರು ಭಕ್ಷ್ಯಭೋಜ್ಯಾದಿಗಳ ಬಡಿಸಿದರು, ಆ ಮುನಿಗಳು ದಿವ್ಯವಾದ ಸಂಭಾರಂಗಳಂ ನೋಡಿ ಅಘ್ರಾಣದಿಂ ಪರಮತೃಪ್ತಿಬಟ್ಟು ಗಂಧಾದಿಗಳಿಂ ಪೂಜಿತರಾಗಿ ಸಾಯಂಕಾಲವಾಗಲು, ಅಲ್ಲಿಯೇ ಸಂಧ್ಯಾವಂದನೆಗಳಂ ಮಾಡಿ ಆ ಗೃಹಸ್ಥರ ಆಶೀರ್ವಾದಗಳಿಂ ಸಂತೋಷಪಡಿಸಿ ಕಳುಹಿಕೊಂಡು ಹೋಗುವಾಗ ದೇವಿಯರು ತನ್ನ ಪತಿಗೆ ಎಚ್ಚರಿಸಲು, ಆ ಗೃಹಸ್ಥನು ತನ್ನ ಸತಿಗೆ ಸನ್ನೆಯಂ ಮಾಡಲು, ವೃದ್ಧ್ಯವಾದ ತನ್ನ ಪತಿಯ ಅಪ್ಪಣೆಯಂ ಪಡೆದು ವ್ಯಾಸಋಷೀಶ್ವರನೊಳು ಒಂದು ಪ್ರಶ್ನೆಯಂ ಮಾಡಿದಳು ಅದೇನೆಂದರೆ—ಎಲೈ ಋಷಿಗಳಿರಾ ! ಪುಣ್ಯತೀರ್ಥದಲ್ಲಿ ವಾಸವಮಾಡಿಕೊಂಡು ಇದ್ದವರು ಮಾಡತಕ್ಕ ಧರ್ಮವೇನು, ನೀವು ಹೇಳಿದ ಪ್ರಕಾರದಲ್ಲಿ ನಾವು ನಡೆಯಬೇಕಲ್ಲ, ಎಂದು ಕೇಳುವ ಪತಿವ್ರತೆಯ ವಾಕ್ಯವಂ ಕೇಳಿ ಧರ್ಮಜ್ಞರೊಳು ಅಧಿಕನಾದ ವ್ಯಾಸಮುನಿಯು ಆ ಸ್ತ್ರೀ ಮಾಡಿದ ಸನ್ಮಾನಕ್ಕೆ ಸಂತೋಷಬಟ್ಟು ಆ ಪ್ರಶ್ನೆಗೆ ಉತ್ತರವನಿತ್ತನು, ಎಲೆ ತಾಯೆ ! ಕೇಳು, ನೀ ಮಾಡಿದ ಧರ್ಮದಿಂ ಪತಿಸೇವೆಯಂ ಮಾಡುವವರಿಂ ಧರ್ಮಸ್ವರೂಪವಂ ಬಲ್ಲೆ ಆದರು ಎನ್ನ ಕೇಳಿದೆಯಲ್ಲ, ನಾನು ಬಲ್ಲಷ್ಟು ಹೇಳೇನು ಕೇಳು, ವೃದ್ಧಸ್ಯನಾದ ನಿನ್ನ ಪತಿಯು ಆವ ಧರ್ಮದಿಂ ಸಂತೋಷಪಡುವನೋ ಅದೇ ಧರ್ಮವಲ್ಲದೆ ಮತ್ತೊಂದು ಧರ್ಮವಿಲ್ಲ, ಹೀಗೆಂದು ನುಡಿದ ಋಷಿಯ ವಾಕ್ಯವಂ ಕೇಳಿ ದೇವಿ ಇಂತೆಂದಳು—ಎಲೈ ಮುನಿಯೆ ! ನೀವು ಹೇಳುವಂಥ ಧರ್ಮವ ಯಥಾಶಕ್ತಿಯ ಮಾಡುತ್ತಾ ಇದ್ದೇನೆ ; ಸಾಧಾರಣ ಧರ್ಮಂಗಳಂ ಎನಗೆ ಬುದ್ಧಿಗಲಿಸಬೇಕೆನಲು, ಮುನಿ ಇಂತೆಂದನು—ಎಲೆ ತಾಯೆ ! ಸಾಧಾರಣಧರ್ಮಂಗಳಂ ಹೇಳಬೇಕೆಂದೆಯಲ್ಲ, ಬಾಹ್ಯಾಂತರಿಂದ್ರಿಯ ನಿಗ್ರಹ, ದಾನ, ದಯೆ, ಧೈರ್ಯ, ಕಾಮ, ಕ್ರೋಧಾದಿಗಳಂ ಬಿಡುವುದು, ಪರರು ನೋಯುವಂತೆ ನುಡಿವುದು, ಪರರ ಉತ್ಕರ್ಷವಂ ಸೈರಿಸುವದು, ಸಕಲಕಾರ್ಯಂ

ಗಳಂ ವಿಚಾರವಮಾಡುವವು, ತನ್ನ ಸ್ಥಾನದೊಳಗೆ ಯವಿಚಾರ ಇವುಮೊದಲಾದವು ಸಾಧಾರಣಧರ್ಮಂಗಳೆಂದು ಮುನಿನುಡಿಯಲು, ಕೇಳಿ ಆವನೆಯಗೃಹಸ್ಥನಿಂತೆಂದನು— ಎಲೈಮುನಿಯೆ! ಈಗ ನೀನುಹೇಳಿದಧರ್ಮಂಗಳೊಳಗೆ ನಿನ್ನಲ್ಲಿ ಇಹ ಧರ್ಮವಾವುದು ಹೇಳೆನಲು, ಕೇಳಿ ವ್ಯಾಸಮುನಿ ಸುಮ್ಮನಿರಲು ಮತ್ತೂ ವೃದ್ಧಗೃಹಸ್ಥನಿಂತೆಂದನು—ಈಗಹೇಳಿದಧರ್ಮಂಗಳು ನಿನ್ನಲ್ಲಿಯೇ ಇರಬೇಕು, ಅವೊಳಿಲ್ಲದೆ ನಿನ್ನಲ್ಲಿಶಾಪಪ್ರದಾನವಕೇಳಿದೆವು, ಚೆನ್ನಾಗಿ ದಯವು ನಿನ್ನಲ್ಲಿಯೇ ಇದ್ದೀತು, ಧೈರ್ಯವು ಚೆನ್ನಾಗಿ ಇದ್ದೀತು, ನಿನ್ನಲ್ಲಿ ಕಾಮಕ್ರೋಧಗಳೇ ಇಲ್ಲ, ಪರರಬೇಗೆ ಪಡಿಸಬಾರದು ಎಂಬ ವಾಕ್ಯವಂ ನೀನೆಬಲ್ಲೆ, ಪರರಉತ್ಕರ್ಷವ ಸೈರಿಸುವಗುಣ ನಿನ್ನಲ್ಲಿಯೇ ಇದ್ದೀತು, ವಿಚಾರಿಸಿಕಾರ್ಯವಮಾಡುವವಕ್ಕೆ ನೀನೆತಾರುಮನೆ, ತನ್ನಮನೆಯವಿಚಾರವಮಾಡಬೇಕೆಂದೆಯಲ್ಲ, ಆಗುಣ ನಿನ್ನಲ್ಲಿಯೇ ಉಂಟು, ಎಲೆ ವಿವೇಕಿ! ನಿನ್ನ ಒಂದುವಿವರವಂ ಕೇಳುತ್ತಾ ಇದ್ದೇನೆ ಹೇಳು, ನೀನುಕೋಪಿಸಿಕೊಂಡು ಶಾಪವನಿತ್ತೆಯಲ್ಲ ತನ್ನ ಅದೃಷ್ಟದಿಂ ಕಾರ್ಯವಾಗದಿರಲು, ಕೋಪಿಸಿಕೊಂಡು ಶಾಪವನಿತ್ತರೆ ಆ ಫಲವಾರಿಗಹುದು ಹೇಳೆನಲು, ವ್ಯಾಸಮುನಿಇಂತೆಂದನು—ಆವನಾನೊಬ್ಬ ತಾಮಾಡಿದಅದೃಷ್ಟದಿಂ ಕಾರ್ಯಸಿದ್ಧಿಯಾಗದಿರಲು ಶಾಪವನಿತ್ತರೆ ಆ ಶಾಪವು ಶಾಪವನಿತ್ತವನಿಗಹುದು ಎನಲು, ಗೃಹಸ್ಥನಿಂತೆಂದನು—ಎಲೆಮುನಿಯೆ! ನೀನು ತಿರುತಿರುಗಿ ಭಿಕ್ಷೆ ದೊರಕದೆ ಇರಲು, ಈ ಪಟ್ಟಣದವರುಮಾಡಿದ ಅಪರಾಧವೇನು, ಈ ತನ್ನ ಪಟ್ಟಣದ ಅಭಿವೃದ್ಧಿಯಂ ಕಂಡು ಕರುಬಿದವನು ತಾನೆಕೆಟ್ಟ, ಪ್ರೋಹನು ಆಶಾಪಾತಕನಿಗೆ ಆದೀತು, ಪರರ್ಗೆಹಿತವಕೊಡುವ ಈ ಕಾಶೀಕ್ಷೇತ್ರದಲ್ಲಿ ಇದ್ದವರಿಗೆ ಕೋಪಿಯಾಗಿ ಶಾಪವಕೊಡುವನೀನು ಇಲ್ಲಿ ಇರತಕ್ಕವನಲ್ಲ ಇಂದುಮೊದಲಾಗಿ ನೀನು, ಇಲ್ಲಿ ಇರಬ್ಯಾಡ! ಈಗಲೆ ಈಕ್ಷೇತ್ರವಂ ಹೊರಪಟ್ಟುಹೋಗು, ಈ ನಿನ್ನಂಥಾವರು ಮೋಕ್ಷಸಾಧನವಾದಈಕ್ಷೇತ್ರದಲ್ಲಿ ಇರಬಾರದು, ಇಲ್ಲಿವಾಸವಾಗಿದ್ದರ್ ಅತಿಸ್ವಲ್ಪವಾದ ದುರ್ಜೀವನವಮಾಡಲು ರುದ್ರಪಿಶಾಚವಹನು, ಹೀಗೆನಲು ವೃದ್ಧಬ್ರಾಹ್ಮಣನವಾಕ್ಯವಂ ಕೇಳಿ ಈತನು ಮಹಾದೇವನಲ್ಲದೆ ಮತ್ತೊಬ್ಬನಲ್ಲವೆಂದು ತನ್ನ

ಮನದಲ್ಲಿ ಅರಿವು ಗಡಗಡನೆ ನಡುಗಿ ಮಹಾಭಯದಿಂದ ತುಟಿಗಳಿಗೆ ಹವನ ಕೊಡುತ್ತಾ ಗೌರೀದೇವಿಯರ ಪಾದದಲ್ಲಿ ಬಿದ್ದು ಹೊರಳಿ ತ್ರಾಹಿ ತ್ರಾಹಿ ಎಂದು ನುಡಿಯುತ್ತಾ ಶೋಕಿಸುತ್ತಿಂತೆಂದನು—ಎಲೆ ತಾಯೆ ! ನಾನು ಅನಾಥನು, ಎನಗೆ ನೀನೇ ದಿಕ್ಕು ನಾನು ಅಜ್ಞಾನಿ ಬಾಲಕನು ನೀನು ಶರಣಾಗತವತ್ಸಲೆ ಶರಣಾಗತನಾದ ಎನ್ನ ರಕ್ಷಿಸು, ನಾನು ಅಪರಾಧಿ ಅಲ್ಪಬುದ್ಧಿಯುಳ್ಳವನು, ದುಷ್ಟಮಾನಸನು, ಪರಮೇಶ್ವರನ ಶಾಪವಂ ಪರಿಹರಿಸುವುದಕ್ಕೆ ನಿನಗೂ ಅಶಕ್ಯ ನಾನು ನಿನ್ನ ಮರೆಹೊಕ್ಕೆನು ಇದಕ್ಕೆ ನೀನು ಉಪಾಯವಂ ಕಾಣಬೇಕು. ಅದಾವುದೆನೆ—ಪ್ರತಿ ಅಷ್ಟಮಿ ಚತುರ್ದಶಿಗಳಲ್ಲಿ ಈ ಕ್ಷೇತ್ರವಂ ಪೊಗುವಂತೆ ಎನಗೆ ಅಪ್ಪಣೆಯಂ ಕೊಡಬೇಕು, ಪರಮೇಶ್ವರನು ನಿನ್ನ ವಾಕ್ಯವ ಮೀರುವನಲ್ಲ ಇಂತೆಂದು ಮುನಿ ಬಿನ್ನೈಸಲು, ಗೌರೀದೇವಿಯು ಪರಮೇಶ್ವರನ ಮುಖವಂ ನೋಡಿ ಪರಮೇಶ್ವರನ ಅಪ್ಪಣೆಪಡೆದು ಹಾಗೇ ಆಗಲಿ ಎಂದು ಮುನಿಗೆ ನಿರೂಪಿಸಿ ದೇವಿಯರು ಪರಮೇಶ್ವರ ಸಹಾ ಅಂತರ್ಧಾನವಾಗಲು, ವ್ಯಾಸಮುನಿ ತಾನು ಮಾಡಿದ ಅಪರಾಧದಿಂ ಕಾಶೀಕ್ಷೇತ್ರವಂ ಪೊರಮಟ್ಟು ಆ ಕಾಶೀಕ್ಷೇತ್ರ ಕಾಣಬಹ ಸ್ಥಳದಲ್ಲಿ ಇದ್ದು ಅಷ್ಟಮಿ ಚತುರ್ದಶಿಗಳಲ್ಲಿ ಕಾಶೀಕ್ಷೇತ್ರವಂ ಪ್ರವೇಶಿಸುತ್ತಾ ಇಹನು, ಲೋಲಾರ್ಕಂಗೆ ಆಗ್ನೇಯದಲ್ಲಿ ಗಂಗೆಯ ಮೂಡಣ ತೀರದಲ್ಲಿ ಇರ್ದು ಈಗ ಮೊದಲಾಗಿಯೂ ಈ ಕಾಶೀಪಟ್ಟಣದ ಉಪ್ಪರಿಗೆಯ ಸಾಲ್ಗಳಂ ನೋಡುತ್ತಾ ಇದ್ದಾನು, ಮತ್ತು ಕುಮಾರಸ್ವಾಮಿ ಇಂತೆಂದನು-ಕೇಳೈ ಅಗಸ್ತ್ಯನೇ! ಈ ರೀತಿಯಲ್ಲಿ ವ್ಯಾಸಮುನಿಯು ಕಾಶೀಕ್ಷೇತ್ರಕ್ಕೆ ಶಾಪವನಿತ್ತು ತಾನೂ ಶಾಪಕ್ಕೆ ಒಳಗಾದನು, ಅದು ಕಾರಣ ಅವಿಮುಕ್ತಕ್ಷೇತ್ರಕ್ಕೆ ಹಿತವನಾಚರಿಸಲು ತನಗೆ ಶುಭವುಂಟು, ಅಶುಭವನಾಚರಿಸಲು ಅಶುಭವಹುದು, ಈಗ ನಾನು ನಿನಗೆ ಹೇಳ್ದ ವ್ಯಾಸಮುನಿಯ ಶಾಪವಿಮೋಚನವಂ ಕೇಳ್ದರು ಸಕಲ ಉಪದ್ರವ ಪರಿಹಾರ, ಸಕಲ ಭಯಹರವೆಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವಂ ವ್ಯಾಸರು ತನಗೆ ಬುದ್ಧಿಗಲಿಸಿದರೂ ಎಂದು ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರಿಂದಲೋಕೋಪಕಾರಾರ್ಥವಾಗಿಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂದಪುರಾಣೋಕ್ತ ಕಾಶೀಮಹಿಮಾರ್ಥ ದರ್ಪಣದಲ್ಲಿ ವ್ಯಾಸರ ಶಾಪವಿಮೋಕ್ಷವೆಂಬ ತೊಂಭತ್ತಾರನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ * *

ತೊಂಭತ್ತೇಳನೇಅಧ್ಯಾಯಂ—ತೀರ್ಥಲಿಂಗಮಹಿಮೆ.

ಶ್ರೀವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ಮತ್ತೂ ಅಗಸ್ತ್ಯನಿಂತೆಂದನು—ಎಲೆ ಕುಮಾರಸ್ವಾಮಿ! ವ್ಯಾಸರಭವಿಷ್ಯದ್ವೃತ್ತಾಂತ ಮಂ ಕೇಳಿ ಮಹಾಸಂತೋಷವಾಯಿತು, ಈ ಕಾಶೀಕ್ಷೇತ್ರದಲ್ಲಿ ಆವಾವಬಳಿಯ ಆವಾವವಿಶೇಷಲಿಂಗಗಳು ವಿಶೇಷತೀರ್ಥಗಳು ಇದ್ದಾವೊ ಅವೆಲ್ಲವನ್ನು ಎನಗೆ ವಿಸ್ತಾರವಾಗಿ ನಿರೂಪಿಸಬೇಕೆನೆ, ಕುಮಾರಸ್ವಾಮಿ ಇಂತೆಂದನು—ಕೆಳೈ ಅಗಸ್ತ್ಯನೆ! ಈಪ್ರಶ್ನೆಯನ್ನೆ ಪೂರ್ವದಲ್ಲಿ ಪಾರ್ವತೀದೇವಿಯರು ಪರಮೇಶ್ವರಗೆ ಬಿನ್ನವಿಸಿಕೇಳಲು ಪರಮೇಶ್ವರನು ದೇವಿಯರಿಗೆ ನಿರೂಪಿಸಿದನು, ಅದೆಂತೆನೆ—ಎಲೆ ವಿಶಾಲಾಕ್ಷಿಯೆ! ಈ ಕಾಶೀಕ್ಷೇತ್ರದಲ್ಲಿ ಇದ್ದ ಹಳ್ಳ, ಕೊಳ್ಳ, ಕೂಪ, ಕೆರೆ, ಭಾವಿ, ನದಿಗಳು ಮೊದಲಾದವುಗಳಲ್ಲಿ ಇದ್ದ ಉದಕವೆಲ್ಲವು ಉದಕಮೂರ್ತಿಯಾದಲಿಂಗಸ್ವರೂಪವು,ಪುಣ್ಯತೀರ್ಥ, ಬ್ರಹ್ಮ, ವಿಷ್ಣು, ಸೂರ್ಯ, ಶಿವ, ವಿಘ್ನೇಶ್ವರ, ಮೊದಲಾದಮೂರ್ತಿಗಳೆಲ್ಲವೂ ಶಿವಲಿಂಗಸ್ವರೂಪವೇಸರಿ ಈ ಕಾಶೀಕ್ಷೇತ್ರದಲ್ಲಿ ಮೊದಲು ಮಹಾದೇವನೆಂಬ ಈಶ್ವರನಿಹನು, ಆ ಬಡಗಣದಿಕ್ಕಿನಲ್ಲಿ ಭವಪಾಶವಂ ಪರಿಹರಿಪ ಸಾರಸ್ವತಾಭಿಧಾನವಾದ ಮಹಾಕೂಪವೆಂಬ ತೀರ್ಥವಿದ್ದೀತು,ಆ ಪಡುವಲಲ್ಲಿಹ ವಾರಣಾಶಿದೇವಿಯಂ ಪೂಜಿಸಲು ಸುಖದಿಂ ಕಾಶಿವಾಸದೊರಕುವದು, ಮಹಾದೇವೇಶ್ವರನಮೂಡಲಲ್ಲಿ ಗೋಲೋಕದಿಂಬಂದ ಕಾಮಧೇನುಗಳಿಂ ಪ್ರತಿಷ್ಠಿತವಾದ ಗೋಪ್ರೇಕ್ಷೇಶ್ವರನಂ ಪೂಜಿಸಲು ಗೋದಾನವನಿತ್ತಫಲವಹುದು, ಆ ತೆಂಕಲಲ್ಲಿರ್ದ ದಧೀಚೀಶ್ವರನದರ್ಶನದಿಂದ ಯಜ್ಞವಮಾಡಿದಫಲ, ಆಸಮೀಪದ ಅತ್ರೀಶ್ವರನಂ, ಆತೆಂಕಲಲ್ಲಿದ್ದ ಮಧುಕೈಟಭೇಶ್ವರನಂ ಪೂಜಿಸಲು ವಿಷ್ಣುಪದವಹುದು, ಗೋಪ್ರೇಕ್ಷೇಶ್ವರನ

ಮೀಪದಲ್ಲಿರ್ದ ವಿಶ್ವೇಶ್ವರನ ಪೂಜೆಯಿಂ ಸಂಸಾರಜ್ವರಹರ, ಆ ಮೂಡಲಲ್ಲಿರ್ದ ದೇವೇಶ್ವರನದರ್ಶನದಿಂ ಚತುರ್ವೇದ ಪಾರಾಯಣಫಲ, ಆಬಡಗಲಲ್ಲಿದ್ದ ಆದಿಕೇಶ್ವರನದರ್ಶನದಿಂ ಮೂರುಲೋಕವಂ ದರ್ಶನಮಾಡಿದಫಲ, ಆ ಮೂಡಲಲ್ಲಿಇದ್ದ ಸಂಗಮೇಶ್ವರನದರ್ಶನದಿಂ ಸರ್ವಪಾಪಹರ, ಆ ಮೂಡಲಲ್ಲಿ ಬ್ರಹ್ಮನಿಂದ ಪ್ರತಿಷ್ಠಿತವಾದ ಚತುರ್ಮುಖನಾದ ಪ್ರಯಾಗೇಶ್ವರನಂ ಪೂಜಿಸಲು ಬ್ರಹ್ಮಲೋಕವಹುದು, ಆ ಸಮೀಪದ ಶಾಂತಗೌರಿಯಂ ಪೂಜಿಸಲು ಸರ್ವಶಾಂತಿಪ್ರದ, ವರುಣಾತೀರದಲ್ಲಿದ್ದ ಕುಂತೀಶ್ವರನಪೂಜೆಯಿಂ ಸುಕೃತಿಗಳಹರು, ಆ ಬಡಗಲಲ್ಲಿರ್ದ ಕಾಲುಷ್ಯದತೀರ್ಥವಲ್ಲಿ ಸ್ನಾನವಂಮಾಡಿ ವೃಷಭಧ್ವಜೇಶ್ವರನಂ ಪೂಜಿಸಲು ರಾಜಸೂಯಯಾಗಫಲ, ಅಲ್ಲಿ ಶ್ರಾದ್ಧಾದಿಗಳಂಮಾಡಲು ವೈತರಣಿಯಾದಿ ನರಕದಲ್ಲಿಇದ್ದ ಪಿತೃಗಳಿಗೆ ಪಿತೃಲೋಕವಹುದು, ಗೋಪ್ರೇಕ್ಷೇಶ್ವರನಬಡಗಲಲ್ಲಿದ್ದ ಅನಸೂಯೇಶ್ವರನ ದರ್ಶನದಿಂ ಸ್ತ್ರೀಯರಿಗೆ ಪಾತಿವ್ರತ್ಯ ಮಹಾಸೌಭಾಗ್ಯವಹುದು, ಪುರುಷರಿಗೆ ಸಕಲಫಲವಹುದು, ಆ ಮೂಡಣಸಿದ್ಧಿವಿನಾಯಕನಂ ಪೂಜಿಸಲು ಸರ್ವಕಾರ್ಯಸಿದ್ಧಿ, ಆ ಪಡುವಣಹಿರಣ್ಯತೀರ್ಥದಲ್ಲಿ ಸ್ನಾನವಂಮಾಡಿ ಹಿರಣ್ಯಕಶಿಪುಲಿಂಗವಂ ಪೂಜಿಸಲುಹಿರಣ್ಯಾಭಿವೃದ್ಧಿ, ಆ ಪಡುವಣ ವ್ಯಾಹಾಸ್ಯೇಶ್ವರನಂ ಪೂಜಿಸಲು ಸಕಲಸಿದ್ಧಿ, ಗೋಪ್ರೇಕ್ಷೇಶ್ವರನನೈಋತ್ಯದಲ್ಲಿಇದ್ದ ಮಹಾದೇವೇಶ್ವರನಪಡುವಲಲ್ಲಿಇಹ ಸ್ಕಂಧೇಶ್ವರನಂಪೂಜಿಸಲು ಕುಮಾರಲೋಕವಹುದು, ಆಸಮೀಪದ ವೀರಭದ್ರನೈಗಮನಂದಿ ಮೊದಲಾದ ಸಹಸ್ರಸಂಖ್ಯೆ ಗಣಂಗಳಿಂದ ಪ್ರತಿಷ್ಠಿತವಾದ ಸಾವಿರಸಂಖ್ಯೆ ಲಿಂಗಗಳಿದ್ದಾವು, ಆ ಲಿಂಗಗಳದರ್ಶನದಿಂ ಗಣಂಗಳಲೋಕವಹುದು, ನಂದೀಶ್ವರನಪಶ್ಚಿಮದಲ್ಲಿ ಶಿಲಾದೇಶ್ವರನ ಪೂಜೆಯಿಂ ದುರ್ಬುದ್ಧಿಶಮನ, ಆ ಸಮೀಪದ ಹಿರಣ್ಯಾಕ್ಷೇಶ್ವರನ ಪೂಜೆಯಿಂ ಬಲವರ್ಧನ, ಆ ತೆಂಕಲಲ್ಲಿಇರ್ದ ಅಟ್ಟಹಾಸೇಶ್ವರನ ಪಡುವಣ ಮಿತ್ರಾವರುಣೇಶ್ವರನ ಪೂಜೆಯಿಂ ಮಿತ್ರಾವರುಣಲೋಕವಹುದು, ಅಟ್ಟಹಾಸೇಶ್ವರನ ನೈಋತ್ಯದಲ್ಲಿಇಹ ವೃದ್ಧವಸಿಷ್ಠೇಶ್ವರನದರ್ಶನದಿಂ ಜ್ಞಾನಸಿದ್ಧಿ, ಆ ಸಮೀಪದ ಕೃಷ್ಣೇಶ್ವರನಪೂಜೆಯಿಂ ವಿಷ್ಣುಲೋಕವಹುದು, ಆತೆಂಕಣ ಅಹಾ

ಜ್ಞಾವಲ್ಕ್ಯೇಶ್ವರನ ಪೂಜೆಯಿಂ ಯಜ್ಞಾತೀಜನ್ಯಾಸಹುವು, ಆ ಪಡುವಣ ಪ್ರಹ್ಲಾದೇಶ್ವರನಪೂಜೆಯಿಂ ಭಕ್ತಿಹೆಚ್ಚುವದು, ಸ್ವರ್ಗನೇಶ್ವರನಪೂಜೆ ಯಿಂ ಜ್ಞಾನಿಗಳಗತಿಯುಹುದು, ಆ ಸಮೀಪದ ಬಾಣೇಶ್ವರನಪೂಜಿಸಲು ಅಷ್ಟಕಾವ್ಯಸಿದ್ಧಿ, ಚಂದ್ರೇಶ್ವರನಮೂಡಣ ವಿಶ್ವೇಶ್ವರನಪೂಜೆಯಿಂದ ಸಕಲ ವಿದ್ಯಾಪ್ರಾಪ್ತಿಯಹುದು, ಆ ತೆಂಕಲಲ್ಲಿ ಪಂಚಮುದ್ರಾಪೀಠದ ಲ್ಲಿಇಹ ವಿಶ್ವೇಶ್ವರ ಸಿದ್ಧಿವಿನಾಯಕರಂಪೂಜಿಸಲು ಸರ್ವಕಾರ್ಯಸಿದ್ಧಿ, ಅಲ್ಲಿ ಹ ವಿಕಟಾದೇವಿಯಂಪೂಜಿಸಲು ಸರ್ವಪಾಪಹರ, ಅಲ್ಲಿಜಪಿಸಿದಮಂತ್ರಗ ಳು ಶೀಘ್ರದಲ್ಲಿಸಿದ್ಧಿಸಿ ಫಲವನೀವವು, ಆ ವಾಯವ್ಯದಲ್ಲಿರ್ದ ಸವನೇಶ್ವರನ ಪೂಜೆಯಿಂದ ಅಶ್ವಮೇಧಫಲ, ಆ ಈಶಾನ್ಯದಲ್ಲಿದ್ದ ಕುಶೇಶ್ವರನಂಪೂಜಿಸ ಲು ತಿರ್ಯಗ್ಜಾತಿಯಲ್ಲಿಹುಟ್ಟನು, ಆ ಉತ್ತರದಲ್ಲಿದ್ದ ಸುಗ್ರೀವೇಶ್ವರನಪೂ ಜಿಸಲು ಸಕಲಪಾಪಹರ, ಆ ಸಮೀಪದಲ್ಲಿಇದ್ದ ಹನುಮಂತೇಶ್ವರನಪೂ ಜಿಸಲು ಯಾವಜ್ಜೀವವು ಬ್ರಹ್ಮಚರ್ಯವನಹಿಡಫಲ, ಆ ಸಮೀಪದ ಜಾಂ ಬವೇಶ್ವರನಪೂಜಿಸಲು ಬುದ್ಧಿವರ್ಧನ, ಗಂಗೆಯಪಡುವಲಲ್ಲಿರ್ದ ಅಕ್ಷಿನೇ ಶ್ವರನಪೂಜಿಸಲೂ ಅತ್ಯಂತಫಲ, ಆ ಸಮೀಪದಲ್ಲಿ ಗೋಕ್ಷೀರದಿಂ ಪೂರಿತ ವಾದ ಭದ್ರಹ್ರದತೀರ್ಥದ ಪಶ್ಚಿಮದಲ್ಲಿಹ ಭದ್ರೇಶ್ವರನನೋಡಲು ಗೊ ಲೋಕಪ್ರಾಪ್ತಿ, ಆ ಭದ್ರಹ್ರದತೀರ್ಥದಲ್ಲಿ ಭಾದ್ರಪದಶುದ್ಧ ಪೌರ್ಣಮಿ ಯು ಪೂರ್ವಾಭಾದ್ರಪದಾ ನಕ್ಷತ್ರದಲ್ಲಿ ಸ್ನಾನವಂಮಾಡಲು ಅಶ್ವಮೇಧ ಯಾಗಫಲ, ಮಿಕ್ಕಾದದಾಘಸ್ನಾನವಮಾಡಲು ಹತ್ತುಸಾವಿರಗೋದಾನ ವಮಾಡಿದಫಲ, ಆ ನೈಋತ್ಯದಲ್ಲಿಹ ಉಪಶಾಂತಿ ಶಿವೇಶ್ವರನಂಪೂಜಿಸಲು ಮುಟ್ಟಿದರು ಸಮಸ್ತಶಾಂತಿಪ್ರದ, ಆ ಸಮೀಪದಲ್ಲಿರ್ದ ಉಗ್ರಶಾಂತಿಶಿವನ ನೋಡಲು ಅಶುಭಪರಿಹರವಾಗಿ ಶ್ರೇಯಸ್ಸುಹೆಚ್ಚುವದು, ನೂರುಜನ್ಮದ ಪಾಪಪರಿಹರವಾಗಿ ಮೋಕ್ಷವಾಗುವದು, ಆ ಬಡಗಲಲ್ಲಿರ್ದ ಚಕ್ರತೀರ್ಥ ದಲ್ಲಿ ಸ್ನಾನವಂಮಾಡಲು ಶಿವಲೋಕವನೈದುವರು, ಎಲೆಪಾರ್ವತಿಯೆ ! ಪೂರ್ವದಲ್ಲಿ ನಾನು ಚಕ್ರತೀರ್ಥದಲ್ಲಿ ಸ್ನಾನವಮಾಡುವಾಗ ಆ ತೀರ್ಥದ ನೈಋತ್ಯದಲ್ಲಿ ಶೂಲವಂನೆಡಲು ಅದುತ್ರಿಶೂಲತೀರ್ಥವಾಯಿತು, ಅಲ್ಲಿ ಸ್ನಾನವಮಾಡಿ ಆ ಪಡುವಲಲ್ಲಿರ್ದ ಶೂಲೇಶ್ವರನಂನೋಡಲು ಸಂಸಾರ

ಗೇಶ್ವರನಂ ಬಿಟ್ಟು ಶಿವಲೋಕವನ್ನೈದುವನು, ಆ ಮೂಡಲಲ್ಲಿರ್ದ ನಾರದತೀರ್ಥದಲ್ಲಿ ಸ್ನಾನವಂಮಾಡಿ ನಾರದೇಶ್ವರನಂ ನೋಡಲು ಸಮಸ್ತತಪಸ್ಸ ಮಾಡಿದಫಲ, ಆ ಸಮೀಪದ ಅಮೃತತೀರ್ಥದಲ್ಲಿ ಸ್ನಾನವಂಮಾಡಿ ಅಮೃತೇಶ್ವರನಂಪೂಜಿಸಲುಅಮೃತನೇವಿತರಣರು ದೇವತೆಗಳಪದವಿಯಾಗುವದು, ಆ ವಾಯುವ್ಯದಲ್ಲಿಹ ವಿಘ್ನಹರತೀರ್ಥಸ್ನಾನದಿಂ ಸರ್ವವಿಘ್ನಹರ, ಅಲ್ಲಿಇಹ ಗಣಪತಿಗಳಪೂಜೆಯಿಂ ಸಕಲವಿಘ್ನಹರ, ಆ ಒಡಗಲಲ್ಲಿರ್ದ ನರಕಪಾಪಹರತೀರ್ಥದಲ್ಲಿ ಸ್ನಾನವಂಮಾಡಿ ಶಿವನಂಪೂಜಿಸಲು ನರಕಬಾಧೆಇಲ್ಲ, ಆ ಬಡಗಲು ವಾರಣಾನದೀತೀರದಲ್ಲಿ ಪಾಶುಪತಯೋಗಿಯಾದ ಕಣ್ವಋಷೀಶ್ವರನು ಕಣ್ವೇಶ್ವರನೆಂಬ ಲಿಂಗಪ್ರತಿಷ್ಠೆಯಂಮಾಡಿಕೊಂಡು ಆ ಲಿಂಗಪೂಜೆಯಿಂ ಆ ಶರೀರದಲ್ಲಿ ಸಕಲಸಿದ್ಧಿಯಂಪಡೆದು ಶಿವಸಾಯುಜ್ಯವನ್ನೈದಿದನೆ ? ಆ ಕಣ್ವಪೂಜಿಸಿದ ಕಣ್ವೇಶ್ವರನಂಪೂಜಿಸಲು ಸಕಲಪ್ರಸಿದ್ಧಿಯಾಗಿ ಮೋಕ್ಷವನ್ನೈದುವರು, ಆ ಪಡುವಲಲ್ಲಿ ಬೇಡಿದಬಯಕೆಗಳನೀವ ಕಾಮೇಶ್ವರನಿಹನು, ಆ ಕಾಮ್ಯಲಿಂಗವಂಪೂಜಿಸಲು ಬೇಡಿದಕಾಮ್ಯವಹುದು, ಆ ತೆಂಕಲಲ್ಲಿಹ ಕೋಟಿತೀರ್ಥದಲ್ಲಿ ಸ್ನಾನವಂಮಾಡಿ ಕೋಟೀಶ್ವರನಂಪೂಜಿಸಲು ಕೋಟಿಗೋದಾನವಂಮಾಡಿದಫಲ, ಅದಕ್ಕೆ ಆಗ್ನೇಯದಲ್ಲಿ ಪರಮೇಶ್ವರನು ನಿತ್ಯವಾಸವಮಾಡಿಕೊಂಡುಇಹ ಮಹಾಶ್ಮಶಾನದಲ್ಲಿ ಹಂಥಾ ಮಹಾಶ್ಮಶಾನೇಶ್ವರನಂಪೂಜಿಸಲು ರುದ್ರಪದವನ್ನೈದುವನು, ಆ ಸಮೀಪದ ಕಪಾಲೇಶ್ವರನಸನ್ನಿಧಿಯಲ್ಲಿಹ ಕಪಾಲಮೋಕ್ಷತೀರ್ಥದಲ್ಲಿ ಸ್ನಾನವಂಮಾಡಿ ಆಕಪಾಲೇಶ್ವರನಂಪೂಜಿಸಲು ಅಶ್ವಮೇಧಯಾಗವಮಾಡಿದಫಲ, ಆ ಬಡಗಲಲ್ಲಿರ್ದ ಋಣವಿಮೋಚನತೀರ್ಥದಲ್ಲಿ ಸ್ನಾನವಂಮಾಡಲು ಸಕಲಋಣವಿಮೋಚನವಹುದು, ಆ ಸಮೀಪದಲ್ಲಿದ್ದ ಅಂಗಾರಕತೀರ್ಥದಲ್ಲಿಸ್ನಾನವಂಮಾಡಿ ಅಂಗಾರಕೇಶ್ವರನಂಪೂಜಿಸಲುಪುನರ್ಜನ್ಮವಿಲ್ಲ, ಆ ಬಡಗಲಲ್ಲಿರ್ದ ವಿಶ್ವಕರ್ಮೇಶ್ವರನನೋಡಲು ಜ್ಞಾನಸಿದ್ಧಿ, ಆ ತೆಂಕಲಲ್ಲಿಹ ಮಹಾಮುಂಡೇಶ್ವರನಂನೋಡಿ ಅಲ್ಲಿಹ ಶಾಖೋದಕತೀರ್ಥದಲ್ಲಿ ಸ್ನಾನವಂಮಾಡಿ ತಾನಿತ್ತ ರುಂಡಮಾಲೆಯಂಧರಿಸಿದ ಮಹಾಮುಂಡಾದೇವಿಯುಂ ಸೇವಿಸಲು ಮಹಾಪಾಪಕ್ಷಯ, ಆಸಮೀಪದ ಖಟ್ವಾಂಗಧಾರಿಯಾ

ದ ಖಟ್ವಾಂಗೇಶ್ವರನದರ್ಶನದಿಂ ಸಮಸ್ತಪಾಪಹರ, ಆ ಸಮೀಪದ ಭುವನ ತೀರ್ಥದಲ್ಲಿ ಸ್ನಾನವಂಮಾಡಿ ಅಲ್ಲಿಹ ಭುವನೇಶ್ವರನದರ್ಶನವಂಮಾಡಲು ಸಕಲಭುವನೇಶ್ವರನಹನು, ಆ ತೆಂಕಲ ವಿಮಲೋದಕತೀರ್ಥದಲ್ಲಿ ಸ್ನಾನ ವಂಮಾಡಿ ವಿಮಲೇಶ್ವರನದರ್ಶನವಂಮಾಡಲು ಸರ್ವಶುದ್ಧ, ಆ ಸಮೀಪದ ಕಪಿಲೇಶ್ವರನಬಳಿಯ ರಮ್ಯವಾದಗುಹೆಇರ್ದಿತು, ಅಲ್ಲಿ ಪಾಶುಪತವ್ರತಿ ಯಾದ ಕಪಿಲಮಹಾಮುನಿಎಂಬ ಸಿದ್ಧನಿರ್ದನು, ಗುಹೆಯದರ್ಶನ ಪ್ರವೇ ಶವಂಮಾಡಲು ಪುನರ್ಜನ್ಮವಿಲ್ಲ, ಆ ಸಮೀಪದ ಯಜ್ಞೋದಕಸ್ನಾನದಿಂ ದ ಅಶ್ವಮೇಧಫಲ, ಅಲ್ಲಿಹ ಮತ್ಸ್ಯೋದರೀ ಉತ್ತರದಲ್ಲಿ ವರ್ಣತ್ರಯಾ ತ್ಮಕನಾದ ಪರಬ್ರಹ್ಮನಾದ ಪರಮಗತಿಯಾದ ಪರಮಸ್ಥಾನವಾಗಿ ಸಂಸಾ ರಕನಾದ ಪಾದೇಶ್ವರನೆಂಬ ತನ್ನದರ್ಶನಕ್ಕೋಸ್ಕರ ಬಂದ ಜಾಹ್ನವಿಯು ಮತ್ಸ್ಯೋದರಿಎನಿಸುವಳು, ಆ ವ್ಯಾಳೆಯಲ್ಲಿ ಸ್ನಾನವಂಮಾಡಲು ಬಹು ಪುಣ್ಯದೊರಕೊಂಬದು, ಆ ಪಡುವಲಲ್ಲಿಹ ಕಪಿಲೇಶ್ವರನಪೂಜೆಯಿಂ ಸ ರ್ವಭಾಗ್ಯನಹನು, ಅಲ್ಲಿಹ ಕೌಸ್ತುಭೇಶ್ವರನಪೂಜೆಯಿಂ ಕೌಸ್ತುಭ ಧಾರಿಯಾದ ವಿಷ್ಣುವಿನಲೋಕವಹುದು, ಆ ತೆಂಕಲಲ್ಲಿಹ ಶಂಕುಕರ್ಣೇ ಶ್ವರನಪೂಜೆಯಿಂ ಜ್ಞಾನಸಿದ್ಧಿ, ಅಲ್ಲಿಹ ಗುಹೆಯಬಾಗಿಲಲ್ಲಿರ್ದ ಅಘೋ ರತೀರ್ಥದಲ್ಲಿಸ್ನಾನ ಅಘೋರೇಶ್ವರನದರ್ಶನದಿಂ ಸಕಲವಾಂಛಿತಾರ್ಥಸಿದ್ಧಿ ಯಹುದು, ಆ ತೆಂಕಲಲ್ಲಿಹ ರುದ್ರವಾಸತೀರ್ಥದಲ್ಲಿ ಸ್ನಾನವಂಮಾಡಿ ರು ದ್ರೇಶ್ವರನಂಪೂಜಿಸಲು ಕೋಟಿರುದ್ರಜಪಿಸಿದಫಲ, ಆರ್ದ್ರಾನಕ್ಷತ್ರಯು ಕ್ತವಾದ ಪೌರ್ಣಮಿಯಲ್ಲಿ ಆ ರುದ್ರತೀರ್ಥಸ್ನಾನದಿಂ ರುದ್ರೇಶ್ವರನಪೂ ಜೆಯಿಂ ಅಲ್ಲಿಮೃತವಾದವರು ರುದ್ರಲೋಕವಹುದು, ನೈರುತ್ಯದಲ್ಲಿಹಮ ಹಾಲಯೇಶ್ವರನಮುಂದಿರ್ದ ಪಿತೃಕೂಪಸಮೀಪದಲ್ಲಿ ಪಡುವಮುಂತಾಗಿ ವೈತರಣೀಪಾಪಹರತೀರ್ಥದಲ್ಲಿ ಸ್ನಾನವಂಮಾಡಲು ವೈತರಣೀಮೊದಲಾ ದ ನರಕಬಾಧೆಇಲ್ಲ, ಆ ಪಶ್ಚಿಮದಲ್ಲಿಹ ರುದ್ರತೀರ್ಥದಲ್ಲಿ ಗುರುಪುಷ್ಯ ಯೋಗದಲ್ಲಿ ಸ್ನಾನವಂಮಾಡಿ ಬೃಹಸ್ಪತೀಶ್ವರನಪೂಜಿಸಲು ಗುರುಲೋ ಕವಹುದು, ರುದ್ರಾವಾಸಕ್ಕೆ ದಕ್ಷಿಣದಲ್ಲಿ ಕಾಮ್ಯೇಶ್ವರನ ತೆಂಕಣಮಹಾ ತೀರ್ಥದಲ್ಲಿ ಸ್ನಾನವಂಮಾಡಿ ಕಾಮ್ಯೇಶ್ವರನಪೂಜಿಸಲು ಇಷ್ಟಸಿದ್ಧಿ

ಚೈತ್ರಶುದ್ಧ ಪೌರ್ಣಮಿಯಲ್ಲಿ ಕಾಮೇಶ್ವರನ ಪೂಜಿಸಲು ಇಷ್ಟಾರ್ಥ
ಸಿದ್ಧಿ, ಆ ಮೂಡಣ ಸೂರ್ಯಚಂದ್ರೇಶ್ವರನದರ್ಶನದಿಂ ಅಜ್ಞಾನಾಂಧಕಾ
ರಹರ, ಆ ತೆಂಕಣ ಊರ್ಧ್ವಕೇಶೇಶ್ವರನದರ್ಶನದಿಂ ಅಜ್ಞಾನಹರ, ಆ
ಸಮೀಪದ ಸಿದ್ಧೇಶ್ವರನದರ್ಶನದಿಂ ಮಂಗಳಪ್ರದ, ಆ ಸಮೀಪದ ಮನ್ಮ
ಥತೀರ್ಥದಲ್ಲಿ ಸ್ನಾನವಮಾಡಿ ಅಲ್ಲಿಹ ಚ್ಯವನೇಶ್ವರನದರ್ಶನವಮಾಡಲು
ಅಭಿವೃದ್ಧಿಯಹುದು, ಆ ಸಮೀಪದ ಸನಕೇಶ್ವರನದರ್ಶನದಿಂ ರಾಜಸೂ
ಯಯಾಗಫಲ, ಆ ಸನತ್ಕುಮಾರೇಶ್ವರನದರ್ಶನದಿಂ ಯೋಗಸಿದ್ಧಿ, ಆ ಸಮೀ
ಪದ ಸನಂದೇಶ್ವರನದರ್ಶನದಿಂ ಜ್ಞಾನಸಿದ್ಧಿ, ಅದರದಕ್ಷಿಣದಲ್ಲಿಹ ಆಹುತೀ
ಶ್ವರನದರ್ಶನದಿಂ ಮೋಕ್ಷ, ಆ ತೆಂಕಲಲ್ಲಿಹ ಪುಣ್ಯಾಕೇಶ್ವರನದರ್ಶನದಿಂ
ಸಕಲಪುಣ್ಯವಹುದು, ಅದಕ್ಕೆ ಪಡುವಲಲ್ಲಿಹ ಮಾರ್ಕಂಡೇಯತೀರ್ಥದ
ಲ್ಲಿ ಸ್ನಾನ, ದಾನ, ತರ್ಪಣಾದಿಗಳಮಾಡಲು, ಅಕ್ಷಯಫಲ, ಆ ಬಡಗಲ
ಲ್ಲಿಹ ಸಕಲಸಿದ್ಧರಿಂ ನಮಸ್ಕಾರವಮಾಡಿಸಿಕೊಂಡು ಕಾಡೇಶ್ವರನನೋಡ
ಲು ಹನ್ನೆರಡುಸಾವಿರವರ್ಷ ಪಾಶುಪತವ್ರತವಮಾಡಿದಫಲ, ಅಲ್ಲಿಹ ಮಾ
ರ್ಕಂಡೇಯತೀರ್ಥಕ್ಕೆ ಮೂಡಲಲ್ಲಿ ಶಾಂಡಿಲ್ಯೇಶ್ವರನದರ್ಶನದಿಂ ಪುಣ್ಯದ
ಅಭಿವೃದ್ಧಿಯನೈದುವನು, ಆ ಪಡುವಣ ಚಂಡೇಶ್ವರನದರ್ಶನದಿಂ ಪ್ರಪಂ
ಚಪಾಪಪರಿಹರ, ಆ ತೆಂಕಲಲ್ಲಿಹ ಕಪಾಲೇಶ್ವರನಸಮೀಪದಲ್ಲಿಹ
ಶ್ರೀತೀರ್ಥದಲ್ಲಿ ಸ್ನಾನವಂಮಾಡಿ ಮಹಾಲಕ್ಷ್ಮೀಶ್ವರನಂ ಮಹಾಲಕ್ಷ್ಮಿ
ಯುಂ ಪೂಜಿಸಲು ಛತ್ರ ಚಾಮರವಿಡಿಹ ದಿವ್ಯವಾದ ದೇವತಾಸ್ತ್ರೀಯರಿಂ
ವಾಲೈಸಿಕೊಂಬನು, ಗಂಗೆ ಮತ್ಸ್ಯೋದರಿಯಾದಾಗ ದೇವರ್ಕಳು ತಮ್ಮ
ಸ್ತ್ರೀಯರುಸಹಾ ಮಾರ್ಗದಲ್ಲಿ ಬಹರಾಗಿ ಅದು ಸ್ವರ್ಗದ್ವಾರವೆನಿಸಿತು,
ಆ ತೆಂಕಲಲ್ಲಿ ಗಾಯತ್ರೀಶ್ವರ, ಸಾವಿತ್ರೀಶ್ವರರ ದರ್ಶನಪೂಜೆಗಳಿಂದ
ಬ್ರಹ್ಮಪದವಿಯಹುದು, ಆ ಮೂಡಲಲ್ಲಿ ಮತ್ಸ್ಯೋದರೀತೀರ್ಥದಲ್ಲಿಹ
ಸತ್ಯೇಶ್ವರನದರ್ಶನದಿಂದ ಐಶ್ವರ್ಯವಹುದು, ಮಹಾಲಕ್ಷ್ಮೀಶ್ವರನಮೂ
ಡಲುಗ್ರೇಶ್ವರನ ಪೂಜಿಸಲು ಜಾತಿಸ್ಮರತ್ವವಹುದು, ಆ ತೆಂಕಣ ಉಗ್ರ
ತೀರ್ಥಸ್ನಾನದಿಂ ನೂರುವರುಷ[illegible], ಆ ಪಡುವಣ ಕರವೀರೇಶ್ವರನದರ್ಶನ
ದಿಂ ವಿಷಮಂಗಳು ಕೆಡುವವು, ಆ ವಾಯುವ್ಯದ ಮರೀಚಿತೀರ್ಥಸ್ನಾನದಿಂ

ಮರೀಚೀಶ್ವರನದರ್ಶನದಿಂ ಸರ್ವಪಾಪಹರ, ಆ ಪಡುವಣ ಇಂದ್ರತೀರ್ಥಸ್ನಾನ ಇಂದ್ರೇಶ್ವರನದರ್ಶನದಿಂ ಸಕಲಸಂತೋಷ, ಆ ತೆಂಕಲಲ್ಲಿಹ ಕರ್ಕೋಟಕವಾಪಿಯಲ್ಲಿ ಸ್ನಾನವಂಮಾಡಿ ಕಾರ್ಕೋಟಕೇಶ್ವರನದರ್ಶನವಂಮಾಡಲು ನಾಗಾಧಿಪತ್ಯವಹುದು,ಆ ಪಡುವಣ ದ್ಯುಮಚಂದ್ರೇಶ್ವರನ ದರ್ಶನದಿಂ ಬ್ರಹ್ಮಹತ್ಯಾಹರ, ಆ ತೆಂಕಣಮಹಾತೀರ್ಥಸ್ನಾನದಿಂ ರುದ್ರಲೋಕವಹುದು, ಆ ಪಡುವಣ ಅಗ್ನಿತೀರ್ಥಸ್ನಾನವಂಮಾಡಿ ಅಗ್ನೀಶ್ವರನದರ್ಶನವಂಮಾಡಲು ಅಗ್ನಿಲೋಕವಹುದು, ಆ ಮೂಡಲಲ್ಲಿ ತೀರ್ಥೋದಕಸ್ನಾನದಿಂ ಪಿತೃಗಳುಸಹಾ ಸ್ವರ್ಗವಂಸೈದುವರು, ಆ ಮೂಡಣ ಬಾಲಚಂದ್ರೇಶ್ವರನಸಮೀಪದ ಬಾಲಚಂದ್ರತೀರ್ಥದಲ್ಲಿ ಸ್ನಾನವಂ ಮಾಡಿ ಶ್ರಾದ್ಧಾದಿಗಳಂಮಾಡಲು ಸಪ್ತಕುಲದವರನುದ್ಧರಿಸುವನು, ಆ ಮೂಡಲು ವಿಶ್ವೇಶ್ವರನು, ತೆಂಕಲು ಊರ್ಧ್ವಕಾಲೇಶ್ವರನು ಇವರಪೂಜಿಸಿ ಕಾಲೋದಕತೀರ್ಥದಲ್ಲಿ ಸ್ನಾನವಂಮಾಡಿದಸ್ತ್ರೀಯರಿಗೆಪುರುಷರಿಗೆ ಆದರೂ ಶರೀರ ಬಂಧನ್ನಿವೃತ್ತಿಯಹುದು, ಅಲ್ಲಿ ದೇವಸ್ಥಾನಕ್ಕೆಮಾಡಿದ ಸುಣ್ಣಗಾರೆ, ಮೊದಲಾದ ಸೇವೆಗಳಿಂ ರುದ್ರಲೋಕವಹುದು,ಆ ತೆಂಕಣ ಮೃತ್ಯುಕೇಶ್ವರನ ಪೂಜೆಯಿಂ ಅಪಮೃತ್ಯುಪರಿಹರ,ಆ ಬಡಗಣ ದಕ್ಷತೀರ್ಥದಲ್ಲಿ ಸ್ನಾನ ದಕ್ಷೇಶ್ವರನದರುಶನದಿಂ ಶಿವನುಸಹಸ್ರಅಪರಾಧವಂಕ್ಷಮಿಸುವನು, ಆ ಮೂಡಣ ಮಹಾತೀರ್ಥಸ್ನಾನ ಮಹಾಕಾಮೇಶ್ವರನ ಪೂಜೆಯಿಂತ್ರೈಲೋಕ್ಯವಂ ಪೂಜಿಸಿದಫಲ, ಆ ತೆಂಕಲಲ್ಲಿರ್ದ ಅಂತಕೇಶ್ವರನ ನೋಡೆ ಯಮಬಾಧೆ ಇಲ್ಲ, ಆ ತೆಂಕಣ ಹಸ್ತಿಪಾಲೇಶ್ವರನದರ್ಶನದಿಂ ಸರ್ವಪಾಪಹರ, ಆ ಸಮೀಪದ ಐರಾವತತೀರ್ಥದಲ್ಲಿ ಸ್ನಾನವಂಮಾಡಿ ಐರಾವತೇಶ್ವರನಪೂಜಿಸಲು ಧನಧಾನ್ಯಸಮೃದ್ಧಿ, ಆ ತೆಂಕಣ ಮಾಲತೀಶ್ವರನಪೂಜೆ, ಯಿಂದ ಶ್ರೇಯಸ್ಕರ; ಹಸ್ತೀಶ್ವರನಬಡಗಣ ಜಯಂತೇಶ್ವರನಪೂಜೆಯಿಂ ಜಯವಹುದು, ಮಹಾಕಾಲತೀರ್ಥದ ಬಡಗಲಲ್ಲಿ ತೀರ್ಥಸ್ನಾನ ದಾನ ಶ್ರಾದ್ಧಾದಿಗಳಂಮಾಡಿ ವಲ್ಲೀಶ್ವರನಪೂಜಿಸಲು ಅಕ್ಷಯಫಲ, ಧನ್ವಂತ್ರಿತೀರ್ಥ ಇವೆರಡಕ್ಕು ಪ್ರತಿಹೆಸರು ತುಂಗೇಶ್ವರನು, ತುಂಗೇಶ್ವರತೀರ್ಥ ವೈದ್ಯೇಶ್ವರ, ಆ ತುಂಗೇಶ್ವರತೀರ್ಥದಲ್ಲಿ ಅಮೃತಮಥನ ಸಮಯದಲ್ಲಿ

ಕೊಂಡ ದಿವ್ಯೌಷಧಿಗಳು ಬಚ್ಚಿಟ್ಟಿದ್ದುವು, ಆದುಕಾರಣ ಆ ತೀರ್ಥಸ್ನಾ
ನ ಆ ಲಿಂಗದರ್ಶನದಿಂ ಸಕಲವ್ಯಾಧಿಹರ, ಆ ಬಡಗಣ ಹಲ್ಲೀಸೇಶ್ವರನಪೂ
ಜೆಯಿಂ ಸರ್ವವ್ಯಾಧಿಹರ, ತುಂಗೇಶ್ವರನ ತೆಂಕಣ ಶಿವೇಶ್ವರನಪೂಜೆ
ಯಿಂ ಕಾರ್ಯಸಿದ್ಧಿ, ಆ ತೆಂಕಣ ಜಮದಗ್ನೀಶ್ವರನಪೂಜೆಯಿಂ ಶುಭ, ಆ
ಪಡುವಣಭೈರವೇಶ್ವರಗೆ ಬಡಗಲಲ್ಲಿರ್ದ ಭೈರವಕೂಪದ ಸ್ನಾನದಿಂ ಸರ್ವ
ಯಜ್ಞಫಲ, ಆ ಪಶ್ಚಿಮದ ಶುಕೇಶ್ವರನಪೂಜೆಯಿಂ ಯೋಗಸಿದ್ಧಿ, ಆ ನೈ
ಋತ್ಯದ ವ್ಯಾಸತೀರ್ಥದಲ್ಲಿ ಸ್ನಾನಮಂಮಾಡಿ ದೇವಋಷಿ ಪಿತೃತರ್ಪಣಂ
ಗಳಂ ಕೊಟ್ಟು ವ್ಯಾಸೇಶ್ವರನಂಪೂಜಿಸಲು ಬಯಸಿದ ಅರ್ಥವಹುದು,
ಆ ತೀರ್ಥದ ಪಶ್ಚಿಮದಲ್ಲಿ ಘಂಟಾಕರ್ಣಹ್ರದದಲ್ಲಿ ಸ್ನಾನಮಂಮಾಡಿ
ವ್ಯಾಸೇಶ್ವರನನ್ನು ನೋಡಿದವನು ಎಲ್ಲಿ ಮೃತವಾದರು ಕಾಶಿಯಲ್ಲಿ ಮೃ
ತವಾದ ಫಲವಹುದು, ಆಸಮೀಪದ ಪಂಚಚೂಡಾಪ್ಸರ ಸರಸ್ಸಿನಲ್ಲಿ
ಸ್ನಾನಮಂಮಾಡಿ ಪಂಚಚೂಡೇಶ್ವರನೋಡಲು ಶರೀರಾಂತ್ಯದಲ್ಲಿ ಶಿವರೂ
ಪವಹುದು, ಆ ತೆಂಕಣ ಸಾರಕೋಪಸ್ನಾನದಿಂ ಸರ್ವಜಾಡ್ಯನಿವೃತ್ತಿ,
ಆ ಪಂಚಚೂಡತೀರ್ಥದ ಉತ್ತರದಲ್ಲಿರ್ದ ಅಶೋಕತೀರ್ಥದಲ್ಲಿ ಸ್ನಾನ
ಮಂಮಾಡೆ ಸಕಲಶೋಕಹರ, ಆ ಸಮೀಪದ ಮಧ್ಯೇಶ್ವರನನ್ನು ಚೈತ್ರ
ಶುದ್ಧ ಅಷ್ಟಮಿಯಲ್ಲಿ ಪೂಜಿಸಿ ಜಾಗರಣೆಯಂಮಾಡಲುಬ್ರಾಹ್ಮಣರಿಗೂ
ಯತಿಗಳಿಗೂ, ಪಾಶುಪತಿವ್ರತಿಗಳಿಗೂ, ಅನ್ನದಾನಂಗಳಂ ಪೂಜಿಸಲೂ
ತನ್ನ ಇಪ್ಪತ್ತೊಂದುಕುಲಕ್ಕು ರುದ್ರಲೋಕವಹುದು. ಪಿತೃಗಳು ಬಯ
ಸುತ್ತಿಹರು, ಆ ಮಧ್ಯಮೇಶ್ವರನ ತೆಂಕಲಲ್ಲಿದ್ದ ವಿಶ್ವೇಶ್ವರನಪೂಜೆಯಿಂ
ಹವಿರ್ಮೂಗುಪಂದಿ ವಿಶ್ವೇದೇವರುಗಳು ಸಂತೋಷದಹರು, ಆ ಮೂಡಲ
ಲ್ಲಿ ಇದ್ದ ಕಾಳಹ್ರದದಲ್ಲಿ ಸ್ನಾನಮಂಮಾಡಿ ಭದ್ರಕಾಳಿಸಮೇತನಾದ ವೀರ
ಭದ್ರನಂಪೂಜಿಸಲು ಅತ್ಯಂತಪರಾಕ್ರಮದಹುದು; ಆ ಮೂಡಣ ಅವಸಂ
ಖ್ಯೇಶ್ವರನಪೂಜಿಸಲು ಜ್ಞಾನಸಿದ್ಧಿ, ಆ ಬಡಗಣ ಪುಣ್ಯಕೂಪದಲ್ಲಿ ಸ್ನಾ
ನದಿಂ ಪುಣ್ಯವು, ಆ ಪಡುವಲಲ್ಲಿ ಇದ್ದ ಶೌನಕಹ್ರದತೀರ್ಥದಲ್ಲಿ ಸ್ನಾನ
ಮಂಮಾಡಿಶೌನಕೇಶ್ವರನಪೂಜಿಸಲುದಿವ್ಯಜ್ಞಾನವಹುದು, ಆತೆಂಕಣಕ
ಕೇಶ್ವರನಪೂಜೆಯಿಂ ತಿರ್ಯಗ್ಜಾತಿಯಲ್ಲಿ ಹುಟ್ಟನು, ಆ ಬಡಗಣ ಮಹಾ

ಗೇಶ್ವರನಪೂಜಿಸಲು ಜ್ಞಾನಸಿದ್ಧಿ, ಆ ವಾಯುವ್ಯದಲ್ಲಿ ಮುನಿಗಳು ಅನೇಕರಿಂದ ಪ್ರತಿಷ್ಠೆಯಂಮಾಡಿದ ಅನೇಕಲಿಂಗಗಳಿಪ್ಪುವು, ಅವರದರ್ಶನದಿಂ ಸರ್ವಸಿದ್ಧಿಯಹುದು, ಆ ಮತಂಗೇಶ್ವರನತೆಂಕಲಲ್ಲಿರ್ದ ಬ್ರಹ್ಮರಾತ್ರೇಶ್ವರನಪೂಜಿಸಲು ಆಯುಷ್ಯಾಭಿವೃದ್ಧಿ, ಆಸಮೀಪದ ಆಜ್ಯ ಆಪೇಶ್ವರನದರ್ಶನದಿಂ ಸಕಲಪಾಪಹರ, ಆ ಸಮೀಪದಲ್ಲಿ ಸಕಲಪಿತೃಗಳು ಪ್ರತಿಷ್ಠೆಯಂಮಾಡಿದ ಪಿತೃಲಿಂಗಗಳನೋಡಲು ತಮ್ಮ ಸಕಲಪಿತೃಗಳು ಸಂತುಷ್ಟರಹರು, ಆ ತೆಂಕಲಲ್ಲಿರ್ದ ಸಿದ್ಧಕೂಪಸ್ನಾನವಂಮಾಡಿ ವಾಯುರೂಪಾಗಿ ಸೂರ್ಯಕಿರಣರೂಪಾಗಿ ಅನಂತರೂಪಾಗಿ ಅನಂತಸಿದ್ಧರಿಂ ಪ್ರತಿಷ್ಠಿತವಾದ ಸಿದ್ಧೇಶ್ವರನದರ್ಶನದಿಂ ಸಕಲಸಿದ್ಧಿ ಕೈಗೂಡುವದು, ಆ ಪಡುವಣ ಸಿದ್ಧವಾಪಿಯಲ್ಲಿ ಸ್ನಾನದಾನಗಳಿಂ ಸಕಲಸಿದ್ಧಿಗಳಹುದು, ಆ ಸಮೀಪದ ವಿಘ್ನೇಶ್ವರನದರ್ಶನದಿಂ ವ್ಯಾಘ್ರಚೋರಭಯಹರ, ಆ ತೆಂಕಲಲ್ಲಿರ್ದ ಜ್ಯೇಷ್ಠೇಶ್ವರನಪೂಜೆಯಿಂ ಸರ್ವಸಿದ್ಧಿಕರ, ಆ ತೆಂಕಲಲ್ಲಿರ್ದ ಪ್ರಹಸಿತೇಶ್ವರನದರ್ಶನದಿಂ ಸಂತೋಷಾಭಿವೃದ್ಧಿ, ಆ ಬಡಗಣ ನಿವಾಸೇಶ್ವರನಂ ನೋಡಲು ಕಾಶೀವಾಸಫಲ, ಆ ಸಮೀಪದ ಚತುಸ್ಸಮುದ್ರಕೂಪದಲ್ಲಿ ಸ್ನಾನವಂಮಾಡೆ ಚತುಸ್ಸಮುದ್ರಸ್ನಾನಫಲ, ಆ ಸಮೀಪದ ಜ್ಯೇಷ್ಠಾದೇವಿಯಪೂಜೆಯಿಂದ ಅಧಿಕಫಲ, ಆ ಸಮೀಪದ ವ್ಯಾಘ್ರೇಶ್ವರನತೆಂಕಲಲ್ಲಿರ್ದ ದಂಡಪಾತತೀರ್ಥದಲ್ಲಿ ಸ್ನಾನವಂಮಾಡಿ ದಂಡೀಶ್ವರನಪೂಜಿಸಲು ಸಕಲ ಪಿತೃಗಳಿಗೂತೃಪ್ತಿ, ಆ ಸಮೀಪದ ಜೈಗೀಷವ್ಯ ಗುಹೆಯಬಳಿಯಲ್ಲಿರ್ದ ಜೈಗೀಷವ್ಯೇಶ್ವರನದರ್ಶನದಿಂದ ಮಹಾಪುಣ್ಯಫಲ, ಆ ತೆಂಕಣ ಅಕ್ಷಪಾದೇಶ್ವರನದರ್ಶನದಿಂ ಜ್ಞಾನಸಿದ್ಧಿ, ಆ ಮುಂದಣ ಕಣಾದ ತೀರ್ಥಸ್ನಾನ ಕಣಾದೇಶ್ವರನದರ್ಶನವಂಮಾಡಲು ಧನಧಾನ್ಯಸಮೃದ್ಧಿ, ಆ ತೆಂಕಣ ಭೂತೇಶ್ವರನದರ್ಶನದಿಂ ಐಶ್ವರ್ಯ, ಆ ಪಡುವಲು ಜ್ಯೇಷ್ಠೇಶ್ವರನ ದರ್ಶನದಿಂ ಪಾಪಕ್ಷಯ, ಆ ಮೂಡಣ ದೂರ್ವಾಸೇಶ್ವರನ ದರ್ಶನದಿಂ ಸರ್ವಕಾಮ್ಯಸಿದ್ಧಿ, ಆ ದಕ್ಷಿಣದಲ್ಲಿಹ ಭಾರಭೂತೇಶ್ವರನದರ್ಶನದಿಂ ಪಾಪಹರ, ವ್ಯಾಸೇಶ್ವರನಮೂಡಲಲ್ಲಿಹ ಶಂಖಲಿಖಿತೇಶ್ವರನನೋಡಲು ಜ್ಞಾನಸಿದ್ಧಿ, ಆ ಸಮೀಪದ ವಿಶ್ವೇಶ್ವರನ ಪೂಜಾನಮಸ್ಕಾರಂಗಳಿಂದ ಪಾಶುಪತ

ವ್ರತಫಲ, ಆ ಕೌಶಾಸ್ಯದಲ್ಲಿ ಅವಧೂತತೀರ್ಥದಲ್ಲಿ ಸ್ನಾನ ಅವಧೂತೇಶ್ವರನದರ್ಶನದಿಂ ಸರ್ವಪಾಪಹರ. ಆ ಮೂಡಲು ಪಶುಪತೀಶ್ವರನದರ್ಶನದಿಂ ಭವಪಾಶಹರ, ಆ ತೆಂಕಣ ಗೋಬಿಲೇಶ್ವರನದರ್ಶನದಿಂ ಸಕಲಮನೋರಥ ಸಿದ್ಧಿ, ಆ ಸಮೀಪದ ಜೀಮೂತವಾಹನೇಶ್ವರನ ಪೂಜೆಯಿಂ ವಿದ್ಯಾಧರಪದವಿ, ಪಂಚನದಸಮೀಪದಲ್ಲಿಹ ಮಯೂಖಾದಿತ್ಯನಸಮೀಪದ ದಧಿಕಲ್ಪ ಹ್ರದದಲ್ಲಿ ಸ್ನಾನನಂಮಾಡಿ ಗಭಸ್ತೀಶ್ವರನನೋಡೆ ಅಕ್ಷಯಫಲ, ಆ ಬಡಗಣ ದಧಿಕಲ್ಪೇಶ್ವರನ ಪೂಜೆಯಿಂ ಒಂದುಕಲ್ಪಬ್ರಹ್ಮಲೋಕವಲ್ಲಿ ಇಹನು, ಗಭಸ್ತೀಶ್ವರನ ತೆಂಕಲಲ್ಲಿ ಮಂಗಳಗೌರಿಯಾದ ನಿನ್ನಪೂಜೆಯಿಂ ಮಾಡಿ ಬ್ರಾಹ್ಮಣ ದಂಪತಿಗಳನಲಂಕರಿಸಿ ಯಥಾಶಕ್ತಿದಾನವನೀಯಲು ಆಪುಣ್ಯಕ್ಕೆ ಮಿತಿಯಿಲ್ಲ, ಆಮಂಗಳಗೌರಿಯಾದ ನಿನಗೆ ಒಂದುಪ್ರದಕ್ಷಿಣೆ ನಮಸ್ಕಾರಮಾಡಲೂ ಭೂಪ್ರದಕ್ಷಿಣದಫಲ, ಆ ಸಮೀಪದಲ್ಲಿಹ ಸಿದ್ಧಗೌರಿಯನ್ನು ಮುಖಪ್ರೇಕ್ಷೇಶ್ವರನನ್ನೂನೋಡಲು ಸರ್ವಸಿದ್ಧಿ, ಆ ಬಡಗಲ್ಲಿಹ ಕೃಷ್ಣೇಶ್ವರನನೋಡಲು ಸಕಲಕಾರ್ಯಸಿದ್ಧಿ, ಆ ಸಮೀಪದ ಮೈತ್ರೇಶ್ವರನ ದರ್ಶನಮಾಡಲು ಸುವರ್ಣಸಹಿತವಾಗಿ ಭೂದಾನವನಿತ್ತಫಲ, ಆಬಡಗಣ ಚರ್ಚಿಕಾದೇವಿಯ ದರ್ಶನದಿಂ ಶುಭ, ಆಮುಂದೆ ಇರುವ ರೇವಂತೇಶ್ವರನದರ್ಶನದಿಂ ಶಾಂತಿಪ್ರದ, ಆಮುಂದಣ ಪಂಚಮುಖೇಶ್ವರನ ದರ್ಶನದಿಂ ಶುಭ, ಮಂಗಳಗೌರಿಯ ಪಡುವಣ ಮಂಗಳತೀರ್ಥದ ತೆಂಕಲಲ್ಲಿರ್ದ ಉಪಮನ್ಯುಲಿಂಗವಂ ಪೂಜಿಸಲುಶುಭ, ಆಪಡುವಣವ್ಯಾಘ್ರೇಶ್ವರನದರ್ಶನದಿಂ ವ್ಯಾಘ್ರಭಯಹರ, ಭಗನೇತ್ರೇಶ್ವರನ ನೈಋತ್ಯದಲ್ಲಿಹ ಶಶಾಂಕೇಶ್ವರನನಾರಾಧಿಸಲು ಸರ್ವಪಾಪಹರ, ಆಪಡುವಣಚೈತ್ರರಥೇಶ್ವರನ ದರ್ಶನದಿಂ ಸ್ವರ್ಗಭೋಗ, ರೇವಂತೇಶ್ವರನ ಪಡುವಣ ಜೈಮುನೀಶ್ವರನ ಪೂಜೆಯಿಂದಾ ಸಕಲಭಯಹರ, ಆಸಮೀಪದ ಪಿತೃಗಳಿಂಪ್ರತಿಷ್ಠಿತವಾದ ಅನೇಕಲಿಂಗಗಳುಂಟು, ಆಲಿಂಗಗಳದರ್ಶನದಿಂ ಸರ್ವಕಾರ್ಯಸಿದ್ಧಿ, ಜೈಮುನೀಶ್ವರನ ವಾಯುವ್ಯದಲ್ಲಿಹ ರಾವಣೇಶ್ವರನ ನೋಡಲು ರಾಕ್ಷಸ ಭಯವಿಲ್ಲ, ವರಾಹೇಶ್ವರನ ಬಡಗಲಲ್ಲಿಹ ಮಾಂಡವ್ಯೇಶ್ವರನು ಆ ತೆಂಕಲು ಪುಭಾಂಡೇಶ್ವರನು ಆ ತೆಂಕಲು ವಾತೇಶ್ವರನು ಆಮುಂದೇ

ಸೋಮೇಶ್ವರನು ಆನೈಋತ್ಯದಲ್ಲಿ ಕನಕೇಶ್ವರನು ಆಬಡಗಲುಪಂಚಪಾಂಡವೇಶ್ವರನು ಆ ಮುಂದೆ ಸುವರ್ತೇಶ್ವರನು, ಆ ಮುಂದೆ ಶ್ವೇತೇಶ್ವರನು, ಆ ಸಮೀಪದಲ್ಲಿ ಶ್ವೇತಕೇತುವಿನಕೊರಳಿಗೆ ಪಾಶವಂ ಹಾಕಿ ಯಮನುಎಳೆಯುವಾಗ ಕಲಶದಲ್ಲಿ ಪ್ರಸನ್ನನಾಗಿ ಕಾಲಭಯಹರನಾದ ಕಲಶೇಶ್ವರನು, ಆ ಬಡಗಲು ಚಿತ್ರಗುಪ್ತೇಶ್ವರನು, ಆ ತೆಂಕಲು ಗ್ರಹಬಾಧೆಪರಿಹಾರಕನಾದ ಗ್ರಹೇಶ್ವರ, ಆ ಪಡುವಲು ದೃಢೇಶ್ವರನು, ಗ್ರಹೇಶ್ವರನತೆಂಕಲು ನಾಚಕೇತ್ರೇಶ್ವರನು, ಆ ಸಮೀಪದ ವಾಮದೇವೇಶ್ವರನು, ಆ ತೆಂಕಲು ಕಂಬಳಾಶ್ವತರೇಶ್ವರನು,ಆಸಮೀಪದ ಸಳಕೂಬರೇಶ್ವರನು, ಆತೆಂಕಲುಮಣಿಕರ್ಣಿಕೇಶ್ವರನು,ಆ ಬಡಗಲು ಪಥಿಕೇಶ್ವರನು,ಆ ಸಮೀಪದ ಜ್ವರಹರೇಶ್ವರನು, ಆ ಪಡುವಲು ಪಾಪನಾಶೇಶ್ವರನು, ಆ ಪಡುವಲು ನಿರ್ಜರೇಶ್ವರನು, ಆ ನೈಋತ್ಯದಲ್ಲಿ ಪಿತಾಮಹೇಶ್ವರನು, ಆ ಸಮೀಪದಲ್ಲಿಹ ಪಿತಾಮಹತೀರ್ಥದಲ್ಲಿ ಸ್ನಾನಶ್ರಾದ್ಧಾದಿಗಳಮಾಡಲು ಅತ್ಯಂತಫಲ, ಆ ತೆಂಕಲು ವರುಣೇಶ್ವರನು, ಆ ತೆಂಕಲು ಬಾಣೇಶ್ವರನು, ಪಿತಾಮಹತೀರ್ಥ ಸಮೀಪದಲ್ಲಿ ಕೂಷ್ಮಾಂಡೇಶ್ವರನು, ಆ ಮೂಡಲು ರಾಕ್ಷಸೇಶ್ವರನು, ಆ ತೆಂಕಲು ಗಂಗೇಶ್ವರನು, ಆ ಬಡಗಲು ನಂದಿಕೇಶ್ವರನಿಂ ಪ್ರಾಪಿಸಿಕೊಂಡಅಸಂಖ್ಯಾತ ಲಿಂಗಗಳಿವೆ, ಆ ಸಮೀಪದಲ್ಲಿ ಯಮಲೋಕವಾಸವಂ ಪರಿಹರಿಪ ವೈವಸ್ವತೇಶ್ವರನು,ಆ ಪಡುವಲು ಅದಿತೀಶ್ವರನು,ಆಮುಂದೆ ಚಕ್ರೇಶ್ವರನು, ಆ ಮುಂದೆ ಜಾನಕೀಶ್ವರನು, ಆ ಲಿಂಗವಪುಣ್ಯಾತ್ಮರು ನೋಡಲು ನೆಳಲುಕಾಣಬಹುದು, ಆ ಮುಂದೆ ತಾರಕೇಶ್ವರನು, ಆ ಮುಂದೆ ಸುವರ್ಣನಾದೇಶ್ವರನು, ಆಬಡಗಲು ಮರುತೇಶ್ವರನು, ಆ ಮುಂದೆಶಾಂತೇಶ್ವರನು, ಆ ತೆಂಕಲು ರಂಭೇಶ್ವರನು,ಆ ಸಮೀಪದಲ್ಲಿ ಊರ್ವಶೀಶ್ವರನು, ಅಲ್ಲಿ ಶಚೀಶ್ವರನು, ಆ ಬಡಗಲು ಲೋಕಪಾಲಕರು, ನಾಗ, ಗಂಧರ್ವ, ಯಕ್ಷ, ಕಿನ್ನರ, ಕಿಂಪುರುಷ, ಅಪ್ಸರ, ದೇವ. ಋಷಿಗಣಸಮೂಹಂಗಳಿಂದ ಪ್ರತಿಷ್ಠೆಯಾದ ಅಸಂಖ್ಯಾತಲಿಂಗಗಳಿವೆ, ಚಕ್ರೇಶ್ವರನತೆಂಕಲಲ್ಲಿಹ ಫಲ್ಗುಣೇಶ್ವರನದರ್ಶನದಿಂ ಸರ್ವಪಾಪಹರ, ಆ ತೆಂಕಲಲ್ಲಿಹ ಮಹಾಪಾತುಪತೇಶ್ವರನ ದರ್ಶನದಿಂ ಶುಭ, ಆ ಪಶ್ಚಿಮದಲ್ಲಿ ಸಮುದ್ರೇಶ್ವರ

ನು, ಆ ಉತ್ತರದಲ್ಲಿ ಈಶಾನೇಶ್ವರನು, ಆ ಪಶ್ಚಿಮದಲ್ಲಿ ಮಾಧುಪಿಂಗಳಶ್ವೇತಕೇತುಗಳಿಗೆ ಶರೀರಸಹಾಮುಕ್ತಿಯಸಿತ್ತ ಅಂಗೇಶ್ವರನು, ಅಲ್ಲಿ ನಕುಲೇಶ್ವರನು, ಆ ಸಮೀಪದ ಕಪಿಲೇಶ್ವರನು, ಅಲ್ಲಿ ಪಾತ್ರೇಶ್ವರನಪ್ಪೂಜಿಸಿ ಉಪವಾಸದಿಂ ಜಾಗರಣಮಂ ಮಾಡಲು ಗಣತ್ವಪಹುದು, ಆ ತೆಂಕಲಲ್ಲಿ ಹಶುಭೋದಕತೀರ್ಥದಲ್ಲಿ ಸ್ನಾನ ತರ್ಪಣಾದಿ ಕ್ರಿಯೆಗಳಂ ಮಾಡಲು ಪುನರ್ಜನ್ಮವಿಲ್ಲ, ಆ ಪಡುವಲು ದಂತಪಾಣಿ ಆ ಬಡಗಲಲ್ಲಿ ತಾರಕಕಾಲನಂದೀಶ್ವರರು ಇಹರು, ಆ ಸಮೀಪದಲ್ಲಿಹ ಮಾರುಕಂಡಿಕೆ ಉಪವಾಸಮಂ ಮಾಡಲು ಹೃದಯದಲ್ಲಿ ಮೂರು ಲಿಂಗಗಳಾಹಂಥಾ ಜ್ಞಾನವಾಪೀ ಎಂಬ ತೀರ್ಥವಿದ್ದೀತು, ಆ ಸಮೀಪದ ಅವಿಮುಕ್ತೇಶ್ವರ, ಮೋಕ್ಷೇಶ್ವರ, ಕರುಣೇಶ್ವರರಿಹರು, ಆ ಮೂಡಲು ಸ್ವರ್ಣೇಶ್ವರನು, ಆ ಬಡಗಲು ಜ್ಞಾನೇಶ್ವರ ಅಲ್ಲಿ ಭಾಗ್ಯವನೀವ ಸೌಭಾಗ್ಯಗೌರಿ ಇಹಳು, ಆ ಸಮೀಪದ ವಿಶ್ವೇಶ್ವರನ ತೆಂಕಲಲ್ಲಿ ನಿಕುಂಭೇಶ್ವರನು, ಆ ಪಡುವಲು ವಿಘ್ನೇಶ್ವರನು, ಆ ಆಗ್ನೇಯದಲ್ಲಿ ವಿರೂಪಾಕ್ಷೇಶ್ವರನು, ಆ ತೆಂಕಣ ಶುಕ್ರೇಶ್ವರನ ಪೂಜೆಯಿಂ ಪುತ್ರಪೌತ್ರಾಭಿವೃದ್ಧಿ, ಆ ಬಡಗಲು ಶುಕ್ರನ ಕುಮಾರತಿಯಾದ ಯಯಾತಿ ಎಂಬ ರಾಜನ ಸರಾಣಿಯಾದ ದೇವಯಾನೆಯಿಂ ಪ್ರತಿಷ್ಠೆಯಾದ ದೇವಯಾನೇಶ್ವರನು, ಶುಕ್ರೇಶ್ವರನ ಮುಂದೆ ಇದ್ದ ಶುಕ್ರಕೂಪ ಸ್ನಾನ ಕವೀಶ್ವರನ ಪೂಜೆಯಿಂ ಅಶ್ವಮೇಧಫಲ, ಆ ಮೂಡಲು ಮಹಾಲಸೇಶ್ವರನ ದರ್ಶನದಿಂ ವಿಘ್ನಹರ, ಶುಕ್ರೇಶ್ವರನ ಪಶುಪಣಾಭಮಾಸೀಶ್ವರನ ದರ್ಶನದಿಂ ಇಷ್ಟಸಿದ್ಧಿ, ಆ ಮೂಡಲು ಅಮೃತೇಶ್ವರನ ದರ್ಶನದಿಂ ನಿರ್ವಿಘ್ನಪ್ರದ, ಆ ಸಮೀಪದಲ್ಲಿ ರಾವಣ ಸಂಹಾರದ ದೋಷಪರಿಹಾರಕ್ಕೆ ರಾಮೇಸ್ವರ ರಘುನಾಥನಿಂ ಪ್ರತಿಷ್ಠೆಯಾದ ಗಣೇಶ್ವರೇಶ್ವರನ ಪೂಜಿಸಲು ಬ್ರಹ್ಮಹತ್ಯಾಪಾತಕಹರ, ಆ ಸಮೀಪದಲ್ಲಿ ತ್ರಿಪುರಾಂತಕೇಶ್ವರನು ಪಡುವಲು ದತ್ತಾತ್ರೇಯೇಶ್ವರನು, ಆ ತೆಂಕಲು ಹರಿಕೇಶ್ವರನು, ಗೋಕರ್ಣೇಶ್ವರನ ಆ ಮುಂದೆ ಪಾಪಹರತೀರ್ಥ ಸ್ನಾನದಿಂ ಸಕಲಪಾಪಹರ, ಆ ಪಡುವಲು ಧ್ರುವೇಶ್ವರನು, ಆ ಮುಂದೆ ಪಿತೃಪ್ರೀತಿಯಾದ ಧ್ರುವತೀರ್ಥದಲ್ಲಿ ಸ್ನಾನದಿಂ ಸಕಲ ಪಿತೃಗಳಿಗೆ ತೃಪ್ತಿ, ಆ ಬಡಗಲು ಪಿಶಾಚತ್ವಮಂ ಪರಿಹರಿಪ ಪಿಶಾಚೇಶ್ವರನು, ಆ ತೆಂಕಲು ಪತ್ರೇಶ್ವರನು

ಆ ಮುಂದೆ ಪಿತೃತೀರ್ಥದಲ್ಲಿ ಸ್ನಾನಶ್ರಾದ್ಧಾದಿಗಳಿಂ ಸಕಲ ಪಿತೃಗಳಿಗೂ ತೃ
ಪ್ತಿಕರ, ಧ್ರುವೇಶ್ವರನ ಮುಂದೆ ತಾರಕೇಶ್ವರ ಲಿಂಗಕ್ಕೆ ವೈದ್ಯನಾ
ಥನೆಂಬ ಹೆಸರು ಉಂಟು, ಆ ನೈರುತ್ಯದಲ್ಲಿ ವೈವಸ್ವತನೆಂಬ ಮನು ಪ್ರತಿ
ಷ್ಠೆಯಂ ಮಾಡಿದ ಮನು ಲಿಂಗವಪ್ಪೂಜಿಸಲು ವಂಶಾಭಿವೃದ್ಧಿ, ಆ ಸಮೀ
ಪದ ವೈದ್ಯನಾಥೇಶ್ವರನ ಮುಂದೆ ಪ್ರಿಯವ್ರತೇಶ್ವರನು ಆ ಮುಂದೆ ಮುಚು
ಕುಂದೇಶ್ವರನು, ಆ ಪಾರ್ಶ್ವದಲ್ಲಿ ಗೌತಮೇಶ್ವರನು, ಆ ಪಡುವಲು ವೀರಭ
ದ್ರೇಶ್ವರನು, ಆ ತೆಂಕಲು ವೃಶ್ಯಶೃಂಗೇಶ್ವರನು, ಆ ಮುಂದೆ ಬ್ರಹ್ಮೇಶ್ವರ
ನು ಆ ಈಶಾನ್ಯದಲ್ಲಿ ಪರ್ಜನ್ಯೇಶ್ವರನು, ಆ ಮೂಡಲು ಸಹಸ್ರೇಶ್ವರನು,
ಆ ಸಮೀಪದ ವಿಶಾಲಾಕ್ಷಿ, ವಿಶಾಲಾಕ್ಷೇಶ್ವರನು, ಆ ತೆಂಕಣ ಜರಾಸಂಧೇಶ್ವ
ರನ ದರ್ಶನದಿಂ ಸಮಸ್ತ ಜರಾಹರ, ಆ ಮುಂದಣ ಹಿರಣ್ಯಾಕ್ಷೇಶ್ವರನಪ್ಪೂ
ಜೆಯಿಂ ಹಿರಣ್ಯಾಭಿವೃದ್ಧಿ, ಆ ಪಡುವಲು ಯಯಾತೀಶ್ವರನು, ಆ ಪಡುವ
ಲು ಭಗೀರಥೇಶ್ವರನು, ಆ ಮುಂದೆ ಬ್ರಹ್ಮೇಶ್ವರನು, ಆ ಪಡುವಲು ದಿಲೀಪ
ತೀರ್ಥಸ್ನಾನ ದಿಲೀಪೇಶ್ವರನ ದರ್ಶನದಿಂ ಇಷ್ಟಫಲ, ಅಲ್ಲಿಯೆ ವಿಶ್ವಾವಸು ಲಿಂ
ಗವಿದ್ದೀತು, ಆ ಮುಂದೆ ಕುಂವನೆಂಬ ಈಶ್ವರನು ಇಪ್ಪನು, ಆ ತೆಂಕಲು
ತ್ರಿಧೀಶ್ವರನು, ಆ ತೆಂಕಲು ದಶಾಶ್ವಮೇಧತೀರ್ಥದಲ್ಲಿ ಸ್ನಾನವಂ ಮಾಡಿ ವಾ
ಜಿಮೇಧೇಶ್ವರನಪ್ಪೂಜಿಸಲು ದಶಾಶ್ವಮೇಧಫಲ, ಆ ಪಡುವಲಲ್ಲಿರ್ದ ಮಾ
ತೃತೀರ್ಥದಲ್ಲಿ ಸ್ನಾನವಂ ಮಾಡಿದ ಸ್ತ್ರೀಯರಿಗೆ ಮೂರು ಜನ್ಮದ ಪಾಪಗಳು
ಪರಿಹರವು, ಆ ತೆಂಕಲು ಪುಷ್ಪದಂತೇಶ್ವರನು, ಆ ಆಗ್ನೇಯದಲ್ಲಿ ಋಷಿ
ಗಳಿಂದಲೂ ಪಿತೃಗಳಿಂದಲೂ ಪ್ರತಿಷ್ಠಿತವಾದ ಅನೇಕಲಿಂಗಗಳಿಪ್ಪವು,
ಆ ಪುಷ್ಪದಂತೇಶ್ವರನ ತೆಂಕಲಲ್ಲಿರ್ದ ಸಿದ್ಧೇಶ್ವರನಂ ಪೂಜಿಸಿ ಉಪವಾ
ಸವಿರ್ದು ಆ ಸಮೀಪದಲ್ಲಿ ಮಲಗಲು ಸ್ವಪ್ನದಲ್ಲಿ ಇಷ್ಟಸಿದ್ಧಿಯಂ ಕಾಂಬ
ನು, ಆ ಸಮೀಪದ ಹರಿಶ್ಚಂದ್ರೇಶ್ವರನ ಪೂಜೆಯಿಂದ ರಾಜ್ಯಪ್ರಾಪ್ತಿಯ
ಹುದು, ಆ ಪಡುವಲು ನೈಋತ್ಯೇಶ್ವರನಂ, ಆ ತೆಂಕಲು ಆಂಗೀರಸೇಶ್ವರ
ನಂ, ಆ ತೆಂಕಲು ಕ್ಷೇಮೇಶ್ವರನಂ, ಆ ತೆಂಕಲು ಚಿತ್ರಾಂಗದೇಶ್ವರನಂ, ಆ
ತೆಂಕಲು ಕೇದಾರೇಶ್ವರನಂ ಪೂಜಿಸಲು ಗಣಪದಪ್ರಾಪ್ತಿ, ಆ ಪಡುವಲಲ್ಲಿ
ರ್ದ ದುರ್ಗಾದೇವಿ ಪೂಜೆಯಿಂದ ಸಕಲವಿಘ್ನಹರ, ಸೋಮವಂಶ ಸೂರ್ಯ

ವಂಶದ ರಾಯರುಗಳಿಂ ಪ್ರತಿಷ್ಠಿತವಾದ ಅಸಂಖ್ಯಾತಲಿಂಗಗಳಿದ್ದಾವು, ಲೋಲಾರ್ಕಲಿಂಗದ ತೆಂಕಲಲ್ಲಿಹ ಕರಂಧನೇಶ್ವರನ ಪೂಜೆಯಿಂ ಇಷ್ಟಕಾಮ್ಯಾರ್ಥಸಿದ್ಧಿ, ಆ ತೆಂಕಲು ಸುರೇಶ್ವರನು, ಆ ಪಡುವಲು ಜನಕೇಶ್ವರನು, ಆ ಬಡಗಲು ಶಂಕುಕರ್ಣೇಶ್ವರನು, ಆ ಮೂಡಲು ಸಿದ್ಧತೀರ್ಥಸ್ನಾನದಿಂ ಸಿದ್ಧೇಶ್ವರನ ಪೂಜೆಯಿಂ ಸರ್ವಸಿದ್ಧಿ, ಶಂಕುಕರ್ಣೇಶ್ವರನ ವಾಯುವ್ಯದಲ್ಲಿ ವಾಯುವ್ಯಲಿಂಗ, ಆ ಲಿಂಗದ ಮುಂದೆ ವಿಭಾಂಡೇಶ್ವರನು, ಆ ಮುಂದೆ ಬಡಗಲು ಕಲಿವಿರಾಳೇಶ್ವರನು, ಆ ಮುಂದಿರ್ದ ದ್ವಾರಕೇಶ್ವರನು ಪೂಜಿಸೆ ಕಾಶೀವಾಸ ಸಿದ್ಧಿ, ಆ ಪಡುವಲಲ್ಲಿರ್ದ ಕಾಶೀರಕ್ಷಕರಾದ ನಾನಾಯುಧಧಾರಿಗಳಾದ ಗಣಂಗಳ ಲಿಂಗಗಳಿದ್ದಾವು, ಅಲ್ಲಿ ಹರಿಕೇಶವೇಶ್ವರನು, ಕಾತ್ಯಾಯನೀಶ್ವರನು, ಆ ಪಾರ್ಶ್ವದಲ್ಲಿ ಜಾಂಗಲೇಶ್ವರನು, ಅಲ್ಲಿರ್ದ ಮುಕುಟತೀರ್ಥದಲ್ಲಿ ಸ್ನಾನ, ಮುಕುಟೇಶ್ವರನ ದರ್ಶನದಿಂದ ಸಕಲಲಿಂಗಗಳ ದರ್ಶನಫಲ, ಎಲೇ ದೇವಿ ! ಕಾಶೀಯಲ್ಲಿ ತಪವಿರ್ದ ಯೋಗಸಿದ್ಧಿಗಳನೀವ ಬಡಗಣದಿಕ್ಕು ಎನಗೆ ಅತ್ಯಂತಪ್ರಿಯವಾದುದು, ಅಲ್ಲಿ ಶತಸಹಸ್ರಲಿಂಗಗಳಿದ್ದಾವು, ಅದರಲ್ಲಿ ಐದುಸ್ಥಳದಲ್ಲಿ ಎನಗೆ ಅತ್ಯಂತಪ್ರಿಯವುಂಟು, ಉತ್ಪತ್ತಿಸ್ಥಿತಿಲಯಂಗಳಲ್ಲಿಯೂ ಅಲ್ಲಿಯೆ ಇರ್ಪೆನು, ಈ ಅರ್ಥವಂ ತಿಳಿದವರು ಪುಣ್ಯಾತ್ಮರು, ಎನ್ನ ಪದವನ್ನು ಅಪೇಕ್ಷಿಸುವವರು ಆ ಸ್ಥಳಗಳ ಯಾತ್ರೆಯನ್ನೇ ಮಾಡಬೇಕು, ಎಲೈ ಅಗಸ್ತ್ಯನೆ ! ಕುರುಹಿನಮಾತ್ರವಾಗಿ ಈ ಲಿಂಗಗಳ ಪೇಳ್ದೆನು, ಒಬ್ಬರಿಂ ಒಂದೊಂದು ಹೆಸರಿನಲಿಂಗ ಎರಡುಭಾರಿ ಮೂರುಭಾರಿ ಪೇಳಿದನೆನ್ನಬೇಡ, ಒಬ್ಬೊಬ್ಬರು ಎರಡು ಮೂರುಭಾರಿ ಪ್ರತಿಷ್ಠೆಯಂ ಮಾಡಿ ಇರುವರು, ಆ ಲಿಂಗಗಳನ್ನು ವಿಶ್ವಾಸದಿಂ ಪೂಜಿಸಬೇಕು, ಆ ಲಿಂಗಗಳು ಎಷ್ಟು ಇದಾವೋ ಅವಂ ವಿಶ್ವಾಸದಿಂ ಪೂಜಿಸಲು ಅನಂತಫಲ, ಇಲ್ಲಿ ಇಂಥಾ ಲಿಂಗಗಳು, ಕೊಳಗಳೂ, ನಡೆಭಾವಿಗಳು, ಮೂರ್ತಿಗಳಾದ ವಿಷ್ಣು, ಬ್ರಹ್ಮ, ಈಶ್ವರ, ಪಾರ್ವತಿ, ಲಕ್ಷ್ಮೀದೇವಿ, ಸರಸ್ವತಿ, ಗಣಂಗಳು, ಯೋಗಿನಿಯರು, ಸುರ, ನರ, ನಾಗಾದಿಗಳು, ಕಿನ್ನರ, ಕಿಂಪುರುಷ, ಗರುಡ, ಗಂಧರ್ವ, ಅಪ್ಸರ ಋಷಿಗಳು ಇವರು ಮೊದಲಾದವರು ಪ್ರತಿಷ್ಠೆಯಂ ಮಾಡಿದ ಲಿಂಗಗಳಂ ಮೂರ್ತಿಗಳಂ ಇದಂ ಎಣಿಸುವರೆ ?

ಸಮರ್ಥರ್ಯಾರು ಇದ್ಧಾರು, ಸ್ವರ್ಗದಲ್ಲಿ ಇದ್ದ ದೇವರ್ಕಳಿಗೆ ಪುನರ್ಜನ್ಮ ಉಂಟಾಗಿ ಇರುವವರಿಂದ ಇಲ್ಲಿಹ ತೃಣಾದಿಗಳು ಶ್ರೇಷ್ಠವಾದ ನಿಮಿತ್ತ್ಯ ಪುನರ್ಜನ್ಮವಿಲ್ಲ, ಲಿಂಗಮಯವಾಗಿ ಸರ್ವತೀರ್ಥಕ್ಕೂ ಜನ್ಮಭೂಮಿಯಾದ ಕಾಶಿಯ ದರ್ಶನವಂ ಸ್ವರ್ಗಾಪವರ್ಗವನೀವುದು, ಎಲೆದೇವಿ ! ನೀನುತಪೋಬಲದಿಂದ ಎನಗೆ ಪ್ರಿಯಳಾದೆ, ಕಾಶಿಯು ತನ್ನ ಸ್ವಭಾವದಿಂದಲೆ ಪ್ರಿಯವಾದುದು, ಈ ಕಾಶಿಯ ನಾಮಸ್ಮರಣೆಯಂ ಮಾಡುವರಾರೋ ಈ ಮಹಿಮೆಯಂ ಕೇಳಿ ಸಂತೋಷಪಡುವರಾರುಂಟೋ ಅವರು ಎನಗೆ ಸಖರು, ಅವರೇ ಭಕ್ತರು, ಗಣಪತಿಗಳೊಳಗೆ ಅವರೊಬ್ಬರು, ಅವರೇ ಸೇವಕರು, ಅವರೇ ಮೋಕ್ಷಾಧಿಕಾರಿಗಳು, ಇಲ್ಲಿ ವಾಸವಂ ಮಾಡಿದವರು ತಪಸ್ಸು, ಮಹಾವ್ರತ, ಮಹಾದಾನ, ತೀರ್ಥಸ್ನಾನ, ಸಕಲ ಯಜ್ಞಂಗಳಂ ಮಾಡಿದವರು ಸುರ, ಅಸುರ, ಉರಗ, ನರರೊಳಗೆ ಆವ ವಯಸ್ಸಿನಲ್ಲಿಯಾದರೂ ಇಲ್ಲಿಗೆ ಬಂದು ವ್ಯಾಳೆಯುಳ್ಳವರು ಬಾರದಿರಲು ಅವರು ಭೂಭಾರಕರು ; ಸ್ಥಳಾಂತರದಲ್ಲಿ ಇದ್ದ ಶ್ರೋತ್ರಿಯರಿಗಿಂತ ಇಲ್ಲಿ ಇದ್ದ ಚಾಂಡಾಲನಧಿಕನು, ಕಾಶೀವಾಸಿಯೇ ಸರ್ವಜ್ಞನು, ತ್ರಿಲೋಚನನು, ಭೂಮಿಯ ಶರೀರವಂ ಧರಿಸುವನು, ಎಲೆದೇವಿ ! ಸಕಲತೀರ್ಥ, ಸಕಲಲಿಂಗಗಳ ರಹಸ್ಯವಂ ಪೇಳ್ದ ಈ ಅಧ್ಯಾಯವಂ ಕೇಳಲು ಕಾಶಿಯ ದರ್ಶನವಾದ ಪುಣ್ಯವಹುದು, ಪ್ರತಿದಿನವು ಈ ಅಧ್ಯಾಯವಂ ಪಠಿಸಲು ಸಕಲತೀರ್ಥಗಳಲ್ಲಿ ಸ್ನಾನವಂ ಮಾಡಿ ಸಕಲಲಿಂಗಗಳನ್ನೂ ಪೂಜಿಸಿದ ಫಲವಹುದು, ಅವರನ್ನು ಯಮದೂತರು ನೋಡಲಮ್ಮರು, ಮಹಾದಾನಫಲ, ಈ ಅಧ್ಯಾಯವಂ ಕೇಳಿದುದೇ ಜಪ, ಉಗ್ರತಪಸ್ಸು, ಈ ಅಧ್ಯಾಯವಂ ನಾಸ್ತಿಕರಿಗೆ ವೇದನಿಂದಕರಿಗೆ ಶಿವದ್ರೋಹಿಗಳಿಗೆ ಹೇಳಲಾಗದು, ಈ ಅಧ್ಯಾಯವಂ ಕೇಳದ ಪುಣ್ಯವೆಂಬ ಪ್ರಾಯಶ್ಚಿತ್ತದಿಂದ ಬ್ರಹ್ಮಹತ್ಯಾ, ಅಗಮ್ಯಾಗಮನ, ಅಭಕ್ಷ್ಯಭಕ್ಷಣೆ, ಗುರುಸ್ತ್ರೀಗಮನ, ಸುವರ್ಣಸ್ತೇಯ, ಮಾತಾಪಿತೃವಧೆ, ಗೋಹತ್ಯಾ, ಮಹಾಪಾಪ, ಮನೋವಾಕ್ಕಾಯ ಕರ್ಮಂಗಳಂ ಮಾಡಿದ ಪಾಪಗಳು, ಮುಂತಾದ ಸಕಲಕರ್ಮಗಳು ಎನ್ನ ಆಜ್ಞೆಯಿಂದ ಪರಿಹರವಹವು, ಪುತ್ರ, ಪೌತ್ರ, ಧನ, ಧಾನ್ಯ, ಕಳತ್ರ, ಕ್ಷೇತ್ರ, ಸ್ವರ್ಗ, ಮೋಕ್ಷಗಳಹವು,

ಇಂತೆಂದು ಪರಮೇಶ್ವರನು ದೇವಿಯರಿಗೆ ಬುದ್ಧಿಗಲಿಸುತ್ತಿರಲು, ಆನಿತರೊಳು ನಂದಿಕೇಶ್ವರನು ಪರಮೇಶ್ವರನಿಗೆ ನಮಸ್ಕಾರವಂ ಮಾಡಿ ಬಿನ್ನೈಸಿದನು, ಅದೆಂತೆನೆ—ಎಲೈ ಸ್ವಾಮಿಯೆ ! ಉಪ್ಪರಿಗೆಯಂ ಕಟ್ಟಿಸಹೇಳಿ ಬುದ್ಧಿಗಲಿಸಿದಿರಲ್ಲ, ಉಪ್ಪರಿಗೆ ಕಟ್ಟಮುಗಿಯಿತು, ರಥವೂ ಮೇಳೈಸಿಬಂದುಇದ್ದೀತು, ಬ್ರಹ್ಮಾದಿಗಳೆಲ್ಲರೂ ಬಂದುಇದ್ದಾರು, ಪುಂಡರೀಕಾಕ್ಷನಾದ ವಿಷ್ಣುವು ತನ್ನ ಭಕ್ತರುಸಹಿತ ಬಾಗಿಲಲ್ಲಿ ಸಮಯವನೋಡುತ್ತಿದ್ದಾರು, ಈಗ ಮಹೋತ್ಸವವಂ ನೋಡುವನಿಮಿತ್ತವಾಗಿ ಹದಿನಾಲ್ಕುಲೋಕದವರು ಬಂದುಇದ್ದಾರು, ಇಂತೆಂದು ಬಿನ್ನೈಸಿದ ನಂದಿಕೇಶ್ವರನ ವಾಕ್ಯಮಂ ಕೇಳಿ ಪಾರ್ವತೀಸಮೇತನಾಗಿ ಪರಮೇಶ್ವರನು ದಿವ್ಯರಥಾರೂಢನಾಗಿ ತ್ರಿವಿಷ್ಟಪಸ್ಥಾನದಿಂ ಕದಲಿದನು, ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನೆಂಬ ಅರ್ಥವನ್ನು ವ್ಯಾಸರು ತನಗೆ ಬುದ್ಧಿಗಲಿಸಿದರು ಎಂದು ಸೂತಪುರಾಣಿಕನು ಶೌನಕಾದಿ ಋಷಿಗಳಿಗೆ ಪೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ. * * * * * * * * * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದವಿರಚಿಸಿದ ಸ್ಕಂಧಪುರಾಣೋಕ್ತ ಕಾಶೀಮಹಿಮಾರ್ಥದರ್ಪಣದಲ್ಲಿ ತೀರ್ಥಲಿಂಗಗಳ ಮಹಾತ್ಮ್ಯೆಎಂಬ ತೊಂಭತ್ತೇಳನೇ ಅಧ್ಯಾಯಾರ್ಥ ನಿರೂಪಣಕ್ಕಂ ಮಂಗಳಮಹಾ. *

ತೊಂಭತ್ತೆಂಟನೇ ಅಧ್ಯಾಯ—ಪರಮೇಶ್ವರನು ಮುಕ್ತಿಮಂಟಪ ಪ್ರವೇಶವಂ ಗೈದದ್ದು.

ಶ್ರೀವಿಶ್ವೇಶ್ವರಾಯನಮಃ ॥ ॥ ಅನಂತರದಲ್ಲಿ ವ್ಯಾಸಮುನಿ ಇಂತೆಂದನು— ಎಲೈ ಸೂತನೆ ! ಅಗಸ್ತ್ಯಂಗೆ ಕುಮಾರಸ್ವಾಮಿ ನಿರೂಪಿಸಿದ ಪರಮೇಶ್ವರನ ಮಹೋತ್ಸವವಂ ಕೇಳು, ಆ ಪರಮೇಶ್ವರನು ನಿಜನಗರವಂ ಪ್ರವೇಶವಾದಕಥೆ ಮೂರುಲೋಕಕ್ಕು ಆನಂದಕರವಾದದ್ದು. ಮಹಾಪಾಪವಂ ಪರಿಹರಿಸುವಂಥಾದ್ದು, ಅದೆಂತೆನೆ—ಪರಮೇಶ್ವರನುಮಂ

ಪರಾವ್ರಿಯಿಂದ ಚೈತ್ರಶುದ್ಧ ಪೌರ್ಣಮಿದಿವಸ ಆನಂದಕಾನನಕ್ಕೆ ಬಂದು ಅಲ್ಲಿ ಸಂಚಾರವಂ ಮಾಡಿ ಮೋಕ್ಷಲಕ್ಷ್ಮೀವಿಲಾಸವೆಂಬ ಉಪ್ಪರಿಗೆಯಲ್ಲಿದ್ದು ವಿಚಾರಪೀಠವಂ ಕುರಿತು ಕಾರ್ತೀಕಶುದ್ಧ ಪಾಡ್ಯದಿನ ಅನೂರಾಧಾ ನಕ್ಷತ್ರದಲ್ಲಿ ಪ್ರವೇಶಲಗ್ನಕ್ಕೆ ವೃಷಭರಾಶಿಯಲ್ಲಿ ಚಂದ್ರನು ಕೆಲವು ಗ್ರಹಗಳು ಉಚ್ಚಸ್ಥಾನದಲ್ಲಿ ಇರುತ್ತಿರಲು, ಅಂತರ್ಗೃಹವಂ ಪ್ರವೇಶವಾದನು, ಆ ಸಮಯದಲ್ಲಿ ಪಂಚಮಹಾವಾದ್ಯಧ್ವನಿ ಮೊಳಗುತ್ತಿರಲು, ದಿಕ್ಕುಗಳು ಪ್ರಸನ್ನವಾಗಲು, ವಿಷಾದಧ್ವನಿಗಳು ಕೇಳಬಾರದಂತೆ ಮೂರುಲೋಕದಲ್ಲಿಯು ಪ್ರತಿಧ್ವನಿಯನೀವ ಬ್ರಾಹ್ಮಣರ ವೇದಘೋಷಣಗಳಾಗುತ್ತಿರಲು ಗಂಧರ್ವರು ಗಾನವಂ ಮಾಡುತ್ತಿರಲು, ಅಪ್ಸರಸ್ತ್ರೀಯರು ನಾಟ್ಯವಾಡುತ್ತಿರಲು, ಚಾರಣರು ಸ್ತುತಿಗೈಯ್ಯಲು, ದೇವಗಣಂಗಳು ಹರ್ಷಿತರಾಗಲು, ಮೇಘಗಳು ಪುಷ್ಪಮಳೆಗಳಂ ಕರೆಯಲು, ಸಕಲವಾದವರುವಸ್ತ್ರಾಲಂಕಾರಗಳಂ ಧರಿಸಿ ಶುಭವಾಕ್ಯಂಗಳಂ ನುಡಿಯುತ್ತಿರಲು, ಸ್ಥಾವರಜಂಗಮಗಳೆಲ್ಲವು ಆನಂದಭರಿತಗಳಾಗಲು, ಸುರಾಸುರಗಂಧರ್ವರು, ಉರಗ, ವಿದ್ಯಾಧರ, ಸಾಧ್ಯ, ಕಿನ್ನರ, ಕಿಂಪುರುಷರು, ಧರ್ಮಾರ್ಥಕಾಮಮೋಕ್ಷಂಗಳು ನಿತ್ಯವಾಗಿ ಒಪ್ಪುತ್ತಿರಲು, ಅಂದಿನಸಾಮ್ರಾಣಿಧೂಪದಹೊಗೆಯಿಂದ ಕಪ್ಪಾದ ಆಕಾಶ ಈಗಮೊದಲಾಗಿ ಕಪ್ಪಾಗಿಇದ್ದೀತು, ಆ ಸಮಯದಲ್ಲಿ ಆರತಿಗಳು ಎತ್ತಿದ ದೀಪಗಳು, ಆಕಾಶದಲ್ಲಿ ನಕ್ಷತ್ರಂಗಳಾಗಿ ಇದ್ದಾವೋ ಎಂಬಂತೆ ಒಪ್ಪುತ್ತಿರ್ದವು, ಪ್ರತಿ ಉಪ್ಪರಿಗೆಗಳಲ್ಲಿಯೂ ವಿಚಿತ್ರವಾದ ಮಂಗಳವನೆಸಗಿರುವರು, ಪಾಡುವವರು ಒಂದು ತಾಣದಲ್ಲಿ ಕುಳಿತು ತಾಳಮೊದಲಾದ್ದರಿಂದ ಕುಣಿದಾಡುವರು, ಒಂದುಕಡೆಯಲ್ಲಿ ರಾಜಮಾರ್ಗದಲ್ಲಿ ವೀಣೆ ಮೊದಲಾದ ತಂತ್ರಿಗಳುಳ್ಳ ವಾದ್ಯಗಳು ಮೊಳಗಿದವು, ಮದ್ದಳೆ ಮೊದಲಾದ ಚರ್ಮಬಂಧವಾದ್ಯಂಗಳು ಬಾರಿಸಿದವು, ಕೊಳಲು ಮೊದಲಾದ ವಾದ್ಯಂಗಳು, ತಾಳ ಮೊದಲಾದ ಕಂಚಿನವಾದ್ಯಂಗಳು, ಗಾನಮೊದಲಾದ ಪಂಚಮಹಾ ವಾದ್ಯಂಗಳ ಬಾರಿಸಲು ಪಟ್ಟಣದಬೀದಿಗಳು ಧೂಳಿ ಮುಸುಕಿದಂತೆ ಗಂಧೋದಕಂಗಳ ತಳಿವುತ್ತಿರಲು, ಪ್ರತಿ ಅಂಗಳಗಳಲ್ಲಿ ರಾಜಬೀದಿಯಲ್ಲಿ ಕೆಂಪು, ನೀಲ, ಮುತ್ತು, ಪಚ್ಚೆ,

ಪದ್ಮರಾಗಗಳೆಂಬ ಪಂಚವರ್ಣದ ರಂಗವಲ್ಲಿಗಳು ಒಪ್ಪುತ್ತಿರಲು, ಮಾಣಿಕ್ಯವಜ್ರಾಸುಕಲ್ಲುಗಳಿಂದ ಹೆಬ್ಬಾಗಿಲ ಮುಂಗಟ್ಟೆಗಳೊಪ್ಪಿರಲು, ಹಾಲು ಸುಣ್ಣಗಳಿಂದ ನವರತ್ನಗಳತೋರಣಗಳಿಂದ ದಿವ್ಯವಾದ ದೇವಪಟ್ಟೆಸದ್ವಜಗಳಿಂದ ಅಲಂಕೃತವಾದ ಉಪ್ಪರಿಗೆಯ ಸಾಲ್ಗಗಳಲ್ಲಿಹ ಅಚೇತನಪ್ರತಿಮೆಗಳು ಪ್ರಾಣಿಗಳಂತಿದ್ದವು, ಈ ತ್ರೈಲೋಕ್ಯದಲ್ಲಿದ್ದ ಮಾಂಗಲ್ಯವಸ್ತುಗಳು ಎಲ್ಲವಕ್ಕು ಆದಿನ ಜನ್ಮದಿವಸವಾಯಿತು, ಇಂತೆಸೆವ ಮಹೋತ್ಸವದಿಂದ ಪರಮೇಶ್ವರನು ಮುಕ್ತಿಮಂಟಪ ಪ್ರವೇಶವಾಗಿ ಪಾರ್ವತಿ ಸಮೇತನಾಗಿ ದಿವ್ಯಸಿಂಹಾಸನಾರೂಢನಾಗಿ ಬ್ರಹ್ಮ, ನಾರದ, ವಸಿಷ್ಠ ಮೊದಲಾದ ದೇವತೆಗಳಿಂದ ಬ್ರಹ್ಮಋಷಿಗಳಿಂ ವೀರಭದ್ರ ವಿಘ್ನೇಶ್ವರ ಮೊದಲಾದ ಕುಮಾರವರ್ಗದಿಂ ದೇವೇಂದ್ರ ಮೊದಲಾದ ದೇವತೆಗಳಿಂದ ತಕ್ಷಕ ಮೊದಲಾದ ಸರ್ಪಗಳಿಂದ ಕ್ಷೀರಸಮುದ್ರ ಮೊದಲಾದ ಸಮುದ್ರಗಳಿಂ ಮೇರು ಮೊದಲಾದ ಪರ್ವತಗಳಿಂ ಬ್ರಾಹ್ಮೀಮೊದಲಾದ ಸಪ್ತಮಾತೃಕೆಗಳಿಂ ಪೂಜೆಗೊಂಡು ಸಂತೋಷದಿಂ ಮೊದಲು ಸಕಲ ಮುನಿಗಳಿಗೂ ಅವರವರುಅಪೇಕ್ಷಿಸಿದಅಭಿಲಾಷೆಗಳನಿತ್ತು ಬ್ರಹ್ಮನಂನೋಡಿ ಸಂತೈಸಿ ವಿಷ್ಣುವಂನೋಡಿ ಮುಗುಳುನಗೆಯಿಂದಾ ಇಂತೆಂದನು, ಎಲೈ ವಿಷ್ಣುವೆ ! ಇಲ್ಲಿಬಾ ಕುಳ್ಳಿರು, ಎನ್ನಧೊರೆತನಕ್ಕೆ ನೀನೇಕಾರಣ ನೀನು ದೂರದಲ್ಲಿ ಇದ್ದರು ಎನ್ನಸಮೀಪದಲ್ಲಿ ಇದ್ದವರು ನೀನು ಹೊರತಾಗಿ ಎನ್ನಕಾರ್ಯಕ್ಕೆ ಕರ್ತರ್ಯಾರು,ಅಂದು ದಿವೋದಾಸರಾಯಂಗೆ ಧರ್ಮೋಪದೇಶವಂಮಾಡಿ ಆತನ ಮನೋರಥವಂ ಪೂರೈಸಿದೆ, ಎನಗೆ ಇಷ್ಟಸಿದ್ಧಿಯಂಮಾಡಿದೆ ನೀನೂ ಗಣಪತಿಯೂ ಇಬ್ಬರೂ ನಾನು ಇಲ್ಲಿಗೆಬಹದಕ್ಕೆ ಕಾರಣವಾದಿರಿ, ಅದರಿಂದ ನೀನು ಬೇಕಾದವರವಂಬೇಡಿಕೋ ಎನಗೆ ಕಾಶಿ ಕ್ಷೇತ್ರ ಪ್ರಿಯವಾದಂತೆ ಮತ್ತೊಂದು ಕ್ಷೇತ್ರಪ್ರಿಯವಿಲ್ಲ, ಈಕ್ಷೇತ್ರದಲ್ಲಿ ದೀರ್ಘನಿದ್ರೆಯು ಮಾಡಿದವರ್ಗೆ ಪುನರ್ಜನ್ಮವಿಲ್ಲ, ಈಕ್ಷೇತ್ರಬ್ರಹ್ಮ ಜ್ಞಾನದಕ್ಕರಶಾಯನ, ಇಂತೆಂದು ನಿರೂಪಿಸಿದ ಪರಪ್ರದನಾದ ಪರಮೇಶ್ವರನ ವಾಕ್ಯವಂಕೇಳಿ ವಿಷ್ಣು ಇಂತೆಂದನು,—ಎಲೈಸ್ವಾಮಿ ! ನೀವು ಎನಗೆ ವರವ ಕೊಡಬೇಕಾದರೆ ನಿಮ್ಮ ಪಾದಸೇವೆಗೆ ದೂರವಾಗ

ದಂತೆಮಾಳ್ಪುದೆ ಎನಗೆ ಮತ ಇಂತೆಂದ ವಿಷ್ಣುವಿನ ವಾಕ್ಯಮಂ ಕೇಳಿ ಪರಮೇಶ್ವರನಿಂತೆಂದನು,—ಎಲೈ ಮುರಾರಿಯೆ ! ನೀನು ನಮ್ಮ ಸಮ್ಮುಖದಲ್ಲಿ ನಿತ್ಯಪೂಜ್ಯನಾಗಿ ಇಹರು, ಈ ಕ್ಷೇತ್ರದಲ್ಲಿದ್ದು ನಿನ್ನ ಪ್ರತಿದರ್ಶನವಂ ಮಾಡದೆ ಎನ್ನ ಪ್ರತಿದರ್ಶನವಮಾಡಿದವರ್ಗೆ ಇಷ್ಟಸಿದ್ಧಿ ಸಂಪದವನ್ನೀವುದಿಲ್ಲ, ಈ ಮುಕ್ತಿಮಂಟಪದಲ್ಲಿರುವಷ್ಟು ಸೌಖ್ಯವು ಎನಗೆ ಕೈಲಾಸದಲ್ಲಿಯೂ ಯೋಗಿಗಳ ಹೃದಯದಲ್ಲಿಯೂ ಇಲ್ಲ, ಈ ಮುಕ್ತಿಮಂಟಪದಲ್ಲಿ ಕ್ಷಣಮಾತ್ರ ಸ್ಥಿರಚಿತ್ತದಲ್ಲಿ ಇದ್ದವರ್ಗೆ ಗರ್ಭವಾಸವಿಲ್ಲ, ಸಕಲತೀರ್ಥ ಶಿರೋಮಣಿಯಾದ ಮಣಿಕರ್ಣಿಕೆಯಲ್ಲಿ ಸ್ನಾನವಂ ಮಾಡಿ ಈ ಮುಕ್ತಿಮಂಟಪದಲ್ಲಿ ನಿಷ್ಕಾಮಿಗಳಾಗಿ ಕ್ಷಣಮಾತ್ರ ಎನ್ನ ಸ್ಮರಿಸಿದವರು ಗಣತ್ವಮಂ ಪೊಂದುವರು, ನ್ಯಾಯಾರ್ಜಿತವಾದ ವಸ್ತುಗಳಂ ದಾನಮಿತ್ತವರನ್ನು ಅಲ್ಲಿ ಕಾಳಿತು ಪುಣ್ಯಕಥೆಗಳಂ ಕೇಳುವವರನ್ನು ಉದ್ಧರಿಸಿ ಅವರಿಗೆ ಸಾಯುಜ್ಯಮಮಂ ಕೊಡುವೆನು, ಅವರು ಕೋಟಿಜನ್ಮ ಯಜ್ಞವಮಾಡಿದವರು, ಕೋಟಿ ಗೋದಾನವಮಾಡಿದವರು, ಸಕಲತೀರ್ಥಸ್ನಾನ ಸಕಲದಾನಗಳಂ ಮಾಡಿದವರು, ಈ ಬ್ರಹ್ಮಾಂಡದಲ್ಲಿ ಹೆಜ್ಜೆಹೆಜ್ಜೆಗೆ ತೀರ್ಥಗಳಿದ್ದರೂ ಅಷ್ಟು ತೀರ್ಥವೂ ಮಣಿಕರ್ಣಿಕೆಗೆ ಸಮಾನವಿಲ್ಲ, ಲೋಕದಲ್ಲಿ ಎಷ್ಟು ಶುಭ್ರವಾದ ಮಂಟಪಗಳಿರ್ದರೂ ಮುಕ್ತಿಮಂಟಪಕ್ಕೆ ಸಮಾನವಾಗವು ; ಎಲೈ ಹರಿಯೆ ! ಕೈವಲ್ಯಮಂಟಪಕ್ಕೆ ಮುಂದೆ ಕುಕ್ಕುಟಮಂಟಪವೆಂಬ ಹೆಸರಾಧೀತು ಎನಲು ಈ ಕಾರಣವ ಎನಗೆ ನಿರೂಪಿಸಬೇಕೆನೆ, ಶಿವನಿಂತೆಂದನು, ಎಲೈ ಚತುರ್ಭುಜನಾದ ಹರಿಯೆ ! ಕೇಳು ಈ ಪಟ್ಟಣದಲ್ಲಿ ಮಹಾನಂದನು ಎಂಬ ಒಬ್ಬ ಬ್ರಾಹ್ಮಣನಿಹನು, ಆತನು ಋಗ್ವೇದಿ ಸದಾಚಾರಿ ಪ್ರಾಣ್ಯಾತೀರ್ಥ ಪುಣ್ಯಾದಿವಸಗಳಲ್ಲಿ ಪರಿಗ್ರಹವಂ ತೆಗದು ಕೊಂಬುವನಲ್ಲ, ಮೃದುಮನವುಳ್ಳವನು ಅತಿಥಿಪ್ರಿಯನು ಆತನು ಯೌವನಸ್ಥನಾಗಿರೆ ಅವರ ತಂದೆ ಮೃತನಾದನು, ಅನಂತರದಲ್ಲಿ ಅವನು ಮನ್ಮಥ ಬಾಣಗಳಿಗೆ ವಶನಾಗಿ ಒಬ್ಬೊಬ್ಬ ದುಷ್ಟರೊಡನೆ, ಸ್ನೇಹವಂ ಮಾಡಿ ತನ್ನ ಸ್ತ್ರೀಯನು ವರ್ಜಿಸಿ ಮದ್ಯಪಾನ ಅಭಕ್ಷ್ಯಾಭಕ್ಷಣಗಳಂ ಮಾಡಿಕೊಂಡು, ಶ್ರೇಷ್ಠರಂ ನೋಡಿ ವೈಷ್ಣವನಾಗಿ, ನರಕ ಭಯಮಂ ಬಿಟ್ಟು ಶಿವಭಕ್ತ

ರೂಪಮಾಡಿಹನಪ್ಪ ಒಂದು ವ್ಯಾಳೆ ಶಿವಭಕ್ತ ವೇಷವಂ ತಾಳ್ದು ವೈಷ್ಣವರಂ ನಿಂದಿಸುವನು, ಈರೀತಿಯಲ್ಲಿ ಪಾಷಂಡಿಯಾಗಿ ಸ್ನಾನ ಸಂಧ್ಯಾವಂದನೆಗಳಂ ಬಿಟ್ಟು ಮತ್ತೊಂದು ವ್ಯಾಳೆ ಪಟ್ಟವರ್ಧನವಂ ಧರಿಸಿ, ಧೋತ್ರ ಬಹಿರ್ವಸ್ತ್ರ ಶಿಖಾಯಜ್ಞೋಪವೀತಂಗಳಂ ಧರಿಸಿ ಸಕಲರಲ್ಲಿಯೂ ದುರನ್ನದಾನಪ್ರತಿಗ್ರಹವಂ ತೆಗದುಕೊಂಡು ಹೀಗೆ ಇರುತ್ತಿರಲು; ಆತಗೆ ಇಬ್ಬರು ಮಕ್ಕಳಾದರು ಈ ರೀತಿಯಲ್ಲಿ ಕೆಲವು ಕಾಲವಿರಲು, ಆ ಮೇಲೆ ಪರ್ವತದೇಶದಿಂದ ಧನವಂತನಾದ ಒಬ್ಬ ಚಂಡಾಲನು ಕಾಶೀಕ್ಷೇತ್ರಕ್ಕೆ ಬಂದು ಚಕ್ರತೀರ್ಥದಲ್ಲಿ ಸ್ನಾನವಂ ಮಾಡಿ ಅಲ್ಲಿರ್ದ ಬ್ರಾಹ್ಮಣರಂ ನೋಡಿ ಇಂತೆಂದನು— ಎಲೈ ಬ್ರಾಹ್ಮಣೋತ್ತಮರಿರಾ ! ತಾನು ಜಾತಿಯಲ್ಲಿ ಚಂಡಾಲನು, ತನ್ನಿಂದಾ ಧನವ ಪರಿಗ್ರಹಿಪರುಂಟಾದರೆ ದಾನವನಿತ್ತೇನು ಎನಲು, ಅವನ ವಾಕ್ಯವಂ ಕೇಳಿದವರು ಮೌನದಿಂ ಬೆರಳ ಸನ್ನೆಯಿಂದಿಂತೆಂದರು, ನಿನ್ನ ದಾನವ ಭ್ರಷ್ಟನಾತ ಪರಿಗ್ರಹಿಸಿದಾನು, ಇವನೊಲ್ಲೆನೆಂದರೆ ಇಲ್ಲಿ ಪ್ರತಿಗ್ರಹಿಸುವರಿಲ್ಲ, ಇಂತೆಂಬ ವಾಕ್ಯವಂ ಕೇಳಿ ಆತನ ಸವಿಾಪಕ್ಕೆ ಹೋಗಿ ಸಾಷ್ಟಾಂಗ ನಮಸ್ಕಾರವಂ ಮಾಡಿ ಇಂತೆಂದು ಬಿನ್ನೈಸಿದನು, ಎಲೈ ! ಮಹಾಬ್ರಾಹ್ಮಣನೆ, ಕಿಂಚಿತ್ ದ್ರವ್ಯ ನನ್ನಲ್ಲಿ ಇದ್ದೀತು, ನೀವು ಪ್ರತಿಗ್ರಹಿಸಬೇಕು, ತನ್ನ ರಕ್ಷಿಸಬೇಕು ಎನಲು ಕೇಳಿ ಜಪಮಾಲೆಯಂ ಕಿವಿಯಲ್ಲಿ ಧರಿಸಿ ಧ್ಯಾನವಂ ಬಿಟ್ಟು ನಿನಗೆ ಎಷ್ಟು ದ್ರವ್ಯವಿದ್ದೀತು, ಎಂದು ಕೈ ಸಂಜ್ಞೆಯಿಂ ಕೇಳಲು, ಆತನ ಅಭಿಪ್ರಾಯವಂ ಚಂಡಾಲ ತಿಳಿದು, ಸಂತೋಷದಿಂದ ನಿಮಗೆ ಎಷ್ಟು ದ್ರವ್ಯದಿಂ ತೃಪ್ತಿಯಹುದೋ ಅಷ್ಟು ದ್ರವ್ಯವಂ ಕೊಟ್ಟೇನು ಎನಲು, ಆ ಮಹಾನಂದನು ಆನಂದದಿಂದ ಇಂತೆಂದನು— ತನಗೆ ದಾನವ ಕೊಂಬಲ್ಲಿ ಅಪೇಕ್ಷೆಯಿಲ್ಲ ನಿನ್ನ [illegible]ದಿಂದ ಪ್ರತಿಗ್ರಹವಂ ಮಾಡೇನು, ಎಲೈ ಉತ್ತಮೋತ್ತಮ ! ನೀತಂದ ದ್ರವ್ಯದಲ್ಲಿ ಒಬ್ಬರಿಗೂ ಒಂದು ಕಾಸು ಕೊಡುವದಿಲ್ಲವೆಂದರೆ ತಾನು ಬಂದು ದಾನವ ಹಿಡಿದೇನು, ಹಾಗಲ್ಲದಿದ್ದರೆ ಬಾರೆನು ಎನಲು, ಆ ಚಂಡಾಲನಿಂತೆಂದನು— ಎಲೈ ಸ್ವಾಮಿ ! ನಾನು ತಂದ ದ್ರವ್ಯವೆಲ್ಲವನ್ನು ವಿಶ್ವಪತಿಗೆ ಪ್ರೀತಿಯಾಗಿ ನಿಮಗೆ ಕೊಟ್ಟೇನು,

ನಸಿಗೆ ವಿಶ್ವಪತಿಸ್ವರೂಪ, ಈ ಕ್ಷೇತ್ರವಲ್ಲಿ ಇದ್ದಂಥಾ ಕ್ಷುದ್ರರು ಮಹಾತ್ಮರು ಎಲ್ಲರು ವಿಶ್ವಪತಿಯ ಅಂಶಭೂತರಲ್ಲವೆ ಅವರಿಗೆ ಉಪಕಾರಿಗಳ್ಯಾರೊ? ಅವರೆಲ್ಲರು ವಿಶ್ವಪತಿಯ ಸ್ವರೂಪಿಗಳು, ಇಂತೆಂದ ಚಂಡಾಲನಂಕುರಿತು ದಾನವಂ ಕೊಡೂ ಎಂದು ಕೈಯೊಡ್ಡಿದಲು, ಅವನು ಆ ಮರ್ಯಾದೆಯಲ್ಲಿ ವಿಶ್ವಪತಿ ಸುಪ್ರೀತನಾಗಲಿ ಎಂದು ತಾನು ತಂದ ಅನೇಕ ದ್ರವ್ಯವಂ ದಾನವನಿತ್ತು ತನ್ನ ರಾಜ್ಯಕ್ಕೆ ತಿರುಗಿ ಹೋದನು, ಅನಂತರವಲ್ಲಿ ಅಲ್ಲಿಯ ಬ್ರಾಹ್ಮಣರೆಲ್ಲರೂ ಕೂಡಿ ಇವನು ಮೊದಲು ಮರಾಚಾರಿಯಾಗಿ ನಡದು ಈಗ ಚಾಂಡಾಲನ ಕೈಯ್ಯ ದಾನವ ಹಿಡಿದನು, ಅದು ಕಾರಣ ಇವನು ಚಂಡಾಲನಲ್ಲದೆ ಬ್ರಾಹ್ಮಣನಲ್ಲ, ಇವನು ಸಕಲಲೋಕಕ್ಕೂ ಬಹಿಷ್ಕಾರಿ ಎಂದು ಪ್ರತಿದಿನವು ಹೀಗೆ ನಿಂದಿಸುತ್ತಿರಲು, ಅವನು ಗೂಬೆಗಳ ಭಯದಿಂದ ರಾತ್ರಿಯಲ್ಲಿ ಕಾಗೆಗಳು ಪೊರಮಡವಂತೆ, ಮೂಗು ಕೊಯಿಸಿಕೊಂಡವನಂತೆ ನಾಚಿಗೆಯಿಂದ ಪೊರಮಟ್ಟು ಬರಲಮ್ಮದೆ ತನ್ನ ಮನೆಯೊಳಗೆ ಕೆಲವು ದಿನವಿದ್ದು ಒಂದಾನೊಂದು ದಿನ ತನ್ನ ಹೆಂಡತಿ ತಾನೂ ಇಬ್ಬರು ಮಕ್ಕಳು ನಾಲ್ವರೂ ಧನಸಹಿತವಾಗಿ ಕಾಶಿಯಂ ಬಿಟ್ಟು ಕುಕ್ಕುಟದೇಶಕ್ಕೆ ಹೋಗುತ್ತಿರಲು, ಆ ಮಾರ್ಗದಲ್ಲಿ ಕಳ್ಳರು ಅಡ್ಡಗಟ್ಟಿ ಪಿಡಿದು ಧನವ ತೆಗದುಕೊಂಡು ಇವರ ಬಿಟ್ಟರೆ ತಾವು ಬದುಕಲಾರೆವು, ಅವರಿಂದಿವರ ಕೊಲ್ಲಬೇಕೆಂದು ನಿಶ್ಚೈಸಿ ಅವರೊಡನೆ ಕಳ್ಳರಿಂತೆಂದರು—ಎಲೈ ಬ್ರಾಹ್ಮಣನೆ? ನಿಮ್ಮನ್ನ ಕೊಲ್ಲುತ್ತಾ ಇದ್ದೇವೆ? ನೀನು ಆರನ್ನು ನೆನಸಬೇಕೊ ಅವರ ನೆನೆ ಎನಲು, ಇಂತೆಂದನು-- ತಾನು ಕುಟುಂಬಕ್ಕಾಗಿ ದುಷ್ಪ್ರತಿಗ್ರಹವಂ ಮಾಡಿದೆನು, ಆ ದ್ರವ್ಯವ ಕುಂಭವ ತುಂಬಿಕೊಂಡು ಹೋಗುತ್ತಿದ್ದೆನು, ಈ ಕುಂಭದ್ರವ್ಯಕ್ಕಾಗಿ ದುರ್ಬುದ್ಧಿಯಿಂದ ಕಾಶಿಯಂ ಬಿಟ್ಟೆನು, ಕಾಶೀವಾಸ ನಷ್ಟವಾಯಿತು, ಈ ದುಷ್ಪ್ರತಿಗ್ರಹದಿಂದಲೆ ಕಾಶಿಯ ಮರಣವಿಲ್ಲದೆ ಹೋಯಿತು, ಇಂತೆಂದು ದ್ರವ್ಯವ ತುಂಬಿದ ಕುಂಭಸ್ಮರಣೆಯಿಂದ ಕಾಶಿಯಂ ಸ್ಮರಿಸಲು, ಅನಂತರವಲ್ಲಿ ಆ ಕಳ್ಳರು ಆ ಬ್ರಾಹ್ಮಣನಂ ಕೊಂದು ಆ ದ್ರವ್ಯವಂ ಕೊಂಡು ಹೋದರು, ಹತರಾದ ಆ ಬ್ರಾಹ್ಮಣ ಅವನ ಸ್ತ್ರೀ ಇಬ್ಬರು ಮಕ್ಕಳು ಸಹಾ ನಾಲ್ವರು ಕಟಕದೇಶವಲ್ಲಿ ಕೋಳಿಗಳಾಗಿ ಹುಟ್ಟಿದರು, ಮರಣಕಾಲವಲ್ಲಿ ತನ್ನ ಒಡವೆ

ನಿಮಿತ್ತವಾಗಿ ಅವರೂ ಕಾಶಿಯಂ ಸ್ಮರಿಸಿದಕಾರಣ ಜಾತಿಸ್ಮರತ್ವ ಉಂಟಾಗಿ ಒಂದುವ್ಯಾಳೆ ಕಾಶಿಗೆ ಪರುಷೆಯುವರಸಂಗಡ ಆ ನಾಲ್ಕು ಕೋಳಿಗಳು ಹೊರಟು ಪರುಷೆಯುವರು ಬಿಸಾಟ ಧಾನ್ಯ ಅನ್ನವಂ ಭಕ್ಷಿಸಿಕೊಂಡು ಅವರಸಂಗಡಲೆ ಕಾಶಿಯಂ ಸೇರಿ ಮುಕ್ತಿಮಂಟಪವಬಳಿಶಿ ತಿರುಗಿಯಾಡುತ್ತಾ ಕಾಮಕ್ರೋಧಂಗಳಂ ಬಿಟ್ಟು ತಲಿವಾಗಿ ಅಲ್ಲಿಪೇಳುವ ಪುರಾಣ ಪುಣ್ಯಕಥೆಗಳಂ ಕೇಳುತ್ತಾ ಎನ್ನಧ್ಯಾನಾಮಂಗಳಂ ಹೃದಯದಲ್ಲಿ ಪಠಿಸುತ್ತಾ ತನ್ನೊಲ್ಲಿ ಮನಸ ಉಳ್ಳವರಾಗಿ ಆಹಾರವಂ ಬಿಟ್ಟು ತಮ್ಮ ಶರೀರಂಗಳಂ ತ್ಯಜಿಸಿ ಸಕಲದೇವತೆಗಳು ನೋಡುತ್ತಿರಲು, ಎನ್ನ ಅನುಗ್ರಹದಿಂ ದಿವ್ಯ ವಿಮಾನಾರೂಢರಾಗಿ ಕೈಲಾಸವಂ ಸಾರಿ ಅಲ್ಲಿ ಬಹುಕಾಲ ದಿವ್ಯಭೋಗವಟ್ಟು ಮುಕ್ತರಾದರು, ಅಮುಮೊದಲಾಗಿ ಈ ಮಂಟಪ ಕುಕ್ಕುಟಮಂಟವೆಂದು ಪ್ರಸಿದ್ಧವಾಯಿತು, ಈ ಅಧ್ಯಾಯದಚರಿತ್ರೆಯಂ ಕೇಳಿದವರು ಭೋಗಾಂತದಲ್ಲಿ ಮುಕ್ತಿಮಂಟಪದಲ್ಲಿಯೇ ಮುಕ್ತರಾಗಿ ತನ್ನ ಸಾಯುಜ್ಯವನೈದುವರು ಎಂದು ವಿಷ್ಣುವಿಗೆ ನಿರೂಪಿಸುತ್ತಿರಲು, ಘಂಟಾನಾದವಂತಾದ ಧ್ವನಿಯಂ ಕೇಳಿ ಪರಮೇಶ್ವರನು ನಂದಿಕೇಶ್ವರನಂ ಕರದು ಈ ಧ್ವನಿ ಎತ್ತಣದು ವಿಚಾರಿಸಿಕೊಂಡುಬಾರೆನಲು, ಆ ನಂದಿಕೇಶ್ವರನು ಬಂದು ವಿಚಾರಿಸಿ ಹೋಗಿ ಪರಮೇಶ್ವರಗೆ ವಂದಿಸಿ ಬಿನ್ನೈಸುವನು, ಎಲೈ ತ್ರಿಲೋಚನ! ದೇವರು ಮುಕ್ತಿಮಂಟಪಕ್ಕೆ ಬಹ ಸಂತೋಷದಿಂ ಸಕಲಭಕ್ತರು ಜಯಧ್ವನಿ ವಾದ್ಯಧ್ವನಿಗಳಂ ಮಾಡುತ್ತಿದ್ದಾರೆಂದು ಬಿನ್ನೈಸಲು, ಪರಮೇಶ್ವರನು ಮುಗುಳುನಗೆಯಿಂ ಪಾರ್ವತೀದೇವಿಯರುಸಹಾ ಬ್ರಹ್ಮ ವಿಷ್ಣುಗಳೊಡಗೂಡಿ ರಂಗಮಂಟಪಕ್ಕೆ ಬಿಜಯಂಗೈವನು ಎಂಬ ಈ ಅಧ್ಯಾಯಮಂ ಸುಚಿತ್ತದಿಂ ಕೇಳಿದವರು ಭೋಗಾಂತ್ಯದಲ್ಲಿ ಪರಮಾನಂದದಿಂ ಕೈಲಾಸವಾಸಿಗಳಹರು, ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದ ಅರ್ಥವಂ ವ್ಯಾಸರು ತನಗೆ ಬುದ್ಧಿಗಲಿಸಿದರೆಂದು ಸೂತಪೌರಾಣಿಕನು ಶೌನಕಾದಿ ಋಷಿಗಳಿಗೆ ಹೇಳ್ದನೆಂಬಲ್ಲಿಗೆ ಅಧ್ಯಾಯಾರ್ಥ. * * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋ

ಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದಸ್ಕಾಂದಪುರಾಣೋ
ಕ್ತ ಕಾಶೀಮಹಿಮಾರ್ಥವರ್ಣನದಲ್ಲಿ ಪರಮೇಶ್ವರನು ಮುಕ್ತಿಮಂಟಪ
ವಂ ಪ್ರವೇಶಗೈದ ವೃತ್ತಾಂತವಂ ಪೇಳ್ದ ತೊಂಭತ್ತೆಂಟನೇ ಅಧ್ಯಾಯಾ
ರ್ಥ ನಿರೂಪಣಕ್ಕಂ ಮಂಗಳಮಹಾ. * * * * * * *

ತೊಂಭತ್ತೊಂಭತ್ತನೇ ಅಧ್ಯಾಯಂ — ಕಾಶೀವಿಶ್ವೇಶ್ವರನ ಮಹಿಮೆ.

ಶ್ರೀವಿಶ್ವೇಶ್ವರಾಯನಮಃ॥ ॥ ಅನಂತರದಲ್ಲಿ ವ್ಯಾಸಮುನಿಯು
ಸೂತಂಗಿಂತೆಂದನು—ಅದೆಂತೆನೆ—ಅಗಸ್ತ್ಯನು ಎಲೈ ಕುಮಾರಸ್ವಾ
ಮಿ! ಪರಮೇಶ್ವರನು ಹರಿ ಬ್ರಹ್ಮಾದಿಗಳು ಸಹಿತ ಮುಕ್ತಿಮಂಟಪಕ್ಕೆ
ಬಂದು ಏನಮಾಡಿದನು, ಆ ವೃತ್ತಾಂತವಂ ಬುದ್ಧಿಗಲಿಸಬೇಕೆಂದು ಅಗ
ಸ್ತ್ಯ ಕೇಳಲು, ಕುಮಾರಸ್ವಾಮಿ ಇಂತೆಂದನು—ಎಲೈ ಅಗಸ್ತ್ಯ! ಪರ
ಮೇಶ್ವರನು ಮುಕ್ತಿಮಂಟಪದಲ್ಲಿರ್ದ ಬ್ರಹ್ಮ, ವಿಷ್ಣುಗಳುಸಹಾ ಶೃಂ
ಗಾರಮಂಟಪಕ್ಕೆ ಪ್ರವೇಶಿಸಿ ದಿವ್ಯಸಿಂಹಾಸನದಲ್ಲಿ ಪಾರ್ವತೀಸಹಿತ
ಮೂಡಮುಖವಾಗಿ ಬಲದಲ್ಲಿ ಬ್ರಹ್ಮನು ಎಡದಲ್ಲಿ ವಿಷ್ಣುವೂ ಮುಂದೆ
ದೇವೇಂದ್ರನು ನಾರದಾದಿ ಋಷಿಗಳು ಹಿಂದೆ ಗಣಂಗಳು ಮೊದಲಾಗಿ ಸ
ದ್ದ ಮಾಡದೆ ಆವರಣೆಯಿಂದ ತಮ್ಮತಮ್ಮ ಆಯುಧಂಗಳಂ ಪಿಡಿದುವಾ
ಲೈಸುತಿರಲು, ಪರಮೇಶ್ವರನು ಬ್ರಹ್ಮ ವಿಷ್ಣುಗಳಿಗೆ ಮುಂದಿರ್ದಲಿಂಗ
ವಂ ತನ್ನ ಹಸ್ತದಿಂತೋರಿಸಿ ಇಂತೆಂದನು—ಎಲೈ ಬ್ರಹ್ಮ! ವಿಷ್ಣು ಮೊ
ದಲಾದವರು ಕೇಳಿರೈಯ್ಯಾ? ಈ ಲಿಂಗವು ಪರಂಜ್ಯೋತಿಸ್ವರೂಪವು,
ಪರಾಪರವಸ್ತು ಸ್ಥಾವರಜಂಗಮ ರೂಪವಾದ ಈ ಬಾಲಬ್ರಹ್ಮಚಾರಿಗಳಾ
ದ ಪಾಶುಪತವ್ರತಿಗಳಾದ ಜಿತೇಂದ್ರಿಯರುಗಳಾಗಿ ತಪೋನಿಷ್ಠರಾದ ಧನಾ
ದಿ ವಿಷಯಜ್ಞಾನರಹಿತರಾದ ಭಸ್ಮವೆಂಬ ಕೂಪದಲ್ಲಿ ಶಯನವಂಮಾಡಿ
ಕೊಂಡು ಇದ್ದಂಥಾ ಶಾಂತರಾದ ಊರ್ಧ್ವರೇತಸ್ಕರಾದ ಲಿಂಗಾರ್ಚನಪ
ರರಾದ ಸ್ಥಿರಚಿತ್ತದಿಂ ಗಂಗಾಸ್ನಾನ ಭಸ್ಮಸ್ನಾನದಿಂ ನಿರ್ಮಲರಾಗಿ ಕಂ
ದಮೂಲ ಫಲಾಹಾರಿಗಳಾದ ಶೀಲವಂತರಾಗಿ ಆತ್ಮಜ್ಞಾನಪರಾಯಣರಾ
ದ ನಿತ್ಯವ್ರತವಂತರಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾ

ತೃಷ್ಣೆ ವರ್ಜಿತರಾದ ಸರ್ವಜ್ಞರಾದ ಪ್ರತಿಗ್ರಹವಿಲ್ಲದಂಥಾ ನಿಷ್ಕಾಮಿಗಳಾದ ಪ್ರಪಂಚಾತೀತರಾದ ನಿರಾತಂಕರಾಗಿ ವ್ಯಾಧಿಮೊದಲಾದ ಉಪದ್ರವಂಗಳಿಲ್ಲದಂಥಾ ಆಚಾರಸಹಿತರಾಗಿ ನಿಸ್ಸಂಗಿಗಳಾಗಿ ಸಿದ್ಧಾಂತಶಿಖಾಮಣಿಗಳಾಗಿ ಸನ್ಮಾರ್ಗಿಗಳಾದ ವ್ರತಸಂಕಲ್ಪಿಗಳಾದ ತತ್ವನಿಶ್ಚಯವುಳ್ಳ ನಿರಹಂಕಾರಿಗಳಾದ ನಿತ್ಯಸಂತೋಷಿಗಳಾದ ಈ ಸಿದ್ಧರೆಲ್ಲರೂ ಎನ್ನಸ್ವರೂಪಿಗಳು, ಎನ್ನ ಪುತ್ರರಿಗೆ ಸಮಾನರು, ಎನಗೂ ಯೋಗ್ಯರು, ನಮಸ್ಕಾರ ಯೋಗ್ಯರಾದ ಇಂಥಾ ಸಿದ್ಧರಂ ಪೂಜಿಸಲು ಅವರಿಗೆ ನಾನುಪ್ರಸನ್ನನಹೆನು, ಈಶ್ವರ ರೂಪಾದ ವಿಶ್ವೇಶ್ವರನು, ತ್ರೈಲೋಕ್ಯಕ್ಕೆ ಪ್ರಭು, ತನ್ನಲ್ಲಿ ಭಕ್ತಿಯುಳ್ಳವರಿಗೆ ಸಕಲ ವಸ್ತುಗಳನ್ನು ಕೊಡುವನು, ನಾನು ಒಂದು ವ್ಯಾಳಿ ಕಾಣಪಡುವೆನು, ಒಂದು ವ್ಯಾಳಿ ಕಾಣಪಡೆನು, ಈ ಆನಂದ ಕಾನನದಲ್ಲಿ, ಭಕ್ತರು ಗ್ರಹಾರ್ಥವಾಗಿ ಈಲಿಂಗರೂಪದಲ್ಲಿದ್ದು ಚಿಂತಿತಾರ್ಥಂಗಳಂ ನೋಡುವೆನು, ಲೋಕದಲ್ಲಿ ಸ್ವಯಂ ವ್ಯಕ್ತಗಳಾದ ಲಿಂಗಗಳು ಪ್ರತಿಷ್ಠೆಯಾದ ಲಿಂಗಗಳು ಎಲ್ಲವು ನಿತ್ಯದಲ್ಲೂ ಈ ವಿಶ್ವೇಶ್ವರನ ದರ್ಶನಕ್ಕೆ ಬಹವು, ಈ ಸಮಸ್ತಲಿಂಗಗಳಲ್ಲಿಯೂ ನಾನು ಇಹೆನು, ಸಂದೇಹವಿಲ್ಲ, ಈಲಿಂಗಸ್ವರೂಪಾದ ಎನಗೆ ವಿಶ್ವೇಶ್ವರ ಲಿಂಗವೆ ಮುಖ್ಯಸ್ವರೂಪವು, ಈಲಿಂಗವಂ ಜ್ಞಾನ ದೃಷ್ಟಿಯಿಂದಾ ನೋಡಲು, ಪ್ರತ್ಯಕ್ಷವಾಗಿ ಎನ್ನ ನೋಡಿದವನಹನು, ಎಲೈ ದೇವರ್ಕಳಿರಾ! ಸಕಲ ಋಷಿಗಳಿರಾ! ಗಣಂಗಳು ಸಹಾ ಕೇಳಿ, ಈಲಿಂಗದ ಹೆಸರು ಹೇಳುವ ಮಾತ್ರದಲ್ಲಿಯೆ ಸಕಲ ಪಾಪಹರ, ಸ್ಮರಣೆಯಿಂದ ಎರಡು ಜನ್ಮದ ಪಾಪಹರ ದರ್ಶನದಿಂದ ನೂರುಅಶ್ವಮೇಧಯಾಗದಫಲ, ಸ್ಪರ್ಶನದಿಂದ ಸಾವಿರ ರಾಜಸೂಯಯಾಗದಫಲವು, ಒಂದು ಕೊಡಿಕೆ ಉದಕದಿಂ ಅಭಿಷೇಕವಂಮಾಡಿ ಒಂದುಪುಷ್ಪವಂ ಸಮರ್ಪಣೆಯಂ ಮಾಡಲು, ನೂರು ಸುವರ್ಣಾಲಂಕಾರ ಗೋಪ್ರದಾನದ ಸತ್ಫಲ, ಸಾಧಾರಣಪೂಜೆಯಿಂ ಸಹಸ್ರಕಮಲಂಗಳಿಂ ದರ್ಚಿಸಿದಫಲ, ಪಂಚಾಮೃತ ಸ್ನಾನಪೂರ್ವಕವಾಗಿ ಪೂಜಿಸಲು ಚತುರ್ವಿಧಫಲ, ಪುರುಷಾರ್ಥಸಿದ್ಧಿ, ವಸ್ತ್ರದಿಂ ಗಂಧೋದಕದಿಂ ಅಭಿಷೇಕವಂಮಾಡಲು ಲಕ್ಷ ಅಶ್ವಮೇಧಯಾಗಫಲ, ಪರಿಮಳಗಂಧದಿಂ ಅನು

ಶೀವನೆವನಾಡಿದವರ್ಗೆ ದೇವಸ್ತ್ರೀಯರು ದಿವ್ಯಗಂಧದಿಂ ಲೇಪನವಂ ಮಾಡುವರು, ಸಾಮ್ರಾಣಿಧೂಪವಂ ಸಮರ್ಪಿಸಲು ಶರೀರದಲ್ಲಿ ದಿವ್ಯಗಂಧವಹುದು, ಘೃತದೀಪಗಳಂ ಸಮರ್ಪಿಸೆ ಜ್ಯೋತಿರ್ಮಯವಾದ ದಿವ್ಯವಿಮಾನಂಗಳಿಂ ಸಂಚರಿಪರು, ಘಣೆಗಣ್ಣುಳ್ಳವನಾಗಿ ಕರ್ಪೂರದಂತೆ ಶುಭ್ರದೇಹಿಯುಹನು, ನೈವೇದ್ಯವಂ ಸಮರ್ಪಿಸಲು ಒಂದೊಂದು ಅಗುಳಿಗೆ ಒಂದೊಂದುಯುಗಪರ್ಯಂತರವು ಕೈಲಾಸದಲ್ಲಿ ದಿವ್ಯಭೋಗಿಯುಹನು, ಸಕ್ಕರೆಯು ತುಪ್ಪ ನೀರವರದಾನ್ನವಂ ಸಮರ್ಪಿಸಲು ದೇವಋಷಿ ಪಿತೃಗಳುಸಹಾ ಮೂರು ಲೋಕವು ತೃಪ್ತಿಪಡುವರು, ಕೈರಗಳಿಗೆ ಕನ್ನಡಿ ಚಾಮರಗಳಂ ಸಮರ್ಪಿಸಿ ಪಟ್ಟೆಮಂಚ ಸುಪ್ಪತ್ತಿಗೆಗಳಲ್ಲಿ ಸುಖದೊಳಿಹನು, ಸಮುದ್ರಂಗಳಲ್ಲಿರ್ದ ಸಕಲರತ್ನಂಗಳನ್ನು ಎಣಿಸಬಹುದಲ್ಲದೆ ಮುಖವಾಸದ ವಸ್ತುಗಳನಿತ್ತವರ ಫಲಗಳನ್ನು ಎಣಿಸುವರೆ ? ತಾನುಹೊರತಾಗಿ ಆದರೂಶಕ್ಯವಲ್ಲ, ಘಂಟೆ, ಆಗ್ರೋದಕ, ಬಿಂದಿಗೆ ಮೊದಲಾದ ಪೂಜೋಪಕರಣಗಳನಿತ್ತವರು ಎನ್ನಸಮೀಪದಲ್ಲಿ ಸುಖಪಡುವರು, ನೃತ್ತಗೀತವಾದ್ಯಂಗಳಂ ಮಾಡಿಸೆ ನೃತ್ತಗೀತವಾದ್ಯೋತ್ಸವ ಉಂಟಾದವರಹರು, ಚಿತ್ರಾರದವಂ ಬರೆಸಲು ಎನ್ನಸಮೀಪದಲ್ಲಿ ಸುಖಪಡುವರು, ಒಂದುವ್ಯಾಳೆ ನಮಸ್ಕರಿಸಲು ಮೂರುಲೋಕದವರಿಂದ ನಮಸ್ಕಾರವಮಾಡಿಸಿಕೊಂಬರು, ಈ ಲಿಂಗವಂ ನೋಡಿ ದೇಶಾಂತರದಲ್ಲಿ ಮೃತವಾದರು ಜನ್ಮಾಂತರದಲ್ಲಿ ಮುಕ್ತಿಸಿದ್ಧವು, ನಾಲಿಗೆಯಲ್ಲಿ ವಿಶ್ವನಾಥಎಂದುನುಡಿದು ಕಿವಿಗಳಲ್ಲಿ ಶಿವಕಥೆಗಳಂ ಕೇಳಿ ಮನದಲ್ಲಿ ಧ್ಯಾನಿಸಲು ಪುನರ್ಜನ್ಮವಿಲ್ಲ, ಈ ಲಿಂಗವಂ ನೋಡಿ ಸಂತೋಷಪಟ್ಟವರು ಎನ್ನಗಣಂಗಳಲ್ಲಿ ಅಧಿಕರಹರು, ವಿಶ್ವೇಶ, ವಿಶ್ವೇಶ, ವಿಶ್ವೇಶಎಂದು ತ್ರಿಕಾಲಜಪಿಸುವರನ್ನು ನಿರಂತರವು ನಾನು ಜಪಿಸುವೆನು, ಈ ಲಿಂಗವು ಎನಗೆ ಮೊದಲಾಗಿ ಪೂಜ್ಯವಾದುದು, ಅದು ಕಾರಣ ಸಕಲ ದೇವಋಷಿ ಮನುಷ್ಯಾದಿಗಳು ನಿತ್ಯವೂ ಪೂಜಿಸಬೇಕು, ಈ ಲಿಂಗವ ಸ್ಮರಿಸಿದವರಿಗೂ ನೋಡಿದವರಿಗೂ ಯಮಬಾಧೆಇಲ್ಲ, ಗರ್ಭವೇದನೆಗಳಿಲ್ಲ, ಈ ಲಿಂಗಕ್ಕೆ ಒಮ್ಮೆ ನಮಸ್ಕರಿಸಿದವರ್ಗೆ ದಿಕ್ಪಾಲಕಪದವು ಅಲ್ಪವಾಗಿ ತೋರುವುದು, ದಿಕ್ಪಾಲಪದವಿಗೆ ಅಳಿವುಳ್ಳುಂಟು, ನಮಸ್ಕಾರಫಲ

ಕ್ಕೆ ಅಳಿವಿಲ್ಲ, ಎಲೈ ದೇವಋಷಿಗಣಂಗಳಿರಾ ! ಲೋಕಹಿತಾರ್ಥವಾದ ಎನ್ನ
ವಾಕ್ಯಮಂ ಕೇಳಿ, ಭೂಲೋಕ, ಭುವರ್ಲೋಕ, ಸುವರ್ಲೋಕ, ಜನೋ
ಲೋಕ, ಮಹರ್ಲೋಕ, ತಪೋಲೋಕ, ಸತ್ಯಲೋಕ, ವೈಕುಂಠ, ಕೈ
ಲಾಸ, ಪಾತಾಳಲೋಕಗಳಲ್ಲಿಯು ವಿಶ್ವಪತಿಗೆ ಸಮಾನವಾದಲಿಂಗವನ್ನು
ಮಣಿಕರ್ಣಿಕೆಗೆ ಸಮಾನವಾದ ತೀರ್ಥವನ್ನು ಕಾಶಿಗೆ ಎಣೆಯಾದಕ್ಷೇತ್ರವ
ನ್ನು ಕಾಣೆನು, ಈ ಕ್ಷೇತ್ರವನಾಮಮೊದಲಾಗಿ ತೀರ್ಥಕ್ಕೂ ತೀರ್ಥವಾಗಿ ಇ
ಹುದು ಪರಮಪವಿತ್ರವಾಗಿಯು ಎನಗೆ ಸೌಖ್ಯವನೀವ ಈ ಮಣಿಕರ್ಣಿ
ಕೆಗೆ ಉಪ್ಪರಿಗೆಯಮೂಡಲಲ್ಲಿ ಒಂದಿಷ್ಟು ಈಶಾನ್ಯದಿಕ್ಕುಕೂಡಿ ಮು
ನ್ನೂರುಹಸ್ತ ಈ ಉಪ್ಪರಿಗೆಯ ಎಡದಪಾರ್ಶ್ವದಲ್ಲಿ ಇನ್ನೂರುಹಸ್ತ, ಗಂ
ಗೆಯೊಳಗೆ ತೆಂಕಬಡಗಲಾಗಿ ಐನೂರುಹಸ್ತ, ಈ ಮಿತಿಯುಳ್ಳ ಸ್ಥಳವು ಮ
ಣಿಕರ್ಣಿಕೆಯೆನಿಸುವದು, ಈ ಮೂರುಲೋಕದಲ್ಲಿಯು ಶ್ರೇಷ್ಠವಾದ ಈ
ಕ್ಷೇತ್ರವು ಲಕ್ಷ್ಮಿಯ ಉಗ್ರಾಣದಮನೆ ? ಈ ಮಣಿಕರ್ಣಿಕೆ ತೀರ್ಥ
ಸೇವಕರು ಎನ್ನ ಹೃದಯದಲ್ಲಿ ಶಯನಮಾಡುವರು, ಇಲ್ಲಿ ಅಮೃತ
ಮಯವಾಗಿ ತೇಜೋಮಯವಾದ ಭಕ್ತರಮೇಲಣಕೃಪೆಯಿಂದ ಸ
ಪ್ತಪಾತಾಳದಿಂ ಸ್ವಯಂವ್ಯಕ್ತವಾದ ಈ ಲಿಂಗವನ್ನು ಕೃತ್ರಿಮವಾದು
ದೆಂದವರಿರು ಮರಳಿ ಮರಳಿ ಹುಟ್ಟುತ್ತಿಹರು, ಆರೊಬ್ಬರು ಈ ಲಿಂ
ಗಕ್ಕೆ ತಮಗಿಷ್ಟವಾದವಸ್ತುವನ್ನು ಸಮರ್ಪಿಸುವರೊ ಅವರಿಗೆ ಮಿತಿಇಲ್ಲ
ದಪುಣ್ಯವುಂಟು, ದೂರದೇಶದಿಂದ ಬಂದಾದರು ಈ ಲಿಂಗವಂ ಪೂಜಿಸಿದವ
ನಂ ಮೋಕ್ಷಲಕ್ಷ್ಮಿವಲಿವಳು, ಎಲೈ ಬ್ರಹ್ಮ, ವಿಷ್ಣು ಮೊದಲಾದ ಸಪ್ತ
ಋಷಿಗಣಂಗಳಿರಾ ! ಕೇಳಿ ಈ ಲಿಂಗವು ಭಕ್ತಿಯಿಂ ಭಜಿಸಿದವರ್ಗೆ
ಮುಕ್ತಿಯ ನೀವುದು, ಈ ಲಿಂಗಕ್ಕೂ ಎನಗೂ ಅಣುಮಾತ್ರ ಭೇ
ದವಿಲ್ಲ, ಹೀಗೆಂದು ಹಸ್ತವನೆತ್ತಿ ಹೇಳುತ್ತಾಇದ್ದೇನೆ, ವೇದಮಯವಾದ
ಈ ಕಾಶಿಯಲ್ಲಿ ವಿಶ್ವೇಶ್ವರಲಿಂಗವೂ ಮಣಿಕರ್ಣಿಕೆ ಈ ಕ್ಷೇತ್ರವು ಈ ಮೂ
ರು ಸಾರತರವಾದವು, ಇಂತೆಂದು ನಿರೂಪಿಸಿ ಶಿವನು ದೇವಿಸಹಿತ ಎದ್ದು
ಆ ಲಿಂಗಕ್ಕೆ ಮಹಾಪೂಜೆಯಂ ಮಾಡಿ ಸ್ತುತಿಸಿದನು, ಈ ಕಾಶೀಕ್ಷೇತ್ರ
ಮಹಾತ್ಮೆಯೊಳಗೆ ಎನ್ನ ಮತಿಗೆ ತಕ್ಕಹಾಗೆ ಕೆಲವು ಮಹಿಮೆಯಂ ಹೇಳಿ

ದೆನಲ್ಲದೆ ಸಾಂಗವಾಗಿ ಹೇಳುವರೆ ತನಗೆ ಶಕ್ಯವಲ್ಲ, ನೀನು ಕಾಶೀಮಹಿಮೆಯಂ ಕೇಳಿದುವರಿಂದ ಸೀಘ್ರದಲ್ಲಿಯೆ ಕಾಶೀವಾಸ ದೊರಕಿತು, ಸೂರ್ಯನು ಅಸ್ತಾಚಲಕ್ಕೆ ನಡೆದನು. ಈಗ ನೀನು ನಿನ್ನ ನಿಯಮವಂ ಮಾಡೆಂದುಹೇಳಿದ ಕುಮಾರಸ್ವಾಮಿಯ ವಾಕ್ಯಮಂಕೇಳಿ ಅಗಸ್ತ್ಯನು ಸಂತೋಷದಿಂದ ತನ್ನ ಸತೀಸಹಿತ ಕುಮಾರಸ್ವಾಮಿಗೆ ನಮಸ್ಕರಿಸಿ ಸಂಧ್ಯಾವಂದನೆಯಂಮಾಡಿ ಕಾಶೀಕ್ಷೇತ್ರ ಪ್ರಭಾವವಂತಿಳಿದು ಸುಚಿತ್ತದಲ್ಲಿರ್ದನು, ಇಂತೆಂದು ವ್ಯಾಸಮುನಿ ಸೂತಂಗೆ ನಿರೂಪಿಸಿ ಮತ್ತೂ ಎಲೆ ಸೂತ! ಈ ಕಾಶೀಕ್ಷೇತ್ರದ ಮಹಾತ್ಮೆಯನ್ನು ದಿವ್ಯ ಸಹಸ್ರವರ್ಷಕ್ಕಾದರೂ ಸಾಂಗವಾಗಿ ವರ್ಣಿಸುವಡಳವಲ್ಲ. ಪೂರ್ವದಲ್ಲಿ ಪರಮೇಶ್ವರನು ಪಾರ್ವತೀದೇವಿಯರಿಗೆ ನಿರೂಪಿಸಿದ್ದನ್ನು ಷಣ್ಮುಖನಾದ ಕುಮಾರಸ್ವಾಮಿಯು ಅಗಸ್ತ್ಯಂಗೆ ವಿವರಿಸಿ ಹೇಳಿದನು.ಆವೃತ್ತಾಂತವನ್ನೆ ನಿನಗೆ ಶುಕಾದಿಗಳಿಗೆಲ್ಲರಿಗೂ ನಾನು ಹೇಳಿದೆನು ಅನ್ನುಚೇಕಾದ ವೃತ್ತಾಂತವಂಕೇಳು ಹೇಳೇನು ಎಂದು ಕಾಶೀಖಂಡದ ಅಧ್ಯಾಯಂಗಳ ಕೇಳಿದವರ್ಗೆಇಲ್ಲವೆ ಒಂದು ಅಧ್ಯಾಯನಾದರೂ ಭಕ್ತಿಯಿಂದ ಕೇಳಿದವರ್ಗೆ ಫಲವಂ ನಿರೂಪಿಸಿದನು-ಈ ಅಧ್ಯಾಯಂಗಳಂ ಸುಚಿತ್ತದಿಂಕೇಳಿ ಸಕಲ ಪಾಪಂಗಳಂಪರಿಹರಿಸಿ ಸಮಸ್ತಚಿಂತಿತಾರ್ಥಗಳ ಪಡೆವರೂ ಎಂದು ಕುಮಾರಸ್ವಾಮಿ ಅಗಸ್ತ್ಯಂಗೆ ನಿರೂಪಿಸಿದನೂ ಎಂದು ವ್ಯಾಸರು ತನಗೆ ಬುದ್ಧಿಗಲಿಸಿದರೆಂದು ಸೂತಪುರಾಣೀಕ ನುಶೌನಕಾದಿ ಋಷಿಗಳಿಗೆ ಪೇಳಿದನೆಂಬಲ್ಲಿಗೆ ಅಧ್ಯಾಯಾರ್ಥ. * *

ಇಂತು ಶ್ರೀಮತ್ಸಮಸ್ತ ಭೂಮಂಡಲೇತ್ಯಾದಿ ಬಿರುದಾಂಕಿತರಾದ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ನಾಟಕಭಾಷೆಯಿಂದ ವಿರಚಿಸಿದ ಸ್ಕಂಧಪುರಾಣೋಕ್ತ ಕಾಶೀಮಹಿಮಾರ್ಥ ದರ್ಪಣದಲ್ಲಿ ಕಾಶೀವಿಶ್ವೇಶ್ವರನ ಮಹಿಮೆಯಂ ಪೇಳ್ದ ತೊಂಭತ್ತೊಂಭತ್ತನೆ ಅಧ್ಯಾಯಾರ್ಥ ನಿರೂಪಣಾಕ್ಕಂ ಘಂಗಳಮಹಾ. * * * * * * *

ನೂರನೆ ಅಧ್ಯಾಯು — ಆದ್ಯಂತಕಥಾನುಕ್ರಮಣಿಕೆ,

ಮಹಾತ್ಮ್ಯಕ್ರಮ ಶ್ರವಣಾದಿ ಫಲನಿರೂಪಣ.

ಶ್ರೀ ವಿಶ್ವೇಶ್ವರಾಯನಮಃ ॥ ಅನಂತರದಲ್ಲಿ ಸೂತಪುರಾಣಿಕನಿಂತೆಂದನು— ಎಲೈ ಸಮಗ್ರರುವಾದ ವ್ಯಾಸಮುನೀಶ್ವರನೆ! ನಿಮ್ಮ ಕೃಪೆಯಿಂದೆ ಸ್ಕಂಧಪುರಾಣೋಕ್ತವಾದ ಕಾಶೀಮಹಾತ್ಮೆಯಂ ಕೇಳಿ ಮಹಾತೃಪ್ತನಾದೆನು, ಚೆನ್ನಾಗಿ ಹೃದಯದಲ್ಲಿ ಧರಿಸಿದೆನು, ಈಗ ನೀವು ನಿರೂಪಿಸಿದ ಮಹಿಮೆಯುಳ್ಳ ಕಾಶೀಮಹಾತ್ಮೆಯ ಅಧ್ಯಾಯಗಳೆಲ್ಲವನ್ನು ಸಂಗ್ರಹದಿಂ ಕ್ರಮತಪ್ಪದಂತೆ ಬುದ್ಧಿಗಲಿಸಬೇಕು ಎನೆ, ವ್ಯಾಸಮುನಿ ಇಂತೆಂದನು—ಎಲೆಸೂತನೇ! ಕೇಳು, ಜಾತುಕರ್ಣಮುನಿಯೇ! ಕೇಳು, ವಿಸ್ತಾರವಾಗಿ ಹೇಳೇನೂ ನೀನು ಏಕಚಿತ್ತದಲ್ಲಿ ಕೇಳು, ಶುಕಪೈಶಂಪಾಯನ ಮೊದಲಾದ ಬಾಲಕರು ಈ ಅನುಕ್ರಮಣಿಕಾಧ್ಯಾಯಮಂ ಕೇಳಲಿ ಅದೆಂತೆಂದನೆ—

೧ ನೆ ಅಧ್ಯಾಯ ವಿಂಧ್ಯನಾರದ ಸಂವಾದ; * ೨ ಸತ್ಯಲೋಕಪ್ರಭಾವ; * ೩ ಅಗಸ್ತ್ಯಾಶ್ರಮ ವರ್ಣನೆ; * ೪ ಪತಿವ್ರತಾ ಚರಿತ್ರ; * ೫ ಅಗಸ್ತ್ಯನಪ್ರಯಾಣ; * ೬ ಕಾಶೀತೀರ್ಥಪ್ರಶಂಸೆ; * ೭ ಅಯೋಧ್ಯೆ ಮೊದಲಾದ ಸಪ್ತಪುರಿಗಳ ಮಹಿಮಾವರ್ಣನೆ; * ೮ ಪಿಶಾಚಲೋಕ, ಗುಹ್ಯಲೋಕ, ಗಂಧರ್ವಲೋಕ, ವಿಧ್ಯಾಧರಲೋಕ, ಯಮಲೋಕವರ್ಣನೆ; * ೯ ಅಪ್ಸರೋಲೋಕ, ಸೂರ್ಯಲೋಕವರ್ಣನೆ * ೧೦ ಇಂದ್ರಅಗ್ನಿಲೋಕವರ್ಣನೆ; * ೧೧ ಅಗ್ನಿಯುಉತ್ಪತ್ತಿ; * ೧೨ ನೈಋತ್ಯ ವರುಣರಜನನ; ೧೩ ವಾಯು ಕುಬೇರರಜನನ; * ೧೪ ಈಶಾನ್ಯಲೋಕವರ್ಣನೆ; * ೧೫ ನಕ್ಷತ್ರಲೋಕವರ್ಣನೆ; * ೧೬ ಶುಕ್ರನಚಾರಿತ್ರ * ೧೭ ಅಂಗಾರಕಲೋಕ, ಗುರುಲೋಕ, ಶನೈಶ್ಚರನಚಾರಿತ್ರ; * ೧೮ ಸಪ್ತಋಷಿಗಳ ಉತ್ಪತ್ತಿ; * ೧೯ ಧ್ರುವನತಪಸ್ಸು; * ೨೦ ಧ್ರುವಗೆವರ; * ೨೧ ಧ್ರುವಲೋಕಸ್ಥಿತಿ; * ೨೨ ಮಹರ್ಲೋಕ, ತಪೋಲೋಕ, ಸತ್ಯಲೋಕವರ್ಣನೆ; ೨೩ ವಿಷ್ಣುವಿನ ಪಟ್ಟಾಭಿಷೇಕ, * ೨೪ ಶಿವಶರ್ಮನಮುಕ್ತಿ; * ೨೫ ಅಗಸ್ತ್ಯಗೆ ಕುಮಾರಸ್ವಾಮಿ ದರ್ಶನವಾದದ್ದು; * ೨೬ ಮಣಿಕರ್ಣಿಕಾ ಉತ್ಪತ್ತಿ; * ೨೭ ಗಂಗಾಮಹಾತ್ಮೆ; * ೨೮ ಗಂಗಾಮಹಾತ್ಮೆ; * ೨೯ ಗಂಗಾಸಹಸ್ರನಾಮ; * ೩೦ ಕಾಶೀಕ್ಷೇತ್ರಕ್ಕೆ ವರಣ ಅಸೀ ಯೆಂಬವು

ಮೊದಲಾದ ನಾಮಧೇಯಂಗಳಪೇಳ್ದುದು; * ೩೦ ಕಾಲಭೈರವನುತ್ಪತ್ತಿ ೩೨ ದಂಡಪಾಣಿಯಜನನ; * ೩೩ ಜ್ಞಾನವಾಪಿಯುತ್ಪತ್ತಿ; * ೩೪ ಕಲಾವತೀಕಥಾಪ್ರಸಂಗ; * ೩೫ ಸದಾಚಾರಪ್ರಸಂಗ; * ೩೬ ಬ್ರಹ್ಮಚರ್ಯಪ್ರಶಂಸೆ; * ೩೭ ಸ್ತ್ರೀಯರಲಕ್ಷಣ; * ೩೮ ಕಾರ್‍ಯಕಾರಣವಿಭಾಗ; ೩೯ ಅವಿಮುಕ್ತೇಶ್ವರನಪ್ರಭಾವ; * ೪೦ ಗೃಹಸ್ಥಾಚಾರ ಲಕ್ಷಣ; * ೪೧ ವಾನಪ್ರಸ್ಥಾಶ್ರಮಪ್ರಸಂಗ, ಸನ್ಯಾಸಾಶ್ರಮ ಯೋಗನಿರ್ಣಯ; * ೪೨ ಕಾಲಜ್ಞಾನ; * ೪೩ ದಿವೋದಾಸರಾಯನಪ್ರಭಾವ; * ೪೪ ಕಾಶೀಕ್ಷೇತ್ರವರ್ಣನೆ; * ೪೫ ಚತುಃಷಷ್ಟಿಯೋಗಿನಿಯರಪ್ರಸಂಗ; * ೪೬ ಲೋಲಾರ್ಕನಮಹಿಮೆ; * ೪೭ ಸೂರ್‍ಯ ಕಾಶಿಗೆಬಂದದ್ದು, ಉತ್ತರಾರ್ಕನಪ್ರಸಂಗ; * ೪೮ ಸಾಂಬಾದಿತ್ಯನ ಮಹಿಮೆ; * ೪೯ ದ್ರುಪದಾದಿತ್ಯನಪ್ರಸಂಗ, ಮಯೂಖಾದಿತ್ಯನಪ್ರಸಂಗ; * ೫೦ ಖಗೋಲಾದಿತ್ಯನಪ್ರಸಂಗ, ಗರುಡನಉತ್ಪತ್ತಿ; * ೫೧ ಅರುಣಾದಿತ್ಯ, ವೃದ್ಧಾದಿತ್ಯ, ಕೇಶವಾದಿತ್ಯ, ವಿಮಲಾದಿತ್ಯರವರ್ಣನೆ; * ೫೨ ಬ್ರಹ್ಮನೆದಶಾಶ್ವಮೇಧ; * ೫೩ ಗಣಂಗಳಪ್ರಸಂಗವು; * ೫೪ ಪಿಶಾಚವಿಮೋಚನತೀರ್ಥದಮಹಿಮೆ; * ೫೫ ಢುಂಢಿಗಣಪತಿಪ್ರಸಂಗ; * ೫೬-೫೭-೫೮ ಢುಂಢಿಗಣಪತಿಯ ಪ್ರಭಾವವರ್ಣನೆ; * ೫೮ ವಿಷ್ಣುವಿನಮಹಿಮೆ, ಮಾಯಾಪ್ರಭಾವ, ದಿವೋದಾಸರಾಯನಮುಕ್ತಿ; * ೫೯ ಪಂಚನದ ತೀರ್ಥದ ಉತ್ಪತ್ತಿ; * ೬೦ ಬಿಂದುಮಾಧವನ ಆವಿರ್ಭಾವ; * ೬೧ ವಿಷ್ಣುವಿನ ತೀರ್ಥಗಳಪ್ರಶಂಸೆ; * ೬೨ ಮಂದರಾದ್ರಿಯಿಂದ ಪರಮೇಶ್ವರಬಂದು ಕಾಶೀಪ್ರವೇಶವಾದದ್ದು; ೬೩ ಜೈಗೀಶವ್ಯಮುನಿಯಪ್ರಸಂಗ; * ೬೪ ಪರಮೇಶ್ವರನು ಬ್ರಾಹ್ಮಣರಿಗೆ ಕ್ಷೇತ್ರರಹಸ್ಯವಂ ಪೇಳಿದ್ದು; * ೬೫ ಕಂದುಕೇಶ್ವರನಮಹಿಮೆ, ವ್ಯಾಘ್ರೇಶ್ವರನಉತ್ಪತ್ತಿ; * ೬೬ ಶೈಲೇಶ್ವರನಪ್ರಸಂಗ; * ೬೭ ರತ್ನೇಶ್ವರನಪ್ರಸಂಗ; * ೬೮ ಕೃತ್ತಿವಾಸೇಶ್ವರನಮಹಿಮೆ; * ೬೯ ದಿವ್ಯಸ್ಥಳಗಳಂ ತೀರ್ಥಗಳಂ ದೇವತೆಗಳಂ ತಂದದ್ದು; * ೭೦ ನಾನಾದೇವತೆಗಳನ್ನು ಕಾಶೀಕ್ಷೇತ್ರಕ್ಕೆ ಕಾವಲುಮಾಡಿದ್ದು; * ೭೧ ದುರ್ಗಾಸುರನ ಪರಾಕ್ರಮ; * ೭೨ ಅಮ್ಮನವರು ದುರ್ಗಾಸುರನಜಯಿಸಿದ್ದು; * ೭೩

ಓಂಕಾರೇಶ್ವರನಮಹಿಮೆ; * ೭೪ ಓಂಕಾರೇಶ್ವರನಮಹಿಮೆ, ದಮನೆಂಬ ಬ್ರಾಹ್ಮಣನಪ್ರಸಂಗ; ೭೫ ತ್ರಿವಿಷ್ಟಪೇಶ್ವರನಮಹಿಮೆ; ೭೬ ತ್ರಿಲೋಚನೇಶ್ವರನಮಹಿಮೆ; ೭೭ ಕೇತಾರೇಶ್ವರನಮಹಿಮೆ; ೭೮ ಧರ್ಮೇಶ್ವರನಮಹಿಮೆ * ೭೯ ಗಿಣೀಪಕ್ಷಿಗಳಕಥೆ; * ೮೦ ವಿಶ್ವಭುಜಾದೇವಿಯ ಮಹಿಮೆ, ಮನೋರಥತದಿಗೆವ್ರತ; ೮೧ ಧರ್ಮೇಶ್ವರನ ಪ್ರಶಂಸೆ, ದುರ್ದಮರಾಯನ ಪ್ರಸಂಗ; * ೮೨ ಅಮಿತ್ರಜಿತುರಾಯ ಮಲಯಗಂಧಿನೀ ಪ್ರಸಂಗ; * ೮೩-೮೪ ವೀರೇಶ್ವರನ ಪ್ರಶಂಸೆ; * ೮೫ ಕಾಮ್ಯೇಶ್ವರ, ಕಾಮ್ಯತೀರ್ಥದಮಹಿಮೆ; * ೮೬ ವಿಶ್ವಕರ್ಮೇಶ್ವರನಉತ್ಪತ್ತಿ; * ೮೭ ದಕ್ಷಯಜ್ಞಪ್ರಾರಂಭ; * ೮೮ ಸತೀದೇವಿ ದೇಹತ್ಯಾಗ; * ೮೯ ವೀರಭದ್ರನ ಉತ್ಪತ್ತಿ, ದಕ್ಷನಶಿರಃಪತನ, ದಕ್ಷಯಜ್ಞಸಂಪೂರ್ಣ, ದಕ್ಷೇಶ್ವರನಉತ್ಪತ್ತಿ, ಗಿರಿಜಾವಿವಾಹ; * ೯೦ ಪಾರ್ವತೀಶ್ವರನಮಹಿಮೆ; * ೯೧ ಗಂಗೇಶ್ವರನಮಹಿಮೆ; * ೯೨ ವಿಮಲೇಶ್ವರನ ಮಹಿಮೆ; * ೯೩ ಸತೀಶ್ವರನಮಹಿಮೆ; * ೯೪ ಅಮೃತೇಶ್ವರನ ಮಹಿಮೆ; * ೯೫ ವ್ಯಾಸರಭುಜಸ್ತಂಭ; * ೯೬ ವ್ಯಾಸರಶಾಪವಿಮೋಕ್ಷ; ೯೭ ತೀರ್ಥಲಿಂಗಗಳವರ್ಣನೆ, * ೯೮ ವಿಶ್ವೇಶ್ವರ ಮುಕ್ತಿಮಂಟಪಕ್ಕೆ ಪ್ರವೇಶವಾದದ್ದು, ಉಪ್ಪರಿಗೆಯವರ್ಣನೆ; * ೯೯ ವಿಶ್ವೇಶ್ವರನಆವಿರ್ಭಾವಮಹಿಮಾವರ್ಣನೆ; ೧೦೦ನೇ ಅಧ್ಯಾಯದಲ್ಲಿ ಪ್ರಥಮದಿಂದ ಆದ್ಯಂತ ಕಥಾನುಕ್ರಮಣಿಕೆ ಯಾತ್ರಾಕ್ರಮ, ಶ್ರವಣಾದಿ ಫಲಸ್ತುತಿ, ಇಂತೆಂಬ ನೂರುಅಧ್ಯಾಯದ ಕಥಾನಾಮಧೇಯಂಗಳನ್ನು ಹೇಳಲು, ಕೇಳುವಮಾತ್ರದಲ್ಲಿಯೆ ಸಾಂಗವಾಗಿ ಕಾಶೀಖಂಡದ ಭಕ್ತಿಯಿಂದ ಕೇಳಿದಫಲವುಂಟು, ಈ ಅಧ್ಯಾಯದಲ್ಲಿಯೆ ಯಾತ್ರಾಗಮನಕ್ರಮವನ್ನು ಹೇಳಲ್ಪಟ್ಟಿತೂಎಂದು ವ್ಯಾಸಮುನೀಶ್ವರ ನಿರೂಪಿಸಲು, ಸೂತನಿಂತೆಂದನು— ಎಲೈ ಸತ್ಯವತೀಕುಮಾರನಾಗಿ ಎನಗೆ ಪರಮಗುರುವಾದ ವ್ಯಾಸಮುನೀಶ್ವರನೆ! ಈ ಕ್ಷೇತ್ರದಲ್ಲಿ ವಾಸವಾಗಿ ಇದ್ದವರಿಗೆ ಹಿತವಾದ ಯಾತ್ರಾಕ್ರಮವಂ ಬುದ್ಧಿಗಳಿಸಬೇಕೆನಲು, ವ್ಯಾಸಮುನೀಶ್ವರ ನಿಂತೆಂದನು—ಕೇಳೈ ಸೂತನೆ! ಮೊದಲು ಮಣಿಕರ್ಣಿಕೆಯಲ್ಲಿ ಸಚೇಲಸ್ನಾನವಂಮಾಡಿ ದೇವಋಷಿ ಪಿತೃತರ್ಪಣವನಿತ್ತು ಅಲ್ಲಿಹ

ಬ್ರಾಹ್ಮಣರು ಮೊದಲಾದ ಯಾಚಕರಂ ಸಂತೋಷಪಡಿಸಿ ಆದಿತ್ಯದ್ರುಪದ ವಿಷ್ಣು, ದಂಡಪಾಣಿ, ಮಹೇಶ್ವರ, ಢುಂಢಿವಿನಾಯಕರಂ ನಮಸ್ಕರಿಸಿ ಮತ್ತೆ ಜ್ಞಾನವಾಪೀತೀರ್ಥದಲ್ಲಿ ಸ್ನಾನವಂಮಾಡಿ ನಂದಿಕೇಶ್ವರ, ತಾರಕೇಶ್ವರ, ಮಹಾಕಾಳೇಶ್ವರ, ದಂಡಪಾಣಿಗಳನ್ನು ಹೀಗೆ ಪ್ರತಿದಿನವು ಪೂಜಿಸಲು ಇದು ಪಂಚತೀರ್ಥಯಾತ್ರೆ ಎನಿಸುವದು, ಆಮೇಲೆ ಸರ್ವಸಿದ್ಧಿಕರವಾದ ವಿಶ್ವೇಶ್ವರನ ಯಾತ್ರೆಯಂ ಮಾಡಬೇಕು, ಅದೆಂತೆಂದರೆ— ಕೃಷ್ಣಪಕ್ಷದ ಪಾಡ್ಯದಾರಭ್ಯ ಚತುರ್ದಶಿಪರ್ಯಂತರವು ಪ್ರತಿಚತುರ್ದಶಿಯಲ್ಲಿ ಆವರೆಯೂ ಮೌನದಿಂ ಮತ್ಸ್ಯೋದರಿಯಲ್ಲಿ ಸ್ನಾನವಂಮಾಡಿಓಂಕಾರೇಶ್ವರ, ತ್ರಿವಿಷ್ಟಪೇಶ್ವರ, ಮಹಾದೇವೇಶ್ವರ, ರತ್ನೇಶ್ವರ, ಚಂದ್ರೇಶ್ವರ, ಕೇತಾರೇಶ್ವರ, ಕಾಮ್ಯೇಶ್ವರ, ವಿಶ್ವಕರ್ಮೇಶ್ವರ, ಮಣಿಕರ್ಣಿಕೇಶ್ವರ, ಅವಿಮುಕ್ತೇಶ್ವರ, ವೈದ್ಯೇಶ್ವರ, ಈ ಹದಿನಾಲ್ಕು ಲಿಂಗಗಳನ್ನು ಪೂಜಿಸಲು ನಿರ್ವಿಘ್ನದಿಂ ಕಾಶಿಯವಾಸ ಸಿದ್ಧಿಯಂಪಡೆವರು, ಹೀಗೆ ಸೇವೆಯಂಮಾಡಿದರೆ ಕಾಶಿಯವಾಸಕ್ಕೆ ವಿಘ್ನತೋರದು, ಮತ್ತು ದಕ್ಷೇಶ್ವರ, ಪಾರ್ವತೀಶ್ವರ, ಗಂಗೇಶ್ವರ, ಗಭಸ್ತೀಶ್ವರ, ಸರಸ್ವತೀಶ್ವರ, ತಾರಕೇಶ್ವರರೆಂಬ ಈ ಎಂಟುಲಿಂಗಗಳಂ ಅಷ್ಟಮಿಗಳಲ್ಲಿ ಸೇವಿಸಲು, ಮಹಾಪಾಪಹರ, ಮತ್ತು ವರುಣಾನದಿಯ ಸ್ನಾನ, ಶೈಲೇಶ್ವರನ ದರ್ಶನ, ಗಂಗಾ ವರುಣಾಸಂಗಮದಲ್ಲಿ ಸ್ನಾನವಂಮಾಡಿ ಶೈಲೇಶನದೀ ತೀರ್ಥಸ್ನಾನ ಶೈಲೇಶ್ವರನದರ್ಶನ, ಗಂಗಾಸ್ನಾನ ಸಂಗಮೇಶ್ವರನದರ್ಶನ ಮಧ್ಯಮೇಶ್ವರನದರ್ಶನ, ಹಿರಣ್ಯಗರ್ಭತೀರ್ಥಸ್ನಾನ, ಹಿರಣ್ಯಗರ್ಭೇಶ್ವರನದರ್ಶನ, ಮತ್ತೆ ಮಧ್ಯಾಹ್ನಸಮಯದಲ್ಲಿ ಮಣಿಕರ್ಣಿಕಾಸ್ನಾನ, ಈಶಾನೇಶ್ವರನದರ್ಶನ, ಗೋಪ್ರೇಕ್ಷೇಶ್ವರನದರ್ಶನ, ಕಪಿಲಧಾರಾತೀರ್ಥಸ್ನಾನ, ವೃಷಭಧ್ವಜೇಶ್ವರನದರ್ಶನ, ಪಂಚಚೂಡಾತೀರ್ಥಸ್ನಾನ ಜ್ಯೇಷ್ಠೇಶ್ವರನದರ್ಶನ, ಚತುಸ್ಸಮುದ್ರತೀರ್ಥಸ್ನಾನ ಚತುಸ್ಸಮುದ್ರೇಶ್ವರನದರ್ಶನ, ಶುಕ್ರತೀರ್ಥಸ್ನಾನ ಶುಕ್ರೇಶ್ವರನದರ್ಶನ, ದಂಡಕಾತೀರ್ಥಸ್ನಾನ ವ್ಯಾಘ್ರೇಶ್ವರನದರ್ಶನ, ಶೌನಕತೀರ್ಥಸ್ನಾನ ಜಂಬುಕೇಶ್ವರನದರ್ಶನ, ಈ ಹದಿನಾಲ್ಕು ಲಿಂಗಗಳನ್ನು ಕೃಷ್ಣಪಕ್ಷದ ಪಾ

ಶ್ಯಧಾರಭ್ಯವಾಗಿ. ಚತುರ್ದಶೀ ಪರ್ಯಂತರವು ದಿನವೂ ಒಂದುಲಿಂಗವಂಪೂ ಜಿಸಲು ಪುನರ್ಜನ್ಮವಿಲ್ಲ, ಇದುಒಂದುಯಾತ್ರೆ, ಆಗ್ನೇಯೇಶ್ವರನತೀರ್ಥ ಸ್ನಾನವಂಮಾಡಿ ಆಗ್ನೇಯೇಶ್ವರ, ಊರ್ವಶೀಶ್ವರ, ನಕುಲೇಶ್ವರ, ಶಾಂತೀಶ್ವರ, ಭಾರಭೂತೇಶ್ವರ, ತ್ರಿಪುರಾಂತಕೇಶ್ವರ, ಮನುಪ್ರಕಾಮೇಶ್ವರ, ಪ್ರೀತಿಕೇಶ್ವರ, ಮದಾಲಸೇಶ್ವರ, ತಿಲಪರ್ಣೇಶ್ವರರೆಂಬ ಹನ್ನೊಂದುಲಿಂಗಯಾತ್ರೆಯುಂಮಾಡೆ ಏಕಾದಶರುದ್ರತ್ವವುಂಟು, ಗೋಪ್ರೇಕ್ಷತೀರ್ಥಸ್ನಾನ ಮೋಕ್ಷಗೌರಿಯಪೂಜೆ, ಜ್ಯೇಷ್ಠತೀರ್ಥಸ್ನಾನ ಜ್ಯೇಷ್ಠಗೌರಿಯಪೂಜೆ, ಜ್ಞಾನವಾಪಿಯಸ್ನಾನ ಭಾಗ್ಯಗೌರೀಶೃಂಗಾರಗೌರಿಯರಪೂಜೆ, ಲಲಿತತೀರ್ಥಸ್ನಾನ ಲಲಿತಾಗೌರೀಪೂಜೆ, ಭವಾನೀತೀರ್ಥಸ್ನಾನ ಭವಾನೀಪೂಜೆ,ಬಿಂದುತೀರ್ಥಸ್ನಾನವಂಮಾಡಿ ಮಂಗಳಗೌರೀ, ಮಹಾಲಕ್ಷ್ಮಿಯರಪೂಜೆಯುಂಮಾಡಲು ಇಹದಲ್ಲಿಅತ್ಯಂತಸುಖವುಂಟು, ಪ್ರತಿಚೌತಿಯಲ್ಲಿಯೂ ವಿಘ್ನೇಶ್ವರನಪೂಜಿಸಿ ಮೋದಕ ಬಾಗಿನವ ಕೊಡಲು ಸಕಲವಿಘ್ನಹರ; ಭಾನುವಾರ, ಭಾನುಷಷ್ಠಿ, ಭಾನುಸಪ್ತಮಿಗಳಲ್ಲಿ ಹನ್ನೆರಡು ಸೂರ್ಯರಯಾತ್ರೆಯುಂಮಾಡಲು ಸರ್ವವಿಘ್ನಹರ, ನವಮೀ ಷಷ್ಠಿಗಳಲ್ಲಿ ದುರ್ಗಾಯಾತ್ರೆಯುಂಮಾಡಲುಅತ್ಯಂತಶುಭ,ಆಯಾತ್ರೆಯುಂ ಮಾಡುವ. ಕ್ರಮವೆಂತೆಂದರೆ—ಗಂಗೆಯಲ್ಲಿ ಸ್ನಾನವಂಮಾಡಿ ಮೋದಕಾದಿ ಪಂಚವಿನಾಯಕರಿಗೂ ಶನಿಗೂ ವಿಶ್ವೇಶ್ವರಗೂ ನಮಸ್ಕಾರವಮಾಡಿ ಮುಕ್ತಿಮಂಟಪದಲ್ಲಿನಿಂತು ತಾನು ತನ್ನ ಸಮಸ್ತಪಾಪಪರಿಹಾರಕ್ಕೋಸ್ಕರ ಅಂತರ್ಗೃಹಯಾತ್ರೆಯುಂ ಮಾಡುತ್ತಾ ಇದ್ದೇನೆ, ಎಂದು ಸಂಕಲ್ಪಿಸಿ ಮೌನದಿಂ ಮಣಿಕರ್ಣಿಕೆಯಲ್ಲಿ ಸ್ನಾನವಮಾಡಿ ಮಣಿಕರ್ಣಿಕೇಶ್ವರನಪೂಜಿಸಿ ಕಂಬಳಾಶ್ವತರೇಶ್ವರ, ವಾಸುಕೀಶ್ವರ, ಪಾರ್ವತೀಶ್ವರ, ಸೋಮನಾಥ. ವರಾಹೇಶ್ವರ, ಬ್ರಹ್ಮೇಶ್ವರ, ಗಭಸ್ತೀಶ್ವರ, ವಿಶಾಲಾಕ್ಷಿ, ಧರ್ಮೇಶ್ವರ, ವಿಶ್ವಭುಜಾದೇವಿ, ಆಶಾವಿನಾಯಕ, ವೃದ್ಧಾದಿತ್ಯ, ಚತುರ್ವಕ್ತ್ರೇಶ್ವರ, ಬ್ರಹ್ಮೇಶ್ವರ, ನಿಷ್ಕಳಂಕೇಶ್ವರ, ಮಾರ್ಕಂಡೇಶ್ವರ, ಅಪ್ಸರೇಶ್ವರ, ಗಂಗೇಶ್ವರ, ಇವರಪೂಜೆಯುಂಮಾಡಿ ಜ್ಞಾನವಾಪೀತೀರ್ಥದಲ್ಲಿ ಸ್ನಾನವಂಮಾಡಿ ನಂದಿಕೇಶ್ವರ, ತಾರಕೇಶ್ವರ, ಮಹಾ

ಕಾಳೇಶ್ವರ, ದಂಡಪಾಣಿ, ಮಹೇಶ್ವರ, ಮೋಕ್ಷೇಶ್ವರ, ವೀರಭದ್ರೇಶ್ವರ,ಅವಿಮುಕ್ತೇಶ್ವರ, ಪಂಚವಿನಾಯಕರು, ವಿಶ್ವನಾಥನಪೂಜೆಯಂಮಾಡಿ ಅಲ್ಲಿಮೌನವಂ ವಿಸರ್ಜನೆಯಂಮಾಡಿ ತಾನುಮಾಡಿದ ಅಂತರ್ಗೃಹಯಾತ್ರೆಯಲ್ಲಿ ನ್ಯೂನಾತಿರಿಕ್ತಗಳಂ ಪರಿಪೂರ್ಣವಮಾಡಿ ಪರಮೇಶ್ವರನು ಪ್ರಸನ್ನನಾಗಬೇಕೆಂದು ಬಿನ್ನವಿಸಿ ಕ್ಷಣಮಾತ್ರ ಮುಕ್ತಿಮಂಟಪದಲ್ಲಿನಿಂತು ತನ್ನಮನೆಗೆಹೋಗಲು ನಿಷ್ಕಲ್ಮಷನಾಗಿ ಪುಣ್ಯವಂತನಹನು, ಏಕಾದಶೀದಿನ ವಿಷ್ಣುತೀರ್ಥಗಳಲ್ಲಿ ಸ್ನಾನವಂಮಾಡಿ ವಿಷ್ಣುಮೂರ್ತಿಗಳಪೂಜಿಸಲು ಮಹಾಪುಣ್ಯವಂತನಹನು,ಭಾದ್ರಪದಶುದ್ಧ ಪೌರ್ಣಮಿ,ಬಹುಳ ಅಮಾವಾಸ್ಯೆಗಳಲ್ಲಿ ಕಾಲಭೈರವನ ಕೂಲಸ್ತಂಭವಪೂಜಿಸಲು, ರುದ್ರ ಪಿಶಾಚತ್ವಮೊದಲಾದ ದುಃಖ ನಿವೃತ್ತಿಯಹುದು, ಈ ಹೇಳಿದ ಯಾತ್ರೆಗಳಂ ಅತ್ಯಂತಭಕ್ತಿಯಿಂ ಮಾಡಬೇಕು, ಪರ್ವತಿಥಿಗಳಲ್ಲಿ ಅವಶ್ಯ ಯಾತ್ರೆಯ ಮಾಡಬೇಕು, ಯಾತ್ರೆಯಮಾಡದೆ ದಿನಬಂಜೆಯಮಾಡಲಾಗದು, ಪ್ರತಿದಿವಸವಲ್ಲಿಯೂ ಈಯಾತ್ರೆಅವಶ್ಯವೂ ಮಾಡಬೇಕು,ಅವು ಆವಾವೆನೆ—ಗಂಗಾಸ್ನಾನ, ವಿಶ್ವೇಶ್ವರನದರ್ಶನವನ್ನು ಕಾಶಿಯಲ್ಲಿರ್ದು ಈ ಎರಡು ಯಾತ್ರೆಯಂ ಮಾಡದಿರ್ದರೆ ಅವರಪಿತೃಗಳು ಆದಿವಸವೆ ನಿರಾಶೆಯಿಂದ ಶಾಪವನೀವರು, ಶೀಘ್ರದಲ್ಲಿ ಮೃತ್ಯುವೆಂಬಸರ್ಪನು ತುಡುಕುವನು, ಇದಕ್ಕು ತಪ್ಪದು, ಮಣಿಕರ್ಣಿಕಾಸ್ನಾನ, ವಿಶ್ವೇಶ್ವರನದರ್ಶನದಿಂ ಸಕಲತೀರ್ಥಸ್ನಾನ ಸಕಲದೇವತಾಸೇವೆ ದರ್ಶನಫಲವಹುದು, ಇದು ಮೂರುಭಾರಿಗೂ ಸತ್ಯ, ಇಂತೆಂದು ವ್ಯಾಸರು ಸೂತಂಗೆ ಮತ್ತಿಂತೆಂದರು—ಎಲೆಸೂತ! ಈ ಸ್ಕಂಧಪುರಾಣೋಕ್ತವಾದ ಕಾಶೀಕ್ಷೇತ್ರಮಹಾತ್ಮೆಯಂ ಕೇಳಲು ಅನೇಕ ಸಹಸ್ರಅಪರಾಧಗಳಮಾಡಿದವನಾದರು ಪಾಪಪರಿಹರ ನರಕಭಯವಿಲ್ಲ, ಸಕಲತೀರ್ಥಸ್ನಾನ ಸಕಲದಾನ, ಸಕಲಯಜ್ಞಗಳಫಲವಹುದು, ಉಗ್ರತಪಸ್ಸುಮಾಡಿದಫಲವು, ಸಾಂಗವಾಗಿ ವೇದಪಾರಾಯಣವಮಾಡಿದಫಲವು,ಈ ಕಾಶೀಮಹಿಮೆಯಂಕೇಳಲು ಗಂಗಾತೀರದಲ್ಲಿ ಯಥೋಕ್ತವಾಗಿ ಶ್ರಾದ್ಧವಮಾಡಲು ಪಿತೃಗಳಿಗೆ ಎಂಥಾ ತೃಪ್ತಿಯಹುದೋಅಂಥಾ ತೃಪ್ತಿಯನೈದುವರು, ಸಕಲಪುರಾಣಶ್ರವಣ, ಸಕಲಧರ್ಮಶಾಸ್ತ್ರ

ಶ್ರವಣಫಲವಹುದು, ಇದೇ ಸಕಲದೇವತಾಪೂಜೆ, ಇದರೊಳಗೆ ಒಂದುಅಧ್ಯಾಯವುಂ ಸ್ಥಿರಚಿತ್ತದಿಂ ಕೇಳಲು ಸಕಲಧರ್ಮಶಾಸ್ತ್ರಶ್ರವಣಫಲ, ಆದ್ಯಂತವಂ ಕೇಳಲು ಧರ್ಮ ಕಾಮ ಮೋಕ್ಷಂಗಳಹವು, ಬ್ರಹ್ಮ, ವಿಷ್ಣು, ಮಹೇಶ್ವರ, ದೇವಋಷಿ, ಪಿತೃಮುನಿ, ಮೊದಲಾದವರು ಸಂತುಷ್ಟರಹರು, ಅಂಡಜ, ಜರಾಯುಜ, ಸ್ವೇದಜ, ಉದ್ಭಿಜಗಳೆಂಬ ಚತುರ್ವಿಧದೇಹಿಗಳು ಸಂತುಷ್ಟರಹರು, ಈ ಕಾಶಿಯಮಹಾತ್ಮ್ಯೆಯಲ್ಲಿ ಅರ್ಥವನಾದರು ಪಾದವನಾದರು ಪದಾರ್ಥವನಾದರು ಕೇಳುವಪುಣ್ಯಾತ್ಮರಿಗೆ ಸ್ವರ್ಗದವರು ನಮಸ್ಕರಿಸಿ ತಮ್ಮ ಇಷ್ಟದೇವತೆಯಂತೆ ಪೂಜಿಸುವರು, ಈ ಪುರಾಣವ ಪೇಳ್ದವರಿಗೆ ಯಥಾಶಕ್ತಿ ದಾನವನೀಯಲು ವಿಶ್ವಪತಿಸಂತುಷ್ಟನಹನು, ಪರಮಾನಂದಕಾರಣವಾದ ಈ ಕಾಶೀಖಂಡವು ಆವದೇಶದಲ್ಲಿ ಶ್ರವಣವಾಗುತ್ತಿಹುದೋ ಆ ದೇಶದಲ್ಲಿ ಅಮಂಗಳಗಳಿಲ್ಲ, ಈ ಮಹಾತ್ಮ್ಯೆಯಂ ಹೇಳಿದವರು ಬರೆದವರು ಮಹಾಪುಣ್ಯಾತ್ಮರಹರೂ, ಅವರಿಗೆ ಗಂಗಾಸ್ನಾನಫಲವಹುದು, ಈ ಕಾಶೀಖಂಡ ಪುರಾಣಮಹಾತ್ಮ್ಯೆಯಂ ಬರೆದು ಪುಸ್ತಕವ ದಾನವಂಮಾಡಲು ಸಕಲ ವೇದಪುರಾಣ ಶಾಸ್ತ್ರವಬರೆದುದಾನವಮಾಡಿದಫಲ, ಈ ಕಥೆಗಳೆಷ್ಟುಂಟೋ ಗ್ರಂಥಗಳೆಷ್ಟುಂಟೋ ಅರ್ಥಕ್ಕೆ ಅರ್ಥಕ್ಕೆ ಅಕ್ಷರಗಳೆಷ್ಟೋ ಚರಣಗಳೆಷ್ಟೋ ಬರವಾಲೆಗಳೆಷ್ಟುಂಟೋ ಪಙ್ತಿಗಳೆಷ್ಟುಂಟೋ ಸೂತ್ರದನೂಲು ಎಷ್ಟುಂಟೋ ಈ ಪುಸ್ತಕವಂಕಟ್ಟಿದ ವಸ್ತ್ರದಎಳೆಗಳೆಷ್ಟುಂಟೋ ಪುಸ್ತಕದ ಕಂಬಿಗಳಮೇಲೆ ಚಿತ್ತಾರವ ಬರೆದರೇಖೆಗಳೆಷ್ಟುಂಟೋ ಎಲ್ಲಾಕೂಡಿದರೆ ಎಷ್ಟುಂಟೋ ಅಷ್ಟು ಸಹಸ್ರಯುಗಪರ್ಯಂತರ ಸ್ವರ್ಗದಲ್ಲಿ ಪರಮಸುಖವನನುಭವಿಸಿ ಆಮೇಲೆ ಕಾಶಿಯಲ್ಲಿ ಜನನ, ಅಲ್ಲಿಯೇಮುಕ್ತಿಯಾಗಿ ವಿಶ್ವಪತಿಯಿಂದತಾರಕ ಬ್ರಹ್ಮೋಪದೇಶವಪಡೆದು ಶಿವಸಾಯುಜ್ಯವನೈದುವರು, ಈ ಕಾಶೀಮಹಾತ್ಮ್ಯೆಯಂ ಭಕ್ತಿಯಿಂದ ಹನ್ನೆರಡುಬಾರಿ ಕೇಳಲು ಬ್ರಹ್ಮಹತ್ಯಾದಿಪಾಪಹರ, ಪುತ್ರರಿಲ್ಲದವರು ಸ್ನಾನವಮಾಡಿ ಈ ಮಹಿಮೆಯಂ ಕೇಳಲು ಪರಮೇಶ್ವರನಅನುಜ್ಞೆಯಿಂದ ಪುತ್ರವಂತರಹರು, ಕೇಳೈಸೂತ! ಹಲವುಪ್ರಕಾರವಾಗಿ ಹೇಳುವದೇನುಇದ್ದೀತು, ಈ ಮಹಿಮೆಯಂ ಕೇಳಲು

ಆರುಪಿಸಬಯಸುಸವರೋ ಆ ಮನೋರಥವಹುದು, ಪರಮೇಶ್ವರನ ಅನು ಗ್ರಹಉಳ್ಳ ಪುಣ್ಯಾತ್ಮರಿಗಲ್ಲದೆ ಈ ಕಾಶೀಮಹಿಮೆಯಂ ಕೇಳಲು ಇಚ್ಛೆ ಹುಟ್ಟವು, ದೂರದೇಶದಲ್ಲಿ ಇಪ್ಪಾದರೂ ಈ ಮಹಾತ್ಮೆಯಂ ಕೇಳಲು ಸ ದಾಶಿವನ ಅನುಗ್ರಹದಿಂದ ನಿರಂತರವು ಕಾಶಿಯವಾಸಫಲವಹುದು, ವಿಜ ಯವಹುದು, ಸೌಭಾಗ್ಯವಹುದು, ನಿರ್ಮಲಮನಸ್ಸಹುದು, ಈ ಮ ಹಾತ್ಮೆಯಂ ಪುಸ್ತಕದಲ್ಲಿ ಬರೆದು ಮನೆಯಲ್ಲಿ ನಿತ್ಯಪೂಜಿಸಲು ಸಕ ಲೈಶ್ವರ್ಯಗಳು ಸಮೃದ್ಧಿಯಹುದು, ಈ ಪುಸ್ತಕವಂ ಬರೆದವರಿಗೆ ದಾನ ವಕೊಡಲು ಗಂಗಾಸ್ನಾನವಮಾಡಿ ವಿಶ್ವನಾಥಗೆ ಷೋಡಶೋಪಚಾರಪೂ ಜೆಯಂಮಾಡಿ ಅಲ್ಲಿ ಮಹಾದಾನಗಳಮಾಡಿದ ಫಲವಹುದು, ಸತ್ಯವು ಎಂ ದು ವ್ಯಾಸಮುನಿಯು ತನ್ನ ಪ್ರಿಯಶಿಷ್ಯನಾದ ಸೂತಂಗೆ ಬುದ್ಧಿಗಲಿಸಲೂ ಸೂತನುಕೇಳಿ ತನ್ನಗುರುಗಳಾದ ವ್ಯಾಸಮುನಿಗಳು ಬುದ್ಧಿಗಲಿಸಿದ ಕಾಶೀ ಮಹಾತ್ಮೆಯನ್ನು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಋಷಿಗಳಿಗೆ ಹೇಳ್ದನು ಎಂಬಲ್ಲಿಗೆ ಅಧ್ಯಾಯಾರ್ಥ. * * * * * * *

ಇಂತು ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿ ಲದೇಶಾವತಂಸ ಕರ್ನಾಟಕಜನಪದ ಸಂಪದಧಿಷ್ಠಾನಭೂತ ಶ್ರೀಮನ್ಮಹೀ ಶೂರ ಮಹಾಸಂಸ್ಥಾನ ಮಧ್ಯ ದೇದೀಪ್ಯಮಾನಾ ವಿಕಲಕಲಾನಿಧಿ ಕುಲ ಕ್ರಮಾಗತ ರಾಜಕ್ಷಿತಿಪಾಲ ಪ್ರಮುಖಖಿಲ ರಾಜಾಧಿರಾಜ ಮಹಾರಾ ಜ ಚಕ್ರವರ್ತಿ ಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಢ ಶ್ರೀ ಮಹಾರಾಜಾಧಿರಾಜರಾಜ ಪರಮೇಶ್ವರ ಪ್ರೌಢಪ್ರತಾಪಾಪ್ರತಿಮವೀರ ನರಪತಿ ಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲಪಯಃ ಪಾ ರಾವಾರಕಳಾನಿಧಿ ಶಂಖಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯ ನೇಕ ಬಿರುದಾಂಕಿತರಾದ ಶ್ರೀಚಾಮರಾಜ ಮಹೀಪಾಲ ಧರ್ಮಪತ್ನಿ ಕೆಂಪನಂಜಮಾಂಬಾ ಗರ್ಭಸುಧಾಂಬುಧಿ ರಾಕಾಸುಧಾಕರಾಯಮಾನ ಶ್ರೀಚಾಮುಂಡಿಕಾಂಬಿಕಾ ವರಪ್ರಸಾದೋದ್ಭವರಾದ ಆತ್ರೇಯಸಗೋ ತ್ರ ಆಶ್ವಲಾಯನ ಸೂತ್ರ ಋಕ್ಶಾಖಾನು ವರ್ತಿಗಳಾದ- ಮಹೀಶೂರ

ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥ ವಾಗಿ ಕರ್ಣಾಟಕಭಾಷೆಯಿಂಸಹಾ ವಿರಚಿಸಿದ ಕೃಷ್ಣರಾಜ ವಾಣೀವಿಲಾಸ ವೆಂಬ ಸ್ಕಂಧಪುರಾಣೋಕ್ತ ಕಾಶೀ ಮಹಿಮಾರ್ಥ ದರ್ಪಣವೆಂಬ ಕಾಶೀಖಂಡವೆಂಬ ಗ್ರಂಥದಲ್ಲಿ ವ್ಯಾಸಮಹರ್ಷಿಯು ಸೂತಮುನಿಗೆ ಕಾಶೀ ಖಂಡದ ಅಧ್ಯಾಯಂಗಳಂ ಆದ್ಯಂತ ಕಥಾನುಕ್ರಮಣಿಕಾ ಯಾತ್ರಾಕ್ರಮಃ ಈ ಪುಸ್ತಕವಂ ಬರೆದವರು ಬರಸಿದವರು ಪೂಜಿಸಿದವರಿಗೆ ಹೇಳಿದವರಿಗೆ ಕೇಳಿದವರಿಗೆ ಸಹಾ ಫಲಂಗಳ ಪೇಳ್ದ ನೂರನೇ ಅಧ್ಯಾಯಾರ್ಥ ನಿರೂಪಣಕ್ರಮಂಗಳ ಮಹಾ. * * * * * *

ಕಾಶೀಖಂಡ ಸಮಾಪ್ತಮಾದುದು.

ಮಂಗಳಾನಿಭವಂತು.